೮

ಸಮಗ್ರ
ವಚನ
ಸಂಪುಟ

ಜನಪ್ರಿಯ ಆವೃತ್ತಿ

# ಸಂಕೀರ್ಣ ವಚನಸಂಪುಟ

# ೮


ಸಂಪಾದಕ

ಡಾ. ಬಿ. ಆರ್. ಹಿರೇಮಠ





ಕರ್ನಾಟಕ ಸರ್ಕಾರ

ಕನ್ನಡ ಪುಸ್ತಕ ಪ್ರಾಧಿಕಾರ

ಬೆಂಗಳೂರು

# ಸಂಕೀರ್ಣ ವಚನಸಂಪುಟ : ನಾಲ್ಕು

೧. ಬಸವಣ್ಣನವರ ವಚನಸಂಪುಟ - ಸಂ : ಡಾ. ಎಂ. ಎಂ. ಕಲಬುರ್ಗಿ
೨. ಅಲ್ಲಮಪ್ರಭುದೇವರ ವಚನಸಂಪುಟ - ಸಂ : ಡಾ. ಬಿ. ವ್ಹಿ. ಮಲ್ಲಾಪುರ
೩. ಚೆನ್ನಬಸವಣ್ಣನವರ ವಚನಸಂಪುಟ - ಸಂ : ಡಾ. ಬಿ. ವ್ಹಿ. ಮಲ್ಲಾಪುರ
೪. ಸಿದ್ಧರಾಮೇಶ್ವರ ವಚನಸಂಪುಟ - ಸಂ : ಡಾ. ಎಸ್. ವಿದ್ಯಾಶಂಕರ
೫. ಶಿವಶರಣೆಯರ ವಚನಸಂಪುಟ - ಸಂ : ಡಾ. ವೀರಣ್ಣ ರಾಜೂರ
೬. ಸಂಕೀರ್ಣ ವಚನಸಂಪುಟ : ಒಂದು - ಸಂ : ಡಾ. ಎಂ. ಎಂ. ಕಲಬುರ್ಗಿ
೭. ಸಂಕೀರ್ಣ ವಚನಸಂಪುಟ : ಎರಡು - ಸಂ : ಡಾ. ಎಸ್. ವಿದ್ಯಾಶಂಕರ
೮. ಸಂಕೀರ್ಣ ವಚನಸಂಪುಟ : ಮೂರು - ಸಂ : ಡಾ. ಬಿ. ಆರ್. ಹಿರೇಮಠ
೯. ಸಂಕೀರ್ಣ ವಚನಸಂಪುಟ : ನಾಲ್ಕು - ಸಂ : ಡಾ. ಬಿ. ಆರ್. ಹಿರೇಮಠ
೧೦. ಸಂಕೀರ್ಣ ವಚನಸಂಪುಟ : ಐದು - ಸಂ : ಡಾ. ವೀರಣ್ಣ ರಾಜೂರ
೧೧. ಸಂಕೀರ್ಣ ವಚನಸಂಪುಟ : ಆರು - ಸಂ : ಎಸ್. ಶಿವಣ್ಣ
೧೨. ಸಂಕೀರ್ಣ ವಚನಸಂಪುಟ : ಏಳು - ಸಂ : ಡಾ. ವೀರಣ್ಣ ರಾಜೂರ
೧೩. ಸಂಕೀರ್ಣ ವಚನಸಂಪುಟ : ಎಂಟು - ಸಂ : ಡಾ. ವೀರಣ್ಣ ರಾಜೂರ
೧೪. ಸಂಕೀರ್ಣ ವಚನಸಂಪುಟ : ಒಂಬತ್ತು - ಸಂ : ಡಾ. ವೀರಣ್ಣ ರಾಜೂರ
೧೫. ವಚನ ಪರಿಭಾಷಾಕೋಶ - ಸಂ : ಡಾ. ಎನ್. ಜಿ. ಮಹಾದೇವಪ್ಪ

# ಸಂಕೀರ್ಣ ವಚನಸಂಪುಟ : ನಾಲ್ಕು

ಸಂಪಾದಕ

**ಡಾ. ಬಿ. ಆರ್. ಹಿರೇಮಠ**

ಕನ್ನಡ ಪ್ರಾಧ್ಯಾಪಕರು, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಕರ್ನಾಟಕ ಸರ್ಕಾರ

**ಕನ್ನಡ ಪುಸ್ತಕ ಪ್ರಾಧಿಕಾರ**

ಬೆಂಗಳೂರು

**SANKEERNA VACHANASAMPUTA : NALKU :** Complete Vachanas of 27 Vachanakaras of Basaveshvara Period and Complete Vachanas of 54 unknown Vachanakaras, Ed. by Dr. B. R. Hiremath Professor, Institute of Kannada Studies, Karnataka University Dharwad - 580 003 and Published by The Administrative Officer Kannada Pusthaka Pradhikara (Kannada Book Authority), Pampa Mahakavi Road, Chamarajpet, Bangalore - 560 018

ISBN : 81-7713-098-6

Pp. xLii + 592

ಹಕ್ಕುಗಳನ್ನು ಕಾಯ್ದಿರಿಸಿದೆ

ಪ್ರಥಮ ಮುದ್ರಣ : ೧೯೯೩
ದ್ವಿತೀಯ ಪರಿಷ್ಕೃತ ಮುದ್ರಣ : ೨೦೦೧

ಪ್ರತಿ : ಐದು ಸಾವಿರ

ಬೆಲೆ : **ರೂ. ೮೫೦/-**
(೧೫ ಸಂಪುಟಗಳ ಸೆಟ್)

ಅಕ್ಷರ ಜೋಡಣೆ :
ತ್ವರಿತ ಮುದ್ರಣಾಲಯ
ಆಫ್‌ಸೆಟ್ ಪ್ರಿಂಟರ್ಸ್, ಗದಗ

ಮುದ್ರಣ :
**ಶ್ರೀ ವೆಂಕಟೇಶ್ವರ ಪ್ರಿಂಟಿಂಗ್ ಪ್ರೆಸ್**
೫೭, ೯ನೇ ಕ್ರಾಸ್, ಜೆ. ಪಿ. ನಗರ ಒಂದನೇ ಹಂತ
ಬೆಂಗಳೂರು - ೫೬೦ ೦೭೮
ದೂರವಾಣಿ : ೬೩೪೪೭೬೩

ಸಮಗ್ರ ವಚನಸಾಹಿತ್ಯದ ಜನಪ್ರಿಯ ಆವೃತ್ತಿ ಪ್ರಕಟನ ಯೋಜನೆ


## ಸಂಪಾದಕ ಮಂಡಳಿ

ಪ್ರಧಾನ ಸಂಪಾದಕರು

**ಡಾ. ಎಂ. ಎಂ. ಕಲಬುರ್ಗಿ**

ವಿಶ್ರಾಂತ ಕುಲಪತಿಗಳು, ಕನ್ನಡ ವಿಶ್ವವಿದ್ಯಾಲಯ, ಹಂಪಿ

ಸದಸ್ಯರು

**ಡಾ. ಎಂ. ಚಿದಾನಂದಮೂರ್ತಿ**

ವಿಶ್ರಾಂತ ಕನ್ನಡ ಪ್ರಾಧ್ಯಾಪಕರು, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು

**ಡಾ. ಸಿ. ಪಿ. ಕೃಷ್ಣಕುಮಾರ**

ವಿಶ್ರಾಂತ ಕನ್ನಡ ಪ್ರಾಧ್ಯಾಪಕರು, ಮೈಸೂರು ವಿಶ್ವವಿದ್ಯಾಲಯ, ಮೈಸೂರು

**ಡಾ. ಎಸ್. ವಿದ್ಯಾಶಂಕರ**

ವಿಶ್ರಾಂತ ಕನ್ನಡ ಪ್ರಾಧ್ಯಾಪಕರು, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು

**ಎಸ್. ಶಿವಣ್ಣ**

ವಿಶ್ರಾಂತ ಸಂಪಾದಕರು, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು

**ಕೆ. ಸಿ. ರಾಮಮೂರ್ತಿ**

ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು

✻

# ಮುನ್ನುಡಿ

**ಎಸ್. ಎಂ. ಕೃಷ್ಣ**
ಮುಖ್ಯಮಂತ್ರಿಗಳು

ಕನ್ನಡನಾಡಿನ ಪ್ರಥಮ ಪ್ರಜಾಸಾಹಿತ್ಯವಾಗಿರುವ ವಚನವಾಙ್ಮಯ ನಮ್ಮ ಪರಂಪರೆಯ ಅಪೂರ್ವ ಸಾಂಸ್ಕೃತಿಕ ಆಸ್ತಿಯೆನಿಸಿದೆ. ಅನೇಕ ಜನ ವಿದ್ವಾಂಸರು, ಅನೇಕ ಸಂಸ್ಥೆಗಳು ಈ ಸಾಹಿತ್ಯವನ್ನು ಬೆಳಕಿಗೆ ತರಲು ಕಳೆದ ನೂರು ವರ್ಷಗಳಿಂದ ದುಡಿಯುತ್ತ ಬಂದುದು, ಇದರ ವ್ಯಾಪಕತೆಯ ದ್ಯೋತಕವಾಗಿದೆ. ಹೀಗೆ ಪ್ರಕಟವಾಗಿದ್ದ ಮತ್ತು ಅಪ್ರಕಟಿತ ಸ್ಥಿತಿಯಲ್ಲಿದ್ದ ಈ ಸಾಹಿತ್ಯದ ದ್ವಿತೀಯ ಆವೃತ್ತಿಯನ್ನು ವಚನ ಪರಿಭಾಷಾಕೋಶವೂ ಒಳಗೊಂಡಂತೆ ೧೫ ಸಂಪುಟಗಳ ಮೂಲಕ ಕರ್ನಾಟಕ ಸರ್ಕಾರ ಹೊರತರುತ್ತಿರುವುದು, ನಮ್ಮ ಸಾಹಿತ್ಯ ಪ್ರಕಟಣೆಯ ಇತಿಹಾಸದಲ್ಲಿ ಒಂದು ಗಣ್ಯ ಸಾಧನೆಯೆಂದೇ ಹೇಳಬೇಕು. ಈ ಪ್ರಜಾಸಾಹಿತ್ಯವನ್ನು ಪ್ರಜೆಗಳಿಗೆ ಮುಟ್ಟಿಸುವುದು ತನ್ನ ಕರ್ತವ್ಯವೆಂದು ಭಾವಿಸಿ, ಕರ್ನಾಟಕದ ಪ್ರಜಾಸರ್ಕಾರ ಈ ಕೆಲಸವನ್ನು ಪೂರೈಸಿದೆ.

ವಚನಸಾಹಿತ್ಯಕ್ಕೆ ನಮ್ಮ ನಾಡಿನಲ್ಲಿ ಸುಮಾರು ೮೦೦ ವರ್ಷಗಳ ಇತಿಹಾಸವಿದೆ. ಈವರೆಗೆ ಬಸವಯುಗದ ಬರವಣಿಗೆಯನ್ನು ಹೊರತರಲು ವಿದ್ವಾಂಸರು ಹೆಚ್ಚು ಗಮನ ಕೊಟ್ಟಿದ್ದರು. ಈ ಯೋಜನೆ ಅದನ್ನೂ ಒಳಗೊಂಡು, ಬಸವೋತ್ತರ ಯುಗದ ಮೇಲೆಯೂ ಒತ್ತುಕೊಟ್ಟುದು ವಿಶೇಷವೆನಿಸಿದೆ. ಇದರಿಂದಾಗಿ ಈ ಯೋಜನೆಗೆ "ಒಂದು ಸಾಹಿತ್ಯ ಪ್ರಕಾರದ ಪ್ರಕಟಣೆ" ಎಂಬ ಕೀರ್ತಿ ಸಲ್ಲುತ್ತದೆ.

ವಚನವೆಂಬುದು ಚಳುವಳಿ ಸಾಹಿತ್ಯಪ್ರಕಾರವಾಗಿದೆ. ಆತ್ಮಕಲ್ಯಾಣದೊಂದಿಗೆ ಸಮಾಜಕಲ್ಯಾಣವನ್ನೂ ಕಾರ್ಯಗತಗೊಳಿಸಲು ಹೋರಾಡಿ ಮಡಿದ ಹುತಾತ್ಮರ ಸಾಹಿತ್ಯವಿದು. ರಾಜಸತ್ತೆ, ಪುರೋಹಿತಸತ್ತೆ, ಪುರುಷಸತ್ತೆಗಳೆಂಬ ಪ್ರತಿಗಾಮಿ ಸತ್ತೆಗಳ ವಿರುದ್ಧ, ಕರ್ನಾಟಕದ ಎಲ್ಲ ಸಮಾಜದ ಜನರು ನಡೆಸಿದ ಹೋರಾಟದ ಉಪನಿಷ್ಪತ್ತಿಯಾದ ಈ ಸಾಹಿತ್ಯದಲ್ಲಿ ಜೀವಪರಧ್ವನಿಗಳು ದಟ್ಟವಾಗಿ ಕೇಳಿಸುತ್ತವೆ. ಪ್ರಾಚೀನ ಕರ್ನಾಟಕದ ಬೌದ್ಧಿಕ ಶ್ರಮದ ವಿದ್ವತ್ ಜನತಾಸಾಹಿತ್ಯಕ್ಕಿಂತ ದೈಹಿಕ ಶ್ರಮದ ಜನತಾಸಾಹಿತ್ಯ ಹೇಗೆ ಭಿನ್ನವಾಗಿದೆಯೆಂಬುದನ್ನು ಕಾಣಬೇಕಾದರೆ ನಾವು ಈ ಸಾಹಿತ್ಯಕ್ಕೇ ಮೊರೆಹೊಗಬೇಕು.

"ವಿಪ್ರ ಮೊದಲು ಅಂತ್ಯಜ ಕಡೆಯಾಗಿ" ಸಮಾಜದ ಎಲ್ಲ ವರ್ಗದ ಸ್ತ್ರೀ-ಪುರುಷರ ಸಂಕೀರ್ಣ ಧ್ವನಿಗಳು ಇದರಲ್ಲಿ ತುಂಬ ಕಲಾತ್ಮಕವಾಗಿ

ಎರಕಗೊಂಡಿವೆ. ಹೀಗಾಗಿ ಸಮಗ್ರ ಕರ್ನಾಟಕದ ಪ್ರಾತಿನಿಧಿಕ ಧ್ವನಿಯೆನಿಸಿದ ಈ ಸಾಹಿತ್ಯದ ಪ್ರಕಟನೆಯು ತನ್ನ ಕರ್ತವ್ಯದ ಭಾಗವೆಂದು ಭಾವಿಸಿರುವ ಕರ್ನಾಟಕ ಸರ್ಕಾರ, ಅದನ್ನು ಸುಲಭ ಬೆಲೆಯಲ್ಲಿ ಜನತೆಗೆ ನೀಡುತ್ತಿದೆ.

ಈ ಯೋಜನೆಯ ನೇತೃತ್ವ ವಹಿಸಿ ದುಡಿದ ಡಾ. ಎಂ. ಎಂ. ಕಲಬುರ್ಗಿ ಅವರ ಶ್ರದ್ಧೆಯನ್ನು, ಸಂಪಾದಕ ಮಂಡಳಿಯ ಮಾರ್ಗದರ್ಶನವನ್ನು, ಸಂಪಾದಕರ ಶ್ರಮವನ್ನು ಸ್ಮರಿಸುತ್ತ, ಈ ಐತಿಹಾಸಿಕ ಪ್ರಕಟನೆಯ ಪರಿಷ್ಕೃತ ದ್ವಿತೀಯ ಆವೃತ್ತಿ ಸಂಪುಟಗಳನ್ನು ಕನ್ನಡ ಜನತೆಗೆ ಅರ್ಪಿಸುತ್ತೇನೆ.

※

# ಬಿನ್ನಹ

## ರಾಣಿ ಸತೀಶ್
ಕನ್ನಡ ಮತ್ತು ಸಂಸ್ಕೃತಿ ಸಚಿವರು

ಸಾಹಿತ್ಯಕ್ಕೆ ಸಾಹಿತ್ಯ, ಶಾಸ್ತ್ರಕ್ಕೆ ಶಾಸ್ತ್ರವಾಗಿರುವ ವಚನವಾಙ್ಮಯ ನಮ್ಮ ಪರಂಪರೆಯ ಅಪೂರ್ವ ಸೃಷ್ಟಿಯಾಗಿದೆ; ಅತ್ಯಪೂರ್ವ ಆಸ್ತಿಯೆನಿಸಿದೆ. ಪಂಡಿತರ ಮಾರ್ಗಸಾಹಿತ್ಯಕ್ಕೆ ಪ್ರತಿಯಾಗಿ ಸಾಮಾನ್ಯರ ಈ ದೇಶೀಸಾಹಿತ್ಯ ಹೊರಹೊಮ್ಮಿದ್ದು ೧೨ನೆಯ ಶತಮಾನದಲ್ಲಿ; ಕಲಚುರಿಗಳ ರಾಜಧಾನಿಯಾಗಿದ್ದ ಕಲ್ಯಾಣದಲ್ಲಿ; ಬಸವಾದಿ ಶರಣರ ಚಳುವಳಿಯಲ್ಲಿ.

ಮೂಲತಃ ಭಾರತೀಯರದು ಆತ್ಮ ಪರಮಾತ್ಮನಾಗಬೇಕೆಂಬ ವ್ಯಕ್ತಿಕೇಂದ್ರಿತ ಸಿದ್ಧಾಂತ. ಶರಣರು ಇದನ್ನು ಸಮಾಜಕೇಂದ್ರಿತ ಸಿದ್ಧಾಂತಕ್ಕೆ ವಿಸ್ತರಿಸಿದರು. ಹೀಗಾಗಿ ವ್ಯಕ್ತಿ ಕಲ್ಯಾಣದ ಜೊತೆ ಸಮಾಜಕಲ್ಯಾಣವೂ ಈ ಚಳುವಳಿಯ ಮುಖ್ಯ ಲಕ್ಷಣವೆನಿಸಿತು. ಸಾಹಿತ್ಯ ಸಾಹಿತ್ಯಕ್ಕಾಗಿ ಅಲ್ಲ, ವ್ಯಕ್ತಿ ಪರಿವರ್ತನೆಗಾಗಿ, ಸಮಾಜ ಪರಿವರ್ತನೆಗಾಗಿಯೆಂಬ ಸಿದ್ಧಾಂತ ಇಲ್ಲಿ ಅರ್ಥ ಪಡೆಯಿತು.

೧೨ನೆಯ ಶತಮಾನದ ಹೊತ್ತಿಗೆ, ಶೂದ್ರಜೀವ ದೇವನಾಗಲಾರನೆಂಬ ಸಿದ್ಧಾಂತ ಸ್ಥಾಪಿತವಾಗಿದ್ದಿತು. ಸಮಾಜದಲ್ಲಿ ಪುರುಷ-ಸ್ತ್ರೀ, ಪ್ರಭು-ಪ್ರಜೆ, ಬ್ರಾಹ್ಮಣ-ಶೂದ್ರರಲ್ಲಿ ಸಮಾನತೆ ಸಾಧ್ಯವಿಲ್ಲವೆಂಬ ಭೇದಸಂಸ್ಕೃತಿಯೂ ನಿರ್ಮಾಣವಾಗಿದ್ದಿತು. ಈಗ, ಶೂದ್ರನಿಗೂ ದೇವರಾಗುವ ಅರ್ಹತೆಯಿದೆ; ಸ್ತ್ರೀಗೆ ಪುರುಷನಷ್ಟು - ಪ್ರಜೆಗೆ ಪ್ರಭುವಿನಷ್ಟು - ಶೂದ್ರನಿಗೆ ಬ್ರಾಹ್ಮಣನಷ್ಟು ಅಧಿಕಾರವಿದೆಯೆಂದು ಶರಣರು ವಾದಿಸಿದರು. ಇದರ ಫಲವಾಗಿ, ಹೊಸ ಸಮಾಜವೊಂದು ಸೃಷ್ಟಿಯಾಯಿತು. ಇದರಿಂದಾಗಿ ಎಲ್ಲರೂ ಸ್ವತಂತ್ರರು, ಎಲ್ಲರೂ ಸಮಾನರು, ಎಲ್ಲರೂ ಸಹೋದರರೆಂಬ ತತ್ವ ಅನುಷ್ಠಾನಕ್ಕೆ ಬಂದಿತು. ಇದರ ಮುಂದುವರಿಕೆಯೆಂಬಂತೆ ಎಲ್ಲರೂ ದುಡಿಯಬೇಕು ಎಂಬ ಕಾಯಕತತ್ವ, ಎಲ್ಲರೂ ಹಂಚಿಕೊಂಡು ಉಣ್ಣಬೇಕು ಎಂಬ ದಾಸೋಹತತ್ವಗಳು ಆಕಾರ ಪಡೆದವು.

ಹೊಸ ಸಮಾಜದ ಈ ಎಲ್ಲ ನೆಲೆಗಳನ್ನು ಗುರಿಯಿಟ್ಟು ಆಡಿದ ಶರಣರ ಮಾತು ವಚನವೆಂಬ ಸಾಹಿತ್ಯಪ್ರಕಾರವಾಗಿ ಮೂಡಿತು. ವರ್ಗಭೇದ, ವರ್ಣಭೇದ, ಲಿಂಗಭೇದವೆನ್ನದೆ ಎಲ್ಲ ಜನವರ್ಗದವರ ಸಾವಿರ ಸಾವಿರ ವಚನಗಳು ಈ ಕಾಲದಲ್ಲಿ ಸೃಷ್ಟಿಯಾದವು. ಆದರೆ ಒಮ್ಮೆಲೇ ತಲೆದೋರಿದ ಕಲ್ಯಾಣ ಕ್ರಾಂತಿಯಿಂದಾಗಿ ಈ ಸಾಹಿತ್ಯ ನಾಡಿನ ತುಂಬ ಹರಿದು ಹಂಚಿಹೋಯಿತು.

ಹೀಗೆ ಹಂಚಿಹೋಗಿದ್ದ ಈ ಸಾಹಿತ್ಯವನ್ನು ೧೫-೧೬ನೆಯ ಶತಮಾನಗಳಲ್ಲಿ

ಶೋಧಿಸುವ, ಸಂಪಾದಿಸುವ ಪ್ರಯತ್ನ ನಡೆದು, ನೂರಾರು ಸಂಪಾದನ ಕೃತಿಗಳು ಹುಟ್ಟಿ ಬಂದು, ವಚನಸಾಹಿತ್ಯ ವೀರಶೈವ ಮಠಗಳಲ್ಲಿ ತಕ್ಕ ಮಟ್ಟಿಗೆ ರಕ್ಷಿಸಲ್ಪಟ್ಟಿತು. ದುರ್ದೈವದ ಸಂಗತಿಯೆಂದರೆ ಮಠಗಳಲ್ಲಿ ಪ್ರವೇಶ ಪಡೆದ ಸಂಸ್ಕೃತ ಭಾಷೆಯಿಂದಾಗಿ ಕನ್ನಡ ಭಾಷೆಯ ಈ ವಚನಗಳು ಅಲ್ಲಿ ಮೂಲೆ ಸೇರಿದವು.

ಹೀಗೆ ಮೂಲೆಗುಂಪಾಗಿದ್ದ ವಚನಸಾಹಿತ್ಯವು ೨೦ನೆಯ ಶತಮಾನದಲ್ಲಿ ಅನೇಕ ಜನ ವಿದ್ವಾಂಸರ, ಹತ್ತಾರು ಸಂಸ್ಥೆಗಳ ಪ್ರಯತ್ನದ ಫಲವಾಗಿ ಪ್ರಕಟಣೆಗೊಳ್ಳುತ್ತ ಬಂದಿತು. ಈಗ ೧೨ನೆಯ ಶತಮಾನದ ಶರಣಸಾಹಿತ್ಯ ಪ್ರಕಟನೆಗೆ ಒತ್ತುಬಿದ್ದರೂ ಅದು ಬಿಡಿಬಿಡಿಯಾಗಿ ಪ್ರಕಟಣೆಗೊಂಡಿತು. ಆ ತರುವಾಯದ ಶರಣ ಸಾಹಿತ್ಯವಂತೂ ಉಪೇಕ್ಷೆಗೆ ಗುರಿಯಾಯಿತು. ಈ ಎರಡೂ ಕೊರತೆಗಳನ್ನು ನೀಗಿಸುವ ಉದ್ದೇಶದಿಂದ ಎಲ್ಲ ಶರಣರ ಎಲ್ಲ ವಚನಗಳನ್ನು ಸಂಪುಟ ಶ್ರೇಣಿಯಲ್ಲಿ ಪ್ರಕಟಿಸಲು ಕರ್ನಾಟಕ ಸರಕಾರ "ಸಮಗ್ರ ವಚನಸಾಹಿತ್ಯದ ಜನಪ್ರಿಯ ಆವೃತ್ತಿ ಪ್ರಕಟನ ಯೋಜನೆ"ಯನ್ನು ಕೈಗೆತ್ತಿಕೊಂಡಿತು.

ಡಾ. ಎಂ. ಎಂ. ಕಲಬುರ್ಗಿಯವರ ಪ್ರಧಾನ ಸಂಪಾದಕತ್ವದಲ್ಲಿ ವ್ಯಾಪಕ ಕಾರ್ಯ ನಡೆದು, ೨೦ ಸಾವಿರ ವಚನ, ೧೦ ಸಾವಿರ ಪುಟಗಳನ್ನೊಳಗೊಂಡ ೧೫ ಸಂಪುಟಗಳು ೧೯೯೩ ರಲ್ಲಿ ಬೆಳಕು ಕಂಡವು. ಆಶ್ಚರ್ಯದ ಸಂಗತಿಯೆಂದರೆ ಇದರ ೫ ಸಾವಿರ ಪ್ರತಿಗಳು ಒಂದೇ ವರ್ಷದಲ್ಲಿ ಮಾರಾಟವಾಗಿ, ಜನರಿಂದ ಬೇಡಿಕೆ ಹೆಚ್ಚುತ್ತ ನಡೆಯಿತು. ಇದನ್ನು ಪೂರೈಸುವ ದಿಕ್ಕಿನಲ್ಲಿ ಪರಿಷ್ಕೃತ ದ್ವಿತೀಯ ಆವೃತ್ತಿ ಈಗ ಹೊರಬರುತ್ತಲಿದೆ. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಚಿವೆಯಾಗಿ ಕನ್ನಡದ ಈ ಅಪೂರ್ವ ಆಸ್ತಿಯನ್ನು ಕನ್ನಡ ಜನತೆಗೆ ಅರ್ಪಿಸುತ್ತೇನೆ.

■■

❊

# ನಿರ್ದೇಶಕರ ಮಾತು

**ಕೆ. ಸಿ. ರಾಮಮೂರ್ತಿ**

ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ

ವಚನಸಾಹಿತ್ಯ, ಕರ್ನಾಟಕದ ಬಹುದೊಡ್ಡ ಸಾಂಸ್ಕೃತಿಕ ಸಂಪತ್ತು. ಪ್ರಾಚೀನ ಕರ್ನಾಟಕದ ಜನಸಾಮಾನ್ಯರ ಧ್ವನಿಯಾಗಿರುವ ಇದನ್ನು ಪ್ರಕಟಿಸುವುದು, ಪ್ರಸಾರ ಮಾಡುವುದು ಜನತಂತ್ರ ಸರಕಾರದ ಮುಖ್ಯ ಕರ್ತವ್ಯವಾಗಿದೆ.

ಭಾರತದಲ್ಲಿ ಆತ್ಮೋದ್ಧಾರದ ಬಗ್ಗೆ ಉದಾತ್ತ ತತ್ವಗಳನ್ನು ಪ್ರತಿಪಾದಿಸುತ್ತ ಬಂದಿದ್ದರೂ ಸಮಾಜೋದ್ಧಾರದ ಬಗ್ಗೆ ಉಪೇಕ್ಷೆ ಬೆಳೆದು, ಅಲ್ಲಿ ಶೋಷಣೆ ವರ್ಧಿಸುತ್ತ ಬಂದುದು ನಮ್ಮ ಇತಿಹಾಸದ ಒಂದು ವಿಪರ್ಯಾಸವೇ ಸರಿ. ೧೨ನೆಯ ಶತಮಾನದಲ್ಲಿ ಉಲ್ಬಣಗೊಂಡಿದ್ದ ಈ ವಿಷಮ ಪರಿಸ್ಥಿತಿಯನ್ನು ನಾಶಗೊಳಿಸಿ, ಸಮಸ್ಥಿತಿಯನ್ನು ಸಮಾಜದಲ್ಲಿ ತರಲು ಹೋರಾಡಿದವರು, ಕಲ್ಯಾಣದ ಶರಣರು. ಈ ಕಾರ್ಯಕ್ಕಾಗಿ ಅವರು ಕೈಕೊಡ ಜನಪರ ಆಂದೋಲನ ನಮ್ಮ ದೇಶದ ಇತಿಹಾಸದಲ್ಲಿಯೇ ಒಂದು ವಿಶಿಷ್ಟ ಘಟನೆಯಾಗಿದೆ.

ಭಾರತದಲ್ಲಿ ರಾಜಸತ್ತೆಯ ಸ್ಥಾಪನೆಗಾಗಿ ರಾಜರು, ಮತಸತ್ತೆಯ ಸ್ಥಾಪನೆಗಾಗಿ ಧರ್ಮಗಳು ಪರಸ್ಪರ ಸಂಘರ್ಷಕ್ಕಿಳಿದುದು ಸರ್ವಶ್ರುತ. ಆದರೆ ಸಾಮಾಜಿಕ ನ್ಯಾಯದ ಸ್ಥಾಪನೆಗಾಗಿ ಈ ರಾಜಸತ್ತೆ, ಮತಸತ್ತೆಗಳ ವಿರುದ್ಧ ಸಮಾಜದ ವಿವಿಧ ಸ್ತರಗಳ ಜನತೆ, ಅದರಲ್ಲಿಯೂ ದೀನರು-ದಲಿತರು-ಮಹಿಳೆಯರು ಬೀದಿಗಿಳಿದು ನಡೆಸಿದ ಈ ಆಂದೋಲನ, ಇಪ್ಪತ್ತನೆಯ ಶತಮಾನವೂ ಆಶ್ಚರ್ಯಪಡುವ ಸಂಗತಿಯಾಗಿದೆ.

ಅಂದಿನ ಸನ್ನಿವೇಶಕ್ಕೆ ಅನುಗುಣವಾಗಿ ಧಾರ್ಮಿಕ ಕ್ಷೇತ್ರದಲ್ಲಿ ಅಂಕುರಿಸಿದ ಈ ಆಂದೋಲನ, ಸಾಮಾಜಿಕ ಕ್ಷೇತ್ರವನ್ನೂ ಆವರಿಸಿದ ಕಾರಣ, ಇದನ್ನು 'ಸಮಾಜೋ ಧಾರ್ಮಿಕ' ಆಂದೋಲನವೆಂದು ಗುರುತಿಸಲಾಗುತ್ತದೆ. ಸಮಾಜವೆನ್ನುವುದು ಸಂಕೀರ್ಣ ವ್ಯವಸ್ಥೆ. ಅದರ ಎಲ್ಲ ಸ್ತರಗಳನ್ನೂ ಎಲ್ಲ ಮಗ್ಗಲುಗಳನ್ನೂ ಬದಲಿಸಲು ಮಾಡಿದ ಪ್ರಯತ್ನವಾಗಿರುವುದರಿಂದ ಇದು ಒಂದು "ಸಮಗ್ರ ಆಂದೋಲನ"ವಾಗಿದೆ. ಈ ಆಂದೋಲನದ ನೇರ ಧ್ವನಿ, ವಚನಸಾಹಿತ್ಯ.

ಹನ್ನೆರಡನೆಯ ಶತಮಾನದಲ್ಲಿ ಬಸವಣ್ಣನಿಂದಾಗಿ ವ್ಯಕ್ತಿ ಸ್ವಾತಂತ್ರ್ಯ ಪಡೆದ ಜನವರ್ಗವು ವ್ಯಕ್ತಪಡಿಸಿದ ಅಭಿಪ್ರಾಯ ಸ್ವಾತಂತ್ರ್ಯದ ಫಲ, ಈ ಸಾಹಿತ್ಯ. ಹೀಗಾಗಿ ಇಲ್ಲಿ ಆತ್ಮವಿಮರ್ಶೆಯಷ್ಟೇ ವಿಪುಲವಾಗಿ ಸಮಾಜವಿಮರ್ಶೆಯನ್ನೂ ಕಾಣಬಹುದಾಗಿದೆ. ಅದರಲ್ಲಿಯೂ ವರ್ಣಭೇದ ನಿರಾಕರಣೆ, ವರ್ಗಭೇದ

ನಿರಾಕರಣೆ, ಲಿಂಗಭೇದ ನಿರಾಕರಣೆಗಳಂಥ ವಿಚಾರಗಳು ಸ್ಫೋಟಗೊಂಡುದು ಲಕ್ಷಿಸತಕ್ಕ ಸಂಗತಿಯಾಗಿದೆ. ಇಲ್ಲಿ ಪುರುಷರಷ್ಟೇ ಪ್ರಧಾನವಾಗಿ ಮಹಿಳೆಯರೂ, ಕುಲಜರಷ್ಟೇ ಪ್ರಧಾನವಾಗಿ ಅಂತ್ಯಜರೂ, ಪ್ರಭುಗಳಷ್ಟೇ ಪ್ರಧಾನವಾಗಿ ಪ್ರಜೆಗಳೂ ಬಾಳಿದುದು, ಬರೆದುದು ಬಹುಶಃ ಜಗತ್ತಿನ ಇತಿಹಾಸದಲ್ಲಿಯೇ ಏಕೈಕ ಉದಾಹರಣೆಯಾಗಿದೆ. ಇಂಥ ವಿಚಾರಶೀಲರ ಅಂದರೆ ಇವರ ತತ್ತ್ವ-ಸಾಹಿತ್ಯಗಳ ಉತ್ತರಾಧಿಕಾರಿಗಳಾದುದು ನಮ್ಮ ಭಾಗ್ಯ; ಇವರ ಸಾಹಿತ್ಯಸಂಪತ್ತನ್ನು ರಕ್ಷಿಸುವುದು, ಪ್ರಸಾರಮಾಡುವುದು ನಮ್ಮ ಕರ್ತವ್ಯ. ಈ ಕರ್ತವ್ಯದ ಭಾಗವಾಗಿ "ಸಮಗ್ರ ವಚನಸಾಹಿತ್ಯದ ಜನಪ್ರಿಯ ಆವೃತ್ತಿ ಪ್ರಕಟನ ಯೋಜನೆ"ಯನ್ನು ಕರ್ನಾಟಕ ಸರಕಾರ ಕೈಗೆತ್ತಿಕೊಂಡಿತು.

ಈವರೆಗೆ ವಚನಸಾಹಿತ್ಯ ಬಿಡಿಬಿಡಿಯಾಗಿ ಭಾಗಶಃ ಪ್ರಕಟವಾಗಿದ್ದಿತು, ಕೆಲವು ಭಾಗ ಅಪ್ರಕಟಿತ ಸ್ಥಿತಿಯಲ್ಲಿ ಉಳಿದಿದ್ದಿತು. ಇದೆಲ್ಲವನ್ನು ಕ್ರೋಢೀಕರಿಸಿ, ಪರಿಷ್ಕರಿಸಿ ಪ್ರಕಟಿಸುವುದು ಶ್ರಮದ ಕೆಲಸ. ಡಾ. ಎಂ. ಎಂ. ಕಲಬುರ್ಗಿಯವರ ಪ್ರಧಾನ ಸಂಪಾದಕತ್ವದಲ್ಲಿ, ಅನೇಕ ಜನ ವಿದ್ವಾಂಸರ ಮತ್ತು ಸಂಪಾದಕ ಮಂಡಳಿ ಸದಸ್ಯರ ಸಂಯುಕ್ತ ಪರಿಶ್ರಮದಿಂದ ಈ ಬೃಹತ್ ಯೋಜನೆ ಪೂರ್ತಿಗೊಂಡುದು ಸಂತೋಷದ ಸಂಗತಿ. ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯದ ಆಶ್ರಯದಲ್ಲಿ ಅಸ್ತಿತ್ವಕ್ಕೆ ಬಂದು, ನಿರ್ದಿಷ್ಟ ಅವಧಿಯಲ್ಲಿ ಪೂರ್ಣಗೊಂಡ ಈ ಐತಿಹಾಸಿಕ ಯೋಜನೆಗಾಗಿ ಸಂಬಂಧಪಟ್ಟ ಎಲ್ಲ ವಿದ್ವಾಂಸರನ್ನು ಅಭಿನಂದಿಸುತ್ತೇನೆ. ಕನ್ನಡ ಪುಸ್ತಕ ಪ್ರಾಧಿಕಾರದ ಮೂಲಕ ಪ್ರಕಟವಾಗುತ್ತಲಿರುವ ಈ ಪರಿಷ್ಕೃತ ದ್ವಿತೀಯ ಆವೃತ್ತಿ ಸಂಪುಟಗಳನ್ನು ಕನ್ನಡ ಜನತೆಗೆ ಅರ್ಪಿಸುತ್ತೇನೆ.

■■

# ಪ್ರಕಾಶಕರ ಮಾತು


**ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ**
ಅಧ್ಯಕ್ಷರು, ಕನ್ನಡ ಪುಸ್ತಕ ಪ್ರಾಧಿಕಾರ


ಸಮಗ್ರ ವಚನ ಸಂಪುಟಗಳ ಪರಿಷ್ಕೃತ ಆವೃತ್ತಿ ಪ್ರಕಟಣೆ ಕರ್ನಾಟಕ ಸಾಂಸ್ಕೃತಿಕ ಇತಿಹಾಸದಲ್ಲಿ ನಡೆದಿರುವ ಒಂದು ದಿವ್ಯಘಟನೆ. ವಚನಸಾಹಿತ್ಯದ ಪ್ರಕಟಣೆಗೆ ಸುಮಾರು ಎಂಬತ್ತು ವರ್ಷಗಳ ಇತಿಹಾಸವಿದೆ. ವಚನಪಿತಾಮಹ ಶ್ರೀ ಫ. ಗು. ಹಳಕಟ್ಟಿ ಅವರಿಂದ ಪ್ರಕಟಣೆಯ ದಿವ್ಯಘಟನೆ ಆರಂಭಗೊಂಡಿತು. ಇದೀಗ ಡಾ. ಎಂ. ಎಂ. ಕಲಬುರ್ಗಿಯವರ ಪ್ರಧಾನ ಸಂಪಾದಕತ್ವದ ಮೂಲಕ ಸಹಸ್ರಮಾನದ ಸೂರ್ಯೋದಯದ ವೇಳೆಗೆ ಇದು ಒಂದು ಪೂರ್ಣ ಘಟ್ಟಕ್ಕೆ ಬಂದಿದೆ. ಶರಣ ಸಾಹಿತ್ಯದ ಪ್ರಕಟಣೆಯ ಇತಿಹಾಸದಲ್ಲಿ ಇದು ಚಾರಿತ್ರಿಕ ಘಟನೆಯೇ ಸರಿ. ಈ ನಡುವೆ ವಚನಸಾಹಿತ್ಯದ ಸಹಸ್ರಾರು ಬಿಡಿ ಪ್ರಕಟಣೆಗಳು ಹೊರಬಂದಿವೆ. ವಿಶ್ವವಿದ್ಯಾಲಯಗಳು, ಖಾಸಗಿ ಸಂಸ್ಥೆಗಳು, ಮಠಗಳು, ಶಿಕ್ಷಣ ಕೇಂದ್ರಗಳು, ಖಾಸಗಿ ಪ್ರಕಾಶಕರು, ಆಸಕ್ತ ಲೇಖಕರು ಬಿಡಿಬಿಡಿಯಾಗಿ ವಚನಸಾಹಿತ್ಯದ ಪ್ರಕಟಣೆಗಳನ್ನು ಹೊರತಂದಿದ್ದಾರೆ. ನಾವು ಪ್ರೀತಿಯಿಂದ ಇವರನ್ನೆಲ್ಲ ಈ ಹೊತ್ತಿನಲ್ಲಿ ನೆನೆಯುವುದು, ಆ ಪಾತ್ರಃಸ್ಮರಣೀಯರ ಹಾದಿಯಲ್ಲಿ ಮುನ್ನಡೆಯುವುದು ನಮ್ಮ ಸಾಂಸ್ಕೃತಿಕ ಕರ್ತವ್ಯ.

ಸಮಗ್ರ ವಚನ ಸಂಪುಟಗಳು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ೧೯೯೩ರಲ್ಲಿ ಪ್ರಕಟಗೊಂಡಿದ್ದವು. ಆ ಸಂಪುಟಗಳು ಪ್ರಕಟವಾದ ವರ್ಷವೇ ಕನ್ನಡಿಗರ ಮನೆಯನ್ನು ಸೇರಿಕೊಂಡವು. ಆದರೆ, ಸಂಪುಟಗಳ ಬೇಡಿಕೆ ಮಹಾಜನರಿಂದ ಇದ್ದೇ ಇತ್ತು. ಆನಂತರ ಕರ್ನಾಟಕ ಸರ್ಕಾರ ಪರಿಷ್ಕೃತ ಆವೃತ್ತಿಗೆ ತಾತ್ವಿಕ ಒಪ್ಪಿಗೆ ನೀಡಿತು. ಹೀಗೆ ಒಪ್ಪಿಗೆ ನೀಡಿದ ಸಂಸ್ಕೃತಿ ಸಂಪನ್ನರೂ ಮುಖ್ಯಮಂತ್ರಿಗಳೂ ಆದ ಸನ್ಮಾನ್ಯ ಶ್ರೀ ಎಸ್. ಎಂ. ಕೃಷ್ಣ ಅವರನ್ನು ತುಂಬು ಹೃದಯದಿಂದ ಈ ಪ್ರಕಟಣೆಯ ದಿವ್ಯಘಟನೆಯ ಹೊತ್ತಿನಲ್ಲಿ ಸ್ಮರಿಸಿಕೊಳ್ಳುತ್ತೇನೆ. ಅನಂತರ ನಾಡಿನ ಶ್ರೇಷ್ಠ ವಿದ್ವಾಂಸರಾದ ಡಾ. ಎಂ. ಎಂ. ಕಲಬುರ್ಗಿ ಅವರ ಪ್ರಧಾನ ಸಂಪಾದಕತ್ವದಲ್ಲಿ ವಚನ ಸಂಪುಟಗಳ ಪರಿಷ್ಕೃತ ಆವೃತ್ತಿ ಸಿದ್ಧಗೊಂಡವು. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಈ ಸಂಪುಟಗಳನ್ನು ಪ್ರಕಟಿಸಬೇಕಿತ್ತು. ಆದರೆ, ಆ ಕಾರ್ಯವನ್ನು ಕನ್ನಡ ಪುಸ್ತಕ ಪ್ರಾಧಿಕಾರಕ್ಕೆ ಒಪ್ಪಿಸಿದ್ದು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಔದಾರ್ಯ; ಅದನ್ನು ಪಡೆದು ಪ್ರಕಟಿಸುತ್ತಿರುವುದು ಪುಸ್ತಕ ಪ್ರಾಧಿಕಾರದ ಭಾಗ್ಯ. ಈ ಭಾಗ್ಯಕ್ಕೆ ಕಾರಣರಾದವರು ಕನ್ನಡ ಮತ್ತು ಸಂಸ್ಕೃತಿ

ಇಲಾಖೆಯ ಸಚಿವೆಯರಾದ ಮಾನ್ಯ ಶ್ರೀಮತಿ ರಾಣಿ ಸತೀಶ್ ಮತ್ತು ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯದ ನಿರ್ದೇಶಕರಾದ ಶ್ರೀ ಕೆ. ಸಿ. ರಾಮಮೂರ್ತಿ. ಇವರಿಬ್ಬರ ಆಸಕ್ತಿಯ ಫಲ ಈ ಕಾರ್ಯವನ್ನು ಆಗುಗೊಳಿಸಿತು. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಮಾನ್ಯ ಸಚಿವೆಯರ ಆಪ್ತ ಕಾರ್ಯದರ್ಶಿ ಡಾ. ಎ. ಆರ್. ಮಂಜುನಾಥ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಕಾರ್ಯದರ್ಶಿ ಶ್ರೀ ಸಿ. ಎಸ್. ಕೇದಾರ್, ಕನ್ನಡ ಸಂಸ್ಕೃತಿ ನಿರ್ದೇಶನಾಲಯದ ಜಂಟಿ ನಿರ್ದೇಶಕ ಶ್ರೀ ಕಾ. ತ. ಚಿಕ್ಕಣ್ಣ ಪ್ರಕಟಣೆಯ ವಿವಿಧ ಹಂತಗಳಲ್ಲಿ ನನಗೆ ನೆರವಾಗಿದ್ದಾರೆ. ಈ ಮೇಲಿನ ಎಲ್ಲ ಮಹನೀಯರಿಗೂ ಕನ್ನಡ ಪುಸ್ತಕ ಪ್ರಾಧಿಕಾರವು ಅನನ್ಯವಾದ ಕೃತಜ್ಞತೆಯನ್ನು ಅರ್ಪಿಸುತ್ತದೆ.

ಸಮಗ್ರವಚನ ಸಂಪುಟಗಳ ಪರಿಷ್ಕೃತ ಆವೃತ್ತಿಯ ಸಂಪಾದಕ ಮಂಡಳಿಯ ವಿದ್ವಾಂಸರಾದ ಡಾ. ಎಂ. ಎಂ. ಕಲಬುರ್ಗಿ, ಡಾ. ಎಂ. ಚಿದಾನಂದಮೂರ್ತಿ, ಡಾ. ಸಿ. ಪಿ. ಕೃಷ್ಣಕುಮಾರ್, ಡಾ. ಎಸ್. ವಿದ್ಯಾಶಂಕರ್, ಎಸ್. ಶಿವಣ್ಣ ಇವರನ್ನು, ಕನ್ನಡ ಪುಸ್ತಕ ಪ್ರಾಧಿಕಾರದ ಮೂಲಕ ಹೊರತರಲು ಒಪ್ಪಿಗೆ ನೀಡಿದ ಪುಸ್ತಕ ಪ್ರಾಧಿಕಾರದ ಸ್ಥಾಯಿಸಮಿತಿ ಸದಸ್ಯರಾದ ಪ್ರೊ. ರಾಮೇಗೌಡ, ಶ್ರೀ ಆರ್. ಜಿ. ಹಳ್ಳಿ ನಾಗರಾಜ್, ಪ್ರೊ. ಸಿದ್ಧಪ್ಪ ಉತ್ನಾಳ್, ಶ್ರೀ ಛಾಯಾಪತಿ ಮತ್ತು ಶ್ರೀಮತಿ ಇಂದಿರಾ ಶಿವಣ್ಣ ಇವರನ್ನು ತುಂಬು ಮನಸ್ಸಿನಿಂದ ನೆನೆಯುತ್ತೇನೆ. ಹದಿನೈದು ಸಂಪುಟಗಳ ಅಕ್ಷರ ಜೋಡಣೆ ಮಾಡಿಕೊಟ್ಟವರನ್ನು, ಬಹು ಅಂದವಾಗಿ ಮುದ್ರಿಸಿದವರನ್ನು, ಸುಂದರವಾಗಿ ಮತ್ತು ಆಕರ್ಷಕವಾಗಿ ಸಂಪುಟಗಳನ್ನು ಬೈಂಡ್ ಮಾಡಿಕೊಟ್ಟವರನ್ನು, ಮುಖಪುಟ ವಿನ್ಯಾಸ ಮಾಡಿಕೊಟ್ಟವರನ್ನು, ತುಂಬು ಪ್ರೀತಿಯಿಂದ ನೆನೆಯುವುದು ನನ್ನ ಕರ್ತವ್ಯ. ಇವರ ಮುದ್ರಣ ಪರಿಣತಿಯ ಫಲ ಈ ಸಂಪುಟಗಳಿಗೆ ದೊರಕಿ ಅಂದವಾಗಲು ಕಾರಣವಾಗಿದೆ. ಪುಸ್ತಕ ಪ್ರಾಧಿಕಾರದ ಆಡಳಿತಗಾರರಾದ ಶ್ರೀ ಬಲವಂತರಾವ್ ಪಾಟೀಲ ನನ್ನೊಡನೆ ಉದ್ದಕ್ಕೂ ಸಹಕರಿಸಿದ್ದಾರೆ. ಈ ಮೇಲೆ ಹೆಸರಿಸಿದ ಎಲ್ಲ ಮಹನೀಯರನ್ನು ಕೃತಜ್ಞತಾಪೂರ್ವಕವಾಗಿ ನೆನೆಯುತ್ತೇನೆ.

ಕನ್ನಡ ಪುಸ್ತಕ ಪ್ರಾಧಿಕಾರವು ಪ್ರಕಟಿಸುತ್ತಿರುವ ಸಮಗ್ರ ವಚನ ಸಂಪುಟಗಳನ್ನು ಕನ್ನಡದ ಮಹಾಜನತೆ ಪ್ರೀತಿಯಿಂದ ಸ್ವೀಕರಿಸಬೇಕೆಂದು ಬೇಡುತ್ತೇನೆ.

■■

✲

# ಸಂಪಾದಕೀಯ

## ಡಾ. ಎಂ. ಎಂ. ಕಲಬುರ್ಗಿ

ಪ್ರಧಾನ ಸಂಪಾದಕರು

ಕರ್ನಾಟಕದ ಇತಿಹಾಸದಲ್ಲಿ ಶಿವಶರಣರ ಚಳುವಳಿ ಒಂದು ಅಪೂರ್ವ ಘಟನೆ, ವಚನಗಳ ಸೃಷ್ಟಿ ಒಂದು ಅನನ್ಯ ಪ್ರಯೋಗ. ಸಮಾಜದ ಎಲ್ಲ ವರ್ಗ, ಎಲ್ಲ ವರ್ಣಗಳ ಜನಸಮುದಾಯ ಬಸವಣ್ಣನವರ ನೇತೃತ್ವದಲ್ಲಿ ಕೈಕೊಂಡಿದ್ದ ವ್ಯಕ್ತಿಕಲ್ಯಾಣ ಮತ್ತು ಸಮಾಜಕಲ್ಯಾಣ ಚಳುವಳಿಯ ಸೃಷ್ಟಿಯೆನಿಸಿದ ಈ ವಚನಗಳು, ಜಾಗತಿಕ ಸಾಹಿತ್ಯದ ಮಹತ್ವಪೂರ್ಣ ಭಾಗವೆನಿಸಿವೆ.

'ವಚನ' ಶಬ್ದಕ್ಕೆ ಇಲ್ಲಿ ಗದ್ಯ ಸಾಹಿತ್ಯಪ್ರಕಾರವೆಂದು ಅರ್ಥವಲ್ಲ; ಪ್ರತಿಜ್ಞೆ, ಆತ್ಮಸಾಕ್ಷಿಯ ಮಾತು ಎಂದು ಅರ್ಥ. ನಡೆ ಹೇಗೇ ಇರಲಿ, ನುಡಿ ಮಾತ್ರ ಕಲಾತ್ಮಕವಾಗಿದ್ದುದು 'ರಚನೆ'ಯಾದರೆ, ನಡೆದಂತೆ ನುಡಿದ ಆತ್ಮಸಾಕ್ಷಿಯ ವಾಣಿ 'ವಚನ'ವೆನಿಸುತ್ತದೆ.

ವಚನಗಳು ಆಚಾರ್ಯರ ಸಾಹಿತ್ಯವಲ್ಲ, ಅನುಭಾವಿಗಳ ಸಾಹಿತ್ಯ. ಆಚಾರ್ಯರು ಜೀವಿಸಿರುವಾಗಲೇ ತಮ್ಮ ವಿಚಾರಗಳನ್ನು ಬರೆದು, ಅವುಗಳಿಗೆ ಸಂವಿಧಾನಾತ್ಮಕ ಮುದ್ರೆ ಒತ್ತುತ್ತಾರೆ. ಅನುಭಾವಿಗಳು ಮಾತ್ರ ತಮ್ಮ ಚಿಂತನೆಯನ್ನು ಹೃದಯದಿಂದ ಹೃದಯಕ್ಕೆ ಮುಟ್ಟುವಂತೆ ಬಿಡಿಮಾತುಗಳ ಮೂಲಕ ಹೇಳುತ್ತಾರೆ. ಬಿಡಿಮುತ್ತುಗಳಂತೆ ಸೂರೆಯಾದ ಅವುಗಳನ್ನು ಸಂಗ್ರಹಿಸುವ, ಸಂಕಲಿಸುವ, ಸಂಪಾದಿಸುವ ಕೆಲಸವನ್ನು ಉತ್ತರಕಾಲೀನ ಅನುಯಾಯಿಗಳು ಮಾಡುತ್ತಾರೆ. ಏಸುವಿನ ವಾಣಿಯಾದ ಬೈಬಲ್, ಮಹಮ್ಮದನ ಉಪದೇಶವಾದ ಕುರಾನ್, ಬುದ್ಧನ ಬೋಧೆಯಾದ ತ್ರಿಪಿಟಕ, ಶರಣರ ಸಂದೇಶವಾದ ವಚನಕೃತಿಗಳು ಈ ಬಗೆಯ ಉತ್ತರಕಾಲೀನ ಸಂಕಲನಗಳಾಗಿವೆ.

ಮೂಲತಃ ವಚನನಿಧಿ ಜನರಿಂದ, ಜನರಿಗಾಗಿ ಹುಟ್ಟಿ, ಜನರ ಮಧ್ಯದಲ್ಲಿ ಬಾಳಿದ ಸಾಹಿತ್ಯವಾಗಿದೆ. ಹೀಗಾಗಿ ಹನ್ನೆರಡರಿಂದ ಹದಿನೈದನೆಯ ಶತಮಾನಕ್ಕೆ ಬರುವಷ್ಟರಲ್ಲಿ ಅದಕ್ಕೆ ವಿಪುಲ ಭಿನ್ನಪಾಠಗಳು ಹುಟ್ಟಿಕೊಂಡವು. ಆಮೇಲೆ ಸಂಕಲನ-ಸಂಪಾದನ ಕಾರ್ಯದಿಂದಾಗಿ ಕೆಲವೊಮ್ಮೆ ಪ್ರಕ್ಷಿಪ್ತ ವಚನಗಳೂ ತಲೆಯೆತ್ತಿದವು. ಈ ಗೊಂದಲ ಕಾರಣವಾಗಿ ಕವಿಸಾಹಿತ್ಯಕ್ಕಿಂತ ವಚನಸಾಹಿತ್ಯದ ಸಂಪಾದನಕಾರ್ಯ ತುಂಬ ಜಟಿಲಸ್ವರೂಪ ದ್ದಾಗಿದೆ.

ಪ್ರಾಚೀನ ಕನ್ನಡ ಸಾಹಿತ್ಯದ ಪ್ರಕಟನಕಾರ್ಯವನ್ನು ಮೊದಲು ಕೈಗೆತ್ತಿಕೊಂಡವರು, ಕ್ರೈಸ್ತ ಪಾದ್ರಿಗಳು. ಜೈನ ಪುರಾಣ-ಕಾವ್ಯಗಳನ್ನು, ವೈದಿಕ ಪುರಾಣ-ಕೀರ್ತನೆಗಳನ್ನು, ವೀರಶೈವ ಶಾಸ್ತ್ರ-ಪುರಾಣಗಳನ್ನು ಪ್ರಕಟಿಸಿದ ಇವರು, ವಚನಸಾಹಿತ್ಯವನ್ನು ಮಾತ್ರ ತಪ್ಪಿಯೂ ಪ್ರಕಟಿಸಲಿಲ್ಲ. ದೇಶೀ ವಿದ್ವಾಂಸರೇ ಈ ಕೆಲಸವನ್ನು ಪ್ರಾರಂಭ ಮಾಡಬೇಕಾಯಿತು. ಈ

ದಿಸೆಯಲ್ಲಿ ಮೊದಲು ಪ್ರಕಟವಾದ ವಚನಕೃತಿ (೧೮೮೩) 'ಅಪ್ರಮಾಣ ಕೂಡಲ ಸಂಗಮದೇವಾ' ಮುದ್ರಿಕೆಯ ವಚನಗಳನ್ನೊಳಗೊಂಡ "ಶಿಖಾರತ್ನಪ್ರಕಾಶ"[೧]. ಆಮೇಲೆ ಒಂದು ಮೈಲಿಗಲ್ಲಿನಂತೆ ಪ್ರಕಟವಾದ ವಚನಕೃತಿ, ಬಸವಣ್ಣನವರ ಷಟ್‌ಸ್ಥಲವಚನ ಸಂಪುಟ. ಅದು ಮೊದಲು ಬೆಳಕು ಕಂಡುದು ೧೮೮೯ರಲ್ಲಿ[೨]. ಅಲ್ಲಿಂದ ಸರಿಯಾಗಿ ಒಂದು ಶತಮಾನ ಕಳೆಯುವಷ್ಟರಲ್ಲಿ ಅಂದರೆ ೧೯೮೮ರಲ್ಲಿ ಈ 'ಸಮಗ್ರ ವಚನಸಾಹಿತ್ಯದ ಜನಪ್ರಿಯ ಆವೃತ್ತಿ ಪ್ರಕಟನ ಯೋಜನೆ' ಅಸ್ತಿತ್ವಕ್ಕೆ ಬಂದುದು ಒಂದು ಯೋಗಾಯೋಗವಾಗಿದೆ; ವಚನಸಾಹಿತ್ಯದ ಪ್ರಕಟನಚರಿತ್ರೆಯ ಶತಮಾನಸ್ಮರಣೆಯಾಗಿದೆ.

ಈ ನೂರು ವರ್ಷಗಳ ಕಾಲವ್ಯಾಪ್ತಿಯಲ್ಲಿ ವಚನಸಾಹಿತ್ಯ ಪ್ರಕಟಣೆಗಾಗಿ ಅನೇಕರು ದುಡಿದಿರುವರಾದರೂ ಯೋಜನಾಬದ್ಧ ವ್ಯಾಪಕ ಪ್ರಯತ್ನಗಳು, ವಿಜಾಪುರ, ಧಾರವಾಡ, ಗದಗಗಳಲ್ಲಿ ಹೀಗೆ ಜರುಗಿವೆ :

೧. ಶಿವಾನುಭವ ಗ್ರಂಥಮಾಲೆ, ವಿಜಾಪುರ - ಡಾ. ಫ. ಗು. ಹಳಕಟ್ಟಿ

೨. ಕನ್ನಡ ಅಧ್ಯಯನ ಪೀಠ, ಕ. ವಿ. ಧಾರವಾಡ - ಡಾ. ಆರ್. ಸಿ. ಹಿರೇಮಠ

೩. ತೋಂಟದಾರ್ಯಮಠ, ಗದಗ - ಡಾ. ಎಂ. ಎಂ. ಕಲಬುರ್ಗಿ

ವಚನಸಾಹಿತ್ಯದ ಪ್ರಕಟನ ಕಾರ್ಯ ಹೀಗೆ ವಿಜಾಪುರದಲ್ಲಿ ಪ್ರಾರಂಭವಾಗಿ, ಧಾರವಾಡದಲ್ಲಿ ಬೆಳೆದು, ಗದುಗಿನಲ್ಲಿ ಒಂದು ನಿಲುಗಡೆಗೆ ಬರುತ್ತಿದ್ದಂತೆಯೇ, ಈಗ ನಾಲ್ಕನೆಯ ಘಟ್ಟದಲ್ಲಿ 'ಸಮಗ್ರ ವಚನಸಾಹಿತ್ಯದ ಜನಪ್ರಿಯ ಆವೃತ್ತಿ ಪ್ರಕಟನ ಯೋಜನೆ'ಯ ಅಂಗವಾಗಿ, ೧೫ ಸಂಪುಟಗಳು ಕರ್ನಾಟಕ ಸರಕಾರದ ಮೂಲಕ ಪ್ರಕಟವಾಗುತ್ತಲಿವೆ. ಸುಮಾರು ೧೧೦ ಜನ ಪ್ರಕ್ಷಿಪ್ತ ವಚನಕಾರರನ್ನೂ ಪ್ರಕ್ಷಿಪ್ತವಾಗಿರಬಹುದಾದ ಅನೇಕ ವಚನಗಳನ್ನೂ ಕೈಬಿಟ್ಟು ಸಂಯೋಜಿಸಲಾದ ಈ ಹದಿನೈದು ಸಂಪುಟಗಳ ಒಟ್ಟು ಪುಟ ಸುಮಾರು ಹತ್ತು ಸಾವಿರ; ಒಟ್ಟು ವಚನ ಸಂಖ್ಯೆ ಸುಮಾರು ಇಪ್ಪತ್ತು ಸಾವಿರ. ವಚನಸಾಹಿತ್ಯವನ್ನು ಒಮ್ಮೆ ಸಮಗ್ರವಾಗಿ ಹೊರತಂದ ಪ್ರಥಮ ಮಹತ್ವಾಕಾಂಕ್ಷೆಯ ಯೋಜನೆಯಿದು. ಈ ಸಾಹಿತ್ಯದ ಗಡಿಗೆರೆಗಳನ್ನು, ಸಂಖ್ಯಾಬಾಹುಳ್ಯವನ್ನು ವ್ಯವಸ್ಥೆಗೊಳಿಸಿ ಕೊಟ್ಟು, ವಿದ್ವಾಂಸರ ಅಧ್ಯಯನದ ಮುಂದುವರಿಕೆಗೆ ಒಂದು ನಿರ್ದಿಷ್ಟ ಚೌಕಟ್ಟನ್ನು ಒದಗಿಸಿದ ಹಿರಿಮೆ ಈ ಯೋಜನೆಗೆ ಸಲ್ಲುತ್ತದೆ.

ಈ ಯೋಜನೆಯ ಅಂಗವಾಗಿ ಬಸವಣ್ಣನವರ ವಚನ, ಪ್ರಭುದೇವರ ವಚನ, ಚೆನ್ನಬಸವಣ್ಣನವರ ವಚನ, ಸಿದ್ಧರಾಮೇಶ್ವರ ವಚನ, ಶಿವಶರಣೆಯರ ವಚನ - ಹೀಗೆ ಐದು ಸಂಪುಟಗಳು, ಬಸವ ಸಮಕಾಲೀನ ಮಿಕ್ಕ ಶರಣರ ವಚನಗಳ ನಾಲ್ಕು ಸಂಪುಟಗಳು,

---

೧. ಮೊದಲು ಪ್ರಕಟವಾದ ವಚನಕೃತಿ ಅಖಂಡೇಶ್ವರ ವಚನ (೧೮೮೨)ವೆಂದು ಡಾ. ಬಿ. ನಂಜುಂಡ ಸ್ವಾಮಿ ಅವರ ಅಭಿಪ್ರಾಯ. (ಬಸವಪಥ ೧೬.೬)

೨. ಬಸವಣ್ಣನವರ ಷಟ್ಸ್ಥಲದ ವಚನಗಳು ಪ್ರಥಮ ಸಲ ಬೆಳಕುಕಂಡುದು ೧೮೮೬ರಲ್ಲಿಯೆಂದು ಡಾ. ಬಿ. ನಂಜುಂಡಸ್ವಾಮಿ ಹೇಳುತ್ತಾರೆ. (ಬಸವಪಥ ೧೫-೫ ಪು. ೪೫)

ಬಸವೋತ್ತರ ಕಾಲೀನ ಶರಣರ ವಚನಗಳ ಐದು ಸಂಪುಟಗಳು ಮತ್ತು ಒಂದು ವಚನ ಪರಿಭಾಷಾಕೋಶ - ಹೀಗೆ ಹದಿನೈದು ಸಂಪುಟಗಳು ಬೆಳಕುಕಾಣುತ್ತಲಿವೆ. ಇವುಗಳಲ್ಲಿ ಮೊದಲಿನ ಐದು ಸಂಪುಟಗಳು (ಬಸವಣ್ಣ, ಅಲ್ಲಮಪ್ರಭು, ಚೆನ್ನಬಸವಣ್ಣ, ಸಿದ್ಧರಾಮ, ಶಿವಶರಣೆಯರು) ಈಗಾಗಲೇ ಕರ್ನಾಟಕ ವಿಶ್ವವಿದ್ಯಾಲಯದ ಮೂಲಕ ಪ್ರಕಟವಾಗಿದ್ದವು. ಆ ಬಳಿಕ ಲಭ್ಯವಾದ ನೂರಾರು ಹೊಸ ವಚನಗಳನ್ನು ಸೇರಿಸಿ, ಈ ಐದೂ ಸಂಪುಟಗಳಿಗೆ ಸಮಗ್ರರೂಪ ಕೊಟ್ಟಿದ್ದೇವೆ ಮತ್ತು ಪರಿಷ್ಕರಿಸಿದ್ದೇವೆ.

ಬಸವ ಸಮಕಾಲೀನ ಮಿಕ್ಕ ಶರಣರ ನಾಲ್ಕು ಸಂಪುಟಗಳ ಕೆಲಸ ಈವರೆಗೆ ಸಮರ್ಪಕವಾಗಿ ನಡೆದಿರಲಿಲ್ಲ. ಈ ಶರಣರ ಸಂಖ್ಯೆ, ಇವರ ವಚನಸಂಖ್ಯೆ ಅಸ್ಪಷ್ಟವಾಗಿಯೇ ಉಳಿದಿದ್ದಿತು. ವಚನಗಳೂ ಅಲ್ಲಿಷ್ಟು, ಇಲ್ಲಿಷ್ಟು ಪ್ರಕಟವಾಗಿದ್ದವು. ಒಂದಿಷ್ಟು ಅಪ್ರಕಟಿತ ಸ್ಥಿತಿಯಲ್ಲಿಯೇ ಉಳಿದುಬಿಟ್ಟಿದ್ದವು. ಇವೆಲ್ಲವುಗಳನ್ನು ಸಂಗ್ರಹಿಸಿ, ಪರಿಷ್ಕರಿಸಿ ಈ ನಾಲ್ಕೂ ಸಂಪುಟಗಳಿಗೆ ಸಮಗ್ರ ರೂಪ ಕೊಟ್ಟಿದ್ದೇವೆ. ಒಟ್ಟಿನಲ್ಲಿ ಬಸವಯುಗದ ಈ ಎಲ್ಲ ಒಂಬತ್ತು ಸಂಪುಟಗಳಿಗೆ ಸುಮಾರು ಸಾವಿರದಷ್ಟು ಹೊಸ ವಚನಗಳನ್ನು ಸೇರಿಸಿದ್ದೇವೆ.

ಬಸವೋತ್ತರ ಕಾಲೀನ ಶರಣರ ಸಂಪುಟಗಳ ಕೆಲಸ ಇನ್ನೂ ಅಲಕ್ಷಿತವಾಗಿದ್ದಿತು. ಈವರೆಗೆ ತಿಳಿದುಬಂದಿದ್ದ ವಚನಕಾರರ ಹೊಸ ವಚನಗಳನ್ನು ಶೋಧಿಸುವುದರೊಂದಿಗೆ, ಅನೇಕ ಹೊಸ ವಚನಕಾರರನ್ನೂ ಬೆಳಕಿಗೆ ತಂದಿದ್ದೇವೆ. ಇದರಿಂದಾಗಿ ಬಸವೋತ್ತರಯುಗದ ಶರಣರನ್ನೂ ಅವರ ವಚನಗಳ ವ್ಯಾಪ್ತಿಯನ್ನೂ ಜನತೆಯ ಮುಂದಿಟ್ಟ ಪ್ರಥಮ ಕೀರ್ತಿ ಈ ಐದು ಸಂಪುಟಗಳಿಗೆ ಸಲ್ಲುತ್ತದೆ. ಹೀಗೆ ಬಸವಯುಗ, ಬಸವೋತ್ತರಯುಗಗಳ ವಚನಸಾಹಿತ್ಯಕ್ಕೆ ಸಂಬಂಧಪಟ್ಟ ಎಲ್ಲ ಕೊರತೆಗಳನ್ನು ತುಂಬಿಕೊಡುವ ಒಂದು ಪರಿಪೂರ್ಣ ಯೋಜನೆ ಇದಾಗಿದೆ. ಮೊದಲ ಬಾರಿಗೆ ೧೯ನೆಯ ಶತಮಾನದವರೆಗಿನ ಎಲ್ಲ ಶರಣರ ಎಲ್ಲ ವಚನಗಳನ್ನು ಒಂದೆಡೆ ಸಂಗ್ರಹಿಸಿ, ಒಂದು ಕ್ರಮಕ್ಕೆ ಅಳವಡಿಸಿ, ಸಂಪುಟ ಶ್ರೇಣಿಯಲ್ಲಿ ಹೊರತಂದ ದೊಡ್ಡಪ್ರಯತ್ನ ಇಲ್ಲಿದೆ.

ವಚನಸಾಹಿತ್ಯದ ಪರಿಷ್ಕರಣಕಾರ್ಯ ತುಂಬ ಜಟಿಲವಾದುದು. ೧. ಎಲ್ಲ ಶರಣರ ಎಲ್ಲ ವಚನಗಳನ್ನು ಎಲ್ಲ ಪ್ರಾಚೀನ ಆಕರಗಳಿಂದ ಸಂಗ್ರಹಿಸುವುದು, ೨. ಪ್ರಕ್ಷಿಪ್ತವಾಗಿರ ಬಹುದಾದ ವಚನಕಾರರನ್ನು, ವಚನಗಳನ್ನು ಕೈಬಿಡುವುದು, ೩. ನಿಜವಚನಗಳ ಪಾಠವನ್ನು ಪರಿಷ್ಕರಿಸುವುದು - ಇದು ಈ ಯೋಜನೆಯ ಉದ್ದೇಶವಾಗಿದೆ. ಈ ಉದ್ದೇಶ ಸಾಧನೆಗಾಗಿ ಎಲ್ಲ ಪ್ರಾಚೀನ ಆಕರಗಳಿಂದ ಅಂದರೆ ಸುಮಾರು ೧೦೮ ಆಕರಗಳಿಂದ ಎಲ್ಲ ವಚನಗಳನ್ನು ಸಂಗ್ರಹಿಸಿ, ಪ್ರತಿಯೊಂದು ವಚನದ ಕೆಳಗೆ ಅದರ ಎಲ್ಲ ಆಕರಗಳನ್ನು ನಮೂದಿಸಿದ 'ವಚನ ಬ್ಯಾಂಕ'ನ್ನು ಅಸ್ತಿತ್ವಕ್ಕೆ ತರಲಾಯಿತು. ಒಂದು ವಚನಕ್ಕೆ ಇರುವ ವಿವಿಧ ಪಾಠಾಂತರ, ರೂಪಾಂತರಗಳ ಸ್ವರೂಪವನ್ನು ಅರ್ಥಮಾಡಿಕೊಳ್ಳಲು, ಮುದ್ರಿಕೆಯ ವ್ಯತ್ಯಾಸವನ್ನು ಗಮನಿಸಲು, ಒಬ್ಬ ವಚನಕಾರನ ಒಟ್ಟು ವಚನಗಳ ಸಂಖ್ಯೆಯನ್ನು ನಿರ್ಧರಿಸಲು, ಕೊನೆಯದಾಗಿ ವಚನದ ನಿಜಪಾಠವನ್ನು ನಿರ್ಣಯಿಸಲು ಈ ಬ್ಯಾಂಕ್ ತುಂಬ ನೆರವಾಯಿತು.

ಇವು ಜನಪ್ರಿಯ ಆವೃತ್ತಿಗಳಾಗಿರುವುದರಿಂದ ಲಭ್ಯವಿರುವ ಪಾಠಾಂತರಗಳಲ್ಲಿ ಯೋಗ್ಯವಾದುದನ್ನು ಸ್ವೀಕರಿಸಿ, ಅನ್ಯಪಾಠಗಳನ್ನು ಅಡಿಯಲ್ಲಿ ನಮೂದಿಸದೆ ಕೈಬಿಟ್ಟಿದ್ದೇವೆ. ಜನಸಾಮಾನ್ಯರ ಅನುಕೂಲತೆಗಾಗಿ ಶಕಟರೇಫೆಗೆ ಬದಲು ರೇಫೆ ಇಟ್ಟುಕೊಂಡಿದ್ದೇವೆ. ಅಭ್ಯಾಸಿಗಳ ಉಪಯೋಗ ದೃಷ್ಟಿಯಿಂದ ಕಠಿಣ ಪದಕೋಶ, ಅಕಾರಾದಿ, ಆಕರಸೂಚಿಗಳನ್ನು ಅನುಬಂಧದಲ್ಲಿ ಕೊಟ್ಟಿದ್ದೇವೆ. ಹೆಚ್ಚಿನದಾಗಿ ಪಾರಿಭಾಷಿಕ ಪದಗಳ ಒಂದು ಸ್ವತಂತ್ರ ಕೋಶವನ್ನೇ ಪ್ರಕಟಿಸಿದ್ದೇವೆ. ಒಟ್ಟಿನಲ್ಲಿ, ಇವು ಜನಪ್ರಿಯ ಆವೃತ್ತಿಗಳಾದರೂ ವಿದ್ವಜ್ಜನಪ್ರಿಯ ಆವೃತ್ತಿಗಳೂ ಆಗಬೇಕೆಂಬ ಆದರ್ಶದಲ್ಲಿ ಈ ಸಂಪುಟಗಳನ್ನು ರೂಪಿಸಲು ಪ್ರಯತ್ನಿಸಿದ್ದೇವೆ.

## ಕೃತಜ್ಞತೆ

ವಿಶ್ವವಿದ್ಯಾಲಯದಂಥ ಶಿಕ್ಷಣ ಸಂಸ್ಥೆಗಳು, ಲಿಂಗಾಯತ ವಿದ್ಯಾಭಿವೃದ್ಧಿ ಸಂಸ್ಥೆಯಂಥ ಸಾರ್ವಜನಿಕ ಸಂಸ್ಥೆಗಳು, ವೀರಶೈವ ಮಠಗಳಂಥ ಧಾರ್ಮಿಕ ಸಂಸ್ಥೆಗಳು, ಡಾ. ಫ. ಗು. ಹಳಕಟ್ಟಿಯವರಂಥ ವಿದ್ವಾಂಸ ವ್ಯಕ್ತಿಗಳು ನಿರಂತರ ದುಡಿದರೂ ವಚನಸಾಹಿತ್ಯ ಪೂರ್ಣಪ್ರಮಾಣದಲ್ಲಿ ಪ್ರಕಟವಾಗಲು ಒಂದುನೂರು ವರ್ಷ ಹಿಡಿದುದು ಅದರ ಗಾತ್ರಬಾಹುಳ್ಯಕ್ಕೆ ಸಾಕ್ಷಿಯಾಗಿದೆ. ನೂರುವರ್ಷ ದುಡಿದು, ಸಾಮಗ್ರಿಯನ್ನು ಪ್ರಕಟಿಸಿದ ಈ ಎಲ್ಲ ವ್ಯಕ್ತಿ-ಸಂಸ್ಥೆಗಳಿಗೆ ನಮ್ಮ ಕೃತಜ್ಞತಾಪೂರ್ವಕ ವಂದನೆಗಳು ಸಲ್ಲುತ್ತವೆ.

ಈ ಯೋಜನೆಯ ಕಾರ್ಯಾಲಯ ಅಸ್ತಿತ್ವಕ್ಕೆ ಬಂದು ಕೆಲಸ ಪ್ರಾರಂಭವಾದದ್ದು ಅಕ್ಟೋಬರ್ ೧೫, ೧೯೮೮ರಂದು. ಹಸ್ತಪ್ರತಿಗಳು ಅಚ್ಚಿಗೆ ಹೋದದ್ದು ೧೬ ಮಾರ್ಚ್ ೧೯೯೦ರಂದು. ಹೀಗೆ ಮೊದಲೇ ಯೋಜಿಸಿದಂತೆ ಎರಡು ವರ್ಷಗಳ ನಿರ್ದಿಷ್ಟ ಅವಧಿಯಲ್ಲಿ ಈ ಕೆಲಸವನ್ನು ಪೂರ್ಣಗೊಳಿಸಿದ್ದೇವೆ. ಪ್ರತಿಯೊಂದು ಹಂತದಲ್ಲಿಯೂ ಈ ಯೋಜನೆ ಸಕ್ರಮವಾಗಿ ಮುನ್ನಡೆಯುವುದಕ್ಕಾಗಿ 'ಸಂಪಾದಕ ಮಂಡಳಿ'ಯ ಸದಸ್ಯರಾದ ಡಾ. ಎಂ. ಚಿದಾನಂದಮೂರ್ತಿ, ಡಾ. ಸಿ. ಪಿ. ಕೃಷ್ಣಕುಮಾರ, ಡಾ. ಎಸ್. ವಿದ್ಯಾಶಂಕರ, ಶ್ರೀ ಎಸ್. ಶಿವಣ್ಣ ಅವರು ಉದ್ದಕ್ಕೂ ಬೆಲೆಯುಳ್ಳ ಸಲಹೆ-ಮಾರ್ಗದರ್ಶನ ನೀಡಿದ್ದಾರೆ. ಡಾ. ಎಚ್. ತಿಪ್ಪೇರುದ್ರಸ್ವಾಮಿ ಅವರು ಆರಂಭದ ಕೆಲವು ತಿಂಗಳು ಸಂಪಾದಕ ಮಂಡಳಿಯ ಸದಸ್ಯರಾಗಿ, ವಿಶ್ವಾಸದಿಂದ ನೆರವಾಗಿದ್ದಾರೆ. ಸಂಪಾದಕ ಮಿತ್ರರಾದ ಡಾ. ಬಿ. ವ್ಹಿ. ಮಲ್ಲಾಪುರ, ಡಾ. ಎಸ್. ವಿದ್ಯಾಶಂಕರ, ಡಾ. ವ್ಹಿ. ಬಿ. ರಾಜೂರ, ಡಾ. ಬಿ. ಆರ್. ಹಿರೇಮಠ, ಶ್ರೀ ಎಸ್. ಶಿವಣ್ಣ ತುಂಬ ಶ್ರಮ-ಶ್ರದ್ಧೆಗಳಿಂದ ಸಂಪಾದನ ಕೆಲಸ ಪೂರೈಸಿದ್ದಾರೆ. ಸಹಾಯಕ ಸಂಶೋಧಕರಾದ ಶ್ರೀಮತಿ ವಿಜಯಶ್ರೀ ಹಿರೇಮಠ, ಶ್ರೀ ವಾಯ್. ಎಂ. ಯಾಕೊಳ್ಳಿ, ಶ್ರೀ ಬಿ. ವ್ಹಿ. ಕೋರಿ ಅವರು ದಣಿವನ್ನು ಲೆಕ್ಕಿಸದೆ ದುಡಿದಿದ್ದಾರೆ. ಇವರೆಲ್ಲರಿಗೆ ನಾವು ಕೃತಜ್ಞರಾಗಿದ್ದೇವೆ.

ಈ ಯೋಜನೆಯನ್ನು ಅನುದಾನ ಮಾಡಿದ ಕರ್ನಾಟಕ ಸರಕಾರದ ಔದಾರ್ಯಕ್ಕೆ ನಮ್ಮ ಅಭಿನಂದನೆಗಳು ಸಲ್ಲುತ್ತವೆ. ಈ ಅವಧಿಯಲ್ಲಿ ಮುಖ್ಯಮಂತ್ರಿಗಳಾಗಿದ್ದ ಮಾನ್ಯ ಶ್ರೀ ರಾಮಕೃಷ್ಣ ಹೆಗಡೆ, ಶ್ರೀ ಎಸ್. ಆರ್. ಬೊಮ್ಮಾಯಿ, ಶ್ರೀ ವೀರೇಂದ್ರ ಪಾಟೀಲ, ಶ್ರೀ ಎಸ್. ಬಂಗಾರಪ್ಪ ಅವರಿಗೂ, ಸಾಹಿತಿಗಳೂ ಸಾಹಿತ್ಯ-ಸಂಸ್ಕೃತಿಗಳ ಗಾಢ ಆಸಕ್ತರೂ

ಆಗಿರುವ ಮುಖ್ಯಮಂತ್ರಿಗಳಾದ ಮಾನ್ಯ ಶ್ರೀ ಎಂ. ವೀರಪ್ಪ ಮೊಯಿಲಿ ಅವರಿಗೂ ಋಣಿಯಾಗಿದ್ದೇವೆ.

ಈ ಯೋಜನೆ ಅಸ್ತಿತ್ವಕ್ಕೆ ಬರುವಲ್ಲಿ ವಿಶೇಷ ಆಸಕ್ತಿ ವಹಿಸಿದವರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಅಂದಿನ ಸಚಿವರಾಗಿದ್ದ ಶ್ರೀ ಎಂ. ಪಿ. ಪ್ರಕಾಶ ಅವರು. ಸಾಹಿತ್ಯ-ಸಂಸ್ಕೃತಿಗಳ ಬಗ್ಗೆ ಅನನ್ಯ ಪ್ರೀತಿ-ಗೌರವ ಬೆಳೆಸಿಕೊಂಡಿರುವ ಶ್ರೀಯುತರಿಗೆ ನಾವು ಕೃತಜ್ಞರಾಗಿದ್ದೇವೆ. ಆಮೇಲೆ ಈ ಇಲಾಖೆಗೆ ಸಚಿವರಾಗಿ ಬಂದ ಶ್ರೀ ಎಂ. ವೀರಪ್ಪ ಮೊಯಿಲಿ, ಶ್ರೀ ಕೆ. ಎಚ್. ರಂಗನಾಥ, ಶ್ರೀ ಎಸ್. ರಮೇಶ್, ಇಂದಿನ ಸಚಿವರಾದ ಮಾನ್ಯ ಶ್ರೀ ಎಚ್. ವಿಶ್ವನಾಥ್ ಅವರಿಗೆ ನಮ್ಮ ಗೌರವಗಳು ಸಲ್ಲುತ್ತವೆ.

ಈ ಪ್ರಸಂಗದಲ್ಲಿ ಆತ್ಮೀಯ ಆಡಳಿತ ನಿರ್ದೇಶನ ಮಾಡಿದ ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯದ ಅಂದಿನ ನಿರ್ದೇಶಕರಾಗಿದ್ದ ಶ್ರೀ ಐ. ಎಂ. ವಿಠ್ಠಲಮೂರ್ತಿ, ಶ್ರೀ ಬಿ. ಪಾರ್ಥಸಾರಥಿ, ಕಮಿಷನರ್ ಡಾ. ಪಿ. ಎಸ್. ರಾಮಾನುಜಂ, ಇಂದಿನ ಕಮಿಷನರ್‌ರಾದ ಶ್ರೀ ಪಿ. ಎಸ್. ವಿ. ರಾವ್ ಅವರನ್ನೂ ಅಧಿಕ ನಿರ್ದೇಶಕರಾದ ಶ್ರೀ ಕೆ. ದೇವರಸಯ್ಯ, ಉಪನಿರ್ದೇಶಕರಾದ ಶ್ರೀ ಕಾ. ತ. ಚಿಕ್ಕಣ್ಣ ಅವರನ್ನೂ ನೆನೆಯುವುದು ಪ್ರೀತಿಯ ವಿಷಯವಾಗಿದೆ.

ಇಂಥ ಒಂದು ಬೃಹತ್ ಯೋಜನೆಗೆ ಕಾರ್ಯಾಲಯವೊಂದು ಅತ್ಯವಶ್ಯ. ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಪೀಠದಲ್ಲಿ ಈ ಅವಕಾಶ ಕಲ್ಪಿಸಿಕೊಟ್ಟ ಕರ್ನಾಟಕ ವಿಶ್ವವಿದ್ಯಾಲಯದ ಅಂದಿನ ಕುಲಪತಿ ಡಾ. ಜಿ. ಕೆ. ನಾರಾಯಣರೆಡ್ಡಿ, ಇಂದಿನ ಕುಲಪತಿ ಡಾ. ಎಸ್. ರಾಮೇಗೌಡ ಅವರ ಔದಾರ್ಯವನ್ನು, ಪೀಠದ ಮುಖ್ಯಸ್ಥರ ಸಹಕಾರವನ್ನು ಕೃತಜ್ಞತೆಯಿಂದ ನೆನೆಯುತ್ತೇವೆ.

ಇದು ಒಂದು ದೊಡ್ಡ ಯೋಜನೆ. ಇದರ ಸಂಪಾದನೆಯ ಸಮಸ್ಯೆಗಳೂ ದೊಡ್ಡವು. ಪಾಠಾಂತರ, ರೂಪಾಂತರ, ಪ್ರಕ್ಷಿಪ್ತತೆ ಇತ್ಯಾದಿಗಳ ದಾಳಿಗೆ ಗುರಿಯಾಗುತ್ತ ಬಂದ ವ್ಯಾಪಕ ಪ್ರಮಾಣದ ಈ ಸಾಹಿತ್ಯವನ್ನು ಒಂದೆಡೆ ಸಂಗ್ರಹಿಸುವುದು, ಪುನರುಕ್ತಿಗಳನ್ನು ಗುರುತಿಸುವುದು, ಮುದ್ರಿಕೆ ಪಲ್ಲಟಗಳನ್ನು ಸರಿಪಡಿಸುವುದು, ಪ್ರಕ್ಷಿಪ್ತಗಳನ್ನು ದೂರೀಕರಿಸುವುದು, ಕೊನೆಯದಾಗಿ ವಚನಗಳನ್ನು ಶುದ್ಧೀಕರಿಸುವುದು - ಎಂಥವರನ್ನೂ ಧೈರ್ಯಗೆಡಿಸುವ ಕೆಲಸ. ಹೀಗಿದ್ದೂ ವಚನಸಾಹಿತ್ಯದ ಮೇಲಿನ ಗೌರವ, ಕೆಲಸದ ಮೇಲಿನ ಪ್ರೀತಿಗಳು ನಮ್ಮಿಂದ ಈ ಕಾರ್ಯ ಮಾಡಿಸಿವೆ. ನಮ್ಮ ಶಕ್ತಿಗೆ ಮೀರಿ ಉಳಿದಿರಬಹುದಾದ ದೋಷಗಳನ್ನು ಮನ್ನಿಸಬೇಕೆಂದು ಕೋರುತ್ತ, ಎರಡು ವರ್ಷ ರಾತ್ರಿಯನ್ನೂ ಹಗಲುಮಾಡಿ ದುಡಿದು ರೂಪಿಸಿದ ಈ ಹದಿನೈದು ಸಂಪುಟಗಳನ್ನು ಸಹೃದಯಲೋಕಕ್ಕೆ ಅರ್ಪಿಸುತ್ತೇವೆ. 'ಶಿವಶರಣರ ಸಮಗ್ರ ವಚನಸಾಹಿತ್ಯ' ಸುಲಭ ಬೆಲೆಯಲ್ಲಿ ಕನ್ನಡಿಗರ ಮನೆ-ಮನಗಳನ್ನು ಬೆಳಗಲೆಂದು ಹಾರೈಸುತ್ತೇವೆ.

## ದ್ವಿತೀಯ ಆವೃತ್ತಿ

ಸಮಗ್ರ ವಚನಸಾಹಿತ್ಯದ ಜನಪ್ರಿಯ ಆವೃತ್ತಿ ಸಂಪುಟಗಳು ೧೯೯೩ರಲ್ಲಿ ಪ್ರಕಟವಾಗಿ, ಒಂದು ವರ್ಷ ಕಳೆಯುವಷ್ಟರಲ್ಲಿ ಮಾರಾಟವಾದವು. ಕರ್ನಾಟಕ ಸರಕಾರದ ಗ್ರಂಥಪ್ರಕಟನೆಯ ಇತಿಹಾಸದಲ್ಲಿಯೇ ಈ ಬಗೆಯ ಮಾರಾಟ ಒಂದು ದಾಖಲೆ. ಜನತೆಯ ಅಪಾರ ಬೇಡಿಕೆಯನ್ನು ಗಮನಿಸಿ, ಈಗ ಪರಿಷ್ಕೃತ ದ್ವಿತೀಯ ಆವೃತ್ತಿಯನ್ನು ಪ್ರಕಟಿಸುತ್ತಿದ್ದೇವೆ. ಇತ್ತೀಚೆಗೆ ಲಭ್ಯವಾದ ಸುಮಾರು ಒಂದು ಸಾವಿರ ಹೊಸವಚನಗಳನ್ನು ಸೇರಿಸುವ, ಮೊದಲ ಆವೃತ್ತಿಯ ವಚನಪಾಠವನ್ನು ಮತ್ತೆ ಪರಿಷ್ಕರಿಸುವ ಮೂಲಕ ಮೊದಲಿನ ೧೪ ಸಂಪುಟಗಳನ್ನು ಸಮಗ್ರವಾಗಿ ಮತ್ತೆ ರೂಪಿಸಿದ್ದೇವೆ. ೧೫ನೆಯ ಸಂಪುಟ (ಪರಿಭಾಷಾಕೋಶ) ವನ್ನು ಹೊಸದಾಗಿ ಸಿದ್ಧಪಡಿಸಿದ್ದೇವೆ. ಹೊಸ ವಿಚಾರ, ಶೋಧಗಳ ಬೆಳಕಿನಲ್ಲಿ ಸಂಪಾದಕೀಯ, ಪ್ರಸ್ತಾಪವನೆಗಳನ್ನು ಸೂಕ್ತ ರೀತಿಯಲ್ಲಿ ಪರಿಷ್ಕರಿಸಿದ್ದೇವೆ.

ಈ ಆವೃತ್ತಿ ಬೆಳಕು ಕಾಣಲು ವಿಶೇಷ ಆಸಕ್ತಿ ವಹಿಸಿದ ನಮ್ಮ ರಾಜ್ಯದ ಮುಖ್ಯಮಂತ್ರಿಗಳಾದ ಮಾನ್ಯ ಶ್ರೀ ಎಸ್. ಎಂ. ಕೃಷ್ಣ ಅವರಿಗೂ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಚಿವರಾದ ಮಾನ್ಯ ಶ್ರೀಮತಿ ರಾಣಿ ಸತೀಶ್ ಅವರಿಗೂ ನಾವು ಋಣಿಯಾಗಿದ್ದೇವೆ. ಈ ಕೆಲಸ ನಿರ್ದಿಷ್ಟ ಕಾಲಾವಧಿಯಲ್ಲಿ ಪೂರ್ಣಗೊಳ್ಳುವಂತೆ ನೋಡಿಕೊಂಡ ಕನ್ನಡ ಸಂಸ್ಕೃತಿ ನಿರ್ದೇಶನಾಲಯದ ನಿರ್ದೇಶಕರಾದ ಶ್ರೀ ಕೆ. ಸಿ. ರಾಮಮೂರ್ತಿ ಅವರಿಗೂ ಅವರ ಸಿಬ್ಬಂದಿ ವರ್ಗಕ್ಕೂ, ಮಾರ್ಗದರ್ಶನ ಮಾಡಿ ಸಂಪುಟಗಳ ಉತ್ತಮಿಕೆ ಕಾರಣರಾದ ಸಂಪಾದಕ ಮಂಡಲದ ಸದಸ್ಯರಿಗೂ, ಸಂಸ್ಕೃತ ಶ್ಲೋಕಗಳನ್ನು ಪರಿಷ್ಕರಿಸಿಕೊಟ್ಟ ಮೈಸೂರಿನ ಪೂಜ್ಯ ಶ್ರೀ ಇಮ್ಮಡಿ ಶಿವಬಸವಸ್ವಾಮಿಗಳು ಕುಂದೂರುಮಠ ಅವರಿಗೂ, ೧೫ನೆಯ ಪರಿಭಾಷಾ ಸಂಪುಟವನ್ನು ಹೊಸದಾಗಿ ರೂಪಿಸಿಕೊಟ್ಟ ಡಾ. ಎಸ್. ಜಿ. ಮಹಾದೇವಪ್ಪ ಅವರಿಗೂ ನಮ್ಮ ವಂದನೆಗಳು ಸಲ್ಲುತ್ತವೆ. ಹತ್ತು ಸಾವಿರ ಪುಟಗಳ, ಹದಿನೈದು ಸಂಪುಟಗಳ ಪ್ರಕಟನೆ ಸುಲಭದ ಕೆಲಸವೇನಲ್ಲ. ಸಾಹಿತ್ಯದ ಮೇಲಿನ, ಅದರಲ್ಲಿಯೂ ವಚನಸಾಹಿತ್ಯದ ಮೇಲಿನ ಪ್ರೀತಿ ಕಾರಣವಾಗಿ ಪುಸ್ತಕ ಪ್ರಾಧಿಕಾರದ ಮೂಲಕ ಪ್ರಕಟಿಸಿದ ಅಧ್ಯಕ್ಷರಾದ ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ ಅವರಿಗೆ ನಾವು ಋಣಿಯಾಗಿದ್ದೇವೆ.

ಮೊದಲ ಆವೃತ್ತಿಯಲ್ಲಿ ಉಳಿದುಕೊಂಡಿದ್ದ ಕೊರತೆ, ದೋಷಗಳನ್ನು ಕಷ್ಟಪಟ್ಟು ಹುಡುಕಿ, ನಮಗೆ ಪೂರೈಸಿದ ತುಮಕೂರಿನ ಶ್ರೀ ಎಂ. ಚಂದ್ರಪ್ಪ ಅವರಿಗೂ, ಬೆಂಗಳೂರಿನ ಶ್ರೀ ಎಸ್. ಶಿವಣ್ಣ ಅವರಿಗೂ ನಾವು ಕೃತಜ್ಞರಾಗಿದ್ದೇವೆ.

*

# ಪ್ರಸ್ತಾವನೆ

ಸ್ಥಾವರ (=ಜಡ)ವಾಗಿದ್ದ ಕನ್ನಡ ನಾಡಿನ ಸಾಹಿತ್ಯ ಹಾಗೂ ಸಮಾಜಗಳನ್ನು ಜಂಗಮ (=ಚಲನಶೀಲ)ಗೊಳಿಸಿದವರು ಹನ್ನೆರಡನೆಯ ಶತಮಾನದ ಶಿವಶರಣರು. ವೀರಶೈವ ಆಂದೋಲನದ ಈ ಪುಣ್ಯಕಾರ್ಯದಲ್ಲಿ ನಾಡಿನ ನಾನಾ ಮೂಲೆಗಳಿಂದಲೂ ಹೊರನಾಡುಗಳಿಂದಲೂ ಅಸಂಖ್ಯಾತ ಶಿವಶರಣರು ಬಂದು ಪಾಲುಗೊಂಡರು. ಇದರಿಂದ ಕಲ್ಯಾಣದಲ್ಲಿ ಕಟ್ಟಿದ ವೀರಶೈವ ಸಂಘಟನೆ, ಕರ್ನಾಟಕದ ವ್ಯಾಪ್ತಿಯನ್ನೂ ಮೀರಿ ಬೆಳೆಯಿತು. 'ಸಕಲರಿಗೆ ಲೇಸನೆ ಬಯಸುವ' ಈ 'ಮಾನವೀಯ ಮೌಲ್ಯಗಳ ಪುನರುತ್ಥಾನ ಕಾರ್ಯ'ದ ಪರಿಣಾಮವಾಗಿ ಸಮಾನತೆ, ಸಹೋದರತ್ವ, ಸ್ವಾತಂತ್ರ್ಯಗಳಿಂದ ಕೂಡಿದ 'ಮುಕ್ತಸಮಾಜ'ದ ನಿರ್ಮಾಣ, ಜನಪರ ಸಾಹಿತ್ಯಸೃಷ್ಟಿ ಕಾರ್ಯಗಳು ಸಾಕಾರಗೊಳ್ಳಲು ಸಾಧ್ಯವಾಯಿತು. ಇದಕ್ಕಾಗಿ ಶರಣರು ಸಮಾಜದ ಘಟಕವಾದ ವ್ಯಕ್ತಿಯ ವಿಚಾರ (ಅಂತರಂಗ) ಶುದ್ಧಿ, ಆಚಾರ (ಬಹಿರಂಗ) ಶುದ್ಧಿಗಳಿಗೆ ವಿಶೇಷ ಗಮನ ಹರಿಸಿದರು. ಇವುಗಳ ಸಾಮರಸ್ಯವನ್ನೇ ಲಿಂಗಾಂಗ ಸಾಮರಸ್ಯವೆಂದು ಕರೆದು, ಇಂಥ ಬದುಕನ್ನು ಬಾಳಿದರು. ಈ ಸಾಧನೆಗಾಗಿ ವ್ಯಕ್ತಿಗಳು ಅಷ್ಟಾವರಣ, ಪಂಚಾಚಾರಗಳನ್ನು ಅಳವಡಿಸಿಕೊಂಡು ಷಟ್‌ಸ್ಥಲಮಾರ್ಗದಲ್ಲಿ ಮುನ್ನಡೆದರು.

ಶಿವಶರಣರು ತಮ್ಮ ಈ ಪವಿತ್ರ ಧ್ಯೇಯ–ಧೋರಣೆಗಳ ಅಭಿವ್ಯಕ್ತಿಗಾಗಿ ವಚನ ಸಾಹಿತ್ಯವನ್ನು ಮಾಧ್ಯಮವನ್ನಾಗಿ ರೂಪಿಸಿಕೊಂಡರು. ಆದುದರಿಂದ ವಚನಗಳಲ್ಲಿ ಶಿವಶರಣರ ಆತ್ಮನಿರೀಕ್ಷಣೆ, ಸಮಾಜ ವಿಡಂಬನೆ, ನೀತಿಬೋಧನೆ, ತತ್ವಪ್ರತಿಪಾದನೆ ಮೊದಲಾದ ವಿಚಾರಗಳು ನಿಕ್ಷಿಪ್ತವಾದವು. ಎಂಟುನೂರು ವರ್ಷಗಳ ಹಿಂದೆ ಬಿಚ್ಚಿಕೊಂಡು, ಬೆಳೆದುಬಂದ ಈ ವಚನಸಾಹಿತ್ಯದ ಸಂಗ್ರಹ, ಪ್ರಕಟನೆ ಕನ್ನಡಿಗರ ಪರಮ ಕರ್ತವ್ಯವಾಗಿದೆ. ಈ ಕರ್ತವ್ಯ ಪ್ರಜ್ಞೆಯ ಹಿನ್ನೆಲೆಯಲ್ಲಿ ರೂಪಗೊಂಡ ಪ್ರಸ್ತುತ ಕೃತಿ, ಕರ್ನಾಟಕ ಸರಕಾರದ ಅನುದಾನದಿಂದ ಅಸ್ತಿತ್ವಕ್ಕೆ ಬಂದಿರುವ 'ಸಮಗ್ರ ವಚನ ಸಾಹಿತ್ಯದ ಜನಪ್ರಿಯ ಆವೃತ್ತಿ ಪ್ರಕಟನ ಯೋಜನೆ'ಯಲ್ಲಿ ಒಂಬತ್ತನೆಯ ಸಂಪುಟವಾಗಿದೆ. ಇದರಲ್ಲಿ ಅವರ್ಗೀಯ ಅಕ್ಷರಗಳಿಂದ ಪ್ರಾರಂಭವಾಗುವ ಹೆಸರಿನ ವಚನಕಾರರು ಹಾಗೂ ಅಜ್ಞಾತ ವಚನಕಾರರನ್ನು, ಇವರ ವಚನಗಳನ್ನು ಅಳವಡಿಸಲಾಗಿದ್ದು, ಆ ವಿವರ ಹೀಗಿದೆ ;

| | | |
|---|---|---|
| ೧. | ರಕ್ಕಸಬೊಮ್ಮಿತಂದೆ | ೮ |
| ೨. | ರಾಯಸದ ಮಂಚಣ್ಣ | ೧೦ |
| ೩. | ರೇಚದ ಬಂಕಣ್ಣ | ೧ |
| ೪. | ಲದ್ದೆಯ ಸೋಮಯ್ಯ | ೧ |
| ೫. | ವಚನ ಭಂಡಾರಿ ಶಾಂತರಸ | ೬೫ |
| ೬. | ವರದ ಸಂಕಣ್ಣ | ೧ |

| | | |
|---|---|---|
| ೭. | ವೀರಗೊಲ್ಲಾಳ | ೧೦ |
| ೮. | ವೀರಶಂಕರದಾಸಯ್ಯ | ೧ |
| ೯. | ವೇದಮೂರ್ತಿ ಸಂಗಣ್ಣ | ೧೦ |
| ೧೦. | ವೈದ್ಯಸಂಗಣ್ಣ | ೨೦ |
| ೧೧. | ಶಂಕರದಾಸಿಮಯ್ಯ | ೫ |
| ೧೨. | ಶಿವನಾಗಮಯ್ಯ | ೩ |
| ೧೩. | ಶಿವಲೆಂಕ ಮಂಚಣ್ಣ | ೧೩೨ |
| ೧೪. | ಸಂಗಮೇಶ್ವರದ ಅಪ್ಪಣ್ಣ | ೧೦೧ |
| ೧೫. | ಸಕಳೇಶ ಮಾದರಸ | ೧೩೫ |
| ೧೬. | ಸಗರದ ಬೊಮ್ಮಣ್ಣ | ೯೨ |
| ೧೭. | ಸತ್ತಿಗೆ ಕಾಯಕದ ಮಾರಯ್ಯ | ೧೦ |
| ೧೮. | ಸಿದ್ಧಾಂತಿ ವೀರಸಂಗಯ್ಯ | ೫ |
| ೧೯. | ಸುಂಕದ ಬಂಕಣ್ಣ | ೧೦೯ |
| ೨೦. | ಸೂಜಿಕಾಯಕದ ರಾಮಿತಂದೆ | ೧೦ |
| ೨೧. | ಸೊಡ್ಡಳ ಬಾಚರಸ | ೧೦೫ |
| ೨೨. | ಹಡಪದ ಅಪ್ಪಣ್ಣ | ೨೪೯ |
| ೨೩. | ಹಡಪದ ರೇಚಣ್ಣ | ೯ |
| ೨೪. | ಹಾವಿನಹಾಳ ಕಲ್ಲಯ್ಯ | ೧೦೬ |
| ೨೫. | ಹುಂಜಿನ ಕಾಳಗದ ದಾಸಯ್ಯ | ೧ |
| ೨೬. | ಹೆಂಡದ ಮಾರಯ್ಯ | ೧೨ |
| ೨೭. | ಹೊಡೆಹುಲ್ಲ ಬಂಕಣ್ಣ | ೧೦ |

ಹೀಗೆ ಇಪ್ಪತ್ತೇಳು ವಚನಕಾರರ ೧೨೧೦ ವಚನಗಳನ್ನಲ್ಲದೆ ಅಜ್ಞಾತ ವಚನಕಾರರ ವಚನಗಳನ್ನೂ ಇಲ್ಲಿ ಅಳವಡಿಸಲಾಗಿದ್ದು, ಆ ವಿವರ, ಅಂದರೆ ಅವರ ಅಂಕಿತಗಳ ವಿವರ ಹೀಗಿದೆ :

| | | |
|---|---|---|
| ೧. | ಅಖಂಡ ಮಂಡಲೇಶ್ವರ | ೧ |
| ೨. | ಅನುಗಲೇಶ್ವರ | ೧ |
| ೩. | ಅಪ್ರಮಾಣ ಗುಹೇಶ್ವರ | ೧ |
| ೪. | ಅಶ್ವಥರಾಮ | ೧ |
| ೫. | ಆನಂದ ಸಿದ್ಧೇಶ್ವರ | ೨ |

| | | |
|---|---|---|
| ೬. | ಈಶ್ವರೀಯ ವರದ ಚೆನ್ನರಾಮ | ೧ |
| ೭. | ಏಕಾಂತವೀರ ಸೊಡ್ಡಳ | ೨ |
| ೮. | ಏಕೋರಾಮೇಶ್ವರಲಿಂಗ | ೧ |
| ೯. | ಕಲ್ಲಯ್ಯದೇವರು | ೧ |
| ೧೦. | ಕುರಂಗಲಿಂಗ | ೨ |
| ೧೧. | ಗಾರ್ಗೇಶ್ವರಲಿಂಗ | ೧ |
| ೧೨. | ಗುರುವರದ ವಿರೂಪಾಕ್ಷ | ೧ |
| ೧೩. | ಗುರುವಿಶ್ವೇಶ್ವರಾ | ೧ |
| ೧೪. | ಗೊಹೇಶ್ವರಲಿಂಗದಲ್ಲಿ ಪ್ರಭುವೆ ಸಾಕ್ಷಿಯಾಗಿ ಬಸವಪ್ರಿಯ ಕೂಡಲಸಂಗಮದೇವ | ೬ |
| ೧೫. | ಚೆನ್ನರಾಮೇಶ್ವರಲಿಂಗ | ೧ |
| ೧೬. | ಜಂಗಮಲಿಂಗಪ್ರಭುವೆ | ೧೭ |
| ೧೭. | ಜ್ಯೋತಿಸಿದ್ಧೇಶ್ವರ | ೧ |
| ೧೮. | ತುಂಬೆಯಾಚಲೆಯ ಮನಃಪ್ರಿಯ ಚೆನ್ನಬಂಕೇಶ್ವರ | ೧ |
| ೧೯. | ತ್ರೈಲೋಚನ ಮನೋಹರ ಮಾಣಿಕೇಶ್ವರಲಿಂಗ | ೭ |
| ೨೦. | ತ್ರಿಲೋಚನ ಶಂಕರ | ೧ |
| ೨೧. | ದೇವಧ್ವಜ ಮೃತ್ಯುಂಜಯನ ಭಾವದೊಲ್ಲಭ ಮುದ್ದನೂರೇಶ | ೪ |
| ೨೨. | ನಂಜುಂಡ ಶಿವ | ೨೪ |
| ೨೩. | ನಾಚೇಶ್ವರ | ೧ |
| ೨೪. | ನಿಃಕಳಂಕ ಚೆನ್ನಮಲ್ಲಿಕಾರ್ಜುನ ಪ್ರಭುವೆ | ೧ |
| ೨೫. | ನಿಃಕಳಂಕ ಚೆನ್ನಸೋಮೇಶ್ವರ | ೧ |
| ೨೬. | ನಿಜಗುರು ನಿರಾಲಂಬ ಪ್ರಭುವೆ | ೪೧ |
| ೨೭. | ನಿಜಗುರು ಶಾಂತಮಲ್ಲಿಕಾರ್ಜುನ | ೩ |
| ೨೮. | ನಿಜಮುಕ್ತಿರಾಮೇಶ್ವರ | ೧ |
| ೨೯. | ನಿರ್ಧನಪ್ರಿಯ ರಾಮೇಶ್ವರ | ೧ |
| ೩೦. | ನಿರಾಲಯ ನಿಜಗುರುಶಾಂತೇಶ್ವರ | ೧ |
| ೩೧. | ನಿರಾಳಪ್ರಿಯ ಸೊಡ್ಡಳಯ್ಯ | ೧ |
| ೩೨. | ಬಸವಣ್ಣಪ್ರಿಯ ಧರ್ಮೇಶ್ವರ | ೧ |

| | | |
|---|---|---|
| ೩೩. | ಭೀಮಬಂಕೇಶ್ವರ | ೧ |
| ೩೪. | ಮರ್ಕಟೇಶ್ವರ | ೧ |
| ೩೫. | ಮಹಾಘನ ಪ್ರಸಿದ್ಧ ಪ್ರಸನ್ನ ಸಂಗಮೇಶ್ವರಲಿಂಗ | ೧ |
| ೩೬. | ಮಹಾಲಿಂಗ ವೀರರಾಮೇಶ್ವರ | ೧ |
| ೩೭. | ಮಹಾಲಿಂಗ ಶಶಿಮೌಳಿ ಸದಾಶಿವ | ೯ |
| ೩೮. | ವರದ ಸೋಮನಾಥ | ೧ |
| ೩೯. | ವಿಶ್ವಪತಿ ವಿಶ್ವನಾಥ | ೧ |
| ೪೦. | ವೈನಿಪುರದ ಸಂಗಮೇಶ್ವರ | ೧ |
| ೪೧. | ವೈದ್ಯನಾಥೇಶ್ವರ | ೧ |
| ೪೨. | ಶಂಭು ಮಾರೇಶ್ವರ | ೧ |
| ೪೩. | ಶಾಂತವೀರೇಶ್ವರ | ೯೦ |
| ೪೪. | ಶ್ರೀಗುರು ಪ್ರಭುನ್ಮುನೀಶ್ವರ | ೨ |
| ೪೫. | ಶ್ರೀಬಸವಲಿಂಗ | ೨ |
| ೪೬. | ಶ್ರೀಮುಕ್ತಿರಾಮೇಶ್ವರ | ೧ |
| ೪೭. | ಸತ್ಯ ಕರಂಡಮೂರ್ತಿ ಸದಾಶಿವಲಿಂಗ | ೧ |
| ೪೮. | ಸದ್ಗುರು ಚೆನ್ನಮಲ್ಲಿಕಾರ್ಜುನ | ೨ |
| ೪೯. | ಸದ್ಗುರು ಶಂಭು ಸೋಮೇಶ್ವರ | ೧ |
| ೫೦. | ಸದ್ಗುರುಪ್ರಿಯ ಶಿವಸಿದ್ಧರಾಮೇಶ್ವರ | ೧ |
| ೫೧. | ಸರ್ವೇಶ್ವರಲಿಂಗ | ೧ |
| ೫೨. | ಸಿದ್ಧಲಿಂಗಪ್ರಿಯ ಬಸವಪ್ರಭುವೆ | ೧ |
| ೫೩. | ಸೋಮಭೀಮೇಶ್ವರಲಿಂಗ | ೧ |
| ೫೪. | ಹಾಟಕೇಶ್ವರಲಿಂಗ | ೧ |

ಹೀಗೆ ೫೪ ಜನ ಅಜ್ಞಾತ ವಚನಕಾರರ ಒಟ್ಟು ೨೫೦ ವಚನಗಳು ದೊರಕುತ್ತವೆ. ಒಟ್ಟಿನಲ್ಲಿ ಈ ವಚನ ಸಂಪುಟ ೧೪೬೫ (ಅವರ್ಗೀಯ ಅಕ್ಷರಗಳಿಂದ ಆರಂಭವಾಗುವ ಹೆಸರಿನ ೨೭ ಜನ ವಚನಕಾರರ ೧೨೧೫ + ೫೪ ಜನ ಅಜ್ಞಾತ ವಚನಕಾರರ ೨೫೦) ವಚನಗಳನ್ನು ಒಳಗೊಂಡಿರುತ್ತದೆ. ಈ ಸಂಪುಟದ ವಚನಕಾರರ ಚರಿತ್ರೆ, ವಚನಗಳಲ್ಲಿ ನಿರೂಪಿತವಾದ ವಿಷಯ ಹಾಗೂ ಸಾಹಿತ್ಯಿಕ ಸಂಗತಿಗಳನ್ನು ಈಗ ವಿವರಿಸಬಹುದು.

''ರಕ್ಕಸನೊಡೆಯ ಕೊಟ್ಟುವದ ಬೇಡ'' ಅಂಕಿತದಲ್ಲಿ ವಚನ ರಚಿಸಿದ ರಕ್ಕಸ ಬೊಮ್ಮಿ ತಂದೆಯನ್ನು ರಕ್ಕಸ ಬ್ರಹ್ಮಯ್ಯನೆಂದೂ ಕರೆಯುತ್ತಾರೆ. ಗುರುಲಿಂಗಜಂಗಮ ಸೇವೆ,

ಪಾದೋದಕ ಪ್ರಸಾದ ಸೇವನೆಗಳು ಈತನ ನಿತ್ಯನೇಮವಾಗಿದ್ದವು. ಹೀಗಾಗಿ ಭಕ್ತಿ ಪಥದಲ್ಲಿ ನಡೆಯುವವನಿಗೆ ಗುರುಲಿಂಗಜಂಗಮದ ಆರಾಧನೆ ತೀರ ಅವಶ್ಯವೆಂದು ಹೇಳುತ್ತ, ಇವುಗಳಿಗಾಗಿ ತನುಮನಧನ ಅರ್ಪಿಸಬೇಕೆಂದು ತನ್ನ ವಚನಗಳಲ್ಲಿ ವಿವರಿಸಿದ್ದಾನೆ. ಇದಲ್ಲದೆ ಭಕ್ತಮತ್ತು ಭಕ್ತಿಯ ಸ್ವರೂಪ, ಡಂಭಾಚಾರದ ಖಂಡನೆಗಳೂ ಈತನ ವಚನಗಳಲ್ಲಿವೆ. ವಚನಗಳು ರಚನೆಯಲ್ಲಿ ಸರಳವಾಗಿದ್ದು, ಅನುಭಾವದಿಂದ ಕೂಡಿದವುಗಳಾಗಿವೆ. ಭೈರವೇಶ್ವರಕಾವ್ಯದ ಕಥಾಮಣಿಸೂತ್ರ ರತ್ನಾಕರ ಹಾಗೂ ಸೋಮೇಶ್ವರ ಪುರಾಣಗಳು ಈತನನ್ನು ಉಲ್ಲೇಖಿಸುತ್ತವೆ.

ಪತ್ರಗಳನ್ನು ಮುಟ್ಟಿಸುವ ನಿಯೋಗಿಯಾಗಿದ್ದ ರಾಯಸದ ಮಂಚಣ್ಣನ ವಚನ ಗಳು 'ಜಾಂಬೇಶ್ವರ' ಅಂಕಿತದಲ್ಲಿರುತ್ತವೆ. ಗುರು ಕರುಣಿಸಿದ ಇಷ್ಟಲಿಂಗದ ಅರ್ಚನೆಯನ್ನು ಮರೆಯಬಾರದು. ಮನ ವಿಕಾರವಾಗುವ ಮೊದಲು ಮಹದಲ್ಲಿ ನಿಂತರೆ, ಇಂದ್ರಿಯಂಗಳು ಏನೂ ಮಾಡಲಾರವು. ಅರಿವನ್ನು ಅರಿತು ಆಚರಿಸಬೇಕು. ಅರಿವು ಮರೆತರೆ ತಪ್ಪದೆ ಭವ ಮರುಕಳಿಸುತ್ತದೆ. ಕಾರಣ, ಅಂಗದಲ್ಲಿರುವ ಲಿಂಗಯ್ಯನನ್ನು ಅರಿಯಬೇಕು. ಹೆಣ್ಣು ಹೊನ್ನು ಮಣ್ಣೆಂಬ ಬಲೆಗೆ ಸಿಲುಕಿ ಒದ್ದಾಡಬಾರದೆಂಬ ವಿವರಗಳು ರಾಯಸದ ಮಂಚಣ್ಣನ ವಚನಗಳಲ್ಲಿರುತ್ತವೆ. ಈತನ ವಚನಗಳು ಸರಳವಾಗಿದ್ದು, ಇಲ್ಲಿ ಬಳಸಲಾದ ಉಪಮೆಗಳು ಅರ್ಥಪೂರ್ಣವೆನಿಸಿವೆ.

ರೇಚದ ಬಂಕಣ್ಣ 'ಬಸವಪ್ರಿಯ ಮಹಾಪ್ರಭುವೆ' ಅಂಕಿತದಲ್ಲಿ ವಚನ ಬರೆದಿದ್ದಾನೆ. ಈತನ ಚರಿತ್ರೆಯ ವಿವರಗಳು ಅಷ್ಟಾಗಿ ತಿಳಿದುಬರುವುದಿಲ್ಲ. ಮನವೇ ಮರ್ಕಟ, ಅರಿವೇ ಪಿಪೀಲಿಕ, ಮಹಾಜ್ಞಾನವೇ ವಿಹಂಗ, ನಿತ್ಯ ಎಚ್ಚರವೇ ಕುಕ್ಕುಟ, ತನ್ನ ತಾನರಿವುದೇ ಶ್ವಾನ, ತನ್ನ ಬುದ್ಧಿಯೇ ಗಜ–ಇವುಗಳನ್ನು ಅರಿತವನೇ ಬ್ರಹ್ಮಜ್ಞಾನಿ. ಆತ್ಮ ಪರಮಾತ್ಮನ ಒಂದಂಶ. ಹೀಗಾಗಿ ಆತ್ಮಜ್ಞಾನ, ಪರಮಾತ್ಮನನ್ನು ಅರಿಯುವ ಒಂದು ಸಾಧನವಾಗಿದೆಯೆಂಬ ವಿಚಾರಗಳು ಈತನ ವಚನಗಳಲ್ಲಿರುತ್ತವೆ.

ಲದ್ದೆಯ ಸೋಮಣ್ಣ 'ಲದ್ದೆಯ ಸೋಮ' ಅಂಕಿತದಲ್ಲಿ ವಚನ ರಚಿಸಿದ್ದಾನೆ. ಚೆನ್ನಬಸವಪುರಾಣ ಹಾಗೂ ಮಹಲಿಂಗಲೀಲೆಗಳಲ್ಲಿ ಈ ವಚನಕಾರನ ಉಲ್ಲೇಖವಿದೆ. ಬನವಾಸಿಯ ಮಧುಕೇಶ್ವರ ದೇವಾಲಯದ ಶಿವೋತ್ಸವ ಮಂಟಪದ ಗಗ್ಗರಿಕಲ್ಲಿನಲ್ಲಿ ಲದ್ದೆಯ ಸೋಮಣ್ಣನ ವಿಗ್ರಹವಿದೆ. ಕಾಯಕದಿಂದ ಬಂದ ಪ್ರಸಾದವನ್ನು ಗುರುಲಿಂಗ ಜಂಗಮಕ್ಕೆ ಅರ್ಪಿಸಿ, ಸ್ವೀಕರಿಸಬೇಕೆಂದು ಹೇಳುವ ಈತನು ಕಾಯಕ, ದಾಸೋಹ ಮೌಲ್ಯಗಳನ್ನು ತಿಳಿಯಪಡಿಸುತ್ತಾನೆ.

ವಚನಭಂಡಾರಿ ಶಾಂತರಸನು ಕಲ್ಯಾಣದಲ್ಲಿ ಶರಣರ ವಚನಗಳನ್ನು ಬರೆದುಕೊಳ್ಳುವ, ಸಂಗ್ರಹಿಸುವ ಕಾಯಕಮಾಡುತ್ತಿದ್ದ. ವಚನಗಳ ಸಂರಕ್ಷಣೆಯ ಜವಾಬ್ದಾರಿ ಹೊತ್ತಿದ್ದ ಈತನು 'ಅಲೇಖನಾದ ಶೂನ್ಯ ಕಲ್ಲಿನೊಳಗಾದ' ಅಂಕಿತದಲ್ಲಿ ವಚನ ಬರೆದಿದ್ದಾನೆ. ಆಗಾಗ ಪ್ರತಿಮೆಗಳನ್ನು ಬಳಸಿದ್ದರೂ ಅವುಗಳಲ್ಲಿ ಹೊಸತನ ಕಂಡು ಬರುವುದಿಲ್ಲ. ಕೆಲವು ವಚನಗಳಲ್ಲಿ ಖಚಿತತೆಯಿದ್ದರೂ ಇನ್ನು ಕೆಲವು ವಚನಗಳಲ್ಲಿ ಅರ್ಥಕ್ಲಿಷ್ಟತೆ ಎದ್ದುಕಾಣುತ್ತದೆ. ಇಲ್ಲಿಯ ಬೆಡಗಿನ ವಚನಗಳಲ್ಲಿ ಅಲ್ಲಮಪ್ರಭುವಿನ

ವಚನಗಳ ಪ್ರಭಾವವನ್ನು ಗುರುತಿಸಬಹುದಾಗಿದೆ. ತತ್ವನಿರೂಪಣೆ, ಕಲ್ಯಾಣದ ಕೊನೆಯ ವಿವರಗಳು ಈತನ ವಚನಗಳಲ್ಲಿರುತ್ತವೆ.

ವರದ ಸಂಕಣ್ಣನು 'ವರದ ಶಂಕರೇಶ್ವರ' ಅಂಕಿತದಲ್ಲಿ ವಚನ ರಚಿಸಿದ್ದಾನೆ. ಈತನ ಚಾರಿತ್ರಿಕ ವಿವರಗಳು ಅಷ್ಟಾಗಿ ಸಿಗುವುದಿಲ್ಲ. ಸದ್ಭಕ್ತರು ಶರಣರ ಸಂಗದಲ್ಲಿರಬೇಕೇ ಹೊರತು ಭವಿಗಳ ಸಂಗದಲ್ಲಿರಬಾರದೆಂಬ ನಿಲುವು ಈತನದಾಗಿದೆ.

ಶಿವಭಕ್ತ ವೀರಗೊಲ್ಲಾಳನ ವಿಷಯ ಲಿಂಗಾರ್ಚನ ರಗಳೆ, ತೆಲುಗು ಬಸವ ಪುರಾಣ, ಶಿವತತ್ವಚಿಂತಾಮಣಿ, ಭೈರವೇಶ್ವರಕಾವ್ಯದ ಕಥಾಮಣಿಸೂತ್ರ ರತ್ನಾಕರ, ಗೊಲ್ಲಾಳೇಶ್ವರ ಪುರಾಣ ಹಾಗೂ ಶಿವಲಿಂಗಕವಿಯ ಹಾಡುಗಳಲ್ಲಿ ಕಂಡುಬರುತ್ತದೆ. ವಿಜಾಪುರ ಜಿಲ್ಲೆಯ ಸಿಂದಗಿ ತಾಲೂಕಿನ ಗೋಲಗೇರಿ ಗ್ರಾಮದ ಶಿವಭಕ್ತ ಗೊಲ್ಲಾಳನ ಹೆಸರಿನಲ್ಲಿ ದೇವಾಲಯವಿದ್ದು, ಪ್ರತಿವರ್ಷ ಜಾತ್ರೆ ಜರುಗುತ್ತದೆ. ವೀರಗೊಲ್ಲಾಳನ ಮೂಲ ಹೆಸರು, ಕಾಟಕೋಟ. ಕುರಿಕಾಯುವ ಕಾಯಕ ಮಾಡುತ್ತಿದ್ದ. ಈತ ಕುರಿಯ ಹಿಕ್ಕೆಯನ್ನೇ ಲಿಂಗವೆಂದು ಪೂಜಿಸಿದ ಶರಣ. ಗೋಲಗೇರಿಯ ಈ ಗೊಲ್ಲಾಳನ ವಚನಗಳು 'ವೀರಬೀರೇಶ್ವರಲಿಂಗ' ಅಂಕಿತದಲ್ಲಿರುತ್ತವೆ. ವಚನಗಳಲ್ಲಿ ಆಡು, ಕುರಿ, ಹೋತಗಳ ಉಲ್ಲೇಖವಿರುವುದರಿಂದ ಈತ ಕುರುಬನಾಗಿದ್ದನೆಂದು ಸ್ಪಷ್ಟವಾಗುತ್ತದೆ. ವೀರಗೊಲ್ಲಾಳನ ವಚನಗಳು ಹೆಚ್ಚಾಗಿ ಬೆಡಗಿನಿಂದ ಕೂಡಿದ್ದು, ಚಿಂತನಪರವಾಗಿವೆ.

ವೀರಶಂಕರ ದಾಸಯ್ಯನು 'ಘನಗುರು ಶಿವಲಿಂಗ ರಾಮನಾಥ' ಅಂಕಿತದಲ್ಲಿ ವಚನ ರಚಿಸಿದ್ದಾನೆ. ಈತನ ವಿಷಯವನ್ನು ಸೋಮೇಶ್ವರಪುರಾಣ, ಶಿವತತ್ವ ಚಿಂತಾಮಣಿ, ಗುರುರಾಜಚಾರಿತ್ರ, ವೀರಶೈವಾಮೃತ ಮಹಾಪುರಾಣ, ಬಸವೇಶ್ವರ ಪುರಾಣದ ಕಥಾ ಸಾಗರ, ಭೈರವೇಶ್ವರಕಾವ್ಯದ ಕಥಾಮಣಿಸೂತ್ರ ರತ್ನಾಕರ ಮೊದಲಾದ ಕೃತಿಗಳು ವಿವರಿಸುತ್ತವೆ. ವೀರಶೈವಾಚಾರಮಾರ್ಗಿಯಾಗಿದ್ದ ವೀರಶಂಕರದಾಸಯ್ಯ ಭವಿಯನ್ನು ಮುಟ್ಟಬಾರದೆಂಬ ವೀರವ್ರತಧಾರಿಯಾಗಿದ್ದ. ಒಂದುವೇಳೆ ಮುಟ್ಟಿದರೆ ತನ್ನ ದೇಹವನ್ನು ಅಗ್ನಿಗೆ ಅರ್ಪಿಸುವ ಪ್ರತಿಜ್ಞೆಯೂ ಅವನದಾಗಿದ್ದಿತು. ವೀರಶಂಕರ ದಾಸಯ್ಯನು ವೀರಭಕ್ತಿಯ ಮೂಲಕ ಶಿವದರ್ಶನ ಪಡೆದುಕೊಂಡಿದ್ದ. ಸುದೀರ್ಘವಾದ ಈತನ ವಚನದಲ್ಲಿ ಉತ್ತಮಕುಲ (ಬ್ರಾಹ್ಮಣ)ದವರನ್ನು ಸೋದಾಹರಣೆಗಳೊಂದಿಗೆ ಕಟುವಾಗಿ ವಿಡಂಬಿಸಿದ್ದಾನೆ. ವ್ಯಕ್ತಿಗೆ ವರ್ಣಸೂತಕವಿಲ್ಲವೆಂದು ಹೇಳುತ್ತ, ಯಜ್ಞ ಯಾಗಾದಿಗಳ ಶುಷ್ಕ ಆಚರಣೆಯನ್ನು ತೀವ್ರವಾಗಿ ಖಂಡಿಸಿದ್ದಾನೆ.

ವೇದಮೂರ್ತಿ ಸಂಗಣ್ಣನ ವಚನಗಳು 'ಲಲಾಮಭೀಮ ಸಂಗಮೇಶ್ವರಲಿಂಗ' ಅಂಕಿತದಲ್ಲಿರುತ್ತವೆ. ಈತನು ವೀರಶೈವಧರ್ಮವನ್ನು ತರ್ಕಬದ್ಧವಾಗಿ ಪ್ರತಿಪಾದಿಸಿದ್ದಾನೆ. ಅಗಾಧವಾದ ಸಂಸ್ಕೃತಪಾಂಡಿತ್ಯ ಪಡೆದಿದ್ದ ವೇದಮೂರ್ತಿ ಸಂಗಣ್ಣನ ವಚನಗಳಲ್ಲಿ ಸಂಸ್ಕೃತ ಪ್ರಾಚುರ್ಯತೆ ಅಧಿಕವಾಗಿರುತ್ತದೆ. ಶಾಸ್ತ್ರಗದ್ಯಕ್ಕೆ ಸಮೀಪವಾದ ಈತನ ವಚನಗಳು ಜ್ಞಾನಸಾಧನೆಯ ವಿವರಗಳನ್ನು ನೀಡುತ್ತವೆ. ವೇದವಿದ ಯಾರೆಂಬುದನ್ನು ವಿವರವಾಗಿ ತಿಳಿಸುವ ಈ ವಚನಗಳಲ್ಲಿ ಯಜ್ಞ- ಯಾಗಾದಿ ಆಚರಣೆಗಳನ್ನು ಉಗ್ರವಾಗಿ

ಟೀಕಿಸಲಾಗಿದೆ. ಹೀಗೆ ಈತನು ವೇದದ ಕರ್ಮಕಾಂಡ ಹಾಗೂ ಕರ್ಮಕಾಂಡಿಗಳನ್ನು ನೇರವಾಗಿ ಖಂಡಿಸಿ, ಸಹಜಸತ್ಯವನ್ನು ಎತ್ತಿಹಿಡಿದಿದ್ದಾನೆ.

ವೈದ್ಯಕೀಯ ವೃತ್ತಿ ಮಾಡುತ್ತಿದ್ದ ವೈದ್ಯ ಸಂಗಣ್ಣ, ವೈದ್ಯಶಾಸ್ತ್ರ ಹಾಗೂ ಶರೀರ ಶಾಸ್ತ್ರಗಳನ್ನು ಚೆನ್ನಾಗಿ ತಿಳಿದುಕೊಂಡವನಾಗಿದ್ದ. ಈತನ ವಚನಗಳು 'ಮರುಳಶಂಕರ ಪ್ರಿಯ ಸಿದ್ಧರಾಮೇಶ್ವರ' ಅಂಕಿತದಲ್ಲಿರುತ್ತವೆ. ಭೈರವೇಶ್ವರಕಾವ್ಯದ ಕಥಾಮಣಿಸೂತ್ರ ರತ್ನಾಕರ ಹಾಗೂ ಗುರುರಾಜಚಾರಿತ್ರಗಳಲ್ಲಿ ಈ ವಚನಕಾರನ ಉಲ್ಲೇಖವಿರುತ್ತದೆ. ವ್ಯಕ್ತಿಯ ಬಹಿರಂಗ ಚಿಕಿತ್ಸೆಯೊಂದಿಗೆ ಅಂತರಂಗದ ಚಿಕಿತ್ಸೆಯೂ ನಡೆಯುವುದು ತೀರ ಅವಶ್ಯ. ಇದರಿಂದ ಆತನ ಆಚಾರ–ವಿಚಾರಗಳು ಪರಿಶುದ್ಧಗೊಳ್ಳುತ್ತವೆ. ತನ್ನ ಪರಿಶುದ್ಧ ಕಾಯಕದಿಂದ ಮೈಮನಗಳ ಮಲಿನವನ್ನು ಹಸನುಗೊಳಿಸಿದವನು ಕಾಯಕಜೀವಿ ವೈದ್ಯ ಸಂಗಣ್ಣ. ಈತನ ವಚನಗಳಲ್ಲಿ ಬರುವ ವೈದ್ಯಕೀಯ ಪರಿಭಾಷೆ, ಆ ಕಾಲದ ವೈದ್ಯಕೀಯ ವೃತ್ತಿಯ ಮೇಲೆ ಬೆಳಕು ಬೀರುತ್ತದೆ. ಇಂಥ ಸಾಂಸ್ಕೃತಿಕ ಮಹತ್ವವನ್ನು ಹೊಂದಿದ ವಚನಗಳಲ್ಲಿ ಶಿವಯೋಗ, ಷಟ್‌ಸ್ಥಲಗಳ ವಿವರಣೆಯೂ ಇರುವುದನ್ನು ಮರೆಯ ಬಾರದು. ಕಕ್ಕಯ್ಯ, ಚೆನ್ನಯ್ಯ, ಹರಳಯ್ಯ, ಕೆಂಬಾವಿ ಭೋಗಣ್ಣ ಹಾಗೂ ಶಿವನಾಗಮಯ್ಯರ ಸ್ತುತಿಯೂ ಇಲ್ಲಿದೆ.

ಶಂಕರದಾಸಿಮಯ್ಯನ ಚಾರಿತ್ರಿಕ ವಿವರಗಳು ಶಂಕರದಾಸಿಮಯ್ಯನ ರಗಳೆ, ಶಂಕರ ದಾಸಿಮಯ್ಯನ ಪುರಾಣ, ತೆಲುಗು ಬಸವಪುರಾಣ, ಕನ್ನಡ ಬಸವಪುರಾಣ, ಚೆನ್ನಬಸವ ಪುರಾಣ, ಪಾಲ್ಕುರಿಕೆ ಸೋಮೇಶ್ವರ ಪುರಾಣ, ಭೈರವೇಶ್ವರಕಾವ್ಯದ ಕಥಾಮಣಿಸೂತ್ರ ರತ್ನಾಕರಗಳಲ್ಲಿ ದಾಖಲಾಗಿರುತ್ತವೆ. ಈ ವಚನಕಾರ ವಿಜಾಪುರ ಜಿಲ್ಲೆಯ ಹುನಗುಂದ ತಾಲೂಕಿನ ಕಂದಗಲ್ಲು (ಸ್ಕಂದಶಿಲೆ) ಗ್ರಾಮದವ. ನವಿಲೆಯ ಜಡೆಯಶಂಕರಲಿಂಗ ಈತನ ಆರಾಧ್ಯದೈವ. ಶಿವದಾಸಿ ಹೆಂಡತಿ. ಶಿವನಿಂದ ಹಣೆಗಣ್ಣು ಪಡೆದ ಸಂಗತಿ, ಕಲ್ಯಾಣದಲ್ಲಿ ವಿಷ್ಣುವಿಗ್ರಹ ದಹಿಸಿದ ಘಟನೆ, ಮುದನೂರಿನಲ್ಲಿ ಜೇಡರ ದಾಸಿಮಯ್ಯನ ಅಹಂಕಾರವನ್ನು ನಿರಸನಗೊಳಿಸಿದ ಪ್ರಸಂಗಗಳು ಈತನ ಚರಿತ್ರೆಯಲ್ಲಿ ಬರುತ್ತವೆ. ಶಂಕರದಾಸಿಮಯ್ಯನು ತನ್ನ ವಚನಗಳಲ್ಲಿ ಬಸವಣ್ಣ, ಚೆನ್ನಬಸವಣ್ಣ, ಮರುಳಶಂಕರ ದೇವ, ಪ್ರಭುದೇವರನ್ನು ಸ್ತುತಿಸಿದ್ದಾನೆ. ಈತನ ವಚನಗಳು ಸರಳತೆ ಹಾಗೂ ಸ್ಪಷ್ಟತೆಗಳಿಂದ ಕೂಡಿದ್ದು 'ವಚನಶಿಲ್ಪ' ದೃಷ್ಟಿಯಿಂದ ಮಹತ್ವದವುಗಳಾಗಿರುತ್ತವೆ. ಈ ವಚನಗಳ ವಿಷಯಸಂಗ್ರಹಗುಣ ಮತ್ತು ಅಭಿವ್ಯಕ್ತಿಕೌಶಲ್ಯ ಅತ್ಯಂತ ಗಮನಾರ್ಹವೆನಿಸಿವೆ.

ಶಿವಾನುಭಾವಿ ಶಿವನಾಗಮಯ್ಯ 'ನಾಗಪ್ರಿಯ ಚೆನ್ನರಾಮೇಶ್ವರ' ಅಂಕಿತದಲ್ಲಿ ವಚನ ಬರೆದಿದ್ದಾನೆ. ಬಸವಣ್ಣನವರು ಶಿವನಾಗಮಯ್ಯನ ಮನೆಯಲ್ಲಿ ಪ್ರಸಾದ ಸ್ವೀಕರಿಸಿದ, ಇದರಿಂದಾಗಿ ಬಿಜ್ಜಳನ ಆಸ್ಥಾನದಲ್ಲಿ ನ್ಯಾಯ ವಿಚಾರಣೆ ಎದುರಿಸಿದ ಮತ್ತು ಶಿವನಾಗಮಯಾನ ಬೆರಳಿನ ತುದಿಯಿಂದ ಹಾಲು ಸುರಿಯುವಂತೆ ಮಾಡಿದಘಟನೆ ಗಳನ್ನು ಬಿಟ್ಟರೆ, ಹೆಚ್ಚಿನ ವಿವರಗಳು ಗೊತ್ತಾಗುವುದಿಲ್ಲ. ಸದಾಚಾರ, ಸಮಯಾಚಾರ, ಲಿಂಗಮಹತ್ವಗಳಿಗೆ ಸಂಬಂಧಿಸಿದ ವಿವರಗಳು ಈತನ ವಚನಗಳಲ್ಲಿರುತ್ತವೆ.

ಹಿರಿಯ ಶಿವಭಕ್ತ ಶಿವಲೆಂಕ ಮಂಚಣ್ಣನು ಪಂಡಿತ ವಂಶದವ. ವಚನಕಾರ ಉರಿ ಲಿಂಗದೇವನ ಗುರುವಾದ ಈತನು ಶಿವಾಧಿಕ್ಯವನ್ನು ಸಾರುತ್ತ, ಪರವಾದಿಗಳನ್ನು ಜಯಿಸುತ್ತ ಹಲವಾರು ಕಡೆ ಸಂಚರಿಸಿದ. ಮಂಚಣ್ಣನ ಮಹಿಮೆ ಹಾಗೂ ಪವಾಡಗಳು ವೀರಶೈವಾಮೃತ ಮಹಾಪುರಾಣ, ಶಿವತತ್ವ ಚಿಂತಾಮಣಿ, ಚೆನ್ನಬಸವಪುರಾಣ, ಸಿಂಗಿರಾಜ ಪುರಾಣ, ಬಸವಪುರಾಣ, ಭೈರವೇಶ್ವರಕಾವ್ಯದ ಕಥಾಮಣಿಸೂತ್ರ ರತ್ನಾಕರ ಮೊದಲಾದ ಕೃತಿಗಳಲ್ಲಿ ಕಂಡುಬರುತ್ತವೆ. ಶಿವಲೆಂಕ ಮಂಚಣ್ಣನ ವಚನಗಳು 'ಈಶಾನ್ಯಮೂರ್ತಿ ಮಲ್ಲಿಕಾರ್ಜುನಲಿಂಗ' ಅಂಕಿತದಲ್ಲಿರುತ್ತವೆ. ವಚನಗಳಲ್ಲಿ ಶಿವಶರಣರ ರೀತಿ–ನೀತಿ, ಅಷ್ಟಾವರಣ, ಷಟ್‌ಸ್ಥಲಗಳ ನಿರೂಪಣೆಯಿದೆ. ಇಲ್ಲಿಯ ವಚನಗಳು ತತ್ವನಿರೂಪಣೆಯ ಸರಳ ಶೈಲಿ ಹಾಗೂ ಸಾರ್ಥಕ ಉಪಮೆಗಳಿಂದ ಕೂಡಿದವುಗಳಾಗಿವೆ.

ಸಂಗಮೇಶ್ವರದ ಅಪ್ಪಣ್ಣ , ಬಸವಣ್ಣನವರ ಸಮಕಾಲೀನನೆಂಬ ವಿಷಯವನ್ನು ಬಿಟ್ಟರೆ ಮತ್ತೆಯಾವ ಚಾರಿತ್ರಿಕ ಸಂಗತಿಗಳೂ ದೊರೆಯುವುದಿಲ್ಲ. ಈತನು 'ಬಸವಪ್ರಿಯ ಕೂಡಲ ಚೆನ್ನಸಂಗಮದೇವ' ಅಂಕಿತದಲ್ಲಿ ವಚನ ರಚಿಸಿದ್ದಾನೆ. ಸಂಸ್ಕೃತ ಪಂಡಿತನೂ ವೇದ, ಪುರಾಣ, ಆಗಮ, ಉಪನಿಷತ್ತುಗಳನ್ನು ಚೆನ್ನಾಗಿ ಅಧ್ಯಯನಮಾಡಿದವನೂ ಆದ ಇವನ ಶಾಸ್ತ್ರಜ್ಞಾನ, ತರ್ಕಶಕ್ತಿ ಅಗಾಧವಾಗಿವೆ. ಹೆಚ್ಚಿನ ವಚನಗಳು ಗಾತ್ರದಲ್ಲಿ ದೀರ್ಘವಾಗಿದ್ದು, ವೀರಶೈವತತ್ವಗಳನ್ನು ಪ್ರತಿಪಾದಿಸುತ್ತವೆ. ಶಿವಪಾರಮ್ಯ, ಅನ್ಯಮತ ಹಾಗೂ ಬ್ರಾಹ್ಮಣರ ಕರ್ಮಠತನಗಳ ಖಂಡನೆ, ಬಸವಸ್ತುತಿ, ಬಸವಪರಿಸರ, ಅನುಭವಮಂಟಪ, ಶೂನ್ಯಸಿಂಹಾಸನ, ಜಾತಿಸೂತಕ, ಕುಲಸೂತಕ, ಶರಣಸ್ತುತಿ, ಅಷ್ಟಾವರಣ, ಪಂಚಾಚಾರಗಳ ಪ್ರಸ್ತಾಪ–ವಿವೇಚನೆ ಇಲ್ಲಿಯ ವಚನಗಳಲ್ಲಿದೆ. ತನ್ನ ತಾತ್ವಿಕ ವಿವೇಚನೆಗೆ ವೇದಾಗಮಗಳ ಶ್ಲೋಕಗಳನ್ನು ಆಧಾರವಾಗಿಸಿ, ವಚನಗಳಿಗೆ ವಿವರಣರೂಪದ ಟಿಪ್ಪಣಿ ಕೊಡುವುದು ಸಂಗಮೇಶ್ವರ ಅಪ್ಪಣ್ಣನ ವಚನಗಳ ವೈಷ್ಟ್ಯವೆಂದೇ ಹೇಳಬೇಕು.

ಸಕಳೇಶ ಮಾದರಸ ಪರಮ ಶಿವಭಕ್ತ, ಸಂಗೀತಜ್ಞ, ವೀಣಾದಿ ವಾದ್ಯಗಳ ಕಲಾವಿದ. ಶಿವನಿಗೆ ಸಂಗೀತಸೇವೆಯನ್ನು ಅರ್ಪಿಸುತ್ತ, ನಿತ್ಯ ಜಂಗಮಾರ್ಚನೆಯಲ್ಲಿ ನಿರತನಾಗಿರುತ್ತಿದ್ದ ಸಕಳೇಶ ಮಾದರಸನ ಶಿವಭಕ್ತಿ ಅನುಪಮವಾದುದಾಗಿದೆ. ಈತನನ್ನು ಕುರಿತ ವಿವರಗಳು ತೆಲುಗು ಬಸವಪುರಾಣ, ಕನ್ನಡ ಬಸವಪುರಾಣ, ಪದ್ಮರಾಜಪುರಾಣ, ಬಸವರಾಜ ವಿಜಯ, ಶಿವತತ್ವ ಚಿಂತಾಮಣಿ, ಗುರುರಾಜ ಚಾರಿತ್ರ, ರಾಘವಾಂಕ ಚಾರಿತ್ರ, ವೀರಶೈವಾಮೃತ ಮಹಾಪುರಾಣಗಳಲ್ಲಿ ಉಲ್ಲೇಖಗೊಂಡಿರುತ್ತವೆ. ಈತನ ವಚನಗಳಲ್ಲಿ ಹಲವಾರು ಚಾರಿತ್ರಿಕ ಸಂಗತಿಗಳು ನಿರೂಪಿತವಾಗಿರುತ್ತವೆ. ಸಕಳೇಶ ಮಾದರಸನು ಶ್ರೀಶೈಲಕ್ಕೆ ಹೋಗಿ ಶಿವಯೋಗಿ ಮಲ್ಲರಸನ ದರ್ಶನ ಪಡೆದುದೂ ಕಲ್ಯಾಣಕ್ಕೆ ಬಂದು ಬಸವಾದಿ ಪ್ರಮಥರ ಸಂಘಟನೆಯಲ್ಲಿ ಪಾಲ್ಗೊಂಡ ವಿಚಾರಗಳೂ ಗಮನಾರ್ಹವೆನಿಸಿವೆ. ಕೆರೆಯ ಪದ್ಮರಸ, ಕುಮಾರ ಪದ್ಮರಸ ಹಾಗೂ ಪದ್ಮಣಾಂಕರು ಸಕಳೇಶ ಮಾದರಸನ ವಂಶಜರಾಗಿದ್ದಾರೆ. ಈತನ ವಚನಗಳಲ್ಲಿ ಆತ್ಮಶೋಧನೆ, ವಿಡಂಬನೆ, ಪ್ರಸಾದ ಮಹತ್ವ, ನೀತಿಬೋಧೆ, ಆಚಾರ, ಭಕ್ತಿಯ ತೀವ್ರತೆ, ಅಹಂಕಾರ ನಿರಸನ ಮೊದಲಾದ ವಿಷಯಗಳ ಪ್ರತಿಪಾದನೆಯಿದೆ. ಇಲ್ಲಿಯ ತತ್ವನಿರೂಪಣೆ ಅತ್ಯಂತ

ಸರಳವಾದುದಾಗಿದೆ. ಗಾದೆಮಾತು, ಉಪಮೆ, ರೂಪಕ, ದೃಷ್ಟಾಂತಗಳ ಬಳಕೆಯಿಂದ ವಚನಗಳ ಅರ್ಥವ್ಯಾಪ್ತಿ, ಸಾಹಿತ್ಯಮೌಲ್ಯ ಸಂವರ್ಧಿಸಿವೆ.

**ಶಿವಾನುಭಾವಿ ಸಗರದ ಬೊಮ್ಮಣ್ಣ** ಗುಲಬರ್ಗಾ ಜಿಲ್ಲೆಯ ಸಗರ ಗ್ರಾಮದವ. ಶಿವದೇವಿ ಈ ವಚನಕಾರನ ಪತ್ನಿ. ಶಿವನಲ್ಲದೆ ಅನ್ಯದೈವವಿಲ್ಲವೆಂಬ ವೀರನಿಷ್ಠೆಯ ಬೊಮ್ಮಣ್ಣ ಜೈನರೊಡನೆ ಹೋರಾಡಿ ಶಿವಪಾರಮ್ಯವನ್ನು ಮೆರೆಯುತ್ತಾನೆ. 'ಸಗರದ ಬೊಮ್ಮನೊಡೆಯ ತನುಮನ ಸಂಗಮೇಶ್ವರ' ಅಂಕಿತದಲ್ಲಿರುವ ಈತನ ಹೆಚ್ಚಿನ ವಚನಗಳು ಗಾತ್ರದಲ್ಲಿ ಚಿಕ್ಕವಾಗಿರುತ್ತವೆ. ಬೆಡಗಿನಿಂದ ಕೂಡಿದ ಈ ವಚನಗಳಲ್ಲಿ ಕಾವ್ಯಾಂಶ ಅಧಿಕವಾಗಿರುತ್ತದೆ. ಭಕ್ತಿಯ ಮಹತ್ವ, ದೈವಾನುಗ್ರಹ ಹಾಗೂ ಮಾನವ ಜನ್ಮದ ಹಿರಿಮೆಗಳನ್ನು ಸರಳ ಶೈಲಿಯಲ್ಲಿ ನಿರೂಪಿಸಲಾಗಿದೆ.

**ಸತ್ತಿಗೆ ಕಾಯಕದ ಮಾರಯ್ಯ** ಛತ್ರಿ (=ಸತ್ತಿಗೆ) ಹಿಡಿಯುವ ಪ್ರಧಾನ ಕಾಯಕದೊಂದಿಗೆ ಮರ ಕಡಿಯುವ, ಪಂಜು ಹಿಡಿಯುವ ಕಾಯಕಗಳನ್ನೂ ಮಾಡುತ್ತಿದ್ದ. ಸರಳತೆ, ಸ್ಪಷ್ಟತೆ ಹಾಗೂ ಕಥನಶೈಲಿಗಳು ಈತನ ವಚನಗಳ ಪ್ರಮುಖ ಲಕ್ಷಣಗಳಾಗಿವೆ. ಬೆಡಗಿನ ವಚನಗಳಲ್ಲಿಯೂ ಅರ್ಥಸ್ಪಷ್ಟತೆ ಸಹಜವಾಗಿ ಅಭಿವ್ಯಕ್ತಗೊಂಡಿದೆ. ಕಾಯಕದ ಮಹತ್ವವನ್ನು ವಿವರಿಸುವ ಈ ವಚನಕಾರನು ಕಾಯಕದ ಆಚರಣೆಯಲ್ಲಿ ಕಂಡುಬರುವ ವರ್ತಕಬುದ್ಧಿಯನ್ನು ಕಟುವಾಗಿ ಖಂಡಿಸಿದ್ದಾನೆ.

**ಸಿದ್ಧಾಂತಿ ವೀರಸಂಗಯ್ಯ** ವೀರನಿಷ್ಠೆಯ ಶಿವಭಕ್ತ. ಗುರುರಾಜಚಾರಿತ್ರ, ಪ್ರೌಢದೇವರಾಯನ ಕಾವ್ಯ, ಚೆನ್ನಬಸವ ಪುರಾಣ, ಭೈರವೇಶ್ವರ ಕಾವ್ಯ, ಚತುರಾಚಾರ್ಯ ಪುರಾಣ ಕಥಾಸಾಗರ, ಸೋಮೇಶ್ವರ ಪುರಾಣ ಹಾಗೂ ಭೈರವೇಶ್ವರಕಾವ್ಯದ ಕಥಾಮಣಿ ಸೂತ್ರ ರತ್ನಾಕರ ಕೃತಿಗಳಲ್ಲಿ ಈ ವಚನಕಾರನ ಜೀವನಚರಿತ್ರೆಗೆ ಸಂಬಂಧಿಸಿದ ವೀರನಿಷ್ಠೆಯ ಕೆಲವು ವಿವರಗಳು ಉಲ್ಲೇಖಗೊಂಡಿರುತ್ತವೆ. ಸಿದ್ಧಾಂತಿ ವೀರಸಂಗಯ್ಯನು ರಚಿಸಿದ ವಚನಗಳು 'ಗೋಳಕಾಕಾರ ವಿಶ್ವವಿರಹಿತ ಲಿಂಗ' ಅಂಕಿತದಲ್ಲಿರುತ್ತವೆ. ವೀರಶೈವ ಸಿದ್ಧಾಂತವನ್ನೇ ಪ್ರಧಾನವಾಗಿ ಮಂಡಿಸುತ್ತಿದ್ದುದರಿಂದ ಈತನಿಗೆ 'ಸಿದ್ಧಾಂತಿ' ಎಂಬ ಹೆಸರು ಪ್ರಾಪ್ತವಾದಂತೆ ತೋರುತ್ತದೆ. ವಚನಗಳಲ್ಲಿ ತತ್ವಗಳನ್ನು ವಾದಗಳ ರೀತಿಯಲ್ಲಿಯೇ ಪ್ರತಿಪಾದಿಸಿರುವುದು ಕಂಡುಬರುತ್ತದೆ. ಸಿದ್ಧಾಂತವನ್ನೇ ಪ್ರಮುಖವಾಗಿ ಪ್ರತಿಪಾದಿಸುವುದು ಸಿದ್ಧಾಂತಿ ವೀರಸಂಗಯ್ಯನ ಉದ್ದೇಶವಾಗಿರುವುದರಿಂದ, ಈತನ ವಚನಗಳು ಅರ್ಥದೃಷ್ಟಿಯಿಂದ ಕ್ಲಿಷ್ಟವಾಗಿ ತೋರುತ್ತವೆ.

**ಸುಂಕದ ಬಂಕಣ್ಣ** ಸುಂಕಿಗ ವೃತ್ತಿಯವ. ಈತನು 'ಬಂಕೇಶ್ವರಲಿಂಗ' ಅಂಕಿತದಲ್ಲಿ ವಚನ ಬರೆದಿದ್ದಾನೆ. ಗಣಸಹಸ್ರನಾಮ, ಬಸವ ಪುರಾಣ, ಶಿವತತ್ವ ಚಿಂತಾಮಣಿ ಗ್ರಂಥಗಳಲ್ಲಿ ಈ ವಚನಕಾರನ ಉಲ್ಲೇಖ, ವಿವರಗಳಿವೆ. ಈ ಶರಣ ನಿತ್ಯವೂ ಜಂಗಮಾರ್ಚನೆ ಮಾಡುತ್ತಿದ್ದ. ವಚನಗಳು ಗಾತ್ರದಲ್ಲಿ ಚಿಕ್ಕವಾಗಿದ್ದು, ಸ್ಥಲಗಳಿಂದ ಕೂಡಿರುತ್ತವೆ. ಆ ಕಾಲದ ವ್ಯಾಪಾರ ಪದ್ಧತಿ, ಸುಂಕ ಪದ್ಧತಿ, ಮಾರ್ಗ ಪದ್ಧತಿ ಹಾಗೂ ಸರಕು ಸಾಗಾಣಿಕೆಯ ಸಾಧನಗಳನ್ನು ತಿಳಿಸುವ ಈ ವಚನಗಳಿಗೆ ಸಾಂಸ್ಕೃತಿಕ ಮಹತ್ವವಿದೆ. ಇದಲ್ಲದೆ ಶಿವಶರಣರ ಸ್ತುತಿ, ದೈವ ಸಾಕ್ಷಾತ್ಕಾರ, ಪರಮಾತ್ಮನ ಸ್ವರೂಪ ಮೊದಲಾದ ವಿಷಯಗಳನ್ನು ಇಲ್ಲಿಯ ವಚನಗಳು ತಿಳಿಸುತ್ತವೆ.

ಸೂಜಿಕಾಯಕದ ರಾಮಿತಂದೆಯ ಚರಿತ್ರೆಗೆ ಸಂಬಂಧಿಸಿದ ಯಾವ ವಿವರಗಳೂ ತಿಳಿದುಬರುವುದಿಲ್ಲ. ಆದರೆ ಈತನು ಬಟ್ಟೆ ಹೊಲಿಯುವ ಕಾಯಕ ಮಾಡುತ್ತಿದ್ದನೆಂದು ಮಾತ್ರ ಹೇಳಬಹುದಾಗಿದೆ. 'ಪ್ರಸನ್ನ ಕಪಿಲಸಿದ್ಧ ಮಲ್ಲಿಕಾರ್ಜುನಲಿಂಗ' ಅಂಕಿತದಲ್ಲಿರುವ ಈ ಶರಣನ ವಚನಗಳೆಲ್ಲ ಬೆಡಗಿನ ವಚನಗಳಾಗಿರುತ್ತವೆ. ಶಿವತತ್ವಗಳ ಪ್ರತಿಪಾದನೆಗಾಗಿ ತನ್ನ ಕಾಯಕವನ್ನೇ ಸಾಂಕೇತಿಕವಾಗಿ ಬಳಸಿಕೊಂಡಿದ್ದಾನೆ. ತತ್ವಮಂಡನೆಯೇ ಪ್ರಮುಖವಾಗಿರುವದರಿಂದ ಇಲ್ಲಿಯ ವಚನಗಳು ಕ್ಲಿಷ್ಟವಾಗಿ ಕಂಡುಬರುತ್ತವೆ.

ಕರಣಿಕ ಸೊಡ್ಡಳ ಬಾಚರಸರು ಬಿಜ್ಜಳನ ಅರಮನೆಯಲ್ಲಿಯ ಕಣಜಗಳಿಂದ ಧಾನ್ಯ ಅಳೆದುಕೊಡುವ, ಕೊಟ್ಟುದರ ಲೆಕ್ಕ ಬರೆಯುವ ಕಾಯಕ ನಿರ್ವಹಿಸುತ್ತಿದ್ದರು. ಇವರು ಬಸವಣ್ಣನವರಿಗೆ ತೀರ ಹತ್ತಿರದವರೂ ನಿಷ್ಠಾವಂತ ವ್ಯಕ್ತಿಯೂ ಎನಿಸಿದ್ದರು. ಅನುಭವ ಮಂಟಪದಲ್ಲಿ ಕ್ರಿಯಾತ್ಮಕವಾಗಿ ಭಾಗವಹಿಸುತ್ತಿದ್ದ ಸೊಡ್ಡಳ ಬಾಚರಸರು ಸೌರಾಷ್ಟ್ರದ ಸೋಮನಾಥನ ಭಕ್ತರಾಗಿದ್ದರು. ಬಸವಪುರಾಣ, ಭೈರವೇಶ್ವರ ಕಾವ್ಯ, ಭೈರವೇಶ್ವರ ಕಾವ್ಯದ ಕಥಾಮಣಿಸೂತ್ರರತ್ನಾಕರ ಮೊದಲಾದ ಕೃತಿಗಳು ಈ ವಚನಕಾರನ ಜೀವನಕ್ಕೆ ಸಂಬಂಧಿಸಿದ ಕೆಲವು ಅಂಶಗಳನ್ನು ತಿಳಿಸಿಕೊಡುತ್ತವೆ. ನೀತಿಬೋಧೆ, ಶರಣ ಸತ್ಸಂಗ, ದೈವನಿಷ್ಠೆ, ಜೀವನನಿಷ್ಠೆ, ಭಕ್ತಿಯ ಉತ್ಕಟತೆ, ಅನ್ಯಮತ, ಅನ್ಯದೈವ ದೂಷಣೆ ಮುಂತಾದ ವಿಷಯಗಳನ್ನು ಸಾದರಪಡಿಸುವ ಈತನ ವಚನಗಳು ಕಾವ್ಯಾಂಶದಿಂದ ಕಂಗೊಳಿಸುತ್ತವೆ.

ಹಡಪದ ಅಪ್ಪಣ್ಣನವರು ಅನುಭವ ಮಂಟಪದ ಮಹಾನುಭಾವಿ ಹಾಗೂ ಅನುಪಮ ಚೇತನ ಎನಿಸಿದ್ದರು. ಬಸವಣ್ಣನವರ ನಿಕಟವರ್ತಿಯಾದ ಇವರ ಸಮರ್ಪಣ ಸೇವಾಭಾವ ಅವರ್ಣನೀಯವಾದುದಾಗಿದೆ. ಶಿವಶರಣೆ ಹಾಗೂ ವಚನಕಾರ್ತಿ ಲಿಂಗಮ್ಮ ಇವರ ಪತ್ನಿ. ಚೆನ್ನಮಲ್ಲೇಶ್ವರ ಪರಮಗುರು. ಹಡಪದ ಅಪ್ಪಣ್ಣನವರದು ಹಡಪದ ಕಾಯಕ. ಕಾಯಕನಿಷ್ಠೆ, ಜೀವನನಿಷ್ಠೆ ಹಾಗೂ ಸೇವಾನಿಷ್ಠೆಗಳು ಈ ಶರಣನ ವ್ಯಕ್ತಿತ್ವ ವಿಶೇಷಗಳಾಗಿವೆ. ಕಲ್ಯಾಣದಲ್ಲಿ ಶಿವಶರಣರ ಗಾಢ ಸಂಪರ್ಕ ಹೊಂದಿದ್ದ ಈ ವಚನಕಾರ ಹರಳಯ್ಯ–ಮಧುವಯ್ಯರ ಪ್ರಸಂಗದ ತರುವಾಯ ಬಸವಣ್ಣನವರೊಂದಿಗೆ ಕೂಡಲಸಂಗಮದ ವರೆಗೂ ಪರ್ಯಟನಗೈದನು. ಬಸವಣ್ಣನವರ ಅಪ್ಪಣೆಯ ಮೇರೆಗೆ ನೀಲಾಂಬಿಕೆಯನ್ನು ಕರೆತರುವಷ್ಟರಲ್ಲಿಯೇ ಬಸವಣ್ಣನವರು ಲಿಂಗೈಕ್ಯರಾಗುತ್ತಾರೆ. ಈ ಸುದ್ದಿಯನ್ನು ತಿಳಿದ ನೀಲಾಂಬಿಕೆ ಮತ್ತು ಹಡಪದ ಅಪ್ಪಣ್ಣನವರೂ ಆಮೇಲೆ ಲಿಂಗೈಕ್ಯರಾದರೆಂಬ ಸಂಗತಿಗಳು ತಿಳಿದುಬರುತ್ತವೆ. 'ಬಸವಪ್ರಿಯ ಕೂಡಲ ಚೆನ್ನಬಸವಣ್ಣ' ಅಂಕಿತದಲ್ಲಿರುವ ಈತನ ವಚನಗಳಲ್ಲಿ ಬೆಡಗಿನ ವಚನಗಳ ಸಂಖ್ಯೆಯೇ ಅಧಿಕವಾಗಿದೆ. ಷಟ್‌ಸ್ಥಲ ವಿಷಯವನ್ನೇ ಇಲ್ಲಿ ಪ್ರಮುಖವಾಗಿ ವಿವೇಚಿಸಲಾಗಿದೆ. ಚಿಕ್ಕ ವಾಕ್ಯಗಳಿಂದ ಕೂಡಿದ ಈತನ ರಚನೆಗಳಲ್ಲಿ ಸರಳತೆ, ಸಹಜತೆ ಹಾಗೂ ಕಥನಶೈಲಿಯನ್ನು ಕಾಣುತ್ತೇವೆ. ತತ್ವನಿರೂಪಣೆಯ ಸಂದರ್ಭದಲ್ಲಿ ಲೋಕ ಪ್ರಸಿದ್ಧ ನಿದರ್ಶನಗಳನ್ನು ಬಳಸಿರುವುದರಿಂದ ವಚನಗಳನ್ನು ಸುಲಭವಾಗಿ ಅರ್ಥೈಸ ಬಹುದಾಗಿದೆ. ಬನವಾಸಿಯ ಮಧುಕೇಶ್ವರ ದೇವಾಲಯದ ಶಿವೋತ್ಸವ ಮಂಟಪದ ಗಗ್ಗರಿ ಕಲ್ಲಿನಲ್ಲಿ ಹಡಪದ ಅಪ್ಪಣ್ಣನವರ ವಿಗ್ರಹವನ್ನು ಕಂಡರಿಸಲಾಗಿದೆ.

ಹಡಪದ ರೇಚಣ್ಣ 'ನಿಃಕಳಂಕ ಕೂಡಲ ಚೆನ್ನಸಂಗಮದೇವ' ಅಂಕಿತದಲ್ಲಿ ವಚನ ರಚಿಸಿದ್ದಾನೆ. ಶಿವತತ್ವ ಚಿಂತಾಮಣಿ, ಚತುರಾಚಾರ್ಯ ಪುರಾಣ, ಸೋಮೇಶ್ವರ ಪುರಾಣ, ಭೈರವೇಶ್ವರಕಾವ್ಯದ ಕಥಾಮಣಿಸೂತ್ರ ರತ್ನಾಕರ ಮೊದಲಾದ ಗ್ರಂಥಗಳಲ್ಲಿ ಈ ವಚನಕಾರನ ಉಲ್ಲೇಖವಿದೆ. ಅನುಭವ ಮಂಟಪದ ಪ್ರಭಾವಲಯದಲ್ಲಿ ಪ್ರಜ್ವಲಿಸಿದ ಹಡಪದ ರೇಚಣ್ಣ, ಶರಣರ ದಂಡಿನೊಂದಿಗೆ ಉಳುವೆಯ ವರೆಗೂ ಹೋಗಿದ್ದನೆಂದು ಹೇಳಲಾಗುತ್ತದೆ. ಶಿವಭಕ್ತರ ಗುಣ-ಲಕ್ಷಣ, ಶರಣನ ಇರವು, ಅಪ್ರಾಮಾಣಿಕರ ದೂಷಣೆ, ಶರಣಸ್ತುತಿ ಮೊದಲಾದ ಸಂಗತಿಗಳು ಇಲ್ಲಿಯ ವಚನಗಳಲ್ಲಿರುತ್ತವೆ. ಹೋಲಿಕೆಗಳ ಮೂಲಕ ವಿಷಯವನ್ನು ವಿವೇಚಿಸುವುದರಿಂದ ವಚನಗಳ ಕಾವ್ಯಗುಣಕ್ಕೆ ಕಮನೀಯತೆ ಬಂದಂತಾಗಿದೆ.

ಹಾವಿನಹಾಳ ಕಲ್ಲಯ್ಯ, ಅಕ್ಕಸಾಲಿಗ ಮನೆತನದವ. ಶಿವನಯ್ಯ ತಂದೆ, ಸೋಮವ್ವೆ ತಾಯಿ. ಹಾವಿನಹಾಳದ ಕಲ್ಲಿನಾಥ ಆರಾಧ್ಯದೈವ. ಈ ಶರಣನನ್ನು ಕುರಿತು ಹರಿಹರ ರಗಳೆ ರಚಿಸಿದ್ದಾನೆ. ರೇವಣಸಿದ್ಧ, ರುದ್ರಮುನಿ, ಸಿದ್ಧರಾಮರ ಸಂಪರ್ಕ, ಸಾನ್ನಿಧ್ಯ ಪಡೆದಿದ್ದ ಕಲ್ಲಯ್ಯನು ಸಕಲಜೀವಿಗಳಿಗೆ ಲೇಸನೆ ಬಯಸಿದ ಪರಮ ಶಿವಭಕ್ತ. ಸತ್ತ ಸರ್ಪ ಬದುಕಿಸಿದ, ನಾಯಿಯಿಂದ ವೇದ ಓದಿಸಿದ, ಪರಕಾಯ ಪ್ರವೇಶ ತಿಳಿದಿದ್ದ ಘಟನೆಗಳು ಈ ವಚನಕಾರನ ಚರಿತ್ರೆಯಲ್ಲಿ ಉಲ್ಲೇಖಗೊಂಡಿವೆ. ಸೊನ್ನಲಿಗೆಯಲ್ಲಿ ಲಿಂಗೈಕ್ಯನಾದ ಕಲ್ಲಯ್ಯನ ಸಮಾಧಿ, ಸಿದ್ಧರಾಮೇಶ್ವರ ದೇವಾಲಯದ ಪ್ರಾಕಾರದಲ್ಲಿದೆ. 'ಮಹಾಲಿಂಗ ಕಲ್ಲೇಶ್ವರ' ಅಂಕಿತದಲ್ಲಿರುವ ಹಾವಿನಹಾಳ ಕಲ್ಲಯ್ಯನ ವಚನಗಳಲ್ಲಿ ಅಷ್ಟಾವರಣ, ಲಿಂಗಾಂಗ ಸಾಮರಸ್ಯ, ಶಿವಭಕ್ತಿ, ಆಚಾರ-ವಿಚಾರ, ಶಿವಶರಣ ನಿಷ್ಠೆ, ನಿಷ್ಕಾಮಸೇವೆ, ಅನುಭಾವ, ಶರಣಸ್ತುತಿ, ಅಂತರಂಗ ನಿವೇದನೆ ಮೊದಲಾದ ವಿಷಯಗಳಿರುತ್ತವೆ. ರೂಪಕ, ಉಪಮೆಗಳಿಂದ ಕೂಡಿದ ಈತನ ವಚನಗಳಲ್ಲಿ ಕಾವ್ಯಸೌಂದರ್ಯ, ಭಾವದೀಪ್ತಿಗಳನ್ನು ಕಾಣುತ್ತೇವೆ.

ಹುಂಜಿನ ಕಾಳಗದ ದಾಸಯ್ಯನ ಚರಿತ್ರೆಯ ಯಾವ ವಿವರಗಳೂ ದೊರೆಯು ವುದಿಲ್ಲ. ಈ ವಚನಕಾರನು 'ಚಂದ್ರಚೂಡೇಶ್ವರಲಿಂಗ' ಅಂಕಿತದಲ್ಲಿ ವಚನ ರಚನೆ ಮಾಡಿದ್ದಾನೆ. ವ್ರತಭ್ರಷ್ಟರನ್ನು ಕುರಿತು ಹೇಳುವ ಈತನ ವಚನ ಗಾತ್ರದಲ್ಲಿ ಅತ್ಯಂತ ಚಿಕ್ಕದಾಗಿದೆ.

ಹೆಂಡದ ಮಾರಯ್ಯನ ವಚನಗಳು 'ಧರ್ಮೇಶ್ವರಲಿಂಗ' ಅಂಕಿತದಲ್ಲಿವೆ. ಈ ವಚನಕಾರನ ವಚನಗಳಲ್ಲಿ ಮದ್ಯಪಾನಿಗಳಿಗೆ ಮಾಡಿದ ಉಪದೇಶಪರ ವಿಚಾರಗಳಿವೆ. ಹೀಗಾಗಿ ಮದ್ಯ ಮಾರಾಟಕ್ಕೆ ಸಂಬಂಧಿಸಿದ ದೃಷ್ಟಾಂತ, ಉಪಮೆಗಳನ್ನೇ ಇಲ್ಲಿ ಹೆಚ್ಚಾಗಿ ಬಳಸಲಾಗಿದೆ. ಮಾದಕಪದಾರ್ಥವಾದ ಮದ್ಯಕ್ಕೆ ಹೊಸ ವ್ಯಾಖ್ಯಾನನೀಡುವ ಮಾರಯ್ಯನು ಸುರಾಪಾನಿ ಭವಿಗಳು ಐಹಿಕ ಸುಖಭೋಗವನ್ನು ತ್ಯಜಿಸಿ, ಶಿವಾನುಭಾವದ ಸನ್ಮಾರ್ಗದಲ್ಲಿ ಮುನ್ನಡೆಯಬೇಕೆಂದು ಆಶಿಸಿದ್ದಾನೆ. ಈ ವಚನಗಳು ಸರಳವಾಗಿದ್ದು, ಸಾಂಸ್ಕೃತಿಕ-ಚಾರಿತ್ರಿಕ ಮಹತ್ವ ಪಡೆದಿರುತ್ತವೆ.

ಹುಲ್ಲುಮಾರುವ ಕಾಯಕ ಮಾಡುತ್ತಿದ್ದ ಹೊಡೆಹುಲ್ಲ ಬಂಕಣ್ಣನ ಉಲ್ಲೇಖ ಗುರುರಾಜ ಚಾರಿತ್ರದಲ್ಲಿದೆ. ತನ್ನ ಸತ್ಯಶುದ್ಧ ಕಾಯಕದಿಂದ ನಿತ್ಯವೂ ಗುರುಲಿಂಗ ಜಂಗಮ ಸೇವೆಮಾಡುತ್ತಿದ್ದನು. ಬಸವಣ್ಣನವರ ನಿಕಟವರ್ತಿಯಾಗಿದ್ದ ಹೊಡೆಹುಲ್ಲ ಬಂಕಣ್ಣ 'ಜಗನ್ನಾಥ ಸಾಕ್ಷಿಯಾಗಿ ಕುಂಭೇಶ್ವರಲಿಂಗ' ಅಂಕಿತದಲ್ಲಿ ವಚನ ಬರೆದಿದ್ದಾನೆ. ಗುರುಪ್ರಸಾದ, ಲಿಂಗಪ್ರಸಾದ, ಜಂಗಮಪ್ರಸಾದ, ಸ್ವಯಪ್ರಸಾದಿ, ಜ್ಞಾನಪ್ರಸಾದಿ, ಮಹಾಪ್ರಸಾದಿ, ಭಾವಶುದ್ಧಕಾಯಕ, ಶರಣಸ್ತುತಿ ಮೊದಲಾದ ವಿಷಯಗಳು ಈತನ ವಚನಗಳಲ್ಲಿವೆ. ವಚನ ಸರಳವಾಗಿದ್ದು, ಸುಲಭವಾಗಿ ಅರ್ಥೈಸಲು ಸಾಧ್ಯವಾಗುತ್ತದೆ.

ಅಜ್ಞಾತ ಶರಣರ ವಚನಾಂಕಿತ ಹಾಗೂ ವಚನಗಳು ಮಾತ್ರ ಲಭಿಸುವುದರಿಂದ ಇವರ ಜೀವನ ಚರಿತ್ರೆಗೆ ಸಂಬಂಧಿಸಿದಂತೆ ಸದ್ಯ ಯಾವ ವಿವರಗಳನ್ನೂ ಹೇಳಲು ಸಾಧ್ಯವಾಗುವುದಿಲ್ಲ. ಇಲ್ಲಿಯ ಅಜ್ಞಾತ ಶರಣರು ಹಾಗೂ ಅವರ ವಚನಗಳು ಬಸವಯುಗ, ಬಸವೋತ್ತರ ಯುಗಗಳೆರಡಕ್ಕೂ ಸಂಬಂಧಿಸಿದವುಗಳಾಗಿರುತ್ತೇವೆ. ಈ ವಚನಗಳು ಗಾತ್ರದಲ್ಲಿ ಹೆಚ್ಚಾಗಿ ದೀರ್ಘವಾಗಿರುತ್ತವೆ. ಇವು ಬಸವಾದಿ ಶರಣರ ಸ್ತುತಿ, ಶರಣ, ಶಿವಯೋಗಿ, ಲಿಂಗೈಕ್ಯ, ಗುರು–ಲಿಂಗ–ಜಂಗಮ, ಷಟ್‌ಸ್ಥಲ ಮೊದಲಾದ ವಿಷಯಗಳನ್ನೊಳಗೊಂಡಿರುತ್ತವೆ. ತತ್ವನಿರೂಪಣೆಯಿದ್ದರೂ ವಚನಗಳು ಸರಳವಾಗಿರುತ್ತವೆ. ವಿಷಯ ನಿರೂಪಣೆಗಾಗಿ ಜನಬಳಕೆಯ ನಿದರ್ಶನಗಳನ್ನು ಬಳಸಿರುವುದರಿಂದ ಇವು ಅರ್ಥೈಸಲು ಸುಲಭವಾಗಿರುತ್ತವೆ. ಇವುಗಳಲ್ಲಿ ಕಾವ್ಯಾಂಶ ಕಡಿಮೆಯೆಂದೇ ಹೇಳಬೇಕು.

### ಪರಿಷ್ಕರಣ

ಈ ಸಂಪುಟದಲ್ಲಿ ಸೇರುವ ವಚನಕಾರರ ಸಂಖ್ಯೆಯನ್ನು ನಿರ್ದಿಷ್ಟ ಪಡಿಸಿಕೊಂಡು, ಪ್ರತಿಯೊಬ್ಬನ ವಚನಗಳಿಗಿರುವ ಆಕರಗಳನ್ನು ಪಟ್ಟಿಮಾಡಿಕೊಂಡುದು ನಾವು ಪೂರೈಸಿದ ಪ್ರಥಮ ಕಾರ್ಯ. ಹೀಗೆ ಪಟ್ಟಿಮಾಡಿಕೊಂಡ ಪ್ರಕಟಿತ ಹಾಗೂ ಅಪ್ರಕಟಿತ ಆಕರಗಳಿಂದ ವಚನಗಳನ್ನು ಪ್ರತಿಮಾಡಿ ಒಂದೆಡೆ ಸಂಗ್ರಹಿಸುವ ಕಾರ್ಯವನ್ನು ಆಮೇಲೆ ನೆರವೇರಿಸಲಾಯಿತು. ಇದರಿಂದ ಪ್ರತಿಯೊಂದು ವಚನಗಳಿಗಿರುವ ಸರ್ವ ಆಕರಗಳನ್ನು, ಪಾಠಾಂತರಗಳನ್ನು ಗುರುತಿಸುವುದು ಸಾಧ್ಯವಾಯಿತು. ಹೀಗೆ ಸಂಗ್ರಹಿಸಿದ ವಚನಗಳನ್ನು ಈ ಯೋಜನೆಯ ಕೇಂದ್ರಕಾರ್ಯಾಲಯದಲ್ಲಿರುವ 'ವಚನ ಬ್ಯಾಂಕಿ'ನ ವಚನಗಳೊಂದಿಗೆ ಪರಿಶೀಲಿಸಿ, ನಮ್ಮ ಗಮನಕ್ಕೆ ಬರದಿರಬಹುದಾದ ವಚನ ಹಾಗೂ ಆಕರಗಳನ್ನು ಪ್ರತಿಮಾಡಿಕೊಂಡು ಆಮೇಲೆ ಸೇರಿಸಿಕೊಳ್ಳಲಾಯಿತು. ಹೀಗಾಗಿ ಪ್ರಾಚೀನ ಆಕರಗಳನ್ನು ಗುರುತಿಸುವ, ವಚನಗಳ ಸಂಖ್ಯೆಯನ್ನು ನಿರ್ದಿಷ್ಟವಾಗಿ ಗೊತ್ತುಪಡಿಸುವ ಕಾರ್ಯ ಇನ್ನಷ್ಟು ಪರಿಪೂರ್ಣವಾಯಿತು.

ಪ್ರಾಚೀನವೆನಿಸಿದ ಯೋಗ್ಯವಾದ ಮತ್ತು ಅಧಿಕೃತ ಆಕರದ ವಚನವನ್ನು ಇಲ್ಲಿ ಮೂಲವೆಂದು ಇಟ್ಟುಕೊಂಡು, ಅವಶ್ಯವೆನಿಸಿದಲ್ಲಿ ಭಿನ್ನಪಾಠಗಳಿಂದ ಪಾಠವನ್ನು ಪರಿಷ್ಕರಿಸಲಾಗಿದೆ. ಈ ಪ್ರಸಂಗದಲ್ಲಿ ಪ್ರಕ್ಷಿಪ್ತವಾಗಿರಬಹುದಾದ ವಚನಗಳನ್ನು ಕೈಬಿಡಲಾಗಿದೆ.

ಈ ಸಂಪುಟದಲ್ಲಿ ಎರಡು ಕಾಂಡಗಳಿದ್ದು, ಅವರ್ಗೀಯ ಅಕ್ಷರಗಳಿಂದ ಆರಂಭವಾಗುವ ಹೆಸರಿನ ವಚನಕಾರರ ವಚನಗಳನ್ನು ಒಂದನೆಯ ಕಾಂಡದಲ್ಲಿಯೂ, ಅಜ್ಞಾತ ಶರಣರ ವಚನಗಳನ್ನು ಎರಡನೆಯ ಕಾಂಡದಲ್ಲಿಯೂ ಸೇರಿಸಲಾಗಿದೆ. ಶಿವಲೆಂಕ ಮಂಚಣ್ಣ ಹಾಗೂ ಸುಂಕದ ಬಂಕಣ್ಣರ ವಚನಗಳು ಮೂಲದಲ್ಲಿಯೇ 'ಸ್ಥಲ' ಗಳಿಗನುಗುಣವಾಗಿ ಇರುವುದರಿಂದ, ಇವುಗಳನ್ನು ಹಾಗೆಯೇ ಇಟ್ಟುಕೊಂಡು, ಉಳಿದ ೨೫ ವಚನಕಾರರ ವಚನಗಳನ್ನು ಆಕಾರಾದಿಯಲ್ಲಿ ಹೊಂದಿಸಲಾಗಿದೆ. ಅನುಕೂಲತೆ ದೃಷ್ಟಿಯಿಂದ ಅನುಬಂಧದಲ್ಲಿ 'ಸ್ಥಲ'ಗಳಿಗನುಗುಣ ವಾಗಿರುವ ಶಿವಲೆಂಕ ಮಂಚಣ್ಣ, ಸುಂಕದ ಬಂಕಣ್ಣರ ವಚನ ಹಾಗೂ ಅಜ್ಞಾತ ಶರಣರ ವಚನಗಳ ಆಕಾರಾದಿಯನ್ನೂ ಎಲ್ಲ ವಚನಗಳ ಕಠಿಣಪದಕೋಶ, ಪ್ರಾಚೀನ ಆಕರಗ್ರಂಥ ಸೂಚಿಗಳನ್ನೂ ಕೊಡಲಾಗಿದೆ.

ಪ್ರಸ್ತುತ ಸಂಪುಟದ ಪರಿಷ್ಕರಣ ಕಾರ್ಯದಲ್ಲಿ ಎದುರಾದ ಸಮಸ್ಯೆಗಳಲ್ಲಿ ಒಂದೆರಡನ್ನು ಮಾತ್ರ ಇಲ್ಲಿ ವಿವರಿಸಬಹುದಾಗಿದೆ.

ವಚನಕಾರರ ಹಾಗೂ ಅಂಕಿತಗಳ ನಾಮಸಾದೃಶ್ಯದಿಂದಾಗಿ ವಚನಗಳ ಅಂಕಿತಪಲ್ಲಟ ಕ್ರಿಯೆ ತೀರ ಸಹಜವಾಗಿ ನಡೆದಿದೆ. ಹೀಗಾಗಿ ಹಡಪದ ಅಪ್ಪಣ್ಣನ ವಚನಗಳು ಸಂಗಮೇಶ್ವರ ಅಪ್ಪಣ್ಣನ ಹೆಸರಿನಲ್ಲಿಯೂ ಸಂಗಮೇಶ್ವರ ಅಪ್ಪಣ್ಣನ ವಚನಗಳು ಹಡಪದ ಅಪ್ಪಣ್ಣನ ಹೆಸರಿನಿಂದಲೂ ಸಿಗುತ್ತವೆ. ಇಷ್ಟೇ ಅಲ್ಲ, ಬಸವಣ್ಣ, ಅಕ್ಕನಾಗಮ್ಮನವರ ವಚನಗಳು ಸಂಗಮೇಶ್ವರ ಅಪ್ಪಣ್ಣನ ಅಂಕಿತ-ಹೆಸರಿನಲ್ಲಿಯೂ ದೊರಕುತ್ತವೆ. 'ಸಂಗಮೇಶ್ವರ ಅಪ್ಪಣ್ಣನ ವಚನಗಳು' ಹೆಸರಿನ ಅಡಿಯಲ್ಲಿ 'ಬಸವಪ್ರಿಯ ಕೂಡಲ ಚೆನ್ನಸಂಗಮದೇವ' ಎಂಬ ಅಂಕಿತದೊಡನೆ ಸಿಗುವುದರಿಂದ, ಈ ಅಂಕಿತದ ವಚನಗಳನ್ನು ಸಂಗಮೇಶ್ವರ ಅಪ್ಪಣ್ಣನ ವಚನಗಳೆಂದು ಗುರುತಿಸಲಾಗಿದೆ. ಹಡಪದ ಅಪ್ಪಣ್ಣನ ವಚನಾಂಕಿತ 'ಬಸವಪ್ರಿಯ ಕೂಡಲ ಚೆನ್ನಬಸವಣ್ಣ' ಎಂಬುದೆಂದು ಈತನ ವಚನವೊಂದರಿಂದಲೇ ಗೊತ್ತಾಗುತ್ತದೆ. ಹೀಗಿದ್ದರೂ ಈ ವಚನಕಾರನ ವಚನಗಳು 'ಬಸವಪ್ರಿಯ ಕೂಡಲ ಚೆನ್ನಸಂಗಮದೇವ,' 'ಬಸವಪ್ರಿಯ ಕೂಡಲಚೆನ್ನಸಂಗನ ಬಸವಣ್ಣ', 'ಬಸವಪ್ರಿಯ ಕೂಡಲ ಸಂಗಮದೇವ'-ಈ ಮೂರೂ ಮುದ್ರಿಕೆಯ ಲ್ಲಿಯೂ ಸಿಗುತ್ತವೆ. ಈ ಮೂರೂ ಮುದ್ರಿಕೆಯ ವಚನಕಾರರು ಯಾರೂ ಇಲ್ಲದಿರುವದರಿಂದ, ಇವುಗಳನ್ನು ಹಡಪದ ಅಪ್ಪಣ್ಣನ ವಚನಗಳೆಂದು ಪರಿಗಣಿಸ ಲಾಗಿದೆ. ಹೀಗಿದ್ದರೂ ಹಡಪದ ಅಪ್ಪಣ್ಣ ಹಾಗೂ ಸಂಗಮೇಶ್ವರ ಅಪ್ಪಣ್ಣರ ವಚನಗಳಲ್ಲಿ ಕೆಲವಾದರೂ ಅಂಕಿತ ಪಲ್ಲಟದಿಂದ ಅದಲುಬದಲಾಗಿರುವ ಸಾಧ್ಯತೆಯಿದೆ. ಸುಂಕದ ಬಂಕಣ್ಣನ ವಚನಾಂಕಿತ 'ಚೆನ್ನಬಂಕೇಶ್ವರಲಿಂಗ'. ಆದರೆ 'ಚೆನ್ನಬಂಕನಾಥ', 'ಸಂಗಪ್ರಿಯ ಚೆನ್ನಬಂಕೇಶ್ವರ', 'ಚೆನ್ನಬಂಕೇಶ್ವರ', 'ವೀರಬಂಕೇಶ್ವರ' ಅಂಕಿತದಲ್ಲಿಯೂ ಈ ವಚನಕಾರನ ವಚನಗಳು ಲಭಿಸುತ್ತವೆ. ಆದುದರಿಂದ ಈ ಎಲ್ಲ ಮುದ್ರಿಕೆಗಳ ವಚನಗಳನ್ನು ಸುಂಕದ ಬಂಕಣ್ಣನ ವಚನಗಳೆಂದೇ ಪರಿಭಾವಿಸ ಲಾಗಿದೆ.

ಆರಂಭದ ಅಕ್ಷರ, ಪದ, ಪಾದ ಹಾಗೂ ವಚನಾರ್ಧಗಳ ಪಲ್ಲಟಗಳೊಂದಿಗೆ ವಚನಗಳು ಬೇರೆ ಬೇರೆ ಆಕರಗಳಲ್ಲಿ ಸಿಗುತ್ತವೆ. ವಿವರವಾದ ಪರಿಶೀಲನೆ, ತಲಸ್ಪರ್ಶಿಯಾದ ಅಧ್ಯಯನಗಳ ಮೂಲಕ ಪುನರುಕ್ತ ದೋಷಗಳ ಪ್ರಮಾಣವನ್ನು

ಕಡಿಮೆ ಮಾಡಬಹುದಾಗಿದೆ. ಹೀಗೆ ಎಷ್ಟೇ ಕಾಳಜಿ ವಹಿಸಿದರೂ ಮೇಲೆ ಸೂಚಿಸಿದ ಕಾರಣಗಳಿಂದಾಗಿ ಈ ಸಂಪುಟದಲ್ಲಿ ಸಂಗಮೇಶ್ವರ ಅಪ್ಪಣ್ಣ (ವ.ಸಂ. ೩೦೫=೩೫೬), ಹಡಪದ ಅಪ್ಪಣ್ಣ (ವ.ಸಂ.೧೦೦೦=೧೦೦೨)ನವರ ವಚನಗಳು ಪುನರುಕ್ತವಾಗಿರುತ್ತವೆ. ಸಹೃದಯರು ಈ ಎರಡರಲ್ಲಿ ಒಂದನ್ನು ಕೈಬಿಡಬೇಕೆಂದು ಬಿನ್ನವಿಸುತ್ತೇನೆ. ವಿದ್ವಾಂಸರ ಸಹಾಯದಿಂದ ಇಲ್ಲಿಯ ಸಂಸ್ಕೃತ ಶ್ಲೋಕಗಳನ್ನು ಸಾಧ್ಯವಾದಷ್ಟು ಪರಿಷ್ಕರಿಸಿದ್ದರೂ ಅನೇಕ ಶ್ಲೋಕಗಳ ಪರಿಷ್ಕರಣ ಸಾಧ್ಯವಾಗದ ಕಾರಣ, ಅವುಗಳನ್ನು ಹಾಗೆಯೇ ಇಟ್ಟುಕೊಳ್ಳಲಾಗಿದೆ.

'ನಿಜಗುರು ಶಾಂತಮಲ್ಲಿಕಾರ್ಜುನ' ಹಾಗೂ 'ದೇವಧ್ವಜ ಮೃತ್ಯುಂಜಯನ ಭಾವದೊಲ್ಲಭ ಮುಜ್ದನೂರೇಶ', 'ಶ್ರೀ ಶಾಂತವೀರೇಶ್ವರ' ಈ ಅಂಕಿತಗಳ ವಚನಗಳು ನಮಗೆ ತಡವಾಗಿ ಲಭ್ಯವಾದ ಕಾರಣ, ಇವುಗಳನ್ನು ಪರಿಶಿಷ್ಟದಲ್ಲಿ ಕೊಡಲಾಗಿದೆ. ಇದರಿಂದ ಇಬ್ಬರು ಹೊಸ ಅಜ್ಞಾತ ಶರಣರು ಹಾಗೂ ಇವರ ಐದು ಹೊಸವಚನಗಳು ಕನ್ನಡ ಸಾಹಿತ್ಯಕ್ಕೆ ಸೇರಿದಂತಾಗಿದೆ.

## ಕೃತಜ್ಞತೆ

'ಸಮಗ್ರ ವಚನಸಾಹಿತ್ಯದ ಜನಪ್ರಿಯ ಆವೃತ್ತಿ ಪ್ರಕಟನ ಯೋಜನೆ'ಯ ಅಂಗವಾಗಿ ಈ ವಚನ ಸಂಪುಟವನ್ನು ಸಿದ್ಧಪಡಿಸಿಕೊಡುವ ಅವಕಾಶವನ್ನು ನನಗೆ ಒದಗಿಸಿದ, ಈ ಕಾರ್ಯದುದ್ದಕ್ಕೂ ಪ್ರೋತ್ಸಾಹ-ಸಹಕಾರ ನೀಡಿದ ಸಂಪಾದಕ ಸಮಿತಿಯ ಸದಸ್ಯರಿಗೂ ಈ ಬೃಹತ್ ಯೋಜನೆಯ ಸರ್ವಸಂಪುಟಗಳ ಪ್ರಧಾನ ಸಂಪಾದಕರಾಗಿ ಉಪಯುಕ್ತ ಸಲಹೆ, ಮೌಲಿಕ ಮಾರ್ಗದರ್ಶನ ನೀಡುವುದರ ಮೂಲಕ ಪರಿಷ್ಕರಣ ಕಾರ್ಯದಲ್ಲಿ ಅಚ್ಚುಕಟ್ಟಾಗಿ ಮುನ್ನಡೆಯುವಂತೆ ಮಾಡಿದ ಡಾ.ಎಂ.ಎಂ. ಕಲಬುರ್ಗಿ ಅವರಿಗೂ ಕೆಲವು ಸಂಸ್ಕೃತ ಶ್ಲೋಕಗಳನ್ನು ಪರಿಷ್ಕರಿಸಿಕೊಟ್ಟ ಸಂಸ್ಕೃತ ವಿಭಾಗದ ಪಂ. ಜಯತೀರ್ಥಾಚಾರ್ಯ ಮಳಗಿ, ಡಾ. ಮಲ್ಲಿಕಾರ್ಜುನ ಪರಡ್ಡಿಯವರಿಗೂ ಅನಂತ ಕೃತಜ್ಞತೆಗಳು. ಹಸ್ತಪ್ರತಿ ಭಾಂಡಾರದಲ್ಲಿರುವ ಹಸ್ತಪ್ರತಿಗಳನ್ನು ಪರಿಶೀಲಿಸುವಲ್ಲಿ ಸಹಕಾರ ನೀಡಿದ ಕರ್ನಾಟಕ ವಿಶ್ವವಿದ್ಯಾಲಯ, ಮೈಸೂರು ವಿಶ್ವವಿದ್ಯಾಲಯಗಳ ಕನ್ನಡ ಅಧ್ಯಯನ ಸಂಸ್ಥೆಯ ಅಧ್ಯಕ್ಷರಿಗೂ ಹೈದ್ರಾಬಾದಿನ ಉಸ್ಮಾನಿಯಾ ವಿಶ್ವವಿದ್ಯಾಲಯದ ಗ್ರಂಥಭಾಂಡಾರದಲ್ಲಿದ್ದ 'ಶಾಂತವೀರೇಶ್ವರ' ಅಂಕಿತದ ವಚನಗಳನ್ನು ಪ್ರತಿಮಾಡಿ ಕಳಿಸಿದ ಡಾ॥ ಕೆ.ಜಿ. ನಾರಾಯಣ ಪ್ರಸಾದ ಅವರಿಗೂ ಅನಂತ ಕೃತಜ್ಞತೆಗಳು.

-ಬಿ.ಆರ್. ಹಿರೇಮಠ

# ದ್ವಿತೀಯ ಆವೃತ್ತಿ

ಪ್ರಸ್ತುತ ವಚನ ಸಂಪುಟದ ಪ್ರಥಮ ಆವೃತ್ತಿಯಲ್ಲಿ ಉಳಿದುಕೊಂಡಿದ್ದ ಮುದ್ರಣದೋಷಗಳನ್ನು ತಿದ್ದಿ ಸರಿಪಡಿಸಲಾಗಿದೆ. ಎಲ್ಲ ವಚನಗಳನ್ನು ಮತ್ತೊಮ್ಮೆ ಕೂಲಂಕುಷವಾಗಿ ಪರಿಶೀಲಿಸಿ, ಅಪಪಾಠಗಳನ್ನು, ಅರ್ಥದೋಷಗಳನ್ನು ಪರಿಷ್ಕರಿಸಿ, ಶುದ್ಧಪಾಠಗಳನ್ನು ಇಟ್ಟುಕೊಳ್ಳಲಾಗಿದೆ. ಪ್ರಥಮ ಆವೃತ್ತಿಯ ಅನುಬಂಧದಲ್ಲಿಯ ವಚನಗಳನ್ನು ಆಯಾ ವಚನಗಳಲ್ಲಿ ಸೇರಿಸಲಾಗಿದೆ : ಹಲವು ವಚನಗಳ ಚರಣ ವಿನ್ಯಾಸವನ್ನು ಸರಿಪಡಿಸಲಾಗಿದೆ.

ತುಮಕೂರಿನ ಎಂ. ಚಂದ್ರಪ್ಪ ಅವರು ಸೂಚಿಸಿದ ಪುನರುಕ್ತಿ ವಚನಗಳ ಸಾಮ್ಯ, ಅನ್ಯವಚನಕಾರರ ವಚನಗಳ ಸೇಪರ್ಡೆಗಳನ್ನು ಸೂಕ್ಷ್ಮವಾಗಿ ಅವಲೋಕಿಸಿ, ಸಮರ್ಪಕವೆನಿಸಿದವುಗಳನ್ನು ಮಾತ್ರ ಅಳವಡಿಸಿಕೊಳ್ಳಲಾಗಿದೆ. ಎಸ್. ಶಿವಣ್ಣ ಅವರು ಸೂಚಿಸಿದ ಹೆಚ್ಚಿನ ವಚನಗಳನ್ನು ಪರಿಶೀಲಿಸಿ ಅಧಿಕೃತವಾದವನ್ನು ಸೇರಿಸಕೊಳ್ಳಲಾಗಿದೆ.

ಉಪಯುಕ್ತವಾದ ಮಾಹಿತಿಯನ್ನು ಒದಗಿಸಿದ ಎಂ. ಚಂದ್ರಪ್ಪ ಹಾಗೂ ಎಸ್. ಶಿವಣ್ಣ ಅವರಿಗೆ, ಸಂಸ್ಕೃತ ಶ್ಲೋಕಗಳನ್ನು ಪರಿಷ್ಕರಿಸಿಕೊಟ್ಟ ವಿದ್ವಾನ್ ಶ್ರೀ ಇಮ್ಮಡಿ ಶಿವಬಸವ ಸ್ವಾಮಿಗಳಿಗೆ ಅನಂತ ಕೃತಜ್ಞತೆಗಳು. ಈ ಸಂಪುಟವನ್ನು ಸಿದ್ಧಗೊಳಿಸಲು ಅವಕಾಶ ಕಲ್ಪಿಸಿಕೊಟ್ಟ ಸಂಪಾದಕ ಮಂಡಳಿಯ ಸರ್ವ ಸದಸ್ಯರಿಗೆ ಹಾಗೂ ಈ ಸಮಗ್ರ ಸಂಪುಟಗಳ ಪ್ರಧಾನ ಸಂಪಾದಕರಿಗೆ ಮಾರ್ಗದರ್ಶನ ನೀಡಿದ ಡಾ. ಎಂ. ಎಂ. ಕಲಬುರ್ಗಿ ಅವರಿಗೆ ತುಂಬು ಹೃದಯದ ಕೃತಜ್ಞತೆಗಳು.

– ಬಿ. ಆರ್. ಹಿರೇಮಠ

☼

# ಪರಿವಿಡಿ


ಮುನ್ನುಡಿ

ಬಿನ್ನಹ

ನಿರ್ದೇಶಕರ ಮಾತು

ಪ್ರಕಾಶಕರ ಮಾತು

ಸಂಪಾದಕೀಯ

ಪ್ರಸ್ತಾವನೆ

**ಕಾಂಡ : ಒಂದು**

| | | |
|---|---|---|
| ೧. | ರಕ್ಕಸಬೊಮ್ಮಿತಂದೆಯ ವಚನ | ೧ |
| ೨. | ರಾಯಸದ ಮಂಚಣ್ಣಗಳ ವಚನ | ೩ |
| ೩. | ರೇಚದ ಬಂಕಣ್ಣಗಳ ವಚನ | ೬ |
| ೪. | ಲದ್ದೆಯ ಸೋಮಯ್ಯಗಳ ವಚನ | ೭ |
| ೫. | ವಚನಭಂಡಾರಿ ಶಾಂತರಸನ ವಚನ | ೮ |
| ೬. | ವರದ ಸಂಕಣ್ಣಗಳ ವಚನ | ೨೫ |
| ೭. | ವೀರಗೊಲ್ಲಾಳನ ವಚನ | ೨೬ |
| ೮. | ವೀರಶಂಕರದಾಸಯ್ಯಗಳ ವಚನ | ೩೦ |
| ೯. | ವೇದಮೂರ್ತಿ ಸಂಗಣ್ಣನ ವಚನ | ೩೭ |
| ೧೦. | ವೈದ್ಯ ಸಂಗಣ್ಣನ ವಚನ | ೪೧ |
| ೧೧. | ಶಂಕರದಾಸಿಮಯ್ಯಗಳ ವಚನ | ೫೧ |
| ೧೨. | ಶಿವನಾಗಮಯ್ಯಗಳ ವಚನ | ೫೩ |
| ೧೩. | ಶಿವಲೆಂಕ ಮಂಚಣ್ಣನ ವಚನ | ೫೫ |
| ೧೪. | ಸಂಗಮೇಶ್ವರದ ಅಪ್ಪಣ್ಣನ ವಚನ | ೮೫ |
| ೧೫. | ಸಕಲೇಶ ಮಾದರಸನ ವಚನ | ೧೩೫ |
| ೧೬. | ಸಗರದ ಬೊಮ್ಮಣ್ಣನ ವಚನ | ೧೬೭ |
| ೧೭. | ಸತ್ತಿಗೆ ಕಾಯಕದ ಮಾರಯ್ಯಗಳ ವಚನ | ೧೮೮ |

೧೮. ಸಿದ್ಧಾಂತಿ ವೀರಸಂಗಯ್ಯಗಳ ವಚನ ೧೯೧
೧೯. ಸುಂಕದ ಬಂಕಣ್ಣನ ವಚನ ೧೯೪
೨೦. ಸೂಜಿಕಾಯಕದ ರಾಮಿತಂದೆಯ ವಚನ ೨೧೯
೨೧. ಸೊಡ್ಡಳ ಬಾಚರಸನ ವಚನ ೨೨೨
೨೨. ಹಡಪದ ಅಪ್ಪಣ್ಣಗಳ ವಚನ ೨೫೫
೨೩. ಹಡಪದ ರೇಚಣ್ಣನ ವಚನ ೩೩೮
೨೪. ಹಾವಿನಹಾಳ ಕಲ್ಲಯ್ಯಗಳ ವಚನ ೩೪೨
೨೫. ಹುಂಜಿನ ಕಾಳಗದ ದಾಸಯ್ಯಗಳ ವಚನ ೩೭೬
೨೬. ಹೆಂಡದ ಮಾರಯ್ಯಗಳ ವಚನ ೩೭೭
೨೭. ಹೊಡೆಹುಲ್ಲ ಬಂಕಣ್ಣಗಳ ವಚನ ೩೮೧

**ಕಾಂಡ : ಎರಡು**

ಅಜ್ಞಾತ ಶರಣರ ವಚನಗಳು

೨೮. ಅಖಂಡ ಮಂಡಲೇಶ್ವರ ೩೮೭
೨೯. ಅನುಗಲೇಶ್ವರ ೩೮೮
೩೦. ಅಪ್ರಮಾಣ ಗುಹೇಶ್ವರ ೩೮೯
೩೧. ಅಶ್ವಥರಾಮ ೩೯೦
೩೨. ಆನಂದ ಸಿದ್ಧೇಶ್ವರ ೩೯೧
೩೩. ಈಶ್ವರೀಯ ವರದ ಚೆನ್ನರಾಮ ೩೯೨
೩೪. ಏಕಾಂತ ವೀರಸೊಡ್ಡಳ ೩೯೩
೩೫. ಏಕೋರಾಮೇಶ್ವರಲಿಂಗ ೩೯೪
೩೬. ಕಲ್ಲಯ್ಯದೇವರು ೩೯೫
೩೭. ಕುರಂಗೇಶ್ವರಲಿಂಗ ಕುಂತಳಿಯ ವರಕುರಂಗಲಿಂಗ ೩೯೬
೩೮. ಗಾರ್ಗೇಶ್ವರಲಿಂಗ ೩೯೭
೩೯. ಗುರುವರದ ವಿರೂಪಾಕ್ಷ ೩೯೮
೪೦. ಗುರು ವಿಶ್ವೇಶ್ವರಾ ೩೯೯
೪೧. ಗೊಹೇಶ್ವರಲಿಂಗದಲ್ಲಿ ಪ್ರಭುವೆ ಸಾಕ್ಷಿಯಾಗಿ ಬಸವಪ್ರಿಯ ಕೂಡಲಸಂಗಮದೇವ ೪೦೧

೪೨. ಚೆನ್ನರಾಮೇಶ್ವರಲಿಂಗ ೪೦೪
೪೩. ಜಂಗಮಲಿಂಗಪ್ರಭುವೆ ೪೦೫
೪೪. ಜ್ಯೋತಿಸಿದ್ಧೇಶ್ವರ ೪೧೩
೪೫. ತುಂಬೆಯಾಚಲೆಯ ಮನಃಪ್ರಿಯ ಚೆನ್ನಬಂಕೇಶ್ವರ ೪೧೪
೪೬. ತ್ರೈಲೋಚನ ಮನೋಹರ ಮಾಣಿಕೇಶ್ವರಲಿಂಗ ೪೧೫
೪೭. ತ್ರಿಲೋಚನಶಂಕರ ೪೧೭
೪೮. ದೇವಧ್ವಜ ಮೃತ್ಯುಂಜಯನ ಭಾವದೊಲ್ಲಭ ಮುದ್ದನೂರೇಶ ೪೧೮
೪೯. ನಂಜುಂಡಶಿವ ೪೨೭
೫೦. ನಾಚೇಶ್ವರ ೪೪೪
೫೧. ನಿಃಕಳಂಕ ಚೆನ್ನಮಲ್ಲಿಕಾರ್ಜುನಪ್ರಭುವೆ ೪೪೫
೫೨. ನಿಃಕಳಂಕ ಚೆನ್ನಸೋಮೇಶ್ವರ ೪೪೭
೫೩. ನಿಜಗುರು ನಿರಾಲಂಬಪ್ರಭುವೆ ೪೪೮
೫೪. ನಿಜಗುರು ಶಾಂತಮಲ್ಲಿಕಾರ್ಜುನ ೪೭೬
೫೫. ನಿಜಮುಕ್ತಿ ರಾಮೇಶ್ವರ ೪೭೮
೫೬. ನಿರ್ಧನಪ್ರಿಯ ರಾಮೇಶ್ವರ ೪೭೯
೫೭. ನಿರಾಲಯ ನಿಜಗುರುಶಾಂತೇಶ್ವರ ೪೮೦
೫೮. ನಿರಾಳಪ್ರಿಯ ಸೊಡ್ಡಳಯ್ಯ ೪೮೧
೫೯. ಬಸವಣ್ಣಪ್ರಿಯ ಧರ್ಮೇಶ್ವರ ೪೮೨
೬೦. ಭೀಮಬಂಕೇಶ್ವರ ೪೮೩
೬೧. ಮರ್ಕಟೇಶ್ವರ ೪೮೬
೬೨. ಮಹಾಘನ ಪ್ರಸಿದ್ಧ ಪ್ರಸನ್ನ ಸಂಗಮೇಶ್ವರಲಿಂಗ ೪೮೭
೬೩. ಮಹಾಲಿಂಗ ವೀರರಾಮೇಶ್ವರ ೪೮೮
೬೪. ಮಹಾಲಿಂಗ ಶಶಿಮೌಳಿ ಸದಾಶಿವ ೪೮೯
೬೫. ವರದ ಸೋಮನಾಥ ೫೦೯
೬೬. ವಿಶ್ವಪತಿ ವಿಶ್ವನಾಥ ೫೧೦
೬೭. ವೈನಿಪುರದ ಸಂಗಮೇಶ್ವರ ೫೧೧
೬೮. ವೈದ್ಯನಾಥೇಶ್ವರ ೫೧೨
೬೯. ಶಂಭುಮಾರೇಶ್ವರ ೫೧೩
೭೦. ಶಾಂತವೀರೇಶ್ವರ ೫೧೫

೨೧. ಶ್ರೀಗುರು ಪ್ರಭುಸ್ವಾಮೀಶ್ವರ ೫೪೬
೨೨. ಶ್ರೀ ಬಸವಲಿಂಗ ೫೪೭
೨೩. ಶ್ರೀ ಮುಕ್ತಿರಾಮೇಶ್ವರ ೫೪೮
೨೪. ಸತ್ಯಕರಂಡಮೂರ್ತಿ ಸದಾಶಿವಲಿಂಗ ೫೪೯
೨೫. ಸದ್ಗುರು ಚೆನ್ನಮಲ್ಲಿಕಾರ್ಜುನ ೫೫೦
೨೬. ಸದ್ಗುರು ಶಂಭುಸೋಮೇಶ್ವರ ೫೫೨
೨೭. ಸದ್ಗುರು ಶಿವಸಿದ್ಧರಾಮೇಶ್ವರ ೫೫೩
೨೮. ಸರ್ವೇಶ್ವರಲಿಂಗ ೫೫೪
೨೯. ಸಿದ್ಧಲಿಂಗಪ್ರಿಯ ಬಸವಪ್ರಭುವೆ ೫೫೫
೩೦. ಸೋಮಭೀಮೇಶ್ವರಲಿಂಗ ೫೫೬
೩೧. ಹಾಟಕೇಶ್ವರಲಿಂಗ ೫೫೭

**ಅನುಬಂಧ**

ಕಠಿಣ ಪದಕೋಶ ೫೬೧
ವಚನಗಳ ಅಕಾರಾದಿ ೫೭೧
ಆಕರ ಗ್ರಂಥಗಳು ೫೮೨

# ಕಾಂಡ : ಒಂದು

## ರಕ್ಕಸಬೊಮ್ಮಿತಂದೆಯ ವಚನ

೧

ಆರೇನೆಂದಡೂ ಎನ್ನಲಿ, ಕೊಟ್ಟುದ ಕೊಡೆ, ಸಿಕ್ಕುಸುವುದ ಬಿಡೆ.
ಅನಂಗದ ನಡೆ, ಅತಿರೇಕದ ನುಡಿ, ಗತಿಗೆಟ್ಟವರ ಸಂಗ,
ಹೊಸಬರ ಕೂಟದ ಭಕ್ತಿಯನೊಲ್ಲದವರ ಒಡನಾಟ
ಅಸತ್ಯರು ಹೋದ ಹಾದಿ ಎನಗದೆ ಬಟ್ಟೆ,
ರಕ್ಕಸನೊಡೆಯ ಕೊಟ್ಟುದ ಬೇಡ. ॥ ೧ ॥

೨

ನಡೆವರೆಲ್ಲರೂ ಹೆಂಗಸಿನ ಗಂಡಂದಿರು.
ಮಾಡುವರೆಲ್ಲರೂ ಮಹಾಲಕ್ಷ್ಮಿಯ ತೊಂಡಂದಿರು.
ಉಂಬವರೆಲ್ಲರೂ ಅವರೆಂಜಲ ಕೂಳು.
ಇದನೆಂದೆ ನಾನು.
ಎನಗಿದಿರಾದಡೆ ಅವರ ಬಾಯ ಕೊಂಬವರ ಗಂಡರ ಗಂಡ,
ರಕ್ಕಸನೊಡೆಯ ಕೊಟ್ಟುದ ಬೇಡ. ॥ ೨ ॥

೩

ನಾನು ನಾನಾದ ಕಾರಣ ಎನಗೆ ಗುರುವಿಲ್ಲ.
ಸಾನೆಂಬುದರಿಯೆನಾಗಿ ಎನಗಾ ಲಿಂಗವಿಲ್ಲ.

ನಾ ಮಾಡದವನಾಗಿ ಎನಗಾ ಜಂಗಮವಿಲ್ಲ,
ಇದನಿನ್ನಾರ ಕೇಳುವೆ,
ರಕ್ಕಸನೊಡೆಯ ಕೊಟ್ಟುದ ಬೇಡ. ॥ ೩ ॥

೪

ಭಕ್ತನಾದಡೆ ಆರೂ ಅರಿಯದಂತೆ ಊರೆಲ್ಲರರಿಕೆಯಾಗಿ,
ಗುರುವಿಂಗೆ ತನು, ಲಿಂಗಕ್ಕೆ ಮನ, ಜಂಗಮಕ್ಕೆ ಧನ,
ಮಾಟವನರಿತು ಮಾಡುವ ಸತಿಯರ ಗಂಡ ನಾನು.
ರಕ್ಕಸನೊಡೆಯ ಕೊಟ್ಟುದ ಬೇಡ ॥ ೪ ॥

೫

ಭಕ್ತರ ಸತಿಯಾಗಿದ್ದವರೆ ಎನ್ನ ಹೆಂಡಿರು.
ಭಕ್ತರ ತಲೆಯೆ ಎನ್ನ ಕಾಲು, ಭಕ್ತರ ಚಿತ್ತವೆ ಎನ್ನ ಕುಚಿತ್ತ,
ಭಕ್ತರ ದ್ರವ್ಯ ಎನ್ನ ದೇಹ.
ಭಕ್ತರ ಮುಕ್ತಿ ಎನ್ನ ಕುದುರೆಯ ಲಾಯ.
ಅವರು ಸತ್ತಡೆ ಪಾಪ, ಎನಗದು ನರಕ,
ರಕ್ಕಸನೊಡೆಯ ಕೊಟ್ಟುದ ಬೇಡ. ॥ ೫ ॥

೬

ಭಕ್ತರೆಂಬ ಅಂಗವ ತಾಳಿರ್ದ ಬಸವ ಮೊದಲಾಗಿರ್ದವರ ಎಲ್ಲರ ಗಂಡ.
ಅವರ ಹೆಂಡತಿಯರ ಕಂಡಡೆ ಬಿಡೆ, ಕಾಣದಡೆ ಅಂಜಿದೆನಯ್ಯಾ.
ಎನ್ನ ಕೊಂಡಾಡುವರಿಲ್ಲ, ರಕ್ಕಸನೊಡೆಯ ಕೊಟ್ಟುದ ಬೇಡ. ॥ ೬ ॥

೭

ಭಕ್ತರೆಲ್ಲರೂ ಅಸತ್ಯವ ಮಾಡುವಾಗ ನಾನೆ ಭಕ್ತನಾಗಿದ್ದೆ.
ಇವರೆಲ್ಲರು ಗುರುಲಿಂಗಜಂಗಮಕ್ಕೆ ಮಾಡುವಾಗ,
ನಾನೆನ್ನ ಸತಿ ಸುತ ಬಂಧುಗಳಿಗೆ ಮಾಡಿ ಮಾಡಿ ದಣಿದು ನಿರಂಗನಾದೆ.
ಇಂತಿವರ ನಡುವೆ ನಾ ಕಡುಗಲಿ. ರಕ್ಕಸನೊಡೆಯ ಕೊಟ್ಟುದ ಬೇಡ. ॥ ೭ ॥

೮

ಪಸು ಕರದು ಹಾಲಿಲ್ಲ, ಹಾವಿದ್ದು ವಿಷವಿಲ್ಲ,
ಬಾಯಿದ್ದು ಹಸಿವಿಲ್ಲ, ಲಿಂಗವಿದ್ದು ಅಸುವಿಲ್ಲ,
ಇಂತಿವರೆಲ್ಲರ ಸತಿಯರ ಗಂಡ ನಾನು,
ರಕ್ಕಸನೊಡೆಯ ಕೊಟ್ಟುದ ಬೇಡ. ॥ ೮ ॥

# ರಾಯಸದ ಮಂಚಣ್ಣಗಳ ವಚನ

೯

ಅರಿವಿನ ಪ್ರಸಂಗಕ್ಕೆ ಮಚ್ಚರವೇಕೆ ?
ಮಹಾನುಭಾವಿಗೆ ಮನ್ನಣೆಯ ಮಾಡರೆಂಬ ತೇಜದ ಭೀಷ್ಮತೆಯೇಕೆ ?
ತನ್ಮಯ ತಾನಾದ ಮತ್ತೆ, ತನಗೆ ಅನ್ಯವಿಲ್ಲಾ ಎಂದೆ, ಜಾಂಬೇಶ್ವರಾ. ॥ ೧ ॥

೧೦

ಉಂಬಡೆ ಬಂದು ಬಾಯ ಮರದೆನೆಂದು
ಮೊರೆಯಿಡುತಿಪ್ಪ ಅರಿಕೆಹೀನನ ತೆರನಂತಾಯಿತ್ತು,
ಅರಿಕೆಯವರಿ ಎಂದು ಕುರುಹ ಕೊಟ್ಟ,
ಆ ಕುರುಹ ಮರದು ಅರಿದೆನೆಂಬ ಕುರುಬರ ನೋಡಾ, ಜಾಂಬೇಶ್ವರಾ.॥ ೨ ॥

೧೧

ಊರವಂಕದ ಹೊರಗಿದ್ದು ಮನೆಯ ಬಾಗಿಲ ಕಾಣೆನೆಂದು ಅರಸುವನಂತೆ,
ಇದಿರಿನಲ್ಲಿ ತೋರುವ ಕುರುಹ ಮರದು
ಅರಿವನೊಳಕೊಂಡೆನೆಂಬುವನಂತೆ,
ಜಂಬುಕ ಶಸ್ತ್ರದ ಫಳವ ನುಂಗಿ ಜಂಬೂದ್ವೀಪವೆಲ್ಲಾ
ಪ್ರಳಯವಾಯಿತ್ತು ಎಂದಡೆ, ಅದು ಚಂದವೇ ಜಾಂಬೇಶ್ವರಾ. ॥ ೩ ॥

೧೨

ಕುರುಡನ ಕೈಯ ಕೋಲು ದೃಢವೆಂದರಿವಂತೆ,
ನೆರೆ ಕುರಿತ ಮನವು ಜ್ಞಾನವ ಸ್ಥಿರಕರಿಸಿದಂತೆ,
ಅದ ಮರೆಯಾ, ಜಾಂಬೇಶ್ವರಾ. ॥ ೪ ॥

೧೩

ಕೈದು ಮೊನೆ ಏರುವದಕ್ಕೆ ಮೊದಲೇ ಕಟ್ಟಬಲ್ಲಡೆ
ಕೈದೇನ ಮಾಡುವುದು ?
ಹಾವು ಬಾಯಿ ಬಿಡುವುದಕ್ಕ ಮೊದಲೇ ಹಿಡಿದ ಮತ್ತೆ
ವಿಷವೇನ ಮಾಡುವುದು ?
ಮನ ವಿಕಾರಿಸುವುದಕ್ಕೆ ಮೊದಲೇ ಮಹದಲ್ಲಿ ನಿಂದ ಮತ್ತೆ
ಇಂದ್ರಿಯಂಗಳೇನ ಮಾಡಲಾಪವು, ಜಾಂಬೇಶ್ವರಾ ? ॥ ೫ ॥

೧೪

ಗೋಷ್ಠಿಯನೊಡ್ಡಿ ಆಡುವಲ್ಲಿ ಗೊತ್ತ ಮೀರಿದಡೆ,
ಮತ್ತೆ ಆಟವ ಕೊಡೆನೆಂಬವರಂತೆ,
ದೃಷ್ಟದಲ್ಲಿ ಕೊಟ್ಟ ಲಿಂಗವ ಮನ ಮೆಚ್ಚಿ, ಮನ ಘನದಲ್ಲಿ ಮೆಚ್ಚಿ,
ಆ ಘನ ನಾ ನೀನೆನಲಿಲ್ಲದ ಮತ್ತೆ, ತಾನು ತಾನೇ, ಜಾಂಬೇಶ್ವರಾ. ॥ ೬ ॥

೧೫

ತೊಳೆದಡೆ ಮಡಿ, ಮಾಸಿದಡೆ ಮೈಲಿಗೆ.
ಅರಿದಡೆ ತಾನು, ಮರದಡೆ ಜಗದೊಳಗೆಂಬುದನರಿ.
ಹಿಡಿದು ಬಿಟ್ಟೊಡನೆ ಕೈಮೀರಿದಡೆ,
ಮತ್ತೆ ಮರುಗಿದಡಿಲ್ಲ, ಜಾಂಬೇಶ್ವರಾ. ॥ ೭ ॥

೧೬

ಬರೆದು ಮತ್ತೆ ತೊಡೆದಡೆ ಅಲೇಖ ಶುದ್ಧವಲ್ಲ ಎಂದೆ.
ಹಿರಿದು ಮತ್ತೆ ಮರೆದಡೆ ಆ ಅರಿವಿಂಗೆ ಭಂಗವೆಂದೆ.
ಸತ್ತ ಮತ್ತೆ ಸಮುದ್ರವೂ ಸರಿ, ಒಕ್ಕುಡುತೆಯುದಕವೂ ಸರಿ, ಜಾಂಬೇಶ್ವರಾ. ॥ ೮ ॥

೧೭

ಬೆಂಕಿಗೆ ಉರಿ ಮೊದಲೊ, ಹೊಗೆ ಮೊದಲೊ
ಎಂಬುದನರಿದಲ್ಲಿ ಇಷ್ಟಲಿಂಗಸಂಬಂಧಿ.
ಉಭಯವನಳಿದಲ್ಲಿ ಪ್ರಾಣಲಿಂಗಸಂಬಂಧಿ.
ಆ ಉಭಯ ನಷ್ಟವಾದಲ್ಲಿ, ಏನೂ ಎನಲಿಲ್ಲ, ಜಾಂಬೇಶ್ವರಾ. ॥ ೯ ॥

೧೮

ಮರಾಳಂಗೆ ಹಾಲು ನೀರನೆರೆದಲ್ಲಿ
ನೀರನುಳುಹಿ ಹಾಲ ಕೊಂಬ ಭೇದವ ನೋಡಾ !
ಎಣ್ಣೆ ನೀರ ಕೂಡಿದಲ್ಲಿ ಅದು ತನ್ನಿಂದಲೆ ಬೆಳೆದು,
ಚೆನ್ನಾಗಿ ಉರಿಯದ ಭೇದವ ನೋಡಾ!
ಮಣ್ಣು ಹೊನ್ನಿನಲ್ಲಿ ಬೆಳೆದು, ತನ್ನ ತಪ್ಪಿಸಿಕೊಂಡು,
ಹೊನ್ನು ಬೆಲೆಯಾದ ಭೇದವ ನೋಡಾ !
ತನ್ನೊಳಗೆ ತಾನಿದ್ದು ತನ್ನನರಿಯದೆ,
ತೊಳಲುವ ಬಿನ್ನಾಣವ ನೋಡಾ !
ಚೆನ್ನಾಗಿ ನುಡಿವ ಅಣ್ಣಗಳ ಬಾಗಿಲಲ್ಲಿ ನಿಂದು,
ನಿಜವುಳ್ಳ ಅಣ್ಣಗಳ ಬಾಗಿಲಲ್ಲಿ ನಿಂದು,
ಬಣ್ಣಗೆಟ್ಟವರ ಕಂಡು ಚುನ್ನವಾಡುತಿರ್ದ, ಜಾಂಬೇಶ್ವರಾ. ॥ ೧೦ ॥

■■

## ರೇಚದ ಬಂಕಣ್ಣಗಳ ವಚನ

೧೯

ಶರಣ ತನ್ನ ಪ್ರಾರಬ್ಧಕರ್ಮ ತೀರಿದ ವಿಸ್ತಾರವನರಿದು,
ಪ್ರಕಾಶಿಸುತ್ತಿದ್ದ ಕಾರಣ,
ಶ್ವಾನ ಜಂಗಮರೂಪೆನಬೇಕಾಯಿತ್ತು
ಗಜ ಮಲೆಯಿಂದ ಪುರದಲ್ಲಿಗೆ ಬಂದು, ಆ ಪುರದಲ್ಲಿ ಎಷ್ಟು ಸುಖವಾಗಿದ್ದರೂ
ಮಿಗೆಮಿಗೆ ತನ್ನ ಮತಿಯನೆ ನೆನೆವುತಿಪ್ಪುದು.
ಆ ಜಂಗಮ ಮೊದಲು ಪರಬ್ರಹ್ಮದಿಂದ ದೇಹವಿಡಿದನಾಗಿ,
ಆ ದೇಹದಲ್ಲಿ ಎಷ್ಟು ಸುಖವಾಗಿದ್ದರೆಯೂ
ಮಿಗೆಮಿಗೆ ಆ ಪರಬ್ರಹ್ಮವನೆ ನೆನೆವುತಿಹನು,
ಇದು ಕಾರಣ, ಶ್ವಾನ ಗಜ ಇವೆರಡೂ ಶರಣಂಗೆ
ಜಂಗಮಸ್ವರೂಪೆನಬೇಕಾಯಿತ್ತು,
ಮನವೆ ಮರ್ಕಟ, ಅರಿವೆ ಪಿ[ಪೀ]ಲಿಕ,
ಮಹಾಜ್ಞಾನವೆ ವಿಹಂಗ, ನಿತ್ಯ ಎಚ್ಚರವೆ ಕುಕ್ಕುಟ,
ತನ್ನ ತಾನರಿವುದೆ ಶ್ವಾನ, ತನ್ನ ಬುದ್ಧಿಯೆ ಗಜ.
ಇಂತೀ ಷಡ್ವಿಧವ ಬಲ್ಲಾತನೆ ಬ್ರಹ್ಮಜ್ಞಾನಿ.
ನಿಮ್ಮಾಣೆ, ನಿಮ್ಮ ಪ್ರಮಥರಾಣೆ,
ಗೊಹೇಶ್ವರಪ್ರಿಯ ಬಂಕಣ್ಣ ನಿಟ್ಟ ಮುಂಡಿಗೆಯನೆತ್ತುವರಿಲ್ಲ,
ಬಸವಪ್ರಿಯ ಮಹಾಪ್ರಭುವೆ. ॥ ೧ ॥

## ಲದ್ದೆಯ ಸೋಮಯ್ಯಗಳ ವಚನ

೨೦

ಆವ ಕಾಯಕವಾದಡೂ ಸ್ವಕಾಯಕವ ಮಾಡಿ
ಗುರು ಲಿಂಗ ಜಂಗಮದ ಮುಂದಿಟ್ಟು,
ಒಕ್ಕುದ ಹಾರೈಸಿ, ಮಿಕ್ಕುದ ಕೈಕೊಂಡು
ವ್ಯಾಧಿ ಬಂದಡೆ ನರಳು, ಬೇನೆ ಬಂದಡೆ ಒರಲು,
ಜೀವ ಹೋದಡೆ ಸಾಯಿ, ಇದಕ್ಕಾ ದೇವರ ಹಂಗೇಕೆ,
ಭಾಪು ಲದ್ದೆಯ ಸೋಮಾ ? ॥ ೧ ॥

## ವಚನಭಂಡಾರಿ ಶಾಂತರಸನ ವಚನ

೨೧

ಅಂಗ ಕೋಟೆ, ಭುಜ ಆಳುವೇರಿ, ತಲೆ ತೆನೆ, ಕಣ್ಣು ಅಂಬುಗಂಡಿ,
ಕಾದುವ ಅರಸು ಅಸುರಾಜ, ಕೂಟದ ಮನ್ನೆಯರು ಐದುಮಂದಿ.
ಎಂಟು ಘಟೆಯಾನೆ, ಪಂಚವಿಂಶತಿ ಕುದುರೆ,
ಆಳು ಪರಿವಾರ ಕರಣಂಗಳ ಮೊತ್ತ ಕೂಡಿ ಇರಿಯಿತ್ತು.
ಅರಿರಾಜ ತಮವಿರೋಧಿಯೊಡನೆ ಮುರಿದ,
ಅಸುರಾಜ, ಪಶುಪತಿಯ ಗೆದ್ದ.
ಎನಗಾಯಿತ್ತು ಹೇಳಾ, ಅಲೇಖನಾದ ಶೂನ್ಯ ಕಲ್ಲಿನೊಳಗಾದನೆ. ॥ ೧ ॥

೨೨

ಅಗೆಯದ ಬಾವಿಯಲ್ಲಿ ಸಲೆಯಿಲ್ಲದ ನೀರದೆ.
ಸೇದುವುದಕ್ಕೆ ಉರಿಯಿಲ್ಲದ ಕಣ್ಣೆ, ತುಂಬುವುದಕ್ಕೆ ಬಾಯಿಲ್ಲದ ಕುಂಭ,
ಸೇದುವಾತನ ಕಣ್ಣು ತಲೆಯ ಹಿಂದೆ ಅದೆ.
ಕಣ್ಣೆಯ ತೆಗೆವ ಕೈಕಾಲಿಲ್ಲದೆ ಬಾವಿಯ ತಡಿ ತಡವಾಯಿತ್ತು,
ಅಲೇಖನಾದ ಶೂನ್ಯ ಕಲ್ಲಿನೊಳಗಾದ ಕಾರಣ. ॥ ೨ ॥

೨೩

ಅಯ್ಯಾ ಗುರುವೆಂಬರ್ಚಕನು ತಂದು,
ಎನಗಿಷ್ಟವ ಕಟ್ಟಲಿಕೆ,

ಹಂಗನೂಲ ಕೊರಳಲ್ಲಿ ಹಾಕಿ ಕಟ್ಟಿಕೋ ಎಂದನು.
ಅದು ಎನಗೊಡವೆಯಲ್ಲವೆಂದು ಕಂಠವ ಹಿಡಿದು,
ಲಿಖಿತವ ಲೇಖನವ ಮಾಡಿ ಮಾಡಿ ದಣಿದು,
ಹಂಗನೂಲ ಹರಿದು ಹಾಕಿದೆನು.
ಇಷ್ಟವನಿಲ್ಲಿಯೇ ಇಟ್ಟೆನು.
ಅಯ್ಯಾ ನಾ ಹಿಡಿದ ನೀಲಕಂಠನು
ಶಕ್ತಿಸಮೇತವ ಬಿಟ್ಟನು,
ಕಲ್ಯಾಣ ಹಾಳಾಯಿತ್ತು, ಭಂಡಾರ ಸೂರೆಹೋಯಿತ್ತು,
ನಿರ್ವಚನವಾಯಿತ್ತು.
ಶಾಂತ ಸಂತೋಷಿಯಾದ, ಅರಸರು ನಿರ್ಮಾಲ್ಯಕ್ಕೊಳಗಾದರು.
ಅಲೇಖ ನಾಶವಾಯಿತ್ತು, ಪತ್ರ ಹರಿಯಿತ್ತು
ನಾದ ಶೂನ್ಯವಾಯಿತ್ತು
ಒಡೆಯ ಕಲ್ಲಾದ ಕಾರಣ, ಎನ್ನೈವರು ಸ್ತ್ರೀಯರು
ಉಳಲಾಟಗೊಂಡೇಳಲಾರದೆ ಹೋದರು ಕಾಣಾ, ಕಲ್ಲಿನಾಥಾ. ॥ ೩ ॥

೨೪

ಅಲ್ಲಿ ಇಲ್ಲಿ ಎಂಬುದಕ್ಕೆ ಎಲ್ಲಿಯೂ ನೀನೆ.
ಬಳ್ಳಿ ಚಿಗಿತು ಮರನ ನೆಮ್ಮಿ ಎಲ್ಲವ ಮುಸುಕಿದಂತೆ,
ಮೂಲದ ಇರವನರಿತು, ಸಲಹಿದಡೆಲ್ಲಕ್ಕೂ ಕಳೆ ಬಂದು ಬುಡವಾದಡೆ,
ಆ ಬಳ್ಳಿಯ ಕೊಯಿದಡೆ, ಎಲ್ಲವೂ ಒಣಗುವಂತೆ ನಿನ್ನ ಕಳೆ.
ಅನ್ಯಭಿನ್ನವಿಲ್ಲದೆ ಕಾಮ್ಯಾರ್ಥಕ್ಕೆ ಒಲವರವಾಗಿ ಎಲ್ಲಿಯೂ ನೀನೆ.
ಅಲೇಖನಾದ ಶೂನ್ಯ ಕಲ್ಲಿಂದ ತೊಲಗು,
ನಿನ್ನಯ ಇರವಿನ ಪರಿಯ ತೋರಾ. ॥ ೪ ॥

೨೫

ಅಹಿ ಆಹಾರವ ಕೊಂಬಲ್ಲಿ, ತನ್ನಯ ನಂಜ ಮರೆಯಿಸಿಕೊಂಬುದಲ್ಲದೆ,
ತಾನೊಂದರಲ್ಲಿ ಉದಯಿಸಿಹ ಬಿಂದುವಿನಲ್ಲಿ,
ಭಕ್ತರ ಮಂದಿರದಲ್ಲಿ ಒಪ್ಪಿಹ, ಗುರುಜಂಗಮದಲ್ಲಿ ಇರವಿನ ಪರಿ.
ಹರಿಹರಿ ಕೂಡಿದಂತೆ ಅಲೇಖನಾದ ಶೂನ್ಯ ಕಲ್ಲಿಂದ ಬಲ್ಲಿದನಾದೆ ಬಾ.॥ ೫ ॥

೨೬

ಆಡಿನ ಕೋಡಿನ ತುದಿಯ ಇಂಬಿನಲ್ಲಿ
ಮೂರು ತೋಳನ ಅಗಡ ಘನವಾಯಿತ್ತು.
ಬೇಟೆಯ ಬೆಂಬಳಿಗೆ ಸಿಕ್ಕವು, ನಾಯ ತೋಟಿಗೆ ತೊಡಕವು,
ಹಿಂಡಿನ ಗೊಂದಳದಲ್ಲಿ ಹೊಕ್ಕು ಆಡ ತಿಂದಹವು.

ಆಡ ಕೂಡುವ ಕಳನಿಲ್ಲ, ತೋಳನ ಬಾಧೆ ಬಿಡದು.
ಕೋಳುಹೋಗದ ಮುನ್ನವೆ ಅರಿ,
ಅಲೇಖನಾದ ಶೂನ್ಯ ಕಲ್ಲಿನೊಳಗಾದವನ. ॥ ೬ ॥

೨೭

ಆತ್ಮ ನಿಸ್ಸಂಗತ್ವದ ಇರವು :
ಪೃಥ್ವಿ ಅಪ್ಪು ತೇಜ ವಾಯು ಆಕಾಶವೆಂಬ
ಪಂಚತತ್ವದ ಮಧ್ಯದಲ್ಲಿ ಪುದಿದಿಪ್ಪ ಆತ್ಮನ ಒಡೆಯನನರಿವಾಗ,
ಪೃಥ್ವಿ ಪೃಥ್ವಿಯ ಕೂಡಿತ್ತು, ಅಪ್ಪು ಅಪ್ಪುವ ಕೂಡಿತ್ತು.
ತೇಜ ತೇಜವ ಕೂಡಿತ್ತು, ವಾಯು ವಾಯುವ ಕೂಡಿತ್ತು.
ಆಕಾಶ ಆಕಾಶವ ಕೂಡಿತ್ತು.
ಆ ಪಂಚತತ್ವವು ಒಂದರೊಳಗೊಂದು ಕೂಡಿದಲ್ಲಿ,
ಆತ್ಮನ ಪಾಪ ಪುಣ್ಯವಾವುದು ?
ಬೇರೊಂದು ಠಾವಿನಲ್ಲಿ ನಿಂದು ಅರಿವ ತೆರನಾವುದು ?
ಅದರ ಕುರುಹು ಕೇಳಿಹರೆಂದು
ಅಲೇಖನಾದ ಶೂನ್ಯ ಕಲ್ಲಿನ ಮರೆಯಾದೆಯಲ್ಲಾ ! ॥ ೭ ॥

೨೮

ಆದಿ ಅನಾದಿಯ ಮಧ್ಯದ ಭೂಮಿಯಲೊಂದು ಸಾಗರ ಹುಟ್ಟಿತ್ತು.
ಸಾಗರದ ನಡುವೆ ಒಂದು ಸಲಿಲ, ಸಲಿಲದ ಮೇಲೊಂದು ನಿಳಯ.
ನಿಳಯದೊಳಗೊಬ್ಬ ಸೂಳೆ.
ಯೋನಿಯೆಂಟು, ಮೊಲೆ ಮೂರು, ತಲೆಯಾರು, ಕೈ ಐದು, ಕಾಲೊಂದು.
ಇಂತೀ ನಟನೆಯಲ್ಲಿ ಆಡುತ್ತಿರಲಾಗಿ, ನೋಡಿದವ ಮನಸೋತು
ಕೂಡಿಹೆನೆಂದಡೆ,
ಕೂಡಬಾರದು ಯೋನಿಯೆಂಟಾದವಳ.
ಹಿಡಿವಡೆ ಮೊಲೆ ಕೂರಲಗು, ಚುಂಬನಕ್ಕೆ ಅಧರ ನಂಜು, ತೆಕ್ಕೆಗೆ ಅಳವಲ್ಲ.
ಇದು ಎನಗೆ ಸುಖಕ್ಕಚ್ಚುಗವೆಂದು ಬೆಚ್ಚಿದೆ.
ಇವಳ ಕೂಟ ಒಚ್ಚತ ಬೇಡ,
ಅಲೇಖನಾದ ಶೂನ್ಯ ಕಲ್ಲಿನ ಮರೆಯಾದವನೆ. ॥ ೮ ॥

೨೯

ಆರೈದು ಕಾಣುವುದಕ್ಕೆ ಸ್ಥಾಣು ಕರ್ತನಲ್ಲ.
ನೋಯಿಸದೆ ಕಾಬುದಕ್ಕೆ ಆರಡಿಯಲ್ಲ.
ನೋಯದೆ ಕೊಂಬುದಕ್ಕೆ ಪಿಪೀಲಿಕನಲ್ಲ, ಬಂಧಿಸಿ ಕಾಬುದಕ್ಕೆ ಚಂದನ ಶಿಲೆಯಲ್ಲ.
ಭಕ್ತಿಯೆಂಬ ಅಂಗದ ಸತಿ ನಾನಾಗಿ,

ವಿರಕ್ತಿಯೆಂಬ ಘನಲಿಂಗದ ಕೂಟಪುರುಷ ನೀನಾಗಿ,
ಇಂತೀ ಉಭಯದಿಂದ ಒದಗಿದ ರೂಪು ನಾಮವ ಏನೆಂಬೆ ?
ಅಲೇಖನಾದ ಶೂನ್ಯ ಕಲ್ಲಿನ ಹಂಗು ಬಿಡು, ಬೇಡಿಕೊಂಬೆ. ॥ ೯ ॥

೩೦

ಇನ್ನೆಲ್ಲರ ಕೇಳುವುದಕ್ಕೆ ಕುಲ ಛಲ ಮಲ ದೇಹಿಕರು ಬಿಡರೆನ್ನ.
ಎದೆಯಲ್ಲಿ ಕಟ್ಟಿದ ಎಳೆಯಾಸೆ ಬಿಡದು.
ಕೊಡುವ ಕೊಂಬಲ್ಲಿ ದ್ವಿಜರ ಒಡಗೂಡುವುದು ಬಿಡದು.
ಎನ್ನೊಡೆಯ ಬಸವಣ್ಣ ಹೇಳಿದ ಮಾತಿಂಗೆ ಅಡಿಯಿಡಲಮ್ಮದೆ ಕಟ್ಟಿದೆ.
ಹಿಡಿದು ಅರ್ಚಿಸುವುದಕ್ಕೆ ಶಿರದ ಕಡೆಯ ಕಾಣೆ.
ಮಜ್ಜನ ಮಂಡೆಗೆಂದರಿಯೆ, ಪಾದಕ್ಕೆಂದರಿಯೆ.
ಕುಸುಮವನಿಕ್ಕುವುದಕ್ಕೆ ಸಸಿಯಾದೆ ಮಕುಟದಲ್ಲಿ.
ಪಾದಕ್ಕೆ ಮದನ ಪಿತನ ಅಕ್ಷಿಯಾದೆ ಉಂಗುಷ್ಠದಲ್ಲಿ.
ಊಟಕ್ಕೆ ಬಾಯ ಕಾಣೆ, ಕೂಟಕ್ಕೆ ಅವಯವಂಗಳಿಲ್ಲ.
ಮಾತಿಗೆ ಆತ್ಮನ ಕಾಣೆ.
ಇದೇತರ ಮುರಿ ? ಪಾಷಾಣದಂತಿದೆ ! ಇದರಾಟವೆನಗೆ ಕಾಟವಾಗಿದೆ !
ಅಲೇಖನಾದ ಶೂನ್ಯ ಕಲ್ಲಾದ ಭೇದವ ಮೆಲ್ಲಗೆ ಎನಗೆ ಹೇಳು. ॥ ೧೦ ॥

೩೧

ಉಭಯ ಭಕ್ತ ಜಂಗಮದಿರವು :
ಹಾಲು ಹುಳಿಯಂತೆ, ಸತಿ ಪುರುಷನಂತೆ, ಕೀಲೋತ್ಪನ್ನದಂತೆ,
ಕುಸುಮ ಗಂಧದಂತೆ, ಘಟ ಪ್ರಾಣದಂತೆ,
ಒಂದನೊಂದು ಮೀರಿ ಹಿಂಗುವ ಕಾವಿಲ್ಲ.
ಇದರ ಸಂಗವಾವುದು ಹೇಳಾ,
ಅಲೇಖನಾದ ಶೂನ್ಯ ಬಹುಶಿಲೆಯ ನೆಲೆಯ ಬಿಟ್ಟೆಯಲ್ಲ. ॥ ೧೧ ॥

೩೨

ಊರ್ಧ್ವ ಭೂಮಿಯ ವಿರಾಗದಲ್ಲಿ ಸಪ್ತಸಮುದ್ರಕ್ಕೆ ಭೂಮಿ ಒಂದೆ.
ಭೂಮಿಯ ಮಧ್ಯದಲ್ಲಿ ಒಂದು ವಟವೃಕ್ಷ ಹುಟ್ಟಿತ್ತು.
ಕೊಂಬು ಮೂರು, ಅದರ ಬೆಂಬಳಿಯಲ್ಲಿ ಹುಟ್ಟಿದ ಕವಲಿಗೆ ಲೆಕ್ಕವಿಲ್ಲ.
ಆ ಆಲದ ಹಣ್ಣಿಂಗೆ ಮೋನದ ಹಕ್ಕಿ ಈರೇಳುಕೋಟಿ ಕೂಡಿ,
ಎಂಬತ್ತುನಾಲ್ಕು ಲಕ್ಷ ಬೇಟೆಕಾರರ ಬಲೆಯೊಳಗಾಯಿತ್ತು.
ಇದರ ಒಲವರವ ಕೇಳಿಹರೆಂದು,
ಅಲೇಖಮಯನಾದ ಶೂನ್ಯ ಕಲ್ಲಿನ ನಿಳಯದೊಳಗಾದ. ॥ ೧೨ ॥

೩೩

ಊರ ಹೊರಗೊಂದು ಗಿಡುಮರ.
ಅದರೊಳಗೆ ಅಡಗಿಪ್ಪರು ಐವರು ಕಳ್ಳರು :
ಒಬ್ಬ ನರಿ ಬಲೆಯವ, ಒಬ್ಬ ಹುಲಿ ಬಲೆಯವ,
ಒಬ್ಬ ಉಡುಬೇಂಟೆಕಾರ, ಒಬ್ಬ ಬಳ್ಳುವಿನ ಕಾಲುಕಣ್ಣಿಯ ಪುಳಿಂದ,
ಒಬ್ಬ ನಾಲ್ವರ ಬೇಂಟೆಯ ನೋಡುವ ಉಡಿಗಳ್ಳ.
ಬೇಟೆ ಬೆಂಬಳಿಯಾದುದಿಲ್ಲ.
ಬೇಟೆಗೆ ಹೋದವರೆಲ್ಲರೂ ಚಾಟಕ್ಕೆ ಒಳಗಾದರು.
ಇದರಾಟವ ಕೇಳಿಹರೆಂದಂಜಿ,
ಅಲೇಖನಾದ ಶೂನ್ಯ ಕಲ್ಲಿನ ನೆಲೆಮನೆಯ ಹೊಕ್ಕೆಯಲ್ಲ. ॥ ೧೩ ॥

೩೪

ಊರಳಗಣ ಅರಳೆಯ ಮರದಲ್ಲಿ,
ಮೂರುವರ್ಣದ ಗಿಣಿ ಮರಿಯನಿಕ್ಕಿತ್ತು.
ರಟ್ಟೆ ಬಲಿದು ಹಾರಲಾರದು, ಕೊಕ್ಕು ಬಲಿದು ಕೆಂಪಾಗದು.
ಬಾಯಿ ಬಲಿದು ಹಣ್ಣ ಮೆಲಲಾರದು, ಅದ ಓಡಿಸುವರಿಗೆ ಅಸಾಧ್ಯ.
ಅಲೇಖನಾದ ಶೂನ್ಯ ಇದರ ಹೊಲಬ ಕೇಳಿಹರೆಂದು ಕಲ್ಲಿನೊಳಗಾದ. ॥೧೪॥

೩೫

ಎಚ್ಚ ಗುರಿಯ ಮನ ನಿಶ್ಚೈಸಿದಂತೆ,
ಇಷ್ಟ, ಮಚ್ಚಿದ ಲಲನೆಯ ಬೆಚ್ಚಂತಿಪ್ಪ ಚಿತ್ತದಂತೆ,
ಕಡೆಯಾಣೆಯ ಒಡಗೂಡಿ ಲೇಪಿಸಿದಂತೆ,
ಇಷ್ಟದ ಮರೆಯಲ್ಲಿ ತೋರುವ ನಿಶ್ಚಿಂತನಂಗದ ಕೂಟ.
ಭಕ್ತಿಯ ಮೂಲ, ಸತ್ಯದ ಸುಧೆ, ವಿರಕ್ತಿಯ ಬೆಳೆ.
ಇಷ್ಟನರಿತಡೆ ಉಭಯದಿರವು ತನು ಮನ ವಸ್ತು ಲೇಪ.
ಇದರ ಅಸುವ ಹೇಳಾ, ಅಲೇಖನಾದ ಶೂನ್ಯ ಕಲ್ಲಿನ ಮರೆಯವನೆ. ॥ ೧೫ ॥

೩೬

ಎತ್ತಬಾರದ ಕಲ್ಲು ನೀರಿನ ಮೇಲೆ ತೆಪ್ಪದಂತೆ ಹೋದಾಗ
ಮೇಲೆ ಕುಳಿತು ಒತ್ತುವರ ನುಂಗಿತ್ತು.
ನುಂಗಿದವರು ಅಲ್ಲಿದ್ದಂತೆ ಹೊಳೆಯ ನೀರ ತಪ್ಪಲಿಕ್ಕೆ ಕುಡಿದು,
ಆ ತೆಪ್ಪ ಪೃಥ್ವಿಯಲ್ಲಿ ನಿಂದಿತ್ತು.
ಈ ಗುಣಭಿತ್ತಿಯ ಕೇಳಿಹರೆಂದು,
ಅಲೇಖನಾದ ಶೂನ್ಯ ಶಿಲೆಯ ಮರೆಯಾದ. ॥ ೧೬ ॥

೩೭

ಒಡೆಯನಿಲ್ಲದ ಬಂಟ ತಲೆಯ ಕೊಯಿತಂದ.
ಚಣ್ಣ ಬಾಯ ಹೊ[illegible]ಗೆ ಇರಿಸಿ, ಇದು ತಲೆಯಲ್ಲಾ ಎಂಬುದ ಕೇಳಿ,
ಅಂಗವ ಹಾಕಿದ ಕಣ್ಣಿನ [illegible]ಂಬಳಿಯಲ್ಲಿ,
ಇದ ಎಲ್ಲರಿಗೂ ಹೇಳಲಾದೀ[illegible]ಎಂದು,
ಅಲೇಖನಾದ ಶೂನ್ಯ ಕಲ್ಲಿನ ಮರೆಯಾದ. ॥ ೧೭ ॥

೩೮

ಓ ಎಂದಲ್ಲಿ ವಸ್ತು, ಕಾ ಎಂದಲ್ಲಿ ಶಕ್ತಿ ಕೂಡಿ ಪ್ರಣವವಾಯಿತ್ತು.
ಮಾತಿನ ಸೂತಕದಿಂದ ವೇದವಾಯಿತ್ತು, ನೀತಿಯ ಹೇಳುವಲ್ಲಿ ಶಾಸ್ತ್ರವಾಯಿತ್ತು,
ಸರ್ವರ ಕೂಟದ ಕೂಗಿನಿಂದ ಪುರಾಣವಾಯಿತ್ತು.
ಇಂತಿವರ ಗೋಷ್ಠಿಯ ಹುದುಗಿಗಾರದೆ,
ಅಲೇಖನಾದ ಶೂನ್ಯ ಕಲ್ಲಿನೊಳಗಾದ. ॥ ೧೮ ॥

೩೯

ಕಂಬಳಿಯ ಕೌಪ ಕಟ್ಟಿದ ಮತ್ತೆ,
ಅವರವರ ಬೆಂಬಳಿಯಲ್ಲಿ ಕಂಬಳಿಯ ಹೊದ್ದಿಹೆನೆಂಬ ಆಸೆಯೇಕೆ ?
ಹೊದೆಯಲಿಲ್ಲದ ಕಂಬಳಿಯ ಉಡಿಗೆ ಕಟ್ಟಿದ ಮತ್ತೆ,
ಈ ಕೈಯ ಗಡಿಗೆಯಣ್ಣಗಳ ಒಡಗೂಡಲೇಕೆ ?
ಅವರ ತೊಡೆಯ ಸಂದಿಯಲ್ಲಿ ಕುಳಿತು, ಅವರುವ ಮಾತಿಗೆ ಅಡುಮೆಯಾಗಲೇಕೆ ?
ಇಂತಿವನರಿದಹರೆಂದಡಗಿದ, ಅಲೇಖನಾದ ಶೂನ್ಯ ಕಲ್ಲಿನ ಮರೆಯಾದ ॥ ೧೯ ॥

೪೦

ಕಲ್ಲಿನ ಹೋಳ ಬೆಲ್ಲವೆಂದು ಮಕ್ಕಳ ಕೈಯಲ್ಲಿ ಕೊಟ್ಟಡೆ,
ಹಲ್ಲಿನಲ್ಲಿ ಕಡಿದು, ನಾಲಗೆಯಲ್ಲಿ ನಂಜಿ, ಬೆಲ್ಲವಲ್ಲಾ ಎಂದು ಹಾಕಿ
ಮನೆಯವರೆಲ್ಲರ ಕಾಡುವಂತೆ,
ನಾನರಿಯದೆ ಕುರುಹ ಹಿಡಿದು, ಅದು ಎನ್ನ ಮರವೆಯ ಮನಕ್ಕೆ ತೆರಹಾಗದು.
ನಾನರಿವಡೆ ಎನ್ನ ಒಡಗೂಡಿದ್ದ ತುಡುಗುಣಿ ಬೆನ್ನಬಿಡದು.
ಒಡೆಯ ಸತುವಿಲ್ಲದೆ ಬಡವನ ಬಂಟನಾದ ಮತ್ತೆ
ಬಾಯ ಹೊಡೆಯಿಸಿಕೊಂಬುದಕ್ಕೆ ಅಂಜಲೇಕೆ ?
ಬಿಡು ಬಡವೊಡೆಯನ, ಬಿಡದಿದ್ದಡೆ ಕಲ್ಲೆದೆಯಾಗು.
ಇವರೆಲ್ಲರ ವಿಧಿ ಎನಗಾಯಿತ್ತು, ಕೈಯಲ್ಲಿದ್ದ ಕಠಿಣವ ನಂಬಿ.
ಇದರ ಬಲ್ಲತನವ ಹೇಳಾ, ಅಲೇಖನಾದ ಶೂನ್ಯ ಕಲ್ಲಿನ ಮರೆಯಾದವನೆ.
॥ ೨೦ ॥

೪೧

ಕಾಯದ ಕರಸ್ಥಲದಲ್ಲಿ ಇಷ್ಟಲಿಂಗವನರಿವುದಕ್ಕೆ
ಬಾಹ್ಯೇಂದ್ರಿಯ ನಷ್ಟವಾಗಿರಬೇಕು.
ಪ್ರಾಣನ ಕರಸ್ಥಲದಲ್ಲಿ ಪ್ರಾಣಲಿಂಗವನರಿವುದಕ್ಕೆ
ಅಂತರಿಂದ್ರಿಯವರತು ಮಂತ್ರಸಾಹಿತ್ಯವಾಗಿರಬೇಕು.
ಭಾವದ ಕರಸ್ಥಲದಲ್ಲಿ ಭಾವಲಿಂಗವನರಿವುದಕ್ಕೆ
ಭಾವದ ಭ್ರಮೆಯಳಿದು ನಿಜ ನೆಲೆಗೊಳ್ಳಬೇಕು.
ಕಾಯ ತನ್ನಂತೆ ಹರಿದು, ಜೀವ ತನ್ನಂತೆ ನೆನೆದು,
ಭಾವ ತನ್ನಂತೆ ಬೆರಸಿದಡೆ, ಸೂಳೆಯ ಕೂಟದಂತೆ ಕಾಣಾ,
ಅಲೇಖನಾದ ಶೂನ್ಯ ಕಲ್ಲಿನ ಮರೆಯವನೆ. ॥ ೨೧ ॥

೪೨

ಕಾಲಲ್ಲಿ ಕಟ್ಟಿದ ಸಡ್ಡೆಯ ಕೀಳುವರಿಲ್ಲ,
ಕೈಯಲ್ಲಿ ಹಿಡಿದ ಮೊರನ ಬೇಡಾ ಎಂಬವರಿಲ್ಲ,
ತಲೆಯಲ್ಲಿ ಹೊತ್ತ ಕೊಂಗವ ಇಳುಹುವರಿಲ್ಲ,
ಸಡ್ಡೆಗೆ ಮೂರು ಕವೆ. ಒಂದೆ ಚಿತ್ತವಟ್ಟ.
ಮೊರಕೆ ಮೂರು ಗೋಟು, ಮಾಡುವಾಕೆ ಒಬ್ಬಳೆ.
ಕೊಂಗಕ್ಕೆ ಎರಡು ಗೋಟು, ತೂರುವರು ಮೂವರು.
ರಾಶಿವೊಂದೆ, ಕೊಳಗ ಎರಡು, ಅಳೆವರು ಲೆಕ್ಕಕ್ಕೆ ಕಡೆಯಿಲ್ಲ,
ಇದ ಕೇಳಿಹರೆಂದಂಜಿ, ಅಲೇಖನಾದ ಶೂನ್ಯ ಕಲ್ಲಿನೊಳಹೊಕ್ಕ. ॥ ೨೨ ॥

೪೩

ಕಾಳಮೇಘಮಂದಿರದ ಜಾಳಾಂಧರದ ಮನೆಯಲ್ಲಿ
ಒಬ್ಬ ಸೂಳೆಯ ಬಾಗಿಲಲ್ಲಿ ಎಂಬತ್ತನಾಲ್ಕು ಲಕ್ಷ ಮಿಂಡಗಾರರು.
ಅವಳ ಸಂಗದಲ್ಲಿ ಇರಲಮ್ಮರು, ಅವಳು ತಾವೇ ಬರಲೆಂದು ಕರೆಯದಿಹಳು.
ಅವಳಿಗೆ ಯೋನಿ ಹಿಂದು, ಅಂಡ ಮುಂದು,
ಕಣ್ಣು ಅಂಗಾಲಿನಲ್ಲಿ, ತಲೆ ಮುಂಗಾಲಿನಲ್ಲಿ,
ಕಿವಿ ಭುಜದಲ್ಲಿ, ಕೈ ಮಂಡೆಯ ಮೇಲೆ,
ಮೂಗು ಹಣೆಯಲ್ಲಿ, ಮೂಗಿನ ದ್ವಾರ ಉಂಗುಷ್ಠದಲ್ಲಿ,
ಬಸುರು ಬಾಯಲ್ಲಿ, ನಡೆವಳು ತಲೆ ಮುಂತಾಗಿ, ಕಾಲು ಮೇಲಾಗಿ.
ಅವಳ ಕೂಡುವ ಪರಿಯ ಹೇಳಾ,
ಅಲೇಖನಾದ ಶೂನ್ಯ ಗೆದ್ದೆಯಲ್ಲಾ, ಕಲ್ಲಿನ ಹೊಟ್ಟೆಯ ಮರೆಯಲ್ಲಿ. ॥ ೨೩ ॥

೪೪

ಕಾಳಾಡಿನ ಹಾಲ ಕಂಬಳಿಗುರಿ ಕುಡಿಯಿತ್ತು,
ಕುಡಿದು ಮೂರುಲೋಕವೆಲ್ಲವೂ

ಎನ್ನ ಕಂಬಳಿಯ ಗೊಪ್ಪೆಯಲ್ಲಿ ತುಂಬಿದೆನೆಂದು ಸಂಭ್ರಮ ಮಾಡುತ್ತಿದೆ.
ಅದರ ಸಂಗಸುಖವ ಹೇಳಾ, ಅಲೇಖನಾದ ಶೂನ್ಯ ಕಲ್ಲಿನ ಮರೆ ಬೇಡ ॥ ೨೪ ॥

೪೫

ಕುರುಹಿಂಗೆ ಆಚಾರದ ಪೂಜೆ.
ಅರಿವಿಂಗೆ ಸಕಲ ವರ್ಮ ಪ್ರಕೃತಿ ಪಂಚೇಂದ್ರಿಯದೊಳಗಾದ
ಸಂಚಿತಕರ್ಮಂಗಳ ಶಂಕೆಯ ಹರಿದು ಇಪ್ಪುದು, ತನುಭಕ್ತಿ,
ಮನ ಮಹದೊಡಗೂಡಿ ಇರು.
ಅಲೇಖನಾದ ಶೂನ್ಯ ಕಲ್ಲಿನೊಳಗೆ ಇದ್ದವನ ಮೆಲ್ಲನೆ ಅರಿ. ॥ ೨೫ ॥

೪೬

ಚೊಚ್ಚಿಲ ಕೂಸು ಹೆತ್ತತಾಯ ಮೊಲೆಯನುಂಬಾಗ,
ಕತ್ತೆಯ ಮರಿ ಕೊರಳ ಕಚ್ಚಿತ್ತು,
ಕತ್ತೆಯ ಮರಿಯ ಚೊಚ್ಚಿಲ ಕೂಸ, ಮೊಲೆಯ ತೊಟ್ಟು ನುಂಗಿತ್ತು,
ಮೊಲೆಯ ಹೊತ್ತಿದ್ದವಳ ಹೊಟ್ಟೆಯ ಸುಳಿ ನುಂಗಿತ್ತು,
ಈ ಬಟ್ಟೆಯ ಕೇಳಿಹರೆಂದಂಜಿ, ಅಲೇಖನಾದ ಶೂನ್ಯ ಕಲ್ಲಿನಾಥನಾದ. ॥೨೬॥

೪೭

ಟಪ್ಪಣವ ಬರೆದ ಚಿತ್ರಜ್ಞನು ಆ ಘಟಕ್ಕೆ ಅಸುವ ಆಶ್ರಯಿಸಬಲ್ಲನೆ ?
ಶಿಲ್ಪನ ಶಿಲೆ ಲೋಹ ಮೊದಲಾಗಿ ಕುರುಹುಗೊಂಡವ
ದೇವತಾಕಳೆಯ ತುಂಬುವನೆ ?
ಶಿಲೆ ಲೋಹ ಲಕ್ಷಣವ ನೆಲೆ ಶುದ್ಧವ ಮಾಡುವನಲ್ಲದೆ.
ತಾ ಕಟ್ಟುವ ಇಷ್ಟಕ್ಕೆ ಕಟ್ಟಿಲ್ಲ, ಮೇಲೆ ರೊಕ್ಕವ ತಾಯೆಂಬವಳಂತೆ
ಕಟ್ಟಿಹೋದ ಮನವ ಇಷ್ಟದಲ್ಲಿ ನೆಮ್ಮಿಸದೆ.
ಇನ್ನಾರ ಕೇಳುವೆ ? ನೀ ಅಲೇಖಮಯ ಶೂನ್ಯ ಕಲ್ಲಿನ ಮರೆಯಾದೆ. ॥ ೨೭ ॥

೪೮

ತುಂಬಿದ ನಾಳಿ ಬಾಯ ಹಂಗಾದಂತೆ, ಬಾಯ ಬೆಣ್ಣೆಯ ಹಂಗಿಗನಾಗಿ,
ನಳಿಗೆ ಬಾಯಿ ಬೆಣ್ಣೆಯೆರೆವಳ ಹಂಗು.
ಮಂಡೆಯ ಶೂಲೆ ಇನ್ನೆಂದಿಗೆ ಹರಿಗು ?
ಈ ಅಭಿಸಂಧಿಯ ಹೇಳು, ಅಲೇಖನಾದ ಶೂನ್ಯ ಕಲ್ಲಿನ ಮರೆ ಬೇಡ. ॥ ೨೮ ॥

೪೯

ತೆರೆಯ ಮರೆಯ ಬಹು ರೂಪದಂತೆ, ಸೀರೆಯ ಮರೆಯ ಉಪಸ್ಥಳದಂತೆ,
ಆ ಪೂರ್ವ ಕಟ್ಟಿದ ಮರೆಯ ಬಿಡುವನ್ನಕ್ಕ ಸೈರಿಸಲಾರದವನಂತೆ ಎನ್ನ ತಲ್ಲಣ.
ನಿನ್ನಯ ಕಲ್ಲಿನ ಮರೆಯ ನನ್ನಿಯ ರೂಪ ತೋರು.

ಎನ್ನಯ ಕಲ್ಲೆದೆಯ ಬಿಡಿಸು, ಮನೋವಲ್ಲಭ, ಅಲೇಖನಾದ ಶೂನ್ಯ,
ಉರಿಗಲ್ಲಿನ ಖುಲ್ಲತನವ ಬಿಡು, ಬೇಡಿಕೊಂಬೆ ನಿನ್ನನು. ॥ ೨೯ ॥

೩೦

ಧ್ಯಾನವ ಮಾಡಿ ಕಾಬಲ್ಲಿ ಚಿತ್ತಪ್ರಕೃತಿಯ ಗೊತ್ತು
ಕುರುಹುವಿಡಿದು ಕಂಡೆಹೆನೆಂದಡೆ, ಅದು ಶಿಲೆ, ಉಳಿಯ ಹಂಗು,
ಕೊಟ್ಟವನ ಹಿಡಿದಿಹೆನೆಂದಡೆ, ಗುತ್ತಗೆಯ ಕೇಣಿಕಾರ,
ಮಾಡಿ ನೀಡಿ ಕಂಡೆಹೆನೆಂದಡೆ, ಎನ್ನ ಮನೆಗೆ ಬಂದವರೆಲ್ಲರು,
ಉಂಡು ಉಟ್ಟು ಎನ್ನ ಹಂಗಿಗರು.
ಆಗರಗಳ್ಳನ ಹಾದರಿಗ ಕಂಡಂತೆ, ಇನ್ನಾರಿಗೆ ಹೇಳುವರು ಆ ಘನವ ?
ಅದು ಎನಗಾಯಿತ್ತು, ಅಲೇಖನಾದ ಶೂನ್ಯ ಕಲ್ಲಿನ ಮರೆಯಾದವನೆ. ॥ ೩೦ ॥

೩೧

ನನ್ನ ನಾನರಿವಡೆ, ಮೂರು ಹುಲಿಯ ಮಧ್ಯದಲ್ಲಿ ಸಿಲ್ಕಿದ ಶೃಂಗಿಯಂತೆ,
ಮೊತ್ತದ ಸಕಲೇಂದ್ರಿಯದ ಹುತ್ತದ ಸರ್ಪನಿದ್ದ ಠಾವಿಂಗೆ
ತಪ್ಪಿಹೋದ ಮೂಷಕನಂತೆ,
ಎತ್ತಲೆಂದರಿಯೆ. ಅರ್ತಿಯಿಂದ ಕಟ್ಟಿದೆ ಇಷ್ಟವ.
ವಸ್ತುವಿನ ಹುಟ್ಟು ಹೇಳಾ, ಅಲೇಖನಾದ ಶೂನ್ಯ ಕಲ್ಲಿನ ಮರೆ ಬೇಡ.
॥ ೩೧ ॥

೩೨

ನಾದ ಗುರುವಾದಲ್ಲಿ, ಬಿಂದು ಲಿಂಗವಾದಲ್ಲಿ,
ಕಳೆ ಜಂಗಮವಾದಲ್ಲಿ, ಉತ್ಪತ್ಯಕ್ಕೆ ಹೊರಗು.
ನಾದ ವಿಸರ್ಜನವಾದಲ್ಲಿ ಸ್ಥಿತಿಗೆ ಹೊರಗು.
ಬಿಂದು ವಿಸರ್ಜನವಾದಲ್ಲಿ ಪ್ರಳಯಕ್ಕೆ ಹೊರಗು.
ಸರ್ವಚೇತನಕ್ಕೆ ವಿಸರ್ಜನವಾದಲ್ಲಿ ಇಂತೀ ತ್ರಿವಿಧನಾಮ ನಷ್ಟ.
ಅರಿದು ಅರುಹಿಸಿಕೊಂಬ ಉಭಯಲೇಪ ಏನೂ ಎನಲಿಲ್ಲ.
ಅಲೇಖನಾದ ಶೂನ್ಯ ಕಲ್ಲಿನ ಮರೆ ಬೇಡ, ಇಲ್ಲಿಗೆ ಬಾರಯ್ಯಾ. ॥ ೩೧ ॥

೩೩

ನಾಮದ ರೂಪಿನಲ್ಲಿ ಅಡಗಿ ಹೊಯ್ದಡೆ ತೋರಿ,
ಮತ್ತಾ ಶೂನ್ಯನಾದದಲ್ಲಿ ಅಡಗುವ ತೆರ, ಶರೀರದ ಆತ್ಮನ ಭೇದ,
ಹೊಯ್ದಡೆಯ್ದಿ ಮತ್ತೆ ಪುದಿದುದ ಮುಟ್ಟಿ,
ಇಂತೀ ಶರೀರದ ಅನ್ವಯ ಸಂಚವ ಬಿಟ್ಟು,
ಕಾಬ ಆಗಾವುದು, ಬಿಡದಿದ್ದಡೆ ಚೇಗೆ ಯಾವುದು ?
ಈ ಕಡೆ ನಡು ಮೊದಲ ಕೇಳಿಹರೆಂದಡಗಿದೆಯಾ ?
ಅಲೇಖನಾದ ಶೂನ್ಯ ಕಲ್ಲಿನ ಮರೆಯಾದೆಯಲ್ಲಾ! ॥ ೩೩ ॥

೫೪

ನಿನ್ನನರಿವುದಕ್ಕೆ ಅಲ್ಲಿ ಇಲ್ಲಿ ಗೆಲ್ಲ ಸೋಲವೇಕೆ ?
ಎಲ್ಲರಲ್ಲಿ ಅಹುದು ಅಲ್ಲಾ ಎಂಬ ಕಲ್ಲೆದೆಯಾಗಿ ಹೋರಲೇಕೆ ?
ಅಮೃತವ ಕೊಂಡು ಸವಿವುಂಟೆ ಎಂದು ಎಲ್ಲರ ಕೇಳುವನಂತೆ,
ತಿಗರನೇರಿಸಿ ಕಲಿತನವ ಕೊಡೆಂಬವನಂತೆ,
ಅಮೃತ ಘಾಟಿಕೆಯಿದ್ದು, ಅಶನದ ಮುದ್ದೆಯ ಕೇಳಿ ಗಸಣಿಗೊಂಬವನಂತೆ,
ಈ ಹುಸುಕರಿಗೆ ಅಂಜಬೇಡ,
ಅಲೇಖನಾದ ಶೂನ್ಯ ಕಲ್ಲಿನ ಮನೆಯ ಬಿಟ್ಟು ನೆಲೆಗೊಳ್ಳೆನ್ನೊಳು, ಬೇಡ.
|| ೩೪ ||

೫೫

ನಿನ್ನ ಭೇದವ ನಿನ್ನನರಿವರಲ್ಲಿ ಮನಸಿಜನಿಂದ ಕಡೆಯೆ ?
ನಿನ್ನ ಭಾವ ಹಿರಣ್ಯನ ಪುತ್ರನ ಮಾರನ ಪಿತನ ಅವತಾರದ
ವಜ್ರದ ಕಂಬದಲ್ಲಿ ತೋರಿದ ಕುರುಹಿಂಗೆ ಕಡೆಯೆ ?
ಕಾರ್ಯಕ್ಕೆ ಮಾಡಿದ ಮರುಳಿನ ನಂಬುಗೆಯ ತೆರದಿಂದ ಕಡೆಯೆ ?
ಎನಗೆ ನೀ ಮನಸಿಜನಾಗು, ಮನದಲ್ಲಿ ಹೆರಹಿಂಗದಿರು.
ಅಲೇಖನಾದ ಶೂನ್ಯ ಶಿಲೆ ಮಂಥಣ ಬೇಡ, ಸಲಹೆನ್ನುವ. || ೩೫ ||

೫೬

ನಿನ್ನ ಸೋದಿಸುವಡೆ ಎನ್ನ ಕೈಯಲ್ಲಿ ಆಗದು.
ಎಳ್ಳಿನೊಳಗಣ ಎಣ್ಣೆಯಂತೆ, ಹಣ್ಣಿನೊಳಗಣ ರುಚಿಯಂತೆ,
ಹೂವಿನೊಳಗಣ ಸಂಜ್ಞೆಯಂತೆ, ತರುಧರ ಅಗ್ನಿಯ ಕೂಟದಂತೆ,
ಕಂಡಡೆ ಕರಗಿ, ಕಾಣದಡೆ ಬಿರುಬಾಗಿ, ಇವರಂಗವ ಕಂಡು ಅಡಗಿದೆಯೆ ?
ನಿನ್ನ ಸಂಗವನರಿವುದಕ್ಕೆ ಎನ್ನಂಗದ ಇರವಾವುದು ?
ತನುವ ದಂಡಿಸುವುದಕ್ಕೆ ನೀ ಸರ್ವಮಯ, ನಿನ್ನ ಖಂಡಿಸುವದಕ್ಕೆ ನೀ ಪರಿಪೂರ್ಣ.
ಎನ್ನ ಮರೆದು, ನಿನ್ನ ಕಾಬುದಕ್ಕೆ ಒಳಗಿಲ್ಲ.
ನಿನ್ನ ಕಾಬುದಕ್ಕೆ ನೀ ಅಲೇಖಮಯ ಅನಂತಶೂನ್ಯ,
ಕಲ್ಲಿನ ಮರೆಯಾದೆಯಲ್ಲಾ, ಎಲ್ಲರಿಗೆ ಅಂಜಿ. || ೩೬ ||

೫೭

ಪಾಡಿನ ಫಲವನಡೆದಡೆ ಫಳ ರಸವಲ್ಲದೆ ಹೂ ಮಿಡಿಯಲ್ಲಿ ಅಡೆದವರುಂಟೆ?
ತನುರಸ ಆತ್ಮನ ಅಡಿಯಲ್ಲಿ ಅಡಗುವನ
ಬಿಡುಮುಡಿಯ ಲತೆಯ ಸಾಗಿಸಿದ ಶಾಖೆಯಂತೆ, ಘಟದ ಅಸುವಿನ ಭೇದ.
ಇದರ ಎಸಕವ ಕೇಳಿಹರೆಂದು,
ಅಲೇಖನಾದ ಶೂನ್ಯ ಕಲ್ಲಿನ ಮೆರೆಯಾದೆಯಾ ? || ೩೭ ||

೫೮

ಪುಡಿಯ ದ್ರವಹೀನವಾಗಿ ಕೂಡಿ ಕುಂಭವನೊದಗಿಸುವವನಂತೆ,
ಅರಿವುಹೀನವಾಗಿ ಕುರುಹ ಎಡೆಬಿಡುವಿಲ್ಲದೆ ತೊಳೆವವನಂತೆ,
ಆಸೆ ಮುಂಚು, ಅರಿವು ಹಿಂಚಾಗಿ ಜಗದೀಶನ ಪೂಜೆ ಏತರದೆಂದೆ ?
ಇದರ ಖ್ಯಾತವ ಹೇಳಾ, ಅಲೇಖನಾದ ಶೂನ್ಯ ಕಲ್ಲಿನ ಮರೆಯವನೆ. ॥ ೩೮ ॥

೫೯

ಪೂಜೆ ಪುಣ್ಯದ ಇರವು, ಮಾಟ ಸುಕೃತದ ಬೀಜ, ಸುಕೃತ ಭವದೊಡಲು.
ಪೂಜೆಯ ಮೀರಿ ಕಾಬರಿವಿಲ್ಲ,
ಮಾಟವ ಮೀರಿ ಮೂರರ ಕೂಟವನರಿವುದಿಲ್ಲ,
ಉಭಯದ ಕೋಟಲೆಯ ಬಿಡಿಸು,
ಅಲೇಖನಾದ ಶೂನ್ಯ ಕಲ್ಲಿನ ಒಲವರ ಬೇಡ. ॥ ೩೯ ॥

೬೦

ಪೃಥ್ವಿ ಆಕಾಶದ ಮಧ್ಯದಲ್ಲಿ ಖೇಚರ ಮಂಡಲ :
ಆ ಮಂಡಲದರಸು ವಿಹಂಗರಾಜ, ಮರೀಚಿಕ ಪ್ರಧಾನ, ಮಹೀತಳ ತಳವಾರ,
ಇಂತೀ ಮಂಡಲ ಸುರಕ್ಷದಲ್ಲಿ ಇರುತಿರಲಾಗಿ,
ಗೋರಕ್ಷನೆಂಬ ಅರಸು ಮುತ್ತಿದ ಮಂಡಲವ.
ಪಟ್ಟಣ ಕೋಳುಹೋಗದು, ಮುತ್ತಿದರಸು ಬಿಟ್ಟುಹೋಗ.
ಇದ ಸಂತೈಸಲಂಜಿ,
ಅಲೇಖಮಯನಾದ ಶೂನ್ಯ ಕಲ್ಲಿನೊಳಹೊಕ್ಕು, ಎಲ್ಲರ ಗೆದ್ದ. ॥ ೪೦ ॥

೬೧

ಪೃಥ್ವಿ ನಿನ್ನ ಮುಖದಲ್ಲಿ, ಅಪ್ಪು ನಿನ್ನ ಮುಖದಲ್ಲಿ,
ತೇಜ ನಿನ್ನ ಮುಖದಲ್ಲಿ, ವಾಯು ನಿನ್ನ ಮುಖದಲ್ಲಿ,
ಆಕಾಶ ನಿನ್ನ ಮುಖದಲ್ಲಿ, ಪಂಚಭೂತಿಕನಾದೆ,
ಸರ್ವಲೋಕ ಕುಕ್ಷಿ ಕರಂಡನಾದೆ, ನಾ ನಿನಗೆ ಹೊರಗೆ.
ಅರಿವುಮಯ ನೀನಾಗಿ, ಕಲ್ಲಿನ ಮರೆ ಬೇಡ.
ಮನದ ಶಿಲೆಯಲ್ಲಿ ಕುರುಹುಗೊಳ್ಳು.
ಅಲೇಖನಾದ ಶೂನ್ಯ ಅವತಾರ ಶೂನ್ಯ ಎನಗೊಂದು ಹೇಳಾ. ॥ ೪೧ ॥

೬೨

ಪೃಥ್ವಿಯಲ್ಲಿದ್ದು ಪೃಥ್ವಿಯನರಿತು, ಅಪ್ಪುವಿನಲ್ಲಿದ್ದು ಅಪ್ಪುವನರಿತು,
ತೇಜದಲ್ಲಿದ್ದು ತೇಜವನರಿತು, ವಾಯುವಿನಿಲ್ಲಿದ್ದು ವಾಯುವನರಿತು,
ಆಕಾಶದಲ್ಲಿದ್ದು ಆಕಾಶವನರಿತು, ತನ್ನಲ್ಲಿದ್ದು ತನ್ನನರಿತು,

ಕಣ್ಣಿನೊಳಗಣ ಕಣ್ಣ ಕಂಡು ಕಲ್ಲಿನೊಳಗಡಗಿ,
ಅಲೇಖನಾದ ಶೂನ್ಯನ ಭೇದವನರಿತು, ಕಾಯವನರಿ || ೪೨ ||

೬೩

ಬಾಯಲ್ಲಿ ಕಾಲು ಹುಟ್ಟಿ, ಕೈಯಲ್ಲಿ ಕಣ್ಣು ಹುಟ್ಟಿ, ನಾಸಿಕ ಕಿವಿಯಾಗಿತ್ತು.
ಇಷ್ಟು ಹೇಳಲಾರದೆ, ಅಲೇಖನಾದ ಶೂನ್ಯ ಕಾಲಕ್ಕಂಜಿ ಕಲ್ಲಿನೊಳಗಾದ.
|| ೪೩ ||

೬೪

ಬಾಯಿ ಉಂಡು, ನಾಸಿಕ ವಾಸಿಸಿ, ಕಣ್ಣು ಕಂಡು, ಕಿವಿ ಕೇಳಿ,
ಕೈ ಮುಟ್ಟಿನೋಡಿ ಅರ್ಪಿಸುವಾಗ ನಿನಗಲ್ಲಿಯೇ ತೃಪ್ತಿಯೇ ?
ನೀ ತತ್ತುಗ್ಗೈಯ ಇಕ್ಕಿನ ಕೂಳವನೆ ?
ಎಲ್ಲರ ಮನಸ್ಸು ಪರಕೈಯಿಂದ ಪರೀಕ್ಷಿಸಿಕೊಂಬವನೆ ?
ಎಲ್ಲರಲ್ಲಿ ಅರಿಕೆ ತನ್ಮಯ ನೀನೆಂಬುದನರಿಯದೆ.
ಕಾಲ ಮುಳ್ಳು ಕೈಯಿಂದ ಕಳೆವಂತೆ, ಅದಾರಿಗೆ ಲೇಸು ಹೇಳಾ ?
ಇದರ ಆಗ ಕೇಳಿಹರೆಂದು, ಅಲೇಖನಾದ ಶೂನ್ಯ ಕಲ್ಲಿನೊಳಗಾದೆಯಲ್ಲಾ !
|| ೪೪ ||

೬೫

ಬಾಯಿಲ್ಲದ ಪಶು ಬತ್ತದ ಹೊಲನ ಹೊಕ್ಕು, ಹುಟ್ಟದ ಸಸಿಯ ಮೆಯ್ದು,
ಒಡೆಯನಿಲ್ಲದ ಪರವ ತೊಂಡ ಕೂಡಿದ,
ತೊಂಡಿನ ಹಟ್ಟಿಯ ಬಾಗಿಲೊಂದು, ಬೀಗ ಒಂಬತ್ತು.
ಮೂರೆಸಳಿನ ಬೀಗ ಮೂರು, ಆರೆಸಳಿನ ಬೀಗ ಮೂರು,
ಇಪ್ಪತ್ತೈದೆಸಳಿನ ಬೀಗ ಮೂರು
ತೆಗೆವ ಕೈಗೆ ನಾಭಿಯಿಲ್ಲ, ಸಿಕ್ಕಿತ್ತು ಹಸು ಹಟ್ಟಿಯಲ್ಲಿ,
ಇನ್ನಾರಿಗೆ ಹೇಳುವೆ ?
ಅಲೇಖನಾದ ಶೂನ್ಯ ಕಲ್ಲಿನೊಳಗಾದವನ ಬಲ್ಲವರಾರೊ ? || ೪೫ ||

೬೬

ಬಾಹ್ಯ ರಚನೆಯಿಂದಾದ ಭಕ್ತಿ ವಿರಕ್ತಿ ಸತ್ಪಥ ಮಾರ್ಗದಿರವು,
ಮಾತಿನಲ್ಲಿಯೊ, ಚೈತನ್ಯಾತ್ಮಕ ಭಾವ ಮುಟ್ಟಿದಲ್ಲಿಯೊ ?
ಉಭಯವನರಿದಲ್ಲಿ ಕಾಬವನ ಇರವು,
ಮಠದ ದೀಪ ವಾಯುವಿನ ಸಂಗದ ಕೂಟ.
ಪಾಷಾಣದಲೊದಗಿದ ಜ್ಯೋತಿಯ ಬೆಳಗು, ವಾಯುವ ನೀತಿಗೊದಗುವುದೆ ?
ಕಪಟದ ನಿಃಕಪಟದ ದೀಪದ್ವಯ ಪರಿಯಂತೆ,
ವಸ್ತು ನಿರ್ದೇಶದ ಸುಖ ಸಂಭಾಷಣ ದೃಷ್ಟ ಕೊಡು,
ಅಲೇಖನಾದ ಶೂನ್ಯ ಕಲ್ಲಿನಲ್ಲಿದ್ದು, ಮೆಲ್ಲನೆ ಓ ಎನಲಾಗದೆ ? || ೪೬ ||

೬೭

ಬ್ರಹ್ಮಮೂರ್ತಿಗೂ ಶಿಲೆ ಒಂದೆ, ವಿಷ್ಣುಮೂರ್ತಿಗೂ ಶಿಲೆ ಒಂದೆ,
ರುದ್ರಮೂರ್ತಿಗೂ ಶಿಲೆ ಒಂದೆ, ರೂಪಿನ ಅವತಾರ ಭಿನ್ನವಾಯಿತ್ತು,
ಸ್ಥೂಲ ಸೂಕ್ಷ್ಮ ಕಾರಣದಂತೆ, ಕುಂಭ ಜಲ ಬಿಂಬದಂತೆ,
ಇನ್ನಾರನಹುದೆಂಬೆ, ಇನ್ನಾರನಲ್ಲಾ ಎಂಬೆ ?
ಬ್ರಹ್ಮ ಕಾಲು, ವಿಷ್ಣು ಕೈ, ರುದ್ರ ಕಣ್ಣು, ಈಶ್ವರ ತಲೆ,
ಸದಾಶಿವ ಪ್ರಾಣವಾದಲ್ಲಿ ಇವು ಸಮಯ.
ಈ ಪಂಚಕೋಶಕ್ಕೆ ಆಧಾರ ಪರಮಜ್ಞಾನ.
ಅದ ಭೇದಿಸಲರಿಯದೆ ವಾದವ ಮಾಡಿದರೆಲ್ಲರು.
ನಾದ ಬಿಂದು ಕಳೆ ಅತೀತನರಿ, ಅಲೇಖನಾದ ಶೂನ್ಯ ಕಲ್ಲಿನೊಳಗಾದವನ.
|| ೪೭ ||

೬೮

ಭಕ್ತ ಮಾಹೇಶ್ವರ ಪ್ರಸಾದಿ, ಇವು ಮೂರು ಭೃತ್ಯಭಾವ.
ಪ್ರಾಣಲಿಂಗಿ ಶರಣ ಐಕ್ಯ, ಇವು ಮೂರು ಕರ್ತಭಾವ.
ಭಕ್ತನ ತತ್ತು, ಕುರುಹಿನ ಇಷ್ಟ, ಐಕ್ಯನ ತತ್ತು, ಕುರುಹಿನ ಕಳೆ.
ಆ ಕಳೆಯನರಿವುದು ವಿರಕ್ತಿಯ ಭಾವ.
ಅದು ನಾಮ ರೂಪು ಭಾವ ನಾಶನ,
ಅದು ಬಯಲೊಳಗಿನ ಬೆಳಗು, ಬೆಳಗಿನ ಕಳೆ,
ಅಲೇಖನಾದ ಶೂನ್ಯ ಕಲ್ಲಿನ ಹೊರೆ ಬೇಡ. || ೪೮ ||

೬೯

ಮಗನ ಕೊಂದು ತಿಂದ ತಾಯ ಕಂಡೆ.
ಬಂಧುಗಳ ಕೊಂದು ನಂಟರಲ್ಲಿ ಕೂಪನ ಕಂಡೆ.
ಅತ್ತೆ ಅಳಿಯನ ಒತ್ತಿನಲ್ಲಿ ಮಲಗಿ ಕೂಸು ಹುಟ್ಟಿತ್ತು.
ಅಳಿಯ ಅತ್ತೆಯ ನೋಡಿ, ಅತ್ತೆ ಅಳಿಯನ ನೋಡಿ,
ಹೋಯಿತ್ತು ಹೋಗದಿದೆಯೆಂದು ನಗುವರ ಕಂಡೆ.
ಅವರಿಬ್ಬರ ನೋಡಿ ಹೆತ್ತ ಕೂಸು, ನಾನಿವರ ಅಳಿಯನೆಂದು ಹೋಯಿತ್ತು.
ಇದ ಕೇಳಿಹರೆಂದು ಹೇಳಲಂಜಿ,
ಅಲೇಖನಾದ ಶೂನ್ಯ ಕಲ್ಲಿನ ಒಳಹೊಕ್ಕ. || ೪೯ ||

೭೦

ಮನೆಯ ಮರೆಯಲ್ಲಿ ಇದ್ದ ಸತಿಗೆ ಪತಿ ಕೂಟವುಂಟೆ ?
ಕಣ್ಣಿಗೆ ಮರೆಯಾದ ಹೊನ್ನ ಚೆನ್ನಾಗಿ ನೋಡಬಹುದೆ ?
ಕಂಗಾಣದವ ಪ್ರತಿ ಶೃಂಗಾರವ ಮಾಡಿದಡೆ,
ತನ್ನ ಅಂಗದ ಕೈಯಲ್ಲದೆ ಕಂಗಳಿಗಿಲ್ಲ, ಸುಸಂಗಹೀನನ ಮಂಗಳಮಯದಂತೆ

ಅಂಗದ ಮೇಲೆ ಶಿವಲಿಂಗ ರುದ್ರಾಕ್ಷಿ ಭಸ್ಮಂಗಳ ಧರಿಸಿಪ್ಪ
ಕಳ್ಳನ ಕಾಟಕಾರದೆ ಕಲ್ಲಿನೊಳಗಾದನು.
ಅಲೇಖನಾದ ಶೂನ್ಯ, ಕಾಡದಿರು ಎನ್ನುವ. || ೫೦ ||

೭೧

ಮಲವ ತೊಳೆಯಬಹುದಲ್ಲದೆ, ಅಮಲವ ತೊಳೆಯಬಹುದೆ ಅಯ್ಯಾ ?
ಮಾತಾಡಬಹುದಲ್ಲದೆ, ಅಜಾತನನರಿಯಬಹುದೆ ಅಯ್ಯಾ ?
ಮಾಟವ ಮಾಡಬಹುದಲ್ಲದೆ, ವರ್ಮದ ಕೂಟವ ಕೂಡಬಹುದೆ ಅಯ್ಯಾ ?
ರಣದ ಪಂಥವ ಹೇಳಬಹುದಲ್ಲದೆ, ಕಾದಬಹುದೆ ಅಯ್ಯಾ ?
ಮಾತುಗಳ ಕೂಡಿ ಓತು ಹೇಳುವರೆಲ್ಲರು ಉಮಾಕಾಂತನ ಬಲ್ಲರೆ ?
ಈ ಮಾತಿನ ಮಾಲೆಗೆ ಅಂಜಿ,
ಅಲೇಖನಾದ ಶೂನ್ಯ ಕಲ್ಲಿನೊಳಗೆ ಅದೆ ಹೇಳಾ. || ೫೧ ||

೭೨

ಮಾರ್ಜಾಲನ ಹೃದಯದಲ್ಲಿ ಮೂಷಕ ಮನೆಯ ಮಾಡಿ ಇದ್ದಿತ್ತು.
ಅದಕ್ಕೆ ಮಣಿಮಾಡಂಗಳಿಂದ ಆಶ್ರಯವೊಂದು ಬಾಗಿಲು ಬೇರೆ.
ಅದಕ್ಕೆ ಹೋಗಿ ಆಡುವ ನಾಟಕಸಾಲೆ.
ಪವನನೆಂಬ ಸೂಳೆ ಅಘಟದಿಂದ ಆಡುತ್ತಿರಲಾಗಿ, ಕಾಲುಜಾರಿ ನೆಲಕ್ಕೆ ಬಿದ್ದಳು.
ಬಿದ್ದ ಘಾತಕ್ಕೆ ಯೋನಿ ಒಡೆಯಿತ್ತು,
ಮೊಲೆ ಹರಿದು, ಕಿವಿ ಕಿತ್ತು, ಕಣ್ಣು ಹಿಂಚುಮುಂಚಾಯಿತ್ತು.
ನೋಡುವ ಅಣ್ಣಗಳ ಬಯಕೆ ಹರಿಯಿತ್ತು.
ಯೋನಿ ಕಿತ್ತಲ್ಲಿ ಕೂಟಕ್ಕೆ ಸುಖವಿಲ್ಲ, ನೋಟಕ್ಕೆ ಬೆಂಬಳಿಯಿಲ್ಲ.
ಪವನನ ಅಘಟ ಹೋಯಿತ್ತು, ಕಾಲನ ಕಮಟಕ್ಕೆ.
ನೀ ಅಲೇಖನಾದ ಶೂನ್ಯ, ಇವರಾಟದ ಬೆಂಬಳಿಯ ಬಿಡಿಸು,
ಕಲ್ಲಿನೊಳಗಿಂದ ಇತ್ತ ಬಾರಯ್ಯಾ. || ೫೨ ||

೭೩

ಮಾರುತನ ಸಂಗದ ಸ್ಫುಟಿತ ಪಲ್ಲವ ಕಾಷ್ಠ ತೃಣ,
ಇವು ಮೊದಲಾದವೆಲ್ಲವು ಗಂಡಾಕಾರವಾಗಿ ತೋರಿ,
ಸಂಚಾರ ಹಿಂಗೆ, ಮತ್ತವು ಪುನರಪಿಯಂತಾಗೆ.
ಚಿತ್ತ ನಾಲ್ಕರೊಳು ಕೂಡಿದ ಮತ್ತಳಿಯೆ, ಚಿತ್ತದ ಬಂಧವಾವುದು ಹೇಳು,
ಅಲೇಖನಾದ ಶೂನ್ಯಕಲ್ಲಿನ ಮನೆಯವನೆ. || ೫೩ ||

೭೪

ವಾಸನೆ ವೆಗ್ಗಳದ ಕುಸುಮವ, ಅದ ಲೇಸ ಕಂಡು ವಾಸಿಸಿದಡೆ ಸುಖವಲ್ಲದೆ,
ಅದ ಘಾಸಿ ಎಸೆಗಡೆ ಇದೇತರ ಗಂಧ ? ನಾತದ ಕೂಟ.

ಭಕ್ತನ ಪೂಜೆಯ ಗುರುವಿನ ಯುಕ್ತಿ, ಇಷ್ಟನರಿತಡೆ ಆತನಿರವು, ತತ್ವದ ಭಿತ್ತಿ,
ಅಲೇಖನಾದ ಶೂನ್ಯ ಕಲ್ಲಿನ ಮೆಲ್ಲೆದೆಯಾಗದಿರಯ್ಯಾ. ॥ ೫೪ ॥

೭೫

ವೃಕ್ಷ ಬೀಜದೊಳಗಡಗಿ, ಬೀಜ ವೃಕ್ಷದೊಳಗಡಗಿ ಉಭಯವಿದ್ದು ಫಲವೇನು?
ಆದಿ ಧರೆಯಿದ್ದಲ್ಲದೆ ಉಭಯನಾಮವಿಲ್ಲ.
ಅರಿವಿನ ಅರಿಕೆ, ಕುರುಹಿನ ಪೂಜೆ ನೆರಿಗೆಯಾಗಬೇಕೆ ?
ಅಲೇಖನಾದ ಶೂನ್ಯ ಬಲುಗಲ್ಲಿನ ನೆಲೆಯ ದಾಂಟಿದೆಯಲ್ಲಾ. ॥ ೫೫ ॥

೭೬

ವೃಶ್ಚಿಕ ಬಾಲದಲ್ಲಿ, ಸರ್ಪ ಬಾಯಲ್ಲಿ, ಕಂಠೀರವ ದಂತದಲ್ಲಿ,
ಇಂತಿವರ ಸಂಚವನರಿದಲ್ಲಿ ಸಂಕಲ್ಪವಿಲ್ಲ.
ಚಿತ್ತದ ಹಿಂಚುಮುಂಚನರಿತಲ್ಲಿ, ಕರಣದ ಇಂದ್ರಿಯಂಗಳ ಗೊಂಚಲ ಮುರಿದು,
ನಿಜತತ್ತ್ವದ ಶಾಂತಿಯನರಿಯೆಂಬ ಕುರುಹ ಕೇಳಿಹರೆಂದು,
ಅಲೇಖಮಯನಾದ ಶೂನ್ಯ ಕಲ್ಲಿನ ಮರೆ ಬೇಡ, ಹೇಳೆನ್ನೊಳು. ॥ ೫೬ ॥

೭೭

ವೇದದಲ್ಲಿ ಕಂಡುದಿಲ್ಲ, ಅದು ಮಾತಿನ ಮನೆಯಾಗಿ ಹೋಯಿತ್ತು.
ಹೋಮದಲ್ಲಿ ಕಂಡುದಿಲ್ಲ, ತಿಲ ಘೃತ ಹೋತು ಮೊದಲಾದ
ಕಾಷ್ಠ ತೃಣ ದಿಗ್ಬಲಿಗಳನಿಕ್ಕಿ ರೂಪಾದುದಿಲ್ಲ.
ಶಾಸ್ತ್ರವ ಕೇಳಿ ಮನ ಸಂತೈಸುವುದಿಲ್ಲ,
ಪುರಾಣವನೋದಿ ಪುಣ್ಯನಪುಣ್ಯನ ಕಂಡುದಿಲ್ಲ.
ಈತ ಕೊಟ್ಟುದು ಕೈಯಲ್ಲಿ ಹಿಡಿದು, ಕಣ್ಣಿನಲ್ಲಿ ನೋಡಿ, ಮನವರಿಯದಿದೆ.
ಇನ್ನೇವೆ ? ಇದರನ್ವಯವ ಹೇಳು,
ಅಲೇಖನಾದ ಶೂನ್ಯ ಕಲ್ಲಿನೊಳಗಾದವನೆ. ॥ ೫೭ ॥

೭೮

ಶಿವ ಶಿವಾ ! ಎಲ್ಲರೂ ಉಂಟಾದುದ ಹೇಳಿ,
ಇಲ್ಲದ ಬಯಲಿಂಗೆ ಮನವನಿಕ್ಕಿದರು.
ಎನಗಿನ್ನಾವುದು ಬಟ್ಟೆ ?
ಬಸವಣ್ಣನ ಕರುಣೆಯಿಂದ ಕಟ್ಟಿದ ಲಿಂಗಕ್ಕೆ ಹುಟ್ಟುಮೆಟ್ಟನರಿಯೆ.
ಕೊಟ್ಟಾತ ಹೇಳಿದುದಿಲ್ಲ, ಕಟ್ಟಿಕೋ ಎಂದಾತ, ಈ ಬಟ್ಟೆಯಲಿರು ಎಂದುದಿಲ್ಲ.
ಕಡ್ಡಾಯಕ್ಕೆ ಕಟ್ಟಿದ ಈ ಒಡ್ಡಗಲ್ಲಿನ ಮುರಿಯೆ ಎನಗೊಂದು ಬುದ್ಧಿಯ ಹೇಳಾ.
ಅಲೇಖನಾದ ಶೂನ್ಯ ಕಲ್ಲಿನೊಳಗೆ ಏಕಾದೆಯಯ್ಯಾ. ॥ ೫೮ ॥

೭೯

ಸಾಸಿವೆಯ ಹಾಲು ಸಾಧಕಾಂಗರ ನಾಸಿಕದ ನೀರ ಬರಿಸಿತ್ತು.
ಮೂಷಕನ ಮೀಸೆಯ ಬಿಂದು ಮೂರುಲೋಕವ ಮುಣುಗಿಸಿತ್ತು.
ಕಾಸದ ನೀರು ಬಿಸಿಯಾಗಿ ಕುಡಿವರ ಮೀಸೆ ಸುಟ್ಟಿತ್ತು.
ಸಾಸಿವೆಯ ಮೂಷಕನ ಮೀಸೆಯ ಬಿಸಿನೀರ ಕುಡಿವಾತನ,
ಬಾಯೊತ್ತಿನ ಮೀಸೆಯಲ್ಲಿ ಹುಟ್ಟಿತ್ತು ಒಂದು ಹಾಸರೆಗಲ್ಲು.
ಹಾಸರೆಗಲ್ಲಿನ ಮೇಲೆ ಕುಳಿತಿದ್ದಾತನ ಕೇಳಿಹರೆಂದು ಏತಕ್ಕಡಗಿದೆ,
ಅಲೇಖಮಯ ಶೂನ್ಯ ಕಲ್ಲಿನ ಮನೆಯೊಳಗೆ. ॥ ೭೯ ॥

೮೦

ಸಿರಿಯ ಭೂಮಿಯ ಮಧ್ಯದಲ್ಲಿ ಉರಿಯ ಮಡು ಹುಟ್ಟಿತ್ತು.
ಆ ಮಡುವಿನ ಮಧ್ಯದಲ್ಲಿ ಐದು ಸರಗೂಡಿದ ಬಾವಿ.
ಆ ಬಾವಿಯೊಳಗೆ ಮೂರು ಮುಖದ ಹುಲಿ ಹುಟ್ಟಿತ್ತು.
ಒಂದು ಕೊಂದು ತಿಂಬುದು, ಒಂದು ಕೊಲ್ಲದೆ ತಿಂಬುದು,
ಒಂದು ಎಲ್ಲರ ನೋಡಿ ತಿಂಬುದು, ಅಲ್ಲಾ ಎಂಬುದು,
ಹುಲಿಯ ಬಣ್ಣ ಮೊದಲು ಕಪ್ಪು, ನಡುವೆ ಭಾಸುರ, ತುದಿಯಲ್ಲಿ ಬಿಳಿದು.
ಹಗೆವಣ್ಣ ಸಹಿತಾಗಿ ಹುಟ್ಟಿದ ಹುಲಿ,
ಉರಿಯ ಮಡುವನೀಂಟಿ, ಸರಬಾವಿಯ ಕುಡಿದು,
ತಿಂಬವೆರಡು ಮುಖ ತಿನ್ನದ ಮುಖದಲ್ಲಿ ಅಡಗಿ,
ಕಡೆ ಕಪ್ಪು, ನಡುವಣ ಭಾಸುರ, ತುದಿಯ ಬಿಳುಪಿನಲ್ಲಿ ಅಡಗಿ ಒಡಗೂಡಿತ್ತು.
ಅದರ ತೊಡಿಗೆಯ ಕೇಳಿಹರೆಂದಂಜಿ,
ಅಡಗಿದೆಯಾ, ಅಲೇಖನಾದ ಶೂನ್ಯ ಕಲ್ಲಿನೊಳಗಾಗಿ ? ॥ ೮೦ ॥

೮೧

ಸ್ಥಳ ಕುಳವನರಿಯಬೇಕೆಂಬರು, ಭಕ್ತನಾಗಿ ಮಾಹೇಶ್ವರನಾಗಬೇಕೆಂಬರು.
ಮಾಹೇಶ್ವರನಾಗಿ ಪ್ರಸಾದಿಯಾಗಬೇಕೆಂಬರು.
ಪ್ರಸಾದಿಯಾಗಿ ಪ್ರಾಣಲಿಂಗಿಯಾಗಬೇಕೆಂಬರು.
ಪ್ರಾಣಲಿಂಗಿಯಾಗಿ ಶರಣಾಗಬೇಕೆಂಬರು.
ಶರಣನಾಗಿ ಐಕ್ಯನಾಗಬೇಕೆಂಬರು.
ಐಕ್ಯ ಏತರಿಂದ ಕೂಟ ? ನಾನರಿಯೆ.
ಒಳಗಣ ಮಾತು, ಹೊರಹೊಮ್ಮಿಯಲ್ಲದೆ ಎನಗೆ ಅರಿಯಬಾರದು.
ಎನಗೆ ಐಕ್ಯನಾಗಿ ಶರಣಾಗಬೇಕು, ಶರಣನಾಗಿ ಪ್ರಾಣಲಿಂಗಿಯಾಗಬೇಕು.
ಪ್ರಾಣಲಿಂಗಿಯಾಗಿ ಪ್ರಸಾದಿಯಾಗಬೇಕು, ಪ್ರಸಾದಿಯಾಗಿ
ಮಾಹೇಶ್ವರನಾಗಬೇಕು.
ಮಾಹೇಶ್ವರನಾಗಿ ಭಕ್ತನಾಗಬೇಕು, ಭಕ್ತನಾಗಿ ಸಕಲಯುಕ್ತಿಯಾಗಬೇಕು.

ಯುಕ್ತಿ ನಿಶ್ಚಯವಾದಲ್ಲಿಯೆ, ಐಕ್ಯಸ್ಥಲ ಒಳಹೊರಗಾಯಿತ್ತು.
ಅಲೇಖ ಲೇಖವಾಯಿತ್ತು, ಎನಗೆ ಕಾಣಬಂದಿತ್ತು.
ಅಲೇಖನಾದ ಶೂನ್ಯ ಶಿಲೆಯ ಹೊರಹೊಮ್ಮಿ ಕಂಡೆ ನಿನ್ನನ್ನು. ॥ ೬೧ ॥

೬೨

ಹಲವು ಧಾನ್ಯವನುಂಡವರ ಸಲಗೆಡದಿದೆ ಅಸು.
ಫಲ ರಸಸಾಳಿ ಸುಭಿಕ್ಷವ ಕೊಂಡು ಅಸು ಗೆಲದಿದೆ.
ಇಂತೀ ಒಲವರವೇಕೆ ನಿನಗೆ, ಕೆಲವರ ಅಳಿಸಿ, ಕೆಲವರ ನಗಿಸಿ ?
ಬಲವಂತತನವೆ ನಿನಗಿದು ?
ಬಲುಹೇಕೆ ಭಕ್ತರೊಳು, ನಿನ್ನಯ ನೆರೆ ನಂಬುವ ಶರಣರೊಳು ?
ಬಿಡು, ಕಲ್ಲಿನೊಳಗಣ ಮರೆಯ, ತೆರೆಯ ತೆಗೆ.
ಅಲೇಖನಾದ ಶೂನ್ಯ, ಸಮಗಂಡಿರು ಎಲ್ಲರುವ. ॥ ೬೨ ॥

೬೩

ಹುಟ್ಟದೆ ಬ್ರಹ್ಮನ ಹಂಗಿನಲ್ಲಿ, ಬೆಳೆಯದೆ ವಿಷ್ಣುವಿನ ಹಂಗಿನಲ್ಲಿ,
ಸಾಯದೆ ರುದ್ರನ ಬೆಂಬಳಿಯಲ್ಲಿ,
ಹರಿಯಿತ್ತು ಬ್ರಹ್ಮನ ಬಲೆ, ಗುರುವಿನ ಕರದಲ್ಲಿ,
ಬಿಟ್ಟಿತ್ತು ವಿಷ್ಣುವಿನ ಸುಖ, ಲಿಂಗದ ಅರ್ಪಿತದಲ್ಲಿ,
ಮರೆಯಿತ್ತು ರುದ್ರನ ಮರಣ, ವಸ್ತುವಿನ ಮೂರ್ತಿಯಲ್ಲಿ,
ಮತ್ತೆ ನಾನಿನ್ನಾರ ಕೇಳಿಹೆ ?
ಅಲೇಖನಾದ ಶೂನ್ಯ ಕಲ್ಲ ಬಿಟ್ಟ ತೆರನ ಕಂಡೆ. ॥ ೬೩ ॥

೬೪

ಹುಟ್ಟಿಸುವವ ಪೃಥ್ವಿಗೆ ಹಂಗಾದ, ಬೆಳೆಯಿಸುವವ ಅಪ್ಪುವಿಗೆ ಹಂಗಾದ.
ಕೊಯಿಸುವವ ಕಾಲಗೆ ಹಂಗಾದ, ನಿನ್ನನರಿತೆಹೆನೆಂಬವ ಶಿಲೆಗೆ ಹಂಗಾದ.
ಇವರೆಲ್ಲರ ಹಂಗಿಗೆ ಹರುಹ ಕೇಳಿಹರೆಂದಂಜಿ,
ಅಲೇಖಮಯನಾದ ಶೂನ್ಯ ಕಲ್ಲಿನ ಮರೆಯಾದೆಯಾ ? ॥ ೬೪ ॥

■■

# ವರದ ಸಂಕಣ್ಣಗಳ ವಚನ

ಲಜ

ಓಡ ಹಿಡಿದವನ ಕೈ ಮಸಿಯೆಂಬುದ ನಾಡೆಲ್ಲ ಬಲ್ಲರು.
ಅವನ ಕೂಡೆ ಆಡಲಾಗದು ಅಯ್ಯಾ, ತನಗಾ ಮಸಿ ಹತ್ತೂದಾಗಿ.
ಲಿಂಗವಿರೋಧಿಯ ಕೈವಿಡಿದಾಡುವವ ಮುನ್ನವೆ ವ್ರತಗೇಡಿ.
ಅಂಥವನ ಸಂಗ ಬೇಡಯ್ಯಾ, ತನಗಾ ಭಂಗ ಬಂದುದಾಗಿ.
ಅದೆಂತೆಂದಡೆ :
ಜಗದ ಕರ್ತ ಶಿವನ ವಿರೋಧವ ಮಾಡಿ ದಕ್ಷನೊಬ್ಬ ಯಾಗವನಿಕ್ಕಲು,
ತೆತ್ತೀಸಕೋಟಿದೇವರ್ಕಳೆಲ್ಲಾ ತೊತ್ತಳದುಳಿಸಿಕೊಂಡು,
ನುಚ್ಚುನುರಿಯಾಗಿ ಹೋದರು ನೋಡಾ, ಅವನಂಗ ಸಂಗದಲ್ಲಿದ್ದ ಕಾರಣ.
ಗೆಲ್ಲ ಸೋಲಕೆ ಇಕ್ಕು ಮುಂಡಿಗೆ, ಏರು ಮುಂಡಿಗೆಯೆಂಬ
ಮಚ್ಚರಕ್ಕೆ ಮುಂದುವಿಡಿದು ಮುಡುಹಿಕ್ಕಿ ಕೆಲದಾಡುವರೆಲ್ಲಾ,
ತಮ್ಮ ಮನದಲ್ಲಿ ತಾವರಿದು ಒಯ್ಯನೆ ತೊಲಗುವರು.
ಮೇಲೆ ಲಿಂಗ ನಿರೂಪದಿಂದ ಬಂದ ಕಾರ್ಯಕ್ಕೆ ಅಂಜರು, ಏಕಾಂಗವೀರರು.
ವಾಯದ ಹರೆಮಾತಿನ ಮಾಲೆಗೆ ಬೆದರಿ ಬೆಚ್ಚಿ ಓಡುವನಲ್ಲ,
ಏಕೋಭಾವ ನಿಷ್ಠೆ ನಿಬ್ಬೆರಗು ಗಟ್ಟಿಗೊಂಡ ದೃಢಚಿತ್ತವುಳ್ಳ ಸದ್ಭಕ್ತ.
ಇಂತಪ್ಪ ಉಲುಹಡಗಿದ ಶರಣರ ಸಂಗದಲ್ಲಿರಿಸಿ
ಬದುಕುವಂತಿರಿಸಯ್ಯಾ, ವರದ ಶಂಕರೇಶ್ವರಾ. ॥ ೧ ॥

■■

# ವೀರಗೊಲ್ಲಾಳನ ವಚನ

೮೬

ಆಡು ಆರುದಿಂಗಳು ಹುಟ್ಟಿ, ಮೂರುದಿನ ಬದುಕಿ,
ಒಂದುದಿನ ಸತ್ತಿತ್ತು.
ಕುರಿ ಕುರುಹ ಮೇದು, ಮರಿಗೆ ಮೊಲೆಗೊಟ್ಟಿತ್ತು.
ಮರಿಯು ಮೊಲೆಯ ನುಂಗಿ, ಕುರುಹಿನೊಳಗಡಗಿತ್ತು.
ಆಡು ಕುರಿ ಬಂದ ಬಟ್ಟೆಯ ಸೋಧಿಸಿಕೊಂಡು,
ತೋಳನ ತೊಡಕಿನಲ್ಲಿ ಸಾಯದೆ, ಅರಿ ವೀರಬೀರೇಶ್ವರಲಿಂಗವಾ. ॥ ೧ ॥

೮೭

ಕಂಥೆಯ ಕಟ್ಟಿ, ತಿತ್ತಿಯ ಹೊತ್ತು,
ಮರಿಯ ನಡಸುತ್ತ, ದೊಡ್ಡೆಯ ಹೊಡೆವುತ್ತ,
ಅಡ್ಡಗೋಲಿನಲ್ಲಿ ಹೋಹ ಚುಕ್ಕಿ ಬೊಟ್ಟಿನವ ತಿಟ್ಟುತ್ತ,
ಹಿಂಡನಗಲಿ ಹೋಹ ದಿಂಡೆಯ ಮಣೆಘಟ್ಟನ ಅಭಿಸಂದಿಯ ಕೋಲಿನಲ್ಲಿಡುತ್ತ.
ಈ ಹಿಂಡಿನೊಳಗೆ ತಿರುಗಾಡುತಿದ್ದೇನೆ.
ಈ ವಿಕಾರದ ಹಿಂಡ ಬಿಡಿಸಿ,
ನಿಜನಿಳಯ ನಿಮ್ಮಂಗವ ತೋರಿ, ಸುಸಂಗದಲ್ಲಿರಿಸು,
ಎನ್ನೊಡೆಯ ವೀರಬೀರೇಶ್ವರಲಿಂಗಾ. ॥ ೨ ॥

೮೮

ಕಲ್ಲು ಲಿಂಗವಲ್ಲ, ಉಳಿಯ ಮೊನೆಯಲ್ಲಿ ಒಡೆಯಿತ್ತು.
ಮರ ದೇವರಲ್ಲ, ಉರಿಯಲ್ಲಿ ಬೆಂದಿತ್ತು.
ಮಣ್ಣು ದೇವರಲ್ಲ, ನೀರಿನ ಕೊನೆಯಲ್ಲಿ ಕದಡಿತ್ತು.
ಇಂತಿವನೆಲ್ಲವನರಿವ ಚಿತ್ತ ದೇವರಲ್ಲ.
ಕರಣಂಗಳ ಮೊತ್ತದೊಳಗಾಗಿ ಸತ್ತುಗೆಟ್ಟಿತ್ತು.
ಇಂತಿವ ಕಳೆದುಳಿದ ವಸ್ತುವಿಪ್ಪೆಡೆ ಯಾವುದೆಂದಡೆ :
ಕಂಡವರೊಳಗೆ ಕೈಕೊಂಡಾಡದೆ,
ಕೊಂಡ ವ್ರತದಲ್ಲಿ ಮತ್ತೊಂದನೊಡಗೂಡಿ ಬೆರೆಯದೆ,
ವಿಶ್ವಾಸ ಗ್ರಹಿಸಿ ನಿಂದಲ್ಲಿ ಆ ನಿಜಲಿಂಗವಲ್ಲದೆ,
ಮತ್ತೊಂದು ಪೆರತನರಿಯದೆ ನಿಂದಾತನೆ ಸರ್ವಾಂಗಲಿಂಗಿ,
ವೀರಬೀರೇಶ್ವರಲಿಂಗದೊಳಗಾದ ಶರಣ. ॥ ೩ ॥

೮೯

ಕೊರಡು ಕೊನರುವಲ್ಲಿ, ಬರಡು ಕರೆವಲ್ಲಿ,
ಕಲ್ಲಿನ ಶಿಲೆಯೊಡೆದು ರೂಪುದೋರುವಲ್ಲಿ,
ಬಳ್ಳವಲ್ಲಾಡದೆ ಲಿಂಗವಾಹಲ್ಲಿ, ಇಂತವರಲ್ಲಿಯ ಗುಣವೊ ?
ಇಂತಿವೆಲ್ಲವನರಿವ ಕಲ್ಲೆದೆಯವನ ಗುಣವೊ ?
ಇಂತಿವ ಬಲ್ಲಡೆ ವಿಶ್ವಾಸದಲ್ಲಿಯೆ ವೀರಬೀರೇಶ್ವರಲಿಂಗವು ತಾನಾಗಿಪ್ಪ. ॥ ೪ ॥

೯೦

ಕ್ರೀಯ ಹಿಡಿದಲ್ಲಿ ಸಂದೇಹಕ್ಕೊಳಗಾಗಿ,
ನಿಃಕ್ರೀಯೆ ಎಂದಲ್ಲಿ ಆತ್ಮಂಗೆ ಗೊತ್ತ ಕಾಣದೆ,
ಫಲವಿಲ್ಲದ ವೃಕ್ಷದ ಹೂವ ಕಂಡು, ವಿಹಂಗಕುಲ ಚರಿಸದೆ ಮುಚ್ಚಿದಂತೆ,
ಕಡೆಯಲ್ಲಿ ಹೊಲಬುಗೆಡದೆ, ಅರಿ ನಿಜವಸ್ತು ಒಂದೆಂದು,
ಕುರುಹಿನಲ್ಲಿ ಕುಲಕೆಡದೆ ಕೂಡು, ವೀರಬೀರೇಶ್ವರಲಿಂಗವ. ॥ ೫ ॥

೯೧

ಮೂರುವರ್ಣದ ಬೊಟ್ಟುಗ, ಆರು ವರ್ಣದ ಅಳಗ,
ಐದು ವರ್ಣದ ಸಂಚಿಗ
ಇವರೊಳಗಾದ ನಾನಾ ವರ್ಣದ
ಅಜಕುಲ, ಕುರಿವರ್ಗ, ಕೊಲುವ ತೋಳನ ಕುಲ,
ಮುಂತಾದ ತ್ರಿವಿಧದ ಬಟ್ಟೆಯ ಮೆಟ್ಟದೆ ಮೂರ ಮುಟ್ಟದೆ, ಆರ ತಟ್ಟದೆ,
ಐದರ ಬಟ್ಟೆಯ ಮೆಟ್ಟದೆ, ಒಂದೇ ಹೊಲದಲ್ಲಿ ಮೇದು,
ಮಂದೆಯಲ್ಲಿ ನಿಂದು, ಸಂದೇಹ ಕಳೆದು, ಉಳಿಯದ ಸಂದೇಹವ ತಿಳಿದು,
ವೀರಬೀರೇಶ್ವರಲಿಂಗದಲ್ಲಿಗೆ ಹೋಗುತ್ತಿರಬೇಕು. ॥ ೬ ॥

೯೨

ಸ್ಥಲಂಗಳನರಿದಿಹೆನೆಂದಡೆ ತ್ರಿವಿಧಸ್ಥಲ ಎನಗಿಲ್ಲ.
ಷಡುಸ್ಥಲವ ಮುನ್ನವೆ ಅರಿಯೆ.
ತತ್ತ್ವವನರಿದಿಹೆನೆಂದಡೆ ಇಪ್ಪತ್ತೈದರ ಗೊತ್ತಿನವನಲ್ಲ.
ಮಿಕ್ಕಾದ ಸತ್ಕ್ರೀಯದಲ್ಲಿ ನಡೆದಿಹೆನೆಂದಡೆ
ಭಕ್ತಿ ಜ್ಞಾನ ವೈರಾಗ್ಯ ತ್ರಿವಿಧ ಲಕ್ಷ್ಯವಿಧ ನಾನಲ್ಲ.
ನಿಷ್ಠೆಯಲ್ಲಿ ದೃಷ್ಟವ ಕಂಡಿಹನೆಂದಡೆ ವಿಶ್ವಾಸ ಎನಗಿಲ್ಲ.
ವಿರಕ್ತಿಯಲ್ಲಿ ವೇಧಿಸಿಹೆನೆಂದಡೆ,
ತ್ರಿವಿಧ ಮಲದ ಮೊತ್ತದೊಳಗೆ ಮತ್ತನಾಗಿದ್ದೇನೆ.
ಮತ್ತೆ ನಿಶ್ಚಯವನರಿದಿಹೆನೆಂದಡೆ,
ಆತ್ಮಂಗೆ ಲಕ್ಷವಿಡುವದೊಂದು ಗೊತ್ತ ಕಾಣೆ.
ಇಂತೀ ಕಷ್ಟತನುವಿನಲ್ಲಿ ಬಂದು, ಧೂರ್ತನಾಗಿ ಕೆಟ್ಟುಹೋಗುತ್ತಿದ್ದೇನೆ.
ಗುಡಿಸಿದ ಹಿಕ್ಕೆಯಲ್ಲಿ ಬಂದು ತನ್ನ ನಿಷ್ಠೆಯ ತೋರಿ,
ಎನಗೆ ಸದ್ಭಕ್ತಿಯ ಬೀರಿ, ವಿಶ್ವಾಸಿಗಳಿಗೆಲ್ಲಕ್ಕೆ ಕೃತ್ಯದೊಳಗಾಗಿ,
ನಿತ್ಯನೇಮಂಗಳಲ್ಲಿ ಅಚ್ಚೊತ್ತಿದಂತಿರು.
ನೀನೆ ಮುಕ್ತನಹೆ, ನಿಜನಿತ್ಯನಹೆ, ಜಗಕೆ ಕರ್ತೃವಹೆ.
ಎನ್ನ ಹಿಕ್ಕೆಗೆ ಬಂದು ಸಿಕ್ಕಿದೆಯಲ್ಲಾ,
ಮಹಾಮಹಿಮ ವೀರಬೀರೇಶ್ವರಾ. ॥ ೭ ॥

೯೩

ಹೋತನ ಕೊಯ್ದು, ಕುರಿಯ ಸುಲಿದು,
ಮರಿಯ ಕೊರಳನೊತ್ತಿ, ಕಾವಲ ಕುನ್ನಿಯ ಕೆಡಹಿ,
ತೋಳನ ಕುಲವ ಗೆದ್ದು, ಕುರುಬನ ಕುರುಹಿನ ಕುಲವಡಗಿ,
ನೆರೆ ಅರಿವಿನ ಕುಲದಲ್ಲಿ ಅಡಗಬೇಕು,
ವೀರಬೀರೇಶ್ವರಲಿಂಗವನರಿದ ಶರಣ. ॥ ೮ ॥

೯೪

ಹೋತನ ಹೊಡದು, ಆಡ ಕೂಡಿ, ಕುರಿಯ ನಿಲಿಸಿ,
ತಗರ ತಡದು, ಹಿಂಡನೊಬ್ಬುಳಿತೆಮಾಡಿ,
ಹುಲಿ ತೋಳ ಚೋರ ಭಯಮಂ ಕಳೆದು,
ಹಿಂಡಿಗೊಡೆಯನಾಗಿ ಕಾವ ಗೊಲ್ಲಾಳ ನೀನೆ, ವೀರಬೀರೇಶ್ವರಾ. ॥ ೯ ॥

೯೫

ಹೋತು ಹುಸಿ, ಆಡು ಬಹುಮಾತಿನ ನೀತಿ,
ಕುರಿ ಸಕಲೇಂದ್ರಿಯದ ನೆಲ ಹೊಲ, ತಗರು ತಥ್ಯಮಿಥ್ಯದ ಹೋರಟೆ,

ಹುಲಿ ದ್ವೇಷದಾಗರ, ತೋಳ ಕೊಂದು ತಿಂಬ ಕಾಟ.
ಚೋರ ಮೃತ್ಯು ಇಂತಿವು ಮೊದಲಾದ
ಬಹುವಿಧದ ಪ್ರಕೃತಿಗಳಲ್ಲಿ ಕಾಯದ ನೆಲಹೊಲನಲ್ಲಿ,
ಸಕಲೇಂದ್ರಿಯವೆಂಬ ಹಿಂಡು ಮಂದೆಯಾಗಿವೇಕೊ ?
ಇದರ ಸಂಗವ ಬಿಡಿಸು, ನಿಮ್ಮ ನಿಜದಂಗವ ತೋರಿ,
ಭವಪಾಶದಂಗವ ಹರಿದು, ನಿಮ್ಮ ಘನಲಿಂಗದಲ್ಲಿರಿಸು,
ನೆರೆ ವೀರಬೀರೇಶ್ವರಾ. || ೧೦ ||

■■

## ವೀರಶಂಕರದಾಸಯ್ಯಗಳ ವಚನ

೯೬

ಶಿವಶಿವಾ ದ್ವಿಜರೆಂಬ ಪಾತಕರು ನೀವು ಕೇಳಿ ಭೋ !
ನೀವು ಎಲ್ಲಾ ಜಾತಿಗೂ ನಾವೇ ಮಿಗಿಲೆಂದು,
'ವರ್ಣಾನಾಂ ಬ್ರಾಹ್ಮಣೋ ಗುರುಃ' ಎಂದು,
ಬಳ್ಳಿಟ್ಟು, ಬಾಸ್ಕಳಗೆಡವುತಿಪ್ಪಿರಿ ನೋಡಾ.
'ಆದಿ ಬಿಂದುದ್ಭವೇ ಬೀಜಂ' ಎಂಬ ಶ್ರುತಿಯಿಂ ತಿಳಿದು ನೋಡಲು
ಆದಿಯಲ್ಲಿ ನಿಮ್ಮ ಮಾತಾಪಿತರ ಕೀವು ರಕ್ತದ ಮಿಶ್ರದಿಂದ
ನಿಮ್ಮ ಪಿಂಡ ಉದಯಿಸಿತ್ತು.
ಆ ಕೀವು ರಕ್ತಕ್ಕೆ ಆವ ಕುಲ ಹೇಳಿರೆ ?
ಅದೂ ಅಲ್ಲದೆ ಪಿಂಡ ಒಂಬತ್ತು ತಿಂಗಳು ಒಡಲೊಳಗೆ
ಕುರುಳು, ಮಲಮೂತ್ರ, ಕೀವು, ದುರ್ಗಂಧ,
ರಕ್ತ ಖಂಡಕಾಳಿಜ ಜಂತುಗಳೊಳಗೆ,
ಪಾತಾಳದೊಳಗಣ ಕ್ರಿಮಿಯಂತೆ ಹೊದಕುಳಿಗೊಂಬಂದು
ನೀನಾವ ಕುಲ ಹೇಳಿರೆ ?
ಅದುವಲ್ಲದೆ ಮೂತ್ರದ ಕುಳಿಯ ಹೊರವಡುವಾಗ,
ಹೊಲೆ ಮುಂತಾಗಿ ಮುದುಡಿ ಬಿದ್ದಲ್ಲಿ,
ಹೆತ್ತವಳು ಹೊಲತಿ, ಹುಟ್ಟಿದ ಮಗುವು ಹೊಲೆಯನೆಂದು
ನಿಮ್ಮ ಕುಲಗೋತ್ರ ಮುಟ್ಟಲಮ್ಮದೆ,

ಹನ್ನೆರಡು ದಿನದೊಂದು ಪ್ರಾಯಶ್ಚಿತ್ತವನಿಕ್ಕಿಸಿಕೊಂಡು ಬಂದು
ನಿನ್ನಾವ ಕುಲ ಹೇಳಿರೆ ?
ಮುಂಜಿಗಟ್ಟದ ಮುನ್ನ ಕೀಳುಜಾತಿ,
ಮುಂಜಿಗಟ್ಟಿದ ಬಳಿಕ ಮೇಲುಜಾತಿಗಳು ಎಂಬ ಪಾತಕರು
ನಿಮ್ಮ ನುಡಿ ಕೊರತೆಗೆ ನೀವು ನಾಚಬೇಡವೆ ?
ನೀವು ನಾಚದಿರ್ದಡೆ ನಾ ನಿಮ್ಮ ಕುಲದ ಬೇರನೆತ್ತಿ,
ತಲೆಕೆಳಗು ಮಾಡಿ ತೋರಿಹೆನು.
ನಾನು ಉತ್ತಮದ ಬ್ರಾಹ್ಮಣರೆಂಬ ನಿಮ್ಮ ದೇಹ ಬ್ರಹ್ಮನೊ ?
ನಿಮ್ಮ ಪ್ರಾಣ ಬ್ರಹ್ಮನೊ ? ಆವುದು ಬ್ರಾಹ್ಮಣ್ಯ ?
ಬಲ್ಲಡೆ ಬಗುಳಿರಿ ! ಅರಿಯದಿರ್ದಡೆ ಕೇಳಿರಿ.
ದೇಹ ಕುಲಜನೆಂದಡೆ ಚರ್ಮಕ್ಕೆ ಕುಲವಿಲ್ಲ, ಖಂಡಕ್ಕೆ ಕುಲವಿಲ್ಲ,
ನರವಿಂಗೆ ಕುಲವಿಲ್ಲ, ರಕ್ತಕ್ಕೆ ಕುಲವಿಲ್ಲ, ಕೀವಿಂಗೆ ಕುಲವಿಲ್ಲ,
ಕರುಳಿಂಗೆ ಕುಲವಿಲ್ಲ, ಮಲಮೂತ್ರಕ್ಕಂತೂ ಕುಲವಿಲ್ಲ,
ಒಡಲೆಂಬುದು ಅಪವಿತ್ರವಾಯಿತ್ತು, ಕುಲವೆಲ್ಲಿಯದೊಡಲಿಂಗೆ ?
ಅವಂತಿರಲಿ ; ಇನ್ನು ನಿಮ್ಮ ಪ್ರಾಣಕ್ಕೆ ಕುಲವುಂಟೆಂದಡೆ.
ಪ್ರಾಣ ದಶವಾಯುವಾದ ಕಾರಣ, ಆ ವಾಯು ಹಾರುವನಲ್ಲ,
ಅದುವಲ್ಲದೆ ನಿಮ್ಮ ಒಡಲನಲಗಾಗಿ ಇರಿವ
ಕಾಮ ಕ್ರೋಧ ಲೋಭ ಮೋಹ ಮದ ಮತ್ಸರಂಗಳು
ಉತ್ತಮ ಕುಲವೆಂಬ ಅವು ಮುನ್ನವೆ ಪಾಪಕಾರಿಗಳಾದ ಕಾರಣ,
ಅವಕ್ಕೆ ಕುಲವಿಲ್ಲ, ನಿಲ್ಲು ! ಮಾಣು !
ನಿಮ್ಮೊಳಗಣ ಸಪ್ತವ್ಯಸನಂಗಳು ಉತ್ತಮ ಕುಲವೆಂಬ ಅವು
ಮುನ್ನವೆ ದುರ್ವ್ಯಸನಂಗಳಾದ ಕಾರಣ,
ಅದಕೆಂದೂ ಕುಲವಿಲ್ಲ, ನಿಲ್ಲು ! ಮಾಣು !
ನಿಮ್ಮ ಅಷ್ಟಮದಂಗಳು ಉತ್ತಮ ಕುಲವೆಂಬ ಅವು
ನಿನ್ನ ಸುರೆಯ ಸವಿದ ಕೋಡಗದ ಹಾಂಗೆ
ನಿಮ್ಮ ಗಾಣಲೀಯವಾದ ಕಾರಣ, ಅವು ಕುಲವಿಲ್ಲ,
ನಿಲ್ಲು ! ಬಗುಳದಿರು !
ಇನ್ನು ಒಡಲ ತಾಪತ್ರಯಂಗಳು ಉತ್ತಮ ಕುಲವೆಂಬ
ಅವು ನಿಮ್ಮ ಇರಿದಿರಿದು ಸುಡುವ ಒಡಗಿಚ್ಚುಗಳು.
ಅವು ಕುಲವಿಲ್ಲ, ನಿಲ್ಲು ! ಮಾಣು !
ನಿಮ್ಮೊಡಲ ಮುಚ್ಚಿದ ಮಲಮೂತ್ರಂಗಳ ಕುಲವುಂಟೆ ?
ಅವು ಅರಿಕೆಯಲಿ ಮಲಮೂತ್ರಂಗಳಾದ ಕಾರಣ,
ಅವಕ್ಕೆ ಕುಲವಿಲ್ಲ ನಿಲ್ಲು ! ಮಾಣು !
ಇನ್ನು ಉಳಿದ ಅಂತಃಕರಣಂಗಳಿಗೆ ಉತ್ತಮ ಕುಲವೆಂಬಿರಿ.

ಅವ ನೀವು ಕಾಣಿರಿ, ನಿಮ್ಮನವು ಕಾಣವು.
ಅದು ಕಾರಣ ಬಯಲಭ್ರಮೆಗೆ ಉತ್ತಮ ಕುಲವುಂಟೆ ?
ಇಲ್ಲ ! ಇಲ್ಲ !! ನಿಲ್ಲು ! ಮಾಣು !
ಇಂತು ನಿಮ್ಮ ಪಂಚಭೂತ ಸಪ್ತಧಾತು ಪಂಚೇಂದ್ರಿಯಂಗಳು
ಉತ್ತಮ ಕುಲವೆಂಬ ಅವು ಎಲ್ಲಾ ಜೀವರಾಶಿಗೂ ನಿಮಗೂ ಒಂದೇ ಸಮಾನ.
ಅದೆಂತೆಂದಡೆ :
ಸಪ್ತಧಾತುಸಮಂ ಪಿಂಡಂ ಸಮಯೋನಿಸಮುದ್ಭವಂ ।
ಆತ್ಮಾಜೀವಸಮಾಯುಕ್ತಂ ವರ್ಣಾನಾಂ ಕಿಂ ಪ್ರಯೋಜನಂ ॥
ಎಂದುದಾಗಿ, ನಿಮ್ಮ ದೇಹಕ್ಕೆ ಕುಲವಾವುದು ಹೇಳಿರೆ !
ಇದಲ್ಲದೆ ಆತ್ಮನು ದೇಹವ ಬಿಟ್ಟು, ಒಂದು ಘಳಿಗೆ ತೊಲಗಿರಲು
ಆ ದೇಹ ಹಡಿಕೆಯಾಗಿ ಹುಳಿತು, ನಾಯಿ ನರಿ ತಿಂಬ ಕಾರಣ
ನಿಮ್ಮ ದೇಹ ಅಪವಿತ್ರ ಕಾಣಿರೆ !
ಇಂತಪ್ಪ ಅಪವಿತ್ರ ಕಾರ್ಯಕ್ಕೆ ಕುಲವಿಲ್ಲ.
ಆ ಕಾರ್ಯಕ್ಕೆ ಕುಲವುಂಟೆಂದಡೆ
ಮೇಲುಜಾತಿಯ ದೇಹದೊಳಗೆ ಹಾಲುವುಳ್ಳಡೆ
ಕೀಳುಜಾತಿಯ ದೇಹದೊಳಗೆ ರಕ್ತವುಳ್ಳಡೆ ಅದು ಕುಲವಹುದು !
ಅಂಥಾ ಗುಣ ನಿಮಗಿಲ್ಲವಾಗಿ,
ಎಲ್ಲಾ ಜೀವರಾಶಿಯ ದೇಹವು, ನಿಮ್ಮ ದೇಹವು ಒಂದೇ ಸಮಾನವಾದ ಕಾರಣ
ನಿಮಗೆ ಕುಲವಿಲ್ಲ ! ನಿಲ್ಲು ! ಮಾಣು !
ಒಡಲು ಕರಣಾದಿಗಳು ಕುಲವಿಲ್ಲದೆ ಹೋದಡೂ
ಎಲ್ಲವೂ ಅರಿವ ಚೈತನ್ಯಾತ್ಮಕನೆ, ಸತ್ಕುಲಜನೆ ಆತ್ಮನು,
ಆವ ಕುಲದೊಳಗೂ ಅಲ್ಲ.
ಶರೀರ ಬೇರೆ, ಆತ್ಮ ಬೇರೆ. ಅದೆಂತೆಂದಡೆ :
ಭೂದೇವಮೃದ್ಭಾಂಡಮನೇಕ ರೂಪಂ
ಸುವರ್ಣಮೇಕಂ ಬಹುಭೂಷಣಾನಾಂ ।
ಗೋಕ್ಷೀರಮೇಕಂ ಬಹುವರ್ಣಧೇನುಃ ।
ಶರೀರಭೇದಸ್ತ್ವೇಕಃ ಪರಮಾತ್ಮಾ ॥
ಎಂದುದಾಗಿ, ಶರೀರಂಗಳು ಅನಂತ, ಆತ್ಮನೊಬ್ಬನೆ.
ಅದು ಕಾರಣ, ಆ ಆತ್ಮನು ಆವ ಕುಲದಲ್ಲೂ ಅಲ್ಲ.
ಇನ್ನು ಆವ ಠಾವಿನಲ್ಲಿ ನಿಮ್ಮ ಕುಲದ ಪ್ರತಿಷ್ಠೆಯ ಮಾಡಿ ತೋರಿವಿರೊ ?
ದೇಹದ ಮೃತ್ತಿಕೆ ಆತ್ಮ ನಿರಾಕಾರನೆನುತ್ತಿರಲು,
ಇನ್ನಾವ ಪರಿಯಲ್ಲಿ ನಾ ಉತ್ತಮ ಕುಲಜರೆಂಬಿರೊ ?
ಜೀವಶ್ಶಿವೋ ಶಿವೋ ಜೀವಸ್ಸಜೀವಃ ಕೇವಲಃ ಶಿವಃ ।
ಪಾಶಬದ್ಧಸ್ಥಿತೋ ಜೀವಃ ಪಾಶಮುಕ್ತಃ ಸದಾಶಿವಃ ॥

ಎಂಬ ಶ್ರುತಿಯಂ ತಿಳಿದು ನೋಡಲು,
ನೀವೆಲ್ಲಾ ಪಾಶಬದ್ಧ ಜೀವಿಗಳಾಗುತ್ತ ಇರಲು,
ನಿಮಗೆಲ್ಲಿಯ ಉತ್ತಮ ಕುಲ ?
ಪಾಶಮುಕ್ತರಾದ ಎಮ್ಮ ಶಿವಭಕ್ತರೆ ಕುಲಜರಲ್ಲದೆ
ನಿಮಗೆ ಉತ್ತಮ ಕುಲ ಉಂಟಾದಡೆ,
ನಿಮ್ಮ ದೇಹದೊಳಗೆ ಹೊರಗೆ ಇಂಥಾ ಠಾವೆಂದು ಬರಳುವಾಡಿ ತೋರಿ !
ಅದೂ ಅಲ್ಲದೆ ಒಂದು ಪಕ್ಷಿಯ ತತ್ತಿಯೊಳಗೆ ಹಲವು ಮರಿ ಹುಟ್ಟಿದವ
ಒಂದರ ಮರಿಯೋ, ಹಲವು ಪಕ್ಷಿಯ ಮರಿಯೋ ?
ತಿಳಿದು ನೋಡಿದಡೆ ಅದಕ್ಕೆ ಬೇರೆ ಬೇರೆ ಪಕ್ಷಿಗಳೆಂಬ ಕುಲವಿಲ್ಲ.
ಅಹಂಗೆ ಒಬ್ಬ ಬ್ರಹ್ಮನ ಅಂಡವೆಂಬ ತತ್ತಿಯೊಳಗೆ
ಸಕಲ ಜೀವರಾಶಿ ಎಲ್ಲಾ ಉದಯಿಸಿದವು.
ಅದೆಂತೆಂದಡೆ :
ಪೃಥಿವ್ಯಾಕಾಶಯೋರ್ಭ್ರಾಂಡಂ ತಸ್ಯಾಂಡಂ ಜಾಯತೇ ಕುಲಂ ।
ಅಂತ್ಯಜಾತಿರ್ದ್ವಿಜಾತಿರ್ಯಾ ಏಕಯೋನಿಸಹೋದರಾ ॥
ಎಂದುದಾಗಿ,
ಇರುಹೆ ಮೊದಲು, ಆನೆ ಕಡೆಯಾದ ಸಚರಾಚರವೆಲ್ಲವು
ಒಬ್ಬ ಬ್ರಹ್ಮನ ಅಂಡದೊಳಗೆ ಹುಟ್ಟಿ,
ಏಕಯೋನಿ ಸಹೋದರರೆಂದು ಪ್ರತಿಷ್ಠಿಸುತ್ತಿರಲು,
ನಿಮಗೆಲ್ಲಿಯ ಕುಲವೊ ?
ಶಿವಭಕ್ತರೆ ಉತ್ತಮ ಕುಲಜರೆಂದು, ಮಿಕ್ಕಿನವರೆಲ್ಲಾ ಕೀಳುಜಾತಿ ಎಂಬುದನು
ಓದಿ ಬರಿದೊರೆಯಾದಡು ನಾನು ನಿಮಗೆ ಹೇಳಿಹೆನು ಕೇಳಿ
ಶ್ವಪಚೋऽಪಿ ಮುನಿಶ್ರೇಷ್ಠಶ್ಶಿವ ಸಂಸ್ಕಾರಸಂಯುತಃ ।
ಶಿವಸಂಸ್ಕಾರಹೀನಶ್ಚ ಬ್ರಾಹ್ಮಣಃ ಶ್ವಪಚಾಧಮಃ ॥
ಎಂಬ ಶ್ರುತಿಗೆ ಇದಿರುತ್ತರವ ಕೊಟ್ಟಡೆ,
ಬಾಯಲ್ಲಿ ಕಾಷ್ಟವ ಮೂಡುವುದಾಗಿ ನೀವೇ ಕೀಳುಜಾತಿಗಳು,
ಅರಿದ ಶಿವಭಕ್ತರು ಸತ್ಕುಲಜರೆಂದು ಸುಮ್ಮನಿರಿರೋ.
ಅಲ್ಲದ ಅಜ್ಞಾನರಾದುದೆಲ್ಲಾ ಒಂದು ಕುಲ.
ಸುಜ್ಞಾನರಾದುದೆಲ್ಲಾ ಒಂದು ಕುಲವೆಂದು ಶಾಸ್ತ್ರಗಳು ಹೇಳುತ್ತಿದ್ದಾವೆ.
ಅದೆಂತೆಂದಡ :
ಆಹಾರನಿದ್ರಾಭಯಮೈಥುನಂ ಚ
ಸಾಮಾನ್ಯಮೇತತ್ಪಶುಭಿರ್ನರಾಣಾಂ ।
ಜ್ಞಾನಂ ಹಿ ತೇಷಾಂ ಅಧಿಕೋ ವಿಶೇಷಃ
ಜ್ಞಾನೇನ ಹೀನಾಃ ಪಶುಭಿಃ ಸಮಾನಾಃ ॥
ಎಂದುದಾಗಿ, ಅಜ್ಞಾನತಂತುಗಳು ನೀವೆಲ್ಲರೂ ಕರ್ಮಪಾಶಬದ್ಧರು.

ನಿಮಗೆಲ್ಲಿಯದೊ ಸತ್ಕುಲ ?
ಇದು ಅಲ್ಲದ ನಿಮ್ಮ ನುಡಿಯೊಡನೆ ನಿಮಗೆ ಹಗೆಮಾಡಿ ತೋರಿಹೆನು.
ಕೇಳಿಲವ್ಯೊ ನಿಮಗೆ ಕುಲವು ವಶಿಷ್ಟ, ವಿಶ್ವಾಮಿತ್ರ, ಭಾರದ್ವಾಜ,
ಕೌಂಡಿಲ್ಯ, ಕಾಶ್ಯಪನೆಂಬ ಋಷಿಗಳಿಂದ ಬಂದಿತ್ತೆಂಬಿರಿ.
ಅವರ ಪೂರ್ವವನೆತ್ತಿ ನುಡಿದಡೆ ಹುರುಳಿಲ್ಲ.
ಅವರೆಲ್ಲಾ ಕೀಳುಜಾತಿಗಳಾದ ಕಾರಣ,
ನೀವೇ ಋಷಿಮೂಲವನು, ನದಿಮೂಲವನೆತ್ತಲಾಗದೆಂಬಿರಿ.
ಇನ್ನು ನಿಮ್ಮ ನುಡಿ ನಿಮಗೆ ಹಗೆಯಾಯಿತ್ತೆಂದೆ ಕೇಳಿರೊ.
ಆ ಋಷಿಗಳ ಸಂತಾನವಾಗಿ ನಿಮ್ಮ ಮೂಲವನೆತ್ತಿದಡೂ ಹುರುಳಿಲ್ಲ.
ಅದಂತಿರಲಿ. ನಿಮ್ಮ ಕುಲಕೆ ಗುರುವೆನಿಸುವ ಋಷಿಗಳೆಲ್ಲರೂ
ಲಿಂಗವಲ್ಲದ ಪೂಜಿಸರು, ವಿಭೂತಿ ರುದ್ರಾಕ್ಷಿಯನಲ್ಲದೆ ಧರಿಸರು,
ಪಂಚಾಕ್ಷರಿಯನಲ್ಲದೆ ಜಪಿಸರು, ಜಡೆಯನ್ನಲ್ಲದೆ ಕಟ್ಟರು.
ಹಾಗೆ ನೀವು ಲಿಂಗವ ಪೂಜಿಸಿ, ವಿಭೂತಿ ರುದ್ರಾಕ್ಷಿಯ ಧರಿಸಿ,
ಪಂಚಾಕ್ಷರಿಯ ಜಪಿಸಿ, ಜಡೆಯ ಕಟ್ಟಿ,
ಈಶ್ವರನ ಲಾಂಛನವ ಧರಿಸಿದಡೆ ನೀವು ಋಷಿಮೂಲದವರಹುದು.
ಹೇಗಾದಡೂ ಅನುಸರಿಸಿಕೊಳಬಹುದು.
ಅದು ನಿಮಗಲ್ಲದ ಮಟ್ಟಿಯನ್ನಿಟ್ಟು, ವಿಷ್ಣುವಂ ಪೂಜಿಸಿ
ಮುಡುಹಂ ಸುಡಿಸಿಕೊಂಡು,
ಸಾಲಿಗ್ರಾಮ, ಶಕ್ತಿ, ಲಕ್ಷ್ಮಿ, ದುರ್ಗಿ ಎಂಬ ಕಿರುಕುಳದೈವವಂ ಪೂಜಿಸಿ,
ನರಕಕ್ಕಿಳಿದು ಹೋಪರಾದ ಕಾರಣ, ನೀವೇ ಹೀನಜಾತಿಗಳು.
ನಿಮ್ಮ ಋಷಿಮಾರ್ಗವ ವಿಚಾರಿಸಿ ನಡೆಯಿರಾಗಿ ನೀವೇ ಲಿಂಗದ್ರೋಹಿಗಳು.
ಲಿಂಗವೆ ದೈವವೆಂದು ಏಕನಿಷ್ಠೆಯಿಂದಲಿರಿರಾಗಿ ನೀವೇ ಲಿಂಗದ್ರೋಹಿಗಳು.
ಪಂಚಾಕ್ಷರಿಯ ನೆನೆಯಿರಾಗಿ ಮಂತ್ರದ್ರೋಹಿಗಳು.
ರುದ್ರಾಕ್ಷಿಯ ಧರಿಸರಾದ ಕಾರಣ ನೀವು ಶಿವಲಾಂಛನ ದ್ರೋಹಿಗಳು.
ಶಿವಭಕ್ತರಿಗೆರಗದ ಕಾರಣ ನೀವು ಶಿವಭಕ್ತರಿಗೆ ದ್ರೋಹಿಗಳು.
ನಿಮ್ಮ ಮುಖವ ನೋಡಲಾಗದು.
ಬರಿದೆ ಬ್ರಹ್ಮವನಾಚರಿಸಿ ನಾವು ಬ್ರಹ್ಮರೆಂದೆಂಬಿರಿ.
ಬ್ರಹ್ಮವೆಂತಿಪ್ಪುದೆಂದರಿಯಿರಿ.
ಬ್ರಹ್ಮಕ್ಕೂ ನಿಮಗೂ ಸಂಬಂಧವೇನೊ ?
ಸತ್ಯಂ ಬ್ರಹ್ಮ ಶುಚಿರ್ಬ್ರಹ್ಮ ಇಂದ್ರಿಯನಿಗ್ರಹಃ।
ಸರ್ವಜೀವದಯಾಬ್ರಹ್ಮ ಇತ್ಯೇತದ್ಬ್ರಹ್ಮಲಕ್ಷಣಂ।
ಸತ್ಯಂ ನಾಸ್ತಿ ಶುಚಿರ್ನಾಸ್ತಿ ನಾಸ್ತಿ ಚೇಂದ್ರಿಯ ನಿಗ್ರಹಃ।
ಸರ್ವಜೀವ ದಯಾ ನಾಸ್ತಿ ಏತಚ್ಚಾಂಡಾಲ ಲಕ್ಷಣಂ॥
ಬ್ರಹ್ಮಕ್ಕೂ ನಿಮಗೂ ಸಂಬಂಧವೇನೊ ?

ಬ್ರಹ್ಮವೆ ನಿಃಕರ್ಮ, ನೀವೇ ಕರ್ಮಿಗಳು.
ಮತ್ತಂತೊ 'ಬ್ರಹ್ಮಂ ಚರೇತಿ ಬ್ರಹ್ಮಣಾಂ' ಎಂದು ಗಳವುತ್ತಿಹಿರಿ.
ಗಾಯತ್ರಿಯ ಜಪಿಸಿ ನಾವು ಕುಲಜರೆಂಬಿರಿ.
ಆ ಗಾಯತ್ರಿ ಕರ್ಮವಲ್ಲದೆ ಮುಕ್ತಿಗೆ ಕಾರಣವಿಲ್ಲ.
ಅಂತು ಗಾಯತ್ರಿಯಿಂದ ನೀವು ಕುಲಜರಲ್ಲ.
ವೇದವನೋದಿ ನಾವೇ ಬ್ರಹ್ಮರಾದೆವೆಂಬಿರಿ.
ವೇದ ಹೇಳಿದ ಹಾಂಗೇ ನಡೆಯಿರಿ.
ಅದೆಂತೆಂದಡೆ :
''ದ್ಯಾವಾಭೂಮಿೂ ಜನಯನ್ ದೇವ ಏಕಃ''
ಎಂದೋದಿ ಮರದು, ವಿಷ್ಣುವನೆ ಭಜಿಸುವಿರಿ.
ನೀವೇ ವೇದವಿರುದ್ಧಿಗಳು.
''ವಿಶ್ವತೋ ಮುಖ ವಿಶ್ವತೋ ಚಕ್ಷು ವಿಶ್ವತೋ ಬಾಹು''
ಎಂದೋದಿ ಮತ್ತೆ,
''ಏಕೋ ರುದ್ರೋ ನ ದ್ವಿತೀಯಾಯ ತಸ್ಥೇ'' ಎಂದು ಮರದು,
ಬೇರೊಬ್ಬ ದೈವ ಉಂಟೆಂದು ಗಳಹುತ್ತಿದ್ದಿರಿ.
ನೀವೇ ವೇದದ್ರೋಹಿಗಳು.
''ಏಕಮೇವಾದ್ವಿತಿಯಂ ಬ್ರಹ್ಮ''ವೆಂದೋದಿ,
ಕರ್ಮದಲ್ಲಿ ಸಿಕ್ಕಿದ್ದೀರಿ. ನೀವೇ ದುಃಕರ್ಮಿಗಳು.
''ಅಯಂ ಮೇ ಹಸ್ತೋ ಭಗವಾನ್, ಅಯಂ ಮೇ ಭಗವತ್ತರಃ।''
ಎಂದೋದಿ, ಅನ್ಯಪೂಜೆಯ ಮಾಡುತಿದ್ದೀರಿ. ನೀವೇ ಪತಿತರು.
''ಶಿವೋ ಮೇ ಪಿತಾ'' ಎಂದೋದಿ, ಸನ್ಯಾಸಿಗಳಿಗೆ ಮಕ್ಕಳೆಂದಿರಿ.
ನೀವೇ ಶಾಸ್ತ್ರವಿರುದ್ಧಿಗಳು.
ಸದ್ಯೋಜಾತದ್ಭವೇದ್ಭೂಮಿರ್ವಾಮದೇವಾದ್ಭವೇಜ್ಜಲಂ।
ಅಘೋರಾದ್ವನ್ಹಿರಿತ್ಯುಕ್ತಸ್ತತ್ಪುರುಷಾದ್ವಾಯುರುಚ್ಯತೇ ॥
ಈಶಾನ್ಯಾದ್ಗಗನಾಕಾರಂ ಪಂಚಬ್ರಹ್ಮಮಯಂ ಜಗತ್ ।
ಎಂದೋದಿ, ಸರ್ವವಿಷ್ಣುಮಯ ಎನ್ನುತ್ತಿಪ್ಪಿರಿ.
ನಿಮ್ಮಿಂದ ಬಿಟ್ಟು ಶಿವದ್ರೋಹಿಗಳಾರೊ ?
''ಭಸ್ಮ ಜಲಮಿತಿ ಭಸ್ಮ ಸ್ಥಲಮಿತಿ ಭಸ್ಮ।''
ಎಂದೋದಿ, ಮರದು ವಿಭೂತಿಯ ನೀಡಲೊಲ್ಲದೆ ಮಟ್ಟಿಯಂ ನೀಡುವಿರಿ.
ನಿಮ್ಮಿಂದ ಪತಿತರಿನ್ನಾರೊ ?
''ರುದ್ರಾಕ್ಷಧಾರಣಾತ್ ರುದ್ರಃ'' ಎಂಬುದನೋದಿ
ರುದ್ರಾಕ್ಷಿಯಂ ಧರಿಸಲೊಲ್ಲದೆ, ಪದ್ಮಾಕ್ಷಿ ತೊಳಸಿಯ ಮಣಿಯಂ ಕಟ್ಟಿಕೊಂಬಿರಿ.
ನಿಮ್ಮಿಂದ ಪಾಪಿಗಳಿನ್ನಾರೊ ?
''ಪಂಚಾಕ್ಷರಸಮಂ ಮಂತ್ರಂ ನಾಸ್ತಿ ತತ್ವಂ ಮಹಾಮುನೇ ''

ಎಂಬುದನೋದಿ, ಪಂಚಾಕ್ಷರಿಯ ಜಪಿಸಲೊಲ್ಲದೆ,
ಗೋಪಳಾ ಮಂತ್ರವ ನೆನವಿರಿ ಎಂತೊ ?
ನಿಮ್ಮ ನುಡಿ ನಿಮಗೆ ವಿರುದ್ಧವಾಗಿರಲು,
ನಿಮ್ಮ ಓದು ವೇದ ನಿಮಗೆ ವಿರುದ್ಧವಾಗಿರಲು,
ನಿಮ್ಮ ಉತ್ತಮ ಕುಲಜರೆಂದು ವಂದಿಸಿದವರಿಗ
ಶೂಕರ ಜನ್ಮದಲ್ಲಿ ಬಪ್ಪುದು ತಪ್ಪದು ನೋಡಿರೆ !
ವಿಪ್ರಾಣಾಂ ದರಿಶನೇ ಕಾಲೇ ಪಾಪಂ ಭುಂಜಂತಿ ಪೂಜಕಾಃ ।
ವಿಪ್ರಾಣಾಂ ವದನೇನೈವ ಕೋಟಿಜನ್ಮನಿ ಶೂಕರಃ ॥
ಇಂತೆಂದುದಾಗಿ, ನಿಮ್ಮೊಡನೆ ಮಾತನಾಡಿದಡೆ ಪಂಚಮಹಾಪಾತಕಃ
ನಿಮ್ಮ ಮುಖವ ನೋಡಿದಡೆ ಅಘೋರನರಕ.
ಅದೆಂತೆಂದಡೆ :
ಒಬ್ಬ ಹಾರುವನ ದಾರಿಯಲ್ಲಿ ಕಂಡದಿರೆ ಇರಿದು ಕೆಡಹಿದಲ್ಲದೆ
ಹೋಗಬಾರದೆಂದು ನಿಮ್ಮ ವಾಕ್ಯವೆಂಬ
ನೇಣಿಂದ ಹೆಡಗುಡಿಯ ಕಟ್ಟಿಸಿಕೊಳುತಿಪ್ಪಿರಿ.
ಮತ್ತು ನಿಮ್ಮ ದುಶ್ಶರೀರತ್ರಯವನೆಣಿಸುವಡೆ
''ಅಣೋರಣೀಯಾನ್ ಮಹತೋ ಮಹೀಯಾನ್'' ಎಂಬುದ ನೀವೇ ಓದಿ,
ಪ್ರಾಣಿಯಂ ಕೊಂದು ಯಾಗವನ್ನಿಕ್ಕಿ,
ದೇವರ್ಕಳುಗಳಿಗೆ ಹೋಮದ ಹೊಗೆಯಂ ತೋರಿ,
ಕೊಬ್ಬು ಬೆಳೆದ ಸವಿಯುಳ್ಳ ಖಂಡವನೆ ತಿಂದು,
ಸೋಮಪಾನವೆಂಬ ಸುರೆಯನೆ ಕುಡಿದು,
ನೊಸಲಕಣ್ಣ ತೋರುವಂತಹ ಶಿವಭಕ್ತನಾದಡೂ ನಿಂದಿಸಿ ನುಡಿವುತಿಪಿರಿ.
ನಿಮ್ಮೊಡನೆ ನುಡಿವಡೆ ಗುರುಲಿಂಗವಿಲ್ಲದವರು ನುಡಿವರಲ್ಲದೆ,
ಗುರುಲಿಂಗವುಳ್ಳವರು ನುಡಿವರೆ ?
ಇದು ಶ್ರುತ ದೃಷ್ಟ ಅನುಮಾನದಿಂದ ವಿಚಾರಿಸಿ ನೋಡಲು,
ನೀವೇ ಪಂಚಮಹಾಪಾತಕರು.
ಶಿವಭಕ್ತಿಯರಿಯದ ನರರು ಪೀನಕುರಿಗಳು.
ನಿಮ್ಮಿಂದ ಏಳುಬೆಲೆ ಹೊರಗಾದ ಹೊಲೆಯನೆ
ಉತ್ತಮ ಕುಲಜನೆಂದು ಮುಂಡಿಗೆಯ ಹಾಕಿದೆನು, ಎತ್ತಿರೊ ಸತ್ಯವುಳ್ಳಡೆ !
ಅಲ್ಲದಡೆ ನಿಮ್ಮ ಬಾಯಬಾಲವ ಮುಚ್ಚಿಕೊಳ್ಳಿರೆ.
ಎಮ್ಮ ಶಿವಭಕ್ತರೇ ಅಧಿಕರು, ಎಮ್ಮ ಶಿವಭಕ್ತರೇ ಕುಲಜರು,
ಎಮ್ಮ ಶಿವಭಕ್ತರೇ ಸದಾಚಾರಿಗಳು, ಎಮ್ಮ ಶಿವಭಕ್ತರೇ ಪಾಪರಹಿತರು,
ಎಮ್ಮ ಶಿವಭಕ್ತರೇ ಸರ್ವಜೀವ ದಯಾಪಾರಿಗಳು,
ಎಮ್ಮ ಶಿವಭಕ್ತರೇ ಸದ್ಯೋನ್ಮುಕ್ತರಯ್ಯಾ,
ಘನಗುರು ಶಿವಲಿಂಗ ರಾಮನಾಥ. ॥೧॥

# ವೇದಮೂರ್ತಿ ಸಂಗಣ್ಣನ ವಚನ

೯೭

ಆಧಾರದಲ್ಲಿ ಸಾಮವೇದ, ಸ್ವಾಧಿಷ್ಠಾನದಲ್ಲಿ ಅಥರ್ವಣವೇದ.
ಮಣಿಪೂರಕದಲ್ಲಿ ಯಜುರ್ವೇದ. ಅನಾಹತದಲ್ಲಿ ಋಗ್ವೇದ.
ಆಜ್ಞೆಯಲ್ಲಿ ಉತ್ತರ ಖಂಡಣೆ, ವಿಶುದ್ಧಿಯಲ್ಲಿ ಪ್ರಣವದ ಲಕ್ಷಿತ.
ಇಂತೀ ವೇದವೇದ್ಯರು ನೋಡಾ ಎಮ್ಮವರು.
ಲಲಾಮಭೀಮಸಂಗಮೇಶ್ವರಲಿಂಗವನೊಳಕೊಂಡ ಶರಣರಂಗ. ॥ ೧ ॥

೯೮

ಕೃತಯುಗದಲ್ಲಿ ಕುಂಜರಯಾಗಕ್ಕೆ, ತ್ರೇತಾಯುಗದಲ್ಲಿ ಅಶ್ವಯಾಗಕ್ಕೆ,
ದ್ವಾಪರದಲ್ಲಿ ಮಹಿಷಯಾಗಕ್ಕೆ, ಕಲಿಯುಗದಲ್ಲಿ ಅಜಯಾಗಕ್ಕೆ,
ಇಂತೀ ವೇದಗಳಿಂದ ವೇದವೇದ್ಯರೆ ನೀವು ?
ವೇದಯಾಗಕ್ಕೆ ವಧೆಯುಂಟೆ ?
ಇಂತೀ ಭೇದವನರಿಯದೆ ಶಾಪಹತರುಗಳಿಗೆ
ಸರ್ವಜ್ಞಾತೃದೃಷ್ಟವಪ್ಪುದೆ ?
ಇಂತೀ ವೇದವೇದ್ಯರು ಶಾಸ್ತ್ರಸಂಪನ್ನರು.
ಪುರಾಣಪೂರ್ವಜ್ಞಾನಯುತರು, ಸಕಲಾಗಮಕ್ಕತೀತರು ಎಮ್ಮವರು,
ಲಲಾಮ ಭೀಮಸಂಗಮೇಶ್ವರಲಿಂಗದೊಳಗಾದ ಶರಣರು. ॥ ೨ ॥

೯೯

ತಾ ನಿಜವಿಟ್ಟ ಆ ನೆಲೆಯಲ್ಲಿ,
ತನ್ನಯ ವಿಶ್ವಾಸದಿಂದ ದೇವತಾಕಲೆ ಕುರುಹುಗೊಂಡಿತ್ತು.
ದೇವತಾಕಲೆ ತನ್ನ ತಾನಹಲ್ಲಿ ಇದಿರೆಡೆಯುಂಟೆ ?
ಸ್ಫಟಿಕದ ಘಟವರ್ತಿಯನೊಳಕೊಂಬುದಲ್ಲದೆ,
ಸ್ವಯರತ್ನ ಬಹುವರ್ಣಕ್ಕೊಳಗಪ್ಪುದೆ ?
ಇಂತಿವ ತಿಳಿದ ಸ್ವಾನುಭಾವಾತ್ಮಕನು.
ಲಕ್ಷಾಲಕ್ಷಂಗಳೆಂಬ ಭಿತ್ತಿಯ ಮೆಟ್ಟದೆ ನಿಶ್ಚಯವಾಗಿಹ ನಿಜಶರಣ ನೋಡಾ,
ಲಲಾಮಭೀಮಸಂಗಮೇಶ್ವರಲಿಂಗವು ತಾನಾದ ಶರಣ. || ೩ ||

೧೦೦

ಸಹ್ಯತೆ ಸಹ್ಯತೆ ಶಂಕರಿತೆ ಮೂಲಭದ್ರಿಕೆ
ಮಾಯಾರಿತು ಮಂತ್ರರಿತು ತಂತ್ರಸಾಧನ ಮಾತ್ರಾಯ ಪೂರ್ವನಿರೀಕ್ಷಣೆ
ರಘುವಾಚ ವಾದಮೂಲ ವೈದಿಕಧರ್ಮ ಸಾಂಖ್ಯನ ಮತ
ವ್ಯಾಪಾರ ಸಂಗ್ರಹ ಮಾಯಾ ತರ್ಕ ಶೂನ್ಯ,
ಉತ್ತರ ಸಂಕಲ್ಪ ಚಿಂತನೆ ಮೊದಲಾದ ವೇದಾಧ್ಯಾಯ,
ಉಭಯಚಿಂತನೆಯಾದರೂ ವೇದವೇದ್ಯರಲ್ಲ,
ಅದೆಂತೆಂದಡೆ :
ಮದವ ಸ್ವೀಕರಿಸಿದ ಮದೋನ್ಮತ್ತನಂತೆ,
ತನ್ನ ಕೊರತೆಯ ತಾನರಿಯದೆ ಇದಿರಿಗೆ ಚತುರತೆಯನೊರೆವವನಂತೆ,
ವೇದಘಾತಕರಲ್ಲದೆ ವೇದವೇದ್ಯರಲ್ಲ,
ವೇದವೇದ್ಯರಾರೆಂದಡೆ ತಾನೆಂಬುದ ತಾನರಿದು,
ತಾನೆಂಬ ಭಾವ ಏನೂ ಇಲ್ಲದೆ,
ಶ್ರುತಿ ಸ್ಮೃತಿ ತತ್ತ್ವಜ್ಞಾನ ಭೇದಂಗಳ ಧ್ಯಾನಪರಿಪೂರ್ಣನಾಗಿ,
ಪ್ರಾಣಿಗಳ ಕೊಲ್ಲದೆ, ಗೆಲ್ಲ ಸೋಲವನೊಲ್ಲದೆ,
ತ್ರಿವಿಧದರ್ಚನೆಯಲ್ಲಿ ನಿಲ್ಲದೆ, ಎಲ್ಲಾ ಆತ್ಮಂಗಳಲ್ಲಿ ಸಲ್ಲೀಲೆವಂತನಾಗಿ,
ಭಾವ ನಿಜವಸ್ತುವಿನಲ್ಲಿ ವೇಧಿಸಿ ನಿಂದಾತನೇ ವೇದವೇದ್ಯ,
ಲಲಾಮಭೀಮಸಂಗಮೇಶ್ವರ ಲಿಂಗದೊಳಗಾದ ಶರಣ. || ೪ ||

೧೦೧

ನೋಡುವ ದೃಷ್ಟಿಯು ಮುಟ್ಟಿದ ಮತ್ತೆ, ಇದಿರೆಡೆಯ ಕಾಬುದಿನ್ನೇನೊ ?
ಕ್ರಿಯ ಸಂಪದಂಗಳ ಮರೆದು, ಅರಿವ ಅರಿವಿನ ತೆರನಿನ್ನೆಂತು ?
ಸಕಲವೆಂದಲ್ಲಿ ಜಗ, ನಿಃಕಲವೆಂದಲ್ಲಿ ಕಾಬ ಲಕ್ಷ.
ಕಂಡು ನಿಶ್ಚೈಸಿದಲ್ಲಿ ಕಂಡೆಹೆನೆಂಬ ಭ್ರಾಂತು ಕಾಣಿಸಿಕೊಂಡು
ಇದಿರೆಡೆಗೊಟ್ಟುವದು,
ಲಲಾಮಭೀಮಸಂಗಮೇಶ್ವರಲಿಂಗವನರಿದ ಶರಣ. || ೫ ||

೧೦೨

ಪೂರ್ವಚಿಂತನೆಯಿಂದ ಕಂಡು, ಉತ್ತರಚಿಂತನೆಯಿಂದ ಖಂಡಿಸಿ.
ಲಕ್ಷಾಲಕ್ಷವೆಂಬ ಬೀಜಾಕ್ಷರದ ಪ್ರಣವದ
ಮೂಲಾಕ್ಷರದ ಚತುರ್ಭೇದವನರಿದು,
ಪಂಚಾಕ್ಷರಿ ಮುಂತಾದ ಷಡಕ್ಷರಿಯೊಳಗಾದ,
ಐವತ್ತೊಂದನೆಯ ಅಕ್ಷರದಲ್ಲಿ ನಿರ್ವಾಹವೇದ ಮುಂತಾದ ಶಾಸ್ತ್ರದೊಳಗಾದ,
ಪುರಾಣಾಗಮಂಗಳೆಲ್ಲವೂ ನಾನಾರೆಂಬುದ ತಿಳಿವುದಕಿಕ್ಕಿದ ಭಿತ್ತಿ.
ತನ್ನ ತಾನರಿದ ಮತ್ತೆ ಮಿಕ್ಕಾದ ಉಳುಮೆ ತನಗನ್ಯಭಿನ್ನವಿಲ್ಲ.
ಲಲಾಮಭೀಮಸಂಗಮೇಶ್ವರಲಿಂಗವಲ್ಲದಿದೆರಡೆಯಲ್ಲ. ॥ ೬ ॥

೧೦೩

ಪ್ರಥಮಪಾದದಲ್ಲಿ ಓಂಕಾರಕ್ಕೆ ನಕಾರ ಬೀಜಾಕ್ಷರ.
ಆ ನಕಾರ ಉಭಯ ಕೂಡಿದ ಮತ್ತೆ ಮಕಾರ ಬೀಜಾಕ್ಷರ.
ಇಂತೀ ತ್ರಿವಿಧಾಕ್ಷರ ಒಡಗೂಡಿ ಒಡಲಾದ ಮತ್ತೆ ಶಿಕಾರ ಬೀಜಾಕ್ಷರ.
ಇಂತೀ ಶಿಕಾರ ಮೂರನೊಡಗೂಡಿ ನಾಲ್ಕೆಂಬಲ್ಲಿಗೆ ಯಕಾರ ಬೀಜಾಕ್ಷರ.
ಇಂತೀ ಪಂಚಾಕ್ಷರಿಯ ಮೂಲಮಂತ್ರ ಸಂಬಂಧವಾಗಲಾಗಿ ಪ್ರಣಮದ ಬೀಜ.
ಆ ಪ್ರಣಮವು 'ಓಂ ಭರ್ಗೋ ದೇವಃ' ಜಗಕ್ಕೆ ಕರ್ತೃ ನೀನಲಾ ಎಂದು.
ಸಾಮ ಅರ್ಥವಣ ಯಜಸ್ಸು ಋಕ್ಕು ಉತ್ತರ ಖಂಡನ.
ಇಂತೀ ಪಂಚವೇದಂಗಳಲ್ಲಿ ಚತುರ್ವೇದಿಗಳಪ್ಪರಲ್ಲದೆ,
ಐಕ್ಯೋತ್ತರ ಚಿಂತನೆಯನೀ ವಿಪ್ರಕುಲ ಮಿಥ್ಯವಂತರು ಬಲ್ಲರೆ ?
ಕಣ್ಣಿನಲ್ಲಿ ನೋಡುತ್ತ ಕಣ್ಣಾಣೆನೆಂಬವನಂತೆ ಶಾಪಹತರಿಗೆಲ್ಲಕ್ಕೂ
ಲಲಾಮಭೀಮಸಂಗಮೇಶ್ವರಲಿಂಗವು ಅಸಾಧ್ಯ ನೋಡಾ. ॥ ೭ ॥

೧೦೪

ವೇದವ ಮೊದಲಧ್ಯಾಯದಲ್ಲಿ ಓಂಕಾರಕ್ಕೆ ಒಡೆಯನಾರೆಂಬುದ ತಿಳಿದು,
ಸದ್ಯೋಜಾತಾದ್ಭವೇದ್ಭೂಮಿರ್ವಾಮದೇವಾದ್ಭವೇಜ್ಜಲಂ
ಅಘೋರಾದ್ವಹ್ನಿರಿತ್ಯುಕ್ತಸ್ತತ್ಪುರುಷಾದ್ವಾಯುರುಚ್ಯತೇ ।
ಈಶಾನ್ಯಾದ್ಗಗನಾಕಾರಂ ಪಂಚಬ್ರಹ್ಮಮಯಂ ಜಗತ್ ॥
ಇಂತೀ ವೇದವೇದ್ಯರು ಶಿವಭಕ್ತರಲ್ಲದಿಲ್ಲ.
ಇಂತಿದನರಿಯದೆ, ಘನ ಕಿರಿದೆಂದು ಹೋರುವವರಿಗೆ ತಿಳಿವಳವ ಕೊಡುವೆ.
ನಿಮ್ಮ ಶಾಂಕರಸಂಹಿತೆಯಲ್ಲಿ ದೃಷ್ಟವ ತಿಳಿದುಕೊಳ್ಳಿ.
ಲಲಾಮಭೀಮಸಂಗಮೇಶ್ವರಲಿಂಗವಲ್ಲದಿಲ್ಲಾ ಎಂದೆ. ॥ ೮ ॥

೧೦೫

ವೇದವೆಂಬುದು ವೇದ್ಯರಿಗಲ್ಲದೆ ಸಾಧ್ಯವಲ್ಲ.
ಅದೆಂತೆಂದಡೆ :

ಬಿಂದು ವ್ಯಂಜನ ಗುರು ಲಘು ಸಮಾಸ ವಿಭಕ್ತಿಯ ನೇಮ
ಬೀಜಾಕ್ಷರ ಐವತ್ತೆರಡರ ಭೇದದೊಳಗಲ್ಲದೆ,
ಇಂತಿವೆಲ್ಲವೂ ಒಂದರಲ್ಲಿ ಹುಟ್ಟಿ, ಒಂದರಲ್ಲಿ ಬೆಳೆದು,
ಒಂದರಲ್ಲಿ ಲಯವಹ ಕಾರಣ, ಇಂತೀ ವೇದಿಗಳೆಲ್ಲರೂ
ವೇದಾಂತ ಸಿದ್ಧಾಂತದನುವನರಿಯದೆ, ಯಾಗವ ಮಾಡಿಹೆವೆಂದು
ತಿಲ ಘೃತ ಸಮಿದೆ ಮೊದಲಾದ ಅಜಹತ ದಿಗ್ಬಂಧನಂಗಳಲ್ಲಿ
ಪ್ರವರ್ತನ ಗ್ರಹಂಗಳಲ್ಲಿ ಕರ್ಮವ ಮಾಡಿ, ಅಗ್ನಿಗಾಹುತಿ ಕೊಟ್ಟಲ್ಲಿ,
ಆತ ವೇದಾಂತನೆ ಬಲುರೋಗಾಂತನಲ್ಲದೆ ?
ಇನ್ನು ವೇದಾಂತಸಿದ್ಧಿಯ ಕೇಳಿರೊ :
ಪೂರ್ವದಲ್ಲಿ ಹುಟ್ಟುವದನರಿದು, ಮಧ್ಯದಲ್ಲಿ ಬೆಳೆವುದ ನಿಧಾನಿಸಿ,
ಉತ್ತರದಲ್ಲಿ ಕಟ್ಟಕಡೆ ಎಂಬುದ ವಿಚಾರಿಸಿ ಲಕ್ಷಿಸಿ,
ಇಂತೀ ತ್ರಿವಿಧದ ಭೇದವ ಕಿತ್ತುಹಾಕಿ,
ಓಂ ಎಂಬ ಅರ್ಥವ ತಿಳಿದು, ನಯೆಂಬ ನಕಾರಮಂ ತಿಳಿದು,
ನಾನಾರೆಂಬುದ ಭಾವಿಸಿ, ಮಯೆಂಬ ಮದರೂಪಂ ವರ್ಜಿಸಿ,
ಶಿಯೆಂಬ ಶಿಕಾರವ ಸ್ವೀಕರಿಸಿ,
ಯಯೆಂಬ ಯಕಾರವ ನಾಲ್ಕರಲ್ಲಿ ಏಕೀಕರಿಸಿದ ಮತ್ತೆ,
ವೇದವೇದ್ಯನು ನೋಡಾ, ಲಲಾಮಭೀಮಸಂಗಮೇಶ್ವರಲಿಂಗವು. ॥ ೯ ॥

೧೦೬

ವೇಳೆಯನರಿದು ಧ್ವನಿದೋರುವ ತಾಮ್ರಚೂಡಂಗೆ ಅದಾವ ಜ್ಞಾನ ?
ಮಧುರರಸಂಗಳಿಪ್ಪ ಠಾವನರಿದೆಯಿದುವ ಪಿಪೀಲಿಕಂಗೆ ಅದಾವ ಜ್ಞಾನ ?
ತಾನುಂಡು ನೆನೆದಡೆ ಶಿಶು ತೃಪ್ತಿಯಹ ಕೂರ್ಮಂಗೆ ಅದಾವ ಜ್ಞಾನ ?
ಅರಿದು ನಡೆದಡೆ ವೇದವೇದ್ಯನು, ಅರಿದು ನಡೆದಡೆ ಶಾಸ್ತ್ರಸಂಬಂಧಿ,
ಅರಿದು ನಡೆದಡೆ ಪುರಾಣಪುಣ್ಯವಂತನು,
ಅರಿದು ನಡೆದಡೆ ಸಕಲಾಗಮಭರಿತನು.
ಇಂತೀ ಪಂಚಾಕ್ಷರಿಯ ಮೂಲಷಡಕ್ಷರಿಯ ಭೇದ.
ಜಗಕ್ಕಾಧಾರವಾರೆಂಬುದ ಏಕಮೇವನದ್ವಿತೀಯನೆಂಬುದ ತಿಳಿದು,
ಸೋಹಂ ಕೋಹಂ ಎಂಬುದ ತಿಳಿದು,
ಆ ನಿಜವೆ ವಸ್ತುವಿಗೊಡಲೆಂಬುದ ಪ್ರಮಾಣಿಸಿ,
ನುಡಿದು ನಡೆಯಬಲ್ಲವನೆ ವೇದವೇದ್ಯನು ಕಾಣಾ,
ಲಲಾಮಭೀಮಸಂಗಮೇಶ್ವರಲಿಂಗವು ತಾನಾದ ಶರಣ. ॥ ೧೦ ॥

■■

## ವೈದ್ಯ ಸಂಗಣ್ಣನ ವಚನ

೧೦೭

ಅಂಗಾಲ ಮೇಲಣ ದೊಡ್ಡಂಗುಷ್ಟ ಮಧ್ಯದಲ್ಲಿ ಪೃಥ್ವಿನಾಡಿ,
ನಾಭಿ ಮೂತ್ರನಾಳದ ನಾಲ್ಕಂಗುಲ ಮಧ್ಯದಲ್ಲಿ ಅಪ್ಪುನಾಡಿ,
ಉಡಸೂತ್ರ ನಾಭಿ ಮೊದಲಾದ
ಪಂಚಾಂಗುಲ ಮಧ್ಯದ ಮೇಲ್ದೆಸೆಯಲ್ಲಿ [ತೇಜನಾಡಿ],
ಇಡಾ ಪಿಂಗಳ ಮಧ್ಯದಲ್ಲಿ ವಾಯುನಾಡಿ,
ಸುಷುಮ್ನನಾಳದ ಅಂಗುಲ ನಡುಮಧ್ಯದಲ್ಲಿ ಆಕಾಶಕೈದಿದನಾಡಿ,
ಇಂತೀ ಪಂಚಪಥವನೈದುವ ನಾಡಿಯಲ್ಲಿ ಆಡುವ
ಆತ್ಮನ ವಿವರದ ದೆಸೆಯನರಿದು,
ಇಂತೀ ಐದು ಮುಚ್ಚಿ ಮೇಗಳ ಬ್ರಹ್ಮರಂಧ್ರದಲ್ಲಿಯೆಯ್ದಿದರೆಮ್ಮ ವೈದ್ಯರು.
ನಾದ ಬಿಂದು ಕಳೆಗತೀತ ನೋಡಾ,
ಮರುಳಶಂರಪ್ರಿಯ ಸಿದ್ಧರಾಮೇಶ್ವರಲಿಂಗವು. ॥ ೧ ॥

೧೦೮

ಅಪ್ಪು ತನುವಿನ ಶ್ರೇಷ್ಠವಾಗಲಾಗಿ, ವಾತ ಪಿತ್ತ ಶ್ಲೇಷ್ಮ ಬಲಿಯಿತ್ತು.
ಮಜ್ಜೆ ಮಾಂಸ ನರ ಅಸ್ಥಿಗಳಲ್ಲಿ ವೇಧಿಸಿತ್ತು.
ಆ ವೇಧನೆಯಿಂದ ಸರ್ವಾಂಗವ ದಹಿಸಿ, ದ್ವಾರದ್ವಾರಂಗಳಲ್ಲಿ ಮುಚ್ಚಿ,
ಅಗ್ನಿಯ ಗುಣ ಒಂದು, ಅಪ್ಪುವಿನ ಗುಣವೈದು.

ಇಂತೀ ಗುಣ ಶರೀರದಲ್ಲಿ ಲಕ್ಷಿಸಲಾಗಿ ಜೀರ್ಣಿಸದೆ,
ಆ ಜೀವನ ಪ್ರಮಾಣಿಸಿ ಕಲ್ಪನ ತೀರುವನ್ನಕ್ಕ ದೇಹದ ದರ್ಪಗೆಡಿಸಿ,
ಇಪ್ಪುದ ಸೋದಿಸಿಕೊಂಡು, ತ್ರೈಮಲ ಲಕ್ಷಣವ ಸೋಧಿಸಿಕೊಂಡು,
ವೈದ್ಯ ಪ್ರಯೋಗದಿಂದ ಆತ್ಮನ ಭೇದಿಸಿಕೊಂಡು,
ಹಂಸನು ಇಹ ಇರವೆಂಬ ತೆರನ ತಿಳಿದು,
ರಸ ನಾಲಗೆಯಲ್ಲಿ, ಗಂಧ ನಾಸಿಕದಲ್ಲಿ, ರೂಪು ಕಂಗಳಲ್ಲಿ,
ಶಬ್ದ ಕಿವಿಗಳಲ್ಲಿ, ಸ್ಪರುಶನ ಕೈಗಳಲ್ಲಿ,
ಇಂತಿ ಪಂಚೇಂದ್ರಿಯಂಗಳಲ್ಲಿ ಉಷ್ಣ ಶೈಕ್ಯವಪ್ಪುದನರಿದು,
ನಾಲಿಗೆಯಲ್ಲಿ ದ್ರವವನರಿದು,
ನಾಸಿಕದಲ್ಲಿ ಗಂಧವ ಸೂಸುವ ವಾಯುವಶೈತ್ಯವನರಿದು,
ಕರ್ಣವಾಸದಲ್ಲಿ ಶಬ್ದ ಸೂತ್ರಗೆಟ್ಟು,
ನೇತ್ರದಲ್ಲಿ ಕಪೋತ ಸಿಕ್ಕಿ, ಶ್ವೇತವಿಹಿತವಾಗಿ ಗರ್ಭೀಕರಿಸಿದ ಮತ್ತೆ
ವೈದ್ಯದಲೇತರ ಗುಣ.
ಇಂದ್ರಿಯಗುಣರೋಗಕ್ಕ ಜ್ಞಾನವೈದ್ಯ ನೋಡಾ,
ಮರುಳಶಂಕರಪ್ರಿಯ ಸಿದ್ಧರಾಮೇಶ್ವರಾ. ॥ ೨ ॥

೧೦೯

ಅರಿಯದವಂಗೆ ಅರಿದಿಹೆನೆಂಬ ಬಯಲರೋಗ ಹುಟ್ಟಿ,
ಕಾಲುಗೆಟ್ಟು ದೃಷ್ಟಿ ನಷ್ಟವಾಗುತ್ತಿದೆ ನೋಡಾ !
ಅದಕ್ಕೆ ನಾನೊಂದ ಮದ್ದ ಕಂಡೆ. ಹೆಸರಿಲ್ಲದ ಗಿಡ, ಮೂಲವಿಲ್ಲದ ಬೇರು.
ಎಲೆ ಹೂ ನಷ್ಟವಾದ ಚಿಗುರಿನ ಕುಲಗೆಟ್ಟು,
ಸಹಮೂಲಮಂ ತಂದು, ಆ ಕಲ್ಲಿನಲ್ಲಿ ಇಕ್ಕಿ ನೀರನೆರೆದು,
ಆ ಗುಂಡಿನಲ್ಲಿ ಹಾಗರೆಯಲಾಗಿ, ತಟ್ಟೆಯಲ್ಲಿ ಇಕ್ಕುವದಕ್ಕೆ ಮೊದಲೆ,
ಮದ್ದಿನ ದೃಷ್ಟ ನಷ್ಟವಾಯಿತ್ತು,
ಮರುಳಶಂಕರಪ್ರಿಯ ಸಿದ್ಧರಾಮೇಶ್ವರಲಿಂಗವನರಿಯಲಾಗಿ. ॥ ೩ ॥

೧೧೦

ಅಷ್ಟೋತ್ತರಶತವ್ಯಾಧಿಗಳ ಧರಿಸಿಕೊಂಡಿಪ್ಪುದು ಆತ್ಮನೊ, ಘಟನೊ ?
ಆತ್ಮನೆಂದಡೆ ಸಾಯದು ಚಿತ್ತ,
ಘಟವೆಂದಡೆ ಆತ್ಮನಿಲ್ಲದೆ ಅರಿಯದು ದೇಹ.
ಇಂತೀ ಒಂದ ಕಳೆದು, ಒಂದಕ್ಕೆ ಔಷಧಿಯ ಕೊಟ್ಟಿಹನೆಂದಡೆ,
ಆ ಎರಡರ ಸಂಗದಿಂದ ರುಜೆ ಪ್ರಮಾಣು.
ಇಂತೀ ಶರೀರಾತ್ಮ ಆದಿಯಾಗಿ ಬಂದ ವ್ಯಾಧಿಗೆ
ನಾನೊಂದು ಔಷಧಿಯ ಭೇದವ ಹೇಳಿಹೆ.
ಆಧಾರದಲ್ಲಿಪ್ಪ, ಮೂಲಿಕೆಯ ಬೇರನರದು, ಐದಿಂದ್ರಿಯವ ಕೂಡಿಕೊಂಡು.

ಮೂರು ಮುಟ್ಟದ ತಟ್ಟೆಯಲ್ಲಿ ಬೇಗ ತೆಗೆದುಕೊಳ್ಳಿ.
ಆ ಮದ್ದು ವಾಂತಿಗೆ ಸಲ್ಲ, ವಿರೋಚನವಿಲ್ಲ.
ನಾನಾ ವೈದ್ಯರ ಭೇದಗಾಹಿನ ಕ್ರಮವಲ್ಲ.
ಇದು ಸಿದ್ಧಾಂತ ಮೂಲಿಕೆ, ಇದ ಸಾಧಿಸಿಕೊಳ್ಳಿ.
ಎಂದೆಂದಿಗೂ ರುಜೆಯಿಲ್ಲ, ಸಂದುಸಂಶಯವಿಲ್ಲ,
ಮರುಳಶಂಕರಪ್ರಿಯ ಸಿದ್ಧರಾಮೇಶ್ವರಲಿಂಗದಲ್ಲಿ. || ೪ ||

೧೧೧

ಅಸ್ಥಿ ಮಾಂಸ ಶುಕ್ಲ ಶೋಣಿತವುಳ್ಳನ್ನಕ್ಕ
ಆರಿಗೂ ಆದಿವ್ಯಾಧಿಯ ತಾಪತ್ರಯದ ತನುತ್ರಯದ ಕೂಟಸ್ಥ ಬಿಡದು.
ರೋಗವನರಿದು ವೈದ್ಯವ ಮಾಡಿಹೆನೆಂದಡೆ,
ತನು ಪ್ರಮಾಣು, ಪೈತ್ಯಪ್ರಮಾಣು, ವಾತಪ್ರಮಾಣು,
ಶ್ಲೇಷ್ಮಪ್ರಮಾಣು, ಆತ್ಮತತ್ವಪ್ರಮಾಣು, ಚಂದ್ರ ಸೂರ್ಯ ಬಿಂದು ಪ್ರಮಾಣು,
ಮಿಕ್ಕಾದ ಸರ್ವಾಂಗ ಪ್ರಮಾಣ ಹೇಳಿಹೆನೆಂದಡೆ,
ಮರೀಚಿಕಾಜಲದಂತೆ, ಸುರಚಾಪದಂತೆ,
ಆಕಾಶದ ಪರಿಬಣ್ಣದಂತೆ, ಇಂತೀ ಶರೀರದ ತೆರ.
ಅಲ್ಪಾಂತರ ತಿರುಗುವನ್ನಕ್ಕರ ಶರೀರ ಸಿಕ್ಕುಹುದಲ್ಲದೆ,
ಮತ್ತೆಯೂ ಆತ್ಮನ ಕಟ್ಟಿಕೊಂಡಿಹೆನೆಂದಡೆ ಸತ್ವವುಂಟೆ ?
ವ್ಯಾಧಿಯಲ್ಲಿ ಹೊಂದುವ ತೆರನಾದಡೆ,
ಬ್ರಹ್ಮಂಗೆ ಸೃಷ್ಟಿಯಿಲ್ಲ, ವಿಷ್ಣುವಿಂಗೆ ಸ್ಥಿತಿ ಇಲ್ಲ, ರುದ್ರಂಗೆ ಲಯವಿಲ್ಲ.
ಇಂತೀ ಕರ್ಮಕಾಂಡದಲ್ಲಿ ಪ್ರಾಪ್ತಿ, ವರ್ಮಕಾಂಡದಲ್ಲಿ ಸರ್ವ,
ಜ್ಞಾನಕಾಂಡದಲ್ಲಿ ತ್ರಿವಿಧವಳಿದ ಮಹದೊಡಗೂಟ.
ಇಂತೀ ಜಗದಲ್ಲಿ ಒಂದನಹುದು, ಒಂದನಲ್ಲಾ ಎಂದಡೆ,
ಅಮೃತಕ್ಕೂ ಸುರಾಪಾನಕ್ಕೂ ಸರಿಯೆಂದು ಮಾರುವನ ತೆರದಂತೆ,
ಆರಾರ ತೆರನನು ನೋಡಿ ಸುಖಿಯಾಗಿ,
ತನ್ನನರಿವರಲ್ಲಿ ಮನಮುಕ್ತವಾಗಿ ಉಭಯವಳಿದು ಒಡಗೂಡಬೇಕು.
ಮರುಳಶಂಕರಪ್ರಿಯ ಸಿದ್ಧರಾಮೇಶ್ವರಲಿಂಗ ಕಳುಹಿದಂತೆ ಮಾಡಿ,
ಭಕ್ತಿಗೆ ಖೋಡಿ ಇಲ್ಲದೆ ಸತ್ಯವನೊಡಗೂಡಬೇಕು. || ೫ ||

೧೧೨

ಆರು ವರ್ಣದ ಬೇರು ಮೂರು ವರ್ಣದ ಉದಕ,
ರವೆ ತೋರಬಾರದ ಕಲ್ಲು, ಇಂತಿವ ಮೀರಬಾರದ ಗುಂಡು.
ಇಂತಿವ ಭೇದಿಸಿ ಅರೆಯಲಾಗಿ ಸವೆಯಿತ್ತು ಮದ್ದು, ವಿಶ್ವಾಸವೆಂಬ ತಟ್ಟೆಯಲ್ಲಿ.
ಭಕ್ತಂಗೆ ಮೂರು, ಮಾಹೇಶ್ವರಂಗೆ ನಾಲ್ಕು,
ಪ್ರಸಾದಿಗೆ ಐದು, ಪ್ರಾಣಲಿಂಗಿಗೆ ಆರು,

ಶರಣಂಗೆ ಎಂಟು, ಐಕ್ಯಂಗೆ ಹತ್ತು ಇಂತೀ ಕ್ರಮದಲ್ಲಿ ಕೊಂಡ ಮತ್ತೆ,
ಮೂರು ನಾಲ್ಕುಗೂಡಿ, ಆರು ಎಂಟುಗೂಡಿ,
ಎಂಟುಹತ್ತುಗೂಡಿ ನಷ್ಟವಾದ ಮತ್ತೆ,
ರೋಗದ ಕಟ್ಟು ತೊಟ್ಟು ಬಿಟ್ಟಿತು.
ಮರುಳಶಂಕರಪ್ರಿಯ ಸಿದ್ಧರಾಮೇಶ್ವರಲಿಂಗವನರಿಯಲಾಗಿ. || ೬ ||

೧೧೩

ಇಂತು ಐದುನಾಡಿಗಳೊಳಗಾದ ಇಪ್ಪತ್ತೇಳು ನಾಡಿ, ಬಾಹ್ಯದಲ್ಲಿ ಆಡುವವು.
ಜೀವಗತಿಯಾಗಿ ಅಸ್ಥಿನರನಾಳ ಮಧ್ಯದಲ್ಲಿ ಅಂತ್ಯನಾಡಿ.
ಆತ್ಮ ಚೇತನ ಅಸ್ಥಿಯೊಳಗಾದ ಸಂದುಸಂದಿನ ಮಜ್ಜೆಯ ಮಧ್ಯದಲ್ಲಿ ಸ್ವಪ್ನನಾಡಿ.
ಇಂತೀ ಉಭಯನಾಡಿ ಸುಷುಪ್ತಿಯ ಸುಷುಪ್ತಿಯಲ್ಲಿ
ಪರವಶನಾದ ಪರಬ್ರಹ್ಮನೋಡಾ,
ಮರುಳಶಂಕರಪ್ರಿಯ ಸಿದ್ಧರಾಮೇಶ್ವಲಿಂಗವು. || ೭ ||

೧೧೪

ಐದು ತತ್ತ್ವಂಗಳಿಂದಾದ ದೇಹಕ್ಕೆ ರೋಗರುಜೆಯಹುದೆ ?
ಕಾಯತತ್ವಂಗಳ ಗೊತ್ತಿನಲ್ಲಿ ನಿಂದು,
ಅವರವರ ಚಿಕಿತ್ಸೆಯಲ್ಲಿ ಹೊತ್ತು ನಿತ್ತರಿಸುವುದೆ ಕ್ರಮ.
ಅದೆಂತೆಂದಡೆ :
ಭಕ್ತಿನಿಷ್ಠೆ, ವಿಶ್ವಾಸನಿಷ್ಠೆ, ಜ್ಞಾನನಿಷ್ಠೆ.
ಇಂತಿ ಸದ್ಭಾವ ನೆಲೆಗೊಳ್ಳದ ಕಾರಣ,
ತನುವಿಂಗೆ ಅನುಪಾನವ ಪಾನವ ಮಾಡಬೇಕು.
ಮೇಲೆ ಅರಿದಡೆ, ಮನವು ಮನದಲ್ಲಿ ನಿಲಬೇಕು.
ಮರುಳಶಂಕರಪ್ರಿಯ ಸಿದ್ಧರಾಮೇಶ್ವರಲಿಂಗವನೊಡಗೂಡಬೇಕು. || ೮ ||

೧೧೫

ಕಕ್ಕಯ್ಯನೆನಗೆ ಕಾಮಧೇನುವಯ್ಯ. ಚೆನ್ನಯ್ಯನೆನಗೆ ಕಲ್ಪವೃಕ್ಷವಯ್ಯಾ.
ಹರಳಯ್ಯನೆನಗೆ ಚಿಂತಾಮಣಿಯಯ್ಯಾ.
ಕೆಂಭಾವಿಯ ಭೋಗಯ್ಯನೆನಗೆ ಸುದಾಬ್ಧಿಯಯ್ಯಾ.
ಶಿವನಾಗಮಯ್ಯನೆನಗೆ ಪರುಷದ ಗಿರಿಯಯ್ಯಾ.
ಇಂತೀ ಐವರ ಕಾರುಣ್ಯ ಪ್ರಸಾದವ ಕೊಂಡು ಬದುಕಿದೆನಯ್ಯಾ.
ಮರುಶಂಕರಪ್ರಿಯ ಸಿದ್ಧರಾಮೇಶ್ವರಯ್ಯಾ. || ೯ ||

೧೧೬

ಕಣ್ಣು ಕಳೆದ ಮತ್ತೆ ಅಂಜನಕ್ಕೆ ತಿಳಿವುದೆ ?
ಆತ್ಮನಿದ್ದಲ್ಲಿ ಅರಿಯದೆ ಹಸು ಸತ್ತ ಮತ್ತೆ ಮೋಕ್ಷವನರಸಲುಂಟೆ ?

ಎಚ್ಚರಿಕೆ ತನಗಿದ್ದಲ್ಲಿ ನಾನೊಂದು ನಿಶ್ಚಯದ ಮದ್ದ ತಂದೆ.
ಆ ಮದ್ದಿನ ಭೇದ ಘಟಕ್ಕೆ ಕೇಡಿಲ್ಲ.
ಆತ್ಮಂಗೆ ಭವವಿಲ್ಲ. ಅರಿವಿಂಗೆ ತುದಿಮೊದಲಿಲ್ಲ.
ಇದು ನಿರಿಗೆ ಕೊಳಬಲ್ಲಡೆ,
ಗುರುವಿಂಗೆ ತನು, ಲಿಂಗಕ್ಕೆ ಮನ, ಜಂಗಮಕ್ಕೆ ಧನ.
ರೋಗ ಹೋಯಿತ್ತು. ಬೇಗ ಅರಿದುಕೊಳ್ಳಿ,
ಮರುಳಶಂಕರಪ್ರಿಯ ಸಿದ್ಧರಾಮೇಶ್ವರಲಿಂಗ ಸಾಕ್ಷಿಯಾಗಿ. ॥ ೧೦ ॥

೧೧೭

ಕಾಯಕರ್ಮವ ಅನುಭವಿಸುತ್ತ ಮತ್ತೆ, ದಿವ್ಯಜ್ಞಾನದ ಮಾತದೇತಕ್ಕೆ ?
ವಾಗ್ವಾದಕ್ಕೂ ದಿವ್ಯಜ್ಞಾನಕ್ಕೂ ಅನುಪಾನವುಂಟೆ ?
ರಸವಾದದ ಬೇರ ಕದ್ದ ಚೋರನಂತೆ,
ಅದರ ಭೇದವನರಿಯ. ಅದ ವೇಧಿಸಿ ಕಾಣ.
ಕಳಂಕ ಹೋದ ಹೊಲಬನರಿಯ, ಆ ಚೋರನ ಮಾತ ವೇದಿಗಳೊಪ್ಪುವರೆ ?
ಇಂತಿ ಭೇದವ ತಿಳಿದು, ಷಡುಸ್ಥಲವೇದಿಗಳಾಗಬೇಕು.
ಮರುಳಶಂಕರಪ್ರಿಯ ಸಿದ್ಧರಾಮೇಶ್ವರಲಿಂಗವ,
ಅರಿವಿನಲ್ಲಿ ವೇಧಿಸಿಕೊಳ್ಳಬೇಕು. ॥ ೧೧ ॥

೧೧೮

ಜಿಹ್ವೇಂದ್ರಿಯವೆಂಬ ರೋಗ ಬಾಯಲ್ಲಿ ಹುಟ್ಟಿ,
ಗುಹ್ಯೇಂದ್ರಿಯವೆಂಬ ರೋಗ ಚಿತ್ತದಲ್ಲಿ ತತ್ತರಿಸುತ್ತಿದೆ ನೋಡಾ.
ಆಸೆಯೆಂಬ ರೋಗ ಸರ್ವಾಂಗದಲ್ಲಿ ಹೊಕ್ಕು,
ಸರ್ವರಿಗೆಲ್ಲಕ್ಕೂ ಪಾಷಂಡಿ ವೇಷಧಾರಿಗಳೆನಿಸುತ್ತಿದೆ ನೋಡಾ.
ಈ ರೋಗ ನಿರೋಗವಹುದಕ್ಕೊಂದು ಮದ್ದುಂಟು.
ಅದು ಬೇರು ಮೂರು, ಶಾಖೆ ಐದು, ಎಲೆ ಆರು, ಕೊನೆ ಇಪ್ಪತ್ತೈದು.
ಇಂತೀ ಗಿಡುವ ಸಹ ಮೂಲಸಹಿತ ತಂದು, ಕಂಗಳ ಕಲ್ಲಿನಲ್ಲಿ ಇಂಗಿಸಿ,
ಆನಂದಾಶ್ರುವೆಂಬ ಜಲವನೆರೆದು,
ಚಿತ್ತಶುದ್ಧವೆಂಬ ಗುಂಡಿನಲ್ಲಿ ಲಕ್ಷಿಸಿ ಅರೆಯಲಾಗಿ, ಮದ್ದು ನೀರೊಳಡಗಿತ್ತು.
ಕಲ್ಲು ಗುಂಡಿನಲ್ಲಿಗೆ ಸಾಧ್ಯವಲ್ಲದೆ ಹೋಯಿತ್ತು,
ಮರುಳಶಂಕರಪ್ರಿಯ ಸಿದ್ಧರಾಮೇಶ್ವರಲಿಂಗದಲ್ಲಿಗೆ. ॥ ೧೨ ॥

೧೧೯

ತ್ರಿದೋಷದ ಗುಣದಿಂದ ನಾನಾ ಬಹುತಾಪತ್ರಯದ
ವ್ಯಾಧಿಯ ಚಿಕಿತ್ಸೆಯನಾರು ಅರಿಯರಲ್ಲಾ !
ತನುವಿಂಗೆ ವಾತ, ಪೈತ್ಯ, ಶ್ಲೇಷ್ಮ, ಆತ್ಮಂಗೆ ಆಣವ, ಮಾಯಾ, ಕಾರ್ಮಿಕ.

ಇಂತೀ ತ್ರಿವಿಧ ಮಲತ್ರಯದ ರೋಗರುಜೆಯುಡಸಿ,
ಬಂಧನದಲ್ಲಿ ಸಾವುತ್ತಿದೆ ಅಂಗ.
ಈ ರೋಗ ನಿರೋಗವಹುದಕ್ಕೆ ನಾ ಮೂರು ಬೇರ ತಂದೆ.
ಒಂದ ಅಂಗದಲ್ಲಿ ಮರ್ದಿಸಿ, ಒಂದು ಆತ್ಮನಲ್ಲಿ ಮಥನಿಸಿ,
ಒಂದ ಅರಿವಿನಲ್ಲಿ ಪಾನವ ಮಾಡಿ, ಈ ರೋಗ ಹರಿವುದು.
ಇದಕ್ಕನುಪಾನ ಇದಿರೆಡೆಯಿಲ್ಲ,
ಮರುಳಶಂಕರಪ್ರಿಯ ಸಿದ್ಧರಾಮೇಶ್ವರಲಿಂಗ ಸಾಕ್ಷಿಯಾಗಿ. ॥ ೧೩ ॥

೧೨೦

ನವಪಾಷಾಣ ರಸ ಮುಂತಾದ ಔಷಧಿಗಳೆಲ್ಲವೂ
ಈ ಮೂರು ಮೂಲಿಕದೊಳಗು. ಇವು ಮರ್ತ್ಯದ ಜೀವರ ಚಿಕಿತ್ಸೆ.
ಭಕ್ತಂಗೆ, ನಿಷ್ಠಾಪರಂಗೆ, ಸುಚಿತ್ತ ನಿರ್ಮಲ ವಿರಕ್ತಂಗೆ,
ರೋಗರುಜೆಯಡಸಿದಲ್ಲಿ ತನುವಿಂಗೆ ಕ್ರೀ ಮಾಡಿದಡೂ ದೋಷವಿಲ್ಲ.
ಅದೆಂತೆಂದಡೆ :
ಉಷ್ಣಕ್ಕೆ ಶೈತ್ಯ ನೆರವಣಿಗೆಯಾದಂತೆ,
ಪಂಚಭೌತಿಕದಿಂದಾದ ಶರೀರಕ್ಕೆ ಚಿಕಿತ್ಸೆ,
ಅರಿವು ತಲೆದೋರಿದ ರೇತಕ್ಕೆ ಸಾವಧಾನದಲ್ಲಿ ತ್ರಿವಿಧದ ಬಿಡುಗಡೆ.
ತ್ರಿವಿಧಕಿತ್ತು ವಸ್ತುವನೊಡಗೂಡಿ ಎಯ್ದಿದವಂಗೆ
ರೋಗದಡಿಯಲ್ಲಿ ಸತ್ತವನಲ್ಲ,
ಮರುಳಶಂಕರರಪ್ರಿಯ ಸಿದ್ಧರಾಮೇಶ್ವರಲಿಂಗದಡಿಯೊಳಗಡಗಿದವಾ. ॥೧೪ ॥

೧೨೧

ನಾನಾ ರೋಗಂಗಳು ಬಂದು ದೇಹವ ಹಿಡಿದಲ್ಲಿ ಶಿವಾರ್ಚನೆಯ ಬೆರಕೊಳ್ಳಿ,
ಸಕಲಪುಷ್ಪಂಗಳಿಂದ ಪೂಜೆಯ ಮಾಡಿಕೊಳ್ಳಿ,
ಪಂಚಾಕ್ಷರಿ ಪ್ರಣಮವ ತಪ್ಪದೆ ತ್ರಿಸಂಧಿಯಲ್ಲಿ ನೆನಹುಗೊಳ್ಳಿ,
ಇವರಿಂದ ರುಜೆದರ್ಪಂಗಡಗು,
ಮರುಳಶಂಕರಪ್ರಿಯ ಸಿದ್ಧರಾಮೇಶ್ವರ ಲಿಂಗ ಸಾಕ್ಷಿಯಾಗಿ. ॥ ೧೫ ॥

೧೨೨

ಪಿಂಡ ಪ್ರಾಣ ಆರೋಗ್ಯಂಗಳ ಚಿಕಿತ್ಸೆಯನರಿದು,
ವೈದ್ಯವ ಮಾಡಬಲ್ಲಡೆ ಪಂಡಿತನಪ್ಪ.
ಘಟತ್ರಯದ ಭೇದವನರಿದು ಮಾಡುವ ಕ್ರಮವೆಂತುಂಟೆಂದಡೆ :
ಕಟಿ ಮೊದಲಾದ ಕೀಳುದೆಸೆಯಲ್ಲಿ ಸಂದಿನ ಭೇದ.
ಅಂಗುಲಿ ಸಂದು ಇಪ್ಪತ್ತು, ಮಡಸಂದು ಎರಡು, ಪಚ್ಚಳ ಸಂದು ಎರಡು.
ಇಂತೀ ಅಧಮನಾಳದಿಂದ ಕೆಳಗಾದ ನಾಳ ನಾಡಿಗಳ ಸೋಧಿಸಿಕೊಂಡು,

ಊರ್ಧ್ವದಂಡದಲ್ಲಿ ಉಭಯಪಕ್ಷದಲ್ಲಿ ಕೆಲವರಿದ ಸಂದು ಅರುವತ್ತಾರು.
ಅಂತು ಕೀಳು ಮೊದಲಾದ ಸಂದು ನರ ಇಪ್ಪತ್ತನಾಲ್ಕು.
ಅಬರಿಂದ ಮೊದಲಾದ ಉಭಯಕರದ ಸಂದು,
ಅಂಗುಲಿಯ ಸಂದು ಇಪ್ಪತ್ತೆಂಟು. ಇಂತೀ ಉಭಯಕರದ ಸಂದಾರು.
ಇಂತೀ ಕರದೊಳಗಾದ ಮೂವತ್ತುನಾಲ್ಕರ ಸಂದಿನ
ನಾಳನಾಡಿಗಳನರಿದು, ಅದರಿಂದ ಮೇಲೆ ಸಂಪುಟವೆರಡು.
ಜಿಹ್ವೆ ಮೊದಲಾದ ಏಳುದ್ವಾರಂಗಳ ಸೋಧಿಸಿಕೊಂಡು,
ಕಪಾಲದ ತ್ರಿವಿಧದ ಹೊಲಿಗೆಯ ಕಂಡು, ಅಂಗುಷ್ಟ ತೊಟ್ಟು,
ವಾಣಾಗ್ರಪರಿಯಂತರದಲ್ಲಿ ಸ್ಥಾನವ ಮುಟ್ಟಿ ನೋಡಿ,
ರವಿ ಶಶಿ ಪವನ ಪಾವಕ ಮುಟ್ಟಿ ಎಡೆಯಾಡುವ ಲಕ್ಷಣವ ಕಂಡು,
ಅವಕ್ಕೆ ಚಿಕಿತ್ಸೆಯಪ್ಪ ಅನ್ನ ಔಷಧಿ ಪಯಪಾನ ಉದಕ
ಮುಂತಾದ ತೆರವನರಿದಡೆ, ಆತನೆ ಇರವನರಿದವ.
ಇಂತೀ ಕಾಯಕದ ವೈದ್ಯವ ಮಾಡಬಲ್ಲವ,
ಮೇಲನರಿದು ಕೀಳ ಮರೆಯಬಲ್ಲಡೆ, ಆತ ವೈದ್ಯಪಂಡಿತನೆಂಬೆ,
ಮರುಳಶಂಕರಪ್ರಿಯ ಸಿದ್ಧರಾಮೇಶ್ವರಲಿಂಗವ ಬಲ್ಲವ. ॥ ೧೬ ॥

೧೨೩

ಭಕ್ತಂಗೊಂದೆ ವಾಕ್ಯಸ ಬಾಳಿಗೊಂದೆ ಫಲ.
ವಿರಕ್ತ ಬಿಟ್ಟುದ ಹಿಡಿದಲ್ಲಿ ಮತ್ತೆ ಮುಟ್ಟಿದಡೆ ಸತ್ತನಾಯ ಹಡುಹು.
ಮತ್ತೆ ಸತ್ಕ್ರಿಯೆಯಲ್ಲಿ ನಡೆವವ ತನ್ನ ನಿತ್ಯನೇಮವ ತಪ್ಪಿ,
ಕೆಟ್ಟು ನಡೆದು, ಮತ್ತೆ ದ್ರವ್ಯವ ಕೊಟ್ಟು,
ಭಕ್ತರೊಡೆಯರಲ್ಲಿ ತಪ್ಪ ಪರಿಹರಿಸಿಕೊಂಡಿಹೆನೆಂದು
ಬಹಮಿಟ್ಟೆಯ ಭಂಡರ ಕಂಡಡೆ,
ಮರುಳಶಂಕರಪ್ರಿಯ ಸಿದ್ಧರಾಮೇಶ್ವರ
ಲಿಂಗವಾಯಿತ್ತಾದಡೂ ಒಡಗೂಡಲೊಲ್ಲೆ. ॥ ೧೭ ॥

೧೨೪

ಮಯೂರನಾಡಿ, ಮಂಡೂಕನಾಡಿ, ಜಳೂಕನಾಡಿ, ಅಹಿವಳಿನಾಡಿ,
ಮಂಪಲಗಮಕನಾಡಿ, ಷಂಡೇತಪಥನಾಡಿ, ದೀರ್ಘನಾಡಿ,
ಅಧಮನಾಡಿ, ಉತ್ತರನಾಡಿ, ಪೂರ್ವನಾಡಿ. ಪಶ್ಚಿಮನಾಡಿ,
ಗಜಗಮನನಾಡಿ, ಹಜ್ಜೋತಿನಾಡಿ, ವಿಕ್ರಮನಾಡಿ, ಸೂತ್ರನಾಡಿ,
ಸಂಚುನಾಡಿ, ಸಂಚಲನಾಡಿ, ಶೈತ್ಯನಾಡಿ, ಉಷ್ಣನಾಡಿ,
ವಿಹಂಗನಾಡಿ. ಕೂರ್ಮನಾಡಿ, ಮರ್ಕಟನಾಡಿ,
ಪಿಪೀಲಿಕಾನಾಡಿ, ದಂಷ್ಟ್ರನಾಡಿ, ಮಕರನಾಡಿ, ಕರ್ಕೋಟಕನಾಡಿ,
ಸಮರಸನಾಡಿ, ಸಂತೋಷನಾಡಿ.

ಇಂತೀ ಪ್ರಥಮನಾಡಿಯೊಳಗಾದ ಶರೀರದಲ್ಲಿ ತೋರುವ ನಾಡಿ
ಜೀರ್ಣ ಪರ್ಣದಂತೆ ರೋಮಕೂಪದಲ್ಲಿ ಸೂಸುವ ವಾಯು,
ಇಂತಿವ ನೋಡಿ ವ್ಯಾಧಿಕ್ರಮವನರಿತೆಹೆನೆಂಬಡೆ ಅದಾರಿಗೂ ಅಸಾಧ್ಯ.
ನಾ ಮೂರುನಾಡಿಯ ಬಲ್ಲೆ
ಉತ್ಪತ್ತ್ಯ ಒಂದು ಸ್ಥಿತಿ ಎರಡು, ಲಯ ಮೂರು.
ನಾಳದ ನಾಡಿಯ ಬಲ್ಲೆ, ಭಕ್ತಿಯೆಂಬ ಹಸ್ತವಿಡಿದು ನೋಡಲಾಗಿ.
ಗುರುನಾಡಿ ಉಭಯವ ಕೊಂಡೆಡೆಯಾಡುತ್ತಿದೆ,
ಲಿಂಗನಾಡಿ ತ್ರಿವಿಧಸಂಧಿಯೊಳಗೆ ಸೂಸುತ್ತಿದೆ.
ಜಂಗಮನಾಡಿ ಮೂರರ ಹಂಗು ಬಿಟ್ಟು ಮಹದಲ್ಲಿ ಸಂದಿರುತ್ತದೇಕೊ ?
ಇದು ಲಿಂಗಾಂಗಿಗಳ ವೈದ್ಯ.
ಸಂಗನಬಸವಣ್ಣ ಬಂದಾಗ ಎನ್ನ ಕೊಂಡು ಬಂದ,
ತನ್ನ ವಶಕ್ಕೆ ವೈದ್ಯನೆಂದು.
ಈ ವೈದ್ಯದ ಚೀಲವ ಹೊತ್ತು ಗಸಣಿಗೊಳ್ಳುತ್ತಿದ್ದೇನೆ.
ಈ ಕಾಯಕದ ಸೇವೆಯ ಬಿಡಿಸಿ, ಕರಣಪ್ರಸಾದವ ಕೊಟ್ಟು,
ಮರುಳಶಂಕರಪ್ರಿಯ ಸಿದ್ಧರಾಮೇಶ್ವರಲಿಂಗ ನಿಮ್ಮಡಿಯೊಳಗೆನ್ನನಿರಿಸು. || ೧೮ ||

೧೨೫

ವಾತ ಪಿತ್ತ ಶ್ಲೇಷ್ಮಂಗಳಿಂದ ವ್ಯಾಧಿ ಬಂದಿತ್ತೆಂದು ನುಡಿವರು,
ಪಂಡಿತ ವರ್ಗಂಗಳೆಲ್ಲರು.
ಕರಣನಾಳದ ನಾಡಿಯ ಮುಟ್ಟಿ ನೋಡಿ,
ವಾಯುಗತಿ ನಡೆವ ವರ್ಗಂಗಳ ನೋಡಿ,
ಮಂದಗತಿ, ತಮಂಧಗತಿ, ತಾರುಗತಿ, ತ್ರಯಗತಿ, ಚತುರ್ಗತಿ, ಪಂಚಗತಿ.
ಇಂತೀ ಐದಂಗುಲಿಗೈದು, ನಾಳದ ನಾಡಿ ಸೂತ್ರಗಳ ಭೇದವನರಿದೆವೆಂದು,
ದೀಪನ ಪಚನ ಪೈತ್ಯ ಶ್ಲೇಷ್ಮವಿದೆಯೆಂದು
ಆತ್ಮನ ನಿಹಿತವನರಿಯದ ತೂತವೈದ್ಯನಲ್ಲ.
ಆತ್ಮಹಂಸನು ಷಡಾಧಾರವ ಮುಟ್ಟಿ, ಅಷ್ಟದಳ ಕಮಲವ ಮೆಟ್ಟಿ,
ಮಿಕ್ಕಾದ ದ್ವಾರಂಗಳಲ್ಲಿ ತಟ್ಟಿ ಮುಟ್ಟದೆ ಹೋಹ
ಭೇದವ ಬಲ್ಲವ, ನಾಡಿಯಲಾಡುವ ಆತ್ಮನ ಭೇದವ ಬಲ್ಲವ.
ಆತ್ಮನ ಸೋದಿಸಿ ತಿಳಿದಡೆ, ರುಜೆ ರೋಗವಳಿಯಿತ್ತಲ್ಲಿಯೆ,
ಮರುಳಶಂಕರಪ್ರಿಯ ಸಿದ್ಧರಾಮೇಶ್ವರಲಿಂಗದಲ್ಲಿ. || ೧೯ ||

೧೨೬

ವೈದ್ಯವೆಂದು ಮಾಡುವಲ್ಲಿ ನಾನಾಮೂಲಿಕೆ, ವನದ್ರವ್ಯ ಸಹ ಮುಂತಾಗಿ,
ಲವಣ, ಪಾಷಾಣ, ಲೋಹ, ಪಂಚಸಿಂಧೂರಂಗಳಿಂದ
ರಸ ದ್ರವ್ಯ ಮುಂತಾದ ಸಾರಂಗಳ ಕ್ರಮಂಗಳಲ್ಲಿ

ಸರ ಸಂಧಾನ ವಿಹಂಗ ಮೃಗ ನರ ಮತ್ತಿವರೊಳಗಾದ
ನಾನಾ ಜೀವಂಗಳ ನಿಮಿತ್ಯವ ಪ್ರಮಾಣಿಸಿ, ತನ್ನಾತ್ಮಸಿದ್ಧಿಯಾಗಿ,
ತಾ ಮಾಡಿದ ಔಷಧ ಪ್ರಸಿದ್ಧವಾಗಿ,
ಇಂತಿವ ಪ್ರಮಾಣಿಸಿಕೊಂಡು, ಇದರ ರುಜೆಯ ಪರಿಹರಿಸಿದೆನೆಂಬಲ್ಲಿ
ಅವನ ದೃಷ್ಟಿ ಮುಟ್ಟಿ, ಸತ್ವ ಸಮಾಧಾನ ಅವಗಡಿಸಿದ
ವ್ಯಾಧಿಯ ಚಿತ್ತವನರಿದು, ವೈದ್ಯವ ಲಕ್ಷಿಸಬೇಕು.
ಅವನ ಶರೀರದ ಕಟ್ಟಳೆಯನರಿದು, ತನ್ನ ಔಷಧಿಯ ದೃಷ್ಟವ
ಪ್ರಮಾಣಿಸಿ, ಅವನಂಗದ ಪೃಥ್ವಿಗುಣ, ಅಗ್ನಿಗುಣ,
ವಾಯುಗುಣ, ಆಕಾಶಗುಣ,
ಇಂತೀ ಪಂಚಗುಣ ಕರತಳನಾಡಿಯಲ್ಲಿದ್ದು ಆಡುವ
ಐದು ಜೀವದ ಗುಣಮಂ ತಿಳಿದು,
ಷಡಾಧಾರಂಗಳ ಸ್ವಸ್ಥಾನಮಂ ಮುಟ್ಟಿ ನೋಡಿ,
ಆ ಮನ ವಿರೋಚನಕ್ಕೆ ಪ್ರಮಾಣದಲ್ಲಿ ಪ್ರಮಾಣಿಸಿ,
ಸುಮನ ಸುಗತಿಯಲ್ಲಿ ಪಿಂಡ ಪ್ರಾಣಾರೋಗ್ಯದಿಂದ ರುಜೆಯ
ಸಂಬಂಧವ ಮುರಿದವ ಪಂಡಿತನಪ್ಪ.
ಅದರಂದವ ತಿಳಿದು ಬಂದೆ, ಸರ್ವಾಂಗಲಿಂಗಿಗಳಿಗೆ ಪಂಡಿತನಾಗಿ,
ಮೂರ ಮುರಿದು, ಆರನರದು, ಏಳ ಕಿತ್ತು,
ಎಂಟು ಗಂಟನಿಕ್ಕಿ, ಈರಾರ ಮಾರಿ, ಹದಿನಾರ ವೇಧಿಸಿ,
ಇಪ್ಪತ್ತೈದು ನಷ್ಟವಮಾಡಿ, ಮೂವತ್ತಾರ ತೂರಿ,
ಗಾರುಮಾಡಿ, ಐವತ್ತೆರಡರ ಉಲುಹಿನ ಬಲೆಯ ಹರಿದು,
ಸಿಂಧೂರ ಬಂದಿದೆ ಕೊಳಬಲ್ಲಡೆ ಕೊಳಬಾರದೆ ?
ಕೊಂಡಡೆ ತ್ರಿವಿಧದ ತೊಟ್ಟು ಬಿಟ್ಟು,
ಭವಮಾಲೆಯ ಕಟ್ಟಿದ ಕ್ರಮ ಒಡೆದು,
ವಸ್ತುವಿನ ನಿಜನಿಳಯದ ಬಟ್ಟೆಯ ಹೋಹೆ.
ಇದು ದೃಷ್ಟ, ಪ್ರಮಥರ ಪ್ರಸನ್ನ ಸಾಕ್ಷಿ.
ಎನ್ನ ವೈದ್ಯದ ಕ್ರಮ ಸರ್ವವಿಕಾರದ ಭವಹರಿವ ತೆರ,
ಮರುಳಶಂಕರಪ್ರಿಯ ಸಿದ್ಧರಾಮೇಶ್ವರಲಿಂಗ ವೈದ್ಯ ವೈದ್ಯನಾದ. ॥ ೨೦ ॥

೧೨೭

ಹೊರನಾಳ ಎಂಟುಕೋಟಿ. ಒಳನಾಳ ನೂರೆಂಟು.
ಹೊರದ್ವಾರ ಒಂಬತ್ತು, ಒಳದ್ವಾರ ಸರ್ವಾಂಗಮಯ.
ಇಂತೀ ಪಂಚತತ್ವ, ಅಷ್ಟಗುಣಂಗಳು ಕೂಡಿ,
ಘಟ್ಟಿಗೊಂಡ ತನು ಶುಕ್ಲ ಶೋಣಿತ ಮಜ್ಜೆ ಮಾಂಸ
ಎಲುವು ಸರ ಚರ್ಮ ರೋಮ.

ಇಂತೀ ಅಷ್ಟಗುಣಂಗಳ ಕಷ್ಟೋತ್ತರದಲ್ಲಿ ಸಿಕ್ಕಿದ ಆತ್ಮಂಗೆ,
ಇಂದ್ರಿಯಂಗಳ ರೋಗವಿಡಿದು ಬಂಧ ಮೋಕ್ಷ ಕರ್ಮಂಗಳೆಂಬ
ಶೀತ ಜ್ವರ ತಾಪಂಗಳಲ್ಲಿ ವ್ಯವಹರಿಸುವ ಆತ್ಮಂಗೆ,
ನಾನೊಂದು ನಿಹಿತದ ಮದ್ದ ಕಂಡೆ.
ಅದು ಅರೆವಡೆ ಅಸಾಧ್ಯ, ಸುಮ್ಮನೆ ಮೆಲುವಡೆ ಸವೆಯದು.
ದೃಷ್ಟಿ ನಟ್ಟು ಮುಚ್ಚಿರಲಿಕ್ಕಾಗಿ ರೋಗರುಜೆ ಬಚ್ಚಬಯಲು,
ಮರುಳಶಂಕರಪ್ರಿಯ ಸಿದ್ಧರಾಮೇಶ್ವರಲಿಂಗವನರಿಯಲಾಗಿ. ॥ ೨೧ ॥

■■

## ಶಂಕರದಾಸಿಮಯ್ಯಗಳ ವಚನ

೧೨೮

ಎನ್ನ ಕಾಯಕ್ಕೆ ಗುರುವಾದನಯ್ಯಾ ಬಸವಣ್ಣನು.
ಎನ್ನ ಜೀವಕ್ಕೆ ಲಿಂಗವಾದನಯ್ಯಾ ಚೆನ್ನಬಸವಣ್ಣನು.
ಎನ್ನ ಪ್ರಾಣಕ್ಕೆ ಪ್ರಸಾದವಾದನಯ್ಯಾ ಮರುಳಶಂಕರದೇವರು.
ಎನ್ನ ಜ್ಞಾನಕ್ಕೆ ಜಂಗಮವಾದನಯ್ಯಾ ಪ್ರಭುದೇವರು.
ಇಂತಿವರ ಕರುಣದಿಂದಲಾನು ಬದುಕಿದೆನಯ್ಯಾ,
ನಿಜಗುರು ಶಂಕರದೇವಾ. || ೧ ||

೧೨೯

ಎರಳೆ ಯತಿಯಂತೆ, ಕಾಕ ಪಿಕದಂತಿರಬೇಡವೆ ?
ತಿಟ್ಟನೆ ತಿರುಗಿ, ತೊಟ್ಟನೆ ತೊಳಲಿ ಬಳಲುವರ ಕಳ ಹೇಸಿಕೆಯ ನೋಡಾ!
ಇರುಳು ಹಗಲೆನ್ನದೆ ತಿರುಗುವವರ ಕಂಡು ಹೇಸಿದೆ.
ಅರಿದಡೆ ಶರಣ, ಮರೆದಡೆ ಮಾನವ.
ಸತ್ತ ಕಸನ ಹೊತ್ತುಕೊಂಡು ಊರೂರಿಗೆ ಮಾರುವ
ಕಾಶಾಂಬರ್ಗಧಾರಿಗಳನೊಲ್ಲ, ನಿಜಗುರು ಶಂಕರದೇವ. || ೨ ||

೧೩೦

ಕಾಯದ ಮದವಳಿದಲ್ಲದೆ ಮಾಯಾವಿಕಾರವಳಿಯದು.
ಮಾಯಾವಿಕಾರವಳಿದಲ್ಲದೆ ಭವನಾಶವಾಗದು.

ಭವನಾಶವಾದಲ್ಲದೆ ಲಿಂಗಸಂಬಂಧವಳವಡದು.
ಲಿಂಗಸಂಬಂಧವಳವಟ್ಟಲ್ಲದೆ ಸುಖವು ಸಾಧ್ಯವಾಗದು.
ಪರಮಸುಖ ಪರಿಣಾಮಕ್ಕೆ ಮಹಾನುಭಾವಿಗಳ ಸಂಗವೇ ಬೇಕು.
ಮಹಾನುಭಾವಿಗಳ ಸಂಗದಿಂದಲ್ಲದೆ ವಿಶ್ರಾಮವಿಲ್ಲ,
ಇಂತಪ್ಪ ಮಹಾನುಭಾವದ ಮೂರ್ತಿ
ಸಂಗನ ಬಸವಣ್ಣನ ಕೃಪೆಯಿಂದಲೆನಗೆ ನಿಜವು ಕಾಣಬಂದಿತ್ತು,
ಇದು ಕಾರಣ, ನಿಜಗುರು ಶಂಕರದೇವರ ಶರಣ
ಪ್ರಭುದೇವರ ಶ್ರೀಪಾದವ ಕಂಡು ನಿಶ್ಚಿಂತನಾದೆನಯ್ಯಾ. ॥ ೩ ॥

೧೩೧

ಕಾಯವಿಲ್ಲಾಗಿ ಮಾಯವಿಲ್ಲ, ಮಾಯವಿಲ್ಲಾಗಿ ಮಥನವಿಲ್ಲ,
ಮಥನವಿಲ್ಲಾಗಿ ಭಾವವಿಲ್ಲ, ಭಾವವಿಲ್ಲಾಗಿ ಬಯಕೆಯಿಲ್ಲ,
ಬಯಕೆಯಿಲ್ಲಾಗಿ ನಿರ್ಭಾವ ನಿಜವನ್ನೈದಿ,
ನಿಜಗುರು ಶಂಕರದೇವರೆಂಬುದು ತಾನಿಲ್ಲ. ॥ ೪ ॥

೧೩೨

ಹರನ ನಿರೂಪದಿಂದ ಧರೆಗೆ ಬಸವಣ್ಣನವತರಿಸಿದ ಕಾರಣ,
ಶಿವಾಚಾರ ಸದಾಚಾರವೆಂಬುದು ಧರೆಗೆ ವಿಖ್ಯಾತವಾಯಿತ್ತು,
ಶಿವಗಣ ಪ್ರಮಥಗಣಂಗಳೆಂಬ ಮಹಾಮಹಿಮರ ಸುಳುಹು,
ಧರೆಯ ಮೇಲೆ ಕಾಣಬಂದಿತ್ತು ನೋಡಯ್ಯಾ.
ಪರುಷವ ಸಾಧಿಸಿದಂತಾಯಿತ್ತು, ನಿಮ್ಮ ಶರಣರ ಸಂಗದಿಂದ.
ಎನ್ನ ನಂದಿಯ ಮೊಗವಾಡ, ನೊಸಲಕಣ್ಣುಂಟೆಂಬ
ಅಹಂಕಾರವ ಮುಂದುಗೊಂಡಿದ್ದೆನಯ್ಯಾ.
ಎನ್ನ ಮದ ಉಡುಗಿ, ಸಂಗನಬಸವಣ್ಣನ ಕರುಣದಿಂದ
ಪ್ರಭುದೇವರೆಂಬ ನಿರಾಳವ ಕಂಡು ಬದುಕಿದೆನು ಕಾಣಾ,
ನಿಜಗುರು ಶಂಕರದೇವಾ. ॥ ೫ ॥

■■

## ಶಿವನಾಗಮಯ್ಯಗಳ ವಚನ

೧೩೩

ಅಂಗದ ಮೇಲೆ ಲಿಂಗವಿದ್ದ ಬಳಿಕ, ಲಿಂಗಹೀನರ ಬೆರಸಲಾಗದು.
ಅಂಗದ ಮೇಲೆ ಲಿಂಗವಿದ್ದ ಬಳಿಕ,
ಲಿಂಗ ಮುಂತಾಗಿ ಎಲ್ಲಾ ಕ್ರೀಗಳನೂ ಗಮಿಸಬೇಕಲ್ಲದೆ,
ಅಂಗ ಮುಂತಾಗಿ ಗಮನಿಲಾಗದು.
ಲಿಂಗಸಂಬಂಧಿಯಾಗಿ ಅಂಗ ಮುಂತಾಗಿಪ್ಪವರು ಲಿಂಗಕ್ಕೆ ದೂರವಯ್ಯಾ,
ನಾಗಪ್ರಿಯ ಚೆನ್ನರಾಮೇಶ್ವರಾ. || ೧ ||

೧೩೪

ಘನಸುಖ ಮಹಾಸುಖವ ಮುಟ್ಟಲು, ಸಮಸುಖಂಗಳ ಸುಖಿಸಬಲ್ಲ,
ಸುಖವನಲ್ಲಿಯೇ ಕೊಯ್ದು ಸೂಡ ಕಟ್ಟಬಲ್ಲ,
ನಾಗಪ್ರಿಯ ಚೆನ್ನರಾಮೇಶ್ವರಾ,
ನಿಮ್ಮ ಶರಣನು ಸುಖಿಸಬಲ್ಲ ಸುಖವನು. || ೨ ||

೧೩೫

ಹುಟ್ಟಿದಾಕ್ಷಣವೆ ಲಿಂಗಸ್ವಾಯತವ ಮಾಡಿ,
ಶಿಶುವ ತನ್ನ ಶಿಶುವೆಂದು ಮುಖವ ನೋಡುವದು ಸದಾಚಾರ.
ಅದಲ್ಲದೆ, ಬರಿಯ ವಿಭೂತಿಯ ಪಟ್ಟವ ಕಟ್ಟಿ,

ಗುರುಕಾರುಣ್ಯವಾಯಿತ್ತೆಂದು
ಅನುಸರಣೆಯಲ್ಲಿ ಆಡಿಕೊಂಬುದು ಕ್ರಮವಲ್ಲ,
ಅದೇನು ಕಾರಣವೆಂದಡೆ, ತಾ ಲಿಂಗದೇಹಿಯಾದುದಕ್ಕೆ ಕುರುಹು.
ಲಿಂಗವುಳ್ಳವರೆಲ್ಲರ ತನ್ನವರೆನ್ನಬೇಕಲ್ಲದೆ,
ಲಿಂಗವಿಲ್ಲದವರ ತನ್ನವರೆಂದಡೆ, ತನ್ನ ಸದಾಚಾರಕ್ಕೆ ದ್ರೋಹಬಹುದು,
ಸಮಯಾಚಾರಕ್ಕೆ ಮುನ್ನವೇ ಸಲ್ಲ,
ಇದು ಕಾರಣ, ಲಿಂಗಸ್ವಾಯತವಾಗಿಹುದೆ ಪಥವಯ್ಯಾ,
ನಾಗಪ್ರಿಯ ಚೆನ್ನರಾಮೇಶ್ವರಾ. ॥ ೩ ॥

■■

## ಶಿವಲೆಂಕ ಮಂಚಣ್ಣನ ವಚನ

೧೩೬

ಏಕಮಯ ವಸ್ತು ತನ್ಮಯ ರೂಪಾದಲ್ಲಿ,
ಪಂಚಭೂತಿಕಂಗಳು ನಾಮರೂಪಾಯಿತ್ತು.
ಆ ಪರಬ್ರಹ್ಮ ಪರವಸ್ತುವಾದಲ್ಲಿ, ಪರವಶವಾಯಿತ್ತು ಪಂಚಬ್ರಹ್ಮ
ಆ ಬ್ರಹ್ಮ ಬ್ರಹ್ಮನ ಕುಕ್ಷಿಗೆ ಹೊರಗಾದಲ್ಲಿ, ವಸ್ತು ನಿರ್ಧರವಾಯಿತ್ತು,
ಈಶಾನ್ಯಮೂರ್ತಿ ಮಲ್ಲಿಕಾರ್ಜುನಲಿಂಗದಲ್ಲಿ. ॥ ೧ ॥

೧೩೭

ಕಾರುಕನ ಕೈ ಮುಟ್ಟುವುದಕ್ಕೆ ಮುನ್ನವೆ,
ಗುರುವಿನ ಕರ ಮುಟ್ಟುವುದಕ್ಕೆ ಮುನ್ನವೆ,
ಮನಸಿಜನ ಮನ ಮುಟ್ಟುವುದಕ್ಕೆ ಮುನ್ನವೆ,
ನಾಮ ರೂಪು ಬಹುದಕ್ಕೆ ಮುನ್ನವೆ, ಅದಾವ ರೂಪು ಎಂದರಿತಡೆ,
ಆ ವಸ್ತು ಪ್ರಮಾಣಕ್ಕೆ ರೂಪಹ ಪರಿಯಿನ್ನೆಂತುಂಟು ?
ಅದು ಭಾವಕ್ಕೆ ಅಗೋಚರ, ಈಶಾನ್ಯಮೂರ್ತಿ ಮಲ್ಲಿಕಾರ್ಜುನಲಿಂಗವು. ॥೨॥

೧೩೮

ಪೃಥ್ವಿ ಸಾಕಾರವ ಮಾಡಿದಲ್ಲಿ, ಅಪ್ಪು ಆಸ್ತಿಕವಾದಲ್ಲಿ
ತೇಜ ಸ್ವರೂಪವ ಛೇದಿಸಿದಲ್ಲಿ, ವಾಯು ನಿರ್ಗಮನವಾದಲ್ಲಿ,
ಆಕಾಶವ ಬಯಲೊಳಕೊಂಡಲ್ಲಿ

ಈಶಾನ್ಯಮುರ್ತಿ ಮಲ್ಲಿಕಾರ್ಜುನಲಿಂಗವು,
ರೂಪಿಗೆ ಬಂದ ಪರಿಯಿನ್ನೆಂತುಂಟೊ ? ॥ ೩ ॥

೧೩೯

ಗುರು ಮೂರು ಕೂಡಿ ಗುರುವಾದಲ್ಲಿ,
ಬಿಂದು ಅಯಿದು ಕೂಡಿ ಲಿಂಗವಾದಲ್ಲಿ,
ವಿಂಶತಿ ಆರು ಕೂಡಿ ವಿಸರ್ಜನವಾದಲ್ಲಿ, ಜಂಗಮವಾಯಿತ್ತು.
ಆ ಜಂಗಮ, ಜಾಯತೇ ಭಾವವಳಿದು,
ಈಶಾನ್ಯಮೂರ್ತಿ ಮಲ್ಲಿಕಾರ್ಜುನಲಿಂಗವಾಯಿತ್ತು. ॥ ೪ ॥

೧೪೦

ಇಚ್ಛಾಶಕ್ತಿ ಮರ್ಕಟರೂಪಾದಲ್ಲಿ, ಕ್ರಿಯಾಶಕ್ತಿ ವಿಹಂಗರೂಪಾದಲ್ಲಿ,
ಜ್ಞಾನಶಕ್ತಿ ಪಿಪೀಲಿಕಾರೂಪಾದಲ್ಲಿ, ತ್ರಿವಿಧಮಾರ್ಗರೂಪಾಯಿತ್ತು.
ಕಾಬುದು, ಕಾಣಿಸಿಕೊಂಬುದು ಕಂಡೆನೆಂದು ನಿಶ್ಚಯವಾದಲ್ಲಿ,
ಈಶಾನ್ಯಮೂರ್ತಿ ಮಲ್ಲಿಕಾರ್ಜುನಲಿಂಗವು,
ಮಹದಾಕಾಶದಲ್ಲಿ ವಾಸಿತನಾಗಿದ್ದ. ॥ ೫ ॥

೧೪೧

ನಡೆದು ನಡೆಯದವನ ಕಂಡು, ನುಡಿದು ನುಡಿಯದವನ ಕಂಡು,
ಅರಿದು ಅರಿಯದವನ ಕಂಡು,
ತ್ರಿವಿಧ ಭೇದಂಗಳಲ್ಲಿ ಭೇದಿಸಿ ಭೇದಿಸಿ ನಿಂದುದು,
ಈಶಾನ್ಯಮೂರ್ತಿ ಮಲ್ಲಿಕಾರ್ಜುನಲಿಂಗವು ನಿಂದ ವಾಸ. ॥ ೬ ॥

೧೪೨

ಕಂಡು ತವಕ ಸಂಗದಿಂದಳಿವಂತೆ,
ನಿನ್ನ ನೋಡುವ ನೋಟ,
ಎನ್ನಯ ಮನದ ಕೂಟದಿಂದ ಹರಿಯಿತ್ತು.
ಮತ್ತೆ ನಿಮ್ಮಾಸೆ ಮುಟ್ಟುವ ಭೇದ ಬಿಡದು.
ನೀವು ರೂಪಾಗಿ, ನಾ ಸಾಕಾರವಾಗಿ ಉಭಯವುಳ್ಳನ್ನಕ್ಕ,
ಈಶಾನ್ಯಮೂರ್ತಿ ಮಲ್ಲಿಕಾರ್ಜುನಲಿಂಗವು ವಾಸ ರೂಪಾದೆ. ॥ ೭ ॥

೧೪೩

ಗುರುಲಿಂಗ ಬ್ರಹ್ಮರೂಪವಾಯಿತ್ತು. ಚರಲಿಂಗ ವಿಷ್ಣುರೂಪಾಯಿತ್ತು.
ಸ್ಥಾವರಲಿಂಗ ರುದ್ರರೂಪಾಯಿತ್ತು.
ಗುರುಚರಲಿಂಗರೂಪು ತ್ರಿವಿಧಮಲ ಕಾರಣವಾಯಿತ್ತು.
ಆ ಮಲಗುಣ, ಈಶಾನ್ಯಮೂರ್ತಿ ಮಲ್ಲಿಕಾರ್ಜುನಲಿಂಗವು
ನಾಮಕ್ಕೆ ಹೊರಗಾದ. ॥ ೮ ॥

೧೪೪

ಪೂಜಿಸಿ ಕಾಬುದು ಗುರುವಿನ ಭೇದ, ಧ್ಯಾನಿಸಿ ಕಾಬುದು ಲಿಂಗವ ಭೇದ,
ಉಭಯದಲ್ಲಿ ನಿಂದು ವಿಚಾರಿಸಿ ಕಾಬುದು ಜಂಗಮದ ಭೇದ.
ಜ ಎಂದಲ್ಲಿ ಜನನ ನಾಸ್ತಿ, ಗ ಎಂದಲ್ಲಿ ಗಗನ ನಾಸ್ತಿ,
ಮ ಎಂದಲ್ಲಿ ಮರಣ ನಾಸ್ತಿ. ತ್ರಿವಿಧ ನಾಸ್ತಿಯಾಗಿ ನಿಂದುದು,
ಈಶಾನ್ಯಮೂರ್ತಿ ಮಲ್ಲಿಕಾರ್ಜುನಲಿಂಗವು ನಿಂದ ನಿಲವು. ॥ ೯ ॥

೧೪೫

ಸ್ತ್ರೀಲಿಂಗ ನಾಸ್ತಿಯಾಗಿರಬೇಕು ಗುರುವಿನಿರವು.
ಪುಲ್ಲಿಂಗ ನಾಸ್ತಿಯಾಗಿರಬೇಕು ಲಿಂಗದಿರವು.
ನಪುಂಸಕಲಿಂಗ ನಾಸ್ತಿಯಾಗಿರಬೇಕು ಜಂಗಮದಿರವು.
ತ್ರಿವಿಧಬಿಂದು ಲಿಂಗ ನಾಸ್ತಿ,
ಈಶಾನ್ಯಮೂರ್ತಿ ಮಲ್ಲಿಕಾರ್ಜುನಲಿಂಗವು,
ನಾದ ಬಿಂದು ಕಳೆಗೆ ಹೊರಗಾಯಿತ್ತು ॥ ೧೦ ॥

೧೪೬

ಅಕಾರತತ್ವ ಆಕಾಶದೊಡಲಾಯಿತ್ತು, ಇಕಾರತತ್ವ
ನಿರಾಕಾರದೊಡಲಾಯಿತ್ತು,
ಉಕಾರತತ್ವ ನಾದದೊಳಗಾಗಿ ಒಡಗೂಡಿತ್ತು,
ತ್ರಿವಿಧರೂಪು ಲೇಪ,
ಈಶಾನ್ಯಮೂರ್ತಿ ಮಲ್ಲಿಕಾರ್ಜುನಲಿಂಗವು ಸ್ವಯಂಭುವಾದ. ॥ ೧೧ ॥

೧೪೭

ಮರೀಚಿಕಾಜಲದಂತೆ ತೋರುತ್ತಿಹ ವಸ್ತು
ನಾದಬಿಂದುವಿನಲ್ಲಿ ಒಡಗೂಡುವ ಪರಿಯಿನ್ನೆಂತೊ ?
ನಾದ ದೀರ್ಘವಾಗಿ, ಬಿಂದು ವರ್ತುಳವಾಗಿ,
ಕಳೆ ಪರಿಪೂರ್ಣವಾಗಿ, ಅವಗವಿಸಲ್ಲದೆ ಉಭಯನಾಮವಡಗದು.
ಅಡಗಿದ ಮತ್ತೆ ಈಶಾನ್ಯಮೂರ್ತಿ ಅಮೂರ್ತಿಯಾಯಿತ್ತು,
ಮಲ್ಲಿಕಾರ್ಜುನಲಿಂಗವು ಸ್ವಯಂಭುವಾದ. ॥ ೧೨ ॥

೧೪೮

ವೇದ ಅಪರವನರಸಿತ್ತು, ಪುರಾಣ ಪುಣ್ಯವ ಬಯಸಿತ್ತು,
ಶಾಸ್ತ್ರ ಗೆಲ್ಲ ಸೋಲಕ್ಕೊಳಗಾದಲ್ಲಿ, ಶ್ರುತಿ ನಾದದೊಳಗೆ ಸಿಲ್ಕಿತ್ತು,
ನಾದ ಶ್ರುತಿ ಬಿಂದುವಿನಲ್ಲಿ ನಿಂದು ಗೋಳಕಾಕಾರವಾದಲ್ಲಿ,
ತ್ರಿವಿಧಕ್ಕೆ ಹೊರಗಾಯಿತ್ತು,
ಈಶಾನ್ಯಮೂರ್ತಿ ಮಲ್ಲಿಕಾರ್ಜುನಲಿಂಗವು ಸ್ವಯಂಭುವಾದ. ॥ ೧೩ ॥

೧೪೯

ಐವತ್ತೊಂದು ಶಾಖೆಯಲ್ಲಿ, ಮೂವತ್ತೊಂದು ಬಿಂದುವಿನಲ್ಲಿ,
ಇಪ್ಪತ್ತೈದು ತತ್ವದಲ್ಲಿ, ಹೊತ್ತುಹೋರಿಯಾಡುತ್ತಿಪ್ಪುದು ಜಗ.
ಸ್ಥೂಲದಲ್ಲಿ ಸಂಬಂಧವಾಗಿ, ಸೂಕ್ಷ್ಮದಲ್ಲಿ ಲೇಪವಾಗಿ, ಕಾರಣದಲ್ಲಿ
ಸ್ವಯವಾಗಿ,
ತ್ರಿವಿಧದ ಉಳುಮೆಯ ಜಾರಿ ನಿಂದುದು ಸ್ವಯಂಜ್ಯೋತಿ.
ಈಶಾನ್ಯಮೂರ್ತಿ ಮಲ್ಲಿಕಾರ್ಜುನಲಿಂಗವು ಸ್ವಯಂಭುವಾದ. || ೧೪ ||

೧೫೦

ಪೃಥ್ವಿ ರೂಪಾದಲ್ಲಿ ಸದ್ಯೋಜಾತನಾದ,
ಅಪ್ಪು ರೂಪಾದಲ್ಲಿ ವಾಮದೇವನಾದ
ಅಗ್ನಿ ರೂಪಾದಲ್ಲಿ ಅಘೋರನಾದ, ವಾಯು ರೂಪಾದಲ್ಲಿ ತತ್ಪುರುಷನಾದ,
ಗಗನ ರೂಪಾದಲ್ಲಿ ಈಶಾನ್ಯನಾದ.
ಇಂತೀ ಪಂಚಕೋಶಂಗಳಲ್ಲಿ ನಿಂದು, ಜಗಕ್ಕೆ ಶಾಂತಿಯನಿತ್ತು,
ತಾ ಸ್ವಯಂಜ್ಯೋತಿಯಾಗಿ,
ಈಶಾನ್ಯಮೂರ್ತಿ ಮಲ್ಲಿಕಾರ್ಜುನಲಿಂಗವು ಸ್ವಯಂಭುವಾದ. || ೧೫ ||

೧೫೧

ವಟವೃಕ್ಷದ ಘಟದ ಮಧ್ಯದಲ್ಲಿ ಒಂದು ಮಠವಿಪ್ಪುದು.
ಆ ಮಠಕ್ಕೆ ಹಿಂದೆಸೆಯಿಂದ ಬಂದು, ಮುಂದಳ ಬಾಗಿಲ ತೆಗೆದು,
ವಿಚ್ಛಂದದ ಕೋಣೆಯ ಕಂಡು, ಕಿಡಿ ನಂದದೆ ದೀಪವ ಕೊಂಡು ಹೊಕ್ಕು,
ನಿಜದಂಗದ ಓಗರದ ಕುಂಭವ ಕಂಡು,
ಬಂಧವಿಲ್ಲದ ಓಗರವನುಂಡು, ಸದಮಲಲಿಂಗವೆ ತಾನಾದ,
ಈಶಾನ್ಯಮೂರ್ತಿ ಮಲ್ಲಿಕಾರ್ಜುನಲಿಂಗವು ಸ್ವಯಂಭುವಾದ. || ೧೬ ||

೧೫೨

ಧ್ಯಾನ ಧಾರಣ ಸಮಾಧಿ ಯೋಗಂಗಳಿಂದ ಕಾಬುದು ತನುಪ್ರಾಪ್ತಿ ಏಸೆ ?
ಅದು ಸ್ಥೂಲ ಸೂಕ್ಷ್ಮ ಕಾರಣಕ್ಕೆ ಘಟಯೋಗಸಂಬಂಧ.
ಅದು ಬ್ರಹ್ಮನ ಭಿತ್ತಿ, ವಿಷ್ಣುವಿನ ಆಗು, ರುದ್ರನ ಚೀಗೆ,
ಅದು ಗುರು ಚರ ಪರಕ್ಕೆ ಕೊಟ್ಟ ಹಸಿಗೆ.
ಸಾಕಾರದಲ್ಲಿ ಕಂಡು, ನಿರಾಕಾರದಲ್ಲಿ ಅರಿದು,
ಬೆಳಗಿನ ಬಯಲಲ್ಲಿ ನಿರವಯಾಂಗನಾಗಿ ಇರಬೇಕು.
ಈಶಾನ್ಯಮೂರ್ತಿ ಮಲ್ಲಿಕಾರ್ಜುನಲಿಂಗವು ಸ್ವಯಂಭುವನರಿವುದಕ್ಕೆ. || ೧೭ ||

೧೫೩

ಆದಿವಸ್ತು, ಅನಾದಿವಸ್ತುವೆಂದು ಭೇದವ ಮಾಡಿದಲ್ಲಿ,
ತನ್ನಿರವಿನ ಭೇದವೊ ? ವಸ್ತುವಿನ ಸ್ವಯರೂಪದಂಗವೊ ?
ಇಕ್ಷುದಂಡಕ್ಕೆ ಕಡೆ ನಡು ಮೊದಲಲ್ಲದೆ ಸಕ್ಕರೆಗುಂಟೆ?
ಆದಿ ಅನಾದಿ ವಸ್ತುವೆಂಬುದು ತನ್ನಯ ಚಿತ್ತದ ಗೊತ್ತಲ್ಲದೆ ಅದು ನಿಶ್ಚಯ,
ಈಶಾನ್ಯಮೂರ್ತಿ ಮಲ್ಲಿಕಾರ್ಜುನಲಿಂಗವು ಏಕಮೂರ್ತಿ ಸ್ವಯಂಭು.॥ ೧೮ ॥

೧೫೪

ಅಂಗಕ್ಕೆ ಲಿಂಗವ ಕೊಟ್ಟವ ಆಚಾರ್ಯನಾದ.
ಮನಕ್ಕರಿವ ತೋರಿದಾತ ಮೋಕ್ಷ ಆಚಾರ್ಯನಾದ.
ಮೋಕ್ಷ ವಿಮೋಕ್ಷವಾಗಿ ಉಭಯದ ಗೊತ್ತ ತೋರಿ,
ಕಾಯದ ಕರ್ಮವ ಕೆಡಿಸಿ, ಜೀವನ ಭವವ ಛೇದಿಸಿ,
ತದ್ರೂಪ ತೋರಿದ ಜ್ಞಾನಗುರು.
ಆತ ಪ್ರಕಾಶ, ಈಶಾನ್ಯಮೂರ್ತಿ ಮಲ್ಲಿಕಾರ್ಜುನಲಿಂಗವು ತಾನ. ॥೧೯॥

೧೫೫

ಕಾರುಕ ಮುಟ್ಟಿ ಗುರುವಿನ ಕೈಗೆ ಬಂದುದಲ್ಲ,
ಮನಮುಟ್ಟಿ ನೆನಹಿಂಗೆ ಈಡಾದುದಲ್ಲ,
ಅರಿದರುಹಿಸಿಕೊಂಬುದಲ್ಲ, ಮರೆದು ನೆನಹಿಸಿಕೊಂಬುದಲ್ಲ,
ಪರುಷರಸದಂತೆ ಮಾಟಕ್ಕೊಳಗಲ್ಲ,
ಅದು ಮುಟ್ಟಿ ಲೋಹ ಶುದ್ಧವಲ್ಲದೆ ಪುನರಪಿ ಶುದ್ಧವಾದುದಿಲ್ಲ,
ಇಂತೀ ಭೇದಂಗಳಲ್ಲಿ ನಿಂದು ನಿಶ್ಚಯವಾದುದು ಜೀವನ್ಮುಕ್ತಿಲಿಂಗ.
ಅದು, ಈಶಾನ್ಯ ಮೂರ್ತಿ ಮಲ್ಲಿಕಾರ್ಜುನಲಿಂಗ ಸ್ವಯಂಭುವಾಗಿಹುದು.॥೨೦॥

೧೫೬

ಆದಿಶಕ್ತಿ ರೂಪಾಗಿ, ಅನಾದಿಶಕ್ತಿ ಪ್ರಾಣವಾಗಿ,
ಚಿದಾದಿತ್ಯದ ಬೆಳಗು ಅರಿವಾಗಿ,
ಎನ್ನ ಹೃತ್ಕಮಲಮಧ್ಯದಲ್ಲಿ ತೊಳಗಿ ಬೆಳಗುತ್ತಿರಯ್ಯಾ,
ಈಶಾನ್ಯಮೂರ್ತಿ ಮಲ್ಲಿಕಾರ್ಜುನಲಿಂಗವೆ. ॥ ೨೧ ॥

೧೫೭

ರಸವನರಿವುದಕ್ಕೆ ಜಿಹ್ವೆಯಾಗಿ ಬಂದು,
ಗಂಧವನರಿವುದಕ್ಕೆ ನಾಸಿಕವಾಗಿ ಬಂದು,
ರೂಪವನರಿವುದಕ್ಕೆ ಅಕ್ಷಿಯಾಗಿ ಬಂದು,
ಶಬ್ದವನರಿವುದಕ್ಕೆ ಶ್ರೋತ್ರವಾಗಿ ಬಂದು,
ಸ್ಪರುಶನವನರಿವುದಕ್ಕೆ ತ್ವಕ್ಕಾಗಿ ಬಂದು,

ಇಂತೀ ಘಟದ ಮಧ್ಯದಲ್ಲಿ ನಿಂದು ಪಂಚವಕ್ತ್ರನಾದೆಯಲ್ಲಾ,
ಈಶಾನ್ಯಮೂರ್ತಿ ಮಲ್ಲಿಕಾರ್ಜುನಲಿಂಗವೆ. ॥ ೨೨ ॥

೧೫೮

ವಿಶ್ವಮಯ ರೂಪು ನೀನಾಗಿ, ಅರಿವ ಆತ್ಮ ಒಬ್ಬನಲ್ಲಿಯೇ ಅಡಗಿದೆಯಲ್ಲಾ!
ಬೀಗದ ಎಸಳು ಹಲವಾದಡೇನು,
ಒಂದು ದ್ವಾರದಲ್ಲಿ ಅಡಗಿ ಓತಂತೆ ಇಪ್ಪ ತೆರ ನೀನಾಗಿ,
ಭಕ್ತರ ಚಿತ್ತದಲ್ಲಿ ನಿಶ್ಚಯನಾವೆ,
ಈಶಾನ್ಯಮೂರ್ತಿ ಮಲ್ಲಿಕಾರ್ಜುನಲಿಂಗವೆ. ॥ ೨೩ ॥

೧೫೯

ಈಶ್ವರರೂಪ ತಾಳಿ ಜಗ ಜೀವಾಳರುಗಳ ಬಾಗಿಲಲ್ಲಿ
ಬೆಳುಗರೆವನ್ನಬರ ಹೋಯಿತ್ತು, ವೇಷವಾಟದಲ್ಲಿ.
ಈ ಆಸೆಯ ಬಿಟ್ಟು, ಈಶನ ರೂಪ ತಾಳಿದ ವಸ್ತು
ಆತ ಈಶಾನ್ಯಮೂರ್ತಿ ಮಲ್ಲಿಕಾರ್ಜುನಲಿಂಗವು ತಾನೆ. ॥ ೨೪ ॥

೧೬೦

ಬಹುರೂಪಕ್ಕೆ ಭಾಷಾಂಗವಿಲ್ಲದಿರೆ ಮೆಚ್ಚದು ಜಗ.
ಗುರುಚರರೂಪ ತಾಳ್ದಲ್ಲಿ, ಗುರುವಿಂಗೆ ಗಂಭೀರತೆ, ಚರಕ್ಕೆ ನಿಸ್ಪೃಹತ್ವ.
ಇಂತೀ ಉಭಯಮೂರ್ತಿ ಅಪೇಕ್ಷೆವಿರಹಿತವಾಗಿ ನಿಂದುದು,
ಈಶಾನ್ಯಮೂರ್ತಿ ಮಲ್ಲಿಕಾರ್ಜುನಲಿಂಗವು ತಾನೆ. ॥ ೨೫ ॥

೧೬೧

ಅಂಗದೇಹಿ ಲಿಂಗೋದಕವ ಕೊಳಲಾಗದು.
ಪ್ರಕೃತಿಜೀವಿ ಪಾದೋದಕವ ಕೊಳ್ಳಲಾಗದು.
ಭವಜೀವ ಪ್ರಸಾದೋದಕವ ಕೊಳಲಾಗದು.
ಇಂತೀ ತ್ರಿವಿಧಭೇದಂಗಳಲ್ಲಿ ತ್ರಿವಿಧಶುದ್ಧವಾಗಿ ಕೊಳಬಲ್ಲಡೆ,
ತ್ರಿವಿಧೋದಕ ಸಮರ್ಪಣ,
ಈಶಾನ್ಯಮೂರ್ತಿ ಮಲ್ಲಿಕಾರ್ಜುನಲಿಂಗಕ್ಕೆ ಅರ್ಪಿತ. ॥ ೨೬ ॥

೧೬೨

ಜಂಗಮದ ಪಾದತೀರ್ಥವ ಲಿಂಗಕ್ಕೆ ಮಜ್ಜನವ ಮಾಡಲಾಗಿ,
ಲಿಂಗತೀರ್ಥವಾಯಿತ್ತು.
ಜಂಗಮದ ಪ್ರಸಾದವ ಲಿಂಗಕ್ಕರ್ಪಿಸಲಾಗಿ, ಲಿಂಗಪ್ರಸಾದವಾಯಿತ್ತು.
ಶುದ್ಧ ಗುರುವಿನಲ್ಲಿ, ಸಿದ್ಧ ಲಿಂಗದಲ್ಲಿ, ಪ್ರಸಿದ್ಧ ಜಂಗಮದಲಾದ ಮತ್ತೆ,
ಸಿಕ್ಕಿತ್ತು ಪ್ರಸಿದ್ಧ ಸಂಖ್ಯೆಯಲ್ಲಿ

ಇದನರಿತು ಅರ್ಪಿಸಬಲ್ಲಡೆ, ಆತನೇ ಪ್ರಸಾದಕಾಯ,
ಈಶಾನ್ಯಮೂರ್ತಿ ಮಲ್ಲಿಕಾರ್ಜುನಲಿಂಗದಲ್ಲಿ ಅರ್ಪಿತ ಅವಧಾ . ॥ ೨೭ ॥

೧೬೩

ಗುರುಪ್ರಸಾದವ ಲಿಂಗಕ್ಕೆ ಕೊಡಲಿಲ್ಲ,
ಜಂಗಮಪ್ರಸಾದವ ಲಿಂಗಕ್ಕೆ ಕೊಡಲಿಲ್ಲ,
ಅದೆಂತೆಂಡಡೆ :
ಆ ಗುರುವಿಗೂ ಲಿಂಗಪ್ರಾಣ, ಆ ಜಂಗಮಕ್ಕೂ ಲಿಂಗಪ್ರಾಣ.
ಆ ಲಿಂಗಬಾಹ್ಯವಾಗಿ ಗುರುವಾಗಬಲ್ಲಡೆ,
ಆ ಲಿಂಗಬಾಹ್ಯವಾಗಿ ಜಂಗಮವಾಗಬಲ್ಲಡೆ,
ಉಭಯಪ್ರಸಾದವ ಲಿಂಗಕ್ಕೆ ಕೊಡಬಹುದು.
ಇವನರಿಯದೆ ಉದ್ದೇಶಿಸಿ ನುಡಿವ ಭೇದಹೀನರಿಗೆ ತ್ರಿವಿಧವಿಲ್ಲಾ ಎಂದೆ.
ಅವರು, ಈಶಾನ್ಯಮೂರ್ತಿ ಮಲ್ಲಿಕಾರ್ಜುನಲಿಂಗಕ್ಕೆ ದೂರ. ॥ ೨೮ ॥

೧೬೪

ನಾದವಿಲ್ಲದೆ ಬಿಂದುವಿಲ್ಲ, ಬಿಂದುವಿಲ್ಲದ ಕಳೆಯಿಲ್ಲ,
ಕಳೆಯಿಲ್ಲದೆ ಲಿಂಗವಿಲ್ಲ.
ಇಂತೀ ತ್ರಿವಿಧಭೇದಂಗಳಲ್ಲಿ ಗುರುವಿನ ಆದಿಯನರಿತು,
ಲಿಂಗದ ಭೇದವನರಿತು, ಜಂಗಮದ ಪೂರ್ವವನರಿತು,
ತಾ ಪುನರ್ಜಾತನಾಗಬೇಕು. ಇಂತೀ ಅರ್ಪಿತಭೇದ,
ಈಶಾನ್ಯಮೂರ್ತಿ ಮಲ್ಲಿಕಾರ್ಜುನಲಿಂಗವನರಿತಲ್ಲದಾಗದು. ॥ ೨೯ ॥

೧೬೫

ಉತ್ತರಕಕ್ಷೆಯನರಿತು, ಪೂರ್ವಕಕ್ಷೆಯನರಿತು,
ಘಟಪಟಕಕ್ಷೆಯಲ್ಲಿ ತಿಳಿದು, ದಿಟಪುಟವಾಗಿ
ಚತುರ್ವಿಧ ಮಠವ ಬಲ್ಲಡೆ, ನಿರ್ಧರ ಅರ್ಪಿತ.
ಈಶಾನ್ಯಮೂರ್ತಿ ಮಲ್ಲಿಕಾರ್ಜುನಲಿಂಗಕ್ಕೆ
ಸರ್ವ ಅವಧಾನದಲ್ಲಿ ಅರ್ಪಿತ. ॥ ೩೦ ॥

೧೬೬

ಮೇಲು ಹೇಮದಲ್ಲಿ ಕೀಳುಕೊಡೆ,
ಅದು ತನ್ನಯ ಕೀಳು ಕೊಡೆ ಮೇಲುವಟ್ಟವ ಮಾರಸಿತ್ತು,
ಜಂಗಮದ ಪ್ರಸಾದವ ಲಿಂಗಕ್ಕೆ ಕೊಡಲಾಗಿ,
ಪ್ರಸಿದ್ಧಪ್ರಸಾದ ಸಿದ್ಧಪ್ರಸಾದವಾಯಿತ್ತು,
ಒಡೆವ ಕ್ಷೀರಕ್ಕೆ ಹೆಪ್ಪನಿಕ್ಕಿದಡೆ ದಧಿಯಾಗಬಲ್ಲುದೆ ?

ಅರಿಯದವನ ಅರ್ಪಿತ, ಶರಧಿಯ ಹೊಯಿದ ಕರವಾಳಿನಂತಾಯಿತ್ತು.
ಇಂತೀ ವಿವರದಲ್ಲಿ ಅರ್ಪಿತವನರಿಯಬೇಕು.
ಈಶಾನ್ಯಮೂರ್ತಿ ಮಲ್ಲಿಕಾರ್ಜುಲಿಂಗವು,
ಇಂತೀ ಅರ್ಪಿತವನರಿಯದಲ್ಲದೊಲ್ಲನು. ॥ ೩೧ ॥

೧೬೭

ತನುವಿಗೆ ರುಜೆಯಡಸಿದಲ್ಲಿ ಆತ್ಮಕ್ಕೆ ಅವಗಡೆ ಬಂದಿತ್ತು.
ಅದು ಉಭಯದ ಕೇಡೊ ? ಒಂದರ ಕೇಡೊ ? ಎಂಬುದನರಿತಲ್ಲಿ,
ಲಿಂಗ ಜಂಗಮದ ಪ್ರಸಾದವೊಂದೆಯಾಯಿತ್ತು.
ಈಶಾನ್ಯಮೂರ್ತಿ ಮಲ್ಲಿಕಾರ್ಜುನಲಿಂಗವನರಿಯಲಾಗಿ,
ಸ್ವಯಂಭುವಾಯಿತ್ತು. ॥ ೩೨ ॥

೧೬೮

ತುಷವಿದ್ದಲ್ಲಿ ಭತ್ತವಾಯಿತ್ತು, ತುಷ ಹೆರಹಿಂಗೆ ತಂಡುಲವಾಯಿತ್ತು,
ತಂಡುಲ ದಗ್ಧವಾಗಿ ಬ್ರಹ್ಮವಾಯಿತ್ತು.
ಈ ಗುಣ ಒಂದನೊಂದ ಬಿಟ್ಟು, ನಿಂದುದನರಿತಲ್ಲಿ,
ಜಂಗಮಪ್ರಸಾದ ಲಿಂಗಕ್ಕರ್ಪಿತ.
ಈಶಾವ್ಯಮೂರ್ತಿ ಮಲ್ಲಿಕಾರ್ಜುನಲಿಂಗಕ್ಕೆ ಅರಿತಲ್ಲಿಯೆ ಅರ್ಪಿತ. ॥ ೩೩ ॥

೧೬೯

ಗುರುವಿರೆ ಲಿಂಗಪ್ರಸಾದವ ಕೊಳಲಾಗದು.
ಲಿಂಗವಿರೆ ಜಂಗಮಪ್ರಸಾದವ ಕೊಳಲಾಗದು.
ಜಂಗಮವಿರೆ ಉಭಯಪ್ರಸಾದವ ಕೊಳಲಾಗದು.
ಇಂತೀ ಪ್ರಸಾದದ ವಿವರವನರಿತಲ್ಲಿ,
ಈಶಾನ್ಯಮೂರ್ತಿ ಮಲ್ಲಿಕಾರ್ಜುನಲಿಂಗವು ಪ್ರಸನ್ನ ಪ್ರಸಾದವಾದ. ॥ ೩೪ ॥

೧೭೦

ಅಪ್ಪು ಮೂಲಾಧಾರವಾಗಿ ಬೀಜದ ಮೇಲೆ ಬೀಳೆ,
ಪೃಥ್ವಿ ಗರ್ಭ ಬೆಸನಾಯಿತ್ತು.
ತ್ರಿವಿಧದ ಆದಿಯಿಂದ ಗುರುವಾಯಿತ್ತು, ತ್ರಿವಿಧದ ಭೇದದಿಂದ
ಲಿಂಗವಾಯಿತ್ತು.
ತ್ರಿವಿಧವನಳಿದು ಜಂಗಮವಾಯಿತ್ತು.
ಜಂಗಮವಳಿದು, ಈಶಾನ್ಯಮೂರ್ತಿ ಮಲ್ಲಿಕಾರ್ಜುನಲಿಂಗವು
ಸ್ವಯಂಭುವಾಯಿತ್ತು. ॥ ೩೫ ॥

೧೭೧

**ಗುರುಲಿಂಗಜಂಗಮ ಪಾದತೀರ್ಥಪ್ರಸಾದ ಅರ್ಪಿತ ಅವಧಾನ ಸಮರ್ಪಣಸ್ಥಲ :**

ಮಡಿಕೆಗೆ ಮುಸುಕು, ತಮಗೆ ಗುಹ್ಯಕ್ಕೆ ದಶಾವಸ್ಥೆ.
ಬಾಹ್ಯದಲ್ಲಿ ಶೀಲ, ಅಂತರ್ಯಾಮಿಯಲ್ಲಿ ದುಶ್ಶೀಲ.
ಹೊರಗೆ ವ್ರತ, ಒಳಗೆ ಗದಕ.
ಮಾಡಿಕೊಂಡ ವಿಧಿಯನೀಸುವುದಕ್ಕೆ ವಾದ್ಯದ ಒತ್ತೆಯ ಹಿಡಿದ ದಾಸಿಯಂತೆ,
ಇನ್ನಾರಿಗೆ ಹೇಳುವೆ ?
ಈಶಾನ್ಯಮೂರ್ತಿ ಮಲ್ಲಿಕಾರ್ಜುನಲಿಂಗವೆ ನೀನೆ ಬಲ್ಲೆ. || ३೬ ||

೧೭೨

ಹೊರಗೆ ಚಿಲಮೆ, ಒಳಗೆ ಮೂತ್ರದ ಕುಳಿ.
ಹೊರಗೆ ಸ್ವಯಂಪಾಕ, ಒಳಗೆ ಅಧರಪಾಕ.
ಹೊರಗೆ ಭವಿ ನಿರಸನ, ಒಳಗೆ ಭವಿಸಂಗ ಕೂಟ.
ಇಂತಿವೆಲ್ಲವು, ಆಡುವ ವಿಧಾಂತ, ನೇಮವ ಹಿಡಿದಂತಾಯಿತ್ತು.
ಇಂತೀ ಗುಣವನೊಪ್ಪ, ಈಶಾನ್ಯಮೂರ್ತಿ ಮಲ್ಲಿಕಾರ್ಜುನಲಿಂಗವು. || ೩೭ ||

೧೭೩

ಪರಧನವನೊಲ್ಲದಿಪ್ಪುದೆ ವ್ರತ, ಪರಸ್ತ್ರೀಯರ ಕೂಡದಿಪ್ಪುದೆ ಶೀಲ.
ಸರ್ವಜೀವವ ಕೊಲ್ಲದಿಪ್ಪುದೆ ನೇಮ.
ತಥ್ಯಮಿಥ್ಯವನಳಿದಿಪ್ಪುದೆ ನೇಮ.
ಇದು, ಈಶಾನ್ಯಮೂರ್ತಿ ಮಲ್ಲಿಕಾರ್ಜುನಲಿಂಗಕ್ಕೆ ಸಂದೇಹವಿಲ್ಲದ ವ್ರತ. ||೩೮||

೧೭೪

ನಿತ್ಯ ಚಿಲಮೆಯ ನೋಡುವಾತಂಗೆ ಉಚ್ಚೆಯ ಬಚ್ಚಲ ತೋಡಲಾಗದು.
ಭಕ್ತರನಲ್ಲದೆ ಭವಿಗಳ ಬೇಡೆನೆಂಬಾತಂಗೆ
ಅಚ್ಚೊತ್ತಿದ ಲಕ್ಷ್ಮಿಯ ಮುದ್ರೆಯ ಹಿಡಿಯಲಾಗದು.
ಕೊಂಡ ವ್ರತಕ್ಕೆ ಸಂದೇಹ ಕುಳ್ಳಿರೆ, ಅಂಗವ ಹೊರಲಾಗದು.
ಇಂತಿವನರಿಯದೆ,
ನಾ ವ್ರತಸ್ಥನೆಂದು ಕೊಂಡಾಡುತಿಪ್ಪ ಭಂಡರನೊಪ್ಪ,
ಈಶಾನ್ಯಮೂರ್ತಿ ಮಲ್ಲಿಕಾರ್ಜುನವು. || ೩೯ ||

೧೭೫

ಅಪ್ಪು ಲವಣವೆಲ್ಲವು ಸರಿ, ಪರಿಪಾಪಕವೆಲ್ಲವು ಸರಿ.
ಇವೆಲ್ಲಾಯೆಂದು ಬಿಟ್ಟ ಮತ್ತೆ,
ಲೌಕಿಕಕ್ಕೆ ದೂರಸ್ಥನಾಗಿ, ಪರಮಾರ್ಥಕ್ಕೆ ಸಂಪದನಾಗಿ,

ತನಗೆ ಕರ್ತುವಾದ ಗುರುಚರದಲ್ಲಿ ಭೃತ್ಯನಾಗಿರಬೇಕು.
ಗೆಲ್ಲಸೋಲಕ್ಕೆ ಹೊತ್ತುಹೋರದೆ,
ಶರಣರ ಸಮೂಹದಲ್ಲಿ ಅಲ್ಲ ಅಹುದೆನದಿಪ್ಪುದೆ ?
ಈಶಾನ್ಯಮೂರ್ತಿ ಮಲ್ಲಿಕಾರ್ಜುನಲಿಂಗಕ್ಕೆ ನೇಮ ಸಂದಿತ್ತು || ೪೦ ||

೧೭೬

ಮನ ಅರೋಚಕವಾದಲ್ಲಿ,
ಲವಣ ವಾರಿ ಪರಿಪಾಕ ಮುಂತಾದ ರಸದ್ರವ್ಯವನೊಲ್ಲದೆಯಿಪ್ಪುದು ವ್ರತವೆ ?
ಅಲ್ಲ, ಅದು ಸೌಕರಿಯವಲ್ಲದೆ.
ಅದೆಂತೆಂದಡೆ:
ಪರದ್ರವ್ಯ ಪರಸತಿ ಹುಸಿ ಕೊಲೆ ಕಳವು ಅತಿಕಾಂಕ್ಷೆಯಂ ಬಿಟ್ಟು,
ಬಂದುದ ನಿಂದಂತೆ ಕಂಡು, ಬಾರದುದಕ್ಕೆ ಕಾಂಕ್ಷೆಯ ಮಾಡದಿಪ್ಪುದೆ,
ಅರುವತ್ತನಾಲ್ಕು ವ್ರತ, ಅಯಿವತ್ತಾರು ಶೀಲ,
ಮೂವತ್ತೆರಡು ನೇಮ ಸಂದಿತ್ತು.
ಈಶಾನ್ಯಮೂರ್ತಿ ಮಲ್ಲಿಕಾರ್ಜುನಲಿಂಗದಲ್ಲಿ ಸ್ವಯಂಭುವಾಯಿತ್ತು || ೪೧ ||

೧೭೭

ಜಲ ಕೆಯ್ಯಿ ಭಾಜನ ವಾಸ ಇವು ಮುಂತಾಗಿ
ಭವಿಸಂಗ ಭವಿ ನಿರೀಕ್ಷಣೆ, ಲೌಕಿಕಕ್ಕೆ ಇವ ಬಿಟ್ಟು, ಮನ ಭಾವದಲ್ಲಿ ಶುದ್ಧವಾಗಿ,
ಪೂಜಿಸುವ ಲಿಂಗದಲ್ಲಿ, ಪ್ರಮಾಣಿಸುವ ಜಂಗಮದಲ್ಲಿ,
ಆರಾಧಿಸುವ ಗುರುವಿನಲ್ಲಿ ಪಂಚಾಚಾರ ಶುದ್ಧವಾಗಿ,
ಮನ ವಚನ ಕಾಯ ತ್ರಿಕರಣದಲ್ಲಿ ಶುದ್ಧಾತ್ಮನಾಗಿಪ್ಪುದೆ,
ಈಶಾನ್ಯಮೂರ್ತಿ ಮಲ್ಲಿಕಾರ್ಜುನಲಿಂಗಕ್ಕೆ ಸರ್ವವ್ರತ ಸಂದಿತ್ತು || ೪೨ ||

೧೭೮

**ಶೀಲಸಂಪಾದನೆ ಸಮರ್ಪಣ :**
ಅರಿವನರಿತೆನೆಂಬಲ್ಲಿ ಮರೆದುದೇನು ಅರಿವೋ ಮರವೆಯೋ ?
ಉಭಯದಲ್ಲಿ ಶರೀರ ನಿಂದು ಇಪ್ಪುದು,
ಬಿಂದುವೋ ? ನಾದವೋ ? ಕಳೆಯೋ ? ಎಂಬುದನರಿದಲ್ಲಿ
ಅರಿವಿನ ಸಂದೇಹ ನಿಂದಿತ್ತು.
ಈಶಾನ್ಯಮೂರ್ತಿ ಮಲ್ಲಿಕಾರ್ಜುನಲಿಂಗವು ಸ್ವಯಂಭುವಾದ. || ೪೩ ||

೧೭೯

ತರ್ಕಾಯಕ್ಕೆ ಸಿಕ್ಕಿದಲ್ಲಿ ವೇದಾಂತಿಯಾದ.
ಆಗುಚೇಗೆಯನಾಡೆಹೆನೆಂದು ಆಗಮಿಕನಾದ.
ಹಿಂದುಮುಂದಣ ನಿಂದ ಹರಟೆಯ ಹೇಳಿಹೆನೆಂದು ಪುರಾಣಿಕನಾದ.

ಇಂತಿವು ಪಂಚವಿಂಶತಿತತ್ವದ ಶಾಖೆಯಲ್ಲಿ ಆದ ಜಾಳಿಸುವ ವಾರ್ದಿಕ ಪರ್ಣ.
ಇಂತಿವ ನೇತಿಗಳೆದು ನಿಂದುದು,
ಈಶಾನ್ಯಮೂರ್ತಿ ಮಲ್ಲಿಕಾರ್ಜುನಲಿಂಗದಲ್ಲಿ ಸ್ವಯಂಭುವಾದ. || ೪೪ ||

೧೮೦

ವಾಸದ ದೀಪಕ್ಕೆ ವಾಯು ವಿರೋಧವಲ್ಲದೆ
ಮಹಾಹೇತುವಿನ ವಹ್ನಿಗೆ ಅದು ಪ್ರೀತಿಯ ಸಂಗ.
ನೀತಿಯಲ್ಲಿ ನಡೆವನ ವಿರಕ್ತಿ, ಭಕ್ತಿ ಕುಲ ಅಜಾತಂಗೆ ಸಂಗ.
ಮಿಕ್ಕಾದ ದೂಷಣದ ಅಪಸರೆಯ ಮರ್ತ್ಯರ ವಿರೋಧ.
ಇಂತೀ ದ್ವಯ ಭೇದದಲ್ಲಿ ಅರಿದು ನಿಂದ
ಪರಮಪರಿಣಾಮಿಗೆ ಸ್ತುತಿ ನಿಂದೆಯೆಂಬುದಿಲ್ಲ,
ಈಶಾನ್ಯಮೂರ್ತಿ ಮಲ್ಲಿಕಾರ್ಜುನಲಿಂಗದಲ್ಲಿ ಸ್ವಯಂಭುವಾದವಂಗೆ. || ೪೫ ||

೧೮೧

ಸಕಲ ಬಹುಕೃತವೆಂಬ ಗಹನದಲ್ಲಿ, ಜೀವವೆಂಬ ದಂತಿ
ತಿರುಗಾಡುತ್ತಿರಲಾಗಿ,
ಅರಿವೆಂಬ ಕೇಸರಿ ಅದ ಕಂಡು ಒದಗಿಯೈದಿ,
ಮಸ್ತಕದ ಕುಂಭಸ್ಥಲವನೊಡೆದು ಸೇವಿಸುತ್ತಿರಲಾಗಿ,
ಶಾರ್ದೂಲ ಹೋಯಿತ್ತು, ಕೇಸರಿ ಬಿಟ್ಟಿತ್ತು,
ಗಜ ಬದುಕಿತ್ತು, ಶಾರ್ದೂಲ ಶಂಕೆಯ ಹರಿಯಿತ್ತು.
ಈಶಾನ್ಯಮೂರ್ತಿ ಮಲ್ಲಿಕಾರ್ಜುನಲಿಂಗವು,
ಲೀಲೆಗೆ ಹೊರಗಾಗಿ ಸ್ವಯಂಭುವಾಯಿತ್ತು. || ೪೬ ||

೧೮೨

ಜಗಕ್ಕೆ ಹೊರಗಾಗಿ ಅರಿವ ಠಾವಿಲ್ಲ, ಜಗಕ್ಕೆ ಒಳಗಾಗಿ ಮರೆವ ಠಾವಿಲ್ಲ,
ಒಳಹೊರಗೆಂಬುದು ಒಂದೇ ಭೇದವಾದ ಕಾರಣ
ಕುಡಿಕೆಯ ಘೃತ ಅಗಲಿಕೆ ಬಂದಂತೆ, ಅದು ಮುಂದಣ ಬಯಕೆ.
ಇದು ಇಂದಿನ ಇರವು ಎಂಬುದನರಿದಲ್ಲಿ,
ಉಂಟು, ಇಲ್ಲಾ ಎಂಬ ಸಂದೇಹ ಹರಿಯಿತ್ತು
ಈಶಾನ್ಯಮೂರ್ತಿ ಮಲ್ಲಿಕಾರ್ಜುನಲಿಂಗವನರಿದಲ್ಲಿ. || ೪೭ ||

೧೮೩

ಜಲದೊಳಗಣ ಮತ್ಸ್ಯ, ವನದೊಳಗಣ ಮರ್ಕಟ, ಆಕಾಶದ ಪಕ್ಷಿ,
ಇವು ಕೂಡಿ ಮಾತನಾಡುವಲ್ಲಿ,
ಶಬರ ಮತ್ಸ್ಯವ ನೋಡಿ, ಜೋಗಿ ವನಚರವ ಕಂಡು,
ಅಂಟಿನ ಡೊಂಬ ಹಕ್ಕಿಯ ಕಂಡು,

ಇಂತೀ ಮೂವರ ಹಡಹ ಕೆಡಿಸಿತ್ತು.
ಕಾರಮಳೆ ಸೋನೆಯೆದ್ದು ಸುರಿಯಿತ್ತು, ಇಂತಿನ್ನಾರ ಕೇಳುವೆ ?
ಈಶಾನ್ಯಮೂರ್ತಿ ಮಲ್ಲಿಕಾರ್ಜುನಲಿಂಗವೆ ನೀನೆ ಬಲ್ಲೆ. ॥ ೪೮ ॥

೧೮೪

ಪಿಪೀಲಿಕ ಮಧುರವ ಕಾಂಬಂತೆ, ಮರ್ಕಟ ಲಂಘನವ ಕಾಂಬಂತೆ,
ವಿಹಂಗ ಆಕಾಶವನಡರುವಂತೆ, ತ್ರಿವಿಧದ ಭೇದ.
ಜ್ಞಾನವನರಿತು, ಕಾಯಬಿಂದು, ಜೀವಬಿಂದು, ಜ್ಞಾನಬಿಂದು,
ತ್ರಿವಿಧಬಿಂದುವಿನಲ್ಲಿ ನಿಂದು ಕಂಡು,
ಈಶಾನ್ಯಮೂರ್ತಿ ಮಲ್ಲಿಕಾರ್ಜುನಲಿಂಗದಲ್ಲಿ ಸ್ವಯಂಭುವನರಿಯಬೇಕು. ॥ ೪೯ ॥

೧೮೫

ಕಾಯದಲ್ಲಿ ಪರಿಪೂರ್ಣನಾಗಿ ಜೀವನಿಪ್ಪ ಭೇದವ,
ಜೀವದಲ್ಲಿ ಜ್ಞಾನಪರಿಪೂರ್ಣವಾಗಿಪ್ಪ ಭೇದವ,
ಜ್ಞಾನದಲ್ಲಿ ಬೆಳಗು ಬಿಂಬಿಸುತಿಪ್ಪ ಭೇದವ [ಅರಿಯಬೇಕು.]
ಈಶಾನ್ಯಮೂರ್ತಿ ಮಲ್ಲಿಕಾರ್ಜುನಲಿಂಗವು,
ಜ್ಯೋತಿರ್ಮಯವಾಗಿಪ್ಪುದು. ॥ ೫೦ ॥

೧೮೬

ಕಾಯವ ಮರೆದು ಜೀವವನರಿಯಬೇಕು.
ಜೀವವ ಮರೆದು ಜ್ಞಾನವನರಿಯಬೇಕು.
ಜ್ಞಾನವ ಮರೆದು ಬೆಳಗನರಿಯಬೇಕು.
ಬೆಳಗಿನ ಮರೆಯ
ಈಶಾನ್ಯಮೂರ್ತಿ ಮಲ್ಲಿಕಾರ್ಜುನಲಿಂಗವನರಿಯಬೇಕು. ॥ ೫೧ ॥

೧೮೭

ಕಾಯವಿದ್ದಲ್ಲದೆ ಜೀವಕ್ಕೆ ಬೆಲೆಯಿಲ್ಲ, ಜೀವವಿದ್ದಲ್ಲದೆ ಜ್ಞಾನಕ್ಕೆ ಕುರುಹಿಲ್ಲ,
ಜ್ಞಾನವಿದ್ದಲ್ಲದೆ ಬೆಳಗಿಗೆ ಒಡಲಿಲ್ಲ.
ಒಂದಕ್ಕೊಂದ ಹಿಂಗಿ ಕಾಬ ಠಾವ ಹೇಳಾ,
ಈಶಾನ್ಯಮೂರ್ತಿ ಮಲ್ಲಿಕಾರ್ಜುನಲಿಂಗವೆ. ॥ ೫೨ ॥

೧೮೮

ಬಂಗಾರದ ರೂಪಿದ್ದಲ್ಲದೆ ಬಣ್ಣವನವಗವಿಸದು.
ಬಣ್ಣ ರಂಜನೆಯಾಗಿ ರಂಜಿಸುತ್ತಿರೆ ಎಲ್ಲರ ಕಣ್ಣಿಗೆ ಮಂಗಲ.
ಇಂತೀ ಕಾಯ ಜೀವ ಜ್ಞಾನದ ಬೆಳಗು.
ಈಶಾನ್ಯಮೂರ್ತಿ ಮಲ್ಲಿಕಾರ್ಜುನಲಿಂಗದ ಒದಗು. ॥ ೫೩ ॥

೧೮೯

ಕ್ರೀಯ ಮರೆದಲ್ಲಿ, ಅರಿವು ಹೀನವಾಗಿಪ್ಪುದು.
ಅರಿವ ಮರೆದಲ್ಲಿ, ಜ್ಞಾನ ಹೀನವಾಗಿಪ್ಪುದು.
ಜ್ಞಾನವ ಮರೆದಲ್ಲಿ, ಬೆಳಗಿನ ಕಳೆ ಹೋಯಿತ್ತು
ಈಶಾನ್ಯಮೂರ್ತಿ ಮಲ್ಲಿಕಾರ್ಜುನಲಿಂಗವು
ಅವರಿಗೆ ಮರೆಯಾಗಿ ತೊಲಗಿದ. || ೫೪ ||

೧೯೦

ಧರೆಯ ಕೃಷಿ ಶುದ್ಧವಾಗಿಯಲ್ಲದೆ, ಸಸಿ ಶುದ್ಧವಿಲ್ಲ.
ಅರ್ಚನೆ ಅರ್ಪಿತ ಮೂರ್ತಿಧ್ಯಾನದಿಂದಲ್ಲದೆ, ಚಿತ್ತ ಶುದ್ಧವಿಲ್ಲ.
ಇದು ನಿಶ್ಚಯ, ಈಶಾನ್ಯಮೂರ್ತಿ ಮಲ್ಲಿಕಾರ್ಜುನಲಿಂಗವನರಿವುದಕ್ಕೆ. || ೫೫ ||

೧೯೧

ಮನಸಿಜನ ಇರವುಳ್ಳನ್ನಕ್ಕ ಶೃಂಗಾರವ ಹಾರಬೇಕು.
ಅವರಂಗವುಳ್ಳನ್ನಕ್ಕ ಅಂಗನೆಯರ ಸಂಗಬೇಕು.
ಸಂಗಸುಖಕ್ಕೊಡಲಹನ್ನಬರ ಶಿವಲಿಂಗ ಪೂಜೆಯ ಮಾಡಬೇಕು.
ಅದು ಅರುವಿನ ಗೊತ್ತು, ಜ್ಞಾನದ ಚಿತ್ತು,
ಪರಬ್ರಹ್ಮದ ಕೂಟ, ಶಿವಪೂಜೆಯ ಮಾಟ,
ಈಶಾನ್ಯಮೂರ್ತಿ ಮಲ್ಲಿಕಾರ್ಜುನಲಿಂಗವನರಿವುದಕ್ಕೆ. || ೫೬ ||

೧೯೨

ಅಂಗ ಶಿರದ ಮಲಿನವ ಕಳೆದಲ್ಲಿ, ಮನಕ್ಕೆ ಲಂಘನೆಯಾದಂತೆ,
ಶಿವಲಿಂಗಪೂಜೆಯ ಕೈಕೊಂಡನ್ನಬರ, ಕಂಗಳ ಜಲ ತುಂಬುವನ್ನಬರ,
ಮನಮೂರ್ತಿ ಧ್ಯಾನ ಜಾಹೆ ಅಹನ್ನಬರ,
ಅಂಗಕ್ಕೆ ತೆರಪಿಲ್ಲದೆ, ಮನಕ್ಕೆಡೆಯಿಲ್ಲದೆ,
ಅರಿವುದಕ್ಕೆ ಹೆರೆಹಿಂಗದೆ, ಪೂಜಾಲೋಲನಾಗಿರಬೇಕು,
ಈಶಾನ್ಯಮೂರ್ತಿ ಮಲ್ಲಿಕಾರ್ಜುನಲಿಂಗವನರಿವುದಕ್ಕೆ. || ೫೭ ||

೧೯೩

ಅರ್ಚನೆ ಪೂಜೆಯ ಕುರಿತು ಮಾಡಿದಲ್ಲಿ,
ಚತುರ್ವಿಧಫಲಪದಂಗಳೆಂಬವು ತನ್ನ ಹಿತ್ತಿಲ ಬೆಳೆ.
ಇಷ್ಟಾರ್ಥ ಮೋಕ್ಷಾರ್ಥ ಕಾಮ್ಯಾರ್ಥವೆಂಬಿವು, ತನ್ನ ಬಾಗಿಲ ನೆಟ್ಟ ಸ್ಥಾಣು.
ಇವು ಹೊರಗಾಗಿ ಮೀರಿ ಕಂಡ ತೆರ,
ಉರಿ ಕೊಂಡ ಕರ್ಪುರದಂತೆ, ಇಂತೀ ಉಭಯ ನಿಶ್ಚಯ ಪೂಜೆ.
ಈಶಾನ್ಯಮೂರ್ತಿ ಮಲ್ಲಿಕಾರ್ಜುನಲಿಂಗಕ್ಕೆ ಎರವಿಲ್ಲದ ಭಾವ. || ೫೮ ||

೧೯೪

ಧರೆ ಆಕಾಶವಿಲ್ಲದಿರೆ, ಆಡುವ ಘಟಪಟ, ಚರಸ್ಥಾವರ,
ಆಡುವ ಚೇತನಾದಿಗಳಿರಬಲ್ಲವೆ ?
ವಸ್ತುವಿನ ಸಾಕಾರವೆ ಭೂಮಿಯಾಗಿ,
ಆ ವಸ್ತುವಿನ ಆಕಾಶವೆ ಶಲಾಕೆ ರೂಪಾಗಿ,
ಸಂಘಟಿಸಲಾಗಿ ಜೀವಕಾಯವಾಯಿತ್ತು.
ಇಂತೀ ರೂಪಿಂಗೆ ರೂಪುಪೂಜೆ, ಅರಿವಿಂಗೆ ಜ್ಞಾನಪೂಜೆ.
ಉಭಯವು ನಿಂದಲ್ಲಿ,
ಈಶಾನ್ಯಮೂರ್ತಿ ಮಲ್ಲಿಕಾರ್ಜುನಲಿಂಗ, ಏನೂ ಎನಲಿಲ್ಲ. || ೫೯ ||

೧೯೫

ಅಂಗವನ[ಳಿ]ವನ್ನಕ್ಕ ಶಿವಲಿಂಗಪೂಜೆಯ ಮಾಡಬೇಕು.
ಆತ್ಮನ ಕ್ಷುಧೆಯುಳ್ಳನ್ನಕ್ಕ ಬಂದ ಪದಾರ್ಥವ ಲಿಂಗಾರ್ಪಿತ ಮಾಡಬೇಕು.
ಇದು ಅರಿವಿನ ಭಿತ್ತಿ, ಜ್ಞಾನದ ಗೊತ್ತು, ಸರ್ವಮಯದ ಯುಕ್ತಿ.
ಈಶಾನ್ಯಮೂರ್ತಿ ಮಲ್ಲಿಕಾರ್ಜುನಲಿಂಗವನರಿವ ಶಕ್ತಿ. || ೬೦ ||

೧೯೬

ಕಾಯ ಜೀವವನರಿದಲ್ಲಿ, ಇಷ್ಟ ಪೂಜೆಯ ಮರೆದಿರಬೇಕು.
ದಿವದಲ್ಲಿ ನಡೆಯದೆ, ರಾತ್ರಿಯಲ್ಲಿ ಒರಗದೆ,
ಉಭಯವನಳಿದಿದ್ದಲ್ಲಿ, ಅರ್ಪಿತವಿಲ್ಲದಿರಬೇಕು.
ಸ್ತುತಿ ನಿಂದೆಗೆ ಹೊರಗಾದಲ್ಲಿ, ಋತು ಕಾಲವ ಮರೆದಿರಬೇಕು.
ಮಾತಿನಲ್ಲಿ ಶೂನ್ಯ, ಆತ್ಮನಲ್ಲಿ ಆಸೆಯ ಪಾಶ.
ಇಂತೀ ವೇಷದ ಚೋರರನೊಪ್ಪ,
ಈಶಾನ್ಯಮೂರ್ತಿ ಮಲ್ಲಿಕಾರ್ಜುನಲಿಂಗವು. || ೬೧ ||

೧೯೭

ಪೂಜೆ ಅರತಲ್ಲಿ, ಎಲೆ ಉದುರಿದ ವೃಕ್ಷ ಉಲುಹಡಗಿದಂತಿರಬೇಕು.
ಜಲವಿಲ್ಲದ ತಟಾಕದ ಕೆಳೆಯಲ್ಲಿ, ಬೆಳೆಯ ಬಿತ್ತಿದಂತಿರಬೇಕು.
ವಾರಣಸಿದ ಕುಂಭದಲ್ಲಿ, ವಾರಿಯ ತುಂಬಿಸಿದಂತಿರಬೇಕು.
ಬಯಲ ಬಡಿವಡೆದ ಪಾಣೆ ಅಸಿಯಂತಿರಬೇಕು.
ಸುರಚಾಪದಂತೆ, ಮಾರುತ ಧ್ವನಿಯಂತೆ,
ನಾಮರೂಪಿಂಗೆ ಹೊರಗಾದ ಮತ್ತೆ, ಏನೂ ಎನಲಿಲ್ಲ,
ಈಶಾನ್ಯಮೂರ್ತಿ ಮಲ್ಲಿಕಾರ್ಜುನಲಿಂಗವೆಂದೆನಲಿಲ್ಲ. || ೬೨ ||

೧೯೮

ಜ್ಞಾನವುಳ್ಳನ್ನಕ್ಕ ಅರಿವು, ಅರಿವುಳ್ಳನ್ನಕ್ಕ ಆತ್ಮ,
ಆತ್ಮವುಳ್ಳನ್ನಕ್ಕ ಜೀವ, ಜೀವವುಳ್ಳನ್ನಕ್ಕ ಕಾಯ,
ಕಾಯವುಳ್ಳನ್ನಕ್ಕ ಸಕಲಸುಖಭೋಗಂಗಳು.
ಅದೆಂತೆಂದಡೆ :
ಬೀಜಳಿದು ಬೆಳೆದು ಪುನರಪಿ ಬೀಜವಾದಂತೆ.
ಅದರ ಆಗುಚೇಗೆಯನರಿದಲ್ಲಿ, ಇಷ್ಟಪ್ರಾಣಯೋಗ ಕ್ರಿಯಾದ್ವೈತ,
ಈಶಾನ್ಯಮೂರ್ತಿ ಮಲ್ಲಿಕಾರ್ಜುನಲಿಂಗವನರಿದುದು. ॥ ೬೩ ॥

೧೯೯

ಜ್ಞಾನಾದ್ವೈತದ ಹೆಚ್ಚುಗೆ, ಭಾವಾದ್ವೈತಕ್ಕೆ ಸಂಬಂಧವಾಗಿಹುದು.
ಭಾವಾದ್ವೈತದ ಹೆಚ್ಚುಗೆ, ಕ್ರಿಯಾದ್ವೈತವ ಸಂಬಂಧಿಸಿಕೊಂಡಿಹುದು.
ಕ್ರಿಯಾದ್ವೈತದ ಹೆಚ್ಚುಗೆ,
ಸರ್ವಮಯವಾಗಿ ಘನಲಿಂಗವ ಗರ್ಭೀಕರಿಸಿಕೊಂಡಿಪ್ಪುದು.
ಇಂತೀ ಭೇದ.
ಕ್ರೀ ಜ್ಞಾನಕ್ಕೆ ಒಡಲಾಗಿ, ಮಥನದಿಂದ ವಹ್ನಿ ಕುರುಹಿಗೆ ಬಂದಂತೆ,
ಕ್ರೀಯಿಂದ ಈಶಾನ್ಯಮೂರ್ತಿ ಮಲ್ಲಿಕಾರ್ಜುನಲಿಂಗವು,
ಸ್ವಯಂಭುವಾಯಿತ್ತು ॥ ೬೪ ॥

೨೦೦

ಶಿಲೆ ಕಾಷ್ಠದಲ್ಲಿ ಪಾವಕ ಜನಿಸುವ ಭೇದದಂತೆ,
ಮಾಡುವ ಸತ್ಕ್ರೀ ಭೇದ.
ಶಿಲೆಯ ವಹ್ನಿ ತಲೆದೋರಿ ಉಭಯವನುಳುಹಿದಂತೆ,
ಗುರು ಚರದ ಯುಕ್ತಿ
ಕಾಷ್ಠದ ವಹ್ನಿ ತನ್ನಯ ಇರವ ಸುಟ್ಟು, ಹಲವು ಕಡೆಗೆ ಪರಿವಂತೆ,
ಆತ್ಮನ ಭೇದ.
ಇಂತೀ ನಾನಾ ವರ್ತಕಂಗಳಲ್ಲಿ ಕ್ರೀ ಶುದ್ಧವಾಗಿ ನಿಂದುದು,
ಈಶಾನ್ಯಮೂರ್ತಿ ಮಲ್ಲಿಕಾರ್ಜುನಲಿಂಗವನರಿದುದು. ॥ ೬೫ ॥

೨೦೧

ವಾಗದ್ವೈತದಲ್ಲಿ ನಿಂದು, ಸ್ವಯಾದ್ವೈತವನರಿಯಬೇಕು.
ಆ ಗುಣ ಸ್ವಯವಾಗಿ ನಿಂದು, ಗುರುಮೂರ್ತಿಯಾಗಬೇಕು.
ಗುರುಮೂರ್ತಿ ನಿಶ್ಚಯವಾಗಿ ನಿಂದು,
ಚರಲಿಂಗದಲ್ಲಿ ನಿಃಪತಿಯಾಗಿ ನಿಂದುದು ದ್ವೈತ.
ಎರಡಳಿದು ಒಂದೆನಿಸಿ ನಿಂದುದು,
ಈಶಾನ್ಯಮೂರ್ತಿ ಮಲ್ಲಿಕಾರ್ಜುನಲಿಂಗವು ತಾನೆ. ॥ ೬೬ ॥

೨೦೨

ಕಾಲಿನಲ್ಲಿ ನಡೆವುದು, ಕೈಯಲ್ಲಿ ಮುಟ್ಟುವುದು,
ಕಣ್ಣಿನಲ್ಲಿ ನೋಡುವುದು, ಕಿವಿಯಲ್ಲಿ ಕೇಳುವುದು,
ಮೂಗಿನಲ್ಲಿ ವಾಸಿಸುವುದು. ಬಾಯಲ್ಲಿ ಉಂಬ ಭೇದದಿಂದ
ಅಯಿದರಾಟ, ಆರರ ಕೂಟ, ಏಳರ ಬೇಟ,
ಎಂಟರ ಮದ, ಹದಿನಾರರ ಕಳೆ. ಇಂತಿವೆಲ್ಲವು ಮೂರ ಮರೆದಲ್ಲಿ ನಿಂದವು.
ಮೂರನರಿದಲ್ಲಿ ಸಂದವು. ಇಂತಿವು ಉಳ್ಳನ್ನಕ್ಕ ಪೂಜಿಸಬೇಕು.
ನಾ ನೀನೆಂಬನ್ನಕ್ಕ ಅರ್ಪಿಸಬೇಕು. ಅದಳಿಯೆ ಮತ್ತೇನೂ ಎನಲಿಲ್ಲ,
ಈಶಾನ್ಯಮೂರ್ತಿ ಮಲ್ಲಿಕಾರ್ಜುನಲಿಂಗವೆಂಬದಕ್ಕೆ ಎಡೆಯಿಲ್ಲ. || ೬೭ ||

೨೦೩

ಸಕಲ ಗಂಧಕ್ಕೆ ವಾಯುವೆ ಬೀಜ, ಸಕಲ ಉತ್ಪತ್ಯಕ್ಕೆ ಅಪ್ಪುವೆ ಬೀಜ.
ಸಕಲ ಪ್ರಕೃತಿಗೆ ಜೀವವೆ ಬೀಜ.
ಇಂತೀ ಭೇದವನರಿತಲ್ಲಿ,
ಆತ್ಮನ ವಿವರ ಹೆರೆಹಿಂಗಿದಲ್ಲದೆ, ನಿಜತತ್ವ ಪರಮನಲ್ಲ.
ಪರಮ ಪರತತ್ವವ ಕೂಡಿ ಬೆರಸಿದಲ್ಲಿ
ಈಶಾನ್ಯಮೂರ್ತಿ ಮಲ್ಲಿಕಾರ್ಜುನಲಿಂಗವು ಸ್ವಯಂಭುವಾದ. || ೬೮ ||

೨೦೪

ಕಾಯವಿದ್ದು ಕಾಬುದು ಗುರುಸ್ಥಲ, ಜೀವವಿದ್ದು ಕಾಬುದು ಲಿಂಗಸ್ಥಲ,
ಭಾವವಿದ್ದು ಕಾಬುದು ಜಂಗಮಸ್ಥಲ,
ತ್ರಿವಿಧವ ಒಡಗೂಡಿ ಕಾಬುದು ಭಕ್ತಿಸ್ಥಲ.
ಭಕ್ತಿ ನಿಶ್ಚಯವಾಗಿ ನಿಂದಲ್ಲಿ,
ಈಶಾನ್ಯಮೂರ್ತಿ ಮಲ್ಲಿಕಾರ್ಜುನಲಿಂಗ ನಿಶ್ಚಯವಾದ ಸ್ಥಲ. || ೬೯ ||

೨೦೫

ಆರುಸ್ಥಲವಿಟ್ಟು ಬೇರೆ ಕರೆದ ಭಾವವಾವುದಯ್ಯಾ ?
ಸಕಲಗುಣಂಗಳನರತು,
ಸರ್ವಜೀವಕ್ಕೆ ದಯಾಪರನಾಗಿಪ್ಪುದು, ಭಕ್ತಿಸ್ಥಲ.
ಸಕಲದೇಹಭಾವಂಗಳಲ್ಲಿ ಕಲೆದೋರದಿಪ್ಪುದು, ಗುರುಸ್ಥಲ.
ಉತ್ಪತ್ಯ ಸ್ಥಿತಿ ಲಯಕ್ಕೆ ಹೊರಗಾದುದು, ಲಿಂಗಸ್ಥಲ.
ಆ ಮೂರ ಹೆರೆಹಿಂಗಿ ನಿಂದುದು, ಜಂಗಮಸ್ಥಲ.
ಆ ಚತುರ್ವಿಧವನೊಳಕೊಂಡದುದು, ಶರಣಸ್ಥಲ.
ಆ ಅಯಿದನವಗವಿಸಿ ನಿಂದುದು, ಐಕ್ಯಸ್ಥಲ.
ಇಂತೀ ಷಡುಸ್ಥಲದ ಭಕ್ತ ಮಾಹೇಶ್ವರ ಪ್ರಸಾದಿ ಪ್ರಾಣಲಿಂಗಿ

ಶರಣ ಐಕ್ಯನೆಂದು ನಿಂದುದು, ಒಂದೆ ಸ್ಥಲ.
ಮರೆದು ಅರಿದಲ್ಲಿ ಆಯಿತ್ತು
ಈಶಾನ್ಯಮೂರ್ತಿ ಮಲ್ಲಿಕಾರ್ಜುನಲಿಂಗವು,
ಷಡಂಗಲೇಪವಾಗಿ ಸ್ವಯಂಭುವಾಯಿತ್ತು ॥ ೭೦ ॥

೨೦೬

ಗುರು ವೈಭವಕ್ಕೆ ಸಿಕ್ಕಿದಾಗಲೆ ಶಿಷ್ಯಂಗೆ ನರಕ ಪ್ರಾಪ್ತಿ.
ಲಿಂಗ ಭಜನೆಗೆ ಸಿಕ್ಕಿದಾಗಲೆ ಮರಣಕ್ಕೊಳಗು.
ಜಂಗಮ ಜಂಗುಳಿಯಾಗಿ,
ಕಂಡಕಂಡವರಂಗಳಕ್ಕೆ ಜಂಘೆಯನಿಕ್ಕಲಾಗಿ, ನಿರಂಗಕ್ಕೆ ಹೊರಗು.
ಇಂತೀ ಇವರು ನಿಂದುದಕ್ಕೆ ಬಂಧವಿಲ್ಲದಿರಬೇಕು,
ಈಶಾನ್ಯಮೂರ್ತಿ ಮಲ್ಲಿಕಾರ್ಜುನಲಿಂಗವನರಿವುದಕ್ಕೆ. ॥ ೭೧ ॥

೨೦೭

ಗುರುವೆಂದಡೂ ಕಾಯವುಳ್ಳನ್ನಕ್ಕ, ದೋಷಕ್ಕೆ ಹೊರಗಾಗಬೇಕು.
ಲಿಂಗವೆಂದಡೂ ಪೀಠಕ್ಕೆ ಸಿಕ್ಕಹನ್ನಕ್ಕ,
ಜಗದ ಆಗುಚೇಗೆಯನರಿಯಬೇಕು.
ಜಂಗಮವೆಂದಡೂ ಸುಖದುಃಖವುಳ್ಳನ್ನಕ್ಕ,
ಕಾಯವಿಡಿದು ಇಹ ಕಾರಣ, ಪಾಪ ತಾಪಕ್ಕೆ ಹೊರಗಾಗಬೇಕು.
ಶೂನ್ಯವಾದಡೂ ಆ ಕುರುಹುಳ್ಳನ್ನಕ್ಕ, ಸುಖದುಃಖಕ್ಕೊಳಗು.
ಈಶಾನ್ಯಮೂರ್ತಿ ಮಲ್ಲಿಕಾರ್ಜುನಲಿಂಗವಾದಡೂ ಮರೆದಲ್ಲಿ ಭವಕ್ಕೆ ಬೀಜ. ॥ ೭೨ ॥

೨೦೮

ಅಂಗ ಲಿಂಗವ ಪೂಜಿಸಿ, ಪ್ರಾಣ ಜ್ಞಾನವ ಕಂಡು,
ಅಂಗ ಲಿಂಗ ಹಿಂಗಿ, ಪ್ರಾಣಲಿಂಗವಾಗಿ.
ಆ ಪ್ರಾಣ ಲಿಂಗದಲ್ಲಿ ನಿಂದು, ಜ್ಞಾನಲಿಂಗವಾಯಿತ್ತು.
ಲಿಂಗಭಾವವಳಿದು ಮಹದೊಡಗೂಡಿ,
ಈಶಾನ್ಯಮೂರ್ತಿ ಮಲ್ಲಿಕಾರ್ಜುನಲಿಂಗವು ಸ್ವಯಂಭುವಾದ ॥ ೭೩ ॥

೨೦೯

ಮಧುರ ದಂಡ ಒರಳಿಗೆ ಬಂದು,
ಮರಳಿ ಬೆಂದು, ತ್ರಿಗುಣದಲ್ಲಿ ಹೊಂದಿ, ಕಡೆಯಾಣೆಯಾದಂತೆ,
ಒಂದನೊಂದು ಕಂಡು ಸಂದನಳಿದು ನಿಂದುದು,
ಈಶಾನ್ಯಮೂರ್ತಿ ಮಲ್ಲಿಕಾರ್ಜುನಲಿಂಗವು ತಾನೆ. ॥ ೭೪ ॥

೨೧೦

ಕಂಡೆಹೆನೆಂಬನ್ನಕ್ಕ ಆತುರ ಕಂಡು ಮನ ನಿಂದಲ್ಲಿ,
ಹಿಂದಣ ಇರುವ, ಮುಂದಣ ಬಯಲ, ಉಭಯದ ಸಂದನಳಿಯಬೇಕು,
ಈಶಾನ್ಯಮೂರ್ತಿ ಮಲ್ಲಿಕಾರ್ಜುನಲಿಂಗವನರಿವುದಕ್ಕೆ. ॥ ೭೫ ॥

೨೧೧

ಗುರುವೆಂಬ ಅಂಗವ ಧರಿಸಿದಡೇನು?
ಚಿತ್ರದ ಸತಿಯ ಕೈಯ ದೀಪಕ್ಕೆ ಮೊತ್ತದ ತಮ ಹರಿದುದುಂಟೆ?
ನೀಕಳೆಯ ಲಿಂಗವ ಧರಿಸಿದಲ್ಲಿ ಫಲವೇನು?
ಮೃತ್ತಿಕೆಯ ಬೊಂಬೆಯ ಕೈಯಲ್ಲಿ
ನಿಶ್ಚಯದ ಖಂಡೆಯವಿರೆ, ಕುಟ್ಟಬಲ್ಲುದೆ?
ವಿಧಾಂತ ರೂಪು ಲಾಂಛನದ ತೊಟ್ಟು, ಬಹುರೂಪಿಯಾದಲ್ಲಿ
ನೆರೆ ಈಶನ ಯುಕ್ತಿಯ ವಿರಕ್ತಿ ಜಂಗಮವಾಗಬಲ್ಲನೆ?
ಇಂತೀ ಮಾತಿನ ಬಳಕೆಯ ವೇಷವ ಬಿಟ್ಟು,
ನಿಜತತ್ವದ ಸಾಕಾರವೆ ಮೂರ್ತಿಯಾದ,
ಈಶಾನ್ಯಮೂರ್ತಿ ಮಲ್ಲಿಕಾರ್ಜುನಲಿಂಗವು ತಾನೆ. ॥ ೭೬ ॥

೨೧೨

ಲಿಂಗವಸ್ತುವಾದಲ್ಲಿ, ನಂಬುವ ಮನ ವಿಶ್ವಾಸವಾಗಬೇಕು.
ಆಸೆವಿರಹಿತ ಗುರುವಾದಲ್ಲಿ, ಪಾಶವಿರಹಿತ ಪೂಜಿಸುವ ಶಿಷ್ಯನಾಗಬೇಕು.
ಸರ್ವದೋಷನಾಶನನಾಗಿ, ಆಸೆಯೆಂಬುದು ಎಳ್ಳನಿತು ತೋರದಿದ್ದಡೆ,
ಆತ ಈಶಾನ್ಯಮೂರ್ತಿ ಪೂಜಿಸುವಾತ, ಅಜಾತ ಶಂಭು.
ಇಂತೀ ಉಭಯ ಏಕಮಯ
ಈಶಾನ್ಯಮೂರ್ತಿ ಮಲ್ಲಿಕಾರ್ಜುನ ಲಿಂಗವು ತಾನೆ. ॥ ೭೭ ॥

೨೧೩

ಕಿರಾತಂಗೆ ಪಿಸಿತದ ಅರೋಚಕವುಂಟೆ?
ಪುಳಿಂದಂಗ ಶಿಶು ಬಲುಜೀವವೆಂದು ಒಲವರವುಂಟೆ?
ಬೇಡುವ ಯಾಚಕಂಗೆ,
ಕಾಡುವ ಗುರುಚರವೆಂದು ಹೊಟ್ಟೆಯ ಹೊರೆವಾತಂಗೆ,
ಭಕ್ತ ವಿರಕ್ತರ ಆಗುಚೇಗೆಯ ಬಲ್ಲನೆ?
ಇಂತೀ ಕಷ್ಟರ, ದುಷ್ಟರನೊಲ್ಲ
ಈಶಾನ್ಯಮೂರ್ತಿ ಮಲ್ಲಿಕಾರ್ಜುನಲಿಂಗವು. ॥ ೭೮ ॥

೨೧೪

ಕಾಯ ಲಿಂಗದರುಶನವನರಿದಲ್ಲಿ, ಮನವನರಿದು ತನುವೊಪ್ಪುವಂತೆ,
ತನು ಸೋಂಕಿದ ಸುಖವ, ಆತ್ಮನರಿದು ಅರ್ಪಿಸುವಂತೆ,
ಜಾಹೆಯಲ್ಲಿ ಮರೆದೊರಗಿರಲಾಗಿ,
ತನುವ ತಟ್ಟಿದಡೆ, ಆತ್ಮನೆಚ್ಚರುವಂತೆ ಇಪ್ಪುದು,
ಇಷ್ಟಪ್ರಾಣಸಂಬಂಧಯೋಗ,
ಈಶಾನ್ಯಮೂರ್ತಿ ಮಲ್ಲಿಕಾರ್ಜುನಲಿಂಗವನರಿದಲ್ಲಿ, ॥ ೭೯ ॥

೨೧೫

ತನುವಿಂಗೆ ಗುರುಲಿಂಗ, ಮನಕ್ಕೆ ಆಚಾರಲಿಂಗ,
ಆಚಾರಕ್ಕೆ ಅರಿವೆ ಲಿಂಗವಾಗಿ,
ಅರಿವೇ ಈಶಾನ್ಯಮೂರ್ತಿ
ಮಲ್ಲಿಕಾರ್ಜುನಲಿಂಗವೆಂಬುದಕ್ಕೆ ಕುರುಹಾಯಿತ್ತು. ॥ ೮೦ ॥

೨೧೬

ಕಾಮವೆಂಬುದು ಕಂಗಳ ಮುಂದೆ ಸುಳಿದಾಡುತ್ತಿದೆ.
ಕ್ರೋಧವೆಂಬುದೆ ಮನದ ಮುಂದೆ ಇಕ್ಕಿ ಹರಿದಾಡುತ್ತಿದೆ.
ಲೋಭವೆಂಬುದೆ ಸರ್ವವೆಲ್ಲರಲ್ಲಿ ಬೆರಸಿ ಕುಕ್ಕುಳಗುದಿವುತ್ತಿದೆ.
ಆಮಿಷ ತಾಮಸ ರಾಗದಿಂದ ಬರಿಹೊರೆ ಹೋಗುತ್ತಿದೆ,
ಈಶಾನ್ಯಮೂರ್ತಿ ಮಲ್ಲಿಕಾರ್ಜುನಲಿಂಗವನರಿಯದೆ. ॥ ೮೧ ॥

೨೧೭

ಪಾದತೀರ್ಥವ ಕೊಂಡಲ್ಲಿ ತೃಷೆಯರತು.
ಪ್ರಸಾದವ ಕೊಂಡಲ್ಲಿ ಹಸಿವರತು,
ಭೃತ್ಯಭಾವವಾದಲ್ಲಿ ಪ್ರತ್ಯುತ್ತರವಿಲ್ಲದೆಯಿಪ್ಪುದು,
ಈಶಾನ್ಯಮೂರ್ತಿ ಮಲ್ಲಿಕಾರ್ಜುನಲಿಂಗಕ್ಕೆ ಲೆಂಕತ್ವಭಾವ. ॥ ೮೨ ॥

೨೧೮

ಚಚ್ಚೆಗೊಟ್ಟಿಯಿಂದ ಒಡೆಯತನ ಹುಚ್ಚಾಗಿ ಕೆಟ್ಟಿತ್ತು,
ಪ್ರತ್ಯುತ್ತರದಿಂದ ಭೃತ್ಯತನವಡಗಿತ್ತು,
ಮೂರರ ಗೊತ್ತಿನ ಆಸೆಯಿಂದ ಗುರುಚರಪರವೆಂಬ ಹರವರಿ ನಿಂದಿತ್ತು,
ಈಶಾನ್ಯಮೂರ್ತಿ ಮಲ್ಲಿಕಾರ್ಜುನಲಿಂಗಕ್ಕೆ ಈ ಗುಣ ದೂರವಾಯಿತ್ತು. ॥ ೮೩॥

೨೧೯

ಪರಸ್ತ್ರೀಯರ ಬಿಟ್ಟಾಗಲೆ ಗುರುವಿನ ಇರವು ಸಾಧ್ಯವಾಯಿತ್ತು,
ಪರಧನವ ಬಿಟ್ಟಾಗಲೆ ಲಿಂಗದ ಇರವು ಅಂಗದಲ್ಲಿ ಸಲೆ ಸಂದಿತ್ತು,

ನಿಂದೆಯೆಂಬುದು ನಿಂದಾಗಲೆ, ಜಂಗಮಭಕ್ತಿ ಸಾಧ್ಯವಾಯಿತ್ತು.
ಇಂತೀ ತ್ರಿವಿಧದಲ್ಲಿ ತಟ್ಟದಿಪ್ಪಾತನು,
ಈಶಾನ್ಯಮೂರ್ತಿ ಮಲ್ಲಿಕಾರ್ಜು ಲಿಂಗವ ಮುಟ್ಟಿಪ್ಪನು. || ೮೪ ||

೨೨೦

ಅರ್ತಿಯಿಂದ ಮಾಡುವ ಭಕ್ತಿ, ಕರ್ತಾರನ ಕಮ್ಮಟಕ್ಕೊಳಗಾಯಿತ್ತು.
ಸತ್ಯದಿಂದ ಮಾಡುವ ಭಕ್ತಿ, ಕರ್ತಾರನ ಕಮ್ಮಟಕ್ಕೆ ಹೊರಗಾಯಿತ್ತು.
ಅರ್ತಿ ಲೌಕಿಕಕ್ಕೆ, ಸತ್ಯ ಪರಮಾರ್ಥಕ್ಕೆ.
ಉಭಯದ ಗೊತ್ತನರಿದು ಮಾಡುವನ ಭಕ್ತಿ,
ಈಶಾನ್ಯಮೂರ್ತಿ ಮಲ್ಲಿಕಾರ್ಜುನಲಿಂಗಕ್ಕರ್ಪಿತವಾಯಿತ್ತು. || ೮೫ ||

೨೨೧

ಕಾಮದಿಂದ ಕಾಬುದೆಲ್ಲವು ಗುರುವಿಂಗೊಳಗಾಗಿ.
ಮೋಹದಿಂದ ಕಾಬುದೆಲ್ಲವು ಲಿಂಗಕ್ಕೊಳಗಾಗಿ.
ಲೋಭದಿಂದ ಕಾಬುದೆಲ್ಲವು ಜಂಗಮಕ್ಕೊಳಗಾಗಿ.
ಇಂತೀ ತ್ರಿವಿಧದಲ್ಲಿ ಮುಟ್ಟಿಪ್ಪನ ಸತ್ಯ,
ಈಶಾನ್ಯಮೂರ್ತಿ ಮಲ್ಲಿಕಾರ್ಜುನಲಿಂಗದ
ಉಭಯವಳಿದ ಕುರುಹಿನ ಗೊತ್ತು. || ೮೬ ||

೨೨೨

ತನುವಿಂಗೆ ಕುರುಹಾದಲ್ಲಿ, ಅರ್ಚನೆ ಆವರಿಸಬೇಕು.
ಪೂಜೆ ಪುಣ್ಯವನರಿಯಬೇಕು.
ಅರಿದರಿವು,
ಈಶಾನ್ಯಮೂರ್ತಿ ಮಲ್ಲಿಕಾರ್ಜುನಲಿಂಗವ ಕುರುಹಿಡಬೇಕು. || ೮೭ ||

೨೨೩

ಬರಿಹುಂಡನ ಗಡಿವಾಡದಲ್ಲಿರಿಸಿದಂತೆ,
ಒಡೆಯರಿಲ್ಲದ ಮನೆಯ ತುಡುಗುಣಿ ಹೊಕ್ಕು, ಗಡಬಡಿಯ ಮಾಡಿದಂತೆ,
ಅಂಗಕ್ಕೆ ಕುರುಹಿಲ್ಲದೆ, ಮನಕ್ಕರಿವಿಲ್ಲದೆ
ತ್ರಿಭಂಗಿಯಲ್ಲಿ ಸೊಂದವಂಗೆ,
ಈಶಾನ್ಯಮೂರ್ತಿ ಮಲ್ಲಿಕಾರ್ಜುನಲಿಂಗವಿಲ್ಲಾ ಎಂದೆ. || ೮೮ ||

೨೨೪

ಬಾಹ್ಯವ್ರತ, ಭ್ರಮೆವ್ರತ, ಸೀಮೋಲ್ಲಂಘನವ್ರತ,
ಉಪಚರಿಯಕೂಟಸ್ಥವ್ರತ, ಸಮಕ್ರೀ ಭೋಜನವ್ರತ,
ಇಷ್ಟಸಂಬಂಧಕೂಟವ್ರತ, ದ್ರವ್ಯ ಉಪಚರಿಯ ಸಂಪದವ್ರತ,

ಅಹುದಲ್ಲವೆಂಬ ಸಂದೇಹ ಸಂಕಲ್ಪವ್ರತ,
ತಿಲ ಮಧುರ ಕ್ರಮುಕ ಲವಣ ಪರಿಪಾಕ ವಿಸರ್ಜನವ್ರತ,
ಗಮನ ಸುಮನ ಸಮತೆ ನೇಮ ಸಂತೋಷವ್ರತ.
ಇಂತೀ ಸೀಮೆಯೊಳಗಾದ ಅರುವತ್ತನಾಲ್ಕು ಶೀಲವನರಿದಡೇನು?
ಪರವಧುವಿಂಗೆ ಪಲ್ಲಟಿಸದೆ, ಪರಧನಕ್ಕೆ ಕೈದುಡುಕದೆ,
ಅನರ್ಪಿತಕ್ಕೆ ಮನ ಮುಟ್ಟದೆ, ತಾ ಕೊಂಡ ಸೀಮೆಯಲ್ಲಿ ಭಾವಭ್ರಮೆಯಿಲ್ಲದೆ,
ಮನ ವಚನ ಕಾಯದಲ್ಲಿ ಕೊಂಡ ವ್ರತಕ್ಕೆ ಪೂಜಿಸುವ.
ಗುರುಲಿಂಗಜಂಗಮಕ್ಕೆ ಉಭಯದೋರದೆ ನಿಂದುದು,
ಈಶಾನ್ಯಮೂರ್ತಿ ಮಲ್ಲಿಕಾರ್ಜುನಲಿಂಗಕ್ಕೆ ಸಂದುದು. ॥ ೮೯ ॥

೨೨೫

ಕಂಗಳ ಮುಂದೆ ಬಂದು ನಿಂದು, ಕಂಡುದೆಲ್ಲವು ಲಿಂಗಾರ್ಪಿತವೆ ?
ಫಲಾದಿಗಳಲ್ಲಿ ಪಾಕವಾದ ಕಡ್ಡಿ ತೊಟ್ಟು ಬಿತ್ತು ಮೊದಲಾದ
ತುಷ ಪಾಷಾಣ ಬೋನದೊಳಗಾದ ಸಮೂಹವೆಲ್ಲವು,
ಲಿಂಗನೈವೇದ್ಯ ಸಮರ್ಪಣವೆ ?
ಸಾರೂಪ ದ್ರವ್ಯಂಗಳಲ್ಲಿ ಅರೋಚಕವ ಕಳೆದು,
ಮನದಲ್ಲಿ ನೇಮಿಸಿ, ಇಷ್ಟಲಿಂಗಕ್ಕೆ ಇದಿರಿಟ್ಟು,
ಪದಾರ್ಥವ ಕೊಡುವಲ್ಲಿ, ಪ್ರಾಣಲಿಂಗಕ್ಕೆ ನಾನಾ ರಸಂಗಳ ಸಾಗಿಸುವಲ್ಲಿ,
ಅರ್ಪಿತ ಅನರ್ಪಿತವೆಂಬ ಉಭಯದ ಗೊತ್ತ ಮುಟ್ಟಿ ಅರ್ಪಿಸಬಲ್ಲಡೆ,
ಈಶಾನ್ಯಮೂರ್ತಿ ಮಲ್ಲಿಕಾರ್ಜುನಲಿಂಗಕ್ಕೆ ಅರ್ಪಿತವಾಯಿತ್ತು. ॥ ೯೦ ॥

೨೨೬

ಅರ್ಥಪ್ರಾಣವ ಕೊಟ್ಟಲ್ಲಿ,
ಅಪಮಾನಕ್ಕೆ ಮುಚ್ಚಳನಿಕ್ಕುವ ಲೆಂಕನುಂಟೆ ಅಯ್ಯಾ ?
ತಲೆಯ ಮಾರಿದವಂಗೆ ಕಣ್ಣು ಹೊರಗಾದುದುಂಟೆ ?
ಭಕ್ತನಾದಲ್ಲಿ ಸತ್ಯ ಬೇಕಾದಡೆ,
ಅರ್ಥ ಪ್ರಾಣ ಅಪಮಾನಕ್ಕೆ ಹೊರಗಾಗಬೇಕು.
ಈಶಾನ್ಯಮೂರ್ತಿ ಮಲ್ಲಿಕಾರ್ಜುನಲಿಂಗವನರಿವುದಕ್ಕೆ. ॥ ೯೧ ॥

೨೨೭

ಕಾಯವೆ ದೇಗುಲವಾಗಿ, ಕುರುಹಿಟ್ಟು ಕೊಟ್ಟ ಕುರುಹೆ ದೇವರಾಗಿ,
ನೋಡುವ ಕಣ್ಣೆ ಪೂಜಿಸುವ ಹೂವಾಗಿ,
ಆನಂದಾಶ್ರುಗಳೆ
ಸಕಲಭೋಗ ಅಷ್ಟವಿಧಾರ್ಚನೆ ಷೋಡಶೋಪಚರಿಯವಾಗಿ,
ಅರತುದೆ ಅಡ್ಡವಣಿಗೆ ಪರಿಯಾಣವಾಗಿ, ಪರಿಣಾಮವೆ ನೈವೇದ್ಯವಾಗಿ,

ಅಖಂಡಭಕ್ತಿರತಿಯೆ ತಾಂಬೂಲವಾಗಿ ಪೂಜಿಸುತಿರ್ದೆನಯ್ಯಾ,
ಈಶಾನ್ಯಮೂರ್ತಿ ಮಲ್ಲಿಕಾರ್ಜುನಲಿಂಗವೆ
ಎನ್ನ ಪ್ರಾಣಪೂಜೆಯ ನಿಮಗೆ. ॥ ೯೨ ॥

೨೨೮

ಅಂಗ ಮುಟ್ಟಿ ಅಪ್ಪಿ, ಕಂಗಳು ತುಂಬಿ ನೋಡಿ,
ಕೈಯಾಟ ಹೆರೆಹಿಂಗದೆ ಪೂಜಿಸಿ,
ಮನಕ್ಕೆ ತೆರಪಿಲ್ಲದೆ ಅರಿದು, ಎಡೆಬಿಡುವಿಲ್ಲದ ಸುಖ,
ಈಶಾನ್ಯಮೂರ್ತಿ ಮಲ್ಲಿಕಾರ್ಜುನಲಿಂಗವ ಕೂಡುವ ಕೂಟ. ॥ ೯೩ ॥

೨೨೯

ತ್ರಿವಿಧಕ್ಕೆ ಮನ ಎಷ್ಟುರಾಸೆ ಉಂಟು
ಅಷ್ಟು ಬೇಕು ಗುರುಲಿಂಗಜಂಗಮವ ಪೂಜಿಸುವುದಕ್ಕೆ.
ಬಾಳೆಗೆ ಫಲ ಕಡೆಯಾದಂತೆ, ಚೇಳಿಗೆ ಗರ್ಭವುದಯಿಸಿದಂತೆ,
ಭಕ್ತಂಗೆ ಅಂದಂದಿಗೆ ಸಂದುದೆ ಸರಿಯಾಗಿ ನಿಂದ ಭಕ್ತನಿರವು,
ಈಶಾನ್ಯಮೂರ್ತಿ ಮಲ್ಲಿಕಾರ್ಜುನಲಿಂಗದಿರವೆ ತಾನಾಗಿ. ॥ ೯೪ ॥

೨೩೦

ವ್ಯಾಧನ ಚಿತ್ತದಂತೆ, ಸಾಧನೆಯಯ್ಯನ ಮೈ ಲಾಗಿನಂತೆ,
ಭೇದಿಸಿಯೈದುವ ಪನ್ನಗನಂತೆ,
ಇಡುವ ತೊಡುವ, ಕೊಡುವ ಕೊಂಬಲ್ಲಿ, ಲಿಂಗಪ್ಪನ ಒಡಗೂಡಬೇಕು.
ಈಶಾನ್ಯಮೂರ್ತಿ ಮಲ್ಲಿಕಾರ್ಜುನಲಿಂಗ, ಬೆಚ್ಚಂತಿರಬೇಕು. ॥ ೯೫ ॥

೨೩೧

ಅರ್ಪಿತ ಅವಧಾನವನರಿವ ಸತ್ಯನ ನಿತ್ಯನ ಇರವು,
ಮಯೂರನ ಜಾಹೆಯಂತೆ, ಪಟುಭಟನ ಎಚ್ಚರಿಕೆಯಂತೆ,
ಗತಿವಾದ್ಯದಲ್ಲಿ ಮುಟ್ಟಿ ತೋರುವ ಅಂಗುಲ ಆತ್ಮದಂತೆ,
ಶಿವಲಿಂಗದಲ್ಲಿ ಹಿಂಗದ ಭಾವ.
ಈಶಾನ್ಯಮೂರ್ತಿ ಮಲ್ಲಿಕಾರ್ಜುನಲಿಂಗದಲ್ಲಿ
ಸಲೆಸಂದ ಭಾವ ಹೀಗಿರಬೇಕು. ॥ ೯೬ ॥

೨೩೨

ಉಂಡಿಗೆಯನೆತ್ತಿದವನ ಮನದಂಗದಂತೆ, ಮತ್ತುಂಟೆ ಹಸಿಗೆಯ ತೋಟಿ ?
ಹಿಡಿದ ವ್ರತಕ್ಕೆ, ಅರಿದ ಮನಕ್ಕೆ, ಮರೆದ ಮತ್ತೆ ಒಲಿವುದೆ ಲಿಂಗ ?
ಅದು ಸಲೆ ನೆಲೆಯಲ್ಲ,
ಈಶಾನ್ಯಮೂರ್ತಿ ಮಲ್ಲಿಕಾರ್ಜುನಲಿಂಗಕ್ಕೆ ಒಲವರವಲ್ಲ. ॥ ೯೭ ॥

೨೩೩

ಮಾಟ ಕೂಟವ ಮಾಡುವನ್ನಬರ
ಮನ ನಲಿದು, ತನು ಕರಗಿ ಮಾಡುವ ದ್ರವ್ಯಕ್ಕೆ
ಕೇಡಿಲ್ಲದಂತೆ ಮಾಡುತ್ತಿಪ್ಪ ಭಕ್ತನ ಅಂಗವೆ
ಎನ್ನ ಹೃದಯಾಲಯ.
ಈಶಾನ್ಯಮೂರ್ತಿ ಮಲ್ಲಿಕಾರ್ಜುನಲಿಂಗವು ಅಲ್ಲಿ ತಾನಾಗಿಪ್ಪನು. ॥ ೯೮ ॥

೨೩೪

ಅರ್ತಿ ಅಭ್ಯಾಸ ಮಚ್ಚು ಕಾರಣದಿಂದ ಮಾಡುವ ಭಕ್ತಿ,
ದ್ರವ್ಯದ ಕೇಡಾಯಿತ್ತು.
ಮನ ನೆಮ್ಮಿದ ಅರ್ತಿ, ಘನವ ನೆಮ್ಮಿದ ಅಭ್ಯಾಸ,
ಎಡೆಬಿಡುವಿಲ್ಲದ ಮಚ್ಚು, ಘನಲಿಂಗವ ಕೂಡುವುದೊಂದಚ್ಚು,
ಈಶಾನ್ಯಮೂರ್ತಿ ಮಲ್ಲಿಕಾರ್ಜುನಲಿಂಗವ ಕೂಡುವ ಸುಚಿತ್ತದ ಗೊತ್ತು. ॥ ೯೯ ॥

೨೩೫

ಕಾಯಭ್ರಮೆಯಿಂದ ಮಾಡುವುದು ದೇವಪೂಜೆಯಲ್ಲ.
ಜೀವಭ್ರಮೆಯಿಂದ ಅರ್ಪಿಸುವುದು ಲಿಂಗಾರ್ಪಿತವಲ್ಲ.
ಕಾಯದ ಸೂತಕವನಳಿದು ಪೂಜಿಸಿ, ಜೀವನ ಪ್ರಕೃತಿಯ ಮರೆದರ್ಪಿಸಿ,
ಉಭಯವನರಿಯಬಲ್ಲಡೆ, ಕಾಯವೆ ಒಡೆಯ, ಪ್ರಾಣವೆ ಲೆಂಕ.
ಇಂತೀ ಉಭಯ ಲೇಪವಾದಲ್ಲಿ,
ಈಶಾನ್ಯಮೂರ್ತಿ ಮಲ್ಲಿಕಾರ್ಜುನಲಿಂಗವು ತಾನೆ. ॥ ೧೦೦ ॥

೨೩೬

ರೂಪು ರುಚಿ ಚಿತ್ತ, ಈ ಮೂರು ಏಕವಾಗಿ ನಿಂದಲ್ಲಿ, ಲಿಂಗಾರ್ಪಿತ.
ರೂಪ ಭಾವಿಸದೆ, ರುಚಿಯ ಭಿನ್ನವನರಿಯದೆ,
ಚಿತ್ತದ ಗೊತ್ತ ಮುಟ್ಟದೆ, ಅದೆತ್ತಣ ಅರ್ಪಿತ,
ಈಶಾನ್ಯಮೂರ್ತಿ ಮಲ್ಲಿಕಾರ್ಜುನಲಿಂಗಕ್ಕೆ ? ॥ ೧೦೧ ॥

೨೩೭

ಕಲ್ಲ ತಾಗಿದ ಕಠಿಣಸರದಂತೆ, ವಲ್ಲಭನೊಲ್ಲದ ಸತಿಯಂತೆ,
ಬಲ್ಲವರು ಹೇಳಿದ ಮಾತ, ಕಲ್ಲೆದೆಯವ ಕಾಣದಂತೆ,
ಮಾತು ಮನಸ್ಸು ಸಿಕ್ಕಿ,
ಭವವ್ಯಾಕುಲದಲ್ಲಿ ಅದೇತರ ಪೂಜೆ ?
ಅದೇತರ ಅರ್ಪಿತ ? ಅದೇತರ ಯಾಚಕತ್ವ ?
ಅವ ನೇಶಿಗಳೆದಲ್ಲಿ,
ಈಶಾನ್ಯಮೂರ್ತಿ ಮಲ್ಲಿಕಾರ್ಜುನಲಿಂಗವನರಿದುದು. ॥ ೧೦೨ ॥

೨೩೮

ಭಕ್ತನ ಭಾಷೆ ಗುರುಲಿಂಗಜಂಗಮವಲ್ಲ,
ತ್ರಿವಿಧ ಕರ್ತೃವಿನ ಭಾಷೆ,
ತನ್ನ ಮುಟ್ಟಿ ಪೂಜಿಸುವ ಭಕ್ತನಲ್ಲ.
ಇಂತೀ ಉಭಯದ ಭಾಷೆ, ಕರ್ತೃ ಭೃತ್ಯಂಗಲ್ಲ[ವೆ]?
ಶಿವಲೆಂಕನ ಮಾತು,
ಈಶಾನ್ಯಮೂರ್ತಿ ಮಲ್ಲಿಕಾರ್ಜುನಲಿಂಗಕ್ಕೆ ಹಾಕಿದ ಮುಂಡಿಗೆ. ॥ ೧೦೩ ॥

೨೩೯

ಹೇರನೊಪ್ಪಿಸಿದವಂಗೆ ಸುಂಕವ ಬೇಡಿ ಗಾರುಮಾಡಲೇತಕ್ಕೆ ?
ಮೊದಲು ತ್ರಿವಿಧವ ಎನಗೆಂದು ಕೊಟ್ಟು ಮತ್ತೆ;
ನೀ ಬೇಡಿದಡೆ ನಿನಗಿತ್ತ ಮತ್ತೆ,
ಎನ್ನಡಿಯ ನೋಡುವ ಬಿಡುಮುಡಿ ಯಾವುದು ?
ನಿನಗೆ ಶಿವಲೆಂಕ ಹಾಕಿದ ಮುಂಡಿಗೆಯ
ನೀನೆತ್ತಲಮ್ಮದೆ, ಎನ್ನ ಕೈಯೊಳಗಾದೆಯಲ್ಲಾ,
ಈಶಾನ್ಯಮೂರ್ತಿ ಮಲ್ಲಿಕಾರ್ಜುನಲಿಂಗವೆ. ॥ ೧೦೪ ॥

೨೪೦

ನೀ ಹಾಕಿದ ಮುಂಡಿಗೆ ಎನಗೂ ಸರಿ, ನಿನಗೂ ಸರಿ.
ನಾ ಹಾಕಿದ ಮುಂಡಿಗೆ ನಿನ್ನ ಕೇಡು, ಎನ್ನ ಕೇಡು.
ಗರ್ಭವ ಹೊತ್ತಿದ್ದ ಸ್ತ್ರೀ ಅಳಿದಂತೆ.
ಶಿವಲೆಂಕನ ಮಾತು,
ಈಶಾನ್ಯಮೂರ್ತಿ ಮಲ್ಲಿಕಾರ್ಜುನಲಿಂಗಕ್ಕೆ ಹಾಕಿದ ಮುಂಡಿಗೆ. ॥ ೧೦೫ ॥

೨೪೧

ಉಭಯವನರಿವ ಚಿತ್ತಕ್ಕೆ ಅರಿವೆ ಇಷ್ಟಲಿಂಗಕ್ಕೆ ಗೊತ್ತು.
ಉಭಯದಂಗ ಏಕೀಕರವಾದಲ್ಲಿ ಜಲ ಬಲಿದು ಶುಕ್ತಿಯಾದಂತೆ,
ಕರಂಡಗರ್ಭದಲ್ಲಿ ಬಲಿದು ಕರಂಡವನೊ[ಡೆ]ದರಿದಂತೆ,
ಅಂಗದಲ್ಲಿದ್ದರಿದು, ಘನಲಿಂಗವನರಿಯಬೇಕು.
ಈಶಾನ್ಯಮೂರ್ತಿ ಮಲ್ಲಿಕಾರ್ಜುನಲಿಂಗವೆಂಬ ಕುರುಹಾಯಿತ್ತು. ॥ ೧೦೬ ॥

೨೪೨

ಜಲದಲ್ಲಿ ಹುಟ್ಟಿದ ಚೇತನ, ಜಲವುಳಿದು ಜೀವಿಸಬಲ್ಲುದೆ ?
ಅರಿವನರಿದಲ್ಲಿ, ಕುರುಹಿನ ಮರೆಯಲ್ಲಿ
ಇದೆಯೆಂದು ತೋರಿದ ಮತ್ತೆ,

ಕುರುಹುನುಳಿದು, ಅರಿವ ಪರಿಯಿನ್ನೆಂತೊ ?
ಆ ಉಭಯ, ಆತ್ಮದೃಷ್ಟಿಯಂತೆ.
ಶಿವಲೆಂಕನ ಮಾತು,
ಈಶಾನ್ಯಮೂರ್ತಿ ಮಲ್ಲಿಕಾರ್ಜುನಲಿಂಗಕ್ಕೆ
ಉಂಟು ಇಲ್ಲಾ ಎಂಬಲ್ಲಿ ಹಾಕಿದ ಮುಂಡಿಗೆ. || ೧೦೭ ||

೨೪೩

ರೂಪಿನಲ್ಲಿ ಉಂಟೆಂದು ಹೋರುವಾಗ, ಅದು ಅಚೇನಮೂರ್ತಿ.
ನಿರೂಪಿನಲ್ಲಿ ಕಂಡೆನೆಂದು ಹೇಳುವಾಗ, ಅದು ನಾಮಕ್ಕೆ ಬಾರದ ಬಯಲು.
ಉಭಯದಲ್ಲಿ ವಿಚಾರಿಸಿ ಕಾಬುದೊಂದೆ ತನ್ನಯ ದೃಢಚಿತ್ತ
ಆ ಚಿತ್ತ ಒಪ್ಪಿನಿಂದಲ್ಲಿ,
ಈಶಾನ್ಯಮೂರ್ತಿ ಮಲ್ಲಿಕಾರ್ಜುನಲಿಂಗವು, ನಿಶ್ಚಯವಾಗಿರ್ಪನು. || ೧೦೮ ||

೨೪೪

ಭಕ್ತನಾನೆ ಎಂದು ತನ್ನ ತಾನೆ ನಿಶ್ಚೈಸುವನ್ನಬರ,
ವಿರಕ್ತನಾನೆ ಎಂದು ತನ್ನ ತಾನೆ ಬೀಗುವನ್ನಬರ,
ಅಂಧಕಸಮೂಹದಲ್ಲಿದ್ದು, ನಗೆಯ ಕೇಳಿ ತಾ ಕಾಣದೆ ನಗುವಂತೆ,
ಉಭಯದಿರವ ಮೆಚ್ಚ ಶಿವಲೆಂಕನೊಡೆಯ,
ಈಶಾನ್ಯಮೂರ್ತಿ ಮಲ್ಲಿಕಾರ್ಜುನಲಿಂಗವು. || ೧೦೯ ||

೨೪೫

ಭಕ್ತನಾಗಿದ್ದಲ್ಲಿ, ಗುರುಲಿಂಗಜಂಗಮ
ಪಾದತೀರ್ಥಪ್ರಸಾದ ಪಂಚಾಚಾರ ಶುದ್ಧಕ್ಕೆ ನಿರತನಾಗಿರಬೇಕು.
ಗುರುಚರವಾದಲ್ಲಿ, ಅಪರಕ್ಕೆ ದೂರನಾಗದೆ ಇರಬೇಕು.
ಈ ಉಭಯ ನಿಧಾನಿಸಿ ನಿಂದಲ್ಲಿ,
ಶಿವಲೆಂಕನೊಡೆಯ, ಈಶಾನ್ಯಮೂರ್ತಿ ಮಲ್ಲಿಕಾರ್ಜುನಲಿಂಗವು ತಾನೆ. || ೧೧೦ ||

೨೪೬

ಪರಶಿವಮೂರ್ತಿಯ ರೂಪತಾಳಿ,
ಎನ್ನ ಶಿವಭಕ್ತರ ಕುಲ ಬಳಗಂಗಳ ಪವಿತ್ರವ ಮಾಡಿಹೆನೆಂದು ನೀ ಬಂದು,
ಅಪವಿತ್ರವ ಮುಟ್ಟಲೇತಕ್ಕೆ ?
ನಿನ್ನ ಕೃಪೆ ಎನಗೆ, ಎನ್ನ ಹೃತ್ಕಮಲಮಧ್ಯ ನಿನಗೆ.
ಎನಗೂ ನಿನಗೂ ತ್ರಿವಿಧದ ಹಂಗಿಲ್ಲ,
ನಾ ನೀನಲ್ಲದೆ ಬೇರೊಂದ ಎಣಿಸಿದಡೆ,
ನೀ ನಾನಲ್ಲದೆ ಬೇರೊಂದ ಮುಟ್ಟಿದಡೆ,
ನಿನ್ನ ಸತ್ಯಕ್ಕೆ, ಎನ್ನ ಭಕ್ತಿಗೆ, ಉಭಯಕ್ಕೂ ನೀನೆ ಮುಂಡಿಗೆ,
ಈಶಾನ್ಯಮೂರ್ತಿ ಮಲ್ಲಿಕಾರ್ಜುನಲಿಂಗವೆ. || ೧೧೧ ||

೨೪೭

ತನುವಿನಲ್ಲಿ ಮನೋಮೂರ್ತಿಯಾಗಿ,
ಜಿಹ್ವೆಯಲ್ಲಿ ರುಚಿಸುವವ ನೀನಾಗಿ,
ಕರ್ಣದಲ್ಲಿ ಆದರಿಸಿ ಕೇಳುವವ ನೀನಾಗಿ,
ನಯನದಲ್ಲಿ ಎವೆ ಹಳಚದೆ ನೋಡುವವ ನೀನಾಗಿ,
ನಾಸಿಕದಲ್ಲಿ ಸುವಾಸನೆಯ ಗ್ರಹಿಸುವವ ನೀನಾಗಿ,
ಪಾದ ಪ್ರಾಣಿಗಳಲ್ಲಿ ಸರ್ವಾಂಗಮುಖವಾಗಿ,
ಸಕಲಸುಖಿಯಾಗಿ, ಭೋಗಮೂರ್ತಿಯಾದೆಯಲ್ಲಾ,
ಈಶಾನ್ಯಮೂರ್ತಿ ಮಲ್ಲಿಕಾರ್ಜುನಲಿಂಗವೆ. ॥ ೧೧೨ ॥

೨೪೮

ಸುಖದುಃಖಾದಿಗಳ ಮೀರುವ ಎನ್ನವರ ಕಾಣೆ.
ಸುಖದುಃಖಾದಿಗಳ ಮೀರುವ ನಿನ್ನವರ ಕಾಣೆ.
ಇನ್ನೇನು ಹೇಳುವೆ ? ನಡುಹೊಳೆಯಲ್ಲಿ ಹರುಗೋಲ ಹರಿದಂತೆ,
ಅಂಬಿಗನ ಕೊರಳ ಸುತ್ತಿ ಬಂದವರೆಲ್ಲರೂ
ಉಭಯವು ಹೊಂದಿದಂತಾಯಿತ್ತು.
ನೀ ಎನ್ನ ಬಟ್ಟೆ, ನಾ ನಿನ್ನ ಬಟ್ಟೆ.
ಉಭಯವು ಬಂದ ಬಟ್ಟೆಯಾದೆವಲ್ಲ,
ಈಶಾನ್ಯಮೂರ್ತಿ ಮಲ್ಲಿಕಾರ್ಜುನಲಿಂಗವೆ. ॥ ೧೧೩ ॥

೨೪೯

ಅಂಗದ ಮೇಲಣ ಲಿಂಗ,
ಪ್ರಾಣದ ಮೇಲೆ ಬಂದು ನಿಲುವನ್ನಕ್ಕ ಪೂಜಿಸಬೇಕು.
ಪ್ರಾಣದ ಮೇಲಣ ಅರಿವು ಕರಿಗೊಂಬನ್ನಕ್ಕ ನೆನೆಯಬೇಕು.
ನೆನಹು ನಿಃಪತಿಯಾದ ಮತ್ತೆ
ಈಶಾನ್ಯಮೂರ್ತಿ ಮ ಲ್ಲಿಕಾರ್ಜುನಲಿಂಗವೆಂಬ ನಾಮವಡಗಿತ್ತು. ॥ ೧೧೪ ॥

೨೫೦

ತಮಕ್ಕೂ ದಿವಕ್ಕೂ ಸೂರ್ಯನಾದ ಮತ್ತೆ,
ದಿನ ಮಾಸಂಗಳೆಂಬವು ನಷ್ಟವಾಯಿತ್ತು.
ಭಕ್ತನೂ ನಾನೆ, ವಿರಕ್ತನೂ ನಾನೆ ಎಂದಲ್ಲಿ, ಕೈಲಾಸದ ಬಟ್ಟೆ ಕಟ್ಟಿತ್ತು.
ಈಶಾನ್ಯಮೂರ್ತಿ ಮಲ್ಲಿಕಾರ್ಜುನಲಿಂಗವು ಎತ್ತ ಹೋದರೆಂದರಿಯು. ॥ ೧೧೫ ॥

೨೫೧

ಶಿವಭಕ್ತಂಗೆ ಭೃತ್ಯಾಚಾರವಳವಟ್ಟಲ್ಲಿ, ಸದಾಚಾರವಿಪ್ಪುದು.
ಸದಾಚಾರ ಸನ್ನದ್ಧವಾದಲ್ಲಿ

ಸಮಯೋಚಿತ ಸತ್ಕ್ರಿಯೆಗಳ ಬಲ್ಲ ಸದ್ಭಕ್ತಯೆಲ್ಲಿರ್ದ,
ಈಶಾನ್ಯಮೂರ್ತಿ ಮಲ್ಲಿಕಾರ್ಜುನಲಿಂಗವು ಅಲ್ಲಿಪ್ಪನು. ॥ ೧೧೬ ॥

೨೫೨

ಪ್ರಸಾದವ ನೆಮ್ಮಿದ ಭಕ್ತನಲ್ಲಿ, ಪರಶಿವನು ಪ್ರಸನ್ನನಾಗಿರ್ಪನು.
ಪಾದತೀರ್ಥವನರಿದು ವಿಶ್ವಾಸಿಸಿಕೊಂಬ ಭಕ್ತನಲ್ಲಿ,
ಆ ಪರಶಿವನು ಪರಂಜ್ಯೋತಿ ಪ್ರಕಾಶವಾಗಿಪ್ಪನು.
ಸಲುವ ಸೈದಾನದ ತೆರಪನರಿದು ಬಹ ಗುರುಚರದ ಅನುವನರಿದು,
ಬಂದುದಕ್ಕೂ ಸಂದುದಕ್ಕೂ ಸಂದಿಲ್ಲದೆ ನಿಂದ ಭಕ್ತನ ಅಂಗಳವೆ,
ಈಶಾನ್ಯಮೂರ್ತಿ ಮಲ್ಲಿಕಾರ್ಜುನನ ಮಂಗಳವಾಸ. ॥ ೧೧೭ ॥

೨೫೩

ಅಂದಳ ಸತ್ತಿಗೆ ಕರಿ ತುರಗಂಗಳಿಂದ ಮನಗುಂದದೆ,
ಗುರುಚರವೆಂದು ಪ್ರಮಾಣಿಸಿ,
ಪರಿಯನರಿದೆನೆಂದು ಓಸರಿಸಿದಲ್ಲಿಯೆ, ಸರಿಯಿತ್ತು ಸತ್ಯ.
ನುತ್ತೇನ ಮಾಡಿಯೂ ಪರಿಹರಿಸುವುದಿಲ್ಲ.
ಈಶಾನ್ಯಮೂರ್ತಿ ಮಲ್ಲಿಕಾರ್ಜುನಲಿಂಗವು ಅವರಿಗೆ ಒಲವರವಿಲ್ಲ. ॥ ೧೧೮ ॥

೨೫೪

ಗುರುಸೇವೆಯಲ್ಲಿ ತನು ಕರಗಿ, ಲಿಂಗಸೇವೆಯಲ್ಲಿ ಮನ ಕರಗಿ,
ಜಂಗಮಸೇವೆಯಲ್ಲಿ ಧನ ಕರಗಿ, ಮಹಾಘನವನರಿದಲ್ಲಿ ಪ್ರಕೃತಿ ಕರಗಿ,
ನಿಜ ನಿಶ್ಚಯವಾಗಿ ನಿಂದಾತನೆ ಸದ್ಭಕ್ತನು,
ಈಶಾನ್ಯಮೂರ್ತಿ ಮಲ್ಲಿಕಾರ್ಜುನಲಿಂಗದಲ್ಲಿ. ॥ ೧೧೯ ॥

೨೫೫

ಅಂಗದಲ್ಲಿ ಸೋಂಕಿದ ಸುಳುಹ ಮನವರಿದು,
ಅಲ್ಲ ಅಹುದೆಂದು ಸಂದೇಹ ಬಿಟ್ಟಲ್ಲಿ ಅರ್ಪಿತವಲ್ಲದೆ,
ಬಂದುದ ಬಂದಂತೆ, ಕಂಡುದ ಕಂಡಂತೆ,
ದೃಕ್ಕಿಂಗೊಳಗಾದುದೆಲ್ಲವು ಲಿಂಗಾರ್ಪಿತವುಂಟೆ ?
ಅರ್ಪಿಸಬಲ್ಲಡೆ ಅಲ್ಲ ಅಹುದೆಂಬುದ ಮುನ್ನವೆ ಅರಿದು,
ಆ ಮನ ಲಿಂಗದೊಳಗಡಗಿ,
ಅಂಬಿನ ಕಣೆಯಂತೆ ಮನ ಲಿಂಗದ ಅನು.
ಈಶಾನ್ಯಮೂರ್ತಿ ಮಲ್ಲಿಕಾರ್ಜುನದ ಘನ. ॥ ೧೨೦ ॥

೨೫೬

ಘಟದಲ್ಲಿದ್ದ ಗಂಧ ಅಡಗುವುದಲ್ಲದೆ, ಸಂಚಾರವ ನೆಮ್ಮಿದ ಗಂಧ ಅಡಗುವುದೆ?
ಮನ ಕ್ರೀಯಲ್ಲಿ ನಿಂದು, ಅಂಗ ಆಚಾರವನರಿದು,

ಅಂಗ ಮನಸ್ಸು ಕೂಡಿದಲ್ಲಿ, ಘನಲಿಂಗದ ಸಂಗ.
ಈಶಾನ್ಯಮೂರ್ತಿ ಮಲ್ಲಿಕಾರ್ಜುನಲಿಂಗಕ್ಕೆ ಎರವಿಲ್ಲದ ಕೂಟ. ॥ ೧೨೧ ॥

೨೫೭

ಗಂಗೆವಾಳುಕ ರುದ್ರರೆಲ್ಲರು ಅಂಗವರತು ಲಿಂಗವನರಿದಲ್ಲದೆ,
ಅಂಗಗುಣವರಿಯದೆ, ಲಿಂಗತ್ರಯವೆಂಬುದ ಸಂಘಟಿಸಲರಿಯದೆ,
ನಿಂದು ಕಾಬ ನೆಲೆಯಿನ್ನೆಂತು ? ಮಾತ ಕಂಡಾಡಿದಲ್ಲಿ ವಾಗದ್ವೈತಿ.
ಬಳಗನರಿದು ಪೂಜಿಸುವಲ್ಲಿ ಡಂಬಕಧಾರಿ.
ಏನ ಮುಟ್ಟಿದಲ್ಲಿ ಕೇಡಿಲ್ಲಾ ಎಂದು
ಮನ ಬ್ರಹ್ಮವನಾಡಿ, ಮನುಜರಂತೆ ಹರಿದಾಡುತ್ತ
ಗಂಪವ ಕೂಡಿಕೊಂಡು, ಶಂಕೆಯಿಲ್ಲಾಯೆಂದು
ನಿಶ್ಶಂಕೆಯ ನುಡಿಯಬಹುದೆ ಅಯ್ಯಾ ?
ನಡೆ ನುಡಿ ಸಿದ್ಧಾಂತವಾದಲ್ಲಿ,
ಈಶಾನ್ಯಮೂರ್ತಿ ಮಲ್ಲಿಕಾರ್ಜುನಲಿಂಗವು
ಅವರಲ್ಲಿ ಪ್ರಸಿದ್ಧವಾಗಿಪ್ಪನು. ॥ ೧೨೨ ॥

೨೫೮

ಸಾರಿದುದ ಕಂಡು, ಕೇಳಿ ಮೀರಿ ನಡೆದಡೆ,
ಅವನ ಗಾರುಮಾಡಿದಡೆ, ಕೇಡುಂಟೆ ಅಯ್ಯಾ ?
ದೃಷ್ಟದಿಂದ, ಶರಣರ ಸಂಗದಿಂದ, ಶ್ರುತಿಸ್ಮೃತಿತತ್ವಂಗಳಿಂದ,
ಪಾಪಪುಣ್ಯಗಳೆಂಬುದನರಿದು ಮರೆಯಬಹುದೆ ?
ಗುರುವಿಗೂ ಆಚರಣೆ, ಲಿಂಗಕ್ಕೂ ಆಚರಣೆ, ಜಂಗಮಕ್ಕೂ ಆಚರಣೆ,
ಈಶಾನ್ಯಮೂರ್ತಿ ಮಲ್ಲಿಕಾರ್ಜುನಲಿಂಗಕ್ಕೂ ಆಚರಣೆ, ॥ ೧೨೩ ॥

೨೫೯

ವ್ರತಾಚಾರವ ಹಿಡಿದು ಬಿಟ್ಟಲ್ಲಿ, ಗುರುವಾದಡೂ ಪರಿಹರಿಸಬಾರದು.
ಲಿಂಗವಾದಡೂ ಪರಿಹರಿಸಬಾರದು, ಜಂಗಮವಾದಡೂ ಪರಿಹರಿಸಬಾರದು.
ರತ್ನದ ಗುಂಡೆಂದಡೆ, ಶಿರದ ಮೇಲೆ ಹಾಕಿದಡೆ ಒಡೆಯದೆ ?
ನೀನೊಡೆಯನಾದಡೂ ಆ ಲೆಂಕನಾದಡೂ ಈ ಗುಣವಡಗಿಯಲ್ಲದೆ,
ಮೃಡಶರಣರ ಸಂಗಕ್ಕೊಳಗಲ್ಲ.
ಅಂಗದ ಮಲಿನವ, ಕೈ ಹಿಂಗಿ ಒರಸಿದಡೆ ಭಂಗವುಂಟೆ ?
ಈಶಾನ್ಯಮೂರ್ತಿ ಮಲ್ಲಿಕಾರ್ಜುನಲಿಂಗವಾದಡೂ ಆಗಲಿ,
ಲೆಂಕನ ಬಿನ್ನಹಕ್ಕೆ ಸಂಕಲ್ಪವಿಲ್ಲ. ॥ ೧೨೪ ॥

೨೬೦

ಪಾತಕ ಹೊಲೆಯೆಂದರಿದು ಬಿಟ್ಟಲ್ಲಿ, ಮತ್ತಾ ಗುಣ ಸ್ವೀಕರಿಸಬಹುದೆ ?
ಇವೆಲ್ಲ ಅಲ್ಲಾ ಎಂದು ಬಲ್ಲತನವ ತಾನರಿದು,

ಮತ್ತೆಲ್ಲರಲ್ಲಿ ಬೆರಸಬಹುದೆ ?
ಒಡೆದ ಹಂಚಿಂಗೆ, ಹಿಡಿದು ಬಿಟ್ಟ ವ್ರತಕ್ಕೆ,
ಮತ್ತಿವ ಒಡಗೂಡಬಹುದೆ ?
ಇಂತೀ ಬಿಡುಗಡೆಯನರಿದಲ್ಲಿ, ಅನುಸರಣೆಯ ಮಾಡಿದಡೆ,
ಎನ್ನೊಡೆಯ ಈಶಾನ್ಯಮೂರ್ತಿ ಮಲ್ಲಿಕಾರ್ಜುನಲಿಂಗವಾದಡೂ
ಹರಶರಣರಿಗೆ ದೂರ. ‖ ೧೨೫ ‖

೨೬೧

ಮಹಾರ್ಣವವುರಿದು ಬೇವಲ್ಲಿ, ಕರಗದ ಜಲಕ್ಕೆ ಹೊಡೆಗೆಡೆವುದೆ ?
ಮಹಾಪಾತಕಕ್ಕೆ ಒಳಗಾದಂಗ,
ಮಾತಿನ ಬಣಬೆಯಲ್ಲಿ ನೀತಿಯಾಗಿ ನುಡಿದಡೆ,
ಅಜಾತನ ಶರಣರು ಒಪ್ಪುವರೆ ? ಅದು ನಿಹಿತವಲ್ಲ.
ಈಶಾನ್ಯಮೂರ್ತಿ ಮಲ್ಲಿಕಾರ್ಜುನಲಿಂಗವು ಇಂತೀ ಕಾಕರನೊಲ್ಲ. ‖ ೧೨೬ ‖

೨೬೨

ಅಂಗದಲ್ಲಿ ಅರಿದು ನಡೆವ ಆಚರಣೆ,
ನೆನಹಿನಲ್ಲಿ ಕುರುಹುಗೊಂಡು ನಿಂದು,
ಆ ನೆನಹೆ, ಈಶಾನ್ಯಮೂರ್ತಿ ಮಲ್ಲಿಕಾರ್ಜುನಲಿಂಗಕ್ಕೆ
ಸಲೆ ಸಂದುದು. ‖ ೧೨೭ ‖

೨೬೩

ಹಲವಾಡುವಂತೆ ಕೆಲೆದಾಡಲಿಲ್ಲ.
ಕಂಡವರ ಕಂಡು, ಕೈಕೊಂಡು,
ಅವರು ನಿಂದನಿಂದ ವ್ರತಕ್ಕೆ ತಾ ನಿಂದೆಹೆನೆಂದು ಕೊಂಡಾಡಲಿಲ್ಲ.
ಕೂಲಿಗೆ ಹಾವ ಕಚ್ಚಿಸಿಕೊಂಡಡೆ, ಆದಾರ ಹರಣವಳಿವುದು ?
ತನು ಶುದ್ಧತೆಯಿಲ್ಲದೆ, ಮನ ಆಚಾರದ ಅನುವನರಿಯದೆ,
ನಡೆವರ ಬೆಂಬಳಿಯಲ್ಲಿ
ಗುಡಿಗಟ್ಟಿ ಹರಿದಾಡುವ ಸುರಿಗುಡಿಗಳನೊಪ್ಪ,
ಈಶಾನ್ಯಮೂರ್ತಿ ಮಲ್ಲಿಕಾರ್ಜುನಲಿಂಗವು. ‖ ೧೨೮ ‖

೨೬೪

ಸ್ವಯಂಪಾಕದಲ್ಲಿ ಆದ ದ್ರವ್ಯವ,
ಪರರು ಕಂಡಹರೆಂದು ಮರೆಮಾಡಿಕೊಂಡಿಪ್ಪ ಪರಿಯಿನ್ನೆಂತೊ ?
ಮಹಾಘನವನಾ ಧರಿಸಿ ನುಡಿವುತ್ತಿಪ್ಪ ನಾಲಗೆ,
ಛಂಡತಾಂಬೂಲ ಮೊದಲಾದ ಭಾವವನೆಲ್ಲರೂ ಕಾಣುತ್ತ

ವ್ರತದ ಠಾವೆಲ್ಲಿ ಸಿಕ್ಕಿತ್ತು?
ಮೊಲೆಯ ಮುಚ್ಚಿ, ಸೀರೆಯ ತೆಗೆದಂತಾಯಿತ್ತು.
ಇಂತಿವನರಿದು, ಇದಿರಿಚ್ಛೆಯ ಮರೆದು, ತನ್ನ ಸ್ವಯಿಚ್ಛೆಯನರಿದುದು,
ತನ್ನ ಮುಚ್ಚು, ಘನಲಿಂಗದ ಅಚ್ಚು.
ಈಶಾನ್ಯಮೂರ್ತಿ ಮಲ್ಲಿಕಾರ್ಜುನಲಿಂಗದ
ವ್ರತಾಚಾರಕ್ಕೆ ಇಕ್ಕದ ಗೊತ್ತು. ॥ ೧೨೯ ॥

೨೬೫

ವ್ರತಸ್ಥನಾದಲ್ಲಿ,
ಕಾಮ ಕ್ರೋಧ ಲೋಭ ಮೋಹ ಮದ ಮಾತ್ಸರ್ಯಂಗಳಲ್ಲಿ ತಲೆದೋರದೆ,
ತನ್ನ ಆತ್ಮ ಸತಿ, ಲಿಂಗ ಪುರುಷನಾಗಿ,
ತನ್ನ ಸುಕಾಯಕದಿಂದಾದ ದ್ರವ್ಯಂಗಳ
ಗುರುಲಿಂಗಜಂಗಮದ ಮುಂದಿಟ್ಟು ಅರ್ಪಿತವಹನ್ನಕ್ಕ,
ದೃಕ್ಕು ತುಂಬಿ ನೋಡಿ, ಮನದಣಿವನ್ನಕ್ಕ ಹರುಷಿತನಾಗಿ,
ಮಿಕ್ಕ ಶೇಷವ, ಇಷ್ಟಪ್ರಾಣಲಿಂಗಕ್ಕೆ ತೃಪ್ತಿಯ ಮಾಡಿಪ್ಪ ಮಹಾಭಕ್ತಂಗೆ,
ಸಂಸಾರವೆಂಬ ತೊಟ್ಟು ಹರಿಯಿತ್ತು.
ಈಶಾನ್ಯಮೂರ್ತಿ ಮಲ್ಲಿಕಾರ್ಜುನಲಿಂಗವು
ವ್ರತವೆಂಬ ನಾಮಕ್ಕೆ ಒಳಗಾಯಿತ್ತು. ॥ ೧೩೦ ॥

೨೬೬

ಕಾಯಕವೆಂದು ಕಾಯವ ಬಳಲಿಸದೆ, ತನು ಕರಗದೆ, ಮನ ನೋಯದೆ,
ಕಾಡಿ ಬೇಡಿ ಮಾಡುವುದು ದಾಸೋಹವೆ ?
ಆವ ಕಾಯಕವು ಪ್ರಾಣವೆ ಕಡೆಯಾಗಿ, ದ್ರವ್ಯ ಮೊದಲಾಗಿ,
ಚಿತ್ತ ಶುದ್ಧದಲ್ಲಿ ಗುರುಚರಕ್ಕೆ ಮುಯ್ಯಾಂತು ಬಂದುದಕ್ಕೆ ಸರಿಗಂಡು,
ಲಿಂಗದೇಹಿಗಳಿಗೆಲ್ಲಾ ಒಂದೇ ಪ್ರಮಾಣದಲ್ಲಿ ಸಂದುದು,
ಈಶಾನ್ಯಮೂರ್ತಿ ಮಲ್ಲಿಕಾರ್ಜುನಲಿಂಗಕ್ಕೆ ತೃಪ್ತಿ. ॥ ೧೩೧ ॥

೨೬೭

ಮಣ್ಣು ಮೂರು, ಹೆಣ್ಣು ಆರು, ಹೊನ್ನು ಒಂಬತ್ತು,
ಇವಾದಿಯಾದ ಸಕಲಪ್ರಪಂಚಿನ ಜವನಿಕೆಯನರಿದು ಹರಿಯಬೇಕು.
ಈಶಾನ್ಯಮೂರ್ತಿ ಮಲ್ಲಿಕಾರ್ಜುನಲಿಂಗವನರಿವುದಕ್ಕೆ. ॥ ೧೩೨ ॥

■■

## ಸಂಗಮೇಶ್ವರದ ಅಪ್ಪಣ್ಣನ ವಚನ

೨೬೮

ಅಂಗದ ಕಳೆ ಲಿಂಗದಲ್ಲಿ ಲೀಯವಾಗದು.
ಲಿಂಗದ ಕಳೆ ಅಂಗದಲ್ಲಿ ಲೀಯವಾಗದು.
ಮಾತಿನಮಾಲೆಯ ಬೊಮ್ಮವೇತರದೊ ?
ಕಾಯ ಭಕ್ತನಾದರೆ ಭೃತ್ಯಾಚಾರವಿರಬೇಕು.
ಪ್ರಾಣ ಜಂಗಮವಾದಡೆ ಅರಿದಿರಬೇಕು.
ಇಂತು ಭಕ್ತಿಜ್ಞಾನವುಳ್ಳವರಲ್ಲದೆ ಭಕ್ತರಲ್ಲ, ಶರಣರಲ್ಲ.
ಹಿರಿಯರು ಬಂದಡೆ ಇದಿರೆದ್ದು ಬಾರದವರ ಮನೆಗೆ ಅಡಿಯ ಇಡೆವೆಂದು,
ಬಸವಪ್ರಿಯ ಕೂಡಲಚನ್ನಸಂಗನ ಶರಣರು ಕಾಡಿಹರು ಕಾಣಾ,
ಸಂಗನಬಸವಣ್ಣಾ. ॥ ೧ ॥

೨೬೯

ಅಂಗದ ಪ್ರಕೃತಿ ಲಿಂಗದಲ್ಲಿ ಅಳಿದು, ಮನದ ಪ್ರಕೃತಿ ಅರಿವಿನಲ್ಲಿ ಅಳಿದು,
ಜೀವಭ್ರಾಂತಿ ನಿಶ್ಚಿಂತಪದದಲ್ಲಿ ಅಳಿದು,
ನಿಶ್ಶೂನ್ಯ ನಿರಾಮಯವಾದ ನಿವಾಸಕ್ಕೆ ಸದಾಚಾರವೆಂಬ ಕೆಸರುಗಲ್ಲನಿಕ್ಕಿ,
ಸರ್ವಾಚಾರಸಂಪತ್ತೆಂಬ ಹೂಗಲ್ಲ ಮುಚ್ಚಿ,
ಅಂತಃಕರಣಚತುಷ್ಟಯವೆಂಬ ನಾಲ್ಕು ಕಂಬಗಳಂ ನಿಲಿಸಿ;
ಜ್ಞಾತೃವೆಂಬ ಭಿತ್ತಿಯ ಮೇಲೆ ಜ್ಞಾನವೆಂಬ ಶಿಖರಿಯನನುಗೊಳಿಸಿ,

ಜ್ಞೇಯವೆಂಬ ಹೊನ್ನಕಳಶಮಂ ಶೃಂಗಾರಮಂ ಮಾಡಿ,
ಬ್ರಹ್ಮರಂಧ್ರದ ಊರ್ಧ್ವದ್ವಾರವೆಂಬ ನಿಜದ್ವಾರಮಂ ಮಾಡಿ,
ನಿರ್ವಯಲಲ್ಲಿ ನೆಲೆಗೊಳಿಸಿ, ಬಸವಪ್ರಿಯ ಕೂಡಲಚನ್ನಸಂಗನ ಶರಣ
ಪ್ರಭುದೇವರ ಬರವಿಂಗೆ ಶೂನ್ಯಸಿಂಹಾಸನವಂ ರಚಿಸಿ,
ಬರವ ಹಾರುತ್ತಿದ್ದನೆನ್ನ ಪರಮಗುರು ಬಸವಣ್ಣನು. ॥ ೨ ॥

೨೭೦

ಅಂಗ ಲಿಂಗವೆಂದರಿದಾತಂಗೆ, ಅಂಗದಲೆ ಐಕ್ಯ.
ಕಂಗಳು ಲಿಂಗವೆಂದರಿದಾತಂಗೆ, ಕಂಗಳಲೆ ಐಕ್ಯ.
ಕರವೆ ಲಿಂಗವೆಂದರಿದಾತಂಗೆ, ಕರದಲೆ ಐಕ್ಯ.
ಈ ತ್ರಿವಿಧದ ನೆಲೆಯ, ಶ್ರುತಿ ಸ್ಮೃತಿಗಳರಿಯವು.
ಎಮ್ಮ ಬಸವಪ್ರಿಯ ಕೂಡಲಚನ್ನಸಂಗಮದೇವನಲ್ಲಿ
ಈ ಇರವ ಶರಣರೆ ಬಲ್ಲರು. ॥ ೩ ॥

೨೭೧

ಅಂದಂದಿಗೆ ನೂರು ತುಂಬಿತ್ತೆಂಬ ದಿಟವಿರಬೇಕು.
ಸಂದ ಪುರಾತನರ ನೆನೆಯುತ್ತಿರಬೇಕು.
ಜಂಗಮ ಮಠಕ್ಕೆ ಬಂದಡೆ, ವಂಚನೆಯಿಲ್ಲದೆ ಮಾಡಬೇಕು.
ಎನಗಿದೇ ವರವನೀವುದು, ಬಸವಪ್ರಿಯ ಕೂಡಲಚನ್ನಸಂಗಮದೇವಾ. ॥ ೪ ॥

೨೭೨

ಅಗ್ಗದ ಹರಿಬ್ರಹ್ಮರ ಮರೆದೊಮ್ಮೆ ಹರಂಗೆ ಸಮವೆಂದಡೆ,
ಅವನು ಚಾಂಡಾಲನು. ಅವನ ಮುಖವ ನೋಡಲಾಗದು.
ಅದೆಂತೆಂದಡೆ:
ಯೋ ಮಹಾದೇವಮನ್ಯೇನ ಹೀನದೇವೇನ ದುರ್ಮತಿಃ ।
ಸಕೃತ್ಸಾಧಾರಣಂ ಬ್ರೂಯಾದಂತ್ಯಜಾನಾಂತ್ಯಜೋಽಂತಜಃ ॥
ಇಂತೆಂದುದಾಗಿ, ನಿಮಗೆ ಕಿರುಕುಳದೈವಂಗಳ ಸಮವೆಂದು
ಬಗಳುವನ ಬಾಯಿ ಪಾಕುಳತಪ್ಪದು,
ಬಸವಪ್ರಿಯ ಕೂಡಲಚನ್ನಸಂಗಮದೇವಾ. ॥ ೫ ॥

೨೭೩

ಅಜನಂದು ಸಾರಿ ಹೇಳಿದ ಸುರಮುನಿಗಳೆಲ್ಲರಿಗೂ :
ಶಿವನನೆ ಧ್ಯಾನಿಸಿ, ಶಿವನನೆ ಪೂಜಿಸಿ,
ಶಿವಭಕ್ತಿಯೆ ನಿಮಗೆ ಪರಮಸಾಧನವೆಂದು ಬೊಬ್ಬಿಟ್ಟು,
ಬೆರಳನೆತ್ತಿ ಸಾರಿದನು.
ವಿಷ್ಣುಭಕ್ತಿಯಿಂದವೂ ತನ್ನ ಭಕ್ತಿಯಿಂದವೂ ನಿಮಗೆ ಸದ್ಗತಿ ಇಲ್ಲವೆಂದನು.

ಅದೆಂತೆಂದಡೆ :
ವಿಷ್ಣುಭಕ್ತ್ಯ ಚ ಮದ್ಭಕ್ತ ನಾಸ್ತಿ ನಾಸ್ತಿ ಪರಾಗತಿಃ।
ಶಂಭು ಭಕ್ತ್ಯೈವ ಸರ್ವೇಷಾಂ ಸತ್ಯಮೇವಮಯೋದಿತಂ ॥
ಎಂದುದಾಗಿ, ದ್ವಿಜರಿಗೆ ಉಪದೇಶ ಬೇರಿನ್ನು ಮತ್ತಿಲ್ಲ,
ಬಸವಪ್ರಿಯ ಕೂಡಲಚನ್ನಸಂಗಮದೇವಾ. ॥ ೬ ॥

೨೭೪

ಅಜಹರಿಸುರರೆಲ್ಲರು ಅಳಿದವರಲ್ಲದೆ, ಉಳಿದವರಿಲ್ಲ
ಶಿವನೆ ನಿತ್ಯನೆಂದು ಹೊಡೆವಡುತ್ತಿವೆ ವೇದ.
ಉತ್ಯೈನಂ ವಿಶ್ವಾಭೂತಾನಿ ಸದೃಷ್ಟ್ವೋ ಮೃಡಯಾತಿನಃ।
ನಮೋಽಸ್ತು ನೀಲಗ್ರೀವಾಯ ಸಹಸ್ರಾಕ್ಷಾಯ ಮೀಡುಷೇ ॥
ಎಂಬ ಶ್ರುತಿ, ಬಸವಪ್ರಿಯ ಕೂಡಲಚನ್ನಸಂಗಯ್ಯನೊರ್ವನೆ
ನಿತ್ಯನೆಂದು ಹೊಗಳುತ್ತಲಿದೆ. ॥ ೭ ॥

೨೭೫

ಅತರ್ಕ್ಯನ ತರ್ಕಮುಖದಲ್ಲಿ ಸಾಧಿಸಿದೆನೆಂದಡೆ,
ನಿಮ್ಮ ತರ್ಕಶಾಸ್ತ್ರಕೊಂಬುದೆ ಎಲೆ ತರ್ಕಿಗರಿರಾ.
ಅಪ್ರಮಾಣನನ ಪ್ರಮಾಣಿಸಿದೆನೆಂದಡೆ
ನಿಮ್ಮ ಪ್ರಮಾಣೆಲ್ಲಿಗೆ ಬಹವೆಲೆ ಅಪ್ರಮಾಣಕರಿರಾ.
ವೇದ ವೇಧಿಸಲರಿಯದೆ 'ಚಕಿತಮಭಿದತ್ತೇ' ಎನಲು,
ಅಂತ್ಯನಾಸ್ತಿಯಾದ ಮಹಾಂತಂಗೆ
ನಿಮ್ಮ ವೇದಾಂತವೇಗುವವು ಎಲೆ ವೇದಾಂತಿಗಳಿರಾ.
ಕರ್ಮಾದಿರಹಿತ ನಿರ್ಮಾಯ ಶಿವಂಗೆ
ನಿಮ್ಮ ಕರ್ಮಂಗಳೆಲ್ಲಿಗೆ ನಿಲುಕವವು ಎಲೆ ಪ್ರಭಾತರಿರಾ.
ಕಾಲಂಗೆ ಕಾಲ ಮಹಾಕಾಲ ಕಾಲಾತೀತ ಮಹಾದೇವಂಗೆ
ನಿಮ್ಮ ಕಾಲವೇದವೇಗುವವು ಎಲೆ ಭ್ರಾಂತರಿರಾ.
ಶಿವಂ ಪರಾತ್ಪರಂ ಸೂಕ್ಷ್ಮಂ ನಿತ್ಯಂ ಸರ್ವಗತಾವ್ಯಯಂ।
ಅನಿಂದಿತಮನೌಪಮ್ಯಂ ಅಪ್ರಮೇಯಮನಾಮಯಂ
ಶುದ್ಧತ್ವಂ ಶಿವಮುದ್ದಿಷ್ಟಂ ಪರಾದೂರ್ಧ್ವಂ ಪರಾತ್ಪರಂ ॥
ಇಂತೆಂದುದಾಗಿ,
ದರುಶನವಾದಿಗಳೆಲ್ಲ ದರುಷನ ಭ್ರಮೆಯ ಬಿಟ್ಟು
ಹರುಷದಿಂದ ಭಜಿಸಿ ಬದುಕಿರೆ,
ಬಸವಪ್ರಿಯ ಕೂಡಲಚನ್ನ ಸಂಗಯ್ಯನ. ॥ ೮ ॥

೨೭೬

ಅನಿಮಿಷನಾದ ನಿಬ್ಬೆರಗಿನ ಲಿಂಗೈಕ್ಯನು, ಭಾವ ನಿರ್ಭಾವವನೆಯ್ದಿ
ಜ್ಞಾನವೆ ಪರಮಾಶ್ರಯವಾಗಿಪ್ಪ ಲಿಂಗೈಕ್ಯನು,
ಮಹವನೊಳಕೊಂಡ ಮಹಿಮ ಲಿಂಗೈಕ್ಯನು,
ಬಸವಪ್ರಿಯ ಕೂಡಲ ಚನ್ನಸಂಗಯ್ಯಾ ನಿಮ್ಮ ಶರಣ ಪ್ರಭುದೇವರು. ॥ ೯ ॥

೨೭೭

ಅನೇಕ ಪರಿಯ ಭಕ್ತಿಯ ವೇಷವನಳವಡಿಸಿಕೊಂಡು,
ಮನೆಮನೆದಪ್ಪದೆ ತಿರುಗುವೆನು.
ಅವರ ಇಚ್ಛೆಗೆ ಅನುಮಾನವಿಡಿದು ನುಡಿವೆನು.
ಅವರ ಮನಧರ್ಮವನರಿಯದೆ ನುಡಿದೆನಾದಡೆ,
ಅನೇಕ ಪರಿಯಲ್ಲಿ ಭಂಗಬಡುವೆನು.
ದಿಟದ ಭಕುತನಂತೆ,
ಪುರಾತರ ವಚನಂಗಳ ಉದರ ನಿಮಿತ್ತವಾಗಿ ಬಳಸುವೆನು.
[ಕಡು]ಪಾಪಿಗಿನ್ನೇನು ಹದನಯ್ಯ,
ಬಸವಪ್ರಿಯ ಕೂಡಲಚೆನ್ನ ಸಂಗಮದೇವಾ ? ॥ ೧೦ ॥

೨೭೮

ಅಯ್ಯಾ, ಎನಗೆ ಭಕ್ತಿಯುಂಟೆಂಬ ಮಾತೇ ಡಂಬು ನೋಡಯ್ಯಾ.
ಎನಗಾ ಮಾತಿಂಗಧಿಕಾರವೆಲ್ಲಿಯದಯ್ಯಾ.
ತಲೆಹುಳಿತ ನಾಯಿಗೆ ಉಚ್ಛಿಷ್ಟಾನ್ನ ಬಂದುದೆ ಭಾಗ್ಯವು.
ಒಂದರೊಳಗೊಂದನರಿಯೆನಯ್ಯಾ,
ಬಸವಪ್ರಿಯ ಕೂಡಲಚೆನ್ನ ಸಂಗಯ್ಯಾ. ॥ ೧೧ ॥

೨೭೯

ಅಯ್ಯಾ ಎನ್ನ ಹಲ್ಲ ಮರೆಯಲ್ಲಿಪ್ಪ ಬೆಲ್ಲವ ಕಂಡು, ಎಲ್ಲರೂ ಮೆಲಬಂದರು.
ಬೆಲ್ಲಗಳೆದ್ದಡೆ ನಿಲಲೀಸದೆ ಎನ್ನ ಕಾಡುತ್ತಿದ್ದಾರೆಯೆಂದು,
ಆ ಬೆಲ್ಲವನಲ್ಲಿಯೆ ನುಂಗಿದಡೆ, ಹಲ್ಲು ಮುರಿದವು.
ಮೆಲಬಂದವರೆಲ್ಲ ಅಲ್ಲಿಯೆ ಬಯಲಾದರು.
ನಾ ನಿಮ್ಮಲ್ಲಿ ಕೂಡಿ ಸುಖಿಯಾದೆನಯ್ಯಾ,
ಬಸವಪ್ರಿಯ ಕೂಡಲಚೆನ್ನಸಂಗಮದೇವಾ. ॥ ೧೨ ॥

೨೮೦

ಅಯ್ಯಾ ಮರದೊಳಗಣ ಕಿಚ್ಚು ಮರನ ಸುಡುತ್ತಿದ್ದಿತ್ತಯ್ಯಾ.
ಮರ ಬೆಂದು ನಿಂದುರಿಯಿತ್ತು, ಮಣ್ಣು ಜರಿದು ಬಿದ್ದಿತ್ತು,
ಉರಿ ಹೊಗೆ ನಂದಿತ್ತು, ಸ್ವಯಂಪ್ರಕಾಶವಾಗಿಪ್ಪ ಉರಿ ಉಳಿಯಿತ್ತು,

ಆ ಉರಿ ಬಂದು ಎನ್ನ ಕರಸ್ಥಲದಲ್ಲಡಗಿತ್ತು.
ಇದ ಕಂಡು, ನಾ ಬೆರಗಾಗಿ ನೋಡುತ್ತಿದ್ದೆನಯ್ಯಾ,
ಬಸವಪ್ರಿಯ ಕೂಡಲಚೆನ್ನ ಸಂಗಮದೇವಾ. ॥ ೧೩ ॥

೨೮೧

ಅಯ್ಯಾ, ವೈಷ್ಣವರಾದವರು ತಮ್ಮ ವಿಷ್ಣುವ ಬಿಟ್ಟು, ಕಳೆದು,
ಲಿಂಗಭಕ್ತರಾದರನೇಕರು.
ಅಯ್ಯಾ, ಜೈನರಾದವರು ತಮ್ಮ ಜಿನನ ಬಿಟ್ಟು, ಕಳೆದು,
ಲಿಂಗಭಕ್ತರಾದರನೇಕರು.
ಅಯ್ಯಾ, ದ್ವಿಜರಾದವರು ತಮ್ಮ ಕರ್ಮಂಗಳ ಬಿಟ್ಟು, ಕಳೆದು,
ಲಿಂಗಭಕ್ತರಾದರನೇಕರು.
ಲಿಂಗವ ಬಿಟ್ಟು, ಇತರವ ಹಿಡಿದವರುಳ್ಳರೆ ಹೇಳಿರಯ್ಯಾ ?
ಉಳ್ಳಡೆಯೂ ಅವರು ವ್ರತಗೇಡಿಗಳೆನಿಸಿಕೊಂಬರು.
ಇದು ಕಾರಣ, ಋಷಿ ಕೃತಕದಿಂದಲಾದ ಕುಟಿಲದೈವಂಗಳ
ದಿಟವೆಂದು ಬಗೆವರೆ, ಬುದ್ಧಿವಂತರು ?
ಸಟೆಯ ಬಿಡಲಾರದೆ, ದಿಟವ ನಂಬಲಾರದೆ,
ನಷ್ಟವಾಗಿ ಹೋಯಿತ್ತೀ ಜಗವು ನೋಡಾ.
ಸಕಲದೈವಂಗಳಿಗೆ, ಸಕಲಸಮಯಂಗಳಿಗೆ
ನೀವೇ ಘನವಾಗಿ, ನಿಮಗೆ ಶರಣುವೊಕ್ಕೆನಯ್ಯಾ,
ಬಸವಪ್ರಿಯ ಕೂಡಲಚೆನ್ನಸಂಗಮದೇವಾ. ॥ ೧೪ ॥

೨೮೨

ಅಯ್ಯಾ ಹಳೆಯ ಹುತ್ತದೊಳಗೊಂದು ಎಳೆಯ ಸರ್ಪನ ಕಂಡೆ.
ಆ ಎಳೆಯ ಸರ್ಪ ಹೊರಟು, ಬೆಳಗು ಕತ್ತಲೆಯೆರಡೂ ನುಂಗಿತ್ತು.
ಆ ಎಳೆಯ ಸರ್ಪನ ಕಂಡು, ಅಲ್ಲಿದ್ದ ತಳಿರ ಮರ ನುಂಗಿತ್ತು.
ಆ ತಳಿರ ಮರನ ಕಂಡು ಮಹಾಬೆಳಗು ನುಂಗಿತ್ತು.
ಆ ಮಹಾಬೆಳಗ ಕಂಡು, ನಾನೊಳಹೊಕ್ಕು ನೋಡಿದಡೆ,
ಒಳಹೊರಗೆ ತೊಳತೊಳಗಿ ಬೆಳಗುತ್ತಿದ್ದಿತಯ್ಯಾ,
ಬಸವಪ್ರಿಯ ಕೂಡಲಚೆನ್ನಸಂಗಮದೇವ. ॥ ೧೫ ॥

೨೮೩

ಅಲ್ಲಿಂದತ್ತ ಪಶ್ಚಿಮಚಕ್ರಕ್ಕೆ ಏಕದಳ ಪದ್ಮ,
ಹವಣಿಸಬಾರದ ತೇಜ, ಏಕಾಕ್ಷರ,
ಕುರುಹಿಡಬಾರದ ನಾದ, ಅಪ್ರದರ್ಶನ ವರ್ಣ,
ನಿರ್ಭಿನ್ನ ಶಕ್ತಿ, ಸರ್ವಾತ್ಮನೆಂಬ ಜಂಗಮವೆ ಅಧಿದೇವತೆ.
ಪರಿಪೂರ್ಣ ಜಂಗಮಲಿಂಗ, ಅಕ್ಷರಾಕ್ಷ[ರ]ತೀತ, ನಿಶ್ಶಬ್ದವಾಗಿಪ್ಪುದು.

ಇಂತಪ್ಪ ಲಿಂಗಾಂಗವೆ ತಾನಾಗಿ, ಅವಿರಳ ಜಂಗಮಭಕ್ತಿಯ ಮಾಡಬಲ್ಲಾತನೆ,
ಬಸವಪ್ರಿಯ ಕೂಡಲಚೆನ್ನಸಂಗಯ್ಯನಲ್ಲಿ
ಸಂಗನಬಸವಣ್ಣನಯ್ಯಾ, ಪ್ರಭುವೆ. ॥ ೧೬ ॥

೨೮೪

ಅಷ್ಟತನುವಿನೊಳಗೊಂದು ತನುವಾಗಿ,
ಜೀವಾತ್ಮನು ಪಾಶಬದ್ಧನು ಪಶುಪಾಗತಂತ್ರನು ಸ್ವತಂತ್ರವೆಲ್ಲಿಯದೊ ?
ಸ್ವತಂತ್ರ ಶಿವನೊಬ್ಬನೆ ತನ್ನ ಇಚ್ಫಾಲೀಲೆಯಿಂದಾಡಿಸುವ
ಘೋರಸಂಸಾರ ಭವವಾರಿಧಿಯೊಳಗೆ
ರಾಟಾಳದ ಗುಂಡಿಗೆಯೊಳಗಣ ಜಲದ ತೆರದಿ
ತುಂಬುತ್ತ ಕೆಡಹುತ್ತವಿರುಹವೈಸಲ್ಲದೆ ತೆರಹಿಲ್ಲ,
ಪುಣ್ಯಪಾಪಂಗಳ ಮಾಡಿ ಸ್ವರ್ಗನರಕಂಗಳ ಭೋಗಿಸಿ
ಪರತಂತ್ರವಲ್ಲದೆ ಸ್ವತಂತ್ರವೆಲ್ಲಿಯದೊ ?
ಪುನರ್ಜನ್ಮ ಪುನರ್ಮೃತ್ಯುಃ ಪುನಃ ಕ್ಲೇಶಃ ಪುನಃ ಪುನಃ ।
ಸಗರಸ್ಥಘಟನ್ಯಾಯೋ ನ ಕದಾಚಿದವೈದೃಶಃ ॥
ಎಂದುದಾಗಿ, ಜೀವಾತ್ಮಂಗೆ ಪರಮಾತ್ಮತ್ವ ಸಲ್ಲದಾಗಿ,
ಅಷ್ಟತನುವಿನೊಳಗೊಂದು ತನು ಕಾಣಭೋ, ಎಲೆ ಅದ್ವೈತಿಗಳಿರಾ.
ಹುಟ್ಟುಕುರುಡನು ತನ್ನ ಹಿರಿಯಯ್ಯ ಹೆತ್ತಪ್ಪಂಗೆ ಮುಖವೆಲ್ಲ ಕಣ್ಣೆಂದಡೆ,
ತನಗಾದ ಸಿದ್ಧಿ ಯಾವುದು ?
ಆದಿ ಸಿದ್ಧಾಂತ ವೇದಾಂತ ಶಾಸ್ತ್ರವನೋದಿ ಕೇಳಿ ಹೇಳಿದಡೆ,
ತನಗೇನು ಸಿದ್ಧಿಯಾದುದೆಲೆ ಆತ್ಮತತ್ತ್ವವಾದಿಗಳಿರಾ ಹೇಳಿರೆ ?
ಅಷ್ಟತನುಗಳೆಲ್ಲ ಪರತಂತ್ರವೆಂಬುದ ಶ್ರುತದೃಷ್ಟಾನುಮಾನಂಗಳಿಂ
ನಿಮ್ಮ ತಿಳುಪುವದೆ ?
ಆತ್ಮಾಂತರಾಣಿ ಪಶವಃ ಪರತಂತ್ರಭಾವಾತ್ಸತಸ್ವತಂತ್ರಃ
ಪಶುಪತೇ ಪಸುಧೇಶ್ವರಸ್ತ್ವಂ ।
ಆತ್ಮಾನಮಾಷನಿಷದಾ ಪ್ರವದಂತ್ಯನೀಶ ಈಶಂ ಭವಂತ
ಮುಖಯೋರುಭಯಂ ಸ್ವಭಾವಃ ॥
ಇಂತೆಂದುದಾಗಿ, ಆತ್ಮಂಗೆ ಪಶುತ್ವವೆ ಸ್ವಭಾವ, ಶಿವಂಗೆ ಪತಿತ್ವವೆ ಸ್ವಭಾವ,
ಇದು ಶ್ರುತ. ಇನ್ನು ದೃಷ್ಟವೆಂತೆನಲು,
'ಜೀವಶ್ಶಿವಶಿವೋ ಜೀವಸ್ಯ ಜೀವಃ', ಜೀವನೆ ಶಿವನು, ಶಿವನೆ ಜೀವನು.
ಬರಿದೆ ಶಿವನೆಂದು ನುಡಿವರು, ಮೇಲಣ ಪದಾರ್ಥವ ನುಡಿಯರು.
'ಪಾಶಬದ್ಧೋ ಪಶುಪ್ರೋಕ್ತಃ ಪಾಶಮುಕ್ತಃ ಪರಶ್ಶಿವಃ'
ಎಂಬ ಪದಾರ್ಥವ ನುಡಿಯರು.
ಪಾಶಬದ್ಧ ಜೀವನರಾಗಿ ಪಶುವೆನಿಸುವನು ಪಾಶಮುಕ್ತನು.
ಶಿವನಾಗಿ ಆ ಪಶುವಿಂಗೆ ಪರನಾದ ಶಿವನು ಪತಿಯೆನಿಸುವನು.

'ಬ್ರಹ್ಮದ ಸರ್ವದೇವಃ ವೇಷವಃ'ಯೆಂಬ ಶ್ರುತ್ಯಾರ್ಥವನು ಪ್ರಮಾಣಿಸಿ,
ಪಶುವೆ ಪತಿಯೆಂದು ನುಡಿವರು ಅನಭಿಜ್ಞರು. ॥ ಶ್ರುತಿ ॥
'ರುದ್ರಃ ಪಶುನಾಮಧಿಪತಿರಿತಃ' ಪಶುಗಳಿಗೆ
ಶಿವನೆ ಒಡೆತನವುಳ್ಳ ತನ್ನಾಧೀನವುಳ್ಳ ಮಾಯಾಪಾಶದಿಂ ಕಟ್ಟಲು ಬಿಡಲು,
ಶಿವನೆ ಪತಿಯೆಂಬ ತಾತ್ಪರ್ಯಾರ್ಥವ ನುಡಿಯರು.
ಇದು ದೃಷ್ಟಾಂತ, ಇನ್ನು ಅನುಮಾನವೆಂತೆನಲು ಕೇಳಿರೆ.
ಮಾನುಷಂಗೆ ಪ್ರಸನ್ನಭಕ್ತಿ ಪ್ರಸಾದವ ಕೃಪೆ ಮಾಡಲು,
ಮಾನುಷ್ಯಂಗೆ ಕಾಮಿತ ನಿಃಕಾಮಿತ ಭಕ್ತಿಯಿಂದ
ಭೋಗಮೋಕ್ಷವನೀವನಾ ಶಿವನು.
ನರನೊಳಗಾಗಿ ನರಪತಿಯ ಸೇವೆಯ ಮಾಡುವಲ್ಲಿ,
ನಿರುಪಾಧಿಕಸೇವೆಯಿಂದ ಅತಿಶಯ ಪದವನೀವನು.
ಉಪಾಧಿಕಸೇವೆಯಿಂದ ಸಾಧಾರಣಪದವನೀವನು. ಇದೀಗ ಅನುಮಾನ ಕಂಡಿರೆ.
ಇಂತೀ ಅಷ್ಟತನುಗಳೊಳಗಾದ ಸಮಸ್ತರು ಪಶುಗಳು.
ಇವಕ್ಕೆ ಪತಿ ಶಿವನೆಂಬುದಕ್ಕೆ ಕೇಳಿರೆ.
ಪೃಥಿವ್ಯಾಭವ ಅಪಾಂ ಶರ್ವ ಆಜ್ಞೇ ರುದ್ರಃ ವಾಯೋರ್ಭೀಮಃ ।
ಆಕಾಶ್ಯಾತ್ಯ ಮಹಾದೇವ ಸೂರ್ಯಸ್ಯೋಗ್ರಃ ಚಂದ್ರಸ್ಯ ಸೋಮಃ ।
ಆತ್ಮನಃ ಪಶುಪತಿರಿತಃ ।
ಎಂದೆನಲು, ಅಷ್ಟತನುಗಳು ಪಶುಗಳು, ಪತಿ ಶಿವನು ಕೇಳಿರೆ.
ಇಂತೀ ಅಷ್ಟತನುಗಳು ಶಿವನಾಜ್ಞೆಯ ಮೀರಲರಿಯವೆಂಬುದಕ್ಕೆ
ದೃಷ್ಟಾವಾರುಣಿಚೋಪನಿಷತ್ಸುಭೀಸ್ಮಾದ್ವಾತಃ ಪವತೇಶ್ಚಾಗ್ನಿಶ್ಚಭಿಷೋಽದೇತಿ
ಸೂರ್ಯಃ ಭೀಷಾಂದ್ರುರ ಮೃತ್ಯುರ್ಧಾವತಿ ಪಂಚಮಃ ।
ಇಂತಾಗಿ, ಆಕಾಶಃ ಪರಪರಮೇಶಸ್ಯ ಶಾಸನಾದೇವ ಸರ್ವದಾ
ಪ್ರಾಣಾಪಾನಾದಿಭಿಶ್ಚಯ
ಭೇದ್ಯದಂತಯಿರ್ಲಹಿರ್ಜಗತ್ ಭಿಬರ್ತಿ ಸರ್ವರೀ ಸರ್ವರೀ
ಸರ್ವಸ್ಯ ಶಾಸನೇವ ಪ್ರಭಾಜನಾ ॥
ಎಂದುದಾಗಿ,
ಹವ್ಯಂ ವಹತಿ ದೇವಾನಾಂ ತವ್ಯಂ ತವ್ಯಾಶ ತಾಮಪಿ ।
ಪಾಕಾದ್ಯಂ ಚ ಕರೋತ್ಯಗ್ನಿಃ ಪರಮೇಶ್ವರ ಶಾಸನಾತ್ ॥
ಸಂಜೀವನಾದ್ಯಂ ಸರ್ವಸ್ಯ ಕುರ್ವಂತ್ಯಾಪಸ್ತದಾಜ್ಞಯಾ ।
ವಿಶ್ವಂ ವಿಶ್ವಂಭರಾನ್ನಿತಂ ದತ್ತೇ ವಿಶ್ವೇಶ್ವರಾಜ್ಞಯಾ ।
ತ್ರಿಭಿಕಿ ತ್ರೈಜಗಭಿಬ್ರುತೇಜೋಬಿರ್ವಿಷಮಾದದೇ ।
ವಿವಿಸ್ಸರ್ವಸ್ಯ ಸಭಾನು ದೇವದೇವಸ್ಯ ಶಾಸನಾತ್ ।
ಪುಷ್ಯತ್ಯೇಷದಿಜತಾನಿ ಭೂತಾ ನಿಹ್ಲಾದಯಂತ್ಯಪಿ ।
ದೇವೈಶ್ಯಪಿಯತೇ ಚಂದ್ರಶ್ಚಂದ್ರ ಭೂಷಣಂ ಶಾಸನಾತ್ ।

ತೇಸ್ಯಾಜ್ಞಾಂ ವಿನಾ ತೃಣಾಗ್ರಮಪಿ ನಚಲತಿ ॥
ಇಂತೆಂದುದಾಗಿ, ಇದು ಕಾರಣ,
ಆತ್ಮಸ್ವರ ಬಸವಪ್ರಿಯ ಕೂಡಲಚೆನ್ನಸಂಗಯ್ಯನೆಂದರಿಯರೆಲ್ಲರು.
ಪಶುಗಳು ಪಾಶಬದ್ಧರೆಂದು ಎತ್ತಿ ತರ್ಜನಿಯವ
ಉತ್ತರ ಕೊಡುವರುಳ್ಳರೆ ನುಡಿ ಭೋ. ॥ ೧೭ ॥

೨೮೫

ಆದಿ ಅನಾದಿಯೆಂಬವು ಸಂಗಪ್ಪವಾಗಿರ್ದು, ವಿಭೇದವಾಗುವಲ್ಲಿ
ಕುಂಡಲಿಯ ಶಕ್ತಿಯಲ್ಲಿ ಪ್ರಾಣವಾಯು ಪ್ರಣವಸ್ವರವನೊಡಗೂಡಿ
ಬ್ರಹ್ಮಸ್ಥಾನದಲ್ಲಿ ಸ್ಥಾಪ್ಯ ಶಿವನಾಗಿ,
ಭ್ರೂಮಧ್ಯಕಂಠಸ್ಥಾನದಲ್ಲಿ ನಿಃಕಲಸ್ವರೂಪನಾಗಿ,
ಹೃದಯನಾಭಿಯಲ್ಲಿ ಸಕಲನಿಃಕಲನಾಗಿ,
ಸ್ವಾಧಿಷ್ಠಾನ ಆಧಾರದಲ್ಲಿ ಕೇವಲಸಖನಾಗಿ,
ಆ ಸಕಲಕ್ಕೆ ಎರಡು ಪಾದವನಿತ್ತು,
ಒಂದು ಪಾದಕ್ಕೆ ಕ್ರಿಯಾಶಕ್ತಿ, ಒಂದು ಪಾದಕ್ಕೆ ಜ್ಞಾನಶಕ್ತಿಯ ಮಾಡಿ ನಿಲ್ಲಿಸಿ,
ಮೇಲಣ ಸಕಲ ನಿಃಕಲತತ್ತ್ವಕ್ಕೈದಿ, ಅಲ್ಲಿಗೆ ಎರಡು ಹಸ್ತವನಿತ್ತು,
ಒಂದು ಹಸ್ತಕ್ಕೆ ಆದಿಶಕ್ತಿ, ಒಂದು ಹಸ್ತಕ್ಕೆ ಇಚ್ಛಾಶಕ್ತಿಯನಾದಿ ಮಾಡಿ ನಿಲಿಸಿ,
ಮೇಲಣ ನಿಃಕಲತತ್ತ್ವವನೈದಿ, ಅಲ್ಲಿಗೆ ನಾಲ್ಕು ಪಾದವನಿತ್ತು,
ಅವು ಆವವು ಎಂದಡೆ, ಜಿಹ್ವೆ ಘ್ರಾಣ ನೇತ್ರ ಶ್ರೋತ್ರವೆಂಬ
ನಾಲ್ಕು ಪಾದ ವನಾದಿಮಾಡಿ ನಿಲ್ಲಿಸಿ,
ನಾಲ್ಕು ಪಾದವಂ ನಿಲ್ಲಿಸಿದುದರಿಂದ ನಂದಿಯೆಂಬ ನಾಮವಾಯಿತ್ತು,
ಆ ನಂದೀಶ್ವರಂಗೆ ಚಿತ್‌ಶಕ್ತಿಯೆ ಅಂಗ, ಪರಶಕ್ತಿಯೆ ಮುಖ.
ಇಂತಪ್ಪ ನಂದೀಶ್ವರ ನಲಿದಾಡಿ ಅನಾದಿ ಪರಶಿವ ಅಖಿಳ ಬ್ರಹ್ಮಾಂಡವ
ಹೊತ್ತಿಪ್ಪನಲಾಯೆಂದರಿದು,
ಆದಿವಾಹನವಾದನು, ಅದೀಗ ಆದಿವೃಷಭನೆಂಬ ನಾಮವಾಯಿತ್ತು,
ಆಒವೃಷಭನ ಆದಿಯಲ್ಲಿ ಪರಶಿವನಿಪ್ಪನು,
ಆ ಪರಶಿವನಾದಿಯಲ್ಲಿ ನಿಃಕಲವಿಪ್ಪುದು,
ಆ ನಿಃಕಲದಾದಿಯಲ್ಲಿ ಸಕಲ ನಿಃಕಲವಿಪ್ಪುದು.
ಆ ಸಕಲ ನಿಃಕಲದಾದಿಯಲ್ಲಿ ಕೇವಲ ಸಕಲವಿಪ್ಪುದು.
ಆ ಸಕಲವೆಂದರೆ ಅನಂತತತ್ತ್ವ.
ಬ್ರಹ್ಮಾಂಡ ಕೋಟ್ಯಾನುಕೋಟಿ ಲೋಕಾಲೋಕಂಗಳು
ದೇವದಾನವ ಮಾನವರು
ಸಚರಾಚರ ಎಂಬತ್ತನಾಲ್ಕು ಲಕ್ಷ ಜೀವಜಂತುಗಳುದ್ಭವಿಸಿದವು.
ಆ ಪಿಂಡ ಬ್ರಹ್ಮಾಂಡದ ಹೊರೆಯಲ್ಲಿ ಸಕಲಪದಾರ್ಥಗಳುದ್ಭವಿಸಿದವು.
ಸಕಲಪದಾರ್ಥಂಗಳ ಪುಣ್ಯಪಾಪದ ಸಾರವ ಕೈಕೊಂಬುದಕ್ಕೆ

ದೇವನಾವನುಂಟೆಂದು ಆಹ್ವಾನಿಸಿ ನೋಡಲು,
ಆ ನಿಃಕಲ ಮಹಾಲಿಂಗವೆ ಕ್ರಿಯಾಶಕ್ತಿಯ ಮುಖದಲ್ಲಿ ಇಷ್ಟಲಿಂಗವಾಗಿ ಬಂದು,
ಜ್ಞಾನಶಕ್ತಿಮುಖದಲ್ಲಿ ಸಕಲಪದಾರ್ಥಂಗಳ ಕೈಕೊಂಬಲ್ಲಿ,
ಪುಣ್ಯಪಾಪಂಗಳ ಸಾರವಳಿದು, ಲಿಂಗ ಸಾರವಾದ ರೂಪ ಇಷ್ಟಲಿಂಗಕ್ಕೆ ಕೊಟ್ಟು,
ಆ ರುಚಿಪ್ರಸಾದವ ಜ್ಞಾನಶಕ್ತಿ ಆದಿಶಕ್ತಿ ಕೈಯಲ್ಲಿಪ್ಪ ಪ್ರಾಣಲಿಂಗಕ್ಕ
ಇಚ್ಛಾಶಕ್ತಿಯ ಮುಖದಲ್ಲಿ ಕೊಡಲು,
ಆ ರುಚಿ ಪ್ರಸಾದವ ಪ್ರಾಣಲಿಂಗವಾರೋಗಿಸಿ, ಪರಮ ಪರಿಣಾಮವನೈದಲು,
ಆ ಪರಿಣಾಮ ಪ್ರಸಾದವ ಜ್ಞಾನಶಕ್ತಿಯು ನಂದೀಶ್ವರಂಗೆ ಕೊಡಲು,
ಆ ಪರಮ ತೃಪ್ತಿಯ ಶೇಷ ನಂದೀಶ್ವರ ಆರೋಗಿಸಿ ಪರವಶವನೈದಲು,
ಆ ಪರವಶದ ಶೇಷವ ಜ್ಞಾನಶಕ್ತಿ ಆರೋಗಿಸಿ,
ಅಡಿಮುಡಿಗೆ ತಾನೆ ಆದಿಯಾಗಲು,
ಅದೀಗ ಅಡಿಮುಡಿಯ ಶೇಷ ಹೊತ್ತಿಪ್ಪನೆಂದು
ವೇದಾಗಮಶಾಸ್ತ್ರಪುರಾಣಪುರುಷರು ನುಡಿಯುತಿಪ್ಪರು.
ಇಂತಪ್ಪ ಬಸವನ ಆದಿಮೂಲವ ಬಲ್ಲ ಶರಣನಾಯಿತ್ತು ತೊತ್ತು
ಮುಕ್ಕುಳಿಸಿ ಉಗುಳುವ ಪಡುಗ,
ಮೆಟ್ಟುವ ಚರ್ಮ ಹಾವುಗೆಯಾಗಿ ಬದುಕಿದೆನು ಕಾಣಾ,
ಬಸವಪ್ರಿಯ ಕೂಡಲ[ಚೆನ್ನ] ಸಂಗಮದೇವಾ,
ನಿಮ್ಮ ಧರ್ಮ ನಿಮ್ಮ ಧರ್ಮ. ॥ ೧೯ ॥

೨೮೬

ಆದಿ ಅನಾದಿಯೆಂಬವು ನಾದಕ್ಕೆ ಬಾರದ ಮುನ್ನ,
ಶೂನ್ಯ ನಿಃಶ್ಶೂನ್ಯ ಸುರಾಳವೆಂಬವು ಸುಳುಹುದೋರದ ಮುನ್ನ,
ಬೆಳಗು ಕತ್ತಲೆಯಿಲ್ಲದ ಮುನ್ನ,
ಅಳಿವು ಉಳಿವು ಸುಳುವು ಸೂತ್ರ ಜಂತ್ರ ಜಡ ಅಜಡವಿಲ್ಲದ ಮುನ್ನ,
ಕಡೆ ನಡು ಮೊದಲಿಲ್ಲದ ಅಡಿಯಲಾಧಾರ ಹಿಡಿವರೆ ರೂಹಿಲ್ಲದ ಮುನ್ನ,
ಒಡೆಯನಿಲ್ಲ ಬಂಟನಿಲ್ಲ ನಡೆಯಿಲ್ಲ ನುಡಿಯಿಲ್ಲ ಬೆಡಗಿಲ್ಲ ಒಡಲಿಲ್ಲದ ಮುನ್ನ,
ಪೃಥ್ವಿ, ಅಪ್ಪು, ತೇಜ, ವಾಯು, ಆಕಾಶ, ಚಂದ್ರ, ಸೂರ್ಯರು
ತಲೆದೋರದ ಮುನ್ನ,
ದೇವನಿಲ್ಲ ಭಕ್ತನಿಲ್ಲದ ಮುನ್ನ, ನೀನು ನಾನುಯಿಲ್ಲದ ಮುನ್ನ,
ಆಕಾರ ನಿರಾಕಾರವೇನೂಯಿಲ್ಲದ ಮುನ್ನ, ತಾನು ತಾನೆಂಬ ತಲ್ಲಣವಿಲ್ಲದಂದು,
ಆ ಒಟ್ಟಬಯಲ ಬ್ರಹ್ಮವೆ ಘಟ್ಟಿಯಾದ ಘನವೆಂತೆಂದಡೆ:
ನಿಮ್ಮನುವ ನೀವರಿದ ಘನಮಹಿಮರು ತಿಳಿದು ನೋಡಿರಣ್ಣಾ.
ಆ ಬಟ್ಟಬಯಲೆಂದಡಾರು ಬಸವ, ಆ ಬಸವನೆಂದಡಾರು ಬಟ್ಟಬಯಲು.
ಆ ಬ್ರಹ್ಮನೆಂದಡಾರು ಬಸವ, ಬಸವನೆಂದಡಾರು ಬ್ರಹ್ಮ

ಅಂತಪ್ಪ ಬಸವನ ಆ ಮೂಲವ ಬಲ್ಲವರು ನೀವು ಕೇಳಿರಣ್ಣ. ಬಸವ ಎಂಬ ಮೂರಕ್ಷರವೆ ಮೂಲಪ್ರಣವ.
ಅದೆಂತೆಂದಡೆ: ಬಯೆಂಬುದೆ ಚಿನ್ನಾದ ಆಕಾರವಾಯಿತ್ತು,
ಸಯೆಂಬುದೆ ಚಿದ್ಬಿಂದುವಾಯಿತ್ತು,
ಮತ್ತಂ ಬಯೆಂಬುದೆ ಅಕಾರವಾಯಿತ್ತು, ಸ ಎಂಬುದೆ ಉಕಾರವಾಯಿತ್ತು,
ವಾ ಯೆಂಬುದೆ ಚಿತ್ಕಳೆಯಾಯಿತ್ತು.
ಮತ್ತಂ ಬಯೆಂಬುದೆ ಆಕಾರವಾಯಿತ್ತು, ಸ ಎಂಬುದೆ ಉಕಾರವಾಯಿತ್ತು,
ವಾಯೆಂಬುದೆ ಮಕರವಾಯಿತ್ತು.
ಮತ್ತೆ ಬಯೆಂಬುದೆ ನಾದವಾಯಿತ್ತು, ಸಯೆಂಬುದೆ ಬಿಂದುವಾಯಿತ್ತು,
ವಾಯೆಂಬುದೆ ಕಳೆಯಾಯಿತ್ತು.
ಮತ್ತೆ ಬ ಎಂಬುದೆ ಗುರುವಾಯಿತ್ತು, ಸಯೆಂಬುದೆ ಅಂಗವಾಯಿತ್ತು,
ವಾ ಎಂಬುದೆ ಜಂಗಮವಾಯಿತ್ತು.
ಬ ಎಂಬ ನಾದವೆತ್ತಲು, ಸ ಎಂಬ ಬಿಂದು ಕೂಡಲು,
ವಾಯೆಂಬ ಕಳೆ ಬೆರೆಯಲು, ಗೋಳಕಾಕಾರವಾಗಿ ಆದಿಪ್ರಣಮವೆನಿಸಿತ್ತು.
ಆದಿಪ್ರಣಮು, ಅನಾದಿಪ್ರಣಮು, ಅಂತ್ಯಪ್ರಣಮುವೆಂಬವು
ನಮ್ಮ ಬಸವಣ್ಣನ ಸ್ಥೂಲ ಸೂಕ್ಷ್ಮ ಕಾರಣ ಕಾಣಿರೆ.
ಇಂತಪ್ಪ ಬಸವಣ್ಣ ಬಯಲಬ್ರಹ್ಮವನೆ ಮೆಯಿದು,
ಮೆಲುಕಿರಿದು ಗೋಮಯವಿಕ್ಕಲು ಪೃಥ್ವಿಯಾಯಿತ್ತು.
ಇಂತಪ್ಪ ಬಸವಣ್ಣ ಜಲವ ಬಿಡಲು ಅಪ್ಪುಮಯವಾಯಿತ್ತು.
ಇಂತಪ್ಪ ಬಸವಣ್ಣನ ತೇಜವೆ ಅಗ್ನಿಯಾಯಿತ್ತು.
ಇಂತಪ್ಪ ಬಸವಣ್ಣನ ಉಚ್ಛ್ವಾಸ ನಿಶ್ವಾಸವೆ ವಾಯುವಾಯಿತ್ತು.
ಇಂತಪ್ಪ ಬಸವಣ್ಣನ ಶಬ್ದವೆ ಆಕಾಶವಾಯಿತ್ತು.
ಇಂತಪ್ಪ ಬಸವಣ್ಣನ ಕಂಗಳ ಬೆಳಗೆ ಚಂದ್ರ ಸೂರ್ಯರಾದರು.
ಇಂತಪ್ಪ ಬಸವಣ್ಣನ ಬುದ್ಧಿಯೆ ಆತ್ಮವೆನಿಸಿ, ಅಷ್ಟತನುಮೂರ್ತಿಯೆ ತನುವೆನಿಸಿ,
ಪಿಂಡ ಬ್ರಹ್ಮಾಂಡ ಕೋಟ್ಯಾನುಕೋಟಿ ಅಂಡಪಿಂಡಾಂಡಂಗಳಿಗೆ ಒಡಲಾಗಿ,
ಅಡಿಮುಡಿಗೆ ತಾನೆ ಆದಿಯಾಗಿ,
ಸರ್ವವೂ ನಮ್ಮ ಬಸವಣ್ಣನ ಒಡಲಲ್ಲಿ ಹುಟ್ಟುತ್ತ ಬೆಳೆಯುತ್ತ
ಅಳಿವುತಿಪ್ಪವು ಕಾಣಿರೆ.
ಇಂತಪ್ಪ ಸಕಲಪ್ರಾಣಿಗಳಿಗೆ ನಮ್ಮ ಬಸವಣ್ಣನ ಗೋಮಯದಲ್ಲಿ ಹುಟ್ಟಿದ ಪೃಥ್ವಿಯೆ ಪದಾರ್ಥವೆ ಆದಿಜಲದಿಂದ ಹುಟ್ಟಿದ ಉದಕವೆ ಸಾರ.
ತೇಜದಿಂದ ಹುಟ್ಟಿದ ಅಗ್ನಿಯೆ ಕಳೆ.
ಉಚ್ಛ್ವಾಸ ನಿಶ್ವಾಸದಿಂದ ಹುಟ್ಟಿದ ಚಂದ್ರಸೂರ್ಯರೇ ಅರಿವು ಮರವೆ.
ಬುದ್ಧಿಯಿಂದ ಹುಟ್ಟಿದ ಆತ್ಮನೆ ಚೈತನ್ಯಾತ್ಮ.
ಇಂತೀ ಸರ್ವಪ್ರಾಣಿಗಳಿಗೆ ನಮ್ಮ ಬಸವಣ್ಣನೆ ಆದಿ ಕಾಣಿರೇ.

ಆದಿಯಲ್ಲಿ ಹುಟ್ಟಿ, ಮಧ್ಯದಲ್ಲಿ ಬೆಳೆದು, ಅಂತ್ಯದಲ್ಲಿ ಲಯವನೆಯ್ದಿದರೆ,
ಮತ್ತೆ ನಿಲ್ಲುವದಕ್ಕೆ ನಮ್ಮ ಬಸವಣ್ಣನೆ ಆದಿ ಕಾಣಿರೆ.
ಇಂತೀ ಒಳ ಹೊರಗೆ ಕೈಕೊಂಬರೆ,
ದೇವರು ಬೇರೊಬ್ಬರುಂಟಾದರೆ ಬಲ್ಲರೆ ನೀವು ಹೇಳಿ ತೋರಿರೆ.
ಅಲ್ಲದಿರ್ದರೆ ನಿಮ್ಮ ವೇದಾಗಮಶಾಸ್ತ್ರಪುರಾಣಗಳ ಕೈಯಲ್ಲಿ ಹೇಳಿಸಿರೆ.
ಇಂತೀ ಅನಾದಿಸಂಸಿದ್ಧ ಬಟ್ಟಬಯಲಬ್ರಹ್ಮವೆ ಬಸವನೆಂಬುದಂ
ಕಾಣುತಿರ್ದು ಕೇಳುತಿರ್ದು ಹೇಳುತಿರ್ದು ಅರಿದಿರ್ದು,
ಮತ್ತೆ ಕೀಳುದೈವಂಗಳನಾರಾಧಿಸಿ ಅರ್ಚನೆ ಪೂಜೆಯ ಹಲವು ಚಂದದಲ್ಲಿ ಮಾಡಿ,
ಹಲವು ಜಾತಿ ಹಲವುದರುಶನವೆನಿಸಿಕೊಂಡು
ಹೊಲಬುದಪ್ಪಿದಿರಿ, ಹುಲುಮನುಜರಿರಾ.
ಇನ್ನಾದರೂ ಅರಿದು ನೆನದು ಬದುಕಿ,
ನಮ್ಮ ಬಸವಪ್ರಿಯ ಕೂಡಲ[ಚೆನ್ನ ] ಸಂಗಮದೇವನ ಶ್ರೀಪಾದಪದ್ಮವ. ||೨೦||

೨೮೭

ಆಧಾರಚಕ್ರದಲ್ಲಿ ನಕಾರವೆಂಬ ಬೀಜಾಕ್ಷರವಿಹುದು,
ಅಲ್ಲಿ ಬ್ರಹ್ಮನು ಉತ್ತರಖಂಡಣೆಯೆಂಬ ವೇದವನುಚ್ಚರಿಸುತ್ತಿಹನು.
ಸ್ವಾಧಿಷ್ಠಾನಚಕ್ರದಲ್ಲಿ ಮಕಾರವೆಂಬ ಬೀಜಾಕ್ಷರವಿಹುದು,
ಅಲ್ಲಿ ವಿಷ್ಣು ಪ್ರೌಢಲಕ್ಷಿತವೆಂಬ ವೇದವನುಚ್ಚರಿಸುತ್ತಿಹನು.
ಮಣಿಪೂರಕಚಕ್ರದಲ್ಲಿ ಶಿಕಾರವೆಂಬ ಬೀಜಾಕ್ಷರವಿಹುದು,
ಅಲ್ಲಿ ರುದ್ರನು ಋಗ್ವೇದವನುಚ್ಚರಿಸುತ್ತಿಹನು.
ಅನಾಹತಚಕ್ರದಲ್ಲಿ ವಕಾರವೆಂಬ ಬೀಜಾಕ್ಷರವಿಹುದು,
ಅಲ್ಲಿ ಈಶ್ವರನು ಯಜುರ್ವೇದವನುಚ್ಚರಿಸುತ್ತಿಹನು.
ವಿಶುದ್ಧಿಚಕ್ರದಲ್ಲಿ ಯಕಾರವೆಂಬ ಬೀಜಾಕ್ಷರವಿಹುದು,
ಅಲ್ಲಿ ಸದಾಶಿವ ಸಾಮವೇದವನುಚ್ಚರಿಸುತ್ತಿಹನು.
ಆಜ್ಞಾಚಕ್ರದಲ್ಲಿ ಓಂಕಾರವೆಂಬ ಬೀಜಾಕ್ಷರವಿಹುದು,
ಅಲ್ಲಿ ಉಪಮಾತೀತನು ಅಥರ್ವಣವೇದವನುಚ್ಚರಿಸುತ್ತಿಹನು.
ಬ್ರಹ್ಮರಂಧ್ರದಲ್ಲಿ ಅಕಾರ ಉಕಾರ ಮಕಾರವೆಂಬ ಬೀಜಾಕ್ಷರವಿಹುದು,
ಅಲ್ಲಿ ಪ್ರಕೃತಿ ವಿಕೃತಿಗಳು ಗಾಯತ್ರಿಯನುಚ್ಚರಿಸುತ್ತಿಹವು.
ಇಂತಿವೆಲ್ಲವನರಿದು ಮರದು,
ನಿಜಲಿಂಗ ನಿಜಮಂತ್ರಂಗಳಲ್ಲಿ ಪರವಶವಾಗಿರ್ದನು ಕಾಣಾ,
ಬಸವಪ್ರಿಯ ಕೂಡಲಚೆನ್ನಸಂಗಮದೇವಾ. || ೨೧ ||

೨೮೮

ಉತ್ತಮಾಂಗವೆನಿಸುವ ಶಿರಸ್ಸಿಗೆ ಛತ್ರ್ಯವಿದೆಂದು ಹೇಳಿತ್ತು ವೇದ.
ನೆಟ್ಟನೆ ಶಿವನಡಿಗೆರಗುವುದು, ಮತ್ತನ್ಯದೈವಕ್ಕೆರಗಲಾಗದೆಂದುದು ವೇದ.

ಓಂ ಯಸ್ಮೈನಮಃ ಸಚ್ಛಿರೋಧರ್ಮ ಮೂರ್ಧ್ನಿ ನಾನಾಬ್ರಹ್ಮೋತ್ತರಾ ।
ಹನು ಯಜ್ಞೋದರಾ ವಿಷ್ಣು ಹೃದಯಂ ಸಂವತ್ಸರ ಪ್ರಜನನವ್ ॥
ಎಂದುದಾಗಿ, ಬಸವಪ್ರಿಯ ಕೂಡಲಚೆನ್ನಸಂಗಯ್ಯನಲ್ಲದೆ
ಮತ್ತನ್ಯದೈವಕ್ಕೆರಗಿದಡೆ, ನಾಯಕನರಕ ತಪ್ಪದು. ॥ ೨೨ ॥

೨೮೯

ಉದಯಕಾಲ ಮಧ್ಯಾಹ್ನಕಾಲ ಅಸ್ತಮಯಕಾಲದಲ್ಲಿ,
ತನ್ನ ಇಷ್ಟಲಿಂಗಕ್ಕೆ ಅಷ್ಟವಿಧಾರ್ಚನೆ ಷೋಡಶೋಪಚಾರವ
ಮಾಡುವಾತನೆ ಸದ್ಭಕ್ತನು.
ಇಂತೀ ತ್ರಿಕಾಲದಲ್ಲಿ ಲಿಂಗಾರ್ಚನೆಯ ಮಾಡುವಲ್ಲಿ,
ಹಿಂದಣ ಕ್ರೀಯಿಂದ ಮಾಡಬೇಕು.
ಅಂತಲ್ಲದೆ ಸುಮ್ಮನೆ ಲಿಂಗಾರ್ಚನೆಯ ಮಾಡುವಾತ,
ಭಕ್ತನಲ್ಲ, ಮಾಹೇಶ್ವರನಲ್ಲ, ಪ್ರಸಾದಿಯಲ್ಲ,
ಪ್ರಾಣಲಿಂಗಿಯಲ್ಲ, ಶರಣನಲ್ಲ ಐಕ್ಯನಲ್ಲ.
ಅವನು ಶ್ರೀಗುರುವಿನಾಜ್ಞೆಯ ಮೀರಿದವನು,
ಪಂಚಮಹಾಪಾತಕನು, ಲಿಂಗಚೋರಕನು.
ಇದನರಿದು ತ್ರಿಸಂಧ್ಯಾಕಾಲದಲ್ಲಿ
ತನ್ನ ಇಷ್ಟಲಿಂಗಕ್ಕೆ ಅಷ್ಟವಿಧಾರ್ಚನೆ ಷೋಡಶೋಪಚಾರದಿಂದ
ಹಿಂದಣ ಕ್ರೀವಿಡಿದು ಮಾಡುವ ಸದ್ಭಕ್ತಂಗೆ
ನಮೋ ನಮೋ ಎನುತಿರ್ದೆನಯ್ಯಾ,
ಬಸವಪ್ರಿಯ ಕೂಡಲಚೆನ್ನಸಂಗಮದೇವಾ. ॥ ೨೩ ॥

೨೯೦

ಉಪ್ಪರಗುಡಿ ತೋರಣ ಕಟ್ಟಿತ್ತು ಕಲ್ಯಾಣದಲ್ಲಿ,
ಅಷ್ಟದ್ವಾರವಂಗಡಿ ರಾಜವೀಥಿಯೊಳೆಲ್ಲಾ ವ್ಯಾಸನ ಬಾಹುಗಳುಪ್ಪರಿಸಿದವು.
ಎಂಟುಬಾಗಿಲಲ್ಲಿ ನಡೆಮುಡಿಗಳ ಹಾಸಿ,
ಸಂಕಲ್ಪ ಸಂತೋಷವ ಮಾಡಿದನು ವೃಷಭೇಶ್ವರನು,
ಬಸವಪ್ರಿಯ ಕೂಡಲಚೆನ್ನಸಂಗಯ್ಯ ಬಂದಾನೆಂದು, ॥ ೨೪ ॥

೨೯೧

ಎನ್ನ ತನು ನಿಮ್ಮ ಸೇವೆಯಲ್ಲಿ ಸವೆದು,
ಎನ್ನ ಮನ ನಿಮ್ಮ ನೆನಹಿನಲ್ಲಿ ಸವೆದು,
ಎನ್ನರಿವು ನಿಮ್ಮ ಘನದೊಳಗೆ ಸವೆದು, ನಿಶ್ಚಲ ನಿಜೈಕ್ಯವಾಗಿ,
ಬಸವಪ್ರಿಯ ಕೂಡಲಚೆನ್ನಸಂಗಯ್ಯಾ,
ನೀ ನಾನೆಂಬುದೇನಾಯಿತ್ತೆಂದರಿಯೆನು. ॥ ೨೫ ॥

೨೯೨

ಎನ್ನ ಸದ್ಗುರು ತನ್ನ ಕರಕ್ಕೆ ಮಹತ್ತಪ್ಪ ಲಿಂಗದೊಳಗೆ
ಆ ಮಹಾಘನ ಗುರುವಪ್ಪ ಪರಶಿವ ಮೂರ್ತಿಗೊಂಡನು.
ಆ ಮೂರ್ತಿಯ ನಿಶ್ಶೈಸಲೆಂದು ಪ್ರಸನ್ನಿಸಿದವು.
ಶ್ರೀವಿಭೂತಿ ರುದ್ರಾಕ್ಷಿಗಳೆಂಬ ಜ್ಯೋತಿ ಲಿಪಿಯ ಮುದ್ರೆಗಳು.
ಇಂತಪ್ಪ ದಿವ್ಯಸಾಧನವಿಡಿದು, ಆತನ ಕರಸ್ಥಲದೊಳೊಪ್ಪುತಿಪ್ಪ
ದಿವ್ಯವಸ್ತುವ ಕಾಣಲೊಲ್ಲದೆ,
ಅಜ್ಞಾನವಶದಿಂದ ಕೈವಶವಾದ ವಸ್ತುವ ಬಿಟ್ಟು,
ಅತ್ತ ಬೇರೆ ವಸ್ತುವುಂಟೆಂದು ಬಯಲನಾಹ್ವಾನಿಸಿ,
ಅಲ್ಲಿ ವಸ್ತುವಿನ ನಿಶ್ಚಯವ ಕಾಣದೆ,
ಭವ ಭವದ ಲೆಂಕರಾಗಿ ಬರಿದೆ ಬಳಲುತ್ತಿಪ್ಪ
ಈ ತಾಮಸಜೀವಿಗಳಿಗೆ ಲಿಂಗದ ಹಂಗಿನ್ನೇತಕಯ್ಯಾ,
ಬಸವಪ್ರಿಯ ಕೂಡಲಚನ್ನಸಂಗಮದೇವಾ. ॥ ೨೬ ॥

೨೯೩

ಎಲ್ಲರಿಗಿಂದಧಿಕವು ಪುರಾತನರೆಂದು ಶರಣು ಶರಣೆನುತಿದೆ ವೇದ,
ಶರಣೆಂದು ಸಾರುತಿದೆ ವೇದ ನೋಡಾ.
ಓಂ ಅಥೋ ಯೇ ಅಸ್ಯ ಸತ್ವಾನೋಹಂ ತೇಭ್ಯೋಕರನ್ನಮಃ ।
ಪ್ರಮುಂಚ ಧನ್ವನಸ್ತ್ವಮುಭಯೇರಾತ್ನಿ ಯೋರ್ಜ್ಯಾಂ
ಯಾಶ್ಚತೇ ಹಸ್ತ ಇಷವಃ ಪರಾತಾ ॥
ಎಂಬ ಶ್ರುತಿ, ಬಸವಪ್ರಿಯ ಕೂಡಚನ್ನಸಂಗಾ,
ಸದ್ಭಕ್ತರಿಗೆ ಶರಣೆನುತ್ತಿದೆ ವೇದ. ॥ ೨೭ ॥

೨೯೪

ಎಲ್ಲಾ ಪುರಾತರ ಚರಣಕೆ ಇಲ್ಲಿರ್ದೆ ಶರಣೆಂದಡೆ ಸಾಲದೆ ?
ಬಸವಾ, ಬಸವಪ್ಪ, ಬಸವಯ್ಯ ಶರಣೆಂದಡೆ ಸಾಲದೆ ?
ಎಲ್ಲರ ಹೃದಯದಲ್ಲಿ ಜ್ಯೋತಿಯಂತೆ ಬೆಳಗುತಿಪ್ಪ
ಮಹಾಮಹಿಮ ನೀನಾಗಿ, ಎನಗಿದೇ ದಿವ್ಯಮಂತ್ರ.
ಬಸವಪ್ರಿಯ ಕೂಡಲಚೆನ್ನಸಂಗಯ್ಯನಲ್ಲಿ
ಬಸವಾ, ಬಸವಾ, ಬಸವಾ ಶರಣೆಂದ[ಡೆ] ಸಾಲದೆ ? ॥ ೨೮ ॥

೨೯೫

ಎಲೆ ನಿರೀಶ್ವರವಾದಿಗಳಿರಾ ನೀವು ಕೇಳಿರೆ :
ನಿಮ್ಮ ನಿಟಿಲತಟದಲ್ಲಿ
ಸಂಚಿತ ಪ್ರಾರಬ್ಧ ಆಗಾಮಿಯೆಂಬ ಲಿಖಿತವ ಬರೆದವರಾರು ? ಕೇಳಿರೆ.

ನೀವು ನೀವೇ ಬ್ರಹ್ಮವು, ಬೇರೆ ಈಶ್ವರನಿಲ್ಲೆಂದು ನುಡಿವಿರಿ.
ತಪಸ್ಸು ತನ್ನಂತೆ ಊಟ ಮನದಿಚ್ಛೆಯೆಂಬ ಗಾದೆಯ ಮಾತು ನಿಮಗಾಯಿತ್ತು,
ಅನ್ನವನುಂಡು, ವ್ಯಸನಕ್ಕೆ ಹರಿದು, ವಿಷಯಂಗಳೆಂಬ ಹಿಡಿಮಲಕ್ಕೆ ಸಿಕ್ಕಿ,
ಪಂಚೇಂದ್ರಿಯಂಗಳೆಂಬ ನಾಯಿಗಳಿಚ್ಛೆಗೆ ಹರಿದು,
ನಾಯಾಗಿ ಬಗಳಿ, ನಾಯಡೋಣಿಯಲುಂಡು ನಾಯಿಸಾವು ಸಾವ
ಅದ್ವೈತಿಗಳಿರಾ,
ನಿಮಗೇಕೋ ಬೊಮ್ಮದ ಮಾತು ?
ಬ್ರಹ್ಮ ವಿಷ್ಣ್ವಾದಿಗಳು ಬ್ರಹ್ಮೋSಹಮೆಂದು
ಕೆಮ್ಮನೆ ಕೆಟ್ಟು, ಹದ್ದು ಹೆಬ್ಬಂದಿಗಳಾದುದನರಿಯಿರೆ.
ಹಮ್ಮಿನಿಂದ ಸನತ್ಕುಮಾರ ಒಂಟೆಯಾದುದನರಿಯಿರೆ.
ಕರ್ತನು ಭರ್ತನು ಹರ್ತನು ಶಿವನಲ್ಲದೆ
ಬೇರೆ ಕಾವಲ್ಲಿ ಕೊಲುವಲ್ಲಿ ಮತ್ತೊಬ್ಬರುಳ್ಳರೆ ಹೇಳಿರೆ.
ಅದೆಂತೆಂದಡೆ :
ತ್ವಂ ವಿಶ್ವಕರ್ತಾ ತವ ನಾಸ್ತಿ ಕರ್ತಾ ತ್ವಂ ವಿಶ್ವಭಕ್ತಾ ತನ್ನ ತವ ನಾಸ್ತಿ ಭರಾ ।
ತ್ವಂ ವಿಶ್ವಹರ್ತಾ ತವ ನಾಸ್ತಿ ಹರ್ತಾ ತ್ವಂ ವಿಶ್ವನಾಥಸ್ತವ ನಾಸ್ತಿ ನಾಥಃ ॥
ಎಂದುದಾಗಿ, ಶಿವನೇ ನಿಮ್ಮನಿಲ್ಲೆಂದು,
ಬೊಮ್ಮ ತಾವೆಂಬ ಹಮ್ಮಿನ ಅದ್ವೈತಿಗಳ ಹಿಡಿದು,
ಕಾಲನ ಕೈಯಲ್ಲಿ ಕೆಡಹಿ, ಬಾಯಲ್ಲಿ ಹುಡಿಯ ಹೊಯಿಸಿ,
ನರಕಾಗ್ನಿಯಲ್ಲಿ ಅಕ್ಷಯಕಾಲವಿರಿಸದೆ ಮಾಣ್ಬನೆ,
ನಮ್ಮ ಬಸವಪ್ರಿಯ ಕೂಡಲಚೆನ್ನಸಂಗಮದೇವ. ॥ ೨೯ ॥

೨೯೬

ಎಲೆ ವೈದಿಕರಿರಾ, ನಿಮಗೆ ಸತ್ವಬಲ ವೇದವಲ್ಲದೆ ಮತ್ತೇನೂ ಇಲ್ಲ.
ಆ ವೇದವೆ ಸ್ವಯಂಭುಯೆಂದು ನುಡಿವಿರಿ,
ನಾ ನಿಮಗೆ ತಿಳಿಯ ಪೇಳುವೆ.
ಆದಿಸಿದ್ಧಾಂತವಿಡಿದು ವೇದ ಸ್ವಯಂಭುವಲ್ಲ,
ಆದಿಮೂಲ ಶಿವನಿಂದಾದವೀ ವೇದಂಗಳು ಕೇಳಿರೆ.
ಶಿವನಿಂದಾದ ಮೂವತ್ತಾರುತತ್ತ್ವದೊಳೈದನೆಯದು ಆಕಾಶತತ್ತ್ವವು.
ಆ ಆಕಾಶತತ್ತ್ವದಿಂದಾದ ಶಬ್ದ ವಿಷಯವು ನಿತ್ಯವೆ ಹೇಳಿರೆ.
ಪಂಚಭೂತಂಗಳೊಳಗೊಂದು ಭೂತವಿಷಯವಾ ಶಬ್ದ.
ಆ ಶಬ್ದ ಸಂಬಂಧವಾದ ವೇದಕ್ಕೆ ನಿತ್ಯವೆಲ್ಲಿಯದು ಹೇಳಿರೆ.
ಆ ವೇದ ತನಗೆ ತಾನಾದುದೆಂಬಿರೆ.
ಎಂಬಿರಾದಡೆ ಪ್ರಳಯಾಂತಕಾಲದಲ್ಲಿ ಅಳಿಯವೀ ವೇದಾದಿ ವಿದ್ಯೆಗಳು.
ಜಗತ್ ಸೃಷ್ಟಿಕಾಲದಲ್ಲಿ ಆದಿಕರ್ತಾರ ಸೃಷ್ಟಿ ಸ್ಥಿತಿ ಲಯ

ಪ್ರೇರಕಶಿವನಿಂದಾದವು ಕೇಳಿರೆ.
ಚರಣಬಹ ಸೂಕ್ತಿಗಳಲ್ಲಿ ಕೇಳ್ದರಿಯಿರೆ.
ಋಗ್ವೇದಕ್ಕೆ ದೇಹ ಉರುವರ್ಣ, ಅತ್ರಿಗೋತ್ರ,
ಗಾಯತ್ರಿ ಛಂದ, ಅಧಿದೇವತೆ ಬ್ರಹ್ಮ
ಯಜುರ್ವೇದಕ್ಕೆ ಅಬ್ಜದಳಾಯತ ನೇತ್ರ,
ಕುಂಚಿತ ಚಿಬುಕು ಮುಂಗೂರ ಮೀಸೆ, ತಾಮ್ರವರ್ಣದೇಹ,
ಭಾರದ್ವಾಜಗೋತ್ರ, ತ್ರಿಷ್ಟುಪ್ ಛಂದ, ಅಧಿದೇವತೆ ವಿಷ್ಣು
ಸಾಮವೇದಕ್ಕೆ ದೇಹ ಶ್ವೇತವರ್ಣ, ಕಾಶ್ಯಪಗೋತ್ರ,
ಜಗತಿ ಛಂದ, ಅಧಿದೇವತೆ ಈಶ್ವರನು.
ಧವಳಶೃಂಗವೆರಡು ಅಥರ್ವಣವೇದಕ್ಕೆ ದೇಹ,
ಕೃಷ್ಣವರ್ಣ, ವೈಭಾನುಗೋತ್ರ,
ಅನುಷ್ಟುಪ್ ಛಂದ, ಅಧಿದೇವತೆ ಇಂದ್ರನು.
ಇಂತು ಶ್ರುತಿಗಳಿಗೆ ಶರೀರವರ್ಣ, ಗೋತ್ರ, ಛಂದ, ಅಧಿದೇವತೆಗಳಿಂತಿರಲು,
ತಮಗೆ ತಾವಾದವೆಂದು ನೀವು ನುಡಿವ ಪರಿ ಹೇಗೆ ಹೇಳಿರೆ ವೈದಿಕರಿರಾ.
ಇವೇ ನಿತ್ಯವೆಂಬಿರಾದಡೆ ಲಯಗವುನಸ್ಥಿತಿಯುಂಟು ಕೇಳಿರೆ.
ಹೃದಯ ದೈವ ಗಾಯಿತ್ರಿ ಸರ್ವವೇದೋತ್ತಮೋತ್ತಮ
ಲಿಯಂಕೇ ಮೂರ್ಧ್ನಿ ವೈವೇದಾಸಷದೊ
ಎನಲು, ಆತ್ಮದೃಷ್ಟಿ ನೇತ್ರದೃಷ್ಟಿಯ ಪ್ರಮಾಣದಿಂ
ನಮ್ಮ ಟರುರಿವಿಂದರಿದೆವೆಂಬರೆ,
ನಿಮ್ಮ ನೀವರಿಯದವರು ಈ ಜಗದಾದಿಯನೆಂತರಿದಿರೆನಲು,
ಜ್ಞಾನಸಾಧನವಹ ಶಾಸ್ತ್ರಾದಿಗಳಿಂದ ಜ್ಞಾನೇಂದ್ರಿಯ
ಪ್ರಮಾಣ ನೇತ್ರದಿಂದರಿದವೆನಲು,
ನಿಮಗೆ ಜ್ಞಾನೇಂದ್ರಿಯ ಸಾಧನ ನೇತ್ರಗಳೆಲ್ಲಿಯವು.
ಈಶ್ವರನ ನಯನಾಶ್ವವೆನಿಸುವ ರವಿಚಂದ್ರಾಗ್ನಿ ತೇಜಸ್ಸಿಂದಲ್ಲದೆ,
ಜಾತ್ಯಂಧರು ನೀವು ನಿಮಗೆಲ್ಲಿಯ ದೃಷ್ಟಿವಾಳತನ.
ಅತಿಮತಿವಂತರೆನಿಸುವ ದೇವತೆಗಳುಂ ಕಾಣಲರಿಯರು.
ಮತಿವಿಕಳರು ನೀವು ಕಾಣಲರಿದಿರೆಂತು ಜಗದಾಗುಹೋಗುಗಳ.
ನೋಡಿಯರಿದೆವೆನಲು ಜಗವನಾಡಿ ನೀವು ಮೊನ್ನಿನವರು,
ಸಾಮಾನ್ಯಮನುಜರು :
ಜಗದನಾದಿಯ ನೀವೆಂತರಿದಿರೆನಲು, ಅದು ಕಾರಣ,
ಜಗ ನಿರ್ಮಾಣಕ ಜಗ ಭ್ರಮಣ ಲೀಲಾಲೋಲ ಜಗದಂತರ್ಯಾಮಿ
ಜಗತ್ರೈರಕ್ಷಕನೊಬ್ಬನೆಯರಿವ ನಿಮಗರುವಿಲ್ಲೆನಲು,
ವೇದ ಶಾಸ್ತ್ರಾಗಮಾದಿಗಳಿಂ ಪ್ರಮಾಣಿಸಿ ಅರಿದೆವೆನಲು,
ನಿಮಗೆ ಶ್ರುತಿ ಪ್ರಮಾಣ ಯೋಚನೆಯದೆಲ್ಲಿಯದು

'ಜಗತಾಂ ಪತಯೇ ನಮಃ' ಎಂದು ಶ್ರುತಿಯಿರಲು,
ಇದು ಕಾರಣ, ವೇದಾದಿಶಾಸ್ತ್ರಂಗಳಿಂದ ನಿಮಗೇನು ಆಗದು,
ಪಾತಕರರುಹಿರಲ್ಲದೆ.
ಶ್ರುತಿಃ 'ಶಿವೋ ಮಾಯೇವ ಪಿತರೌ'
ಎನಲು, ಶಿವನೇ ವೇದಂಗಳಿಗೆ ತಂದೆ ತಾಯಾಗಿಗಲು,
ಜಗತ್ತಿಂಗೊಡೆಯನಾಗಿರಲು, 'ಪಿತಾತದಸ್ಯಮಾ' ಎಂದು ಪಿತನೆ ಶಿವನು
ತಾಯಿಪುತ್ರರೆಂದೆನಲು,
ವೇದಸ್ವಯಂಭು ಜಗನಿತ್ಯವೆಂಬ ಪರಿಯೆ ಹೇಂಗೆ ಹೇಳಿರೆ.
ಪೂರ್ವದಲ್ಲಿ ವೇದಪುರುಷರು, ಶಾಂಭವವ್ರತಿಗಳು, ಪಾಶುಪತವ್ರತಸ್ಥರು,
ಶಿವಸಿದ್ಧಾಂತ ಭಕ್ತಿನಿಷ್ಠಾ ಸಾವಧಾನವ್ರತರು. ವೇದಾಧಾರಯಂತಿ ಎನಲು,
ರುದ್ರಾಕ್ಷಧಾರಣ ಚತುರ್ವಿಧವ್ರತಿಗಳಿಗೆ ಮುಖ್ಯ
ತ್ರಿಯಾಯುಷಂ ಜಮದಗ್ನೇಃ ಕಶ್ಯಪಸ್ಯತ್ರಿಯಾಯುಷಂ।
ಅಗಸ್ತ್ಯ ತ್ರಿಯಾಯುಷಂ ಯದ್ದೇವಾನಾಂ ತ್ರಿಯಾಯುಷಂ।
ತನ್ಮೇ ಅಸ್ತು ತ್ರಿಯಾಯುಷಂ' ಎನಲು,
ಭಸ್ಮಾವಾಲಿಪ್ತರು ತ್ರಿಪುಂಡ್ರಾಂಕಿತನಿಷ್ಠರಾಗಿರದೆ,
'ವೇದಾಶ್ಚಕಾವಯಂತಿ' ಎನಲು, 'ತದಾಸ್ಮಾಮಿ' ಎನಲು,
ತದಾಸ್ಮಾಮಿಯನೆ ಶಿವಚರಣಸಲಿಲ ಪ್ರಸಾದ ಸುಭೋಗ
ಸಾವಧಾನಿಗಳೆಂದು ತಾವೆ ಹೇಳುತ್ತಿರಲು,
ವೇದಾಗಮಶಾಸ್ತ್ರಗಳಿಗೂ ಪಂಚಾಕ್ಷರಿಮಂತ್ರಗಳಲ್ಲಿಯೆ
ಉದಯ ಸ್ಥಿತಿಲಯವೆನ್ನುತಿರಲು,
ನೀವಾ ವೇದಂಗಳ ಸ್ವಯಂಭೂಯೆಂದೂ ನಿತ್ಯವೆಂದೂ ಜಗವನೆನಬಹುದೆ.
ಅದು ಕಾರಣ, ಈ ಜಗಂಗಳನು ತನ್ನ ಲೀಲೆಯಿಂದಲೆ ನಿರ್ಮಿಸುವ ಭವನೆನಿಸಿ,
ತನ್ನ ಲೀಲೆಯಿಂದಲೆ ರಕ್ಷಿಸುವ ಮೃಡನಾಗಿ,
ತನ್ನ ಲೀಲೆ, ಈ ಲೀಲೆಯಿಂದಲೆ ಸಂಹರಿಸುವ ಹರನಾಗಿ,
ಲೀಲಾತ್ರಯರಹಿತನಾಗಿ ಶಿವನೆನಿಸುವ, ॥ ಶ್ರುತಿ ॥
'ಆದಿ ವೇದಸ್ಯ ಶಾಸ್ತ್ರಾಣಿ ಮಂತ್ರ ಪಂಚಾಕ್ಷರೇ ಸ್ಥಿತಾ' ಎಂದುದಾಗಿ,
ಇದು ಕಾರಣ, ಉದ್ಭೈಸುವ ರಕ್ಷಿಸುವ ಸಂಹರಿಪ ಭವಮೃಡಹರನಾದ
ಶಿವನಿರಲು,
ನೀವು ವೇದಸ್ವಂಯುಂಭು ಜಗನಿತ್ಯವೆನಲಾಗದು.
॥ಶ್ರುತಿ॥ 'ಪರವೋ ಭವಂತಿ' ಎನಲು, ವೇದ ದೇವತಾ ಸೃಷ್ಟಿಯೆನಲು,
ಈಹಿಂಗೆ ವೇದಂಗಳು ಶಿವನಿಂದ ತಮಗೆ ಉದಯಸ್ಥಿತಿಲಯವೆನಲು,
ಈ ಜಗ ಸೃಷ್ಟಿಸ್ಥಿತಿಲಯ ಕಾರಣ ಸರ್ವಜ್ಞ ಸರ್ವೇಶ್ವರ ಸರ್ವಕರ್ತು
'ಏಕ ಏವ ರುದ್ರೋ ನ ದ್ವಿತೀಯಾಯ ತಸ್ಥೇ' ಎನಲು,
ಒಬ್ಬನೆ ಶಿವನು ಎರಡೆನಿಪ ದೇವರಾರುಯಿಲ್ಲವೆಂದರಿದಿರಿ.

ವೈದಿಕರಿರಾ, ವೇದಸ್ವಯಂಭುವಲ್ಲ ಶಿವನ ಶಿಶುಗಳು. ಜಗವು ನಿತ್ಯವಲ್ಲ,
ಶಿವನ ಆಜ್ಞಾವಶವರ್ತಿಗಳು. ಅಹಂಗಾಗಲದಕ್ಕೇನು
ವೈದಿಕಾಚರಣೆಯನಾಚರಿಸುವ ವೈದಿಕ ವ್ರತಿಗಳಿಗೆ
ಸಾಧನವೆನಿಸುವ ವೇದಮಂತ್ರಂಗಳೆ ದೈವವೆನಲು,
ವೇದಂಗಳೆ ದೈವವಾದಡೆ ಪಕ್ಷೀಶ್ವರನ ಕೈಯ ಸಿಲುಕುವುದೆ.
ವೇದವೆ ದೈವವಾದಡೆ ಮುನೀಶ್ವರನಿಂದ ಅಳಿದುಹೋಗಿ
ವೇದವ್ಯಾಸನಿಂದ ಪ್ರತಿಷ್ಠಿತವಹುದೆ.
ವೇದವೆ ದೈವವಾದಡೆ ಶುನಕನಪ್ಪುದೆ, ವೇದವೆ ದೈವವಾದಡೆ ದಕ್ಷನಳಿವನೆ.
ವೇದವೆ ದೈವವಾದಡೆ ತಮ್ಮಜನ ಶಿರಹೋಹಂದು ಸುಮ್ಮನಿಹವೆ.
ವೇದವೆ ದೈವವಾದಡೆ ಕವಿತೆಗೊಳಗಾಹುದೆಯೆಂದು ಎನಲು,
'ಆಘ್ರಾಯಘ್ರಾಯಾವದಂತಿ ವೇದ ಶ್ವಾನಶ್ಮನೈಶ್ಚನೈಃ
ಯತ್ಸದಾನಿಮಹಾದಿವಾಂತಂ ವಂದೇ ಶಭರೇಶ್ವರಂ' ಇಂತೆಂದುದಾಗಿ,
ಇದು ಕಾರಣ,
ಶಿವನೇ ಸ್ವಯಂಭು ನಿತ್ಯವೆಂದರಿದ ವಿಪ್ರರೇ ವೈದಿಕೋತ್ತಮರು,
ಬಸವಪ್ರಿಯ ಕೂಡಲಚೆನ್ನಸಂಗಯ್ಯ. ॥ ೩೦ ॥

೨೯೭

ಎಲೆ ಸಿದ್ಧರಾಮಯ್ಯಾ, ಬಸವಣ್ಣನೆ ಶಿವನು, ಶಿವನೆ ಬಸವಣ್ಣನಾದನಯ್ಯಾ.
ಬಸವಣ್ಣ ಚನ್ನಬಸವಣ್ಣ ಪ್ರಭುದೇವರು ಮಡಿವಾಳಯ್ಯ
ಮುಖ್ಯವಾದ ಏಳ್ನೂರೆಪ್ಪತ್ತಮರಗಣಂಗಳ
ಶ್ರೀಪಾದಕ್ಕೆ ಅಹೋರಾತ್ರಿಯಲ್ಲಿ ನಮೋ ನಮೋ
ಎನುತಿರ್ದೆನಯ್ಯಾ, ಬಸವಣ್ಣಪ್ರಿಯ ಕೂಡಲಚೆನ್ನಸಂಗಮದೇವಾ. ॥ ೩೧ ॥

೨೯೮

ಒಂದು ಎರಡಹುದೆ ? ಎರಡು ಒಂದಹುದೆ ?
ಒಂದು ಒಂದೇ, ಎರಡು ಎರಡೇ.
ಅದು ಕಾರಣ, ಶಿವನು ತನ್ನ ಲೀಲಾಕಾರಣವಾಗಿ ಮಾಯಾ ನಿರ್ಮಿತವಂ ಮಾಡಿ,
ಆ ಮಾಯಾರಚನೆಯಿಂದಾದ ಬ್ರಹ್ಮಾಂಡ ಸಂದೋಹ,
ಹರಿ ವಿರಿಂಚಿ ಸುರಪತಿ ಸುರಾಸುರರು ನರನಿಕರ,
ಖಗಮೃಗ ಜೀವರಾಶಿಗಳೆಲ್ಲವೂ ಶಿವನಿಂದಲಾಗಿ,
ಶಿವನಿಂದ ಹೊರೆಯಿಸಿಕೊಂಡು, ಶಿವನಿಂದವೆ ಹೋದವೆಂದಡೆ,
ಅವರ ಆಗು ಹೋಗು ಇರವು ಹೋಗಿನೊಳಗೆ
ಲಯ ಗಮನ ಸ್ಥಿತಿ ಶಿವಂಗುಂಟೆ, ಎಲೆ ಮರುಳಗಳಿರಾ ?
ಗಗನದಲ್ಲಿ ತೋರಿದ ಮೇಘವು ಗಗನದಲ್ಲಿ ಅಡಗಿದವೆಂದಡೆ,
ಆ ಗಗನ ತಾ ಮೇಘವೆ ?

ತನ್ನಾಧೀನಶಕ್ತಿದಂಡದಿಂ ಕುಂಬಾರ ಚಕ್ರವ ತಿರುಗಿಸಲು,
ಆ ಚಕ್ರಭ್ರಮಣ ಚೈತನ್ಯವು ಆ ಕುಂಬಾರನೆ, ಮರುಳುಗಳಿರಾ ?
ಆ ಚೈತನ್ಯ ಅಡಗುವುದೆ ? ನಿಲ್ಲು ಮಾಣು.
ಬಿಲ್ಲ ನಾರಿಗೆ ಅಂಬಂ ಸಂಧಾನಿಸಿ ಎಸೆಯಲಾ,
ಅಂಬು ಹರಿದ ಚೈತನ್ಯ ಬಿಲ್ಲು ಕಾರಣವೆ ? ಅಲ್ಲ, ನಿಲ್ಲು, ಮಾಣು.
ಇವೆಲ್ಲವು ಚೈತನ್ಯಂಗಳು. ಅಂತು ಸರ್ವವೆಲ್ಲವು ತೋರಿಯಡಗುವುದು.
ಸರ್ವೇಶ್ವರನು, ಸರ್ವಕರ್ತೃ, ಸರ್ವಚೈತನ್ಯ, ಸೂತ್ರಯಂತ್ರವಾಹಕ ಶಿವನು.
ಸರ್ವಲಯ ಗಮನ ಸ್ಥಿತಿ ತನಗುಂಟೆ ?
ನಿಲ್ಲು, ಮಾಣಿರೆ, ಎಲೆ ಜಡಜೀವಿಗಳಿರಾ.
ಗಗನದ ರವಿ ಕಿರಣದಿಂದ ಸಕಲರೂಪಿತ ದ್ರವ್ಯಪದಾರ್ಥಂಗಳಲ್ಲಿ
ಪ್ರತಿಪ್ರಭೆ ತೋರಲು, ಆ ಪ್ರತಿಪ್ರಭೆಯ ಆಗುಹೋಗಿನ ಸ್ಥಿತಿಗತಿ
ಆ ಗಗನದ ಸೂರ್ಯಂಗುಂಟೆ, ಎಲೆ ಜಡಜೀವಿಗಳಿರಾ ?
ಈ ಪರಿಯಲೆ ವಿಶ್ವವೆಲ್ಲವಕ್ಕೂ ತಾನಲ್ಲದ ತಾನಿಲ್ಲದ
ಪ್ರೇರಣ ಚೈತನ್ಯವೇ ವಿಶ್ವದ ನಯನ, ವಿಶ್ವದ ಮುಖ,
ವಿಶ್ವದ ಬಾಹು, ವಿಶ್ವದ [ಚ]ರಣ, ಸ್ವರ್ಗಮರ್ತ್ಯ
ಭುವನಾದ್ಯಂಗಳ ಮೂಲಚೈತನ್ಯಸೂತ್ರ ತಾನಲ್ಲದೆ,
ತಾನಿಲ್ಲದೆ ಆಡಿಸುವ ಸೂತ್ರಾತ್ಮಕನಲ್ಲದೆ ಅವರಾಗು ತನಗುಂಟೆ,
ಎಲೆ ಭ್ರಮಿತರಿರಾ ?
'ವಿಶ್ವತಶ್ಚಕ್ಷುರುತ ವಿಶ್ವತೋಮುಖೋ ವಿಶ್ವತೋ ಬಾಹುರುತ ವಿಶ್ವತಸ್ಪಾ
ಪಾತ್ ।
ಸಂ ಬಾಹುಭ್ಯಾಂಧಮತಿ ಸಂಪತತ್ರೈರ್ದ್ಯಾವಾ ಭೂಮೀ ಜನಯನ್ ದೇವ ಏಕಃ
ಎನಲು,
'ಈಶಾನಃ ಶಿವ ಏಕೋದೇವಃ ಶಿವಂ ಕರಃ
ತತ್ಸರ್ವಮನ್ಯತ್ ಪರಿತ್ಯಜೇತ್' ಎನಲು,
'ಏಕ ಏವ ರುದ್ರೋ ನ ದ್ವಿತೀಯಾಯ ತಸ್ಥು' ಎನಲು,
ಶಿವನೊಬ್ಬನೇ, ಇಬ್ಬರಿಲ್ಲ.
'ನ ಯಥಾಸ್ತಿ ಕೂರ್ಮರೋಮಾಣಿ, ಶೃಂಗಂ ನ ನರಮಸ್ತಕೇ
ನ ಯಥಾಸ್ತಿ ವಿಯತ್ಪುಷ್ಪಂ ನ ತಥಾಸ್ತಿ ಪರಾತ್ಪರಃ ।'
ನಾಲ್ಕು ವೇದಂಗಳು ಬಿನ್ನವಿಸಿದವು ಕೇಳಿರೇ ಎಲೆ ವಿಪ್ರರಿರಾ.
ಇದನರಿದು, ಬಸವಪ್ರಿಯ ಕೂಡಲಚೆನ್ನಸಂಗಯ್ಯನನೆ
ಧ್ಯಾನಿಸಿ, ನಿರೀಕ್ಷಿಸಿ, ಸ್ತುತಿಸಿ, ಯಜಿಸಿ ಕೃತಾರ್ಥರಾಗಿರೆ
ಎಲೆ ಮರುಳು ವಿಪ್ರರಿರಾ. ॥ ೩೨ ॥

೨೯೯

ಕರ್ಮದಿಂದ ಬೊಮ್ಮದಿಂದ ಪುತ್ರರಿಂದ ಗೋತ್ರದಿಂದ
ಕಳತ್ರಯರಿಂದ ಗತಿಯಾಗದೆಂದು ಸಾರಿತ್ತು ಯಜುರ್ವೇದ.
ಅಪಾಧಿಯನಿಟ್ಟು ನಿರುಪಾಧಿಕನಾಗಿ,
ಅಂಗವಸಾರಾಧಿಸಿ ನಿತ್ಯರಾದರೆಂದು ಸಾರಿತ್ತು ಯಜುರ್ವೇದ.
'ಓಂ ನ ಕರ್ಮಣಾ ನ ಪ್ರಜಾಯಾಧನೇನ ತ್ಯಾಗೇನೈಕೇನ
ಅಮೃತತ್ವಮಾನಶುಃ' ಎಂದುದು ಶ್ರುತಿವಾಕ್ಯ.
ಈ ಪರಿಯಲಿ ವೇದ ಹೊಗಳಲ್ಕೆ,
ಎಮ್ಮ ಪುರಾತನರು ನಡೆದರು, ನಡೆದು ಮೆರೆಯಿತ್ತು, ಕಂಡು ನಂಬರು,
ಬಸವಪ್ರಿಯ ಕೂಡಲಚೆನ್ನಸಂಗಯ್ಯ. || ೩೩ ||

೩೦೦

ಕಾಮಸಂಹಾರಿ, ಹರಿಯಜರಹಂಕಾರ ದರ್ಪಚ್ಛೇದನ ಲಿಂಗವೆಂದೆಂಬರು,
ಅದ ನಾವರಿಯೆವಯ್ಯಾ !
ನಾವು ಬಲ್ಲುದಿಷ್ಟಲ್ಲದೆ ಕಾಮ ಕ್ರೋಧ ಲೋಭ ಮೋಹ ಮಾತ್ಸರ್ಯವಿರಹಿತರು,
ನಮ್ಮ ಜಂಗಮದೇವರು ಕಾಣಿರಯ್ಯಾ !
ಇಹನಾಸ್ತಿ ಪರನಾಸ್ತಿ ಫಲಪಥಕ್ಕೆ ಹೊರಗಾಗಿ ಮಾಡುವ
ಭುಕ್ತಿಯ ಕೊಟ್ಟು, ಮುಕ್ತಿಯನೀವ.
ಚರಿಸಿದಡೆ ವಸಂತ, ನಿಂದಡೆ ನೆಳಲಿಲ್ಲ,
ನಡೆದಡೆ ಹೆಜ್ಜೆಯಿಲ್ಲ. ದಗ್ಧಪಟನ್ಯಾಯ,
ಯಥಾಸ್ವೇಚ್ಛ ತನ್ನ ನಿಲುವು ಅದಾರಿಗೆ ವಿಸ್ಮಯ, ಅಗೋಚರ.
ಚರಾಚರಾ ಸ್ಥಾವರಾತ್ಮಕನು ನಮ್ಮ ಜಂಗಮದೇವರು ಕಾಣಿರಯ್ಯಾ.
ಆ ಜಂಗಮವು ಭಕ್ತರಿಗೆ ಚರಣವ ಕರುಣಿಪನು.
ಆ ಭಕ್ತರು ಪಾದಪ್ರಕ್ಷಾಲನಂ ಗೆಯ್ದು,
ಗಂಧಾಕ್ಷತೆ ಪುಷ್ಪ ಧೂಪ ದೀಪ ನೈವೇದ್ಯ ತಾಂಬೂಲ
ವಿಭೂತಿ ರುದ್ರಾಕ್ಷಿಯಂ ಧರಿಸಿ,
ಮೈವಾಸವಂ ಭೂಷಣ [illegible]ರೆದಲೆಯನ ಕರದಲ್ಲಿ ಹಿಡಿದು,
ಆ ಜಂಗಮದೇವರು ತೀರ್ಥವನೀವುದಯ್ಯಾ.
ಆಮೇಲೆ ತಂದ ಮೊತ್ತಕ್ಕೆ ಮಂಡೆ ಬಾಗಿ,
ತಮ್ಮಿಷ್ಟಲಿಂಗಕ್ಕೆ ಮುಷ್ಟಿ ಅರ್ಪಿಸಿ, ತಾವು ಸಲಿಸುವುದಯ್ಯಾ.
ಆಮೇಲೆ ಗಣಸಮೂಹವು,
ತಾವು ರೋಹ ಅವರೋಹದಿಂದ ಅರ್ಪಿತವ ಮಾಡುವದು,
ಆಗಮಾಚಾರವಯ್ಯಾ.
ಲಿಂಗ ನಿರ್ಮಾಲ್ಯವನೆ ಲಿಂಗಕ್ಕೆ ಮತ್ತೆ ಮತ್ತೆ ಧರಿಸುವೆ,

ಭಾವನಿರ್ಭಾವವನರಿದು,
ಇನ್ನೊಂದು ನಿರಂತರದ ಅವಧಾನವುಂಟು.
ತಾ ಪ್ರಸಾದವ ಸವಿವಾಗ,
ಜಂಗಮಲಿಂಗಕ್ಕೆ ಪದಾರ್ಥವ ಸಮೀಪಸ್ಥವ ಮಾಡಲು,
ಅದೇ ಹಸ್ತದಲ್ಲಿ ಸಜ್ಜಾಗೃಹಕ್ಕೆ ಸಮರ್ಪಿಸಿಕೊಂಬುವದೊಂದವಧಾನ.
ಆಚೆಗೆ ತೀರ್ಥ ಸಂಬಂಧಿಸಿ, ಎಯ್ದದಿರಲ್ಲದರಲ್ಲಿ
ಪಾದೋದಕವ ನೀಡುವದ ದಯಗೊಟ್ಟಡೆ ಸಂದಿಲ್ಲ.
ಅವು ಮೂರು, ಇವು ಮೂರು, ಆಚೆ ಹನ್ನೊಂದು,
ಈಚೆ ಹತ್ತರ ಅರುವತ್ತರಾಯ ಸಂದಿತ್ತು.
ಭಾಷೆ ಪೂರೈಸಿತ್ತು, ಲೆಕ್ಕ ತುಂಬಿತ್ತು, ಬಿತ್ತಕ್ಕೆ ವಟ್ಟವಿಲ್ಲ, ಕಾಳೆಗ ಮೊಗವಿಲ್ಲ.
ಕಾಳಿಂಗನ ಹಸ್ತಾಭರಣ, ನಮ್ಮ ಜಂಗಮಲಿಂಗಕ್ಕಯ್ಯಾ !
ಇಂತಪ್ಪ ಈ ನಡೆಯನರಿದಾಚರಿಸಿದ ಸಂಗನಬಸವಣ್ಣಂಗೆ
ಆಯತವನಾಯತವೆಂಬ ಅನಾಚಾರಿಯನು ಎನ್ನ ಮುಖದತ್ತ ತೋರದಿರಯ್ಯಾ.
ಆ ಮಹಾಮಹಿಮನ ಹೆಜ್ಜೆ ಹೆಜ್ಜೆಗಶ್ವಮೇಧಫಲ ತಪ್ಪದಯ್ಯಾ.
ಆ ಸಿದ್ಧಪುರುಷಂಗೆ ನಮೋ ನಮೋ ಎಂಬೆನು ಕಾಣಾ,
ಬಸವಪ್ರಿಯ ಕೂಡಲಚೆನ್ನಸಂಗಮದೇವಾ. ॥ ೩೪ ॥

೩೦೧

ಕುಲಜರೆಂದು ಹುಟ್ಟಿ, ಅಂತ್ಯಜರಾದರು ನೋಡಾ ದ್ವಿಜರು ;
ಶಿವನೆ ದೇವನೆಂದರಿದು ಪೂಜಿಸರಾಗಿ,
ಶ್ರುತಿಗಳು ಹೇಳಿದ ಶ್ರೀವಿಭೂತಿಯನೊಲ್ಲರಾಗಿ,
'ಏಕೋ ರುದ್ರೋ ನ ದ್ವಿತೀಯಾಯ ತಸ್ಥೆ' ಎಂಬ ಶ್ರುತಿಯ ವಿಚಾರದಲ್ಲಿ
ಇಲ್ಲವಾಗಿ,
ಅರಿದರಿದೆ, ಹೊಲೆಯ ಕೊಂಡಾಡಿತ್ತು ಲೋಕ.
ಇದೇನು ಸೋಜಿಗ, ಬಸವಪ್ರಿಯ ಕೂಡಲಚೆನ್ನಸಂಗಾ ? ॥ ೩೫ ॥

೩೦೨

ಕುಲವುಳ್ಳನ್ನಕ್ಕ ಭಕ್ತನಲ್ಲ, ಛಲವುಳ್ಳನಕ್ಕ ಮಹೇಶ್ವರನಲ್ಲ,
ಫಲವುಳ್ಳನ್ನಕ್ಕ ಪ್ರಸಾದಿಯಲ್ಲ.
ಕುಲ ಗುರುಕೃಪೆಯ ಕೆಡಿಸಿತ್ತು, ಛಲ ಲಿಂಗಾರ್ಚನೆಯ ಕೆಡಿಸಿತ್ತು.
ಫಲ ದುಃಖಂಗಳಿಗೆ ಗುರಿ ಮಾಡಿತ್ತು.
ಕುಲಂ ಛಲಂ ಧನಂ ಚೈವ ಯೌವನಂ ರೂಪಮೇವ ಚ ।
ವಿದ್ಯಾ ರಾಜ್ಯಂ ತಪಶ್ಚೈವ ತೇ ಚಾಷ್ಟಮದಾ ಸ್ಮೃತಾಃ ॥
ಎಂದುದಾಗಿ,
ಒಂದು ಸುರೆಯ ಕುಡಿದವರು ಬಂಧುಬಳಗವನರಿಯರು.

ಎಂಟು ಸುರೆಯ ಕುಡಿದವರು ನಿಮ್ಮನೆತ್ತಬಲ್ಲರಯ್ಯಾ,
ಬಸವಪ್ರಿಯ ಕೂಡಲಚೆನ್ನಸಂಗಮದೇವಾ ? || ೩೬ ||

೩೦೩

ಗತಿಯ ಪಥವನರಿವಡೆ, ದಿಟವ ಸುಯಿದಾನ ಮಾಡು.
ದಿಟ ಬೇರೆ ಆಚಾರ ಶಿವಾಚಾರವೆಂ[ದರು]ಮರುಳೆ.
ಗುರು ದೇವನೆಂದರು ಮರುಳೆ.
ದೂರತೋsಂ ಗುರುಂ ದಷ್ಟ್ವಾ ಉದಾಸೀನೇನ ಯೋ ವ್ರಜೇತ್ ।
ಶ್ವಾನಯೋನಿಂ ಶತಂ ಗತ್ವಾ ಚಾಂಡಾಲಗೃಹಮಾಚರೇತ್ ॥
ಶಿವೇ ಕೃದ್ಧೇ ಗುರುಸ್ತ್ರಾತಾ ಗುರೌ ಕೃದ್ಧೇ ನ ಕಶ್ಚನ ।
ತಸ್ಮಾದಿಷ್ಟಂ ಗುರೋಃ ಕುರ್ಯಾತ್ ಕಾಯೇನ ಮನಸಾ ಗಿರಾ ॥
ಎಂದುದಾಗಿ,
ಬಸವಪ್ರಿಯ ಕೂಡಲಚೆನ್ನಸಂಗಮದೇವ ಮುನಿದಡೆ ತಿಳುಹಬಹುದು,
ಗುರು ಮುನಿದಡೆ ತಿಳುಹಬಾರದು, ಏಳೇಳು ನರಕ ತಪ್ಪದು. || ೩೭ ||

೩೦೪

ಗುರುಲಿಂಗವೆ ಪರುಷವಾಗಿ, ಶಿಷ್ಯನೆ ಕಬ್ಬುನವಾಗಿ
ಬೆರಸಿ ನಡೆದೆನೆಂಬ ನರಕನಾಯಿಗಳು,
ಕುಲವನರಸುವಿರಿ, ಮತ್ತೆ ಹೊಲೆಯನರಸುವಿರಿ.
ಹೊಲೆಯನರಸುವಿರಿ ಸೂತಕವಳಿಯದೆ, ಪಾತಕ ಹಿಂಗದೆ.
ಬಸವಪ್ರಿಯ ಕೂಡಲಚೆನ್ನಸಂಗಯ್ಯನಲ್ಲಿ, ಮುಕ್ತಿಯನರಸುವಿರಿ. || ೩೮ ||

೩೦೫

ಚಾಂಡಾಲನಾದಡೇನು ಶಿವಭಕ್ತನೆ ಕುಲಜನು.
ಆತನೊಡನೆ ನುಡಿಗಡಣವ ಮಾಡೂದೆನುತಿ[ದೆ] ವೇದ ಶ್ರುತಿ.
ಕುಲವ ನೋಡಲು ಬೇಡ, ಛಲವ ನೋಡಲು ಬೇಡ.
ಎಲ್ಲರಿಂದ ಹಿರಿಯರು ಆತನಿದ್ದಲ್ಲಿ ಇರುತಿಪ್ಪುದೆನುತಿ[ದೆ] ವೇದ.
ಓಂ ಅಪಿ ವಾ ಯಶ್ಚಾಂಡಾಲಶ್ಶಿವ ಇತಿ ವಾಚಂ ವದೇತ್ತೇನ ಸಹ
ಸಂವಿಶೇತ್ತೇನ ಸಹ ಭುಂಜೇತ್ ತೇನ ಸಹ ಸಂವದೇತ್ ॥
ಇಂತೆನುತಿದ್ದುದು ಶ್ರುತಿವಾಕ್ಯ.
ನಮ್ಮ ಭಕ್ತರನು ಅವರಿವರೆಂದು ಕುಲವನೆತ್ತಿ ನುಡಿದಂಗೆ,
ಇಪ್ಪತ್ತೇಳುಕೋಟಿನರಕ ತಪ್ಪದು,
ಬಸವಪ್ರಿಯ ಕೂಡಲಚೆನ್ನಸಂಗಮದೇವಾ. || ೩೯ ||

೩೦೬

ಜನನಮರಣರಹಿತ ನೀನೊಬ್ಬನೆಯೆಂದು
ಸಂಸಾರಭಯಕ್ಕಂಜಿ ಶರಣುಹೊಕ್ಕೆನೆಂದಿತ್ತು ವೇದ.

ತಾರುಣ್ಯದಿಂದ ಸದಾ ರಕ್ಷಿಸುವುದೆಂದು
ಮಾರಾರಿಯನು ಶರಣುಹೊಕ್ಕಿತ್ತು ನೋಡಾ ವೇದ.
ಅಜಾಯತ್ತೇಧಂ ಕಶ್ಚಿತ್ ಭೇದಾತ್ ।
ಪ್ರಪದ್ಯೋ ರುದ್ರ್ರಯತ್ತೇ ದಕ್ಷಿಣಂ ಮುಖಂ ॥
ಎಂದುದು ಶ್ರುತಿವಚನ.
ಇದು ಕಾರಣ, ಅಜ ಹರಿ ಸುರರು ಮೊದಲಾದವರಿಗೆಲ್ಲಾ
ನೀನೆ ಶರಣನಯ್ಯಾ, ಬಸವಪ್ರಿಯ ಕೂಡಲಚೆನ್ನಸಂಗಮದೇವಾ. ॥ ೪೦ ॥

೩೦೭

ತಿಥಿವಾರವೆಂದರಿಯೆನಯ್ಯಾ, ಲಗ್ನವಿಲಗ್ನವೆಂದರಿಯೆನಯ್ಯಾ.
ಇದನರಿತು ಹದಿನಾರು ವಾರ, ಹದಿನೆಂಟು ಕುಲವೆಂದೆಂಬರು.
ನಾವಿದನರಿಯೆವಯ್ಯಾ, ಇರುಳೊಂದು ವಾರ, ಹಗಲೊಂದು ವಾರ.
ಭವಿಯೊಂದು ಕುಲ, ಭಕ್ತನೊಂದು ಕುಲ, ನಾವು ಬಲ್ಲುದು ಇದು ತಾನೆ,
ಬಸವಪ್ರಿಯ ಕೂಡಲಚೆನ್ನಸಂಗಮದೇವಾ. ॥ ೪೧ ॥

೩೦೮

ತಿರಿದುಕೊಂಡು ಬಂದಾದರೆಯೂ
ನಿಮ್ಮ ಭಕ್ತರಿಗೆ ಆನು ಬೆಸಕೆಯ್ವ ಭಾಗ್ಯವನು, ಮಾಡು ಕಂಡಯ್ಯಾ.
ಮನ ವಚನ ಕಾಯದಲ್ಲಿ ನಿಮ್ಮ ಶರಣರಿಗೆ ಆನು ತೊತ್ತಾಗಿಪ್ಪುದು,
ಮಾಡು ಕಂಡಯ್ಯಾ.
ಹಲವು ಮಾತೇನು ಲಿಂಗಜಂಗಮಕ್ಕೆ ಈವುದನೆ ಮಾಡು ಕಂಡಯ್ಯಾ,
ಬಸವಪ್ರಿಯ ಕೂಡಲಚೆನ್ನಸಂಗಾ. ॥ ೪೨ ॥

೩೦೯

ತೊತ್ತಿನ ಸಂಗವ ಮಾಡಿದಡೆ ಸುರಾಪಾನವ ಕೊಂಡ ಸಮಾನ.
ಸೂಳೆಯ ಸಂಗವ ಮಾಡಿದಡೆ ಮಾಂಸವ ತಿಂದ ಸಮಾನ.
ಕನ್ಯೆಯ ಸಂಗವ ಮಾಡಿದಡೆ ಬಂಗಿಯ ತಿಂದ ಸಮಾನ.
ಗಂಡ ಬಿಟ್ಟವಳ ಸಂಗವ ಮಾಡಿದಡೆ ಉದಾನವ ಕೊಂಡ ಸಮಾನ.
ಮುಂಡೆಯ ಸಂಗವ ಮಾಡಿದಡೆ ಅಮೇಧ್ಯವ ತಿಂದ ಸಮಾನ.
ಗಂಡನುಳ್ಳವಳ ಸಂಗವ ಮಾಡಿದಡೆ ಪಂಚಮಹಾಪಾತಕವ ಮಾಡಿದ ಸಮಾನ.
ಅದೆಂತೆಂದಡೆ:
ವಿಧವ್ಯಾ ಚ ಸ್ತ್ರೀಯ ಹಂತಿ ದಾಸಿಸೀಲೆ ಕುಲಂ ತಥಾ ।
ವೇಶ್ಯಾ ಮಾನಧನಂ ಹಂತಿ ಸರ್ವಂ ಹಂತಿ ಪರಾಂಗನಾ ॥
ದಾಸಿ ಕನ್ಯಾ ಬಿಡಸ್ತ್ರೀಣಾಂ ವೇಶ್ಯಾವಿದೇ ಪರಸ್ತ್ರೀಯಾ ।
ಸತತಂ ಪಾತಕಶ್ಚೈವ ಬ್ರಹ್ಮಹತ್ಯಂ ದಿನೇ ದಿನೇ ॥

ಎಂದುದಾಗಿ, ಈ ಆರುಪ್ರಕಾರದ ಸ್ತ್ರೀಯರನು
ಮನ ವಚನ ಕಾಯದಲ್ಲಿ ನೆರೆದವಂಗೆ ರೌರವನರಕ ತಪ್ಪದಯ್ಯ.
ಈ ಷಡ್ವಿಧ ಸತಿಯರುಗಳ ಮನ ವಚನ ಕಾಯದಲ್ಲಿ ಬಿಟ್ಟವಂಗೆ
ಗುರುವುಂಟು ಲಿಂಗವುಂಟು ಜಂಗಮವುಂಟು
ಪಾದೋದಕವುಂಟು ಪ್ರಸಾದವುಂಟು ವಿಭೂತಿ ರುದ್ರಾಕ್ಷಿ
ಪ್ರಣಮ ಪಂಚಾಕ್ಷರವುಂಟು.
ಇಂತೀ ಆರುಪ್ರಕಾರದ ಸ್ತ್ರೀಯರು ಮೊದಲಾದ
ರಾಶಿಕೂಟದ ಸ್ತ್ರೀಯರುಗಳಿಗೆ ಮನ ಹೇಸದೆ
ಅಂಗವಿಸುವ ಭಕ್ತರು ಭವಿಗಿಂದ ಕಷ್ಟ, ನೋಡಾ,
ಬಸವಪ್ರಿಯ ಕೂಡಲಚೆನ್ನಸಂಗಮದೇವಾ. ‖ ೪೩ ‖

೩೧೦

ದೇವ ದೇವ ಮಹಾಪ್ರಸಾದ:
ಕಂಗಳಲ್ಲಿ ಕರುಳಿಲ್ಲ, ಕಾಯದಲ್ಲಿ ಹೊರೆಯಿಲ್ಲ,
ನುಡಿಯಲ್ಲಿ ಕಡೆಯಿಲ್ಲ, ನಡೆಯಲ್ಲಿ ಗತಿಯಿಲ್ಲ.
ಇದೆಂತಹ ಸುಳುಹೆಂದರಿಯೆ, ಇದೆಂತಹ ನಿಲುವೆಂದು ತಿಳಿಯಬಾರದು.
ಮರುಳಿಲ್ಲದ ಮರುಳು, ಅರಿವಿಲ್ಲದ ಅರಿವು.
ಬಸವಪ್ರಿಯ ಕೂಡಲಚೆನ್ನಸಂಗನ ಶರಣರ ಬರವು
ಕೌತುಕವಾಯಿತ್ತು, ಚಿತ್ತೈಸಯ್ಯಾ ಸಂಗನಬಸವಣ್ಣಾ. ‖ ೪೪ ‖

೩೧೧

ದೇವ ದೇವ ಮಹಾಪ್ರಸಾದ:
ನಿಮ್ಮ ಶರಣರ ಮನೆಗೆ ಸಲುಗೆಯ ಬಂಟ ನಾನಲ್ಲಯ್ಯಾ.
ತನುಮನಧನವ ಹಿಂದಿಕ್ಕಿಕೊಂಡಿಪ್ಪ ವಂಚಕ ನಾನಯ್ಯಾ.
ನಿಮ್ಮ ಶರಣರು ಎನ್ನಿಚ್ಛೆಗೆ ಬಪ್ಪರೆ ?
'ಚಕಿತಮಭಿದತ್ತೇ ಶ್ರುತಿರಪಿ' ಎನಲು,
ಎನ್ನ ನುಡಿ ನಿಮ್ಮ ಶರಣರ ತಾಗಬಲ್ಲುದೆ ?
ಹಣೆಯ ಹೊಣೆಯ ತೋರಿ ಉದರವ ಹೊರೆವಂತೆ,
ನಿಮ್ಮ ಮರೆಯಲಡಗಿರ್ಪ ಹಡಪಿಗ ನಾನಯ್ಯಾ.
ಬಸವಪ್ರಿಯ ಕೂಡಲಚೆನ್ನಸಂಗನ ಶರಣರು ಎನ್ನ ಮಾತಿಗೆ ಬಾರರು,
ನೀವೆ ಹೋಗಿ ಬಿಜಯಂಗೈಸಿಕೊಂಡು ಬಾರಾ, ಸಂಗನಬಸವಣ್ಣಾ. ‖ ೪೫ ‖

೩೧೨

ದೇವಾ ನಿಮ್ಮ ಪರಿಹಾಸ ಪರಿ ಪರಸಮಯಿಗಳ ಮನೆಯಲಿಪ್ಪರೆ.
ದೇವಾ ದೇವಾ ನಿಮ್ಮ ಪರಿಹಾಸ ಪರಿಹರಿಸರಿಯೆಂಬ

ಮಾತ ಹುಟ್ಟಿಸುವರೆ ಜಗದಿ.
ದೇವಾ ನೀವು ಮಾಡಿದ ಮಾಯೆ ಅಲ್ಲದಿರ್ದಡೆ
ನೊರಜುಗಳ ಸರಿಯೆಂಬರೆ ಹೇಳಾ,
ಬಸವಪ್ರಿಯ ಕೂಡಲಚೆನ್ನಸಂಗಮದೇವಾ ? ॥ ೪೬ ॥

೩೧೩

ದೈವವೆನಿಸಿಕೊಂಬ ಎಲ್ಲ ದೈವಂಗಳ ಬಿಟ್ಟು,
ಶಿವನನೊಬ್ಬನೆ ಹಿಡಿಯೆಂದುದಥರ್ವಣ ವೇದ.
ಶಿವನ ಪೂಜಿಸಿ, ಶಿವನ ನೆನೆದು, ಶಿವನ ಸ್ತುತಿಸುವುದೆಂದುದಥರ್ವಣ ವೇದ.
'ಈಶೋವಾ ಶಿವ ಏಕೋಧ್ಯೇಯಃ ಶಿವಂಕರಃ ಸರ್ವಮನ್ಯತ್ಪರಿತ್ಯಜೇತ್'
ಎಂದುದು ಶ್ರುತಿ, ಬಸವಪ್ರಿಯ ಕೂಡಲಚೆನ್ನಸಂಗಮದೇವಾ. ॥ ೪೭ ॥

೩೧೪

ದ್ವಿಜರೊಮ್ಮೆ ಮರೆದು ನೀಳಬೊಟ್ಟನಿಟ್ಟರಾದಡೆ,
ಅದರ ಪರಿಯಲೆ ಅಸಿಯ ಗರಗಸವ ಮಾಡಿ,
ಯಮಕಿಂಕರರು ಸೀಳುವರೆಂದುದು ನೋಡಾ. ಸ್ಕಾಂದೇ:
ಊರ್ಧ್ವಪುಂಡ್ರಂ ದ್ವಿಜಂ ಕುರ್ಯಾತ್ ಲೀಲಯಾಪಿ ಕದಾಚನ ।
ತಥಾ ಕಾಲೇಣ ಶಸ್ತ್ರೇಣ ಬಾಧ್ಯತೇ ಯಮಕಿಂಕರೈಃ ॥
ಊರ್ಧ್ವಪುಂಡ್ರಂ ಚ ಶೂಲಂ ಚ ವರ್ತುಲಂ ಚಾರ್ಧಂಚಂದ್ರಕಮ್ ।
ಲಲಾಟೇ ಧಾರಯಿಷ್ಯಂತಿ ಮನುಷ್ಯಾಃ ಪಾಪಕರ್ಮಿಣಃ ॥
ಇದನರಿದಿನ್ನು ದ್ವಿಜರು ನಂಬಿ, ಬೇಗ ವಿಭೂತಿಯನಿಟ್ಟು, ಬದುಕಿ,
ಬಸವಪ್ರಿಯ ಕೂಡಲಚೆನ್ನಸಂಗನನೊಲಿಸುವಡೆ. ॥ ೪೮ ॥

೩೧೫

ನಾನೊಂದೂರಿಗೆ ಹಾದಿಯ ಕೇಳಿಕೊಂಡು ಹೋಗುತ್ತಿರಲಾಗಿ,
ಮುಂದೆ ಅರಣ್ಯದೊಳಗೆ ಮೂರುಬಟ್ಟೆಯಾಯಿತ್ತು.
ಎರಡು ಪಥವ ಬಿಟ್ಟು, ಒಂದು ಪಥವ ಹಿಡಿದು ಬರಲಾಗಿ,
ಮುಂದೆ ಮೂರು ಬಟ್ಟೆಯೂ ಒಂದಾದವು.
ಆ ಮೂರು ಬಟ್ಟೆ ಕೂಡಿದ ಬಳಿಯಲೊಂದು ಬೆಟ್ಟ ಹುಟ್ಟಿತ್ತು.
ಆ ಬೆಟ್ಟವ ಏರಬಾರದು, ಇಳಿಯಬಾರದು.
ಆ ಬೆಟ್ಟವ ಬಿಟ್ಟು ಹೋದಡೆ ಎನಗೆ ಪಥವಿಲ್ಲಾಯೆಂದು
ಸುತ್ತಿಸುತ್ತಿ ನೋಡುತ್ತಿರಲಾಗಿ,
ಆರು ಮೆಟ್ಟಿನದೊಂದು ಏಣಿ ಹಾಕಿರುವುದ ಕಂಡೆ.
ಆ ಏಣಿಯ ಮೆಟ್ಟಿ ಮೆಟ್ಟಿ,
ಆ ಬೆಟ್ಟದ ತುಟ್ಟತುದಿಯನೇರಿ ನೋಡಲಾಗಿ, ಬಟ್ಟಬಯಲಾಗಿದ್ದಿತು.

ಆ ಬಟ್ಟಬಯಲೊಳಗೆ ಹತ್ತಿ ಹೋಗುತ್ತಿರಲಾಗಿ,
ನಾನೆತ್ತ ಹೋದೆನೆಂದರಿಯೆನಯ್ಯಾ,
ಬಸವಪ್ರಿಯ ಕೂಡಲಚೆನ್ನಸಂಗಮದೇವಾ. ॥ ೪೯ ॥

೩೧೬

ನಾಲಿಗೆಗೆ ಶಿವನ ಹೊಗಳುವುದೇ ವಿಧಿಯೆಂದು ಹೇಳಿತ್ತು ವೇದ.
ಮತ್ತೆಯೂ ಶಿವನನೆ ಸ್ತುತಿಸುವುದೆ ವಿಧಿಯೆಂದು ಹೇಳಿತ್ತು ವೇದ.
ಅನ್ಯದೈವವ ಹೊಗಳಲಾಗದೆಂದುದು, ಋಗ್ವೇದ.
ಸ್ತುಹಿ ಶ್ರುತಂ ಗರ್ತಸದಂ ಯುವಾನಂ ಮೃಗಂ ನ ಬೀಮಮುಪಹತ್ನು ಮುಗ್ರಂ।
ಮೃಡಾ ಜರಿತ್ರೇ ರುದ್ರಸ್ತವಾನೋ ಅನ್ಯಂತೇ ಅಸ್ಮಿನ್ನಿವ ಪಂತು ಸೇನಾಃ ॥
ಎಂದುದು ಶ್ರುತಿ, ಬಸವಪ್ರಿಯ ಕೂಡಲಚೆನ್ನಸಂಗಮದೇವಾ. ॥ ೫೦ ॥

೩೧೭

ನಿನ್ನಳವಲ್ಲ, ಎನ್ನಳವಲ್ಲ, ಇದಾರಳವಲ್ಲದ ಘನವು ನೋಡಯ್ಯಾ ;
ಕಾಬಡೆ ಕಂಗಳಿಗೆ ಅಸಾಧ್ಯ, ಮುಟ್ಟುವಡೆ ಸೋಂಕಿಂಗಸಾಧ್ಯ,
ಮಾತನಾಡಿಸಿ ನೋಡಿದಡೆ ವಾಙ್ಮನಾತೀತ,
ನಿಂದಡೆ ನೆಳಲಿಲ್ಲ, ಸುಳಿದಡೆ ಹೆಜ್ಜೆಯಿಲ್ಲ,
ಪ್ರಭುದೇವರೆಂಬ ಭಾವ ತೋರುತ್ತದೆ.
ಬಸವಪ್ರಿಯ ಕೂಡಲಚೆನ್ನಸಂಗನ ಶರಣರ
ಚರಣವ ಪಿಡಿಯಲೇಳಾ ಸಂಗನಬಸವಣ್ಣಾ. ॥ ೫೧ ॥

೩೧೮

ನಿಮ್ಮ ತನು, ನಿಮ್ಮ ಧನ, ನಿಮ್ಮ ಮನ ನಿಮ್ಮದಲ್ಲದೆ
ಅನ್ಯವೆಂದಣುಮಾತ್ರವಿಲ್ಲ ನೋಡಯ್ಯಾ.
ಭಕ್ತನ ಮಠವೆ ತನ್ನ ಮಠವೆಂದು ಮುನ್ನವೆ ಅರಿದರಿದು ಬಂದು,
ಮತ್ತೊಂದ ಮತ್ತೊಂದ ನೆನೆವರೆ ?
ಬಸವಪ್ರಿಯ ಕೂಡಲಚೆನ್ನಸಂಗನ ಶರಣ ಬಸವಣ್ಣಂಗೆ
ಸ್ವತಂತ್ರಭಾವವುಳ್ಳಡೆ ನಿಮ್ಮ ಪಾದದಾಣೆ. ॥ ೫೨ ॥

೩೧೯

ನಿರಾಕಾರದ ಶಕ್ತಿಯಲ್ಲಿ ನಿರಾಳವೆಂಬ ತನು,
ನಿಃಶೂನ್ಯವೆಂಬ ಶೂನ್ಯಸಿಂಹಾನದ ಮೇಲೆ
ಘನವಾಗಿ ತೊಳಗಿ ಬೆಳಗುತ್ತಿರ್ದನು.
ದೆಸೆಯಲ್ಲಾ ಮುಖವಾಗಿ, ಮುಖವೆಲ್ಲಾ ಜಗವಾಗಿ,
ಅಖಂಡಪರಿಪೂರ್ಣ ಪರಬ್ರಹ್ಮ ತಾನಾದನು.
ಈ ಮಹಿಮನ ನೆನೆದಡೆ ಮನೋಮುಕ್ತಿ,

ಕಂಡಡೆ ರೂಪುಮುಕ್ತಿ, ನುಡಿಸಿದಡೆ ಶಬ್ದಮುಕ್ತಿ,
ಸಂಗವ ಮಾಡಿದಡೆ ಸರ್ವಾಂಗಲಿಂಗೈಕ್ಯ.
ಬಸವಪ್ರಿಯ ಕೂಡಲಚೆನ್ನಸಂಗಯ್ಯಾ,
ನಿಮ್ಮ ಪ್ರಭುವಿನ ಶ್ರೀಪಾದಕ್ಕೆ ಶರಣೆಂದು ಬದುಕಿದೆನು. || ೫೩ ||

೩೨೦

ನೆಲನ ಹೊದ್ದದು, ಆಕಾಶವ ಮುಟ್ಟದು ಎಡೆಯಲೊಂದು ರೂಪಿಲ್ಲ.
ಭಾವವೆ ಕಂಬ, ಜ್ಞಾನವೆ ನಿವಾಸ, ನಿರ್ಲೇಪವೆ ಭಿತ್ತಿ,
ನಿರಂಹಕಾರವೆ ಶಿಖರಿ, ಮಹದಹಂಕಾರವೆ ಶೃಂಗಾರ ಕಳಶ,
ಸಹಸ್ರಪತ್ರದ ನವಕಮಳ ಸಿಂಹಾಸನ, ನಿತ್ಯವೆ ಮಲಗು.
ನಿಜವೆಂಬ ವಿಸ್ತರದಲ್ಲಿ ನಿತ್ಯನಿರಾಳವೆಂಬ ಮಹಾಘನವು
ಬಂದು ಮೂರ್ತಿಗೊಳಲು,
ಕಾಯದ ಕಂಗೆ ಕಾಣಬಾರದು, ಮನದ ಮುಂದೆ ಅಳವಡದು,
ಭಾವದ ಬಗೆಗೆ ಮೇಲುದೋರದು.
ಬಸವಪ್ರಿಯ ಕೂಡಲಚೆನ್ನಸಂಗನಲ್ಲಿ
ಪ್ರಭುದೇವರ ಶ್ರೀಪಾದಕ್ಕೆ ನಮೋ ನಮೋ ಎಂಬೆನು. || ೫೪ ||

೩೨೧

ಪರರಾಸೆಯೆಂಬ ಜ್ವರ ಹತ್ತಿತ್ತಾಗಿ, ಕಳವಳಿಸಿ, ನುಡಿವೆನಯ್ಯಾ.
ಹೊನ್ನು ಹೆಣ್ಣು ಮಣ್ಣು ಬಯಸಿ, ವಿಕಳಗೊಂಡಂತೆ ಪ್ರಳಾಪಿಸಿ,
ವಿಕಳಂಗೊಂಡು ನುಡಿಯುತ್ತಿರ್ಪೆನಯ್ಯಾ.
ಈ ಕಳವಳವನಳಿದು, ಸಂಭಾಷೆಯನಿತ್ತು,
ನಿಮ್ಮ ಕರುಣಾಮೃತವೆಂಬ ಕಷಾಯವನೆರದು,
ಪರರಾಸೆಯೆಂಬ ಜ್ವರವ ಮಾಣಿಸು,
ಬಸವಪ್ರಿಯ ಕೂಡಲಚೆನ್ನಸಂಗಮದೇವಾ. || ೫೫ ||

೩೨೨

ಪರಶಿವನ ಚಿತ್ಕಲೆ ಜಗತ್ತಿನ ಶಿರೋಮಧ್ಯಕ್ಕೆ ಬಿಂಬಿಸಿ,
ಅದಕ್ಕೆ ಚೈತನ್ಯಗೊಳಿಸಿದಲ್ಲಿ, ಅದೇ ಪರಮಾತ್ಮನಾಯಿತ್ತು.
ಆ ಪರಮಾತ್ಮನೆ ಜಗತ್ತಿನ ಭ್ರೂಮಧ್ಯಕ್ಕೆ ಬಿಂಬಿಸಿದಲ್ಲಿ,
ಅದೇ ಅಂತರಾತ್ಮನಾಯಿತ್ತು.
ಆ ಅಂತರಾತ್ಮನೇ ಜಗತ್ತಿನ ಹೃದಯಕ್ಕೆ ಬಿಂಬಿಸಿದಲ್ಲಿ,
ಅದೇ ಜೀವಾತ್ಮನಾಯಿತ್ತು.
ಆ ಜೀವಾತ್ಮನೇ ಘಟ, ಅಂತಾರಾತ್ಮನೇ ಪ್ರಾಣ, ಪರಮಾತ್ಮನೇ ಸರ್ವಸಾಕ್ಷಿಕ.
ಆ ಸಾಕ್ಷಿಕನೇ ವಸ್ತು, ಆ ಪರಸ್ತು, ಈ ಜೀವಾಂತರಾದಿಗಳೆಂಬ ಅಂಗಪ್ರಾಣಕ್ಕೆ

ಪಂಚವಿಂಶತಿತತ್ವಂಗಳೆಂಬ ಪಾಶವಂ ತೊಡಿಸಿ, ಅಂತದನೇ ಪಶುವೆನಿಸಿ,
ತಾನದಕ್ಕೆ ಪತಿಯಾಗಿ, ಅಲ್ಲಿ ನಾನಾ ವಿನೋದಂಗಳಂ ವಿನೋದಿಸಿತ್ತು.
ಅದೆಂತೆಂದಡೆ :
ವಿದ್ಯುದ್ರೂಪಮಿವಾಕಾಶೇ ಪ್ರತ್ಯಕ್ಷಂ ಸರ್ವತೋಮುಖೈಃ ।
ಶಿವತತ್ತ್ವಮಿದಂ ಪ್ರೋಕ್ತಂ ಸರ್ವತತ್ತ್ವಾಲಯಂ ವಿದುಃ ॥
ಜೀವಾಂತರಪರಾತ್ಮೇತಿ ತ್ರಿಭಿರ್ನಾಮಭಿರುಚ್ಯತೇ ।
ಆತ್ಮಸ್ವಜೀವ ಸಂಬಂಧಶ್ಚಾಂತರಃ ಪ್ರಾಣಸಂಯುತಃ ॥
ಪರಮಾತ್ಮಾ ತತ್ತ್ವಸಂಯುಕ್ತಃ ಆತ್ಮತ್ರಯಮಿದಂ ಶೃಣು ।
ಎಂದುದಾಗಿ, ಬಸವಪ್ರಿಯ ಕೂಡಲಚೆನ್ನಸಂಗಯ್ಯನು
ಇಂತೀ ಪರಿಯಲ್ಲಿ ಅಡಗಿರ್ದ, ಸರ್ವಜಗತ್ತನ್ನು. ॥ ೫೬ ॥

೩೨೩

ಬಯಸಿದ ಬಯಕೆ ಕೈಸಾರುವಂತೆ, ನಿಧಿ ನಿಧಾನ ಮನೆಗೆ ಬಪ್ಪಂತೆ,
ಪರಿಮಳವನರಿಸಿ ಬಪ್ಪ ಭ್ರಮರನಂತೆ,
ಚಿಂತಾಮಣಿಯ ಪುತ್ಥಳಿ ನಡೆಗಲಿತಂತೆ,
ಬಸವಪ್ರಿಯ ಕೂಡಲಚೆನ್ನಸಂಗನಲ್ಲಿ
ಪ್ರಭುದೇವರ ಬರವು ಕಾಣಬರುತ್ತಿದೆ ನೋಡಾ ಸಂಗನಬಸವಣ್ಣಾ. ॥ ೫೭ ॥

೩೨೪

ಬಿಡಿ ಬಿಡಿ ವಿಷ್ಣುವ, ನಿಮಗೆ ಗತಿಗೆ ಸಾಧನವಲ್ಲ, ಕಂಡಿರೆ ಎಲೆ ದ್ವಿಜರಿರಾ.
ಬಿಡದೆ ಧ್ಯಾನಿಸಿ ಶಿವನ ಅಡಿದಾವರೆಯ,
ಬಿಡದೆ ಪೂಜಿಸಿ ಶಿವನ ಶ್ರೀಪಾದಪದ್ಮಂಗಳ
ನಿಮಗೆ ತಡೆಯಿಲ್ಲದ ಮುಕ್ತಿದೊರಕೊಂಬದು. ಅಥರ್ವಣವೇದ:
'ಈಶಾನಃ ಶಿವ ಏಕೋಧ್ಯೇಯ' ಶಿವಂಕರತ್ಸರ್ವಮನ್ಯತ್ಪರಿತ್ಯಜ್ಯ
ಇತಿ ಬ್ರಹ್ಮನೀತಿಯಲಿ:
ಆತ್ಮ ಸರ್ವಂ ಪರಿತ್ಯಜ್ಯ ಶಿವಾದನ್ಯಂತು ದೈವತಂ
ತಮೇವ ಶರಣಂ ಚೇತ್ಸಮ್ಯೋಮುಕ್ತಿಂ ಸುಗಚ್ಛತಿ ॥
ಕೆಡಬೇಡ, ಸಾರಿ ಡಂಗುರ ಹೊಯ್ಯಿತ್ತು, ಶ್ರುತಿಯ ನೋಡಯ್ಯ.
ಬಸವಪ್ರಿಯ ಕೂಡಲ ಚೆನ್ನಸಂಗಯ್ಯನನೆ ಬಿಡದೆ ಧ್ಯಾನ ಪೂಜೆಯ ಮಾಡಲು
ಕೊಡುವ ನಿಮಗೆ ಪರಮಪದವನು. ॥ ೫೮ ॥

೩೨೫

ಬ್ರಹ್ಮವಿಷ್ಣ್ವಾದಿ ದೇವತೆಗಳಿಗೆ ಶಿವನೆ ಜನಕನೆಂಬ
ಯಜುರ್ವೇದವ ಕೇಳಿರೆ ದ್ವಿಜರೆಲ್ಲರೂ.
ಅದೆಂತೆಂದಡೆ:
ಸೋಮಃ ಪವತೇ ಜನಿತಾ ಮತೀನಾಂ ಜನಿತಾ ದಿವೋ ಜನಿತಾಪೃಥಿವ್ಯಾ

ಜನಿತಾಗ್ನಿರ್ಜನಿತಾ ಸೂರ್ಯಶ್ಚ ಜನಿತೇಂದ್ರೋ ಜನಿತಾಥ ವಿಷ್ಣೋಃ ॥
ಮತ್ತಂ ಆದಿತ್ಯಪುರಾಣೇ:
ಉಮಯಾ ಸಹಿತಃ ಸೋಮಃ ಸೋಮೇತುಚ್ಯ
ಸ್ವಯೇವ ಕಾರಣಂ ನಾನ್ಯೋ ವಿಷ್ಣೋರಪಿ ಚ ವೈ ಶ್ರುತಿಃ ॥
ಮತೀನಾಂ ಚ ದಿವಃ ಪೃಥ್ವ್ಯಾ ವಹ್ನೇಃ ಸೂರ್ಯಸ್ಯ ವಜ್ರಿಣಃ ॥
ಸಾಕ್ಷಾದಪಿ ಚ ವಿಷ್ಣೋರ್ವೈ ಸೋಮೋ ಜನಯಿತೇಶ್ವರ ॥
ಎಂದುದಾಗಿ, ಮತ್ತೆ ದೈವವುಂಟೆಂಬ ಅಜ್ಞಾನಿ ಜಾತ್ಯಂಧರ ನಾನೇನೆಂಬೆ,
ಬಸವಪ್ರಿಯ ಕೂಡಲಚೆನ್ನಸಂಗಮದೇವಾ. ॥ ೫೯ ॥

೩೨೬

ಬ್ರಾಹ್ಮಣ ದೇಹಿಕದೇವನಲ್ಲ, ಕ್ಷತ್ರಿಯ ದೇಹಿಕದೇವನಲ್ಲ,
ಭಕ್ತ ದೇಹಿಕದೇವನೆಂದು ಕೇಳಿದ ಅರಿಯವೊ,
ಶ್ವಪಚನಾದಡೇನು ಲಿಂಗಭಕ್ತನೆ ಕುಲಜನೆಂಬುದು.
ಶ್ವಪಚೋಽಪಿ ಮುನಿಶ್ರೇಷ್ಠಃ ಭಕ್ತಿಹೀನಃ ಪಿತಾಽಪಿ ವಾ ।
ಚತುರ್ವೇದಧರೋ ವಿಪ್ರ ಶೈವಭಕ್ತಿವಿವರ್ಜಿತಃ ।
ಇದು ಕಾರಣ, ಬಸವಪ್ರಿಯ ಕೂಡಲಚೆನ್ನಸಂಗ
ಹಿತನೆಂದು ಅಂಜುವೆ ಮತ್ತೆ ಮರೆವೆ. ॥ ೬೦ ॥

೩೨೭

ಭಕ್ತರಿಗೆ ಮಾಡಿ ಕಣ್ಣುಕಾಲು ಕೈಗಳ ಪಡೆದರು,
ಭಕ್ತರಿಗೆ ಮಾಡಿ ಅರಿದ ತಲೆಯ ಪಡೆದರು,
ಭಕ್ತರಿಗೆ ಮಾಡಿ ನಿಲವೆರಸಿ ಹೋದರು.
ಮುನ್ನ ಭಕ್ತರಲ್ಲದವರಿಗೆ ಮಾಡಿ ಹಡೆದವರುಂಟೆ ಹೇಳಾ ?
ಭಕ್ತರಿಗೆ ಮಾಡಿ ಇವೆಲ್ಲವ ಹಡೆಯಿತ್ತ ಕಂಡು
ನಂಬದೆನ್ನ ಬೆಂದ ಮನ,
ಬಸವಪ್ರಿಯ ಕೂಡಲಚೆನ್ನಸಂಗಮದೇವಾ. ॥ ೬೧ ॥

೩೨೮

ಭಕ್ತರು ಮನೆಗೆ ಬಂದಡೆ, ತಮ್ಮ ಮನೆಯಲ್ಲಿ ತಾವಿಪ್ಪಂತಿರಬೇಕು.
ಅಂಜದೆ ಅಳುಕದೆ ನಡುಗುತ್ತಿರದೆ, ತಮ್ಮ ಶುದ್ಧಿ ತಾವಿರಬೇಕು.
ತಾವು ಆಳ್ವವರು ಅಲಿನಂತಿದ್ದಡೆ,
ಬಸವಪ್ರಿಯ ಕೂಡಲಚೆನ್ನಸಂಗ ಹಲ್ಲ ಕಳೆವ. ॥ ೬೨ ॥

೩೨೯

ಭವರೋಗ ಮೊದಲಾದ ಎಲ್ಲಾ ರೋಗಂಗಳಿಗೆಯೂ
ಶಿವಲಿಂಗ ಪ್ರಸಾದವಲ್ಲದೆ ಮತ್ತೇನೂ ಇಲ್ಲವೆಂದುದು ವೇದ.

ದ್ವಿಪಾದಿಗಳು ಚತುಃಪಾದಿಗಳು ಮೊದಲಾದ ಸಕಲಪ್ರಾಣಿಗಳೆಲ್ಲವಕ್ಕೆ
ಇದೇ ಔಷಧಿಯೆಂದುದು ಯಜುರ್ವೇದ.
ಗಾಮೇಸ್ವಾಯ ಪುರುಹಾಯ ಭೇಷಜಂ ಅಧೋಲಿಸ್ಮಭ್ಯಂ ।
ಭೇಷಜಂ ಸುಖೇಷಜಂ ಯದಿ ಸತಿ ಸುಗವ್ಯೇಷ್ಯಾಂ ।
ಅವಾಂಬ ರುದ್ರಮದಿ ಮಹೀಯದ ದೇವಂ ತ್ರ್ಯಂಬಕ ॥
ಎಂದುದು ಶ್ರುತಿ, ಬಸವಪ್ರಿಯ ಕೂಡಲಚೆನ್ನಸಂಗಾ. ॥ ೬೩ ॥

೩೩೦

ಭುವನಸ್ಯ ಪಿತರಂಗರ್ಭೇ ರಾಭೇ ರುದ್ರಂ ಧೀವಾರ್ದಯಾ
ರುದ್ರವುವುಕಾರ ಬ್ರಹ್ಮಂ ತದೃಷ್ಟಮಜರಂ ಸುಷುಮ್ನ
ದ್ರುಗ್ಯವೇಮಕಮಪಿವಾಸಃ॥
ಎಂಬ ಶ್ರುತಿಯ ವಿಚಾರಿಸಲರಿಯದೆ, ಒಲಿದಂತೆ ನುಡಿವುತಿಪ್ಪರು ನೋಡಯ್ಯಾ.
'ಮಾತೃದೇವೋ ಭವ, ಪಿತೃದೇವೋ ಭವ'
ಎಂಬ ಶ್ರುತಿ, ದೇವಿ ದೇವನು ತಾಯಿತಂದೆಯೆಂದು ಹೇಳಿತ್ತು.
'ಆಚಾರ್ಯದೇವೋ ಭವ' ಎಂಬ ಶ್ರುತಿ,
ತನಗೆ ಶುದ್ಧಶೈವವನನುಗ್ರಹವ ಮಾಡಿದ ಗುರುವೇ ದೈವವೆಂದು ಹೇಳಿತ್ತು.
'ಅತಿಥಿದೇವೋ ಭವ' ಎಂಬ ಶ್ರುತಿ,
ತನ್ನ ಮನೆಗೆ ಬಂದ ಭಕ್ತನೇ ದೈವವೆಂದು ಹೇಳಿತ್ತು.
ಇದಲ್ಲದೆ ಸಾವುತ್ತ, ಹುಟ್ಟುತ್ತಿಪ್ಪ
ತಂದೆ ತಾಯಿ ದೈವವೆಂದ ಲಜ್ಜೆ ನಾಚಿಕೆ ಬೇಡ.
ಚಂಡೇಶ್ವರಪಿಳ್ಳೆ, ಶಿವನು ತಂದೆಯೆಂದರಿದು,
ವಾಯದ ತಂದೆಯ ಕೊಂದುದನರಿಯಾ ?
ಎಂದೆಂದಿಗೆ ಕೇಡಿಲ್ಲದ ತಾಯಿತಂದೆ
ಬಸವಪ್ರಿಯ ಕೂಡಲಚೆನ್ನಸಂಗಮದೇವನೆಂದು ವೇದಂಗಳು ಸಾರುತ್ತವೆ. ॥ ೬೪ ॥

೩೩೧

ಮತ್ತೆಯು ಸಮಸ್ತವಾದ ಕರ್ಮಕೃತ ಶರೀರಿಗಳಿಗೆ
ಭೋಗವುಳ್ಳುದೆ ತಪ್ಪದೆಂಬೆಯಾದಡೆ,
ಶರೀರಗಳಿಗಾಗಲಿ ಪ್ರೇರಕಹರ್ತುದಿಂದಲ್ಲವೆಂಬುದೆ ಪ್ರಮಾಣ.
ಶಿವ ಪ್ರೀತ್ಯರ್ಥವಾದಗ......ಳು ಕರ್ತವನೆಯ್ದುವವೆಂಬುದಕ್ಕೆ ಪ್ರಮಾಣವು ಎನಲು,
ಪಿತೃವಧೆಯಿಂದ ಚಂಡೇಶ್ವರನು ಅನುಪಮ ಗಣಪದವನ್ನೈದಿದನು.
ಸಿರಿಯಾಳನು ತನ್ನ ಮಗನನೆ ಹತಿಸಿ ಪುರಜನ ಬಾಂಧವರುಸಹಿತ
ಶಿವಲೋಕವನ್ನೈದನೆ ?
ಕಾಲಾಂತರದಲ್ಲಿ ಮನುಚೋಳನು ಪುತ್ರವಧೆ ಭ್ರೂಣಹತ್ಯವನು ಮಾ ಎಸಗಿ,

ತನುವರಸಿ ಶಿವಲೋಕವೆಯ್ದನೆ ?
ಅಯ್ಯೋಮ ರಾಜನು ವಿಪ್ರೋತ್ತಮನನೆ ವಧಿಸಿ ಲಿಂಗ
ಗರ್ಭಾಂತರವನೆಯ್ದಿದನೆ ?
ಅಂದು ಜಗವರಿಯಲದಂತಿರಲಿ.
'ಸ್ವರ್ಗಕಾಮೋ ಯಜೇತ'ಯೆಂಬ ಶ್ರುತಿಪ್ರಮಾಣಿಂ ದಕ್ಷ ಪ್ರಜಾಪತಿ ಕ್ರಿಯೆಗಳಿಗೆ
ಅಧ್ವರ ಕರ್ಮದಿಂದ ಶಿರಚ್ಛೇದಿಯಾಗಿ ಕುರಿದಲೆ ಪಡೆಯನೆ ?
ಬರೀ ಅಚೇತನ ಕರ್ಮಂಗಳು ಕೊಡಬಲ್ಲವೆ ಸದ್ಗತಿ ದುರ್ಗತಿಗಳನು ?
ಕರ್ತು ಪ್ರೇರಕ ಶಿವನಲ್ಲದೆ,
'ಮನ್ನಿಮಿತ್ತಕೃತಂ ಪಾಪಮಪೀಡಾವಚಯ್ಯೆ ಕಲ್ಪ್ಯತೇ' ಎನಲು,
ಇಂತೀ ಚಿಟಿಮಿಟಿವಾದವೆಂಬುದು ಕೊಳ್ಳವು ಕೇಳಾ.
ಶಿವಭಕ್ತಿಯೆಂಬ ಪ್ರಚಂಡ ರವಿಕಿರಣದ
ಮುಂದೆ ಸಾಮಾನ್ಯಕರ್ಮವೆಂಬ ತಮ ನಿಲುವುದೆ ?
ಮರುಳೆ ಆ 'ವೋರಾಜಾನಮಧ್ವರಸ್ಯ ರುದ್ರಗಂ' ಎನಲು,
'ಇಂದ್ರ ಉಪೇಂದ್ರಾಯ ಸ್ವಾಹಾ' ಎನಬಹುದೆ ?
ಪ್ರಥಮಾಹುತಿಯಲ್ಲಿಯೆಂದು ಬೆಳಲು ಭಸ್ಮವಹವಾ ಆಹುತಿ ಫಲಂಗಳು.
ಆದಡೆ ಕೆಳೆಯಾ ಶಿವಭಕ್ತಿಬಾಹ್ಯವಾದ
ಪಾಪಕರ್ಮಕೆ ಬಂದ ವಿಪರೀತ ಪ್ರಾಪ್ತಿಗಳು,
ವಿಷ್ಣು ಸುರರಿಗೆ ಹಿತವಾಗಿ ಭೃಗು ಸತಿಯ ಶಿರವನರಿದಡೆ,
ಕರ್ಮ ದಶಜನ್ಮಂಗಳಿಗೆ ತಂದು,
ಹೀನಪ್ರಾಣಿಗಳ ಯೋನಿಯಲ್ಲಿ ಬರಸಿದುದನರಿಯಿರೆ.
ಮತ್ತೆಯೂ ಬಾಲೆಯ ಕೊಂದ ಕರ್ಮ
ಕೃಷ್ಣಾವತಾರದಲ್ಲಿ ವ್ಯಾಧನಿಂದ ತನ್ನ ಕೊಲ್ಲಿಸಿತ್ತು.
ಮತ್ತೆಯೂ ಬಲಿಯ ಬಂಧಿಸಿದ ಕರ್ಮ ಮುಂದೆ ನಾಗಾರ್ಜುನನಿಂದ ಕಟ್ಟಿಸಿತ್ತು.
ಕೌರವಕುಲದ ಕೊಲಿಸಿದ ಕರ್ಮಫಲ ತನ್ನ ಯಾದವ ಕುಲವ ಕೊಲಿಸಿತ್ತು.
ಮತ್ತಾ ಲೀಲೆಯಿಂದ ಮತ್ತೆಯೂ ಪರ್ವತನಾರಂದರ ಸತಿಯ ಬಲುಮೆ,
ಇಂತೆ ಕೊಂಡ ಕರ್ಮಫಲ ರಾವಣಗೊಪ್ಪಿಸಿತ್ತು.
ತನ್ನ ಪ್ರಿಯತಮೆಯೆನಿಸುವ ಸೀತಾಂಗನೆಯ
ಇನ್ನು ಮಿಕ್ಕಿನ ದೇವದಾನವಮಾನವರನೊಕ್ಕಲಿಕ್ಕಿಯಾಡದಿಹುದೆಯಾ ಕರ್ಮವು.
ಆದಡಾ ಕರ್ಮವು ಸ್ವತಂತ್ರವೋ, ಪರತಂತ್ರವೋ ಎಂಬೆಯಾದಡೆ,
ಆ ಕರ್ಮ ಈಶ್ವರಾಜ್ಞೆಯಲ್ಲದ ಕರ್ಮಿ ತಾನಾದಂತೆ,
ಇದಂ ಗುರು ಕನಿಷ್ಠಾಧಮಮಧ್ಯಮ ಕ್ರಿಯೆಗಳಿಂ ವಿಧಿಸಿದ ವಿಧಿಗಳಿಂ,
ವಿಧಿನಿಷೇಧ ಕರ್ಮಂಗಳೆಂಬ ಸಮೂಹಕರ್ಮಗಳಿಗೆ ತಾರತಮ್ಯವಿಡಿದು,

ಪುಣ್ಯಪಾಪಂಗಳ ನಿರ್ಮಿಸಿ, ಅಜ್ಞಾನಿಪಿತವ ಮಾಡಿದನೀಶ್ವರನು.
ನಾಕನರಕಾದಿಗಳೆ ಸಾಧನವಾಗಿ, ಕರ್ಮಕರ್ತನನೆಯ್ದುವರೆ,
ಕರ್ಮ ಕರ್ತನು ಈಶ್ವರನಾದಡೆ ಕರ್ಮನಿ ಶ್ವರಾಜ್ಞೆಯಿಂದೈದುವಡೆ,
ಆ ಕರ್ಮ ಕರ್ತನಹ ಈಶ್ವರನನು ಬ್ರಹ್ಮನ ಮೇಲ್ದಲೆಯನರಿದುದಲಾ.
ಆ ಕರ್ಮ ಆತನನೆಯ್ದುದುಮೆನಲು, ಅಹಂಗಾಗದು.
ವಿರಿಂಚನು ರಜೋಗುಣಹಂಕಾರದಿಂ
ಸುರ ಕಿನ್ನರ ಗರುಡ ಗಾಂಧರ್ವ ಸಿದ್ಧ ವಿದ್ಯಾಧರರು
ತಮ್ಮೊಳು ಬ್ರಹ್ಮವಾದದಿಂ ಸಂಪಾದಿಸಿ
ತಿಳಿಯಲರಿಯದೆ, ಬ್ರಹ್ಮನಂ ಬೆಸಗೊಳಲು,
ಬೊಮ್ಮವಾನೆನಲು, ಆ ಕ್ಷಣಂ ಗಗನದೊಳು`ತೋರ್ಪ
ಅತ್ಯನುಪಮ ದೇದೀಪ್ಯಮಾನ ತೇಜಃಪುಂಜ ಜ್ಯೋತಿರ್ಲಿಂಗಾಕಾರಮುಂ
ತೋರಲಾ
ಬ್ರಹ್ಮೇಶ್ವರರು ಆ ವಸ್ತುನಿರ್ದೇಶಮಂ ಮಾಳ್ಪೆನೆಂದು
ಪಿತಾಮಹನು ಚತುಸ್ಶಿರ ಮಧ್ಯದಲ್ಲಿ ಮೇಲ್ದಲೆಯಂ ಪುಟ್ಟಿಸಿ,
॥ಶ್ರುತಿ॥ 'ಋತಂ ಸತ್ಯಂ ಪರಂ ಬ್ರಹ್ಮ'ಯೆಂದು ಋಗ್ಯಜುಸ್ಸಿನಲ್ಲಿ ನುತಿಸುತ್ತಂ
ಇರಲು,
ಬ್ರಹ್ಮಾಧಿಪತಿ ತತ್ಪರ ಬ್ರಹ್ಮಶಿವ ಇತಿ ಓಂ, ಇತಿ ಬ್ರಹ್ಮಾ ಇತಿ.
ಇಂತೀ ಶ್ರುತಿ ಸಮೂಹವೆಲ್ಲವು ಶಿವನನೆ ಪರಬ್ರಹ್ಮವೆಂದು ಲಕ್ಷಿಸಿ,
ಮತ್ತತನದಿಂ ಮರದೂ ಅಬ್ರಹ್ಮವೆನಲುಂ
ದ್ರುಹಿಣನ ಮೇಲ್ದಲೆಯಂ ಅಪ್ರತಿಮ ತೇಜೋಮಯ ಲೀಲಾಲೋಲಾ ಶೀಲ
ದುಷ್ಟನಿಗ್ರಹಿ ಶಿಷ್ಟ ಪ್ರತಿಪಾಲಕನನೆಯಾಕ್ಷಣಂ,
ಘನರೌದ್ರ ಕೋಪಾಟೋಪಿಯೆನಿಸುವ ಕಾಲರುದ್ರಂ ಸಮೀಪಸ್ಥನಾಗಿರ್ದು,
ಜ್ಯೇಷ್ಠಾ ತರ್ಜನಾಂಗುಲಿ ನಖಮುಖದಿಂ ಛೇದಿಸಲು,
ವಿಧಿ ಭಯಾತುರನಾಗಿ 'ಓಂ ನಮೋ ದೇವಾಯ ದೇವ್ಯೈ ನಮಃ,
ಸೋಮಾಯ ಉಮಾಯ್ಯೆ ನಮಃ'
ಎಂದು ಸೋಮಾಷ್ಟಕದಿಂ ಸ್ತುತಿಸಿ, ನಮಿಸಿಯಜಿಸಿ ಮೆಚ್ಚಿಸಿ,
ಸ್ವಾಮಿ ಸರ್ವೇಶ್ವರ, ವ್ಯೋಮಕೇಶ, ದೇವದೇವ ಮಹಾಪ್ರಸಾದ.
ಈ ಶಿರಮಂ ಬಿಸಾಟದಿರಿ, ಬಿಸಾಟಲು ಪುರತ್ರಯ ಜಗಮಳಿಗುತ್ತಂ ನಿಮಿತ್ತಂ
ಪರಮ ಕೃಪಾನಿಧಿ ಪರಬ್ರಹ್ಮ ಪರಂಜ್ಯೋತಿ ಪರಮೇಶ್ವರ ಪರಮಭಟ್ಟಾರಕ
ಪರಾತ್ಪರತರಸದಕ್ಷರ ಚಿನ್ಮೂರ್ತಿ ಸ್ವಯಂಭೋ
ಸ್ವಾತಂತ್ರೇಶ್ವರಾಯೆನುತ ಕೀರ್ತಿಸುತ್ತಿರಲು,
ಪರಬ್ರಹ್ಮ ನಿರೂಪದಿಂ ಕಾಲರುದ್ರನ ಕಪಾಲಮಂ ಧರಿಸಿದನೆಂದು.
ಇನ್ನೆಮಗಿದೆ ಮತವೆಂದು ಸರ್ವದೆ ತಾ ಗರ್ವ ಕಂಡೂಷಮಂ
ಉರ್ವಿಯೊಳೀಗಮೆ ತೀರ್ಚಿಪೆನೆಂದು

ಪಿಡಿದು ನಡೆದಂ ಭಿಕ್ಷಾಟನಕಂದು.
ಅಹಲ್ಯೆ ಸಾಯಿತ್ತಿದ್ದು, ಕರ ಹೊಸತು ಇನಿತರಿಂದ ಕಾಲರುದ್ರಂಗೆ
ಬ್ರಹ್ಮೇತಿಯಾಯಿತ್ತೆಂಬ ಕರ್ಮವಾದಿ ಕೇಳಾದಡೆ.
॥ಶಾಮಶ್ರುತಿ॥ 'ತ್ವಂ ದೇವೇಷು ಬ್ರಾಹ್ಮಣಾಹ್ವಯಃದುನುಷ್ಯೋಮನುಷ್ಯೇವು
ಬ್ರಾಹ್ಮಣಾಮುಪದಾವತ್ಯುಪದಾರತ್ಯಾ' ಎನಲು,
'ಬ್ರಾಹ್ಮಣೋ ಭಗವಾನ್ ರುದ್ರಃ' ಎನಲು,
'ಕ್ಷತ್ರಿಯಃ ಪರಮೋ ಹರಿಃ' ಎನುತಿರಲು,
'ಪಿತಾಮಹಸ್ತು ವೈಶ್ಯಸಾತ್' ಎನಲು,
ಬ್ರಾಹ್ಮಣೋತ್ತಮ ಬ್ರಾಹ್ಮಣಾದಿ ಪತಿ ಪರಬ್ರಹ್ಮವಿದ್ದಂತೆ.
ತಾನೆ ಪರಬ್ರಹ್ಮಮೆನಲಾ ವಿಧಿಯ ಶಿಕ್ಷಿಪದು ವಿದಿತವಲ್ಲದೆ ನಿಷೇಧವಲ್ಲ.
ಅದೆಂತೆನಲು, ಭೂಚಕ್ರವಳಯದೊಳು
ಭೂಮೀಶನು ಅನ್ಯಾಯಗಳ ಶಿಕ್ಷಿಸಿದ ಭೂರಕ್ಷಣ್ಯವು,
ಲೋಕಹಿತವಲ್ಲದೆ ದೋಷ ಸಾಧನಮೆಯೆಲ್ಲಾ,
ಪಾಪಿಗೆ ತಕ್ಕ ಪ್ರಾಯಶ್ಚಿತ್ತಮೆಂದುಂಟಾಗಿ.
ಇದು ಕಾರಣ, ಶಿಕ್ಷಯೋಗ್ಯನ ಶಿಕ್ಷಿಸಿದವದ
ದೋಷವಿಲ್ಲೆಂದು ಭಾಟ್ಟ(?) ದೊಳೊಂದು ಪಕ್ಷಮಿರೆ,
ಮತ್ತಮದಲ್ಲದೆ, ಅದೊಮ್ಮೆ ಹತ್ತುತ್ತಲೆಯವನಂ ಅತ್ಯುಗ್ರದಿಂ ವಂದಿಸಿದ ಶ್ರೀರಾಮಂಗೆ
ಬ್ರಹ್ಮಹತ್ಯಾ ಬ್ರಹ್ಮಕರ್ಮ ವಿದ್ಯಾಬ್ರಹ್ಮರಿಂದಾವಾವ
ಪ್ರಾಯಶ್ಚಿತ್ತದಿಂತೆಮ್ಮನೆ ಕೆಡದಿರಲು,
ಆ ರಾಮಂ ಆ ರಾವಣಹತ ದೋಷನಿರುಹರಣಕ್ಕಾವುದು ಕಾಣದಿರಲು,
ಶಂಭುಪೌರಾಣಿಕನೆಂಬ ನಾಮವಂ ತಾಳ್ದು, ಶಿವಂ ರಾಮಂಗೆ ಪ್ರತ್ಯಕ್ಷಮಾಗಿ,
ಈ ದೋಷಕ್ಕೆ ಲಿಂಗಪ್ರತಿಷ್ಠೆಯ ನಿರೋಹರಣಮೆಂದರುಪಿ,
ಅರಿದಾ ರಾಮಂಗಂ ಗಂಧಮಾದ ಪರ್ವತವೇ ಆದಿಯಾಗಿ,
ಆದನು ಕೋಟೆಯ ಅವಧಿಯಾಗಿ
ಶಿವಲಿಂಗಪ್ರತಿಷ್ಠೆಯಂ ಮಾಡೆ,
ರಾಮೇಶ್ವರಲಿಂಗಮೆನಿಪ್ಪ ನಾಮಾಂಕಿತದಿಂ ತಕವಕ ಮಿಗೆವರಿದು
ಸ್ವಾತ್ವಿಕಭಕ್ತಿಭಾವದಿಂದರ್ಚಿಸಿ ಸ್ತುತಿಸಿ,
ಭೂವಳಯದೊಳೆಲ್ಲಂ ಪ್ರದಕ್ಷಿಣ ಮುಖದಿಂ ಶಿವಲಿಂಗಾಲಯಮನೆತ್ತಿಸಿ,
ಅಂತಾ ಸಹಸ್ರಾವಧಿಯೆನಿಸುವ ದಶಗ್ರೀವ ವಧೆಯಂ ಪರಿಹರಿಸಿದ ಹಾಗೆ,
ಶ್ರೀಮನ್ಮಹಾದೇವನೂ ದೇವಾದಿದೇವನೂ ದೇವಚಕ್ರವರ್ತಿ
ದೇವಭಟ್ಟಾರಕನೂ
ದೇವವೇಶ್ಯಾಭುಜಂಗನೂ ಸರ್ವದೇವತಾ
ನಿಸ್ತಾರಕನೂ ಸರ್ವದೇವತಾ ಯಂತ್ರವಾಹಕನೂ

ಒಂದಾನೊಂದೆಡೆಯಲ್ಲಿ ಮಹಾದೇವೇಶ್ವರನು ರುದ್ರೇಶ್ವರನು ಈಶ್ವರೇಶ್ವರನು ಶಂಕರೇಶ್ವರನೆನಿಪ ನಾಮಂಗಳಿಂ,
ಭೂವಳಯದೊಳು ಲಿಂಗಪ್ರತಿಷ್ಠೆಯಂ ಬ್ರಹ್ಮಶಿರಚ್ಛೇದನ ನಿಮಿತ್ಯನಂ ಮಾಡಿದುದುಳ್ಳಡೆ,
ಹೇಳಿರೆ ಕರ್ಮವಾದಿಗಳು.
ಅಂತುಮದಲ್ಲದೆಯುಂ ಆ ಉಗ್ರನಿಂದಂ ಪಿತಾಮಹಂ ಅವಧಿಗಡಿಗೆ ಮಡಿವುದಂ
ಕೇಳ್ದರಿಯಿರೆ.
ಅದಲ್ಲದೆಯುಂ, ದಕ್ಷಾಧ್ವರದೊಳಾ ದಕ್ಷ ಪ್ರಜಾಪತಿಯ ಶಿರವನರಿದು,
ಕರಿಯದಲೆಯನೆತ್ತಿಸಿದ.
ಅದಲ್ಲದೆಯುಂ ಸುತೆಗಳುಪಿದ ವಿರಂಚಿ ಹತಿಸಿದಂದು,
ಅದಲ್ಲದೆಯುಂ ಸಮಸ್ತದೇವತೆಗಳ ಆಹಾರ ತೃಪ್ತಿಗೆ ಬೇಹ ಅಮೃತತರನಂ ಚರಣಾಂಗುಷ್ಠದಿಂದೊರಸಿದಂದು,
ಅದಲ್ಲದೆಯುಂ ವಿಷ್ಣು ತಾನೆಯೆನಿಪ ವಿಶ್ವಕ್ಸೇನನ ತ್ರಿಶೂಲದಿಂದಿರಿದೆತ್ತಿ ಹೆಗಲೊಳಿಟ್ಟಂದು,
ಅದಲ್ಲದೆಯುಂ ಮತ್ಸ್ಯ ಕೂರ್ಮ ವರಾಹ ನಾರಸಿಂಹ ತ್ರಿವಿಕ್ರಮಾದಿಗಳಂ ಮುಂದುವರಿದು ಕೊಂದಂದು
ಅದಲ್ಲದೆಯುಂ ದೇವಿದ್ವಿಜರಿಗೆ ಗುರುವೆನಿಸುವ ಪಾವಕನ ಏಳು ನಾರಿಗೆಗಳ ಕೀಳುವಂದು,
ಅದಲ್ಲದೆಯುಂ ಯಜ್ಞವಾಟದೊಳು ಪ್ರಾಜ್ಞನೆನಿಸುವ ಪೂಶಾದಿತ್ಯನ ಹಲ್ಲ ಕಳದು,
ಭಾಗಾದಿತ್ಯನಂ ಮೀಂಟಿ ವಾಣಿಯ ಮೂಗಂ ಮಾಣದೆ ಕೊಯ್ದು,
ದೇವಮಾತೃಕೆಯರ ದೊಲೆ ನಾಶಿಕವ ಚಿವುಟಿದಂದು,
ಅದಲ್ಲದೆಯುಂ ಬ್ರಹ್ಮಾಂಡಕೋಟಿಗಳನೊಮ್ಮೆ ನಿಟಿಲತಟನಯನಂ ಲಟಲಟಿಸಿ ಶೀಘ್ರದಿಂದ ಸುಡಲು,
ಸುರಾಸುರ ಮುನಿನಿವಹ ಹರಿಹಿರಣ್ಯಗರ್ಭರು ಶತಕೋಟಿ ಹತವಾದಂದು,
ಪೊರ್ದದಾ ಬ್ರಹ್ಮಹತ್ಯಂ ನಿರ್ಧರಮಾಗಿ ಬೊಮ್ಮನ ಮೇಲ್ದಲೆಯೊಂದ ಚಿವುಟಿದುದರಿಂದಂ
ಒಮ್ಮೆಯ ಶೂಲಪಾಣಿಗೆ ಬ್ರಹ್ಮೇತಿಯಾದುದತಿಚೋದ್ಯ ಚೋದ್ಯ.
ಅವಲ್ಲದೆಯೂ ಬ್ರಹ್ಮ ಸಾಯನು.
ಅಂಗಹೀನಮಾದುದಲ್ಲದೆ ಹೋಗಲಾ ಸಾಮಾನ್ಯ ಚರ್ಚೆ ಕರ್ಮಗತ ಕರ್ಮಿಯೆನಿಸುವ ನಿನ್ನ ಕರ್ಮವಾದವೆಲ್ಲಿಗೂ ಸಲ್ಲದು.
ಬ್ರಹ್ಮಮಸ್ತಧಾರಣ ಲೀಲಾಲೋಲ ಶೀಲಬ್ರಹ್ಮೇಶ್ವರ ಪರಬ್ರಹ್ಮ
ಶ್ರೀಮನ್ಮಹಾದೇವನ ನಾಮಸಂಕೀರ್ತನ ಮಾತ್ರದಿಂದು ಬ್ರಹ್ಮಹತ್ಯಕೋಟಿಗಳುಂ

ಮಹಾಪಾತಕವಗಣಿತಂ ನಿರಿಗೆಣೆಯಾದಕೂಲಮಂ ಭರದೊಳನಲ
ಗ್ರಹಿಸಿದಂತಾಗುಮೆನೆ.
ಬ್ರಹ್ಮ ಪಂಚಬ್ರಹ್ಮಮೆನಲು ಬ್ರಹ್ಮಪಾಪಕಾಶಿಯೆನಲು,
ಶಿವಲಿಂಗ ದರ್ಶನ ಮಾತ್ರ ಬ್ರಹ್ಮಹತ್ಯವಳಿವವೆನಲು,
ಆ ಶಿವನೆ ಬ್ರಹ್ಮಹತ್ಯವೆ ಇದುಯೆಂಬುದು ಮೊಲನ ಕೋಡಿನಂತೆ.
ಇದು ಕಾರಣ, ಕರ್ಮ ಶಿವನಾಜ್ಞೆವಿಡಿದು ಕರ್ಮಿಯ ಗ್ರಹಿಸೂದು.
ಕರ್ಮಸಾರಿಯಲಿ ಕರ್ಮ ನಿರ್ಮಲಕರ್ಮ ಕಾರಣ ಕರ್ತೃವೆಂದರಿಯದಡೆ,
ಎಲೆ ಕರ್ಮವಾದಿ, ನಿನಗೆ ಗತಿ ಉಂಟೆಂದುದು,
ಬಸವಪ್ರಿಯ ಕೂಡಲಚೆನ್ನಸಂಗನ ವಚನ. ॥ ೬೫ ॥

೩೩೨

ಮನಕ್ಕೆ ಮನ ಒಂದಾಗಿ, ಭಾವಕ್ಕೆ ಭಾವ ಒಂದಾಗಿ,
ನಚ್ಚಿ ಮಚ್ಚಿದ ಶರಣರ ದರುಶನವಾದ ಬಳಿಕ,
ಎತ್ತಲೆಂದರಿಯೆನಯ್ಯಾ ಲೌಕಿಕವ.
ಬಸವಪ್ರಿಯ ಕೂಡಲಚೆನ್ನಸಂಗಾ, ನಿಮ್ಮ ಶರಣ ಪ್ರಭುದೇವರಿಗೆ
ಶರಣೆಂಬುದಲ್ಲದೆ ಅನ್ಯವನೇನೆಂದೂ ಅರಿಯೆನು. ॥ ೬೬ ॥

೩೩೩

ಮನಕ್ಕೆ ಮನವೇಕಾರ್ಥವಾಗಿ,
ಕಾಯಕ್ಕೆ ಕಾಯ ಸಂಬಂಧವಾಗಿ,
ಪ್ರಾಣಕ್ಕೆ ಪ್ರಾಣ ಸಮದರ್ಶನವಾಗಿದ್ದವರಲ್ಲಿ
ತೆರೆಮರೆಯೆಂಬುದಿಲ್ಲ ನೋಡಯ್ಯಾ,
ಸಂಗ ನಿಸ್ಸಂಗವಾಗಿಪ್ಪವರಲ್ಲಿ ಉಪಚರ್ಮಕ್ಕೆ ಇಂಬಿಲ್ಲ ನೋಡಯ್ಯಾ.
ಬಸವಪ್ರಿಯ ಕೂಡಲಚೆನ್ನಸಂಗಯ್ಯನ ಶರಣ
ಬಸವಣ್ಣನಟ್ಟಿದನು, ಕೃಪೆಮಾಡಾ ಗುರುವೆ. ॥ ೬೭॥

೩೩೪

ಮನದಲ್ಲಿ ಲಿಂಗ ಘನವೆಂದಡೆ ಸಾಲದೆ ಅಯ್ಯಾ ?
ವಚನದಲ್ಲಿ ಜಂಗಮ ಘನವೆಂದಡೆ ಸಾಲದೆ ಅಯ್ಯಾ ?
ಮನಸಿನ ವಚನದ ದಿಟಕ್ಕೆ ದೂರವೆ ಅಪ್ರಮಾಣವೆ ಅಯ್ಯಾ ?
ಹಿತ್ತಿಲಲ್ಲಿ ನಿಧಾನವಿರ್ದಡೇನು ತೆಗೆದು ಭೋಗಿಸದನ್ನಕ್ಕರ ?
ಬಸವಪ್ರಿಯ ಕೂಡಲಚೆನ್ನಸಂಗಯ್ಯಂಗೆ, ಅವರಂದಂದಿಗೆ ದೂರವಯ್ಯಾ ॥ ೬೮ ॥

೩೩೫

ಮಾಯಾಕೋಳಾಹಳನೆಂಬ ಬಿರುದ ಸೂರೆಗೊಂಡರು ಪ್ರಭುದೇವರು.
ಯೋಗಾಂಗವ ಸೂರೆಗೊಂಡರು ಸಿದ್ಧರಾಮೇಶ್ವರದೇವರು.

ಭಕ್ತಿಸ್ಥಲವ ಸೂರೆಗೊಂಡು, ನಿತ್ಯಪವಾಡವ ಗೆದ್ದರು ಬಸವೇಶ್ವರದೇವರು.
ಷಟ್‌ಸ್ಥಲವ ಸೂರೆಗೊಂಡರು ಚನ್ನಬಸವೇಶ್ವರದೇವರು.
ಐಕ್ಯಸ್ಥಲವ ಸೂರೆಗೊಂಡರು ಅಜಗಣ್ಣದೇವರು.
ಶರಣಸತಿ ಲಿಂಗಪತಿಯಾದರು ಉರಿಲಿಂಗದೇವರು.
ಪ್ರಸಾದಿಸ್ಥಲವ ಸೂರೆಗೊಂಡರು ಬಿಬ್ಬಿ ಬಾಚಯ್ಯಂಗಳು,
ಜ್ಞಾನವ ಸೂರೆಗೊಂಡರು ಚಂದಿಮರಸರು.
ನಿರ್ವಾಣವ ಸೂರೆಗೊಂಡರು ನಿಜಗುಣದೇವರು.
ಪ್ರಸಾದಕ್ಕೆ ಸತಿಯಾದರು ಅಕ್ಕನಾಗಮ್ಮನವರು.
ಉಟ್ಟುದ ತೊರೆದು ಬಟ್ಟಬಯಲಾದರು ಮೋಳಿಗಯ್ಯನ ರಾಣಿಯರು.
ಪರಮ ದಾಸೋಹವ ಮಾಡಿ,
ಲಿಂಗದಲ್ಲಿ ನಿರವಲಯನೈದಿದರು ನೀಲಲೋಚನೆಯಮ್ಮನವರು.
ಪರಮವೈರಾಗ್ಯದಿಂದ ಕಾಮನ ಸುಟ್ಟ ಭಸ್ಮವ
ಗುಹ್ಯದಲ್ಲಿ ತೋರಿಸಿ ಮೆರೆದರು ಮಹಾದೇವಿಯಕ್ಕಗಳು.
ಗಂಡ ಸಹಿತ ಲಿಂಗದಲ್ಲಿ ಐಕ್ಯವಾದರು ತಂಗಟೂರ ಮಾರಯ್ಯನ ರಾಣಿಯರು.
ಇಂತಿವರು ಮುಖ್ಯವಾದ ಏಳುನೂರೆಪ್ಪತ್ತು ಅಮರ ಗಣಂಗಳ
ಶ್ರೀಪಾದವ ಅಹೋರಾತ್ರಿಯಲ್ಲಿ ನೆನೆನೆದು ಬದುಕಿದೆನಯ್ಯಾ,
ಬಸವಪ್ರಿಯ ಕೂಡಲಚೆನ್ನಸಂಗಮದೇವಾ. ॥ ೬೯ ॥

೩೩೭

ಮಿಂಚುಬುಳು ಒಮ್ಮೆ ಪ್ರಚಂಡ ತೇಜೋಮಯ ಸೂರ್ಯಂಗೆ
ಸರಿಯಾದಂದು, ಹರಿ ಹರಂಗೆ ಸರಿಯಹನು.
ಕಹಿಬೇವಿನ ಕೊರಡು ಬಾವನ್ನ ಶ್ರೀಗಂಧಕ್ಕೆ ಸರಿಯಾದಂದು,
ವಿರಿಂಚಿ ಗಿರೀಶಂಗೆ ಸರಿಯಹನು.
ಅಜ್ಞಾನ ಸುಜ್ಞಾನಕ್ಕೆ ಸರಿಯಾದಂದು, ವಜ್ರಪಾಣಿ ಮೊದಲಾದ
ದೇವ ದಾನವ ಮಾನವರು ಶೂಲಪಾಣಿಗೆ ಸರಿಯಹರು.
ಏನ ಹೇಳುವೆ, ಅಜ್ಞಾನಿ ಜನರ ಅಜ್ಞಾನಪ್ರಬಲ ಚೇಷ್ಟೆಯನು ?
ಅದೆಂತೆಂದಡೆ:
ಖದ್ಯೋತೋಯದಿ ಚಂಡಭಾನು ಸದೃಶಸ್ತುಲ್ಯೋ ಹರಿಃ ಶಂಭುನಾ
ಕಿಂ ಕಾಷ್ಠಂ ಹರಿಚಂದನೇನ ಸದೃಶಂ ತುಲ್ಯೋಹಮೀಶೇನ ಚ ।
ಅಜ್ಞಾನಂ ಯದಿ ವೇದನೇನ ಸದೃಶಂ ದೇವೇನ ತುಲ್ಯೋ ಜನಾ
ಕಿಂ ವಕ್ಷ್ಯೇ ಸುರಪುಂಗವಾ ಅಹಮಹೋಮೋಹಸ್ಯದುಶ್ಚೇಷ್ಟಿತಂ
ನಿಮಗೆ ಸರಿಯೆಂಬವರಿಗೆ ನರಕವೆ ಗತಿಯಯ್ಯಾ,
ಬಸವಪ್ರಿಯ ಕೂಡಲಸಂಗಮದೇವಾ. ॥ ೭೦ ॥

೩೩೭

ಯುಗಜುಗಂಗಳ ಅಳಿವು ಉಳಿವನರಿಯದೆ,
ಹಗಲಿರುಳೆಂಬವ ನೆನಹಿನಲೂ ಅರಿಯದೆ, ಲಿಂಗದಲ್ಲಿ ಪರವಶವಾಗಿರ್ದ
ಪರಮಪರಿಣಾಮಿಯನೇನೆಂದುಪಮಿಸುವೆನಯ್ಯಾ ?
ಆಹಾ ! ಎನ್ನ ಮುಕ್ತಿಯ ಮುಕುರದ ಇರವ ನೋಡಾ.
ಆಹಾ ! ಎನ್ನ ಸತ್ಯದಲ್ಲಿ ಸ್ವಾನುಭಾವದ ಕಳೆಯ ನೋಡಾ.
ಆಹಾ ! ಅಷ್ಟತನುಗಳ ಪಂಗನಳಿದು, ನಿಬ್ಬೆರಗಾಗಿ ನಿಂದ ಚಿತ್ಸುಖಿಯ ನೋಡಾ.
ಬಸವಪ್ರಿಯ ಕೂಡಲಚೆನ್ನಸಂಗಮದೇವಯ್ಯಾ,
ಪರಮಪ್ರಸಾದಿ ಮರುಳಶಂಕರದೇವರ ನಿಲವ
ಪ್ರಭು ಬಸವಣ್ಣನಿಂದ ಕಂಡು ಬದುಕಿದೆನು, ಬದುಕಿದೆನು. ॥ ೭೧ ॥

೩೩೮

ರಾಜಸ ತಾಮಸಕೆ ಕೊಂಡವರ, ಭಕ್ತರೆಂದವರ,
ನೆಲೆಗೊಂಡಿರೆ ಸಲೆಯಾಗದು.
ಆಗಳಿಕೆ ಆಗಳು ಅವಮಾನವಹುದು,
ಮನೋವಿರೋಧವನು ಕಳೆಯಲುಬಾರದು.
ಅವರು ತಮ್ಮಾಸೆಗೆ ಅದು ಸುಖವೆನುತಿಪ್ಪರು.
ಬಂದ ಸಮಯವ ಕೈಕೊಂಡು, ಉಳ್ಳುದನೀವುದು ಕರಲೇಸು,
ಬಸವಪ್ರಿಯ ಕೂಡಲಚೆನ್ನಸಂಗಮದೇವಾ. ॥ ೭೨ ॥

೩೩೯

ಲಿಂಗ ಜಂಗಮ, ಜಂಗಮ ಲಿಂಗವೆಂಬುದನಾರು ಬಲ್ಲರು ?
ಬಸವಣ್ಣನಲ್ಲದೆ.
ಲಿಂಗಕ್ಕೆ ಆಧಾರವಿಲ್ಲವೆಂದು ಮರ್ತ್ಯಲೋಕಕ್ಕೆ ಬಂದು,
ಅವತರಿಸಿದನಯ್ಯಾ ಬಸವಣ್ಣನು.
ಲಿಂಗಮುಖ ಜಂಗಮವೆಂದರಿದು,
ತನ್ನನರ್ಪಿಸಿ, ಇದಿರ ತಪ್ಪಿಸಿ ಇರಬಲ್ಲನಯ್ಯಾ ಬಸವಣ್ಣನು.
ಅಂಗಮುಖವೆಲ್ಲ ನಷ್ಟವಾಗಿ,
ಭೃತ್ಯಾಚಾರವೆ ತನುವಾಗಿರಬಲ್ಲನಯ್ಯಾ ಬಸವಣ್ಣನು.
ಪ್ರಾಣನ ಕಳೆಯರತು ಜಂಗಮವೇ ಪ್ರಾಣವಾಗಿರಬಲ್ಲನಯ್ಯಾ ಬಸವಣ್ಣನು.
ಬಸವಪ್ರಿಯ ಕೂಡಲಚೆನ್ನಸಂಗಯ್ಯನಲ್ಲಿ,
ಆಚಾರವೇ ಪ್ರಾಣವಾಗಿಪ್ಪ ಸಂಗನಬಸವಣ್ಣನೆ
ನಿಮಗೆ ಭಕ್ತನಯ್ಯಾ ಪ್ರಭುವೆ. ॥ ೭೩ ॥

೩೪೦

ಲಿಂಗ ಮುಂತಾದ ಭಕ್ತನ ಅಂಗದ ಮೇಲಣ ಲಿಂಗ
ಹೋಯಿತ್ತೆಂದು ಸಂದೇಹವ ಮಾಡಿ,
ಶೈಲ ವಾರಿ ಪಾಶ ಶಸ್ತ್ರ ಸಮಾಧಿ ಎಂಬಿವ ಕೊಳಲಾಗದು.
ಅದೆಂತೆಂದಡೆ:
ಭಕ್ತಸ್ಯ ಲಿಂಗದೇಹಸ್ಯ ತದ್ದೇಹಂ ಲಿಂಗವರ್ಜಿತಂ ।
ಶಸ್ತ್ರ ಶೈಲಂ ಜಲಂ ಪಾಶಂ ಸಮಾಧಿಶ್ಚ ವಿವರ್ಜಯೇತ್ ॥
ಎಂದುದಾಗಿ, ಇದಕ್ಕೆ ಮುಕ್ತಿಯನೆಯ್ದುವ ಪಥವೆಂತೆಂದಡೆ:
ನಿಶ್ಚಿತಂ ನಿರ್ಮಲಂ ಚೈವ ನಿಶ್ಚಲಂ ನಿರುಪಾಧಿಕಂ ।
ಭುಕ್ತಿಮುಕ್ತಿಪ್ರದಾತಾಹ ಇತ್ಯತ್ವಂ ಶಿವಮಂದಿರಂ ॥
ಎಂದುದಾಗಿ, ಧ್ಯಾನ ಧಾರಣ ಸಮಾಧಿಯಲ್ಲಿಹುದು.
ಅದೆಂತೆಂದಡೆ:
ತಪೋ ಧ್ಯಾನಾಧಿಕಂ ಕುರ್ವನ್ ರುದ್ರಾಕ್ಷಂ ಧಾರಯನ್ ಸದಾ ।
ಶಿವಮಂತ್ರಜಪಂ ಶ್ಚೈವ ಶಿವಲೋಕೇ ಮಹೀಯತೇ ॥
ಇಂತೆಂಬ ಶ್ರುತಿಯ ಮೀರಿ, ಅಂಗಕ್ಕೆ ಆಸೆಯ ಮಾಡಿ,
ಲಿಂಗವ ಧರಿಸಿ ಪೂಜೆಯ ಮಾಡುವ ಶಿಷ್ಯ ಗುರುದ್ರೋಹಿ.
ಹಣವಿಗಾಸೆ ಮಾಡಿ ಲಿಂಗಧಾರಣ ಮಾಡುವ ಗುರು ಶಿವದ್ರೋಹಿ.
ಅದೆಂತೆಂದಡೆ:
ಲಿಂಗಬಾಹ್ಯಕೃತಂ ದೃಷ್ಟ್ವಾ ಪುನರ್ಲಿಂಗಂತು ಧಾರಯೇತ್ ।
ಪೂಜಾಯಾ ನಿಷ್ಫಲಾ ಚೈವ ರೌರವಂ ನರಕಂ ವ್ರಜೇತ್ ॥
ಎಂದುದಾಗಿ, ಇಂತು ಇವರಿಗೆ ಗುರುವಿಲ್ಲ, ಲಿಂಗವಿಲ್ಲ, ಜಂಗಮವಿಲ್ಲ,
ಪಾದೋದಕವಿಲ್ಲ, ಪ್ರಸಾದವಿಲ್ಲ, ವಿಭೂತಿ ರುದ್ರಾಕ್ಷಿ
ಪ್ರಣವ ಪಂಚಾಕ್ಷರಿ ಇಲ್ಲವಾಗಿ ಸತ್ಪಥಕ್ಕೆ ಸಲ್ಲರು ಕಾಣಭೋ.
ಇವರು ಕಂಡಕಂಡವರೊಡನೆ ಹರಿವ ಚಾಂಡಾಲಗಿತ್ತಿಯಂತೆ.
ಇವಂದಿರ ಮುಖವ ನೋಡಲಾಗದು,
ಬಸವಪ್ರಿಯ ಕೂಡಲಚೆನ್ನಸಂಗಮದೇವಾ. ॥ ೭೪ ॥

೩೪೧

ಲಿಂಗ ಮುಟ್ಟಿ ಆಚಮನ ಮಾಡುವರು ಲಿಂಗಾಂಗಿಗಳಲ್ಲದವರು.
ಮಾಡಿದಡೆಯೂ ಮಾಡಲಿ.
ಲಿಂಗ ಪಾದೋದಕವ ಧರಿಸಿ,
ಮರಳಿ ಅಪವಿತ್ರ ಶಂಕೆಯಿಂದ ಆಚಮನ ಮಾಡಿದಡೆ
ಅಘೋರನರಕದಲ್ಲಿಕ್ಕುವದಯ್ಯಾ, ಆ ಪಾದೋದಕವೆ ವಿಷವಾಗಿ.
ಅದೆಂತೆಂದಡೆ:

ಶಂಭೋಃ ಪಾದೋದಕಂ ಪೀತ್ವಾ ಪಶ್ಚಾದಶುಚಿಶಂಕಯಾ ।
ಯ ಆಚಮತಿ ಮೋಹೇನ ತಂ ವಿದ್ಯಾದ್ಬ್ರಹ್ಮಘಾತಕಂ ॥
ಇಂತೆಂಬ ವಚನವ ಕೇಳಿ ನಂಬುವದಯ್ಯಾ.
ಪರಮಪಾವನವಪ್ಪ ಪಾದೋದಕವ ನಂಬದವರು,
ಬಸವಪ್ರಿಯ ಕೂಡಲಚೆನ್ನಸಂಗಯ್ಯಂಗೆ ದೂರ. ॥ ೭೫ ॥

೩೪೨

ವದನದ್ವಾರಕ್ಕೆ ಗುದದ್ವಾರ ಸರಿಯೆಂದು,
ಗುದದ್ವಾರದಲ್ಲಿ ಬಂದುದ ವದನದ್ವಾರದಲ್ಲಿ ಕೊಂಬವಂಗೆ
ಹೋ ಹೋ ! ಹರಂಗೆ ಹರಿಯ ಸರಿಯೆನಬಹುದು.
ಯಾದಾಸ್ಯಾಪಾನಯೋಃ ಸಾಮ್ಯಂ ಇಂದ್ರತ್ವೇಪಿ ನ ವಿದ್ಯತೇ ।
ತಥಾ ವಿಷ್ಣ್ವಾದಿ ಬುಧೈಸ್ತು ರುದ್ರಸಾಮ್ಯಂ ನ ವಿದ್ಯತೇ ॥
ಇಂತೆಂದುದಾಗಿ, ಇದು ಕಾರಣ, ಹರಿವಿರಿಂಚಾದಿ ದೇವತೆಗಳನು
ಶಿವಂಗೆ ಸರಿಯೆಂದು ಗಳಹುವ ನರಕಿಗಳ ಬಾಯಲಿ
ಹುಳು ಸುರಿಯದಿಹವೆ, ಬಸವಪ್ರಿಯ ಕೂಡಲಚೆನ್ನಸಂಗಮದೇವಾ ? ॥೭೬॥

೩೪೩

ವಿಭೂತಿಯಿಂದೆ ಮಾಡಬಹುದು ಅರ್ಬುದಕೋಟಿ ಭಕ್ತರನಾದಡೆಯೂ,
ವಿಭೂತಿಯಿಲ್ಲದೆ ಮಾಡಿ ತೋರಿರೆ ಓರ್ವ ದ್ವಿಜನ ?
ವಿಭೂತಿಯಿಂದೆ ವಿಪ್ರನಾಗನೆ ಕಬ್ಬಿಲಿತಿಯ ಮಗ ವ್ಯಾಸನು ?
ವಿಭೂತಿಯಿಂದಗ್ರಜನಾಗನೆ ಕುಂಭಸಂಭವನು ?
ವಿಭೂತಿಯಿಂದೆ ಹಾರುವನಾಗನೆ ಊರ್ವಶಿಗೆ ಹುಟ್ಟಿದ ವಶಿಷ್ಠನು ?
ವಿಭೂತಿಯಿಂದೆ ವಿಶ್ವಾಮಿತ್ರ ಸದ್ಬ್ರಾಹ್ಮಣನಾಗನೆ ?
ಉರ್ವಿಯೊಳಗೆ ಮುಂಗಯ್ಯ ಕಂಕಣಕ್ಕೆ ಶುಭ್ರದರ್ಪಣವೇಕೆ ?
ವಿಭೂತಿಯನೊಲ್ಲದ ನಿರ್ಭಾಗ್ಯದ್ವಿಜರು,
ಸರ್ವಶಾಸ್ತ್ರ ಶ್ರುತಿ ಸ್ಮೃತಿ ಪುರಾಣ ಶಾಪಹತರೆಂದು
ಶ್ರುತಿಗಳು ಬೊಬ್ಬಿಡುತ್ತಿವೆ, ಬಸವಪ್ರಿಯ ಕೂಡಲಚೆನ್ನಸಂಗಮದೇವಾ. ॥೭೭॥

೩೪೪

ವೇದಂಗಳೆಲ್ಲವು ಶಿವಲಿಂಗಧಾರಣ ಮಾಡಿಸಿಕೊಂಡಪೆವು ಹೇಳುತ್ತಿದೆ ವೇದ.
ದೇವ ದಾನವ ಮಾನವ ಹರಿವಿರಿಂಚಿಗಳು ಮೊದಲಾಗಿ
ಲಿಂಗವ ಪೂಜಿಸಿದರೆಲ್ಲರು ನೋಡಾ.
ತ್ರ್ಯಂಬಕಂ ಯಜಾಮಹೇ ಸುಗಂಧಿಂ ಪುಷ್ಟಿರಿವರ್ಧನಂ ।
ಉರ್ವಾರುಕಮಿವ ಬಂಧನಾನ್ಮೃತ್ಯೋರ್ಮುಕ್ಷೀಯ ಮಾಮೃತಾತ್ ॥
ಎಂದುದು ಶ್ರುತಿ, ಬಸವಪ್ರಿಯ ಕೂಡಲಚೆನ್ನಸಂಗಮದೇವಾ. ॥ ೭೮ ॥

೩೪೫

ವೇದ ನಾಲ್ಕನು ಓದಿದಡೇನು ? ಶಾಸ್ತ್ರವ ನೆರೆ ಕೇಳಿದಡೇನು ?
ಶಿವಜ್ಞಾನಹೀನರು ಬಲ್ಲರೆ ಭಕ್ತಿಯ ಪಥವನು ?
ಅಲೋಡ್ಯಂ ಚ ಚತುರ್ವೇದೀ ಸರ್ವಶಾಸ್ತ್ರವಿಶಾರದಃ ।
ಶಿವತತ್ವಂ ನ ಜಾನಾತಿ ದರ್ವೀ ಪಾಕರಸಂ ಯಥಾ ॥
ಕ್ಷೀರದೊಳಗಣ ಸಟ್ಟುಗ ಸವಿಸ್ವಾದುಗಳ ಬಲ್ಲುದೆ ?
ಓದಿದ ನಿರ್ಣಯವ ನಮ್ಮ ಮಾದಾರ ಚೆನ್ನಯ್ಯ,
ಮಡಿವಾಳಯ್ಯ, ಡೋಹರ ಕಕ್ಕಯ್ಯನವರು ಬಲ್ಲರು,
ಬಸವಪ್ರಿಯ ಕೂಡಲಚೆನ್ನಸಂಗಮದೇವಾ. ॥ ೭೯ ॥

೩೪೬

ವೇದವೆಂಬ ಅಂಜನವ ನೆಚ್ಚಿಕೊಂಡು,
ಶಿವನೆಂಬ ನಿಧಾನವ ಕಾಣಲರಿಯರೀ ದ್ವಿಜರು.
ನರಗುರಿಗಳೆತ್ತ ಬಲ್ಲರು ಹೇಳಾ ? ಯಜುರ್ವೇದಃ
ತದ್ವಿಷ್ಣೋಃ ಪರಮಂ ಪದಂ ಸದಾಪಶ್ಯಂತಿಸೂರಯಃ
ಜ್ವಾಲಾಯ ನಮಃ ಜ್ವಲಲಿಂಗಾಯ ನಮಃ
ಶ್ರೀರುದ್ರಭಾಷ್ಯೇಃ
ಉತ್ತಮ ವೇದ ಭೂಶಿಕೋ ದೇವೋತ್ತುಮಾಭ್ಯಂ ।
ಪ್ರಜವನಮಾಲಂಕೃತಂ ಜಗತ್ಕಾರಣತ್ವೇನ ಜ ।
ನಯಾಮಸ ಶಿವಸಂಕಲ್ಪೋಪನಿಷದಿ
ಪರಾತ್ಪರತರೋ ಬ್ರಹ್ಮಾ ಪರಾತ್ಪರತರೋ ಹರಿಃ
ಯತ್ಪಪರಾತ್ಪರತತೋರೀಶ ತನ್ಮೇಃ ಮನಃ ಶಿವಸಂಕಲ್ಪಮಸ್ತು ॥
ಇಂತೆಂದುದಾಗಿ, ಇದು ಕಾರಣ, ಪಾಪಿಂಗೆ ಪರಮಗತಿಯೇಕೊ,
ಕುರುಡಗೆ ಕನ್ನಡಿಯೇಕೋ,
ಶಿವನ ನಿಜತತ್ವವೇಕೊ ದ್ವಿಜರೆಂಬ ಅರೆಮರುಳುಗಳಿಗೆ
ಬಸವಪ್ರಿಯ ಕೂಡಲಚೆನ್ನಸಂಗಮದೇವಯ್ಯಾ ? ॥ ೮೦ ॥

೩೪೭

ಶಿವಂಗೆ ಅಜ ಹರಿ ಸುರರು ಸರಿಯೆಂದು
ಮನದಲ್ಲಿದ್ದು ಹೊರವಂಟಡೆ, ಸ್ತುತಿಸಿದಡೆ,
ಶಿವದ್ರೋಹಿ ಚಾಂಡಾಲ ಮಟ್ಟಲಾಗದೆಂದುದು ವೇದ.
ಮಾತ್ವಾರುದ್ರಚುಕ್ರುಧಾ ಮಾನವಮೋಭಿರ್ಮಾ
ದುಷ್ಟುತೀ ವೃಷಭ ಮಾಸ ಹೂತೀ ।
ಉನ್ನೋ ವೀರಾಂ ಅರ್ಪಯ ಭೇಷಜೇ
ಭಿರ್ಭಿಷಿಕ್ತಮಂ ತ್ವಾಂ ಭಿಷಜಾಂ ಶೃಣೋಮಿ ॥

ಎಂದುದಾ ಶ್ರುತಿ.
ಇದನರಿದರಿದು ಸರಿಯೆಂದು ನರಕಕ್ಕಿಳಿವಡೆ,
ಕಾರಣವಲ್ಲದು, ಬಸವಪ್ರಿಯ ಕೂಡಲಚೆನ್ನಸಂಗಮದೇವಯ್ಯಾ. ॥ ೮೧ ॥

೩೪೮

ಶಿವಂಗೆ ಬ್ರಹ್ಮವಿಷ್ಣುಗಳು ಸರಿಮಿಗಿಲೆನಲಾಗಿ,
ಸುರಿಯವೆ ಬಾಯಲ್ಲಿ ಬಾಲಹುಳುಗಳು ?
ಧರೆ ಚಂದ್ರ ರವಿವುಳ್ಳನ್ನ ಬರ,
ಇರದೆ ಉರಿಯುತ್ತಿಪ್ಪರಯ್ಯಾ, ನರಕದ ಕಿಚ್ಚಿನಲ್ಲಿ.
ರುದ್ರಸ್ಯ ಬ್ರಹ್ಮವಿಷ್ಣುಭ್ಯಾಂ ನಾಧಿಕಂ ಪ್ರವದಂತಿ ಯೇ ।
ತೇಷಾಂ ಪಾಪಸ್ಯ ಸಾಂಕರ್ಯಮಸ್ತೀತಿ ಮಮ ನಿಶ್ಚಯಃ ॥
ಇದು ಕಾರಣ, ಹರಿಬ್ರಹ್ಮಾದಿ ಸುರರೆಲ್ಲರೂ
ನಿಮ್ಮ ಗಿಂಗರಿಗರೆಂದರಿದವರಿಗೆ ಪರಮಪದವಯ್ಯಾ,
ಬಸವಪ್ರಿಯ ಕೂಡಲಚೆನ್ನಸಂಗಮದೇವಾ. ॥ ೮೨ ॥

೩೪೯

ಶಿವನ ಪ್ರಸಾದವಲ್ಲದೆ ಉಣಲಾಗದೆಂದುದು ವೇದ.
ಶಿವನ ಪಾದೋಕವಲ್ಲದೆ ಕೊಳಲಾಗದೆಂದುದು ವೇದ.
ಜಾಬಾಲ ಶಾಖಾಯಾಂ :
ರುದ್ರೇಣಾತ್ತಮಶ್ನಂತಿ ರುದ್ರೇಣ ಪೀತಂ ಪಿಬಂತಿ ರುದ್ರೇಣ ಘ್ರಾತಂ ಜಿಘ್ನಂತಿ ।
ತಸ್ಮಾದ್ಬ್ರಾಹ್ಮಣಾಃ ಪ್ರಶಾಂತಮನಸಃ ನಿರ್ಮಾಲ್ಯಮೇವ ಭಕ್ಷಯಂತಿ
ನಿರ್ಮಾಲ್ಯಮೇವಸ್ನಪತಿ ॥
ಎಂದುದು, ಬಸವಪ್ರಿಯ ಕೂಡಲಚೆನ್ನಸಂಗಮದೇವಾ. ॥ ೮೩ ॥

೩೫೦

ಶಿವನಲ್ಲದೆ ಮತ್ತೆ ದೈವವಿಲ್ಲೆಂಬುದು ದಕ್ಷನ ಜನ್ಮವು ತಾನೆ ಹೇಳದೆ ಉಳ್ಳಡೆ?
ಕ್ರತುವೇನು ಕಾಯಲಾಗದೆ ಉಳ್ಳಡೆ ? ತಮ್ಮ ಶಿರಂಗಳು ಹೋಗೊಡಲೇಕೆ ?
ಈ ಕ್ರಮುಂಗಳೆಲ್ಲ ಶಿವನೇ ಒಡೆನೆಂದುದು ಋಗ್ವೇದ.
ಅವೋ ರಾಜಾನಮಸ್ಯ ರುದ್ರಂ ಹೋತಾರಂ ಮದ್ವಸತ್ಯಯಜುಗಂ ।
ರೋದಸ್ಯೋಃ ಅಗ್ನಿಂ ಪುರಾತನಯಿತೋರಚಿತಾದ್ವಿರಣ್ಯರೂಪಮವಸೇ ಯಜದ್ವಂ ।
ಎಂಬ ಶ್ರುತಿಯಿದೆ ಇದು ಕಾರಣ,
ಬಸವಪ್ರಿಯ ಕೂಡಲಚೆನ್ನಸಂಗಯ್ಯನಲ್ಲದಿಲ್ಲಾ. ॥ ೮೪ ॥

೩೫೧

ಶಿವಲಿಂಗದೇವರ ಪೂಜಿಸದೆ ಉಂಬವರೆಲ್ಲರೂ
ಹೆಣನ ಮಲವನು ಒಂದಾಗಿಯೆ ತಿಂಬರಯ್ಯಾ,

ಅಲ್ಲಿ ಏನೂ ಸಂದೇಹವಿಲ್ಲಾಗಿ. ಶಿವಧರ್ಮೆ:
ಯಸ್ತು ಲಿಂಗಾರ್ಚನಂ ತ್ಯಕ್ತ್ವಾ ಭುಙ್ತೇ ಕ್ರಿಮಿಕೀಟವಾಂಸಾನ್ ।
ನರೋ ನರಕಗಾಮೀ ಸ್ಯಾತ್ಸರ್ವಲೋಕಬಹಿಷ್ಕೃತಃ ॥
ಅಕೃತ್ವಾ ಪೂಜನಂ ಶಂಭೋ ಯೋ ಭುಙ್ತೇ ಪಾಪಕೃದ್ದ್ವಿಜಃ ।
ಕುಣಪಂ ಚ ಮಲಂ ಚೈವ ಸಮಶ್ನಾತಿ ದಿನೇ ದಿನೇ ॥
ಎಂದುದಾಗಿ, ಇದು ಕಾರಣ, ನಿಮ್ಮ ನಂಬಲರಿಯದ ಪಾಪಿಗಳಿಗೆ
ಎಂದೆಂದಿಗೂ ನರಕ ತಪ್ಪದು,
ಬಸವಪ್ರಿಯ ಕೂಡಲಚೆನ್ನಸಂಗಮದೇವಾ. ॥ ೮೫ ॥

೩೫೭

ಶಿವಾಯ ವಿಷ್ಣುರೂಪಾಯ ಶಿವರೂಪಾಯ ವಿಷ್ಣವೇ
ಎಂಬುದು ವೇದವೇ ಅಲ್ಲ.
ಪ್ರತ್ಯಕ್ಷ ನಿಲ್ಲು, ಮಾಣು.
ಸಂಜೆ ಸಾವಿರಪಾಠವೆಂಬಲ್ಲಿಯೆ ತಾನು ಕಟ್ಟುಕ.
ವೇದವೆರಡುಂಟೆ, ದೈವವೆರಡುಂಟೆ ? ಒಂದೆಯಲ್ಲದೆ.
ಧ್ಯಾನ ಪೂಜೆಯೊಂದೆಯಲ್ಲದೆ ಎರಡುಂಟೆ ?
'ಏಕ ಏವ ರುದ್ರೋ ನ ದ್ವಿತೀಯಾಯ ತಸ್ತೆ' ಎಂಬ ಶ್ರುತಿಯಿರಲು,
ಶಿವನೊಬ್ಬನಲ್ಲದೆ ಇಬ್ಬರುಂಟೆ ?
'ಶಿವ ಏಕೋ' ಧ್ಯೇಯಶ್ಶಿವಂಕರಸ್ಸರ್ವಮನ್ಯತ್ ಪರಿತ್ಯಜೇತ್'
ಎಂದುದಾಗಿ, ವೇದವೆರಡುಂಟೆಂದು ಹೇಳಿ,
ತೋರುವವನ ಬಾಯಲಿ ಎಡದ ಕಾಲ ಕೆರ್ಪನಿಕ್ಕುವೆ,
ಬಸವಪ್ರಿಯ ಕೂಡಲಚೆನ್ನಸಂಗಮದೇವಾ. ॥ ೮೬ ॥

೩೫೩

ಶ್ರವವೆತ್ತಿ ನಡೆವಾಗ ಸ್ಮಶಾನವೈರಾಗ್ಯವಹುದು.
ಪುರಾಣಂಗಳ ಕೇಳುವಲ್ಲಿ ಪುಸ್ತಕವೈರಾಗ್ಯವಹುದು.
ನೆಟ್ಟನೆ ಶರಣಚಾರಿತ್ರವ ಕೇಳುವಲ್ಲಿ ಮರ್ಕಟವೈರಾಗ್ಯವಹುದು.
ಏನನೋದಿಯೂ ಏನ ಕೇಳಿಯೂ ಏನೂ ಫಲವಿಲ್ಲ,
ಹಿಂದೆ ಸತ್ತುದ ಕೇಳುತ್ತಿದ್ದೇನೆ.
ಮತ್ತೆಯೂ ಎನ್ನ ಅನ್ವಯದವರು ಅಳಿವುದ ಕಾಣುತ್ತಿದ್ದೇನೆ.
ಶುನಕ ಬೂದಿಯೊಳು ಮಲಗಿರ್ದಲ್ಲಿ ತನ್ನಾದಿಯ ನೆನೆದು,
ದೇಹದಿಚ್ಛೆಯ ಹಳಿದು, ಜನನ ಜಾಡ್ಯವ ಪರಿವೆನೆಂದು ಯೋಚಿಸುತ್ತಿರಲು,
ಮೆಲ್ಲನೆ ನಿದ್ರೆ ತಿಳಿಯಲು, ಆಗ ತನ್ನಾದಿಯ ಮರೆದು,
ಭ್ರಾಂತೆಡೆಗೊಂಡು, ಕಿವಿಯ ಕೊಡಹುತ್ತ ಹಡಿಕೆಗೆ ಹರಿವಂತೆ ಎನ್ನ ಮುಕ್ತಿ,
ಇಂತಪ್ಪ ಅನುಕ್ತಿಯನಳಿದು, ದೇಹದಿಚ್ಛೆಯ ಹಳಿದು,

ಪರಮವಿರಕ್ತಿಯನಿತ್ತು ರಕ್ಷಿಸಯ್ಯಾ,
ಬಸವಪ್ರಿಯ ಕೂಡಲಚೆನ್ನಸಂಗಮದೇವಾ. ॥ ೮೮ ॥

೩೫೪

ಶ್ರೀಗುರುವಿನ ಕಾರುಣ್ಯದಿಂದ ಕರಸ್ಥಲಕ್ಕೆ ಪ್ರತ್ಯಕ್ಷವಾಗಿ,
ಶಿವಲಿಂಗವ ಬಿಜಯಂಗೈಸಿ, ಸರ್ವಾಂಗವೆಲ್ಲವನು
ಲಿಂಗಸ್ಪರುಶನವ ಮಾಡಿಕೊಟ್ಟ ಬಳಿಕ,
ಲಿಂಗಾಂಗನೆಯರು ಹೊಲೆಗಂಡೆನೆಂದು ತೊಲಗಲಾಗದು.
ಹೊಲತಿ ಲಿಂಗವ ಮುಟ್ಟಿ ಪೂಜಿಸಲಾಗದು.
ಅದೆಂತೆಂದಡೆ:
ಲಿಂಗಾರ್ಚನರತಾ ನಾರೀ ಸೂತಕಸ್ಯಾ ರಜಸ್ವಲಾ ।
ರವಿರಗ್ನಿರ್ಯಥಾ ವಾಯು ತಥಾ ಕೋಟಿಗುಣಃ ಶುಚಿ ॥
ಮತ್ತಂ,
ಪೂಜಲೋಪೋನ ಕರ್ತವ್ಯಃ ಸೂತಕೇ ಮೃತಕೇಽಪಿವಾ ।
ಜಲಬುದ್ಬುದವದ್ದೇಹಂ ತಸ್ಮಾಲ್ಲಿಂಗಂ ಸದಾಽರ್ಚಯೇತ್ ॥
ಎಂದುದಾಗಿ, ಇದು ಕಾರಣ,
ಅಂಗದ ಮೇಲೆ ಲಿಂಗವುಳ್ಳ ಭಕ್ತಾಂಗನೆಯರಲ್ಲಿ
ಹೊಲೆಸೂತಕವ ಕಲ್ಪಿಸುವ[ವ]ರಿಗೆ ಗುರುಲಿಂಗವಿಲ್ಲವಯ್ಯಾ,
ಬಸವಪ್ರಿಯ ಕೂಡಲಚೆನ್ನಸಂಗಮದೇವಾ. ॥ ೮೮ ॥

೩೫೫

ಶ್ರೀವಿಭೂತಿಯ ಬಿಟ್ಟು, ತಪಸ್ಸು ಮಾಡಿದಡೆ, ಆ ತಪಸ್ಸಿನ ಸಿದ್ಧಿ ಬಯಲು.
ಶ್ರೀವಿಭೂತಿಯ ಬಿಟ್ಟು, ದೀಕ್ಷೆಯ ಕೊಂಡಡೆ, ಆ ದೀಕ್ಷೆಯೆಲ್ಲ ಬಯಲು.
ಶ್ರೀವಿಭೂತಿಯ ಬಿಟ್ಟು, ಮಂತ್ರಂಗಳ ಸಾಧಿಸಿದೆಡೆ,
ಆ ಮಂತ್ರಸಿದ್ಧಿಯು ಬಯಲು.
ಶ್ರೀವಿಭೂತಿಯ ಬಿಟ್ಟು, ಯಜ್ಞಂಗಳ ಸಾಧಿಸಿದಡೆ, ಆ ಯಜ್ಞಸಿದ್ಧಿಯು ಬಯಲು.
ಶ್ರೀವಿಭೂತಿಯ ಬಿಟ್ಟು, ದೇವತಾರ್ಚನೆಯ ಮಾಡಿದಡೆ,
ಆ ದೇವತಾರ್ಚನಾಸಿದ್ಧಿಯೂ ಬಯಲು.
ಶ್ರೀವಿಭೂತಿಯ ಬಿಟ್ಟು, ವಿದ್ಯವ ಸಾಧಿಸಿದಡೆ, ಆ ವಿದ್ಯಾಸಿದ್ಧಿಯು ಬಯಲು.
ಶ್ರೀವಿಭೂತಿಯ ಬಿಟ್ಟು, ವೇದವ ಪಠಿಸಿದಡೆ, ಆ ವೇದಸಿದ್ಧಿಯು ಬಯಲು.
ಅದೆಂತೆಂದಡೆ: ಲೈಂಗೇ–
ನ ದೀಕ್ಷಾ ನ ತಪೋ ಮಂತ್ರಂ ನ ಯಜ್ಞೋ ದೇವತಾ ನ ಚ ।
ವಿದ್ಯಾ ನೈವಾಗಮಜ್ಞಾನಂ ಭಸ್ಮಮಾಹಾತ್ಮ್ಯವರ್ಜಿತಂ ॥
ಎಂದುದಾಗಿ, ಬಸವಪ್ರಿಯ ಕೂಡಲಚೆನ್ನಸಂಗಮದೇವಾ,

ನಿಮ್ಮ ದಿವ್ಯಾಲಂಕಾರಮಪ್ಪ ದಿವ್ಯಭಸಿತವ ಬಿಟ್ಟ
ಪಂಚಮಹಾಪಾತಕಂಗೆ ಆವ ಕಾರ್ಯವೂ ಸಿದ್ಧಿಯಿಲ್ಲ, ॥ ೮೯ ॥

೩೫೬

ಶ್ರುತ್ಯಾಗಮ ಶಾಸ್ತ್ರಾದಿಗಳು ದೈವವಲ್ಲದಿರಲಾ, ಸ್ವರ್ಗಮೋಕ್ಷಂಗಳಿಗೆ
ಶ್ರುತ್ಯಾಗಮ ಶಾಸ್ತ್ರಪ್ರಮಾಣ ಸಾಧನವೆಂಬ ಕರ್ಮವಾದಿಗಳಿಗೆ
ನಿರುತ್ತರೋತ್ತರವ ಕೇಳಿರೆ :
॥ ಶ್ರುತಿ ॥ 'ಜ್ಯೋತಿಷ್ಠೋಮೇನ ಸ್ವರ್ಗಕಾಮೋ ಯಜಜೇತ' ಎಂಬ
ವೇದವಾಕ್ಯದ ಬಲುಮೆವಿಡಿದು ನುಡಿವರೆ,
ಯಜ್ಞದಿಂದ ಸ್ವರ್ಗಾಪೇಕ್ಷಿತನು ಅಗ್ನಿಯನೆ ಪೂಜಿಸುವಯೆಂದು,
ಕ್ರಿಯಾಕರ್ಮವೆ ದೈವವೆಂದು, ತಾನು ಮಾಡಿದ ಕರ್ಮ ಫಲವು
ತನಗೆ ಅನುಭವಿಸಲುಳ್ಳದೆಂದು,
ಕರ್ಮಕ್ಕೆ ಕರ್ತೃತ್ವವನ್ನು ಕೆಲಬರು ಕರ್ಮವಾದಿಗಳು ಹೇಳುತ್ತಿಹರು.
ಅಹಂಗಲ್ಲ, ಕರ್ಮವೆ ಶರೀರದಿಂದನುಭವಿಸಲುಳ್ಳರಾಗಿ ವರ್ತಿಸುತ್ತಿಹುದೊ,
ಅಲ್ಲ, ಮತ್ತಾ ಶರೀರಕ್ಕೆ ಕರ್ಮವೆ ಅನಾದಿಯಹುದೊ,
ಈ ಕರ್ಮಕ್ಕೆ ಕಾಯಂಗಳೆರಡು ಜೀವಾತ್ಮನನು ಒಂದೆಬಾರಿಯಯಿದಿದೊ.
ಈಹಿಂಗೆಂದು ಕೆಲಬರು ತರ್ಕಿಸುವರು. ಅದು ಹಂಗಾಗದಿಹುದಲ್ಲದೆ,
ಆ ಕರ್ಮವು ಕ್ಷಣಿಕವಾಗಿಯೂ ಅಚೇತನವಾಗಿಯೂ
ನಿರ್ಗುಣವಾಗಿಯೂ ಕಾಣಲುಳ್ಳದಾಗಿ,
ಅದು ಮಾಡುವಾತನನುಯೆ ಹಾಂಗೆಯಿಹುದು.
ಆಕರ್ತನು ಆವನೊಬ್ಬನು ಅಪರಾಧವ ಮಾಡಿದವ, ಮಾಡಿದ ಪುರುಷನು
ಆ ಅಪರಾಧಕ್ಕೆ ತಕ್ಕುದಾದ ಶಿಕ್ಷೆಯನು ತನಗೆ ತಾನೆ ಮಾಡಿದನೊಯೇನು ಅಲ್ಲ.
ಮತ್ತೆ ಆ ಅಪರಾಧವೆ ಸಂಕಲಿಯಾಗಿ, ಆ ಅಪರಾಧಿಯ ಕಾಲ ಬಂದಿಸುಹವನು.
ಮಾಡೊದೊಯೇನು ಅಲ್ಲ.
ಮತ್ತೆ ಆ ಅಪರಾಧಿಗೆ ಕರ್ಮಿಗೆ ಆ ಕರ್ಮವನು ಸಂಘಟಿಸಲು,
ಕರ್ಮಾಧೀನನಲ್ಲದಾತನಾಗಿ, ಸ್ವತಂತ್ರನಾಗಿ,
ಸರ್ವೇಶ್ವರ ಎಲ್ಲದಕ್ಕೂ ಒಡೆಯನಾಗಿ,
ಸರ್ವಗತನಾಗಿ ಸರ್ವಗತನಾದ ಶಿವನು ಉಂಟಾಗಿ
ಕರ್ಮಕ್ಕೆವೂ ಕರ್ಮಿಗೆವೂ ಕರ್ತೃತ್ವವಾಗದು.
ಈಹಿಂಗಾಂಗದಿಹುದೆ ಪೂರ್ವಮೀಮಾಂಸವನು ಹೇಳುವ ಒಬ್ಬುಳಿಯ
ಕರ್ಮಂಗಳು
ಬೇರೆ ಬೇರೆ ಆರು ಕೆರಂಗಳಾಗುತಿಹವು. ಅವಾವೆನಲು,
ಅಮಾವಾಸ್ಯೆ ಹುಣ್ಣಿಮೆಗಳಲಿ ಪಿತೃಕಾರ್ಯ ಮೊದಲಾದ
ಕರ್ಮಂಗಳ ಮಾಡಬೇಕಾದುದರಿಂದ

ಒಂದಾನೊಂದು ಸಂಸ್ಕಾರವನ್ನು ಸಂಘಟಿಸುತ್ತಿಹವು.
ಆ ಸಂಸ್ಕಾರರೂಪಂಗಳಾದ ಆರು ಅಪೂರ್ವಂಗಳಾಗುತ್ತಿಹವು.
ಅವು ಬೇರೊಂದು ಪ್ರಮಾಣದಿಂದ ಪೂರ್ವಮಾಗಿ ಉತ್ಕೃಷ್ಟವಾದ
ಅಪೂರ್ವವನ್ನು ಹುಟ್ಟಿಸುತ್ತಿಹವು.
ಆ ಉತ್ಕೃಷ್ಟವಾದ ಪೂರ್ವದಿಂದ ಮಾತಲುಳ್ಳ ಫಲದ ಕಡೆವು.
ಅದೇ ದೈವವೆಂದು ಕಾಣಬಾರದೆಂದು,
ಕರ್ಮವೆಂದು ನಾಮ ಮೂರಾರದವರಿಂದ
ದೇಹಾಂತರ ಲೋಕಾಂತರ ದೇಶಾಂತರ ಕಾಲಾಂತರಗಳಲ್ಲಿ
ಅದು ಆತಂಗೆ ಅನುಭವಿಸಬೇಕಾದ ಫಲಂಗಳನು
ಕೊಡುತ್ತಿಹುದೆಂಬ ವಚನ ವ್ಯರ್ಥವು.
ಅದು ಹೇಗೆಂದಡೆ,
ಜಡಸ್ವರೂಪವಾದ ಕರ್ಮವು ದೇಹಾಂತರ ಮೊದಲಾದವರಲ್ಲಿ
ಆ ಫಲವನು ಕೊಡಲು ಸಮರ್ಥವಲ್ಲದಿಹುದೆ.
ಈಹಿಂಗಾಗಿ ಒಡೆಯನನು ತೊಲಗಿಸಿ, ಕರ್ಮಫಲವನು ಕೊಡವದಹುದೆ.
ಅಹಂಗಾದಡೆ, ಜೈನ ಬೌದ್ಧ ಭಾಷಾದಿ (?) ಕರ್ಮವಾದಿಗಳ
ಜಪತಪದಾನಧರ್ಮಫಲಂಗಳು ವ್ಯರ್ಥಂಗಳಾಗುತಿರಲು,
ಅವು ಪುಷ್ಟಿವರ್ಧನಭೂತವಾದ ಭೋಜನಕ್ರಿಯೆಗಳಿಂದಯೆಹಾಹಂಗೆ
ಮರಣವು ಆಯಿತ್ತು.
ಅಹಂಗೆ ಒಂದೆ ಕರ್ಮವು ಫಲವು ಕೊಡಲು ಸಮರ್ಥವಲ್ಲ.
ಅಹಂಗಾಗದಿಹುದೆ ಭೋಜನವ ಮಾಡಿದ ಮಾತ್ರವೆ
ಪುಷ್ಟಿಯಾಗುತ್ತಿಹುದು ಮರಣವಿಲ್ಲದಿಹುದು.
ಹಿಂಗಲ್ಲವೊ ಎಂದಡೆ, ಕೆಟ್ಟ ಕರ್ಮವುಯೆಯ್ದಿತ್ತು
ಉಂಡದರೊಳಗೆ ಸಿಲ್ಕಿದ ಅನ್ನವು ವಿಷವಹುದಲಾ.
ಪುಷ್ಟಿಯ ತೊಲಗಿಸಿ ಮರಣವನು ಅಹಂಗೆ ಕೊಡುತ್ತಿರದು.
ಇದು ಕಾರಣ, ಸರ್ವಗತನಾದ ಶಿವನು ಅರಿಕರ್ಮಕ್ಕೆ
ತಕ್ಕ ಫಲವ ಕೊಡುವಾತನು.
ಹಿಂಗಾಗಿರಲಿ, ಕರ್ಮಕ್ಕೆ ತಾನೆ ಕರ್ತೃತ್ವವಾಗುಹವು, ಆಗುತ್ತಿರದು.
ಮತ್ತೆಯೂ ದೃಷ್ಟಾಂತರ ಸರಳು ಬಿಲ್ಲಕಾರನಿಲ್ಲದೆ
ತಾನು ಗುರಿಯ ತಾಗೂದೆಯೇನು ?
ಅಹಂಗೆ, ಕರ್ಮವು ಶಿವಪ್ರೇರಣೆಯಿಲ್ಲದೆ
ಅಕರ್ಮಿಗೆ ಮೇಲುಕೀಳಾದ ಕರ್ಮಫಲವನು
ತಾನೆ ಕೊಡಲು ಸಾಮರ್ಥ್ಯವಿಲ್ಲ, ತಪ್ಪದು. ವಾಯುವ್ಯದಲ್ಲಿ:
ಅಜ್ಞೋ ಜಂತುರನೀಶೋಽಯಮಾತ್ಮನಃ ಸುಖದುಃಖಯೋಃ ।
ಈಶ್ವರಃ ಪ್ರೇರಿತೋ ಗಚ್ಛೇತ್ಸ್ವರ್ಗಂ ವಾ ಶ್ವಭ್ರಮೇವ ವಾ ॥

ಅದು ಕಾರಣ, ಅರಿಯದವನಾಗಲಿ ಅಯಂ ಜಂತು– ಈ ಪ್ರಾಣಿ, ಆತ್ಮನಃ–ತನ್ನ,
ಸುಖದುಃಖಯೋಃ–ಸುಖದುಃಖಂಗಳಿಗೆ, ಅನಿಶಃ–ಒಡೆಯನಲ್ಲ.
ಈಶ್ವರ ಪ್ರೇರಿತ ಶಿವನು ಪ್ರೇರಿಸಲುಳ್ಳವನಾಗಿ,
ಸ್ವರ್ಗವನಾದಡೂ ನರಕವನಾದಡೂ ಎಯ್ದುವನು.
ನಾಭುಕ್ತ ಕ್ರಿಯತೇ ಕರ್ಮ ಕಲ್ಪಕೋಟಿಶತೈರಪಿ ।
ಅವಶ್ಯಮನುಭೋಕ್ತವ್ಯಂ ಕೃತಂ ಕರ್ಮ ಶುಭಾಶುಭಂ ॥
ಇವು ಮೊದಲಾದ ವಚನ ಪ್ರಮಾಣದಿಂದ ಕರ್ಮವು ಕಲ್ಪಕೋಟಿ
ಶತಂಗಳಿಂದಡಾ ಅನುಭವಿ.....ಶಿರದು.
ಮಾಡಲುಳ್ಳದಾಗಿ ಮೇಲು ಕೀಳಾದವು.
ಏನ ಮಾಡಿಯೂ ಅನುಭವಿಸಬೇಕಾದುದು,
ಈಹಿಂಗೆಂಬ ವಚನವು ವ್ಯರ್ಥ ಪೋಗುತ್ತಿಹುದು.
ಅದು ಹೇಂಗೆಯಾಯೆಂದಡೆ : ವಾಯವ್ಯದಲ್ಲಿ–
ಅಹೋವಿಪರ್ಯಾಸಶ್ಚೇ ಮೇದೋ ಯಾವದ್ವರಂ ಯಜಮಾನ ಸ್ವಯಂ ದಕ್ಷಃ।
ಬ್ರಹ್ಮಪುತ್ರ ಪ್ರಜಾಪತಿಃ ಧರ್ಮಾದಯಃ ಸದಸ್ಯಾಶ್ಚ
ರಕ್ಷಿತಾ ಗರುಡಧ್ವಜಃ ಭಾನಾಶ್ಯಪ್ರತಿಗ್ರುಣ್ವಂಕ್ತಿ ಸಾಕ್ಷಾದಿಂದ್ರಾದಯಸ್ವರಾಃ
ತಥಾಪಿ ಯಜಮಾಸ್ಯದಕ್ಷಸ್ಯಾ ದಾಹರ್ಂತಿಜಃ
ಸದ್ಯಯೇವ ಶಿರಶ್ಛೇದ ಸಾದುಸಂಪದ್ಯತೇ ಫಲಂ
ಕೃತ್ವಾತು ಸಮುಹತ್ವರಣ್ಯಾಮಿಷ್ಟ ಯಶಶತೈರಪಿ
ನ ತತ್ಫಲಮವಾಪ್ನೋತಿ ಭಕ್ತಿಹೀನೋ ಯದೀಶ್ವರೇ ।
ಈ ಅರ್ಥದಲ್ಲಿ ಸತ್ಪುರುಷರ ವೇದದಿಂದರಿಯಲು,
ತಕ್ಕುದಾದ ಆಚಾರವನು ಬಿಟ್ಟು ಒಡನೆ ಹುಟ್ಟಿದುದಾದ
ತನ್ನವರೆಂಬ ಸ್ನೇಹದಲ್ಲಿ ಹುಟ್ಟಿದುದಾ[ದ] ಚರಣವನ್ನು ಬಿಟ್ಟು,
ಅಪಾಯರಹಿತವಾಗಿ ಪ್ರಮಥಪದವಿಯನು ಎಯ್ದಿದನು.
ಈಹಿಂಗಾಗಿಯೇ, ಬರಿಯ ಕರ್ಮಕ್ಕೆ ಕರ್ತೃತ್ವವುಂಟಾಗುತಿಹುದೆ ?
ಚಂಡೇಶ್ವರನಿಂದ ತನ್ನ ತಂದೆಯಾದ ಬ್ರಾಹ್ಮಣನ ಕಾಲುಗಳ ತರಿದಲ್ಲಿ,
ಆ ದೋಷಫಲವುಯಹಂಗೆ ಇಲ್ಲವಾಯಿತ್ತು
ಮಾಮನಾದೃತ್ಯ ಪುಣ್ಯಂ ವಸ್ಯಾಂತ್ಪ್ರತಿಪಾದಿನಃ ।
ಮನ್ನಿ ಮಿತ್ತಕೃತಂ ಪಾಪಂ ಪುಣ್ಯಂ ತದಪಿ ಜಾಯತೇ ॥
ಇದು ಶಿವನ ನುಡಿ, ಮಾರಿಯೆನ್ನನು ಕೈಕೊಳ್ಳದ ಪುಣ್ಯವಾದಡೆಯು,
ಮಾಡುವವಂಗೆ ಪಾಪವು ಅಹುದು.
ನಾನು ನಿಮಿತ್ತ ಮಾಡಿದ ಪಾಪವಾಯಿತ್ತಾದಡೆಯು ಸುಕೃತವಾಗುತ್ತಿಹುದು.
'ಉಪಕ್ರಮ್ಯ ಕರ್ಮಾದಿ ಪತಿತ್ವ ವಿರುಪಾಕ್ರೋಸ್ಥಿತಿ ಸರ್ವಕರ್ಮಾದಿ ಪತಿಃ'
ಮತ್ತೆ ಉಪಕ್ರಮಿಸಿ ಕರ್ಮಂಗಳಿಗೊಡೆಯನು ಪರಮೇಶ್ವರನು ಉಂಟೆಂಬ
ವೇದವು ಮೊದಲಾದ ವಾಕ್ಯಪ್ರಮಾಣದಿಂದ,
ನಾನಾ ಪುರಾಣ ವಚನ ಪ್ರಮಾಣದಿಂದ

ಸಮಸ್ತಕರ್ಮಂಗಳಿಗೊಡೆಯನು ಶಿವನು.
ಆ ಶಿವನ ತೊಲಗಿಸಿ, ಬರಿಯ ಕರ್ಮಕ್ಕೆ ಕರ್ತನಾಗುಹವು ಇಲ್ಲದಿರುತ್ತಿಹುದು.
ಇದನರಿದು, ಎಲೆ ಕರ್ಮವಾದಿಗಳಿರಾ,
ಸಕಲಕರ್ಮಕ್ಕೆ ಶಿವನೆ ಕರ್ತುವೆಂದರಿದಿರಾದಡೆ,
ಬಸವಪ್ರಿಯ ಕೂಡಲಚೆನ್ನಸಂಗ
ನಿಮಗೆ ಸುಕರ್ಮ ಫಲವನು ಕೊಡುವ ಕಂಡಿರೆ. ॥ ೯೦ ॥

೩೫೭

ಷಡಾಧಾರಚಕ್ರದ ಗಡಣೆಯನರಿದು, ಷಡಕ್ಷರವ ಏಕಾಕ್ಷರವ ಮಾಡಿ,
ಒದಗಿಹ ಲಿಂಗ ಒಂದೆಂಬುದನರಿದಡೆ, ಮೃಡಭಕ್ತರೊಳಧಿಕ
ಬಸವಪ್ರಿಯ ಕೂಡಲಚೆನ್ನಸಂಗಮದೇವನ ಶರಣ. ॥ ೯೧ ॥

೩೫೮

ಸಂಸಾರವ ಉತ್ತಾರವನ್ನು ಮಾಡುವನಾವವೇಳೆಯಾದುದು ವೇದ.
ಓಂ ನಮಸ್ತಾರಾಯ ನಮಶ್ಶಂಭವೇ ಚ ವಯೋಭವೇ ಚ ।
ನಮಶ್ಶಂಕರಾಯ ಚ ಮಯಸ್ಕರಾಯ ಚ ನಮಶ್ಶಿವಾಯ ॥
ಈ ಪರಿಯಲ್ಲಿ, ಶಿವಯೇಕೋದೇವನೆಂದು ನೆನೆದು ಬದುಕಿ,
ಬಸವಪ್ರಿಯ ಕೂಡಲಚೆನ್ನಸಂಗನ. ॥ ೯೨ ॥

೩೫೯

ಸಕಲೇಂದ್ರಿಯಕ್ಕೆಲ್ಲಾ ನಾಯಕವಪ್ಪ ಮನಕ್ಕೆ
ಇದೆ ವಿಧಿಯೆಂದು ಹೇಳಿತ್ತು ವೇದ.
ಶಿವನ ನೆನೆವುದು, ಶಿವನ ಭಜಿಸುವುದು,
ಮತ್ತನ್ಯದೈವವ ನೆನೆಯಲಾಗದೆಂದುದು ಋಗ್ವೇದ.
ತಮುಷ್ಟುಹಿಯಸ್ವಿಷುಸ್ಸುದಂ ಸ್ವಾಯೋ ವಿಶ್ವಸ್ಯ ಕ್ಷಯತಿ ಭೇಷಜಸ್ಯ ।
ಯಕ್ಷಾಮಹೀಸಾಯ ರುದ್ರಂ ನಮೋಬೇರ್ಧಿ ವಮಸುರುಮುವಸ್ಯ ।
ಎಂದುದು ಶ್ರುತಿ, ಬಸವಪ್ರಿಯ ಕೂಡಲಚೆನ್ನಸಂಗಯ್ಯಾ. ॥ ೯೩ ॥

೩೬೦

ಸನ್ಯಾಸಿಯಾದಡೂ ತ್ರಿಸಂಧ್ಯಾಕಾಲದಲ್ಲಿ
ಶ್ರೀವಿಭೂತಿಯ ಧರಿಸಬೇಕೆಂದುದು ವೇದ.
ಬಳಿಕಲೊಂದು ದಿವ್ಯಸ್ಥಾನದೊಳಗೆ ಶಿವಧ್ಯಾನದಲಿರಬೇಕೆಂದುದು ವೇದ.
ಅದೆಂತೆಂದಡೆ :
ಯತೀನಾಂ ಭಸ್ಮಂ ತ್ರಿಸಂಧ್ಯಾಯಾಮುದ್ಧೂಲಯೇತ್ ।
ದಿವ್ಯಸ್ಥಾನೇ ಶಿವಂ ಧ್ಯಾಯೇತ್ ।
ಎಂದುದಾಗಿ, ಬಸವಪ್ರಿಯ ಕೂಡಲಚೆನ್ನಸಂಗಯ್ಯಾ,
ಶ್ರೀವಿಭೂತಿಯೆ ಪರಮಗತಿ ಸಾಧನ. ॥ ೯೪ ॥

೩೬೧

ಸಾಮವೇದಿಗಳು ಶ್ವಪಚಯ್ಯಗಳ ಹಸ್ತದಲ್ಲಿ ಗುರುಕಾರುಣ್ಯವ ಪಡೆದು,
ಅವರೊಕ್ಕುದ ಕೊಂಡು ಕೃತಾರ್ಥರಾದಂದು
ಎಲೆ ವಿಪ್ರರಿರಾ ನಿಮ್ಮ ಕುಲಂಗಳೆಲ್ಲಿಗೆ ಹೋದವು ?
ಕೆಂಬಾವಿ ಭೋಗಯ್ಯಗಳ ಮನವ ಶಿವನಂದು ನೋಡಲೆಂದು
ಅನಾಮಿಕ ವೇಷವ ಧರಿಸಿ ಬರಲು,
ಅವರನಾರಾಧಿಸಲು, ಭೋಗತಂದೆಗಳ ನೆರೆದ
ದ್ವಿಜರೆಲ್ಲರು ಪುರದಿಂದ ಪೊರಮಡಿಸಲು,
ಪುರದ ಲಿಂಗಗಳೆಲ್ಲವು ಬೆನ್ನಲುರುಳುತ್ತ ಪೋಗಲು,
ದುರುಳ ವಿಪ್ರರೆಲ್ಲರು ಬೆರಳ ಕಚ್ಚಿ ತ್ರಾಹಿ ತ್ರಾಹಿ, ಕರುಣಾಕರ ಮೂರ್ತಿಯೆಂದು
ಶರಣುಹೊಕ್ಕು ಮರಳಿ ಬಿಜಯಂಗೈಸಿಕೊಂಡು ಬಾಹಂದು,
ನಿಮ್ಮ ಕುಲಾಭಿಮಾನವೆಲ್ಲಿಗೆ ಹೋದವು ಹೇಳಿರೆ ?
ಈಶನೊಲಿದು ಚೆನ್ನಯ್ಯಗಳ ಏಕೋನಿಷ್ಠೆಯ
ಸ್ಥಾನದಾನ ಸಮರ್ಪಣಭಾವ ಬಲಿದು,
ಅಭವ ಪ್ರತ್ಯಕ್ಷನಾಗಿ ಕೈದುಡುಕಿ ಸಹಭೋಜನವ ಮಾಡುವಂದು,
ನಿಮ್ಮ ವೇದಾಗಮ ಶ್ರುತಿಮಾರ್ಗದಾಚಾರವೆಲ್ಲಿಗೆ ಹೋದವು ಹೇಳಿರೆ ?
ಬೊಬ್ಬೂರಲ್ಲಿ ಬಿಬ್ಬಿ ಬಾಚಯ್ಯಗಳು ಹರನ ಗಣಂಗಳ ನೆರಹಿ,
ಪರಮಾನಂದದಿಂ ಗಣಪರ್ವವಂ ಮಾಡಿ,
ಗಣಪ್ರಸಾದಮಂ ಪುರದವೀಥಿಗಳೊಳು ಮೆರಸುತ್ತ ಬರಲು,
ನೆರೆದ ವಿಪ್ರರೆಲ್ಲರು ಉಚ್ಛಿಷ್ಟಾ ಚಾಂಡಾಲವೆಂದು ದೂಷಿಸಿ,
ಬಂಡಿಯಂ ಮುರಿದು ತಂಡತಂಡದ ಭಕ್ತರನೆಲ್ಲನವಗಡಿಸುತ್ತಿರಲು,
ಹರಹರ ಮಹಾದೇವ ಮಹಾಪ್ರಸಾದ ಪರಂಜ್ಯೋತಿಯೆಂದು
ಪ್ರಸಾದಮಂ ಕೈಯೆತ್ತಿ ಸೂಸಲು,
ಪುರವೆಲ್ಲ ಬೆಂದು ಗಡ್ಡದ ಜನರೆಲ್ಲರು ಘರಿಘರಿಲ್ಲದೆ ಉರಿದು ಕರಿಯಾಗಲು,
ಉಳಿದ ವಿಪ್ರರೆಲ್ಲರೂ ತ್ರಾಹಿ ತ್ರಾಹಿ, ಶರಣಾಗತ ರಕ್ಷಕರಿರಾ
ಒಮ್ಮೆಗೆ ಕಾವುದೆಂದು ಧರೆಯೊಳು ಬಿದ್ದು ಬೆರಳಕಚ್ಚುವಂದು,
ಅಂದು ನಿಮ್ಮ ಆಗಮಾರ್ಥದ ಕುಲಾಚಾರ
ಮಾರ್ಗವೆಲ್ಲಿಗೆ ಹೋದವು ಹೇಳಿರೆ. ಸಾಕ್ಷಿ:
ಸ್ತ್ರೀ ವಾಚಽಥಪುರುಷಃ ಷಂಡಶ್ಚಾಂಡಾಲೋ ದ್ವಿಜವಂಶಜಃ ।
ನ ಜಾತಿಭೇದೋ ಲಿಂಗಾರ್ಚೇ ಸರ್ವೇ ರುದ್ರಗಣಾಃ ಸ್ಮೃತಾಃ ॥
ಇದು ಕಾರಣ, ಶರಣರಿಗೆ ಪ್ರತಿಯಿಲ್ಲ,
ಬೆರಳನೆತ್ತದೆ ಇಕ್ಕಿದ ಮುಂಡಿಗೆಯನಾ ಸರ್ವರೆತ್ತಿಕೊಳ್ಳರೆ ದ್ವಿಜರು,
ಬಸವಪ್ರಿಯ ಕೂಡಲಚೆನ್ನಸಂಗಯ್ಯನೊಬ್ಬನೆಂದು. ॥ ೬೫ ॥

೩೬೨

ಹಜ್ಜೆ ಇಲ್ಲದ ಪುರುಷ, ಆ ಸಜ್ಜನಸ್ತ್ರೀ, ಷಡುಪಂಚಮರುದ್ರ,
ಕಾಳಾಂಧರ, ವಾರಿಧಿ, ಆತ್ಮಾನಾತ್ಮ ಇಂತಿವೇನೂ ಇಲ್ಲದಂದು,
ಅತ್ತತ್ತಲಿರ್ದ ಬೆಳಗಿನ ಚಿನ್ಮೂರ್ತಿಯಲ್ಲಿ ಚಿದ್ವಿಭೂತಿ ಇದ್ದಿತ್ತು,
ಆ ಚಿದ್ವಿಭೂತಿ ಚಿದ್ಘನಾತ್ಮಕ ರತ್ನವಾಯಿತ್ತು.
ಆ ಚಿದ್ಘನಾತ್ಮಕ ರತ್ನವೆ ಚಿಚ್ಛಕ್ತಿಯಾಯಿತ್ತು.
ಆ ಚಿಚ್ಛಕ್ತಿ ಸಕಲಚೈತನ್ಯಾತ್ಮಕ ಶರಣನಾಯಿತ್ತು.
ಆ ಶರಣನೊಳಗೊಂದು ಕೋಳಿ ದ್ವಾದಶವರ್ಣದ ಸುನಾದವಾಗಿ ಕೂಗಿತ್ತು.
ಆ ಸುನಾದಂಗಳ ಝೇಂಕಾರವು ಚತುರ್ದಶ ಸಾವಿರಕ್ಷರ ರೂಪಕವಾಗಿ,
ಆ ಶರಣನ ಸಪ್ತಚಕ್ರದ ಕಮಲದೊಳಗೆ ಪ್ರವೇಶ್ಶಿಸಿ, ಗೋಪ್ಯವಾಗಿದ್ದವು.
ಆ ಶರಣನಲ್ಲಿ ಷಡುಶಿವಮೂರ್ತಿಗಳುದಯಿಸಿದರು.
ಆ ಮೂರ್ತಿಗಳಲ್ಲಿ ಷಡುಸ್ಥಲ ಸತ್ಕ್ರಿಯೆಗಳು ತೋರಿದವು.
ಅವರೆಲ್ಲರಲ್ಲಿ ಅನಂತಕೋಟಿ ಮೂರ್ತಿಗಳ ಮೇಲೆ,
ತೊಂಬತ್ತಾರುಸಾವಿರ ಶಿವಮೂರ್ತಿಗಳುದಯಿಸಿದರು.
ಆ ಶರಣನ ನಾಡಿಗಳೊಳಗೆ ಚಿದ್ಮಣಿ, ಚಿದ್ಭಸ್ಮ ಚಿಲ್ಲಿಂಗ
ಇಂತಿವೆಲ್ಲ ತೋರಿದವು.
ಇವನೆಲ್ಲವ, ಶಿವಗಣಂಗಳಲ್ಲಿ ಆ ಶರಣನು,
ಉಪದೇಶಮಾರ್ಗದಿಂ ಧರಿಸಿಕೊಂಡು,
ನೂರೊಂದರ ಮೇಲೆ ನಿಂದು, ದ್ವಾದಶ ಸಪ್ತವಿಂಶತಿ
ಛತ್ತೀಸದ್ವಯವೆ ಎಪ್ಪತ್ತು ಶತಾಷ್ಟವೆಂಬ ಪಂಚಜಪಮಾಲೆಗಳಿಗೆ
ಹನ್ನೆರಡು ಸಿಡಿಲ ಸುನಾದವನೊಡದು,
ತ್ರಿ ಆರುವೇಳೆ ಕೂಡಿ, ನೂರೆಂಟಕ್ಕೆ ಸಂದಾನಿಸಿ
ಜಪಿಸುತ್ತಿಪ್ಪ ಅನಂತ ಪ್ರಮಥರಂ,
ಬಸವಪ್ರಿಯ ಕೂಡಲಚೆನ್ನಸಂಗಯ್ಯನಲ್ಲಿ ಕಂಡು ಸುಖಿಯಾದೆನು. ॥ ೯೬ ॥

೩೬೩

ಹರಂಗೆ ಅಜ ಹರಿ ಮೊದಲಾದ ದೈವಂಗಳ ಸರಿಯೆಂಬ ನರಕಿಗಳ,
ಗುರುವಿಂಗೆ ನರರ ಸರಿಯೆಂಬ ಕಡುಪಾಪಿಗಳ,
ಪರಶಿವಧರ್ಮಕ್ಕೆ ವೇದಾಗಮಂಗಳ ಸರಿಯೆಂಬ ಪಾತಕರ,
ಪರಶಕ್ತಿ ಜಗದಂಬೆ ಉಮಾದೇವಿಯರಿಗೆ
ಉಳಿದಾದ ಶಕ್ತಿಗಳ ಸರಿಯೆಂಬ ಕರ್ಮಿಗಳ,
ಇಂತಿವರ ಮುಖವ ನೋಡಿದವರಿಗೆ ನರಕವಲ್ಲದೆ ಮತ್ತೊಂದು ಗತಿಯಿಲ್ಲ.
ಇಂತಿವರ ಹೊರೆಯಲ್ಲಿರಲಾಗದು, ಒಡನೆ ನುಡಿಯಲಾಗದು.
ಒಂದಾಸನದಲ್ಲಿ ಕುಳ್ಳಿರಲಾಗದು.

ಶಿವಂ ಬ್ರಹ್ಮಾದಿಭಿಃ ಸಾಮ್ಯಂ ಗುರುಃ ಪ್ರಾಕೃತೈಸ್ಸಮಂ ।
ಶಿವಂ ವಿದ್ಯಾ ಚ ವೇದಾದ್ಯೈರ್ಮನುತೇ ಯಸ್ತು ಮಾನವಃ ॥
ಸ ಪಾಪೀ ದುರ್ಮತಿಃ ಕ್ರೂರಃ ಶ್ವಪಚಃ ಶ್ವಪಚಾಧಮಃ ।
ಶಿವಂ ಬ್ರಹ್ಮಾದಿಭಿಃ ಸಾಮ್ಯಂ ಶಿವಂ ಲಕ್ಷ್ಮ್ಯಾದಿ ಶಕ್ತಿಭಿಃ ॥
ಸ್ವಗುರುಂ ಪ್ರಾಕೃತೈಸ್ಸಾರ್ಧಂ ಯೇ ಸ್ಮರಂತಿ ವದಂತಿ ಚ ।
ತೇಷಾಂ ಪಾಪಾನಿ ನಶ್ಯಂತಿ ಶ್ರೀಮತ್ ಪಂಚನದಾಶ್ರಯಃ ॥
ಇಂತೆಂದುದಾಗಿ, ಇದು ಕಾರಣ,
ಇಂತೀ ಮರುಳು ದುರಾತ್ಮರನೆನಗೆ ತೋರಿಸದಿರಯ್ಯಾ.
ಬಸವಪ್ರಿಯ ಕೂಡಲಚೆನ್ನಸಂಗಯ್ಯಾ,
ಬೇಡುವೆ ನಿಮ್ಮದೊಂದೇ ವರವನು. ॥ ೯೭ ॥

೩೬೪

ಹರನ ಕೈಯ ಕಪಾಲವಿ[ಡಿ]ದ ತೆರನನರಿಯದಲ್ಲಾ ಲೋಕ.
ನರಜನ್ಮಕ್ಕಾಹುತಿಯ ಬಗೆದು, ಅರುವತ್ತುನಾಲ್ಕು ಭಾಗವ ಮಾಡಿ,
ಚೌಷಷ್ಟಿವಿದ್ಯವು ನಿಮಗೆ ಕಾಯಕಪ್ಪರವೆಂದು
ಕೈವರ್ತಿಸಿದನೀ ಜಗಕ್ಕೆ ಶಿವನು. ಇದು ಕಾರಣ,
ಶಿವಭಕ್ತರು ಕರ್ಮಮೂಲ ಕಾಯಕವಿಡಿದು ಬಂದುವೆ ಲಿಂಗಕ್ಕರ್ಪಿತ.
ಕಾಯಕ ಹೀನವೆಂದು ಬಿಟ್ಟು ಹಿಡಿದಡೆ ಭಕ್ತನಲ್ಲ,
ಪಥಕ್ಕೆ ಸಲ್ಲ, ಪುರಾತನರೊಲ್ಲರು, ಲಿಂಗ ಮೆಚ್ಚಲ್ಲ,
ಬಸವಪ್ರಿಯ ಕೂಡಲಚೆನ್ನಸಂಗಮದೇವಾ. ॥ ೯೮ ॥

೩೬೫

ಹರಿದು ಹತ್ತಿ ಮುಟ್ಟಲಿಲ್ಲ, ಮುಟ್ಟಿ ಮರಳಿ ಇಳಿಯಲಿಲ್ಲ
ಬೆರಸಿಹೆನೆಂದು ನೆನೆಯಲಿಲ್ಲ.
ಬಸವಪ್ರಿಯ ಕೂಡಲಚೆನ್ನಸಂಗಯ್ಯನಲ್ಲಿ
ಶಬ್ದಕ್ಕೆ ಇಂಬಿಲ್ಲದಿರ್ದೆನು. ॥ ೯೯ ॥

೩೬೬

ಹವ್ಯಂ ವಹತಿ ದೇವಾನಾಂ ಕವ್ಯಂ ಕವ್ಯಾ ಶಿವಾಮಪಿ ।
ಪಾಕಾದ್ಯಂಶ ಕರೋತ್ಯಗ್ನಿ ಃ ಪರಮೇಶ್ವರಶಾಸನಾತ್ ॥
ಸಂಜೀವನಾಖ್ಯಂ ಸರ್ವಸ್ಯ ಕುರ್ವಂತ್ಯಾ ಸಸ್ತಥಾಜ್ಞಯಂ ।
ವಿಶ್ವಂ ವಿಶ್ವಂಭರಾ ನಿತ್ಯಂ ತಥಾ ವಿಶ್ವೇಶ್ವರಾಜ್ಞ ಯಾ ।
ತ್ರಿಭಿರೇತ್ಯರ್ಜಗದ್ಭಿಃ ಭೃತ್ಯೇಜೋಭರ್ವಿಶ್ಚಮಾರವೇದಿ ।
ವಿಸರ್ವಃ ಜಗಚ್ಚಕ್ಷುರ್ದೇವ ದೇವಸ್ಯ ಶಾಸನಾತ್ ॥
ತೃಷ್ಣಾತ್ಯೋಷಧಿ ಜಾತಾನಿ ಭೂತಾನಿ ಹ್ಲಾದಯತ್ಯಪಿ
ದೇವೈಶ್ಚ ಪೀಯತೇ ಚಂದ್ರಶ್ಚಂದ್ರಭೂಷಣ ಶಾಸನಾತ್

ತೇನಾಜ್ಞಾಂ ವಿನಾ ತೃಣಾಗ್ರಮಪಿ ನ ಚಲತಿ ॥
ಇಂತೆಂದುದಾಗಿ, ಇದು ಕಾರಣ,
ಬಸವಪ್ರಿಯ ಕೂಡಲ[ಚೆನ್ನ]ಸಂಗಯ್ಯನೆಂದರಿಯದವರೆಲ್ಲರೂ
ಪಶುಗಳು ಪಾಶಬದ್ಧರೆಂಬುದ ತರ್ಜನಿಯವಿತ್ತಿಹೆನು,
ಉತ್ತರ ಕೊಡುವರುಳ್ಳರೆ ನುಡಿಯಿರೊ, ಏಕಾತ್ಮವಾದಿಗಳಾ. ॥ ೧೦೦ ॥

೩೬೭

ಹೆಡಗೆಹಾರ ಮೊರಹಾರ ಗೆರಸಿಹಾರ ಮಡಕೆಹಾರ
ದೆಸೆದೆಸೆಯಲ್ಲಿ ತಂದು ನೀಡುತ್ತಿರಲು,
ಹೊಸಪರಿಯ ಆರೋಗಣೆಯನವಧರಿಸುತ್ತಿರ್ದನು.
ಆವಾವ ದೆಸೆಯಲ್ಲಿ ತಂದು ನೀಡುತ್ತಿರ್ದಡೆ,
ಆ ದೆಸೆದೆಸೆಗಳೆಲ್ಲಾ ಬಾಯಾಗಿ ಕೊಳುತಿರ್ದನು !
ಎತ್ತ ನೋಡಿದಡೆ ಅತ್ತತ್ತ ಮುಖ. ಅಗೆಯ ಹೊಯಿದಂತೆ ತೆರಹಿಲ್ಲ
ಒಂದು ನಿಮಿಷ ಎಡಹಿದಡೆ,
ಅಕ್ಕಿಗಚ್ಚು ನುಚ್ಚು ತವುಡು ಮೊದಲಾಗಿ ಹೆಚ್ಚಿದವು ನಿಮಿಷದೊಳು.
ಭಕ್ತಬಂಧುಗಳೆಲ್ಲಾ ತಮ್ಮ ತಮ್ಮ ಮಠದಲಾದ
ಸಯಿದಾನವ ತಂದು, ಸಾರಗಟ್ಟಿ ನೀಡುತ್ತಿರ್ದಡೆ,
ಅದ್ಭುತದಾರೋಗಣೆಯ ಕಂಡು, ಹರಿಹರಿದು ಪಾಕಯತ್ನವ ಮಾಡಿ ಎನ್ನುತ್ತ
ಬಸವಪ್ರಿಯ ಕೂಡಲಚೆನ್ನಸಂಗಯ್ಯನಲ್ಲಿ, ಸಂತೋಷದೊಳೋಲಾಡುತ್ತಿರ್ದನು
ಎನ್ನ ಪರಮಗುರು ಬಸವಣ್ಣನು. ॥ ೧೦೧ ॥

೩೬೮

ಹೊತ್ತಾರಿನ ಹೊತ್ತು ಮಲಮೂತ್ರ ವಿಸರ್ಜನಕ್ಕೆ ಹೋಯಿತ್ತು,
ಮಧ್ಯಾಹ್ನದ ಹೊತ್ತು ಹಸಿವು ತೃಷೆಗೆ ಹೋಯಿತ್ತು,
ಮೂರನೆಯ ಜಾವದ ಹೊತ್ತು ಹೊಟ್ಟೆತುಂಬಿದ ಬಳಿಕ,
ಕಾಯದ ಕಳವಳವ ಕೈಕೊಂಬುದಯ್ಯಾ.
ಇರುಳಾದ ಬಳಿಕ ನಿದ್ರೆಗೈದು,
ಬೆಳಗಾಹನ್ನಬರ ಸತ್ತಂತಿಹೆನು ಹೆಣನಾಗಿ ಏನುವನರಿಯದೆ.
ಅಯ್ಯಾ, ನಿಮ್ಮ ನೆನೆವವರ ಚರಣಕ್ಕೆ ಶರಣೆಂಬೆನಯ್ಯಾ,
ಬಸವಪ್ರಿಯ ಕೂಡಲಚೆನ್ನಸಂಗಮದೇವಾ. ॥ ೧೦೨ ॥

■■

## ಸಕಳೇಶ ಮಾದರಸನ ವಚನ

೩೬೯

ಅಂಕುರ ಪಲ್ಲವ ತರು ಕುಸುಮಫಲರಸಸಾರಾಯ ಇನಿತಿನಿತೆಲ್ಲಿದ್ದುದೊ,
ಬೀಜ ಮೊಳೆದೋರದಂದು ?
ನಾಭಿಗಳೆಯದ ಪಶುವಿನ ಅಮೃತವೆಲ್ಲಿದ್ದುದೊ, ವೃಷಭ ಮುಟ್ಟದಂದು ?
ಘನಕುಚ ಯೌವನೆಯರ ರಜಪ್ರಶ್ನೆಯಲ್ಲಿ
ಒದಗಿದ ಹಸುಗೂಸು ಎಲ್ಲಿದ್ದುದೂ, ಕೊಡಗೂಸು ಕನ್ಯೆಯಳಿಯದಂದು ?
ತ್ರಿಜಗದ ಉತ್ಪತ್ತ್ಯ, ಸಚರಾಚರದ ಗಂಭೀರವೆಲ್ಲಿದ್ದುದೊ,
ಶಿವನ ಅಷ್ಟತನುಮೂರ್ತಿಗಳಿಲ್ಲದಂದು ?
ಸಪ್ತಸ್ವರ ಬಾವನ್ನಕ್ಷರವೆಲ್ಲಿದ್ದುದೊ, ಜ್ಞಾನ ಉದಯಿಸದಂದು?
ಶರಧಿಯೊಳಗಣ ರತ್ನವೆಲ್ಲಿದ್ದುದೊ, ಸ್ವಾತಿಯ ಸಲಿಲವೆರಗದಂದು ?
ಶರಣಪಥ ಲಂಗೈಕ್ಯವೆಲ್ಲಿದ್ದುದೊ,
ಆರಾಧ್ಯ ಸಕಳೇಶ್ವರದೇವರು ಕರುಣಿಸಿ ಕಣ್ದೆರೆದು ತೋರದಂದು ? ॥ ೧ ॥

೩೭೦

ಅಂಗದ ಗುಣವಳಿದು ಲಿಂಗಾಗಿಯಾದ ನಿಜಶರಣನು,
ಜಗದ ಠಕ್ಕರಾದ ಜಂಗುಳಿಗಳ ಬಾಗಿಲುಗಳಿಗೆ ಹೋಗನು ನೋಡ.
ಹೋದಡೆ ಗುರುವಾಕ್ಯವಿಡಿದು ಹೋಗಿ,

'ಲಿಂಗಾರ್ಪಿತ ಭಿಕ್ಷಾ' ಎಂದು ಭಿಕ್ಷವ ಬೇಡಿ, ಲಿಂಗಾಣತಿಯಿಂದ ಬಂದ ಭಿಕ್ಷವ,
ಲಿಂಗ ನೆನಹಿನಿಂದ ಲಿಂಗನೈವೇದ್ಯವಾಗಿ ಕೈಕೊಂಡು,
ಬಂದಬಂದ ಸ್ಥಲವನರಿದು, ಲಿಂಗಾರ್ಪಿತವ ಮಾಡಬೇಕು.
ಅದೆಂತೆಂದಡೆ :
ರಾಜಾನ್ನಂ ನರಕಶ್ಚೈವ ಸೂತಕಾನ್ನಂ ತಥೈವ ಚ ।
ಮೃತಾನ್ನಂ ವರ್ಜಯೇತ್ ಜ್ಞಾನೀ ಭಕ್ತಾನ್ನಂ ಭುಂಜತೇ ಸದಾ ॥
ಇಂತೆಂದುದಾಗಿ, ಲಿಂಗಾಂಗಿಗೆ, ಲಿಂಗಾಭಿಮಾನಿಗೆ, ಲಿಂಗಪ್ರಾಣಿಗೆ
ಇದೇ ಪಥವಯ್ಯಾ, ಸಕಳೇಶ್ವರದೇವಾ ನಿಮ್ಮಾಣೆ. ॥ ೨ ॥

೩೭೧

ಅಂಗದ ಮೇಲಕ್ಕೆ ಶ್ರೀಗುರು ಲಿಂಗವಂ ಬಿಜಯಂಗೈಸಿದ ಬಳಿಕ,
ಅಷ್ಟವಿಧಾರ್ಚನೆ ಷೋಡಶೋಪಚಾರಂಗಳ
ಆಲಸ್ಯವಿಲ್ಲದೆ ಭಯಭಕ್ತಿಯಿಂದ ಮಾಡೂದು ಭಕ್ತಂಗೆ ಲಕ್ಷಣ.
ಇಂತಲ್ಲದೆ ಲಿಂಗಾರ್ಚನೆಯ ಬಿಟ್ಟು, ಕಾಯದಿಚ್ಛೆಗೆ ಹರಿದು,
ಅದ್ವೈತದಿಂದ ಉದರವ ಹೊರೆದಡೆ,
ಭವಭವದಲ್ಲಿ ನರಕ ತಪ್ಪದಯ್ಯ, ಸಕಳೇಶ್ವರಾ. ॥ ೩ ॥

೩೭೨

ಅಚ್ಚಪ್ರಸಾದಿ ಅಚ್ಚಪ್ರಸಾದಿಗಳೆಂದು ನಿಚ್ಚನಿಚ್ಚ ಹುಸಿವರು ನೋಡಾ.
ವಾಯು ಬೀಸುವಲ್ಲಿ, ಬಯಲು ಬೆರಸುವಲ್ಲಿ, ಭಾಜನ ಸಹಿತ ಭೋಜನವುಂಟೆ ?
ಅಂಗಕ್ಕೆ ಬಂದ ಸುಖವು, ಲಿಂಗವಿರಹಿತವಾದಡೆ ಸ್ವಯವಚನ ವಿರೋಧ.
ಸಕಳೇಶ್ವರದೇವನು ಆಳಿಗೊಂಡು ಕಾಡುವ. ॥ ೪ ॥

೩೭೩

ಅಜಾತನು ಜಾತನ ಜಾತಕನೆಂಬೆನು.
ಅಜಾತಂಗೆ ಜಾತಂಗೆ ಕುಲಹೊಲೆಯಿಲ್ಲೆಂಬೆನು.
ಹಿರಿಯಮಾಹೇಶ್ವರನೆಂಬೆನು.
ಸಮಯಾಚಾರವ ಬೆರಸಲಮ್ಮೆನು.
ನಿಚ್ಚ ಪೂಜಿಸುವ ಪೂಜಕ ನಾನು.
ಸಕಳೇಶ್ವವರದೇವಾ, ಎನ್ನ ನಾಚಿಸಬೇಡ. ॥ ೫ ॥

೩೭೪

ಆಟಮಟವೆ ಆಧಾರ, ಕಪಟವೆ ಸದಾಚಾರ,
ಕುಟಿಲವೆ ಮಹಾಘನವಾಯಿತ್ತು ಕೆಲಬರಿಗೆ.
ಹುಸಿಯ ಮಸಕವೆ ವರ್ತಕವಾಯಿತ್ತು ಕೆಲಬರಿಗೆ.
ಯಂತ್ರ ತಂತ್ರ ದ್ರವ್ಯ ಬೆವಹಾರವಾಯಿತ್ತು ಕೆಲಬರಿಗೆ.

ಸಟೆಯ ಸಾಗರದೊಳಗೆ ತೇಂಕಾಡುತ್ತಿದ್ದರು ಕೆಲಬರು.
ಸಕಳೇಶ್ವರದೇವರ ನೆರೆನಂಬಲರಿಯದವರೆಲ್ಲರು. ॥ ೬ ॥

೩೭೫

ಅಡವಿಗೆ ಹೋಗಿ ಏವೆನು ? ಮನದ ರಜ ತಮ ಬಿಡದು.
ಆಡ ಕಾವನ ತೋರಿ, ಗಿಡುವ ಕಡಿವನ ಬಡಿದೆ.
ಆಶ್ರಮುವ ಕೆಡಿಸಿತ್ತಲ್ಲಾ.
ಸಕಳೇಶ್ವರದೇವಾ, ನಿನ್ನ ಮಾಯೆ ಎತ್ತಹೋದಡೂ ಬೆನ್ನಬಿಡದು. ॥ ೭ ॥

೩೭೬

ಅದು ಬೇಕು, ಇದು ಬೇಕುಯೆಂಬರು.
ಎದೆಗುದಿಹಬೇಡ, ಸುದೈವನಾದಡೆ ಸಾಕು.
ಪಡಿಪದಾರ್ಥ ತಾನಿದ್ದೆಡೆಗೆ ಬಹುದು. ನಿಧಿ ನಿಕ್ಷೇಪಂಗಳಿದ್ದೆಡೆಗೆ ಬಹವಯ್ಯಾ.
ಹೃದಯಶುದ್ಧವಾಗಿ, ಸಕಳೇಶ್ವರಾ ಶರಣೆಂದಡೆ, ನಿಜಪದವನೀವ. ॥ ೮ ॥

೩೭೭

ಅಯ್ಯಾ ನಿಮ್ಮಲ್ಲಿ ಸಾರೂಪ್ಯವರವ ಬೇಡುವೆನೆ ?
ಬ್ರಹ್ಮನ ಶಿರಸ್ಸುವ ಹೋಗಾಡಿದೆ.
ಅಯ್ಯಾ ನಿಮ್ಮಲ್ಲಿ ಸಾಮೀಪ್ಯವರವ ಬೇಡುವೆನೆ ?
ವಿಷ್ಣು ದಶಾವತಾರಕ್ಕೆ ಬಂದ.
ಅಯ್ಯಾ ನಿಮ್ಮಲ್ಲಿ ಸಾಯುಜ್ಯವರವ ಬೇಡುವೆನೆ ?
ರುದ್ರ ಜಡೆಯ ಹೊತ್ತು ತಪಸ್ಸಿರುತ್ತೈದಾನೆ.
ಅಯ್ಯಾ ನಿಮ್ಮಲ್ಲಿ ಶ್ರೀಸಂಪತ್ತೆಂಬ ವರವ ಬೇಡುವೆನೆ ?
ಲಕ್ಷ್ಮೀ ಪರಾಂಗನೆ ಪರಸ್ತ್ರೀ
ಸಕಳೇಶ್ವರಯ್ಯಾ ಆವ ವರವನೂ ಒಲ್ಲೆನು.
ಚೆನ್ನಬಸವಣ್ಣನ ಶ್ರೀಪಾದದ ಹತ್ತೆ ಇಪ್ಪಂಥ ವರವಕೊಡು. ॥ ೯ ॥

೩೭೮

ಅರ್ಥಸನ್ಯಾಸಿ, ಬ್ರಹ್ಮಚಾರಿ ಆನಯ್ಯ.
ದೊರಕೊಳ್ಳದಿರ್ದಡೆ ಒಲ್ಲೆನೆಂಬೆನು.
ದಿಟಕ್ಕೆ ಬಂದಡೆ ಪರಿಹರಿಸಲರಿಯೆನು.
ಎನಗೆ ನಿಸ್ಪೃಹದ ದೆಸೆಯನೆಂದಿಂಗೀವೆಯಯ್ಯಾ.
ಸಕಳೇಶ್ವರದೇವಾ ! ॥ ೧೦ ॥

೩೭೯

ಅರಿವನಾಹಾರಗೊಂಬುದೆ ಪರಮಸುಖ.
ಮರವೆಯ ತೆರಹುಂಟೆ ?

ಶಿವೈಕ್ಯಂಗೆ ಇತರ ಸುಖವೆ ವ್ಯವಹಾರ.
ಅರುಹಿರಿಯರ ಸಂಗಸುಖವೆ ಆಹಾರ.
ಶ್ರುತಿಯಿಂದತಿಶಯ ಆ ಚರಿತನ ಮನವ,
ಮಹಂತ ಸಕಳೇಶ್ವರದೇವ, ತಾನೆ ಬಲ್ಲ. ॥ ೧೧ ॥

೩೮೦

ಅಶನ ವ್ಯಸನಾದಿಗಳನಂತನಂತ.
ಕಾಶಾಂಬರಧಾರಿಗಳನಂತನಂತ.
ಸಕಳೇಶ್ವರದೇವಾ,
ನೀನಲ್ಲದೆ ಪೆರತನರಿಯದವರು ಎತ್ತಾನು ಒಬ್ಬರು ॥ ೧೨ ॥

೩೮೧

ಅಷ್ಟಮದಂಗಳೆಂಬ ಆನೆಯ ಮೆಟ್ಟಿ, ಅವಿನಾಶವೆಂಬ ಕಂಥೆಯ ತೊಟ್ಟು,
ಅನಾಹತವೆಂಬ ಕರ್ಪರವಂ ಕೊಂಡು,
ಅಕಾಯಕಲ್ಪಿತವೆಂಬ ಯೋಗದಂಡಮಂ ಪಿಡಿದು,
ಕಾಯಕಲ್ಪಿತ ಜೀವನೋಪಾಯವನತಿಗಳೆದು,
ಮಾಯಾಪ್ರಪಂಚು ನಾಸ್ತಿಯಾಗಿ,
ಶಿವಧ್ಯಾನ ಕಾರಣ ಸದಾಚಾರವೆಡೆಗೊಂಡು,
ಸಮ್ಯಜ್ಞಾನವೆಂಬ ಶಿವಪುರಮಂ ಪೊಕ್ಕು,
ಸಮತೆಯೆಂಬ ಓಗರವನೆತ್ತುತ್ತ, ಅಜ್ಞಾನವೆಂಬ ನಾಯ ಹೊಡೆವುತ್ತ,
ಉಪಪಾತಕಕೋಟಿನಾಂ ಬ್ರಹ್ಮಹತ್ಯಶತಾನಿ ಚ ।
ದಹಂತಿ ಶೇಷಪಾಪಾನಿ ಶಿವಭಕ್ತಸ್ಯ ದರ್ಶನಾತ್ ॥
ಎಂದುದಾಗಿ, ಸಕಲಜೀವಂಗಳ ಕರ್ಮಕ್ಷಯವ ಮಾಡಲೆಂದು ಸುಳಿವನಯ್ಯಾ.
ಮಹಂತ ಸಕಳೇಶ್ವರದೇವಾ, ನಿಮ್ಮ ಶರಣ. ॥ ೧೩ ॥

೩೮೨

ಅಷ್ಟವಿಧಾರ್ಚನೆ ಷೋಡಶೋಪಚಾರಂಗಳ ಮಾಡುವ
ಮಿಟ್ಟೆಯಭಂಡರ ಕಂಡು, ನಾಚಿತ್ತೆನ್ನ ಮನ.
ಉಪಚಾರವೇಕೊ ಶಿವಲಿಂಗದ ಕೂಡೆ ಶ್ವಪಚರಿಗಲ್ಲದೆ ?
ಸಕಳೇಶ್ವರಯ್ಯಾ, ಇಂತಪ್ಪ ಮಾದಿಗ
ವಿದ್ಯಾಭ್ಯಾಸದವರನೊಲಿಯಬಲ್ಲನೆ ? ॥ ೧೪ ॥

೩೮೩

ಆಚಾರವ ನುಡಿವೆ, ಅನಾಚಾರವ ನಡೆವೆ.
ನಮಗೆ ನಿಮಗೆ ಪ್ರಸಾದಸ್ವಾಯತ ನೋಡಾ.
ನಾನು ಭಕ್ತನೆಂಬ ನುಡಿಗೆ, ಸಕಳೇಶ್ವರದೇವ ನಗುವ. ॥ ೧೫ ॥

೩೮೪

ಆರುವನೊಲ್ಲೆನೆಂದು ಅರಣ್ಯವ ಹೊಗುವದು, ಕಾರ್ಯವಲ್ಲ, ದುರುಳತನ.
ಊರೊಳಗಿದ್ದಡೆ ನರರ ಹಂಗು. ಅರಣ್ಯದಲ್ಲಿದ್ದಡೆ ತರುಗಳ ಹಂಗು.
ಬಂದ ಪದಾರ್ಥವ ಲಿಂಗಾರ್ಪಿತವ ಮಾಡಿಕೊಂಬ
ಶರಣನೆ ಜಾಣ, ಸಕಳೇಶ್ವರದೇವಾ. ॥ ೧೬ ॥

೩೮೫

ಆಶೆಯಿಂದ ಬಿಟ್ಟು, ಕಿರಿಯರಿಲ್ಲ, ನಿರಾಶೆಯಿಂದ ಬಿಟ್ಟು, ಹಿರಿಯರಿಲ್ಲ,
ದಯದಿಂದ ಬಿಟ್ಟು, ಧರ್ಮವಿಲ್ಲ, ವಿಚಾರದಿಂದ ಬಿಟ್ಟು, ಸಹಾಯಿಗಳಿಲ್ಲ,
ಸಚರಾಚರಕ್ಕೆ ಸಕಳೇಶ್ವರನಿಂದ ಬಿಟ್ಟು, ದೈವವಿಲ್ಲ ॥ ೧೭ ॥

೩೮೬

ಇಂಥವರ ದೆಸೆಯಿಂದ ಇಂತುಟಾದುದೆಂದು
ಚಿಂತಿಸುತಿಪ್ಪ ಭಾಷೆಗೆಟ್ಟ ಮನದವ ನಾನಲ್ಲವಯ್ಯಾ.
ಎನ್ನಲಿದ್ದುದ ನೀವೆ ಬಲ್ಲಿರಿ, ಬಹ ಅನುವನೂ ನೀವೆ ಬಲ್ಲಿರಿ,
ಸಕಳೇಶ್ವರದೇವಾ, ಈವರು ಕಾವರು ನೀವೆಯಾಗಿ. ॥ ೧೮ ॥

೩೮೭

ಇದಿರೆನ್ನ ಹಳಿವವರು ಮತಿಯ ಬೆಳಗುವರು.
ಮನದ ಕಾಳಿಕೆಯ ಕಳೆವವರೆನ್ನ ನಂಟರು.
ದುರಾಚಾರದಲ್ಲಿ ನಡೆವವರು ಕನ್ನಡಿ ಎನಗೆ,
ಹೇಯೋಪಾದಿಯ ತೋರುವವರು.
ಇದು ಕಾರಣ, ನಾನನ್ಯ ದೇಶಕ್ಕೆ ಹೋಗೆನು.
ಸಕಳೇಶ್ವರದೇವರ ತೋರುವರೊಳರಿಲ್ಲಿಯೆ. ॥ ೧೯ ॥

೩೮೮

ಇನ್ನೊಂದು ಭಾಷೆಯನವಧರಿಸುವದು ಮಹಾಮಹಿಮ ಗುರುವೆ,
ಮುನ್ನಾದುದಕ್ಕೆ ನಿನ್ನ ಮನ ಬಂದಂತೆ ಮಾಡು.
ಇನ್ನೊಂದು ಭಾಷೆಯನವಧರಿಸುವದು ಮಹಾಮಹಿಮ ಲಿಂಗವೆ,
ಪರವಧುವೆನ್ನ ಹೆತ್ತತಾಯಿ ಸಮಾನ.
ಇದ್ದವರೆನ್ನ ಸಹೋದಯಸ್ತ್ರೀಯ ಸಮಾನ.
ಪಣ್ಯಾಂಗನೆಯರ ಸಂಗವೆನಗೆ ನಾಯಮಾಂಸ ನರರಡಗಿನ ಸಮಾನ.
ದಾನವರ ಸಂಗವೆನಗೆ ಸೂಕರನ ಮಲದ ಸಮಾನ.
ಇಹಿಂಗೆಂದು ಭಾಷೆಯ ಮಾಡಿ, ತಿರುಗಿ ಆಸೆ ಮಾಡಿ ಕೂಡಿದೆನಾದಡೆ,
ನಿಮ್ಮ ಪ್ರಸಾದಕ್ಕೆ ಬಾಯಿದೆರೆಯನು.
ತನು ಲೋಭದಿಂದ ಕೂ[ಡಿದೆನಾದ]ಡಾ ತನುವ ದಿಗುಬಲಿಗೊಡುವೆನು,

ಕೊಡದಿರ್ದಡೆ, ಧರೆ ಚಂದ್ರಾರ್ಕರುಳ್ಳನ್ನ ಬರ ಅರಸು ನರಕದಲ್ಲಿಕ್ಕು.
ಸೂಕರ ನಾಯಿ ವಾಯಿಸ ಗಾರ್ದಭ ಬಸುರಲ್ಲಿ ಬರಿಸು.
ಬರಿಸದಿದಡೆ ನಿಮಗೆ ನಿಮ್ಮಾಣೆ ಸಕಳೇಶ್ವರಾ. ॥ ೨೦ ॥

೩೮೯

ಈರೇಳುನೂರುವರುಷ ಮಜ್ಜನಕ್ಕೆರೆದು ವೃಥಾ ಹೋಯಿತ್ತಲ್ಲಾ!
ಏನೆಂದರಿಯದೆ ವೃಥಾ ಹೋಯಿತ್ತಲ್ಲಾ!
ನೂಲುವರ ಕಂಡು ನೂತಿಹೆನೆಂದಡೆ
ಅಯ್ಯಾ, ಎನ್ನ ಕರಿಯ ಕದಿರು ಬಿಳಿದಾಗದು.
ಅಯ್ಯಾ, ಎನ್ನ ತನುಮನಧನ ನಿಮ್ಮಲ್ಲಿ ಸಯವಾಗವು.
ಬಂದವಸರದಲ್ಲಿ ಮನವು ಲಿಂಗದೊಳಗೆ ತೋರಿತ್ತು, ಅನುಭವಕ್ಕೊಳಗಾಗದೆ.
ಎನ್ನ ವಿಚಾರಿಸಿ ನೋಡೆಹೆನೆಂದಡೇನು ಇಲ್ಲ.
ಸುಳುಹಿನೊಳಗೆ ಅರಿದೆಹೆನೆಂದಡೆ ಸುಳುಹಿಂಗೆ ಭಂಗವಾಯಿತ್ತು,
ಎನಗಿನ್ನು ಸುಳುಹೇಕೆ ಹೇಳಾ, ಸಕಳೇಶ್ವರದೇವಾ. ॥ ೨೧ ॥

೩೯೦

ಈಶನಿಂದತ್ತ ಹಿರಿಯರಿಲ್ಲ, ಆಸೆಯಿಂದತ್ತ ಕಿರಿಯರಿಲ್ಲ,
ದೆಸೆಯಿಂದತ್ತ ದಿಕ್ಕಿಲ್ಲ, ಜಪದಿಂದತ್ತ ಪುಣ್ಯವಿಲ್ಲ,
ಸಚರಾಚರದೊಡೆಯ ಸಕಳೇಶ್ವರದೇವ, ವಿಚಾರದಿಂದತ್ತ ಸಹಾಯವಿಲ್ಲ ॥೨೨॥

೩೯೧

ಉಡಲು ಸೀರೆಯ ಕಾಣದೆ ಬತ್ತಲೆಯಿಪ್ಪರಯ್ಯಾ.
ಉಣಲಶನವ ಕಾಣದೆ ಹಸಿದಿಪ್ಪರಯ್ಯಾ.
ಮೀಯಲೆಣ್ಣೆಯ ಕಾಣದೆ ಮಂಡೆಯ ಬೋಳುಮಾಡಿಕೊಂಡಿಪ್ಪರಯ್ಯಾ.
ದಿಟದಿಂ ಬಿಡಿಸಬಾರದಂತೆ,
ಈ ಸಟೆಯ ನಿಸ್ಸಂಸಾರವ ಧರಿಸಿಪ್ಪವರಿಗಂಜುವೆ ಕಾಣಾ, ಸಕಳೇಶ್ವರಾ. ॥ ೨೩ ॥

೩೯೨

ಉರವಣಿಸುವ ಮನ ಮುಟ್ಟುವನ್ನಕ್ಕ ಕಾಡುವುದು.
ಘನಘನದಲ್ಲಿ ಮನ ನಂಬುವನ್ನಕ್ಕ ಕಾಡುವುದು.
ಮಹಂತ ಸಕಳೇಶ್ವರನೆಂಬ ಶಬ್ದವುಳ್ಳನ್ನಕ್ಕ ಕಾಡುವುದು. ॥ ೨೪ ॥

೩೯೩

ಊರಿಗೊಕ್ಕಲಹ, ಹೆಂಡತಿಗೆ ಗಂಡನಹ.
ಮಕ್ಕಳಿಗೆ ತಂದೆಯಹ, ಮಸಣಕ್ಕೆ ಹೆಣನಹ.
ಸಕಳೇಶ್ವರದೇವಾ, ನಿಮ್ಮ ಶರಣನ ಪರಿ ಬೇರೆ. ॥ ೨೫ ॥

೩೯೪

ಋಗ್ವೇದ ಕಾಣವಯ್ಯಾ, ಸದ್ಯೋಜಾತನನು.
ಯಜುರ್ವೇದ ಕಾಣವಯ್ಯಾ, ವಾಮದೇವನನು.
ಸಾಮವೇದ ಕಾಣವಯ್ಯಾ, ತತ್ಪುರುಷನನು.
ಅಥರ್ವಣವೇದ ಕಾಣವಯ್ಯಾ, ಅಘೋರನಾಥನು.
ಅತೀತಃ ಪಂಥಾನಂ ತವ ಚ ಮಹಿಮಾ ವಾಙ್ಮನಸಯೋಃ ।
ರತದ್ವ್ಯಾವೃತ್ತ್ಯೇಯಂ ಚಕಿತಮಭಿದತ್ತೇ ಶ್ರುತಿರಪಿ ।
ಸ ಕಸ್ಯ ಸ್ತೋತವ್ಯಃ ಕತಿ ವಿಧಗುಣಃ ಕಸ್ಯ ವಿಷಯಃ ।
ಪದೇ ತ್ವರ್ವಾಚೀನೇ ಪತತಿ ನ ಮನಃ ಕಸ್ಯ ನ ವಚಃ ॥
ಎಂದುದಾಗಿ, ಚತುರ್ಮುಖ ಬ್ರಹ್ಮಂಗೆ
ಅಗಮ್ಯ ದೇವನಾದನೆಂದು, ಅನಂತವೇದ ಕಾಣಲಾರವು,
ಈಶಾನ್ಯ ಸಕಳೇಶ್ವರದೇವನ. ॥ ೨೬ ॥

೩೯೫

ಎಂಜಲಮಾತ ನುಡಿವುತ್ತಿಪ್ಪ
ಜಗದ ಜಂಗುಳದೊಳಗಿದ್ದಡೆ ಶೀಲವಂತನೆ ?
ಭಿನ್ನರುಚಿಗಳಿಗೆರಗಿ, ಕಾಮನ ಬೆಂಬಳಿವರಿದು,
ಮಕರಶೃಂಗಾರವ ಮಾಡಿದಡೆ ಮಹಂತನೆ ?
ಲಿಂಗಶೃಂಗಾರವ ಮಾಡಿ,
ಅಂಗನೆಯರ ಸಂಗವ ತೊರೆದಡೆ, ಶೀಲವಂತನೆಂಬೆನು.
ಲೋಕದ ನಚ್ಚು ಮಚ್ಚು ಬಿಟ್ಟು, ಮನ ನಿಶ್ಚಿಂತವಾದಡೆ,
ಮಚ್ಚುವನಯ್ಯಾ, ಎಮ್ಮ ಸಕಳೇಶ್ವರದೇವ. ॥ ೨೭ ॥

೩೯೬

ಎನಗೆ ನೀನು ಮಾಡಿದ ಸಂಸಾರದ ಬಳಲಿಕೆ, ನಿನಗೆನ್ನ ಕಾಡುವ ಬಳಲಿಕೆ.
ಬಳಲಿಕೆಯಿಬ್ಬರಿಗೆಯೂ ಸರಿ.
ನಿನ್ನ ಹೆಚ್ಚೇನು ? ಎನ್ನ ಕುಂದೇನು ?
ನೀನು ಭಕ್ತದೇಹಿಕದೇವನಾದ ಬಳಿಕ !
ಸಕಳೇಶ್ವರದೇವ ನೀನೂ ಬಲ್ಲೆ, ನಾನೂ ಬಲ್ಲೆ. ॥ ೨೮ ॥

೩೯೭

ಎನಗೆ ಸೋಂಕಿದ ಸಕಲರುಚಿಪದಾರ್ಥಂಗಳನು,
ನಿನಗೆ ಕೊಡುವೆನೆಂದವಧಾನಿಸುವನ್ನಬರ,
ಎನಗೂ ಇಲ್ಲದೆ ಹೋಯಿತ್ತು, ನಿನಗೂ ಇಲ್ಲದೆ ಹೋಯಿತ್ತು.
ಈ ಭೇದಬುದ್ಧಿಯು ಬಿಡಿಸಿ,
ಆನರಿದುದೆ ನೀನರಿದುದೆಂಬಂತೆ ಎಂದಿಂಗೆನ್ನನಿರಿಸುವೆ ಸಕಳೇಶ್ವರಾ. ॥ ೨೯ ॥

೩೯೮

ಎನ್ನ ಈ ಸಂಸಾರದ ಬಾಳುವೆ ನೆಲೆಯಿಲ್ಲ ಕಂಡಾ !
ಆದಡೆ, ಶಿವನೆ ನೀನು ಕಾಡುವ ಕಾಟ ನೆಲೆಯಿಲ್ಲ.
ಸಂಸಾರದ ಕೂಡೆ ಕಾಡುವುದು ಲಯ.
ಇಂತೀ ಎರಡೂ ಲಯವಾದಡೆ
ನಾನು ನೀನೂ ಕೂಡಿ ನಿತ್ಯರಾಗಿ ಸುಖಿಯಿಸುವ, ಸಕಳೇಶ್ವರದೇವಾ. ॥ ೩೦ ॥

೩೯೯

ಎನ್ನ ಮನದಲ್ಲಿ ದಿಟವಿಲ್ಲ, ಪೂಜಿಸಿ ಏವೆನು ?
ಹೃದಯದಲ್ಲೊಂದು, ವಚನದಲ್ಲೊಂದು ಎನಗೆ ನೋಡಾ.
ಎನ್ನ ಕಾಯ ಭಕ್ತ, ಮನ ಭವಿ ಸಕಳೇಶ್ವರದೇವಾ. ॥ ೩೧ ॥

೪೦೦

ಎಲವದ ಎಕ್ಕೆಯ ಬಬ್ಬೂರ್ರದ
ಕಾಗೆ ಗೂಗೆಗರಿಯ ಸೂವಾರವೆಯ ಪರಮಾಣುಗಳ
ಕಲ್ಲಮೇಲೆ ಬೆಳೆದಿಹ ಹುಲ್ಲುಕಡ್ಡಿಯ ಸೋಂಕುಗಳ ಬೇಡಿ
ಬಾಳುವ ಮಾನವನಂತೆ ಬೇಡಿ ನಿಂದವು.
ಇಂತುಟನರಿತು, ವಿರಕ್ತಿಯಿಂದ ಸಕಳೇಶ್ವರದೇವಾ ಶರಣೆಂದಡೆ,
ನಿಜಪದವ ಕೊಡುವುದಕ್ಕೆ ಸಂದೇಹಬೇಡ. ॥ ೩೨ ॥

೪೦೧

ಏರಿಯ ಕಟ್ಟಬಹುದಲ್ಲದೆ ನೀರ ತುಂಬಬಹುದೆ ?
ಕೈದುವ ಕೊಡಬಹುದಲ್ಲದೆ ಕಲಿತನವ ಕೊಡಬಹುದೆ ?
ವಿವಾಹವ ಮಾಡಬಹುದಲ್ಲದೆ ಪುರುಷತನವ ಹರಸಬಹುದೆ ?
ಘನವ ತೋರಬಹುದಲ್ಲದೆ ನೆನಹ ನಿಲಿಸಬಹುದೆ ?
'ಓದು ಒಕ್ಕಾಲು ಬುದ್ಧಿ ಮುಕ್ಕಾಲು' ಎಂಬ ಲೋಕದ ಗಾದೆಮಾತಿನಂತೆ,
ಸದ್ಗುರುಕಾರುಣ್ಯವಾದಡೂ ಸಾಧಿಸಿದವನಿಲ್ಲ, ಸಕಳೇಶ್ವರಾ. ॥ ೩೩ ॥

೪೦೨

ಒಡಲುಗೊಂಡು, ಕಾಯವ ಬಳಿಗೊಂಡು,
ಸಂಸಾರದ ಕುರುಹಿನ ಹೆಸರಲ್ಲಿ ಕರೆದಡೆ,
ಓ ಎನುತಿಪ್ಪವರು ನರರೆ ?
ಬರಿದೆ ಸಂಸಾರವ ಬಳಸುವಂತಿಪ್ಪರು,
ಸಕಳೇಶ್ವರದೇವಾ, ನಿಮ್ಮ ಶರಣರು. ॥ ೩೪ ॥

೪೦೩

ಕಂಡುದ ನುಡಿದಡೆ ಕಡುಪಾಪಿಯೆಂಬರು.
ಸುಮ್ಮನಿದ್ದಡೆ ಮುಸುಕುರ್ಮಿಯೆಂಬರು.
ಎನಲುಬಾರದು, ಎನದಿರಲುಬಾರದು.
ಸಟೆ ಕುಹಕಪ್ರಪಂಚಿಂಗಲ್ಲದೆ ಭಜಿಸರು. ಸಕಳೇಶ್ವರದೇವಾ, ನಿಮ್ಮಾಣೆ ।। ೩೫ ।।

೪೦೪

ಕರ್ತನಿದ್ದೆಡೆಗೆ ಭೃತ್ಯ ಬಂದಡೆ,
ಭೃತ್ಯಾಚಾರವ ಮಾಡಿಸಿಕೊಂಬ ಕರ್ತಂಗೆ ಕರ್ತೃತ್ವವಲ್ಲದೆ
ಭೃತ್ಯನಿದ್ದೆಡೆಗೆ ಕರ್ತನೆಯ್ತಂದು,
ಭೃತ್ಯಾಚಾರವ ಮಾಡಿಸಿಕೊಂಬ ಕರ್ತಂಗೆ ಕರ್ತೃತ್ವವೆಲ್ಲಿಯದು ?
ಜಗದ ಕರ್ತನ ವೇಷವ ಧರಿಸಿ ಕರ್ತನಾದ ಬಳಿಕ,
ಭಕ್ತನಿದ್ದೆಡೆಗೆ ಭಕ್ತಿಯ ಬಂದು ಮಾಡೆಂದಡೆ,
ಎನ್ನ ಕರ್ತತನಕ್ಕೆ ಅದೇ ಹಾನಿ ನೋಡಾ.
ಲಿಂಗಾಣತಿಯಿಂದ ಬಂದ ಪದಾರ್ಥವ ಲಿಂಗಾರ್ಪಿತವ ಮಾಡುವದಲ್ಲದೆ,
ಅಂಗದಿಚ್ಛೆಗೆ ಅಂಗವಿಸಿ ಬೇಡಿದೆನಾದಡೆ,
ಎನ್ನ ಲಿಂಗಾಭಿಮಾನತನಕ್ಕೆ ಅದೇ ಹಾನಿ ನೋಡಾ.
ದೇಹ ಮನ ಪ್ರಾಣ ನಿಮ್ಮದಾಗಿ, ನಾ ಹೊರೆಯಬೇಕೆಂಬ ಭ್ರಾಂತೆನಗಿಲ್ಲ.
ಬಡಮನವ ಮಾಡಿ ಒಂದಡಿಯ ನಡೆದೆನಾದಡೆ,
ಮನದೊಡೆಯ ಸಕಳೇಶ್ವರದೇವಾ, ನಿಮ್ಮಾಣೆ. ।। ೩೬ ।।

೪೦೫

ಕರ್ತನೊಬ್ಬನೆ ದೇವ, ಸತ್ಯವೆ ಸುಭಾಷೆ, ಭೃತ್ಯಾಚಾರವೆ ಆಚಾರವಯ್ಯಾ.
ಮತ್ತೆ ದೇವರಿಲ್ಲ, ಮತ್ತೆ ಆಚಾರವಿಲ್ಲ, ಮತ್ತೆ ಸುಭಾಷೆಯೆಂಬುದಿಲ್ಲ.
ಮಹಂತ ಸಕಳೇಶ್ವರದೇವರನೊಲಿಸಿದ ಪುರಾತರ ಪಥವಿದು.
ಅವಿತಥವಿಲ್ಲದೆ ನಂಬುವದು. ।। ೩೭ ।।

೪೦೬

ಕಲಿಯಬಾರದು ಕಲಿತನವನು,
ಕಲಿಯಬಾರದು ವಿವೇಕಸಹಜವನು,
ಕಲಿಯಬಾರದು ದಾನಗುಣವನು,
ಕಲಿಯಬಾರದು ಸತ್ಪಥವನು,
ಸಕಳೇಶ್ವರದೇವಾ, ನೀ ಕರುಣಿಸಿದಲ್ಲದೆ. ।। ೩೮ ।।

೪೦೭

ಕಸವ ಬೋಹರಿಸಿ ದೇಹಾರಕ್ಕೆಡೆಮಾಡಿ.
ಕಸವಿರಲು ದೇಹಾರ ಶುಚಿಗೆ ಶೋಭಿತವಲ್ಲ,
ಪರದೈವವುಳ್ಳವಂಗೆ ಗುರುಲಿಂಗವಿಲ್ಲ,
ಪರಕೆ ಮೀಸಲ ಹಿಡಿಯಲು, ಲಿಂಗಕ್ಕೋಗರವಿಲ್ಲ,
ಇದು ಕಾರಣ, ಇಪ್ಪತ್ತಿನ ಬಿಳಿ ನೀರು.
ನನ್ನೀ ಪರಮಾರ್ಥಕ್ಕೆ ಸಲ್ಲರು, ಹರಭಕ್ತರು ಬಲ್ಲರು.
ಸಕಳೇಶ್ವರದೇವ, ಅವರ ಮೆಚ್ಚ. || ೩೯ ||

೪೦೮

ಕಾಡಪತ್ರೆಯ ನಾಡಕೀಡೆ ತಿಂದಿರವೆ ? ಉಡು ಏಕಾಂತ ನಿವಾಸಿಯೆ ?
ತೋಳ ದಿಗಂಬರಿಯೇ ? ಎತ್ತು ಬ್ರಹ್ಮಚಾರಿಯೇ?
ಬಾವುಲ ತಲೆಕೆಳಗಾಗಿದ್ದಡೆ ತಪಸ್ವಿಯೇ ?
ಸಕಳೇಶ್ವರದೇವಾ, ನಿಮ್ಮ ನಿಜವನರಿಯದ ಶರಣರು
ಹೊರಹಂಚೆ ಒಳಬೊಳ್ಳೆ, ಒಲ್ಲದು ಲಿಂಗೈಕ್ಯರು. || ೪೦ ||

೪೦೯

ಕಾಮನೆಂಬ ಬಿಲ್ಲಾಳವುಂಟೆಂಬುದ, ನಾವು ಕೇಳಿ ಬಲ್ಲೆವೈಸೆ !
ಅವನೆಲ್ಲರನೆಸೆವ
ಅವ ನಮ್ಮ ಕಂಡಡೆ, ಬೆಟ್ಟೆಮ್ಮ ನಿಟ್ಟೈಸದೆ ಸರಿವ.
ಸಕಳೇಶ್ವರದೇವರನರಿಯದ ನಿರ್ಭಾಗ್ಯರನೆಸೆವಾ. || ೧ ||

೪೧೦

ಕಾಮಿಸಿ ಕಲ್ಪಿಸಿ ಭಾವಿಸಿ ಬರಿದೆ ಬಳಲಿದೆ.
ಚಿಂತೆ ಮರುಳುತನಂ ಅದೆಂತು ಬಂದುದನಂತೆ ಕಾಬುದು.
ಚಿಂತೆ ಮರುಳುತನಂ ಅಚಿಂತ್ಯ ಸಕಳೇಶ್ವರ ಮಾಡಿದಂತೆ.
ಅಂತೆಯಲ್ಲದೆ ಎಂತೂ ಆಗದು ಚಿಂತೆ ಮರುಳುತನಂ. || ೪೨ ||

೪೧೧

ಕಾಯಕಕ್ಕಾರದೆ, ಮೈಸೋಂಬತನದಿಂದ
ಬೇರೆ ಕೂಳ ಗಳಿಸಲಾರದೆ ಹಸಿದಿಪ್ಪರಯ್ಯಾ.
ಉಡಲು ಸೀರೆಯ ಗಳಿಸಲಾರದೆ, ಕಚ್ಚುಟವ ಕಟ್ಟಿಕೊಂಡಿಪ್ಪರಯ್ಯಾ.
ಮೀಯಲೆಣ್ಣೆಯ ಗಳಿಸಲಾರದೆ, ಮಂಡೆ ಬೋಳಾಗಿಪ್ಪರಯ್ಯಾ.
ದಿಟದಿಂದ ಬಿಡಿಸದೆ,
ನಿಸ್ಸಂಸಾರದ ಸಟೆಯನವಧರಿಸಿಕೊಂಡಿಪ್ಪವರಿಗೆ ಆನಂಜುವೆ,
ಸಕಳೇಶ್ವರದೇವಾ. || ೪೩ ||

೪೧೨

ಕಾಯದ ಕಳವಳದಲ್ಲಿ ಹುಟ್ಟಿ, ಸಂಸಾರವನೆ ತೊರೆದು,
ಲಿಂಗಮುಖವರಿಯದವರೆಲ್ಲಾ ಅಂತಿರಲಿ ಅಂತಿರಲಿ.
ಬ್ರಹ್ಮೋಪದೇಶವನೆ ಕೊರಳಲ್ಲಿರಿಸಿಕೊಂಡು,
ವಿಷಯಾದಿಗಳ ಕೊಂಡಾತನಂತಿರಲಿ, ಅಂತಿರಲಿ.
ಪಂಚಮಹಾವೇದಶಾಸ್ತ್ರವನೋದಿ,
ಲಿಂಗವುಂಟು ಇಲ್ಲಾಯೆಂಬ ಶ್ವಾನರಂತಿರಲಿ, ಅಂತಿರಲಿ.
ತನುವ ಹೊತ್ತು ತೊಳಲಿ ಬಳಲುವ
ಕಾಲವಂಚಕ ಯೋಗಿಗಳೆಲ್ಲಾ ಅಂತಿರಲಿ, ಅಂತಿರಲಿ.
ಪಂಚಮಹಾಶೈವರು ಭ್ರಷ್ಟರಾಗಿಹೋದರು.
ಎಂತು ಲಿಂಗವಂತಂಗೆ ಸರಿಯೆಂಬೆ ?
ಅದ್ವೈತಿಗಳೆಲ್ಲಾ ಲಿಂಗಾರಾಧನೆ ಹುಸಿಯೆಂದು,
ಬುದ್ಧಿ ತಪ್ಪಿ, ಗಮನಗೆಟ್ಟುಹೋದರು.
ಅದೃಶ್ಯಂ ಭಾವನೋ ನಾಸ್ತಿ ದೃಶ್ಯಮೇವ ವಿನಶ್ಯತಿ ।
ಸದ್ಬ್ರಹ್ಮಂ ತು ನಿರಾಕಾರಂ, ತಥ್ಯಂ ಧ್ಯಾಯಂತಿ ಯೋಗಿನಃ ॥
ಎಂದುದಾಗಿ, ಬ್ರಾಹ್ಮಣನೆಂದಡೆ
ಬ್ರಹ್ಮನ ಶಿರವ ದಂಡವ ಕೊಂಡರು.
ಬ್ರಹ್ಮವಾದಿಗಳು ಲಿಂಗಕ್ಕೆ ದೂರವಾಗಿ ಹೋದರು.
ಅಹಮಿಲ್ಲದ ಕಾರಣ, ಸಕಳೇಶ್ವರದೇವಯ್ಯಾ,
ನಿಮ್ಮ ಶರಣರು ಜಗವಂದಯರಾದರು. ॥ ೪೪ ॥

೪೧೩

ಕಾಯದಿಂದ ಗುರುವ ಕಂಡೆ, ಕಾಯದಿಂದ ಲಿಂಗವ ಕಂಡೆ,
ಕಾಯದಿಂದ ಜಂಗಮವ ಕಂಡೆ, ಕಾಯದಿಂದ ಪ್ರಸಾದವ ಕಂಡೆ.
ಕಾಯದಿಂದ ಸಕಳೇಶ್ವರದೇವರ ಪೂಜಿಸುವಲ್ಲಿ
ಉತ್ತರಸಾಧಕನಾದೆಯಲ್ಲಾ, ಎಲೆ ಕಾಯವೆ. ॥ ೪೫ ॥

೪೧೪

ಕಾಲವಶದಿಂದ ಕಾಲನೆಡಹಿದಡೆ,
ಹಾಲುಗುಡಿದಂತೆ ಪರಿಣಾಮಿಸಬೇಕು.
ಕಾಲಕ್ಕೆ ಬೇಸತ್ತು ಬೆಂಬೀಳಲಾಗದು.
ಕಾಲ ಮುನ್ನಾದಿಯಲ್ಲಿ ಬಂದುದಯ್ಯ !
ಕಾಲನ ಬಾಯಿಗೆ ಒಳಗಾಗದ ಮುನ್ನ,
ಕಾಲಾಂತಕ ಸಕಳೇಶ್ವರದೇವ ಶರಣೆಂದು ಬದುಕಿರಯ್ಯಾ. ॥ ೪೬ ॥

೪೧೫

ಕಿವಿಯಲ್ಲಿ ಕೀಟಕ, ಕೊರಳಲೊಂದೊದರು.
ತಲೆಯಲ್ಲಿ ಹುಳಿತದೊಂದೇರು.
ನೋವನರಿಯದೆ ವಿಷಯಕ್ಕೆ ಹರಿವುದು ಸೊಣಗನು.
ಬೆನ್ನಹೇರು ನೆಲಕ್ಕೆ ನೂಕಲು,
ಬರಸೆಯು ಕಾಗೆ ಬಂದಿರಿಯಲು,
ನೋವನರಿಯದೆ ವಿಷಯಕ್ಕೆ ಹರಿವುದು ಗಾರ್ದಭನು.
ಹರೆಯ ಶಬುದಕ್ಕೆ, ಬೊಬ್ಬೆಯ ರಭಸಕ್ಕೆ
ತೊಟ್ಟಂಬು ತೊಟ್ಟುರ್ಚಿ ಬೀಳಲು,
ನೋವನರಿಯದೆ ವಿಷಯಕ್ಕೆ ಹರಿವುದು ಹರಿಣನು.
ಸಕಳೇಶ್ವರದೇವಾ,
ನೀ ಮಾಡಿದ ಮಾಯೆ,
ಆರಾರನಾಯತಗೆಡಿಸದೊ ? ॥ ೪೭ ॥

೪೧೬

ಕುಭಾಷೆ ಸುಭಾಷೆಯ ಕೇಳದಂತಿರಬೇಕು.
ಮೃದುಕಠಿಣಂಗಳನಾರಯ್ಯದಂತಿರಬೇಕು.
ರಸಗಂಧಂಗಳ ಅರಯದಂತಿರಬೇಕು
ಲಿಂಗವಲ್ಲದೆ ಮತ್ತೊಂದ ಕಾಣದಂತಿರಬೇಕು
ಇಂದ್ರಿಯಂಗಳ ಬಳಿ ಸಂದಲ್ಲದೆ
ದೇವ ಸಕಳೇಶ್ವರದೇವನನೊಲಿಸಬಾರದು. ॥ ೪೮ ॥

೪೧೭

ಕುರುಹಿನ ರೂಹಿನ ಕೈಯಲ್ಲಿ ದರ್ಪಣವಿದ್ದಲ್ಲಿ ಫಲವೇನು ?
ಒಂದಕ್ಕೆ ಜೀವವಿಲ್ಲ, ಒಂದಕ್ಕೆ ತೇಜವಿಲ್ಲ.
ಕಾರಣವರಿಯದ ನಿಃಕಾರಣ ಮನುಜರ ಕೈಯಲ್ಲಿ
ಲಿಂಗವಿದ್ದು ಫಲವೇನು ?
ಅಂಗರಹಿತವಾದ ಸಂಗವನರಿಯರು.
ಸಂಗರಹಿತವಾದ ಸುಖವನರಿಯರು.
ನಿಸ್ಸಂಗಿ ನಿಂದ ನಿಲವ,
ಸಕಳೇಶ್ವರದೇವಾ, ನಿಮ್ಮ ಶರಣ ಬಲ್ಲ. ॥ ೪೯ ॥

೪೧೮

ಗರ ಹೊಡೆದಂತೆ ಬೆರತುಕೊಂಡಿಪ್ಪರು.
ಮರನೇರಿ ಬಿದ್ದಂತೆ ಹಮ್ಮದಂಬೋದರು.

ಉರಗನ ವಿಷವಾವರಿಸಿದಂತೆ, ನಾಲಗೆ ಹೊರಳದು, ಕಣ್ಣಾಗಣರು.
ನಿಮ್ಮ ಕರುಣವೆ ಕರ ಚೆಲುವು, ಸಕಳೇಶ್ವರಯ್ಯಾ.
ಸಿರಿ ಸೋಂಕಿದವನ ಪರಿ ಬೇರೆ ತಂದೆ. || ೫೦ ||

೪೧೯

ಗಿರಿಯ ಕರದಿಂದೆತ್ತಿದಡೇನು ?
ಹರಿವ ವಾರುಧಿಯನಾಪೋಷಣಂಗೊಂಡಡೇನು ?
ಗಗನ ಗಮನದಲ್ಲಿ ಸುಳಿದಡೇನು ?
ಇವರೆಲ್ಲರೂ ಪವನದ ಬಳಿಯಲಭ್ಯಾಸಿಗಳು.
ಅರ್ಚಿಸಿ, ಪೂಜಿಸುವ ಮಚ್ಚರದೊಳಗಣ ಲೌಕಿಕರ ಮೆಚ್ಚ,
ಸಕಳೇಶ್ವರದೇವ, ವೇಷಡಂಬಕರ. || ೫೧ ||

೪೨೦

ಗುರುಪ್ರಸಾದವ ಕೊಂಬರೆ, ನಾಚುವದು ಮನ.
ಲಿಂಗಪ್ರಸದಾವ ಕೊಂಬರೆ, ನಾಚುವದು ಮನ.
ಜಂಗಮಪ್ರಸಾದವ ಕೊಂಬರೆ, ನಾಚುವದು ಮನ.
ಸಮಯಪ್ರಸಾದವ ಕೊಂಬರೆ, ನಾಚುವದು ಮನ.
ಸೂಳೆಯ ಬೊಜಗನ ಎಂಜಲ ತಿಂಬರೆ, ನಾಚದು ಮನ.
ಮಹಂತ ಸಕಳೇಶ್ವರಯ್ಯನು ಮೂಗ ಕೊಯ್ಯದೆ ಮಾಣನು. || ೫೨ ||

೪೨೧

ಘನಕ್ಕೆ ಘನಪದವಿಯ ಬಯಸೆನಾಗಿ ಎನ್ನ ಮನವ ನೀ ಬಲ್ಲೆ.
ಭಕ್ತರಿಗೆ ಬೇಡಿತ್ತ ಕುಡುವ ವರದಾನಿ ನೋಡಯ್ಯಾ.
ಆನೇನುವ ಬೇಡೆನಾಗಿ, ಸಕಳೇಶ್ವರದೇವ ಎನ್ನ ಮಾತ ಮನ್ನಿಸುವ. || ೫೩ ||

೪೨೨

ಚಂದ್ರೋದದಯದಲುಂಬ ಚಕೋರಗೋಗರವ ಹಾಕಿ,
ಬಸುರ ಬಡಿದುಕೊಂಡು ಉಣ್ಣದೆಂದಳುವರು ನೋಡಾ.
ಲೋಕದ ಚಿಂತೆಯನನಂತವನಾಡುವರಲ್ಲದೆ,
ತಮ್ಮ ಚಿಂತೆಯನಾಡುವರೊಪ್ಪಚ್ಚಿಯೂ ನೋಡಾ.
ಮಹಂತ ಸಕಳೇಶ್ವರದೇವಾ, ನಿಮ್ಮ ಶರಣರ ನಿಲವಿಂಥಾದಯ್ಯಾ. || ೫೪ ||

೪೨೩

ಚಿಕ್ಕಟು ಕಡಿದಡೇನು ಮನಕ್ಕತಿಯರಿಯದು.
ಹೊಕ್ಕು ಹರಿದಡೇನು ಹೊಲನ ಮೇಯಲರಿಯದು.
ಮಕ್ಕಳ ಹಡೆದಡೇನು ಒಕ್ಕಲೂರಾಗದು.

ಲೆಕ್ಕಕ್ಕೊಂದ್ಯೆನೂರಿದ್ದಡೇತಕೆ ಬಾತೆಯಯ್ಯಾ !
ಮಿಕ್ಕ ಕುಕವಿಗಳ ಅರೆವಚನ,
ಹೊಲದ ಕುಕ್ಕತೆನೆಯಾದಂತೆ ಕಾಣಾ, ಸಕಳೇಶ್ವರದೇವಾ. || ೫೫ ||

೪೨೪

ಛಲವನೆತ್ತಿಕೊಂಡ ಬಳಿಕ ಬಲುಹು ಸಲಿಸಲೇಬೇಕು.
ತನ್ನ ಮನವ ತಾನರಿದು ಗೆಲಲೇಬೇಕು.
ದೇವರೊಲವುಳ್ಳವರ ಕಂಡು ತಾನಾದೆನೆಂದಡೆ,
ಛಲ ಸಲ್ಲದು ಕಂಡಯ್ಯಾ.
ನೇಮವೆಂದಡೆ ಕಡೆ ಮುಟ್ಟಿಸಲೀಯೆ, ತಪ್ಪವಿಡಿವೆ ನೀನು.
ಇದು ಕಾರಣ,
ನಾನೇನು ಪೆರತೊಂದನರಿಯದಂತಿರಿಸೆನ್ನ, ಸಕಳೇಶ್ವರದೇವಾ. || ೫೬ ||

೪೨೫

ಜಗದಗಲದ ಕಲ್ಲು ನೆಲಕ್ಕೆ ಬಿದ್ದಡೆ, ಕೆಲಕ್ಕೆ ಸಾರುವನೆಗ್ಗ.
ನಗುತಲು ತಲ್ಲಣಿಸದೆ ಶಿವಶರಣನುತ್ತಿಹುದು.
ನಗುತಲು ತಲ್ಲಣಿಸದೆ ಹರಶರಣೆನುತ್ತಿಹುದು.
ಸಕಳೇಶ್ವರದೇವರು ವಿಮುಖವಾದಡೆ,
ನೆನಹೆಂಬಲಗಿನಲ್ಲಿ ಕೈ ಮಾಡುತ್ತಿಹುದು. || ೫೭ ||

೪೨೬

ಜನಮೆಚ್ಚೆ ಶುದ್ಧನಲ್ಲದೆ, ಮನಮೆಚ್ಚೆ ಶುದ್ದನಲ್ಲವಯ್ಯಾ
ನುಡಿಯಲ್ಲಿ ಜಾಣನಲ್ಲದೆ, ನಡೆಯಲ್ಲಿ ಜಾಣನಲ್ಲವಯ್ಯಾ.
ವೇಷದಲ್ಲಿ ಅಧಿಕನಲ್ಲದೆ, ಭಾಷೆಯಲ್ಲಿ ಅಧಿಕನಲ್ಲವಯ್ಯಾ.
ಧನ ದೊರಕದಿದ್ದಡೆ ನಿಸ್ಪೃಹನಲ್ಲದೆ, ಧನ ದೊರಕಿ ನಿಸ್ಪೃಹನಲ್ಲವಯ್ಯಾ.
ಏಕಾಂತದ್ರೋಹಿ, ಗುಪ್ತಪಾತಕ, ಯುಕ್ತಿಶೂನ್ಯಂಗೆ
ಸಕಳೇಶ್ವರದೇವ ಒಲಿ ಒಲಿಯೆಂದಡೆ, ಎಂತೊಲಿವನಯ್ಯಾ? || ೫೮ ||

೪೨೭

ಜ್ಯೋತಿ ಸೋಂಕಿದ ಬತ್ತಿಯೆಲ್ಲ ಜ್ಯೋತಿಯಪ್ಪವಯ್ಯಾ.
ಸಾಗರವ ಮುಟ್ಟಿದ ನದಿಗಳೆಲ್ಲ ಸಾಗರವಪ್ಪವಯ್ಯಾ.
ಪ್ರಸಾದವ ಮುಟ್ಟಿದ ಪದಾರ್ಥಂಗಳೆಲ್ಲ ಪ್ರಸಾದವಪ್ಪವಯ್ಯಾ.
ಲಿಂಗವ ಮುಟ್ಟಿದ ಅಂಗವೆಲ್ಲ ಲಿಂಗಾಂಗವಪ್ಪವಯ್ಯಾ.
ಸಕಳೇಶ್ವರದೇವಯ್ಯಾ, ನಿಮ್ಮ ಮುಟ್ಟಿದವರೆಲ್ಲ
ನಿಮ್ಮಂತೆ ಅಪ್ಪರಯ್ಯಾ. || ೫೯ ||

೪೨೮

ತನುವ ಪಡದು, ಧನವ ಗಳಿಸಬೇಕೆಂದು
ಮನುಜರ ಮನೆಯ ಬಾಗಿಲಿಗೆ ಹೋಗಿ,
ಮನಬಂದ ಪರಿಯಲ್ಲಿ ನುಡಿಸಿಕೊಂಡು,
ಮನನೊಂದು ಬೆಂದು ಮರುಗುತ್ತಿರಲಾರೆ.
ಸಕಳೇಶ್ವರದೇವಾ, ನೀ ಕರುಣಿಸಿ ಇದ್ದ ಠಾವಿನಲ್ಲಿ ಇಹಂಥಾ
ಪರಮಸುಖ ಎಂದು ದೊರಕೊಂಬುದೊ ? || ೬೦ ||

೪೨೯

ತಮತಮಗೆ ಸಮತೆಯನು ಹೇಳಬಹುದಲ್ಲದೆ,
ತಮತಮಗೆ ಸಮತೆಯನು ಆಡಬಹುದಲ್ಲದೆ,
ಕನಲಿಕೆಯ ಕಳೆದಿಪ್ಪವರಾರು ಹೇಳಾ?
ಒಬ್ಬರೊಬ್ಬರ ಹಳಿಯದಿಯಪ್ಪವರಾರು ಹೇಳಾ ? ಮುನಿಸ ಮುಂದಿಟ್ಟಿಪ್ಪರು.
ಇದು ಯೋಗಿ, ಮಹಾಯೋಗಿಗಳಿದಪ್ಪುದು ನೋಡಾ.
ಸಕಳೇಶ್ವರದೇವಾ, ನೀನು ಕರುಣಿಸಿದವರಿಗಲ್ಲದೆಯಿಲ್ಲಾ. || ೬೧ ||

೪೩೦

ದಾಸ ವಸ್ತ್ರವನಿತ್ತ ಠಾವು ಲೇಸಾಯಿತ್ತು,
ತವನಿಧಿಯ ಪಡೆದ ಠಾವು ಹೊಲ್ಲೆಹವಾಯಿತ್ತು.
ಸಿರಿಯಾಳ ಮಗನನಿತ್ತ ಠಾವು ಲೇಸಾಯಿತ್ತು.
ಮರಳಿ ಬೇಡಿದ ಠಾವು ಹೊಲ್ಲೆಹವಾಯಿತ್ತು.
ಬಲ್ಲಾಳ ವಧುವಿನಿತ್ತ ಠಾವು ಲೇಸಾಯಿತ್ತು,
ಸ್ವಯಲಿಂಗವಾದ ಠಾವು ಹೊಲೆಹವಾಯಿತ್ತು.
ಇವರೆಲ್ಲರೂ ಸಕಳೇಶ್ವರದೇವರಲ್ಲಿ
ಅಪೇಕ್ಷಿತರಲ್ಲದೆ, ನಿರಪೇಕ್ಷಿತರಾರೂ ಇಲ್ಲ. || ೬೨ ||

೪೩೧

ದುಃಖ ಹೊಯಿತ್ತು ತನ್ನಲ್ಲಿ ತಾನಿಲ್ಲದೇ:
ಸುಖ ನಿಂದುದು ತನ್ನಲ್ಲಿ ತಾನು ನಿಜವಾಗಿ,
ಭ್ರಾಂತುದೋರದೆ, ಸಕಳೇಶ್ವರದೇವಾ ತಾನಾಗಿ ನಿಂದವಂಗೆ. || ೬೩ ||

೪೩೨

ದೇವರೆದ್ದರಾವು ಏಳುವೆವಯ್ಯಾ, ದೇವ ಬಿದ್ದರಾವು ಬೀಳುವೆವಯ್ಯಾ.
ದೇವ ಸತ್ತರಾವು ಸಾವೆವಯ್ಯಾ, ದೇವ ಬದುಕಿದರಾವು ಬದುಕುವೆವಯ್ಯಾ.
ನಾ ಸತ್ತು, ದೇವ ಹಿಂದುಳಿದಡೆ,
ಎನ್ನಿಂದ ಬಿಟ್ಟು ವ್ರತಗೇಡಿಗಳಾರು ಹೇಳಾ, ಸಕಳೇಶ್ವರದೇವಾ. || ೬೪ ||

೪೩೩

ದೇವಾ, ನಿಮ್ಮಲ್ಲಿ ಬಯಸಿ ಬೇಡುವಡೆ ಏನಿಲ್ಲ ದೇವಾ ?
ಆಯುವ ಬೇಡುವೆನೆ ? ಸಂಸಾರಕ್ಕಾನಂಜುವೆ.
ಸ್ತ್ರೀಯ ಬೇಡುವೆನೆ? ಪರಾಂಗನೆಯ ಪಾಪ.
ಮುಕ್ತಿಯ ಬೇಡುವೆನೆ? ಅದು ನಿನ್ನ ಪದವಿ.
ಸಕಳೇಶ್ವರದೇವಾ, ಆನೇನುವನೊಲ್ಲೆ,
ನಿಮ್ಮ ಶರಣರ ಸಸಂಗವುಳ್ಳಡೆ ಸಾಕು. || ೬೫ ||

೪೩೪

ದೇಶ ದೇಶಾಂತರವ ತಿರುಗಿ, ತೊಳಲಿ ಬಳಲಿ,
ಕೆಲರ ಹಳಿದು, ಕೆಲರ ಹೊಗಳಿ, ವೃಥಾ ಹೋಯಿತ್ತೆನ್ನ ಸಂಸಾರ.
ಗಿರಿಯ ಶಿಖರದ ಮೇಲೆ ಲಿಂಗಧ್ಯಾನದಲ್ಲಿ
ಮೌನಿಯಾಗಿರಿಸೆನ್ನ, ಸಕಳೇಶ್ವರಯ್ಯಾ. || ೬೬ ||

೪೩೫

ದೇಹಧರ್ಮದಾಸೆ ಬೇರೆ, ಭಕ್ತಿಯಿಲ್ಲದ ಬಗೆ ಬೇರೆ.
ಎನಗೆಂದು ಮಾಡಿದಿರಿ, ಈ ಸಕಲಪ್ರಪಂಚುವನು.
ಎನಗೆಂದು ಮಾಡಿದಿರಿ, ಈ ಸಕಲ ವ್ಯಾಪ್ತಿಗಳನು.
ನಿಶ್ಚಿಂತ ಪರಮಸುಖವನೆಂದಿಗೀವೆ, ಸಕಳೇಶ್ವರದೇವಾ. || ೬೭ ||

೪೩೬

ದೊರೆಕೊಂಡಂತೆ ದಣಿದಿಹ ಮನದವರ ತೋರಾ,
ದುಃಖಕ್ಕೆ ದೂರವಾಗಿಹರ ತೋರಾ
ಸದಾನಂದದಲ್ಲಿ ಸುಖಿಯಾಗಿಪ್ಪವರ ತೋರಾ.
ಸಕಳೇಶ್ವರದೇವಾ ಎನಗಿದೇ ವರವು ಕಂಡಾ, ತಂದೆ. || ೬೮ ||

೪೩೭

ಧನವ ಪಡೆದು ವಿಭೋಗವನರಿಯದ ಲೋಭಿಗೆ
ಸಿರಿಯೇಕೆ ಬಯಸುವಂತೆ ?
ಲೇಸ ಕಂಡು, ಮನ ಬಯಸಿ, ಪಂಚಭೂತಿಕ ಸುಯ್ದು ಮರುಗುವಂತೆ,
ಕನ್ನೆ ಅಳಿಯಳು, ಕನ್ನೆ ಉಳಿಯಳು.
ಜವ್ವನ ತವಕದಿಂದ ಅವಳು
ಕಂಗಳ ತಿರುಹುತ್ತ ಮತ್ತೊಬ್ಬಂಗೊಲಿದಡೆ, ಅದೆಂತು ಸೈರಿಸುವೆ ?
ನಿಧಾನವ ಕಾಯ್ದಿಪ್ಪ ಬೆಂತರನಂತೆ ನೋಡಿ ಸೈರಿಸುವೆ?
ಸಂಸಾರದಲ್ಲಿ ಹುಟ್ಟಿ, ಭಕ್ತಿಯನರಿಯದ ಭವದುಃಖಿಯ ಕಂಡು,
ಸಕಳೇಶ್ವರದೇವ ನಗುವ. || ೬೯ ||

೪೩೮

ಧಾತುಗೆಟ್ಟು, ಬೋಳಾದಡೆ, ನಿಜವನೆಯ್ದಲುಬಲ್ಲುದೆ ಅಯ್ಯಾ?
ವಿಕೃತವೇಷವ ತೋರಿ, ಉದರ ಹೊರೆವುದಕ್ಕೆಂತಯ್ಯಾ?
ಉಪಾಧಿವಿಡಿದು ಮಾಡುವ ಷೋಡಶಕ್ರೀ,
ಸಕಳೇಶ್ವರದೇವಂಗೆ ದೂರವಯ್ಯಾ. ॥ ೭೦ ॥

೪೩೯

ನಡೆ ನುಡಿ ಚೈತನ್ಯಹರಣವುಳ್ಳನ್ನಕ್ಕ ಕ್ರೀಯೆಂತಂತೆ ನಡೆವುದು.
ಉರವಣೆ ಬೇಡ ಕಂಡಾ ಮನವೆ.
ಹೂಮಿಡಿ ಹರಿದಡೆ, ಹಣ್ಣಹವೆ, ಎಲೆ ಮರುಳೆ?
ಲಿಂಗದಲ್ಲಿ ಮನ ಲೀಯವಾಗದನ್ನಕ್ಕ ಸಕಳೇಶ್ವರದೇವ ಮೆಚ್ಚುವನೆ? ॥ ೭೧ ॥

೪೪೦

ನರರನುಪಧಾವಿಸಿ ಅವರಿಚ್ಛೆಗೆ ನುಡಿದು,
ಬಂದ ಒಡಲ ಹೊರೆದು, ಹಿರಿಯರೆನಿಸಿಕೊಂಬ
ಡಂಬಕತನಕಾನಂಜುವೆನಯ್ಯಾ.
ಹಿರಿದಡವಿಯ ಗಿರಿಗಹ್ವರದೊಳಗೆ ಪರಿಪರಿಯ ಹೂಪತ್ರೆಯ ತಂದು,
ಬಿಡದೆ ಲಿಂಗದೇವನ ಪೂಜಿಸುತ,
ನೋಡುವ ಸುಖವೆಂದಪ್ಪುದೊ ಎನಗೆ ?
ಸಕಳೇಶ್ವರದೇವಾ, ಶರಣೆಂದು ವೀಣಾವಾದ್ಯವ ಬಾರಿಸುತ,
ಆಡಿ ಹಾಡುವ ಸುಖವೆನಗೆಂದಪ್ಪುದೊ ಶ್ರೀಶೈಲ್ಯದಲ್ಲಿ? ॥ ೭೨ ॥

೪೪೧

ನವಸಾಸಾ ಅತಿಬಳನೆಂದಡೆ, ಒಂದು ಕೇಶವ ಕಿತ್ತನೆ ?
ಶಿವನಿತ್ತ ಪಿಂಡವ, ಶ್ರೀರಾಮನು ಸೀತೆಗೆ ದಿಬ್ಯವನಿಕ್ಕಿಹೆನೆಂದು,
ಹೋಮಕುಂಡಲದೊಳಗ್ಗುರುಹಿದಡೆ,
ಬ್ರಹ್ಮಾಂಡವನೊಡೆದು ಮರುಳುತಿದ್ದಲ್ಲಿ, ಉರಿನಾಲಗೆಯ ಕೀಳನೆ ?
ಪರಮನೊಲಿದ, ಪಶುಪತಿ ನಿರೂಪನೊಲಿದ, ಋಷಿಯನೊಂದು ವಾಕ್ಯದಿಂದ
ಜಲ ಸಾಗರಂಗಳು ಬಂಧನಕ್ಕೆ ಬಾರವೆ, ನಳನೀಲರ ಕೈಯಲ್ಲಿ ?
ಈಶ್ವರನ ಶರಣರ ಘಾಸಿಮಾಡನೆನೆಂದಡೆ, ನೊಸಲಕ್ಕರವ ತೊಡೆಯರೆ ?
ಅಸುರನ ಪ್ರಹಾರವಿಡಿದು, ಹಿರಣ್ಯಾಕ್ಷನ ಕೊಂದು,
ಶಿರವ ಹೋಗಾಡನೆ ನರಸಿಂಹನು?
ಸ್ವತಂತ್ರನಯ್ಯಾ, ಸಕಳೇಶ್ವರದೇವ ನಿಮ್ಮ ಶರಣನು.
ಸಿಡಿಲ ಸ್ವೀಕರಿಸನೆ ಶಿವಯೋಗಿ ಸಿದ್ಧರಾಮಯ್ಯನು? ॥ ೭೩ ॥

೪೪೨

ನಿಜವನರಿಯದ ಶರಣರು, ಲಿಂಗೈಕ್ಯರು,
ಗಿರಿ ಗಗನ ಗಹ್ವರದೊಳಗಿದ್ದಲ್ಲಿ ಫಲವೇನೊ?
ಮನವು ಲೇಸಾಗಿದ್ದಡೆ ಸಾಲದೆ?
ಪರಮಸುಖಿಯಾಗಿರ್ಪ ಶರಣನ ಹೃದಯದಲ್ಲಿ
ಸದಾಸನ್ನಹಿತನು ಸಕಳೇಶ್ವರದೇವ. ॥ ೭೪ ॥

೪೪೩

ನಿನ್ನ ಹಂಗೇನು ಹರಿಯೇನು, ಅಂಜದೆ ನುಡಿವೆನು.
ನೀ ಹೊರೆವ ಜಗದ ಜೀವರಾಸಿಗಳೊಳಗೆ,
ಆಸೆಗೆ ಬೇರೆ ಕೊಟ್ಟುದುಳ್ಳಡೆ ಹೇಳು ದೇವಾ.
ಅರ್ಚಿಸಿ ಪೂಜಿಸಿ, ನಿಮ್ಮ ವರವ ಬೇಡಿದೆನಾದಡೆ
ಬಾರದ ಭವಂಗಳಲ್ಲಿ ಎನ್ನ ಬರಿಸು, ಸಕಳೇಶ್ವರದೇವಾ. ॥ ೭೫ ॥

೪೪೪

ನೀನೆನ್ನನೊಲ್ಲದಿದ್ದರೆ ನಾನಾರ ಸಾರಿ ಬದುಕಲಯ್ಯಾ?
ಮೇಕುದೋರಿ ಗಂಡನ ಮಾಡಿಕೊಂಡವರುಂಟೆ?
ನಿಮ್ಮಿಂದಲಧಿಕರುಂಟೆ ಹೇಳಾ?
ತಲೆಯೂರಿ ತಪಿಸಿದಡೆ, ಅಲ್ಲಿ ಮೂರ್ತಿಯ ತೋರುವಾತ ನೀನೆ.
ಕಣ್ಣಮುಚ್ಚಿ ಕಮರಿಯ ಹಾಯ್ದರೆಯೂ
ಅಲ್ಲಿ ಪದವಿಯ ಕೊಡುವವನು ನೀನೆ.
ನೀನು ಕರುಣಿಸುವನ್ನಕ್ಕ, ನಾನು ಹೀಗಿದೇನೆ ಹೇಳಾ, ಸಕಳೇಶ್ವರಾ. ॥ ೭೬ ॥

೪೪೫

ನೇಮವೆಂದಡೆ ಕಡೆಮುಟ್ಟ ಸಲ್ಲದಯ್ಯಾ.
ಸಮಯಾಚಾರದ ಮಾಡುವುದೆ ಉಚಿತವಯ್ಯಾ.
ತನ್ನ ನೇಮವನಿದಿರಿಂಗೆ ತೋರಿದಡೆ, ಅದೇ ವ್ರತಕ್ಕೆ ಭಂಗವಯ್ಯಾ.
ತನ್ನಲಿಂಗಕ್ಕೆ ಬೇಕೆಂಬ ಉಪಜೀವಿಗಳನು
ಸಕಳೇಶ್ವರದೇವರು ಮೆಚ್ಚರು. ॥ ೭೭ ॥

೪೪೬

ನೇಮಿಯ ನೇಮ, ಲಿಂಗಾರ್ಚನೆಯ ಕೆಡಿಸಿತ್ತಲ್ಲಾ.
ಮತಿಗೆಟ್ಟ, ಕುಂಬಾರ ಮಣ್ಣಪೂಜೆಯ ಮಾಡಿ,
ಕಮ್ಮಾರಗೇರಿಗೆ ಮಾರಹೋದಂತೆ,
ಸಕಳೇಶ್ವರದೇವಾ,
ನಿಮ್ಮ ಶರಣರು ಶೃಂಗಾರದಲ್ಲಿ ಲಿಂಗವ ಮರೆದರಲ್ಲಾ. ॥ ೭೮ ॥

೪೪೭

ಪರಮಾರ್ಥದ ಪರೀಕ್ಷೆಯನರಿಯದೆ,
ನಿಂದಿಸಿ ನುಡಿವರ ಕಂಡಡೆ, ಏನೆಂಬೆನು?
ಅರಳಿಯ ಮರನುಲುಹೇಂಬೆನು.
ಮೂಗಜಾತಿಯ ಶಬುದವೆಂಬೆನು.
ಸಕಳೇಶ್ವರದೇವಾ,
ನಿಮ್ಮನುಭಾವವನರಿಯದವರ ಕಂಡೆನಾದಡೆ, ಹಳಿಹಳಿಯೆಂಬೆನು. ॥ ೭೯ ॥

೪೪೮

ಪರಸತಿಯೆನಗೆ ತಾಯ ಸಮಾನವಯ್ಯಾ.
ಕನ್ಯಾಸ್ತ್ರೀ ಎನಗೆ ಸೋದರ ಸಮಾನವಯ್ಯಾ.
ವಿಧವೆಯೆನಗೆ ಅಮೇಧ್ಯದ ಸಮಾನವಯ್ಯಾ.
ಪಣ್ಯಾಂಗನೆಯ ಸಂಗವೆನಗೆ ಕುನ್ನಿಯ ಸಮಾನವಯ್ಯಾ.
ದಾಸಿಯ ಸಂಗವೆನಗೆ ಸೂಕರನ ಮಾಂಸದ ಸಮಾನವಯ್ಯಾ.
ಇಂತಿದಕ್ಕೆ ಹೇಸದೆ ಆಶೆಯ ಮಾಡಿ,
ತನುಲೋಭದಿಂದ ಕೂಡಿದಡೆ,
ತನುವ ದಿಗ್ಬಲಿಗೊಡುವೆ.
ಮನತೋಭದಿಂದ ನೆನೆದಡೆ.
[ರವಿ]ಶಶಿಗಳುನ್ನಕ್ಕರ ನರಕದಲ್ಲಿಕ್ಕದಿರ್ದೆಯಾದಡೆ
ನಿನಗೆನ್ನಾಣೆಯಯ್ಯಾ ಸಕಳೇಶ್ವರಾ. ॥ ೮೦ ॥

೪೪೯

ಪರೀಕ್ಷೆಯನಾರು ಬಲ್ಲರು ? ಪರೀಕ್ಷೆಯನಾರು ಬಲ್ಲರು ?
ನಾದಬಿಂದುವಿನ ವಿಕೃತಿಯೊಳಗಣ ಹಂಸನ ಸ್ಥಳವಿಟ್ಟಾತ,
ಶಶಿಧರನಲ್ಲದೆ ಮತ್ತೊಬ್ಬನಿಲ್ಲ,
ಲೋಲುಪ್ತರಾದವರೆಲ್ಲ, ಹಂಸನ ವಂಶಿಕರಲ್ಲದೆ,
ಸುಪ್ಪಾಣಿಯಂತೆ ಸುಪಥವಾದ ಶರಣಂಗೆ ಹತ್ತೂದೆ ಲೌಕಿಕಾರ್ಥ ?
ಮುತ್ತ ಹುಳಿತಡೆ, ನಾತ ಹುಟ್ಟುವದೆ ಲೋಕದಲ್ಲಿ ?
ಬಯಕೆವಂತರೆಲ್ಲ ಐಕ್ಯವಂತರಹರೆ ?
ಹೊನ್ನು ಧರೆಯ ಮೇಲೆ ಬಿದ್ದರೆ, ನಿಟ್ಟೈಸುವದೆ ?
ಗಂಭೀರದ ತೆರನನರಿಯದವನ ನಿಧಿ, ಪರಮಪರೀಕ್ಷೆಯನರಿಯದೆ,
ಪರುಷದಂತಿಪ್ಪ ಮಹಂತ ಧರೆಯ ಮೇಲೆ,
ಕಾರಮೇಘ ಸುರಿದು, ನದಿಯ ಬೆರಸುವಂತೆ,
ಧರೆಯೊಳಗೆ ಹುಟ್ಟಿದ ಪುಣ್ಯಲಂಗಳ ಮಾಡಿ.
ನಿಮ್ಮ ಬೆರಸುವನೆ, ಸಕಳೇಶ್ವರದೇವಾ ನಿಮ್ಮ ಶರಣ. ॥ ೮೧ ॥

೪೫೦

ಪರುಷಮೃಗ ಬಂದು ನಿಂದಲ್ಲಿ, ಜನ್ನ ಜಯವಾಗದೆ ಧರ್ಮಂಗೆ ?
ಲಿಂಗಜಂಗಮಭಕ್ತಿ ಪ್ರಜ್ವಲಿಸದೆ ಸಿರಿಯಾಳಂಗೆ ?
ಪ್ರಸಾದವ ಬಿಬ್ಬಿಬಾಚಯ್ಯ ಮೆರವುತ ಬಪ್ಪಲ್ಲಿ
ಅರಿಯದೆ ನಿಂದಿಸಿದಡೆ, ಹರಿದು ಹತ್ತದೆ
ಉರಿಯ ನಾಲಗೆ ಗ್ರಾಮವ?
ಹರಸಿತ್ತ ನಿರೂಪವಿಡಿ ಮಾರ್ಗದಲ್ಲಿ
ಮಾರಾರಿಯ ಶರಣರು ಬಂದು ನಿಂದಲ್ಲಿ
ಅರ್ಥಗೃಹಂಗಳುಳಿಯವೆ ?
ಸದ್ಯೋಜಾತನ ಶರಣರ ಧರೆಯನುರಿಯ ನಾಲಗೆಯ ನೀಡಿ,
ಕಲ್ಯಾಣವನಾಳುವ ಬಿಜ್ಜಳನ ಮುಟ್ಟಿನಿಂದಡೆ,
ಹೋ ಹೋ! ಇದ್ದಂತೆ ಬರಬೇಕೆಂದಡೆ,
ಕೋಪಾಟೋಪವಂ ಬಿಟ್ಟು ಕಳದು, ಸಾಮಾನ್ಯವಾಗದೆ ?
ಶಿವನೊಲಿದ ಸಿದ್ಧರಿಗೆ ಅಂಗದ ಮೇಲೆ ಲಿಂಗವಿಲ್ಲದವನು
ಅಂಗಳವನು ಮೆಟ್ಟಲಾಗದೆಂದಡೆ,
ಉರಿಯ ಜ್ವಾಲೆಯ ಬಿಟ್ಟಡೆ,
ಪರಿಹರಿಸದೆ ಕುಂಚಿಗೆಯ ತುದಿಯಲ್ಲಿ?
ಪರಮನೊಲಿದ ಶರಣರು ಸ್ವತಂತ್ರಮಹಿಮರು.
ಅದಂತೆಂದಡೆ:
ಅವರೆಂದಂತೆ ಅಹುದೆಂದಡೆ, ಅಂಗದ ಮೇಲೆ ಲಿಂಗಪ್ರತಿಷ್ಠೆಯಾಗದೆ,
ಶಿವಯೋಗಿ ಸಿದ್ಧರಾಮಯ್ಯಂಗೆ
ಸಕಲಧೂರ್ತದುರಿತಂಗಳು ಬಿಟ್ಟೋಡುತ್ತಿದ್ದವು,
ಸಕಳೇಶ್ವರದೇವಾ, ನಿಮ್ಮ ಶರಣನ ದೇವತ್ವಕ್ಕಂಜಿ. ॥ ೮೧ ॥

೪೫೧

ಪಿನಾಕಿಯ ಅಲ್ಲಟಪಲ್ಲಟದಿಂದ
ಪಂಚೈವರ ಪ್ರಾಣಂಗಳು ಸಂಚಗೆಡವೆ, ಹಲವು ಕಾಲ ?
ಲಿಂಗದ ಮೇಲಣ ನೋಟಭಾವ ತಪ್ಪಿ,
ತನು ಉರುಳಿ ಲಿಂಗವ ಬೆರಸನೆ ಅನುಮಿಷನು ?
ಒಬ್ಬ ಜಂಗಮ ಮನೆಗೆ ಬಂದಡೆ, ಇಲ್ಲೆಂದು ಕಳುಹಿದಡೆ,
ಅಲ್ಲಿ ಹೋಗದೆ ಬಸವರಾಜನ ಪ್ರಾಣ ?
ಬರಿದಳಲುವ ಬೆಳ್ಳಂಬವಿಲ್ಲದೆ ಪರಮಪದವುಳ್ಳವರ
ಮಹಾಬೆಳಗೊಳಕೊಳ್ಳದೆ ?
ತನ್ನಿಚ್ಛೆಯಲಾಗಿ ಹೋಗುತಿಪ್ಪ ಲಿಂಗದಿಚ್ಛೆಯನರಿಯದವರ ಕಂಡಡೆ,
ಮೆಚ್ಚುವನೆ ನಮ್ಮ ಸಕಳೇಶ್ವರದೇವ? ॥ ೮೨ ॥

೪೫೨

ಪುಷ್ಪ ಧೂಪ ದೀಪ ನೈವೇದ್ಯ ಸೋಂಕಿದ ಸುಖವ,
ಲಿಂಗಾರ್ಪಿತ ಮಾಡುವ ಪರಿಯಿನ್ನೆಂತೊ?
ಅವಧಾನದೊಳಗೊಂದು ವ್ಯವಧಾನ ಬಂದಡೆ,
ವ್ಯವಧಾನವ ಸುಯಿಧಾನವ ಮಾಡುವ ಪರಿಯಿನ್ನೆಂತೊ?
ವ್ಯಾಪ್ತಿ ವ್ಯಾಕುಳ ವಾಕುಮನ [ವ] ರಿಯದನ್ನಕ್ಕ,
ಶರಣನೆನಿಸಬಾರದು, ಸಕಳೇಶ್ವರದೇವಾ ನಿಮ್ಮಲ್ಲಿ. || ೮೩ ||

೪೫೩

ಪ್ರಕೃತಿಗುಣವಳಿಯದೆ, ವಿಕೃತವೇಷವ ಧರಿಸಿ,
ಕ್ರತುಮಾನವನ ಬೇಡುವ ಯಾಚಕನಲ್ಲ.
ಲಿಂಗಾಭಿಮಾನಿ, ತ್ರಿಭುವನ ಲಿಂಗಾಭಿಮಾನಿ,
ತ್ರಿಭುವನ ಭವನನ ಮುಖದಲ್ಲಿ ಬಂದುದನಲ್ಲದೆ ಕೈಕೊಳ್ಳ.
ಕೂರ್ಮನ ಶಿಶುವಿನಾಪ್ಯಾಯನದಂತೆ,
[ಆರಾ]ಧ್ಯ ಸಕಳೇಶ್ವರಾ, ನಿಮ್ಮ ಜ್ಞಾನಾಮೃತವನುಂಡು ಸುಖಿಯಾಗಿ. ||೮೪||

೪೫೪

ಬಲೀಂದ್ರನ ಸಿರಿಗಿಂದ ಅಧಿಕರನಾರನೂ ಕಾಣೆನಯ್ಯಾ.
ಅಂಥಾ ಸಂಪತ್ತು ಮೂರಡಿಗೆಯ್ದುದು.
ಕೆಡುವಂತಿದ್ದುದೆ ಕೌರವನ ರಾಜ್ಯ ?
ಮಡಿವಂತಿದ್ದುದೆ ರಾವಳನ ಬಲಾಧಿಕೆ ?
ಪರಸ್ತ್ರೀ, ಲಕ್ಷ್ಮೀ ಆರಿಗೆಯೂ ನಿತ್ಯವಲ್ಲ.
ಇದು ಶಾಶ್ವತವೆ, ಸಕಳೇಶ್ವರದೇವಾ ? || ೮೫ ||

೪೫೫

ಬಸವಣ್ಣನ ಭಕ್ತಿಪ್ರಸಾದವ ಕೊಂಡೆನಯ್ಯಾ.
ಚೆನ್ನ ಬಸವಣ್ಣನ ಜ್ಞಾನಪ್ರಸಾದವ ಕೊಂಡೆನಯ್ಯಾ.
ಪ್ರಭುದೇವರ ಬಯಲಪ್ರಸಾದವ ಕೊಂಡೆನೆಯ್ಯಾ.
ಮಡಿವಾಳಯ್ಯನ ಕರುಣಪ್ರಸಾದವ ಕೊಂಡೆನಯ್ಯಾ.
ಸಿದ್ಧರಾಮಯ್ಯನ ನಿರ್ಮಲಪ್ರಸಾದವ ಕೊಂಡೆನಯ್ಯಾ.
ಮರುಳಶಂಕರದೇವರ ಪ್ರಸನ್ನ ಪ್ರಸಾದವ ಕೊಂಡೆನಯ್ಯಾ.
ಏಳ್ನೂರೆಪ್ಪತ್ತುಮರಗಣಂಗಳ ಪರಮಪ್ರಸಾದವ ಕೊಂಡು.
ಬದುಕಿದೆನಯ್ಯಾ, ಸಕಳೇಶ್ವರಾ. || ೮೬ ||

೪೫೬

ಬೆಚ್ಚನೆ ಮಡಕೆಯಂತೆ ಬೆಬ್ಬಿಸಿಕೊಂಡಿದ್ದಡೇನಯ್ಯಾ ?
ಮುತ್ತಹೂತಂತೆ, ಆಲ ಬಿಳಲು ಬಿಟ್ಟು, ಜಡೆಗಟ್ಟಿಕೊಂಡಿದ್ದಡೇನು ?
ಕಂಥೆಬೊಂತೆಯ ಹೊದೆದು ಚಿಂತಿಸುತಿದ್ದಡೇನು ?
ತನುಮನಧನ ವಂಚನೆಯಿಲ್ಲದ ಭಕ್ತನ ಮನವ
ಮನೆಯಮಾಡಿಕೊಂಡಿಪ್ಪ, ಸಕಳೇಶ್ವರದೇವ. || ೮೭ ||

೪೫೭

ಬೆಟ್ಟದ ಮೇಲಣ ಗಿಡಗಳು ಬೆಟ್ಟವ ಮುಟ್ಟಂತಿಪ್ಪವೆ ?
ವಿವರಿಸಿ ನೋಡಿದಡೆ,
ಸೃಷ್ಟಿಯೊಳಗಣ ಪ್ರಾಣಿಗಳು ಪರಮನ ಮುಟ್ಟದಿಪ್ಪವೆ ?
ಕಷ್ಟರು ಬೇಡವೆಂದು ಬಿಟ್ಟೋಡುತ್ತಿಪ್ಪ
ಪ್ರಾಣಿಗಳನಟ್ಟಿ, ಹಿಡಿದು ಕೊಂದಡೆ,
ಸೃಷ್ಟಿಗೀಶ್ವರನಿಕ್ಕದಿಪ್ಪನೆ ನರಕದಲ್ಲಿ ?
ಒಡೆಯರಿಲ್ಲೆಂದು ಹಲವು ಪ್ರಾಣಿಗಳ ಹರಿಹರಿದು ಕೊಂದಡೆ,
ಹರನಿಕ್ಕದಿಪ್ಪನೆ ಅಘೋರನರಕದಲ್ಲಿ ?
ಸಕಲಪ್ರಾಣಿಗಳಿಗೆ ಮೇಲಾರೈಕೆ,
ನಮ್ಮ ಸಕಳೇಶ್ವರದೇವನಲ್ಲದೆ ಮತ್ತೊಬ್ಬರುಂಟೆ? || ೮೮ ||

೪೫೮

ಭಕ್ತಂಗೆ ಬೇಡದ ಭಾಷೆ, ನಿನಗೆ ಕೊಡದ ಭಾಷೆ.
ಭಕ್ತಂಗೆ ಓಡದ ಭಾಷೆ, ನಿನಗೆ ಕಾಡುವ ಭಾಷೆ.
ಭಕ್ತಂಗೆ ಸತ್ಯದ ಬಲ, ನಿನಗೆ ಶಕ್ತಿಯ ಬಲ.
ಇಬ್ಬರ ಗೆಲ್ಲಸೋಲಕ್ಕೆ ಕಡೆಯಿಲ್ಲ.
ಈ ಇಬ್ಬರಿಗೆಯೂ ಒಡೆಯರಿಲ್ಲದ ಲೆಂಕ.
ಇನ್ನು ಭಕ್ತನು ಭಕ್ತಿಯ ಛಲವ ಬಿಡನಾಗಿ.
ಭಕ್ತಸೋತಡೆ, ಭಕ್ತನದೆ ಗೆಲುವು.
ಭಕ್ತಗೆದ್ದಡಂತು ಗೆಲುವು?
ಇದ ನೀನೆ ವಿಚಾರಿಸಿಕೊಳ್ಳಾ, ಭಕ್ತದೇಹಿಕದೇವ ಸಕಳೇಶ್ವರಾ. || ೮೯ ||

೪೫೯

ಭಕ್ತನೆಂಬೆನು ಬಸವಣ್ಣನ, ಐಕ್ಯನೆಂಬೆನು ಚಿಕ್ಕಣ್ಣನ.
ಶರಣನೆಂಬೆನು ಪ್ರಭುದೇವರ.
ಹಿಂದೆ ಆದವರಿಲ್ಲ, ಮುಂದೆ ಆಹವರಿಲ್ಲ,
ಸಕಳೇಶ್ವರದೇವಾ, ನಿಮ್ಮ ಶರಣರು ಮೂವರೆ. || ೯೦ ||

೪೬೦

ಮನ ನಿಮ್ಮ ಬೆರಸಿದಡೆ ಬಿನದಕ್ಕೆ ಹೇಳುವನಲ್ಲ.
ಅನುಪಮಭಕ್ತಿಸುಖಸಾರಾಯ ಸಮರ್ಥವಾಗಿ,
ತನುವಪ್ಪಂತೆ ಇಪ್ಪ ನೋಡಾ.
ಮನುಜರ ಕಂಗಳಿಗೆ ಜ್ಞಾನಮೂರ್ತಿ ಜ್ಯೋತಿಯಂತಿಪ್ಪ
ಮಹಂತ ಸಕಳೇಶ್ವರದೇವನ ನಿಲವು. ॥ ೬೧ ॥

೪೬೧

ಮನಮನವೇಕಾರ್ಥವಾಗದವರಲ್ಲಿ, ತನುಗುಣ ನಾಸ್ತಿಯಾಗದವರಲ್ಲಿ.
ಶೀಲಕ್ಕೆ ಶೀಲ ಸಮಾನವಾಗದವರಲ್ಲಿ, ಬುದ್ಧಿಗೆ ಬುದ್ಧಿ ಕೂಟಸ್ಥವಾಗದವರಲ್ಲಿ.
ಭಾವಕ್ಕೆ ಭಾವ ತಾರ್ಕಣೆಯಾಗದವರಲ್ಲಿ, ಅವರೊಡನೆ ಕುಳ್ಳಿರಲಾಗದು.
ಗಡಣದಲ್ಲಿ ಮಾತಾಡಲಾಗದು,
'ಸಂಸರ್ಗಜಾ ದೋಷಗುಣಾ ಭವಂತಿ'
ಎಂದುದಾಗಿ, ಮಹಂತ ಸಕಳೇಶ್ವರದೇವಾ,
ನಿಮ್ಮ ಸಾತ್ವಿಕಸದ್ಭಕ್ತಿಯನರಿಯದವರ ಸಂಗದಿಂದ
ಕೈಲಾಸಕ್ಕೆ ದೂರವಾಗಿಪ್ಪರು. ॥ ೬೨ ॥

೪೬೨

ಮಾಡುವ ಭಕ್ತಂಗೆಯೂ ಕೊಡುವ ದೇವಂಗೆಯೂ
ಎಂದೆಂದಿಗೂ ಕೇಡಿಲ್ಲ.
ಮಾಡಿ ಭೋ, ಮಾಡಿ ಭೋ.
ಎನಗೆ ಲೇಸಾಯಿತ್ತು, ಹೋಯಿತ್ತೆಂಬ ಚಿಂತೆ ಬೇಡ,
ಇದ್ದಿತ್ತೆಂಬ ಸಂತೋಷ ಬೇಡ,
ಸಕಳೇಶ್ವರದೇವನವರನರಿದು ಸಲಹುವನಾಗಿ. ॥ ೬೩ ॥

೪೬೩

ಮುಟ್ಟಿದಡೆ ತಾನು ಚಿಟ್ಟೆಂಬುದನಲ್ಲ, ನಿಷ್ಠೆಯ ಪಡದಿದ್ದಡೆ ಸಾಕ್ಕೆಸ.
ಆಗಮನರಿಯದೆ ಆಚಾರವ ಬೆರಸದ, ಪೂಜೆಯ ಕೈಕೊಂಬುವನಲ್ಲ.
ಸಕಳೇಶ್ವರದೇವ, ತಾನೊಲಿದವರನಲ್ಲದ. ಒಲ್ಲದವರ ಮೆಚ್ಚುನಯ್ಯಾ. ॥೬೪॥

೪೬೪

ಮೃತ್ತಿಕೆಯೊಂದರಲಾದ ಭಾಂಡದಂತೆ,
ಚಿನ್ನವೊಂದರಲಾದ ಭೂಷಣದಂತೆ,
ಉದಕವೊಂದರಲಾದ ವಾರಿಕಲ್ಲಿನಂತೆ,
ಬ್ರಹ್ಮದಿಂದಲಾದ ಜಗವು, ಭಿನ್ನವೆಲ್ಲಿಯದು ಸಕಳೇಶ್ವರಾ ? ॥ ೬೫ ॥

೪೬೫

ಮೆಕ್ಕೆ ಮಿನಿಕೆ ಮೊದಲಾಗಿ ಅವು ಪಕ್ವಕ್ಕೆ ಬಂದಡೆ, ವಿಷ ಬಿಡುವುದೆ ?
ಸೋರೆ ವಾರಿಧಿ ಫಣಿ ಅವು ಹರೆಯ ಹಿರಿದಾದಡೆ, ಮನದ ವಿಷ ಬಿಡದು.
ಸಕಳೇಶ್ವರದೇವಾ, ನಿಮ್ಮ ನಿಜವನರಿಯದ ಮನುಜಂಗೆ,
ನರೆ ಹಿರಿದಾದಡೇನು, ಮನದ ಅವಗುಣ ಬಿಡದು. || ೯೬ ||

೪೬೬

ಮೆಳೆಯ ಮೇಲೆ ಕಲ್ಲನಿಕ್ಕಿದಡೆ, ಮೆಳೆ ಭಕ್ತನಾಗಬಲ್ಲುದೆ ?
ಮೇಹನಿಕ್ಕಿ ಮೆಯ್ಯನೊರಸಿದಡೆ, ಪಶುಗಳೆಲ್ಲ ಮೆಚ್ಚುವವು.
ಅನ್ನವನಿಕ್ಕೆ ಹಿರಣ್ಯವ ಕೊಟ್ಟಡೆ, ಜಗವೆಲ್ಲ ಹೊಗಳುವುದು.
ಒಳಗನರಿದು, ಹೊರಗೆ ಮರೆದವರ ಎನಗೆ ತೋರಿಸಾ,
ಸಕಳೇಶ್ವರದೇವಾ. || ೯೭ ||

೪೬೭

ಮೇಘಧಾರೆಯಿಂದ ಸುರಿದ ಹನಿಯೆಲ್ಲ ಮುತ್ತಪ್ಪವೆ ?
ಧರೆಯ ಮೇಲಿಪ್ಪರೆಲ್ಲ ಶರಣರಪ್ಪರೆ ?
ಪರುಷವ ಮುಟ್ಟದೆ ಪಾಷಾಣವ ಮುಟ್ಟಿದ ಕಬ್ಬುನ ಹೇಮವಹುದೆ ?
ಅಷ್ಟವಿಧಾರ್ಚನೆ ಶೋಡಷೋಪಚಾರವ ಮಾಡಿ,
ಭಾವ ಮುಟ್ಟದಿರ್ದಡೆ ವಾಯ ಕಾಣ ಭೋ.
ರಜವ ತೂರಿ ಚಿನ್ನವನರಸುವಂತೆ,
ನಿಮ್ಮನರಿಯದೆ, ಅಂಜನವನೆಚ್ಚಿದ ಕಣ್ಣಿಗೆ ತೋರೂದೆ ಕಡವರ ?
ಜಂಗಮವ ನಂಬಿದ ಮಹಂತಂಗೆ ತೋರದಿಪ್ಪನೆ ತನ್ನ ?
ಎಲ್ಲಾ ದೈವವ ಪೂಜಿಸಿ, ಬರಿದಾದೆಲವದ ಫಲದಂತೆ,
ಸಕಳೇಶ್ವರನ ಸಕೀಲವನರಿಯದವರು ಇಲ್ಲಿಂದತ್ತಲೆ. || ೯೮ ||

೪೬೮

ಮೊಲೆ ಮುಡಿ ಮುದ್ದು ಮುಖದ ಅಸಿಯ ನಡುವಿನವಳ ಕಂಡಡೆ,
ಬ್ರಹ್ಮಚಾರಿಯಾದಡೇನು, ಮನದಿ ಅಳುಪದಿಪ್ಪನೆ ?
ತನುವಿನ ಮೇಲೆ ಬ್ರಹ್ಮಚಾರಿತ್ರವಳವಟ್ಟಡೇನು ?
ಮನದ ಮೇಲೆ ಬ್ರಹ್ಮಚಾರಿತ್ರವಳವಡದನ್ನಕ್ಕ !
ಸಕಲೇಶ್ವರದೇವ, ನೀ ಅರ್ಧನಾರಿಯಲ್ಲವೆ ? || ೯೯ ||

೪೬೯

ಯತಿಗೆ ಲಾಂಛನವೇಕೆ? ಶುಚಿಗೆ ಮೂದಲೆಯೇಕೆ ?
ಕಲಿಗೆ ಕಜ್ಜವೇಕೆ? ಒಲವಿಂಗೆ ರೂಹೇಕೆ ?
ದಿಟವುಳ್ಳ ಮನಕ್ಕೆ ಆಚಾರವೇಕೆ ?

ಸಜ್ಜನಸ್ತ್ರೀಗೆ ಬೇರೆ ನೋಂಪಿಯೇಕೆ?
ಭೃತ್ಯಾಚಾರವಿಂಬುಗೊಂಡವರ ಮನವ,
ಮಹಂತ ಸಕಳೇಶ್ವರದೇವನೆ ಬಲ್ಲ. ॥ ೧೦೦ ॥

೪೭೦

ಯೋಗಿ, ಜೋಗಿ, ತಪಸಿ, ಸನ್ಯಾಸಿ,
ನರಮಾಂಸಕ, ನೀಲಪಟರು ಸುಳಿವರು ಕ್ಷುಧೆ ಕಾರಣ.
ತೋರಿ, ಮಾರಿಯುಂಬು ಬೆವಹಾರಗಳು!
ನಿರ್ಣಯ ನಿರ್ಲೇಪಭಕ್ತಿಯುಳ್ಳವರನಲ್ಲದೊಲ್ಲ,
ಸಕಳೇಶ್ವರದೇವ. ॥ ೧೦೧ ॥

೪೭೧

ಲಲಾಟದೊಳಗಣ ಅಸ್ಥಿಯ ಬೆಳ್ಪು ವಿಭೂತಿ.
ಚರ್ಮದೊಳಗಣ ಕೆಂಪು ಕಿಸುಕಾಶಾಂಬರ.
ವ್ಯಾಕುಳವಿಲ್ಲದುದೆ ಲಾಕುಳ, ಮಹಾದೇವರ ನೆನೆವುದೆ ಆಧಾರ.
ನಿರ್ಮೋಹತ್ವಂ ಚ ಕೌಪೀನಂ ನಿಸ್ಸಂಗತ್ವಂ ಚ ಮೇಖಳಂ ।
ಶಾಂತಿ ಯಜ್ಞೋಪವೀತಂ ಚ ಆಭರಣಂ ದಯಾಪರಂ ।
ಪಂಚೇಂದ್ರಿಯ ವೀಣಾದಂಡಂ ಪಂಚಮುದ್ರಾಃ ಪ್ರಕೀರ್ತಿತಂ ।
ಮಹಾಲಿಂಗ ಧ್ಯಾನಾಧಾರಂ ಶಿವಯೋಗಿ ಚ ಲಕ್ಷಣಂ ।
[ಎಂದುದಾಗಿ], ತುರುಬಿನ ತಪಸಿಯ ಪೆರರೆತ್ತ ಬಲ್ಲರು ?
ಸಕಳೇಶ್ವರದೇವಾ, ನೀನೆ ಬಲ್ಲೆ. ॥ ೧೦೨ ॥

೪೭೨

ಲಿಂಗದ ಭಾವ ಹಿಂಗದ ನಂಬಿಗೆ, ಅಂಗನೆಯರ ಮೊಲೆ ಲಿಂಗವಾಯಿತ್ತು.
ಕಾಯ ಸಂಸಾರಸುಖವು, ಮನ ಪರಮಸುಖವು.
ಇದು ಕಾರಣ, ಸಕಳೇಶ್ವರದೇವಾ,
ನಿಮ್ಮ ಶರಣರ ಕಾಮಿಗಳೆಂದೆನಬಹುದೆ ? ॥ ೧೦೩ ॥

೪೭೩

ಲೆಂಕನಾಗಲಿ, ಕಿಂಕರನಾಗಲಿ, ಶರಣನಾಲಿ, ಸಂಯಮಿತನಾಗಲಿ,
ದರುಶನ ಪರುಶನವುಳ್ಳವರಾರದಡಾಗಲಿ,
ದುಶ್ಶೀಲಃ ಶೀಲಯುಕ್ತೋ ವಾ ಯೋ ವಾ ಕೋಽಪಸ್ಯ ಲಕ್ಷಣಂ ।
ಭೂತಿಶಾಸನ ಸಂಯುಕ್ತಂ ಸಂಪೂಜ್ಯೋ ರಾಜಪುತ್ರವತ್ ॥
ಎಂದುದಾಗಿ, ಸಕಳೇಶ್ವರದೇವ,
ಆರ ಮನದಲ್ಲಿ ಹೊದ್ದಿಹನೆಂದರಿಯಬಾರದು. ॥ ೧೦೪ ॥

೪೭೪

ವೇದವಿದನಿತು ಬ್ರಹ್ಮರಾಕ್ಷಸನಾದಲ್ಲಿ, ಸಮತೆಯಿದ್ದನಿತು ಸಾಗುರಿಯಲ್ಲ,
ವೀರುಕುವರ ಸಾವಿನಲಿದ್ದನಿತು ಶಿವಪದವಾಗಲರಿವುದ,
ತನ್ನಲ್ಲಿ ಶಿವಸುಖವಿಲ್ಲದನುಭಾವ ?
ಸಕಳೇಶ್ವರದೇವನರಿದ ಶಿವೈಕ್ಯ,
ಅರಿಯದ ಮರುಳುಗಳಲ್ಲಿ ಏನಿದ್ದಡೇನು? ॥ ೧೦೫ ॥

೪೭೫

ಶಂಭುವಿಕ್ಕಿದ ಆಜ್ಞೆಯ ಮೀರಿ, [ಅಂಬ]ರವಡ್ಡಬಿದ್ದಿತ್ತೆ ?
ಅಂಬುಧಿ ಮೇರೆವರಿಯಿತ್ತೆ ?
ಧಾರುಣಿಯೆಂಬುದೊಂದು ನೀರಲಿ ನೆರೆಯಿತ್ತೆ ?
ತಾನಿಪ್ಪನೆ ಆತನ ಒಳಗೆ ?
ಅಂಗದ ಮೇಲಣ ಲಿಂಗ ಹಿಂಗಿದ ಭಂಗವನರಿಯದೆ,
ನುಡಿವುತ್ತಿಪ್ಪ ಭಂಗಿತರನೇನೆಂಬೆನಯ್ಯಾ!
ಮಹೇಶ್ವರತ್ವವ ನುಡಿದಡೆ ಹೇಸುವನಯ್ಯಾ ಶಿವನು.
ಸ್ವೀಕರಿಸುವೆನಾ ಕೆಲರ ಕೈಯಲಿ.
ಸತ್ಯವುಳ್ಳಡೆ ಸಾಗರಹೊಕ್ಕ ಲಿಂಗ, ಅಗ್ರದಿಂದ ಬಾರದೆ
ಸಕಳೇಶ್ವರದೇವಾ, ನಿಮ್ಮ ಶರಣರಿಗೆ ? ॥ ೧೦೬ ॥

೪೭೬

ಶತವೇದಿ, ಸಹಸ್ರವೇದಿಗಳು,
ಕಬ್ಬುನವ ಹೊನ್ನ ಮಾಡುವ ಸಿದ್ಧರಸವಾದಡೇನು?
ಅಂತಿರಲಿ, ಅಂತಿರಲಿ.
ದೀಪವಾದಿಗಳು ಜಲವಾದಿಗಳು,
ಹಿರಣ್ಯಂಗಳ ವೇಧಿಸುವ ವೇದಿಗಳಾದಡೇನು ?
ಅಂತಿರಲಿ, ಅಂತಿರಲಿ.
ಘಟದಿಟ ಚಂದನ ಪರುಷ
ಕಾಗೆಯ ಹೊಂಬಣ್ಣದ ಮಾಡುವ ಮೇರುವಾದಡೇನು ?
ಅಂತಿರಲಿ, ಅಂತಿರಲಿ.
ಸಕಳೇಶ್ವರದೇವಾ, ನಿಮ್ಮ ಶರಣರು. ಸ್ವತಂತ್ರ[ರು], ಘನಮಹಿಮರು.
ಶರವೇದಿ ಶಬುದವೇದಿ ಕ್ಷಣವೇದಿಯೆಂಬವರು,
ಲಿಂಗವೇದಿಗೆಂತು ಸರಿಯೆಂಬೆ? ॥ ೧೦೭ ॥

೪೭೭

ಶಬ್ದ ಸ್ಪರ್ಶ ರೂಪು ರಸ ಗಂಧ ಪಂಚೇಂದ್ರಿಯವೆಲ್ಲ
ಏಕಾಕಾರಿಗಳಾಗಿ, ತಿರುಗಿ ಹರಿಯದೆ, ಏಕಾಕಾರಿಗಳಾಗಿದ್ದವು ತಮ್ಮೊಳಗೆ.

ಸಕಳೇಶ್ವರದೇವರಲ್ಲಿ, ಪರಿಣಾಮಪ್ರಸಾದಪದವಿಯ ಪಡೆದನಾಗಿ,
ಒಡನೆ ಹುಟ್ಟಿ, ನೀವೆಲ್ಲ ಸುಖಿಯಾದಿರಯ್ಯಾ. || ೧೦೮ ||

೪೭೮

ಶಿವಯೋಗಿ ಭಿಕ್ಷವ ಕೊಂಬಲ್ಲಿ
ಜಾತಿಸೂತಕವಿಲ್ಲದಿರಬೇಕು, ಆಚಾರ ಸಂಕಲ್ಪವಿಲ್ಲದಿರಬೇಕು.
ಶಿವಂಗೆ ಸಲ್ಲದ ದ್ರವ್ಯಕ್ಕೆ ಕೈಯಾನದಿರಬೇಕು.
ಆಶೆ ರೋಷ ಹರುಷವಿಲ್ಲದಿರಬೇಕು.
ಇಂತೀ ಕ್ರಮವನರಿದು,
ಭಕ್ತಿಭಿಕ್ಷವ, ಲಿಂಗನೈವೇದ್ಯವ ಮಾಡಿಕೊಳ್ಳಬಲ್ಲ ಶರಣನ
ನೀನೆಂಬೆಯ್ಯಾ, ಸಕಳೇಶ್ವರಾ. || ೧೦೯ ||

೪೭೯

ಶೀಲವಂತನಾದಡೆ ತಾ ಸವೆದು ಶೀಲವ ಮಾಡಬೇಕಲ್ಲದೆ
ತಾನಿದ್ದೆಡೆಯಲ್ಲಿ ಸುಳಿದು ಮಾಡುವ ಶೀಲ,
ಕೊಟ್ಟು ಪೂಜಿಸುವ ಕೈಕೂಲಿ ತನಗಿಲ್ಲ.
ಪೂಜೆಯ ಫಲವು ಕೊಡವಾಲ ಕರೆವ ಸುರಭಿಯಂತೆ
ಅಟ್ಟಿದರಟ್ಟು ವರವ ಬೇಡಿ ಮರುಗುವ ದಾಸಿಯ ಪಥದಂತೆ,
ತನ್ನ ಉದರನಿಮಿತ್ತ್ಯವಿಡಿದು,
ನೇಮ ಬೇಕೆಂಬ ದುಶ್ಶೀಲರ ಮೆಚ್ಚ, ಸಕಳೇಶ್ವರದೇವನು. || ೧೧೦ ||

೪೮೦

ಶೀಲ ಶೀಲವೆಂದು ಗರ್ವಿತಕೃತದಲ್ಲಿ ನುಡಿವ
ಉದ್ದೇಶ ಪ್ರಾಣಿಗಳೆಲ್ಲರೂ ಅನಂತಶೀಲರೆ ?
ಹೂ ಬಾವಿ ಮಠಕ್ಕೆ ಸೀಮೆಯ ಮಾಡೂದು ಶೀಲವೇ ?
ಮನಕ್ಕೆ ಸೀಮೆಯ ಮಾಡೂದು ಶೀಲವಲ್ಲದೆ,
ಹುಸಿಯ ಕಳೆವುದು ಶೀಲವಲ್ಲದೆ, ಭಕ್ತರ ಕಳೆವುದು ಶೀಲವೆ?
ಲಿಂಗಪ್ರಾಣವ ಮಾಡೂದು ಶೀಲವಲ್ಲದೆ,
ಪ್ರಾಣಲಿಂಗವ ಮಾಡೂದು ಶೀಲವೆ?
ಇಂತೆಲ್ಲ ಶೀಲರು ದುಶ್ಶೀಲರು.
ಸಕಳೇಶ್ವರದೇವಾ, ನಾನೇನೆಂದರಿಯೆ, ನೀನಿರಿಸಿದಂತಿರ್ಪೆ. || ೧೧೧ ||

೪೮೧

ಶ್ವಾನ ಮುಟ್ಟಿದ ಪಾಯಾಳು ಅಂಜನಕ್ಕೆ ಸಲುವನೆ?
ಭಕ್ತಿ ಮಿಶ್ರವಾದಡೆ ಈಶ್ವರನೊಲಿವನೆ?

ಅರಗು ಮಳಲು ಬೆರಸಿ ಉಕ್ಕ ಗೆಲುವಂತೆ,
ನಿಮ್ಮ ಬೆರೆಸಿದವರು ಇಟ್ಟೊರಸದಿಹರೆ ಷಡುದರುಶನವ ?
ಸಾಗರವ ದಾಂಟುವವ ಬಸವನ ಬಾಲವ ಬಿಟ್ಟು,
ಮತ್ತೊಂದಕ್ಕೆ ಹರಿದು ಕಡಲನೊಡಗೂಡುವಂತೆ,
ಶಿವಲಿಂಗದೇವನ ಪೂಜಾಕ್ರಿಯೆಯ ಮರೆದೆಡೆ,
ಒಡಗೂಡದಿಹನೆ, ಕರ್ಮದ ಕಡಲವ?
ದಿಟಪುಟವಿಲ್ಲದ ಭಕ್ತಿಯ ಮೆಚ್ಚ, ಸಕಳೇಶ್ವರದೇವ. ॥ ೧೧೨ ॥

೪೮೨

ಶ್ರೀಗುರುವೆ ಬಸವ. ಸ್ಥೂಲಕ್ಕೆ ಸ್ಥೂಲ, ಸೂಕ್ಷ್ಮಕ್ಕೆ ಸೂಕ್ಷ್ಮ ಬಸವ.
ಶತಕೋಟಿಬ್ರಹ್ಮಾಂಡಂಗಳು ನಿನ್ನ ರೋಮದ ತುದಿಯಲ್ಲಿಪ್ಪವು ಬಸವ.
ಎನ್ನ ಭವವೆಂಬ ವಾರಿಧಿಯ ದಾಂಟುವುದಕ್ಕೆ
ನಿನ್ನ ಬಾಲತುದಿಯ ಎಯ್ದಿದೆನು ಬಸವ.
ಆರಾಧ್ಯಪ್ರಿಯ ಸಕಳೇಶ್ವರಾ,
ಬಸವಣ್ಣನ ಶ್ರೀಪಾದಕ್ಕೆ ನಮೋ ನಮೋ ಎನುತಿರ್ದೆನು. ॥ ೧೧೩ ॥

೪೮೩

ಷಡುಸಮ್ಮಾರ್ಜನೆಯ ಮಾಡೆನೆ? ರಂಗವಾಲಿಯನಿಕ್ಕೆನೆ?
ಹೂ ಅಗ್ಘವಣಿಯ ತಾರೆನೆ? ಪೂಜಾ ರಚನೆಯ ಮಾಡೆನೆ?
ಅಷ್ಟವಿಧಾರ್ಚನೆಯ ಮಾಡೆನೆ? ಮಾಡುವವರಿಗೆ ನೀಡಿ ಕೊಡೆನೆ?
ವೀಣೆಯ ಬಾರಿಸಿ, ಸಕಳೇಶ್ವರಂಗೊಂದು ಗೀತವ ಪಾಡೆನೆ?
ಇಂಥಾ ಪರಿಯಲಿ ಸುಖಿಮಾಡಿ ಸಲಹುವ, ಇಂತಪ್ಪಆಳುದರೊಳರೆ? ॥೧೧೪॥

೪೮೪

ಸಂಸಾರವ ಬಿಟ್ಟುದೇ ಆಚಾರವಯ್ಯಾ.
ಕಾಯದಿಚ್ಛೆಗೆ ಕಂಡವರಿಗೆ ಕಾರ್ಪಣ್ಯಬಡದಿಪ್ಪುದೇ ಶೀಲ.
ಲಿಂಗಾಣತಿಯಿಂದ ಬಂದುದ ಕೈಕೊಂಬುದೇ ವ್ರತ.
ಮನ ಘನವನಗಲದಿಪ್ಪುದೇ ಭಕ್ತಿ
ಸಕಳೇಶ್ವರದೇವಾ, ನಿಮ್ಮನರಿದವನೆ ಶರಣ. ॥ ೧೧೫ ॥

೪೮೫

ಸಕಲಜೀವಕ್ಕೆಲ್ಲಕ್ಕೂ ಜೀವವೆ ಆಧಾರ.
ಜೀವವ ತಪ್ಪಿಸಿ ಜೀವಿಸಲಿಕ್ಕಾರಿಗೆಯೂ ಬಾರದು.
ವಿಕೃತಿಯಿಂದ ನೋಡಿದಡಾರೂ ಸ್ವತಂತ್ರರಿಲ್ಲ.
ಸಕಳೇಶ್ವರದೇವಂಗುಪಹಾರ ಕೊಡಲು
ಅದು ಶುದ್ಧಭಕ್ತಿಪ್ರಸಾದ. ॥ ೧೧೬ ॥

೪೮೬

ಸತ್ಕೃತು ಸಂಸಾರದಲ್ಲಿ ಜನಿಸಿ, ಪ್ರಕೃತಿಗುಣವಳಿಯದೆ,
ವಿಕೃತವೇಷವ ಧರಿಸಿ,
ಸುಕೃತ ಮನುಜರ ಬೇಡುವ ಯಾಚಕನಲ್ಲ,
ಲಿಂಗಾಭಿಮಾನಿಗಳನಲ್ಲದೆ,
ತ್ರಿಭುವನ ಅಭವನ ಮುಖದಲ್ಲಿ ಬಂದುದನಲ್ಲದೆ ಕೈಕೊಳ್ಳ.
ಕೂರ್ಮನ ಶಿಶುವಿನ ಆಪ್ಯಾಯನದಂತೆ,
ಆರಾಧ್ಯ ಸಕಳೇಶ್ವರದೇವರಲ್ಲಿ, ದಯಾಮೃತವನುಂಬ ಶರಣನು. ॥ ೧೧೭ ॥

೪೮೭

ಸದ್ಭಕ್ತರಲ್ಲಿಗೆ ಹೋಗಿ, ಸಮಯೋಚಿತವ ಮಾಡುವನ,
ಸದ್ಭಕ್ತರಿಗೆ ಉಣಲಿಕ್ಕಿ, ತನ್ನ ಹಸಿವ ಮರೆದಿಪ್ಪವನ,
ಸದ್ಭಕ್ತರಿಗೆ ಉಳ್ಳುದೆಲ್ಲವ ಕೊಟ್ಟು, ಎಯ್ದದೆಂದು ಮರುಗುವ
ಏಕೋಗ್ರಾಹಿ ನೆಟ್ಟನೆ ಶರಣ.
ತೊಟ್ಟನೆ ತೊಳಲಿ, ಅರಸಿ ಕಾಣದೆ,
ಮೂರು ತೆರನ ಮುಕ್ತಿಯ, ಹದಿನಾರುತೆರನ ಭಕ್ತಿಯ.
ಇಂತಪ್ಪ ವರವ ಕೊಟ್ಟಡೆ ಒಲ್ಲೆನು.
ಸಕಳೇಶ್ವರದೇವಾ, ನಿಮ್ಮ ಶರಣರ ತೋರಾ ಎನಗೆ. ॥ ೧೧೮ ॥

೪೮೮

ಸದ್ಭಕ್ತರು ಲಿಂಗಾರ್ಚನೆಯ ಮಾಡುವ ಕಾಲದಲ್ಲಿ,
ಕದವಂ ಮುಚ್ಚಿ, ಸಮಾಧಾನದಲ್ಲಿ ಲಿಂಗಾರ್ಚನೆಯ ಮಾಡುವದು.
ಶಿವಪೂಜೆಯ ಗುಪ್ತದಲ್ಲಿ ಮಾಡಬೇಕಾಗಿ ತೆರೆಯ ಕಟ್ಟುವದು.
ಪಾಪಿಯು ಕೋಪಿಯು, ಶಿವಾಚಾರಭ್ರಷ್ಟನು,
ಆಳಿಗೊಂಬವನು, ವೈದಿಕವಿಪ್ರನು,ಹೊಲ್ಲಹ ದೃಷ್ಟಿಯವನು,
ಅನಾಚಾರಿಯು, ಮೂರ್ಖನು, ತನ್ನ ಗುರುವನು ನಿಂದಿಸುವಾತನು,
ಇಂತಪ್ಪವರುಗಳ ಪ್ರಮಾದದಿಂದಾದಡೆಯೂ ಕಂಡಡೆ,
ತಾ ಮಾಡಿದ ಲಿಂಗಾರ್ಚನೆ ನಿಷ್ಫಲವಹುದು.
ಇದನರಿದು, ಸಕಳೇಶ್ವರಲಿಂಗವ ಏಕಾಂತದಲ್ಲಿ ಭಜಿಸುವ ಭಕ್ತಂಗೆ
ನಮೋ ನಮಃ ಎಂದು ಬದುಕಿದೆನಯ್ಯಾ. ॥ ೧೧೯ ॥

೪೮೯

ಸದಾಚಾರದ ಬೆಂಬಳಿವಿಡಿದು ನಿಯತತ್ವದಲ್ಲಿ ನಡೆಯಬಹುದಲ್ಲದೆ,
ಭಕ್ತನೆನಿಸಿಕೊಳಲುಬಾರದು.
ಜ್ಞಾನದ ಉದಯದ ಸೌಕರ್ಯದ ನುಡಿಯ ನುಡಿಯಬಹುದಲ್ಲದೆ,

ಭಕ್ತನೆನಿಸಿಕೊಳಲುಬಾರದು.
ಅತಿಶೀಲಸಂಬಂಧಿಯೆನಿಸಿಕೊಳಲುಬಹುದಲ್ಲದೆ,
ಭಕ್ತನೆನಿಸಿಕೊಳಲುಬಾರದು.
ಈ ತ್ರಿವಿಧವೂ ನಿಮ್ಮಲ್ಲಿ ಹೊದ್ದದೆ,
ಬಸವಾ ಶರಣೆಂದು ಬದುಕಿದೆನಯ್ಯಾ, ಸಕಳೇಶ್ವದೇವಾ. ॥ ೧೨೦ ॥

೪೯೦

ಸಮತೆಯಿಲ್ಲದ ಮಾಟವೆಂಬುದು, ಬಿತ್ತಿದ ಕೆಯ್ಯ ಕಸವು ಕೊಂಡಂತೆ.
ಸಮತೆಯಿಲ್ಲದ ಶೀಲವೆಂಬುದು, ಒಟ್ಟಿದರಳೆಯನುರಿ ಕೊಂಡಂತೆ.
ಇನ್ನಾರ ಮಾಟವಾದಡೇನು? ಆವ ಶೀಲವಾದಡೇನು?
ಹೊರಗನೆ ತೋರಿ, ಒಳಗನೆ ಪೂಜಿಸುವ ಉಪಾಯದಲ್ಲಿ ಬದುಕುವರು,
ಸಕಳೇಶ್ವರದೇವಂಗೆ ದೂರವಾಗಿಪ್ಪರು. ॥ ೧೨೧ ॥

೪೯೧

ಸರ್ಪದಷ್ಟವಾದವರು ತಮ್ಮ ತಾವರಿಯರು.
ಕಾಮದಷ್ಟವಾದವರು ಲಜ್ಜೆ ನಾಚಿಕೆಯ ತೊರೆವರು.
ಸಂಸಾರದಷ್ಟವಾದವರು ಪರಮಾರ್ಥವನರಿಯರು.
ಲಿಂಗದಷ್ಟವಾದಡೆ ಅಂಗವೆನಲಿಲ್ಲ,
ಆರಾಧ್ಯಪ್ರಿಯ ಸಕಳೇಶ್ವರದೇವನಲ್ಲಿ ಸುಖಿಯಾಗಿದ್ದರು. ॥ ೧೨೨ ॥

೪೯೨

ಸರವರದ ಮಂಡೂಕನು ತಾವರೆಯ ನೆಳಲ ಸಾರಿದಡೆ
ಪರಿಮಳವದಕೆ ಅಯ್ಯಾ? ಆ ಅರಿಯಬಾರದು.
ಪರಿಮಳವದಕೆ ಅಯ್ಯಾ? ಆ ಅರಿಯಬಾರದು. ಮದಾಳಿಗಲ್ಲದೆ.
ಸಕಳೇಶ್ವರದೇವಾ, ನಿಮ್ಮ ವೇದಿಸಿದ ವೇದ್ಯಂಗಲ್ಲದೆ,
ನಿಮ್ಮ ನಿಲವನರಿಯಬಾರದು. ॥ ೧೨೩ ॥

೪೯೩

ಸರ್ವಸಂಗಪರಿತ್ಯಾಗವ ಮಾಡಿ, ಲಿಂಗ ಗೂಡಾಗಿ,
ತನು ಪರಿಣಾಮವನೈದಿ, ಪೆರತನರಿಯದೆ ಇರದು.
ಮೇಣಲ್ಲಿ ಜಂಗಮಕ್ಕೆ ತಕ್ಕ ಉಚಿತವ ಮಾಡಿ,
ನಿಮ್ಮ ಕರುಣವ ಹಡೆಯದ ಪಾಪಿ ನಾನಯ್ಯಾ.
ಇಂತೆರಡಕ್ಕಲ್ಲದ ಉಭಯಭ್ರಷ್ಟ ನಾನು.
ಸಕಳೇಶ್ವರದೇವನೊಲಿಯೆಂದರೆಂತೊಲಿವ? ॥ ೧೨೪ ॥

೪೯೪

ಸರ್ವಸಂಗಪರಿತ್ಯಾಗಿಯೆಂದಡೆ ಭೋಗಕ್ಕೆ ಮರುಗಿಸುವೆ.
ಪಾಕನೇಮಿಯೆಂದಡೆ ಷಡುರಸಾನ್ನಕ್ಕೆರಗಿಸುವೆ.
ಮೌನವ್ರತಿಯೆಂದಡೆ ಸನ್ನೆಯಲ್ಲಿ ಬೇಡಿಸುವೆ.
ಬ್ರಹ್ಮಚಾರಿಯೆಂದಡೆ ಅಂಗನೆಯರಿಗೆರಗಿಸುವೆ.
ಸಕಳೇಶ್ವರದೇವಾ, ಎನ್ನನಾಳವಾಡಿ ಕಾಡುವೆ. ॥ ೧೨೫ ॥

೪೯೫

ಸವಣನ ಮನದ ಕೊನೆಯ ಮೊನೆಯ ಮೇಲೆ ಹೊಲೆಯಿದ್ದಿತ್ತಾಗಿ ಜಿನನಿಲ್ಲ.
ಸನ್ಯಾಸಿಯ ಮನದ ಕೊನೆಯ ಮೊನೆಯ ಮೇಲೆ ಹೆಣ್ಣಿದ್ದಿತ್ತಾಗಿ ವಿಷ್ಣುವಿಲ್ಲ.
ಶೀಲವಂತನ ಮನದ ಕೊನೆಯ ಮೊನೆಯ ಮೇಲೆ ಬಯಕೆಯಿದ್ದಿತ್ತಾಗಿ ಲಿಂಗವಿಲ್ಲ.
ಸಕಳೇಶ್ವರದೇವಾ, ಇವರೆಲ್ಲರೂ ಉಪಾಯವಂತರು. ॥ ೧೨೬ ॥

೪೯೬

ಸುಖವನನುಭವಿಸಿ, ಆನು ಸುಖದ ಹದನನು ಕಂಡೆ.
ದುಃಖವನನುಭವಿಸಿ, ಆನು ದುಃಖದ ಹದನನು ಕಂಡೆ.
ಸಾಕೆಂದು ನಿಂದೆ ನಿಃಭ್ರಾಂತನಾಗಿ, ಸಾಕೆಂದು ನಿಂದೆ ನಿಶ್ಚಿಂತನಾಗಿ.
ಸಾಕೆಂದು ನಿಂದೆ ಸಕಳೇಶ್ವರದೇವನಲ್ಲದೆ
ಪೆರತೇನೂ ಇಲ್ಲೆಂದು ಸಾಕೆಂದು ನಿಂದೆ. ॥ ೧೨೭ ॥

೪೯೭

ಸ್ಥಾವರ ಜಂಗಮ ಒಂದೆಯೆಂದು ಬಸವರಾಜದೇವರು ಹೇಳಿತ್ತ ಕೇಳದೆ,
ಪಾದೋದಕವೆಂಬೆ, ಪ್ರಸಾದೋದಕವೆಂಬೆ, ಲಿಂಗೋದಕವೆಂಬೆ.
ಮತ್ತೆಯೂ ಕ್ರೀಯ ನೆನೆಯುವೆ, ಸಂದೇಹವ ಹತ್ತಿಸಿ;
ಸಕಳೇಶ್ವರದೇವ, ಎನ್ನ ಮರುಳುಮಾಡಿದ. ॥ ೧೨೮ ॥

೪೯೮

ಸ್ಥಾವರವೆಂತಂತೆ ಮನದಲ್ಲಿ ಭಾವಿಸಿ,
ಸಕಲಜೀವದ ನಿಂದೆಯ ಮಾಬುದು.
ಲಿಂಗಜಂಗಮವೊಂದೆಯೆಂದು ನಂಬೂದು.
ಬಂದುದು ಲಿಂಗಾಧೀನವೆಂದು ಕಾಬುದು.
ಸತ್ಯವ ನುಡಿವುದು, ಶುಚಿಯಾಗಿಪ್ಪುದು.
ಎರಡುವಿಡಿಯದೆ, ಎರಡು ನಡೆಯದೆ,
ಮುನ್ನಾದಿಯ ಪುರಾತರು ಕೂಡಿದ ಪಥವಿದು,
ಸಕಳೇಶ್ವರದೇವರನೊಲಿಸಿಹೆನೆಂಬವಂಗೆ. ॥ ೧೨೯ ॥

೪೯೯

ಹರಗಣಂಗಳ ನೆರಹಿ ಮಾಡುವ ಮಾಟ,
ಉರಿಯನಾಲಗೆ ಕೊರಳನಪ್ಪಿದಂತಾಯಿತ್ತಯ್ಯಾ.
ಒಡೆದ ಮಡಕೆಯಲಮೃತವ ತುಂಬಿ,
ಮುರುವ ಕುಟ್ಟಿ ಅಟ್ಟುಂಬ ತೆರನಂತಾಯಿತ್ತಯ್ಯಾ.
ಭಕ್ತದೇಹಿಕದೇವ ಮನೆಗೆ ಬಂದಡೆ, ಮತ್ತೆ ಮಾಡಿಹೆನೆಂಬುದಿಲ್ಲವು.
ಮೂಗಿಲ್ಲದ ಮುಖಕ್ಕೆ ಶೃಂಗಾರವ ಮಾಡಿದಂತಾಯಿತ್ತಯ್ಯಾ.
ಶರಣಸನ್ನಹಿತ ಸಕಳೇಶ್ವರದೇವನ ಅರಿದೂ ಅರಿಯದಂತಿರ್ದಡೆ,
ಮಳಲಗೌರಿಯ ನೋಂತು ನದಿಯಲ್ಲಿ ಬೆರಸಿದಂತಾಯಿತ್ತಯ್ಯಾ. ॥ ೧೩೦ ॥

೫೦೦

ಹಲವು ದಿನವೆಂಬುದೊಂದು ಮಾನವಂಗಯ್ಯಾ.
ದಿನವೊಂದೆ ಶಿವಶಿವಾಯೆಂಬವಂಗೆ.
ದಿನವೊಂದೆ ಹರಹರಾಯೆಂಬವಂಗೆ.
ಹಲವುದಿನವ ಕೊಂಡಾಡುವಂಗೆ ಲಿಂಗವಿಲ್ಲ, ಸಕಳೇಶ್ವರದೇವಾ. ॥ ೧೩೧ ॥

೫೦೧

ಹಿರಿಯ ಅಡವಿಯ ಕಲ್ಲಗವಿಯ ಗಹ್ವರದೊಳಗೆ
ಬಿದಿರಲಳಿಗೆಯಲಗ್ಘವಣಿಯ ತಂದು, ದೇವದಾರಿಯ ಗಂಧವ ತೇದು,
ತಾವರೆಯ ನೆಯ್ದಿಲ ಹೂವನೆ ತಂದು, ಲಿಂಗವ ಸಿಂಗಾರವ ಮಾಡಿ,
ನೋಡುವದೆಂದು ದೊರಕೊಂಬುವುದೊ ಎನಗೆ ?
ಸಕಳೇಶ್ವರದೇವಾ, ಮುಂದಿನ ವರವನೊಲ್ಲೆ,
ಇಂದು ಎನಗಿದು ಪರಮಸುಖವು. ॥ ೧೩೨ ॥

೫೦೨

ಹೊಯಿದ ಹರೆಗೆ ಕುಣಿದಾಡುವರೆಲ್ಲಾ,
ಹಾಡಿದ ಗೀತಕ್ಕೆ ತಲೆದೂಗುವರೆಲ್ಲಾ,
ಪಂಜರದೊಳಗಣ ಅರಗಿಳಿಯಂತೆ, ಅದು ಆಡುವದು, ಹಾಡುವದು.
ಸಕಳೇಶ್ವರದೇವರಲ್ಲಿ
ಅಭ್ಯಾಸಕ್ಕೆ, ಮಜ್ಜನಕ್ಕೆ ಎರೆವರೆಲ್ಲಾ ಭಕ್ತರೆ ? ॥ ೧೩೩ ॥

■■

# ಸಗರದ ಬೊಮ್ಮಣ್ಣನ ವಚನ

೫೦೩

ಅಂಗವಳಿದು ಸುಸಂಗವಾಗಲಾಗಿ,
ಸಂದೇಹಿಗಳ ಸಂದೇಹ ಬಿಟ್ಟಿತ್ತು, ನಿಸ್ಸಂದೇಹವಾಯಿತ್ತು
ಅದೆಂತೆಂದಡೆ;
ತೋರುವ ತೋರಿಕೆ ತಾನೆಯಾದ ಕಾರಣ.
ಸಕಲದೊಳಗಿರ್ದು ನಿಃಕಲದ ರೂಪ ನಿರ್ಧರವೆಂದು ಭಾವಿಸಿ,
ಅರಿದರುಹಿಸಿಕೊಂಬವ ತಾನು ತಾನೆ,
ಸಗರದ ಬೊಮ್ಮನೊಡೆಯ ತನುಮನ ಸಂಗಮೇಶ್ವರಾ. ॥ ೧ ॥

೫೦೪

ಅಡುವಳ ಕೈ ಉಳಿದು, ಅಡದವಳ ಕೈ ಬೆಂದಿತ್ತು
ಮನೆಯೊಡೆಯ ನೆರವಿಗನಾಗಿ, ಪರವನೊಡೆಯನಾದ.
ಅನ್ನಿಗ ತನ್ನವನಾದ, ತನ್ನ ತಾನರಿತ ಕಾರಣ.
ಸಗರದ ಬೊಮ್ಮನೊಡೆಯ
ತನುಮನ ಸಂಗಮೇಶ್ವರ ಲಿಂಗವನರಿತ ಕಾರಣ. ॥ ೨ ॥

೫೦೫

ಅದು ಹುಸಿ,, ಕಚ್ಚಿದಡೆ ವಿಷವೇರಿತ್ತಲ್ಲದೆ, ವಿಷಕ್ಕೆ ಹಾಹೆ ಇಲ್ಲ,
ಇರಿದವನಿದ್ದಂತೆ ಅಂಬಿಗೆ ಮುನಿವರೆ ?

ಹಾವಿದ್ದಂತೆ ವಿಷವ ಕೊಲಬಹುದೆ ?
ಎಲ್ಲರಲ್ಲಿ ಲೇಪ ನೀನಾಗಿದ್ದು, ಕರಣಂಗಳ ಹೋರಾಟವೇಕೆ ಎನಗೆ,
ಸಗರದ ಬೊಮ್ಮನೊಡೆಯ ತನುಮನ ಸಂಗಮೇಶ್ವರಲಿಂಗಾ ? || ೩ ||

೫೦೬

ಅನ್ಯರು ಮಾಡಿದ ಸುರೆಯ ಕೊಂಡು, ಜಗ ತನ್ನ ತಾನರಿಯದಿರೆ,
ತನ್ನಲ್ಲಿ ಒದಗಿದ ಮೂರು ಸುರೆಯ ಕೊಂಡು, ಸುರನಾಥನನರಿಯದಿರೆ,
ತ್ರಿವಿಧದ ಸುರತಕ್ಕೊಳಗಾಹ ಸುರಭಾವಿಗಳ ಹರಹಿಗೆ ಸಿಕ್ಕ,
ಸಗರದ ಬೊಮ್ಮನೊಡೆಯ ತನುಮನ ಸಂಗಮೇಶ್ವರಲಿಂಗವು. || ೪ ||

೫೦೭

ಅಯ್ಯಾ, ಸಕಲವ ನೇತಿಗಳೆದು ನಿಂದ ಅಕ್ಷತೆಯನಿಡುವೆನಯ್ಯಾ.
ವಿಕಳಭಾವರೂಪಿಲ್ಲದ ಗಂಧವ ಧರಿಸುವೆನಯ್ಯಾ.
ಸಕಲಭಾವ ಸಂಚರಿಸದೆ ನಿರುತವಾಗಿ ನಿಂದ ಧೂಪವ ಕೈಕೊಳ್ಳಯ್ಯಾ.
ಇಂತೀ ಮನಘನ ಭಾವಪೂಜೆ ನಿಮಗರ್ಪಿತವಯ್ಯಾ.
ಸಗರದ ಬೊಮ್ಮನೊಡೆಯ ಎನ್ನ ತನುಮನ ಸಂಗದಲ್ಲಿ ನಿಂದು,
ನಿಸ್ಸಂಗವಾದಲ್ಲಿಯೆ ನಿಮಗೆ ಪೂಜೆಯಯ್ಯಾ. || ೫ ||

೫೦೮

ಆಗರದಲ್ಲಿ ಅಡಕೆ ಸಣ್ಣಾದಾಗ ತೋಟದ ಎಲೆ ಉದುರಿತ್ತು
ಉದುರುವುದಕ್ಕೆ ಮೊದಲೆ ಸುಣ್ಣವ ಸುಡುವವ ಸತ್ತ
ಇವರ ಮೂವರ ಹಂಗಿಗತನ ಬಿಟ್ಟಿತ್ತು
ಬಾಯ ಹಂಬಲಿಲ್ಲದೆ, ಸಗರದ ಬೊಮ್ಮನೊಡೆಯ
ತನುಮನ ಸಂಗಮೇಶ್ವರಲಿಂಗವು ಮೂರರ ಹಂಗ ಬಿಟ್ಟ ಕಾರಣ. || ೬ ||

೫೦೯

ಇಷ್ಟ ಕೈಯಲ್ಲಿ ಬಂದು ನಿಂದಿರೆ, ದೃಷ್ಟಿಯ ಭಾವ ಚಿತ್ತದ ಕೈಯಲ್ಲಿ ಕೂಡಿ,
ಅರಿವು ಆತ್ಮನಲ್ಲಿ ಸ್ವಸ್ಥ ಕರಿಗೊಂಡು,
ತನು ಅರಿವ ಮನಕ್ಕೂ ಅರುಹಿಸಿಕೊಂಬ ನೆರೆ ವಸ್ತುವಿಗೂ ಬೇರೊಂದೆಡೆಯಿಲ್ಲದೆ,
ಅಂಗ ಮನ ಪ್ರಾಣ ಒಂದಕ್ಕೊಂದು ಹಿಂಗಲಾಗಿ, ನಿಜಸಂಗವನರಿ,
ಸಗರದ ಬೊಮ್ಮನೊಡೆಯ ತನುಮನ ಸಂಗಮೇಶ್ವರಲಿಂಗದಲ್ಲಿ. || ೭ ||

೫೧೦

ಈ ಧರೆಯ ಮಡಕೆಯಲ್ಲಿ, ಹೋದಬಾರಿಯ ಅಕ್ಕಿಯ ಹೊಯಿದು,
ಬಹಬಾರಿಯ ಬೆಂಕಿಯ ಹಾಕಿ, ಅನಾಗತ ಸಂಸಿದ್ಧಿಯೆಂಬ ಒಲೆಯಲ್ಲಿ
ಉಸುರುಸಾ ಉಪ್ಪೆಂದು ಉರುಹಲಾಗಿ, ಮಡಕೆ ಒಡೆದು, ಒಗರ ಬೆಂದಿತ್ತು

ಉಂಬ ಅಣ್ಣ ಓಗರವನೊಲ್ಲದೆ ಗಂಜಿಯ ಕುಡಿದು ಗಂಟಲು ಸಿಕ್ಕಿತ್ತು
ಸಗರದ ಬೊಮ್ಮನೊಡೆಯ ತನುಮನ ಸಂಗಮೇಶ್ವರಲಿಂಗಾ. ॥ ೮ ॥

೫೧೧

ಈರೇಳುಲೋಕ, ಹದಿನಾಲ್ಕು ಭುವನವಳಯದಲ್ಲಿ
ಜಂಬೂದ್ವೀಪ ನವಖಂಡ ಪೃಥ್ವಿ ಹಿಮಸೇತು ಮಧ್ಯದೊಳಗಾದ
ಖಂಡಮಂಡಲ ಯುಗಜುಗಂಗಳು, ಪಂಚಭೌತಿಕ
ಪಂಚವಿಂಶತಿತತ್ವ ಸಕಲವಾಸಂಗಳೆಲ್ಲವು ತನ್ನ ಸಾಕಾರದಲ್ಲಿ ತೋರುವುದು.
ಉತ್ತಮ ಕನಿಷ್ಠ ಮಧ್ಯಮವೆಂಬ ಸುಕ್ಷೇತ್ರವಾಸ,
ತನ್ನಂಗದಲ್ಲಿ ಸುಳಿದಾಡುವ ಮಂಗಳಮಯದಿರವ,
ಸಕಲೇಂದ್ರಿಯವ ಬಂಧಿಸದೆ ಕೂಡಿ,
ಅವರವರ ಅಂಗದ ಮುಖದಲ್ಲಿ ಲಿಂಗಕ್ಕೆ ಕೊಟ್ಟು,
ಸುಸಂಗಿಯಾಗಿ ವಸ್ತುವಿನ ಅಂಗದಲ್ಲಿ ಬೆರಸು.
ನೀನರಿದನೆಂಬುದಕ್ಕೆ ಬೇರೊಂದು ಕಡೆಯಿಲ್ಲ.
ನೀ ಮರೆದನೆಂಬುದಕ್ಕೆ ಬೇರೊಂದು ಮನವಿಲ್ಲ.
ವಸ್ತು ದ್ರವ್ಯವ ತೋರಿ ಅಳಿದ ಮತ್ತೆ ವಸ್ತುವ ಕೂಡಿದಂತೆ,
ಜಗಕ್ಕೆ ಭಕ್ತಿಯ ತೋರಿ ವಸ್ತು ಲೇಪ,
ಸಗರದ ಬೊಮ್ಮನೊಡೆಯ
ತನುಮನ ಸಂಗಮೇಶ್ವರಲಿಂಗವು ಐಕ್ಯಲೇಪವಾದ. ॥ ೯ ॥

೫೧೨

ಉದಕದ ಕೈಯ ಕರಗದಲ್ಲಿ ಬೆಂಕಿಯ ಸುಜಲವ ತುಂಬಿ,
ಆರಂಗ ಮೂರಂಗನ ಕೂಡೆ ನಿಂದುದೆ ಮಜ್ಜನ ಪಾತ್ರೆ.
ತೋರಲಿಲ್ಲದ ಪದಾರ್ಥವ
ಘನಮುಕ್ತಿಯೆಂಬ ಕೈಯಿಂದ ನಿಮಗರ್ಪಿತವ ಮಾಡುವೆನಯ್ಯಾ.
ಸಗರದ ಬೊಮ್ಮನೊಡೆಯ
ಎನ್ನ ತನುಮನ ಅಂಗಲಿಂಗವಸ್ತು ನಿಮಗರ್ಪಿತವಯ್ಯಾ. ॥ ೧೦ ॥

೫೧೩

ಉಪ್ಪಿನ ಸಮುದ್ರದೊಳಗೊಂದು ಚಿಕ್ಕಬಾವಿ ಹುಟ್ಟಿತ್ತು.
ಬಾವಿಯ ತಳದಲ್ಲಿ ನೀರಿಲ್ಲ.
ಬಾವಿ ನೀರಿನೊಳಗೆ ಹುಟ್ಟಿತ್ತು, ಸ್ವಾದೋದಕವಾಯಿತ್ತು.
ಉದಕವ ನೋಡಿದವ ಕೆಟ್ಟ, ಕುಡಿದವ ಸತ್ತ,
ಆ ನೀರ ಹಿಡಿದವ ಬದುಕಿದ,
ಸಗರದ ಬೊಮ್ಮನೊಡೆಯ ತನುಮನ ಸಂಗಮೇಶ್ವರಲಿಂಗಾ. ॥ ೧೧ ॥

೫೧೪

ಎನ್ನ ಮನೆ ಮಾಳವಾಯಿತ್ತಯ್ಯಾ, ಎನ್ನ ಹೊಲ ಬೆಳೆಗೆಟ್ಟಿತ್ತಯ್ಯಾ.
ಎನ್ನ ಭಕ್ತಿಯಭಕ್ತಿಯಾಯಿತ್ತಯ್ಯಾ, ಸತ್ತು ಚಿತ್ತು ಹೆಣದಂತಾಯಿತ್ತಯ್ಯಾ.
ನಿಮ್ಮೊಳಾನು ಬೆರೆದು ಬೇರಿಲ್ಲದೆ ನೆಲೆಗೆಟ್ಟೆನಯ್ಯಾ,
ಸಗರದ ಬೊಮ್ಮನೊಡೆಯ ತನುಮನ ಸಂಗಮೇಶ್ವರಾ. || ೧೨ ||

೫೧೫

ಒಂದಾಡಿನ ಕಣ್ಣಿನಲ್ಲಿ ಬಂದವು ಮೂರು ಸಿಂಹ.
ಆ ಸಿಂಹದ ಬಾಯ ಸೀಳಿ ಹುಟ್ಟಿದವೈದು ಮದಗಜ.
ಗಜದೊಡಲೊಡೆದು ಬರಿ ಕೈಯಲ್ಲಿ ನರಿ ಹುಟ್ಟಿತ್ತು
ನರಿಯ ಉದರದಲ್ಲಿ ಮೊಲ ಹುಟ್ಟಿ, ಆ ಮೊಲ ಮೂವರ ಮೊಲೆಯ ತಿಂದಿತ್ತು.
ಮೊಲೆ ಹಲುದಾಗಿ ಮೊಲೆ ಮೊದಲುಗೆಟ್ಟಿತ್ತು,
ಸಗರದ ಬೊಮ್ಮನೊಡೆಯ ತನುಮನ ಸಂಗಮೇಶ್ವರಲಿಂಗವು,
ಜಗದೊಡಲು ತಾನಾದ ಕಾರಣ. || ೧೩ ||

೫೧೬

ಒನಕೆಯ ಕಣ್ಣಿನಲ್ಲಿ ಒಂದು ಬೆನಕ ತಲೆದೋರಿತ್ತು,
ತಲೆಯಲ್ಲಿ ಹೊಟ್ಟೆ, ಬಾಯಲ್ಲಿ ಕಣ್ಣು, ಬಾಲೆಯರ ನಳಿತೋಳಲ್ಲಿ ಕಾಲು.
ಹೆಣ್ಣುಟ್ಟ ಬಣ್ಣ ಸೆರಗಿನಲ್ಲಿ ಅದೆ.
ಬೆನಕನ ಹೊತ್ತವನ ಅಪ್ಪ ಸತ್ತು, ಒನಕೆಯ ಕಣ್ಣೊಡೆದು,
ನಳಿತೋಳು ಮುರಿದು, ಬಣ್ಣ ಹರಿದು, ಅವರ ಅಣ್ಣನ ಮಗಳ ಗಂಡ ಬಿಣ್ಣದ,
ಸಗರದ ಬೊಮ್ಮನೊಡೆಯ ತನುಮನ ಸಂಗಮೇಶ್ವರಾ. || ೧೪ ||

೫೧೭

ಒಳಗನರಿತು, ಹೊರಗನರಿದಡೆ, ಹೊರಗು ಶುದ್ಧವಲ್ಲ.
ಹೊರಗನರಿತು ಒಳಗೆ ನುಡಿದಡೆ, ಅದು ಕಾಣಬಾರದ ಬಯಲು.
ಕಣ್ಣಿನಲ್ಲಿ ನೋಡಿ, ಮನದಲ್ಲಿ ಅಪ್ಪಿ, ಉಭಯದೃಷ್ಟವಾಗಿಯಲ್ಲದೆ,
ಸಗರದ ಬೊಮ್ಮನೊಡೆಯ ತನುಮನ ಸಂಗಮೇಶ್ವರನಾಗ. || ೧೫ ||

೫೧೮

ಕಂಗಳಸೂತಕ ಹೋಯಿತ್ತು, ನಿಮ್ಮಂಗದ ದರ್ಶನದಿಂದ.
ಮನದ ಸೂತಕ ಹೋಯಿತ್ತು, ನಿಮ್ಮ ನೆನಹು ವೇಧಿಸಿ.
ಸಕಲಸೋಂಕಿನ ಭ್ರಾಂತು ಬಿಟ್ಟಿತ್ತು, ನಿಮ್ಮ ಹಿಂಗದ ಅರಿಕೆಯಲ್ಲಿ,
ಇಂತೀ ನಾನಾವಿಧದ ಭೇದೋಪಭೇದಂಗಳೆಲ್ಲವು,
ನಿಮ್ಮ ಕಾರುಣ್ಯದಲ್ಲಿಯೆ ಲಯ,
ಸಗರದಬೊಮ್ಮನೊಡೆಯ ತನುಮನ ಸಂಗಮೇಶ್ವರಾ. || ೧೬ ||

೫೧೯

ಕಂಚಿನ ಮಂಜುಳದಲ್ಲಿ ತೋರುವ ಸಂಜು, ಕೊಲುವರಿಗೆ ಬಿಂದು.
ಸಾಕಾರ ನಿಂದಲ್ಲಿ ಆತ್ಮಂಗೊಡಲೆ ?
ಆ ಒಡಲೊಡೆದು, ಒಡಲೊಡೆಯನನರಿತಡೆ,
ಅದು ಸಂಸಾರಕ್ಕೆ ಬಿಡುಗಡೆ,
ಸಗರದ ಬೊಮ್ಮನೊಡೆಯ ತನುಮನ ಸಂಗಮೇಶ್ವರಾ. ॥ ೧೭ ॥

೫೨೦

ಕಂಡಮಂಡಲ ರಣಭೂಮಿಯಲ್ಲಿ ಅಖಂಡಿತಮಯರು ಕಡಿದಾಡಿ,
ಹಿಡಿಖಂಡದ ಕರುಳ ಖಂಡಿಸಿ, ಶಿರ ತಂಡತಂಡದಲ್ಲಿ ದಿಂಡುರುಳಿತ್ತು,
ಅಖಂಡಿತನ ಮನ ಖಂಡೆಹದ ಬೆಂಬಳಿಯ ಗಾಯದಲ್ಲಿ ಸುಖಿತನು.
ರಣಭೂಮಿಯಲ್ಲಿ ಅಖಂಡಿತ ಗೆದ್ದ,
ಸಗರದ ಬೊಮ್ಮನೊಡೆಯ ತನುಮನ ಕೂಡಿ ಸಂಗದ ಸಂಗಸುಖಿಯಾದ. ॥ ೧೮ ॥

೫೨೧

ಕಂಡೆ, ಆಕಾಶದಲ್ಲಿ ಒಂದು ಉಡುಪತಿಯ.
ಅದು ಅರ್ಧ ನಿಜರೂಪು, ಅರ್ಧ ತಮರೂಪು.
ಅದು ಜಗಕ್ಕೆ ಉಡುಪತಿ, ಎನಗದು ಸಮಧಿಪತಿ.
ಅದರ ತೊಡಿಗೆಯ ಗಡಣ ಉಭಯಮಾರ್ಗ.
ಅದರಸುಪಿನ ಉಡುವ ಗಡಣವನರಿ,
ಸಗರದ ಬೊಮ್ಮನೊಡೆಯ ತನುಮನ ಸಂಗಮೇಶ್ವರಾ. ॥ ೧೯ ॥

೫೨೨

ಕಣ್ಣಿನ ಬಾವಿಯಲ್ಲಿ ಕಾಣದ ಕಣ್ಣಿಯ ಬಿಟ್ಟು,
ಮಹೀತಳವ ನೆಮ್ಮಿ ಪಾತಾಳಕ್ಕೆ ಬಿಡಲು,
ಆಕಾಶದುದಕ ಬಂದು ತುಂಬಿತ್ತು.
ಸಗರದ ಬೊಮ್ಮನೊಡೆಯ ತನುಮನ ಸಂಗವಾದಲ್ಲಿಯೆ
ಎನ್ನ ಪ್ರಾಣಲಿಂಗಕ್ಕೆ ಮಜ್ಜನವಾಯಿತ್ತು. ॥ ೨೦ ॥

೫೨೩

ಕಪ್ಪೆ ಕಚ್ಚಿ ಹಾವು ಸತ್ತಿತ್ತು.
ಹಾವಾಡಿಗ ಬಂದು ನೋಡಲಾಗಿ, ಆ ಹಾವಿದೆ.
ಹಾವು ಸತ್ತಿತ್ತು, ಇದೇನು ಗುಣವೆಂದೆ,
ಸಗರದ ಬೊಮ್ಮನೊಡೆಯ ತನುಮನ ಸಂಗಮೇಶ್ವರಾ. ॥ ೨೧ ॥

೫೨೪

ಕರಣಂಗಳ ಕಾಳಿಕೆಯಳಿದುದೆ ನಿರಂಜನದ ಬೆಳಗಯ್ಯಾ.
ಊರ್ಧ್ವಮಧ್ಯದಲ್ಲಿ ತಿರುಗಾಡುವ ಹಂಸನ ಶಂಕೆಯ ಹರಿದುದೆ,
ಅಖಂಡಿತದ ಕಡ್ಡಿವತ್ತಿಯ ತುದಿವೆಳಗಯ್ಯಾ.
ಓಂಕಾರವೆ ದಿವ್ಯಸಂಚಾರವಯ್ಯಾ.
ಶ್ರುತಿಸ್ಮೃತಿತತ್ವವೆ ಸಕಲನಾದಪೂಜೆಯಯ್ಯಾ.
ಎನ್ನ ಸಕಲೇಂದ್ರಿಯ ಭಾವಚ್ಛೇದನವೆ ನಿಮಗಾಲವಟ್ಟವಯ್ಯಾ.
ಎನ್ನ ಚಿತ್ತ ಸುಚಿತ್ತವಾದುದೆ ನಿಮಗೆ ಛತ್ರವಯ್ಯಾ.
ಪ್ರಕೃತಿ ಪ್ರಪಂಚುಭಾವ ತಲೆದೋರದೆ ಸೂಸದೆ,
ಘನ ಒಲೆದಾಡುವುದೆ ಚಾಮರವಯ್ಯಾ.
ನಿಮಗೆನ್ನ ಚತುಷ್ಟಯ ಭಾವಹಿಂಗಿ ನಿಬ್ಬೆರಗಾದುದೆ ಆಭರಣವಯ್ಯಾ.
ಒಬ್ಬುಳಿಯ ತನುಭಾವ ಕೂಡಿದುದೆ ಲಿಂಗಸುಖವಾಸದ ವಸ್ತ್ರವಯ್ಯಾ.
ಇಂತೀ ಪೂಜೆ, ಸಗರದ ಬೊಮ್ಮನೊಡೆಯ
ನೀ ನಾನೆಂಬುಭಯವನರಿದು ಮರೆದಲ್ಲಿಯೆ,
ಸದಮಲಾನಂದ ಪೂಜೆಯಯ್ಯಾ. ॥ ೨೨ ॥

೫೨೫

ಕರೆವ ಕಾಮಧೇನು ಒಂದು ಕರುವನೀದು, ಕರೆಯದೆ ಹೋಯಿತ್ತು.
ಆ ಕರು ಅರಿದು, ತನ್ನ ತಾಯನೀದು, ಕರುವಿಂಗೆ ತಾಯಿ ಕರುವಾಗಿ,
ಎಡೆಬಿಡುವಿಲ್ಲದೆ ಕರೆವುತ್ತಿದೆ.
ಹಾಲಿನ ಮಧುರ ತಲೆಗೇರಿ ಅಳಿಯಿತ್ತು,
ಸಗರದ ಬೊಮ್ಮನೊಡೆಯ ತನುಮನ ಸಂಗಮೇಶ್ವರಲಿಂಗವ
ವೇದಿಸಿದ ಕಾರಣ. ॥ ೨೩ ॥

೫೨೬

ಕಲ್ಪಿತವಿಲ್ಲದ ಭೂಮಿಯಲ್ಲಿ, ಅಕಲ್ಪಿತದ ಕಲ್ಲು ಹುಟ್ಟಿತ್ತು.
ಕಲ್ಲಿನ ಹೊರೆಯಲ್ಲಿ ಮೂರು ಬೆಲ್ಲ ಹುಟ್ಟಿತ್ತು.
ಬೆಲ್ಲವ ಮೆದ್ದವರಲ್ಲಿಯೇ ಕಲ್ಲು ಮೆದ್ದವರು,
ಸಗರದ ಬೊಮ್ಮನೊಡೆಯ ತನುಮನ ಸಂಗಮೇಶ್ವರಲಿಂಗದಲ್ಲಿಗೆ. ॥ ೨೪ ॥

೫೨೭

ಕಾಡುಗುರಿ ಈಯಿತ್ತೊಂದು ಮೂದೇವರ ಮುಲ್ಲನ ಮರಿಯ.
ಅದಕ್ಕೆ ಮೋಹಿಲ್ಲ, ಹಾಲನೊಲ್ಲದು.
ಅದು ಬಾಲೆಯರ ಬಣ್ಣದ ಲೋಲಮರಿ.
ಸಾಲುಗಾಲಿನಲ್ಲಿ ಪರಿದಾಡುತ್ತಿದೆ,

ಸಗರದ ಬೊಮ್ಮನೊಡೆಯ ತನುಮನ ಸಂಗಮೇಶ್ವರಲಿಂಗವು,
ಒಲಿದು ಒಲ್ಲದ ಕಾರಣ. || ೨೫ ||

೫೨೮

ಕಾಯಕ್ಕೆ ಲಿಂಗವ ಕಟ್ಟುವಾಗ, ಆ ಕಾಯವ ಬಾಧೆಗೆ ಹೊರಗುಮಾಡಬೇಕು.
ಮನಕ್ಕೆ ಅರಿವ ಪೇಳುವಾಗ, ಕರಣಂಗಳ ಮರಣವ ಮಾಡಬೇಕು.
ಇದು ಕಾರಣ, ಅಂಗಕ್ಕೆ ಕ್ರೀ, ಮನಕ್ಕೆ ಮರವೆಯಿಲ್ಲದೆ ಕೂಡಲಾಗಿ,
ಸಂಗವಾಯಿತ್ತು, ಸಗರದ ಬೊಮ್ಮನೊಡೆಯ ತನುಮನ
ಸಂಗಮೇಶ್ವರಾ. || ೨೬ ||

೫೨೯

ಕಾಯಗುಣದಲ್ಲಿದ್ದು ಕರಣಂಗಳಂತಾಡದಿದ್ದಡೆ, ಕಾಯದ ಸಂಗವೇ ಲೇಸು,
ಇಂದ್ರಿಯಂಗಳ ಸಂಸರ್ಗದಲ್ಲಿದ್ದು ಮುಟ್ಟುವ ಸಂಗವ ಬಲ್ಲಡೆ,
ಇಂದ್ರಿಯಂಗಳ ಸಂಗವೇ ಲೇಸು.
ಅವಗುಣದಲ್ಲಿದ್ದು ಅರತು, ತನ್ನಯ ಸಾವರಿತಡೆ, ಸಾವಯುವ ಲೇಸು,
ಸಗರದ ಬೊಮ್ಮನೊಡೆಯ
ತನುಮನ ಸಂಗಮೇಶ್ವರಲಿಂಗವು ಕೂಡಿ ಕೂಟವಾದ ಮತ್ತೆ || ೨೭ ||

೫೩೦

ಕಾಯದ ಕಾನನದಲ್ಲಿ ಭಾವದ ನವಿಲು ನಲಿದಾಡುತ್ತಿರೆ,
ಒಂದು ಹಾವಿನ ಮರಿ ಬಂದು ಹಾಯಿತ್ತು,
ನವಿಲಂಜಿ ಹೋಗುತ್ತಿರಲಾಗಿ, ಹಾವಿನ ಮರಿಯ ನವಿಲಗರಿ ನುಂಗಿತ್ತು
ಸಗರದ ಬೊಮ್ಮನೊಡೆಯ ತನುಮನ ಸಂಗಮೇಶ್ವರಲಿಂಗವು,
ಚೋದ್ಯವಾದ ಕಾರಣ. || ೨೮ ||

೫೩೧

ಕಾಯದ ಮೇಲಿಹ ಲಿಂಗ ಕೈಬಿಡುವನ್ನಕ್ಕ ಕೈಗೆ ಭಿನ್ನ.
ವಸ್ತ್ರವ ಬಿಟ್ಟು ನೋಡಿ ಕಾಬನ್ನಕ್ಕ ಕಂಗಳಿಗೆ ಭಿನ್ನ.
ಕಂಗಳು ಕಂಡು ಮನದಲ್ಲಿ ಬೇಧಿಸುವನ್ನಕ್ಕ ರೂಪಿಂಗೆ ಭಿನ್ನ.
ಉಭಯಗುಣವಳಿದು, ಎರಡರ ಅಭಿಸಂದಿಯ ಕಾಣಿಕೆ ಹಿಂಗಿ,
ನಿಜವ ತಾಳಿಸಿಕೊಂಬುದು.
ತಾನಾಗಿ ಕಂಡಲ್ಲಿಯೆ ಇದಿರಿಡುವುದು, ನಾಮನಷ್ಟ.
ಸಗರದ ಬೊಮ್ಮನೊಡೆಯ ತನುಮನ ಸಂಗಮೇಶ್ವರಲಿಂಗವು
ತಾನು ತಾನೆ. || ೨೯ ||

೫೩೨

ಕಾಯದೊಳಗಣ ಕೂಟವ ಬಿಟ್ಟು, ಕಣ್ಣಿನೊಳಗಣ ನೋಟವ ಬಿಟ್ಟು,
ಮನದೊಳಗಣ ಜಗದಾಟವ ಬಿಟ್ಟು,
ಏತರಲ್ಲಿದ್ದೂ ಕಲೆದೋರದೆ, ಕಂಜಪತ್ರದ ಅಂಬುವಿನಂತೆ,
ಸಗರದ ಬೊಮ್ಮನೊಡೆಯ ತನುಮನ ಸಂಗಮೇಶ್ವರನು. ॥ ೩೦ ॥

೫೩೩

ಕಾರುಕನ ಹೃದಯದ ಕಪಟ, ಕಣೆಲೆಂದು ಕೈಯ ಕಲ್ಲು,
ತನು ಕಟ್ಟಳೆಹೀನನ ಹೊಗುತೆ, ಸ್ವೈರಣೆಯವಳೊಳುಪಿನ ಮಾತು,
ಇವು ಸಾರದ ಪ್ರಸ್ಥದಂತೆ,
ವೇಷಡಂಬಕನ ಚಾತುರಿಯದ ಗೀತ[ದಂತೆ].
ಇಂತೀ ಘಾತುಕತನದ ವೇಷವ ಬಿಟ್ಟು, ನುಡಿ ನಡೆ ಸಿದ್ಧಾಂತವಾಗಬೇಕು.
ಸಗರದ ಬೊಮ್ಮನೊಡೆಯ ಇವರಿಗೆ ಸದರವೆ ಹರಿ,
ಕುಟಿಲ ಬಿಟ್ಟು ಅರಿ, ತನುಮನ ಸಂಗಮೇಶ್ವರಲಿಂಗವ. ॥ ೩೧ ॥

೫೩೪

ಕಾಲಕಣ್ಣಿನಲ್ಲಿ ಒಬ್ಬ ಬಾಲೆ ಹುಟ್ಟಿದಳು.
ಆ ಬಾಲೆಗೆ ಮೊಲೆ ಒಂದೆ, ಉಂಬ ಮಕ್ಕಳು ಐವರು.
ಅವಳ ಗಂಡ ಶಿಖಂಡಿ, ಮಕ್ಕಳು ಹುಟ್ಟಿದ ಭೇದವ ಹೇಳಾ.
ಮಕ್ಕಳು ಅಪ್ಪಾ ಎಂಬುವುದಕ್ಕೆ ಮೊದಲೆ ಸತ್ತ, ಹೆತ್ತ ತಂದೆ.
ಅವನ ಹೆಂಡತಿ ಅವನೊಂದಾಗಿ ಹೊಂದಲೊಲ್ಲದೆ, ಮಿಂಡನೊಂದಿಗೆ ಹೊಂದಿದ,
ಸಗರದ ಬೊಮ್ಮನೊಡೆಯ ತನುಮನ ಸಂಗಮೇಶ್ವರಾ. ॥ ೩೨ ॥

೫೩೫

ಕಾಲಾಂಧರ ಸಂಹಾರಕ್ಕೆ ಮೊದಲೇ ಲೀಲೆ.
ಉಮಾಪತಿಗೆ ಮೊದಲೆ ನಾ ನೀನೆಂಬುದಕ್ಕೆ ನೀ ಕುರುಹಾಗಿ.
ನಾನರಿವುದಕ್ಕೆ ಮೊದಲೆ ನಿನ್ನಿರವಾವುದು ಹೇಳು,
ಸಗರದ ಬೊಮ್ಮನೊಡೆಯ ತನುಮನ ಸಂಗಮೇಶ್ವರಾ ? ॥ ೩೩ ॥

೫೩೬

ಖಂಡಿತ ಖಾಂಡದಲ್ಲಿ ಮೂರು ಮುಖದ ಹಾರುವ ಮಂಡಲ ಹುಟ್ಟಿತ್ತು,
ಅದು ಗಾರುಡಕ್ಕಸಾಧ್ಯ,
ಮಂತ್ರದ ಮನವ ಕೇಳುವುದಕ್ಕೆ ಕರ್ಣದ್ವಾರವಿಲ್ಲ.
ಅದಕ್ಕೆ ಮಂತ್ರಮನೋನಾದಮಂಡಲವೆಂದಡೆ,
ಇಳಿಯಿತ್ತು, ವಿಷ ಹಾರಿತ್ತು,
ಮಂಡಲವ ಮಂತ್ರಿಸುವಣ್ಣ ಹಿಂಡಿ ಬಿಂಡಿ ಬಿರಿದ.

ಸಗರದ ಬೊಮ್ಮನೊಡೆಯ
ತನುಮನ ಸಂಗಮೇಶ್ವರಲಿಂಗದ ಸಂಗದಲ್ಲಿ. || ೩೪ ||

೫೩೭

ಗುರಿ ಒಂದಕ್ಕೆ ಧನು ಮೂರು, ಸರ ಹದಿನಾರು.
ಒಂದೆ ಬಿಡುಮುಡಿಯಲ್ಲಿ ಎಸಲಿಕ್ಕೆ,
ಗುರಿತಪ್ಪಿ ಎಚ್ಚವನಂಗ ಬಟ್ಟಬಯಲಾಯಿತ್ತು,
ಅದು ತಪ್ಪಿಹೋದ ಕಾರಣ,
ಸಗರದ ಬೊಮ್ಮನೊಡೆಯ ತನುಮನ ಸಂಗಮೇಶ್ವರಲಿಂಗವೆ ಗುರಿ,
ಅರಿವ ಮನ ಸರವಾದ ಕಾರಣ. || ೩೫ ||

೫೩೮

ಗೆಲ್ಲ ಸೋಲಬಲ್ಲವರಿಗೇಕೆ ? ಅದು ಬೆಳ್ಳರ ಗುಣ.
ಪಥವೆಲ್ಲರಲ್ಲಿ ನಿಹಿತನಾಗಿ, ಅತಿಶಯದ ವಿಷಯದಲ್ಲಿ ಗತನಾಗದೆ,
ಸರ್ವವನರಿತು, ಗತಮಯಕ್ಕೆ ಅತೀತನಾಗು,
ಸಗರದ ಬೊಮ್ಮನೊಡೆಯ ತನುಮನ ಸಂಗಮೇಶ್ವರಾ. || ೩೬ ||

೫೩೯

ಗೋಡೆಯ ಮರೆಯಲ್ಲಿ ನಿಂದು, ಕಾದುವರಿಗೇನು ಭೀತಿ ?
ಅದೆ ನೆಲೆಯಿದ್ದಂತೆ ಸೋಟದ ಬರುಬರಿಗೇನು ಭೀತಿ ?
ಎನ್ನ ಸುಖದುಃಖಕ್ಕೆ ಮುಯ್ಯಾಂತು,
ನೀ ಮುಂಚು, ನಾ ಹಿಂಚಾಗಿಯಿದ್ದ ಮತ್ತೆ
ಎನಗೆ ಬಂದ ಉಬ್ಬಸವಾವುದು ?
ಆಳಿನಪಮಾನ ಆಳ್ದಂಗೆ ಆದಂತೆ
ಸಗರದ ಬೊಮ್ಮನೊಡೆಯ ತನುಮನ ಸಂಗಮೇಶ್ವರಾ,
ನೀನಿರ್ದಂತೆ ಎನಗಾವ ಭೀತಿ ? || ೩೭ ||

೫೪೦

ಗೋವ ಕುದುರೆಯ ಕಾಣದೆ,
ಗೊಲ್ಲ ಕುರಿಯ ಕಾಣದೆ, ಗೋವಳ ಗೋವ ಕಾಣದೆ,
ಗೊಲ್ಲನ ಕೇಳೆ, ಗೊಲ್ಲ ಗೋವನ ಕೇಳೆಂದು ಬೆಸಸೆ,
ಕುರಿ, ಕುದುರೆ, ಗೋವು ತಮ್ಮಡಿಯಲ್ಲಿ ನಿಂದುವೆಂದು ಹೇಳೆ,
ಚೋದ್ಯವಾಯಿತ್ತೆಂದು ಅಡಗಿದ.
ಸಗರದ ಬೊಮ್ಮನೊಡೆಯ ತನುವಿನ ಮಧ್ಯದಲ್ಲಿ
ನಿಸ್ಸಂಗ ಸಂಗಮೇಶ್ವರನಾದ. || ೩೮ ||

೫೪೧

ಘಟವೃಕ್ಷದ ಕುಕ್ಷಿಯಲ್ಲಿ ಮೂರುಸರ್ಪನ ಹೇಳಿಗೆ.
ಸರ್ಪ ಸತ್ತು ಹೇಳಿಗೆಯ ಮುಳ್ಳು ತೆಗೆಯಬಾರದು.
ಆ ಖಂಡಿಯಲ್ಲಿ ಖಂಡಿಸಿ ಹೊಯಿತ್ತು, ಸರ್ಪನ ಶುಕ್ಲ ಶ್ರೋಣಿತ.
ಹೇಳಿಗೆಯ ಒಪ್ಪವಿನ್ನಿಲ್ಲ,
ಸಗರದ ಬೊಮ್ಮನೊಡೆಯ ತನುಮನ ಸಂಗಮೇಶ್ವರಾ. || ೩೯ ||

೫೪೨

ಚತುರ್ವಿಧಫಲಪದಂಗಳಲ್ಲಿ ಹೊಣೆಯ ಹೊಗದೆ,
ಸುಖದುಃಖ ಆತುರಂಗಳಲ್ಲಿ ಭೇದಿಸಿಕೊಳ್ಳದೆ,
ಸಕಲಯುಕ್ತಿಸಂಪೂರ್ಣದವವಾಗಿ ನಿರ್ಭಾವದಲ್ಲಿರು,
ಸಗರದ ಬೊಮ್ಮನೊಡೆಯ ತನುಮನ ಸಂಗಮೇಶ್ವರಾ. || ೪೦ ||

೫೪೩

ಚಿತ್ತು ಘಟವ ಹೊತ್ತು ಇಹಾಗ, ನಿತ್ಯಾನಿತ್ಯವನರಿದುದಿಲ್ಲ,
ಸತ್ವ ರಜ ತಮವ ಹೊತ್ತಾಡುವಲ್ಲಿ, ಭವಲೇಪ ನಿಶ್ಚಯವನರಿಯಬೇಕು,
ಸಗರದ ಬೊಮ್ಮನೊಡೆಯ ತನುಮನ ಸಂಗಮೇಶ್ವರಾ. || ೪೧ ||

೫೪೪

ಜಂಬೂದ್ವೀಪದಲ್ಲಿ ಹುಟ್ಟಿದವೈದು ಒಂಟೆ.
ಒಂಟೆಯ ಕೊರಳೊಳಗೆ ಘಂಟೆಗೆ ನಾದವಿಲ್ಲ,
ಆ ಘಂಟೆಯ ಒಳಗಣ ನಾಲಗೆ ನಾಶವಾದ ಕಾರಣ.
ಆ ಒಂಟೆಯ, ಘಂಟೆಯ, ಆ ಜಂಬೂದ್ವೀಪವ
ಒಂದು ಗಿಳಿಯ ಕಂಟಕ ನುಂಗಿತ್ತು,
ಸಗರದ ಬೊಮ್ಮನೊಡೆಯ ತನುಮನ ಸಂಗಮೇಶ್ವರಾ. || ೪೨ ||

೫೪೫

ಜೀವವಳಿದು ಪರಮನಾಗಬೇಕೆಂಬರು:
ಜೀವವೆಲ್ಲಿ ಅಳಿವುದು ? ಪರಮನೆಲ್ಲಿ ಅಹುದು ?
ಅಳಿವುದು ಬೇರೊಂದು.
ಈ ಉಭಯದ ಅಳಿವ ಉಳಿವ ಮನೆಯ ಹೇಳಾ,
ಸಗರದ ಬೊಮ್ಮನೊಡೆಯ ತನುಮನ ಸಂಗಮೇಶ್ವರಾ. || ೪೩ ||

೫೪೬

ತನು ನಷ್ಟವಾದಲ್ಲಿ, ಉಸುರಿಗೆ ಒಡಲಿಲ್ಲ,
ಮನ ನಷ್ಟವಾದಲ್ಲಿ, ಅರಿವಿಂಗೆ ತೆರಪಿಲ್ಲ,

ಅರಿವು ನಷ್ಟವಾದಲ್ಲಿ, ಉಭಯವ ಭೇದಿಸುವದಕ್ಕೆ ಅಪ್ರಮಾಣು.
ರೂಪು ರುಚಿ ದೃಷ್ಟವಾಗಬೇಕು,
ಸಗರದ ಬೊಮ್ಮನೊಡೆಯ ತನುಮನ ಸಂಗಮೇಶ್ವರಾ ? || ೪೪ ||

೫೪೭

ತನುವಿನ ಒಳಗಣ ಕಣ್ಣಿನಲ್ಲಿ ನೋಡುವನಾರೊ ?
ನಾನೆಂಬಲ್ಲಿ ಅದೇನು ಹೇಳು,
ಸಗರದ ಬೊಮ್ಮನೊಡೆಯ ತನುಮನ ಸಂಗಮೇಶ್ವರಾ ? || ೪೫ ||

೫೪೮

ತನುವಿನ ಮಹಾಮನೆಯಲ್ಲಿ ಮಾಡುವ ಮಾಟ,
ಘನಕ್ಕೆ ಘನವೆಂದು ಎದ್ದಿದ್ದಿತ್ತು ಉಪ್ಪರಗುಡಿ
ಲೀಲೋಲ್ಲಾಸವೆಂಬ ಕಳೆ ನೆಟ್ಟಿತ್ತು, ಭವವಿರಹಿತನೆಂಬ ಗುಡಿಗಟ್ಟಿತ್ತು,
ಮಾಡುವ ದಾಸೋಹಕ್ಕೆ ಕೇಡಿಲ್ಲಾ ಎಂದು.
ಕಾಯ ಸವೆದು ಮನಮುಟ್ಟಿ, ಭಾವನಿಶ್ಚಯವಾಗಿ ಮಾಟಕೂಟಸಂದಿತ್ತು,
ಮಹಾಮನೆ ಮಹವನೊಡಗೂಡಿತ್ತು,
ಕಾಯದ ಕಣೆ ಹಿಂಗಿತ್ತು, ಭಾವಗೂಡಿ ಅಳಿಯಿತ್ತು
ಸಗರದ ಬೊಮ್ಮನೊಡೆಯ
ತನುಮನ ಸಂಗಮೇಶ್ವರಲಿಂಗವು ತಾನಾದಲ್ಲಿ, || ೪೬ ||

೫೪೯

ತನುವಿನೊಳಗಣ ತನುವಿನಲ್ಲಿ ಕೂಡಿದವನಾರೊ ?
ಮನದೊಳಗಣ ನೆನಹಿನಲ್ಲಿ ನೆನೆಹಿಸಿಕೊಂಬವನಾರೊ ?
ಬಾಯೊಳಗಣ ಬಾಯಲ್ಲಿ ಉಂಬವನಾರೊ ?
ಕಣ್ಣಿನೊಳಗಣ ಕಣ್ಣಿನಲ್ಲಿ ನೋಡುವನಾರೊ ?
ನಾ ನೀನೆಂಬಲ್ಲಿ ಅದೇನು ಹೇಳಾ,
ಸಗರದ ಬೊಮ್ಮನೊಡೆಯ ತನುಮನ ಸಂಗಮೇಶ್ವರಾ. || ೪೭ ||

೫೫೦

ತನು ಹೇಳಿಗೆ, ಮನ ಸರ್ಪನಾಗಿ,
ತನ್ನಯ ವಿಲಾಸಿತದಿಂದ ಹೆಡೆಯೆತ್ತಿ ಆಡುತ್ತಿರಲಾಗಿ,
ನಾನಾರೂಪು ತೋ[ರುವ] ಆಕಾಶದ ಮಧ್ಯದಲ್ಲಿ,
ಉಭಯನಷ್ಟವಾದ ಚಿದ್ಘನರೂಪಿನ ಹದ್ದು ಬಂದು,
ಹೊಯ್ದಿತ್ತು ಸರ್ಪನ.
ಆ ಸರ್ಪ ಹದ್ದಿನ ಕೊರಳ ಸುತ್ತಿ
ಬಾಯ ಬಿಟ್ಟು ಕಚ್ಚದಂತೆ ಹೆಡೆಯೊಳು ಮುಚ್ಚಿ, ಹದ್ದೆದ್ದಾಡದಂತಿರಲು,

ಆ ಬುದ್ಧಿಯ ನೆನೆದು ಒದ್ದು, ತನ್ನ ಸಖದ ಉಗುರಿನಲ್ಲಿ ಹೆಡೆ ಉಡುಗಿ,
ಹಾವಿನ ತೆಕ್ಕೆ ಬಿಟ್ಟು ಹದ್ದೆದ್ದಿತ್ತು ಮಹದಾಕಾಶಕ್ಕೆ,
ಸಗರದ ಬೊಮ್ಮನೊಡೆಯ ತನುಮನ ಸಂಗಮೇಶ್ವರಲಿಂಗದಲ್ಲಿ. ॥ ೪೮ ॥

೫೫೧

ದಧಿಯ ಕಡೆವಾಕೆಯ ತುದಿಗಂಡವ ಕೊಯಿದು,
ಮಂತಿನ ಅಂಡಿನಲ್ಲಿ ಒಸರಿ ದಧಿ ಧರೆಗೆ ಇಳಿದು,
ಅಂಡಿನವ್ವೆಯ ಹಂಗ ಬಿಟ್ಟು ಮಂತು ಮರಣವಾಯಿತ್ತು,
ಸಗರದ ಬೊಮ್ಮನೊಡೆಯ ತನುಮನ ಸಂಗಮೇಶ್ವರಲಿಂಗವು
ಹುಟ್ಟಿದ ಬಟ್ಟೆಯ ಮೆಟ್ಟದ ಕಾರಣ. ॥ ೪೯ ॥

೫೫೨

ಧ್ಯಾನ ಧಾರಣ ಸಮಾಧಿಯೆಂಬೀ ಮೂರು, ಕರ್ಮಕಾಂಡ.
ಚಿಚ್ಛಕ್ತಿ ಚಿದ್ಘನ ಸುಶಕ್ತಿ ಚಿದಾದಿತ್ಯಸಂಪದ ತ್ರಿವಿಧಭೇದ, ಜ್ಞಾನಕಾಂಡ.
ಇಂತೀ ಭಾವ, ನಿಜವ ನೆಮ್ಮಿ ಕುರುಹುದೋರದೆ,
ಭಾವ ನಿರ್ಭಾವವಾಗಿ ನಿಂದುದು ಪ್ರಾಣಲಿಂಗಸಂಬಂಧ,
ಸಗರದ ಬೊಮ್ಮನೊಡೆಯ ತನುಮನ ಸಂಗಮೇಶ್ವರಾ. ॥ ೫೦ ॥

೫೫೩

ನಾನಾಕೋಶವಾಸ ಕಳಾಧರ ಸಮುಖಂಡನ ದಿಗ್ವಳಯ ರಣಭೂಮಿಯಲ್ಲಿ
ಒಂದು ಅರಿದ ತಲೆ ಬಂದಿತ್ತು.
ಪಂಚಾಶತ್ಕೋಟಿ ವಿಸ್ತೀರ್ಣದವರಿಗೆ ಮುಂಡವಿಲ್ಲದೆ ಬಂದೆನೆಂದು ಹೇಳುತ್ತಿದೆ.
ಮುಂಡ ತಲೆಯೊಳಡಗಿ, ತಲೆ ಮುಂಡವೆರಡೂ ಒಂದೆಲೆಯೊಳಗಡಗಿತ್ತು.
ಆ ಎಲೆಗೆ ತೊಟ್ಟು, ಮೊನೆ ನಾರಿಲ್ಲಾ ಎಂದು,
ನಾ ಬಂದೆ ಹೊಂದಿದೆನೆಂದು ನಸುನಗುತ್ತಿದ್ದಿತ್ತು ತಲೆ !
ತಲೆಹದಲ್ಲಿ ಸಗರದ ಬೊಮ್ಮನೊಡೆಯ
ತನುಮನ ಸಂಗಮೇಶ್ವರಲಿಂಗದಲ್ಲಿ ಕುರುಹಿಲ್ಲದ ಶರಣಂಗೆ. ॥ ೫೧ ॥

೫೫೪

ಪರಮಜ್ಞಾನ ಪರತತ್ವ ಆ ಪರಶಿವಮೂರ್ತಿ ನೀನಾಗಿ,
ಸಕಲತಂತ್ರ ಸೂತ್ರ ಯಂತ್ರ ನೀನಾಗಿ,
ಶ್ರುವದ ಬೊಂಬೆ ಸಾಕಾರ ನಾನಾಗಿ, ನೀನಾಡಿಸಿದಂತೆ ನಾನಾಡುತ್ತಿದ್ದೆ.
ಸಂಜ್ಞೆಯನರಿದ ತಂಡಿನಂತೆ, ನಿವೇದಿಸಿದುದ ನಾ ಸಾಗಿಸಿದೆ.
ನೀ ಬೈಚಿಟ್ಟ ಬಯಕೆಯ ನಿನಗಿತ್ತೆ, ನೀ ಕಳುಹಿದ ಮಣಿಹ ನಿನಗೆ ಸಂದಿತ್ತು.
ಸಗರ ಸಾಕಾರದೊಡೆಯ ತನುಮನಘನದಲ್ಲಿ
ಸುಸಂಗ ಸಂಗನಿರಂಗ ಸಂಗಮೇಶ್ವರಲಿಂಗಾ, ಸಮರ್ಪಣ. ॥ ೫೨ ॥

೫೫೫

ಪಾತಾಳಲೋಕದಲ್ಲಿ ಪಾದವಿಲ್ಲದ ಪಕ್ಷಿ ಹುಟ್ಟಿತ್ತು.
ಅದು ಅನೇಕ ವರ್ಣ, ಬಹುಕೃತ ವೇಷ.
ರಟ್ಟೆಯಿಲ್ಲದೆ ಹಾರುವುದು, ಕೊಂಬಿನ ಮೇಲೆ ಇರದು.
ಆಕಾಶದಲ್ಲಿ ಆಡುವುದು, ಭೂವಳಯದಲ್ಲಿ ಬಳಸಿ ಬಪ್ಪುದು.
ವಿಹಂಗನ ಗುಣವಹುದು, ಪಕ್ಷಿಯ ಜಾತಿ ಗೋತ್ರವಲ್ಲ.
ಪಕ್ಷಿಯೆಂಬುದಕ್ಕೆ ಮೊದಲೇ ಹಾರಿ ಹೋಯಿತ್ತು.
ಎತ್ತಲೆಂದರಿಯೆ,
ಸಗರದ ಬೊಮ್ಮನೊಡೆಯ ತನುಮನ ಸಂಗಮೇಶ್ವರಾ. || ೫೩ ||

೫೫೬

ಪಾರದ್ವಾರವ ಮಾಡಬಂದವ ಅಬೆಯ ಗಂಡಗೆ ಕೂಪನೆ ?
ಅವಳು ತನ್ನ ಪತಿಗೆ ಓಪಳೆ ?
ಈ ಉಭಯದ ಮಾರ್ಗ ಅರಿವ ಅರಿವಿಂಗೆ,
ಹೇಸಿ ತಿಂಬ ಕರಣಕ್ಕೆ ಒಡಗೂಡಿದ ಸ್ನೇಹವುಂಟೆ ?
ಇದನರಿ, ಸಗರದ ಬೊಮ್ಮನೊಡೆಯ
ತನುಮನ ಸಂಗಮೇಶ್ವರಲಿಂಗವನರಿವುದಕ್ಕೆ. || ೫೪ ||

೫೫೭

ಪಿಂಡ ಬಲಿದು ಹುಟ್ಟಿದಲ್ಲಿ ಮೂರು ಸಂದಾಯಿತ್ತು.
ಆ ಮೂರು ಸಂದಿನೊಳಗೆ ಕೂಡಿದ ಕೀಲು ಕೂಟ.
ಅಂದು ಇಂದು ಎಂದೆಂದಿಂಗೆ ಬೆಂಬಳಿ ಬಿಡದು.
ಇದರ ಸಂಗವೇನಯ್ಯಾ ?
ಸಗರದ ಬೊಮ್ಮನೊಡೆಯ ತನುಮನದಲ್ಲಿ ಸುಸಂಗನಾಗಯ್ಯಾ. || ೫೫ ||

೫೫೮

ಪೂಜೆ ಪುಣ್ಯದೊದಗೆಂದು ಮಾಡುತ್ತಿದ್ದಲ್ಲಿ, ಮತ್ತಿನ್ನಾರುವ ಕೇಳಲೇಕೆ ?
ಇಕ್ಕಿ ಕೊಟ್ಟು ಮುಕ್ತಿಯ ಬಟ್ಟೆಯುಂಟೆಂದು ಇನ್ನೊಬ್ಬರ ದೃಷ್ಟವ ಕೇಳಲೇಕೆ ?
ಇಹಪರದವನಲ್ಲಾ ಎಂದು, ತತ್ವಕ್ಕೆ ನಾ ಕರ್ತನೆಂದು
ಮತ್ತೊಬ್ಬರ ಬಾಗಿಲ ಕಾಯಲೇಕೆ ?
ಬಿದ್ದಿತ್ತು ಬೆಲ್ಲ ಅಶುದ್ಧದೊಳಗೆ, ಬುದ್ಧಿ ಇನ್ನಾವುದು,
ಸಗರದ ಬೊಮ್ಮನೊಡೆಯ ತನುಮನ ಸಂಗಮೇಶ್ವರಾ ? || ೫೬ ||

೫೫೯

ಬಂಗಾರವನೊರೆದು ಬಣ್ಣವ ಕಾಣಬೇಕಲ್ಲದೆ,
ಬಣ್ಣವನೊರೆದು ಬಂಗಾರದ ಇರವನರಿಯಬಹುದೆ ?

ಜೀವವರಿದು ಜ್ಞಾನವ ಕಾಣಬೇಕಲ್ಲದೆ ಜೀವವಳಿದು ಜ್ಞಾನಕ್ಕೆ ಉಳಿವುಂಟೆ ?
ಅದು ಜ್ಯೋತಿಯ ಮೇಲಣ ತಮವದೆ,
ಕೆಳಗೆ ಬೆಳಗು, ತುದಿಯಲ್ಲಿ ಸಮವದೆ ತಿಳಿದು ನೋಡಿ.
ಆ ಪರಿಯ ಇರವು ಜೀವಪರಮನ ಕಲೆ,
ಸಗರದ ಬೊಮ್ಮನೊಡೆಯ ತನುಮನ ಸಂಗಮೇಶ್ವರಲಿಂಗಾ. || ೫೭ ||

೫೬೦

ಬಂದೆ ಗುಡಿಯ ಹೊತ್ತು, ಡೊಂಬರ ಹಿಂದೆ ಹೋದೆ ಸುತ್ತಿ
ಸೂಳೆಯ ಮಚ್ಚಿ ನಾಣುಗೆಟ್ಟೆ.
ಕಾಯವೆಂಬ ಗುಡಿ, ಮೋಹವೆಂಬ ಸೂಳೆ.
ಅರಿವ ಮನ ಅರಿಯದೆ ಡೊಂಬರಾಟವೆಂಬ ಬಂಧದಲ್ಲಿ ಹೊಕ್ಕು ನೊಂದೆ.
ಸಗರದ ಬೊಮ್ಮನೊಡೆಯ ತನುಮನ ಸಂಗಮೇಶ್ವರಲಿಂಗವೆ,
ನಿನ್ನೊಂದಾಗಿ ಕೊಂಡಾಡಲಂಜುವೆ. || ೫೮ ||

೫೬೧

ಬಚ್ಚಣೆಯ ಬೊಂಬೆ ನೀರಾಗಲಾಗಿ, ನಿಶ್ಚಯಿಸಿಕೊಳ್ಳಬಲ್ಲದೆ ?
ಉಚ್ಚೆಯ ಬಚ್ಚಲ, ಕೊಚ್ಚೆಯ ತಾವು, ಪೂಜಿಸುವ ನಿಶ್ಚಯರಿಗೆ,
ಮರೆಮಾಡುವ ಮೆಚ್ಚುನುಂಗಿಗೇಕೆ ನಿಶ್ಚಯದ ಅರಿವು,
ಸಗರದ ಬೊಮ್ಮನೊಡೆಯ ತನುಮನ ಸಂಗಮೇಶ್ವರಾ ? || ೫೯ ||

೫೬೨

ಬಾಳೆಗೆ ಮುಳ್ಳು ಹುಟ್ಟಿ, ಕಿತ್ತಳೆ ಹಲಸಾಗಿ,
ಹಲಸಿನ ಹಣ್ಣು ಹೊಲಸು ಹುಟ್ಟಿತ್ತು
ಬಿತ್ತು ಕಹಿಯಾಯಿತ್ತು, ಉಳಿದ ಹಾರೆ ಸವಿಯಾಯಿತ್ತು
ಸಗರದ ಬೊಮ್ಮನೊಡೆಯ ತನುಮನ ಸಂಗಮೇಶ್ವರಾ. || ೬೦ ||

೫೬೩

ಬೆಂಕಿಗೆ ಚಳಿ ಬಂದು, ಉದಕವ ಕಾಯಲಾಗಿ, ಹಿಮಹಿಂಗಿ ಜ್ವರ ಬಂದಿತ್ತು
ಜ್ವರದ ತಾಪಕಾರದೆ ಅರುಹಿರಿಯರೆಲ್ಲರು ಮಡಿದರು.
ಅಜ ಕುಡಿಕೆಯ ನೀರಿನಲ್ಲಿ, ಆ ಕುಡಿಕೆಯ ಒಡೆಯದೆ ಒಡೆದು,
ಹಿಮ್ಮಡಿಯಲ್ಲಿ ಒಡನೋಡಿ, ಸಗರದ ಬೊಮ್ಮನೊಡೆಯ
ತನುಮನ ಸಂಗಮೇಶ್ವರಲಿಂಗವನರಿಯಬಲ್ಲಡೆ. || ೬೧ ||

೫೬೪

ಭಾನುವಿನ ಅಂಗಮಧ್ಯದಲ್ಲಿ ಒಂದು ಏಣಿ.
ಏಣಿಗೆ ಮೂರು ಕಾವು, ಮೆಟ್ಟಿ ಹತ್ತುವುದಕ್ಕೆ ಮೆಟ್ಟು ಎಂಬತ್ತುನಾಲ್ಕುಲಕ್ಷ.

ಅದ ತಾಳಲಾರದೆ ಏಣಿ ಜಾರಿತ್ತು, ಕಾವು ಮುರಿಯಿತ್ತು,
ಹಲ್ಲು ಎಲ್ಲಿಗೆ ಹೋದವೆಂದು ಕಾಣಬಾರದು,
ಸಗರದ ಬೊಮ್ಮನೊಡೆಯ
ತನುಮನ ಸಂಗವಾಗಿ ಕುರುಹಡಗಿದ ಕಾರಣ. || ೬೨ ||

೫೬೫

ಭಾವಸಮುದ್ರದಲ್ಲಿ ಮನಮನೋಹರವೆಂಬ ಮಕರ ತಿರುಗಾಡುತ್ತಿರಲು,
ತಾನಿದ್ದುದು ಒಂದೆ, ತನಗೆ ಆಹಾರವಿಲ್ಲ.
ತನ್ನ ವಂಶವ ಭಕ್ಷಿಸುವುದಕ್ಕೆ ಪ್ರತಿರೂಪಿಲ್ಲ.
ಅದು ಗಾಣಕ್ಕೆ, ಘಟದ ಬಲೆಗೆ ಗೋಚರವಲ್ಲ.
ಸಾಕಾರದ ಕೂಳಿಗೆ ಸಿಕ್ಕದು. ಅದು ಹಿಡಿವ ಪುಳಿಂದ ನೀನೆ,
ಸಗರದ ಬೊಮ್ಮನೊಡೆಯ ತನುಮನ ಸಂಗಮೇಶ್ವರಾ. || ೬೩ ||

೫೬೬

ಭೂಮಿಯಿಲ್ಲದ ಧರೆಯಲ್ಲಿ ಒಂದು ಮಹಾಮೇರುವೆಯ ಬೆಟ್ಟ ಹುಟ್ಟಿತ್ತು.
ಅದರ ತಳ ಒಂದಂಡ, ಮೇಲೆ ಮೂರಂಡ
ಮೂರರ ಮೇಲೆ ಹಾರಿಬಂದಿತ್ತು ಕಾಗೆ.
ಬಂದ ಕಾಗೆ ತುದಿಯಲ್ಲಿ ಅಂತರಿಸಲಾಗಿ, ಮೇರುವೆ ಕುಸಿಯಿತ್ತು,
ಕೆಳಗಣ ಅಂಡ ನಿಂದು, ಮೇಲಣ ಮೇರುವೆ ಒಡೆಯಿತ್ತು
ಮೂರಂಡವನೊಡಗೂಡಿದ ಕಾಗೆ ಹಾರಿತ್ತು,
ಬೆಟ್ಟ ಬಟ್ಟಬಯಲು ಬೊಮ್ಮನೊಡೆಯ
ತನುಮನ ಸಂಗಮೇಶ್ವರಲ್ಲಿ ಒಡಗೂಡಿದವಂಗೆ. || ೬೪ ||

೫೬೭

ಮಗ ತಂದೆಯ ಕೊಂದು, ತಮ್ಮವ್ವೆಗೆ ಮೊಲೆನೀರ ಮಿಂದ.
ತಾಯ ಶಿಶು ತಿಂದು, ಅವ್ವೆಯ ಮೊಲೆಯನರಸಿ ಅಳುತ್ತಿದ್ದಿತ್ತು,
ಶಿಶುವಿನ ಹೊಟ್ಟೆಯಲ್ಲಿದ್ದ ಶಿಶು ತಾಯ ಬೆಸೆಯಿತ್ತು,
ಸಗರದ ಬೊಮ್ಮನೊಡೆಯ ತನುಮನ ಸಂಗಮೇಶ್ವರಲಿಂಗವನರಿತಲ್ಲಿ || ೬೫ ||

೫೬೮

ಮನ ಮಲೆಯ ಮಂದಿರದಲ್ಲಿ, ಹೊಲಬಿನ ಹಾದಿಯ ತಪ್ಪಿದರೆಲ್ಲರು.
ಕಾಯವೆಂಬ ಪಟ್ಟಣ ಜೀವಸುಪಾಯವೆಂಬ ಪಥ.
ಪಯಣದಲ್ಲಿ ಹೊಲಬುದಪ್ಪಿ,
ವಿಷಯವೆಂಬ ಗಹನದಲ್ಲಿ ಬಳಸಿ ಆಡುತ್ತಿದ್ದಾರೆ.
ಎನಗಿನ್ನು ಅಸುವಿನ ಪಥವ ಹೇಳು,
ಸಗರದ ಬೊಮ್ಮನೊಡೆಯ ತನುಮನ ಸಂಗಮೇಶ್ವರಾ. || ೬೬ ||

೫೭೯

ಮನವೆಂಬ ವಿಧಾಂತನು ಕಾಯವೆಂಬ ಕಣೆಯ ನೆಟ್ಟು,
ನಾನಾ ಬಹುವಿಷಯಂಗಳೆಂಬ ಸುತ್ತ ನೇಣ ಕಟ್ಟಿ,
ನೋಡುವ ಕರಣಂಗಳು ಮೆಚ್ಚುವಂತೆ
ಕಾಮದ ಕತ್ತಿಯ ತಪ್ಪಿ, ಕ್ರೋಧದ ಇಟ್ಟೆಯ ತಪ್ಪಿ,
ಮೋಹದ ಕಠಾರಿಯ ತಪ್ಪಿ, ಮೆಟ್ಟಿದ ಮಿಳಿಗೆ ತಪ್ಪದೆ ಲೆಂಗಿಸಿ,
ಸುತ್ತಣ ಕೈದ ತಪ್ಪಿಸಿ, ಚಿತ್ತ ಅವಧಾನವೆಂದು ಹಾಯ್ದುಳಿದು,
ಮನವೆಂಬ ವಿಧಾಂತನಾಡಿ, ಗೆದ್ದ ಜಗಲೋಲ ಡೊಂಬರ.
ಸಗರದ ಬೊಮ್ಮನೊಡೆಯ
ತನುಮನ ಸಂಗಮೇಶ್ವರಲಿಂಗದ ಬಹುವಿಷಯ ಹಿಂಗಿದ ಕೂಟ. || ೬೭ ||

೫೮೦

ಮನೆ ಬೇಕಾದಡೆ ಮಸೆಯ ಸುಡು.
ಮಣ್ಣು ಬೇಕಾದಡೆ ಒಲ್ಲದಿರು.
ಹೊನ್ನು ಬೇಕಾದಡೆ ಹಿಡಿಯದಿರು.
ಹೆಣ್ಣು ಬೇಕಾದಡೆ ಕೂಡದಿರು.
ಹಸಿವಿಲ್ಲದಡುಣ್ಣು, ಈ ಹುಸಿಯ ದಿಟ ಮಾಡು,
ಸಗರದ ಬೊಮ್ಮನೊಡೆಯ
ತನಮನ ಸಂಗಮೇಶ್ವರಲಿಂಗವನರಿಯಬಲ್ಲಡೆ. || ೬೮ ||

೫೮೧

ಮಸಣ ಮನೆಯಾಯಿತ್ತು, ಮನೆ ಮಸಣವಾಯಿತ್ತು
ಹುಸಿಯ ನುಡಿದವ ಪಶುಪತಿಯ ಗೆದ್ದ,
ದಿಟವ ನುಡಿದವ ಸರ್ವಪಾಪಕ್ಕೆ ಗತನಾದ.
ಈ ಉಭಯದ ಕುಟಿಲವ ಹೇಳಾ, ಎನಗದು ಭೀತಿ ।
ಸಗರದ ಬೊಮ್ಮನೊಡೆಯ ತನುಮನ ಸಂಗಮೇಶ್ವರಾ. || ೬೯ ||

೫೮೨

ಮಾಡುವ ಮಾಟದವರೆಲ್ಲರೂ ಆರೈಕೆಗೊಂಬವರಿಲ್ಲದಿರೆ,
ಕೋಡಗ ಸತ್ತ ಜೋಗಿಯಂತಾದರು.
ಆಗಮ ಹೇಳುವ ಅಣ್ಣಗಳೆಲ್ಲರೂ ಕೊಡುವರಿಲ್ಲದಿರೆ,
ಹಾವ ಹಿಡಿದ ಕೋಡಗದಂತಾದರು.
ನಾನಿನ್ನಾರ ಕೇಳುವೆ, ಇನ್ನಾರಿಗೆ ಹೇಳುವೆ.
ನಾನಂಜುವೆ, ಸಗರದ ಬೊಮ್ಮನೊಡೆಯ ತನುಮನ ಸಂಗಮೇಶ್ವರಾ. ||೭೦||

೫೭೩

ಮೋಹವಮನವೆಂಬ ಒಂದಾಗರದಲ್ಲಿ ಬಾಳೆ ಹುಟ್ಟಿತ್ತು.
ಕಣ್ಣೆಲೆ ಒಂದು, ಹೊಡೆ ಮೂರಾಗಿ ಮೂಡಿ,
ಹೂವಿನ ಎಲೆ ಬಿಳಿದು, ಕುಸುಮ ಉದುರದು,
ಚಿಪ್ಪು ಲೆಕ್ಕಕ್ಕೆ ಬಾರದು, ಬಾಳೆಯ ಸಾಕಿದಣ್ಣ ಬಾಳಲಾರ.
ಬಾಳೆ ತರಿವುದಕ್ಕೆ ಮೊದಲೆ ಕೊಳೆಯಿತ್ತು.
ಅಂಗನಷ್ಟಕ್ಕೆ ಮೊದಲೆ ಮನನಷ್ಟವಾಯಿತು,
ಸಗರದ ಬೊಮ್ಮನೊಡೆಯ ತನುಮನ ಸಂಗಮೇಶ್ವರಲಿಂಗಾ. ॥ ೭೧ ॥

೫೭೪

ಯುಗಜುಗಂಗಳು ಮಹಾಪ್ರಳಯವಾದಲ್ಲಿ
ಉಳಿಯಿತ್ತೊಂದು ಮಲಯಜದ ಬೇರು.
ಬೇರಿನಲ್ಲಿ ಮಣ್ಣು ಸಿಕ್ಕಿ, ಮಣ್ಣಿನ ಸಾರಕ್ಕೆ ಬೇರು ಚಿಗಿತು,
ಮೂರು ಕೊನರಾಯಿತ್ತು.
ಮೂರು ಕೊನರು ಬಲಿದು, ಐದು, ಕೊಂಬಾಯಿತ್ತು.
ಐದು ಕೊಂಬಿನ ತುದಿಯಲ್ಲಿ ಆರೆಲೆ ಚಿಗಿತು,
ಆರೆಲೆಯ ಅಡಿಯಲ್ಲಿ ಮೂರು ಹೂದೋರಿತ್ತು.
ಹೂ ಮೀರಿ ಬಲಿವುದಕ್ಕೆ ಮೊದಲೆ, ಮರ ಬಲಿದು ಹಣ್ಣಾಯಿತ್ತು.
ಹಣ್ಣಿನ ಬೀಜ ರಸವನುಂಡು, ಕಾದಿದ್ದ ಅಣ್ಣಂಗೆ ಇಲ್ಲವಾಯಿತ್ತು.
ಸಗರದ ಬೊಮ್ಮನೊಡೆಯ
ತನುಮನ ಸಂಗಮೇಶ್ವರಲಿಂಗವು ನಿಃಪತಿಯನೈದಿದ ಕಾರಣ. ॥ ೭೨ ॥

೫೭೫

ರಜವೆಂಬ ಹೂವಿನ ಗಿಡುವಿನಲ್ಲಿ, ನಿರ್ಜರವೆಂಬ ಕುಸುಮ ಹುಟ್ಟಿತ್ತು.
ನಿರವಯವೆಂಬ ಗಂಧ ಸಂಭ್ರಮಿಸಿತ್ತು.
ಕೈಯುಗುರಿನಲ್ಲಿ ಮುಟ್ಟದೆ, ಮನದ ನಖದ ಕೊನೆಯಲ್ಲಿ ಎತ್ತಿ
ನಿರೂಪವ ಮಂಡೆಯ ಮೇಲಿರಿಸಲು,
ಎನ್ನ ಸಗರದ ಬೊಮ್ಮನೊಡೆಯ ತನುಮನ ಸಂಗವಾದಲ್ಲಿ,
ಅಭೇದ್ಯವಾದ ಪ್ರಾಣಲಿಂಗಕ್ಕೆನ್ನ ಪ್ರಾಣಪೂಜೆಯಾಯಿತ್ತಯ್ಯಾ. ॥ ೭೩ ॥

೫೭೬

ರೂಪಿನ ದರ್ಪಣವ ಹಿಡಿದು, ತನ್ನಯ ರೂಪ ನೋಡಿದಲ್ಲಿ
ನಿಹಿತದ ಇರವಾಯಿತ್ತು.
ಆ ರೂಪ ಕಂಡ ನಿರೂಪಿನ ದೃಷ್ಟಿ,
ಅದರೊಳಗೆ ಕೂರ್ತು ತೋರುವ ಬೆಳಗಿನ ಮರೆ.

ಉಭಯವ ಹಿಡಿದು ನೋಡುವ ಘಟಪಟನ್ಯಾಯ, ಉಪದೃಷ್ಟಭೇದ.
ಹಿಡಿದ ಇಷ್ಟಾಚರಣೆ ಕುರುಹಿನ ಲಕ್ಷಣ.
ಪಡಿಭಿನ್ನ ಭೇದವಿಲ್ಲದೆ ತೋರಿ ತೋರದಿಪ್ಪ ಉಭಯ ಅಂಗವು ನೀನೆ,
ಸಗರದ ಬೊಮ್ಮನೊಡೆಯ
ತನುಮನ [ಸಂಗ]ಮೇಶ್ವರಲಿಂಗದಲ್ಲಿ ಲೇಪವಾದ ಶರಣಂಗೆ. || ೭೪ ||

೫೭೭

ರೂಪುಸಹಿತ ಭಕ್ತ, ರೂಪುವಿರಹಿತ ಶರಣ.
ಶರಣಭಾವವಿರಹಿತ ಸಮ್ಯಜ್ಞಾನಿ.
ಇಂತೀ ತ್ರಿವಿಧಗುಣವ ಕಳೆದಲ್ಲಿ, ಉಳಿದ ಶೇಷ ಸಂಭವಸಂಯುಕ್ತ
ಅದರ ಬೆಂಬಳಿಯನರಿ,
ಸಗರದ ಬೊಮ್ಮನೊಡೆಯ ತನುಮನ ಸಂಗಮೇಶ್ವರಾ. || ೭೫ ||

೫೭೮

ವಿಷ ಕೊಲುವಲ್ಲಿ, ಹಾವೇನ ಮಾಡುವುದು ?
ಉಂಬ ಅಶನ ನಂಜಾಗಿಹಲ್ಲಿ, ಇಕ್ಕಿದವಳಿಗೆ ಅಂಜಿಕೆಯುಂಟೆ ?
ತನ್ನ ಇಂದ್ರಿಯ ತನ್ನ ತಿಂಬಲ್ಲಿ,
ವಸ್ತುವಿನ ಮೇಲೆ ಹಂಗ ಹಾಕುವ ಭಂಡರಿಗೆ ಇಲ್ಲಾಯೆಂದೆ,
ಸಗರದ ಬೊಮ್ಮನೊಡೆಯ ತನುಮನ ಸಂಗಮೇಶ್ವರಲಿಂಗವು. || ೭೬ ||

೫೭೯

ಶಕ್ತಿಯಂಗದ ಯೋನಿಯಲ್ಲಿ ಶುಕ್ಲ ಸೋರಿ,
ಬೆಚ್ಚು ಪುತ್ತಳಿಯಾದ ಠಾವಾವುದು ?
ಕೂಡಿದನಪ್ಪ, ಕೂಡಿಸಿಕೊಂಡಳವ್ವೆ.
ಉಭಯದ ಯೋಗದಿಂದಾದ ಮತ್ತೆ ಬ್ರಹ್ಮನ ಅಗಡವೇಕೆ,
ಸಗರದ ಬೊಮ್ಮನೊಡೆಯ ತನುಮನ ಸಂಗಮೇಶ್ವರಾ ? || ೭೭ ||

೫೮೦

ಶುಕ್ತಿ ಅಪ್ಪುವಿಲ್ಲದಿರ್ದಡೆ ಕಟ್ಟೆಯಲ್ಲದೆ ಕಟ್ಟಾಣಿಯಲ್ಲ,
ಯುಕ್ತಿವಿದಂಗೆ ಸುಪಥ ದೊರಕಿದಡೆ ವಿರಕ್ತನಾಗಬೇಕು.
ಮಾತಿನ ಘಾತಕದಲ್ಲಿ ನಿಹಿತದ ಆಚಾರವ ನುಡಿದಡೆ,
ಏತದ ಕುಂಭದಲ್ಲಿ ಜಲವ ತುಂಬಿ ಅನಾಥವೃಕ್ಷಕ್ಕೆ ಎರೆದಂತೆ.
ಅರಿವುಹೀನನ ಮಾತು ನೆರೆ ಕೊರತೆಯೆಂದೆ,
ಸಗರದ ಬೊಮ್ಮನೊಡೆಯ ತನುಮನ ಸಂಗಮೇಶ್ವರಾ. || ೭೮ ||

೫೮೧

ಶೂಲದಲ್ಲಿ ಏರಿಸಿದ ಹೆಣ, ಆಲುತ್ತ ಮಾತನಾಡುತ್ತದೆ.
ಹೆಣ ಹೆಣಂ ತಾಗೆ ಶೂಲವನೊಡಗೂಡಿತ್ತು,
ಶೂಲ ಕೊಲ್ಲದೆ ಆರೈವುತ್ತದೆ,
ಸಗರದ ಬೊಮ್ಮನೊಡೆಯ ತನುಮನ ಸಂಗಮೇಶ್ವರಲಿಂಗವು,
ಅಂಗವ ತಾಳಿದ ಕಾರಣ. ॥ ೭೯ ॥

೫೮೨

ಸಂಸಾರವನರಿತಲ್ಲಿ, ಸಂಶಯವಿಲ್ಲದ ಸಾರವೆ ಅರಿವು.
ಅರಿವು ಮರೆಯದೆ ಹೆರೆಹಿಂಗಿ, ಕುರಿತಿದ್ದ ಸಂಸಾರದ ಸಾರ,
ಸಗರದ ಬೊಮ್ಮನೊಡೆಯ ತನುಮನ ಸಂಗಮೇಶ್ವರಾ. ॥ ೮೦ ॥

೫೮೩

ಸಕಲ ಆಗಮಂಗಳ ಕಲಿತು, ಸರ್ವಜನಕ್ಕೆ ಹೇಳಿ, ತಾ ನಿಃಕರುಣಿಯಾಗಿ,
ತ್ರಿವಿಧಮಲಕ್ಕೆ ಹೊರಗಾಗೆಂದು ತಾನೊಳಗಾಗಿ,
ಬರಿಮಾತಿನ ಭಟನಂತೆ ಆದರಾರೈಕೆ,
ಸಗರದ ಬೊಮ್ಮನೊಡೆಯ ತನುಮನ ಸಂಗಮೇಶ್ವರಾ. ॥ ೮೦ ॥

೫೮೪

ಸರ್ಪನ ಹೆಡೆಯ ಮೇಲಣ ಮಾಣಿಕ್ಯ ಬೇಕಾದಡೆ.
ಸರ್ಪನ ಕೊಂದಲ್ಲದೆ ಮಾಣಿಕ್ಯವಿತ್ತಬಾರದು.
ಸರ್ಪನ ಕೊಂದಲ್ಲದೆ ಮಾಣಿಕ್ಯವ ಒಪ್ಪದಲ್ಲಿ ತೆಗೆಯಬಲ್ಲಡೆ,
ಅದು ವಿರಕ್ತನ ಸತ್ವ.
ತ್ರಿವಿಧದಲ್ಲಿ ಬೆಚ್ಚಂತಿರದೆ, ಹುಡಿಯೊಳಗಣ ಲೇಖದಂತೆ,
ತೊಡೆದಡೆ ಕುರುಹಿಲ್ಲದಂತಿರಬೇಕು.
ತ್ರಿವಿಧವನೊಡಗೂಡಿಯಿದ್ದಾತಂಗೆ ಆತನ ಎಡೆಬಿಡುವಿಲ್ಲದೆ ಅರಿ.
ಸಗರದ ಬೊಮ್ಮನೊಡೆಯ
ತನುಮನ ಸಂಗಮೇಶ್ವರಲಿಂಗವೆಂದೆ ಪ್ರಮಾಣಿಸು. ॥ ೮೨ ॥

೫೮೫

ಸೃಷ್ಟಿಯ ಮೇಲಣ ನರಪಟ್ಟಣದ ಹಾದಿಯಲ್ಲಿ, ಕಟ್ಟಿದರೈವರು ಕಳ್ಳರು.
ಇರಿಯುವುದಕ್ಕೆ ಕೈದಿಲ್ಲ, ಹೊಯ್ವುದಕ್ಕೆ ದೊಣ್ಣೆಯಿಲ್ಲ.
ಅವರು ಕಳ್ಳರಲ್ಲಾ ಎಂದು ಬೆಳ್ಳರು
ಸಿಕ್ಕಿದರು ಕಳ್ಳರ ಕೈಯ ಕರಟದಲ್ಲಿ,
ಕಳ್ಳಿಯ ಹಾಲು ಕಳ್ಳರ ಕಣ್ಣಿನಲ್ಲಿ ಹೊಯ್ದು, ಬೆಳ್ಳರೆಲ್ಲಿ ಹೋದರೆಂದರಿಯೆ.
ಸಗರದ ಬೊಮ್ಮನೊಡೆಯ ತನುಮನ ಸಂಗವಾಗಿ ನಿಸ್ಸಂಗಿಯಾದ. ॥ ೮೩ ॥

೫೮೬

ಸ್ಥಿತಿ ಹರಿಯದಾದಡೆ, ಹರಹರಿಸುವಲ್ಲಿ ಪರಿಹರಿಸಿಕೊಂಡುದಿಲ್ಲ,
ಲಯಕ್ಕೆ ರುದ್ರನಾದಡೆ, ತನ್ನೊಲುಮೆಯ ಸತಿಯ, ಲಯವ ಮಾಡಿದುದಿಲ್ಲ,
ಇದನಿನ್ನಾರಿಗೆ ಹೇಳುವೆ,
ಸಗರದ ಬೊಮ್ಮನೊಡೆಯ ತನುಮನ ಸಂಗಮೇಶ್ವರಾ ? ॥ ೮೪॥

೫೮೭

ಸ್ಥೂಲ ಕೂಡುವಲ್ಲಿ, ಸೂಕ್ಷ್ಮ ಆಡುವಲ್ಲಿ, ಕಾರಣ ಕೂಡುವಲ್ಲಿ,
ತ್ರಿವಿಧದ ಒಡಲಾವುದೆಂದರಿತು, ವಸ್ತುವಿನ ಕೂಟದ ಭೇದವ ಘಟಿಸಿ,
ಮನ ತನುವಿನಲ್ಲಿ ಭಿನ್ನ ಭೇದವಿಲ್ಲದೆ, ಗಂಧ ಕುಸುಮದಂತೆ,
ಹೆರೆಹಿಂಗದ ಲಿಂಗಸಂಗಸುಖವನರಿ,
ಸಗರದ ಬೊಮ್ಮನೊಡೆಯ ತನುಮನ ಸಂಗಮೇಶ್ವರಾ. ॥ ೮೫ ॥

೫೮೮

ಹಗೆ ನಿದ್ರೆಗೈವಲ್ಲಿ ಕೊಲುವ ಅರಿ ಬಂದು, ಮರೆದೊರಗಿದನೆಯೆಂದು ಎಬ್ಬಿಸಿ,
ನಿನ್ನ ನಾ ಕೊಲಬಂದೆ ಎಂದನೆ.
ಅರಿ ನೋಡಿ, ಕೊಲಬಂದವನಲ್ಲಾ ಎಂದು ಎನ್ನನುಳುಹಿದೆ.
ಎನಗೂ ನಿನಗೂ ಹಗೆಯಿಲ್ಲ,
ಎನ್ನೆಡೆ ನಿನ್ನೆಡೆಗೆ ತಂದು ಹಾಕಿದವರೆ ಹಗೆ,
ನಾನೂ ನೀನೂ ಕೂಡಿ ಹಗೆಯನರಸಿ [ಕೊಲ್ಲುವ],
ಸಗರದ ಬೊಮ್ಮನೊಡೆಯ ತನುಮನ ಸಂಗಮೇಶ್ವರಲಿಂಗದಲ್ಲಿ ॥ ೨೬ ॥

೫೮೯

ಹಾರುವ ಹಕ್ಕಿಯ ತಲೆಯ, ಕುಳಿತಿದ್ದ ಗೂಗೆ ನುಂಗಿತ್ತು,
ಕುಳಿತಿದ್ದ ಗೂಗೆಯ ಕಣ್ಣ, ಕಾಗೆಯ ಮರಿ ಕುಡುಕಿತ್ತು,
ಕಾಗೆಯ ಮರಿಯ, ಕೋಗಿಲ ಕಂಡು, ಅದ ಬೇಡಾ ಎಂದಡೆ,
ಗಿಳಿ ಹಾಗಹುದೆಂದು ಹಾರಿ ಹೋಯಿತ್ತು,
ಸಗರದ ಬೊಮ್ಮನೊಡೆಯ ತನುಮನ ಸಂಗಮೇಶ್ವರನು
ಘಟಪಂಜರವನೊಲ್ಲದೆ. ॥ ೮೭ ॥

೫೯೦

ಹಾಲಿನ ಗಡಿಗೆಯಲ್ಲಿ ಮೂರೆಡಗೊತ್ತಿ, ಮರಿಯನೀದುದ ಕಂಡೆ,
ಮರಿ ಹಾಲಾಗಿ, ಕುಡಿಕೆ ಕೊತ್ತಿಯಾಗಿ,
ಮನೆಯೊಡೆಯ ಇಲಿಯಾಗಿ, ಬೆಕ್ಕ ಗಕ್ಕನೆ ಹಿಡಿದ.
ಸಿಕ್ಕಿತ್ತು ಸಂಸಾರದ ವಿಷಯದಲ್ಲಿ ಮನ.

ಎನಗಪ್ಪದ ಹೇಳು,
ಸಗರದ ಬೊಮ್ಮನೊಡೆಯ ತನುಮನ ಸಂಗಮೇಶ್ವರಾ. || ೮೮ ||

೫೯೧

ಹುಟ್ಟಿ ಹೋಟಾರದಲ್ಲಿ ಒಂದಾವೆ, ಕೋಟಿ ಮರಿಯನಿಕ್ಕಿತ್ತು
ಅವಕ್ಕೆ ಊಟ ಎಲ್ಲಿಂದ ಬಹವು ಎಂಬುದನರಿತಲ್ಲಿ, ಲಿಂಗಮೂರ್ತಿಯ ಧ್ಯಾನ.
ಆ ಕೂರ್ಮೆ ತನ್ನೂಟ, ಅವರಸುವಿನಾಟ.
ಸಗರದ ಬೊಮ್ಮನೊಡೆಯ ತನುಮನದಲ್ಲಿ ಕೂರ್ತು ಸಂಗವಾಗಿರು. || ೮೯ ||

೫೯೨

ಹೂವ ಕೊಯ್ಯುವರಲ್ಲದೆ, ಹೂವಿನ ಗಂಧವ ಕೊಯ್ದವರುಂಟೆ ಅಯ್ಯಾ?
ಮಾತನಾಡುವರಲ್ಲದೆ, ಮಾತಿನ ಭೇದದ ವಾಸನೆಯ ಕಂಡವರುಂಟೆ ಅಯ್ಯಾ?
ಇದು ನೀತಿಯ ಒದಗು,
ಕ್ರೀಯ ನಿಹಿತವಾಗಿ ಮಾಡುವಲ್ಲಿ ಭಾವಶುದ್ಧವಾಗಿರಬೇಕು.
ಮಾತನರಿದಾಡುವಲ್ಲಿ, ಮಾತಿನ ರೀತಿಗೆ ತಾ ಒದಗು ನಿಹಿತವಾಗಿರಬೇಕು.
ಅದು ಕೂಟಸ್ಥ,
ಸಗರದ ಬೊಮ್ಮನೊಡೆಯ ತನುಮನ ಸಂಗಮೇಶ್ವರಾ. || ೯೦ ||

೫೯೩

ಹೊಯಿದಡೆ ಅಂಗದ ಮೇಲಣ ನೋವ, ಮನವರಿವಂತೆ,
ಬಾಹ್ಯ ಉಪಚರಣೆಯ ಪೂಜೆ, ನಿನಗೆ ಹೊರಗಾದುದುಂಟೆ ? ಆ ತೆರನನರಿ,
ಸಗರದ ಬೊಮ್ಮನೊಡೆಯ ತನುಮನ ಸಂಗಮೇಶ್ವರಲಿಂಗವು,
ಒಳಗೂ ತಾನೆ, ಹೊರಗೂ ತಾನೆ. || ೯೦ ||

## ಸತ್ತಿಗೆ ಕಾಯಕದ ಮಾರಯ್ಯಗಳ ವಚನ

೫೯೪

ಆವಾವಾಚರಣೆಯ ತೊಟ್ಟಲ್ಲಿ ಅನುಸರಿಯಿಲ್ಲದಿಪ್ಪುದೆ, ಗುರುಚರಲಿಂಗಪೂಜೆ.
ಖಂಡಿತ ಕಾಯಕಕ್ಕೆ ಇಂದಿಂಗೆ ನಾಳಿಂಗೆಂಬ ಸಂದೇಹವಿಲ್ಲದಲ್ಲಿಯೆ ಸರ್ವಶೀಲ.
ತಾಗು ನಿರೋಧ ಬಂದಲ್ಲಿ,
ಕಂದದೆ ಕುಂದದೆ ಎಂದಿನಂತಿದ್ದಲ್ಲಿ ಶಿವಲಿಂಗಪೂಜೆ.
ಇದಕ್ಕೆ ಹಿಂದುಮುಂದು ವಿಚಾರಿಸಲಿಲ್ಲ,
ಇದಕ್ಕೆ ಐಘಂಟೇಶ್ವರಲಿಂಗ ಸಾಕ್ಷಿಯಾಗಿ. ॥ ೧ ॥

೫೯೫

ಉದಯಕ್ಕೆ ಉತ್ಪತ್ಯವಾಗಿ, ಮಧ್ಯಾಹ್ನಕ್ಕೆ ಸ್ಥಿತಿಯಾಗಿ,
ಅಸ್ತಮಾನಕ್ಕೆ ಲಯವಹ ದೇಹವ ಹೊತ್ತು ಮತ್ತೆ
ನಿಶ್ಚಿಂತದಲ್ಲಿ ನಿಂದು, ಕಷ್ಟವ ಬಿಡಿಸುವ ಠಾವ ತೋರಾ.
ಹಗಲಿಂಗೆ ಹಸಿವು ತೃಷೆ, ಇರುಳಿಂಗೆ ವಿಷಯ ವ್ಯಸನ ವ್ಯಾಪಾರ,
ಇಂತೀ ಘಟವ ಹೊಕ್ಕು,
ಐದಕ್ಕೆ ಒಡಲಾದೆಯಲ್ಲಾ ಐಘಂಟೇಶ್ವರಲಿಂಗಾ. ॥ ೨ ॥

೫೯೬

ಒಂದ ಹಿಡಿವಲ್ಲಿ ಸತ್ತಿಗೆಯವ,
ಇದಿರ ಉಭಯದ ಸಂದ ಕಡಿವಲ್ಲಿ ಕೊಡಲಿಯವ.

ಹಿಂದುಮುಂದಣ ತಮವವನೊಂದುಗೂಡಿ, ಕೆಡಿಸುವುದಕ್ಕೆ ಪಂಜಿನವ.
ಇದು ಅಂದು ಬಂದ ಬೆಸದ ಕಾಯಕ,
ಐಘಂಟೇಶ್ವರಲಿಂಗವಿದ್ದಲ್ಲಿಯೆ ಬೆಸನಿಲ್ಲದಿರಬೇಕು. || ೩ ||

೫೯೭

ಒಂದೆ ಕಂಬದ ನಡುವೆ ಹಲವು ಬಿದಿರುಗೂಡಿ,
ಅಗಲಕ್ಕೆ ಹೊಲಬಾಯಿತ್ತು ನೋಡಾ.
ಬಿಸಿಲ ಕಾಯದು, ಗಾಳಿಯ ತಡೆಯದು, ಮಳೆಗೆ ನೆನೆವುತ್ತಿದೆ ನೋಡಾ.
ಈ ಸತ್ತಿಗೆಯ ಹರಕು ನಿಜಸತ್ಯವಾಗಿ,
ಐಘಂಟೇಶ್ವರಲಿಂಗವನರಿದಲ್ಲದೆ
ಸತ್ತಿಗೆಯ ಕಾವಿನ ಹಂಗು ಹರಿಯದು ನೋಡಾ. || ೪ ||

೫೯೮

ಕಂಬಳಕ್ಕೆ ಹೋದಲ್ಲಿ ಅವರಂಗವ ಹೊತ್ತು ಹೋಹನ್ನಕ್ಕ,
ಸಂಬಂಧಕ್ಕೆ ಕೂಲಿಯ ಮಾಡಿ ತಂದು ಸಂದುದೇ ಕಾಯಕದೊಳಗು,
ಎನ್ನಂಗದ ಸತ್ತಿಗೆಯ ಕಾಯಕ.
ಸಂಗನಬಸವಣ್ಣಂಗೆ ನೆಳಲು ಹಿಂಗಿದಾಗವೇ ಕಾಯಕ.
ಕಾಯಕ ನಿಂದುದೆಂಬ ಭಾಷೆ,
ಎನಗೆ ಐಘಂಟೇಶ್ವರಲಿಂಗವಿಲ್ಲಾ ಎಂಬ ಶಪಥ. || ೫ ||

೫೯೯

ಕಾಯಕವೆಂದು ಕಲ್ಪಿಸಿ ಮಾಡುವಲ್ಲಿ,
ತುಡುಗುಣಿಯಂತೆ ಮಡದಿ ಮಕ್ಕಳಿಗೆಂದು
ಹೆಡಿಗೆ ಗಳಿಗೆಯಲ್ಲಿ ಹೊಯ್ದು, ಕಡ ಪರಪತಿಯೆಂದು ಕೊಟ್ಟಡೆ,
ಅದು ಗುರುಪರಚರ ಈ ಮೂರರೊಡವೆಯಲ್ಲ,
ಆತನು ಮೃಡಭಕ್ತನೆಂದು ಅವನ ಮನೆಯಲ್ಲಿ ಒಡಗೂಡಿ ಉಂಡಡೆ,
ಅಡಗ ನಾಯಿ ತಿಂದು, ಮಿಕ್ಕುದ ನರಿ ತಿಂದಂತೆ,
ಐಘಂಟೇಶ್ವರಲಿಂಗವೆ ಸಾಕ್ಷಿಯಾಗಿ. || ೬ ||

೬೦೦

ತತ್ವದ ಕಾವು, ನಿಜನಿಶ್ಚಯದ ಬಿದಿರು, ಭಕ್ತಿಜ್ಞಾನ ವೈರಾಗ್ಯ.
ಇಂತೀ ತ್ರಿವಿಧ ಮುಪ್ಪುರಿಗೂಡಿದ ನೂಲಿನಲ್ಲಿ
ಕಟ್ಟುಗಳ ಕಟ್ಟಿ, ಅಹಂಕಾರ ಗರ್ವದ ನಿರುತವ ಬಿಡಿಸಿ,
ಭಕ್ತಿ ಸತ್ಯಕ್ಕೆ ತಲೆವಾಗುವಂತೆ ಭಾಗ ಒಪ್ಪವ ಮಾಡಿ,
ಕರ್ಕಶ ಮಿಥ್ಯವೆಂಬ ಸಿಗುರೆದ್ದಡೆ ಕೆತ್ತಿಹಾಕಿ,
ಛತ್ರಕ್ಕೆ ಹೆಚ್ಚುಕುಂದಿಲ್ಲದ ವರ್ತುಳಾಕಾರಕ್ಕೆ

ಚಿತ್ತವಸ್ತುವಿನಲ್ಲಿ ತೊಲಗದಂತೆ ಶಾಶ್ವತವಾಗಿ,
ಅಷ್ಟಾವಧಾನಂಗಳೆಂಬ ಕಪ್ಪಡವ ಕವಿಸಿ,
ಚತುಷ್ಟಯಂಗಳೆಂಬ ಸೆರಗು ತಪ್ಪದೆ ಕತ್ತರಿಸಿ,
ಚಿತ್ತ ಹೆರೆಹಿಂಗದ ಲೆಕ್ಕಣಿಕೆಯಲ್ಲಿ ಚಿತ್ರವ ಬರೆದು,
ಅಧಮ ಊರ್ಧ್ವವೆಂಬುದಕ್ಕೆ ಬಲು ತೆಕ್ಕೆಯಿನಿಕ್ಕಿ,
ಸರ್ವವರ್ಮಂಗಳೆಂಬ ಬೆಣೆಗೀಲನಿಕ್ಕಿ,
ಹಿಡಿವುತ್ತಿದ್ದೆ ಛತ್ರವ ನೆಳಲಿಲ್ಲದಂತೆ,
ಐಘಂಟೇಶ್ವರಲಿಂಗಕ್ಕೆ ಬಿಸಿಲುಮಳೆಗಾಳಿಗೆ ಹೊರಗಾಗಬೇಕೆಂದು. ॥ ೭ ॥

೬೦೧

ನಿನ್ನ ಓಲೈಸಿಕೊಂಡ ಜೀವಿತಕ್ಕೆ ಲಿಂಗದ ಹಂಗು.
ಆ ಹಂಗಿನಿಂದ ಗುರುಚರದ ಹಂಗು.
ಈ ಮೂರರಿಂದ ಭಕ್ತಿಯೆಂಬ ಸಂದಣಿಯ ಹಂಗು.
ಇದರ ಸಂದೇಹವ ಎನಗೊಂದು ಬಾರಿ ತೋರಾ,
ಸಂಗನಬಸವಣ್ಣಪ್ರಿಯ ಐಘಂಟೇಶ್ವರಲಿಂಗಾ. ॥ ೮ ॥

೬೦೨

ಯಾಚಕನ ಮಾಟ, ಕೀರ್ತಿಗೆ ಇಕ್ಕುವನ ಮನೆಯಲ್ಲಿಯ ಊಟ,
ಜಗ ಮೆಚ್ಚಬೇಕೆಂದು ಮಾಟ ಕೂಟ, ಮನ ಮೆಚ್ಚಬೇಕೆಂಬುದಕ್ಕಿಲ್ಲ.
ಇಂತೀ ಮಾಟ ಕೂಟ, ಅವನ ವ್ರತದಾಟ,
ಕೂಸು ಹೇತು ಕಲಸಿ, ತಮ್ಮಪ್ಪನ ಬಾಯಲ್ಲಿ ಇಕ್ಕಿ,
ಮಿಕ್ಕುದ ತೋರಿದಂತಾಯಿತ್ತು.
ವರ್ತಕ ಚಿತ್ತಶುದ್ಧವಿಲ್ಲದವನ ತ್ರಿವಿಧದ ಗೊತ್ತಿನ ಪೂಜೆ ಮಾಡಿ,
ನಷ್ಟವಹುದಕ್ಕೆ ಇದೇ ದೃಷ್ಟ. ಇದಕ್ಕೆ ಐಘಂಟೇಶ್ವರಲಿಂಗವೇ ಸಾಕ್ಷಿ. ॥ ೯ ॥

೬೦೩

ಸೂತಕಜನ್ಮದಲ್ಲಿ ಬಂದು, ಭವಸೂತಕ ಬಿಡದು ನೋಡಾ.
ನಡೆವಲ್ಲಿ ಛತ್ರವ ಹಿಡಿದು, ಬಿಟ್ಟಲ್ಲಿ ಕೊಡಲಿಯ ಹಿಡಿದು.
ಮತ್ತೆ ತಮಕ್ಕೆ ಪಂ[ಜು] ಹಿಡಿದು,
ಈ ಮೂರು ಮಣಿಹದಾಟದಿಂದ ಆತ್ಮ ಗಾರಾಗುತ್ತಿದೆ.
ಇದಕ್ಕೆ ಸಾರಿ ಹೇಳಿದೆ, ಐಘಂಟೇಶ್ವರಲಿಂಗವೇ ಓಡಿಹೋಗುತ್ತಿದ್ದೇನೆ. ॥ ೧೦ ॥

■■

## ಸಿದ್ಧಾಂತಿ ವೀರಸಂಗಯ್ಯಗಳ ವಚನ

೬೦೪

ಕ್ರೀಯಲ್ಲಿ ವಸ್ತುವಿಪ್ಪುದೆ ದಿಟವಾದಡೆ, ತಿಳಿದು ನೋಡಿದಲ್ಲಿ
ವಸ್ತುವಿನಲ್ಲಿ ಕ್ರೀ ಇಪ್ಪುದೆ ದಿಟ.
ಇಂತು ಇನ್ನೀ ಉಭಯವ ತಿಳಿದು ನೋಡಿದಲ್ಲಿ
ವಸ್ತುವಿಂಗೂ ಕ್ರೀಗೂ ಭಿನ್ನ ಉಂಟೆ ?
ಅದೆಂತೆಂದಡೆ :
ಸಕ್ಕರೆಯ ಕುಂಭವೆನಲಿಕೆ, ತುಪ್ಪದ ಕಂದಳೆನಲಿಕೆ,
ಕರ್ಪುರದ ಕರಂಡವೆನಲಿಕೆ, ಆ ವಸ್ತು ದೃಷ್ಟ, ದಿಟವೆ ?
ಕುಂಭ ಸಕ್ಕರೆಯಲ್ಲ, ಸಕ್ಕರೆ ಕುಂಭವಲ್ಲ,
ತುಪ್ಪ ಕಂದಳಲ್ಲ, ಕಂದಳ ತುಪ್ಪವಲ್ಲ,
ಕರಂಡ ಕರ್ಪುರವಲ್ಲ, ಕರ್ಪುರ ಕರಂಡವಲ್ಲ.
ಅಲ್ಲಿದ್ದ ವಸ್ತು ಹೋದ ಮತ್ತೆ ಉಪದೃಷ್ಟದ ಮಾತಡಗಿತ್ತು,
ಬಣ್ಣವಿಲ್ಲದ ಮತ್ತೆ ಬಂಗಾರವೆಂಬ ಕುರುಹುಂಟೆ ?
ಸಕ್ಕರೆ ತುಪ್ಪ ಕರ್ಪುರ ಹೋದ ಮತ್ತೆ,
ಘಟವಲ್ಲದ ವಸ್ತು ನಾಮವಿಲ್ಲ.
ವಸ್ತು ವಸ್ತುಕದಂತೆ, ಘಟ ಆತ್ಮನಂತೆ,
ಉಭಯಕ್ಕೂ ಭಿನ್ನವಿಲ್ಲದೆ ಸಿದ್ಧಿಯಾಗಿ,
ಆ ಸಿದ್ಧಿ ಪ್ರಸಿದ್ಧಿಯಾಗಿ, ಆ ಪ್ರಸಿದ್ಧಿ ಪ್ರಸನ್ನವಾಗಿ,
ಆ ಪ್ರಸನ್ನ ಪ್ರಸಂಗಕ್ಕೆ ಒಡಲರತುದು,
ಗೋಳಕಾಕಾರ ವಿಶ್ವವಿರಹಿತಲಿಂಗವು ತಾನಾದುದು. ॥ ೧ ॥

೬೦೫

ಗಾಜಿನ ಕುಪ್ಪಿಗೆಯಲ್ಲಿ ನೀರೆಣ್ಣೆಯ ಹೊಯ್ಯಲಿಕ್ಕಾಗಿ,
ನೀರೂ ಎಣ್ಣೆಯೂ ಬೇರಾಗಿ ತೋರೂದು.
ಆಧಾರ ಗುಣವೆಂದು ನಿಧಾನಿಸಿಕೊಂಡು ನೋಡಲು,
ಕುಪ್ಪಿಗೆಯ ಒಪ್ಪವೊ ? ನೀರು ಎಣ್ಣೆ ಅದರೊಳಗೊಪ್ಪಿಹ ಭೇದವೊ ?
ಕುಪ್ಪಿಗೆಯ ಗುಣವೆಂದಡೆ ನೀರೆಣ್ಣೆ ಸೇರಿದ ಮತ್ತೆ,
ಕುಪ್ಪಿಗೆಯಲ್ಲಿ ಕೃತ್ರಿಮ ಒಂದೂ ಇಲ್ಲಾ ಎಂದಡೆ ದೃಷ್ಟವಿರೋಧ.
ಅದೆಂತೆಂದಡೆ :
ಆ ಅಂಗ ತಾಳ್ದುದರಿಂದ ಪೃಥಕ್ಕಿಟ್ಟು ಅಂಗ ಬೇರಾಯಿತ್ತು,
ಮತ್ತೆ ಮೃತ್ತಿಕೆಯ ಅಂಗದಲ್ಲಿ ಎಣ್ಣೆ ನೀರ ತುಂಬಿ ನೋಡಲಿಕ್ಕಾಗಿ
ಬಾಹ್ಯವಿದಿರಲ್ಲಿ ಒಂದೂ ಕಾಣಬಂದುದಿಲ್ಲ,
ಈ ಗುಣ ಘಟಹೊರೆಯ ಭೇದ,
ಆತ್ಮದಿರವಿನ ಘಟ, ಸಂಸರ್ಗಿಯ ಭಾವ.
ಇದ ತಿಳಿವುದು ಕುಟಿಲರಿಗೆ ಅಸಾಧ್ಯ.
ಅಕುಟಿಲರಿಗೆ ಸಾಧ್ಯವೇದ್ಯ, ಗೋಳಕಾಕಾರ ವಿಶ್ವವಿರಹಿತ ಲಿಂಗವು. ॥ ೨ ॥

೬೦೬

ದ್ವೈತಾದ್ವೈತಂಗಳೆಂದು ಸಂಬಂಧಿಸಿ ನುಡಿವಲ್ಲಿ,
ದ್ವೈತವೆರಡು ಅದ್ವೈತ ಒಂದೆ, ದ್ವೈತ ಉಂಟು ಅದ್ವೈತವಿಲ್ಲ.
ಅದು ಒಂದರಲ್ಲಿ ಹುಟ್ಟಿ ಕುರುಹಿಡುವನ್ನಕ್ಕರ,
ಸಿದ್ಧಾಂತವಲ್ಲ, ಪ್ರಸಿದ್ಧಾಂತವಲ್ಲ.
ಅದ ನಿನ್ನ ನೀ ತಿಳಿ, ಅದು ನಿನಗನ್ಯಭಿನ್ನವಲ್ಲ.
ಗೋಳಕಾಕಾರ ವಿಶ್ವವಿರಹಿತಲಿಂಗವು ತಾನು ತಾನೆ. ॥ ೩ ॥

೬೦೭

ರತ್ನಭಂಡಾರ ಮುತ್ತು ವಸ್ತ್ರದ ಪೆಟ್ಟಿಗೆಯಲ್ಲಿ ಬಾಹ್ಯವಸ್ತು ತಾವಪ್ಪವೆ ?
ಬೈಕೆಯ ದೃಷ್ಟವಲ್ಲದೆ ಗುಣವಸ್ತು ಗುಣವೊಳಗಿಲ್ಲದಿರೆ,
ಬಿದಿರು ಮರ ಲೋಹ ಮುಂತಾದ ಇದಿರಿಟ್ಟ ಕರಂಡಕೆಲ್ಲಕ್ಕೂ
ಒಳಗಣ ಗುಣವಸ್ತು ಇಲ್ಲದಿರೆ, ಆತ್ಮನೆಯ್ದಿದ ಘಟದಂತಿಪ್ಪವು.
ಆ ಗುಣವಸ್ತು ವಸ್ತುಕದ ಲಕ್ಷದ ನಿರ್ಲಕ್ಷವ ತಿಳಿದು,
ತಾನೇನ ಹಿಡಿದು ಧರಿಸಿದಲ್ಲಿಯೂ ಅವು ತಾನಲ್ಲ, ಅವರೊಳು ತಾನಿಲ್ಲ.
ಆ ಗುಣ ಮನಭ್ರಾಂತಿಯಲ್ಲದೆ ಲೀಲೋಲ್ಲಾಸತೆ,
ಆ ವಿವರ ಗುಣಭಾವವಳಿದು, ಆ ವಸ್ತು ನಿನಗನ್ಯಭಿನ್ನವಲ್ಲ.
ತಿಳಿವಡೆ ಕರಂಡದೊಳಗಡಗಿದ,

ಅಡಗಿಸಿಕೊಂಡ ಬಾಹ್ಯಗುಣ ವಸ್ತುವಿನಂತಹೆ,
ಗೋಳಕಾಕಾರ ವಿಶ್ವವಿರಹಿತಲಿಂಗವನರಿದ ಉಭಯಸಂಗದ ಗುಣ. ॥ ೪ ॥

೬೦೮

ವಾರಿಯಿಂದಾದ ಮುತ್ತು ಶಾಂತಿಯ ಜಲದಲ್ಲಿ ಹಾಕಲಿಕಾಗಿ,
ಮುನ್ನಿನ ಎನ್ನಯ ವಾರಿ ಬಂದಿತ್ತೆಂದು ತಾ ಗಟ್ಟಿಗೊಂಡುದಿಲ್ಲ.
ಈ ಮುತ್ತು ತದ್ಭಾವ ಅಪ್ಪುವಿನಂತಾದುದಿಲ್ಲ.
ಈ ಉಭಯದ ಭೇದವ ತಿಳಿದಡೆ, ದ್ವೈತಾದ್ವೈತವ ಬಲ್ಲರೆಂಬೆ.
ಹೀಂಗಲ್ಲದೆ ಗೆಲ್ಲಸೋಲಕ್ಕೆ ಹೋರುವ ಕಲ್ಲೆದೆಯವರಿಗೆಲ್ಲಿಯದೊ,
ಗೋಳಕಾಕಾರ ವಿಶ್ವವಿರಹಿತ ಲಿಂಗವು ಸಾಧ್ಯವಪ್ಪುದು ? ॥ ೫ ॥

■■

## ಸುಂಕದ ಬಂಕಣ್ಣನ ವಚನ

೬೦೯

ಕಾಳಕೂಟದ ತತ್ತಿಯಲ್ಲಿ ಒಂದು ಕೋಳಿ ಹುಟ್ಟಿತ್ತು.
ಹಾರುವುದಕ್ಕೆ ಗರಿಯಿಲ್ಲ, ಓಡುವುದಕ್ಕೆ ಕಾಲಿಲ್ಲ.
ನೋಡುವುದಕ್ಕೆ ಕಣ್ಣಿಲ್ಲ, ಕೂಗುವ ಬಾಯಿ ಒಂದೆ ಅದೆ.
ಅದು ಕೂಗುವಾಗ ಜಾವವಳಿದು, ದಿನ ಸತ್ತು
ಮಾಸ ತುಂಬುವದನರಿತಲ್ಲದೆ ದಿನ ನಾಶವೆಂದು ಕೂಗುತ್ತದೆ.
ಕೂಗಿನ ದನಿಯ ಕೇಳಿ ಬೆಳಗಾಯಿತ್ತು,
ಜಗದ ಸುಂಕದೊಡೆಯ ಬಂಕೇಶ್ವರಲಿಂಗಾ. ॥ ೧ ॥

೬೧೦

ಕಟ್ಟಿದುದೇನು ಕಂಕುಳದೊಳಗೆ ?
ಹೊತ್ತುದೇನು ಮಂಡೆಯ ಮೇಲೆ ?
ಕೈಯೊಳಗಣ ಹೊರೆಯ ಬಿಟ್ಟು,
ತೋರು ಕೆಡದಿಹರೆ ಜಗದೊಡೆಯನ,
ಚೀಟ ಕೊಳ್ಳಿ, ಬಂಕೇಶ್ವರಲಿಂಗದ. ॥ ೨ ॥

೬೧೧

ಹೊರವಾರು ಉಭಯಮಾರ್ಗ, ಒಳವಾರು ಸ್ಥಲಕುಳ ವಿಸಂಚವಿಲ್ಲಾ
ಎಂದು ಕೊಟ್ಟ ಚೀಟು, ನಿಮ್ಮ ಕೈಹಾಳೆಯಲ್ಲಿ ಅದೆ.

ತಡಿಯೊಡೆಯಂಗೆ ಕುರುಹ ತೋರಿ,
ನಿಮ್ಮ ನಿಮ್ಮ ಹೊರೆಯ ಕೊಂಡು ಹೋಗಿ,
ಜಗದ ಸುಂಕದೊಡೆಯ ಬಂಕೇಶ್ವರಲಿಂಗದ ಅರಿಕೆಯಾಗಿ. ॥ ೩ ॥

೬೧೨

ಎಲ್ಲರ ಸುಂಕ, ಎತ್ತು ತೊತ್ತು ಬಂಡಿ ಬಲ್ಲೆತ್ತು.
ಎನ್ನ ಸುಂಕ ಎಲ್ಲರ ಪರಿಯಲ್ಲ.
ಕಟ್ಟಿದ ಕುರುಹಿಂಗೆ, ಹಿಡಿದ ವ್ರತನೇಮನಿತ್ಯಕ್ಕೆ
ತಪ್ಪಲಿಲ್ಲಾಯೆಂದು ಕೊಟ್ಟ ಚೀಟ ಸಿಕ್ಕಿಸಿದೆ ನಿಮ್ಮಂಗದಲ್ಲಿ.
ಭಕ್ತರಾಗಿ ಕಳವು ಹಾದರ ಮಿಕ್ಕಾದೊಂದೂ ಬೇಡ
ಎಂದು ಕೊಟ್ಟ ಚೀಟು ವಿಶುದ್ಧಿ,
ಜಗದ ಸುಂಕದೊಡೆಯ ಬಂಕೇಶ್ವರಲಿಂಗನು. ॥ ೪ ॥

೬೧೩

ಮುತ್ತು ಮೊಲೆಯ ನುಂಗಿತ್ತು, ಮೊಲೆ ಅಬಲೆಯ ನುಂಗಿತ್ತು
ಅಬಲೆಯ ಬಲೆಯಲ್ಲಿ, ಬಲವಂತರೆಲ್ಲರು ಸಿಕ್ಕಿದರು.
ಸುಂಕಕ್ಕಡಹಿಲ್ಲ, ಬಂಕೇಶ್ವರಲಿಂಗಾ. ॥ ೫ ॥

೬೧೪

ಎಂಬತ್ತನಾಲ್ಕುಲಕ್ಷಕೋಟಿ ಮಾರಿನಲ್ಲಿ
ಮಾರಿಸಿಕೊಂಡ ಶರೀರ ಇದ ತಂದವರಾರಣ್ಣಾ.
ಕಾಯಕ್ಕೆ ಜೀವ ಸುಂಕವ ಕೊಡದೆ,
ಕಾಯದೊಳಗಣ ಬಂದ ಭಾವಭ್ರಮೆ ಸುಂಕ.
ಈ ವಿಧದ ಚೀಟ, ಬಂಕೇಶ್ವರಲಿಂಗದಲ್ಲಿ ಒಪ್ಪಿಸಿಕೊಳ್ಳಿರಣ್ಣಾ. ॥ ೬ ॥

೬೧೫

ಹುಲಿ ಹುತ್ತ ಕಳ್ಳರ ಹಾದಿ, ಬಲುಗೈಯರ ತೆಕ್ಕೆ,
ಇದು ಬಲವಂತತನದಿಂದ ಆಗದು,
ಅವರವರ ಒಲವರದಿಂದಲ್ಲದೆ.
ಗೆಲುವ ಮನ, ಸೋಲುವ ಕಾಯ, ಈ ಉಭಯದ ಒಲವರದಿರವು,
ಶರೀರದ ಸುಂಕ, ಬಂಕೇಶ್ವರಲಿಂಗಕ್ಕೆ. ॥ ೭ ॥

೬೧೬

ಭಾವವಿಕಾರ ಕಾಯಕ್ಕೆ ಚೇಗೆ.
ಕಾಯದ ಕೇಡು, ಅರಿವಿಂಗೆ ಆಶ್ರಯಿಸುವದಕ್ಕೆ ಹೀನ.
ಉಭಯದಲ್ಲಿ ಬಂದುದಕ್ಕೆ ಕಾಯ ಸುಂಕವ ತೆತ್ತು
ಜೀವ ಹೋಯಿತ್ತು, ಬಂಕೇಶ್ವರಲಿಂಗದಲ್ಲಿ. ॥ ೮ ॥

೬೧೭

ಕೊಂಡವಂಗೆ, ಕೂಲಿಗೆ ಕಟ್ಟಿದವಂಗೆ,
ಲಂಡ ಗುರುವಿಂಗೆ, ಜಗಭಂಡ ಶಿಷ್ಯ.
ಇತ್ತಂಡದ ಮೊಟ್ಟೆಯ ಸುಂಕ,
ಕೊಟ್ಟಿತ್ತು ಜೀವಕಾಯದ ಬಂಕೇಶ್ವರಲಿಂಗಕ್ಕೆ. ॥ ೯ ॥

೬೧೮

ಕ್ರೀಯೆಂಬ ಬೆವಹಾರವ ಮಾಡುವಾಗ,
ಆಚಾರವೆಂಬ ಸೆಟ್ಟಿ ಕೊಂಬಲ್ಲಿ,
ಅರಿವೆಂಬ ಸುಂಕ ಹುಟ್ಟಿತ್ತು.
ತಲೆವಿಡಿ ಕೊಳುವಿಡಿ ಬಂದಿತ್ತು.
ಕ್ರೀಯ ಮಾರಿದವಂಗೆ, ಆಚಾರವ ಕೊಂಡವಂಗೆ
ಉಭಯದ ಸುಂಕ ಸಿಕ್ಕಿತ್ತು, ಬಂಕೇಶ್ವರಲಿಂಗದಲ್ಲಿ. ॥ ೧೦ ॥

೬೧೯

ಕೊರಳು ತಲೆಹೊರೆ ಭವಜನ್ಮ ತೊಟ್ಟು,
ಘಟಕಾಲನ ಕಾಲಾಟಕ್ಕೆ ಸುಂಕ,
ಅದು ನಮ್ಮ ಹಾದಿಯಲ್ಲ,
ಬಂಕೇಶ್ವರಲಿಂಗಕ್ಕೆ ಹೊಲಬಲ್ಲ. ॥ ೧೧ ॥

೬೨೦

ಅರಿದಾಡುವಲ್ಲಿ ಹೊರೆಸುಂಕ.
ಅರಿವು ತೆರೆದು ಬಿಟ್ಟಲ್ಲಿ ಪಸರಸುಂಕ.
ಇಚ್ಛೆಯನರಿತ ಭಕ್ತಿಜ್ಞಾನ ನಿಶ್ಚಯವಾದಲ್ಲಿ,
ಬಚ್ಚಬಯಲಸುಂಕ, ಬಂಕೇಶ್ವರಲಿಂಗಾ. ॥ ೧೨ ॥

೬೨೧

ಕಾಲದೊಳು ತನುದಂಡಣೆ, ಜೀವಭವ ಸಂಭವ.
ಈ ಉಭಯವು ಪ್ರಕೃತಿಯೊಳಗಾದಲ್ಲಿ,
ಅರಿವು ಹೋಯಿತ್ತು ಸುಂಕಕ್ಕೆ, ಬಂಕೇಶ್ವರಲಿಂಗದಲ್ಲಿ. ॥ ೧೩ ॥

೬೨೨

ಸುಖವ ನಿಶ್ಚೈಸಲಿಲ್ಲ, ಅದು ದುಃಖಕ್ಕೆ ಬೀಜ.
ದುಃಖವ ನಿಶ್ಚೈಸಲಿಲ್ಲ, ಸುಖದೊಡಲು.
ಸುಖದುಃಖವೆರಡು ಕಾಲನ ಸುಂಕಕ್ಕೆ ಒಳಗು.
ಬಂಕೇಶ್ವರಲಿಂಗದೊಳಗೆ ಒಬ್ಬರೂ ಇಲ್ಲ. ॥ ೧೪ ॥

೬೨೩

ಸಾಗರದ ತಡಿಯಲ್ಲಿ ಒಂದು ಆರವೆ.
ಆರವೆಯ ಬೇರಿನಲ್ಲಿ ಮೂರುಲೋಕ.
ಲೋಕದೊಳಗೆ ಹೊತ್ತು ಬೆವಹಾರ ಮಾಡುವ ಅಣ್ಣಗಳೆಲ್ಲರೂ
ಹೇರಿನ ಮೂಲೆಗೆ ತೋಳಕೊಟ್ಟು, ಅಳಿವ ಕೊಳಗಕ್ಕೆ ಕೈಯನಿಕ್ಕಿದರು.
ಗಡಿವಾಡದ ಸುಂಕವ ಕದ್ದು ಹೋಗಲರಿಯದೆ
ಬಂಕೇಶ್ವರಲಿಂಗವನರಿಯಿರಣ್ಣಾ. ॥ ೧೫ ॥

೬೨೪

ಅಂಬುಧಿಯಲ್ಲಿ ಹಡಗು ಬರುತ್ತಿರಲಾಗಿ,
ಹಡಗಿನ ಕುಕ್ಕೊಂಬಿನ ಮೇಲೆ ಒಂದು ಕರಡಿ ಬಂದಿತ್ತು.
ಆ ಕರಡಿಗೆ ಕಾಲು ಮೂರು, ಕಣ್ಣು ಒಂದು, ಬಾಲ ಕಡೆಯಿಲ್ಲ,
ಬಂಕೇಶ್ವರಲಿಂಗಕ್ಕೆ ಹಡಗಿನ ಸುಂಕ ಕಡೆನಡುವಿಲ್ಲ. ॥ ೧೬ ॥

೬೨೫

ಊರ ಹೊರಗಣ ಹೊಲೆಯರ ಮನೆಯಲ್ಲಿ ಈರೈದು ಮಗ್ಗ.
ಆ ಮಗ್ಗಕ್ಕೆ ಒಬ್ಬನೆ ಹಾರುವ ನೈವಾತ.
ಆ ಮಗ್ಗದೊಳಗಿದ್ದು ಸುಂಕಕಂಜಿ ಹೊಲೆಯನಾದ,
ಬಂಕೇಶ್ವರಲಿಂಗವನರಿಯದೆ. ॥ ೧೭ ॥

೬೨೬

ಹಡಗಿನ ಮನೆ ಮೂರು.
ಸುರೆಯ ಗಡಿಗೆಯ ಹೊತ್ತು ಮಾರುವ ಅಸುವಿನ
ಘಟಸುಂಕ, ತೆರಿಗೆಯ ಭೇದ.
ಅರಿದು ನಡೆ, ಪಥ ಶುದ್ಧವಾಗಿ,
ಬಂಕೇಶ್ವರಲಿಂಗದೊಪ್ಪದ ಚೀಟ ಕೊಂಡು. ॥ ೧೮ ॥

೬೨೭

ಕಾಳೋರಗನ ಹಿಡಿದು ಹೇಳಿಗೆಯ ಕೂಡಿ,
ಹೊತ್ತಾಡುವ ಹಾವಡಿಗಂಗೆ ಹಾವಿನ ಸುಂಕ.
ಅದ ಹಿಡಿದಾಡಿದ ಕಾರಣ, ಅದು ಕೊಡುವ ಕೊಂಬ ಭೇದ.
ಅದು ತಡೆಯ ಬಿಟ್ಟಡೆ ಸುಂಕವ ಕೊಡಲಿಲ್ಲ,
ಬಂಕೇಶ್ವರಲಿಂಗಕ್ಕೆ. ॥ ೧೯ ॥

೬೨೮

ಸಾಕಾರವೆಂಬ ಸೆಟ್ಟಿ, ಜೀವವೆಂಬ ಎತ್ತಿನ ಮೇಲೆ
ಎತ್ತಿ ಹೊಡೆಯಲಾಗಿ, ಬಹುವಿಧ ಚರಿತ್ರದ ಭೇದ

ಬೆವಹಾರದ ಒಡೆಯಂಗೆ ಕೊಡಿ.
ಕರಣಂಗಳೆಂಬ ಸರಕ ಹೊತ್ತುವಾರುವ ಸೆಟ್ಟಿಗಳೆಲ್ಲರೂ
ಕೊಡಿ ಬಂಕೇಶ್ವರಲಿಂಗಕ್ಕೆ ಸುಂಕವ. || ೨೦ ||

೬೨೯

ಸಾಕಾರವೆಂಬ ಚೀಲದಲ್ಲಿ, ಪ್ರಕೃತಿ ವಿಕಾರವೆಂಬ ಭಂಡವ ತುಂಬಿ,
ಕ್ರಿಯಾ ಧರ್ಮಂಗಳೆಂಬ ದಾರವ ದಾರದಲ್ಲಿ ಸೇರಿಸಿ,
ಕಟ್ಟಲರಿಯದ ಅಣ್ಣಗಳಿಗೆ ಜಗಸೆಟ್ಟಿತನವೇಕೆ ?
ಸುಂಕ ಸಿಕ್ಕಿತ್ತು, ಬಂಕೇಶ್ವರಲಿಂಗದಲ್ಲಿ. || ೨೧ ||

೬೩೦

ವೇಷ ಲಾಂಛನವೆಂಬ ಪಾತದ ಹೊರೆಯ ಹೊತ್ತು,
ಬೆವಹಾರ ಮಾಡುವ ಹರದಿಗರೆಲ್ಲರೂ ಹರದಿಗರಲ್ಲಾ ಹರವರಿಯಲ್ಲಿ,
ಉಭಯಮಾರ್ಗವ ಬಿಟ್ಟು,
ವೇಷತನದ ಕಳ್ಳಹಾದಿಯಲ್ಲಿ ಹೋಗಿ ಸಿಕ್ಕಿದಿರಿ,
ಕಾಲನ ಕಾಲಾಟಕ್ಕೆ ಬಂಕೇಶ್ವರಲಿಂಗಕ್ಕೆ ಅರಿವಿನ ಸುಂಕದ ಪಥವ ತಪ್ಪಿ. || ೨೨ ||

೬೩೧

ಬ್ರಹ್ಮನ ಕುದುರೆಯ ಮಾಡಿ, ವಿಷ್ಣುವ ಹೇರ ಮಾಡಿ,
ಸಕಲಭೋಗೋಪಭೋಗಂಗಳೆಲ್ಲವ ಸರಕ ಮಾಡಿ,
ಶ್ರದ್ಧೆ ನಿಬದ್ಧಿಯೆಂಬ ರುದ್ರ ಮಾರುತ್ತಿರಲಾಗಿ,
ವಿರಕ್ತಿಯೆಂಬ ಚೀಟಿಗೆ ಒಪ್ಪವಿಲ್ಲದಿರಲು,
ಅಲ್ಲಿ ಸಿಕ್ಕಿದ ಅಂತಕನ ಕೋಲುಕಾರಂಗೆ,
ಬಂಕೇಶ್ವರಲಿಂಗನ ಒಪ್ಪವಿಲ್ಲದ ಕಾರಣ. || ೨೩ ||

೬೩೨

ಹರಿವ ಮನ ತುರಗ, ಅಹಂಕಾರ ಗಜ,
ಮೂಢಚಿತ್ತ ಒಂಟೆಯಾಗಿ, ಜೀವಗಳು ವ್ಯವಹಾರಿಯಾಗಿ,
ಅಂಗವೆಂಬ ಭೂಮಿಯಲ್ಲಿ ಬೆವಹಾರವ ಮಾಡಲಾಗಿ,
ಚಿತ್ತವೆಂಬ ಸೂಳುಗಾರ ಒಪ್ಪದ ಚೀಟ ತೋರಿಯೆಂದಲ್ಲಿ ಸಿಕ್ಕಿದ.
ಜೀವವೆಂಬ ಸೆಟ್ಟಿ ಭವದ ತಕ್ಕೆಯ ಸೆರೆ
ಸಾಲಿಯಲ್ಲಿ ಕೆಟ್ಟಿತ್ತು ಸುಂಕ,
ಬಂಕೇಶ್ವರಲಿಂಗಕ್ಕೆ ನಷ್ಟ, ಬಂದುದಿಲ್ಲ. || ೨೪ ||

೬೩೩

ಆಸೆಯೆಂಬ ಕತ್ತೆಯ ಮೇಲೆ ಪೂಸತನವೆಂಬ ಸೆಟ್ಟಿವೇಷ,
ವೇಷಲಾಂಛನದ ಚಿತ್ತವಾಸದ ಪಾಶವನೆತ್ತಿ

ಈಶನರಿಯದ ಸೆಟ್ಟಿ ವಿಷಕ್ಕಾಗಿ ಕೈಯಾಂತು,
ತನ್ನ ಬೆವಹಾರಕ್ಕೆ ನಷ್ಟಬಂದಿತ್ತು
ಬಂಕೇಶ್ವರಲಿಂಗಕ್ಕೆ ಲಾಭವಾಯಿತ್ತು || ೨೫ ||

೬೩೪

ತೋರುವ ತೋರಿಕೆ ಸಬರೆ ಮುಟ್ಟಾಗಿ,
ಭಾವಭ್ರಮೆ ಸರ್ವತ್ರವ್ಯಾಪಾರ ವಿದಳ ಧಾನ್ಯವಾಗಿ,
ಚಿತ್ತವನರಿಯದ ಭಾವ ಎತ್ತಾಗಿ,
ಜಗವ ಸಿಕ್ಕಿಸುವ ವೇಷ ಲಾಂಛನಧಾರಿ ಸೆಟ್ಟಿಯಾಗಿ,
ಸರ್ವಪ್ರಕೃತಿ ದೇಶದಲ್ಲಿ ಬೆವಹಾರವ ಮಾಡುತ್ತಿರಲು,
ನಿರಾಸಕ ಕೋಲುಕಾರ ತನುವಿನ ಸೆಟ್ಟಿಯ ತಡೆ ಬಿಟ್ಟಿತ್ತು
ಗತವಾಗಿ, ಕಾಲದ ಮಂದಿರಕ್ಕೆ ಒಪ್ಪದ ಚೀಟಲ್ಲದೆ,
ಬಂಕೇಶ್ವರಲಿಂಗಕ್ಕೆ ಸುಂಕಲಾಭವಾಯಿತ್ತು || ೨೬ ||

೬೩೫

ಇದು ಜಗವ್ಯವಹಾರಣೆಯ ಧರ್ಮ, ಮುಂದಕ್ಕೆ ಐಕ್ಯಾನುಭಾವ.
ಕಾಯ ಅಕಾಯದಲ್ಲಿ ಅಡಗಿ, ಜೀವ ನಿರ್ಜೀವದಲ್ಲಿ ಅಡಗಿ,
ಭ್ರಮೆ ಸಂಚಾರವಿಲ್ಲದೆ,
ಮಹಾಘನದಲ್ಲಿ ಸಂದು, ಉಭಯದ ಸಂದಿಲ್ಲದೆ
ಬಂಕೇಶ್ವರಲಿಂಗದಲ್ಲಿ ಸಲೆ ಸಂದವನ ಒಲುಮೆ. || ೨೭ ||

೬೩೬

ಶೋಣಿತವ ಮುತ್ತಿದ ನೊಣನ, ಆ ಶೋಣಿತವೇ ತಿಂದಿತ್ತು
ಅಡಗ ತಿಂಬ ಕುಕ್ಕುರನ, ಆ ಅಡಗೇ ತಿಂದಿತ್ತು
ಇಷ್ಟವನರಿವ ಚಿತ್ತವನು, ಆ ಇಷ್ಟವೇ ತಿಂದಿತ್ತು
ಬಂಕೇಶ್ವರಲಿಂಗವನರಿವ ಮನವ, ಅದು ತಾನೆ ಅವಗವಿಸಿತ್ತು || ೨೮ ||

೬೩೭

ಕಣ್ಣಿನ ಕಡೆಯ ಕಾಡಿಗೆಯನಿಕ್ಕಿದವಳ
ಅಣ್ಣನ ಕಣ್ಣಿನಲ್ಲಿ ಮೂರು ಕಣ್ಣಿ ಹುಟ್ಟಿದವು.
ಒಂದು ಕಣ್ಣಿ ಕುಂಭಕ್ಕೆ ಕುಣಿಕೆ.
ಒಂದು ಕಣ್ಣಿ ಎರಡರ ತಲಪು ಕೂಡಿದ ಕುಣಿಕೆ.
ಮತ್ತೊಂದು ಕಣ್ಣಿ ಕುಣಿಕೆಗೆ ಮೋಸ.
ಈ ಮೂರು ಕಣ್ಣಿಯ ಮುಪ್ಪುರಿಗೂಡಬೇಕು.
ಅವು ಹುರಿವಿಟ್ಟಂದ ಇವಾರಿಗೂ ಅಸಾಧ್ಯ,
ಬಂಕೇಶ್ವರಲಿಂಗವನರಿವವರಿಗಲ್ಲದಾಗದು. || ೨೯ ||

೬೩೮

ಅಪ್ಪು ಉತ್ಪತ್ಯವಾಗಿ ಜಗವ ಕದಡುವಾಗ,
ಇರುಹಿನ ಮೊಟ್ಟೆ ಹೆಪ್ಪಳಿದುದಿಲ್ಲ.
ಇರುಹಿನ ಗೂಡಿನ ಗುಹೆಗೆ ಅಪ್ಪು ಮುಟ್ಟಿದುದಿಲ್ಲ.
ಇದೇನು ಚೋದ್ಯ ? ಬಂಕೇಶ್ವರಲಿಂಗದಲ್ಲಿ ಆರಡಿಗೊಂದು ಬನ್ನಿ. ॥ ೩೦ ॥

೬೩೯

ಮಹಿಮಾಪದದಲ್ಲಿ ಒಂದು ಮನೋಹರದ ಪಟ್ಟಣ.
ಪಟ್ಟಣದ ಸುತ್ತುವಳೆಯದಲ್ಲಿ ಇಕ್ಕಿದ ಕೋಟೆ.
ರಸಮಂದಿರದ ಮಣ್ಣು, ನಿರಂಜನದ ಅಗಳು.
ತತ್ವಾರ್ಥದ ಆಳುವೇರಿ, ಮಂಡೆಗೆಮರೆ ತೆನೆ.
ಮುಕ್ತಿ ನಿಶ್ಚಯವಾದ ಪೃಥ್ವಿಪಟ.
ಅದರೊಳಗಾದ ಎಂಬತ್ತನಾಲ್ಕುಲಕ್ಷ ಮನೆಯಲ್ಲಿ
ಹೊಂದುವರೊಬ್ಬರೂ ಇಲ್ಲ.
ಪಟ್ಟಣ ಆರಿಗೂ ಸಾಧ್ಯವಲ್ಲ, ಬಂಕೇಶ್ವರಲಿಂಗವನರಿತವರಿಗಲ್ಲದೆ. ॥ ೩೧ ॥

೬೪೦

ಕಾಯದ ಜೀವದ ಮಧ್ಯದಲ್ಲೊಂದೂರ ಬಾಗಿಲಲ್ಲಿ
ಮೂವರು ಹೊಲೆಯರ ಕಾವಲು.
ಒಬ್ಬ ಜಾತಿಸೂತಕ, ಒಬ್ಬ ಜನನಸೂತಕ, ಒಬ್ಬ ಪ್ರೇತಸೂತಕ.
ಇಂತೀ ಗ್ರಾಮದ ಹೊಲೆಯರು ಕೊಂಡಾಡುತ್ತಿದ್ದರು.
ಒಬ್ಬಂಗೆ ಅಂಡೊಡೆದು, ಒಬ್ಬಂಗೆ ಅಂಗ ಭಿನ್ನವಾಗಿ,
ಒಬ್ಬಂಗೆ ಶಿರಚ್ಛೇದನವಾಗಿ,
ಗ್ರಾಮದ ಬಾಗಿಲು ಬಟ್ಟಬಯಲಾಯಿತ್ತು,
ಬಂಕೇಶ್ವರಲಿಂಗವನರಿಯಿರಣ್ಣಾ. ॥ ೩೨ ॥

೬೪೧

ಕಾಳೆಯ ಮೊಗಹಿನಲ್ಲಿ ಒಂದು ಜೀರುಂಡೆ ಹುಟ್ಟಿ,
ಅದು ಆರ ಮಾತನೂ ಕೇಳಲೀಸದು.
ಅದು ಕಾಳೆಯ ಮೊಗಹಿನ ಸತ್ವ.
ಆ ಕಹಳೆ ಏಳೋಧರ ಕಮ್ಮಟಕೆ ಈಡೆಂದು ಹೇಳುತ್ತಿಪ್ಪುದು.
ಆ ಜೀರುಂಡೆಯ ಭೇದ, ಕಾಳೆಯ ಘಟ,
ಬಂಕೇಶ್ವರಲಿಂಗವ ಕೇಳಿಯಲ್ಲದೆ ಅರಿಯಬಾರದು. ॥ ೩೩ ॥

೬೪೨

ಮಾಧವನ ಪಟ್ಟಣದಿಂದ ಓಡಿದರು ಮೂವರು ಸೂಳೆಯರು.
ಅವರು ಹೋದ ಹಾದಿಯಲ್ಲದೆ, ಬೇರೊಂದು ಹಾದಿಯಲ್ಲಿ

ಅರಸಿ ಕಂಡರು ಸೂಳೆಯರ.
ಅವರ ಮೂವರ ಸೆರೆಯ ವಿವರ:
ಬಾಯಿಗೆ ಕೋಳ, ಕಾಲಿಗೆ ನೂಲೆಳೆಯ ಕಟ್ಟು,
ಕೈಹೋಗದಂತೆ ಕೂರಲಗಿನ ಸಂಭವ ಕಟ್ಟು,
ಮೂವರ ಅಗಡ ಹಿಂಗಿತ್ತು,
ಇನ್ನೈವರ ಕೇಳಿ, ಬಂಕೇಶ್ವರಲಿಂಗವ. ॥ ೩೪ ॥

### ೬೪೩

ಬಂದವರಿವರಾರು ? ಅಂದಗೇಡಿಯ ಮೂಳಿಯ ಮಕ್ಕಳು.
ಅವರು ಸಂದುಸಂದಿಗೆಲ್ಲಕ್ಕೂ ಕೊಂದಾಡುತ್ತಿರ್ಪರು.
[ಖ]ಂಡವನೊಲ್ಲರು, ಹಿಡಿ[ಖ]ಂಡವ ತಿಂಬರು,
ಅವರೆಂದಿಗೂ ಮೂಳಿಯ ಮಕ್ಕಳು.
ಇದು ಸಂದೇಹವಲ್ಲ, ಬಂಕೇಶ್ವರಲಿಂ[ಗಾ]. ॥ ೩೫ ॥

### ೬೪೪

ಕೋಡಗ ಬಲಿದು ಕೋಣನಾಗಿ, ಕೋಣನ ಕೋಡಿನಲ್ಲಿ ಈರಾರು ಸೇನೆ
ಸೇನೆಗೊಬ್ಬ ಭಟ, ಭಟಗೆ ಮೂವರು ಸತಿಯರು.
ಸತಿಯರ ಕುಚದ ನಡುವೆ ಒಂದು ಕಸ.
ಹಾವು ಕಚ್ಚಿ ಭಟರೆಲ್ಲರೂ ಸತ್ತರು.
ನಿರ್ಭೀತಿವಂತರು-ಕೇಳಿ ಬಂಕೇಶ್ವರಲಿಂಗವ. ॥ ೩೬ ॥

### ೬೪೫

ತುರೀಯದಲ್ಲಿ ಕೂಡಿದ ಕೂಟ ಸುರತಕ್ಕೆ ಈಡಲ್ಲ.
ತದನಂತರದಲ್ಲಿ ಕೂಡಿದ ಕೂಟ ಕರಣಂಗಳ ಹೋರಟೆ.
ಕಡೆಯಲ್ಲಿ ಕೂಡಿದ ಕೂಟ ವಿಷಯಕ್ಕೆ ಒಡಮರಣವಾಯಿತ್ತು.
ಈ ತ್ರಿವಿಧದ ತೊಡಿಗೆಯನರಿ, ಬಂಕೇಶ್ವರಲಿಂಗವ ಒಡಗೂಡುವುದಕ್ಕೆ. ॥೩೭॥

### ೬೪೬

ಎವೆಯ ಮುಚ್ಚಿ, ಕಣ್ಣು ತೆರೆಯಬೇಕು.
ಶರೀರವ ಗೆದ್ದು, ಜ್ಞಾನವನರಿಯಬೇಕು.
ಜ್ಞಾನವ ಮರೆದು, ವಿಜ್ಞಾನ ಸುಜ್ಞಾನದಲ್ಲಿ ನಿಂದು,
ಚಿದ್ಘನದಲ್ಲಿ ಚಿಚ್ಛಕ್ತಿಯ ಕೂಡಿ, ಚಿಚ್ಛಕ್ತಿ ನಷ್ಟವಾಗಿ ವಸ್ತುಲೇಪ.
ದೃಕ್ಕಿಂಗೆ ಅಗೋಚರವಾಗಿ,
ತತ್ವಮಸಿಯೆಂಬ ಭಿತ್ತಿಯ ಭಾವವಿತ್ತಲೆ,
ಅತ್ತಲರಿ, ಬಂಕೇಶ್ವರಲಿಂಗವ. ॥ ೩೮ ॥

೬೪೭

ಹಸಿದುಂಬ ಅಣ್ಣಗಳೆಲ್ಲರೂ ಅಸುವಿನ ಘಾತಕ್ಕೊಳಗಾದರು.
ಹಸಿ[ವೆ]ಯ ವಿಷಯಂಗಳಲ್ಲಿ ನಸಿದಾಡದೆ ಹುಸಿಯದೆ,
ಮರ್ತ್ಯರಂತೆ ಗಸಣೆಗೊಳ್ಳದೆ, ದಯದೆರಕದಲ್ಲಿರು,
ಬಂಕೇಶ್ವರಲಿಂಗವನರಿವುದಕ್ಕೆ. || ೩೯ ||

೬೪೮

ಪೃಥ್ವಿಯ ಸಾರಗೆಟ್ಟ ಹೊಲದಲ್ಲಿ, ಆರವೆಯಿಲ್ಲದ ಮರ ಹುಟ್ಟಿ,
ಕಣ್ಣಿಗೆ ತೋರಲಿಲ್ಲದ ಬಿತ್ತಾಯಿತ್ತು
ಅದು ಈ ಧರೆಯಲ್ಲಿ ಬಿತ್ತಿದಡೆ, ಆ ಧರೆಯಲ್ಲಿ ಹುಟ್ಟಿತ್ತು
ಅದರಿಂದಾಚೆ ಫಲವಾಯಿತ್ತು, ಕೊಂಬಿಂದೀಚೆ ಹಣ್ಣಾಯಿತ್ತು,
ಹಣ್ಣು ಮೆಲುವ ಬಾಯಿಗೆ ಹಣ್ಣೆತ್ತು
ಈ ಹಣ್ಣಿನ ಸವಿಯ ಹೇಳು, ಚೆನ್ನಬಂಕೇಶ್ವರಲಿಂಗಾ. || ೪೦ ||

೬೪೯

ದಬ್ಬಳ ಧರೆಯ ಚುಚ್ಚಲಾರದೆ,
ಹಾಗ ಮುಳ್ಳು ಮೂರುಲೋಕವ ಚುಚ್ಚಿತ್ತು,
ರಟ್ಟೆ ಬಲಿದ ಹಕ್ಕಿ ಹಾರಲಾರದೆ,
ಆ ಕೊಂಬಿಂದ ಈ ಕೊಂಬಿನಲ್ಲಿ ಉಳಿಯಿತ್ತು,
ತುಪ್ಪುಳ ಬಾರದ ಮರಿ ಮಹದಾಕಾಶವ ಸುತ್ತಿತ್ತು,
ಹೆತ್ತವಳರಿಯದ ಮದ್ದ, ಆಗ ಹುಟ್ಟಿದ ಶಿಶು ಅರಿಯಿತ್ತು,
ತಮ್ಮವ್ವೆಗೆ ಮದ್ದ ಕೊಟ್ಟು, ತಾ ಸತ್ತಿತ್ತು, ಬಂಕೇಶ್ವರಲಿಂಗದಲ್ಲಿ. || ೪೧ ||

೬೫೦

ಸೂತಕ ತಡೆದಲ್ಲಿ ಮಕ್ಕಳಾದಹರೆಂದು ಮಚ್ಚಿಪ್ಪುದು ಜಗ.
ಸೂತಕವೇತರಿಂದೊದಗೂದು.
ಜಗದ ಉತ್ಪತ್ಯ, ಈ ಕಾಯದ ಆಶೆಯ ಸೂತಕ ತಡೆದು,
ನಿರಾಶೆಯ ಮಾತೆಯ ಗರ್ಭದಲ್ಲಿ, ನಿರ್ಜಾತನು ಬೆಸಲಾದ.
ಭಾವವೆಂಬ ಯೋನಿಯಲ್ಲಿ, ಬಂಕೇಶ್ವರಲಿಂಗ ಅಂತುಕ ಕುಮಾರನಾದ. || ೪೨ ||

**ಭಾವಪಿಂಡಜ್ಞಾನ ಐಕ್ಯಲೇಪ ಸ್ಥಲ :**

೬೫೧

ಹಾವ ಕೊಂದು ತಿಂದ ಹದ್ದ, ತಾ ತಿಂದಡೆ, ಸ್ವಾನುಭಾವಜ್ಞಾನಿ.
ಹುಲಿಯ ಕೊಂದ ನಾಯ ಕೊಲ್ಲದೆ ತಂದಡೆ, ಆತ ಪರಂಜ್ಯೋತಿ ಪ್ರಕಾಶ.
ಇಂತೀ ಹಾವಿನ ಹಗೆ, ಹುಲಿಯ ವಿರೋಧ.

ಇಂತೀ ಉಭಯವ ತಿಂದವನ ತಿಂದು,
ವಿಚ್ಛಂದವಿಲ್ಲದೆ ಬದುಕು, ಬಂಕೇಶ್ವರಲಿಂಗವನರಿವುದಕ್ಕೆ. || ೪೩ ||

೬೫೨

ಹಾವು ಸತ್ತು ಹೇಳಿಗೆಯ ಹೊತ್ತಾಡುವವರೆಲ್ಲರೂ ಎನ್ನವರು.
ಹುಲಿ ಸತ್ತು ಗೂಡ ಹೊತ್ತಾಡುವವರೆಲ್ಲರೂ ಎನ್ನವರು.
ಮಕ್ಕಳಿಲ್ಲದ ಬಂಜೆ ಗೊತ್ತಿಲ್ಲದ ರೂಪು ಮಾರಿ ಮಿಕ್ಕುದು ಎನ್ನೊಡವೆ.
ರೂಪು ರುಚಿ ತೃಪ್ತಿ ಭಾವ ಅದು ನಿನ್ನೊಡವೆ.
ನನಗೂ ನಿನಗೂ ತತ್ತುಗೊತ್ತು, ಬಂಕೇಶ್ವರಲಿಂಗಾ. || ೪೪ ||

೬೫೩

ಹೊಲದೊಳಗೊಂದು ಹುಲ್ಲೆ ಮರಿಯನೀದು, ಲಲ್ಲೆಯಿಂದ ನೆಕ್ಕುತ್ತಿರಲಾಗಿ,
ಅದು ಹುಲಿಯ ಮರಿಯಂತಾಯಿತ್ತೆಂದು
ತನ್ನ ಹೊಲಬಿಗೆ ತೋರಿ ಲಲ್ಲೆಯ ಬಿಟ್ಟಿತ್ತು.
ಬಿಟ್ಟುದನರಿದು, ಆ ಮರಿ ಹುಲಿಯಾಗಿ ಹುಲ್ಲೆಯ ತಿಂದಿತ್ತು.
ಬಂಕೇಶ್ವರಲಿಂಗ, ಎನ್ನಯ ಶಂಕೆಯ ಹೇಳಯ್ಯಾ. || ೪೫ ||

೬೫೪

ರಕ್ಕಸಿಯ ಕೋರೆದಾಡೆಯಲ್ಲಿ,
[ಕ]ಪ್ಪುಹಲ್ಲಿನ ಮಧ್ಯದಲ್ಲಿ ಒಂದು ಒಪ್ಪದ ಶಿಶು ಹುಟ್ಟಿತ್ತು.
ಅವಳು ಕಚ್ಚುವ ಜೀವವ ತಪ್ಪಲಿಕ್ಕೂದು.
ಅವಳು ಅಡಗ ಕಡಿವಲ್ಲಿ, ದಾಡೆಯಲ್ಲಿ ಅಡಗಿ ಅಗಿಯಲೀಸದು.
ಅವಳು ಶಿಶುವನಗಿದೆಹೆನೆಂದಡೆ,
ದಾಡೆಯೊಳಗಡಗಿ ಉಗಳೂದಕ್ಕೆ ಅಸಾಧ್ಯ.,
ತನ್ನ ತಲೆಯಳಿದಲ್ಲದೆ, ಶಿಶುವಿನ ಹಗೆ ಬಿಡದು.
ಬಂಕೇಶ್ವರಲಿಂಗ ನೀ ಮಾಡಿದ ಮಾಯೆ, ಇದಾರಿಗೂ ಅಸಾಧ್ಯ. || ೪೬ ||

೬೫೫

ಸುಧೆಯ ಸುಮ್ಮಾನದ ಗಿರಿಯಲ್ಲಿ ಒಂದು ಮಲಯಜದ ಮರ ಹುಟ್ಟಿತ್ತು.
ಬೇರಿಲ್ಲದೆ ನೀರಿಲ್ಲದೆ ಭೂಮಿಯೊಳಗಲ್ಲದೆ ಬೆಳೆವುತ್ತದೆ ನೋಡಾ.
ಅದಕ್ಕೆ ಬೇರಿನೊಳಗಣ ಹಣ್ಣು
ಮರದ ಮಧ್ಯದಲ್ಲಿ ಕಾಯಿ, ತುದಿಯಲ್ಲಿ ಹೂ.
ತುದಿಯಲ್ಲಿ ಕುಸುಮ ಬಲಿದು,
ಮರದ ಮಧ್ಯದಲ್ಲಿ ಕಾಯಿ ಬಲಿದು, ರಸ ಬೇರಿಗಿಳಿಯಿತ್ತು.
ಬೇರಿನ ಹಣ್ಣು ಬಂಕೇಶ್ವರಲಿಂಗಕ್ಕೆ ಆರೋಗಣೆಯಾಯಿತ್ತು. || ೪೭ ||

೬೫೬

ರಕ್ಕಸಿ ಮಗುವ ಹೆತ್ತು, ಕರುಳ ನೇಣ ಮಾಡಿ,
ಹೆಣೆದ ತೊಟ್ಟಿಲ ಕಟ್ಟಿ, ರಕ್ತದ ಪಾಲನೆರೆದು,
ಮತ್ತ ಜೀವವ, ಜಗವನೊತ್ತಿ ತಿಂಬವನೆ,
ರಕ್ಕಸಿಯ ಹೊತ್ತು ಹೋಗದವನೆಯೆಂದು ತೊಟ್ಟಿಲ ಹಿಡಿದು ತೂಗೆ,
ಬಾಯ ಮುಚ್ಚಿ ಕಣ್ಣಿನಲ್ಲಿ ಅಳುತ್ತಿದ್ದಿತ್ತು
ಬಂಕೇಶ್ವರಲಿಂಗವ ನೋಡಿಹೆನೆಂದು. || ೪೮ ||

೬೫೭

ಕಾಲ ಸಂಹಾರವ ಮಾಡುವಲ್ಲಿ, ಕಾಳಗತ್ತಲೆಯ ಕೋಣೆಯೊಳಗೊಂದು
ಬಾಲಲೀಲೆಯ ಶಿಶು ಉಳಿಯಿತ್ತು.
ಬಾಲಲೀಲೆ ಹಿಂಗಿ, ವಿಷದ ವಿಳಿಗೆಯಾಯಿತ್ತು.
ಕಣ್ಣಿನಲ್ಲಿ ಮೊಲೆ ಹುಟ್ಟಿ, ಎದೆಯಲ್ಲಿ ಯೋನಿ ಹುಟ್ಟಿ,
ಕೈಯಲ್ಲಿ ಬೆಸಲಾಯಿತ್ತು.
ಅದು ಗಂಡೋ, ಹೆಣ್ಣೋ ಎಂದು ಅಂಡವ ಹಿಡಿದು ನೋಡಿ,
ಅಂಡಜಮುಗ್ಧೆಯ ಮಕ್ಕಳಿರಾ ಎಂದರವರು.
ಅದರಂದವ ನೋಡಿ, ಹೆಣ್ಣೂ ಅಲ್ಲ ಗಂಡೂ ಅಲ್ಲ
ನಡುವೆ ಒಂದು ಕೆಂಡದಂತಿದೆ.
ಬಂಕೇಶ್ವರಲಿಂಗಕ್ಕೆ ತೋರಿ, ಕುರುಹಿಟ್ಟುಕೊಂಬೊ. || ೪೯ ||

೬೫೮

ಅಯ್ದು ಕೂಡಿ ವೇಧಿಸಿ, ಹಿರಿಯ ಸಾಗರವಾಯಿತ್ತು.
ಇಪ್ಪತ್ತೈದು ಕೂಡಿ, ನಿಂದ ಸಮುದ್ರವಾಯಿತ್ತು.
ಆ ಸಮುದ್ರದ ನಡುವೆ ನೂರೊಂದು ತುದಿಯಿಲ್ಲದ ಬೆಟ್ಟ.
ತುದಿನೀರೊಳಗೆ ಮುಳುಗಿ, ಗಿರಿಯ ಅಂಡು ಆಕಾಶವ ನೋಡುತ್ತದೆ.
ಇದು ಚೋದ್ಯ, ಬಂಕೇಶ್ವರಲಿಂಗವ ಕೇಳುವ ಬನ್ನಿ. || ೫೦ ||

೬೫೯

ತತ್ವಾರ್ಥವ ಬಲ್ಲವಂಗೆ ಆ ತತ್ವಾರ್ಥವೆ ಕತ್ತಲೆಯ ಮಾಯೆ.
ಆಧ್ಯಾತ್ಮವ ಬಲ್ಲವಂಗೆ ಆ ಪವನನೆ ತನ್ನ ಸುತ್ತಿದ ಮಾಯೆ.
ಕ್ರೀಭಾವವಂತರಿಗೆ ಸಂದೇಹವೆ ತನ್ನ ಸುತ್ತಿದ ಮಾಯೆ.
ಇಂತಿವನಹುದಲ್ಲಾ ಎಂಬುದು ತಾ ಮಾಯೆ,
ಬಂಕೇಶ್ವರಲಿಂಗವ ಕೇಳಿಕೊಂಬ. || ೫೧ ||

೬೬೦

ಕ್ಷಯು ಕಾರಣವೆಂಬ ಪಟ್ಟಣಕ್ಕೆ ಲಯಕಾರಣವೆಂಬ ಅರಸು.
ಪೋಲಿಕಾರ ಪ್ರಧಾನ, ಮದೋನ್ಮತ್ತ ತಳವಾರ.
ಇಂತೀ ಪಟ್ಟಣದರಸು, ಮರವೆಯ ಮಹಾರಾಜ್ಯವನು ಆಳುತ್ತಿರಲಾಗಿ,
ಆತನ ಅಡಿಗೆರಗಿ ಅಂಜುವರಿಲ್ಲ,
ಬಂಕೇಶ್ವರಲಿಂಗವ ಕಂಡರಿಯದ ಕಾರಣ. || ೫೨ ||

೬೬೧

ಭಂಡವ ತುಂಬಿರಿಸಿದ ಮುಟ್ಟು, ಭಂಡ ಹುಳಿತಡೆ ಮುಟ್ಟಿ
ಮಾರುವರುಂಟೆ?
ಅಂಗ ಪ್ರಾಣಸಂಗದಲ್ಲಿ ಪ್ರಾಣಪ್ರಕೃತಿಯಾದ ಮತ್ತೆ ಅಂಗಕ್ಕೆ ಹಂಗುಂಟೆ?
ಪ್ರಾಣಪ್ರಕೃತಿಯ ಮಾಡಿ, ಅಂಗದ ಹಂಗವ ಕೊಳುತ್ತಿದೆ.
ಇದರ ಸಂಗವ ಕೇಳಿಕೊಂಬ ಬನ್ನಿ, ಬಂಕೇಶ್ವರಲಿಂಗದಲ್ಲಿಗೆ. || ೫೩ ||

೬೬೨

ಭಾನುತೇಜವ ರಾಹು ಕೊಂಡಲ್ಲಿ
ಸೋನೆಯ ಡುಂಡುಕ ತನ್ನಯ ಕೇಣವನೆತ್ತಿದಂತೆ,
ಎನ್ನಯ ಸುತ್ತಿದ ಮಾಯೆ ನಿನಗೆ ಅನ್ಯವೆ ?
ಅದು ನಿನ್ನಯ ಚುನ್ನ, ಚೆನ್ನಬಂಕೇಶ್ವರಲಿಂಗಾ. || ೫೪ ||

**ಸರ್ವಭಾವಲೇಪ ಸಂಬಂಧಸ್ಥಲ :**

೬೬೩

ಹುಳ್ಳಿ ಹಳ್ಳದಲ್ಲಿ ಹೋಗುತ್ತಿರೆ, ನೀರು ತಾಗಿ ಅಲ್ಲಾಡದಿಹುದೆ ?
ಸಂಸಾರಸಾಗರಮಧ್ಯದಲ್ಲಿ ವಾಸವಾಗಿದ್ದ ಆತ್ಮ
ಸಂಸಾರದ ಪಾಶ ತಾಗಿ ಓಸರಿಸದಿಹುದೆ ?
ರಸತಾಗಿದ ರಸ ಪಾವಕಂಗೆ ಹುಸಿಯಾದಂತೆ,
ಅಸು ಘಟಯೋಗ ಅದರ ದೆಸೆಯಂತೆ ಇರಬೇಕು,
ಹುಸಿ ದಿಟದಂತಿರಬೇಕು, ಬಂಕೇಶ್ವರಲಿಂಗವನರಿವುದಕ್ಕೆ. || ೫೫ ||

೬೬೪

ಪಂಕವ ಮೆಟ್ಟಿದ ಅಡಿ, ಉಭಯಕ್ಕೆ ಶಂಕೆದೋರದಿಹುದೆ ?
ತ್ರಿವಿಧವ ಕೂಡಿ ಆಡುವ ಮನ, ಅವರೊಳು ಒಡಗೂಡದಿಹುದೆ ?
ಅದರ ತೊಡಿಗೆಯನರಿತಡೆ ಗಡಿಗೆಯನೊಡಗೂಡಿದ ಜಲದಂತಿರಬೇಕು.
ಕಾರ್ಯ ಕೂಡಿದಲ್ಲಿ ಗಡಿಗೆಯಾಗಿ, ಮತ್ತೆ ವಾರಿಯ ಬೆರಸದಂತಿರಬೇಕು.
ಇದು ಕರತಳಾಮಳಕ, ಬಂಕೇಶ್ವರಲಿಂಗವನರಿವುದಕ್ಕೆ. || ೫೬ ||

೬೬೫

ತರುಗಿಡು ಗುಣನಾಮವಾದಡೇನು, ಸ್ಥಾಣುವಿನ ಒಲವರದ ತೆರ ಬೇರೆ.
ದರ್ಶನ ಸುಖಸಂಪತ್ತಾದಡೇನು, ಅರಿವಿನ ಒಲವರದ ತೆರ ಬೇರೆ.
ಎಲೆಯ ಹಾಕಿ ತನ್ನಲ್ಲಿಗೆ ಕರೆವವನ ಗುಣ ಲೇಸೆ ?
ಶಬರನ ವೇಷ, ಮೃಗದ ಹರಣದ ಕೇಡು.
ಹಿರಿಯತನವ ತೋರಿ, ತ್ರಿವಿಧವ ಬೇಡುವ ಅಡಿಗರಿಗೇಕೆ,
ಬಂಕೇಶ್ವರಲಿಂಗವ ಅರಿದ ಅರಿವು ? || ೫೭ ||

೬೬೬

ಹರಿಗೆಯ ಹಿಡಿದು ರಣವ ಹೊಕ್ಕಲ್ಲಿ, ತನ್ನೆಡೆಗೆ ಮರೆಯಹ ತೆರದಂತೆ,
ತನ್ನಯ ಸತ್ಕ್ರೀ ಭಕ್ತಿಮಾರ್ಗದ ಮಾಟಕೂಟದಿರವು.
ತಾ ಮಾಡುವಲ್ಲಿ ಇದಿರ ರೂಪ ನೋಡಲಿಲ್ಲ,
ಅರಿಕೆಯಲ್ಲಿ ಉಭಯವನರಿಯಬೇಕು.
ಎಲೆಯ ಮರೆಯ ಕಾಯನರಿದಂತೆ,
ದರ್ಶನದ ಮರೆಯ ಅರಿವನರಿಯಬೇಕು,
ಬಂಕೇಶ್ವರಲಿಂಗವನರಿವುದಕ್ಕೆ. || ೫೮ ||

೬೬೭

ಫಳ ಒಳಗೆ ಕೊಳೆತು, ಹೊರಗೆ ಈಡಾದಡೆ,
ಮೆಲುವರಿಗೆ ಅಡಹೆ ?
ಹೊರಗೊಣಗಿ, ಒಳಗೆ ಫಳ ರಸಭರಿತವಾಗಿ,
ಭುಂಜಿಸುವರ ಅಂಗ ಮನೋಹರವಾಗಿಪ್ಪುದು.
ಲೌಕಿಕ ಪರಮಾರ್ಥಂಗಳ ಭೇದ,
ಉಭಯರೂಪು ನಿಬದ್ಧಿಯಾದಲ್ಲಿ
ಬಂಕೇಶ್ವರಲಿಂಗವು ಎಂತಿದ್ದಡೇನು ? || ೫೯ ||

೬೬೮

ನಡೆದಾಚರಿಸೂದಕ್ಕೆ ಕ್ರೀ, ಅದು ಲೇಪವಾಗಿ ನಿಂದಲ್ಲಿ
ಉಭಯನಾಮನಷ್ಟ.
ಅದ ಭಾವಿಸುವ ಭಾವ, ತೆರದರಿಸಿನವಾದಲ್ಲಿ ವಿರಕ್ತಿಭಾವ.
ಬಂಕೇಶ್ವರಲಿಂಗವನರಿವುದಕ್ಕೆ ಶ್ರದ್ಧೆಯ ಭಿತ್ತಿ || ೬೦ ||

೬೬೯

ಆಚಾರ ಕ್ರೀ ಸನ್ನದ್ಧವಾಗಿ ನಿಂದಲ್ಲಿ, ಅದು ಅರಿವಿನ ಘನ,
ವಿರಕ್ತಿಯ ಒಡಲು, ಸರ್ವ ಅರ್ಪಿತ,
ಅವಧಾನದ ಚಿತ್ತದ ಕೈ, ಉಭಯಪರಿಪೂರ್ಣದೃಷ್ಟಿ.

ಸತ್ಪಥದ ಸಿಕ್ಕಿಲ್ಲದ ಮಾರ್ಗ,
ಅದು ಉಭಯ ಕೇವಲಜ್ಞಾನ, ದಂಪತಿ ಸಂಬಂಧಲೇಪ,
ಬಂಕೇಶ್ವರಲಿಂಗದಲ್ಲಿ ಉಭಯಸ್ಥಲ ಅಳವಟ್ಟ ಶರಣಂಗೆ. || ೬೧ ||

೬೭೦

ಸದಾಚಾರವೆ ಸಾಕಾರವಾಗಿ, ಸತ್ಪ್ರಣಮವೆ ಪ್ರಾಣವಾಗಿ,
ಮಾಡುವ ಮಾಟವೆ ಕೈಯಾಗಿ,
ಅರಿವೆಂಬ ಬಾಯಿಗೆ ಕುರುಹಿನ ಕೈ ಮರೆಯದೆ ಅರ್ಪಿಸಿತ್ತು.
ಅಂಗಪ್ರಾಣ ಅರಿವು ಸಂಬಂಧ,
ಅದು ಪ್ರಾಣಲಿಂಗಯೋಗ, ಬಂಕೇಶ್ವರಲಿಂಗದಲ್ಲಿ. || ೬೨ ||

೬೭೧

ಸರ್ವಜೀವಕ್ಕೆ ದಯವೆ ಮೂಲಮಂತ್ರ.
ಸರ್ವರ ಭೂತಹಿತವೆ ದಿವ್ಯಜ್ಞಾನ.
ಇಂತೀ ಉಭಯವನರಿತಲ್ಲಿ ಸದಮಲಪೂಜೆ.
ಹೀಗಲ್ಲದೆ ಬೆನ್ನ ತಡಹಿ, ಅನ್ನವನಿಕ್ಕಿ,
ತಿನ್ನು ಕೊಲ್ಲು ಎಂಬವನ ಪೂಜೆ.
ಅವನನ್ನದ ಹಿರಣ್ಯದ ಒದಗು.
ಅವನ ಮಾಟದ ಮರುಳಾಟ, ಏತದ ಕೂನಿಯ ಘಾತದ ವೆಜ್ಜದಂತೆ,
ಅವನ ನೀತಿಯ ಇರವು, ಬಂಕೇಶ್ವರಲಿಂಗಾ. || ೬೩ ||

**ಸದ್ಭಾವಭಕ್ತಿವಿರಕ್ತಿಲೇಪಸ್ಥಲ :**

೬೭೨

ಘಟ ದೀಪಾಂತರ ಮಾರುತ ಮಾವಿಂದ ಬಂದಿತ್ತೊಂದು
ವಿಕಟಾಂಗದ ಕುದುರೆ.
ಬಾಯಿಗೆ ಹಲ್ಲಣ, ಲೆಕಕ್ಕೆ ಕಡಿವಾಣ, ಹಲ್ಲಿಗೆ ಹಕ್ಕರಿಕೆ,
ಅದರ ಮೇಲಿದ್ದ ಬಲ್ಲಹಂಗೆ ಭಲ್ಲೆಹ ಟೌಳಿ.
ಸುಲಲಿತ ಕರಗಸ ಸಿಂಗಾಡಿಗತ್ತಿ, ಜವದಾಡೆ,
ಅಲ್ಲಿ ಅದೆ, ಅವನುಡಿಯಲ್ಲಿ,
ರಾವುತನ ತಲೆ, ಕುದುರೆಯ ಕಾಲು, ಭಲ್ಲೆಹದ ಮೊನೆ,
ಅಲ್ಲಿಯೆ ಅಡಗಿತ್ತು, ಬಂಕೇಶ್ವರಲಿಂಗವ ಅರಿದ ಅಸುವಾಹಕಂಗೆ. || ೬೪ ||

೬೭೩

ಐಮುಕ್ತಿ ಕ್ಷೇತ್ರದ ವಾಸದ ರಜತಗಿರಿಯ ಮಧ್ಯದಲ್ಲಿ ಕುರುಕ್ಷೇತ್ರ.
ಅದರೊಳಗಿಬ್ಬರು ದೊರೆಗಳು ಅರಿರಿಪುಗಳಾದರು.
ಅವರ ಹೆಸರು ಕಳಾಂಧರ ಕಮ್ಮಟಹತ.

ಅಸುಗತನೆಂಬವ ಬೇರೊಬ್ಬನರಸು ರಿಪು.
ಕುಲತಮನಾಶಗತಿ ಮಂಡಲವಿರಹಿತ ರಾಜಕುಲ ಅಸುನಾಥ.
ಇವರಿಬ್ಬರು ಮಸಕಲಿಕೆ ಮೊನೆಯಾಯಿತ್ತು,
ಅಸುಭಟರೆಲ್ಲರು ಹುಸಿಭಟರಾದರು,
ಬಂಕೇಶ್ವರಲಿಂಗವ ಅಹುದಲ್ಲವೆಂದ ಕಾರಣ. ॥ ೬೫ ॥

೬೭೪

ತನುಮಂಡಲ ರಣಮಯವಾಯಿತ್ತು.
ಕರಣಂಗಳ ಹಿಂಡು ಕೆದರಿತ್ತು,
ತನುಮಂಡಲದರಸು ಹಿಂದುಮುಂದಾದ ಚಂಡಿಕ,
ಚಂಡಿಕ ಪ್ರಚಂಡ ತಮಕೋದಂಡ ಮಾರ್ತಾಂಡಮಯ,
ಸ್ವಯಕುಲ ಚಕ್ರವರ್ತಿ ಗೆದ್ದ, ಬಂಕೇಶ್ವರಲಿಂಗದೊಲುಮೆಯಿಂದ. ॥ ೬೬ ॥

೬೭೫

ಅಸ್ಥಿ ಚರ್ಮವ ಪುದಿದ ಮರೆಯ ಹರಿಗೆಯೊಳು,
ಅಸುಭಟನೆಂಬ ಬಂಟ, ದಶೇಂದ್ರಿಯನಪ್ಪ ಮಿಸುಗುವ ಕೂರಲಗಿನಲ್ಲಿ
ನಿರ್ಗತಿಯೆಂಬ ಪ್ರಮಥನೊಳು ಕದನವನೆಸಗೆ,
ಹುಸಿಕಾಯ ತೋರದ ಧನುವ ಜೇವಡೆಗೈದು,
ನಿರ್ಧರ ದಿವ್ಯಪ್ರಣಮವೆಂಬ ಮೊನೆದೋರದ ಸರದಲ್ಲೆಸೆಯೆ,
ಅಸ್ಥಿ ಚರ್ಮದ ಪ್ರಕೃತಿಯ ಅಂಗದ ನೇಮದ ಠಾವಿನಲ್ಲಿ
ಬಿದ್ದುಕೊಂಡಿತ್ತು,
ಅವನಸುವ ನಿರ್ವಾಣದ ಕೂರಲಗು ಅರಿ ಇದಿರಿಲ್ಲ,
ಬಂಕೇಶ್ವರಲಿಂಗಕ್ಕೆ ಇದಿರಿಲ್ಲ. ॥ ೬೭ ॥

೬೭೬

ಕಾಳಗ ಕರಣಂಗಳಲ್ಲಿ ಸೋಲುವೆ.
ಮನ ಮಹವನೊಡಗೂಡಿದವರಲ್ಲಿ ಕೇಣಸರಬೇಡ.
ಸರ್ವಪ್ರಾಣಿಗಳಲ್ಲಿ ಊಣೆಯನರಸಬೇಡ.
ತನ್ನಯ ಮನ ಪ್ರಮಾಣಿಸಿದಲ್ಲಿ ನಾ ನೀನೆಂದೆನಬೇಡ,
ಬಂಕೇಶ್ವರಲಿಂಗವ ಭಾವಿಸಿದಲ್ಲಿ. ॥ ೬೮ ॥

೬೭೭

ಮನ ಬುದ್ಧಿ ಚಿತ್ತ ಅಹಂಕಾರವೆಂಬಿವು ತನಗೆ ವೈರಿಗಳು.
ನಿರ್ಮಲ ಸುಚಿತ್ತ ದಿವ್ಯಜ್ಞಾನವೆ ತನಗೆ ಕೂಪರು.
ಮರೆದಡೆ ಹಗೆ.

ತನ್ನ ತಾನರಿತಡೆ, ತನ್ನಯ ಪರಿಸ್ಪಂದ ದಿವ್ಯಜ್ಞಾನ.
ಇಂತೀ ಉಭಯವ ತಿಳಿ, ಬಂಕೇಶ್ವರಲಿಂಗದಲ್ಲಿ. || ೬೯ ||

೬೭೮

ಇದಿರಗುಣ ಸಂಪಾದಿಸುವಲ್ಲಿಯೆ ತನ್ನಯ ಮರವೆ.
ಇದಿರೆಡೆಗೆ ತಾನಲ್ಲದೆ, ತನಗೆ ಇದಿರೆಡೆಯಿಲ್ಲದೆ,
ಉಭಯಕ್ಕೆ ಒಡಲಿಲ್ಲದೆ, ತನ್ನ ಕ್ರೋಧವೆ ಇದಿರಿಂಗೆ ರೂಪು,
ತನ್ನ ಸುಚಿತ್ತವೆ ಇದಿರಿಂಗೆ ಸಮಾಧಾನ.
ಇಂತೀ ಭಾವವನರಿ, ಬಂಕೇಶ್ವರಲಿಂಗದಲ್ಲಿ. || ೭೦ ||

೬೭೯

ಲೌಕಿಕಕ್ಕೆ ದರ್ಶನ ಧರ್ಮದ ಆಚರಣೆಯಿಂದ,
ಶರೀರದ ಯುಕ್ತಿಧರ್ಮ ಮನ ಅನುವನರಿತಲ್ಲಿ,
ರಸಯುಕ್ತಿಕರಂಡದಂತೆ,
ಒಡೆದಡೆ ಹಲವಾಗಿ, ಹೂಡಿದಲ್ಲಿ ಒಡೆದಡೆ ಭಿನ್ನವಿಲ್ಲದೆ,
ಸಮಯಪದ ಅರಿವಿನ ಗುಣ ವಿವರ ಭೇದ,
ಕ್ಷಾರದ್ರವ್ಯದಂತೆ ಇರಬೇಕು.
ಬಂಕೇಶ್ವರಲಿಂಗವ ಒಡಗೂಡೂದಕ್ಕೆ ಇರವು. || ೭೧ ||

೬೮೦

ಚಿದ್ಘನದ ಒಂದನೆಯ ಮೂರ್ತಿ ರುದ್ರನ ಅವತಾರ.
ಆ ಚಿದ್ಘನದ ಎರಡನೆಯ ಮೂರ್ತಿ ವಿಷ್ಣುಭಾವ.
ಆ ಚಿದ್ಘನದ ಮೂರನೆಯ ಮೂರ್ತಿ ಬ್ರಹ್ಮಭಾವ.
ಇವು ಮೂರು ಕೂಡಿ ಜಗವನಳಿದು ನಿಂದಲ್ಲಿ ಈಶ್ವರಭಾವ.
ಈಶ್ವರ ವೇಷವಡಗಿ ನಿಂದಲ್ಲಿ ಸದಾಶಿವಭಾವ.
ಸದಾಶಿವಮೂರ್ತಿ ಸನ್ನದ್ಧವಾದಲ್ಲಿ ಪರಶಿವತತ್ವ,
ತತ್ವ ನಿಶ್ಚಯವಾದಲ್ಲಿ ಬಂಕೇಶ್ವರಲಿಂಗನ ಕೂಟ. || ೭೨ ||

೬೮೧

ಪರಮಪ್ರಕಾಶ ತನ್ನಯ ಮೂರ್ತಿ ಭಿತ್ತಿ ಅಹಲ್ಲಿ
ಚಿತ್ಪ್ರಕಾಶಶಕ್ತಿ ಮುಕ್ತಿಯ ಸಾಕಾರವ ಧರಿಸಿದಲ್ಲಿ
ತ್ರಿವಿಧದ ಉತ್ಪತ್ಯದ ಭೇಧ.
ಒಂದು ಮೂರಾಗಿ, ಮೂರ ಹಲವಾಗಿ,
ಅಂಡ ಪಿಂಡಗಳಲ್ಲಿ ತೋರುವ ತೋರಿಕೆ,
ಬಂಕೇಶ್ವರಲಿಂಗನ ಲೀಲಾಭಾವ. || ೭೩ ||

೬೮೨

ಗೋಳಕಾಕಾರ ಗೋರಕ್ಷನೆಂಬ ಪಟ್ಟಣದಲ್ಲಿ,
ಗೋಮಯವೆಂಬ ಪರಶಕ್ತಿ ಅಪರ ಪ್ರಸೂತಕವಾಗಲಾಗಿ,
ಅದರಂಡದಲ್ಲಿ ಆಡು ಹುಟ್ಟಿತ್ತು,
ಆಡಿನ ಅಂಡದಲ್ಲಿ ಕೋಡಗ ಹುಟ್ಟಿತ್ತು,
ಕೋಡಗದ ಕುಂಡಿಯಲ್ಲಿ ಸಿರಿಯಕ್ಕ ಹುಟ್ಟಿದಳು.
ಸಿರಿಯಕ್ಕನ ಆತುರಿಯದಲ್ಲಿ ಮೂದೇವಿ ಉರಿಯಕ್ಕ ಹುಟ್ಟಿದಳು.
ಉರಿಯಕ್ಕನ ಉರವಣೆಯಲ್ಲಿ ಜಗ ಹುಟ್ಟಿ,
ಜಗದ ಸಿರಿಯಲ್ಲಿ ಹೋದರು ಹಿರಿಯರೆಲ್ಲರು,
ಬಂಕೇಶ್ವರಲಿಂಗವನರಿಯದೆ. || ೭೪ ||

೬೮೩

ಅಜಶ್ರೋಣಿಯೆಂಬ ಶುಕ್ಲಪೀಠದಲ್ಲಿ, ಮೂವರು ವಿಧಾತರು ಹುಟ್ಟಿದರು.
ಒಬ್ಬ ಇಂದ್ರಜಾಲ, ಒಬ್ಬ ಮಹೇಂದ್ರಜಾಲ.
ಅವರಿಬ್ಬರ ಗೆದ್ದ ಅದೃಶಾಕರಣನೊಬ್ಬ,
ಬಂಕೇಶ್ವರಲಿಂಗವ ಇಲ್ಲಾ ಉಂಟೋ ಎನುತಿದ್ದ. || ೭೫ ||

೬೮೪

ಕಾಯದಿಂದ ಕಾಬುದು ಬ್ರಹ್ಮಯೋಗ.
ಭಾವದಿಂದ ಕಾಬುದು ವಿಷ್ಣುಯೋಗ.
ಜ್ಞಾನದಿಂದ ಕಾಬುದು ಅನಾದಿಶಕ್ತಿಸಂಬಂಧ ರುದ್ರಯೋಗ.
ಇಂತೀ ತ್ರಿವಿಧಭೇದದಲ್ಲಿ ಸಂಬಂಧಿಗಳೆಲ್ಲರೂ
ಬಂಕೇಶ್ವರಲಿಂಗನ ಶಂಕೆಯನರಿಯರು. || ೭೬ ||

೬೮೫

ಅಂಬರ ಸಂಭ್ರಮದ ಬಾಗಿಲಲ್ಲಿ,
ನಾನಾ ಚೆಂದದ ಗುಡಿತೋರಣ, ಮಕರಪತಾಕೆ,
ಧನುಚ್ಛಾಯ, ಸರ ತೋರಿ ಎತುತ್ತದೆ.
ಕಂಡು ಎವೆ ಹಳಚೂದಕ್ಕೆ ಮುನ್ನವೆ ಅಳಿವುತ್ತದೆ.
ಅರಿ ಅರಿವುದಕ್ಕೆ, ಹಿಂಚುಮುಂಚು ಬಂಕೇಶ್ವರಲಿಂಗವ. || ೭೭ ||

೬೮೬

ಕೈಯಲ್ಲಿ ಮುಟ್ಟೂದಕ್ಕೆ ಮುನ್ನವೆ, ಮರವೆ ತೋರದ ಮುನ್ನವೆ,
ಕಣ್ಣಿನಲ್ಲಿ ನೋಡಿ ಎವೆ ಹಳಚೂದಕ್ಕೆ ಮುನ್ನವೆ ಕಾಣು.
ಚಿತ್ತದಲ್ಲಿ ಅರಿದು ಚಿತ್ತ ಮುಂಚೂದಕ್ಕೆ ಮುನ್ನವೆ ಅಳಿವುತ್ತದೆ.
ಅರಿ ಅರಿವುದಕ್ಕೆ, ಹಿಂಚು ಮುಂಚು ಬಂಕೇಶ್ವರಲಿಂಗವ. || ೭೮ ||

೬೮೭

ಅಂಗದಲ್ಲಿದ್ದು ಅವಧಾನಿಯಾಗಿ,
ಭಾವದಲ್ಲಿದ್ದು ಭವಚ್ಛೇದನವಾಗಿ,
ಸುಖದಲ್ಲಿದ್ದು ಅಸು ಅಂತಕನಾಗಿ,
ಸಕಲಭೋಗಂಗಳಲ್ಲಿದ್ದು ಭೋಗವಿರಾಗನಾಗಿ,
ಬಂಕೇಶ್ವರಲಿಂಗವ ನೋಡುತ್ತಿದ್ದು
ನೋಡದಂತಿರು, ಮನ ಘನದಲ್ಲಿ ನಿಂದು. ॥ ೭೯ ॥

೬೮೮

ಸರ್ವೇಂದ್ರಿಯವೆಲ್ಲವು ಸರ್ವಸುಖಂಗಳ ಭೋಗಿಸಿ,
ಸರ್ವೇಶ್ವರನ ಗೊತ್ತ ಮುಟ್ಟಿಸಲರಿಯದೆ ಮತ್ತರಾಗಬೇಡ.
ಗಳೆಯನೇರಿದ ವಿಧಾಂತ ಲಾಗು ಬಾರದೆ ಇಳಿದಡೆ ಅವಗದೇ ಭಂಗ.
ಸರ್ವವನರಿದ ಜೀವನ್ಮುಕ್ತ ಮರಳಿ ಸರ್ವವನೊಡಗೂಡಿದಡೆ,
ಬಂಕೇಶ್ವರಲಿಂಗಕ್ಕೆ ದೂರ. ॥ ೮೦ ॥

ಅರಿವು ಭಾವಸ್ಥಲಪೂರಿತ :

೬೮೯

ಭವಿಸಂಗವನೊಲ್ಲೆನೆಂದು, ಭವಿಗಳ ಮನೆಯಲ್ಲಿ ಉಣ್ಣೆನೆಂದು,
ಭವಿಗಳಿಗೆ ಇಕ್ಕೆನೆಂದು, ಭವಿಪಾಕದ ಕ್ಷಾರ ಕ್ರಮುಕ ಮಧುರ ತಿಲ ಚೂರ್ಣ
ಇವು ಮೊದಲಾದ ದ್ರವ್ಯಂಗಳ ಭಕ್ಷಿಸಿ, ಪ್ರೇತರ ಕೂಟವನೊಲ್ಲೆನೆಂಬ,
ಜಗನೀತಿಯ ವರ್ತಕರುಗಳಿಗೆ ಅದೇತರ ಶೀಲ,
ಬಂಕೇಶ್ವರಲಿಂಗದಲ್ಲಿ ? ॥ ೮೧ ॥

೬೯೦

ನಿಜ ನಿಶ್ಚಯವಾದಲ್ಲಿ ಚಿಲುಮೆ ಜಲ, ಸಕಲರುಚಿ,
ವಿಚ್ಛಂದವಾಗಿ ಬಯಕೆಯ ಬಿಟ್ಟುದೆ ಲವಣನಾಸ್ತಿ,
ಸರ್ವಕರಣೇಂದ್ರಿಯಂಗಳ ಸಂಸರ್ಗಕ್ಕೆ
ಮನವನೀಯದಿದ್ದುದೆ ಭವಿ ವಿರೋಧ.
ಉಚಿತ ತತ್ಕಾಲಂಗಳಲ್ಲಿ ಅಪ್ಯಾಯನವರಿತು ವಿಶ್ರಮಿಸೂದೆ
ಕೃತ್ಯದ ಕಟ್ಟಣೆ.
ಮನಬಂದಂತೆ ನುಡಿದು, ತನುಬಂದಂತೆ ಆಡಿ,
ನಿಂದಿಹ ಸ್ಥಿತಿಯ ತಾನಾಡಿ, ಹಲಬರ ಕೈಯಲ್ಲಿ ಕೇಳಿ,
ಇಂತೀ ಗುಣಕ್ಕೆ ಒಪ್ಪಿ,
ಭಕ್ತನೆಂಬ ಕೃತ್ಯದ ಮತ್ತರನೊಪ್ಪ ಬಂಕೇಶ್ವರಲಿಂಗ. ॥ ೮೨ ॥

೬೯೧

ನಾಡೆಲ್ಲರೂ ನೆರೆದು ಕೂಡಿ ಮಾಡುವ ಗುಣಸಮೂಹ ಬೇಡ.
ಪಶುವ ನೆಚ್ಚು ಕೂಡಿ ಹಸಿಗೆಗೆ ಬಂದಂತೆ.
ಉಂಬ ಊಣೆಯಕ್ಕೆ ನೆರೆದು, ಭಕ್ತಿಯ ಊಣೆಯಕ್ಕೆ ಹಿಂದುಮುಂದಾದ
ಸಂದಣಿಯ ಚೋರರಿಗೇಕೆ, ವ್ರತ ನೇಮ ನಿತ್ಯ?
ಇವರಂಗಕ್ಕೆ ಸಂಗವಾದ ಬಂಕೇಶ್ವರಲಿಂಗ. ॥ ೮೩ ॥

೬೯೨

ಎಲ್ಲರೂ ಕೂಡಿ ಬೀರನ ಚಪ್ಪರಕ್ಕೆ ಬಂದ ಅಜಗಾಹಿಗಳಂತೆ.
ದ್ವೇಷದಲ್ಲಿ, ಅಸಿಯ ಒಡಲಲ್ಲಿ ಗಸಣೆಗೊಂಡಡೆ, ಅದು ಮಿಸುಕದಂತೆ.
ಕೂಟದಲ್ಲಿ ಕೂಡಿ, ಮಾತಿನಲ್ಲಿ ನಿಜವಿಲ್ಲದೆ, ಅದೇತರ ಭಕ್ತಿಯ ವ್ರತ?
ನಿಜನೀತಿಯ ನಿಚ್ಚಟಂಗೆ ಬಳಕೆಯ ಬಳಸುವ
ನೀತಿಯ ಅರ್ತಿಕಾರರಿಗಿಲ್ಲ, ನಿಚ್ಚಟಂಗಲ್ಲದೆ.
ಬಂಕೇಶ್ವರಲಿಂಗದ ಒಲುಮೆ ಎಲ್ಲರಿಗೆಲ್ಲಿಯದೊ ! ॥ ೮೪ ॥

**ಕ್ರಿಯಾಸಂಬಂಧ ಲೇಪಸ್ಥಲ :**

೬೯೩

ಸೂಜಿಯ ಹಿನ್ನಿಯಲ್ಲಿ ಮುಗಿಲ ತೋರದ ದಾರ ಹಿಡಿಯಿತ್ತು,
ಸೂಜಿಯ ಮೊನೆ ಹಳೆಯ ಅರಿವೆಯ ಚುಚ್ಚಲಾರದು.
ಹಿನ್ನಿ ಹಿಡದ ಭೇದದ ನೋಡಾ !
ಮೊನೆ ಗೆಲ್ಲದು ಹಿನ್ನಿಯ ಭಾರಕ್ಕಂಜಿ.
ಹಿನ್ನಿಯ ನನ್ನಿಯ ಮಾಡಿ, ಚೆನ್ನಾಗಿ ಚುಚ್ಚಲಾಗಿ,
ಹಿನ್ನಿ ಕಿತ್ತು ಮೊನೆ ಹೋಯಿತ್ತು.
ಹಚ್ಚಡ ಎಣೆಗೂಡಿತ್ತು, ಬಂಕೇಶ್ವರಲಿಂಗದಲ್ಲಿ. ॥ ೮೫ ॥

೬೯೪

ಬಲುಗಲ್ಲಿನ ಮಣಿಯ ಬೆಗಡವನಿಕ್ಕೂದಕ್ಕೆ
ಹುಲ್ಲು ಸೂಜಿ, ತಾವರೆಯ ನೂಲಿನ ಬಿಲ್ಲು, ದಳ್ಳುರಿಯ ನೇಣು.
ಇವೆಲ್ಲವ ಕೂಡಿ ಕಲ್ಲಿನ ಮೇಲಿರಿಸಿ,
ಮಣಿಯ ಮುಖಕ್ಕಿಕ್ಕಿ ತೆಗೆಯಲಾಗಿ ಮಣಿ ವಿರಾಳವಾಯಿತ್ತು.
ಹುಲ್ಲು, ಬಿಲ್ಲು, ದಳ್ಳುರಿಯ ನೇಣು,
ಬಂಕೇಶ್ವರಲಿಂಗದಲ್ಲಿ ಅಡಗಿತ್ತು, ಇದ ಬಲ್ಲವರಾರು ಹೇಳಾ ? ॥ ೮೬ ॥

೬೯೫

ಇರುಹಿನ ಕಾಲಿನಲ್ಲಿ ಮೂರು ಮೊರಡಿ ಹುಟ್ಟಿದವು.
ಒಂದು ಗಡಿಗೆಯ ರೂಪು, ಒಂದು ಅಡಿಗಲ್ಲಿನ ಅಂದ,

ಒಂದು ಕೊಡಗೂಸಿನ ಚೆಂದ.
ಆ ಗಡಿಗೆಯ ಅಡಿಗಲ್ಲ, ಕೊಡಗೂಸು ಕುಡಿದಳು.
ಆ ಇರುಹೆಯ ಕಾಲು ಕೊಡಗೂಸಿನಲ್ಲಿ ಅದೆ.
ಬಂಕೇಶ್ವರಲಿಂಗವು ಎಲ್ಲಿ ಹೋದನೆಂದರಿಯೆ. ॥ ೮೭ ॥

೬೯೬

ಗೂಗೆ ಹಂಸೆಯ ಕಚ್ಚಿದ ಭೇದದಿಂದ ಕಾಗೆಯಾಯಿತ್ತು.
ಕಾಗೆ ಹಾರುವ ಲಾಗಿನಿಂದ ಕೋಗಿಲೆಯಾಯಿತ್ತು.
ಕೋಗಿಲೆ ಸರದಿಂದ ನಾಗಫಣೆಯಾಯಿತ್ತು.
ನಾಗಫಣೆ ಹೋದ ಪಥದಿಂದ ನಾದಶೂನ್ಯವಾಯಿತ್ತು
ಬಂಕೇಶ್ವರಲಿಂಗದಲ್ಲಿ. ॥ ೮೮ ॥

೬೯೭

ಹಿಂಡುಗಟ್ಟೆಯ ಕಟ್ಟುವವನ ಅಂಡಿನ ಕೂದಲಿನಲ್ಲಿ,
ಮೂರುಸಂದು ಹುಟ್ಟಿದವು.
ಮೂರು ಸಂದಿನಿಂದ ಬಂದ ಸಂದೇಹವೆಲ್ಲವು ಜಗದಲ್ಲಿ ಹೊಂದುತ್ತಿದೆ.
ಆ ಹೊಂದುವ ಅಂದವ ಹೇಳು, ಬಂಕೇಶ್ವರಲಿಂಗಾ. ॥ ೮೯ ॥

೬೯೮

ಮೇಲೇರಿದ ಹುಗಿಲ ತಾಳ ಪುಟಕ್ಕೆ ಅಗೆದು,
ಕೇಳಿನ ಹುಗಿಲ ಮೇಗಳ ತಾಳು ನುಂಗಿತ್ತು.
ಕೀಳಿನ ಮೇಲಿನ ದ್ವಾರವ ಕೀಲು ನುಂಗಿತ್ತು.
ಕೀಲು ಕೀಳುವ ಸಕೀಲವ ಇನ್ನಾರುವ ಕಾಣೆ.
ಬಂಕೇಶ್ವರಲಿಂಗದಲ್ಲಿ ಲೀಯವಾದವಂಗಲ್ಲದೆ ಇಲ್ಲ. ॥ ೯೦ ॥

೬೯೯

ಮುಕ್ತ್ಯಾಂಗನೆಯ ಕೊಟ್ಟಿಗೆಯಲ್ಲಿ ಮೂರು ಎತ್ತು ಕಟ್ಟಿದವು.
ಉಳುವುದಕ್ಕೆ ಹೆಗಲಿಲ್ಲ, ನಡೆವುದಕ್ಕೆ ಕಾಲಿಲ್ಲ,
ಮೇವುದಕ್ಕೆ ಬಾಯಿಲ್ಲ, ಎರಡಾರಿಂಗೆ ಎಣೆಯಿಲ್ಲ.
ಎತ್ತು ವಿಚ್ಛಂದವಾಯಿತ್ತು,
ಎತ್ತು ಕಾವ ಹೈದ, ಎತ್ತ ಹೋದನೆಂದರಿಯೆ.
ಕೊಟ್ಟಿಗೆ ಬಚ್ಚಬಯಲಾಯಿತ್ತು, ಬಂಕೇಶ್ವರಲಿಂಗಾ. ॥ ೯೧ ॥

೭೦೦

ಶುಕ್ಲಪರ್ವತದಲ್ಲಿ ಒಂದು ಮತ್ತಗಜ ಬಿಟ್ಟಾಡುತ್ತಿದೆ.
ಕಟ್ಟಿಗೆ ಸಿಕ್ಕದು, ಪ್ರತಿಗಜದೊತ್ತಿಗೆ ಬಾರದು.
ಅದು ಚಿತ್ತಜನ ಮಾತಂಗ.

ಹೇಮಕೂಟ ರಸ, ಮೊತ್ತದ ಕೋಲುಮೆ.
ಗಣಿಕೆಯರ ಏಕಾಂತದ ವಾಸ, ಚಿತ್ರಜ್ಞನ ಚಿತ್ತದ ಲೆಕ್ಕಣಿಕೆಯ ಕಡ್ಡಿ.
ಇಂತೀ ಭಿತ್ತಿಯನರಿದ ಚಿತ್ತದ ಮತ್ತಮಾತಂಗವನೊತ್ತಿ ಮುರಿ,
ಬಂಕೇಶ್ವರಲಿಂಗವನರಿವುದಕ್ಕೆ. || ೯೨ ||

೭೦೧

ಅಕ್ಕನ ಮೂಲೆಯ ಮೊದಲಿನಲ್ಲಿ ಮೂವರು ತಮ್ಮಂದಿರು ಬಂದರು.
ತಮ್ಮ ತಮ್ಮ ಅಂಗವ ತೋರಿ, ಅಕ್ಕನ ಮುಂದೆ ಬೆತ್ತಲೆ ಆಡುತ್ತಿದ್ದರೆ,
ಬೆತ್ತಲೆಯ ಮುಟ್ಟಿ ಕಂಡು, ತಮ್ಮನದ ತನ್ನದರಲ್ಲಿ ಇಕ್ಕಿಕೊಂಡಳು.
ಅಕ್ಕ ತಮ್ಮನ ಕೂಡಿ ಒಪ್ಪವಾಗಿ ಬಾಳುತ್ತಿದ್ದರು,
ಬಂಕೇಶ್ವರಲಿಂಗವನರಿತ ಕಾರಣ. || ೯೩ ||

೭೦೨

ಮೊದಲು ಬಂದ ಬಾಯಿ ಕಚ್ಚಿದುದಿಲ್ಲ.
ಕಡೆಯಲ್ಲಿ ಹುಟ್ಟಿದ ಹುಲ್ಲು, ಕಠಿಣವು ಕಡಿವುತ್ತಿದೆ ನೋಡಾ.
ಮೊದಲು ಬಂದ ಮರವೆ, ಕಡೆಯಲ್ಲಿ ಬಂದ ಅರಿದರಿವು,
ಬಂಕೇಶ್ವರಲಿಂಗವ ಒಡಗೂಡಿತ್ತು, ನೋಡಾ. || ೯೪ ||

೭೦೩

ಕಾಬುದು ಕ್ಷೀರವಾಗಿ ಕಂಡು, ನಿಂದುದು ದಧಿಯಾಗಿ,
ಉಂಟು ಇಲ್ಲಾ ಎಂಬುದು ಮಥನವಾಗಿ,
ನಿಂದುದು ನವನೀತವಾಯಿತ್ತು.
ಸಮ್ಯಜ್ಞಾನ ಜ್ಯೋತಿ ಘಟದಲ್ಲಿ ಕಾಸಿ,
ನಾ ನೀನೆಂಬುದನಳಿದು, ಭಾವ ಶುದ್ಧವಾದಲ್ಲಿ ಘೃತವಾಯಿತ್ತು.
ಅಸಿ ತ್ವಂ ಪದ ತತ್ವವಾಯಿತ್ತು, ಬಂಕೇಶ್ವರಲಿಂಗವ ಕೂಡಿದ ಕಾರಣ.|| ೯೫ ||

೭೦೪

ಬಹುರೂಪು ತೊಟ್ಟಾಡಿದ ದೇಹ ಒಂದೇ.
ವೇಷ ರೂಪಿನ ಪಲ್ಲಟವಲ್ಲದೆ ವೇಷಕ್ಕೆ ತಕ್ಕ ಭಾಷೆ.
ಭಾಷೆಗೆ ತಕ್ಕ ವೇಷ, ಅರಿವು ಆಚರಣೆ ಒಂದಾಗಬೇಕು,
ಬಂಕೇಶ್ವರಲಿಂಗವನರಿವುದಕ್ಕೆ. || ೯೬ ||

೭೦೫

ಬ್ರಹ್ಮಾಂಡಮಂಡಲದಲ್ಲಿ ಒಬ್ಬ ನಾರಿ ಹುಟ್ಟಿದಳು.
ಅವಳಿಗೆ ಐವರು ಗಂಡಂದಿರು, ಮೂವರು ಮಿಂಡಂದಿರು.
ಗಂಡಂಗೆ ಕಾಲ ಕೊಟ್ಟು, ಮಿಂಡಂಗೆ ಮಂಡೆಯ ಕೊಟ್ಟು,
ಗಂಡಮಿಂಡರ ಒಡಗೂಡಿಕೊಂಡಿಪ್ಪ

ನಾರಿಯ ಅಂಗೈಯಲ್ಲಿ ಒಂದು ನಾರಿವಾಳದ ಸಸಿ ಹುಟ್ಟಿತ್ತು.
ಅದು ಕಂಗಳ ನೀರ ಕುಡಿದು, ಅಂಗದ ಮರೆಯ ನೆಳಲಲ್ಲಿ ಬಲಿದು,
ಸಸಿ ಮರನಾಯಿತ್ತು.
ಮರ ಮಹದೊಡಗೂಡಿ ತೆಂಗಿನಕಾಯಿ ಆಕಾಶದಲ್ಲಿ ನಿಂದಿತ್ತು.
ಮಟ್ಟೆಯನೊಡೆದು ಕಾಯ ನಿಶ್ಚಯದಲ್ಲಿ ನೋಡಲಾಗಿ,
ಕಾಯಿಗೆ ಕಣ್ಣಿಲ್ಲ, ಅಲಿಕಿದಡೆ ಜಲವಿಲ್ಲ.
ಅಂಗ ಭಿನ್ನವ ಮಾಡಿ ನೋಡಲಾಗಿ, ಕಾಯ ಕರ್ರಗಾಗಿತ್ತು,
ನೀರು ಬೆಳ್ಳಗಾಯಿತ್ತು, ಒಡೆದಾತನ ಬಾಯಿ ಬೆತ್ತಲೆಯಾಯಿತ್ತು.
ಬ್ರಹ್ಮಾಂಡಮಂಡಲದ ಶಕ್ತಿ ಗಂಡನ ಕೊಂದು,
ಮಿಂಡನ ವಂಚಿಸಿ, ಬಂಧುಗಳ ಹಿಂಗಿ,
ತನ್ನ ಹಿಂಡನೊಡಗೂಡಿದಳು.
ಇಂತಿವರೆಲ್ಲರ ಬಲ್ಲತನ ಅವಳಲ್ಲಿಯೇ ಹೋಯಿತ್ತು.
ಶಕ್ತಿ ಉಮಾಪತಿ, ನಿಶ್ಶಕ್ತಿ ಪರಮಜ್ಞಾನ.
ಕಾಯ ಭ್ರಮೆ, ಜೀವ ಬಯಲು, ಅರಿವು ರೂಪು,
ಬಂಕೇಶ್ವರಲಿಂಗವನರಿದನೆಂಬುದು ಗರ್ವಮಾಯೆ. ॥ ೯೭ ॥

೨೦೬

ಧರ್ಮವ ನುಡಿವಲ್ಲಿ ಕ್ರಿಯಾಧರ್ಮ,
ನಿರ್ಮವ ನುಡಿವಲ್ಲಿ ಮಾಯಿಕಮಲಂ ನಾಸ್ತಿ.
ಕಾಯ ಉಳ್ಳನ್ನಕ್ಕ ಪೂಜೆ, ಜೀವವುಳ್ಳನ್ನಕ್ಕ ನೆನಹು.
ಎರಡಿಟ್ಟು ನೋಡುವಲ್ಲಿ ಕೂಟ, ಆತುರ ಹಿಂಗಿದ ಮತ್ತೆ
ಬಂಕೇಶ್ವರಲಿಂಗನ ಎಡೆಯಾಟ ಹಿಂಗಿತ್ತು. ॥ ೯೮ ॥

೨೦೭

ಕಾಯದ ಭಾವವ ನಿನ್ನಂಗವ ಮುಟ್ಟಿ ಕಳೆದೆ.
ಜೀವನ ನಾನಾಜನ್ಮದ ಭವವ ನಿನ್ನ ನೆನಹಿಂದ ಕಳೆದೆ.
ನಾನಾ ಪ್ರಕೃತಿ ಸಂಚಾರವ ನಿಮ್ಮ ಶರಣರ ಸಂಗದಿಂದ ನೀಗಿದೆ.
ಅಂಗಕ್ಕಾಚಾರ, ಮನಕ್ಕೆ ಅರಿವು,
ಈ ಉಭಯವ ಸಂಬಂಧಿಸಿ, ಅದು ಲೇಪವಾಗಿ ಸಂದಿತ್ತು ನಿಮ್ಮಲ್ಲಿ.
ಎನ್ನಯ ಇರವು ನಿಮ್ಮಲ್ಲಿ ಸಲೆ ಸಂದಿತ್ತು, ಚೆನ್ನಬಂಕೇಶ್ವರಲಿಂಗಾ. ॥ ೯೯ ॥

೨೦೮

ಕಾಯವ ಬಿಟ್ಟು ಜೀವವಸ್ತುವಿನಲ್ಲಿ ಕೂಡಬೇಕೆಂಬರು.
ಕಾಯ ಅರಿವಿಂಗೆ ಹೊರಗೆ.
ಕಾಯ ಜೀವವೆರಡೂ ಕೂಡಿ ಕಂಡ ಜ್ಞಾನರತ್ನದ ರತಿ ಬೇರೆ.

ಆ ಘಟವ ಬೇರೆ ಭಿನ್ನವ ಮಾಡಿ, ರತ್ನ ಮಾರುವ ಪರಿ ಇನ್ನೆಂತೊ ?
ಇಷ್ಟದ ರೂಪ ಹಾಕಿ, ಮತ್ತೆ ಲಿಂಗಪೂಜಕನೆಂತಪ್ಪನೊ ?
ಅಂಗದ ಕೂಟ, ಮನದ ವಿಶ್ರಾಂತಿ ಉಭಯವ ಬೇರೆ ಮಾಡದಿರಯ್ಯಾ.
ಪತಿ ಹೋಹಲ್ಲಿ ಸತಿ ಉಳಿದಡೆ, ಅದು ಅಪಮಾನದ ಕೇಡೆಂಬರು.
ನಿನ್ನಯ ನೆನಹ ಹೊತ್ತಿದ್ದ ಘಟ ಮಣ್ಣಿಗೀಡಾಗಲೇಕೆ ?
ಚೆನ್ನಬಂಕೇಶ್ವರಲಿಂಗಾ, ನಿನ್ನಲ್ಲಿಯೆ ಗ್ರಹಿಸಿಕೊಳ್ಳಯ್ಯಾ, ನಿನ್ನ ಧರ್ಮ.॥ ೧೦೦ ॥

೭೦೯

ಕಣ್ಣು ನೀರ ನುಂಗಿದಂತೆ, ಬಣ್ಣ ಛಾಯವ ನುಂಗಿದಂತೆ,
ಉರಿ ಸಾರವ ಕೊಂಡಂತೆ, ನಿರುತ ನಿರ್ವಾಣವಾದಂತೆ,
ಸರಶಂಕೆಯ ಬಿಟ್ಟು, ಶರಧಿಯ ಒಡಗೂಡಿದಂತೆ,
ತನುವಿನ ಸುಂಕವ ಮನೆದೆರಿಗೆಯ ಕರ್ತಂಗೆ ಒಪ್ಪಿಸಿದೆ.
ಸಂದಿತ್ತು, ನೀವು ಕೊಟ್ಟ ಮಣಿಹವೆಂಬುದಕ್ಕೆ ಮುನ್ನವೆ
ಬಯಲಾಯಿತ್ತು, ಬಂಕೇಶ್ವರಲಿಂಗದಲ್ಲಿ. ॥ ೧೦೧ ॥

೭೧೦

ಅಡಿಗಡಿಗೆ ಬಂದಡರುತಿರ್ಪೆ.
ಕಡುಛಲ ನಿನಗೆ ಬೇಡ ಕಂಡಾ !
ಮೃಡನೆ, ಎನ್ನೊಡನೆ ನೀ ತೊಡರಿ ಸಸಿನೆ ಹೋಗಲಿರಯೆ.
ಎಂತೆಂದಡೆ ನಾನಂಜುವನಲ್ಲ,
ಸಂತತ ಘಾಸಿ ಮಾಡದೆ,
ಕಂತುಹರ ಅಭಯಕರ, ಎನ್ನ ನೇಮಕ್ಕೆ ಅಡ್ಡ ಬರುತ್ತಿರದಿರು.
ಒಡವೆ ಸವೆದರೊಡಲನೊಡ್ಡುವೆ.
ಕಡಗುವಡೊಮ್ಮೆ ಹಳಚಿ ನೋಡು.
ಬಡವನ ಕೈಯ ಕಡುಹ ನೋಡೆನ್ನೊಡೆಯ
ಸಂಗಪ್ರಿಯ ಚೆನ್ನಬಂಕೇಶ್ವರಾ. ॥ ೧೦೨ ॥

೭೧೧

ಅನ್ನದ ಮೇಲಣ ಲವಲವಿಕೆ, ನಿದ್ರೆಯ ಮೇಲಣ ಲವಲವಿಕೆ,
ಅಂಗನೆಯರ ಮೇಲಣ ಲವಲವಿಕೆಯಿದ್ದಂತೆ ಲಿಂಗದಲ್ಲಿರಬೇಕು.
ಶಿವಲಿಂಗದಲ್ಲಿ ಮೋಹವನಳವಡಿಸಿದರೆ,
ತನ್ನನೀವ ನಮ್ಮ ಚೆನ್ನಬಂಕನಾಥದೇವನು. ॥ ೧೦೩ ॥

೭೧೨

ಕಾಯವೆಂಬ ಭೂಮಿಯ ಮೇಲೆ ಆರಂಬವ ಮಾಡುವ ಪರಿ ಎಂತೆಂದಡೆ :
ಶಿವನಾಮವೆಂಬ ಕೊಡಲಿಗೆ ನಿತ್ಯವೆಂಬ ಕಾವು,

ಕುಟಿಲ ಕುಹಕ ಕ್ಷುದ್ರ ಅಟಮಟವೆಂಬ ಗಿಡವನೆ ಕಡದುಡಿಯನೊಟ್ಟಿ,
ಸುಜ್ಞಾನವೆಂಬ ಕಿಡಿಯನೆ ಹಾಕಿ ಸುಟ್ಟು, ಒಂಬತ್ತು ಕಟ್ಟೆಯ ಕಟ್ಟಿ,
ನಿಷ್ಠೆಯ ಘಟ್ಟಿಯೆಂಬ ನೇಗಿಲಿಂಗೆ ದೃಢವೆಂಬ ಮುಂಜನ,
ಏಕೋಭಾವವೆಂಬ ಈಚಿಂಗೆ ಮೂಹುರಿಯ
ಭಾವತ್ರಯದ ಭಾರಣೆಯ ಹಾಸಂ ಹಾಸಿ, ಜೀವಪ್ರಾಣವೆಂಬ ಎತ್ತಂ ಕಟ್ಟಿ,
ಮರಹು ತೆರಹೆಂಬ ಕಸಕಾರಿಕೆಯಂ ಹಾಯಿದು,
ಹಸಿವು ತೃಷೆಯೆಂಬ ನೇರದ ಕಿಚ್ಚಂ ಕೆಡಿಸಿ, ಪರಿಣಾಮವೆಂಬ ಮಳೆ ಹೊಯ್ಯಲು,
ವಿಚಾರವೆಂಬ ಸಸಿ ಹುಟ್ಟಲು, ಅನಾಚಾರವೆಂಬ ಹಕ್ಕಿ ಬಂದು,
ಹಕ್ಕಲ ಮಾಡದ ಹಾಂಗೆ ಹರಹರಾಯೆಂಬ ಕವಣೆಯನೆ ಕೊಂಡು,
ಎಚ್ಚಿಡುತಿರ್ದೆ ಕಾಣಾ, ಚೆನ್ನಬಂಕೇಶ್ವರಾ.
ಈ ಪರಿಯ ಬೆಳಸು, ನಿಮ್ಮ ಶರಣ ಚೆನ್ನಬಸವಣ್ಣಂಗೆ ಸಾಧ್ಯ.
ಉಳಿದವರಿಗೆ ಸಾಧ್ಯ ಅಸಾಧ್ಯವೆಂಬುದ ನೀವೆ ಬಲ್ಲಿರಿ. ॥ ೧೦೪ ॥

೭೧೩

ಜಾಗ್ರ ಸ್ವಪ್ನ ಸುಷುಪ್ತಿಯಲ್ಲಿ ವಿಶ್ವ ತೈಜಸ ಪ್ರಾಣನಾಗಿಪ್ಪ ಕಾರಣ,
ಅಹೋರಾತ್ರಿಯಲ್ಲಿ ನಿಮ್ಮ ನೆನಹೆನಗೆ.
ಚೆನ್ನಬಂಕೇಶ್ವರಲಿಂಗವೆ, ಎನ್ನ ಸಜ್ಜನಿಕೆಯ ದಿಟವ ಮಾಡೆನ್ನ ತಂದೆ. ॥ ೧೦೫ ॥

೭೧೪

ನಿಂದಿಸುವನೊಬ್ಬ, ಸ್ತುತಿಸುವನೊಬ್ಬ.
ಇವರಿಬ್ಬರು ಪರಮಬಂಧುಗಳು.
ಆ ಯೋಗಿಯ ಪುಣ್ಯವನೊಬ್ಬ ಕೊಂಬ, ಪಾಪವನೊಬ್ಬ ಕೊಂಬ.
ಇದು ಕಾರಣ, ಗುರುಪ್ರಿಯ ಚೆನ್ನಬಂಕೇಶ್ವರನಲ್ಲಿ,
ಸತ್ಯಶರಣರು ನಿತ್ಯಮುಕ್ತರು. ॥ ೧೦೬ ॥

೭೧೫

ಬಸವಣ್ಣನೆ ಗುರುಮೂರ್ತಿಯಾಗಿ ಎನ್ನ ಕರಸ್ಥಲಕ್ಕೆ ಬಂದನಯ್ಯಾ.
ಚೆನ್ನಬಸವಣ್ಣನೆ ಲಿಂಗಮೂರ್ತಿಯಾಗಿ ಎನ್ನ ಕರಸ್ಥಲಕ್ಕೆ ಬಂದನಯ್ಯಾ.
ಸಿದ್ಧರಾಮಯ್ಯನೆ ಜಂಗಮಮೂರ್ತಿಯಾಗಿ ಎನ್ನ ಕರಸ್ಥಲಕ್ಕೆ ಬಂದನಯ್ಯಾ.
ಮರುಳಶಂಕರದೇವರೆ ಪ್ರಸಾದಮೂರ್ತಿಯಾಗಿ ಎನ್ನ ಕರಸ್ಥಲಕ್ಕೆ ಬಂದರಯ್ಯಾ.
ಪ್ರಭುದೇವರೆ ಜ್ಞಾನಮೂರ್ತಿಯಾಗಿ ಎನ್ನ ಹೃದಯಸ್ಥಲಕ್ಕೆ ಬಂದರಯ್ಯಾ.
ಇವರು ಮುಖ್ಯವಾದ ಏಳ್ನೂರೆಪ್ಪತ್ತಮರಗಣಂಗಳು,
ಎನ್ನ ಸರ್ವಾಂಗದಲ್ಲಿ ಮೂರ್ತಿಗೊಂಡರು, ಸರ್ವತೋಮುಖವಾಗಿ.
ಆಹಾ ಎನ್ನ ಪುಣ್ಯವೆ, ಆಹಾ ಎನ್ನ ಭಾಗ್ಯವೆ,
ಆಹಾ ಎನ್ನ ಸತ್ಯವೆ, ಆಹಾ ಎನ್ನ ನಿತ್ಯವೆ.

ಹರಹರಾ, ಶಿವಶಿವಾ ಮಹಾದೇವಾ ಮಹಾದೇವಾ,
ತ್ರಿಕಾಲದಲ್ಲಿಯೂ ನಿಮ್ಮ ಶರಣರ ಶ್ರೀಪಾದವ ನೆನೆವುತಿರ್ದೆನಯ್ಯಾ,
ವೀರಬಂಕೇಶ್ವರಾ. || ೧೦೭ ||

೭೧೬

ಸುಖದ ಸುಖಿಗಳ ಸಂಭಾಷಣೆಯಿಂದ, ದುಃಖ ವಿಶ್ರಾಮವಾಯಿತ್ತು
ಭಾವಕ್ಕೆ ಭಾವ ತಾರ್ಕಣೆಯಾದಲ್ಲಿ, ನೆನಹಕ್ಕೆ ವಿಶ್ರಾಮವಾಯಿತ್ತು
ಬೆಚ್ಚು ಬೆರಸಲೊಡನೆ ಮಚ್ಚು ಒಳಕೊಂಡಿತ್ತು
ಚೆನ್ನಬಂಕನಾಥನ ಮಾಹೇಶ್ವರಂಗೆ. || ೧೦೮ ||

■■

## ಸೂಜಿಕಾಯಕದ ರಾಮಿತಂದೆಯ ವಚನ

೭೧೭

ಏತ್ವದಲ್ಲಿ ಚುಚ್ಚಿ, ಓತ್ವದಲ್ಲಿ ತೆಗೆದು,
ಔತ್ವದಲ್ಲಿ ಒಡಗೂಡಿ, ಕುರುಕಿನಲ್ಲಿ ಸುಳಿದು,
ಸೊನ್ನೆಯಲ್ಲಿ ಸಂಜ್ಞೆಗೆಟ್ಟು, ಸೂಜಿಯ ಮೊನೆಯೊಡಗೂಡುವದಕ್ಕೆ ಎರಡಿಲ್ಲ,
ದಾರಕ್ಕೆ ಹುರಿಯಿಲ್ಲ ಇದನಾರ ಬಲ್ಲರು.
ಇಂತಿವನಾರಯ್ಯಬಲ್ಲಡೆ,
ಪ್ರಸನ್ನ ಕಪಿಲಸಿದ್ಧ ಮಲ್ಲಿಕಾರ್ಜುನಲಿಂಗವ ಬಲ್ಲವ. ॥ ೧ ॥

೭೧೮

ಕನ್ನಡಕ ಒಂದು, ಕರ್ಣದಡಕ ಆರು.
ನಾಸಿಕದಡಕ ಓಸರವೆರಡು.
ಜಿಹ್ವೆಯಡಕವಗಿಡದವೆಂಟು, ಅಡಗದವೆಂಟು.
ಎಂಟರೊಳಗೆಂಟಡಗಿ ಹದಿನಾರು ಚಿಪ್ಪು ಒಡಗೂಡಿದವು.
ಎರಡರಲ್ಲಿ ಒಂದ ಸಂದಿಸಿ, ಸಂದುಗೂಡಿ ಹೊಲಿಸುವುದಕ್ಕೆ ಒಂದನೂ ಕಾಣೆ.
ಇಂತೀ ಪಂಚೇಂದ್ರಿಯದಂಗವ ಬಲ್ಲಡೆ,
ಪ್ರಸನ್ನ ಕಪಿಲಸಿದ್ಧ ಮಲ್ಲಿಕಾರ್ಜುನಲಿಂಗವ ಬಲ್ಲವ. ॥ ೨ ॥

೭೧೯

ಕಾಲುಕುಪ್ಪಸವ ಮೇಲಾಗಿ ಹೊಲಿದೆ.
ಅಂಗದ ಕುಪ್ಪಸವ ಮಂಡೆಗೆ ಹೊಲಿದೆ.

ಮಂಡೆಗೆ ಒಂಬತ್ತು ಚಿಪ್ಪು ಸರ್ವಾಂಗಕ್ಕೆ ತೊಡಿಸುವೆ.
ಇದರ ಸಂದಿನ ಕೂಟವ ಬಲ್ಲಡೆ,
ಪ್ರಸನ್ನ ಕಪಿಲಸಿದ್ಧಮಲ್ಲಿಕಾರ್ಜುನಲಿಂಗವ ಬಲ್ಲವ. ॥ ೩ ॥

೭೨೦

ತಲೆಗೆ ಮೂರು ಚಿಪ್ಪು, ಅಂಗಕ್ಕೆ ಆರು ಚಿಪ್ಪು,
ಮಿಕ್ಕಾದ ಸರ್ವಾಂಗಕ್ಕೆಲ್ಲಕ್ಕೂ ಒಂದೆ ಚಿಪ್ಪಿನ ಕುಪ್ಪಸ.
ಇದರಂಗದ ಆಚರಣೆಯ ಬಲ್ಲವ,
ಪ್ರಸನ್ನ ಕಪಿಲಸಿದ್ಧಮಲ್ಲಿಕಾರ್ಜುನಲಿಂಗವ ಬಲ್ಲವ. ॥ ೪ ॥

೭೨೧

ಬ್ರಹ್ಮಂಗಂಟುದಾರ, ವಿಷ್ಣುವಿಂಗೆ ಉಭಯದ ಹೊಲಿಗೆ,
ರುದ್ರಂಗೆ ಟಿಬ್ಬಿ, ಮಿಕ್ಕಾದ ದೇವಕುಲಕ್ಕೆಲ್ಲಕ್ಕೂ ಅಲ್ಲಲ್ಲಿಗೆ ಕಲ್ಲಿಯ ಹೊಲಿಗೆ.
ಈ ಗುಣವ ಬಲ್ಲವರೆಲ್ಲರೂ
ಪ್ರಸನ್ನ ಕಪಿಲಸಿದ್ಧಮಲ್ಲಿಕಾರ್ಜುನಲಿಂಗವ ಬಲ್ಲವರಹರು. ॥ ೫ ॥

೭೨೨

ಮೂರು ಗಳಿಗೆಯನೊಂದುಗೂಡಿ,
ಹೊರೆಯಲ್ಲಿ ಐದು ಕತ್ತರಿಸಲಾಗಿ, ಆರು ಹೋಳಾಯಿತ್ತು
ಆರಕ್ಕೆ ಮೂರ ಪ್ರತಿಯನಿಕ್ಕಲಾಗಿ,
ಸೂಜಿಯ ಮೊನೆಯ ಕೊನೆಯಲ್ಲಿ ಆರಡಗಿ ಮೂರೊಡಗೂಡಿದವು.
ಮೀರಿ ಹೊಲಿವುದಕ್ಕೆ ಒಡಗೂಡುವ ಹೋಳ ಕಾಣೆ.
ಇಂತೀ ಗುಣವಡಗಿದ ಮತ್ತೆ, ಷಡುಸ್ಥಲ ತ್ರಿವಿಧಕೂಟ,
ಪ್ರಸನ್ನ ಕಪಿಲಸಿದ್ಧಮಲ್ಲಿಕಾರ್ಜುನದೇವರಲ್ಲಿಯೆ ಒಡಗೂಟ. ॥ ೬ ॥

೭೨೩

ಮೊನೆ ಮೂರು, ಹಿನ್ನೆ ಒಂದು.
ಆ ಸೂಜಿಯಲ್ಲಿ ಹೊಲಿದಹೆನೆಂದಡೆ
ಕುಪ್ಪಸಕ್ಕೆ ಚಿಪ್ಪು ಒಡಗೂಡವು ನೋಡಾ.
ಮೊನೆಯೊಂದು, ಹಿನ್ನೆ ಮೂರಾಗಿ ಹೊಲಿದಡೆ,
ಹಿನ್ನೆಯ ಮೂರುದಾರ ಮೊನೆಯ ನಾಳದಲ್ಲಿ ಅಡಗಿದವು ನೋಡಾ.
ಆ ಮೂರ ಹಿಂಚಿ ಹಾಕಿ, ಮೊನೆಯೊಂದರಲ್ಲಿ
ಬೇರೆ ಬೇರೆ ಹೊಲಿಯಬಲ್ಲಡೆ,
ಪ್ರಸನ್ನ ಕಪಿಲಸಿದ್ಧಮಲ್ಲಿಕಾರ್ಜುನಲಿಂಗವ ಬಲ್ಲವ. ॥ ೭ ॥

೭೨೪

ಷಡಾಧಾರದಲ್ಲಿ ಅಡಿಗದ್ದಿ ಹೋಹವರ ಕಂಡೆ.
ತತ್ವಂಗಳ ಗೊತ್ತ ಹೇಳಿ ಮುಟ್ಟದೆ ಹೋಹವರ ಕಂಡೆ.
ಮಾತಿನ ಬ್ರಹ್ಮವನಾಡಿ ವಸ್ತುವನರಿಯದೆ, ಭ್ರಾಂತರಾಗಿ ಕೆಟ್ಟವರ ಕಂಡೆ.
ಅಷ್ಟಾಂಗಯೋಗವನರಿತೆಹೆವೆಂದು ಘಟ ಕೆಟ್ಟು ನಷ್ಟವಾದವರ ಕಂಡೆ.
ಇಂತಿವನರಿದು ಕರ್ಮಯೋಗವ ಮಾಡದೆ,
ವರ್ಮಂಗಳನರಿದು ಸರ್ವಗುಣಸಂಪನ್ನನಾಗಿ,
ತನ್ನ ತಾನರಿದ ಮತ್ತೆ ಮಹಾತ್ಮಂಗೆ, ತನಗೆ ಏನೂ ಅನ್ಯಭಿನ್ನವಿಲ್ಲ,
ಪ್ರಸನ್ನ ಕಪಿಲಸಿದ್ಧ ಮಲ್ಲಿಕಾರ್ಜುನಲಿಂಗವು ತಾನಾದವಂಗೆ. ॥ ೮ ॥

೭೨೫

ಸ್ಥೂಲಕ್ಕೆ ಮೂರು, ಸೂಕ್ಷ್ಮಕ್ಕೆ ಎರಡು, ಕಾರಣಕ್ಕೆ ಒಂದೆಂದು ತಿಳಿದ ಮತ್ತೆ,
ನಾನಾ ಸಂದುಸಂದ ಹೊಲಿಯಲೇತಕ್ಕೆ ?
ನಾ ಗಳಿಗೆಯಲೊಡಗೂಡಿದಡದು ಮುಗಿದು ಮತ್ತೆ
ಎರಡು ಹೊರೆಯಾಯಿತ್ತು.
ಎರಡು ಹೊರೆಯ ಹೊಲಿಗೆಯನರಿದ ಮತ್ತೆ, ಹೋದವ ತಾನೇಕವಾದ ಮತ್ತೆ
ಪ್ರಸನ್ನ ಕಪಿಲಸಿದ್ಧ ಮಲ್ಲಿಕಾರ್ಜುನಲಿಂಗವನು ಒಡಗೂಡುವನ ಇರವು. ॥ ೯ ॥

೭೨೬

ಹರಿ ಹತ್ತು, ಹೊಲಿವುದೊಂದೆ ಸೂಜಿ. ಸರಗೆಂಟು, ಮಡಿಸೂದೊಂದೆ ಕೈ.
ಅಡಿ ಆರು, ನಡೆವುದೊಂದೆ ಕಾಲು. ನುಡಿ ಮೂರು, ಅರಿವುದೊಂದೆ ಆತ್ಮ.
ಇಂತೀ ಒಂದರೊಳಗೊಂದಡಗಿ, ಸಂದಿಲ್ಲದ ನೂಲ ಮೂಲೆಯ ಗಂಟನಿಕ್ಕಿ,
ಒಂದಕ್ಕೆ ಮೂರು, ಮೂರಕ್ಕೆ ಆರು, ಆರ ವಿಭಾಗಿಸಿ ಮೂವತ್ತಾರ ಬೇರರಿವ,
ಇಪ್ಪತ್ತೈದ ಮೀರಿ ಕಾಬ, ನೂರೊಂದರಲ್ಲಿ ಸೂರೆಯಾಗದೆ,
ತನಗೊಂದು ತೋರೆ ಒಡಗೂಡಿದಲ್ಲಿಯ ಊರೆಲ್ಲಕ್ಕೆ ದೂರದೆ,
ಪ್ರಸನ್ನ ಕಪಿಲಸಿದ್ಧ ಮಲ್ಲಿಕಾರ್ಜುನಲಿಂಗವ ಒಡಗೂಡಬೇಕು. ॥೧೦॥

■■

## ಸೊಡ್ಡಳ ಬಾಚರಸನ ವಚನ

೭೨೭

ಅಂಗದ ಮೇಲೆ ಲಿಂಗವ ಬಿಜಯಂಗೈಸಿಕೊಂಡು,
ಲಿಂಗವಿಲ್ಲದಂಗನೆಯರನಪ್ಪಿದಡೆ, ಸುರಾಭಾಂಡವನಪ್ಪಿದಂತೆ ಕೇಳಿರಣ್ಣ,
ಲಿಂಗಸಾಹಿತ್ಯವಾಗಿರ್ದು, ಲಿಂಗವಿಲ್ಲದ ಸತಿಯರ ಕೂಡಿಕೊಂಡಿಹ
ಪರಿಯೆಂತಯ್ಯ !
ಲಿಂಗವುಳ್ಳ ತನು ಲಿಂಗವಿಲ್ಲದ ತನುವಿನೊಡನೆ ಸಂಯೋಗಮಂ
ಮಾಡಿದಡೆಂತಕ್ಕು,
ಹಾಲಗಡಿಗೆಯ ಹಂದಿ ಮುಟ್ಟಿದಂತಕ್ಕು !
ಅದೆಂತೆಂದಡೆ :
ಲಿಂಗೇನ ಸಹಿತೋ ದೇಹೀ ಲಿಂಗಹೀನಾಂ ತು ಯಃ ಸತೀಮ್ ।
ಸಹವಾಸೇ ಸಹತೇ ನಿತ್ಯಂ ಕಿಂ ಫಲಂ ಕಿಂ ಕೃತಂ ಭವೇತ್ ॥
ಕಿಂ ತೇನ ಕ್ಷೀರಭಾಂಡೇನ ಸೂಕರ್ಯೈಃ ಸಹ ವರ್ತಿನಾ ।
ಎಂದುದಾಗಿ, ಲಿಂಗವುಳ್ಳ ಲಿಂಗಾರ್ಚಕರು ಲಿಂಗೈಕ್ಯರು,
ಲಿಂಗವಿಲ್ಲದೆ ಭವಿಯಾಗಿರ್ದ ಸತಿಯರ ಆಲಿಂಗನ, ಚುಂಬನವ ಮಾಡಿದಡೆ,
ಗುರುಕಾರುಣ್ಯ ಉಂಟೆಂದು ಸಾಧಾರಣಪಕ್ಷದಲ್ಲಿ ಮಾಡಿಕೊಂಡಿರ್ದಡೆ,
ಮಾಡಿದ ಲಿಂಗಾರ್ಚನೆ ನಿಷ್ಫಲಂ.
ಶತಜನ್ಮ ಪರಿಯಂತರ ಹೊಲೆಯರಲ್ಲಿಕ್ಕದೆ ಮಾಣ್ಬನೆ,
ಸಮ್ಮ ದೇವರಾಯ ಸೊಡ್ಡಳ. ॥ ೧ ॥

೭೨೮

ಅಂಗ ಲಿಂಗಕ್ಕೆ ಗೂಡಾಯಿತ್ತು, ಲಿಂಗ ಅಂಗಕ್ಕೆ ಗೂಡಾಯಿತ್ತು,
ಅಂಗಲಿಂಗಸಂಗವೆಂಬ ಸಂದಳಿದು ನಿಜಲಿಂಗೈಕ್ಯವಾಯಿತ್ತು,
ಭಾವ ನಿರ್ಭಾವ ನಿಷ್ಪತ್ತಿಯಲ್ಲಿ
ಮಹಾದಾನಿ ಸೊಡ್ಡಳಂಗೆ ಸರ್ವನಿರ್ವಾಣವಾಯಿತ್ತು. ॥ ೨ ॥

೭೨೯

ಅಂಗಲಿಂಗಸಂಬಂಧವೆಂಬ ದ್ವಂದ್ವವನಳಿದು,
ಅಷ್ಟವಿಧಾರ್ಚನೆ ಷೋಡಶೋಪಚಾರದ ಹಂಗ ಹರಿದು,
ಸೋಹಂ ಸೋಹಂ ಎನುತ್ತಿದ್ದಿತ್ತು.
ಸೋಹಂ ಸೋಹಂ ಎಂಬ ಸುಖದ ಸವಿಯ,
ಮಹಾದಾನಿ ಸೊಡ್ಡಳಲಿಂಗವಾರೋಗಣೆಯ ಮಾಡಿ,
ನಿಜನಿವಾಸಿಯಾದ ಕಾರಣ, ನಾನು ನಾಮಸೀಮೆಗೆಟ್ಟೆನಯ್ಯ. ॥ ೩ ॥

೭೩೦

ಅಟ್ಟಿ ಹಾವುತಲೊಮ್ಮೆ, ಹೋಗಿ ನಿಲುತಲೊಮ್ಮೆ, ಬೀಗಿ ನಗುತಲೊಮ್ಮೆ,
ಮರುಳಿನಂತೆ, ಮಂಕಿನಂತೆ ದೆಸೆದೆಸೆಯ ನೋಡುತ್ತ
ಅಂಗಡಿ ರಾಜಬೀದಿಯ ಶೃಂಗಾರಂಗಳ ನಲಿನಲಿದು ನೋಡುತ್ತ,
ಇತ್ತರದ ಭದ್ರದ ಮೇಲೆ ನಾಟ್ಯವನಾಡುವವರ ನೋಡಿ ನಗುತ್ತ,
ನೋಡುವ ಗಾವಳಿಯ ಜನರನಟ್ಟಿ, ಹೊಯಿವಂತೆ ಹರಿವುತ್ತ,
ಗುದಿಯಿಕ್ಕಿದಂತೆ ನಿಂದಿರೆ ಬೀಳುತ್ತ,
ನಾಟ್ಯವನಾಡುವವರಿಗೆ ಇದಿರಾಗಿ, ತಾ ಮರಳಿಯಾಡುತ್ತ,
ಹಾಡುತ್ತ ಬೈವುತ್ತ ಕೆರಳಿ ನುಡಿವುತ್ತ,
ವಾದ್ಯ ಮೇಳಾಪವ ಕಂಡು ಆಳಿಗೊಂಡು ನಗುತ್ತ,
ಹಸ್ತವನಾಡಿಸಿ ಗತಿಯ ಮಚ್ಚರಿಸಿ ಕೈಯೊಡನೆ ಮರುಳಾಟವನಾಡುತ್ತ,
ಮೆಲ್ಲಮೆಲ್ಲನೆ ನಿಂದು ನೋಡಿ ನಡೆವುತ್ತ,
ಎಂದಿನ ಸುಳುಹಿನೊಳಗಲ್ಲದ ಸುಳುಹು, ಬಸವಣ್ಣ ನಿಮ್ಮಾಣೆ,
ಸೊಡ್ಡಳನಾಗದೆ ಮಾಣನು. ॥ ೪ ॥

೭೩೧

ಅಡಿಗಡಿಗೆಲ್ಲಾ ಮಡಿಯ ಹಾಸೆಂಬರು,
ನಡೆನಡೆಗೆಲ್ಲಾ ದೇವಾದೇವಾ ಎಂಬರು,
ನುಡಿನುಡಿಗೆಲ್ಲಾ ಜೀಯಾಜೀಯಾ ಎಂಬರು,
ಎನ್ನೊಡೆಯ ಸೊಡ್ಡಳದೇವರದೇವನ ಮುಡಿಗೊಂದರಳನೇರಿಸಿದವರಾ. ॥ ೫ ॥

೭೩೨

ಅಣ್ಣನೆಂಬಣ್ಣಗಳಣ್ಣ ಸೂದ್ಯೆ ಹೊನ್ನು.
ಅಣ್ಣಗಳ ಹೆಂಡಿರನಣ್ಣ ಸೂದ್ಯೆ ಹೆಣ್ಣು,
ಅಣ್ಣನೆಂಬಣ್ಣಗಳನಣ್ಣ ಸೂದ್ಯೆ ಮಣ್ಣು,
ಹೊನ್ನ ಕಂಡ ಬಳಿಕ ಅಣ್ಣದಣ್ಣಗಳುಂಟೆ ?
ಹೆಣ್ಣ ಕಂಡ ಬಳಿಕ ಅಣ್ಣದಣ್ಣಗಳುಂಟೆ ?
ಮಣ್ಣ ಕಂಡ ಬಳಿಕ ಅಣ್ಣದಣ್ಣಗಳುಂಟೆ ?
ಹೆಣ್ಣು ಹಿರಣ್ಯ ಭೂಮಿಯೆಂಬ ಹುಡಿಯ ಜಗದ ಕಣ್ಣಲ್ಲಿ ಹೊಯ್ದು,
ನಿಮ್ಮ ನೆನೆವುದಕ್ಕೆ ತೆರಹುಗುಡದಿದೆಯಲ್ಲಾ,
ಮುಕ್ಕಣ್ಣ ಸೊಡ್ಡಳ ಗರಳಧರಾ. || ೬ ||

೭೩೩

ಅರೆಬಿರುದು ನುಡಿದವರು ಕೇಳಿರೆ. ಕೆರಳಿಕೆಯ ನುಡಿವರು,
ನೆರೆದ ಮಂದಿಯ ಕಂಡುಬ್ಬುವರು ಕೊಬ್ಬುವರು,
ನಿರುತದ ಕಾಳಗವೆಂದಡೆ ಬಿರುದ ಬೀಸಾಡುವರು, ಅರೆದು ಭಕ್ತಿಯ ಮಾಡಿ,
ನೆರೆಭಕ್ತನೆಂದರೆ ಎಂತು ಮೆಚ್ಚುವನಯ್ಯಾ, ನಮ್ಮ ದೇವರಾಯ ಸೊಡ್ಡಳ. || ೭ ||

೭೩೪

ಆಕಾರವಿಲ್ಲದ ನಿರಾಕಾರದ ಮಂಟಪಕ್ಕೆ
ನಿರಾಳವೆಂಬ ಗಂಡ ಬಂದು ಕುಳ್ಳಿರಲು,
ಮೂವರು ಹೆಮ್ಮಕ್ಕಳು ಸೇವೆಯ ಮಾಡುವರು.
ಇಬ್ಬರು ಸಂಗವ ಮಾಡುತ್ತಿಪ್ಪರು.
ಒಬ್ಬಾಕೆ ಪುರುಷನ ನುಂಗಿಕೊಂಡಿಪ್ಪಳು.
ಇವರರುವರ ಕೂಡೆ ಹೊಯಿಕೈಯಾಗಿಪ್ಪವನ ಕಂಡು,
ಅನು ಪ್ರಭುದೇವರೆಂದರಿದು, ಆತನ ನಿಜಪಾದಕ್ಕೆರಗಿ,
ಎನ್ನ ಭವವ ಹರಿದೆನು.
ಮಹಾದಾನಿ ಸೊಡ್ಡಳನ ಕಂಡ ಕಡುಸುಖವನುಪಮಿಸಬಾರದು. || ೮ ||

೭೩೫

ಆದಿಯನಾದಿ ಆಚಾರವ ಕಾಣದೆ,
ಸಮುಮಾನದ ಲಿಂಗದ ಘನವ ತಿಳಿಯದೆ,
ದಾಸಿಯ ಸಂಗಂಗೆಯ್ದು ಜಂಗಮಾಚಾರ್ಯಜ್ಞಾನಪುರುಷರು ಚಿತ್ತೈಸಿ,
ಶೈವಾರಾಧನೆಯ ಸ್ಥಲದಂತೆ ನಡೆದು, ಗಳಹಿಕೊಂಡು ಇಪ್ಪಿರಿ.
ಅಂಗದನಿತ ದಾಸೆಗೆ, ಪಂತಿಯು ಗಡಣದ ಹಸುವಿನಾಸೆಗೆ,
ಕಾಂಚಾಣದ ಪಂತಿಯಾಸೆಗೆ, ಸ್ಥಲ ಜಂಗಮಸ್ಥಲವಾಸಿಯ ಗಡಣದಾಸೆಗೆ,
ಪಂತಿ ಪಾದಾರ್ಚನೆಯ ಹಿರಿಯತನದ ಗಡಣ ಗಮಕದಾಸೆಗೆ,

ಕೃತಿಯ ದ್ವೈತವ ನಟಿಸುವ ಪಂಚಮಹಾಪಾತಕದೇವರ
ದೇವತ್ವದ ಬಲ್ಲರು ಕೇಳಿರಣ್ಣ,
ನಾ ದೇವತಾದೇವನೆಂಬುದೊಂದು ಸಮದೇವತ್ವದ ಗಳಹುವಿರಿ.
ಅಂಗದಲ್ಲಿ ಸೋವಿ ಮಾತ್ರವೆಂಬ ಸ್ತ್ರೀಯ ಆಲಿಂಗನಂಗೈದು ಗಳಹುವಿರಿ.
ಶ್ರುತಿಃ
ಅರ್ಥವಣಿ ಕಥಃ ಸೋವಿ ವಚಃ ಬಾದಿನಿ ಪರ್ವಣಃ ।
ಪಾಪಿಷ್ಟಾ ದುಷ್ಟದ್ರೋಹಿ ಚಾ ಪಾಪಿಷ್ಟ ಗುರುದ್ರೋಹಿ ಚಾ ।
ಗುರುಶಿವಚ್ಛೇದನ ತತ್ ಗುರುಷಾಮಾ ಚಿ ಅಪಹಿನ್ ।
ಗುರುಬಂಧನ ಗ್ರಾಹಿ ಚಃ । ಇಂತೆಂದುದಾಗಿ,
ಸೋವಿಮಾತ್ರವೆಂದು ವಾಗದ್ವೈತವನುಂಟುಮಾಡಿ ಕಂಡು,
ತಮ್ಮ ಸ್ವಯ ಇಚ್ಛೆಯ ಭಾವಕ್ಕೆ ಗಳಹಿಕೊಂಡು,
ಹಿರಿಯರ ಮರೆಯಲ್ಲಿ ಕುಳಿತು, ಒಡಲ ಹೊರೆವ ಶೂಕರನಂತೆ,
ತುಡುಗುಣಿತನಕ್ಕೆ ಗಡಣಿಸಿಕೊಂಡು ಹಿರಿಯರೆಂಬಿರಿ.
ಶಿವಾಚಾರ : ಗಿರಿಜಾನಾಥಂಗೆ ಗೌರಿ ತ್ರಿವಿಧವಿಧಮೇಕಾರ್ಥಕಲ್ಯಾಣ,
ಗಿರಿಜಾಧಾರಿಯಲ್ಲಿ ಶಿವನ ದೇವತ್ವ ಕೆಟ್ಟಿತ್ತೆ ಪಾತಕರಿರಾ?
ಸೋವಿಯ ಆಲಿಂಗನಂಗೈದು, ಚುಂಬನ ಕರ ಉರ ಜಘನ
ಯೋನಿಚಕ್ರವ ಕೂಡಿ ನೆರೆದ ಬಳಿಕ,
ಪ್ರಾತಃಕಾಲದಲ್ಲಿ ಹನ್ನೆರಡು ಜಂಗಮದೇವರಿಗೆ ಹನ್ನೆರಡು
ಸುವರ್ಣಗಾಣಿಕೆಯನಿಕ್ಕಿ,
ಹನ್ನೆರಡು ದ್ವಿವಸ್ತ್ರ, ಹನ್ನೆರಡು ತೆಂಗಿನಕಾಯಿಂದ
ಹನ್ನೆರಡು ಜಂಗಮದೇವರಿಗೆ ಈ ಪರಿಯಾರ್ಥ ಅರ್ಚನೆಯ ಮಾಡಿದರೆ,
ನವಭೋಗದೊಳಗಣ ತ್ರಿವಿಧ ಭಾಗೆಯ ಕಲೆಯಿರಣ್ಣಾ
ಅರಿದು ಮಾಡಿ ಮರದಂತೆ, ಬೆಬ್ಬನೆ ಬೆರೆತುಕೊಂಡಿರುವಾತ ಹಿರಿಯನಲ್ಲ.
ಆತ ಗುರುವಲ್ಲ ಲಿಂಗವಲ್ಲ ಜಂಗಮವಲ್ಲ ಪಾದೋದಕ ಪ್ರಸಾದದೊಳಗಲ್ಲ,
ಅವ ಅಮೇಧ್ಯ ಸುರ ಭುಂಜಕನು.
ಇಂತೆಂಬ ಶ್ರುತಿಯ ಮೀರಿ ಆಚರಿಸುವ, ಬ್ರಹ್ಮರಾಕ್ಷಸ.
ನವಕೋಟಿ ಯೋನಿಚಕ್ರದಲ್ಲಿ ರಾಟಾಳದ ಘಟದಂತೆ ತಿರುಗುವನು.
ಆದಿಯ ವಚನದ ಸಮ್ಮತವಿದು, ಸೋವಿಯ ಸಂಗ ಆಲಿಂಗನಂಗೈವಿರಿ.
ಸೋವಿಯ ಸಂಗ ಆಲಿಂಗನಂಗೈದವ,
ಶತಕೋಟಿ ಶೂಕರಯೋನಿಯಲ್ಲಿ ಬಪ್ಪನು.
ನವಕೋಟಿ ಗಾರ್ಧಭಯೋನಿಯಲ್ಲಿ ಬಪ್ಪನು.
ಶತಕೋಟಿ ಕುಕ್ಕುಟಯೋನಿಯಲ್ಲಿ ಬಪ್ಪನು.
ಸಚರಾಚರಯೋನಿ ಯೋನಿನವಕೋಟಿ ತಪ್ಪದು.
ಅವಂಗೆ ಜನ್ಮ ಜನ್ಮಾಂತರದಲ್ಲಿ ಬಪ್ಪುದು ತಪ್ಪದು.

ಇಂತಿದನರಿದು ಮರೆದೆಡೆ, ದೇವ ಮರ್ತ್ಯ ತಪಲೋಕಕ್ಕೆ ಸಲ್ಲಸಲ್ಲ
ಅಲ್ಲ ನಿಲ್ಲು, ಮಾಣು, ಹೊರಗಯ್ಯ.
ನಿಮ್ಮಾಣೆ, ನಿಮ್ಮ ಪ್ರಮಥರಾಣೆ, ಹೊಯ್ಯೋ ಡಂಗುರವ,
ದೇವರಾಯ ಸೊಡ್ಡಳಾ. ॥ ೯ ॥

೭೩೬

ಈ ಪತ್ರೆಗೀ ಫಲ, ಈ ಪುಷ್ಪಕೀ ಫಲ,
ಈ ಪೂಜೆಗೀ ಫಲವೆಂಬ ಕೈಕೂಲಿಕಾರರೆಲ್ಲ ಕರ್ಮಿಗಳಯ್ಯಾ,
ಸ್ವರ್ಗನರಕಗಳನುಂಬ ಕರ್ಮಿಗಳಯ್ಯಾ.
ಒಡಲೊಡವೆ ಪಡೆದರ್ಥವ ಮೃಡದೇವ ಸೊಡ್ಡಳಂ,ಗರ್ಪಿತವೆಂದಾತ
ಬೆಡಗಿನ ಶಿವಪುತ್ರ, ಉಳಿದವರಂತಿರಲಿ, ॥ ೧೦ ॥

೭೩೭

ಉಂಡುಂಡು ಜರಿದವನು ಯೋಗಿಯೆ ?
ಅಶನಕ್ಕೆ ಅಳುವವನು ಯೋಗಿಯೆ ?
ವ್ಯಸನಕ್ಕೆ ಮರುಗುವವ[ನು] ಯೋಗಿಯೆ ?
ಆದಿವ್ಯಾಧಿಯುಳ್ಳವ[ನು] ಯೋಗಿಯೆ ?
ಯೋಗಿಗಳೆಂದಡೆ ಮೂಗನಾಗಳೆ ಕೊಯಿವೆ.
ಯೋಗಿಗಳ ಯೋಗಿ ಶಿವಯೋಗಿ ಸೊಡ್ಡಳಾ,
ಸಿದ್ಧರಾಮನೊಬ್ಬನೆ ಶಿವಯೋಗಿ. ॥ ೧೧ ॥

೭೩೮

ಉಡಲು ತೊಡಲು ಹೊದೆಯಲೆಂದು,
ಮಡಿಹಿದ ಮೃಡ ಮೂವರತಂದು,
ತೊಗಲನುಗಿದನವಮು.
ಕರಿದಾನವ ಕೇಸರಿ ದಾನವ, ಬಾಹೂರು ದಾನವರ ಸೊಡ್ಡಳನಂದು. ॥ ೧೨ ॥

೭೩೯

ಉದ್ದವಾಗಿ ಕೂದಲು ನಿಮಿರ್ದು, ಗಡ್ಡಂಗಳು ಬೆಳದಡೇನು ಹೇಳಾ !
ಗಡ್ಡಂಗಳು ಬೆಳೆಯವೆ ಹೇಳಿರಣ್ಣಾ,
ದೊಡ್ಡದಾಗಿ ಬೆಳೆದ ಗಡ್ಡ ಹೋತುಗಳಿಗೆ.
ಗಡ್ಡದ ವೃದ್ಧ ವೈಶಿಕರ ಮೆಚ್ಚ,
ಮಹಾದೇವ ಸೊಡ್ಡಳ ಭಕ್ತಿ ಸಜ್ಜನರಲ್ಲದವರ. ॥ ೧೩ ॥

೭೪೦

ಎನ್ನ ಕಾಯವೆಂಬ ಸಿಂಹಾಸನದಲ್ಲಿ
ಪ್ರಾಣವೆಂಬ ಲಿಂಗವ ಮೂರ್ತಿಗೊಳಿಸಿ,

ಧ್ಯಾನವೆಂಬ ಹಸ್ತದಲ್ಲಿ ಮುಟ್ಟಿ ಪೂಜಿಸುತ್ತಿರಲು,
ಮೆಲ್ಲಮೆಲ್ಲನೆ ಸುತ್ತಿ ಮುತ್ತಿದ ಸಂಸಾರ ಬಯಲ ಬೆರಸಿ,
ನಾ ನೀನೆಂಬ ಭೇದವಳಿದು,
ಮಹಾದಾನಿ ಸೊಡ್ಡಳನಲ್ಲಿ ಲಿಂಗೈಕ್ಯವಾಯಿತ್ತು. ‖ ೧೪ ‖

೭೪೧

ಎನ್ನನೆತ್ತಿಕೊಂಡನಯ್ಯಾ ಸಂಗನಬಸವಣ್ಣನು.
ಎನ್ನ ಮುದ್ದಾಡಿಸಿದನಯ್ಯಾ ಚನ್ನಬಸವಣ್ಣನು.
ಎನಗೆ ಪ್ರಸಾದವನುಣಕಲಿಸಿದನಯ್ಯಾ ಮರುಳಶಂಕರದೇವರು.
ಎನ್ನ ಸಲಹಿದನಯ್ಯಾ ಪ್ರಭುದೇವರು.
ಎನಗೆ ಅರುಹಕೊಟ್ಟನಯ್ಯಾ ಸಿದ್ಧರಾಮಯ್ಯನು.
ಇಂತೀ ಐವರ ಕಾರುಣ್ಯಪ್ರಸಾದವ ಕೊಂಡು ಬದುಕಿದೆನಯ್ಯಾ,
ಏಕಾಂತವೀರ ಸೊಡ್ಡಳಾ. ‖ ೧೫ ‖

೭೪೨

ಎಲ್ಲಾ ದೈವಕ್ಕೆ ವಿಷ್ಣು ಘನವೆಂಬ ವೇದಾದಿಗಳು
ನೀವು ಕೇಳಿ.
ಎಲ್ಲಾ ದೈವಕ್ಕೆ ಸರಿಯೆಂಬ ಮಾಯಾವಾದಿಗಳು
ನೀವು ಕೇಳಿ.
ಗಾಯತ್ರಿ ಛಂದ, ವಿಶ್ವಾಮಿತ್ರ ಋಷಿ, ಸವಿತಾ ದೇವ,
ಅಗ್ನಿ ಮುಖ, ಬ್ರಹ್ಮ ಶಿರ, ವಿಷ್ಣು ಹೃದಯ, ರುದ್ರ ಲಲಾಟವೆಂದು
ಹೀಂಗೆ ಹೇಳುತ್ತಿದೆ [ಶ್ರುತಿ].
ಗಾಯತ್ರಿ ಕಲ್ಪದಲ್ಲಿ :
ಓಂ ಭೂಃ ಓಂ ಭುವಃ ಓಂ ಸುವಃ ತತ್ಸ ವಿತುರ್ವರೇಣ್ಯಂ ।
ಭರ್ಗೋ ದೇವಸ್ಯ ಧೀಮಹಿಯೋ ಯೋನಃ ಪ್ರಚೋದಯಾತ್ ॥
ಎಂದುದು ಶ್ರುತಿ.
ಸರ್ವದೇವ ಶಿಖಾಮಣಿ ಸೊಡ್ಡಳನಲ್ಲದೆ ದೈವವಿಲ್ಲೆಂದುದು. ‖ ೧೬ ‖

೭೪೩

ಎಳವತ್ತಿಗೆಯಲ್ಲಿದ್ದಲ್ಲಿ ತಿಳಿವು ನಿನಗಿಲ್ಲ,
ರೂಹತ್ತಿಗೆ ಬಂದಲ್ಲಿ ಮುಂದ ನೀ ಕಾಣೆ.
ಸಿರಿವಳದಲ್ಲಿ ದೇವಕಾರ್ಯವಂ ಮಾಡು.
ಮದುವಳದಲ್ಲಿಗೆ ಹೋಗದ ಮುನ್ನ ಭಕ್ತಿಯ ಮಾಡು.
ನೀನರಿಯೆ ಕಾಡನೂರಿಗೆ ಹೋಗದ ಮುನ್ನ, ಸೊಡ್ಡಳಂಗೆ ಶರಣೆನ್ನಿ. ‖ ೧೭ ‖

೭೪೪

ಏಕಭಾಜನದಲ್ಲಿ ಸಹಭೋಜನವ ಮಾಡುವಡೆ,
ಅಷ್ಟತನು ಬೆಂದು ನಷ್ಟವಾಗಿರಬೇಕು.
ಅಂಗವಿಕಾರ ಬಿಡದು, ಆನು ಲಿಂಗವಾದೆನೆಂಬ ಭಂಗವ ನೋಡಾ.
ಸವಿ ಸವೆಯದು, ತಮ್ಮ ಮರೆಯರು, ಸೊಡ್ಡಳ ಮೆಚ್ಚ. ॥ ೧೮ ॥

೭೪೫

ಏಕಮೇವ ನ ದ್ವಿತೀಯಂ ಬ್ರಹ್ಮವೆಂಬ
ಘನಮಹಿಮನ ಕಂಡ ಕಾಣಿಕೆಯಲ್ಲಿ,
ತನುಮನ ಕರಗಿ, ಕರಣಂಗಳೆಲ್ಲ ತರಹರವಾದವಯ್ಯಾ.
ದೀರ್ಘದಂಡ ನಮಸ್ಕಾರಂ ನಿರ್ಲಜ್ಜಂ ಗುರುಸನ್ನಿಧೌ ।
ಶರೀರಮರ್ಥಪ್ರಾಣಂ ಚ ಸದ್ಗುರುಭ್ಯೋ ನಿವೇದಯೇತ್ ॥
ಎಂದುದಾಗಿ, ಶರಣುವೊಕ್ಕೆ ನಾನು.
ಎನ್ನ ಶಿರ ನಿಮ್ಮ ಚರಣದಲ್ಲಿ ಬಿಡಿಸಬಾರದ ಸಂಗ.
ಮಹಾದಾನಿ ಸೊಡ್ಡಳನ ಶರಣ ಪ್ರಭುದೇವರ ಕಂಡು,
ಎನ್ನ ಭವದ ಬಳ್ಳಿಯ ಬೇರು ಹರಿಯಿತ್ತಯ್ಯಾ. ॥ ೧೯ ॥

೭೪೬

ಏರುವಡೆ ಮೊಲನಾಗನ ಗದ್ದುಗೆ ಕಪಾಲ ಕೈಯಲ್ಲಿ,
ಹೇಳುವಡೆ ಹರಿಯ ಹೆಗಲಲ್ಲಿ ನೋಡಾ.
ಬಿಚ್ಚಿ ಹೊದೆವಡೆ ನಾರಸಿಂಹನ ಹಸಿಯ ತೊವಲು.
ಉಬ್ಬಿ ಹಿಡಿವಡೆ ನಿನಗಾದಿ ವರಹನ ದಾಡೆ.
ನಲಿದು ಪಿಡಿವಡೆ ನಿನಗೆ ತ್ರಿವಿಕ್ರಮನ ನಿಟ್ಟೆಲುವು.
ಕಲಿಗಳ ತಲೆಗಳ ಮಾಲೆಗಳಾರಾದಡೇನು [ಯೋಗ್ಯವೆ] ?
ಸುಡು ಬಿಡು, ಎಲುವುಗಳ ಮುಟ್ಟುವರೆ ಸೊಡ್ಡಳಾ. ॥ ೨೦ ॥

೭೪೭

ಒಂದು ಇಂದ್ರಿಯ ಮೊದಲಾದುದಕ್ಕೆ ಕಡೆಯಿಲ್ಲ,
ಕುಂಜರನು ಸ್ಪರ್ಶೇಂದ್ರಿಯದ ಬಳಿ ಸಂದು,
ಫಣಿರಾಗರಸದಿಂದ, ಭ್ರಮರ ಸೌರಭ್ಯದಿಂದ
ಮತ್ಸ್ಯರುಚಿಯಿಂದ, ಪತಂಗ ರೂಪಿಂದ,
ಒಂದೊಂದು ವಿಷಯದಲ್ಲಿ, ಒಂದೊಂದು ಪ್ರಾಣಿಗಳು ನೊಂದು,
ಬಂಧನಕ್ಕೆ ಬಂದುದನರಿಯಾ.
ಪಂಚೇಂದ್ರಿಯದ ಬೆಂಬಳಿಯಲ್ಲಿ ಹರಿವ ಮನುಜರ ಕೊಂದು,
ಕೂಗದೆ ಮಾಯೆ, ದೇವರಾಯ ಸೊಡ್ಡಳ ನೋಡೆ. ॥ ೨೧ ॥

೭೪೮

ಕಣ್ಣಿಂ ತ್ರಿಜಗಮಂ ಸುಟ್ಟು ಮುಚ್ಚಿ ಬಚ್ಚಿಡುವನು.
ಪಾಪಕಂಜನು ಕೋಪಕಂಜನು ನೆರೆಗಂಜನು ಹೊರೆಗಂಜನು.
ಕೋಟಿಕೋಟಿ ಬ್ರಹ್ಮಹತ್ಯಮಂ ಮಾಡಿಪ್ಪನು.
ಮಾರಿ ತೊತ್ತು ಮುರಾರಿ ಬಂಟನು, ತನಗಾರು ಇದಿರಿಲ್ಲ ನೋಡಾ.
ಎಲುವುಗಳ ತಲೆಗಳ ಮಾಲೆಯ ಕೊರಳಲೆ ಒಳವನು ಮಾಡಿಕ್ಕಿದ.
ಒಲಿದವರ ಕಾವ, ಒಲ್ಲದವರ ಕೊಂದೀಡಾಡುವ ಸೊಡ್ಡಳದೇವನು. ॥ ೨೨ ॥

೭೪೯

ಕರ್ತಾರನಟ್ಟಿದ ವಿಧಿಗಂಜಿ, ಪಾತಾಳಲೋಕದಲ್ಲಿ ಹೊಕ್ಕಡಗಿದಡೆ,
ಭೂತಳದ ಮೇಲೆ ಹೊಮ್ಮರೆಯಾಗಿ ಹರಿದಡೆ, ಕೊಲ್ಲದೆ ವಿಧಿ ?
ತಪ್ಪು ತಡೆಯಿಲ್ಲದ ತಪಸಿಗಪ್ಪುದೆ ಶಲದ ವಿಧಿ ?
ಹರನಟ್ಟಿದ ಬೆಸನದಿಂದ ಮೆಕ್ಕೆ ಹಾವಾಗಿ ತಿನ್ನದೆ ವಿಧಿ ?
ದೇವ ದಾನವ ಮಾನವರ ಒಕ್ಕಲಿಕ್ಕಿ ಕೊಲ್ಲದೆ ವಿಧಿ ?
ಮುಕ್ಕಣ್ಣ ಸೊಡ್ಡಳನಾಣತಿವಿಡಿದು. ॥ ೨೩ ॥

೭೫೦

ಕಾಮದಲ್ಲಿ ಲೋಲುಪ್ತವಾದವರೆಲ್ಲರೂ ಮಹವನೆತ್ತ ಬಲ್ಲರು !
ಸೋಮಧರನ ಓಲಗದಲ್ಲಿ ಕಾಮುಗಣಂಗಳುಂಟೆ ?
ಕಾಮಾರಿ ಲಿಂಗವಲ್ಲದೆ ಈ ಬಣ್ಣದ ಹೆಣ್ಣೆಂಬ ಜಾಲವ ಬೀಸಿದನೆಲ್ಲಾ,
ಕಾಮ ಭಂಡುಗಳಿಗೆ ತನ್ನ ತೋರುವನೆ, ದೇವರಾಯ ಸೊಡ್ಡಳ ? ॥ ೨೪ ॥

೭೫೧

ಕಾಲ ಕಾಮ ಮಹಾಕಾಲ ಪ್ರಳಯಕಾಲ,
ಕಾಲನ ಕೊಂದು, ಹರ ಲೀಲೆಯನಾಡುವಂದು,
ಬ್ರಹ್ಮ ವಿಷ್ಣು ಜಿನಪಾಲರೆಂಬವರೆಲ್ಲಿದ್ದರೊ ?
ಸರಿಯೆಂಬ ನಾರಸಿಂಹನ ಶಿರವರಿದು,
ಹರನ ಶಿವಾಲಯಕ್ಕೆ ಕೀರ್ತಿಮುಖವಾಗಿದೆ.
ಹರಿಯ ಚರ್ಮವ ಸೀಳಿ, ಹರನ ಖಟ್ವಾಂಗವಾಗಿದೆ.
ಮತ್ಸ್ಯಾವತಾರನ ಕರುಳಂ ತೆಗೆದು, ಹರನ ಜಡೆಯಲ್ಲಿ ಉತ್ತರಿಗೆಯಾಗಿದೆ.
ಸರಿಯೆಂಬ ಹೆಸರಿನ್ನಾರಿಗೊ, ಮುಕ್ಕಣ್ಣ ಸೊಡ್ಡಳಂಗಲ್ಲದೆ. ॥ ೨೫ ॥

೭೫೨

ಕಾಲಾಂತ್ಯಕಾಲದಲ್ಲಿ, ಪ್ರಳಯಾಂತ್ಯಪ್ರಳಯದಲ್ಲಿ
ಕಾಲ ಮಹಾಕಾಲನಂ ಕೊಂದು, ಹರನು ಲೀಲೆಯನಾಡುವಲ್ಲಿ
ತ್ರಿವಿಕ್ರಮನ ನಿಟ್ಟೆಲುವು ಕಟ್ಟಿಗೆ ವಾಸುಗಿ ತೆಗೆ ನೇಣು,

ನರಸಿಂಹನು ಗುರುಕೊಂಕಿ ಆದಿವರಾಹನ ಎಲೆಯವಾಡಿ.
ಅದೆಂತೆಂದಡೆ :
ಕಲ್ಪಾಂತೇಶಮಿತತ್ರಿವಿಕ್ರಮ ಮಹಾಕಂಕಾಳ ಬದ್ಧಸ್ವರ ।
ಚೈಷಃ ಸೂತ್ರಮಥೋ ನೃಸಿಂಹ ನಖಪ್ರೋತಾದಿಕೋಲಾಮಿಷಂ ।
ವಿಶ್ವೈಕಾರ್ಣವ ಸಂವಿಹಾರಮುದಿತೌ ಯೌ ಮತ್ಸ್ಯ ಕೂರ್ಮೌ
ಪುಚೌಕರ್ಷನಿವರತಾಂಗತಃ ಶ್ಯಾತು ಸತಾಂ ಮೋಹಂ ಮಹಾಭೈರವಃ ॥
ಎಂದುದಾಗಿ. ಇಂತಪ್ಪ ಮತ್ಸ್ಯ ಕೂರ್ಮಂಗಳಂ ತೆಗೆದಾಡುವಂದು,
ಹರಿಹರನೆಂಬ ಹೆಸರಾಯಿತ್ತಯ್ಯಾ ಸೊಡ್ಡಳಾ. ॥ ೨೬ ॥

೭೫೩

ಕಾಶಿಯಲ್ಲಿಪ್ಪ ಈಶನನರಿಯದ ಮೂವರ
ಕೊರಳು ಕೈಗಳು ಮುರಿದು ಬಿದ್ದವು.
ಕೈಲಾಸದಲ್ಲಿಪ್ಪ ಈಶನನರಿಯದ ಮೂವರ
ದೇಹ ಕಾಲು ಕೈಗಳು ಮುರಿದುಬಿದ್ದವು.
ಶ್ರೀಶೈಲದಲ್ಲಿಪ್ಪ ಈಶನನರಿಯದ ಮೂವರ
ದೇಹ ಕರುಳು ತೊಗಲುಗಳು ಉದುರಿಬಿದ್ದವು.
ಸಮುದ್ರದಲ್ಲಿಪ್ಪ ಈಶನನರಿಯದಿಬ್ಬರು
ಒಬ್ಬರ ಹೊಟ್ಟೆಯ ಒಬ್ಬರು ಹೊಕ್ಕು ಬಿದ್ದರು.
ಇಂತೀ ದೇವ ದಾನವ ಮಾನವರು ಮೊದಲಾದ ಸಕಲರೂ
ಮಹಾದಾನಿ ಸೊಡ್ಡಳನನರಿಯದೆ ತರ್ಕಿಸಿ, ಕೆಟ್ಟುಹೋದರು. ॥ ೨೭ ॥

೭೫೪

ಕಿಚ್ಚಿಲ್ಲದುರಿವ [ದೇವನು] ಮತ್ತೊಬ್ಬರಿಗಂಜುವನಲ್ಲ,
ಕೌತುಕದ ದೇವ ಕಾಣಿಭೋ ನಮ್ಮ ಶಿವನು.
ಬಿರುದರ ಬಿಂಕದ ಬಿಂಕವ ಮುರಿದು,
ಉಬ್ಬಿದವರ ಗರ್ಭವ ಕಲಂಕುವ, ಬಲ್ಲಿದನ ತಲೆ ಕೈಯಲ್ಲಿ.
ಮೆಲ್ಲಿದನ ನಯನ ಚರಣದಲ್ಲಿ,
ಅಯ್ಯಯ್ಯಾ, ಮಝು ಭಾಪುರೆ ರಾವುರಾವು ಸೊಡ್ಡಳಾ. ॥ ೨೮ ॥

೭೫೫

ಕುಡುವವ ಮಾನವನೆಂದಡೆ ಹೊಡೆ ಬಾಯ ಕೆರವಿನಟ್ಟೆಯಲ್ಲಿ,
ಮಾನುಷನ ಹೃದಯದೊಳು ತಾನೀಶ ಹೊಕ್ಕು,
ಸಲ್ಲುವಷ್ಟು ಕುಡಿಸುವ, ದೇವರಾಯ ಸೊಡ್ಡಳ. ॥ ೨೯ ॥

೭೫೬

ಕೂರ್ಮನ ಶಿಶುವಿನ ಸ್ನೇಹದಂತಿರ್ಪ ದೇವನೆನಗಿಂದು
ಪ್ರತ್ಯಕ್ಷ ಕಣ್ಣಮುಂದೆ ಗೋಚರವಾದ ನೋಡಾ.

ಎನ್ನ ಅಂತರಂಗದಲ್ಲಿ ಹೂಣೆಹೊಕ್ಕು, ವಿನಯ ಸದ್ಗೋಷ್ಠಿಯ ಮಾಡುವ
ನಿಷ್ಕಳಂಕ ಚೈತನ್ಯನು ಸಕಲರೂಪ ಸನ್ನಹಿತವಾದ ನೋಡಾ.
ಬಟ್ಟಬಯಲು ಬಲಿದು ಗಟ್ಟಿಗೊಂಡಂತೆ,
ಏಕಾಂತವೀರ ಸೊಡ್ಡಳಾ, ನಿಮ್ಮ ಶರಣ ಪ್ರಭುದೇವರ ನಿಲವು. ॥ ೩೦ ॥

೭೫೭

ಕೆಮ್ಮ ಕೆಮ್ಮನೆ ಕೇಳಯ್ಯ.
ಬ್ರಹ್ಮಾಂಡವ ಬಿರಣೆಯ ಮಾಡಿ,
ಅಯ್ಯಾ ಕಾಲಕರ್ಮವೆಂಬ ಯುಗಜುಗಂಗಳನೆಲ್ಲವ
ಬಣ್ಣಿಗದೆನೆಯಂ ಮಾಡಿ, ಅವ ಹುರಿವವನು, ಒರಸುವವನು, ಮುಕ್ಕುವವನು.
ಅದೆಂತೆಂದಡೆ :
'ಈಶಃ ಸರ್ವಸ್ಯ ಜಗತಃ ಪ್ರೇರಕೋ ವಿಶ್ವಭುತ್ ಪ್ರಭುಃ'
ಇತೆಂದುದು ಶ್ರುತಿ.
ಸರ್ವಜಗಂಗಳ ಪುಟ್ಟಿಸುವ, ರಕ್ಷಿಸುವ, ಭಕ್ಷಿಸುವ
ತನ್ನಿಚ್ಛೆಗಾರ ಸೊಡ್ಡಳದೇವನು. ॥ ೩೧ ॥

೭೫೮

ಕೊಳ್ಳಿಯ ಬೆಳಕಿನಲ್ಲಿ ಕುಳಿತು,
ಒಡ್ಡದ ತಳಿಗೆಯಲಿ ಅಂಬಲಿಯನಿಕ್ಕಿಕೊಂಡು,
ಸುರಿದು ಕೈದೊಳೆದು ಮುರಿದ ಗುಡಿಯೊಳಗೆ,
ಹರಿದ ತಟ್ಟೆಯ ಮೇಲೆ ಹರಿದ ಬೊಂತೆಯ ಹಾಸಿಕೊಂಡು,
ಕೆಡದಿಹಂಗೊಬ್ಬ ಮಗ ಹುಟ್ಟಿ, ಸಿರಿವಂತನಾದಡೆ,
ಇಳಿಯ ಬಿಟ್ಟು ಕಳೆಯದಿಹನೆ ಹಿಂದಣ ಕಷ್ಟದರಿದ್ರವ ?
ಬಂಡಿಯ ಹಿಡಿದಾತನ ತಂದೆಯ ತಲೆ ಹೋಹುದುಯೆಂದು
ಪಿತರಾಚಾರವೆಂದು ವೃಥಾ ಸಾವನೆ ?
ಕಂದ ಜಾಣನಾದಡೆ ತಮ್ಮ ತಂದೆಯಂತಹನೆ ?
ವಿಷಯದಿಂ ಬಂದ ದೈವಂಗಳಿಗೆ ಅನು ಎಂದೂ ಎರಗೆ, ಸೊಡ್ಡಳಂಗಲ್ಲದೆ.
॥ ೩೨ ॥

೭೫೯

ಗಂಗಾನದಿಯಲ್ಲಿ ಮಿಂದು ಗಂಜಳದಲ್ಲಿ ಹೊರಳುವರೆ ?
ಚಂದನವಿದ್ದಂತೆ ದುರ್ಗಂಧವ ಮೈಯಲ್ಲಿ ಪೂಸುವರೆ ?
ಸುರಭಿ ಮನೆಯಲ್ಲಿ ಕರೆವುತ್ತಿರೆ, ಹರಿವರೆ ಸೊಣಗನ ಹಾಲಿಂಗೆ ?
ಬಯಸಿದಮೃತವಿದ್ದಂತೆ,
ಅಂಬಿಲವ ನೆರೆದುಂಬ ಭ್ರಮಿತಮಾನವಾ, ನೀನು ಕೇಳಾ.
ಪರಮಪದವೀಯುತೀವ ಚೆನ್ನಸೊಡ್ಡಳನಿದ್ದಂತೆ,
ಸಾವದೇವರ ನೋಂತರೆ, ಕಾವುದೆ ನಿನ್ನ ? ॥ ೩೩ ॥

೭೬೦

ಗಂಡನುಳ್ಳ ಹೆಂಡಿರನು ಕಂಡು ಅಳುಪದಿರು ಮನವೆ.
ಬಂದ ಬಸುರನೂ ಉಂಡ ಮೊಲೆಯನೂ ಕಂಡು ಮರುಗದಿರಾ ಮನವೆ.
ಉದ್ದಂಡತನದಲ್ಲಿ ನಡೆವ ಭಂಡರನು
ಹುಳುಗೊಂಡದಲ್ಲಿಕ್ಕುವ ಸೊಡ್ಡಳದೇವ. || ೩೪ ||

೭೬೧

ಘುಡುಘುಡಿಸಿ ಅನ್ಯದೈವಂಗಳ ಕೊಡೆವಿಡಿಸಿದನು.
ಪಿಂಬೇರ ಮೈಲಿಗೆಯನು ಅಡಗಿಸಿದ ಭೋ.
ದೈವಂಗಳ ದರ್ಪವನು ಉಡುಗಿಸಿದ ಭೋ.
ಮುದನೂರ ದಾಸನ ತವನಿಧಿಯನು ಉರಿಗಣ್ಣ ಬಿಟ್ಟೊಮ್ಮೆ
ಹರಿಯ ಪ್ರತಿಮೆಯನೊಡೆದಡಗಿಸಿದ ಭೋ.
ದೈವಂಗಳ ದರ್ಪವನು ಮನ್ನಣೆಯ ಮಾಡದೆ,
ಮಾರಿಯ ಕೈಯ ಮೊರಡಿಯ ಧಾನ್ಯಂಗಳ ಮಿಡಿಸಿದನು.
ಓಂ ನಮಃ ಶಿವಾಯ ಶಂಕರದಾಸ, ಪಂಚವದನ ಸೊಡ್ಡಳಾ. || ೩೫ ||

೭೬೨

ಚಂದ್ರಬಲ ತಾರಾಬಲವೆಂಬಿರಿ ಎಲೆ ಅಣ್ಣಗಳಿರಾ !
ಚಂದ್ರಂಗೆ ಯಾರ ಬಲ ? ಇಂದ್ರಂಗೆ ಯಾರ ಬಲ ?
ಇಂದ್ರಂಗೆ, ಮುಕುಂದಂಗೆ, ಬ್ರಹ್ಮಂಗೆ,
ಚಂದ್ರಶೇಖರ ದೇವಸೊಡ್ಡಳನ ಬಲವು. ಕೇಳಿರಣ್ಣಾ. || ೩೬ ||

೭೬೩

ಜಡೆಯೆಡೆಯಾಯಿತ್ತು, ಬೋಳೆಡೆಯಾಯಿತ್ತು, ಲೋಚೆಡೆಯಾಯಿತ್ತು.
ನಡೆಯ ಮುನ್ನಿನ, ನುಡಿಯ ಮುನ್ನಿನ
ಒಡಲಗುಣಂಗಳಾರಿಗೂ ಬಿಡವು. ಎಡೆಯಣ ತಪವೇಕೆ ?
ಬಡಸಂಸಾರ ಸಾಲದೇ, ಸೊಡ್ಡಳದೇವಾ ? || ೩೭ ||

೭೬೪

ಜವನಿದ್ದಾನೆ, ಜವನ ಪಟ್ಟಣವಿದೆ,
ಮಾಮರನಿದೆ, ಹೂಮರನಿದೆ, ತೋಮರನಿದೆ ನೋಡಯ್ಯಾ.
ಆವ ಕಾರ್ಯವಾದಡೂ ಮಾಡು, ದೇವ ಕಾರ್ಯವ ಮಾಡು.
ಸಾವ ಕಾರ್ಯ ತಪ್ಪದು, ನೀ ಕೆಡಬೇಡ ಕಂಡಾ.
ಬೇಗಬೇಗ ನಂಬಿ ಪೂಜಿಸು, ದೇವ ಸೊಡ್ಡಳನ, ಮರುಳೆ. || ೩೮ ||

೭೬೫

ತನುವಿಕಾರ, ಮನವಿಕಾರ, ಜನನಮರಣಸ್ಥಿತಿ ಕಾರಣ,
ಹೊನ್ನ ತೋರಿದೆ, ಜಗದ ಕಣ್ಣ ಮೊದಲಿಗೆ.
ಹೆಣ್ಣ ಸುಳಿಸಿದೆ, ಜಗದ ಕಣ್ಣ ಮೊದಲಿಗೆ.
ಮಣ್ಣ ಹರಹಿದೆ, ಜಗದ ಕಣ್ಣ ಮೊದಲಿಗೆ.
ತನುವ ತಪ್ಪಿಸಿ, ಜಗವ ಸಂಸಾರಕ್ಕೊಪ್ಪಿಸಿ,
ನುಣ್ಣನೆ ಹೋದನುಪಾಯದಿ ದೇವರಾಯಸೊಡ್ಡಳ. ॥ ೩೯ ॥

೭೬೬

ತನ್ನ ಶ್ರೀಗುರುವಿಂಗೆ ಸಕಲಪದಾರ್ಥವ ಕೊಟ್ಟು ಕೊಂಡಡೆ ಪ್ರಸಾದ.
ತನ್ನ ಪ್ರಾಣಲಿಂಗಕ್ಕೆ ಸಕಲಪದಾರ್ಥವ ಕೊಟ್ಟು ಕೊಂಡಡೆ ಪ್ರಸಾದ.
ಜಂಗಮಕ್ಕೆ ಸಕಲಪದಾರ್ಥವ ಕೊಟ್ಟು ಕೊಂಡಡೆ ಪ್ರಸಾದ.
ಇದೇ ಪ್ರಸಾದದ ಹಾದಿ ಕಂಡಯ್ಯಾ.
ಮುನ್ನಾದಿಯ ಪುರಾತನರು ನಡೆದ ಪಥವು ಕಂಡಯ್ಯಾ.
ಇಂತೀ ಶ್ರೀಗುರುವಿಂಗೆ ಕೊಡದೆ, ಲಿಂಗಕ್ಕೆ ಕೊಡದೆ, ಜಂಗಮಕ್ಕೆ ಕೊಡದೆ
ತಾನೆ ಉಂಡನಾದಡೆ, ಹುಳುಗೊಂಡದಲ್ಲಿಕ್ಕುವ,
ನಮ್ಮ ದೇವರಾಯ ಸೊಡ್ಡಳ. ॥ ೪೦ ॥

೭೬೭

ತಮ್ಮ ಪುತ್ರರಂಗದ ಮೇಲೆ, ತಮ್ಮ ಶ್ರೀಗುರುವಿನ ಹಸ್ತದಲ್ಲಿ,
ಲಿಂಗಸಾಹಿತ್ಯವ ಮಾಡಿದ ಬಳಿಕ,
ಆ ಗುರುವಿನ ಪುತ್ರರಲ್ಲದೆ, ತಮ್ಮ ಪುತ್ರರಲ್ಲ.
ತಾವವರೂ ಗುರುವಿನ ಸೊಮ್ಮೆಂದರಿದು,
ಮತ್ತೆ ತಮ್ಮ ಪುತ್ರಿಯರೆಂದು ಮಾರಿಕೊಂಡುಂಡು,
ನಾನು ಭಕ್ತ, ನಾನು ಮಹೇಶ್ವರನೆಂಬ ಶಿವಾಚಾರ ಭ್ರಷ್ಟರುಗಳ
ವೀರಸೊಡ್ಡಳ ಮೆಚ್ಚುವನೆ, ಚನ್ನಬಸವಣ್ಣಾ ? ॥ ೪೧ ॥

೭೬೮

ತಿರುಕನಾಗುವ, ನರಕಿಯಾಗುವ, ವಿರಸನಾಗುವ, ಕುರುಡನಾಗುವ,
ಕುರುಟನಾಗುವ, ಕುಂಟನಾಗುವ, ಮುರುಡನಾಗುವ, ಕನ್ನವನಿಕ್ಕುವ,
ಅನ್ಯಶಬ್ದವ ನುಡಿವ, ತೊನ್ನು ಹತ್ತುವ,
ಬಣ್ಣಬಿಡುವ, ಹೊನ್ನ ಕೆಡುವ ಮುನ್ನ,
ಸೊಡ್ಡಳನ ಆರಾಧನೆ ಇಲ್ಲದ ಕುನ್ನಿಗಳಿಗೆಲ್ಲಾ ಈ ವಿಧಿ ತಪ್ಪದು. ॥ ೪೨ ॥

೭೬೯

ತೆರಹು ಮರಹೆಂಬುದು ನಿಮ್ಮ ಗುಣವಲ್ಲ,
ಅಮೃತಸಾಗರದೊಳಗೆ ಬೇವಿನ ಬಿಂದುವುಂಟೆ ?

ಮನವ ನೋಡಲೆಂದು ನಟ ನಾಟಕವನೊಡ್ಡಿದನೆ.
ಅದಕ್ಕೆ ಸಹಜವಲ್ಲಾಗಿ, ಹೆದರಲಿಲ್ಲ
ಮಹಾದಾನಿ ಸೊಡ್ಡಳನ ಮನ ನೊಂದಿತ್ತೆಂದು,
ಅಂಜಬೇಡವೇಳಾ, ಸಂಗನಬಸವಣ್ಣಾ. || ೪೩ ||

೭೭೦

ತೋಟದೊಡೆಯ ತೋಟದ ನಾಲ್ಕು ಗೋಟ ಮುಟ್ಟಿ ಕಾವಾಗ,
ಕಣ್ಣ ತೆರೆವರಾರೊ ?
ಹೂ ಕಾಯ ಹಣ್ಣ ತಿರುವರಾರೊ ?
ಹೊಟ್ಟನೊಟ್ಟಿ ಬೀಜವನುಳುಹಿ ಸುಡುವ ಸೊಡ್ಡಳರಾಯ. || ೪೪ ||

೭೭೧

ನಿಜತತ್ವದ ನಿರ್ವಯಲು ನಿರ್ವಾಹವಾಯಿತ್ತು,
ನೆನೆವರ ಪರುಷ ಘನವನೊಡಗಲಿಸಿತ್ತು
ಭಕ್ತರ ಭಾಗ್ಯ ಮುಕ್ತಿಯನೈದಿತ್ತು
ಬಸವಣ್ಣ ಚನ್ನಬಸವಣ್ಣನ ಮಾಮನೆಯಲ್ಲಿ,
ಮಹಾದಾನಿ ಸೊಡ್ಡಳನ ಶರಣ ಪ್ರಭುದೇವರು
ನಿರವಯ ಬೆರಸಲೊಡನೆ, ಸತ್ಯಲೋಕದ ಬಾಗಿಲ ಕದವು ತೆರೆಯಿತ್ತು.|| ೪೫ ||

೭೭೨

ನಿತ್ಯ ನಿಜತತ್ವವು ಭಕ್ತಕಂಪಿತವಾಗಿ, ಎನ್ನತ್ತ ತಿರುಗಿತ್ತು.
'ವತ್ಸಂ ಗೌರಿವ ಗೌರೀಶ' ಎಂಬ ಶ್ರುತಿಯ ತೋರಲೆಂದು,
ಎನಗೆ ಕೃಪೆಯಾಗಿ, ತನ್ನ ಶ್ರೀಪಾದವ ತೋರಿದನು.
ಜಯಜಯಶ್ರೀ ಮಹಾದೇವ ಜಯ ಜಯ ಶ್ರೀಮಹಾದೇವ.
ಗುರುವೆ ನಮೋ ನಮೋ, ಎನ್ನ ಪರಮ ಗುರುವೆ ನಮೋ ನಮೋ,
ಎನ್ನ ಭವಬಂಧನಂಗಳ ಬಿಡಿಸಿದೆಯಾಗಿ, ಗುರುವೆ ನಮೋ ನಮೋ ಎಂಬೆ.
ಮಹಾದಾನಿ ಸೊಡ್ಡಳಾ, ನಿಮ್ಮ ಶರಣ ಪ್ರಭುದೇವರ ಶ್ರೀಪಾದಕ್ಕೆ
ನಮೋ ನಮೋ ಎಂದು ಬದುಕಿದೆನು. || ೪೬ ||

೭೭೩

ನಿಮ್ಮ ತಾಯಿತನವನೊಲ್ಲದವರು, ನಾಯಿ ಬಾರದ ಭವದಲ್ಲಿ ಬಂದರು.
ಒಬ್ಬ ಹೆಬ್ಬಕ್ಕಿಯಾದ, ಒಬ್ಬ ಸೂಕರನಾದ.
ಒಬ್ಬ ಬೆರಳನೆತ್ತಿ ಕಟ್ಟುವಡೆದ.
ಒಬ್ಬರೊಬ್ಬರ ವಿಧಿಯನೊಮ್ಮಿಂಗೆ ಕೈಕೊಳ್ಳಾ,
ಉರ್ವೀಶ ಸೊಡ್ಡಳಾ, ಭಾಪು ಭಾಪುರೆ. || ೪೭ ||

೭೭೪

ನಿಮ್ಮಿಂದಲಾದೆ ನಾನು. ಎನಗೆ ದೇಹೇಂದ್ರಿಯ
ಮನಃಪ್ರಾಣಾದಿಗಳಾದುವು.
ಎನ್ನ ದೇಹೇಂದ್ರಿಯ ಮನಃಪ್ರಾಣಾದಿಗಳ ಕರ್ತ ನೀನೆ.
ಅವರ ಆಗುಚೇಗೆ ಸುಖದುಃಖ ನಿನ್ನವು.
ಒಳಗೂ ನೀನೆ, ಹೊರಗೂ ನೀನೆ. ನಾನೆಂಬುದು ನಡುವಣ ಭ್ರಾಂತು.
ಎಲ್ಲ ವಿನೋದ ನೀನೆ ಬಲ್ಲೆ, ದೇವರಾಯ ಸೊಡ್ಡಳಾ. ॥ ೪೮ ॥

೭೭೫

ನೆರೆಮನೆಯಲ್ಲಿ ಸಿರಿಯಿರ್ದಡೆ ಕಾರಣವೇನು ?
ಪುರಾತನರ ವಚನ ವಚಿಸಿದಲ್ಲಿ ಫಲವೇನು ?
ವಚನದಂತೆ ತಾನಿಲ್ಲ, ತನ್ನಂತೆ ವಚನವಿಲ್ಲ,
ಮೂಗಿಲ್ಲದವರು ಕನ್ನಡಿಯ ನೋಡಿದಡೆ,
ಶೃಂಗಾರ ಮೆರೆವುದೆ, ದೇವರಾಯ ಸೊಡ್ಡಳಾ ? ॥ ೪೯ ॥

೭೭೬

ನೆಲ ದ್ವೀಪದೊಡೆಯನು, ಜಲ ತಂಪಿನೊಡೆಯನು,
ಹಿರಿಯ ಹೆಂಪಿನೊಡೆಯನು, ಕುಲ ಸೊಂಪಿನೊಡೆಯನು,
ಅಗ್ನಿ ಉಣ್ಣದೊಡೆಯನು, ಚಂದ್ರ ಕಾಂತದೊಡೆಯನು,
ಸೂರ್ಯ ಕಾಂತದೊಡೆಯನು, ವಿಷ್ಣು ಮಾಯೆಯೊಡೆಯನು.
ಸಕಲದೈವಂಗಳಿಗೆ ಆಯುಷ್ಯಭಾಷೆಯ ಕೊಟ್ಟ
ಭೋಗದೊಡೆಯನು, ಜಗತ್ಪ್ರಭು ಸೊಡ್ಡಳ. ॥ ೫೦ ॥

೭೭೭

ನೊಸಲಕಣ್ಣ ಬಿಸಿಗೆಂಪಿಗೆ ಶಶಿಯಮೃತ ಒಸರಲು ಸುರಿದಹವೆ.
ಕಪಾಲ ಮಣಿಮಾಲೆಯ ಮೇಲೆ
ಉಲಿದಹವೆ, ನಲಿದಹವೆ, ಮಲಿದಹವೆ, ಕೆಲವಹವೆ.
ಎಲುವೆದ್ದಾಡುವದ ನೋಡಿ ನಗುತ್ತಿಹೆ ಸೊಡ್ಡಳಾ, ನಿಮ್ಮಕೃತಿಯಿಂದ. ॥ ೫೧ ॥

೭೭೮

ಪಂಚಮಹಾಪಾತಕವ ಮಾಡಿ[ದೆ]ನಾದಡೆ, ಒಮ್ಮೆ ಹಂಚಿನಲ್ಲಿ
ತಿರಿದುಂಡಡೆ,
ಪಾಪದಂಜನವನು ಕೊಂಡಡೆ, ಕರ್ಮನಿರ್ಮಳ.
ಇಹದಲ್ಲಿ ಸುಖ, ಪರದಲ್ಲಿ ಗತಿ.
ಬ್ರಹ್ಮನ ಶಿರವ ಚಿವುಟಿ, ಬ್ರಹ್ಮೇತಿ ಮುಖ ತಾಗಿದಡೆ,
ಸದ್ಗುರು ಸೊಡ್ಡಳ ತಿರಿದುಂಡ ಪರಿ. ॥ ೫೨ ॥

೭೭೯

ಪಕ್ಷಿ ಜನಿಸಿ ಅಮೃತವನರಿಯದಂತೆ,
ಶಿವನಲ್ಲದೆ ಅನ್ಯದೈವ ಭಜನೆಯುಳ್ಳನರೇತಕ್ಕೆ ಬಾತೆ ?
ಅನ್ಯಾಯಿತ ವಧೆಯ ಮಾಡುವ ಆರ್ತಿಕಾರ ದೋಷವನರಿಯ.
ಪಾಪಿಯ ಕೈಯ ದಾರ, ಗಾಳದ ಕೊನೆಗೆ ಬಂದುಂಡ ಮತ್ಸ್ಯದ ಲಕ್ಷಣದಂತೆ,
ಮನುಷ್ಯ ಜನ್ಮದಲ್ಲಿ ಹುಟ್ಟಿ, ಶಿವಾಚಾರವನರಿಯದೆ ದುರಾಚಾರಕ್ಕೆರಗುವರು,
ಹಿರಿಯದೈವವನರಿಯದೆ, ಕಿರುಕುಳದೈವವಂ ಪಿಡಿವರು.
ಕೇಶವಂಗೆ ದಾಸತ್ವಮಂ ಮಾಡಿದಡೆ ಪ್ರತ್ಯಕ್ಷ ಮುಡುಹ ಸುಡಿಸನೆ ?
ಮೈಲಾರದೇವರೆಂಬವರ ನಾಯಾಗಿ ಬಗುಳಿಸನೆ ?
ಜಿನ ದೈವವೆಂಬವರ ತಲೆಯ ತರಿಸನೆ ?
ಹುಲುದೈವವ ಪೂಜಿಸಿದವರು ಕೈಲಾಸದ ಬಟ್ಟೆಯ ಹೊಲಬುದಪ್ಪಿದರು.
ಮುನ್ನ ಮಾಡಿದವರಿಗಿದಿಯಾಯಿತ್ತು.
ಇನ್ನು ಮಾಡುವರಿಗೆ ವಿಧಿಯಹುದೊ.
ನಮ್ಮ ದೇವರಾಯ ಸೊಡ್ಡಳಂಗೆ ಒಂದರಳನೇರಸಿದವ,
ಕೈಲಾಸಕ್ಕೆ ಹೋದನು. ॥ ೫೩ ॥

೭೮೦

ಪಡೆದ ಕಾಣೆಭೋ ಕಾಲನಂ ಸಂಹರಿಸಿ, ಕಾಲಹರನೆಂಬ ನಾಮವ.
ಪಡೆದ ಕಾಣೆಭೋ ಕಾಮನಂ ಸಂಹರಿಸಿ, ತ್ರಿಪುರಹರನೆಂಬ ನಾಮವ.
ಪಡವ ಕಾಣೆಭೋಮತ್ಸ್ಯಕಶ್ಯಪನರಸಿಂಹಾದಿಗಳ ಸಂಹರಿಸಿ,
ವೀರಭದ್ರನೆಂಬ, ಪೆಸರ.
'ಸರ್ವಂ ವಿಷ್ಣುಮಯಂ ಜಗತ್' ಎಂಬ ಶ್ರುತಿಯ ಮತದಿಂ,
ತೋರ್ಪ ಸಮಸ್ತ ಜಗತ್ತನು ಉರಿಗಣ್ಣ ಬಿಟ್ಟು ಸುಟ್ಟು,
ಹರಿಹರನೆಂಬ ಪೆಸರ ಪಡೆದ ಕಾಣೆಭೋ.
ಹರನು ಹರಿಯನು ಕೊಂದನೆಂದು ಸಲೆ ಸಾರುತ್ತಿದೆ ಯಜುರ್ವೇದ.
ಓಂ ಪರಿಹರಂತಂ ಮಾನುಮಾತಿಂ ದೇವಾಃ।
ವಿಶ್ವಸ್ಯಶಾನಂ ವೃಷಭಂ ಮತಿನಾಂ ॥
ಇಂತೆಂದುದಾಗಿ, ಕಾಲಹರ ಕರ್ಮಹರ ತ್ರಿಪುರಹರ,
ದುರಿತಹರ ಮಖಹರ ಹರಿಹರ ಸಕಲಹರ ಶರಣು ಸೊಡ್ಡಳಾ. ॥ ೫೪ ॥

೭೮೧

ಪರಶಿವಶಕ್ತಿಗಳಿಂದಾದ ಲಿಂಗ. ಲಿಂಗೋದ್ಭವ ಶಿವ, ಶಿವ ಮೂರ್ತಿತತ್ವ.
ತತ್ವಮೂರ್ತಿ ಮುಖದಿಂದ ಲೋಕ.
ಲೋಕದಿಂದ ಭೋರನೆ ಹುಟ್ಟಿದ ವೇದ.

ವೇದಾಗಮನದಿಂದ ಹುಟ್ಟಿದ ಶಿವವಿದ್ಯೆ.
ಶಿವವಿದ್ಯೆಯಿಂದ ಹುಟ್ಟಿದ ಶಿವದೀಕ್ಷೆ.
ಶಿವದೀಕ್ಷೆಯಿಂದಾದ ನಿಃಪತಿತತ್ವದ ಕುಳವಾರು.
ಆ ದೀಕ್ಷೆಯಿಂದ ಭಾವಹುಟ್ಟಿ, ಭಾವಕ್ಕೆ ಸ್ಥಾವರ ಹುಟ್ಟಿ,
ಜಂಗಮಮುಖದಿಂದ ಪ್ರಸಾದ ಉದಯವಾಯಿತ್ತು.
ಪ್ರಸಾದದಿಂದ ಲಿಂಗಾಚಾರವಾಯಿತ್ತು. ಆಚಾರದಿಂದ ಗುರು.
ಅಂತು ನಿಃಪತಿಗಾದ ಪ್ರತಿತತ್ವವೆಂಬ ಷಡುಸ್ಥಲವು.
ಗುರುವಿಂದ ಸಮಾಧಿ, ಸಮಾಧಿಗೆ ಧ್ಯಾನ ಹುಟ್ಟಿ,
ಧ್ಯಾನದಿಂದಾದ ಜ್ಞಾನ, ಜ್ಞಾನದಿಂದರ್ಪಣ.
ಅರ್ಪಣಕ್ಕೆ ನಿಯಮ, ನಿಯಮಕ್ಕೆ ಭಕ್ತಿ
ಭಕ್ತಿ ಉಂಟಾದಲ್ಲಿ ಸಕೀಲವೆಂಬ ಷಡುಸ್ಥಲವು.
ಭಕ್ತಿಯಿಂದಾದ ಮನ, ಮನದಿಂದಾದ ಮತಿ,
ಮತಿಯಿಂದಾದ ಅಭ್ಯಾಸ, ಅಭ್ಯಾಸದಿಂದಾದ ಧನ,
ಧನದಿಂದಾದ ತನು, ತನುವಿನಿಂದಾದ ಮೋಹ.
ಮೋಹವೆಂಬಿವು ಅಸಾಧ್ಯವೆಂಬ ಷಡುಸ್ಥಲವು.
ಆ ಮೋಹದಿಂದ ಶಕ್ತಿ ಹುಟ್ಟಲು,
ಅದರಿಂದಾದ ಬಾವಶುದ್ಧಿ, ಭಾವಶುದ್ಧಿಯಿಂದ ನಿರಾಲಸ್ಯವಾಗಿ,
ಅಲ್ಲಿ ಶಿವಧರ್ಮ, ಆ ಶಿವಧರ್ಮದಲ್ಲಿ ನೀರಜತ್ವ.
ನೀರಜತ್ವವೆ ನಿರುಪಾಧಿ.
ನಿರುಪಾಧಿಕವೆಂಬ ಷಡುಸ್ಥಲವು, ನಿರುಪಾಧಿಯಿಂದೈಕ್ಯ,
ಐಕ್ಯನ ಶಿಶು ಶರಣ.
ಶರಣರ ಶಿಶು ಪ್ರಾಣಲಿಂಗಿ, ಪ್ರಾಣಲಿಂಗಿಯ ಶಿಶು ಪ್ರಸಾದಿ.
ಪ್ರಸಾದಿಯ ಶಿಶು ಮಹೇಶ್ವರ, ಮಹೇಶ್ವರನ ಶಿಶು ಭಕ್ತ.
ಇಂತು ಸಾಕಾರ ಷಡುಸ್ಥಲ.
ಶಂಭು ಸೊಡ್ಡಳ ಮಹಾಮಹಂತರುಮಪ್ಪ
ಮೂವತ್ತಾರು ಕುಳವರಿದಂಗೆ ಶರಣು, ಶರಣೆಂಬೆ. ॥ ೫೫ ॥

೭೮೨

ಪಾಪಿ ನಾನೊಂದು ಪಾಪವ ಮಾಡಿದೆ.
ಆ ಪಾಪವೆನಗೆ ಸತಿಸುತರಾಗಿ ಕಾಡುತ್ತಿದೆ.
ಪಾಪವನೆ ಬಿತ್ತಿ ಕೋಪವನೆ ಬೆಳೆದು,
ಈ ಪರಿಯಲಿ ದಿನಂಗಳು ಹೋದವಲ್ಲ,
ಎನಗಿನ್ನೇನು ಪರಿ ಹೇಳಾ, ದೇವರಾಯ ಸೊಡ್ಡಳಾ ? ॥ ೫೭ ॥

೭೮೩

ಪ್ರಣವದ ಪ್ರಣವವೆ ನಕಾರ, ಪ್ರಣವದ ದಂಡಕವೆ ಮಕಾರ,
ಪ್ರಣವದ ಕುಂಡಲಿಯೆ ಶಿಕಾರ, ಪ್ರಣವದ ಅರ್ಧಚಂದ್ರವೆ ವಕಾರ,
ಪ್ರಣವದ ಬಿಂದುವೆ ಯಕಾರ.
ನಕಾರದ ದಂಡಕವೆ ಮಕಾರ, ನಕಾರದ ಬಲದ ಕೋಡೆ ಶಿಕಾರ,
ನಕಾರದ ಎಡದ ಕೋಡೆ ವಕಾರ, ನಕಾರದ ಬಿಂದುವೆ ಯಕಾರ,
ನಕಾರದ ತಾರಕವೆ ಓಂಕಾರ.
ಮಕಾರದ ದಂಡಕವೆ ನಕಾರ, ಮಕಾರದ ಬಲದ ಕೋಡೆ ಶಿಕಾರ,
ಮಕಾರದ ಎಡದ ಕೋಡೆ ವಕಾರ, ಮಕಾರದ ಬಿಂದುವೆ ಯಕಾರ,
ಮಕಾರದ ತಾರಕವೆ ಓಂಕಾರ.
ಶಿಕಾರದ ದಂಡಕವೆ ನಕಾರ, ಶಿಕಾರದ ಬಲದ ಕೋಡೆ ಮಕಾರ,
ಶಿಕಾರದ ಎಡದ ಕೋಡೆ ವಕಾರ, ಶಿಕಾರದ ಬಿಂದುವೆ ಯಕಾರ,
ಶಿಕಾರದ ತಾರಕವೆ ಓಂಕಾರ.
ವಕಾರದ ದಂಡಕವೆ ನಕಾರ, ವಕಾರದ ಬಲದ ಕೋಡೆ ಮಕಾರ,
ವಕಾರದ ಎಡದ ಕೋಡೆ ಶಿಕಾರ. ವಕಾರದ ಬಿಂದುವೆ ಯಕಾರ,
ವಕಾರದ ತಾರಕವೆ ಓಂಕಾರ.
ಯಾಕಾರದ ದಂಡಕವೆ ನಕಾರ, ಯಕಾರದ ಬಲದ ಕೋಡೆ ಮಕಾರ,
ಯಕಾರದ ಎಡದ ಕೋಡೆ ಶಿಕಾರ, ಯಕಾರದ ಬಿಂದುವೆ ವಕಾರ,
ಯಕಾರದ ತಾರಕವೆ ಓಂಕಾರ.
ಇಂತಪ್ಪ ಮೂವತ್ತಾರು ಮೂಲಪ್ರಣವಂಗಳ,
ಪ್ರಥಮಗುರು ಬಸವಣ್ಣನಾದುದಂ,
ಸೊಡ್ಡಳ ಲಿಂಗದಲ್ಲಿ ಕಂಡು ಸುಖಿಯಾಗಿ,
ನಾನು ಬಸವಾ ಬಸವಾ ಎಂದು ಜಪಿಸುತಿರ್ದೆನಯ್ಯಾ. || ೫೭ ||

೭೮೪

ಬಂಟತನವ ಮಾಡಬೇಕೆಂದು, ಬಟ್ಟೆಯ ಬಡಿಯಬೇಕೆಂದು,
ಕೆಟ್ಟುದುದನರಸಬೇಕೆಂದು, ಕೊಟ್ಟುದ ಬೇಡಬೇಕೆಂದು,
ಮುಂಜಾವದಲೇಳುವರಯ್ಯಾ, ಹಲಬರು ಕೆಲಬರು.
ಆಹಾರವನುಣಬೇಕೆಂದು, ವ್ಯವಹಾರವ ಮಾಡಬೇಕೆಂದು,
ಆ ಹೆಣ್ಣ ತರಬೇಕೆಂದು, ಈ ಹೆಣ್ಣ ಕೊಡಬೇಕೆಂದು,
ಮುಂಜಾವದಲೇಳುವರಯ್ಯಾ, ಹಲಬರು ಕೆಲಬರು.
ಕರ್ತು ಸೊಡ್ಡಳದೇವಂಗೆ ತೊತ್ತುಗೆಲಸವ ಮಾಡಬೇಕೆಂದು,
ಕಣ್ದೆರೆವುತ್ತಲೇಳುವರು ಅಲ್ಲಲ್ಲಿ ಒಬ್ಬೊಬ್ಬರು. || ೫೮ ||

೭೮೫

ಬನ್ನಿ ಕರಣಿಕರು, ನೀವು ಲೆಕ್ಕವ ಹೇಳಿ, ಧಾನ್ಯ ಧಾನ್ಯಂಗಳ ಸಂಚವನು.
ಹೊಸಜೋಳ ಅರುವತ್ತುಲಕ್ಷ ಖಂಡುಗ,
ಶಾಲಿಧಾನ್ಯ ಮೂವತ್ತುಲಕ್ಷ ಖಂಡುಗ,
ಗೋದಿ ಹನ್ನೆರಡುಲಕ್ಷ ಖಂಡುಗ, ಕಡಲೆ ಬತ್ತೀಸ ಖಂಡುಗ,
ಹೆಸರು ಮೂವತ್ತಾರುಲಕ್ಷ ಖಂಡುಗ,
ನವಣೆ ಹಾರಕ ಬರಗು ಸಾವೆ ದೂಸಿಗಳೆಂಬ ಧಾನ್ಯ ಐವತ್ತುಲಕ್ಷ ಖಂಡುಗ.
ಹೊಸಸುಗ್ಗಿಯ ವೇಳೆಗೆ ಬಹ ಭತ್ತ ಅಗಣಿತ.
ಮಹಾದಾನಿ ಸೊಡ್ಡಳನ ಆರೋಗಣೆಯ ಅವಸರಕ್ಕೆ
ಅಳವಟ್ಟ ಸಯದಾನ ಇನಿತವವಧರಿಸಯ್ಯಾ, ಸಂಗನಬಸವಣ್ಣಾ || ೫೯ ||

೭೮೬

ಬರದಲ್ಲಿ ಅರಲುಗೊಂಡವಂಗೆ ಅಮೃತ ಸಿಕ್ಕಿದಂತೆ,
ಜರಾಮರಣ ದುಃಖಿಗ ಮರುಜವಣಿಗೆಯ ಕಂಡಂತೆ,
ಭವದ ಬಾಗಿಲ ಪೊಗದೆ ಬದುಕಿದೆನಯ್ಯಾ ನಿತ್ಯವ ಕಂಡು.
ಒಳಗೆ ಬೆಳಗುವ ಪ್ರಕಾಶ ಹೊರಗೆ ಮೂರ್ತಿಗೊಂಡಂತೆ,
ಕಂಗೆ ಮಂಗಳವಾಯಿತ್ತಯ್ಯಾ.
ಮಹಾಘನವಲ್ಲಿ ಸಾಕಾರ ಸೊಡ್ಡಳನ ಶರಣ ಪ್ರಭುವಿನ ನಿಲವಿಂಗೆ
ನಮೋ ನಮೋ ಎನುತಿರ್ದೆನು. || ೬೦ ||

೭೮೭

ಬಸವ ಹರಿಯಿತ್ತು, ಬಸವ ಹರಿಯಿತ್ತು, ಬಸವ ಹರಿಯಿತ್ತು ಕಾಣಿಭೋ.
ತೊತ್ತಳದುಳಿಯಿತ್ತು, ತೊತ್ತಳದುಳಿಯಿತ್ತು,
ಮೀಮಾಂಸಕರ ಮಿತ್ತುವ ಮಿರಿಯಿತ್ತು
ಬೌದ್ಧ ಜೈನರ ಕೋಡಿನಲ್ಲಿಗಿಯಿತ್ತು,
ಕೊಳಗಿನಲ್ಲರೆಯಿತ್ತು ನೋಡಾ, ಸೊಡ್ಡಳಾ ಸಂಗನಬಸವ. || ೬೧ ||

೭೮೮

ಬಳಿನೀರಿಂಗೆ ಲಿಂಗವನರಸುತ್ತ ಹೋಹಲ್ಲಿ
ಅಲ್ಲಿ ನಿಮ್ಮ ಸಮಯ ತಪ್ಪಿತ್ತು ಭೋ.
ಶೋಭನಕ್ಕೆ ನಂದಿಮುಖವೆಂಬಿರಿ, ಅಲ್ಲಿ ನಿಮ್ಮ ಸಮಯ ತಪ್ಪಿತ್ತು ಭೋ.
ಸತ್ತಲ್ಲಿ ರುದ್ರಭೂಮಿಗೊಯ್ಯೆಂಬಿರಿ, ಅಲ್ಲಿ ನಿಮ್ಮ ಸಮಯ ತಪ್ಪಿತ್ತು ಭೋ.
ಮತ್ತೊಂದು ದೇಸಿಂಗೆ ರುದ್ರನ ಹೂಂಗಳೆಂದು ಇಕ್ಕುವರು,
ಅಲ್ಲಿ ನಿಮ್ಮ ಸಮಯ ತಪ್ಪಿತ್ತು ಭೋ.
ಮತ್ತೊಂದು ದಿನದಲ್ಲಿ ವೃಷಭನವಿಡಿಯೆಂಬಿರಿ,

ಅಲ್ಲಿ ನಿಮ್ಮ ಸಮಯ ತಪ್ಪಿತ್ತು ಭೋ.
ಅದೆಂತೆಂದಡೆ :
ದೇವಕಾರ್ಯೇ ವಿವಾಹೇ ಚ ಸ್ವಗುರುತ್ವಂ ವಿವರ್ಜಯೇತ್ ।
ತ್ರಯೋ ದೇವಾ ಸಮಂ ದೃಷ್ಟ್ವಾಃ ಶುನಿಗರ್ಭೇಷು ಜಾಯತೇ ॥
ಎಂದುದಾಗಿ,
ಬೇರೆ ದೇವರ, ಬೇರೆ ಸಮಯವ ತೂರಿದಡೆ ಕಾಣೆ, ಕೇರಿದಡೆ ಕಾಣೆ.
ಭೂಮಿಯೆ ಪೀಠಿಕೆ, ಆಕಾಶವೆ ಲಿಂಗ.
ಇವರೊಳಗಲ್ಲದೆ ಹೊರಗೆ ಮತ್ತುಂಟೆ ?
ಸರ್ವಜ್ಞದೇವರ ಗರ್ಭದೊಳಗಿದ್ದು,
ಉಬ್ಬಿಕೊಬ್ಬಿ ನುಡಿವರ [ಕಂಡು] ನಗುವ ಭೋ ಸೊಡ್ಡಳನು. || ೬೨ ||

೭೮೯

ಬೀಸುವ ಬಿರುಗಾಳಿ ಬೀಸಬಾರದು, ಬೀಸದಿರಬಾರದು.
ಸುರಿವ ಮಳೆ ಸುರಿಯಬಾರದು, ಸುರಿಯದಿರಬಾರದು.
ಉರಿವ ಕಿಚ್ಚು ಉರಿಯಬಾರದು, ಉರಿಯದಿರಬಾರದು,
ಚಂದ್ರಸೂರ್ಯರು ನಿಂದಾಗಲೇ ಸಂದಿತ್ತು,
ಸೊಡ್ಡಳಾ ನಿಮ್ಮ ರಾಜತೇಜದ ಮಹಿಮೆ. || ೬೩ ||

೭೯೦

ಭೃಗುಮುನೀಶ್ವರನ ಶಾಪದಿಂದ ವಿಷ್ಣು ದಶಾವತಾರವಾಗಿ ಬಂದಲ್ಲಿ,
ಶಿವಭಕ್ತಿಯನೆ ಮಾಡಿದನೆಂಬುದಕ್ಕೆ ಶಿವಧರ್ಮಪುರಾಣ ಪ್ರಸಿದ್ಧ ನೋಡಿ.
ಅದೆಂತೆಂದಡೆ :
ಮತ್ಸ್ಯ ಕೂರ್ಮೋ ವರಾಹಶ್ಚ ನಾರಸಿಂಹಶ್ಚ ವಾಮನಃ ।
ರಾಮೋ ರಾಮಶ್ಚ ರಾಮಶ್ಚ ಬೌದ್ಧಶ್ಚ ಕಲಿ ಕಾಪ್ಪಯಃ ॥
ಎಂದುದಾಗಿ, ಶಿವಲಿಂಗವ ಹರಿ ಪ್ರತಿಷ್ಠೆಯ ಮಾಡಿದ.
ಮತ್ಸ್ಯಾವತಾರದಲ್ಲಿ ಮತ್ಸ್ಯಕೇಶ್ವರದೇವರ
ಲಂಕಾಪುರಿಯಲ್ಲಿ ಶಿವಲಿಂಗವ ಹರಿ ಪ್ರತಿಷ್ಠೆಯ ಮಾಡಿದ.
ಕೂರ್ಮಾವತಾರದಲ್ಲಿ ಕೂರ್ಮೇಶ್ವರದೇವರ
ಧಾರಾವತಿಯಲ್ಲಿ ಶಿವಲಿಂಗವ ಹರಿ ಪ್ರತಿಷ್ಠೆಯ ಮಾಡಿದ.
ವರಾಹವತಾಗದಲ್ಲಿ ವರಾಹೇಶ್ವರದೇವರ
ವೃಂದಗಿರಿಯಲ್ಲಿ ಶಿವಲಿಂಗವ ಹರಿ ಪ್ರತಿಷ್ಠೆಯ ಮಾಡಿದ.
ವಾಮನಾವತಾರದಲ್ಲಿ ವಾಮೇಶ್ವರದೇವರ
ವಾರಣಾಸಿಯಲ್ಲಿ ಶಿವಲಿಂಗವ ಹರಿ ಪ್ರತಿಷ್ಠೆಯ ಮಾಡಿದ.
ರಾಮಾವತಾರದಲ್ಲಿ ರಾಮೇಶ್ವರದೇವರ
ಸೇತುವಿನಲ್ಲಿ ಶಿವಲಿಂಗವ ಹರಿ ಪ್ರತಿಷ್ಠೆಯ ಮಾಡಿದ.

ನಾರಸಿಂಹಾವತಾರದಲ್ಲಿ ನರಸಿಂಹೇಶ್ವರದೇವರ
ಆವು [ಅಹೋ]ಬಳದಲ್ಲಿ ಶಿವಲಿಂಗವ ಹರಿ ಪ್ರತಿಷ್ಠೆಯ ಮಾಡಿದ
ಬೌದ್ಧಾವತಾರದಲ್ಲಿ ಬೌದ್ಧಕಲಿಕೆಯೆಂಬ ಹೆಸರ ದೇವರ
ಕಾಶಿಯಲ್ಲಿ ಶಿವಲಿಂಗವ ಹರಿ ಪ್ರತಿಷ್ಠೆಯ ಮಾಡಿದ.
ಪರಶುರಾಮಾವತಾರದಲ್ಲಿ ಪರಶುರಾಮೇಶ್ವರದೇವರ
ಕಪಿಲೆಯ ತೀರದಲ್ಲಿ ಶಿವಲಿಂಗವ ಹರಿ ಪ್ರತಿಷ್ಠೆಯ ಮಾಡಿದ.
ಕೃಷ್ಣಾವತಾರದಲ್ಲಿ ಕೃಷ್ಣೇಶ್ವರದೇವರ
ಹಿಮವತ್ಪರ್ವತದಲ್ಲಿ ಶಿವಲಿಂಗವ ಹರಿ ಪ್ರತಿಷ್ಠೆಯ ಮಾಡಿದ.
ಕಲಿಯುಗದಲ್ಲಿ ಸ್ತ್ರೀ ರೂಪಿಂದ ಅಗಲಕ್ಕೆ ನಿಂದ.
ಇಂತೀ ದಶಾವತಾರದಲ್ಲಿಯೂ ಹರಿಯೆ ಭಕ್ತ
ಹರಿಯ ಬಿಟ್ಟು ಭಕ್ತರಿಲ್ಲ
ಸೊಡ್ಡಳದೇವರಿಂದ ಬಿಟ್ಟು ಕರ್ತರಿಲ್ಲ ಕೇಳಿರಣ್ಣಾ. || ೬೪ ||

೬೧

ಬೆರಗು ನಿಬ್ಬೆರಗು ಮಹಾಬೆರಗು ಹೊಡೆದಂತೆ,
ಸ್ವಪ್ನದಲ್ಲಿ ಸಿಂಹವ ಕಂಡ ಮದಹಸ್ತಿಯಂತೆ,
ಮುನಿದು ಮಲಗಿದ ಮಿಥುನದಂತೆ,
ಆವಿ ಅನಿಲದುಲಿವ ಅನಲನ ಅರನಂತೆ,
ಆಸೆ ಹಿಂಗಿದ ಮಹೇಶ್ವರನಂತೆ, ಒಡಬಾಗ್ನಿ ಸತ್ತ ವಾರುಧಿಯಂತೆ,
ಮರುತನಡಗಿದ ಆಕಾಶದಂತೆ,
ಉಭಯದೊಲುಮೆಯ ಪುರುಷ ಸ್ತ್ರೀಯನಗಲಿದಂತೆ,
ಪಾಶವಿಲ್ಲದೆ ಹರಿವ ನದಿಯಂತೆ, ದರ್ಪಣದೊಳಗಣ ಪ್ರತಿಬಿಂಬದಂತೆ,
ಸೊಡ್ಡಳನ ಶರಣ ಸಂಗಮೇಶ್ವರ ಅಪ್ಪಣ್ಣನ ನಿಲವ ಬಲ್ಲ
ಮಡಿವಾಳ ಮಾಚಯ್ಯಂಗೆ ನಮೋ ನಮೋ ಎಂಬೆ. || ೬೫ ||

೬೨

ಬ್ರಹ್ಮ ನಿಮ್ಮ ಶ್ರೀಚರಣವನೊತ್ತುವ, ವಿಷ್ಣು ನಿಮ್ಮ ಶ್ರೀಹಸ್ತವನೊತ್ತುವ.
ದೇವರಾಜ ನಿಮಗೆ ಸತ್ತಿಗೆಯ ಹಿಡವ,
ವಾಯು ಬಂದು ನಿಮ್ಮ ರಾಜಾಂಗಣವನುಡುಗುವ.
ಉಳಿದಾದ ದೇವರ್ಕಳೆಲ್ಲ ನಿಮಗೆ ಜಯ ಜೀಯ ಹಸಾದವೆನುತ್ತಿಹರು.
ಮಹಾದೇವ, ಮಹಾಮಹಿಮರೆನಿಸಿಕೊಂಬವರೆಲ್ಲ ನಿಮ್ಮ ಸೇವಕರು.
ಅದೆಂತೆಂದಡೆ :
ಮಮರ್ದ ಚರಣೌ ಬ್ರಹ್ಮಾ ವಿಷ್ಣುಃ ಪಾಣಿ ಸಮಾಹಿತಃ ।
ಛತ್ರಂ ಧಾರಯತೇ ಚೇಂದ್ರೋ ವಾಯುರ್ಮಾರ್ಗಂ ವಿಶೋಧಯೇತ್ ।
ಅನ್ಯೇ ತು ದೇವತಾಃ ಸರ್ವ ಜಯ ಜೀಯ ಇತ್ಯಭ್ರುವನ್ ॥

ಇಂತೆಂಬ ವಚನವಿಡಿದು, ನಿಮಗೆ ಸರಿಯೆಂಬವಂದಿರ
ತಲೆಯ ಮೆಟ್ಟಿ ನಡೆವೆ.
ಮಹಾಮಹಿಮ ಸೊಡ್ಡಳ, ಕಾಣಬಾರದ ಲಿಂಗವು ಕರಸ್ಥಲಕ್ಕೆ ಬಂದನು. ॥ ೬೬ ॥

೭೯೩

ಬ್ರಹ್ಮಪದವಿಯನೊಲ್ಲೆ, ವಿಷ್ಣುಪದವಿಯನೊಲ್ಲೆ,
ರುದ್ರಪದವಿಯನೊಲ್ಲೆ, ಇಂದ್ರಪದವಿಯನೊಲ್ಲೆ,
ಉಳಿದ ದೇವತೆಗಳ ಪದವಿಯನೊಲ್ಲೆ.
ಎಲ್ಲಕ್ಕೂ ಒಡೆಯನಾದ ಶಿವನ ಪ್ರಮಥಗಣಂಗಳ
ತಿಪ್ಪೆಯ ಮೇಲಣ ಹುಳುವಾಗಿ ಹುಟ್ಟುವ ಪದವಿಯ ಕರುಣಿಸು,
ಮಹಾಮಹಿಮ ಸೊಡ್ಡಳಾ. ॥ ೬೭ ॥

೭೯೪

ಬ್ರಾಹ್ಮಣನು ಅಧಿಕವೆಂದೆಂಬಿರಿ ಭೋ, ಆ ಮಾತದು ಮಿಥ್ಯ.
ಬ್ರಾಹ್ಮಣನಾರೆಂದರಿಯಿರಿ, ಬ್ರಾಹ್ಮಣನೆ ಶಿವನು.
'ವರ್ಣಾನಾಂ ಬ್ರಾಹ್ಮಣೋ ದೈವಃ ವೆಂಬುದು ನಿಶ್ಚಯ.
ಆ ವರ್ಣಭಾವವೆಂದಡೆ ಬ್ರಹ್ಮ ವಿಷ್ಣು ಮಹೇಶ್ವರ ಇಂದ್ರ.
ಈ ನಾಲ್ವರು ಜಾತಿವರ್ಗಕ್ಕೆ ಸಲುವರು. ಇಂತೀ ವರ್ಣಂಗಳೆಲ್ಲಕ್ಕೆ ಶಿವನೆ ಗುರು.
ಆ ಸದಾಶಿವನ ಗುರುತ್ವಕ್ಕೆ ಏನು ಲಕ್ಷಣವೆಂದಡೆ :
ಸರ್ವಭೂತಂಗಳೊಳಗೆ ಚೈತನ್ಯಾತ್ಮಕನಾಗಿಹನು.
ಅದೆಂತೆಂದಡೆ :
'ಅಣೋರಣೀಯಾನ್ಮಹತೋ ಮಹೀಯಾನ್' ಎಂದುದಾಗಿ,
'ಆತ್ಮನಾ ಪೂರಿತಂ ಸರ್ವಂ' ಎಂದುದಾಗಿ, 'ಆತ್ಮನಾಂ ಪತಯೆ' ಎಂದುದಾಗಿ,
'ಆತ್ಮಾಂ ಅವರ್ಣಂ ಚ ಆತ್ಮಾಂ ಅಮೂರ್ತಯೆ'
'ಆತ್ಮಾಂ ಚಿದಂ ಕರ್ಮ ಆತ್ಮಮುಕುಲಂ
ಯಥಾ ಆತ್ಮಾಂ ಪೂರಿತೋ ದೇವಾಯ ನಮಃ
ಆತ್ಮಾ ರುದ್ರಂ ಭವತಿ ಆತ್ಮಾ ಸದಾಶಿವಾಂ ಶೋಯೇ ತದ್ಭೂತಾಯ'
ಎಂದುದಾಗಿ,
ಆತ್ಮಂಗೆ ಆವ ಕುಲವುಂಟು ಹೇಳಿರೊ?
ಅಂತು ಆತ್ಮನು ಸರ್ವಭೂತಂಗಳಿಗೆ
ಗುರುವೆಂದೆನಿಸಿಕೊಂಬ ಆತ್ಮಂಗೆ, ಗುರು ಸದಾಶಿವನು.
ಆಯಾತ್ಮನು ಸದಾಶಿವನ ಕೂಡಲಿಕ್ಕೆ ಚೈತನ್ಯಾತ್ಮಕನಾಗಿ,
ಸರ್ವವೂ ಸದ್ಗುರುವೆನಿಸಿಕೊಂಬ
'ವರ್ಣಾನಾಂ ಬ್ರಾಹ್ಮಣೋ ಗುರುಃ' ಎಂಬ ಶ್ರುತಿಯನರಿದು,
ದ್ವಿಜರು ತಾವು ಗುರುತನದ ಲಕ್ಷಣ ಬೇಡಾ.

ಗುರುವಾದಡೆ ಸಕಲವನು ಕೂಡಿಕೊಂಡಿರಬೇಡಾ.
ತಾವು ಗುರುವಾದಡೆ ಕುಲ ಅಕುಲಂಗಳುಂಟೆ ? ವರ್ಣ ಅವರ್ಣಂಗಳುಂಟೆ ?
ಎಂತು, ಕುಲದೊಳಗೆ ಇದ್ದು, ಆ ಕುಲದ ಮಾತನಾಡುವ
ದ್ವಿಜಭ್ರಮಿತರನೇನೆಂಬೆ ಸೊಡ್ಡಳಾ ? ॥ ೬೮ ॥

೭೯೫

ಭಕ್ತನಾದಡೆ ತನುಮನದಾಸೆಯಳಿಮುಳಿದಿರಬೇಕು.
ಮಹೇಶ್ವರನಾದಡೆ ಪರಧನ ಪರಚಿಂತೆ ಪರಾಂಗನೆಯರೆಡೆಯಳಿದಿರಬೇಕು.
ಪ್ರಸಾದಿಯಾದಡೆ ಸುಖರುಚಿಯ ಗ್ರಹಣ ಮರೆದು,
ಪ್ರಸಾದ ಪುಟವಳಿಯದೆ ಉಳಿದಿರಬೇಕು.
ಪ್ರಾಣಲಿಂಗಿಯಾದಡೆ ಘಟದಾಸೆಯಂ ತೊರೆದು,
ಪ್ರಾಣಲಿಂಗದೊಳಗೆ ಬೆರಸಿ ಬೇರಿಲ್ಲದಿರಬೇಕು.
ಶರಣನಾದಡೆ ಸತಿಯ ಸಂಗವಳಿದು, ಲಿಂಗಕ್ಕೆ ತಾಯಾಗಿರಬೇಕು.
ಲಿಂಗೈಕ್ಯನಾದಡೆ ಆಪ್ಯಾಯನಮುಡಸಿ,
ಸುಖದುಃಖಮಂ ತಾಳಿ ನಿಭ್ರಾಂತನಾಗಿರಬೇಕು.
ಮಾತಿನ ಮೋಡಿಯಲ್ಲಿ ಸಿಲ್ಕದು ಶಿವಾಚಾರ.
ಇಂತೀ ಷಡುಸ್ಥಲವಾರಿಗೂ ಅಳವಡದು.
ಸೊಡ್ಡಳದೇವನು, ಷಡುಸ್ಥಲಭಕ್ತಿಯನು
ಬಸವಣ್ಣಂಗೆ ಮೂರ್ತಿಯ ಮಾಡಿದನು. ॥ ೬೯ ॥

೭೯೬

ಭಕ್ತಭಕ್ತನೆಂದು ಯುಕ್ತಿಗೆಟ್ಟು ನುಡಿವಿರಿ, ಭಕ್ತಿಸ್ಥಲವೆಲ್ಲರಿಗೆಲ್ಲಿಯದೊ ?
ಹಾಗದಾಸೆ, ಹಣವಿನಾಸೆಯುಳ್ಳನ್ನಕ್ಕ ಭಕ್ತನೆ ?
ಅಯ್ಯಾ, ಅರ್ಥಪ್ರಾಣಾಭಿಮಾನ ವಂಚನೆಯುಳ್ಳನ್ನಕ್ಕ ಭಕ್ತನೆ ?
ಹೊನ್ನು ಹೆಣ್ಣು ಮಣ್ಣು ಹಣೆದವಾಡದದನ್ನಕ್ಕ ಭಕ್ತನೆ ?
ಭಕ್ತರಿಗೆ ನಾವು ಹೇಳಿದಡೆ ದುಗುಡ ದುಮ್ಮಾನ,
ನೀನೊಮ್ಮೆ ಹೇಳಾ, ಪ್ರಳಯಕಾಲದ ಸೊಡ್ಡಳಾ. ॥ ೭೦ ॥

೭೯೭

ಭಕ್ತರಲ್ಲದವರೊಡನೆ ಆಡದಿರು, ಆಡದಿರು.
ಅರ್ಥದಾಸೆಗೆ ದುರ್ಜನರ ಸಂಗವ ಮಾಡದಿರು, ಮಾಡದಿರು.
ಉತ್ತಮರ ಕೆಡೆನುಡಿಯದಿರು, ನುಡಿಯದಿರು.
ಮುಂದೆ ಹೊತ್ತ ಹೊರೆ ದಿಮ್ಮಿತ್ತಹುದು.
ನಿತ್ಯವಲ್ಲದ ದೈವಕ್ಕೆರಗದಿರು, ಎರಗದಿರು.
ಕರ್ತು ಸೊಡ್ಡಳನ ನೆರೆ ನಂಬು, ಡಂಬಕ ಬೇಡ. ॥ ೭೧ ॥

೭೯೮

ಭವಿಯ ಕಳದು ಭಕ್ತನ ಮಾಡಿದ ಬಳಿಕ,
ಲಿಂಗಾಂಗಸಂಬಂಧಿಯಾಗಿ ಸರ್ವಭೋಗಂಗಳನು
ಲಿಂಗ ಮುಂತಾಗಿ ಭೋಗಿಸುತ್ತ
ಷಡುರಸಂಗಳನು ಮುಂದೆ ಗಡಣೆಸಿಕೊಂಡು,
ಆಚಾರಾದಿ ಮಹಾಲಿಂಗಂಗಳಿಗೆ ನಿವೇದಿಸುತ್ತ,
ಗುರು ಮುಟ್ಟಿ ಶುದ್ಧಪ್ರಸಾದ, ಲಿಂಗ ಮುಟ್ಟಿ ಸಿದ್ಧಪ್ರಸಾದ,
ಜಂಗಮ ಮುಟ್ಟಿ ಪ್ರಸಿದ್ಧಪ್ರಸಾದ.
ಇಂತೀ ತ್ರಿವಿಧವ ಇಷ್ಟ, ಪ್ರಾಣ ಭಾವಕ್ಕೆ ಸಂಬಂಧಿಸುತ್ತ,
ರೂಪು ರುಚಿ ತೃಪ್ತಿಯನರಿದು, ಪ್ರಸನ್ನಪ್ರಸಾದವ ಭೋಗಿಸುವಲ್ಲಿ,
ಭವಿದೃಷ್ಟಿ ಸೋಂಕುತ್ತಿರಲು,
ಸಂಕಲ್ಪಿಸಿ ಬಿಟ್ಟಡೆ ಪ್ರಸಾದದ್ರೋಹ, ಕೊಂಡಡೆ ಭವಿದೃಷ್ಟಿ ಕಿಲ್ಬಿಷ.
ಬಿಡಲೂ ಬಾರದು, ಕೊಳ್ಳಲೂ ಬಾರದು ನೋಡಯ್ಯ.
ಇನ್ನೇನೆಂದು ಚಿಂತಿಸಬೇಡ, ಎಲ್ಲವೂ ಮಹಾಪ್ರಸಾದದಿಂದಲೇ ಹುಟ್ಟಿದವು.
ಆ ಮಹಾಪ್ರಸಾದವನೆ ಉಂಡು ಬೆಳೆದವು, ಆ ಮಹಾಪ್ರಸಾದದಲ್ಲಿಯ ಲಯ.
ಸರ್ವವೆಲ್ಲವೂ ಶಿವನಿಂದಲೇ ಹುಟ್ಟಿದವು.
ಶಿವನೇ ಶರಣ, ಶರಣನೇ ಶಿವ ನೋಡಯ್ಯ.
ಎಲ್ಲವೂ ತನ್ನಿಂದಲಾದ ಬಳಿಕ, ಭವಿಯೆಂಬುದು ಎಲ್ಲಿಯದು ಹೇಳಾ.
ಪರಿಪೂರ್ಣ ತಾನಾದ ಬಳಿಕ, ಸಂಕಲ್ಪಿಸಲಾಗದು ನೋಡಾ,
ಮಹಾದಾನಿ ಸೊಡ್ಡಳಾ. || ೭೨ ||

೭೯೯

ಮತ್ಸ್ಯ ತಲೆಸುತ್ತಾಗಿ ಅಚ್ಚರಿಯ ಮುಡಿಯಲ್ಲದೆ.
ಕೂರ್ಮನ ಕಪಾಲ ಹರನ ಹಾರದ ಮಧ್ಯದಲ್ಲದೆ.
ನಿಮ್ಮ ಪರಿಯೆಂಬ ನರ ಹರಿಯ ಶಿರಪದದೊಳದೆ.
ನಿಮ್ಮ ಆದಿವರಹನ ಕೊಂದಂದಿನ ದಾಡೆ ಕೈಯಲ್ಲದೆ.
ನಿಮ್ಮ ತ್ರಿವಿಕ್ರಮನ ನಿಟ್ಟೆಲುವು ಖಟ್ವಾಂಗವಾಗಿ ಕೈಯಲ್ಲದೆ.
ಕೇಶವನ ಕಣ್ಣು ಸೋಮೇಶ್ವರನ ಪಾದದಲ್ಲದೆ.
ನಿಮ್ಮಗ್ಗದ ನಾರಾಯಣನ ಹೆಣನು ರುದ್ರನ ಹೆಗಲಲ್ಲದೆ.
ಸಮಸ್ತ ದೇವರ್ಕಳ ಶಿರಂಗಳು ಇತ್ತರದ ಸರಮಾಲೆ
ಬಲ್ಲಿದ ನರಹರಿಯ ತೊವಲು.
ಕರಿಗಜಾಸುರನ ತೊವಲು ಕರಿಪುಲಿದೊವಲನುಟ್ಟು ಹೊದ್ದ,
ಹಾವಿನಾಭರಣದ ತೊಟ್ಟ, ಕಾಮನ ಬೂದಿಯನಿಟ್ಟ.
ದೃಷ್ಟರಿಗೆ ದೃಷ್ಟ, ಮಹಾದಿಟ್ಟ, ಅಘಟ್ಟ ಕಟ್ಟುಗ್ರದೇವ,
ರಾವು ಭಾಪು ಸೊಡ್ಡಳಾ. || ೭೩ ||

೮೦೦

ಮನದ ಸಂಚದೋವರಿಯೊಳಗೆ,
ಮಿಂಚಿನ ಗೊಂಚಲು ಬಳ್ಳಿವರಿಯಿತ್ತಯ್ಯಾ.
ಎನ್ನ ಕಾಯದ ಕರಣಂಗಳೊಳಗೆ,
ನಿರುಪಮಸುಖ ಸಾಧ್ಯವಾಯಿತ್ತು.
ಬಯಸುವ ಬಯಕೆ ಕೈಸಾರಿತ್ತು, ಅರಸುವ ಅರಕೆ ನಿಂದಿತ್ತು.
ಆಹಾ, ಕರತಲಾಮಲಕವಾಯಿತ್ತಲ್ಲಾ!
ಸತ್ಯಶರಣರ ದರುಶನ ಏನ ಮಾಡದೊ ?
ಮಹಾದಾನಿ ಸೊಡ್ಡಳನ ಶರಣ ಪ್ರಭುದೇವರ
ಶ್ರೀಪಾದವ ಕಂಡು, ಬದುಕಿದೆನಯ್ಯಾ. ॥ ೨೪ ॥

೮೦೧

ಮನದೊಡೆಯ ಮನೆಗೆ ಬಹಡೆ,
ಮನ ಮನದಲಚ್ಚೊತ್ತಿದಂತಿರ್ಪುದು ನೋಡಯ್ಯಾ.
ಮನಕ್ಕೆ ಮನೋಹರ, ಚಿತ್ತಕ್ಕೆ ಮನೋಹರವಾಗಿರ್ಪುದಯ್ಯಾ.
ಮಹಾದಾನಿ ಸೊಡ್ಡಳನ ಬರವಿಂಗೆ,
ಶುಭಸೂಚನೆ ಮೆಯಿದೋರುತ್ತಿದೆ.
ಪ್ರಭುದೇವರ ಬರವನೀಗಳೆ ತೋರುವೆನಯ್ಯಾ ಸಂಗನಬಸವಣ್ಣಾ. ॥ ೨೫ ॥

೮೦೨

ಮುರಿಸಬೇಕು ಹೊಲೆಯರ ಕೈಯಿಂದವರ ಮನೆಯನು,
ಕೆರಿಸಬೇಕು ಮಂಡೆಯನೇಳು ಪಟ್ಟೆಯ ಮಾಡಿ,
ಕುಳ್ಳಿರಿಸಬೇಕು ಕತ್ತೆಯ ನಡುಬೆನ್ನ ಮೇಲೆ, ಹುಟ್ಟಿಗೆಯನುಡಿಸಬೇಕು,
ಹಳೆಮರವ ಸತ್ತಿಗೆಯ ಹಿಡಿಯಬೇಕವಗೆ,
ನಿಟ್ಟೊರಸಬೇಕು ನೊಸಲಕ್ಷರವ,
ನಾಲಿಗೆಯ ಸರ್ರಸರ್ರನೆ ಸೀಳಬೇಕು,
ಎನ್ನೊಡೆಯ ಮಹಾಮಹಿಮ ಸೊಡ್ಡಳಂಗೆ
ಅನ್ಯದೈವ ಸರಿಯೆಂಬ ಕುನ್ನಿಮಾನವನ. ॥ ೨೬ ॥

೮೦೩

ಲಿಂಗದೇವನೆ ಕರ್ತ, ಶಿವಭಕ್ತನೆ ಶ್ರೇಷ್ಠ.
ಕೊಲ್ಲದಿರ್ಪುದೆ ಧರ್ಮ.
ಅಧರ್ಮದಿಂದ ಬಂದುದನೊಲ್ಲದಿರ್ಪುದೆ ನೇಮ.
ಅಳುಪಿಲ್ಲದಿರ್ಪುದೆ ವ್ರತ.
ಇದೇ ಸತ್ಪಥ, ಉಳಿದುದೆಲ್ಲ ಮಿಥ್ಯವೆಂದೆ ಕಾಣಾ,
ದೇವರಾಯ ಸೊಡ್ಡಳಾ. ॥ ೨೭ ॥

೮೦೪

ಲಿಂಗನಾಮ, ಅನಂಗ ಅನಾಮಯ, ನೋಡುವರಿಗೆ ವಿರಾಮ.
ಕರಗಿದವನು ಮರಳಿ ಕರಗಲಿಲ್ಲ.
ಉರಗಾಭರಣನು ಉಣಲಿಕ್ಕಲಿಲ್ಲ, ಉಡಲಿಕ್ಕಲಿಲ್ಲ.
ಅಂದು ಹಸುಬೆಯ ತೊಡಿಸಿದ ಹೊಸಬೆ ನಾನಯ್ಯಾ.
ಆ ದೇಶ ಈ ದೇಶ ಸರಮಂಡಲವೆನಗೇಕಯ್ಯಾ.
ರಮಹೆಣ ರುಂಡಮಾಲೆಯವನ ಮುಟ್ಟಿ,
ಲಿಂಗ ಮನ ಮುಟ್ಟಿ, ಶಿಷ್ಯ ಆಚಾರ ಮುಟ್ಟಿ ಜಂಗಮವಯ್ಯ.
ಆ ಜಂಗಮ ಸತ್ತು ಚಿತ್ತು ಲಿಂಗ ಆನಂದಗುರು.
ಹೃದಯದ ಮಹಾಲಿಂಗವೆ ಇಷ್ಟಲಿಂಗವಾಗಿ,
ಶರಣನಲ್ಲಿ ಅಚ್ಚೊತ್ತಿದ ಮುದ್ರೆಯೆಂದೆನಿಸಿತ್ತಯ್ಯಾ.
ಮುಡುಹು ಮುಂಬಲ್ಲು ಕುರುಳು ಅಂಗುಲಿ ಗಂಟಲು
ಕೈ ಬಾಯ್ಗೆ ಬಂದುಲಿವುಲಿವ,
ಇಷ್ಟು ಮುಪ್ಪಡಸಿ, ರಜೆ ರುಣ, ನಡೆ ನುಡಿ ದಟ್ಟವಾಗಿ.
ಸರ್ವಜಯಾಂಕುರ ನಷ್ಟ, ನಾಲ್ಕು ಕೆಸರುಗಲ್ಲಿಂದೆ, ಈ ರೂಪುರಿದ.
ಅಚ್ಚಬಿಟ್ಟಗರಳಗ್ರೀವತುತ್ತಳಾಯಳ ಸಂಧಿಯಿಂದೆದವಂಗಡಚರ್ಚುಮುವಿಲ್ಲ.
ಹೆಣ್ಣಿಂಗೊಡೆತನವಿಲ್ಲೆಂ[ದು] ಬಣ್ಣಿಗಿದೆನೆಯ ಮಾಡಿ,
ಕೊರಳ ನೀನರಿಯಯ್ಯಾ, ದೇವರಾಯ ಸೊಡ್ಡಳಾ. ॥ ೭೮ ॥

೮೦೫

ವಚನದ ರಚನೆಯ ನುಡಿವ ಬರುಬಾಯ ಭುಂಜಕರೆಲ್ಲ
ಭಕ್ತರಪ್ಪರೆ ಅಯ್ಯಾ ?
ಮಾಡುವ ದಾಸೋಹದಿಂದ ಭಕ್ತಂಗೆ ಅವಗುಣಂಗಳಿಲ್ಲದಿರಬೇಕು.
ಕೋಪದ ಕೆಚ್ಚಂ ಕಡಿದು, ಲೋಭಲಂಪಟಮಂ ಕೆದರಿ,
ಮೋಹದ ಮುಳ್ಳುಮೊನೆಯ ತೆಗೆದು, ಮದದಚ್ಚಂ ಮುರಿದು,
ಮಚ್ಚರಿಪ ಸರ್ಪನಂ ಸಮತೆಯೆಂಬ ಗಾರುಡದಲ್ಲಿ ಗಾರುಡಿಸಿ,
ಕರಣಾದಿ ಗುಣಂಗಳಿಚ್ಛೆಗೆ ಹರಿಯಲೀಯದೆ,
ವಿಶ್ರಮಿಸಿಪ್ಪ ಭಕ್ತನ ಕಾಯವೆ ಕೈಲಾಸ.
ಅಂತಲ್ಲದೆ ಬರಿಯಮಾತಿಂಗೆ ಮಾತನೆ ಕೊಟ್ಟು,
ತಾನಾಡಿದುದೆ ನೆಲೆಯೆಂಬಾತ ಭಕ್ತನೆ ? ಅಲ್ಲ, ಉಪಜೀವಿ.
ಹೇಮದಿಚ್ಛೆಗೆ ಹರಿದು ಕಾಮರತಿಗಳುಪವ,
ಕೋಪದುರಿಯ ಹೊದ್ದುಕೊಂಬ, ಲೋಭಮೋಹದ ಕೆಚ್ಚ ಕೂಡಿಕೊಂಡು,
ನರಕದೊಳಗೋಲಾಡುವಾತ ಭಕ್ತನೆ ? ಅಲ್ಲ,
ಆದಿಯಲ್ಲಿ ನಮ್ಮವರು ಹೊನ್ನು ಹೆಮ್ಣು ಮಣ್ಣು

ಈ ತ್ರಿವಿಧವ ಬಿಟ್ಟಿದ್ದರೆ ? ಇಲ್ಲ.
ಆವ ತಲೆಯೆತ್ತಲೀಯರಾಗಿ, ಅನ್ಯಸಂಗವ ಹೊದ್ದರು.
ಭವಿಮಿಶ್ರವ ಮುಟ್ಟರು, ಹಮ್ಮುಬಿಮ್ಮುಯಿಲ್ಲದಿಪ್ಪ ಇಂತಪ್ಪರೆ ನಮ್ಮ ಭಕ್ತರು.
ನಮ್ಮ ಭಕ್ತರ ನೆಲೆಯ, ಮಹಾದಾನಿ ಸೊಡ್ಡಳಾ,
ನೀನೆ ಬಲ್ಲೆಯಲ್ಲದೆ, ಉಳಿದ ಜಡಜೀವಿಗಳೆತ್ತ ಬಲ್ಲರು ? || ೭೯ ||

೮೦೬

ವಿಪಿನದೊಳು ಮದಕರಿಯ ಹಿಂಡು ಆನಂದಲೀಲೆಯೊಳಾಡುತ್ತಿರಲು.
ಕೇಸರಿ ಬರಲು, ಮದಕರಿಗಳೆಲ್ಲಾ ಕೆದರಿ ಓಡುವ ತೆರನಂತೆ,
ಸಾಕಾರ ಸೊಡ್ಡಳಾ, ನಿಮ್ಮ ಶರಣ ಪ್ರಭುದೇವರು ಬರಲೊಡನೆ
ಹರೆದುದಯ್ಯಾ ನೆರೆದ ಶಿವಗಣಂಗಳು. || ೮೦ ||

೮೦೭

ವಿಭೂತಿ ರುದ್ರಾಕ್ಷಿ ಲಿಂಗ ಲಾಂಛನಧಾರಿಯ ಕಂಡಡೆ,
ತನುಮನ ದಿಟವೆಂಬೆ.
ಅಲ್ಲದ ಸಟೆಗಳ, ಲೋಭಿಗಳ ಕಂಡು, ಮತ್ತೆ ಅಲ್ಲಿ ಅಲ್ಲವೆಂಬೆ.
ಅಗ್ನಿ ರವಿ ಶಶಿ ನಿನ್ನಕ್ಷಿಯೆಂದಡೆ, ಆನು ಭ್ರಮೆಗೊಂಡೆ.
ವಸುಧೆ ನಿನ್ನ ತನುವೆಂದಡೆ, ಕಠಿಣವ ಕಂಡಂತೆಂಬೆ.
ಸಾಗರ ನಿನ್ನ ತನುವೆಂದಡೆ, ಹೆಚ್ಚುಕುಂದ ಕಂಡಂತೆಂಬೆ.
ವಾಯು ನಿಮ್ಮ ತನುವೆಂದಡೆ, ದಿಕ್ಪಾಲಕರ ಕಂಡಂತೆಂಬೆ.
ಗಗನ ನಿಮ್ಮ ತನುವೆಂದಡೆ, ಬಯಲ ಕಂಡಂತೆಂಬೆ.
ಆತ್ಮ ನಿಮ್ಮ ತನುವೆಂದಡೆ, ಜನನ ಮರಣವ ಕಂಡಂತೆಂಬೆ.
ನ ಚ ಭೂಮಿ ನ ಚ ರವಿ ನ ಚ ತೇಜ ನ ಚ ವಾಯು
ನ ಚ ಗಗನಂ ನ ಚ ರವಿ ನ ಚ ಶಶಿ ನ ಚ ಆತ್ಮ ||
ಎಂದುದಾಗಿ,
ಭಿನ್ನರೂಪುಗಳ ನಿನ್ನ, ನಿಜವೆನ್ನೆ ನನ್ನೆ ಸೊಡ್ಡಳಾ. || ೮೧ ||

೮೦೮

ವಿಷ್ಣು ಪರಿಪೂರ್ಣನಾದಡೆ, ಸೀತೆ ಕೆಟ್ಟಳೆಂದು ಅರಸಲೇಕೊ ?
ವಿಷ್ಣು ಪರಿಪೂರ್ಣನಾದಡೆ, ವಟಪತ್ರದ ಮೇಲೆ ಕುಳಿತು,
ಜಲಪ್ರಳಯದಲ್ಲಿ ಅಡಗಿದನೆಂಬ ಮಾತೇಕೋ?
ವಿಷ್ಣುವಿನ ಬಾಣ ಸಮುದ್ರಕಡ್ಡಕಟ್ಟೆಯಾದಡೆ,
ಕಪಿ ಕೋಡಗವ ಹಿಡಿತಂದು,
ಬೆಟ್ಟಗಟ್ಟಂಗಳ ಹಿಡಿತಂದು, ಸೇತುವೆಯ ಕಟ್ಟಲೇಕೋ?
ವಿಷ್ಣು ಪರಿಪೂರ್ಣನಾದಡೆ, ರಾವಣನ ವಧೆಗಂಜಿ,
ಧರೆಯ ಮೇಲೆ ಲಿಂಗಪ್ರತಿಷ್ಠೆಗಳ ಮಾಡಿ ಪೂಜಿಸಲೇಕೋ ?

ಇಂತು ಬ್ರಹ್ಮಾಂಡದೊಳಗೆ ಸಿಕ್ಕಿ.
ಸತ್ತುಹುಟ್ಟುತ್ತಿಹ ದೇವತೆಗಳು ಒಬ್ಬರೂ ಪರಿಪೂರ್ಣರಲ್ಲ.
ಮಹಾದಾನಿ ಸೊಡ್ಡಳನೊಬ್ಬನೆ ಪರಿಪೂರ್ಣನು. ॥ ೮೨ ॥

೮೦೯

ವೇದಂಗಳು ನಿಜವ ಬಲ್ಲಡೆ, ಪಟ್ಟಂಕುರರ ಮರೆಯಬೇಕಲ್ಲದೆ,
ಚನ್ನಯ್ಯ ಕಕ್ಕಯ್ಯಗಳ ಮೆರೆಯಲೇಕೆ ?
ಶಾಸ್ತ್ರಂಗಳು ಸತ್ಯವ ನುಡಿದಡೆ, ಶಾಸ್ತ್ರಂಗಳ ಮಾತಿಂಗೆ ಹೇಸಿ,
ಕಿರಾತಬೊಮ್ಮಣ್ಣಂಗಳ ಮೆರೆಯಲೇಕೆ ?
ಆಗಮಂಗಳು ಆಚಾರವನರಿದಡೆ, ಆಗಮಂಗಳ ಮೆರೆಯದೆ,
ಕೆಂಬಾವಿಯ ಭೋಗಣ್ಣಗಳ ಹಿಂದುರುಳುತ್ತ ಹೋಗಿ ಮರೆಯಲೇಕೆ ?
ಇಂತೀ ವೇದಶಾಸ್ತ್ರಾಗಮಂಗಳು ಶಿವನಾದಿಯಂತವನರಿದಡೆ,
ಸಾಮವೇದಿಗಳು ಶ್ವಪಚಯ್ಯಂಗೆ ಶಿಷ್ಯರಾಗಲೇಕೆ ?
ವಾದಿಸಿದರೆಲ್ಲರು ಪ್ರತಿವಾದಿಗಳಾದರು ನಿಮ್ಮಂತವನರಿಯದೆ.
ಅಭೇದ್ಯವು, ಘನಕ್ಕೆ ಘನವು, ಶಂಭು ಸೊಡ್ಡಳಾ. ॥ ೮೩ ॥

೮೧೦

ವೇದದವರನೊಲ್ಲದೆ ನಮ್ಮ ಮಾದಾರ ಚನ್ನಯ್ಯಂಗೊಲಿದ.
ಶಾಸ್ತ್ರದವರನೊಲ್ಲದೆ ಶಿವರಾತ್ರಿಯ ಸಂಕಣ್ಣಂಗೊಲಿದ.
ಆಗಮದವರನೊಲ್ಲದೆ ತೆಲುಗುಜೊಮ್ಮಯ್ಯಂಗೊಲಿದ.
ಪುರಾಣಕರ್ಮಿಗಳೆಂಬ ವಿಶಿಷ್ಟಬ್ರಹ್ಮರನೊಲ್ಲದೆ ಉದ್ಭಟಯ್ಯಂಗೊಲಿದ.
ಅಣ್ಣ ಕೇಳಾ ಸೋಜಿಗವ !
ದಾಸದುಗ್ಗಳೆಯರಿಗೊಲಿದ ಮುಕ್ಕಣ್ಣ ಸೊಡ್ಡಳ,
ಹಾರುವಣ್ಣಗಳಿಗೆ ಹೇಸಿ ಕದವನಿಕ್ಕಿಕೊಂಡನು. ॥ ೮೪ ॥

೮೧೧

ಶರೀರವೆಂಬ ಹಸಿಯ ಮಣ್ಣು,
ಅದು ಹಿರಿಯತನಕ್ಕಿಕ್ಕಿದ ದುರ್ಗಧೂಳಿ,
ಗೊಂಬೆ [illegible]ಪ್ಪುದು ಮಾಣ್ಬುದೆ ?
ಜವನ ದಾಳಿ ಒಪ್ಪುದಯ್ಯಾ.
ಹರನ ವಿಶ್ವಾಸ ತಪ್ಪಲೊಡನೆ,
ನರನ ವಿಧಿಯ ಸಾನೆಂಬೆ ಸೊಡ್ಡಳಾ. ॥ ೮೫ ॥

೮೧೨

ಶಿಖಿ ಬ್ರಾಹ್ಮಣ, ನಯನ ಕ್ಷತ್ರಿಯ, ನಾಶಿಕ ಬಣಜಿಗ, ಅಧರ ಒಕ್ಕಲಿಗ,
ಕರ್ಣ ಗೊಲ್ಲ, ಕೊರಳು ಕುಂಬಾರ, ಬಾಹು ಪಂಚಾಳ, ಅಂಗೈ ಉಪ್ಪಾರ,

ನಖ ನಾಯಿಂದ, ಒಡಲು ಡೊಂಬ, ಬೆನ್ನು ಅಸಗ, ಚರ್ಮ ಬೇಡ,
ಪೃಷ್ಠಸ್ಥಾನ ಕಬ್ಬಿಲಿಗ, ಒಳದೊಡೆ ಹೊಲೆಯ,
ಮೊಣಕಾಲು ಈಳಿಗ, ಕಣಕಾಲು ಸಮಗಾರ,
ಮೇಗಾಲು ಮಚ್ಚಿಗ, ಚಲಪಾದವೆಂಬ ಅಂಗಾಲು ಶುದ್ಧ ಮಾದಿಗ ಕಾಣಿರೊ!
ಇಂತೀ ಹದಿನೆಂಟುಜಾತಿ ತನ್ನಲಿ ಉಂಟು.
ಇವು ಇಲ್ಲಾಯೆಂದು ಜಾತಿಗೆ ಹೋರುವ ಅಜ್ಞಾನಿಗಳ
ನಮ್ಮ ಸೊಡ್ಡಳದೇವರು ಮೆಚ್ಚನಯ್ಯಾ. || ೮೬ ||

೮೧೩

ಶಿವನ ಮಹಿಮೆಯ ಘನವನೇನೆಂಬೆನಯ್ಯ!
ಉನ್ನತವಾದ ಮಹಾಗಂಗೆಯ ಜಟಾಗ್ರದಲ್ಲಿ ಧರಿಸಿದನು.
ಚರಣಕಮಲದ ಹೆಬ್ಬೆರಳಿಂದೌಂಕಲು,
ರಾವಣಾಸುರನು ಮೂರ್ಛಿತನಾಗಿ ಬಿದ್ದನು.
ಒಂದು ಬಾಣದಿಂದ ತ್ರಿಪುರವನು ಉರುಹಿದನು.
ನೊಸಲಕಣ್ಣ ಅಗ್ನಿಯಿಂದ ಮನ್ಮಥನ ದಹಿಸಿದನು.
ತ್ರಿಶೂಲದಿಂದ ಅಂಧಕಾಸುರನ ಇರಿದು ಕೊಂದನು.
ಅದೆಂತೆಂದಡೆ :
ಜಲೌಘಕಲ್ಲೋಲತರಂಗತುಂಗಗಂಗಾವೃತಾ ಯೇನ ಜಟಾಗ್ರಭಾಗೇ
ಪಾದಾಂಬುಜಾಂಗುಷ್ಠನಿಪೀಡನೇನ ಪಾತ ಲಂಕಾಧಿಪತಿರ್ವಿಸಂಜ್ಞಾಃ ।
ಏಕೇನ ದಗ್ಧಂ ತ್ರಿಪುರಂ ರೇಣಕಾಯೋ ಲಲಾಟಾಗ್ನಿಹುತಾಶನೇನ ।
ಭಿನ್ನೋದಕಃ ಶೂಲವರೇಣ ಏನಕಸ್ತೋ ನ ಸಾರ್ಥಂ ಕುರುತೇ ವಿರೋಧಂ ।
ಇಂತೆಂದುದಾಗಿ, ಶಿವನೊಡನೆ ವೈರವ ಮಾಡುವವರಾರುಂಟು ?
ಭಾಪು, ಭಾಪು ನಿನಗೆ ಸರಿಯುಂಟೆ, ದೇವರಾಯ ಸೊಡ್ಡಳಾ ? || ೮೭ ||

೮೧೪

ಶಿವಯೆಂದೋದದವನ ಓದು, ಗಿಳಿಯೋದು.
ಶಿವ ನಿಮ್ಮನಾರಾಧಿಸದವನ ಮನೆ, ಕೆಮ್ಮನೆ.
ಶಿವ ನಿಮ್ಮ ನೋಡದವನ ಕಣ್ಣು, ಹೀಲಿಯ ಕಣ್ಣು.
ಶಿವ ನಿಮ್ಮ ಹಾಡದವನ ಬಾಯಿ, ಕನ್ನಡದ ಬಾಯಿ.
ಶಿವ ನಿಮ್ಮ ಹೊಗಳದವನ ಬಾಯ ನಾಲಗೆ,
ಬಚ್ಚಲ ತಂಪಿನ ಜವುಗಿನಲ್ಲಿ ಹುಟ್ಟಿದ ಜಿಗುಳಿಯಯ್ಯಾ.
ಶಿವ ನಿಮಗೆರಗದ ಕರ್ಮಿ, ಶೂಲದ ಹೆಣ.
ಶಿವ ನಿಮ್ಮ ನೆನೆಯದವನ ದೇಹ, ಸಂದೇಹ.
ಶಿವ ನಿಮ್ಮ ಭಕ್ತನಲ್ಲದವನ ಸಿರಿಯು,

ವಿದ್ಯೆ ಬುದ್ಧಿ ಕುಲ ಧನ ಶಬ್ದದ ಮೇಲಣ ತೊಡಿಗೆ. ಅಂತವನೇತಕ್ಕೆ ಬಾತೆ ?
ಇದು ಕಾರಣ, ಭವಘೋರಕ್ಕಾರದೆ ಶರಣುಹೊಕ್ಕೆನಯ್ಯಾ.
ಸೊಡ್ಡಳಾ, ಇನ್ನು ಭವಬಂಧನ ನಮಗಿಲ್ಲವಯ್ಯಾ. || ೮೮ ||

೮೧೫

ಶಿವಶಿವಾ, ಬೇಡಿಕೊಳ್ಳರೆ,
ಅಮೃತಮಥನದಲ್ಲಿ ದೈನ್ಯವ ಮಾಡಿದವರನುಳುಹಿದ ದೇವನ ?
ಶಿವಶಿವಾ, ಬೇಡಿಕೊಳ್ಳರೆ,
ದಕ್ಷಾಧ್ವರದಲ್ಲಿ ದೈನ್ಯವ ಮಾಡಿದವನುಳುಹಿದ ದೇವನ ?
ಶಿವಶಿವಾ, ಬೇಡಿಕೊಳ್ಳರೆ,
ಅಜಹರಿ ಅವತಾರಂಗಳ ಸಂಹಾರ ಮಾಡಿದ ದೇವನ?
ಶಿವಶಿವಾ, ಬೇಡಿಕೊಳ್ಳರೆ,
ಅಖಿಳಬ್ರಹ್ಮಾಂಡಂಗಳ ಹೆತ್ತ ತಂದೆ,
ನಮ್ಮ ಮಹಾದಾನಿ ಸೊಡ್ಡಳದೇವನ ? || ೮೯ ||

೮೧೬

ಶ್ರುತಿತತಿಗಳ ಶಿರದ ಮೇಲೆ ಒಪ್ಪುತಿಪ್ಪ
ಅತ್ಯತಿಷ್ಠದ್ದಶಾಂಗುಲನ ಕಂಡೆನಯ್ಯಾ.
ಅಣುವಿಂಗೆ ಅಣು, ಮಹತ್ತಿಂಗೆ ಮಹತ್ತಾದ
ತ್ರಿಣಯನ ಮೂರ್ತಿಯ ಕಂಡೆನಯ್ಯಾ.
ವಾಙ್ಮನಕ್ಕಗೋಚರವಾದ ನಿರವಯ ಬ್ರಹ್ಮವ ಕಂಡೆನಯ್ಯಾ.
ನಿತ್ಯನೇಕೋರುದ್ರನದ್ವಿತೀಯನ ಕಂಡೆನಯ್ಯಾ.
ಎನ್ನ ಕರಸ್ಥಲದೊಳಗೆ ಮಹಾದಾನಿ ಸೊಡ್ಡಳನ ಕಂಡೆನಯ್ಯಾ. || ೯೦ ||

೮೧೭

ಸಂಸಾರ ಸಂಸಾರ, ಕಾಳಗತ್ತಲೆ ಕಾಳಗತ್ತಲೆ.
ಕರ ಹಿರಿದು ಕರ ಹಿರಿದು, ಎಚ್ಚತ್ತಿರು ಎಚ್ಚತ್ತಿರು ಜ್ಞಾನಧನಕ್ಕೆ.
ಎಚ್ಚತ್ತಿರು ಎಚ್ಚತ್ತಿರು ಇಂದ್ರಿಯಗಳ್ಳರಿಗೆ.
ಕಾಮಃ ಕ್ರೋಧಶ್ಚ ಲೋಭಶ್ಚ ದೇಹೇ ತಿಷ್ಠಂತಿ ತಸ್ಕರಾಃ ।
ಜ್ಞಾನರತ್ನಾಪಹಾರಾಯ ತಸ್ಮಾತ್ ಜಾಗ್ರತ ಜಾಗ್ರತ.
ಜನ್ಮ ದುಃಖಂ ಜರಾ ದುಃಖಂ ನಿತ್ಯಂ ದುಃಖಂ ಪುನಃ ಪುನಃ ।
ಸಂಸಾರಸಾಗರೋ ದುಃಖಂ ತಸ್ಮಾತ್ ಜಾಗ್ರತ ಜಾಗ್ರತ ॥
ಎಂದುದಾಗಿ,
ಸಲೆ ಜೀವಿತಗೊಂಡ ಸೊಡ್ಡಳ ಆಳು ಭಲಾ ಭಲಾ ಎನ್ನುತಿರ್ರಾ. || ೯೧ ||

೮೧೮

ಸಜ್ಜನನಾದ ಶರಣನ ಮುಂದೆ, ಮಜ್ಜನಕ್ಕೆರೆವೆನಯ್ಯಾ ಶಿವಲಿಂಗಕ್ಕೆ.
ದುರ್ಜನರೊಡನೆ ಹೋಗಿ,
ಅನ್ಯದೈವಕ್ಕೆ ಸಾಹಿತ್ಯ ಕೆಳಗಾಗಿ ಬೀಳುವರು ನೋಡಾ.
ಹಾದರಕ್ಕೆ ಹುಟ್ಟಿದವರಿಗಲ್ಲದೆ
ಇಂತಹ ಬುದ್ಧಿಯಿಲ್ಲ ಕಾಣಾ. ದೇವರಾಯ ಸೊಡ್ಡಳಾ. ॥ ೯೨ ॥

೮೧೯

ಸಾಗರ ಘನವೆಂದಡೆ, ಧರೆಯೊಳಗಡಗಿತ್ತು
ಧರೆ ಘನವೆಂದಡೆ, ನಾಗೇಂದ್ರನ ಫಣಾಮಣಿಯ ಮೇಲಡಗಿತ್ತು.
ನಾಗೇಂದ್ರನ ಘನವೆಂದಡೆ, ದೇವಿಯರ ಕಿರುವೆರಳಿನ ಮುದ್ರಿಕೆಯಾಯಿತ್ತು.
ಅಂಥ ದೇವಿಯ ಘನವೆಂದಡೆ, ಶಿವನರ್ಧಾಂಗಿಯಾದಳು,
ಶಿವ ಘನವೆಂದಡೆ,
ಬಾಣನ ಬಾಗಿಲ ಕಾಯ್ದು, ನಂಬಿಯ ಹಡಪವ ಹಿಡಿದ.
ಇದು ಕಾರಣ, ಸೊಡ್ಡಳಾ ನಿಮ್ಮ ಭಕ್ತರೇ ಘನ. ॥ ೯೩ ॥

೮೨೦

ಸುರರೆಲ್ಲಾ ಮೇಣು ಸತ್ಯಕವಪ್ಪ ದ್ವಿಜರು ತಿರಿಯಕ್ಕಾಗಿ
ವಿಭೂತಿಯ ಧರಿಸಿ ಇಹವರು, ನಿಷ್ಟಿಯರೆಲ್ಲಾ ಮೇಣು ಪಟ್ಟವರ್ಧನರು.
ಬಟ್ಟಿತ್ತಾಗಿಯೆ ಬೊಟ್ಟನಿಟ್ಟು ಇಹವರು,
ಸಿದ್ಧಾಯವ ತೆತ್ತು ಬಿತ್ತಿಯೆಂಬ ಒಕ್ಕಲಿಗರಾದವರು.
ಅರ್ಧಚಂದ್ರಾಕೃತಿಯ ಗಂಧದವರು ಕೀಳುಜಾತಿಗಳಯ್ಯಾ.
ನೀಳಗಂಧದವರೆಂದು ಹೇಳುವದು ಶೈವದೊಳಗಣ ವಿಭೂತಿಯ ಕಲ್ಪ.
ಓಂ ತ್ರಿಪುಂಡ್ರಂ ಸುರವಿಪ್ರಾಣಾಂ ವರ್ತುಳಂ ನೃಜವೈಶ್ಯಯೋಃ ।
ಅರ್ಧಚಂದ್ರಂತು ಶೂದ್ರಾಣಾಂ ಅನ್ಯೇಷಾಮೂರ್ಧ್ವ ಪುಂಡ್ರಕಂ ॥
ಎಂಬ ವಚನವಿಡಿದು, ಬತ್ತಲೆಗೊಂಬ ಮಾತಿನಲ್ಲಿ ಮೆಚ್ಚ ಸೊಡ್ಡಳ. ॥ ೯೪ ॥

೮೨೧

ಸೃಷ್ಟಿಪಾಲಕ ಪ್ರತಿಕೂಲವಾದಡೆ, ಸಿಟ್ಟುಗುಟ್ಟಿ ಚಿವುಟನೆ ಬ್ರಹ್ಮನ ಶಿರವ ?
ಅವನಿಗೊಡೆಯ ನಾನೆಂದಡೆ, ಬಂಧನದಲ್ಲಿರಿಸನೆ ಬಂಟನಿಂದ ಬಲಿಯ ?
ಜಗವಂದ್ಯವಿರಹಿತನಾಗಿ, ಭೂಮಿಯನಳದು ಕೊಂಡಡೆ,
ಕಾಲಬಿದ್ದು ಕಾಲಲ್ಲಿರಿಸನೆ ಹರಿಯೆ ?
ಹುಟ್ಟಿಸುವನಯ್ಯಾ, ಕುಸಕುಳಿಯೊಳಗೆ ದುರ್ಜೀವಿಗಳ ಮಾಡಿ.
ಕತ್ತಿ ಕೌಚಿಯಲ್ಲಿ ಕುಸುರಿದರಸಿಕೊಂಡು,
ಬಟ್ಟಬಯಲಲ್ಲಿ ಹೋದರು,
ಸೃಷ್ಟಿಗೀಶ್ವರ ಕರ್ತ ಸೊಡ್ಡಳನನರಿಯದನ್ಯಾಯಿಗಳು. ॥ ೯೫ ॥

೮೨೨

ಸೊಣಗಂಗೆ [ಖ]ಂಡವ ಚೆಲ್ಲುವ ತೆರನಂತೆ,
ಸಂಸಾರಿಗೆ ಸಂಸಾರವ ಚೆಲ್ಲದೆ, ತೋರುವನೆ ಶರಣಪಥಂಗಳ ?
ತೋರುವನೆ ಭಕ್ತಿಪಥಂಗಳ ?
ಅದೆಂತೆಂದಡೆ :
ಅಶ್ರುತಿಃ ಕರ್ಣಪೂರಂ ಚ ಶ್ರುತೋ ಧರ್ಮೋಪ್ಯರೋಚಕಃ ।
ಚರ್ಮಖಂಡನ ಭಕ್ಷಾಣಾಂ ಶ್ವಾನಮನ್ನ ಮರೋಚಕಂ ॥
ಎಂದುದಾಗಿ, ಸೊಡ್ಡಳದೇವ ತಾನೊಲ್ಲದವರ
ಭವದುಃಖ ದೋಣೆಯಲೂಡುವ. ॥ ೯೬ ॥

೮೨೩

ಹಂದಿಯಾಗದೆ, ಸೊಣಗನಾಗದೆ, ಮೃಗನಾಗದೆ, ಪಕ್ಷಿಯಾಗದೆ,
ಕುರಿ ಬಳ್ಳು ಕತ್ತೆಯಾಗದೆ, ಚೆಂದವಾಯಿತ್ತು [ಚೆ]ಂದವಾಯಿತ್ತು.
ಹಿಂದಣ ಜನ್ಮದ ಪರಿಯಲ್ಲಿ
ಮಾನವನಾಗಿ ಹುಟ್ಟಿ, [ಚೆಂ]ದವಾಯಿತ್ತು [ಚೆಂ]ದವಾಯಿತ್ತು.
ಚೆಂದವಾದ ದೇಹ ವಿಚ್ಛಂದವಾಗದ ಮುನ್ನ,
ತಂದೆ ಸೊಡ್ಡಳಂಗೆ ಶರಣೆಂದು ಬದುಕಿದೆನಯ್ಯಾ. ॥ ೯೭ ॥

೮೨೪

ಹದನರಿದು ಹರಗುವ, ಬೆದೆಯರಿದು ಬಿತ್ತುವ,
ಸಸಿ ಮುಂದವಾದಡೆ ತೆಗೆವನಯ್ಯಾ.
ಒಂದೊಂದ ಹೊಕ್ಕು ಬೆಳವಸಿಯ ತೆನೆ ಮೆಲುವನಯ್ಯಾ.
ಕೊಯಿವನಯ್ಯಾ, ಕೊರೆವನಯ್ಯಾ, ಒಕ್ಕುವನಯ್ಯಾ, ತೂರುವನಯ್ಯಾ.
ಲೋಕಾದಿಲೋಕಂಗಳ ಹಗೆಯನಿಕ್ಕುವನಯ್ಯಾ, ದೇವರಾಯ ಸೊಡ್ಡಳ. ॥ ೯೮ ॥

೮೨೫

ಹರನ ಡಿಂಗರಿಗ ದಧೀಚಿಯ ಶಾಪದಿಂದ
ಕರ ಬೇವಂತೆ ಬೆಂದರಾಗಳೆ ಹುರುಡಿಸುವರು.
ಇದುಕಾರಣ, ದಿಟದಿಟ ಗರುಡಧ್ವಜದೇವನೆಂದೆಂಬಿರಿ.
ಗರುಡವಾಹನನಲ್ಲದೆ ಬೇರೆರಡನೆಯ ದೇವರಿಲ್ಲೆಂದಡೆ,
ಹರಿದು ಕಳೆದರು ವ್ಯಾಸನ ತೋಳೆರಡ.
ನಂದಿ ಮಹಾಕಾಳರು ಬಂದು,
ಮನಸಿನ ಹೊಲಸುಗಳು ನಿಃಕರಡರರಿವರೆ ಶಿವನ ನಿಲುವನು ?
ಹರನ ಹೋಲುವ ದೈವರೊಳರೆ, ನಮ್ಮ ಪಂಚವದನ ಸೊಡ್ಡಳಂಗೆ ? ॥ ೯೯ ॥

೮೨೬

ಹರಿಬ್ರಹ್ಮಾದಿ ದೇವರ್ಕಳ ಸಲಹುವರೆ, ಮಾತಾ ಪಿತರುಂಟು.
ಅಜಾತಲಿಂಗವ ಸಲಹುವರೆ,
ಮಾತಾಪಿತರಿಲ್ಲವೆಂದು ಅಮ್ಮವ್ವೆ ಮರುಗುತ್ತಿರಲು,
ಅಮ್ಮವ್ವೆಯರ ಮರುಕಕ್ಕೆ ಮೆಚ್ಚಿ ಶಿಶುವಾದನು.
ಅಮ್ಮವ್ವೆ ಮೊಲೆಯನುಣ ಕಲಿಸಿದಳು.
ಕೊಡಗೂಸು ಹಾಲನಾರೋಗಿಸ ಕಲಿಸಿದಳು.
ಚೋಳಿಯಕ್ಕ ಸಕಲದ್ರವ್ಯಂಗಳು, ಅಪವಿತ್ರಗಳೆಂದವ ಮುಟ್ಟಲೀಯದೆ,
ತನ್ನ ಪ್ರಸಾದವನಾರೋಗಿಸಲು ಕಲಿಸಿದಳು.
ಇಂತೀ ಪ್ರಸಾದವಲ್ಲದೆ ಅನರ್ಪಿತವ ಮುಟ್ಟಲೊಲ್ಲನೆಂದು,
ಸಂಗನಬಸವಣ್ಣನು ಜಂಗಮಪ್ರಸಾದವ ಲಿಂಗಕ್ಕೆ ಸಮರ್ಪಿಸಿ,
ಆ ಪ್ರಸಾದವ ಸ್ವೀಕರಿಸಿ ಪ್ರಸಾದಿಯಾದ
ಕಾಣಾ, ದೇವರಾಯ ಸೊಡ್ಡಳಾ. ॥ ೧೦೦ ॥

೮೨೭

ಹಳೆಯ ಮಿಣಿಯ ಕಡಿವನು,
ನಾದ ಹೋದ ಕೆರಹನು, ಬೂದಿಹೋದ ಎರಹನು.
ಒಣಗಿದೆಲುವ ನಾಯ ಕೊಂಡೊಡಲ ತುಂಬಿ,
ಬೂದಿಯೊಳಗೆ ಕೆಡದಿಪ್ಪ ಸ್ವಾನಬಲ್ಲುದೆ ?
ಅಮೃತಾನ್ನಗಳಿಪ್ಪೆಡೆಯಡಿಗಡಿಗೆ ಅಹಂಕಾರ ಗರ್ವಗಳ ನುಡಿದು,
ಪೊಡವಿ ಬ್ರಹ್ಮಾಂಡದೊಡೆಯ ಸೊಡ್ಡಳಂಗೆ
ವಿಷ್ಣು ಸರಿಯೆಂದು ನುಡಿವ ಕುನ್ನಿಗಳ ತಲೆಗಳೊಡೆದು ಕೆಡೆವ[ರು].
ಕಳುವ ಕಳ್ಳಂಗೆ ಕತ್ತಲೆಯಲ್ಲದೆ ಬೆಳಗು ಸಮನಿಸುವುದೆ ? ॥ ೧೦೧ ॥

೮೨೮

ಹಿಡಿದು ಬಿಟ್ಟ ಬಳಿಕ ಅಂತಿರಬೇಕಲ್ಲದೆ,
ಇನ್ನು ಹಿಡಿದು ತಪ್ಪಿದ ವಸ್ತುವ ಅರಸಿ ಹಿಡಿಯಲುಂಟೆ ?
ಮುನಿದು ಹಾವಿನೊಳಿಟ್ಟು ಒಸೆದು ಆನೆಯನೇರಿಸಿಹೆನೆಂದಡೆ,
ಶಿವಶರಣರ ಮುನಿಸು ತಿಳಿಯದು ನೋಡಾ.
ಒಡೆದ ಮುತ್ತು ನಾಣ್ಯಕ್ಕೆ ಸಲ್ಲದು, ಒಡೆದ ಹಾಲು ಅಮೃತಕ್ಕೆ ಸಲ್ಲದು.
ನಾವೇತಕಯ್ಯಾ, ನಿನಗಂದು ಸೊಡ್ಡಳನ ಶರಣರು ನಿರೂಪವ ಕೊಡಲು,
ಎನ್ನ ಪರಮಾರಾಧ್ಯರು ಸಂಗನಬಸವಣ್ಣನ ತಿಳುಹುತಿರ್ದರು. ॥ ೧೦೨ ॥

೮೨೯

ಹುತ್ತ ಹೋರಿನೊಳಗೆ ಕೈಯನಿಕ್ಕುವನೆನ್ನ ಶಿಶುವೆಂದು,
ಹೆತ್ತತಾಯಿ ಮಗನ ಬೆಂಬತ್ತಿ ಬಪ್ಪಂತೆ, ಬೆಂಬತ್ತಿ ಬಿಡಂ ಭೋ.

ಅಯ್ಯಾ ಎಂದಡೆ ಓ ಎಂಬೆ.
ಅನ್ಯವಿಷಯಕೆನ್ನ ಹತ್ತಲೀಯದೆ, ಎತ್ತೆತ್ತ
ನೋಡಿದಡತ್ತತ್ತ ಸೊಡ್ಡಳ. ॥ ೧೦೩ ॥

೮೩೦

ಹೆಂಗೂಸಿಂಗೆ ಶೃಂಗಾರ, ಪುರುಷನ ಕೂಟವೆಯ್ದುವನ್ನಕ್ಕ.
ಗಂಡುಗೂಸಿಂಗಾಚಾರ, ಪರಮನ ಕೂಟವೆಯ್ದುವನ್ನಕ್ಕ.
ಪುರುಷನ ಕೂಟದಲ್ಲಿ ಬಂಗಾರ ಶೃಂಗಾರ ವಸ್ತ್ರವಳಿಯಲು, ನಿಜ ಉಳಿಯಿತ್ತು.
ಪರಮನ ಕೂಟದಲ್ಲಿ ಆಗಮಾಚಾರವಳಿಯಲು, ನಿಜ ಉಳಿಯಿತ್ತು.
ಆ ಸಜ್ಜನಕ್ಕೆ, ಈ ಸಜ್ಜನಿಕಂಗೆ ಸಜ್ಜನವೆ ಲೇಸು,
ಸಜ್ಜನದ ಗಂಡ ದೇವರಾಯ ಸೊಡ್ಡಳಾ. ॥ ೧೦೪ ॥

■■

## ಹಡಪದ ಅಪ್ಪಣ್ಣಗಳ ವಚನ

೮೩೧

ಅಂಗಕ್ಕೆ ಲಿಂಗಕ್ಕೆ ಪೊಂಗೆ ಪರಿಮಳದ ಶೃಂಗಾರದ ಹಾರ.
ಕಂಗಳ ಬೆಳಗಿನಲ್ಲಿ ಮಂಗಳದ ಮಹಾಬೆಳಗಿರುತಿರಲು,
ಇದ ಅಂಗವಿಸಿ ನೋಡಿ, ಎರಡರ ಸಂಗಸುಖವನೊಂದುಗೂಡಿ,
ತಾನೇ ಬೇರೆ ಲಿಂಗವಾಗಿ ನಿಂದು,
ಅಂಗವಳಿಯದೆ, ಬಿಂದು ತುಳುಕದೆ, ನಂದಿ ಮುಂದುಗೆಡದ ಮುನ್ನ,
ನಿಮ್ಮೊಳು ಒಂದಾದ ಲಿಂಗೈಕ್ಯವನರಿದು,
ಕಣ್ದೆರೆದು ಕರಗಿ ಆಲಿ ನೀರಾದಂತಾದೆನಯ್ಯಾ,
ಬಸವಪ್ರಿಯ ಕೂಡಲಚೆನ್ನಬಸವಣ್ಣಾ. || ೧ ||

೮೩೨

ಅಂಗಗುಣಂಗಳನೆಲ್ಲ ಅನಲಂಗಿಕ್ಕಿ,
ಲಿಂಗಗುಣವನೆ ಗಟ್ಟಿಮಾಡಿ,
ಕಂಗಳು ಲಿಂಗ ಕರಸ್ಥಲ, ಜಂಗಮದ ಇಂಗಿತವನರಿದರೆ,
ಬಸವಪ್ರಿಯ ಕೂಡಲಚೆನ್ನಬಸವಣ್ಣ. || ೨ ||

೮೩೩

ಅಂಗದ ಮೇಲೆ ಲಿಂಗವಿದ್ದವರೆಲ್ಲರು ಸರಿಗಾಣಬೇಕೆಂಬರು,
ಲಿಂಗಲಾಂಛನಧಾರಿಗಳೆಲ್ಲ, ಶರಣಂಗೆ ಸರಿಯೆ?

ಶರಣರ ಸಂಗ ಎಂತಿಪ್ಪುದೆಂದರೆ,
ಪರಮಜ್ಞಾನವೆಂಬ ಉರಿಯನೆ ಉಟ್ಟು, ಉರಿಯನೆ ತೊಟ್ಟು,
ಉರಿಯನೆ ಉಂಡು, ಉರಿಯನೆ ಹಾಸಿ, ಉರಿಯನೆ ಹೊದ್ದು,
ನಿರವಯಲಾದ ಶರಣಂಗೆ ನರರುಗಳು ಸರಿ ಎನ್ನಬಹುದೆ?
ಹರಿಗೆ ಕರಿ ಸರಿಯೇ? ಉರಗಗೆ ಒಳ್ಳೆ ಸರಿಯೇ?
ಮರುಗಕ್ಕೆ ಗರುಗ ಸರಿಯೇ?
ಇಂತೀ ನಿರ್ವಯಲಾದ ಶರಣಂಗೆ ಮರ್ತ್ಯದ ನರಗುರಿಗಳು ಸರಿ ಎಂದರೆ,
ನಾಯಕ ನರಕದಲ್ಲಿಕ್ಕುವ, ನಮ್ಮ ಬಸವಪ್ರಿಯ ಕೂಡಲಚೆನ್ನಬಸವಣ್ಣಾ. ॥ ೩ ॥

೮೩೪

ಅಂಗದ ಲಯ ಲಿಂಗದೊಳಗೆ, ಲಿಂಗದ ಲಯ ಅಂಗದೊಳಗೆ.
ಇವೆರಡರ ಸಂಗಸುಖ ಜಂಗಮದೊಳಗೆ ಏಕವಾಯಿತ್ತು.
ಅಂದೆ ಪ್ರಸಾದದಿಂದ ರೂಪಾಯಿತ್ತು
ಮುಂದೆ ಪ್ರಸಾದದಲ್ಲಿ ಪರಿಪೂರ್ಣವಾಯಿತ್ತು
ಇದರಂದವ ಬಲ್ಲ ಶರಣರೆ ಎನ್ನ ತಂದೆಗಳಾಗಿಪ್ಪರು ಕಾಣಾ,
ಬಸವಪ್ರಿಯ ಕೂಡಲಚೆನ್ನಬಸವಣ್ಣಾ. ॥ ೪ ॥

೮೩೫

ಅಂಗ ಲಿಂಗವಾಯಿತ್ತೆಂಬಿರಿ, ಲಿಂಗ ಅಂಗವಾಯಿತ್ತೆಂಬಿರಿ.
ಅಂಗ ಲಿಂಗ ಸಂಬಂಧ ಎಲ್ಲರಿಗೆ ಎಂತಾಯಿತ್ತು ಹೇಳಿರಣ್ಣಾ.
ಅಂಗ ಲಿಂಗ ಸಂಬಂಧವಾದರೆ, ಗುರುವಿನಲ್ಲಿ ಗುಡ್ಡನಾಗಿರಬೇಕು,
ಲಿಂಗದಲ್ಲಿ ನಿಷ್ಠನಾಗಿರಬೇಕು, ಜಂಗಮದಲ್ಲಿ ಅವಧಾನಿಯಾಗಿರಬೇಕು.
ಇವ ಮೂರರಲ್ಲಿ ದೂರಾಗಿಪ್ಪರ ಎನಗೊಮ್ಮೆ ತೋರದಿರಾ,
ಬಸವಪ್ರಿಯ ಕೂಡಲಚೆನ್ನಬಸವಣ್ಣಾ. ॥ ೫ ॥

೮೩೬

ಅಂಗ ಲಿಂಗವೆಂದರಿದ ಬಳಿಕ, ಲಿಂಗ ಅಂಗವೆಂದರಿದ ಬಳಿಕ,
ಇನ್ನೊಂದು ಸಂಗ ಉಂಟೆಂದು ಏಕೆ ಅರಸುವಿರಯ್ಯ?
ಸಂಗ ಉಂಟೆಂಬನ್ನಕ್ಕ ಕಂಗಳ ಪಟಲ ಹರಿದುದಿಲ್ಲ,
ಅದು ಮರವೆಗೆ ಬೀಜ.
ಈ ಮರಹಿಂದಲೆ ನೆರೆ ಮೂರುಲೋಕವೆಲ್ಲ ಬರುಸೂರೆಹೋಯಿತು.
ಅರಿದ ಶರಣಂಗೆ ಅಂಗಲಿಂಗಸಂಬಂಧವಿಲ್ಲ,
ಅಂಗಲಿಂಗಸಂಬಂಧವಳಿದ ಬಳಿಕ ಪ್ರಾಣಲಿಂಗಸಂಬಂಧ.
ಲಿಂಗಪ್ರಾಣಿ ಇವನರಿದರೆ ಲಿಂಗಸಂಬಂಧಿ,
ಬಸವಪ್ರಿಯ ಕೂಡಲಚೆನ್ನಬಸವಣ್ಣಾ. ॥ ೬ ॥

೮೩೭

ಅಂಗಲಿಂಗವೆಂದರಿ[ದು]ದಕ್ಕೆ ಕುರುಹು ಎಂತಿಪ್ಪುದೆಂದರೆ,
ಕರುಣರಸಭರಿತವಾಗಿಪ್ಪುದೇ ಕುರುಹು.
ಕಂಗಳು ಲಿಂಗವೆಂದರಿ[ದು]ದಕ್ಕೆ ಕುರುಹು ಎಂತಿಪ್ಪುದೆಂದರೆ,
ಕಾಮಾದಿಗಳ ಸೃಜಿಸದುದೇ ಕುರುಹು.
ಕರವೇ ಲಿಂಗವೆಂಪರಿದುದಕ್ಕೆ ಕುರುಹು ಎಂತಿಪ್ಪುದೆಂದರೆ,
ಇಹ ಪರ ಮೋಕ್ಷವ ಬಯಸದಿಪ್ಪುದೇ ಕುರುಹು.
ಈ ತ್ರಿವಿಧವು ಏಕವಾದರೆ,
ಎಮ್ಮ ಬಸವಪ್ರಿಯ ಕೂಡಲಚೆನ್ನ ಬಸವಣ್ಣನಲ್ಲಿ ಮಹಾಲಿಂಗೈಕ್ಯವು. ॥ ೭ ॥

೮೩೮

ಅಂಗಲಿಂಗಸಂಬಂಧವಾದ ಬಳಿಕ ಮನ ಹಿಂಗದಿಪ್ಪುದು.
ತನುವನು ಬಿಟ್ಟು, ಸಂಗಸುಖದ ಶರಣರ ಗೋಷ್ಠಿಯೊಳು ಇಪ್ಪಾತ
ಮಂಗಳಾತ್ಮಕ ಬಸವಪ್ರಿಯ ಕೂಡಲಚೆನ್ನಬಸವಣ್ಣ. ॥ ೮ ॥

೮೩೯

ಅಂಗವದಾರದು? ಲಿಂಗವದಾರದು? ಸಂಗವದಾರದು ?
ಸಮರಸವ ದಾರದು? ಸಂದೇಹದಿಂದ ಮುಂದುಗಾಣದೆ
ಒಂದೊಂದ ಕಲ್ಪಿಸಿಕೊಂಡು ಬಂದಿರಲ್ಲಾ ಭವ ಭವದಲ್ಲಿ,
ಅಂಗವೆ ಗುರು, ಲಿಂಗವೆ ಪ್ರಾಣ, ಸಂಗವೆ ಜಂಗಮ, ಸಮರಸವೆ ಪ್ರಸಾದ.
ಈ ಚತುರ್ವಿಧವು ಒಂದಂಗ.
ಈ ಚತುರ್ವಿಧವ ಶ್ರುತಿ ಸ್ಮೃತಿಗಳರಿಯವು, ನಿಮ್ಮ ಶರಣಬಲ್ಲ,
ಆ ಶರಣನೆ ಶಿವನವಾ.
ಬಸವಪ್ರಿಯ ಕೂಡಲಚೆನ್ನಸಂಗಮದೇವಾ, ನಿನ್ನ ನೀನೆ ಬಲ್ಲೆ. ॥ ೯ ॥

೮೪೦

ಅಂಗವ ಮರೆದು ಲಿಂಗವ ಕೂಡಿ,
ಸಂಗವ ಮರೆದು ಜಂಗಮವ ಕೂಡಿ,
ಗುಣವ ಮರೆದು ಗುರುವ ಕೂಡಿ,
ಪರವ ಮರೆದು ಪ್ರಸಾದವ ಕೂಡಿ,
ಹರುಷವ ಮರೆದು ಹರನ ಕೂಡಿ,
ಬೆರಸಿ ಬೇರಿಲ್ಲದಿಹ ನಿಜಶರಣಂಗೆ ನಮೋ ನಮೋ ಎಂಬೆ,
ಬಸವಪ್ರಿಯ ಕೂಡಲಚೆನ್ನಬಸವಣ್ಣಾ. ॥ ೧೦ ॥

೮೪೧

ಅಂಗವ ಮಾರಿಕೊಂಡು ಉಂಬಾತನೊಬ್ಬ ಠಕ್ಕ.
ಲಿಂಗವ ಮಾರಿಕೊಂಡು ಉಂಬಾತನೊಬ್ಬ ಠಕ್ಕ.

ಜಂಗಮವ ತೋರಿಕೊಂಡು ಉಂಬಾತನೊಬ್ಬ ಠಕ್ಕ.
ಇವರು ಮೂವರು ಕಂಗಳು ಕಾಲು ಹೋದವರ ಸಂಗದಂತೆ,
ಲಿಂಗ ಜಂಗಮಕ್ಕೆ ದೂರ,
ನಮ್ಮ ಶರಣರ ಸಂಗಸುಖಕ್ಕೆ ಸಲ್ಲರು ನೋಡಾ,
ಬಸವಪ್ರಿಯ ಕೂಡಲಚೆನ್ನಬಸವಣ್ಣಾ. ॥ ೧೧ ॥

೮೪೨

ಅಂತರಂಗದಲ್ಲಿ ಆಸೆ, ಬಹಿರಂಗದಲ್ಲಿ ಕ್ರೋಧ,
ಭಾವಕ್ಕೆ ವೇಷ. ಪ್ರಾಣಕ್ಕೆ ರೋಷ, ಕಾಮಕ್ಕೆ ಮದ.
ಇಂತಿವನಿಂಬಿಟ್ಟುಕೊಂಡು ನಾವು ಜಂಗಮವೆಂದು ಸುಳಿದರೆ,
ಹೇಯವಿಲ್ಲದ ಭಕ್ತರು ವೇಷವ ಕಂಡು ಪೂಜೆಯ ಮಾಡಿದರೆ,
ಅಶನಕ್ಕೆ ಅನ್ನವನಿಕ್ಕಿದರೆ, ಶೀತಕ್ಕೆ ರಗಟೆಯ ಕೊಟ್ಟರೆ, ಅವರಿಗದು ಸಹಜ.
ನಿಮ್ಮ ನೀವು ನೋಡಲಿಲ್ಲವೆ ?
ನಾವು ದೇವರಾದೆವೆಂದು ವಿಚಾರಿಸಿ ನೋಡಿ, ಉಭಯವ ಮೆಟ್ಟಿನಿಂದು,
ಅಭವನೆಂಬ ಹೆಸರಿಗೆ ಸಂದವರಿಗೆ ಸುಲಭದಿಂದ ಜಗವೆಲ್ಲವು
ನಮೋ ನಮೋ ಎಂಬುದು.
ಬಸವಪ್ರಿಯ ಕೂಡಲಚೆನ್ನಬಸವಣ್ಣಾ,
ಈ ಉಭಯದ ಭೇದವ ನೀವೆ ಬಲ್ಲಿರಿ. ॥ ೧೨ ॥

೮೪೩

ಅಖಂಡ ಗೋಳಾಕಾಕಾರವಾಗಿರ್ದ ಮಹಾಲಿಂಗವೆ ಅಂಗವಿಡಿದಲ್ಲಿ,
ಪ್ರಾಣಲಿಂಗವೆಂದು, ಇಷ್ಟಲಿಂಗವೆಂದು, ಇವೆರಡರ ಸಂಘಟ್ಟ
ಭಾವಲಿಂಗವೆಂದು
ಅಂಗವ ಕುರಿತು ಮೂರು ತೆರನಾಯಿತ್ತು,
ಆಚಾರಾದಿ ಮಹಾಲಿಂಗವೆಂದು ಇಂದ್ರಿಯವ ಕುರಿತು ಆರು ತೆರನಾಯಿತ್ತು,
ತತ್ತ್ವವ ಕುರಿತು ಮೂವತ್ತಾರು ತೆರನಾಯಿತ್ತು,
ಸ್ಥಲವ ಕುರಿತು ನೂರೊಂದು ತೆರನಾಯಿತ್ತು,
ಕರಣವ ಕುರಿತು ಇನ್ನೂರ ಹದಿನಾರಾಯಿತ್ತು,
ಇಂತೀ ಪಸರಿಸಿದ ಪರಬ್ರಹ್ಮವೇ ಏಕಮಯವಾಗಿ ನಿಂದುದಕ್ಕೆ ದೃಷ್ಟ :
ಲಿಂಗಮಧ್ಯೇ ಜಗತ್ಸರ್ವಂ ತ್ರೈಲೋಕ್ಯಂ ಸಚರಾಚರಂ ।
ಲಿಂಗಹ್ಯಾತ್ ಪರಂ ನಾಸ್ತಿ ತಸ್ಮಾಲ್ಲಿಂಗಂ ಪ್ರಪೂಜಯೇತ್ ॥
ಇಂತಪ್ಪ ಲಿಂಗವೆ ನೀನಲಾ, ಬಸವಪ್ರಿಯ ಕೂಡಲಚೆನ್ನಸಂಗಮದೇವಾ,
ಮಾಂ ತ್ರಾಹಿ, ತ್ರಾಹಿ ಕರುಣಾಕರನೆ. ॥ ೧೩ ॥

### ೮೪೪

ಅತ್ತಿಗೆ ಸತ್ತಳು, ನಾದಿನಿ ಮೊರೆಯಲಿಲ್ಲ.
ಅತ್ತೆಯ ಕಣ್ಣು ಅರಯಿತ್ತು, ಮಾವನ ಕಾಲು ಮುರಿಯಿತ್ತು.
ಭಾವನ ಸಂದುಸಂದುವೆಲ್ಲ ಮುರಿದವು, ಮೈದುನನ ಮೈಯೆಲ್ಲ ಉರಿಯಿತ್ತು.
ಹಿತ್ತಿಲಗೋಡೆ, ಪಶ್ಚಿಮದ ಬಾಗಿಲು ಬಯಲಾಯಿತ್ತು.
ಇದ ನೋಡಿ ಕೂಡಿ, ನಾ ನಿಶ್ಚಿಂತ ಲಿಂಗೈಕ್ಯನಾದೆನಯ್ಯಾ,
ಬಸವಪ್ರಿಯ ಕೂಡಲಚೆನ್ನಬಸವಣ್ಣಾ. || ೧೪ ||

### ೮೪೫

ಅನ್ನ ಉದಕವ ಕೊಂಡೆಹೆನೆಂದಡೆ ಭೂಮಿಯ ಹಂಗು,
ಹೊನ್ನ ಹಿಡಿದೆಹೆನೆಂದಡೆ ಲಕ್ಷ್ಮಿಯ ಹಂಗು.
ಹೆಣ್ಣ ಹಿಡಿದೆಹೆನೆಂದಡೆ ಕಾಮನ ಹಂಗು.
ಹಾಲ ಕೊಂಡೆಹೆನೆಂದಡೆ ಹಸುವಿನ ಹಂಗು.
ಹೂಫಲಾದಿಗಳ ಕೊಂಡೆಹೆನೆಂದಡೆ ತರುಮರದ ಹಂಗು.
ತರಗೆಲೆಯ ಕೊಂಡೆಹೆನೆಂದಡೆ ವಾಯುವಿನ ಹಂಗು.
ಬಯಲಾಪೇಕ್ಷೆಯ ಕೊಂಡೆಹೆನೆಂದಡೆ ಆಕಾಶದ ಹಂಗು.
ಇದನರಿದು, ಇವೆಲ್ಲವನು ಕಳೆದು,
ವಿಶ್ವಬ್ರಹ್ಮಾಂಡಕ್ಕೆ ನಡೆನುಡಿ ಚೈತನ್ಯವಾದ ಜಂಗಮಲಿಂಗದ ಪಾದವಿಡಿದು,
ಅವರು ಬಿಟ್ಟ ಪ್ರಸಾದವ, ಉಟ್ಟ ಮೈಲಿಗೆಯ, ಉಗುಳ ತಾಂಬೂಲವ,
ಈ ತ್ರಿವಿಧವ ಕೊಂಡೆನ್ನ ಭವಂ ನಾಸ್ತಿಯಾಯಿತ್ತು.
ಮರ್ತ್ಯಲೋಕದ ಮಹಾಗಣಂಗಳು ಸಾಕ್ಷಿಯಾಗಿ,
ದೇವಲೋಕದ ದೇವಗಣಂಗಳು ಸಾಕ್ಷಿಯಾಗಿ,
ನಾ ನಿಜಮುಕ್ತನಾದೆನಯ್ಯಾ, ನೀವು ಸಾಕ್ಷಿಯಾಗಿ,
ಬಸವಪ್ರಿಯ ಕೂಡಲಚೆನ್ನ ಸಂಗನಬಸವಣ್ಣಾ. || ೧೫ ||

### ೮೪೬

ಅನ್ನವನ್ನಿಕ್ಕಿದರೇನು ? ಹೊನ್ನ ಕೊಟ್ಟರೇನು ?
ಹೆಣ್ಣು ಕೊಟ್ಟರೇನು ? ಮಣ್ಣು ಕೊಟ್ಟರೇನು ? ಪುಣ್ಯ ಉಂಟೆಂಬರು.
ಅವರಿಂದಾದೊಡವೆ ಏನು ಅವರೀವುದಕ್ಕೆ ?
ಇದಕ್ಕೆ ಪುಣ್ಯವಾವುದು, ಪಾಪವಾವುದು ?
ನದಿಯ ಉದಕವ ನದಿಗೆ ಅರ್ಪಿಸಿ,
ತನತನಗೆ ಪುಣ್ಯ ಉಂಟೆಂಬ ಬಡಹಾರುವರಂತೆ,
ಸದಮಳ ಶಾಶ್ವತ ಮಹಾಘನಲಿಂಗವನರಿಯದೆ,
ಇವೇನ ಮಾಡಿದರೂ ಕಡೆಗೆ ನಿಷ್ಫಲವೆಂದಾತ,
ನಮ್ಮ ಬಸವಪ್ರಿಯ ಕೂಡಲಚೆನ್ನಬಸವಣ್ಣ. || ೧೬ ||

೮೪೭

ಅನುಭಾವ ಅನುಭಾವವೆಂದು, ನುಡಿದಾಡುತ್ತಿಪ್ಪಿರಿ.
ನಿಮ್ಮ ತನುವಿನಿಚ್ಛೆಗೆ ಅನುವಿಗೆ ಬಂದಂತೆ,
ಬಿನುಗರ ಮುಂದೆ ಬೊಗುಳಿಯಾಡುವ ನಿನಗಂದೆ ದೂರ.
ಅನುಭಾವವೆಂತೆಂದರೆ,
ನಮ್ಮ ಹಿಂದನರಿದು, ಮುಂದೆ ಲಿಂಗದಲ್ಲಿ ನೋಡುವ ಶರಣರ
ಅಂಗವ ಸೋಂಕಿ ನಾ ಬದುಕಿದೆ ಕಾಣಾ,
ಬಸವಪ್ರಿಯ ಕೂಡಲಚೆನ್ನಬಸವಣ್ಣಾ. || ೧೭ ||

೮೪೮

ಅಯ್ಯಾ ಅರಗಿನ ಮರದ ಮೇಲೆ ಗಿರಿ ಹುಟ್ಟಿತ್ತಯ್ಯಾ.
ಆ ಗಿರಿಯ ತಪ್ಪಲಲ್ಲಿ ಸಪ್ತಶರಧಿಗಳಿಪ್ಪವು.
ಆ ಶರಧಿಯ ನಡುವೆ, ತರು ಮರ ಗಿರಿ ಗಹ್ವರ ಖಗ ಮೃಗಂಗಳಿಪ್ಪವು.
ಈ ಭಾರವ ತಾಳಲಾರದೆ,
ಅರಗಿನ ಮರದಡಿಯಲಿರ್ದ ಪರಮಜ್ಞಾನವೆಂಬ ಉರಿಯೆದ್ದು,
ಅರಗಿನ ಮರ ಕರಗಿ ಕುಸಿಯಿತ್ತು
ಗಿರಿ ನೆಲಕ್ಕೆ ಬಿದ್ದಿತ್ತು, ಸಪ್ತಶರಧಿಗಳು ಬತ್ತಿದವು.
ಅಲ್ಲಿರ್ದ ತರು ಮರ ಖಗ ಮೃಗಾದಿಗಳು ಗಿರಿಗಹ್ವರವೆಲ್ಲ ದಹನವಾದವು.
ಇದ ಕಂಡು, ನಾ ನಿಮ್ಮೊಳು ಬೆರಗಾಗಿ ನೋಡುತಿರ್ದೆನಯ್ಯಾ,
ಬಸವಪ್ರಿಯ ಕೂಡಲಚೆನ್ನಬಸವಣ್ಣಾ. || ೧೮ ||

೮೪೯

ಅಯ್ಯಾ ಆರೂ ಇಲ್ಲದ ಅರಣ್ಯದಲ್ಲಿ, ನಾನಡಿಯಿಟ್ಟು ನಡವುತ್ತಿರ್ದೆನಯ್ಯಾ.
ಮುಂದೆ ಬರೆಬರೆ ಮಹಾಸರೋವರವ ಕಂಡೆ.
ಸರೋವರದೊಳಗೊಂದು ಹಿರಿಯ ಮೃಗವ ಕಂಡೆ.
ಆ ಮೃಗಕ್ಕೆ ಕೊಂಬುಂಟು ತಲೆಯಿಲ್ಲ,
ಬಾಯುಂಟು ಕಣ್ಣಿಲ್ಲ, ಕೈಯುಂಟು ಹಸ್ತವಿಲ್ಲ,
ಕಾಲುಂಟು ಹೆಜ್ಜೆಯಿಲ್ಲ, ಒಡಲುಂಟು ಪ್ರಾಣವಿಲ್ಲ,
ಇದ ಕಂಡು ನಾ ಹೆದರಿ, ಹವ್ವನೆ ಹಾರಿ, ಬೆದರಿ ಬಿದ್ದೆನಯ್ಯಾ.
ಆಗೆನ್ನ ಹೆತ್ತತಾಯಿ ಬಂದು ಎತ್ತಿ ಕುಳ್ಳಿರಿಸಿ,
ಚಿತ್ತಮೂಲಾಗ್ನಿಯ ಒತ್ತಿ ಉರುಹಿದರೆ, ಇವೆಲ್ಲವು ಸುಟ್ಟು ಬಟ್ಟಬಯಲಾದವು.
ಆ ಬಟ್ಟಬಯಲೊಳಗೆ ಅಡಿಯಿಟ್ಟು ನಡೆವಾಗ,
ಮುಂದೆ ಇಟ್ಟಡಿಯ ಬಾಗಿಲೊಳಗೆ ಮತ್ತೊಂದು ಮೃಗವ ಕಂಡೆ.
ಆ ಮೃಗಕ್ಕೆ ತಲೆಯುಂಟು ಕೊಂಬಿಲ್ಲ, ಕಣ್ಣುಂಟು ಬಾಯಿಲ್ಲ,
ಹಸ್ತವುಂಟು ಕೈಯಿಲ್ಲ, ಹೆಜ್ಜೆಯುಂಟು ಕಾಲಿಲ್ಲ, ಪ್ರಾಣವುಂಟು ಒಡಲಿಲ್ಲ,

ಇದ ಕಂಡು ನಾ ಅಪ್ಪಿಕೊಳಹೋದಡೆ, ಮುಟ್ಟದ ಮುನ್ನವೆ ಎನ್ನನೆ ನುಂಗಿತ್ತು.
ನುಂಗಿದ ಮೃಗ ಮಹಾಲಿಂಗದಲ್ಲಿಯೆ ಅಡಗಿತ್ತು,
ಬಸವಪ್ರಿಯ ಕೂಡಲಚೆನ್ನಬಸವಣ್ಣಾ. ॥ ೧೯ ॥

೮೫೦

ಅಯ್ಯಾ ಎನಗೆ ಬಸವಪ್ರಿಯನೆಂದರೂ ನೀನೆ,
ಕೂಡಲ ಚೆನ್ನಬಸವಣ್ಣನೆಂದರೂ ನೀನೆ,
ಗುರುವೆಂದರೂ ನೀನೆ, ಲಿಂಗವೆಂದರೂ ನೀನೆ,
ಜಂಗಮವೆಂದರೂ ನೀನೆ, ಪ್ರಸಾದವೆಂದರೂ ನೀನೆ.
ಅದೇನು ಕಾರಣವೆಂದರೆ,
ನೀ ಮಾಡಲಾಗಿ ಅವೆಲ್ಲವು ನಾಮರೂಪಿಗೆ ಬಂದವು.
ಅದು ಕಾರಣ, ನಾನೆಂದರೆ ಅಂಗ, ನೀನೆಂದರೆ ಪ್ರಾಣ.
ಈ ಉಭಯವನು ನೀವೆ ಅರುಹಿದಿರಾಗಿ,
ಇನ್ನು ಭಿನ್ನವಿಟ್ಟು ನೋಡಿದೆನಾದಡೆ, ಚನ್ನಮಲ್ಲೇಶ್ವರ ನೀವೆ ಬಲ್ಲಿರಿ.
ಎಮ್ಮ ಬಸವಪ್ರಿಯ ಕೂಡಲಚೆನ್ನಬಸವಣ್ಣನಲ್ಲಿ ಏಕವಾದ ಕಾರಣ.
ಎನಗೆ ಭವವಿಲ್ಲ, ಬಂಧನವಿಲ್ಲ, ಅದಕ್ಕೆ ನೀವೇ ಸಾಕ್ಷಿ. ॥ ೨೦ ॥

೮೫೧

ಅಯ್ಯಾ ಎನ್ನಂಗದ ಮೇಲಿಪ್ಪ ಲಿಂಗವು ಕರ್ಪುರದಂತಾಯಿತ್ತು.
ಎನ್ನ ಪ್ರಾಣದ ಮೇಲಿಪ್ಪ ಲಿಂಗವು ಪರಂಜ್ಯೋತಿಯಂತಾಯಿತ್ತು.
ಎನ್ನ ನಿಃಪ್ರಾಣದ ಮೇಲಿಪ್ಪ ಲಿಂಗವು ನಿರಂಜನದಂತಾಯಿತ್ತು.
ಈ ತ್ರಿವಿಧವು ಏಕವಾದ ಭೇದವ ಹೇಳಿಹೆನು ಕೇಳಿರಣ್ಣಾ!
ಎನ್ನ ಅಂಗದ ಮೇಲಿದ್ದ ಕರ್ಪುರದಂತಿರ್ದ ಲಿಂಗ,
ಪ್ರಾಣದ ಮೇಲಿಪ್ಪ ಪರಂಜ್ಯೋತಿ ಲಿಂಗವ ಬೆರೆಯಿತ್ತು.
ಎನ್ನ ಪ್ರಾಣದ ಮೇಲಿಪ್ಪ ಪರಂಜ್ಯೋತಿ ಲಿಂಗ,
ನಿಃಪ್ರಾಣದ ಮೇಲಿಪ್ಪ ನಿರಂಜನ ಲಿಂಗವ ಬೆರೆಯಿತ್ತು.
ಈ ತ್ರಿವಿಧವು ಏಕವಾದ ಮೇಲೆ, ಒಂದಲ್ಲದೆ ಎರಡುಂಟೆ ?
ಇದಕ್ಕೆ ಸಂದೇಹ ಬೇರಿಲ್ಲವಯ್ಯಾ,
ಬಸವಪ್ರಿಯ ಕೂಡಲಚೆನ್ನಬಸವಣ್ಣಾ. ॥ ೨೧ ॥

೮೫೨

ಅಯ್ಯಾ ಎನ್ನಂಗದಲ್ಲಿಪ್ಪ ಅರುವೆಯ ಕಂಡು, ತೆಗೆದೆನ್ನ ಲಿಂಗಕ್ಕೆ ಹೊದ್ದಿಸಿ,
ಆ ಲಿಂಗದಲ್ಲಿಪ್ಪ ಅರುವೆಯ ಕಂಡೆನ್ನ ಕಂಗಳು ನುಂಗಿತ್ತು,
ಕಂಗಳೊಳಗಣ ತಿಂಗಳ ತಿರುಳ ಮಂಗಳದ ಮಹಾಬೆಳಗಿನ
ಶೃಂಗಾರದೊಳು ನಾನೋಲಾಡುತಿರ್ದೆನಯ್ಯಾ,
ಬಸವಪ್ರಿಯ ಕೂಡಲಚೆನ್ನಬಸವಣ್ಣಾ. ॥ ೨೨ ॥

೮೫೩

ಅಯ್ಯಾಎನ್ನ ಗುರು ಎನಗೆ ಉಪದೇಶವ ಮಾಡಿದ
ಭೇದವ ಎಲ್ಲ ಗಣಂಗಳು ಕೇಳಿ.
ಮಲತ್ರಯಂಗಳ ಹರಿದು, ಕರ್ಮೇಂದ್ರಿಯಂಗಳ ಜ್ಞಾನೇಂದ್ರಿಯ ಮಾಡಿ,
ಕಾಯ ಜೀವ ಪ್ರಾಣ ಈ ತ್ರಿವಿಧವರತು ಭೇದವನರುಹಿಸಿದ.
ಉರಸ್ಥಲದ ಪರಂಜ್ಯೋತಿಲಿಂಗವ ಎನ್ನ ಕರಸ್ಥಲಕ್ಕೆ ಕೊಟ್ಟರು.
ಆ ಗುರು ಕೊಟ್ಟ ಲಿಂಗವೆಂಬ ದರ್ಪಣವ ನೋಡಿ,
ಎನ್ನ ಮನೆವೆಂಬ ಸರ್ಪ ಆ ದರ್ಪಣದಲ್ಲಿ ಲೀಯವಾಯಿತ್ತು,
ಇದು ಕಾರಣ, ಎನ್ನ ರೂಪೆಲ್ಲ ಉರಿಯುಂಡ ಕರ್ಪುರದಂತಾಯಿತ್ತು,
ಆಲಿ ನುಂಗಿದ ನೋಟದಂತಾಯಿತ್ತು,
ಪುಷ್ಪ ನುಂಗಿದ ಪರಿಮಳದಂತೆ ಬಯಲು ನುಂಗಿದ ಬ್ರಹ್ಮಾಂಡದಂತೆ,
ಅಂಗಲಿಂಗ ಸಂಗಸಂಯೋಗವಾದ ಭೇದ.
ಇದ ಹಿಂಗದೆ ಶರಣ ಸಂಗವ ಮಾಡಿದವರಂಘ್ರಿಯಲ್ಲಿ ಐಕ್ಯವಾದೆನಯ್ಯಾ,
ಬಸವಪ್ರಿಯ ಕೂಡಲಚೆನ್ನಬಸವಣ್ಣಾ,
ಇದನು ಕಂಗಳ ಪಟಲ ಹರಿದ ಲಿಂಗೈಕ್ಯರೇ ಬಲ್ಲರು. ॥ ೨೩ ॥

೮೫೪

ಅಯ್ಯಾ ಎನ್ನ ತಂದೆ ತಾಯಿಗಳು
ತಮ್ಮ ಕಂದನಪ್ಪ ಶಕ್ತಿಯ ಕೈಲೆಡೆಗೊಟ್ಟು ಕಳುಹಿದಡೆ,
ಎನ್ನ ಇಲ್ಲಿಗೆ ತಂದು ಮದುವೆಯಂ ಮಾಡಿ,
ಮುಗ್ಧನಪ್ಪ ಗಂಡನ ಕೊರಳಲ್ಲಿ ಕಟ್ಟಿ,
ಎನ್ನ ಅತ್ತೆ ಮಾವಂದಿರ ವಶಕ್ಕೆ ಕೊಟ್ಟರು.
ಎಮ್ಮತ್ತೆ ಮಾವಂದಿರ ಊರ ಹೊಕ್ಕರೆ, ಕತ್ತಲೆಯಲ್ಲದೆ ಬೆಳಗಿಲ್ಲ,
ಎಮ್ಮತ್ತೆ ಮಾವಂದಿರ ಮನೆಯ ಹೊಕ್ಕರೆ,
ಅತ್ತಿಗೆ ನಾದಿನಿ ಭಾವ ಮೈದುನ ಇವರು ನಾಲ್ವರು
ಎನ್ನ ಗಂಡನ ತಲೆಯೆತ್ತಿ ನೋಡಲೀಸರು.
ಹಟ್ಟಿಯಲಿಪ್ಪ ಶುನಕ ಅಡಿಯಿಟ್ಟು ನಡೆಯಲೀಸವು.
ಸುತ್ತಲಿಹ ಆನೆ ಕುದುರೆ ತೊತ್ತಳದುಳಿವುತಿಪ್ಪವು.
ಒತ್ತೊತ್ತಿನ ಬಾಗಿಲವರು ಎನ್ನ ಇತ್ತಿತ್ತ ಹೊರಡಲೀಸರು.
ಸುತ್ತಲಿಹ ಕಾಲಾಳ ಪ್ರಹರಿ, ಮೊತ್ತದ ಸರವರ
ಈ ಮುತ್ತಿಗೆಗೊಳಗಾಗಿ ನಾ ಸತ್ತು ಹುಟ್ಟುತಿರ್ದೆನಯ್ಯಾ,
ಆಗ ಎನ್ನ ಹೆತ್ತತಾಯಿ ಬಂದು
ತತ್ವವೆಂಬ ತವರುಮನೆಯ ಹಾದಿ ತೋರಿದಡೆ,
ಇತ್ತ ತಾ ನೋಡಿ ಎಚ್ಚತ್ತು, ಎನ್ನ ಚಿಕ್ಕಂದಿನ ಗಂಡನ ನೋಡಿದೆ.

ಎಮ್ಮಿಬ್ಬರ ನೋಟದಿಂದ ಒಂದು ಶಿಶು ಹುಟ್ಟಿತ್ತು.
ಆ ಶಿಶು ಹುಟ್ಟಿದಾಕ್ಷಣವೆ ಎಮ್ಮಿಬ್ಬರ ನುಂಗಿತ್ತು.
ನುಂಗಿದ ಶಿಶು ತಲೆಯೆತ್ತಿ ನೋಡಲು,
ಎಮ್ಮತ್ತೆಮಾವಂದಿರಿಬ್ಬರು ಹೆದರಿ ಬಿದ್ದರು.
ಅತ್ತಿಗೆ ನಾದಿನಿ ಭಾವ ಮೈದುನ ಇವರು ನಾಲ್ವರು ಎತ್ತಲೋ ಓಡಿಹೋದರು.
ಈ ಹಟ್ಟಿಯಲ್ಲಿಪ್ಪ ಶುನಕ ಸುತ್ತಲಿಹ ಆನೆ ಕುದುರೆ
ಒತ್ತೊತ್ತಿನ ಬಾಗಿಲವರು,
ಸುತ್ತಲಿಹ ಕಾಲಾಳ ಪ್ರಹರಿ ಮೊತ್ತದ ಸರವರ
ಹೊತ್ತಿ ನಿಂದುರಿದು,
ನಾ ಸುತ್ತಿ ನೋಡಿದರೆ ಎಲ್ಲಿಯೂ ಬಟ್ಟಬಯಲಾಗಿರ್ದಿತ್ತು ಕಾಣಾ.
ಬಸವಪ್ರಿಯ ಕೂಡಲಚೆನ್ನಬಸವಣ್ಣ. ॥ ೨೪ ॥

೮೫೫

ಅಯ್ಯಾ, ಎನ್ನ ಬಾಳುವೆಯಲ್ಲಿ ಹೇಳದೆ ಕೇಳದೆ,
ಒಬ್ಬ ಕಾಳರಕ್ಕಸಿ ನುಂಗಿದಳಯ್ಯ.
ಆ ಬಾಳುವೆಗೋಸುಗ ಕಾಳರಕ್ಕಸಿಯ ಬಾಯೊಳಗೆ ಸಿಲ್ಕಿದೆನಯ್ಯಾ.
ಆ ಕಾಳರಕ್ಕಸಿ ಆವಾಗ ಅಗಿದಾಳೆಂದರಿಯೆ, ಆವಾಗ ಉಗಿದಾಳೆಂದರಿಯೆ.
ಆ ಕಾಳರಕ್ಕಸಿಯ ಬಾಯಿಂದವೆ ಹೊರಟು
ಆ ಬಾಳುವೆಯನಲ್ಲಿಯೆ ಬಿಟ್ಟು, ಆ ಕಾಳರಕ್ಕಸಿಯ ಬಾಯಿಂದಲೆ ಹೊರವಂಟು
ಆ ಮಹಾಜಾಣನಾಳುವ ಪುರವ ಹೊಕ್ಕೆ.
ಆ ಜಾಣನಾಳುವ ಪುರದೊಳಗೆ,
ಕಾಣಬಾರದುದನೆ ಕಂಡೆ, ಕೇಳಬಾರದುದುನೆ ಕೇಳಿದೆ.
ಕದಳಿಯನೆ ದಾಂಟಿದೆ, ಜ್ಞಾನಜ್ಯೋತಿಯ ಕಂಡೆ.
ತಾನು ತಾನಾಗಿಪ್ಪ ಮಹಾಬೆಳಗಿನೊಳು ನಾನು ಓಲಾಡುತ್ತಿಪ್ಪೆನಯ್ಯ,
ಬಸವಪ್ರಿಯ ಕೂಡಲಚೆನ್ನಬಸವಣ್ಣಾ ॥ ೨೫ ॥

೮೫೬

ಅಯ್ಯಾ ಏನು ಏನೂ ಇಲ್ಲದಂದು, ಧರೆ ಬ್ರಹ್ಮಾಂಡಗಳು ಇಲ್ಲದಂದು,
ಸಚರಾಚರ ರಚನೆಗೆ ಬಾರದಂದು
ಅಂದು ನೀವಿಪ್ಪ ಭೇದವ ಎನಗೆ ತೋರಿದರಾಗಿ.
ಅದು ಹೇಗೆಂದರೆ : ನಾನು ಪುಷ್ಪದ ಹಾಗೆ, ನೀವು ಪರಿಮಳದ ಹಾಗೆ,
ನಾನಾಲಿಯ ಹಾಗೆ, ನೀವು ನೋಟದ ಹಾಗೆ,
ನಾ ಬ್ರಹ್ಮಾಂಡದ ಹಾಗೆ, ನೀವು ಬಯಲಿನ ಹಾಗೆ,
ಒಳಹೊರಗೆ ಪರಿಪೂರ್ಣವಾಗಿಪ್ಪಿರಿಯಾಗಿ,
ಆ ಭೇದವನು ಎನಗೆ ನೀವೆ ಅರುಹಿದಿರಾಗಿ.

ಉರಿ ಕರ್ಪುರದ ಸಂಯೋಗದಂತೆ ಎರಡೂ ಒಂದೆ ಎಂಬ ಭೇದವ
ಎನ್ನ ಗುರು ತಂದೆ ನೀವು ತೋರಿದಿರಲ್ಲ.
ಚೆನ್ನಮಲ್ಲೇಶ್ವರ ಬಸವಪ್ರಿಯ ಕೂಡಲಚೆನ್ನಬಸವಣ್ಣಾ,
ನೀವೆನ್ನ ಪರಮಾರಾಧ್ಯರಾದ ಕಾರಣ. ॥ ೨೮ ॥

೮೫೭

ಅಯ್ಯಾ ಧರೆಯ ಮೇಲೆ ಹುಟ್ಟಿದವರೆಲ್ಲ
ವಾಕ್ಯಜಾಲವ ಕಲಿತುಕೊಂಡು, ಅನುಭಾವವ ಬಲ್ಲವೆಂದು ನುಡಿವರು.
ಅನುಭಾವವೆಂತಿಪ್ಪುದೆಂದರಿಯರು.
ತೂರ್ಯಾತೂರ್ಯ ನುಡಿಯ ಪರಾತ್ಪರದ ನುಡಿ ಎಂದು
ಹರಶರಣರ ವಾಕ್ಯವ ಕಲಿತುಕೊಂಡು ನುಡಿದಾಡುವರು.
ತೂರ್ಯಾತೂರ್ಯವೆಂಬುದು ನಾಮರೂಪಿಗುಂಟೆ ?
ಪರಾತ್ಪರವೆಂಬ ವಾಕ್ಯ ಮನಸಿಂಗುಂಟೆ ?
ಹೆಸರಿಗೆ ಬಾರದ ಘನವೆಂದು ನೀವೆ ಹೇಳುತಿರ್ದು
ಮತ್ತೆ ಹೆಸರಿಗೆ ತಂದು ನುಡಿದಾಡುವರು.
ಇದು ಹುಸಿಯೋ, ದಿಟವೊ ? ಇದು ಹಸುಮಕ್ಕಳಾಟ.
ಸಸಿನೆ ನೆನೆದು ಬದುಕಿದೆ, ಬಸವಪ್ರಿಯ ಕೂಡಲಚೆನ್ನಬಸವಣ್ಣಾ. ॥ ೨೯ ॥

೮೫೮

ಅಯ್ಯಾ ನಾ ಉತ್ತರವನೇರಿ ನೋಡಲಾಗಿ,
ಊರೊಳಗಣ ಉಲುಹೆಲ್ಲ ನಿಂದಿತ್ತು.
ಪಶ್ಚಿಮಕ್ಕಿಳಿದು ನೋಡಲಾಗಿ, ಪ್ರಾಣ ಪವನನ ಸುಳುಹು ನಿಂದಿತ್ತು.
ಪೂರ್ವವ ಮೆಟ್ಟಿ ನೋಡಲಾಗಿ, ಆರು ನೆಲೆ ಮೂರಾಗಿದ್ದವು.
ಅಯ್ಯಾ ನಾ ದಕ್ಷಿಣಕ್ಕೆ ಬಂದು ನೋಡಲಾಗಿ
ಈರೇಳು ಭುವನವು ಕುಕ್ಷಿಯೊಳಗೆ ನಿಕ್ಷೇಪವಾಗಿದ್ದಿತು.
ಅದು ಹೇಗೆಂದಡೆ :
ಇಹಲೋಕವು ತನ್ನೊಳಗೆ, ಪರಲೋಕವು ತನ್ನೊಳಗೆ.
ಸಚರಾಚರವೆಲ್ಲ ತನ್ನೊಳಗೆ, ಶಿವಶಕ್ತಿಯು ತನ್ನೊಳಗೆ,
ಭುವನಾದಿ ಭುವನಂಗಳು ತನ್ನೊಳಗೆ.
ಅದು ಹೇಗೆಂದಡೆ :
ಅದಕ್ಕೆ ದೃಷ್ಟವ ಹೇಳಿಹೆನು, ಬಲ್ಲವರು ತಿಳಿದುನೋಡಿ.
'ಓಂ ಏಕಮೇವನದ್ವಿತೀಯ' ಎಂಬ ಶ್ರುತಿ ಕೇಳಿ ಬಲ್ಲಿರೆ.
ಇಂತಪ್ಪ ಮನಕ್ಕೆ ಒಂದಲ್ಲದೆ ಎರಡುಂಟೆ ?
ತಾನಲ್ಲದೆ ಅನ್ಯೋನ್ಯವಿಲ್ಲಾಯೆಂದು ಅರಿದ ಮೇಲೆ
ತನಗಿಂದ ಮುನ್ನ ಇವೇನಾದರು ಉಂಟೆ ?

ಇದು ಕಾರಣ, ನಮ್ಮ ದೇವನೊಬ್ಬನೆ.
ಬಸವಪ್ರಿಯ ಕೂಡಲಚೆನ್ನಬಸವಣ್ಣಾ, ಆತಂಗೆ ನಮೋ ನಮೋ ಎಂಬೆ. ||೨೮||

೮೫೯

ಅಯ್ಯಾ ನಾನು ದಿಟ್ಟಿಸಿ ನೋಡಿ ನಿಂದು ಬಟ್ಟಬಯಲ ಕಂಡೆ.
ಬಟ್ಟಬಯಲೊಳಗೊಂದು [ಮುಟ್ಟಬಾರದ] ಮೃಗವ ಕಂಡೆ.
ಆ ಮೃಗ ಹೋದ ಹೆಜ್ಜೆಯ ಕಾಣಬಾರದು, ಮೇದ ಮೋಟನರಿಯಬಾರದು.
ಈ ಭೇದವ ನೋಡಿ ಸಾಧಿಸಿಕೊಂಡು ಬರುವನ್ನಕ್ಕ
ಆ ಮೃಗವೆನ್ನ ಬಲೆಗೊಳಗಾಯಿತ್ತು.
ಆ ಬಲೆಯೊಳಗಣ ಮೃಗದ ತಲೆಯ ಹಿಡಿದು, ನೆಲೆಗೆಟ್ಟು ಹೋದೆನಯ್ಯಾ.
ಬಸವಪ್ರಿಯ ಕೂಡಲಚೆನ್ನಬಸವಣ್ಣಾ,
ಇದರನುವ ಬಲ್ಲ ಶರಣರೆಲ್ಲರೂ ತಲೆಹೊಲನ ಹತ್ತಿ ಬಯಲಾದರು.
ಇದಕ್ಕೆ ನೀವೇ ಸಾಕ್ಷಿ. || ೨೯ ||

೮೬೦

ಅಯ್ಯಾ ನಾ ಹುಟ್ಟಿದಂದಿಂದ ಎನ್ನ ಹೊಟ್ಟೆಗೆ ಕಾಣದೆ,
ಮೂರುವಟ್ಟೆಯನೆ ಕಾದಿರ್ದೆನಯ್ಯಾ.
ಹೊಟ್ಟೆಯ ಒಡೆಯರು ಹೊಟ್ಟೆಯ ಹೊಡೆದುಹೋದರೆ,
ಎನ್ನ ಹೊಟ್ಟೆ ಏಕೆ ತುಂಬಿತ್ತೆಂದು ನೋಡಿದರೆ,
ಅಲ್ಲಿ ಬಟ್ಟಬಯಲಾಗಿರ್ದಿತ್ತು ಕಾಣಾ,
ಬಸವಪ್ರಿಯ ಕೂಡಲಚೆನ್ನಬಸವಣ್ಣಾ || ೩೦ ||

೮೬೧

ಅಯ್ಯಾ ನಿಮ್ಮ ಶರಣರು ವೇಷವ ತೋರಿ ಗ್ರಾಸವ ಬೇಡುವರಲ್ಲ.
ದೇಶವ ತಿರುಗಿ ಕಲಿತಮಾತ ನುಡಿವರಲ್ಲ,
ಲೇಸಾಗಿ ನುಡಿವರು, ಆಶೆ ಇಲ್ಲದೆ ನಡೆವರು, ರೋಷವಿಲ್ಲದೆ ನುಡಿವರು.
ಹರುಷವಿಲ್ಲದೆ ಕೇಳುವರು, ವಿರಸವಿಲ್ಲದೆ ಮುಟ್ಟುವರು.
ಸರಸವಿದ್ದಲ್ಲಿಯೇ ವಾಸಿಸುವರು.
ಇಂತಪ್ಪ ಬೆರಸಿ ಬೇರಿಲ್ಲದ ನಿಜೈಕ್ಯಂಗೆ ನಮೋ ನಮೋ ಎಂಬೆ,
ಬಸವಪ್ರಿಯ ಕೂಡಲಚೆನ್ನಬಸವಣ್ಣ.
ಇಂತಪ್ಪ ಶರಣರ ನೆಲೆಯ ನಾನೆತ್ತ ಬಲ್ಲೆನಯ್ಯಾ ? || ೩೧ ||

೮೬೨

ಅಯ್ಯಾ ನೀನಿಲ್ಲದಿದ್ದರೆ ಎನಗೆ ಮುನ್ನ ನಾಮ ರೂಪುಂಟೆ ?
ನೀ ಮಾಡಲಾನಾದೆನಯ್ಯಾ.
ಅದು ಕಾರಣವಾಗಿ ನಾ ಬಂದ ಬಂದ ಭವಾಂತರದಲ್ಲಿ ನೀವು ಬರುತ್ತಿದ್ದಿರಾಗಿ,

ಇನ್ನೆನ್ನ ಗುರುತಂದೆಗೆ ಬಳಲಿಕೆ ಆಗುತಿದೆ ಎಂದು ನಾ ನೋಡಲಾಗಿ,
ನೀವೆನ್ನ ಭವವ ಕೊಂಡಿರಾಗಿ.
ಇದು ಕಾರಣ, ಅಂದಂದಿಗೆ ನೂರು ತುಂಬಿತ್ತೆಂಬ ಭೇದವನು ನೀವೆ ತೋರಿದಿರಿ.
ಇದನರಿದರಿದು ನಾನು ಹಿಂದಣ ಭವವ ಹರಿದು,
ಮುಂದಣ ಭಾವ ಬಯಕೆಯ ಮುಗ್ಧವ ಮಾಡಿ, ಹೊಂದದ
ಬಟ್ಟೆಯನೆ ಹೊಂದಿ,
ಸದಮಳಾನಂದ ಚೆನ್ನಮಲ್ಲೇಶ್ವರನ ನಂಬಿ ಕೆಟ್ಟು, ಬಟ್ಟಬಯಲಾದೆನಯ್ಯಾ
ಬಸವಪ್ರಿಯ ಕೂಡಲಚೆನ್ನಬಸವಣ್ಣಾ. || ೩೨ ||

೮೬೩

ಅಯ್ಯಾ ಲಿಂಗವ ಪೂಜಿಸಿಹೆನೆಂದು ಅಂಗದ ಕುರುಹ ಮರೆದೆ.
ಜಂಗಮವ ಪೂಜಿಸಿಹೆನೆಂದು ಪ್ರಾಣದ ಕುರುಹ ಮರೆದೆ.
ಪ್ರಸಾದವ ಕೊಂಡಿಹೆನೆಂದು ಪರವ ಮರೆದೆ.
ಈ ತ್ರಿವಿಧದ ಭೇದವನು ಶ್ರುತಿ ಸ್ಮೃತಿಗಳರಿಯವು.
ಹರಿ ಹರ ಬ್ರಹ್ಮದೇವ ದಾನವ ಮಾನವರು ಅರಿಯರು.
ನಮ್ಮ ಶರಣರೆ ಬಲ್ಲರು.
ಇವ ಬಲ್ಲ ಶರಣ ಚೆನ್ನಮಲ್ಲೇಶ್ವರ ಹೋದ ಹಾದಿಯಲ್ಲದೆ
ಎನಗೆ ಬೇರೊಂದು ಹಾದಿ ಇಲ್ಲವಯ್ಯಾ, ಬಸವಪ್ರಿಯ ಕೂಡಲಚೆನ್ನ ಬಸವಣ್ಣಾ.
ಇದಕ್ಕೆ ಮರ್ತ್ಯಲೋಕದ ಮಹಾಗಣಂಗಳೇ ಸಾಕ್ಷಿ. || ೩೩ ||

೮೬೪

ಅಯ್ಯಾ, ಶಿವಭಕ್ತರು ನುಡಿವಲ್ಲಿ ಜಾಣತನದಿಂದ ನುಡಿವರು.
ನೀಡುವಲ್ಲಿ ಭೇದದಿಂದ ನೀಡುವರು.
ಕೊಡುವಲ್ಲಿ ಸತ್ಪಾತ್ರಕ್ಕೆ ಕೊಡುವರು.
ಬಿಡುವಲ್ಲಿ ಶರಣಗೋಷ್ಠಿಯ ಬಿಡುವರು.
ಪೊಡವಿಯೊಳಿವರ ಭಕ್ತರೆನ್ನಬಹುದೆ ?
ಅದಂತಿರಲಿ, ಎನ್ನೊಡೆಯ ಬಸವಪ್ರಿಯನಡಿಗಳ ನೆನೆವ ಶರಣ ಲಿಂಗೈಕ್ಯರು
ಮೆಡುವ ಪಡುಗ ಪಾದರಕ್ಷೆಯ ಕಾಯ್ದಿರಿಸಯ್ಯ, ಚೆನ್ನಬಸವಣ್ಣಾ. || ೩೪ ||

೮೬೫

ಅಯ್ಯಾ ಹಾಳೂರೊಳಗೊಂದು ಹಗವ ಕಂಡೆನಯ್ಯಾ.
ಹಗದ ಮೇಲೊಂದು ಬಾವಿ ಹುಟ್ಟಿತ್ತು.
ಹಗದ ಬಾವಿಯ ನಡುವೆ ವಡಬಾಗ್ನಿಯೆಂಬ ಕಿಚ್ಚು ಹುಟ್ಟಿತ್ತು.
ಆ ಹಗದ ಧಾನ್ಯವ ತೆಗೆತೆಗೆದು, ಬಾವಿಯ ನೀರ ಮೊಗೆಮೊಗೆದು,
ವಡಬಾಗ್ನಿಯೆಂಬ ಕಿಚ್ಚಿನೊಳಗೆ ಅಡಿಗೆಯ ಮಾಡಿಕೊಂಡು,

ಉಂಡು ಉಟ್ಟಾಡಬಂದರು, ಹಲಬರು ಕೆಲಬರು.
ಉಂಡುಟ್ಟಾಡಿ ಗಂಡು ಗೆಲವುದ ಕಂಡು ತಾಳಲಾರದೆ,
ಕುಂಡಲಿ ಅಗ್ನಿಯ ಎಬ್ಬಿಸಿ ಉರುಹಿದಡೆ, ಇವರೆಲ್ಲರೂ ದಹನವಾದರು.
ಆ ಹಗವು ಬೆಂದಿತ್ತು, ಬಾವಿಯು ಬತ್ತಿತ್ತು,
ವಡಬಾಗ್ನಿಯೆಂಬ ಕಿಚ್ಚು ಕೆಟ್ಟಿತ್ತು.
ಇದಕಂಡು ನಾ ನಿಮ್ಮೊಳಚ್ಚೊತ್ತಿದಂತಿರ್ದೆನಯ್ಯಾ,
ಬಸವಪ್ರಿಯ ಕೂಡಲಚೆನ್ನಬಸವಣ್ಣಾ. || ೩೫ ||

೮೬೬

ಅಯ್ಯಾ, ಹುಟ್ಟಿದ ಮನುಜರೆಲ್ಲ
ಹೊಟ್ಟೆ, ಹೊಟ್ಟೆ ಎಂದು ಹೊಟ್ಟೆಗೆ ಹಸಿದು, ಹೊಟ್ಟೆಗೆ ಕುದಿದು,
ಹೊಟ್ಟೆಗೆ ಹೊರೆದು, ಹೊಟ್ಟೆಗೆ ತುಂಬಿ,
ತಾವು ಬಂದ ಬಟ್ಟೆಯನೆ ಅರಿಯದೆ ಕೆಟ್ಟಿತ್ತು ಜಗವೆಲ್ಲ.
ಅದಂತಿರಲಿ. ಇನ್ನು ಆ ಶರಣರ ಮತವೆಂತೆಂದರೆ,
ಹೊಟ್ಟೆ ಎಂಬುದನೆ ಮೆಟ್ಟಿಟ್ಟು ತೂರಿ,
ಅಲ್ಲಿದ್ದ ಗಟ್ಟಿಯಾಗಿರ್ದ ಪ್ರಸಾದವನೆ ಊಟವೆಂದು ಹಿಡಿದು,
ಮುಟ್ಟ ನಿಮ್ಮೊಳೊಡವೆರೆದು, ಬಟ್ಟಬಯಲಾದರು ಕಾಣಾ,
ಬಸವಪ್ರಿಯ ಕೂಡಲಚೆನ್ನಬಸವಣ್ಣಾ. || ೩೬ ||

೮೬೭

ಅರಿವೆಂಬುದೆ ಆಚಾರ, ಆಚಾರವೆಂಬುದೆ ಅರಿವು.
ಅರಿವು ಆಚಾರದ ಸಂಗಷ್ಟದ ಕೂಟದ ಸ್ಥಲದಲ್ಲಿ ವಿಭೇದವೇ ಕ್ರೀ.
ಆ ಕ್ರೀಯೆ ವರ್ಮ, ಧರ್ಮ, ಅದೇ ಮುಕ್ತಿಗೆ ಸಾಧನ.
ಆ ಭಕ್ತಿಯೇ ಮುಕ್ತಿಸಾಧನ, ಆ ಮುಕ್ತಿಯೆ ಗುರುಪದಸಾಧನ.
ಗುರುಪದವೆ ಲಿಂಗಸಾಧನ, ಆ ಲಿಂಗಸಾಧನವೆ ಜಂಗಮಸಾಧ್ಯ.
ಆ ಜಂಗಮಸಾಧ್ಯವೆ ಪ್ರಸಾದಸಾಧ್ಯ.
ಆ ಪ್ರಸಾದಸಾಧ್ಯವೆ ಪರಸಾಧ್ಯ, ಆ ಪರಸಾಧ್ಯವಾದ ಬಳಿಕ,
ಕ್ರಿಯಾ ಕರ್ಮ ಧರ್ಮ ಭಕ್ತಿಯುಕ್ತಿಮುಕ್ತಿ
ಗುರು ಲಿಂಗ ಜಂಗಮ ಪ್ರಸಾದ ಗಣತ್ವವೆಲ್ಲವು ಉಂಟು.
ಇಂತೀ ಸರ್ವಾಂಗವೇದ್ಯವಾದ ಮಹಾಮಹಿಮನ
ಹಿಡಿದನೆನ್ನಬಾರದು, ಬಿಟ್ಟನೆನ್ನಬಾರದು,
ಮುಟ್ಟಿದನೆನ್ನಬಾರದು, ತಟ್ಟಿದನೆನ್ನಬಾರದು.
ಸರ್ವಭೋಗ ಮುಕ್ತಿಸುಖದುಃಖಗಳೊಳಗೆ ಉಂಟೆನಬಾರದು,
ಇಲ್ಲೆನಬಾರದು.
ಅದೆಂತೆಂದಡೆ:

ಸರ್ವವೂ ಶಿವನಿಂದಲಾದವೆಂಬುದ ಕೇಳಿ ಬಲ್ಲಿರಿ.
ತನ್ನಿಂದಾದವರೊಳಗೆ ತಾನುಂಟಾಗಿ, ಇಲ್ಲವಾಗಿರ್ಪ ಭೇದವ ತಾನೆ ಬಲ್ಲ.
ಇದು ಕಾರಣ, ಶಿವನಾದ ಶರಣನ ಅಂತಿಂತೆಂದಡೆ,
ನಮ್ಮ ಬಸವಪ್ರಿಯ ಕೂಡಲಸಂಗಮದೇವ ಸಾಕ್ಷಿಯಾಗಿ
ನಾಯಕ ನರಕದಲ್ಲಿಕ್ಕುವ. ॥ ೩೭ ॥

೮೬೮

ಅವರನಕ ಕೂಳ ಇಡಿದ ಒಡಲಿಗೆ,
ಅದೆದು ಕುದಿದು, ಕೋಟಲೆಗೊಂಬುತಿದ್ದರು.
ಈ ಹದನನರಿಯದೆ ಕೆಡುತ್ತಿದ್ದೆಯಲ್ಲಾ ಎಂದು ತುದಿ ಹಿಡಿದು,
ತೆಗೆದುಕೊಂಡಾತ ಚೆನ್ನಮಲ್ಲೇಶ್ವರನಯ್ಯ.
ಆ ಒಡಲಗುಣದ ಕೆಡಿಸುವುದಕ್ಕೆ ಪ್ರಸಾದವೆಂಬ ಮದ್ದನಿಕ್ಕಿ.
ಸಲಹಿದಾತ ಚೆನ್ನಮಲ್ಲೇಶ್ವರನಯ್ಯ.
ಅಂಗಕ್ಕೆ ಆಚಾರ, ಮನಸ್ಸಿಗೆ ಅರುಹು,
ಕಂಗಳಿಗೆ ಲಿಂಗವ ತೋರಿದಾತ ಚೆನ್ನಮಲ್ಲೇಶ್ವರನಯ್ಯ.
ಇಂತು ಎನ್ನ ಭವವ ಕೊಂದಿಹೆನೆಂದು
ಗುರುಲಿಂಗಜಂಗಮ ಈ ತ್ರಿವಿಧವಾಗಿಯು ಸುಳಿದಾತ ಚೆನ್ನಮಲ್ಲೇಶ್ವರನಯ್ಯ.
ಇಂತಪ್ಪ ಚೆನ್ನಮಲ್ಲೇಶ್ವರನ ಶ್ರೀಪಾದವಿಡಿದು ಕೆಟ್ಟು ಬಟ್ಟಬಯಲಾದೆನಯ್ಯ.
ಬಸವಪ್ರಿಯ ಚೆನ್ನಮಲ್ಲೇಶ್ವರನ ಪಾದವ ಮುಟ್ಟಿ,
ಹುಟ್ಟುಗೆಟ್ಟುಹೋದೆನಯ್ಯ. ॥ ೩೮ ॥

೮೬೯

ಅವಲೋಹವ ಪರುಷ ಮುಟ್ಟಲು ಸುವರ್ಣವಾಗುತ್ತಿದೆ.
ಕಬ್ಬಿಣಕ್ಕೆ ಇದ್ದಲಿಯ ಹಾಕಿ ಅಗ್ನಿಯನಿಕ್ಕಿ,
ಕಾವುಗೊಳಲಾಗಿ, ಕರಗಿ ನೀರಾಗುತ್ತಿದೆ.
ಹಾಲಿಗೆ ನೀರ ಹೊಯ್ದರೆ ಅದು ಏರುವ ಭೇದವನಾರೂ ಅರಿಯರು.
ಶರಣರು ತನುವಿಡಿದಿದ್ದರೂ ಇದ್ದವರಲ್ಲ.
ಅದು ಹೇಗೆಂದರೆ, ಹಿಂದಣ ದೃಷ್ಟದ ಪರಿಯಲ್ಲಿ ಲಿಂಗವ ಹಿಡಿದಂಗಕ್ಕೆ
ಬೇರೊಂದು ಸಂಗಸುಖ ಉಂಟೆ ?
ಅದು ಕಾರಣ, ಸರ್ವಾಂಗಲಿಂಗಿಯಾ ಶರಣನು
ಮುಟ್ಟಿದ, ತಟ್ಟಿದ, ಕೇಳಿದ, ನೋಡಿದ, ನುಡಿದ, ಸೋಂಕಿದನೆನ್ನಬೇಡ.
ಅದು ಕಾರಣ,
ಕಬ್ಬಿಣ ನೀರುಂಡಂತೆ ಅರ್ಪಿತವ ಬಲ್ಲ ಐಕ್ಯಂಗೆ ಮೈಯೆಲ್ಲ ಬಾಯಿ.
ಇದರ ಬೇದವ, ನಮ್ಮ ಬಸವಪ್ರಿಯ ಕೂಡಲಚೆನ್ನಬಸವಣ್ಣನೆ ಬಲ್ಲ. ॥ ೩೯ ॥

೮೭೦

ಅವಿರಳ ಲಿಂಗವ ಕಂಡಿಹೆನೆಂದು ಅವರಿವರಲ್ಲಿನ್ನೇಸ ಕೇಳುವಿರಿ?
ಭವವಿರಹಿತ ಗುರುಲಿಂಗಜಂಗಮದೊಳು ತಾವೆ ಬೆರೆಯೆ,
ತಲ್ಲೀಯವಾಗಿಪ್ಪಲ್ಲಿಗೆ ಬಸವಪ್ರಿಯ ಕೂಡಲಚೆನ್ನಬಸವಣ್ಣಾ. ॥ ೪೦ ॥

೮೭೧

ಅಶನ ವಸನಕ್ಕಾಗಿ ಒಂದು ಪಶುವು ಹುಟ್ಟಿತ್ತು.
ತನ್ನ ಸುಖವನರಿಯಲಾಗಿ, ತನಗೊಂದು ಶಿಶು ಹುಟ್ಟಿತ್ತು.
ಆ ಶಿಶುವಿನ ಮೇಲಣ ಮೋಹದಿಂದ, ಮೊಲೆಯಲ್ಲಿ ಅಮೃತ ಹುಟ್ಟಿತ್ತು.
ಅಮೃತವ ಸೇವಿಸಿ, ಆ ಶಿಶುವು ನಲಿದಾಡುವುದ ಕಂಡು,
ನಾನದರ ಬೆಂಬಳಿವಿಡಿದು ಹೋಗಿ,
ಅದು ಕೊಂಬ ಅಮೃತವ ನಾ ಕೊಳ್ಳಲಾಗಿ,
ಪರಮಸುಖಪರಿಣಾಮ ತಲೆದೋರಿತ್ತು.
ಅದರ ನೆಲೆವಿಡಿದು, ತಲೆಹೊಲನನೇರಿ ನೋಡಲಾಗಿ,
ಉಲುಹು ಅಡಗಿತ್ತು. ಪುರುದಗಲಕೆ ನಿಂದಿತ್ತು.
ಇಳಿದುಬರುವುದಕ್ಕೆ ಹಾದಿಯ ಕಾಣದೆ,
ಅದರಲ್ಲಿಯೇ ನಿರ್ಮುಕ್ತನಾದೆನಯ್ಯಾ.
ಬಸವಪ್ರಿಯ ಕೂಡಲಚೆನ್ನಬಸವಣ್ಣಾ, ॥ ೪೧ ॥

೮೭೨

ಆಕಾಶವ ನೂಕುತ್ತಿಯ ಹಾಗೆ ಅಟಗೋಲ ಹಂಗುಂಟೆ ?
ಏಕ ಮನವ ನಿಲಿಸುವರೆ, ಬೇರೊಂದು ಸಾಕಾರ ಉಂಟೆ ?
ಬೇಕು ಬೇಡೆಂಬವೆರಡಳಿದವಂಗೆ, ಇಹಲೋಕದ ಹಂಗುಂಟೆ ?
ಈ ಜೋಕೆ ನಿಮ್ಮೊಳು ಏಕವಾಗಿಹ ಶರಣಂಗಲ್ಲದೆ, ಲೋಕದ
ಮಾನವರಿಗುಂಟೆ ?
ನಿಮ್ಮ ನೆಲೆಯನರಿವುದು, ಬಸವಪ್ರಿಯ ಕೂಡಲಚೆನ್ನಬಸವಣ್ಣಾ. ॥ ೪೨ ॥

೮೭೩

ಆಗುತಿವೆ ಉದಯ ಮಧ್ಯಾಹ್ನ ಅಸ್ತಮಾನ.
ಹೋಗುತಿವೆ ದಿನ ವಾರ ಮಾಸ ಸಂವತ್ಸರವು.
ಸಾವುತಿವೆ ಆಯುಷ್ಯ ಭಾಷೆ.
ಇವರೊಳು ಬೇಗದಿ ತಿಳಿದು ನೀಗಿ, ನಿಷ್ಪತ್ತಿಯಾದರೆ,
ಬಸವಪ್ರಿಯ ಕೂಡಲಚೆನ್ನಬಸವಣ್ಣಾ. ॥ ೪೩ ॥

೮೭೪

ಆಚಾರದ ಅರಿವು ಹೊರಗಾದ ಮೇಲೆ.
ಅಂಗದ ಮೇಲೆ ಲಿಂಗವಿದ್ದು ಫಲವೇನು?

ಕುರುಡನ ಕೈಯ ಕನ್ನಡಿ ಇದ್ದ ಹಾಗೆ,
ಬರಡಾವಿಗೆ ಶಿಶು ಹುಟ್ಟಿದ ಹಾಗೆ, ಕುರುಡಗೆ ಕಣ್ಣೆಬೇನೆ ಬಂದ ಹಾಗೆ,
ಕುರುಡಿಗೆ ಮಕ್ಕಳಾದ ಹಾಗೆ, ದೀನನ ಮನೆಯಲ್ಲಿ ಹೊನ್ನಿದ್ದ ಹಾಗೆ.
ಇವರೇನ ಮಾಡಿದರೇನು?
ತಮ್ಮ ಹಾನಿವೃದ್ಧಿಯನರಿಯದನ್ನಕ್ಕ, ಕಾಲ ಕಾಮಾದಿಗಳ ಬಾಯೊಳಗೆ ಸಿಲ್ಕಿ,
ಅಗಿದಗಿದು ತಿನಿಸಿಕೊಳುತಿಪ್ಪರಲ್ಲ
ಎನ್ನ ದೇವ ಬಸವಪ್ರಿಯ ಕೂಡಲಚೆನ್ನಬಸವಣ್ಣಾ. || ೪೪ ||

೮೭೫

ಆಚಾರದರಿವು ಆಗಮವ ಕೂಡಿಕೊಂಡಿಹುದು.
ವಿಚಾರದರಿವು ಶಾಸ್ತ್ರವ ಕೂಡಿಕೊಂಡಿಹುದು.
ಲಿಂಗಾಚಾರದರಿವು ಅಂಗಭೋಗವ ಕೂಡಿಕೊಂಡಿಹುದು.
ಆದಿ ವಿಚಾರದರಿವು ಜ್ಞಾನವ ಕೂಡಿಕೊಂಡಿಹುದು.
ಈ ಚತುರ್ವಿಧದೊಳಗೆ ಆವಂಗವೂ ಅಲ್ಲ. ಎಮ್ಮ ಶರಣರ ಪರಿ ಬೇರೆ.
ಅದೆಂತೆಂದರೆ; ಗುರು ಕರದಲ್ಲಿ ಹುಟ್ಟಿದರು, ಲಿಂಗದಲ್ಲಿ ಬೆಳೆದರು.
ಜಂಗಮದ ಸಂಗವ ಮಾಡಿದರು, ಪ್ರಸಾದದಲ್ಲಿ ಅಡಗಿದರು.
ಇದೀಗ ನಮ್ಮ ಶರಣರ ನಡೆನುಡಿ ಅರಿವು ಆಚಾರ ಲಿಂಗೈಕ್ಯ.
ಈ ಚತುರ್ವಿಧವು ಹೊರತಾಗಿ, ಅವರೊಬ್ಬರು ಸಾಧಿಸಿ ಎಂದರೆ,
ಸಾಧಕರಿಗೆ ಸಾಧ್ಯವಲ್ಲ, ಭೇದಕರಿಗೆ ಭೇದ್ಯವಲ್ಲ,
ಅರಿವಿಂಗೆ ಅಪ್ರಮಾಣು, ವಾಙ್ಮನಕ್ಕಗೋಚರ.
ಆಗಮ ಶಾಸ್ತ್ರಂಗಳು ಅರಸಿ ಕಾಣವು. ಇದು ಕಾರಣವಾಗಿ,
ಎಮ್ಮ ಶರಣರು ಗುರು, ಲಿಂಗ, ಜಂಗಮ, ಪ್ರಸಾದ
ಈ ಚತುರ್ವಿಧವಿಡಿದು ಅಚಲಪದವನೆಯ್ದಿದರು.
ಇದಕ್ಕೆ ನೀವೆ ಸಾಕ್ಷಿ, ಬಸವಪ್ರಿಯ ಕೂಡಲಚೆನ್ನಬಸವಣ್ಣ. || ೪೫ ||

೮೭೬

ಆಚಾರಲಿಂಗ ಗುರುಲಿಂಗ ಶಿವಲಿಂಗ
ಜಂಗಮಲಿಂಗ ಪ್ರಸಾದಲಿಂಗ ಮಹಾಲಿಂಗದೊಳು ಬೆರೆದರೆ,
ಬಸವಪ್ರಿಯ ಕೂಡಲಚೆನ್ನಬಸವಣ್ಣ. || ೪೬ ||

೮೭೭

ಆಟ ಕೋಟಲೆ ಎಂಬ ರಾಟಾಳವ ಮುರಿದು,
ನೋಟ ನುಡಿಗಳೆಂಬುವ ಸೂತ್ರವರಿದು,
ದಾಟಿ ಸಪ್ತಮದವೆಂಟು, ನೋಟ ಬೇಟದೊಳು ಲಿಂಗದೋಳು ಬೆರೆದಿದ್ದರೆ,
ಬಸವಪ್ರಿಯ ಕೂಡಲಚೆನ್ನಬಸವಣ್ಣ. || ೪೭ ||

೮೭೮

ಆಟದಲಿ ಕೆಲಹೊತ್ತುಗಳೆದು, ಕೂಟದಲಿ ಕೆಲಹೊತ್ತುಗಳೆದು,
ನೋಟದಲಿ ಕೆಲಹೊತ್ತುಗಳೆದು,
ಊಟದ ಹೊತ್ತಿಗೆ ಲಿಂಗವ ಕೂಡಿಹೆನೆಂಬವನೊಬ್ಬ,
ಊಟ ಮಾಟಕೂಟದಲ್ಲಿ ಕೋಟಲೆಗೊಳುತ್ತಿದ್ದೆನೆಂಬುವನೊಬ್ಬ ಪೋಟ.
ಇವರಿಬ್ಬರ ನೋಟ ಬೇಟಕ್ಕೆ ಸಿಕ್ಕದೆ ದಾಂಟಿಹೋದನು,
ನಮ್ಮ ಬಸವಪ್ರಿಯ ಕೂಡಲಚೆನ್ನಬಸವಣ್ಣ. ॥ ೪೮ ॥

೮೭೯

ಆಡುವ ಹಾಡುವ ನಡೆವ ನುಡಿವ ಬೆಡಗ ಬಿಡದೆ,
ಒಡಲ ದುರ್ಗುಣಗಳ ಕೆಡದೆ,
ಪೊಡವಿಯೊಳು ನುಡಿಯ ನುಣ್ಣನೆ ನುಡಿದುಕೊಂಡು
ಒಡಲಹೊರೆವ ಅಣ್ಣಗಳಿರಾ,
ನೀವು ಭಕ್ತಮಾಹೇಶ್ವರರೆಂದು ನುಡಿದುಕೊಂಬಿರಿ ಅಂತಲ್ಲ, ಕೇಳಿರಣ್ಣಾ.
ನೋಡುವ ಕಣ್ಣು ನುಡಿವ ನಾಲಿಗೆಯ ನುಂಗಿತ್ತು,
ಕೇಳುವ ಕಿವಿ, ವಾಸಿಸುವ ನಾಸಿಕವ ನುಂಗಿತ್ತು,
ಕೊಡುವ ಕೊಂಬುವ ಕೈ, ಅಡಿ ಇಡುವ ಕಾಲ ನುಂಗಿತ್ತು,
ಇವನೊಡಬಿಡದೆ ಕೊಂಬತನುವ ನುಂಗಿತ್ತು,
ತಲೆಯಷ್ಟೆಯುಳಿದು, ಆ ತಲೆಯು ನೆಲವಿಡಿದು,
ಘನವ ನಂಬಿದವರ ಭಕ್ತಮಹೇಶ್ವರರೆಂಬೆ ಕಾಣಾ,
ಬಸವಪ್ರಿಯ ಕೂಡಲಚೆನ್ನಬಸವಣ್ಣಾ ॥ ೪೯ ॥

೮೮೦

ಆಣವಮಲ, ಮಾಯಾಮಲ, ಕಾರ್ಮಿಕಮಲದೊಳಗಣ
ಆಟ ಕೋಟಲೆ ಅಡಗದೆ,
ಕಂಡಕಂಡವರೊಳಗಣ ನುಡಿ ನೋಟ ಹಿಂಗದೆ,
ಮಾಟಕೂಟ ಜಪಕೋಟಲೆಯಿಂದ ನಟಿಸಿ,
ಲಿಂಗವ ನೋಡಿ ಕೂಡಿಹನೆಂಬವರ ಬದುಕೆಂತಾಯಿತ್ತೆಂದರೆ,
ಮೋಟ ಗಂಡನ ಮೂಕೊರತಿ ಹೆಂಡತಿ, ಬೇಟವ ಮಾಡಿದಂತಾಯಿತ್ತು ಕಾಣಾ,
ಬಸವಪ್ರಿಯ ಕೂಡಲಚೆನ್ನಬಸವಣ್ಣಾ. ॥ ೫೦ ॥

೮೮೧

ಆದಿ ಅನಾದಿ ಅಂತ್ಯವೆಂದು ನುಡಿದಾಡುವರಲ್ಲದೆ,
ಇವರ ಭೇದಾದಿ ಭೇದವನಾರೂ ಅರಿಯರು.
ಆದಿಯಿಂದತ್ತತ್ತಲಾರು ಬಲ್ಲರು? ಅನಾದಿಯಿಂದತ್ತತ್ತಲಾರು ಬಲ್ಲರು?

ಸಾಧಕರಿಗಳವಲ್ಲ, ವೇದ, ಶಾಸ್ತ್ರ, ಆಗಮ ಪುರಾಣಂಗಳು ಕಾಣದೆಹೋದವು.
ಅದು ಹೇಗೆಂದರೆ, ಆದಿ ಕೂರ್ಮ ಕರಿ ಸರ್ಪ ಹೊತ್ತಿಪ್ಪವೆಂಬರು.
ಅವನಾಗುಮಾಡಿ, ಅವಕ್ಕೆ ಆದಿಯಾಗಿಪ್ಪವರಾರೆಂದು ಅರಿಯರು.
ಅನಾದಿಯೆಂಬ ಆಕಾಶದ ಮೇಲೆ,
ದಿಕ್ಪಾಲಕರು, ದೇವರ್ಕಳು, ರುದ್ರ, ಶಿವ, ಸದಾಶಿವ ಉಂಟೆಂಬರು.
ಅವರನಾಗುಮಾಡಿ, ಅವರ ನಿಲಿಸಿಕೊಂಡಿಪ್ಪವರಾರೆಂದು ಅರಿಯರು.
ಇಂತೀ ಅಜಾಂಡ ಬ್ರಹ್ಮಾಂಡವೆಲ್ಲವು
ನಮ್ಮ ಬಸವಪ್ರಿಯ ಕೂಡಲಚೆನ್ನಬಸವಣ್ಣನ
[ಕುಕ್ಷಿ]ಯೊಳು ಇಪ್ಪವು ಕಾಣಿರೊ. ॥ ೫೧ ॥

ಒಂ೨

ಆದಿ ಅನಾದಿ ಎಂದು ಗಾದೆಯ ಮಾತು ನುಡಿದಾಡುವರೆಲ್ಲ
ಇವೆರಡರ ಮಧ್ಯದಲ್ಲಿಪ್ಪ ಮಾಯಾಪ್ರಪಂಚನೆ ಅಳೆವುತ್ತ ಸುರಿವುತಿಪ್ಪರಲ್ಲದೆ,
ಆದಿಯಿಂದಲತ್ತತ್ತಲಾರು ಬಲ್ಲರು? ಅನಾದಿಯಿಂದತ್ತತ್ತಲಾರು ಬಲ್ಲರು?
ಇದರ ಭೇದಾದಿ ಭೇದವ ಮುನ್ನಿನ ಆದ್ಯರು ಬಲ್ಲರಲ್ಲದೆ, ಸಾಧಕರಿಗಳವಲ್ಲ.
ವೇದಶಾಸ್ತ್ರಾಗಮ ಪುರಾತರ ವಚನ ಬಹುಶ್ರುತಿ ಇದಿರಿಟ್ಟುಕೊಂಡು, ಕೂಗಿಯಾಡಿ,
ಗೋಡೆ ಹಾಯಿಸುವ ಜಡವಾದಿಗಳ ಮಾತ ಮೆಚ್ಚರು ನಮ್ಮ ಶರಣರು,
ಬಸವಪ್ರಿಯ ಕೂಡಲಚೆನ್ನಬಸವಣ್ಣಾ. ॥ ೫೨ ॥

ಒಂ೩

ಆದಿ ಅನಾದಿ ಎಂದು ನೀವು ಗಾದೆಯಮಾತ ನುಡಿದಾಡುವಿರಿ.
ಇದರ ಭೇದಾದಿ ಭೇದವ ಬಲ್ಲರೆ ನೀವು ಹೇಳಿರೊ.
ಅಂಗವನೆ ಆದಿಯ ಮಾಡಿ, ಸಂಗವನೆ ಅನಾದಿಯ ಮಾಡಿ,
ಈ ಎರಡರ ಮಧ್ಯದಲ್ಲಿಪ್ಪ ಲಿಂಗವ ಸ್ಥಾಪ್ಯವ ಮಾಡಿದವರಾರೊ?
ಅಲ್ಲಿ ಮಾಂಗಲ್ಯಕ್ಕೆ ಮಾಂಗಲ್ಯವಾದ ಶೃಂಗಾರವ ನಿಲಿಸಿದವರಾರೊ?
ಅಲ್ಲಿಗೆರಡು ಕಂಗಳ ಧವಳಾರವ ಹೂಡಿದವರಾರೊ?
ಈ ಕಂಗಳ ಧವಳಾರದಿಂದ ನೋಡಿದವರು
ಹೆರೆಹಿಂಗಲಾರದೆ, ಆ ಲಿಂಗಗೂಡಾದರು ಕಾಣಾ,
ಬಸವಪ್ರಿಯ ಕೂಡಲಚೆನ್ನಬಸವಣ್ಣಾ. ॥ ೫೩ ॥

ಒಂ೪

ಆದಿ ನಿರಾಳ, ಮಧ್ಯ ನಿರಾಳ, ಊರ್ಧ್ವ ನಿರಾಳ.
ಪ್ರಮಾಣು ನಿರಾಳ, ಅಪ್ರಮಾಣು ನಿರಾಳ.
ಆಕಾರವು ನಿರಾಳ, ಉಕಾರವು ನಿರಾಳ, ಮಕಾರವು ನಿರಾಳ,

ನಿರಾಳವೆಂಬುದು ನಿರಾಳ, ಸುರಾಳವೆಂಬುದು ನಿರಾಳ,
ಅವಿರಳವೆಂಬುದು ನಿರಾಳ.
ಬಂದೆನೆಂಬುದು ನಿರಾಳ, ಹೋದೆನೆಂಬುದು ನಿರಾಳ.
ಅದೆಂತೆದಡೆ;
ಪ್ರಣಮ ನಿರಾಳವಾದ ಕಾರಣ ಪ್ರತಿಯಿಲ್ಲ.
ಪ್ರತಿಯಿಲ್ಲವಾಗಿ, ಅಪ್ರತಿಮ ನಮ್ಮ ಶರಣ
ಬಸವಪ್ರಿಯ ಕೂಡಲಚೆನ್ನಸಂಗಮದೇವ. || ೫೪ ||

೮೮೫

ಆದಿಪ್ರಸಾದಿ, ಅನಾದಿಪ್ರಸಾದಿ, ಅಂತ್ಯಪ್ರಸಾದಿ,
ಆದಿಪ್ರಸಾದಿಯೆ ಗುರು, ಅನಾದಿಪ್ರಸಾದಿಯೆ ಲಿಂಗ,
ಅಂತ್ಯಪ್ರಸಾದಿಯೆಂಬುದೆ ಜಂಗಮ.
ಈ ಗುರು ಲಿಂಗ ಜಂಗಮದಿಂದಾದುದೆ ಪ್ರಸಿದ್ಧ ಪ್ರಸಾದ.
ಅದಕ್ಕೆ ದೃಷ್ಟ;
ಮತ್ಪ್ರಾಣೋ ಜಂಗಮೋ ನಿತ್ಯಂ ಮಲ್ಲಿಂಗಂ ಜಂಗಮಸ್ತಥಾ
ಅವಯೋಸ್ತತ್ಪ್ರಸಾದಂ ಚ ಭೋಗಸ್ಯಾದಿ ನಿಶ್ಚಯಂ||
ಎಂದುದಾಗಿ, ಇಂತಪ್ಪ ಪ್ರಸಿದ್ಧ ಪ್ರಸಾದಿಗೆ ನಮೋ ನಮೋ ಎಂಬೆ.
ಬಸವಪ್ರಿಯ ಕೂಡಲಸಂಗಮದೇವಾ,
ಮಾಂ ತ್ರಾಹಿ, ತ್ರಾಹಿ ಕರುಣಾಕರನೆ. || ೫೫ ||

೮೮೬

ಆದಿಯ ತೋರಿದ, ಅನಾದಿಯ ತೋರಿದ, ಭಾವವ ತೋರಿದ.
ಅದು ಹೇಗೆ ಎಂದರೆ,
ಆದಿ ಲಿಂಗವೆಂದು ಅರುಹಿದಿರಿ, ಅನಾದಿ ಶರಣನೆಂದು ಅರುಹಿದಿರಿ.
ಈ ಎರಡರ ಭಾವವೇ ಜಂಗಮವೆಂದು ಅರುಹಿದಿರಿ.
ಈ ತ್ರಿವಿಧ ಪರಿಣಾಮವೆ ಪ್ರಸಾದವೆಂದರುಹಿದಿರಿ.
ಇಂತೀ ಚತುರ್ವಿಧವು ಏಕವೆಂದು ತೋರಿದ ಲೋಕಾರಾಧ್ಯರು
ಚೆನ್ನಮಲ್ಲೇಶ್ವರನ ಸಾಕಾರವೇ ರೂಪಾಗಿ, ನಾ ಬದುಕಿದೆನಯ್ಯಾ,
ಬಸವಪ್ರಿಯ ಕೂಡಲಚೆನ್ನಬಸವಣ್ಣಾ. || ೫೬ ||

೮೮೭

ಆಧಾರದ ಕುಂಡಲಿ ಸರ್ಪನ ಮಂಡೆಯ ಮೆಟ್ಟಿ ನಿಲಲು,
ಗಂಡಾಳ ಕಾಲ ಕಾಮ ಇಬ್ಬರು ಹತವಾದರು.
ಅವರ ಹೆಂಡಿರುಗಳು ಮುಂಡಮೋಚಿದರು.
ದಂಡೆಯನೂಡಿದರು, ತೊಂಡಲ ಹರಿದರು.

ತಮ್ಮ ಗಂಡಂದಿರ ಕೂಡೆ ಸಮಾಧಿಯ ಹೊಕ್ಕರು.
ಇದ ಕಂಡು ನಾ ಬೆರಗಾಗಿ ಮುಂದೆ ನೋಡಲು,
ಒಂದೂ ಇಲ್ಲದೆ ಸಂದುಸಂಶಯವಳಿಯಲು,
ಹೊಂದದ ಬಟ್ಟೆಯನೆ ಹೊಂದಿದೆ.
ಬಂದ ಬಟ್ಟೆಯನೊಲ್ಲದೆ ನಿಮ್ಮ ವೃಂದ ಚರಣದಲ್ಲಿ ವಂದಿದೆನಯ್ಯಾ.
ಬಸವಪ್ರಿಯ ಕೂಡಲಚೆನ್ನಬಸವಣ್ಣಾ,
ಇದರಂದವನಳಿದು ನೋಡಿದ ಶರಣರೆ ಬಲ್ಲರು. ॥ ೫೭ ॥

೮೮೮

ಆಧಾರ, ಸ್ವಾಧಿಷ್ಠನ, ಮಣಿಪೂರಕ, ಅನಾಹತ, ವಿಶುದ್ಧಿ,
ಆಜ್ಞಾಚಕ್ರವೆಂಬ ಷಡಾಧಾರಚಕ್ರವನರಿದು,
ಏರಿ ಏರಿ ಇಳಿದು ಆದಿಯ ನೋಡಿಕೊಂಡು,
ಆದಿ ಅನಾದಿ ಎಂಬ ಭೇದವ ನೋಡಿ, ಶೋಧಿಸಿ,
ಸಪ್ತಧಾತುವಿನ ನೆಲೆಯ ಕಂಡು, ಮನ ಬುದ್ಧಿ ಚಿತ್ತವ ಏಕಹುರಿಯ ಮಾಡಿ,
ಉತ್ಪತ್ತಿ ಸ್ಥಿತಿ ಲಯವೆಂಬ ಕಾಲಮೂಲಾದಿಗಳ ಸುಟ್ಟು, ಧ್ಯಾನದಲ್ಲಿ ನಿಂದು,
ಅಂಗ ಲಿಂಗ ಹಸ್ತಮುಖ ಅರ್ಪಿತ ಅವಧಾನವೆಂಬ ಷಟ್‌ಸ್ಥಲವ ಮೆಟ್ಟಿನಿಂದು,
ಆರರಿಂದ ಮೀರಿ ತೋರುವ ಬೆಳಗ ಕಂಡು, ನಾನು ಒಳಹೊಕ್ಕು ನೋಡಲಾಗಿ,
ಒಳಹೊರಗೆ ತೊಳತೊಳಗಿ ಬೆಳಗುತ್ತ ಇಳೆ ಬ್ರಹ್ಮಾಂಡ ತಾನೆಯಾಗಿರ್ದ
ನಮ್ಮ ಬಸವಪ್ರಿಯ ಕೂಡಲಚೆನ್ನಬಸವಣ್ಣ. ॥ ೫೮ ॥

೮೮೯

ಆಯತಲಿಂಗದಲ್ಲಿ ನೀವೆನಗೆ ಆಚಾರವ ತೋರಿದಿರಾಗಿ,
ಸ್ವಾಯತಲಿಂಗದಲ್ಲಿ ನೀವೆನಗೆ ಅರುಹ ತೋರಿದಿರಾಗಿ,
ಸನ್ನಹಿತಲಿಂಗದಲ್ಲಿ ನೀವೆನಗೆ ಪರಿಣಾಮವ ತೋರಿದಿರಾಗಿ.
ಈ ತ್ರಿವಿಧದ ವರನೆಲೆಯ ತೋರಿ, ಈ ತ್ರಿವಿಧದ ಸಂಬಂಧವನು ಹರಿದು,
ಎನ್ನ ಭವವ ದಾಂಟಿಸಿದ ಕಾರಣ,
ಭವವಿರಹಿತನೆಂದು ಚೆನ್ನಮಲ್ಲೇಶ್ವರನ ನಂಬಿ, ಕೆಟ್ಟು, ಬಟ್ಟಬಯಲಾದೆನಯ್ಯಾ,
ಬಸವಪ್ರಿಯ ಕೂಡಲಚೆನ್ನಬಸವಣ್ಣ. ॥ ೫೯ ॥

೮೯೦

ಆಸೆಯನುಳಿದು ನಿರಾಸೆಯಲ್ಲಿ ನಿಂದು,
ವೇಷವ ಮರೆದು, ಜಗದ ಹೇಸಿಯಾಟವ ತೊರೆದು,
ಮಿಸಲಾಗಿದ್ದ ಮನವನೆ ಲಿಂಗವ ಮಾಡಿ,
ಗಾಸಿಗೊಳಗಾಗುವ ತನುವನೆ ಗುರುವ ಮಾಡಿ,
ಇವಿಷ್ಟಕ್ಕೂ ಕರ್ತನಾಗಿರುವ ಪ್ರಾಣವನ್ನೆ ಜಂಗಮವ ಮಾಡಿ,
ಈ ತ್ರಿವಿಧವನು ಏಕವ ಮಾಡುವೆ.

ಆ ಭಾವವನೆ ಭಾವರುಚಿ ಪ್ರಸಾದವ ಮಾಡುವೆ.
ಈ ತ್ರಿವಿಧವನರಿದು ಅಂಗವಿಸಿದವನೆ ಎನ್ನ ದೇವನೆಂದು ಕಾಂಬೆ ಕಾಣಾ,
ಬಸವಪ್ರಿಯ ಕೂಡಲಚೆನ್ನಬಸವಣ್ಣ, ನೀವು ಸಾಕ್ಷಿಯಾಗಿ. || ೬೦ ||

೮೯೧

ಆಸೆಯಳಿದು, ನಿರಾಸೆಯಲ್ಲಿ ನಿಂದು,
ವೇಷವ ಜರೆದು, ಸರ್ವವ ಮರೆದು, ಈ ಗುಣತ್ರಯಮಂ ತೊರೆದು,
ನಿರಾಸೆಯ ಮೇಲೆ ನಿಂದರೆ, ಅದೇ ಶರಣಂಗೆ ಸರಿ ಎಂಬೆ,
ಬಸವಪ್ರಿಯ ಕೂಡಲಚೆನ್ನಬಸವಣ್ಣಾ. || ೬೧ ||

೮೯೨

ಆಸೆ ರೋಷವೆಂಬ ದ್ವೇಷವ ಬಿಟ್ಟು,
ದೋಷ ದುರಿತವ ಬಿಟ್ಟು, ಕ್ಲೇಶವ ಹರಿದು,
ಸಾಸಿರಮುಖದೊಳು ಸೂಸುವ ಮನವ ನಿಲ್ಲಿಸಿ,
ನಿರಾಶಿಕನಾಗಿ ನಿಂದರೆ, ಬಸವಪ್ರಿಯ ಕೂಡಲಚೆನ್ನ ಬಸವಣ್ಣ. || ೬೨ ||

೮೯೩

ಇಂತಪ್ಪ ಘನವನಗಲಿಸಿದ ಮಹಾಪ್ರಸಾದಿಯ ನಿಲವೆಂತಿಪ್ಪುದೆಂದರೆ,
ಉರಿಯುಂಡ ಕರ್ಪುರದಂತೆ, ಶರಧಿಯ ಬೆರೆದ ಸಾರದಂತೆ,
ನೀರೊಳಗೆ ಬಿದ್ದ ಆಲಿಯಂತೆ, ಉರಿಯ ಗಿರಿಯನೆಚ್ಚ ಅರಗಿನ ಬಾಣದಂತೆ,
ಪರಿಮಳವನುಂಡ ಹರಿಯಂತೆ. ಇದರ ವಿವರವನರಿದರೆ,
ಪರವ ಬಲ್ಲವ, ತನ್ನ ಬಲ್ಲವ, ಎಲ್ಲವು ತನ್ಮಯನಾಗಿರುವ.
ಇಂತಪ್ಪ ಅಣುವಿಂಗಣುವಾಗಿ ನಿಂದ ಮಹಾಪ್ರಸಾದವ ನಾನೆತ್ತ ಬಲ್ಲೆನಯ್ಯಾ ?
ಇದ ಬಲ್ಲ ಪ್ರಸಾದಿಗಳ ಸೊಲ್ಲಿನೊಳಗೆ ನಾನಡಗಿದೆನಯ್ಯಾ,
ನಿಮ್ಮ ಧರ್ಮ ನಿಮ್ಮ ಧರ್ಮ,
ಬಸವಪ್ರಿಯ ಕೂಡಲಚೆನ್ನಬಸವಣ್ಣಾ. || ೬೩ ||

೮೯೪

ಇಂದು ನಾಳೆ ಎಂಬ ಸಂದೇಹವ ಬಿಟ್ಟು,
ನಿಂದ ನಿಜಾನಂದದಿಂದ ನೋಡಿ,
ಹಿಂದು ಮುಂದು, ಕುಂದು ಹೆಚ್ಚು, ದಂದುಗ ಧಾವತಿಯ ಕೊಂದು ನಿಂದರೆ,
ಬಸವಪ್ರಿಯ ಕೂಡಲಚೆನ್ನಬಸವಣ್ಣ. || ೬೪ ||

೮೯೫

ಇತ್ತಲು ಪೃಥ್ವಿಯಿಂದ, ಅತ್ತಲು ಉತ್ತರಿಯ ಬೆಟ್ಟಕ್ಕೆ ಹತ್ತದ
ಕಸ್ತೂರಿಯ ಮೃಗದ ವಿಸ್ತಾರವ

ಹಸ್ತವಿಲ್ಲದೆ ಎಚ್ಚು, ಕಿಚ್ಚಿಲ್ಲದೆ ಸುಟ್ಟು, ಮಡಕೆಯಿಲ್ಲದೆ ಅಟ್ಟು,
ಮನವಿಲ್ಲದುಂಡು, ನೆನಹಿಲ್ಲದಾಡಿ ಪಾಡುವ ಘನವೇ
ಅಗಮ್ಯ ಅಗೋಚರ ಅಪ್ರಮಾಣ ಸುಪ್ರಭಾಕಳಾನಂದ
ಪ್ರಾಣಲಿಂಗ ಪರಂಜ್ಯೋತಿ, ಬಸವಪ್ರಿಯ ಕೂಡಲಸಂಗಮದೇವಾ. || ೬೫ ||

೮೯೬

ಈ ಜಗದೊಳಗಣ ಆಟವ ನೋಡಿದರೆ, ಎನಗೆ ಹಗರಣವಾಗಿ ಕಾಣಿಸುತ್ತಿದೆ.
ಅದೇನು ಕಾರಣವೆಂದರೆ,
ಹಿಂದಣ ಮುಕ್ತಿಯನರಿಯರು, ಮುಂದಣ ಮುಕ್ತಿಯನರಿಯರು.
ಬಂದ ಬಂಬ ಭವದಲ್ಲಿ ಮುಳುಗುತ್ತಲಿದ್ದಾರೆ.
ನಾನಿದರಂದವನರಿದು, ದ್ವಂದ್ವವ ಹರಿದು,
ಜಗದ ನಿಂದೆ ಸ್ತುತಿಯ ಸಮಗಂಡು,
ಹಿಂದ ಹರಿದು ಮುಂದನರಿದು, ಸದಮಳಾನಂದದಲ್ಲಿ ನಿಂದು,
ಸಚ್ಚಿದಾನಂದದಲ್ಲಿ ಐಕ್ಯವಾಗಿ,
ಸತ್ಯಶರಣರ ಪಾದದಲ್ಲಿ ನಿರ್ಮುಕ್ತನಾದೆನಯ್ಯ,
ಬಸವಪ್ರಿಯ ಕೂಡಲಚೆನ್ನಬಸವಣ್ಣಾ. || ೬೬ ||

೮೯೭

ಈಡಾ ಪಿಂಗಳ ಸುಷುಮ್ನನಾಳದ
ಗಾಢ ಅಗಮ್ಯವನರಿದು ನೋಡೆ,
ಬ್ರಹ್ಮರಂಧ್ರವ ತಟ ಹಾಯ್ಯದು ಕೂಡಾಡಿ, ಪಶ್ಚಿಮದೋಳ್ಪೆರೆದರೆ,
ಬಸವಪ್ರಿಯ ಕೂಡಲಚೆನ್ನಬಸವಣ್ಣ. || ೬೭ ||

೮೯೮

ಈ ಬಚ್ಚಬರಿಯ ಬಯಲ ಕಂಡಿಹೆನೆಂದರೆ, ಕಾಣಬಾರದು.
ಕೇಳಿಹೆನೆಂದರೆ ಕೇಳಬಾರದು, ಹೇಳಿಹೆನೆಂದರೆ ಹೇಳಬಾರದು.
ಇವ ಮೂರರ ಕಾಳಿಕೆಯ ಕಳೆದು,
ಈ ಹನ್ನೆರಡ ಜಾಣೆಯಲ್ಲಿ ದಾಂಟಿ, ಒಂದರ ಮೇಲೆ ನಿಂದು,
ಅಂದವಳಿಯದೆ, ಬಿಂದು ತುಳುಕದೆ,
ಅಂದಂದಿನ ಹೊಸಪೂಜೆಯ ನೋಡಿ, ಕಣ್ದೆರೆದು
ಕರಗಿ ಒಂದಾದ ಶರಣರ ಚರಣವ ತೋರಿ ಬದುಕಿಸಯ್ಯಾ ಎನ್ನ ,
ಬಸವಪ್ರಿಯ ಕೂಡಲಚೆನ್ನಬಸವಣ್ಣಾ. || ೬೮ ||

೮೯೯

ಈ ಮಹಾಘನ ನೆಲೆಗೊಂಡಿಪ್ಪ ಶರಣನ ನೆಲೆ ಎಂತಿಪ್ಪುದೆಂದಡೆ:
ಪೃಥ್ವಿ ಪೃಥ್ವಿಯನೆ ಕೂಡಿ, ಅಪ್ಪು ಅಪ್ಪುವನೆ ಕೂಡಿ,

ಅಗ್ನಿ ಅಗ್ನಿಯನೆ ಕೂಡಿ, ವಾಯು ವಾಯುವನೆ ಕೂಡಿ,
ಆಕಾಶ ಆಕಾಶವನೆ ಕೂಡಿ, ಪಂಚತತ್ವವೆಲ್ಲ ಹಂಚುಹುರಿಯಾಗಿ,
ಹಿಂಚುಮುಂಚು ಮಾಡುವ ಮನದ ಸಂಚಲವಡಗಿ,
ಕರ್ಮದ ಗೊಂಚಲ ನಿಂದ ನಿಶ್ಚಿಂತ ನಿಜೈಕ್ಯಂಗೆ ನಮೋ ನಮೋ ಎನುತಿರ್ದೆ,
ಬಸವಪ್ರಿಯ ಕೂಡಲಚೆನ್ನಬಸವಣ್ಣಾ. ॥ ೬೯ ॥

೯೦೦

ಈಯನುವನರಿದು ಲಿಂಗವ ನೋಡಿ ಕೂಡಿಹೆನೆಂದರೆ,
ಮನವನೆಲ್ಲವ ನಿಲಿಸಿ ಇರಬೇಕು.
ಈ ಘನ ಪರಾಕ್ರಮವುಳ್ಳ ಭಕ್ತರ ತನುವೆ ಲಿಂಗ,
ಬಸವಪ್ರಿಯ ಕೂಡಲಚೆನ್ನಬಸವಣ್ಣಾ. ॥ ೭೦ ॥

೯೦೧

ಉಟ್ಟರೆ ತೊಟ್ಟರೇನಯ್ಯ ? ನಟ್ಟುವರಂತೆ.
ಕೊಟ್ಟರೆ ಕೊಂಡರೇನಯ್ಯ ? ವೇಶಿಯರಂತೆ.
ಬಿಟ್ಟರೆ ಕಟ್ಟಿದರೇನಯ್ಯ ? ಬೈರೂಪನಂತೆ.
ಇವಾವಂಗವ ಮಾಡಿದರೇನಯ್ಯ ?
ಮುಟ್ಟಿ ನಮ್ಮ ಶರಣರೊಡನೆ ಒಡವೆರೆಯದಿದ್ದವರು
ಉಟ್ಟಿದ್ದರೇನು, ಬಿಟ್ಟಿದ್ದರೇನು ಹೇಳಾ,
ಬಸವಪ್ರಿಯ ಕೂಡಲಚೆನ್ನಬಸವಣ್ಣಾ ? ॥ ೭೧ ॥

೯೦೨

ಉತ್ತರ, ದಕ್ಷಿಣ , ಪೂರ್ವ, ಪಶ್ಚಿಮ
ನಾಲ್ಕು ಪಥವನು ಏಕವ ಮಾಡಿ, ಊರ್ಧ್ವಮುಖವ ಮಾಡಿ,
ಈಡಾ ಪಿಂಗಳ ನಾಳಮಂ ಕಟ್ಟಿ, ಸುಷಮ್ನನಾಳವಂ ಎತ್ತಿ,
ಮನ ಪವನ ಬಿಂದು ಒಡಗೂಡಿ,
ಚಂದ್ರ ಸೂರ್ಯ ಶಿಖಿಯರಂ ಮುಪ್ಪುರಿಯ ಮಾಡಿ,
ಒಡಗೂಡಿ ಏಕವಾಗಿ ಹುರಿಗೂಡಿ,
ಮರ್ತ್ಯಲೋಕವ ಬಿಟ್ಟು, ದೇವಲೋಕವ ಮೆಟ್ಟಿನಿಂದು,
ಭಾವ ಬಯಲಾಗಿ, ಬಯಕೆ ಸವೆದು,
ಇನ್ನು ಈ ಲೋಕದೊಳಗೆ ಬಂದು ಬದುಕಿದೆನೆಂಬುದನಕ್ಕೆ ಹೇಯ ಹುಟ್ಟಿ,
ಇದಾವುದನೂ ಒಲ್ಲದಿರ್ಪರು, ಬಸವಪ್ರಿಯ ಕೂಡಲಚೆನ್ನಬಸವಣ್ಣಾ. ॥೭೨॥

೯೦೩

ಉದಯ, ಮಧ್ಯಾಹ್ನ, ಅಸ್ತಮಯ, ಕತ್ತಲೆ ಬೆಳಗು,
ದಿನ ವಾರ ಲಗ್ನತಿಥಿ ಮಾಸ ಸಂವತ್ಸರ ಹೋಗುತ್ತ ಬರುತ್ತಲಿವೆ.

ಇವ ನೋಡಿದವರೆಲ್ಲ ಇದರೊಳಗೆ ಹೋಗುತ್ತ ಬರುತ್ತ ಇದ್ದಾರೆ.
ಜಗಕ್ಕೆ ಇವೀಗ ಇಷ್ಟವಾಗಿಪ್ಪವು. ಎನ್ನ ದೇವಂಗೆ ಇವೊಂದೂ ಅಲ್ಲ,
ದಿನಕಾಲ ಯುಗಜುಗ ಪ್ರಳಯಕ್ಕೆ ಹೊರಗಾದ ಆ ದೇವನ,
ಅಂಗವಿಸಿ ಮುಟ್ಟಿ ಹಿಡಿದ ಕಾರಣ, ಎಮ್ಮ ಶರಣರು ಪ್ರಳಯಕ್ಕೆ ಹೊರಗಾದರು.
ಇದನರಿದು, ಅಂತಪ್ಪ ಶರಣರ ಪಾದವ ನಂಬಿ, ಕೆಟ್ಟು ಬಟ್ಟಬಯಲಾದೆನಯ್ಯಾ,
ಬಸವಪ್ರಿಯ ಕೂಡಲಚೆನ್ನಬಸವಣ್ಣ. || ೭೩ ||

೯೦೪

ಉದಯ, ಮಧ್ಯಾಹ್ನ ಅಸ್ತಮಯವೆಂಬ ತ್ರಿಕಾಲದಲ್ಲಿ
ತ್ರಿವಿಧ ಪೂಜೆಯ ಮಾಡಬೇಕೆಂಬರು, ಈ ತ್ರಿವಿಧದ ನೆಲೆಯನರಿಯರು.
ಲಿಂಗಲಿಂಗವೆಂದು ಲಿಂಗವನೆ ಅರ್ಚಿಸಿ,
ಲಿಂಗವನೆ ಪೂಜಿಸಿ, ಅಂಗ ಭಿನ್ನವಾಯಿತ್ತು
ಆರಾರಿಗೆಂದರೆ,
ಸ್ವರ್ಗ, ಮರ್ತ್ಯ, ಪಾತಾಳದವರೆಗೆ ಮೂರುಲೋಕವು ಸೆರೆಸೂರೆಹೋಯಿತ್ತು
ಗುರುಲಿಂಗಜಂಗಮ ತ್ರಿವಿಧವು ಏಕವಾದ ಭೇದವ ನಿಮ್ಮ ಶರಣರೇ ಬಲ್ಲರಲ್ಲದೆ,
ಈ ಮರಣಬಾಧೆಗೊಳಗಾಗುವ ಮರ್ತ್ಯರೆತ್ತ ಬಲ್ಲರು,
ಬಸವಪ್ರಿಯ ಕೂಡಲಚೆನ್ನಬಸವಣ್ಣಾ. || ೭೪ ||

೯೦೫

ಉರಗನ ಫಣಾಮಣಿಯ ಬೆಳಗಿನಲ್ಲಿ ನಿಂದ ಪ್ರಸದಿ
ಕರಿಯ ಕೊಂದು ಹರಿಯ ಬೆಳಗಿನಲ್ಲಿ ನಿಂದ ಪ್ರಸಾದಿ.
ಶಿರದ ಮೇಲೆ ನಿಂದ ಗಂಗೆಯ ಬೆಳಗಿನಲ್ಲಿ ನಿಂದ ಪ್ರಸಾದಿ.
ಉರಮಧ್ಯದಲ್ಲಿಪ್ಪ ಪರಂಜ್ಯೋತಿಯ ಬೆಳಗಿನಲ್ಲಿ ನಿಂದ ಪ್ರಸಾದಿ.
ಪೂರ್ವಪಶ್ಚಿಮ ಏಕವಾದ ಬೆಳಗಿನಲ್ಲಿ ನಿಂದ ಪ್ರಸಾದಿ.
ಇಂತೀ ಘನವನೆಲ್ಲ ಒಳಕೊಂಡ ಮಹಾಬೆಳಗಿನಲ್ಲಿ ನಿಂದ ಪ್ರಸಾದಿ.
ಅಯ್ಯಾ ಚೆನ್ನಮಲ್ಲೇಶ್ವರಾ, ಆ ಪ್ರಸಾದಿಯ ಪ್ರಸಾದವ ಕೊಂಡು
ನಾ ಉರಿಯುಂಡ ಕರ್ಪುರದಂತಾದೆನಯ್ಯಾ,
ಬಸವಪ್ರಿಯ ಕೂಡಲಚೆನ್ನಬಸವಣ್ಣಾ. || ೭೫ ||

೯೦೬

ಉರಿಯೊಳಗೆ ಉರಿ ಹುಟ್ಟಿ, ಶರಧಿಯಾಪೋಷಣವಾಯಿತ್ತು
ಧರೆ ನಿಬ್ಬೆರಗಾಯಿತ್ತು, ಶರಧಿ ಬತ್ತಿತ್ತು, ಉರಿ ನಿಂದಿತ್ತು
ವಾಯು ನಾಶವಾಯಿತ್ತು, ಆಕಾಶ ಬಯಲಾಯಿತ್ತು
ಇದು ಕಾರಣ, ಆತ್ಮ ಕರ್ಪುರದ ಗಿರಿಯಂತೆ ನಿಂದಿತ್ತು

ಆತ್ಮ ಪರಂಜ್ಯೋತಿಯಂತೆ ಪ್ರಜ್ವಲಿಸಿತ್ತು.
ಇದರ ಭೇದವನರಿದು ಮೂರು ಮುಟ್ಟದೆ, ಆರು ತಟ್ಟದೆ ,
ಬೇರೆ ಒಂದರ ಮೇಲೆ ನಿಂದು, ಸಂದಿಗೊಂದಿಯನೆಲ್ಲವ ಶೋಧಿಸಿ,
ಬೆಂದ ನುಲಿಯ ಹಾಗೆ ಅಂದವಾಗಿಪ್ಪುದನೊಂದು ನೋಡುವರೆ ಸೇವೆಗೆ ಬಾರದು.
ಇದರಂದವ ಲಿಂಗೈಕ್ಯರೆ ಬಲ್ಲರಲ್ಲದೆ,
ಸಂದೇಹ ಭ್ರಮೆಯೊಳುಸಿಕ್ಕಿ ನೊಂದು ಬೆಂದು ಸಾವ ಹಂದಿಗಳೆತ್ತ ಬಲ್ಲರು,
ಬಸವಪ್ರಿಯ ಕೂಡಲಚೆನ್ನಬಸವಣ್ಣಾ ? ॥ ೭೬ ॥

೯೦೭

ಊರ ಮೇಲೆ ಊರ ಕಂಡೆ, ನೀರ ಮೇಲೆ ನೀರ ಕಂಡೆ.
ಮರನ ಮೇಲೆ ಮರನ ಕಂಡೆ, ಗಿರಿಯ ಮೇಲೆ ಗಿರಿಯ ಕಂಡೆ.
ಉರಿಯ ಮೇಲೆ ಉರಿಯ ಕಂಡೆ. ಈ ಭಾರವ ತಾಳಲಾರದೆ,
ಆ ಉರಿಯೆ ಎದ್ದು ಊರು ಬೆಂದಿತ್ತು, ನೀರು ಬೆಂದಿತ್ತು,
ಮರನು ಬೆಂದಿತ್ತು, ಗಿರಿಯು ಬೆಂದಿತ್ತು.
ಆ ಉರಿ ಉಳಿಯಿತ್ತು, ಆ ಉರಿಯನೆರದು ಸಿರಿಯ ಸೆಳದು
ಪರಮಸುಖಪರಿಣಾಮದೊಳೋಲಾಡುತ್ತ,
ನಿಮ್ಮ ಬರವನೆ ಹಾರುತಿರ್ದೆನಯ್ಯಾ,
ಬಸವಪ್ರಿಯ ಕೂಡಲಚೆನ್ನಬಸವಣ್ಣಾ. ॥ ೭೭ ॥

೯೦೮

ಎಡಬಲವೆಂದೇನೊ ನಿಮ್ಮ ಅಡಿಗಳನರಿದವಂಗೆ ?
ಕಡೆ ನಡುವೆಂದೇನೊ ಮೃಡನ ಹಾಡುವಂಗೆ ?
ಕುಲಛಲವೆಂದೇನೊ ಮನದ ಹೊಲೆಯ ಕಳೆದವಂಗೆ ?
ತಲೆಕಾಲೆಂದೇನೊ ಮಾಯೆಯ ಬಲೆಯ ನುಸುಳಿದವಂಗೆ ?
ಕಲಿಯುಗದ ಕತ್ತಲೆಯ ದಾಂಟಿದವಂಗೆ, ನಿಮ್ಮ ನೆಲೆಯನರಿದ ಶರಣಂಗೆ
ಇನ್ನು ಸ್ಥಲನೆಲೆ ಆವುದುಂಟು ಹೇಳಾ,
ಬಸವಪ್ರಿಯ ಕೂಡಲಚೆನ್ನಬಸವಣ್ಣಾ ? ॥ ೭೮ ॥

೯೦೯

ಎಮ್ಮ ಶರಣರು ಗುರುಸ್ಥಲ ನಾಸ್ತಿಯಾಯಿತ್ತೆಂಬರು,
ಅದೇನು ಕಾರಣವೆಂದರೆ ತಮ್ಮ ಗುಣ ಅವಗುಣವಿಲ್ಲವಾಗಿ.
ಲಿಂಗಸ್ಥಲ ನಾಸ್ತಿಯಾಯಿತ್ತೆಂಬರು, ಅಂಗಗುಣವಳಿಯಿತ್ತಾಗಿ.
ಜಂಗಮಸ್ಥಲ ನಾಸ್ತಿಯಾಯಿತ್ತೆಂಬರು, ಅದೇನು ಕಾರಣ ?
ಭಾವಬಯಲಾಯಿತ್ತಾಗಿ.

ಪ್ರಸಾದಿಸ್ಥಲ ನಾಸ್ತಿಯಾಯಿತ್ತೆಂಬರು, ಪರವು ತಮ್ಮಲ್ಲಿ ನಿಂದ ಕಾರಣ.
ಇಂತೀ ಸರ್ವಾವಧಾನಿಗಳೆಲ್ಲರು ನಮ್ಮ ಶರಣರು.
ಇಂತು ಸರ್ವಾಚಾರಸಂಪನ್ನರಯ್ಯ ನಮ್ಮ ಶರಣರು.
ಇಂತು ಸರ್ವಾಂಗಲಿಂಗಿಗಳಯ್ಯ ನಮ್ಮ ಶರಣರು.
ಇಂತಪ್ಪ ಶರಣ ಸನ್ನಹಿತ ಚೆನ್ನಮಲ್ಲೇಶ್ವರನ ಪಾದವ ನಂಬಿದ ಕಾರಣ,
ನಾ ಹೋದ ಹಾದಿಯನಾರೂ ಅರಿಯರಯ್ಯ,
ಬಸವಪ್ರಿಯ ಕೂಡಲಚೆನ್ನಬಸವಣ್ಣಾ. || ೭೯ ||

೯೧೦

ಒಂದು ಹುತ್ತಕ್ಕೆ ಒಂಬತ್ತು ಬಾಯಿ,
ಅಲ್ಲಿಪ್ಪ ಸರ್ಪನೊಂದೆ. ತಪ್ಪದೆ ಹತ್ತು ಬಾಯಲು ತಲೆಯ ಒಡೆವುದು.
ಅಂಜಿ ನೋಡಿದವರಿಗೆ ಸರ್ಪನಾಗಿಪ್ಪುದು.
ಅಂಜದೆ ನೋಡಿದವರಿಗೆ ಒಂದೆ ಸರ್ಪನಾಗಿರುವುದು.
ಇದು ಕಾರಣವಾಗಿ,
ಸಂಜೆ ಮುಂಜಾನೆ ಎಂಬ ಎರಡಳಿದ ಶರಣಂಗೆ ಒಂದಲ್ಲದೆ ಎರಡುಂಟೆ?
ಮೂರು ಲಿಂಗ, ಆರು ಲಿಂಗ, ಮೂವತ್ತಾರು ಲಿಂಗ,
ಬೇರೆ ಇನ್ನೂರು ಹದಿನಾರು ಲಿಂಗ ಉಂಟೆಂದು
ಸಂತೆಯೊಳಗೆ ಕುಳಿತುಕೊಂಡು ಸಾರುತಿಪ್ಪರು.
ಇದ ನಾನರಿಯೆ, ನಾನರಿಯೆ.
ಹೇಳುವುದಕ್ಕೆ ಎನ್ನ ದೂರ ಕೇಳಯ್ಯಾ,
ಬಸವಪ್ರಿಯ ಕೂಡಲಚೆನ್ನಬಸವಣ್ಣಾ. || ೮೦ ||

೯೧೧

ಒಳಗೆ ತೊಳೆದು, ಹೊರಗೆ ಮೆರೆದ ಪ್ರಸಾದಿ.
ಕಳೆಮೊಳೆಯನೊಂದು ಮಾಡಿದ ಪ್ರಸಾದಿ.
ಅಳಿಯ ಬಣ್ಣದ ಮೇಲಿದ್ದ ಅಮೃತವನುಂಡ ಪ್ರಸಾದಿ.
ಕಳೆಯ ಬೆಳಗಿನ ಸುಳುಹಿನ ಸೂಕ್ಷ್ಮದಲ್ಲಿ ನಿಂದ ಪ್ರಸಾದಿ.
ಇಂತಪ್ಪ ಪ್ರಸಾದಿಯ ಒಕ್ಕುಮಿಕ್ಕಿದ ಕೊಂಡ ಕಾರಣದಿಂದ
ನಾನೆತ್ತ ಹೋದೆನೆಂದರಿಯೆನಯ್ಯಾ.
ಬಸವಪ್ರಿಯ ಕೂಡಲಚೆನ್ನಬಸವಣ್ಣಾ ನೀವೆ ಬಲ್ಲಿರಿ. || ೮೧ ||

೯೧೨

ಒಳಹೊರಗೆಂಬೆರಡು ಬಟ್ಟೆಗಳೊಳು ಸುಳಿದು ಸೂಸುವ ಬೆಳಗನೆ ಕಂಡು,
ತಳುವಿಲ್ಲದೆ ಮನವನೆ ನೋಡಿ, ಆ ಬೆಳಗಿನೊಳ್ಬೆರೆದರೆ,
ಬಸವಪ್ರಿಯ ಕೂಡಲಚೆನ್ನಬಸವಣ್ಣ. || ೮೨ ||

೯೧೩

ಓದಲೇಕೋ ಲಿಂಗದ ಭೇದಾದಿಭೇದವನರಿದವಂಗೆ?
ಹಾಡಲೇಕೊ ಹರನ ಕಂಡಾತಂಗೆ?
ಬೇಡಿ ಕಾಡಲೇಕೊ ನೋಡುವ ಕಂಗಳಿಗೆ ತೃಪ್ತಿಯಾದವಂಗೆ?
ನೀಡಿ ಮಾಡಲೇಕೊ ಉಡುವಾತನು ಉಂಬುವಾತನು ಏಕವಾದ ಮೇಲೆ.
ಮುಂದು ನೋಡುವರಾರುಂಟು ಹೇಳಾ,
ಬಸವಪ್ರಿಯ ಕೂಡಲಚೆನ್ನಬಸವಣ್ಣಾ? ॥ ೮೩ ॥

೯೧೪

ಓಂ ಏಕವ ನ ದ್ವಿತೀಯಾಃ ಸ್ವಯಂಭುವೇ
ಚಕಿತಮಭಿದತ್ತೇ ಶ್ರುತಿರಪಿ ಅತ್ಯತಿಷ್ಠದ್ವ ಶಾಂಗುಲವೆಂಬ
ಬಿರುದು ನಿಮಗೆ ಸಂದಿತ್ತು ಗುರುವೆ.
ನ ಗುರೋರಧಿಕಂ ನ ಗುರೋರಧಿಕಂ ವಿದಿತಂ ವಿದಿತಂ ಎಂಬ
ಬ್ರಹ್ಮಬ್ರಹ್ಮ ಶಬ್ದಕ್ಕೆ ಪರಬ್ರಹ್ಮ ಗುರುವೆ ಗುರು.
ಬಸವಪ್ರಿಯ ಕೂಡಲಸಂಗಮದೇವಾ
ಮಾಂ ತ್ರಾಹಿ ಕರುಣಾಕರನೆ. ॥ ೮೪ ॥

೯೧೫

ಓಂಕಾರಂ ನಾದರೂಪಂ ಚ ಓಂಕಾರಂ ಮಂತ್ರರೂಪಕಂ
ಓಂಕಾರಂ ವ್ಯಾಪಿ ಸರ್ವತ್ರ ಓಂಕಾರಂ ಗೋಪ್ಯಮಾನನಂ ॥
ಎಂದುದಾಗಿ, ಓಂ ಎಂಬ ಶಬ್ದಕ್ಕೆ ಸಿಲುಕದ
ನಿಶ್ಶಬ್ದಮಯಮಪ್ಪ ನಿರಾಲಂಬಮೂರ್ತಿ
ಮದ್ಗುರುವೆ ಮನೋಹರ ಗುರುವೆ ಪವನ ಮಾತಾನಂದ
ಮಲಹರ ನಿರ್ಮಲ ಗುರುವೆ ನಿರುಪಮ ಗುರುವೆ
ನಿರಂಜನ ಗುರುವೆ ನಿತ್ಯಪ್ರಸನ್ನ ಗುರುವೆ
ಸತ್ಯಪ್ರಸಾದಿ ಗುರುವೆ
ಭಕ್ತರ ಹೃತ್ಕಮಲವಾಸ ನಿವಾಸ ವರ ಮನೋಹರ ಗುರುವೆ
ಬಸವಪ್ರಿಯ ಕೂಡಲಸಂಗಮದೇವಾ
ಮಾಂ ತ್ರಾಹಿ ಕರುಣಾಕರನೆ. ॥ ೮೫ ॥

೯೧೬

ಓದಲೇತಕ್ಕೆ ಪ್ರಾಣಲಿಂಗಿಗೆ ? ಹಾಡಲೇತಕ್ಕೆ ಶರಣಂಗೆ ?
ನೋಡಿ ಕೂಡಲೇತಕ್ಕೆ ಐಕ್ಯಂಗೆ ?
ಆರೂಢಿಯ ಕೂಟ ಅಜಪತ್ವಂಗೆ ಬಾಹ್ಯಾಂತರಂಗೆ.
ಆಹ್ವಾನ ವಿಸರ್ಜನವೆಂದು ಭೇದಿಸದವನೆ ಪ್ರಾಣಲಿಂಗಿ,

ಪ್ರಣವ ಸ್ವರೂಪಿ, ಪರಂಜ್ಯೋತಿ,
ಬಸವಪ್ರಿಯ ಕೂಡಲಸಂಗಮದೇವ ಪ್ರಭುವೆ. || ೮೬ ||

೯೧೭

ಓದಿದರೇನಯ್ಯಾ? ಗಾದೆಯ ಮಾತಾಯಿತ್ತು.
ಹಾಡಿದರೇನಯ್ಯಾ? ಹರಟೆಯ ಕಥೆಯಾಯಿತ್ತು.
ನೋಡಿದರೇನಯ್ಯಾ? ಭೂತದಂತಾಯಿತ್ತು.
ಇದರ ಭೇದಾದಿ ಭೇದವನರಿದು,
ಲಿಂಗದಲ್ಲಿ ಸಾಧನೆಯ ಮಾಡುವ ಶರಣರ ಪಾದಕ್ಕೆರಗಿ
ನಾನು ಬದುಕಿದೆನು ಕಾಣಾ, ಬಸವಪ್ರಿಯ ಕೂಡಲಚೆನ್ನಬಸವಣ್ಣಾ. || ೮೭ ||

೯೧೮

ಕಂಗಳ ಮಣಿಯ ಬೆಳಗಿನೊಳು, ಈರೇಳು ಭುವನದ ಶೃಂಗಾರವಡಗಿತ್ತು.
ಆರೂ ಅರಿಯರಲ್ಲಾ.
ಅತಿ ಶೃಂಗಾರದೊಳಗಣ ಗಂಧವನೊಂದು ಘ್ರಾಣ ನುಂಗಿತ್ತು.
ಘ್ರಾಣದೊಳಗಣ ಗಂಧವ ಪ್ರಾಣ ನುಂಗಿತ್ತು.
ಪ್ರಾಣದೊಳಗಣ ಗಂಧದ ಭಾವ ನುಂಗಿತ್ತು.
ಭಾವದೊಳಗಣ ಗಂಧದ ಬಯಲು ನುಂಗಿತ್ತು.
ಬಯಲೊಳಗಣ ಗಂಧವ ಮಹಾಬಯಲ ಕೂಡಿದ ಲಿಂಗೈಕ್ಯಂಗೆ
ಭವಬಂಧನವಿಲ್ಲೆಂದಿತ್ತು ಗುರುವಚನ,
ಬಸವಪ್ರಿಯ ಕೂಡಲಚೆನ್ನಬಸವಣ್ಣಾ. || ೮೮ ||

೯೧೯

ಕಂಡುವ ಹೇಳಿಹೆನೆ ? ಸಮಯಕ್ಕೆ ದೂರ,
ಎನ್ನ ಇರವನರಿಯರು. ಲೆಂಡನೆಂಬರು, ಸುಮ್ಮನಿದ್ದೇನೆ.
ಇವರೆನ್ನ ಆರೈದು ಕಂಡುದ ನುಡಿವರು.
ಎನ್ನ ಮುಟ್ಟಿದವರ ಎನ್ನಂತೆ ಮಾಡಿಕೊಂಬೆ.
ಎನ್ನ ಅರಿಯದವರ ಹಾದಿಯ ಹೋಗೆ.
ಎನ್ನನರಿತ ಜಂಗಮದ ಸಂಗವ ಮಾಡುವೆ.
ಜಗದ ಸಂಗವನೊಲ್ಲೆ, ನಿಗಮಾಗಮಶಾಸ್ತ್ರವನೊಲ್ಲೆ.
ಅವೆಲ್ಲವು ಸ್ಥಲ ನೆಲೆ ಇಟ್ಟು ಹೇಳುವವು.
ಎಮ್ಮ ಶರಣರು ನುಡಿದ ಶಾಸ್ತ್ರಕ್ಕೆ ಸ್ಥಲ ನೆಲೆ ಇಲ್ಲ.
ಇಂತಿವೆಲ್ಲವ ಬಲ್ಲೆನಾಗಿ, ಎನ್ನಂಗಕ್ಕೆ ಪ್ರಾಣಕ್ಕೆ ಭವವಿಲ್ಲ, ಬಂಧನವಿಲ್ಲ,
ಅದೇಕೆಂದರೆ: ಲಿಂಗವೆಂದ ಕಾರಣ, ನಾನೆಂಬುದಿಲ್ಲ,
ಬಸವಪ್ರಿಯ ಕೂಡಲಚೆನ್ನಬಸವಣ್ಣಾ. || ೮೯ ||

೯೨೦

ಕಟ್ಟಬೇಕು ಮನವ, ಮೆಟ್ಟಬೇಕು ಮದವ,
ಸುಟ್ಟುರುಹಬೇಕು ಸಪ್ತವ್ಯಸನಂಗಳ.
ಆ ತೊಟ್ಟಿಲ ಮುರಿದು, ಕಣ್ಣಿಯ ಹರಿದು, ಆ ಬಟ್ಟಬಯಲಲ್ಲಿ ನಿಂದಿರೆ,
ಬಸವಪ್ರಿಯ ಕೂಡಲಚೆನ್ನಬಸವಣ್ಣಾ. ॥ ೯೦ ॥

೯೨೧

ಕತ್ತಲೆ ಬೆಳಗೆನಬೇಡ, ಸತ್ಯ ತಾನೆನಬೇಡ,
ಚಿತ್ತವ ಸುಯಿಧಾನವ ಮಾಡಿ,
ಮೊತ್ತಾದ ಹೆಣ್ಣು ಹೊನ್ನು ಮಣ್ಣು ಗೆದ್ದರೆ ನಿರ್ಮುಕ್ತ,
ಬಸವಪ್ರಿಯ ಕೂಡಲಚೆನ್ನಬಸವಣ್ಣಾ. ॥ ೯೧ ॥

೯೨೨

ಕರಕನಿಷ್ಟ, ಕಬ್ಬಿಣವ ನೆರಹಿರೆ, ಪರುಷ ಮುಟ್ಟಲು ಚಿನ್ನವಾಗದೆ?
ಗುರುಕಾರುಣ್ಯವ ಪಡೆವರು ಇಂದು ಶರಣರೊಳು ಬೆರೆವರೆ,
ಬಸವಪ್ರಿಯ ಕೂಡಲಚೆನ್ನಬಸವಣ್ಣಾ. ॥ ೯೨ ॥

೯೨೩

ಕರವನರಿದಂಗೆ ಕಮಲದ ಹಂಗೇಕೊ?
ಇರವನರಿದಂಗೆ ಪರದ ಹಂಗೇಕೊ ?
ಪರವನರಿದಂಗೆ ಇರವದ ಹಂಗೇಕೊ?
ಇಹ ಪರವೆಂಬ ಉಭಯವಳಿದ ಶರಣಂಗೆ
ಮರ್ತ್ಯದ ನರರ ಹಂಗೇಕೊ ಹೇಳಾ,
ಬಸವಪ್ರಿಯ ಕೂಡಲಚೆನ್ನಬಸವಣ್ಣಾ? ॥ ೯೩ ॥

೯೨೪

ಕರಿದೈದು ಬಿಳಿದೈದು ಭಾಸುರವೈದು ಹದಿನೈದು ಬಗೆಯ
ಕರಣವ ಸುಟ್ಟು, ಸುರತ ಸುಗ್ಗಿ, ಕಾಲಕಾಮಾದಿಗಳೈವರ ಗೆದ್ದರೆ,
ಬಸವಪ್ರಿಯ ಕೂಡಲಚೆನ್ನಬಸವಣ್ಣಾ. ॥ ೯೪ ॥

೯೨೫

ಕಲ್ಲುದೇವರ ನಂಬಿದವರೆಲ್ಲ
ಕಲಿಯುಗದ ಕತ್ತಲೆಯೊಳಗಾಗಿ ಕತ್ತೆಗಳಾಗಿ ಹೋದರು.
ಅದೇನು ಕಾರಣವೆಂದರೆ:
ತಮ್ಮ ದೇವರು ಇಕ್ಕಿದ ಓಗರವನುಣ್ಣಲೊಲ್ಲದೆ, ಒಡನೆ ಮಾತಾಡದು.
ಗುಡಿಯ ಕಲ್ಲು ಮೇಲೆ ಬಿದ್ದರೆ ಒಡೆದು ಹಾಳಾಗಿ ಹೋಗುತ್ತದೆ.

ಇಂತಪ್ಪ ಕಲ್ಲ ಪೂಜಿಸಿ, ಸಲ್ಲದೆ ಹೋದರು. ಅದಂತಿರಲಿ,
ಮಣ್ಣ ದೇವರು ಎಂದು ಪೂಜಿಸಿ,
ಮಜ್ಜನಕ್ಕೆ ನೀಡಲಮ್ಮದೆ. ಲಜ್ಜೆಗೆಟ್ಟು, ನಾಯಾಗಿ ಜೊಗುಳಿ ಹೋದರು.
ಆದಂತಿರಲಿ,
ಮರನ ದೇವರೆಂದು ಪೂಜಿಸಿ ಧೂಪ ದೀಪವ ಮುಂದಿಡಲಮ್ಮರು.
ಅದ್ಲೊಂದು ವ್ಯಾಪಾರಕ್ಕೊಳಗಾಗಿ,
ತಾಪತ್ರಯಕ್ಕೆ ಸಿಲ್ಕಿ ಪಾಪಿಗಳಾಗಿ ಸತ್ತುಹೋದರು.
ಸಲ್ಲದು ಶಿವನಲ್ಲಿ,
ಎಮ್ಮ ಭಕ್ತರಿಗೆ ಈ ಪರಿಯಲ್ಲ ಕೇಳಿರಣ್ಣಾ,
ಇದೆಲ್ಲ ಪಾಪಿಗಳ ಹಾಗೆ, ಎನ್ನ ದೇವ ನಡೆವ, ನುಡಿವ,
ಇಕ್ಕಿದರುಂಬ, ಕೊಟ್ಟರೆ ತಕ್ಕೊಂಬ, ಪೂಜಿಸಿದರೆ ಪೂಜೆಗೊಂಬ,
ಅನೇಕ ಪೂಜೆಯಲ್ಲಿ,
ತನ್ನ ನಂಬಿದ ಭಕ್ತರಿಗೆ–ಬುದ್ಧಿಯ ಹೇಳುವ, ಶುದ್ಧಾತ್ಮನ ತೋರುವ.
ತಾ ಮುದ್ದಿನಲ್ಲಿ ಸಜ್ಜನ ಸದ್ಭಕ್ತರಲ್ಲಿ ಇದ್ದೂ ಇಲ್ಲದಂತಿಪ್ಪ.
ಪ್ರಸಿದ್ಧ ಜಂಗಮಲಿಂಗವ ಪೂಜಿಸಿ, ಸ್ವಯಲಿಂಗಿಗಳಾದರು ಎಮ್ಮ ಶರಣರು.
ಅವರು ಹೋದ ಹಾದಿಯ ನೋಡಿದರೆ, ಎನಗೊಂದು ಹಾದಿ ಸಿಕ್ಕಿತ್ತು,
ಆ ಹಾದಿಗೊಂಡು ಹೋಗಿ ಅವರ ಪಾದವಕಂಡು,
ಕೆಟ್ಟು, ಬಟ್ಟಬಯಲಾದೆ ನಯ್ಯಾ,
ಬಸವಪ್ರಿಯ ಕೂಡಲಚೆನ್ನಬಸವಣ್ಣಾ. || ೯೫ ||

೯೨೬

ಕಾಡಬೇಡ ಕಂಡವರ, ಬೇಡಬೇಡ ನರರುಗಳ,
ಆಡಬೇಡ ಅನೃತವ, ನೋಡಬೇಡ ಪರಸ್ತ್ರೀಯರ,
ಗಾಢಗಂಭೀರ ಲಿಂಗಾರೂಢವಾದ
ಬಸವಪ್ರಿಯ ಕೂಡಲಚನ್ನಬಸವಣ್ಣ. || ೯೬ ||

೯೨೭

ಕಾಣಬಾರದ ಘನವೆಂದು, ಜಗವೆಲ್ಲ ಹೇಳುತ್ತಿದೆ.
ಈ ಕಾಣಬಾರದ ಘನವ ನಾನಾರ ಕೇಳಲಯ್ಯ!
ಗುರು ಹೇಳಲಿಲ್ಲ, ಲಿಂಗ ಹೇಳಲಿಲ್ಲ, ಜಂಗಮ ಹೇಳಲಿಲ್ಲ.
ಅದು ಹೇಗೆ ಎಂದರೆ: ಗುರು ಒಂದು ಲಿಂಗವ ಕೊಟ್ಟು,
ತನ್ನ ಅಂಗದ ಕುರಿತು, ಆ ಲಿಂಗಕ್ಕೆ ಬೆಲೆಯ ತಕ್ಕೊಂಡು ಹೋದನಲ್ಲದೆ,
ಆ ಕಾಣಬಾರದ ಘನವ ಹೇಳಿದುದು ಇಲ್ಲ.
ಇದ ಲಿಂಗವೆಂದು ಪೂಜಿಸಿದರೆ, ಕಂಗಳ ಕಾಮ ಘನವಾಯಿತ್ತಲ್ಲ!
ಎರಡರ ಸಂಗಸುಖವ ಹೇಳಲರಿಯದೆ. ಜಂಗಮವೆಂದು ಪೂಜೆಯ ಮಾಡಿದರೆ,

ಈ ಜಗದೊಳಗೆ ಹುಟ್ಟಿದ ಪದಾರ್ಥಕ್ಕೆ ಒಡೆಯನಾದನಲ್ಲದೆ,
ಈ ಕಾಣಬಾರದ ಘನವ, ಹೇಳಿದುದಿಲ್ಲ. ಅದೇನು ಕಾರಣವೆಂದರೆ:
ಆ ಕಾಣಬಾರದ ಘನವ, ತಾನೊಬ್ಬ ಕೇಳಲು ಬಾರದು,
ತಾನೊಬ್ಬರಿಗೆ ಹೇಳಲು ಬಾರದು.
ಏಕೆ? ನಾಮರೂಪಿಲ್ಲವಾಗಿ, ನುಡಿಯಿಲ್ಲ.
ಇಂತಪ್ಪ ಘನ ತಾನೆ, ಒಂದು ರೂಪ ತೊಟ್ಟು,
ತನ್ನ ಲೀಲೆಯ ಎಲ್ಲ ಶರಣರೊಳು ನಟಿಸಿ, ತನ್ನ ತಾನೆ ಸಾಕಾರ ನಿರಾಕಾರವಾಗಿ,
ಏಕವಾದ ಭೇದವನರಿಯದೆ ಈ ಲೋಕದಲ್ಲಿ ಇದ್ದರೇನು?
ಆ ಲೋಕದಲ್ಲಿ ಹೋದರೇನು?
ಹದಿನಾಲ್ಕುಲೋಕವು ತಾನೆಯಾದ ಚಿನ್ಮಯನ ಹೇಳಿಹೆನೆಂದರೆ ಎನ್ನಳವಲ್ಲ.
ಬಸವಪ್ರಿಯ ಕೂಡಲಚೆನ್ನಬಸವಣ್ಣಾ ನೀವೆ ಬಲ್ಲಿರಿ. ॥ ೯೭ ॥

೯೮

ಕಾಯ ಕರಣಾದಿಗಳ ಏಕವ ಮಾಡಿದ ಪ್ರಸಾದಿ.
ಪ್ರಾಣ ನಿಃಪ್ರಾಣವನೇಕವ ಮಾಡಿದ ಪ್ರಸಾದಿ.
ಭಾವ ನಿರ್ಭಾವವನೇಕವ ಮಾಡಿದ ಪ್ರಸಾದಿ.
ಮನಬುದ್ಧಿಚಿತ್ತಹಂಕಾರವನೇಕವ ಮಾಡಿದ ಪ್ರಸಾದಿ.
ಸಪ್ತಧಾತು ಷಡುವರ್ಣವನೇಕವ ಮಾಡಿದ ಪ್ರಸಾದಿ.
ಇಂತಿವೆಲ್ಲವನೇಕವ ಮಾಡಿದ ಪ್ರಸಾದಿ.
ಈ ಪ್ರಸಾದವ ಕಂಡು ಎನ್ನ ಭವಂ ನಾಸ್ತಿಯಾಯಿತ್ತು ಕಾಣಾ,
ಬಸವಪ್ರಿಯ ಕೂಡಲಚೆನ್ನಬಸವಣ್ಣಾ. ॥ ೯೮ ॥

೯೯

ಕಾಯಸ್ಥಲ, ಕರಸ್ಥಲ, ಉರಸ್ಥಲ,
ಶಿ ಸ್ಥಲ, ಪ್ರಾಣಸ್ಥಲ, ಭಾವಸ್ಥಲವೆಂದು ನುಡಿದಾಡುವರು.
ಆ ಸ್ಥಲದೊಳಗಣ ಸ್ವಯಸ್ಥಲವನರಿಯರು ಕಾಣಿರೆ.
ಸ್ವಯಸ್ಥಲವೆಂತಿಪ್ಪುದೆಂದರೆ, ಕಾಯಸ್ಥಲವನರಿದರೆ,
ಅದು ತಾನೇ ಲಿಂಗವಾಯಿತ್ತು.
ಕರಸ್ಥಲವನರಿದರೆ, ಕೈಲಾಸ ಮರ್ತ್ಯ ತನ್ನೊಳಗಾಯಿತ್ತು.
ಉರಸ್ಥಲವನರಿದರೆ, ಪರವು ತನ್ನೊಳಗಾಯಿತ್ತು.
ಶಿರಸ್ಥಲವನರಿದರೆ ಶಿವನೆಂಬುದಕ್ಕೆ ಇಲ್ಲ.
ಪ್ರಾಣಸ್ಥಲವನರಿದರೆ, ಭಯ ಮರಣಾದಿಗಳಿಲ್ಲ.
ಭಾವಸ್ಥಲವನರಿದರೆ, ಇನ್ನಾವುದೂ ನೆನಹಿಲ್ಲ.
ಇದರ ಭೇದವನರಿಯದ, ಸ್ಥಲನೆಲೆಯುಂಟೆಂಬಿರಿ.
ಅದರ ಭೇದವ ನೀವು ಅರಿಯಿರಿ ಕಾಣಿರೊ.

ಸ್ಥಲವೆಂದರೆ ಅಂಗ, ನೆಲೆಯೆಂದರೆ ಪ್ರಾಣ.
ಇದನರಿಯದೆ ತಲೆ ಕೆಳಗಾಗಿ ಹೋದರು. ಆರು? ದೇವದಾನವರು.
ನಿಮ್ಮ ಪಾಡೇನೋ ನರಗುರಿಗಳಿರಾ?
ಇದನರಿದು, ಇನ್ನಾದರೂ ನಮ್ಮ ಶರಣರಿಗೆರಗಿ ಬದುಕಿರೊ,
ನಮ್ಮ ಬಸವಪ್ರಿಯ ಕೂಡಲಚೆನ್ನಬಸವಣ್ಣಾ. ॥ ೯೯ ॥

೯೩೦

ಕೀಡೆ ತುಂಬಿಯ ಬಿಡದೆ ನೆನೆಯೆ, ನೋಡಲಾಕ್ಷಣ ತುಂಬಿಯಾಗಿಹುದು.
ರೂಢಿಯೊಳು ಅಗಮ್ಯ ಶರಣರ ಪಾದವೆ ಗೂಡಾಗಿ ನಿಂದಿರೆ,
ಬಸವಪ್ರಿಯ ಕೂಡಲಚೆನ್ನ [ಬಸವಣ್ಣ] ॥ ೧೦೦ ॥

೯೩೧

ಕುದುರೆಯ ಕುಪ್ಪಟ ಘನವಾಯಿತ್ತು. ಆನೆಯ ಹರಿದಾಟ ನಿಲಬಾರದು.
ಒಂಟೆಯ ಕತ್ತು ನೆಟ್ಟಗಾಯಿತ್ತು. ಬಂಟರ ಹರಿದಾಟ ಉಂಟು
ಕಟ್ಟಿಗೆಯವರು ಉಗ್ಗಡಿಸುತ್ತ, ಭಟರುಗಳು ಪೊಗಳುತ್ತ,
ಸಕಲವಾದ್ಯ ರಭಸದೊಳಗೆ ಸಂದಳಿಯೆಂಬ ಅಂದಳದ ಮೇಲೆ
ಚಂದವಾಗಿ ಮನೋರಾಜ್ಯಂಗೆಯ್ವುತ್ತಿರಲು,
ಈ ಸುಖವನೊಲ್ಲದೆ, ಮುಂದೆ ದುಃಖ ಉಂಟೆಂದು ಶರಣನರಿದು,
ತಲೆ ಎತ್ತಿ ನೋಡಿ, ಘನಗುರುವಿನ ಹಸ್ತದಿಂದ ಅನುಜ್ಞೆಯಂ ಪಡೆದು,
ಧ್ಯಾನ ಧಾರಣ ಸಮಾಧಿಯಿಂದ ತಿಳಿದು ನೋಡಲಾಗಿ,
ಇತ್ತ ಶೂನ್ಯವೆಂಬ ಪಟ್ಟಣದೊಳಗೆ ಅನಾಮಿಕನೆಂಬ ಲಿಂಗ ಅರಸು,
ಆ ಅರಸಿನ ಗೊತ್ತುವಿಡಿದು ಇತ್ತಲೆ
ಮನವೆಂಬ ಅರಸನು ಹಿಡಯಲಾಗಿ ಹಿಡಿದು,
ಆನೆ, ಕುದುರೆ, ಸೇನೆಯನೆಲ್ಲ ಸೂರೆಗೊಂಡು,
ಭಂಡಾರ ಬೊಕ್ಕಸ ಅರಮನೆಯನೆಲ್ಲ ಸುಟ್ಟು ಬಟ್ಟಬಯಲಮಾಡಿದ,
ನಮ್ಮ ಬಸವಪ್ರಿಯ ಕೂಡಲಚೆನ್ನಬಸವಣ್ಣ. ॥ ೧೦೧ ॥

೯೩೨

ಕೂಟವಿಲ್ಲದ ಮಾಟ, ಬೇಟವಿಲ್ಲದ ನೋಟ,
ಅರಿವಿಲ್ಲದ ಕೂಟ, ಓಟವಿಲ್ಲದ [ಆಟ].
ನಾಲ್ಕರ ಅನುವನರಿಯದೆ ನುಡಿವುದೆ ಜಗದಾಟ,
ಬಸವಪ್ರಿಯ ಕೂಡಲಚೆನ್ನಬಸವಣ್ಣಾ. ॥ ೧೦೨ ॥

೯೩೩

ಕೇಳು ಕೇಳಾ, ಭಕ್ತ, ಮಹೇಶ, ಪ್ರಸಾದಿ,
ಪ್ರಾಣಲಿಂಗಿ, ಶರಣ, ಐಕ್ಯರೆಂದು ನುಡಿದಾಡುತಿಪ್ಪಿರಿ,

ಇಂತೀ ಷಟ್‌ಸ್ಥಲಸಂಪನ್ನತೆ ಎಲ್ಲರಿಗೆ ಎಂತಾಯಿತ್ತಯ್ಯ ಹೇಳಿರಣ್ಣಾ!
ಭಾಗ್ಯವುಳ್ಳಾತಂಗೆ ಭಕ್ತಿಸ್ಥಲವಾಗದು.
ಮಕ್ಕಳುಳ್ಳಾತಂಗೆ ಮಹೇಶ್ವರಸ್ಥಲವಾಗದು.
ಪರಧನ ಚೋರಂಗೆ ಪ್ರಸಾದಿಸ್ಥಲವಾಗದು.
ಇಹಪರವೆಂದು ಕಾಮಿಸುವಾತಂಗೆ ಪ್ರಾಣಲಿಂಗಿಸ್ಥಲವಾಗದು.
ಪರದಲ್ಲಿ ಪರಿಣಾಮವನರಿಯದಾತಂಗೆ ಪ್ರಾಣಲಿಂಗಿಸ್ಥಲವಾಗದು.
ಹರುಷವೇ ಹರನಲ್ಲಿ ಲೀಯವಾದಾತಂಗೆ ಐಕ್ಯಸ್ಥಲವಾಗದು.
ನೆರೆದ ದೇಹವು ಕರ್ಪುರ ಉರಿಗೊಂಡಂತೆ ಅಲ್ಲದೆ ನಿರವಯಸ್ಥಲವಾಗದು.
ಇದು ನಮ್ಮ ಬಸವಪ್ರಿಯ ಕೂಡಲಚೆನ್ನಬಸವಣ್ಣಾ. ॥ ೧೦೩ ॥

೯೩೪

ಗುರು ಗುರು ಎಂದು ನುಡಿದಾಡುತಿಪ್ಪರು,
ಆ ಗುರು ನೆಲೆ ಎಂತಿಪ್ಪುದೆಂದರಿಯರು.
ಆ ಗುರು ನೆಲೆ ಎಂತೆಂದರೆ,
ಪರಮಸುಖಪರಿಣಾಮ ತಲೆಗೇರಿ ನೆಲೆಗೊಂಬುದೆ ಗುರು ನೆಲೆ.
ವರ ಸಮಾಧಿಯೊಳಗೆ ಚರಿಸುವ
ಗುರು ಲಿಂಗ ಜಂಗಮ ಪಾದೋದಕ ಪ್ರಸಾದವನರಿದಿಪ್ಪುದೆ ಗುರು ನೆಲೆ.
ಇದನರಿಯದೆ ಮನಕೆ ಬಂದಂತೆ
ಕಾಯವೆ ಗುರು, ಪ್ರಾಣವೆ ಲಿಂಗ, ಭಾವವೆ ಜಂಗಮವೆಂದು ನುಡಿದಾಡುವ
ಗಾವಿಲರ ಮಾತ ಕೇಳಲಾಗದು ಎಂದಾತ,
ನಮ್ಮ ಬಸವಪ್ರಿಯ ಕೂಡಲಚೆನ್ನಬಸವಣ್ಣ. ॥ ೧೦೪ ॥

೯೩೫

ಗುರು ಗುರು ಎಂದು ಪೂಜೆಯ ಮಾಡುವರು.
ಮತ್ತೆಯಾ ಗುರುವ ನರನೆಂದೆಂಬರು, ಅವರು ಗುರುದ್ರೋಹಿಗಳು.
ಲಿಂಗ ಲಿಂಗವೆಂದು ಪೂಜೆಯ ಮಾಡುವರು, ಆ ಲಿಂಗವ ಶಿಲೆ ಎಂಬರು,
ಅವರು ಲಿಂಗದ್ರೋಹಿಗಳು.
ಜಂಗಮ ಜಂಗಮವೆಂದು ಪೂಜೆಯ ಮಾಡುವರು,
ಆ ಜಂಗಮವ ಜಗದ ಹಂಗಿಗರೆಂಬರು, ಅವರು ಜಂಗಮದ್ರೋಹಿಗಳು.
ಈ ಮೂರು ಕರ್ತರೆಂದು ಅರಿಯದವಂಗೆ ಕುಂಭೀಪಾಕ ನಾಯಕನರಕ ತಪ್ಪದು,
ಬಸವಪ್ರಿಯ ಕೂಡಲಚೆನ್ನಬಸವಣ್ಣಾ. ॥ ೧೦೫ ॥

೯೩೬

ಗುರುಪಾದೋದಕಕ್ಕೆ ಹರಿವ ನದಿಯೆಲ್ಲ ಸರಿಯೆಂದು ನುಡಿದರೆ,
ಸುರಿಯವೆ ಬಾಲಹುಳು?

ಇಷ್ಟಲಿಂಗದ ಪಾದೋದಕಕ್ಕೆ ಅಷ್ಟಾಷಷ್ಟಿತೀರ್ಥಂಗಳು ಸರಿಯಿಲ್ಲ,
ಜಂಗಮದ ಪಾದೋದಕಕ್ಕೆ ಜಗದ ತೀರ್ಥ ಜಾತ್ರೆ ಸರಿಯೆಂದು ನುಡಿದರೆ,
ಜಗದ ಜಂಗುಳಿಗಳೆಂಬೆ.
ಇಂತೀ ತ್ರಿವಿಧ ಪಾದೋದಕ ತ್ರಿವಿಧ ಅಂಗಕ್ಕೆ ಪ್ರಾಣ.
ಇಂತು ಮಂತ್ರೋದಕ ಮಜ್ಜನೋದಕ ಪ್ರಸಾದೋದಕ
ಈ ತ್ರಿವಿಧವು ತ್ರಿವಿಧ ಲಿಂಗಕ್ಕೆ ಪ್ರಾಣವು.
ಈ ಷಡ್ವಿಧ ಪಾದೋದಕವೆ ಷಡ್ವಿಧ ಅಂಗ ಲಿಂಗದ ಕಳೆ.
ಆ ಕಳೆಯೆ ಕಾರಣ, ಆ ಕಾರಣವೆ ಎಲ್ಲರಿಗೆಯೂ ಪ್ರಾಣದ ಕಳೆ.
ಪ್ರಾಣದ ಕಳೆಯೆ ಪಾದೋದಕ. ಅದಕ್ಕೆ ದೃಷ್ಟ–ರಹಸ್ಯೇ :
ಸರ್ವತೀರ್ಥಾಭಿಷೇಕಾದಿ ಶುದ್ಧೋ ಮಾನಸಿ ಜಾಯತೇ ।
ಗುರೋರಂಘ್ರಿಸ್ಪರ್ಶಜಲಂ ತಸ್ಮಾತ್ ಶಿರಸಿ ಧಾರಯೇತ್ ॥
ಎಂದುದಾಗಿ, ಆ ಪಾದೋದಕವ ಕೊಂಡವನೆ ಪರಬ್ರಹ್ಮಸ್ವರೂಪು.
ಬಸವಪ್ರಿಯ ಕೂಡಲಸಂಗಮದೇವಾ,
ಮಾಂ ತ್ರಾಹಿ, ತ್ರಾಹಿ ಕರುಣಾಕರನೆ. ॥ ೧೦೬ ॥

೯೩೭

ಗುರುಪ್ರಸಾದ, ಲಿಂಗಪ್ರಸಾದ, ಜಂಗಮಪ್ರಸಾದ,
ಅಚ್ಚಪ್ರಸಾದ, ಅರ್ಪಿತಪ್ರಸಾದ, ಸಹಭೋಜನ,
ಆರರಲ್ಲಿ ಅರ್ಪಿತ, ಮೂರರಲ್ಲಿ ಮುಕ್ತವೆಂದು
ಊರೆಲ್ಲರ ಮುಂದೆ ದೂರಿಯಾಡುವ ನಾಯಿಮನುಜರಿರಾ,
ಹೀಗೇಕೆ ದೂರುವಿರಿ?
ಗುರುವೆಷ್ಟು, ಲಿಂಗವೆಷ್ಟು, ಜಂಗಮವೆಷ್ಟು, ಪ್ರಸಾದವೆಷ್ಟು, ಅರ್ಪಿತವೆಷ್ಟು?
ಇದರ ಅವಧಾನವನರಿದ ಶರಣಂಗೆ, ಒಂದಲ್ಲದೆ ಎರಡುಂಟೆ?
ಅವು ಒಂದೆಂಬುವನಕ ಬಂಧನವು.
ತತ್ವಾರ್ಥಕ್ಕೆ ಇದಿರಿಟ್ಟುಕೊಂಡಿಪ್ಪನಲ್ಲದೆ,
ಅರಿದ ಶರಣಂಗೆ ಒಂದೆಂಬುದು ಸಂದೇಹ.
ಈ ರೀತಿಯನರಿಯದೆ ತೂತುಬಾಯೊಳಗೆ ಮಾತಿಗೆ ತಂದು
ನುಡಿದಾಡುವ ಪಾತಕರ ಮೆಚ್ಚುವನೆ,
ನಮ್ಮ ಶರಣ ಬಸವಪ್ರಿಯ ಕೂಡಲಚೆನ್ನಬಸವಣ್ಣ? ॥ ೧೦೭ ॥

೯೩೮

ಗುರುಭಕ್ತಿಯ ಮಾಡಿಹೆವೆಂದು ಅಂಗಸೂತಕವ ಮಾಡಿದರು.
ಲಿಂಗಭಕ್ತಿಯ ಮಾಡಿಹೆವೆಂದು ಮನಸೂತಕವ ಮಾಡಿದರು.
ಜಂಗಮಭಕ್ತಿಯ ಮಾಡಿಹೆವೆಂದು ಜಗದ ಹಂಗಿಗರಾದರು.
ಈ ತ್ರಿವಿಧಭಕ್ತಿಯ ಮಾಡಿಹೆವೆಂದು ತ್ರಿವಿಧವ ಹಿಡಿದು,

ತ್ರಿವಿಧಮಲಸಂಬಂಧಿಗಳಾಗಿ ಹೋದರಲ್ಲದೆ
ತ್ರಿವಿಧವನು ತ್ರಿವಿಧಕ್ಕಿತ್ತು ತ್ರಿವಿಧದ ನೆಲೆಯನರಿದು,
ಈ ಕಲಿಯುಗದ–ಭವವ ದಾಂಟಿ,
ಬಯಕೆಯ ಸವಿದು, ಭಾವ ಬಯಲಾಗಿ, ಆ ಬಯಲನೆಯ್ದಿ ಹೋಗುವ ಶರಣರ
ಪಾದವ ನಂಬಿ ಕೆಟ್ಟು ಬಟ್ಟಬಯಲಾದೆನಯ್ಯಾ.
ಬಸವಪ್ರಿಯ ಕೂಡಲಚೆನ್ನಬಸವಣ್ಣಾ. ॥ ೧೦೮ ॥

೯೩೯

ಗುರುವ ಮುಟ್ಟಿ, ಗುರುವಿನಂತಾಗಬೇಡವೆ?
ಲಿಂಗವ ಮುಟ್ಟಿ ಪೂಜಿಸಿ ಲಿಂಗದಂತಾಗಬೇಡವೆ?
ಜಂಗಮವ ಮುಟ್ಟಿ ಪೂಜಿಸಿ ಪಾದೋದಕ ಪ್ರಸಾದವ ಕೊಂಡು
ಜಂಗಮದಂತಾಗಬೇಡವೆ?
ಈ ತ್ರಿವಿಧವಿಡಿದು, ತ್ರಿವಿಧವ ಬಿಟ್ಟು, ತ್ರಿವಿಧವ ಮುಟ್ಟಿ,
ತ್ರಿವಿಧವನೇಕವ ಮಾಡಿ, ಈ ಭವವ ದಾಂಟಿ ಹೋದವರ ಭಕ್ತರೆಂಬೆ,
ಮಹೇಶ್ವರ, ಪ್ರಸಾದಿ ಪ್ರಾಣಲಿಂಗಿ, ಶರಣ, ಐಕ್ಯರೆಂಬೆ.
ಇದನರಿಯದೆ ಮದ ಮತ್ಸರವ ಬಿಡದೆ,
ಕುದಿದು ಕೋಟಲೆಗೊಂಬ, ಬಿನುಗರನೊಲ್ಲ
ನಮ್ಮ ಬಸವಪ್ರಿಯ ಕೂಡಲಚೆನ್ನಬಸವಣ್ಣ. ॥ ೧೦೯ ॥

೯೪೦

ಗುರುವಿಂದಾದ ಲಿಂಗ, ಲಿಂಗದಿಂದಾದ ಜಂಗಮ,
ಜಂಗಮದಿಂದಾದುದು ಜಗ.
ಜಗಹಿತಾರ್ಥವಾಗಿ ಪಾದೋದಕ ಪ್ರಸಾದವಾಯಿತ್ತು,
ಪಾದೋದಕ ಪ್ರಸಾದದಿಂದ ಪರವನೆಯ್ದಿದರು
ಜಗದೊಳು ಭಕ್ತಗಣಂಗಳು,
ಬಸವಪ್ರಿಯ ಕೂಡಲಸಂಗಮದೇವ ಪ್ರಭುವೆ. ॥ ೧೧೦ ॥

೯೪೧

ಗುರುವಿಂದಾದ ಬಯಲು, ಬಯಲಿಂದಾದ ಬ್ರಹ್ಮವೆ ಲಿಂಗ
ಆ ಲಿಂಗದಿಂದೊಗೆದ ಅವಯವಂಗಳೆ ಜಂಗಮ
ಆ ಜಂಗಮದ ಪರಮಾನಂದವೆ ಪಾದೋದಕ .
ಆ ಪಾದೋದಕ ಪರಿಣಾಮದ ಸುಖ ಪರಮ ಪ್ರಸಾದ
ಮತ್ತಾ ಪ್ರಸಾದದ ಪ್ರಚುರವೆ ಪ್ರಣಮಾನಂದ ಪರಂಜ್ಯೋತಿ
ಬಸವಪ್ರಿಯ ಕೂಡಲಸಂಗಮದೇವ ಪ್ರಭುವೆ. ॥ ೧೧೧ ॥

೯೪೨

ಗುರುವಿನಿಂದಾದ ಪರಂ ಗೂಢಂ ಶರೀರ ಸ್ಥಲಂ.
ಲಿಂಗಕ್ಷೇತ್ರಮನಾದಿಯೆಂಬ
ಪಂಚಸಂಜ್ಞೆಯನುಳ್ಳ ಗುರುವಿನಿಂದಾದ ಕಾರಣ
ಗುರುವಿಂದ ಪರವಿಲ್ಲವೆಂದು ಒರೆವುತ್ತಿವೆ ನೋಡಾ
ವೇದಾಗಮ ಶಾಸ್ತ್ರ ಪುರಾಣಗಳು
ಇದು ಕಾರಣ, ನಿಮ್ಮ ಚರಣದ ಕಿರಣವೆ ಅಖಿಳ ಬ್ರಹ್ಮಾಂಡವೆಂದು
ಆದಿ ಪರಮ ಪ್ರಣಮವೆಂದೊರಲುತ್ತಿವೆ,
ಪರಂಜ್ಯೋತಿ ಬಸವಪ್ರಿಯ ಕೂಡಲಸಂಗಮದೇವ ಪ್ರಭುವೆ. ॥ ೧೧೨ ॥

೯೪೩

ಗುರುಶಿಷ್ಯಸಂಬಂಧವೆಂತಿಪ್ಪುದೆಂದಡೆ, ಹೇಳಿಹೆ ಕೇಳಿರೋ,
ಅರಿಮರುಳುಗಳಿರಾ.
ಕಾಯಗುಣವಳಿದುದೇ ಗುರು, ಜೀವಗುಣವಳಿದುದೇ ಲಿಂಗ,
ಪ್ರಾಣಗುಣವಳಿದುದೇ ಜಂಗಮ.
ಈ ತ್ರಿವಿಧವನರಿದು ಆ ತ್ರಿವಿಧ ನಿಕ್ಷೇಪವನರುಹಿಸಿಕೊಟ್ಟವನೀಗ ಗುರು.
ಅಲ್ಲಿ ಉಪದೇಶವ ಕೊಂಡವನೀಗ ಶಿಷ್ಯ.
ಹೀಗಿರುವುದೀಗ ಗುರುಶಿಷ್ಯಸಂಬಂಧ.
ಅದಕ್ಕೆ ನಮೋ ನಮೋ ಎಂಬೆ,
ಬಸವಪ್ರಿಯ ಕೂಡಲಚೆನ್ನಬಸವಣ್ಣಾ. ॥ ೧೧೩ ॥

೯೪೪

ಘನವೆಂದರೆ ತನುವಿನೊಳಗಾಯಿತ್ತು, ತನುವೆಂದರೆ ಮನದೊಳಗಾಯಿತ್ತು
ಮನವೆಂದರೆ ಮಾಯೆಯೊಳಗಾಯಿತ್ತು
ಮಾಯೆಯೆಂದರೆ ಭಾವದೊಳಗಾಯಿತ್ತು
ಭಾವವೆಂದಡೆ ನಿರ್ಭಾವವಾಯಿತ್ತು, ನಿರ್ಭಾವವೆಂದರೆ ಭಕ್ತನಾಯಿತ್ತು,
ಭಕ್ತನೆಂದರೆ ವಿರಕ್ತನಾದ, ವಿರಕ್ತನೆಂದರೆ ಭಕ್ತನಾದ.
ಗುರುವೆಂದರೆ ಶಿಷ್ಯನಾದ, ಶಿಷ್ಯನೆಂದರೆ ಗುರುವಾದ.
ಇಂತಿದೀಗ ಐಕ್ಯಸ್ಥಲವು.
ಇದನರಿಯದೆ ತಮ್ಮ ಪುದಿದ ಸಂಸಾರಕ್ಕೊಳಗಾಗಿ, ತುದಿ ಮೊದಲು ಕಾಣದೆ,
ಸದಮದವಹ ಸಂಸಾರವಿಷಯದೊಳಗೆ ಮುಳುಗಿದವರೆತ್ತ ಬಲ್ಲರೊ,
ನಿಮ್ಮ ಶರಣರ ಸುದ್ಧಿಯ, ಬಸವಪ್ರಿಯ ಕೂಡಲಚೆನ್ನಬಸವಣ್ಣಾ? ॥ ೧೧೪ ॥

೯೪೫

ಚೌದಳ ಷಡುದಳ ದಶದಳ ದ್ವಾದಶದಳ ಷೋಡಶದಳ ದ್ವಿದಳ,
ಒಳಹೊರಗಣ ಸ್ಥಳಕುಳವನರಿದು,

ಬೆಳಗುವ ಬೆಳಗ, ಹೊಳೆವ ಪ್ರಭೆ ಪ್ರಜ್ವಲಿಸಿ ಕಳವಳವಳಿದು,
ಕಾಯದ ಕದಳಿಯ ಗೆಲಿದು, ಕರಗಿ ಒಂದಾದ ಶರಣನೆ ಹರನು,
ಬಸವಪ್ರಿಯ ಕೂಡಲಸಂಗಮದೇವ ಪ್ರಭುವೆ. || ೧೧೫ ||

೯೪೬

ಜಂಗಮ ಜಂಗಮವೆಂದು ನುಡಿದು, ಜಗದ ಹಂಗಿಗರಾಗಿ ಇರಲಾಗದು.
ಜಗದ ಕರ್ತನ ಕೈಯಲ್ಲಿ ಹಿಡಿದುಕೊಂಡು ಜಂಗುಳಿಗಳ ಬಾಗಿಲ ಕಾಯಲಾಗದು.
ಜಂಗಮದ ಸುಳುಹು ಎಂತಿರಬೇಕೆಂದ್ಡರೆ,
ತನ್ನ ನಂಬಿದ ಸಜ್ಜನರ ಸದ್ಭಕ್ತರಲ್ಲಿಗೆ ಲಿಂಗವಾಗಿ ಗಮಿಸಿ,
ತಾ ಕಂಡ ಲಿಂಗಾಂಗವನು ಅಲ್ಲಿಯೇ ನಿಕ್ಷೇಪಿಸಿ,
ತಾ ನಿರ್ಗಮನಿಯಾಗಿ ಸುಳಿಯಬಲ್ಲರೆ, ಜಂಗಮಲಿಂಗವದು
ಇಂತಲ್ಲದೆ ಕಂಡವರ ಕಾಡಿ ಬೇಡಿಕೊಟ್ಟರೆ ಕೊಂಡಾಡಿ, ಕೊಡದಿದ್ದಡೆ ಜರಿದು,
ತಾಗು ನಿರೋಧಕ್ಕೆ ಗುರಿಯಾಗಿ ನೋವುತ್ತ, ಬೇವುತ್ತ ಧಾವತಿಗೊಂಬ ಗಾವಿಲರ
ಎಂತು ಜಂಗಮವೆಂಬೆ, ಬಸವಪ್ರಿಯ ಕೂಡಲಚೆನ್ನಬಸವಣ್ಣಾ? || ೧೧೬ ||

೯೪೭

ಜಂಗಮಲಿಂಗ ಎಂತಿಹನು ಎಂದರೆ,
ಅಂತರಂಗದಲ್ಲಿ ಅರಿವು, ಬಹಿರಂಗದಲ್ಲಿ ಶಮೆ, ದಮೆ,
ಸರ್ವಶಾಂತಿ ಎಡೆಗೊಂಡು,
ತನ್ನ ನಂಬಿದ ಸಜ್ಜನಸದ್ಭಕ್ತರಿಗೆ,
ಭಾವಕ್ಕೆ ಜಂಗಮವಾಗಿ, ಪ್ರಾಣಕ್ಕೆ ಲಿಂಗವಾಗಿ, ಕಾಯಕ್ಕೆ ಗುರುವಾಗಿ,
ಪ್ರಾಣಕ್ಕೆ ಬಂದ ಪದಾರ್ಥವ ಲಿಂಗಾರ್ಪಿತವ ಮಾಡುತ್ತ
ಬಾರದ ಪದಾರ್ಥವ ಮನದಲ್ಲಿ ನೆನೆಯದೆ,
ಮಾನವರ ಬೇಡದೆ, ಬಡಭಕ್ತರ ಕಾಡದೆ,
ಒಡನೆ ಇಹ ಘನವನರಿದು, ದೃಢಭಕ್ತರೊಳು ಲಿಂಗವಾಗಿ,
ಏನು ನುಡಿದರೂ ನಿಕ್ಷೇಪಿಸಿ, ನಿರ್ಗಮನಿಯಾಗಿ ಸುಳಿಯಬಲ್ಲರೆ,
ಆತ ಲಿಂಗ ಜಂಗಮ.
ಅದಕ್ಕೆ ನಮೋ ನಮೋ ಎಂದು ಭವಂ ನಾಸ್ತಿಯಾಯಿತ್ತು ಕಾಣಾ,
ಬಸವಪ್ರಿಯ ಕೂಡಲಚೆನ್ನಬಸವಣ್ಣಾ. || ೧೧೭ ||

೯೪೮

ಜಂಗಮಲಿಂಗವೆಂತಾಹನೆಂದರೆ:
ಇಂತೀ ವಿಶ್ವಬ್ರಹ್ಮಾಂಡವು ತನ್ನ ಕುಕ್ಷಿಯೊಳು ನಿಕ್ಷೇಪವಾಗಿ,
ತಾ ನಿರ್ಗಮನಿಯಾಗಿ, ಲಿಂಗರೂಪಾಗಿ ಸುಳಿಯಬಲ್ಲರೆ
ಜಂಗಮಲಿಂಗವೆಂಬೆ. ಅದಕ್ಕೆ ನಮೋ ನಮೋ.

ಆ ನಿಲವಿಂಗೆ ಭವವಿಲ್ಲ, ಬಂಧನವಿಲ್ಲ.
ಇಂತಲ್ಲದೆ ವೇಷವ ಹೊತ್ತು, ಹೊರವೇಷದ ವಿಭೂತಿ ರುದ್ರಾಕ್ಷಿಯಂ ತೊಟ್ಟು,
ಕಾಸು ಹುಲುಸಕ್ಕೆ ಕೈಯಾಂತು, ವೇಶಿ ದಾಸಿಯರ ಬಾಗಿಲ ಕಾಯ್ದು,
ಲೋಕದೊಳಗೆ ಘಾಸಿಯಾಗಿ, ಜಂಗಮವೇಷಕ್ಕೆಲ್ಲ ಭಂಗವ ಹೊರಿಸಿ,
ಕಣ್ಣುಗಾಣದೆ ಜಾರಿ ಜರಿಯಬಿದ್ದು, ತಾ ದೂರಿಗೆ ಬಂದು,
ಈ ಮೂರಕ್ಕೊಳಗಾಗಿ ಗಾರಾಗಿ ಹೋಗುವರ ವೇಷಕ್ಕೆ ಶರಣಾರ್ಥಿ.
ಅವರ ಸುತ್ತಿರ್ದ ಪಾಶವ ಕಂಡು ಹೇಸಿತ್ತೆನ್ನ ಮನ,
ನಿಮ್ಮಾಣೆ ಬಸವಪ್ರಿಯ ಕೂಡಲಸಂಗಮದೇವಾ. ॥ ೧೧೮ ॥

೯೪೯

ಜಗದಗಲ ಮುಗಿಲಗಲ ಪಾದ ಪಾತಾಳದಿಂದತ್ತತ್ತ ಪಾದ.
ಬ್ರಹ್ಮಾಂಡದಿಂದತ್ತತ್ತ ಮಕುಟ
ವಿಶ್ವ ಬ್ರಹ್ಮಾಂಡವನು, ತನ್ನ ಕುಕ್ಷಿಯೊಳು
ನಿಕ್ಷೇಪವ ಮಾಡಿಕೊಂಡಿಪ್ಪ ದೇವನೀಗ ಎನ್ನದೇವ.
ಆ ದೇವನೊಳಗೆ ನಾನಡಕ, ನನ್ನೊಳಗೆ ಆ ದೇವನಡಕ.
ಇಂತಪ್ಪ ದೇವನ ನಂಬಿ, ನಾ ಕೆಟ್ಟು ಬಟ್ಟಬಯಲಾದೆ.
ಈ ದೇವನರಿಯದೆ ಜಗವೆಲ್ಲ ಕಲ್ಲದೇವರು, ಮಣ್ಣದೇವರು,
ಮರದೇವರು ಎಂದು ಇವನಾರಾಧಿಸಿ, ಕೆಟ್ಟರಲ್ಲಿ,
ಸ್ವರ್ಗ ಮರ್ತ್ಯ ಪಾತಾಳದವರೆಲ್ಲರು
ಎನ್ನ ದೇವನನರದು ಅರ್ಚಿಸಲಿಲ್ಲ, ಪೂಜಿಸಲಿಲ್ಲ, ಭಾವಿಸಲಿಲ್ಲ,
ಇದು ಕಾರಣ, ಆವ ಲೋಕದವರಾದರೂ ಆಗಲಿ,
ಎನ್ನ ದೇವನನರಿದರೆ, ಭವವಿಲ್ಲ ಬಂಧನವಿಲ್ಲ,
ನೆರೆ ನಂಬಿರೆ, ನಮ್ಮ ಬಸವಪ್ರಿಯ ಕೂಡಲಚೆನ್ನಬಸವಣ್ಣನ. ॥ ೧೧೯ ॥

೯೫೦

ಜಗದೊಳಗೆ ಹುಟ್ಟಿ, ಜಗದ ಹಂಗಿಗರಾಗಿ,
ನಾವು ಜಂಗಮ, ನಾವು ಭಕ್ತರೆಂಬ ನುಡಿಗೆ ನಾಚರು ನೋಡಾ.
ಅಪ್ಪುವಿನ ಘಟನ ಹೊತ್ತುಕೊಂಡು ಅನ್ನಪಾಂಗಳಿಗೆ ಅನುಸರಿಸಿ ನಡೆವುತ್ತ
ಹೊನ್ನು, ಹೆಣ್ಣು, ಮಣ್ಣನೀವವರ
ಬಾಗಿಲ ಕಾಯ್ವ ಅಣ್ಣಗಳ ವೇಷಕ್ಕೆ ಶರಣಾರ್ಥಿ.
ಅವರ ಆಶಾಪಾಶವ ಕಂಡು, ಹೇಸಿತ್ತೆನ್ನ ಮನವು. ಅದಂತಿರಲಿ,
ಅದು ಬ್ರಹ್ಮನ ಹುಟ್ಟು, ವಿಷ್ಣುವಿನ ಸ್ಥಿತಿ,
ರುದ್ರನ ಲಯಕ್ಕೊಳಗಾಗಿ ಹೋಯಿತ್ತು ಅಂತಲ್ಲ ಕೇಳಿರಣ್ಣ,
ಜಂಗಮವಾದರೆ ಜಗದೊಳಗೆ ಹುಟ್ಟಿ, ಜಗದ ಹಂಗ ಹರಿದು,
ಹೊನ್ನು, ಹೆಣ್ಣು, ಮಣ್ಣು ಕಣ್ಣಲ್ಲಿ ನೋಡಿ ಕಾಮಿಸದೆ,

ಮನದಲ್ಲಿ ನೆನೆಯದೆ, ಮಾಯವನುಣ್ಣದೆ, ಆಶೆಗೊಳಗಾಗದೆ,
ವೇಷವ ಹೊರದೆ, ದೇಶದ ಮನುಜರ ಸುತ್ತಿದ ಪಾಶಕ್ಕೆ ಹೊರಗಾಗಿ
ಸುಳಿವ ಜಂಗಮದ ಈಶನೆಂದೆ ಕಾಂಬೆ.
ಆ ಜಂಗಮಕ್ಕೆ ಅರ್ಥ, ಪ್ರಾಣ, ಅಭಿಮಾನವನೊಪ್ಪಿಸಿ,
ತಪ್ಪದೆ ಒಡೆಯನೆಂದರಿದು ಮಾಡುವ ಭಕ್ತನ ಎಂತಿಪ್ಪನೆಂದು ಕಾಂಬೆ.
ಇದನೆಂತಾದರೂ ಒಪ್ಪುಗೊಳ್ಳ ಎನ್ನ.
ಬಸವಪ್ರಿಯ ಕೂಡಲಚೆನ್ನಸಂಗನ ಬಸವಣ್ಣನಲ್ಲಿ ಶರಣಗಣಂಗಳು. ॥ ೧೨೦ ॥

೯೫೧

ಜಗದೊಳಗೆ ಹುಟ್ಟಿದವರೆಲ್ಲ ಹಗರಣಿಗರಾಗಿ ಹುಟ್ಟಿದರಲ್ಲದೆ,
ಜಗವ ಗೆಲ್ಲಲರಿಯದೆ, ನಗೆಗೆಡೆಯಾಗಿ ಹೋದರು.
ಎಮ್ಮ ಶರಣರು ಅಂತಲ್ಲ ಕೇಳಿರಣ್ಣಾ.
ಜಗದಲ್ಲಿಯೇ ಹುಟ್ಟಿ, ಜಗದಲ್ಲಿಯೇ ಬೆಳೆದು,
ಜಗದಂತೆ ಇದ್ದು, ಈ ಜಗವ ಗೆದ್ದು ಹೋಗುವರು.
ನಿಗಮಶಾಸ್ತ್ರ ಸಾಕ್ಷಿಯಾಗಿ, ಚೆನ್ನಮಲ್ಲೇಶ್ವರ ನಿನಗಾಯಿತ್ತಯ್ಯಾ.
ಅಂತಪ್ಪ ಚೆನ್ನಮಲ್ಲೇಶ್ವರನ ಪಾದವಡಿದು,
ಅವರು ಹೋದ ಹಾದಿಗೊಂಡು ಹೋಗುವನಲ್ಲದೆ,
ಈ ಮೇದಿನಿಯೊಳಗೆ ಕಾಮಕಾಲಾದಿಗಳ ಬಲೆಯೊಳಗೆ
ಸಿಕ್ಕಿಬಿದ್ದು ಹೋದೆನಾದರೆ,
ನಿಮ್ಮ ಪಾದಕ್ಕೆ ಅಂದೇ ದೂರವಯ್ಯಾ.
ಬಸವಪ್ರಿಯ ಕೂಡಲಚೆನ್ನಬಸವಣ್ಣಾ. ॥ ೧೨೧ ॥

೯೫೨

ಜಪ ತಪ ನೇಮ ನಿತ್ಯದಿಂದ ನಿಶ್ಚಂತರೂಪನ ಕಂಡೆ, ಏನೆಂಬಿರಿ?
ಆ ಪರಾತ್ಪರದೊಳಗಾಡುವ ಶರಣರ ಪಾದ ನಖದೊಳ್ಬರೆಯೆ
ಬಸವಪ್ರಿಯ ಕೂಡಲಚೆನ್ನಬಸವಣ್ಣ. ॥ ೧೨೨ ॥

೯೫೩

ತನ್ನ ತಾನರಿದವರು ಎಂತಿಪ್ಪರೆಂದರೆ,
ಕನ್ನಡಿಗೆ ಕನ್ನಡಿಯ ತೋರಿದಂತಿಪ್ಪರು.
ಕಣ್ಣಲಿ ನೋಡಿದರೆ ಮನದಲ್ಲಿ ಹಳಚದಂತಿಪ್ಪರು.
ಕುಂದಣದ ಚಿನ್ನವ ಪುಟಕೆ ಹಾಕಿದಂತಿಪ್ಪರು.
ಅದಂತಿರಲಿ, ಮುಂದೆ ಮೀರಿದ ಘನವು ಅಗಮ್ಯವಾಯಿತ್ತು.
ಇದನರಿಯಬಾರದು.
ಇನ್ನು ತನ್ನ ತಾನರಿಯದವರು ಎತ್ತಿಪ್ಪರೆಂದರೆ, ಕೇಳಿ.

ಚಿನ್ನ ಬಣ್ಣವಿಟ್ಟಂತಿಪ್ಪರು ಕಾಣಾ.
ಬಸವಪ್ರಿಯ ಕೂಡಲಚೆನ್ನಬಸವಣ್ಣಾ. ॥ ೧೨೩ ॥

೯೫೪

ತನ್ನ ತಾನರಿಯದೆ ತನ್ನ ತಾ ನೋಡದೆ, ತನ್ನ ತಾ ನುಡಿಯದೆ,
ಅನ್ಯರ ಸುದ್ದಿಯ ನುಡಿದಾಡುವ ಕುನ್ನಿಗಳಿಗೆ
ಗುರುವಿಲ್ಲ, ಲಿಂಗವಿಲ್ಲ, ಜಂಗಮುವಿಲ್ಲ, ಪಾದೋದಕವಿಲ್ಲ, ಪ್ರಸಾದವಿಲ್ಲ.
ಅವನು ಸರ್ವಾಪರಾಧಿ, ಅವನ ಮುಖವ ನೋಡಲಾಗದು,
ಬಸವಪ್ರಿಯ ಕೂಡಲಚೆನ್ನಬಸವಣ್ಣಾ. ॥ ೧೨೪ ॥

೯೫೫

ತನ್ನ ಮನೆಯನರಿಯದೆ ತವರುಮನೆಗೆ ಹಾರುವ ಹೆಣ್ಣಿನಂತೆ,
ಭಿನ್ನವಿಟ್ಟು ನೋಡಿಹೆನೆಂದು, ನಿಮ್ಮನರಿಯದೆ ಕೆಟ್ಟಿತು ಜಗವೆಲ್ಲ,
ಅದಂತಿರಲಿ, ಇನ್ನ ತನ್ನ ತಾನರಿದವಂಗೆ ತನುವೇ ಲಿಂಗ, ಮನವೇ ಪುಷ್ಪ.
ಈ ಅನುವರಿದು, ಘನವ ನೆಮ್ಮಿದ ಶರಣರ ಎನಗೊಮ್ಮೆ ತೋರಯ್ಯಾ,
ನಿಮ್ಮ ಧರ್ಮ ನಿಮ್ಮ ಧರ್ಮ, ಬಸವಪ್ರಿಯ ಕೂಡಲಚೆನ್ನಬಸವಣ್ಣಾ. ॥೧೨೫॥

೯೫೬

ತನುವ ಕೊಟ್ಟು ಭಕ್ತರಾದೆವೆಂಬರು, ಮನವ ಕೊಟ್ಟು ಭಕ್ತರಾದೆವೆಂಬರು,
ಧನವ ಕೊಟ್ಟು ಭಕ್ತರಾದೆವೆಂಬರು.
ತನು, ಮನ, ಧನವನೆಂತು ಕೊಟ್ಟಿರಿ ಹೇಳಿರಣ್ಣಾ?
ನಿಮ್ಮ ಒಡವೆ ನಿಮ್ಮಲ್ಲಿ ಇದೆ.
ಅದು ಹೇಗೆಂದರೆ, ಬಲ್ಲವರು ನೀವು ಕೇಳಿ,
ತನುವ ನೀವು ಕೊಟ್ಟರೆ ನೀವು ರೂಪಾಗಿ ಇರುವದಕ್ಕೇನು?
ಮನವ ನೀವು ಕೊಟ್ಟರೆ ನೀವು ನಿಮಗೆ ನಡೆನುಡಿ ಚೈತನ್ಯವೇನು?
ಧನವ ನೀವು ಕೊಟ್ಟರೆ ಕ್ಷುತ್ತಿಂಗೆ ಭಿಕ್ಷ, ಸೀತಕ್ಕೆ ರಗಟೆ ಏನು?
ಅಂತಲ್ಲ, ಕೇಳಿರಣ್ಣಾ!
ತನುವ ಕೊಟ್ಟುದಾವುದೆಂದರೆ, ಹುಸಿಮನವ ಕೊಟ್ಟುದಾವುದೆಂದರೆ,
ವ್ಯಾಕುಳವನೆಲ್ಲ ಅಳಿದು ನಿರಾಕುಳವಾಗಿ ನಿಂದ ಮನವೆ ಲಿಂಗವಾಯಿತ್ತು
ಧನವ ಕೊಟ್ಟಿಹೆನೆಂಬುದಾವುದೆಂದರೆ,
ಇಂದಿಗೆ ನಾಳಿಗೆ ಎಂಬ ಸಂದೇಹದ ಭಾವಕ್ಕೆ,
ಭಯಕ್ಕೆ ಭವವಳಿವುದುದೆ ಜಂಗಮವಾಯಿತ್ತು,
ಇಂತಿದೀಗ ನಮ್ಮ ಮುನ್ನಿನ ಆದ್ಯರ ನಡೆನುಡಿ, ಮಾಟಕೂಟ.
ಇದನರಿಯದೆ ಏನೊಂದು ಮಾಡಿದರೂ ನೀಡಿದರೂ
ಕೊಟ್ಟರೂ ಕೊಂಡರೆಯೂ,
ವಾಯಕ್ಕೆ ವಾಯ ಬಸವಪ್ರಿಯ ಕೂಡಲಚೆನ್ನಬಸವಣ್ಣಾ. ॥ ೧೨೬ ॥

೯೫೭

ತನುವಿನಿಚ್ಛೆಗೆ ಶೀಲವ ಕಟ್ಟಿಕೊಂಬವರು ಲಕ್ಷೋಪಲಕ್ಷ ಉಂಟು.
ಮನದಿಚ್ಛೆಗೆ ಶೀಲವ ಕಟ್ಟಿಕೊಂಬವರು ಅಪೂರ್ವ ನೋಡಾ.
ತನುಮನವೆರಡು ಏಕವಾಗಿ, ಧನದಾಸೆಯಂ ಬಿಟ್ಟು,
ಮನ ಮಹದಲ್ಲಿ ನಿಂದುದೆ ಶೀಲಸಂಬಂಧ.
ಇನಿತಲ್ಲದ ದುಶ್ಶೀಲರ ಎನಗೊಮ್ಮೆ ತೋರದಿರು,
ಬಸವಪ್ರಿಯ ಕೂಡಲಚೆನ್ನಬಸವಣ್ಣಾ. || ೧೨೭ ||

೯೫೮

ತಲೆ ಇಲ್ಲದ ಮುಂಡ, ಮೊಲೆ ಇಲ್ಲದಾವು.
ಜಲವಿಲ್ಲದ ಕೆರೆ, ನೆಲೆ ಇಲ್ಲದ ನಂಟ, ಕಲಿ ಇಲ್ಲದ ಬಂಟ.
ಇವು ಅಯ್ದರ ಕಲೆಯನರಿಯದೆ ನುಡಿವ ಮನುಜನೆಂತುಂಟು,
ಬಸವಪ್ರಿಯ ಕೂಡಲಚೆನ್ನಬಸವಣ್ಣಾ? || ೧೨೮ ||

೯೫೯

ತಾನೆನಬೇಡ, ಮನ ಮುಗ್ಧನೆನಬೇಡ,
ಮುನ್ನವರ ಬೇಡ ಬೇಡ, ತನುಜರೊಳ್ನುಡಿಬೇಡ,
ಕಂಡೆವೆಂದು ಉಲಿಯಬೇಡ, ಉಣ್ಣೆವೆಂದು ಸುಮ್ಮನಿರಬೇಡ,
ಬಂಡುಮಾಡಿಕೊಳಬೇಡ, ಚಂಡವಿಕ್ರಮ
ಬಸವಪ್ರಿಯ ಕೂಡಲಚೆನ್ನಬಸವಣ್ಣ. || ೧೨೯ ||

೯೬೦

ತೀರ್ಥ ಯಾತ್ರೆ ಲಿಂಗದರುಶನಕ್ಕೆ ಹೋಗಿ,
ಕರ್ಮವ ಹಿಂಗಿಸಿಕೊಂಡೆನೆಂಬ ಭಂಗಿತರ ಮಾತ ಕೇಳಲಾಗದು.
ಅದೇನು ಕಾರಣವೆಂದರೆ,
ತೀರ್ಥವಾವುದು, ಯಾತ್ರೆ ಯಾವುದು, ಲಿಂಗವಾವುದು, ಬಲ್ಲರೆ ನೀವು ಹೇಳಿರೆ.
ಮಹಾಘನ ಗುರುಪಾದತೀರ್ಥದಿಂದ ವೆಗ್ಗಳ ತೀರ್ಥ ಉಂಟೆ ?
ಜಗತ್ಪಾವನ ಜಂಗಮ ದರುಶನದಿಂದ ಬೇರೆ ಯಾತ್ರೆ ಉಂಟೆ?
ಇಂಗಿತವನರಿದ ಬಳಿಕ ತನ್ನ ಅಂಗದ ಮೇಲಿರ್ಪ ಲಿಂಗವಲ್ಲದೆ
ಬೇರೆ ಲಿಂಗ ಉಂಟೆ ?
ಇದನರಿಯದೆ ಇನ್ನು ತೀರ್ಥಯಾತ್ರೆ ಲಿಂಗ ದರುಶನ ಉಂಟೆಂಬ
ಅಂಗಹೀನರ ಮುಖವ ನೋಡಲಾಗದು,
ಬಸವಪ್ರಿಯ ಕೂಡಲಚೆನ್ನಬಸವಣ್ಣ. || ೧೩೦ ||

೯೬೧

ದಾಸಿಯ ಸಂಗ ಎರಡನೆಯ ಪಾತಕ, ವೇಶಿಯ ಸಂಗ ಮೂರನೆಯ ಪಾತಕ.
ಮೀಸಲಳಿದ ಪರಸ್ತ್ರೀಯರ ಸಂಗ ಪಂಚಮಹಾಪಾತಕ.

ಇನಿಸು ಶಿವಭಕ್ತರಿಗೆ ಸಲ್ಲವು.
ಇವನರಿದರಿದು ಮಾಡಿದನಾದರೆ, ಯಮಪಟ್ಟಣವೆ ವಾಸವಾಗಿಪ್ಪರಲ್ಲದೆ,
ಈ ದೇಶಕ್ಕೆ ಮರಳಿ ಬರಲಿಲ್ಲ ನೋಡಾ,
ಬಸವಪ್ರಿಯ ಕೂಡಲಚೆನ್ನಬಸವಣ್ಣ. ॥ ೧೩೧ ॥

೯೬೨

ದಿನದಿನಕ್ಕೆ ದೀನಮಾನವನಂತೆ, ಹೀನಾಶ್ರಯದಲ್ಲಿ ಹುಟ್ಟಿ,
ಏನನೂ ಅರಿಯದೆ, ಜ್ಞಾನವು ಇಲ್ಲದೆ, ನಾನು ನೀನೆಂಬ ಉಭಯವು ಅಳಿಯದೆ,
ನಾನು ಭಕ್ತ, ನಾನು ಜಂಗಮವೆಂಬವರ ನೋಡಿ, ನಾಚಿತ್ತೆನ್ನ ಮನ್ನವು.
ಅಂಗಕ್ಕೆ ಆಚಾರವಿಲ್ಲ, ಮನಸಿಂಗೆ ಅರುಹಿಲ್ಲ, ಪ್ರಾಣಕ್ಕೆ ಗೊತ್ತು ಇಲ್ಲ,
ಭಾವಕ್ಕೆ ಹೇಯವಿಲ್ಲದೆ ಇನ್ನಾವ ಬಗೆಯಲ್ಲಿ ಭಕ್ತಜಂಗಮವಾದಿರೆ ಹೇಳಿರಣ್ಣ?
ಭಕ್ತನಾದರೆ ಎಂತಿರಬೇಕೆಂದರೆ,
ಮಾಡಿಹನೆಂಬುದು ಮನದೊಳಗೆ ಹೊಳೆಯದೆ, ನೀಡಿಹೆನೆಂಬ ಅರಿಕೆ ಇಲ್ಲದೆ,
ಬೇಡುವುದಕ್ಕೆ ಮುನ್ನವೆ ಆ ಜಂಗಮದ ನಿಲುಕಡೆಯನರಿದು ಮಾಡಬಲ್ಲರೆ ಭಕ್ತ
ಮಾಡಿದ ಭಕ್ತಿಯ ಕೈಕೊಂಡು,
ಆ ಭಕ್ತನ ಕರಸ್ಥಲಕ್ಕೆ ಲಿಂಗವಾಗಿ, ಮನಸ್ಥಲಕ್ಕೆ ಅರಿವಾಗಿ,
ಭಾವಸ್ಥಲಕ್ಕೆ ಜಂಗಮವಾಗಿ ಅಡಗಿದಡೆ,
ಐಕ್ಯನೆಂಬೆ, ಜಂಗಮವೆಂಬೆ, ಲಿಂಗವೆಂಬೆ, ಗುರುವೆಂಬೆ.
ಆ ಭಕ್ತಜಂಗಮ ಎರಡಕ್ಕೂ ಫಲಂ ನಾಸ್ತಿ, ಪದಂ ನಾಸ್ತಿ, ಭವಂ ನಾಸ್ತಿ
ಆ ನಿಲುವಿಂಗೆ ನಮೋ ನಮೋ ಎಂದು ಬದುಕಿದೆ,
ನೀವು ಸಾಕ್ಷಿಯಾಗಿ, ಬಸವಪ್ರಿಯ ಕೂಡಲಚೆನ್ನ ಬಸವಣ್ಣ. ॥ ೧೩೨ ॥

೯೬೩

ದಿವ್ಯಾನಂದ ಗುರುವೆ, ದೇದೀಪ್ಯಮಯ ಗುರುವೆ,
ಆನಂದ ಪ್ರಸಾದಮಯ ಗುರುವೆ, ದೀಕ್ಷಾನಂದ ಗುರುವೆ,
ಶಿಕ್ಷಾ ಸಾಮರ್ಥ್ಯ ಗುರುವೆ, ಮೋಕ್ಷಸಾಧನ ಗುರುವೆ,
ಈಕ್ಷಿಸಿದಕ್ಷಿಯಲ್ಲಿ ನಿಕ್ಷೇಪಿಸಿದ ಗುರುವೆ, ಅವಧಾನಿ ಗುರುವೆ.
ಆನಂದ ಪ್ರಸಾದಮಯ ಗುರವೆ, ಪರಂಜ್ಯೋತಿ
ಬಸವಪ್ರಿಯ ಕೂಡಲಸಂಗಮದೇವ ಪ್ರಭುವೆ. ॥ ೧೩೩ ॥

೯೬೪

ದೀಕ್ಷಾಗುರು, ಶಿಕ್ಷಾಗುರು, ಮೋಕ್ಷಗುರುವೆಂದು
ಹೆಸರಿಟ್ಟುಕೊಂಡು ನುಡಿವಿರಿ.
ದೀಕ್ಷಾಗುರುವಾದಡೆ, ಮಲತ್ರಯಂಗಳ ತಾ ಮುಟ್ಟದೆ,
ಆ ಶಿಷ್ಯನ ತಟ್ಟಲೀಯದೆ, ಅಂಗಕ್ಕೆ ಆಚಾರವನಳವಡಿಸಿಕೊಟ್ಟು,

ಪ್ರಾಣಕ್ಕೆ ಅರಿವ ತೋರಿ ಪ್ರಸಾದಕಾಯವ ಮಾಡಿದರೆ,
ಆತನೇ ದೀಕ್ಷಾಗುರುವೆಂಬೆ.
ಶಿಕ್ಷಾಗುರುವಾದಾತ ಶೂರಧೀರನಾಗಿ ಪಟುಭಟನಾಗಿ,
ಪರಸಮಯಕ್ಕೆ ಪರಂಜ್ಯೋತಿಯಂತಾಗಿ, ಅರಗಳಿಗೆ ಆರ್ಭಟಿಸುವ ಸಿಂಹದಂತಾಗಿ,
ತನ್ನ ಸ್ವಯಂಮಕ್ಕ ಸ್ವಯಂಜ್ಯೋತಿಯಂತೆ ಇರಬಲ್ಲರೆ, ಶಿಕ್ಷಾಗುರುವೆಂಬೆ.
ಮೋಕ್ಷಗುರುವೆಂತಿರಬೆಕೆಂದಡೆ,
ತನ್ನ ನಂಬಿದ ಸಜ್ಜನ ಭಕ್ತರ, ವಿರಕ್ತರ ತನ್ನಂತೆ ಮಾಡಿಕೊಂಬುದು.
ಅವರ ತನುತ್ರಯ, ಮನತ್ರಯ, ಧನತ್ರಯದ ನೆಲೆಯನರುಹಿ,
ಇಂತೀ ತ್ರಿವಿಧವನು ತ್ರಿವಿಧಕ್ಕೆ ಮುಖವ ಮಾಡಿ,
ತ್ರಿವಿಧದಲ್ಲಿ ತಾನಡಗಿ, ತನ್ನೊಳಗವರಡಗಿದಡೆ ಮೋಕ್ಷಾಗುರುವೆಂಬೆ.
ಇಂತಾದರೆ ತ್ರಿವಿಧವು ಒಂದಂಗ. ಇಂತೀ ಸ್ಥಲದ ನಿರ್ಣಯವನರಿಯದಿದ್ದರೆ,
ಆ ಮೂವರನು ಮುಂದುಗೆಡಿಸಿ ಮೂಗ ಕೊಯ್ದು,
ಇಟ್ಟಿಗಿಯಲದ್ದಿ, ದರ್ಪಣವ ತೋರಿ,
ಅವರ ದರ್ಪವ ಕೆಡಿಸುವನಲ್ಲದೆ ಅವರ ಮೆರೆವನಲ್ಲ,
ನಮ್ಮ ಬಸವಪ್ರಿಯ ಕೂಡಲಚೆನ್ನಬಸವಣ್ಣ. ॥ ೧೩೪ ॥

೯೬೫

ಧರೆಯ ಹೊತ್ತಿರ್ಪ ಸರ್ಪ ಹೆರಿಯಿತ್ತಾಕಾಶಕ್ಕೆ.
ನೆರೆದ ಜನವೆಲ್ಲಾ ಹೆದರಿ ನೆರೆಯಿತ್ತು ನೀರಲ್ಲಿ.
ಧರೆ ಜಲ ಅಗ್ನಿಯೊಳು ಬೆರೆದು ಬೆಂದು ಉರಿದವು.
ಹರನ ಮಂಥಣೆಯ ಶೂಲವನೇರಿ, ಸರ್ಪನನಡಗಿಸಿ,
ಉರಿಯ ಉಗುಳಿದರೆ, ಧರೆಯನುಗುಳಿಸಿತ್ತು
ಬಸವಪ್ರಿಯ ಕೂಡಲಸಂಗಮದೇವ ಪ್ರಭುವೆ. ॥ ೧೩೫ ॥

೯೬೬

ಧರೆಯೊಳಗೆ ಹುಟ್ಟಿದವರೆಲ್ಲ ಬಲ್ಲೆನೆಂದು
ಬಲ್ಲತನಕ್ಕೆ ಗೆಲ್ಲಸೋಲಕ್ಕೆ ಹೋರಿ, ಸಲ್ಲದೆ ಹೋದರು ನಮ್ಮ ಶರಣರಿಗೆ.
ಅದೇನು ಕಾರಣವೆಂದರೆ,
ಇವರೆಲ್ಲ ಪುರಾಣದ ಪುಂಡರು, ಶಾಸ್ತ್ರದ ಸಟೆಯರು,
ಆಗಮದ ತರ್ಕಿಗಳು, ವೇದದ ಹಾದರಿಗರು,
ಬೀದಿಯ ಪಸರದ, ಸಂತೆಯ ಸುದ್ದಿಯ ಗೊತ್ತಿಗರು.
ಇಂತಿವರಾರೂ ಲಿಂಗದ ನೆಲೆಯನರಿಯರು.
ಹಿಂದೆ ಹೋದ ಯುಗಂಗಳಲ್ಲಿ ಹರಿಬ್ರಹ್ಮರು ವಾದಿಸಿ,
ನಮ್ಮ ದೇವನ ಕಾಣದೆ ಹೋದರು. ಇದಕ್ಕೆ ಶ್ರುತಿ ಸಾರುತ್ತಿದೆ.
ದೇವ ದಾನವ ಮಾನವರು ಕಾಲ ಕಾಮಾದಿಗಳ ಆರಾಧಿಸಿ,

ನಮ್ಮ ದೇವರ ಕಾಣದೆ ಹೋದರು.
ನಿಮ್ಮ ಪಾಡೇನು ? ಅರಿಮರುಳುಗಳಿರಾ ?
ನಮ್ಮ ದೇವನ ಕಂಡೆನೆಂದರೆ ನೋಟಕಿಲ್ಲ, ನೆನಹಿಗಿಲ್ಲ,
ತನುವಿಗಿಲ್ಲ, ಸಾಧಕರಿಗಿಲ್ಲ, ಭಾವನೆಗಿಲ್ಲ,
ಇಂತಪ್ಪ ದೇವನ ಒಡಲ ಹಿಡಿವರ ಕಂಡೆನೆಂದರೆ ಆಗದು.
ಇದರ ಬಿಡುಮುಡಿಯನರಿದು ಅಂಗೈಸುವ ಶರಣರ ಸಂಗದೊಳಗೆ
ಎನ್ನ ಕಂಗಳು ಲಿಂಗವಾಗಿ, ಕರವೆ ಜಂಗಮವಾಗಿ,
ಇಹಪರದೊಳಗೆ ಪರಿಪೂರ್ಣವಾದೆನಯ್ಯಾ.
ನಿಮ್ಮ ಧರ್ಮ ನಿಮ್ಮ ಧರ್ಮ, ಬಸವಪ್ರಿಯ ಕೂಡಲಚೆನ್ನಬಸವಣ್ಣಾ. ॥ ೧೩೬ ॥

೯೬೭

ಧ್ಯಾನದಲ್ಲಿ ಕುಳ್ಳಿರ್ದು, ಜ್ಞಾನದಲ್ಲಿ ನೋಡಿ,
ಮೌನ ಮುಗ್ಧವ ಮಾಡಿ, ಸ್ವಾನುಭಾವದಿಂದರಿದು,
ಮತ್ತೇನೇನು ಹೊದ್ದಲೀಯದೆ, ತಾನು ತಾನಾಗಿ, ಜ್ಞಾನಕ್ಕತೀತನಾಗಿ,
ಧ್ಯಾನ ಧಾರಣ ಸಮಾಧಿಯ ಮೆಟ್ಟಿ ನಿಂದ ನಿಜಲಿಂಗೈಕ್ಯಂಗೆ
ನಮೋ ನಮೋ ಎಂಬೆ.
ಇಂದೆನ್ನ ಭವ ನಷ್ಟವಾಗಿ ಹೋದವು ಕಾಣಾ,
ಬಸವಪ್ರಿಯ ಕೂಡಲಚೆನ್ನ ಬಸವಣ್ಣಾ. ॥ ೧೩೭ ॥

೯೬೮

ನಂಬುವುದು, ಶರಣರನೆ ನಂಬುವುದು.
ಕೊಂಬುವುದು, ಶರಣರ ಪ್ರಸಾದವನೆ ಕೊಂಬುವುದು.
ಕೊಡುವುದು, ಶರಣರಿಗೆ ಕೊಡುವುದು.
ಉಡುವುದು, ಶರಣರುಟ್ಟ ಮೈಲಿಗೆಯನೆ ಉಡುವುದು.
ಇಂತಪ್ಪ ಶರಣರ ಬರವೆ, ಎನ್ನ ಪ್ರಾಣದ ಬರವು.
ಅವರ ಹೊಕ್ಕೆ ಎನ್ನ ಪ್ರಾಣದ ಹೊಕ್ಕು.
ಇಂತಪ್ಪ ಶರಣರ ಸಂಗವ ಮಾಡಿದ ಕಾರಣ, ಏಕವಾಗಿ ಹೋದೆ ಅವರ ಪಾದದಲ್ಲಿ.
ಇನ್ನು ಬೇಕು ಬೇಡೆಂಬ ಸಂದೇಹ ಹುಟ್ಟಿದರೆ,
ಇಹಲೋಕಕ್ಕೂ ಅಲ್ಲ, ಪರಲೋಕಕ್ಕೂ ಅಲ್ಲ.
ಇದಕ್ಕೆ ನೀವೇ ಸಾಕ್ಷಿ, ಬಸವಪ್ರಿಯ ಕೂಡಲಚೆನ್ನಬಸವಣ್ಣಾ. ॥ ೧೩೮ ॥

೯೬೯

ನಮ್ಮಂತುವ ತಿಳಿದು, ನೋಡಿದರೆ ಹೇಳಿಹೆನು.
ಅದೆಂತೆಂದರೆ, ಮೇಲು ಕೀಳಾಯಿತ್ತು, ಕೀಳು ಮೇಲಾಯಿತ್ತು,
ನಿರಾಳ ಆಳವಾಯಿತ್ತು, ಆಳ ನಿರಾಳವಾಯಿತ್ತು,

ಉತ್ತರ ಪೂರ್ವವಾಯಿತ್ತು, ಪೂರ್ವ ಉತ್ತರವಾಯಿತ್ತು,
ಗುರುವು ಶಿಷ್ಯನಾಯಿತ್ತು, ಶಿಷ್ಯ ಗುರುವಾಯಿತ್ತು,
ಅರ್ಪಿತ ಅನರ್ಪಿತವಾಯಿತ್ತು, ಅನರ್ಪಿತ ಅರ್ಪಿತವಾಯಿತ್ತು,
ಇಂತಪ್ಪ ಘನವ ವೇಧಿಸಿ ನುಡಿಯಬಲ್ಲರೆ,
ಆತನೆ ಭಕ್ತ, ಮಹೇಶ್ವರ, ಪ್ರಸಾದಿ, ಪ್ರಾಣ.
ನಡೆದುದೆ ಬಟ್ಟೆ, ನುಡಿದುದೆ ತತ್ವ.
ಇಂತಪ್ಪ ಸರ್ವಾಂಗ ಪ್ರಸಾದಿಯ ಪ್ರಸಾದವ ಕೊಂಡು,
ಸರ್ವಾಂಗ ಶುದ್ಧವಾಯಿತ್ತು.
ನಾ ನಿಮ್ಮ ಪಾದದೊಳು ನಿರ್ಮುಕ್ತನಾಗಿ ಏನೂ ಇಲ್ಲದಂತಾದೆನಯ್ಯಾ,
ಬಸವಪ್ರಿಯ ಕೂಡಲಚೆನ್ನಬಸವಣ್ಣಾ. ॥ ೧೩೯ ॥

೯೭೦

ನಾನೊಂದು ಸುಖವ ಕಂಡು, ಸುಯಿಧಾನಿಯಾಗಿ ನಿಂದೆ.
ಸುಖವೆನಗೆ ಸುಖವಾಸನೆಯಾಗಿ ವೇಧಿಸಿತ್ತು.
ಆ ವೇಧಿಸಿದ ಸುಖವ ನೋಡಲಾಗಿ, ಅದು ತಾನೆ ಬ್ರಹ್ಮನಾಗಿ ನಿಂದಿತ್ತು.
ಆ ಬ್ರಹ್ಮದ ನೆಲೆಯನರಿದವರಿಗೆ ಹಮ್ಮುಬಿಮ್ಮು ಮನ ನಾಸ್ತಿ.
ಅವರು ಸುಮ್ಮಾನದ ಸುಖಿಗಳು.
ಒಮ್ಮನವಾಗಿ ನಿಮ್ಮನೆ ನೋಡಿ, ನಿಮ್ಮನೆ ಕೂಡಿದರಯ್ಯಾ,
ಬಸವಪ್ರಿಯ ಕೂಡಲಚೆನ್ನಬಸವಣ್ಣಾ. ॥ ೧೪೦ ॥

೯೭೧

ನಾವು ಜಂಗಮವೆಂಬರು, ತಾವು ಭಕ್ತರೆಂಬರು.
ಭಕ್ತ, ಜಂಗಮದ ನಿಲುಕಡೆ ಎಂತಿರಬೇಕೆಂದರೆ,
ಮೂರುವಿಡಿದು ಮೂರನರಿದಡೆ ಭಕ್ತನೆಂಬೆ.
ಮೂರ ಬಿಟ್ಟರೆ, ಮೂರ ಕಂಡರೆ, ಜಂಗಮವೆಂಬೆ.
ಈ ಉಭಯವು ಒಂದಾದ ಭೇದವೆಂತೆಂದರೆ,
ಭಕ್ತನ ನಡೆನುಡಿಯಲ್ಲಿ ಕವಲುದೋರುತಿರ್ದಡೆ,
ಹೀಗಲ್ಲವೆಂದು ಆ ಸ್ಥಲಕ್ಕೆ ತಕ್ಕ ಹಾಗೆ ನಿಲುಕಡೆಯ ತೋರಿ ಕೊಟ್ಟು,
ಆತನಲ್ಲಿದ್ದ ಕರ್ಮವು ತನ್ನ ಮುಟ್ಟದಂತೆ, ಅವನ ತಟ್ಟದಂತೆ,
ಈ ಉಭಯಕ್ಕೊಡೆಯನಾಗಿ ನಿಂದರೆ, ಜಂಗಮಲಿಂಗವೆಂಬೆ.
ಇಂತಾದರೆ ಆ ಭಕ್ತ ಜಂಗಮಕ್ಕೆ ನಮೋ ನಮೋ ಎಂಬೆ.
ಇಂತಲ್ಲದೆ ಇದ್ದವರ ಎನ್ನತ್ತ ತೋರದಿರಾ,
ಬಸವಪ್ರಿಯ ಕೂಡಲಚೆನ್ನಬಸವಣ್ಣಾ. ॥ ೧೪೧ ॥

೯೭೨

ನಾವು ಭಕ್ತ, ಮಹೇಶ್ವರ, ಪ್ರಸಾದಿ,
ಪ್ರಾಣಲಿಂಗಿ, ಶರಣ, ಐಕ್ಯರೆಂದು ನುಡಿವಿರಿ.
ಭಕ್ತಸ್ಥಲ ಒತ್ತಿ ಹೇಳಿದರೆ, ಚಿತ್ತದಲ್ಲಿ ಕರಗುವಿರಿ, ಕೊರಗುವಿರಿ.
ಮತ್ತೆ ನಮಗೆ ಮುಕ್ತಿಯಾಗಬೇಕೆಂದು ಚಿಂತೆಯ ಮಾಡುವಿರಿ.
ಇಂತೀ ಉಭಯದಿಂದ ಸತ್ಯವಾವುದು, ನಿತ್ಯವಾವುದು
ಎಂದರಿಯದೆ, ಕೆಟ್ಟರಲ್ಲ ಜಗವೆಲ್ಲ.
ಜಗದ ವ್ಯಾಕುಳವಳಿದುದೇ ಸತ್ಯ ನಿರಾಕುಳದಲ್ಲಿ ನಿಂದುದೇ ನಿತ್ಯ.
ಈ ಉಭಯದ ಗೊತ್ತನರಿದರೆ ಅದೇ ಐಕ್ಯ,
ಬಸವಪ್ರಿಯ ಕೂಡಲಚೆನ್ನಬಸವಣ್ಣಾ. || ೧೪೨ ||

೯೭೩

ನಿತ್ಯ ಅನಿತ್ಯವೆಂಬುದ ತೋರಿದಿರಿ, ಸತ್ಯ ಅಸತ್ಯವೆಂಬುದ ತೋರಿದಿರಿ.
ಆಚಾರ ವಿಚಾರವೆಂಬುದ ತೋರಿದಿರಿ.
ಅಯ್ಯಾ ಸೋಹಂ ದಾಸೋಹಂ ಎಂಬುದ ತೋರಿದಿರಿ.
ಇದು ಎಂಬುದ ತೋರಿದಿರಿ. ಅಯ್ಯಾ ಮುಕ್ತಿ ಎಂಬುದ ತೋರಿದಿರಿ.
ಅಂಗ ಲಿಂಗವೆಂಬುದ ತೋರಿದಿರಿ, ಪ್ರಾಣವೇ ಜಂಗಮವೆಂಬುದ ತೋರಿದಿರಿ.
ಪ್ರಸಾದವೇ ಪರವೆಂದು ತೋರಿದಿರಿ.
ಇಂತಿವರ ಭೇದಾದಿ ಭೇದವನೆಲ್ಲ ತೋರಿದಿರಿ. ನಿಮ್ಮ ಹಾದಿಯ ಹತ್ತಿಸಿದಿರಿ.
ಮೂದೇವರೊಡೆಯ ಚೆನ್ನಮಲ್ಲೇಶ್ವರಾ, ನಿಮ್ಮ ಹಾದಿಗೊಂಡು ಹೋಗುತ್ತಿರ್ದು,
ನಾನೆತ್ತ ಹೋದೆನೆಂದರಿಯನಯ್ಯಾ.
ಬಸವಪ್ರಿಯ ಕೂಡಲಚೆನ್ನ ಬಸವಣ್ಣಾ,
ನಾ ಹೋದ ಹಾದಿಯ ನೀವೆ ಬಲ್ಲಿರಿ. || ೧೪೩ ||

೯೭೪

ನಿಶ್ಚಿಂತ ನಿರಾಕಾರ ಪರಂಜ್ಯೋತಿ ಪರಮಪ್ರಕಾಶ
ಆನಂದ ಸ್ವರೂಪನೆ ಜಂಗಮಲಿಂಗ.
ಚೈತ್ಯರೂಪವೆ ಲಿಂಗಜಂಗಮ, ಸತ್ವರೂಪವೆ ಗುರುಲಿಂಗ.
ಸತ್ತು ಚಿತ್ತಾನಂದವೆ ಸದ್ಭಕ್ತನಲ್ಲಿ ಉದಯ
ಇಂತಿವರ ನೆಲೆಯ
ವೇದಾಗಮ ಶಾಸ್ತ್ರ ಪುರಾಣಗಳು ಕಾಯದೆ
ವಾಗತೀತಃ ಮನೋಽತೀತಃ ಭಾವಾತೀತಃ ಪರಃ ಶಿವಃ
ಸರ್ವಶೂನ್ಯ ನಿರಾಕಾರಂ ನಿತ್ಯತ್ವಂ ಪರಮಂ ಪದಂ ||
ಎಂದುದಾಗಿ, ಇಂತಪ್ಪ ಶ್ರುತಿ ಒಳ ಹೊರಗಿಪ್ಪ
ಜಂಗಮಲಿಂಗವೆ ಜಗತ್ಪಾವನ ಜಂತು

ಜಯ ಶರಣಾಗು.
ಬಸವಪ್ರಿಯ ಕೂಡಲಸಂಗಮದೇವಾ
ಮಾಂ ತ್ರಾಹಿ ತ್ರಾಹಿ ಕರುಣಾಕರನೆ. || ೧೪೪ ||

೯೭೫

ನಿಷ್ಠೆಯ ಮರೆದರೇನಯ್ಯಾ ?
ಲೋಕದ ಮನುಜರ ದೃಷ್ಟಿಗೆ ಸಿಲ್ಕಿ ಭ್ರಷ್ಟೆದ್ದುಹೋದರು.
ತನು ಕಷ್ಟಮಾಡಿದರೇನಯ್ಯಾ ಮನ ನಿಷ್ಠವಾಗದನ್ನಕ್ಕ ?
ತನು ಮನವೆರಡು ನಷ್ಟವಾಗಿ, ಘನವ ನೆಮ್ಮಿ
ನಿಮ್ಮ ನೆನಹು ನಿಷ್ಪತ್ತಿಯಾದ ಶರಣರ
ಎನಗೊಮ್ಮೆ ತೋರಯ್ಯ, ನಿಮ್ಮ ಧರ್ಮ,
ಬಸವಪ್ರಿಯ ಕೂಡಲಚೆನ್ನಬಸವಣ್ಣಾ. || ೧೪೫ ||

೯೭೬

ನೀವು ಹೊತ್ತಿಪ್ಪ ವೇಷದಲ್ಲಿ ತತ್ವವ ತಿಳಿದು ನೋಡಿರಣ್ಣಾ.
ಜ್ಞಾನ ಬಿತ್ತಿಗಿಯ ಮೇಲೆ ನಿಂದು ಅಂಗದ ನಿಚ್ಚಣಿಕೆಯನಿಕ್ಕಿ,
ಒತ್ತಿನಿಂದರೆ ಉತ್ತರಜ್ಞಾನವೆಂಬುದು ನಿಮ್ಮ ಒತ್ತಿನಲ್ಲಿಪ್ಪುದು,
ಇದ ನೋಡಿದರೆ ನಿಶ್ಚಯ, ಬಸವಪ್ರಿಯ ಕೂಡಲಚೆನ್ನಬಸವಣ್ಣಾ. || ೧೪೬ ||

೯೭೭

ನುಡಿದ ನುಡಿಗೆ ನಡೆ ಇಲ್ಲದಿದ್ದರೆ,
ಮೃಡನ ಶರಣರು ಕಡೆನುಡಿದಲ್ಲದೆ ಮಾಣರು.
ಎಮ್ಮ ಶರಣರು ಮತ್ತೆ ಹೊಡೆಗೆಡೆದು ಎನ್ನ ನುಡಿದು, ಹೊಡೆದು, ರಕ್ಷಿಸಿದಿರಲ್ಲ,
ಎನ್ನ ಒಡೆಯರು ನೀವಹುದೆಂದು ಬಿಡದೆ ಅವರ ಬೇಡಿಕೊಂಬೆ.
ಇದೀಗ ನಮ್ಮ ಶರಣರ ನಡೆನುಡಿ. ಅದಂತಿರಲಿ. ಅದಕೆ ನಮೋ ನಮೋ ಎಂಬೆ.
ಈ ಪೊಡವಿಯೊಳು ಹುಟ್ಟಿದ ಮನುಜರೆಲ್ಲರು ಒಡೆಯರೆಂದು
ಪೂಜೆಯಮಾಡಿ,ತುಡುಗುಣಿನಾಯಿಯಂತೆ ಒಕ್ಕುದ ಮಿಕ್ಕುದ ನೆಕ್ಕಿ,
ತಮ್ಮ ಇಚ್ಛೆಗೆ ನುಡಿದರೆ ಒಳ್ಳಿದನೆಂಬರು.
ಸತ್ಯವ ನುಡಿದರೆ ಸಾಯಲವನೆಲ್ಲಿಯ ಶರಣ ? ಇವನೆಲ್ಲಿಯ ಜಂಗಮ?
ಇವಗ ಕೂಡಿದ ಮನೆ ಹಾಳೆಂದು,
ಕಂಡ ಕಂಡವರ ಕೂಡ ಹೇಳಿಯಾಡುವ, ಈ ಕಾಳುಮನುಜರನು
ಲಿಂಗ ಜಂಗಮವೆಂದು ನುಡಿದು ಕೂಡಿಕೊಂಡು ಹೋದರೆ,
ತನ್ನ ತನ್ನ ಪದಾರ್ಥವ ಹಿಡಿದರೆ,
ಒಡೆಯನೆ ಬದುಕಿದೆ, ತ್ರಾಹಿ ಎಂಬ ಮೃಡಶರಣನು
ಈ ಅಡ[ಗು] ಕಚ್ಚಿಕೊಂಡಿರುವ, ಹಡಿಕಿಮನುಜರನು ಸರಿಗಂಡಡೆ,

ನಾಯಕ ನರಕದಲ್ಲಿಕ್ಕುವ,
ನಮ್ಮ ಬಸವಪ್ರಿಯ ಕೂಡಲಚೆನ್ನಬಸವಣ್ಣಾ. || ೧೪೭ ||

೯೭೮

ನುಡಿದರೆ ಗುರುವಾಗಿ ನುಡಿಯಬೇಕು, ನಡೆದರೆ ಪರವಾಗಿ ನಡೆಯಬೇಕು.
ಕುಳಿತರೆ ಲಿಂಗವಾಗಿ ಕುಳಿತಿರಬೇಕು, ಇದ್ದರೆ ಜಂಗಮವಾಗಿ ಇರಬೇಕು.
ಈ ನಾಲ್ಕರ ಹೊಂದಿಗೆಯನರಿಯದವರು
ಎಷ್ಟು ದಿನವಿದ್ದರೂ ಫಲವೇನು ಹೇಳಾ,
ಬಸವಪ್ರಿಯ ಕೂಡಲಚೆನ್ನಬಸವಣ್ಣಾ ? || ೧೪೮ ||

೯೭೯

ನುಡಿದರೇನಯ್ಯ ನಡೆ ಇಲ್ಲದನ್ನಕ್ಕ ?
ನಡೆದರೇನಯ್ಯ ನುಡಿ ಇಲ್ಲದನ್ನಕ್ಕ ?
ಈ ನಡೆನುಡಿಯರಿದು ಏಕವಾಗಿ,
ತಾವು ಮೃಡಸ್ವರೂಪರಾದ ಶರಣರಡಿಗೆರಗಿ ನಾನು ಬದುಕಿದೆನಯ್ಯಾ
ಬಸವಪ್ರಿಯ ಕೂಡಲಚೆನ್ನಬಸವಣ್ಣಾ. || ೧೪೯ ||

೯೮೦

ಪರಾಪರದಲ್ಲಿ ಹುಟ್ಟಿದ ಪಾದೋದಕ.
ಪರಬ್ರಹ್ಮದ ಪರಮಪ್ರಕಾಶವೆ ಪಾದೋದಕ.
ಪರಿಪೂರ್ಣವ ಪ್ರವೇಶಿಸಿಕೊಂಡಿರ್ಪುದೆ ಪಾದೋದಕ.
ಪರಮಸಂಘ್ರಿಕಮಲದಲ್ಲಿ ಹುಟ್ಟಿದುದೆ ಪಾದೋದಕ.
ತರತರದ ಭಕ್ತ ಮಾಹೇಶ್ವರ ಪ್ರಸಾದಿ ಪ್ರಾಣಲಿಂಗಿ
ಶರಣ ಐಕ್ಯದೊಳಡಗಿದ ಪಾದೋದಕ. ಅದಕ್ಕೆ ದೃಷ್ಟ :
ಪಾಕಾರಂ ಪರಮಜ್ಞಾನಂ ದೋಕಾರಂ ದೋಷನಾಶನಂ ।
ದಕಾರಂ ದಹತೇ ಜನ್ಮ ಕಕಾರಂ ಕರ್ಮಭೇದನಂ ॥
ಎಂದುದಾಗಿ, ಇಂತಪ್ಪ ಪಾದೋದಕವ ಕೊಂಡು,
ಪರಿಣಾಮ ತೃಪ್ತಿಯನೆಯ್ದುವ ಸದ್ಭಕ್ತಂಗೆ ನಮೋ ನಮೋ ಎಂಬೆ.
ಬಸವಪ್ರಿಯ ಕೂಡಲಸಂಗಮದೇವಾ,
ಮಾಂ ತ್ರಾಹಿ, ತ್ರಾಹಿ ಕರುಣಾಕರನೆ. || ೧೫೦ ||

೯೮೧

ಪಿಂಡವಾದುದ ಪಿಂಡಜ್ಞಾನ ಹುಟ್ಟಿ ಅರಿದನಯ್ಯಾ ಶರಣನು.
ಅದೆಂತೆಂದಡೆ: ಆತ್ಮರುಗಳಲ್ಲಿ ಪರಮಾತ್ಮನ ಕಳೆ ವೇದ್ಯವಾಗಿರೆ,
ತನುವ ರುಧಿರವ ಕೂಡಿಕೊಂಡು ಅಷ್ಟತನುಮೂರ್ತಿಯೆನಿಸಿಕೊಂಡು,
ಸಪ್ತಧಾತು ಬೆರೆಸಿಕೊಂಡು, ಷಡುವರ್ಣವ ಕೂಡಿಕೊಂಡು,

ಪಂಚತತ್ವವ ಪ್ರವೇಶಿಸಿಕೊಂಡು,
ಚತುಷ್ಟಯ ಕರಣವ ದಳಕುಳವ ಮಾಡಿಕೊಂಡು,
ಸ್ಥೂಲಸೂಕ್ಷ್ಮಕಾರಣವ ಅಂಗವ ಮಾಡಿಕೊಂಡು,
ಕಾಯ ಜೀವವೆರಡು ದಳಕುಳವ ಮೆಟ್ಟಿಕೊಂಡು,
ಏಕದಳದ ಮೇಲೆ ಪರಮಾತ್ಮ ತಾ ನಿಂದು, ಸಾಕ್ಷಿಕನಾಗಿ ಸಾವು ಹುಟ್ಟನರಿವುತ್ತ
ಜ್ಞಾನವಿದು ಅಜ್ಞಾನವಿದು ಎಂದು ಕಾಣುತ್ತ, ಸಂಸಾರ ಹೇಯವ ಮಾಡುತ್ತ
ಲಿಂಗವ ಹಾಡುತ್ತ, ಲಿಂಗವ ಹಾಡುತ್ತ, ಜಂಗಮವ ಹರಸುತ್ತ
ಲಿಂಗವಾಗಿ ಬಂದು ಗುರುಪಾದವಿಡಿದಾತನೀಗ ತತ್‌ಶಿಷ್ಯ.
ಆ ಶಿಷ್ಯಂಗೆ ಶ್ರೀ ಗುರುಸ್ವಾಮಿ, ಕಾಯವಿದು ಕರಣವಿದು
ಜೀವವಿದು ವಾಯುವಿದು,
ಮನವಿದು ಪ್ರಾಣವಿದು ಮಾಯವಿದು ಮದವಿದು ಮಲವಿದೆಂದು
ಆತನಾದಿಯನುರುಹಿ, ತನ್ನಾದಿಯ ಕುರುಹಿದೇಕೋ ಮಗನೇ ಎಂದು,
ಗಣಸಾಕ್ಷಿಯಾಗಿ ಹಸ್ತಮಸ್ತಕಸಂಯೋಗ ಮಾಡಿ,
ಕರ್ಣದಲಿ ಮಂತ್ರವ ಹೇಳಿ, ಕರಸ್ಥಲಕ್ಕೆ ಲಿಂಗವ ಕೊಡುವಲ್ಲಿ,
ಮಗನೆ ಹಸ್ತವೆಂದರೆ
ಮಂತ್ರಲಿಂಗವಾಗಿ ಇದೇನೆ,
ಮಸ್ತಕವೆಂದರೆ ಚಿದ್ಬ್ರಹ್ಮದಲ್ಲಿ ತೋರುವ ಸುನಾದಕಳೆ ನಾನೇಯಾಗಿ ಇದೇನೆ.
ಸಂಯೋಗವೆಂದರೆ ಸರ್ವಾಂಗದಲ್ಲಿ ಪ್ರಾಣಜಂಗಮನಾಗಿ ನಾನೇ ಇದೇನೆ.
ತ್ರಿವಿಧ ಉಪದೇಶವೆ ತ್ರಿವಿಧ ಪ್ರಣವವಾಗಿ ಅದಾವೆ.
ತ್ರಿವಿಧ ಪ್ರಣವವೆ ಗುರುಲಿಂಗಜಂಗಮವೆಂದು,
ಆ ಗುರುಲಿಂಗಜಂಗಮವೆ ಇಷ್ಟ, ಪ್ರಾಣ ತೃಪ್ತಿಯೆಂದು,
ಆ ಇಷ್ಟ, ಪ್ರಾಣ ತೃಪ್ತಿಯೆ ಆಚಾರಾದಿ ಮಹಾಲಿಂಗವೆಂದು,
ಆ ಆಚಾರಾದಿ ಮಹಾಲಿಂಗವೆ ಮೂವತ್ತಾರು ಲಿಂಗವೆಂದು,
ಆ ಮೂವತ್ತಾರು ಲಿಂಗವೆ ಇನ್ನೂರ ಹದಿನಾರು ಲಿಂಗವೆಂದರಿದು,
ಇಂತಿವೆಲ್ಲಕ್ಕೆ ಇಷ್ಟ, ಗುರುವೆ ಆದಿ, ಇಷ್ಟೆ ಲಿಂಗವೆ ಮಧ್ಯ,
ಇಷ್ಟಜಂಗಮವೆ ಅವಸಾನ.
ಇದು ಕಾರಣ, ಗುರುವಿಗೆ ತನು, ಲಿಂಗಕ್ಕೆ ಮನ, ಜಂಗಮಕ್ಕೆ ಧನ.
ಈ ತ್ರಿವಿಧವು ತ್ರಿವಿಧ ಮುಖದಲ್ಲಿ ಗುರುವಿಂದ ತನು ಶುದ್ಧಪ್ರಸಾದವಾಯಿತ್ತು,
ಲಿಂಗದಿಂದ ಮನ ಸಿದ್ಧಪ್ರಸಾದವಾಯಿತ್ತು,
ಜಂಗಮದಿಂದ ಪದಾರ್ಥ ಪ್ರಸಿದ್ಧಪ್ರಸಾದವಾಯಿತ್ತು.
ಈ ತ್ರಿವಿಧ ಪ್ರಸಾದವೆ ಅಂಗವಾದ ಶರಣಂಗೆ
ಅರಿವೇ ಗುರು, ಜ್ಞಾನವೆ ಲಿಂಗ, ಭಾವನೆ ಜಂಗಮ.
ಇಂತಪ್ಪ ಶರಣ ಮತ್ತೆ ಗುರುವೆನ್ನ, ಲಿಂಗವೆನ್ನ, ಜಂಗಮವೆನ್ನ, ಆಚಾರವೆನ್ನ,

ತಾನೆನ್ನ ನಾನೆನ್ನ, ಏನೂ ಎನ್ನ, ಬಸವಪ್ರಿಯ ಕೂಡಲಚೆನ್ನಸಂಗಮದೇವ
ತಾನೆ ತನ್ಮಯವಾಗಿ. || ೧೫೧ ||

೯೮೨

ಪುರಾತರು ಪುರಾತರು ಎಂದು,
ಪುರಾಣದೊಳಗಣ ಕಥೆಯನೆ ಕಲಿತುಕೊಂಡು,
ಪುರದ ಬೀದಿಯೊಳಗೆ ಹರದರಂತೆ,
ಮಾತಿನ ಹಸರವನಿಕ್ಕಿ ಮಾರುವ ಅಣ್ಣಗಳಿರಾ, ನೀವು ಕೇಳಿರೊ.
ಅಂದು ಹೋದವರ ಸುದ್ಧಿಯ ನುಡಿದರೆ,
ಇಂದು ಬಂದರೊ ನಿಮಗೆ ಇಂದು ಬಂದವರ ಒಂದೇ ಎಂದರಿದ ಭಕ್ತರ
ಆಚರಣೆಯ ತೋರಿ ಬದುಕಿಸಯ್ಯಾ,
ಬಸವಪ್ರಿಯ ಕೂಡಲಚೆನ್ನಬಸವಣ್ಣಾ. || ೧೫೨ ||

೯೮೩

ಪೃಥ್ವಿ, ಅಪ್ಪು, ಅಗ್ನಿ, ವಾಯು, ಆಕಾಶ, ಚಂದ್ರ,
ಸೂರ್ಯ, ಸೋಮ, ಮಂಗಳ, ಬುಧ, ಬೃಹಸ್ಪತಿ,
ಶುಕ್ರ, ಶನಿ ಇವು ಮೊದಲಾದ ಪಂಚತತ್ವ ನವಗ್ರಹಂಗಳಿಲ್ಲದಂದಿನ,
ನಕ್ಷತ್ರಂಗಳಿಲ್ಲದಂದಿನ, ಸಪ್ತಸಮುದ್ರಂಗಳಿಲ್ಲದಂದಿನ,
ಸಪ್ತಕುಲ ಪರ್ವತಂಗಳು ಇಲ್ಲದಂದಿನ, ಸಪ್ತಮುನಿವರ್ಗಂಗು ಇಲ್ಲದಂದಿನ,
ಹರಿಬ್ರಹ್ಮ, ಕಾಲಕರ್ಮ, ದಕ್ಷಾದಿಗಳಿಲ್ಲದಂದಿನ
ರುದ್ರಕೋಟಿ, ಸದಾಶಿವನಿಲ್ಲದಂದಿನ, ಏನೂ ಏನೂ ಇಲ್ಲದಂದಿನ,
ಶೂನ್ಯ ನಿಶ್ಶೂನ್ಯಕ್ಕೆ ನಿಲ್ಕುದ ಮಹಾಘನವ
ನಾನು ಬಲ್ಲೆ, ತಾನು ಬಲ್ಲೆನೆಂದು ನುಡಿವ ಹೀನಮನುಜರ ಕೂಗಾಟ,
ಬೇಟಕ್ಕೆ ನಾಯಿ ಬೊಗಳಿದಂತಾಯಿತ್ತು.
ಆ ತುಟ್ಟತುದಿಯಲ್ಲಿಪ್ಪ ಘನವ ಮುಟ್ಟಿ ಹಿಡಿದುಬಂದ ಶರಣರು ಬಲ್ಲರಲ್ಲದೆ,
ಬಹುವಾಕ್ಕು ಜಾಲವ ಕಲಿತಕೊಂಡು, ಗಟ್ಟಿತನದಲ್ಲಿ ಬೊಗಳಿಯಾಡುವ
ಮಿಟ್ಟೆಯ ಭಂಡರೆತ್ತ ಬಲ್ಲರು ನಮ್ಮ ಶರಣರ ಸುದ್ದಿಯ,
ಬಸವಪ್ರಿಯ ಕೂಡಲಚೆನ್ನಬಸವಣ್ಣಾ? || ೧೫೩ ||

೯೮೪

ಪ್ರಣಮವೆ ಪ್ರಾಯ, ಪ್ರಾಣವೆ ಲಿಂಗ.
ಲಿಂಗವೆ ಅಂಗ, ಆ ಅಂಗವೆ ಆಗಮ್ಯ ಅಗೋಚರ ಅಪ್ರಮಾಣ.
ಲಿಂಗಸಂಗವೆ ಜಂಗಮಲಿಂಗ.
ಜಂಗಮ ಒಂದೆರಡೆಂದು ಸಂದು ಮಾಡಲಂಜಿ ಬೆರಗಾಗಿರಲು,
ಬೇಗೆಯೆದ್ದು ಬೆಳಗಾಯಿತ್ತ ಕಂಡು,

ಕಣ್ಣುಮುಚ್ಚಿ ಕರಗಿ ಪ್ರಾಣಲಿಂಗ ಲೀಯವಾದ,
ಬಸವಪ್ರಿಯ ಕೂಡಸಂಗಮದೇವ ಪ್ರಭುವೇ. ॥ ೧೫೪ ॥

೯೮೫

ಪ್ರಥಮದಲ್ಲಿ ಭಕ್ತಸ್ಥಲವೆಂದು ನುಡಿವಿರಿ.
ಆ ಭಕ್ತಸ್ಥಲವೆಲ್ಲರಿಗೆಂತಾಯಿತ್ತು ಹೇಳಿರಣ್ಣಾ !
ಸತಿಪತಿಸುತರು ಭೃತ್ಯಾಚಾರದಲ್ಲಿ ಭಕ್ತಿಯ ಮಾಡಿಹೆನೆಂದಣ್ಣಗಳು ಕೇಳಿರೊ.
ಪತಿಯ ಮಾತ ಮೀರುವಾಕೆ ಸತಿಯಲ್ಲ. ಪಿತನ ಮಾತ ಮೀರುವಾತ ಸುತನಲ್ಲ.
ಅತಿ ಕೃಪೆಯಿಂದ ದೀಕ್ಷೆ, ಶಿಕ್ಷೆಯನಿತ್ತ ಗುರುವಿನಾಜ್ಞೆಯ ಮೀರುವಾತ ಶಿಷ್ಯನಲ್ಲ.
ಇಂತಿವು ಭಕ್ತಸ್ಥಲಕ್ಕೆ ಸಲ್ಲವು ಕೇಳಿರಣ್ಣಾ !
ಆ ಸತಿಗೆ ಪತಿಯೇ ಗುರುವಾಗಿ, ಆ ಸುತಗೆ ಪಿತನೆ ಗುರುವಾಗಿ,
ಆ ಪಿತಗೆ ಅತಿಕೃಪೆಯಿಂದ ದೀಕ್ಷೆ ಶಿಕ್ಷೆಯನಿತ್ತ ಗುರುವೆ ಗುರುವಾಗಿ,
ಏಕಪದವಿಲ್ಲಾಗ ಭಕ್ತಸ್ಥಲವ ಮಾಡಿಹೆನೆಂಬಣ್ಣಗಳಿರಾ ಕೇಳಿ.
ಈ ಒಂದು ಸ್ಥಲವುಳ್ಳವರಿಗೆ ಆರುಸ್ಥಲವು ಅಡಗಿತ್ತು.
ಇಂತಿವು ಏಕಸ್ಥಲವಾದ ಮೇಲೆ ಮುಂದೆಂತೆಂದಡೆ,
ಆ ಪತಿಗೆ ಸತಿಯೇ ಗುರುವಾಗಿ, ಆ ಪಿತಗೆ ಸುತನೇ ಗುರುವಾಗಿ,
ಅತಿಕೃಪೆಯಿಂದ ದೀಕ್ಷೆ ಶಿಕ್ಷೆಯನ್ನಿತ್ತ ಗುರುವೇ ಶಿಷ್ಯನಾಗಿ,
ಇಂತಿದೀಗ ನಿರ್ಣಯಸ್ಥಲವು.
ಇದನರಿಯದೆ, ಅವಳು ಸತಿ, ತಾ ಪತಿ ಎಂಬ ಹಮ್ಮಿಂದವೇ
ಅವರು ಸುತರು, ತಾ ಪಿತನೆಂಬ ಹಮ್ಮಿಂದವೇ
ಅವರು ಶಿಷ್ಯರು, ತಾ ಗುರುವೆಂಬ ಹಮ್ಮಿಂದವೇ
ಇದು ಲಿಂಗಪಥಕ್ಕೆ ಸಲ್ಲದು, ಹಿಡಿದ ವ್ರತಕ್ಕೆ ನಿಲ್ಲದು
ಇದ ಮುಂದೆ, ನಮ್ಮ ಬಸವಪ್ರಿಯ ಕೂಡಲಚೆನ್ನಬಸವಣ್ಣಾ. ॥ ೧೫೫ ॥

೯೮೬

ಪ್ರಸಾದವೆಂದು, ಅರ್ಪಿತಪ್ರಸಾದವೆಂದು, ಅವಧಾನಪ್ರಸಾದವೆಂದು,
ಪರಿಣಾಮಪ್ರಸಾದವೆ,ದು, ಸಮಯಪ್ರಸಾದವೆ,ಧು,
ಸರ್ವಾಂಗಪ್ರಸಾದವೆ,ದು,
ಶುದ್ಧಪ್ರಸಾದವೆ,ದು, ಸಿದ್ಧಪ್ರಸಾದವೆ,ದು, ಪರ್ರಸಿದ್ಧಪ್ರಸಾದವೆ,ದು,
ಪರಿಪೂಣರಪ್ರಸಾದವೆ,ದು, ದಿವ್ಯಪರ್ರಸಾದವೆಂದು,
ಆದಿಪ್ರಸಾದವ ಅಂಗಪ್ರಾಣ ಭಾವ. ಅದಕ್ಕೆ ದೃಷ್ಟ :
ಪ್ರಕಾರೋಽಯಂ ಪ್ರಸಾದಸ್ಸ್ಯಾತ್ ಸಾಕಾರಂ ಭಕ್ತಿರುಚ್ಯತೇ ।
ಪ್ರಸಾದ ಪೂರ್ವಿಕಾ ಭಕ್ತಿರ್ಮುಕ್ತಿರೇತಿ ದಕಾರಕಂ ॥
ಎಂದುದಾಗಿ, ಇಂತೀ ಪ್ರಸಾದಿ ನೀನೆಯಲಾ,

ಬಸವಪ್ರಿಯ ಕೂಡಲಸಂಗಮದೇವಾ,
ಮಾಂ ತ್ರಾಹಿ, ತ್ರಾಹಿ ಕರುಣಾಕರನೆ. ॥ ೧೫೬ ॥

೯೮೭

ಪ್ರಾಣಲಿಂಗಿ ಪ್ರಾಣಲಿಂಗಿ ಎಂದು ನುಡಿದಾಡುತಿಪ್ಪಿರಿ.
ಪ್ರಾಣಲಿಂಗದ ನೆಲೆಯನಾರು ಬಲ್ಲರು ?
ಪ್ರಾಣಲಿಂಗಿಯಾದರೆ,
ವಾಯು ಪ್ರಾಣವ ನಿಲಿಸಿ, ಲಿಂಗ ಪ್ರಾಣವಾಗುವದೀಗ ಪ್ರಾಣಲಿಂಗ.
ಪ್ರಾಣಲಿಂಗಿಯಾದರೆ,
ಗುರುಲಿಂಗಜಂಗಮದ ಪಾದೋದಕ ಪ್ರಸಾದವ
ತನ್ನೊಳರಿದು ಮೈರೆದು ಪರವಶನಾಗಿ,
ಲಿಂಗದೊಳಗೆ ಬೆರೆಸುವದೀಗ ಪ್ರಾಣಲಿಂಗಿ.
ಇದನರಿಯದೆ ವಾಯು ಪ್ರಾಣವಾಗಿ, ಬಾಯನುಡಿಯ ಬಲ್ಲಿದವರಾಗಿ,
ಬೊಗುಳಿಯಾಡುವ ಜಾವಳರ ಮಾತ ಮೆಚ್ಚುವನೆ,
ನಮ್ಮ ಬಸವಪ್ರಿಯ ಕೂಡಲಚೆನ್ನಬಸವಣ್ಣ ? ॥ ೧೫೭ ॥

೯೮೮

ಬಟ್ಟಬಯಲ ತುಟ್ಟತುದಿಯ ನಟ್ಟನಡುವಣ,
ಕಟ್ಟಕಡೆಯ ಮೆಟ್ಟಿ ನೋಡಿ,
ಉಟ್ಟುದನಳಿದು ಒಟ್ಟಬತ್ತಲೆಯಾದೆ.
ಇನ್ನು ಬಿಟ್ಟುದ ಹಿಡಿಯಬಾರದು, ಶಿಡಿದುದ ಬಿಡಬಾರದು.
ಇದಕ್ಕೆ ಒಡೆಯನಾವನೆಂದು ನೋಡಲಾಗಿ ನೋಡಿಹೆನೆಂದರೆ ನೋಟಕ್ಕಿಲ್ಲ,
ಕೂಡಿಹೆನೆಂದರೆ ಕೂಟಕ್ಕಿಲ್ಲ, ಹಿಡಿದಿಹೆನೆಂದರೆ ಹಿಡಿಹಿಗಿಲ್ಲ,
ಪೂಜಿಸಿಹೆನೆಂದರೆ ಪೂಜೆಗಿಲ್ಲ,
ಇದ ಮೆಲ್ಲಗೆ ಓಜೆಯಿಂದ ನೋಡಲಾಗಿ,
ನೋಡುವ ನೋಟವು ತಾನೆ, ಕೂಡುವ ಕೂಟವು ತಾನೆ,
ಹಿಡಿವುದು ಆ ಹಿಡಿಗೆ ಸಿಕ್ಕಿಕೊಂಬುದು ತಾನೆ,
ಪೂಜಿಸುವುದು ಪೂಜೆಗೊಂಬುದು ತಾನೆ.
ನಾನಿದರ ಭೇದವನರಿದು ಆದಿ ಅನಾದಿಯನು ಏಕವ ಮಾಡಿ,
ನಾನಲ್ಲೇ ಐಕ್ಯನಾದೆನಯ್ಯಾ, ಬಸವಪ್ರಿಯ ಕೂಡಲಚೆನ್ನಬಸವಣ್ಣಾ ॥ ೧೫೮ ॥

೯೮೯

ಬಯಲಬ್ರಹ್ಮವೆ ಪಿಂಡಬ್ರಹ್ಮವೆನಿಸಿ,
ಆ ಪಿಂಡಬ್ರಹ್ಮವೆ ಶಿವಶಕ್ತಿಯೆನಿಸಿ,
ಆ ಶಿವಶಕ್ತಿಯ ಪ್ರಪಂಚೇ ಪಂಚಮೂರ್ತಿಯ ಪ್ರಪಂಚೆನಿಸಿ,

ಆ ಪಂಚಮೂರ್ತಿಯ ಪ್ರಪಂಚು ಯುಕ್ತಿಯಿಂ
ಜಗಬ್ರಹ್ಮಾಂಡ ಜೀವ ಜಂತು ಜಾಲ
ಎಂಬತ್ತುನಾಲ್ಕು ಲಕ್ಷ ವರ್ಣಾಶ್ರಮದಲ್ಲಿ ಆಡಿಸಿ, ಆಡದಂತಿರ್ಪ
ಪರಂಜ್ಯೋತಿ ಬಸವಪ್ರಿಯ ಕೂಡಲಸಂಗಮದೇವ ಪ್ರಭುವೆ. ॥ ೧೮೯ ॥

೯೯೦

ಬಯಲಿಂದಲೆ ಹುಟ್ಟಿ, ಬಯಲಿಂದಲೆ ಬೆಳೆದು,
ಬಯಲಾಮೃತವನೆ ಉಂಡು, ಬಯಲನೆ ಉಟ್ಟು,
ಬಯಲನೆ ತೊಟ್ಟು, ಬಯಲು ಬಯಲೊಳಗೆ ಬೆರೆದ ಭೇದವ,
ಈ ಭುವನದೊಳಗೆ ಇಪ್ಪ ಭವಭಾರಿಗಳು ಎತ್ತಬಲ್ಲರು, ಭವವಿರಹಿತ ಶರಣರ ನಿಲವ,
ಬಸವಪ್ರಿಯ ಕೂಡಲಚನ್ನಬಸವಣ್ಣಾ ? ॥ ೧೯೦ ॥

೯೯೧

ಬಯಲೆ ರೂಪಾಯಿತ್ತು, ನಿರ್ವಯಲೆ ನಿರೂಪಾಯಿತ್ತು
ಸರ್ವಾಂಗದೊಳು ಉರಿ ವೇಧಿಸಿತ್ತು.
ಅಲ್ಲೊಂದು ಸದಮದಗಜ ಹಯನಾಯಿತ್ತು.
ಅಮೃತವನೆ ಉಂಡಿತ್ತು, ಮಧುರಸವನೇ ಉಂಡಿತ್ತು.
ನಮ್ಮ ಬಸವಪ್ರಿಯ ಕೂಡಲಚೆನ್ನಬಸವಣ್ಣನ ಕೂಡಿತ್ತು. ॥ ೧೯೧ ॥

೯೯೨

ಬೆಟ್ಟವ ಬೆಳ್ಳಕ್ಕಿ ನುಂಗಿ,
ತುಟ್ಟತುದಿಯ ಬಟ್ಟಬಯಲ ನಟ್ಟನಡುವಣ ಶಬ್ದವ ಮುಟ್ಟಿ,
ಹಿಡಿದವ ಹುಟ್ಟಲಿಲ್ಲ, ಹೊದ್ದಲಿಲ್ಲ, ಅಷ್ಟದಳ ಕುಳವ ಮುಟ್ಟಲಿಲ್ಲ,
ಹೃತ್ಕಮಲಕರ್ಣಿಕಾಮಧ್ಯದಲ್ಲಿರ್ಪ ಸದ್ವಾಸನೆಯ
ಸ್ವಾನುಭಾವ ಅಮೃತವನುಂಡು,
ಮನ ಮಗ್ನವಾದಾತನೆ ಪ್ರಾಣಲಿಂಗಿ,
ಬಸವಪ್ರಿಯ ಕೂಡಲಸಂಗಮದೇವ ಪ್ರಭುವೆ. ॥ ೧೯೨ ॥

೯೯೩

ಬೆಳಗ ನುಂಗಿದ ಕತ್ತಲೆಯಂತೆ, ಕತ್ತಲೆಯ ನುಂಗಿದ ಬೆಳಗಿನಂತೆ,
ಹೊಳೆವ ಜ್ಯೋತಿಯ ಕಳೆ ಬಯಲೊಳಡಗಿದಂತೆ,
ನಳಿನಮಿತ್ರನ ಬೆಳಗು, ಹೊಳೆವ ಕಂಗಳ ಬೆಳಗು
ಥಳ ಥಳ ಹೊಳೆದು ಒಂದಾದಂತೆ,
ಸರ್ವಜೀವರೊಳು ಕಳೆ ಒಂದಲ್ಲದೆ ಎರಡಿಲ್ಲ,
ಸಂದಳಿದ ಸಮರಸೈಕ್ಯ,
ಬಸವಪ್ರಿಯ ಕೂಡಲಸಂಗಮದೇವ ಪ್ರಭುವೆ. ॥ ೧೯೩ ॥

೯೯೪

ಬ್ರಹ್ಮನ ಹುಟ್ಟು, ವಿಷ್ಣುವಿನ ಸ್ಥಿತಿ,
ರುದ್ರನ ಲಯಕ್ಕೆ ಒಳಗಾದ ಮನುಜರೆಲ್ಲ
ತಾವು ಪ್ರಸಾದಿ, ಪ್ರಾಣಲಿಂಗಿಗಳೆಂದು ನುಡಿದುಕೊಂಬರಿ.
ಪ್ರಸಾದಿಸ್ಥಲ ಎಲ್ಲರಿಗೆಂತಾದುದಣ್ಣಾ? ಪ್ರಸಾದಿಸ್ಥಲ ಪರಮಸುಖ ಪರಿಣಾಮ.
ಮನ ಮೇರೆದಪ್ಪಿ ತನುವನೆ ಪ್ರಸಾದವ ಮಾಡುವದೀಗ ಪ್ರಸಾದ.
ಇದನರಿಯದೆ ಸದಮದವಾಗಿ ಮುಡಿ ನೋಡಿ ಒಡಲ ಕೆಡಿಸಿಕೊಂಬ
ಜಡಮನುಜರ ನುಡಿಯ ಕೇಳಲಾಗದು,
ಬಸವಪ್ರಿಯ ಕೂಡಲಚೆನ್ನಬಸವಣ್ಣಾ. ॥ ೧೬೪ ॥

೯೯೫

ಬ್ರಹ್ಮಾಂಡದ ಬಯಲ ಪಸರಿಸಿ, ಹಿಡಿವರೆ
ಬಯಲಾವುದುಂಟು ಹೇಳಿರಣ್ಣಾ?
ಕಂಗಳ ಮುಂದಣ ಕತ್ತಲೆ ಹರಿವುದಕ್ಕೆ ಜ್ಯೋತಿ ಆವುದುಂಟು ಹೇಳಿರಣ್ಣಾ?
ಇಂಗಿತವನರಿದ ಬಳಿಕ, ತ್ರಿವಿಧಕ್ಕೆ ತ್ರಿವಿಧವನಿತ್ತು
ತ್ರಿವಿಧವನರಿದು, ತ್ರಿವಿಧವ ಮರೆದು, ಕಲಿಯುಗದ ಕತ್ತಲೆಯ ದಾಂಟಿ,
ತನ್ನ ಭವವ ದಾಂಟಿದವಂಗೆ, ಬ್ರಹ್ಮಾಂಡದ ಬಯಲು ಕೈವಶವಾಯಿತ್ತು,
ಕಂಗಳ ಮುಂದಣ ಕತ್ತಲೆ ಹರಿದುಹೋಯಿತ್ತು,
ನಿಮ್ಮ ಸಂಗಸುಖದೊಳಗಿಪ್ಪ ಲಿಂಗೈಕ್ಯಂಗೆ
ಬಸವಪ್ರಿಯ ಕೂಡಲಚೆನ್ನಬಸವಣ್ಣಾ. ॥ ೧೬೫ ॥

೯೯೬

ಭಕ್ತನಾದರು ಆಗಲಿ, ಗುರುವಾದರು ಆಗಲಿ,
ಲಿಂಗವಾದರು ಆಗಲಿ, ಜಂಗಮವಾದರು ಆಗಲಿ,
ಈ ಮರ್ತ್ಯದಲ್ಲಿ ಒಡಲುವಿಡಿದು ಹುಟ್ಟಿದ ಮೇಲೆ,
ಮಾಯೆಯ ಗೆದ್ದೆ[ಹೆ]ನೆಂದರೆ ಸಾಧ್ಯವಲ್ಲ ಕೇಳಿರಣ್ಣಾ!
ಗೆಲ್ಲಬಹುದು ಮತ್ತೊಂದು ಭೇದದಲ್ಲಿ.
ಅದೆಂತೆಂದರೆ: ಭಕ್ತನಾದರೆ ತನುವ ಗುರುವಿಂಗಿತ್ತು, ಮನವ ಲಿಂಗಕ್ಕಿತ್ತು,
ಧನವ ಜಂಗಮಕ್ಕಿತ್ತು ಬೆರೆದರೆ, ಮಾಯಾಪಾಶ ಹರಿಯಿತ್ತು.
ಇದರ ಗೊತ್ತು ಹಿಡಿವನೆಂದರೆ ಆತನ ಭಕ್ತನೆಂಬೆ.
ಗುರುವಾದರೆ ಸಕಲ ಆಗಮಂಗಳನರಿದು, ತತ್ವಮಸಿ ಎಂದು ನಿತ್ಯವ ನೆಮ್ಮಿ,
ತನ್ನ ಒತ್ತುವಿಡಿದ ಶಿಷ್ಯಂಗೆ ಪರತತ್ವವ ತೋರಿ,
ಪ್ರಾಣಲಿಂಗವ ಕರದಲ್ಲಿ ಕೊಟ್ಟು,
ಆ ಲಿಂಗ ಅಂಗವೆಂಬ ಉಭಯದೊಳಗೆ ತಾನಡಗಿ, ತನ್ನೊಳಗೆ ಶಿಷ್ಯನಡಗಿ,
ನಾನು ನೀನು ಎಂಬ ಉಭಯ ಎರಡಳಿದರೆ, ಆತನ ಗುರುವೆಂಬೆ.

ಜಂಗಮವಾದರೆ ಬಾಯಿಲೆಕ್ಕಕ್ಕೆ ಬಾರದೆ, ಬಂದು ಆಶ್ರಿತವೆನಿಸಿಕೊಳ್ಳದೆ
ಆಸೆಯಳಿದು ಲಿಂಗಜಂಗಮವಾಗಿ ನಿರ್ಗಮನಿಯಾಗಿ,
ಭರ್ಗೋ ದೇವಸ್ಯ ಎಂಬ, ಏಕೋದೇವ ನ ದ್ವಿತೀಯವೆಂಬ ಶ್ರುತಿಗೆ ತಂದು
ತಾ ಪರಮಾನಂದದಲ್ಲಿ ನಿಂದು, ಪರಿಪೂರ್ಣನೆನಿಸಿಕೊಂಡು,
ಅಣುವಿಂಗಣು, ಮಹತ್ತಿಂಗೆ ಮಹತ್ತು, ಘನಕ್ಕೆ ಘನವೆಂಬ ವಾಕ್ಯಕ್ಕೆ ಸಂದು,
ತಾ ನಿಂದು ಜಗವನೆಲ್ಲವ ಆಡಿಸುವ ಅಂತರಾತ್ಮಕನಾಗಿ ಅಡಗಿದರೆ
ಜಂಗಮವೆಂಬೆ.
ಅಂತಾದರೆ ಈ ತ್ರಿವಿಧವು ಏಕವಾದುದನರಿದು, ಈ ಲೋಕದ ಕಾಕುಬಳಕೆಗೆ ಸಿಲ್ಕದೆ,
ಇಲ್ಲಿ ಹುಟ್ಟಿದವರೆಲ್ಲ ಇವರೊಳಗೆ ಆದರು.
ನಾನು ತ್ರಿವಿಧದ ನೆಲೆಯ ಹಿಡಿದುಕೊಂಡು ಇವೆಲ್ಲಕ್ಕೂ,
ಹೊರಗಾಗಿ ಹೋದನಯ್ಯಾ,
ಬಸವಪ್ರಿಯ ಕೂಡಲಚೆನ್ನ ಬಸವಣ್ಣಾ. ॥ ೧೬೬ ॥

೯೯೭

ಭಕ್ತನಾದರೆ ಎಂತಿರಬೇಕೆಂದರೆ, ಉಲುಹಡಗಿದ ವೃಕ್ಷದಂತಿರಬೇಕು.
ಶಿಶು ಕಂಡ ಕನಸಿನಂತಿರಬೇಕು, ಗಲಭೆಗೆ ನಿಲ್ಲದ ಮೃಗದಂತಿರಬೇಕು.
ತಾಯ ಹೊಲಬುದಪ್ಪಿದ ಎಳೆಗರುವಿನಂತೆ,
ತ್ರಿಕಾಲದಲ್ಲಿಯು ಲಿಂಗವನೆ ನೆನೆವ ಶರಣರ ಎನಗೊಮ್ಮೆ ತೋರಯ್ಯಾ ಶಿವನೆ,
ಬಸವಪ್ರಿಯ ಕೂಡಲಚೆನ್ನಸಂಗನಬಸವಣ್ಣಾ. ॥ ೧೬೭ ॥

೯೯೮

ಭಕ್ತನಾದರೆ ಪೃಥ್ವಿಸಾರದಲಾದ ಪದಾರ್ಥವ ಲಿಂಗಕ್ಕೆ ಕೊಡದ ಭಾಷೆ.
ಮಹೇಶ್ವರನಾದರೆ ಅಪ್ಪುವಿನ ಸಾರದಿಂದ
ಉದಕವ ಲಿಂಗಕ್ಕೆ ಮಜ್ಜನಕ್ಕೆರೆಯದ ಭಾಷೆ.
ಪ್ರಸಾದಿಯಾದರೆ ಅಗ್ನಿಯಿಂದಾದ ಕಳೆಯ ಲಿಂಗಕ್ಕೆ ವೇದಿಸದ ಭಾಷೆ.
ಪ್ರಾಣಲಿಂಗಿಯಾದರೆ ವಾಯುವಿನಿಂದಾದ ಧ್ಯಾನವ ಲಿಂಗದಲ್ಲಿ ನೋಡದ ಭಾಷೆ.
ಐಕ್ಯನಾದರೆ ಆತ್ಮದಿಂದಾದ ಅಹಂ ಮಮತೆಯಲಿ ಲಿಂಗವ ಭಾವಿಸದ ಭಾಷೆ.
ಇಂತೀ ಆರರಿಂದ ವೀರ ತೋರುವ ಘನವು,
ಬಸವಪ್ರಿಯ ಕೂಡಲಚೆನ್ನಬಸವಣ್ಣಾ. ॥ ೧೬೮ ॥

೯೯೯

ಭಕ್ತನಾದರೆ ಮುಕ್ತಿಪಥಗತಿಗೆ ನಿಲುಕದಂತಿರಬೇಕು.
ಮಹೇಶ್ವರನಾದರೆ ಮನದಲ್ಲಿ ಮನ್ಮಥ ಹೊಗದಂತಿರಬೇಕು.
ಪ್ರಸಾದಿಯಾದರೆ ತನ್ನ ಪ್ರಾಣವೇ ಅಗ್ನಿಸ್ವರೂಪವೆಯಾಗಿರಬೇಕು.
ಪ್ರಾಣಲಿಂಗಿಯಾದರೆ ಪ್ರಾಣವ ನಿಲ್ಲಿಸಿ ಲಿಂಗಪ್ರಾಣೆಯಾಗಿರಬೇಕು.

ಶರಣನಾದರೆ ತನ್ನ ಮರಣಬಾಧೆಯ ಗೆಲಿದಿರಬೇಕು.
ಐಕ್ಯನಾದರೆ ಅನ್ನ ಪಾನಾದಿಗೆ ಇಚ್ಛೆ ಇಲ್ಲದಿರಬೇಕು.
ನಿರ್ವಯಲಾದರೆ ಸರ್ವರ ಕಣ್ಣಿಗೆ ಬಯಲು ಬಯಲಾಗಿರಬೇಕು.
ಈ ಷಟ್‌ಸ್ಥಲಸಂಪನ್ನತೆಯಲ್ಲಿ ಇರಬಲ್ಲಡೆ,
ಎಮ್ಮ ಬಸವಪ್ರಿಯ ಕೂಡಲಚೆನ್ನಬಸವಣ್ಣ. || ೧೬೯ ||

೧೦೦೦

ಭಕ್ತನೊಂದು ಕುಲ, ಭವಿಯೊಂದು ಕುಲವೆಂಬರು.
ಭಕ್ತನೆಂತಿಪ್ಪ ಭವಿಯೆಂತಿಪ್ಪನೆಂದರೆ, ಆರೂ ಅರಿಯರು.
ಇದು ಬಲ್ಲವರು ತಿಳಿದು ನೋಡಿ.
ಭಕ್ತನೆಂದರೆ ಅಂಗ, ಭವಿ ಎಂದರೆ ಲಿಂಗ,
ಈ ಎರಡರ ಸಕೀಲಸಂಬಂಧವನರಿದರೆ,
ಆತನೆ ನಮ್ಮ ಬಸವಪ್ರಿಯ ಕೂಡಲಚೆನ್ನಬಸವಣ್ಣ. || ೧೭೦ ||

೧೦೦೧

ಭಕ್ತ, ಮಹೇಶ್ವರ, ಪ್ರಸಾದಿ ಪ್ರಾಣಲಿಂಗಿ,
ಸತ್ಯಶರಣರೈಕ್ಯರೆಂಬ ಇತ್ತತ್ತ ಗೊತ್ತ ಬಿಟ್ಟು,
ನಿರ್ವಯಲ ಲಿಂಗದೊಳು ನಿಮ್ಮ ಭಕ್ತನಾದರೆ,
ಬಸವಪ್ರಿಯ ಕೂಡಲಚೆನ್ನಬಸವಣ್ಣ. || ೧೭೧ ||

೧೦೦೨

ಭಕ್ತಿಯ ಮಾಡಿಹೆನೆಂಬವರೆಲ್ಲ ಭಾಗ್ಯವಂತರಾದರು.
ಮುಕ್ತಿಯ ಸಾಧಿಸಿಹೆನೆಂಬವರೆಲ್ಲ ಮೂವಿಧಿಗೊಳಗಾದರು.
ತತ್ವವನರಿದಿಹೆನೆಂಬವರೆಲ್ಲ ತರ್ಕಿಗಳಾದರು.
ವಿರಕ್ತಿಯ ಮಾಡಿಹೆನೆಂಬವರೆಲ್ಲ ವೈರಾಗಿಗಳಾದರು.
ಈ ಚತುರ್ವಿಧದೊಳಗೆ ಆವಂಗವೂ ಅಲ್ಲ,
ಎಮ್ಮ ಭಸವಪ್ರಿಯ ಕೂಡಲಚೆನ್ನಬಸವಣ್ಣನಲ್ಲಿ ಶರಣರ ಪರಿ ಬೇರೆ. || ೧೭೨ ||

೧೦೦೩

ಮನವನರಿದಂಗೆ ಮತದ ಹಂಗೇಕೊ ?
ನಿತ್ಯವನರಿದಂಗೆ ತೀರ್ಥದ ಹಂಗೇಕೊ ?
ಪರಮಾರ್ಥವನರಿದಂಗೆ ಪ್ರಸಾದದ ಹಂಗೇಕೊ ?
ಜ್ಯೋತಿಯನರಿದಂಗೆ ಕತ್ತಲೆಯ ಹಂಗೇಕೊ?
ಲೋಕವನರಿದಂಗೆ ವ್ಯಾಕುಲದ ಹಂಗೇಕೊ?
ಈ ತೆರನನರಿದಂಗೆ ಮುಂದಾವ ಭೀತಿಯುಂಟು ಹೇಳಾ,
ಬಸವಪ್ರಿಯ ಕೂಡಲಚೆನ್ನಬಸವಣ್ಣಾ ? || ೧೭೩ ||

೧೦೦೪

ಮನವೆ ಮಾರುತನ ಒಡಗೂಡಿರ್ದು, ತನುವೆ ವಿಕಾರದೊಳಗಿರ್ದು,
ಮನವೆಂತು ಕಂಡಿತ್ತೆಂಬಿರಿ ? ಎಲೆ ಅಣ್ಣಗಳಿರಾ, ಘನವೆಂತಿಪ್ಪುದೆಂದರೆ,
ಈ ತನುವ ಮರೆದು, ಹರಿವ ಮನವ ಲಿಂಗದಲಿ ನಿಲಿಸಿ,
ಈ ಜನಿತಕ್ಕೆ ನಾನಿನ್ನಾರೆಂದು
ತ್ರಿಕಾಲದಲ್ಲಿಯೂ ಎಮ್ಮ ಶರಣರಿಗೆ ನೆನೆವನೆ ನಿತ್ಯನು,
ಬಸವಪ್ರಿಯ ಕೂಡಲಚೆನ್ನಬಸವಣ್ಣಾ. ॥ ೧೭೪ ॥

೧೦೦೫

ಮರ್ತ್ಯದಲ್ಲಿ ಹುಟ್ಟಿ, ಕಂಗಳ ಮುಂದಣ ಕತ್ತಲೆಯ ಕಳೆಯದೆ,
ನಾವು ಗುರು ಜಂಗಮ, ನಾವು ಭಕ್ತರು ಎಂಬ ನುಡಿಗೆ ಏಕೆ ನಾಚರೋ ?
ಭಕ್ತನಾದರೆ, ಸತ್ತುಚಿತ್ತಾನಂದವನೊತ್ತಿ ಮೆಟ್ಟಿ,
ತತ್ವಮಸಿವಾಕ್ಯವೆಂದು ಕಂಡು ಬಿಟ್ಟು,
ಲಿಂಗದ ಗೊತ್ತುವಿಡಿದು, ಹಿಂದೆ ಹರಿದು, ಗುರುವಿನ ಗೊತ್ತನರಿದು,
ಜಗದೊಳಗಣ ಗುಂಗುದಿಯನೆಲ್ಲವ ಹರಿದು, ಜಂಗಮದ ಗೊತ್ತನರಿದು,
ಮುಂದಣ ಮುಕ್ತಿ ಎಂಬುದ ಮರೆದು,
ಎಂತಿರ್ದಂತೆ ಬ್ರಹ್ಮವು ತಾನೆ ಎಂಬುದನರಿದು,
ಪರಿಣಾಮದಲ್ಲಿ ಪರವಶನಾಗಿ ನಿಂದು,
ಮತ್ತೆ ಆರನೆಣಿಸಲಿಲ್ಲ, ಮೂರು ಮುಟ್ಟಲಿಲ್ಲ, ಬೇರೊಂದುಂಟೆನಲಿಲ್ಲ,
ನಮ್ಮ ಬಸವಪ್ರಿಯ ಕೂಡಲಚೆನ್ನಬಸವಣ್ಣನಿಗೆ
ಸೂರೆಹೋದ ಶರಣನು. ॥ ೧೭೫ ॥

೧೦೦೬

ಮರ್ತ್ಯಲೋಕದ ಮಹಾಗಣಂಗಳು ನೀವು ಕೇಳಿರಯ್ಯ,
ಅದೇನು ಕಾರಣವೆಂದರೆ,
ಗುರುವೆನ್ನದು, ಲಿಂಗವೆನ್ನದು, ಜಂಗಮವೆನ್ನದು, ಪ್ರಸಾದವೆನ್ನದು.
ಈ ಚತುರ್ವಿಧವು ಎನ್ನದಾದ ಕಾರಣದಿಂದ,
ಇದರ ಹಾನಿವೃದ್ಧಿ ಎನ್ನದಾದ ಕಾರಣದಿಂದ,
ಕಂಡುದ ನುಡಿವೆನಲ್ಲದೆ, ಜಗದಂತೆ ಮಿಥ್ಯಾಳಾಪವಾಗಿ ನುಡಿವನಲ್ಲ,
ಮುಂದೆ ಸತ್ತುಗಿತ್ತು ಹುಟ್ಟುವನಲ್ಲ,
ಮುಂದೆ ಹೊತ್ತುದ ಹುಸಿಮಾಡಿ, ಮತ್ತೊಂದು ದಿಟ ಮಾಡುವನಲ್ಲ,
ಅದನೇನು ಕಂಡವರು ಕಂಡಂತೆ ನುಡಿವರು.
ಉಂಡವರು ಉಂಡಂತೆ ತೇಗುವರು ಎಂಬುದ ನೀವು ಅರಿದುಕೊಳ್ಳಿ.
ಪಂಚಾಚಾರಕ್ಕೊಳಗಾದ ಶಿವಭಕ್ತರು ಎಮ್ಮಲ್ಲಿ ಹಿಂಚುಮುಂಚು ನೋಡಬೇಡ.
ನಿಮ್ಮ ಪ್ರಪಂಚತನೆಯ ಹರಿದುಕೊಂಡು,

ನಿಮ್ಮಲ್ಲಿರ್ದ ಭವಿಗಳನೆ ಭಕ್ತರ ಮಾಡಿ ವಿವರಿಸಿ ನೋಡಲಾಗಿ,
ನಾ ನೀನೆಂಬುವದಕ್ಕಿಲ್ಲ.
ಆ ಉಭಯದ ಗೊತ್ತಮೆಟ್ಟಲಾಗಿ, ಭಕ್ತಜಂಗಮ ಒಂದೇ ಅಂಗ,
ಅದಕ್ಕೆ ನಿಶ್ಚಿಂತ ನಿಜೈಕ್ಯವು.
ಆ ನಿಲುವಿಂಗೆ ನಮೋ ನಮೋ ಎನುತಿರ್ದೆ,
ಬಸವಪ್ರಿಯ ಕೂಡಲಚೆನ್ನಸಂಗನಬಸವಣ್ಣಾ. || ೧೭೬ ||

೧೦೦೭

ಮರದೊಳಗಣ ಕಿಚ್ಚು ಮರನ ಸುಡುತ್ತಿದ್ದಿತ್ತಯ್ಯ.
ಮರ ಬೆಂದು ನಿಂದುರಿಯಿತ್ತು,
ಮಣ್ಣು ಜರಿದು ಬಿದ್ದಿತ್ತು, ಉರಿ ಹೋಗಿ ನಂದಿತ್ತು,
ಸ್ವಯಂಪ್ರಕಾಶವಾಗಿಪ್ಪ ಎಲೆ ಉಳಿಯಿತ್ತು
ಉರಿ ಬಂದು ಎನ್ನ ಕರಸ್ಥಲದಲ್ಲಿ ಅಡಗಿತ್ತು
ಇದ ಕಂಡು ನಾ ಬೆರಗಾಗಿ ನೋಡುತಿರ್ದೆನಯ್ಯಾ,
ಬಸವಪ್ರಿಯ ಕೂಡಲಚೆನ್ನಬಸವಣ್ಣಾ. || ೧೭೭ ||

೧೦೦೮

ಮರೆದರೆ ಮಾಯೆ, ಅರಿದರೆ ಮಾಯೆ ಇಲ್ಲ
ಅರಿವು ಮರವೆ ಎರಡ ನೂಂಕಿ ನಿಂದರೆ,
ಮುಂದೆ ಕಣ್ಣುತೆರಪಾಗಿ ತೋರುವ ಬಯಲೆ ಲಿಂಗದ ಬೆಳಗು.
ಆ ಲಿಂಗದ ಬೆಳಗೆ ನೆಮ್ಮುಗೆಯಾದರೆ ಲಿಂಗೈಕ್ಯವು.
ಆ ಲಿಂಗೈಕ್ಯವು ನಿಜವಾದರೆ ನಿಶ್ಚಿಂತವು.
ನಿಶ್ಚಿಂತದಲ್ಲಿ ಲೀಯವಾದರೆ, ನಿರವಯವು,
ಇದೀಗ ನಮ್ಮ ಮುನ್ನಿನ ಆದ್ಯರ ನಡೆನುಡಿ,
ಇದನರಿಯದೆ ವೇದ ಪುರಾಣ ಶಾಸ್ತ್ರ ಆಗಮ ಇವನೊಂದನು
ಓದಿದರೆ ಹಾಡಿದರೆ ಕೇಳಿದರೆ ಕಾಯ ವಾಯವೆಂದರು,
ನಮ್ಮ ಬಸವಪ್ರಿಯ ಕೂಡಲಚೆನ್ನಬಸವಣ್ಣಾ. || ೧೭೮ ||

೧೦೦೯

ಮಹಾಘನ ನೆಲೆಗೊಂಡಿಪ್ಪ ಶರಣನ ನೆಲೆ ಎಂತಿಪ್ಪುದೆಂದರೆ,
ನೆಲದ ಮರೆಯ ನಿಧಾನದಂತೆ, ತಿಲದ ಮರೆಯ ತೈಲದಂತೆ,
ಮುಗಿಲ ಮರೆಯ ಮಿಂಚಿನಂತೆ, ನೀರೊಳಗಣ ಕಿಚ್ಚಿನಂತೆ,
ಕಾಷ್ಠದೊಳಗಣ ಅಗ್ನಿಯಂತೆ, ತೃಣದೊಳಗಡಗಿದ ಚೈತನ್ಯದಂತೆ,
ಈ ವಿಶ್ವದೊಳು ಇದ್ದೂ ಇಲ್ಲದಂತಿಪ್ಪ ಮಹಾಘನವ
ನಿಮ್ಮ ಶರಣರು ಬಲ್ಲರಲ್ಲದೆ,

ಮರ್ತ್ಯದ ಮರಣಬಾಧೆಗೊಳಗಾದ ಮನುಜರೆತ್ತಬಲ್ಲರು,
ಬಸವಪ್ರಿಯ ಕೂಡಲಚೆನ್ನಬಸವಣ್ಣಾ ? ॥ ೧೭೮ ॥

೧೦೧೦

ಮಾತು ಮಾತಿಗೆ ಮಥನವ ಮಾಡುವಾತನೆ ಜಾತ.
ಮಾತಿಗೆ ಮೊದಲ ಕಂಡಾತನೆ ಅಜಾತ,
ಕಾತರಕ್ಕೆ ಕಂಗೆಟ್ಟು, ಕಳವಳಿಸದಿಪ್ಪನೆ ಪರಮಾತ್ಮ,
ನೀತಿ ನಿಜ ನೆಲೆಗೊಂಡಾತನೆ ಜಗನ್ನಾಥ,
ಇವೇತರೊಳಗು ಸಿಕ್ಕದಿಪ್ಪಾತನೆ ಗುರುನಾಥ,
ಬಸವಪ್ರಿಯ ಕೂಡಲಚೆನ್ನಬಸವಣ್ಣಾ. ॥ ೧೭೯ ॥

೧೦೧೧

ಮಿಥ್ಯವನರಿದವರೆಲ್ಲ ತತ್ವಕ್ಕೆ ಅಂದೇ ಹೊರಗು,
ತಥ್ಯವನರಿದ ಶರಣರು ಸತ್ತಂತೆ ಇರಬೇಕು.
ತಥ್ಯಮಿಥ್ಯ ಎರಡಳಿದ ಶರಣಂಗೆ ಮತ್ತೊಂದು ಬಾರಿ ನಮೋ ನಮೋ ಎಂಬೆ,
ಬಸವಪ್ರಿಯ ಕೂಡಲಚೆನ್ನಬಸವಣ್ಣಾ. ॥ ೧೮೦ ॥

೧೦೧೨

ಮೊಸಲು ಸೂಸಲಾಗಿ, ದೋಸೆ ಕಡಬು ಹೊಯ್ದು,
ಹಬ್ಬವ ಮಾಡಿಹೆನೆಂಬ ಹೇಸಿಗಳ ಮಾತ ಕೇಳಲಾಗದು.
ಅದೇಕೆ ಎಂದರೆ, ಲಿಂಗ ಜಂಗಮದ ಭಾಷೆ ಸಲ್ಲದಾಗಿ,
ಇನ್ನು ಮೊಸಲಾವುದೆಂದರೆ,
ಭಾಷೆಗೇರಿಸಿದ ತನುವೆ ಅಡ್ಡಣಿಗೆ, ಘನವೆ ಹರಿವಾಣ, ಮನ ಮೊಸಲೋಗರ,
ಈ ಅನುವನರಿದು, ಮಹಾಲಿಂಗಕ್ಕೆ ಅರ್ಪಿತವ ಮಾಡುವನೆ ಸದ್ಭಕ್ತನು,
ಬಸವಪ್ರಿಯ ಕೂಡಲಚೆನ್ನಬಸವಣ್ಣಾ. ॥ ೧೮೧ ॥

೧೦೧೩

ಮುಟ್ಟಿಯೂ ಮುಟ್ಟಬಾರದ ಠಾವಿನಲ್ಲಿ,
ಹುಟ್ಟಿಯೂ ಹುಟ್ಟದೊಂದು ಶಿಶುವಾಯಿತ್ತು.
ಅವ ದಿಟ್ಟನಲ್ಲ, ಧೀರ ವೀರ, ಕೊಟ್ಟದವನಲ್ಲ, ಕೊಟ್ಟುದ ಬೇಡ,
ಅವನ ಮುಟ್ಟಿ ಒಡನೆರೆದವರು ನಿತ್ಯನಿತ್ಯಲಿಂಗೈಕ್ಯರು,
ಬಸವಪ್ರಿಯ ಕೂಡಲಚೆನ್ನಬಸವಣ್ಣಾ. ॥ ೧೮೨ ॥

೧೦೧೪

ಮುಳುಗುತ್ತ ತೆರಹಿಲ್ಲದಲ್ಲಿ ಅಂಗವ ಬೇರಿಟ್ಟರಸಿಹೆನೆಂಬುದೆ ಭಿನ್ನಭಾವ,
ಆ ಭಿನ್ನಭಾವವೆ ಭ್ರಮೆ, ಆ ಭ್ರಮೆಯೆ ಭವ.

ಆ ಭವವೆ ಭವಿ, ಆ ಭವಿಯೆ ಜೀವ.
ಆ ಜೀವನೆ ಎಂಬತ್ತುನಾಲ್ಕುಲಕ್ಷ ಜೀವಜಂತು.
ಇದನರಿದವನೆ ಐಕ್ಯ, ಮರೆದವನೆ ಮಾನವ,
ಇದೇ ಜೀವ ಪರಮರ ಹಸಿಗೆ.
ಬಸವಪ್ರಿಯ ಕೂಡಲಸಂಗಮದೇವ ಪ್ರಭುವೆ. || ೧೮೩ ||

೧೦೧೫

ಮೂಲಬ್ರಹ್ಮದಲ್ಲಿ ಮೊಸೆದೋರಿದ ಪ್ರಸಾದವೆ ಪರಮಪ್ರಣಮು.
ಆ ಪ್ರಮಣದ ಪರಮಪ್ರಕಾಶವೆ ಪ್ರಸಿದ್ಧಪ್ರಸಾದ,
ಆ ಪ್ರಸಿದ್ಧಪ್ರಸಾದದಿಂದಲೆ ಬ್ರಹ್ಮಾಂಡ ರೂಪುದೋರಿತ್ತು.
ಆ ಸ್ವರೂಪವೆ ಪ್ರಸಾದ, ನಿರೂಪೇ ಲಿಂಗೈಕ್ಯ, ಅದಕ್ಕೆ ದೃಷ್ಟ :
ತತ್ತ್ವ ಪ್ರದೀಪಿಕಾಯಾಂ :
ಪ್ರಸಾದಂ ಮುಕ್ತಿ ಮೂಲಂಚ ಯತ್ಪ್ರಸಾದಂ ಶಿವಸ್ಯ ಚ ।
ಶಿವಸ್ಸರ್ವಾಧಿದೇವಸ್ಯಾದ್ ವೇದಕರ್ಮೇಷು ತದ್ಧನಂ ॥
ಎಂದುದಾಗಿ, ಇಂತಿದೀಗ ಪ್ರಸಾದ ಮಹಾತ್ಮೆ
ಇದೇ ಪ್ರಸನ್ನಪ್ರಸಾದ, ಇಂತೀ ಪ್ರಸಾದವ ಕೊಂಡವನೆ ಶಿವಕುಲ.
ಬಸವಪ್ರಿಯ ಕೂಡಲಸಂಗಮದೇವಾ,
ಮಾಂ ತ್ರಾಹಿ, ತ್ರಾಹಿ ಕರುಣಾಕರನೆ, || ೧೮೪ ||

೧೦೧೬

ಯೋಗದಿಂದರಿದಿಹೆನೆಂಬಿರಿ, ಓದಿನಿಂದರಿದಿಹೆನೆಂಬಿರಿ.
ವೇದದಿಂದರಿದಿಹೆನೆಂಬಿರಿ, ಶಾಸ್ತ್ರದಿಂದರಿದಿಹೆನೆಂಬಿರಿ.
ಕೇಳಿರಣ್ಣಾ, ಯೋಗದಂತದು ಅಲ್ಲ, ಓದಿನಂತದು ಅಲ್ಲ,
ವೇದದಂತದು ಅಲ್ಲ, ಶಾಸ್ತ್ರದಂತದು ಅಲ್ಲ. ಶರಣಸ್ಥಲ ಬೇರೆ,
ಅದೆಂತೆಂದಡೆ : ಗಂಡಳಿದು ಹೆಣ್ಣಾಗಬೇಕು, ಹೆಣ್ಣಳಿದು ಗಂಡಾಗಬೇಕು.
ಉಂಡೆನುಟ್ಟೆನೆಂಬ ಹಂಗಳಿದು, ಈ ಲೋಕದ ಸಂದೇಹವಳಿದ ಶರಣಂಗೆ
ನಮೋ ನಮೋ ಎನುತಿರ್ದೆನಯ್ಯಾ,
ಬಸವಪ್ರಿಯ ಕೂಡಲಚೆನ್ನಬಸವಣ್ಣ. || ೧೮೫ ||

೧೦೧೭

ಯೋಗಾಂಗ ಭೋಗಾಂಗ ತ್ಯಾಗಾಂಗ ಈ ತ್ರಿವಿಧವನು ಮರೆದು,
ಭಕ್ತಿಯೋಗದ ಮೇಲೆ ನಿಂದು, ರಾಜಯೋಗದ ಮೇಲೆ ನಿಂದು,
ನಡೆದು ನುಡಿದು ತೋರುವರು ನಮ್ಮ ಶರಣರು.
ಗುರು ಲಿಂಗ ಜಂಗಮ ಈ ತ್ರಿವಿಧವನು,
ಸುಖ ದುಃಖ ಚಿಂತೆ ಸಂತೋಷವೆಂಬುವ ಕಳೆದು,
ಉತ್ಪತ್ತಿ ಸ್ಥಿತಿಲಯವೆಂಬುವಂ ಸುಟ್ಟು,

ದೃಕ್ಕು ದೃಶ್ಯ ನಿಜವೆಂಬ ತ್ರಿಕರಣವ ಏಕವ ಮಾಡಿ,
ಪಿಂಡಾಂಡ ಬ್ರಹ್ಮಾಂಡ ಒಂದೆಂಬುದನರಿದು,
ಸಂದಹರಿದು ನಿಂದ ನಿಜಾನಂದದಲ್ಲಿ ಹಿಂದುಮುಂದೆಂಬುದನರಿಯದೆ,
ನಿಮ್ಮೊಳೊಂದಾದ ಲಿಂಗೈಕ್ಯಂಗೆ ವಂದಿಸಿ ವಂದಿಸಿ,
ಎನ್ನ ಬಂಧನ ಹರಿದು, ನಾನು ಬಟ್ಟಬಯಲಾದೆನಯ್ಯಾ,
ಬಸವಪ್ರಿಯ ಕೂಡಲಚೆನ್ನಬಸವಣ್ಣಾ. || ೧೮೬ ||

೧೦೧೮

ರಾಗ ರಚನೆಯ ಬಲ್ಲೆನೆಂಬ ವ್ಯಂಗಿಮನುಜರಿರಾ, ನೀವು ಕೇಳಿ :
ರಾಗವಾವುದು, ರಚನೆಯಾವುದು ಬಲ್ಲರೆ ನೀವು ಹೇಳಿರೊ,
ಕಾಮ ಕ್ರೋಧ ಲೋಭ ಮೋಹ ಮದ ಮತ್ಸರ.
ಈ ರಾಗದ್ವೇಷವ ಹಿಡಿದು, ಕೂಗಿಡುವುದೆಲ್ಲವು ರಾಗವೆ?
ವೇದಪುರಾಣಾಗಮಶಾಸ್ತ್ರವನೋದಿ ಕಂಡವರ ಬೋಧಿಸುವದೆಲ್ಲ ರಚನೆಯೆ? ಅಲ್ಲ
ಇನ್ನು ರಾಗವಾವುದು ಎಂದರೆ,
ಝೇಂಕಾರದ ಪ್ರಣಮದ ನಾದವನರಿಯಬಲ್ಲರೆ ರಾಗ.
ಇನ್ನು ರಚನೆ ಯಾವುದು ಎಂದರೆ,
ಯೋಗಿ, ಜೋಗಿ, ಶ್ರವಣ, ಸನ್ಯಾಸಿ, ಕಾಳಾಮುಖಿ, ಪಾಶುಪತ ಷಡುದರ್ಶನಕ್ಕೆ
ಶ್ರುತವ ತೋರಿ ನುಡಿದು, ದೃಷ್ಟವ ತೋರಿ ನಡೆದು,
ಅಲ್ಲದಿರ್ದರೆ ನೀತಿಯ ತೋರಿ ಮರೆವುದೀಗ ರಚನೆ.
ಇದನರಿಯದೆ ನಾನು ರಾಗ ರಚನೆಯ ಬಲ್ಲೆನೆಂದು ನುಡಿವ
ಮೂಗುಹೋದ ಮೂಕೊರೆಯರ ಮೆಚ್ಚುವನೆ,
ನಮ್ಮ ಬಸಪ್ರಿಯ ಕೂಡಲಚೆನ್ನಬಸವಣ್ಣ? || ೧೮೭ ||

೧೦೧೯

ರಾಗವ ಹಾಡಿದವರೆಲ್ಲರು
ರೋಗ ರುಜಿನಕ್ಕೆ ಒಳಗಾಗಿ ಸತ್ತುಹೋದರು.
ರಚನೆ ಮಾಡಿದವರೆಲ್ಲರು
ಸುಚಿತ್ತ ಕೆಟ್ಟು ನಿಂದೆಕುಂದೆಗೊಳಗಾಗಿ ಸತ್ತುಹೋದರು.
ರಾಗರಚನೆಯ ಬಿಟ್ಟು,
ಮೂಗಮುಗ್ಧರಾಗಿಪ್ಪವರ ನಾನಾರನು ಕಾಣೆ,
ಬಸವಪ್ರಿಯ ಕೂಡಲಚೆನ್ನಬಸವಣ್ಣಾ. || ೧೮೮ ||

೧೦೨೦

ಲಿಂಗನಯನದಲ್ಲಿ ನೋಡುತ್ತ, ಲಿಂಗಜಿಹ್ವೆಯಲ್ಲಿ ನುಡಿವುತ್ತ,
ಲಿಂಗಹಸ್ತದಲ್ಲಿ ಮುಟ್ಟುತ್ತ, ಲಿಂಗನಾಸಿಕದಲ್ಲಿ ವಾಸಿಸುತ್ತ,

ಲಿಂಗಸ್ತೋತ್ರದಲ್ಲಿ ಕೇಳುತ್ತ, ಲಿಂಗಪಾದದಲ್ಲಿ ನಡೆವುತ್ತ,
ಸರ್ವಾಂಗಲಿಂಗಮಯವಾದ ಶರಣರ ಸಂಗಸುಖದೊಳಗೆ
ಎನ್ನನಿರಿಸಯ್ಯಾ, ಬಸವಪ್ರಿಯ ಕೂಡಲಚೆನ್ನಬಸವಣ್ಣಾ. ॥ ೧೮೯ ॥

೧೦೨೧

ಲಿಂಗಪೂಜೆಯ ಮಾಡುತ್ತ ತಮ್ಮಂಗ ಸುಖದ ಸಲುವಾಗಿ
ಹಂಪೆಯ ಕಂಗಳರ ಹಾಗೆ ಕೂಗುತ್ತ, ಅರಚುತ್ತ,
ಸತಿಸುತರೊಳಗೆ ಹೊಡೆದಾಡುತಿಪ್ಪರಲ್ಲದೆ,
ಆ ಲಿಂಗಕ್ಕೆ ತನಗೆ ಒಡೆಯರಾಗಿದ್ದ ಜಂಗಮ ಬಂದರೆ, ಎತ್ತಲೆಂದರಿಯರು.
ಇಂತಪ್ಪ ಕತ್ತಲೆಮನುಜರು, ಲಿಂಗವ ಕಟ್ಟಿದರೇನು ?
ಜಂಗಮಕಿಕ್ಕಿದರೇನು ? ಗುರುವಿಂಗೆ ಶರಣೆಂದರೇನು ?
ತಮ್ಮ ಮರಣಬಾಧೆಯ ಗೆಲುವನಕ ಹುರುಳಿಲ್ಲ ಹುರುಳಿಲ್ಲ.
ಮಾಡಿದ ಭಕ್ತಿ, ಅತ್ತಿಯ ಹಣ್ಣ ಬಿಚ್ಚಿದಂತೆ.
ಅವರು ಹೊತ್ತಿಪ್ಪ ವೇಷ ದೊಡ್ಡದು.
ಎಮ್ಮ ಸಮಯ ನಾನದನರಿದು, ನಿಮ್ಮಲ್ಲಿ ನಿರ್ಮುಕ್ತನಾದ ಬಳಿಕ,
ಈ ಜಗವೇನಾದರೇನಯ್ಯ ಬಸವಪ್ರಿಯ ಕೂಡಲಚೆನ್ನಬಸವಣ್ಣಾ. ॥ ೧೯೦ ॥

೧೦೨೨

ಲಿಂಗಪ್ರಸಾದವ ಜಂಗಮಕ್ಕೆ ಕೊಡುವ ಕರ್ಮಿಗಳು ನೀವು ಕೇಳಿರೆ.
ಜಂಗಮಪ್ರಸಾದವ ಲಿಂಗಕ್ಕೆ ಕೊಡುವ ಧರ್ಮಿಗಳು ನೀವು ಕೇಳಿರೆ.
ಲಿಂಗಪ್ರಸಾದವ ಜಂಗಮಕ್ಕೆ ಕೊಡುವುದು ಅನಾಚಾರ.
ಜಂಗಮಪ್ರಸಾದವ ಲಿಂಗಕ್ಕೆ ಕೊಡುವುದು ಸದಾಚಾರ.
ಅದೆಂತೆದಡೆ– ಶಿವಧರ್ಮ ಪುರಾಣದಲ್ಲಿ :
ಲಿಂಗಾರ್ಪಿತ ಪ್ರಸಾದಂ ಚ ನದದ್ಯಾಜ್ಜಂಗಮಾರ್ಪಿತಂ ।
ಜಂಗಮಾರ್ಪಿತ ಪ್ರಸಾದಂ ತದದ್ಯಾಲಿಂಗಮೂರ್ತಿಷು ॥
ಎಂದುದಾಗಿ, ಇದು ಕಾರಣ,
ಜಂಗಮಪ್ರಸಾದವ ಲಿಂಗಕ್ಕೆ ಕೊಟ್ಟು, ಕೊಂಬೆನಾಗಿ,
ಎನ್ನ ಭವಂ ನಾಸ್ತಿಯಾಯಿತ್ತಯ್ಯಾ,
ಬಸವಪ್ರಿಯ ಕೂಡಲಚೆನ್ನಬಸವಣ್ಣಾ. ॥ ೧೯೧ ॥

೧೦೨೩

ವಂದನೆಗೆ ನಿಲ್ಲಬೇಡ, ನಿಂದೆಗಂಜಿ ಓಡಲಿಬೇಡ.
ಹಿಂದು ಮುಂದು ಆಡಲಿಬೇಡ, ಸಂದೇಹಗೊಳಲಿಬೇಡ.
ದ್ವಂದ್ವಬುದ್ಧಿಯ ಕಳೆದು ನಿಂದಿರೆ,
ಬಸವಪ್ರಿಯ ಕೂಡಲಚೆನ್ನಬಸವಣ್ಣ. ॥ ೧೯೨ ॥

೧೦೨೪

ವಜ್ರದ ಮನೆಯೊಳಗಿರ್ದು, ಗೊರಲೆ ಮುಟ್ಟಿತೆಂಬ ಸಂದೇಹವೇಕೆ ?
ಭದ್ರಗಜ ಮೇಲೆ ಬರುತಿರ್ದು ಕೆಳಗಿರ್ದ ಗುಜ್ಜನಾಯಿ ಮುಟ್ಟಿತೆಂಬ
ಸಂದೇಹವೇಕೆ ?
ಸಂಜೀವನ ಕೈಯ ಸಾರಿರ್ದು ಇಂದಿಗೆ ನಾಳಿಗೆಂಬ ಸಂದೇಹವೇಕೆ ?
ಸಜ್ಜನ ಸದ್ಭಕ್ತರ ಸಂಗದೊಳಗಿರ್ದು,
ಸತ್ತೆನೋ, ಬದುಕಿದೆನೋ ಎಂಬ ಸಂದೇಹವೇಕೆ ?
ಹತ್ತರಡಿಯ ಬಿದ್ದ ಹಾವು ಸಾಯದೆಂದು ಗಾದೆಯ ಮಾತ ನುಡಿವರು.
ನಿತ್ಯರಪ್ಪ ಶರಣರ ಸಂಗದೊಳಗಿರ್ದು,
ಮತ್ತೊಂದು ಉಂಟೆಂದು ಭಾವಿಸಿ ನೋಡುವ
ಕತ್ತೆಮನುಜರ ಅತ್ತ ಹೊದ್ದದೆ, ಇತ್ತಲೆ ನಿಂದು ನಾಚಿ ನಗುತಿರ್ದ,
ನಮ್ಮ ಬಸವಪ್ರಿಯ ಕೂಡಲಚೆನ್ನಬಸವಣ್ಣ. ॥ ೧೯೩ ॥

೧೦೨೫

ವಾದಿಗೆ ಜೂಜನಾಡುವಾತನೊಬ್ಬ ಪಾತಕ.
ಪರರ ಹಾದಿಯ ಹೋಗುವಾತನೊಬ್ಬ ಪಾತಕ.
ಪಶುವಧೆಯ ಮಾಡುವಾತನೊಬ್ಬ ಪಾತಕ.
ಇವರು ಮೂವರು ಹೋದ ಹಾದಿಯಲ್ಲಿ ಹೋಗಲಾಗದು.
ಅದೇನು ಕಾರಣವೆಂದರೆ,
ಅವರು ಚಂದ್ರ ಸೂರ್ಯರುಳ್ಳನ್ನಕ್ಕ ನರಕದಲ್ಲಿಪ್ಪುದು ತಪ್ಪದು ಕಾಣಾ,
ಬಸವಪ್ರಿಯ ಕೂಡಲಚೆನ್ನಬಸವಣ್ಣಾ. ॥ ೧೯೪ ॥

೧೦೨೬

ವೇದಪುರಾಣಾಗಮಶಾಸ್ತ್ರ ನಾದದ ಸೊಮ್ಮೆಂಬಿರಿ.
ಆ ನಾದದಿಂದ ಆಕಾಶ ಪುಟ್ಟಿತ್ತು.
ಆಕಾಶದಿಂದ ವಾಯು ಪುಟ್ಟಿತ್ತು, ವಾಯುವಿನಿಂದ ಅಗ್ನಿ ಪುಟ್ಟಿತ್ತು.
ಅಗ್ನಿಯಿಂದ ಅಪ್ಪು ಪುಟ್ಟಿತ್ತು, ಅಪ್ಪುವಿನಿಂದ ಪೃಥ್ವಿ ಪುಟ್ಟಿತ್ತು
ಪೃಥ್ವಿಯಿಂದ ಇರುವೆ ಕಡೆಯಾಗಿ ಎಂಬತ್ತುನಾಲ್ಕುಲಕ್ಷ ಜೀವಂಗಳು ಪುಟ್ಟಿದವು.
ಅದೇನು ಕಾರಣವೆಂದಡೆ, ರಸಗಂಧದಿಂದ ರೂಪಾದವು, ಅಗ್ನಿಕಳೆಯಾಯಿತ್ತು.
ವಾಯು ಚೈತನ್ಯವಾಯಿತ್ತು. ಆಕಾಶ ನಾದವಾಯಿತ್ತು
ಇಂತಿದರೊಳಗೆ ನಮ್ಮ ದೇವ ಇವರೊಂದರಂತೆಯೂ ಅಲ್ಲ.
ಪಂಚತತ್ವವನಿಳುಹಿ, ಆತ್ಮತತ್ವ ಅನಾತ್ಮನೊಳು ಕೂಡಿ,
ಅನಾಮಯಲಿಂಗ ಕಾಣಬಹುದು.
ಅನಾಮಯಲಿಂಗವ ಕಂಡ ಬಳಿಕ, ಅದೇ ಲಿಂಗೈಕ್ಯವು.
ಇದು ತಪ್ಪದು, ಬಸವಪ್ರಿಯ ಕೂಡಲಚೆನ್ನಬಸವಣ್ಣಾ. ॥ ೧೯೫ ॥

೧೦೨೭

ವೇದವನೋದಿದವರೆಲ್ಲ ನಮ್ಮ ಶರಣರು ಹೋದ ಹಾದಿಯನರಿಯದೆ,
ನಾಹಂ ಎಂದು ಅಹಂಕರಿಸಿ, ಅನಿತ್ಯದೇಹಿಗಳಾಗಿ, ಅನಾಮಿಕರಾಗಿ ಹೋದರು.
ಶಾಸ್ತ್ರವನೋದಿದವರೆಲ್ಲ ನಮ್ಮ ಶರಣರು ಹೋದ ಹಾದಿಯನರಿಯದೆ,
ಶ್ರವಣ, ಸನ್ಯಾಸಿ, ಯೋಗಿ, ಜೋಗಿಯಾಗಿ ಹೀಗೆ ಕೆಲಬರು ಕೆಟ್ಟರು.
ಆಗಮವನೋದಿದವರೆಲ್ಲ ನಮ್ಮ ಶರಣರು ಹೋದ ಹಾದಿಯನರಿಯದೆ,
ಕ್ರಿಯಾಪಾದ, ಚರ್ಯಾಪಾದ, ಜ್ಞಾನಪಾದವೆಂದು
ನಾನಾಪರಿಯ ಕರ್ಮಭಕ್ತಿಯ ಮಾಡಿ,
ಲಿಂಗ ಜಂಗಮದ ಮರ್ಮವನರಿಯದೆ, ಅಧರ್ಮಿಗಳಾಗಿ ಹೋದರು.
ಪುರಾಣವನೋದಿದವರೆಲ್ಲ ನಮ್ಮ ಪುರಾತರು ಹೋದ ಹಾದಿಯನರಿಯದೆ,
ಪುರದ ಬೀದಿಯೊಳಗೆ ಮಾತು ಕಥೆಯ ಪಸಾರವನಿಕ್ಕಿ ಮಾಡಿ,
ಫಲಪದ ಮುಕ್ತಿಗೆ ಸಲ್ಲದೆ ಹೋದರು.
ಇದು ಕಾರಣ, ಈ ಚತುರ್ವಿಧದೊಳಗಾವಂಗವೂ ಅಲ್ಲ.
ಎಮ್ಮ ಬಸವಪ್ರಿಯ ಕೂಡಲಚೆನ್ನಬಸವಣ್ಣನ ಶರಣರ ಪರಿ ಬೇರೆ. ॥ ೯೬॥

೧೦೨೮

ವೇಷವ ಹೊತ್ತು, ಆಶೆ ರೋಷವ ಬಿಡದೆ, ದೇಶವ ತಿರುಗಿ,
ಹೊರವೇಷದ ವಿಭೂತಿ ರುದ್ರಾಕ್ಷಿ ಕಾವಿ ಕಾಷಾಯಾಂಬರವ
ಧರಿಸಿ ಫಲವೇನು?
ಕಾಮ ಕೆಡದು, ಕ್ರೋಧ ಬಿಡದು, ಲೋಭ ಹಿಂಗದು, ಮೋಹ ನಿಲ್ಲದು,
ಮದ ಹೆರೆಸಾರದು, ಮತ್ಸರ ಬೆಂದುಹೋಗದು.
ಇವೆಲ್ಲ ಸಹಿತ ಜಂಗಮಭಕ್ತರೆಂದು ಸುಳಿವವರ ಕಂಡು ನಾಚಿತ್ತು ಎನ್ನ ಮನ.
ಭಕ್ತಜಂಗಮ ಘನವನೇನೆಂದು ಉಪಮಿಸುವೆ ?
ರೂಪಿನ ಹಾಗೆ, ನೆಳಲಿನ ಹಾಗೆ, ದೇಹದ ಹಾಗೆ,
ಪ್ರಾಣದ ಹಾಗೆ, ಭಾವದ ಹಾಗೆ, ನಿರ್ಭಾವದ ಹಾಗೆ,
ಉರಿಯ ಹಾಗೆ, ಕರ್ಪುರದ ಹಾಗೆ, ಆವಿಯ ಹಾಗೆ, ನೀರ ಹಾಗೆ,
ಎರಡೊಂದಾದರೆ ತೆರಹಿಲ್ಲ. ಆ ನಿಲುವಿಂಗೆ ನಮೋ ನಮೋ
ಎನುತಿರ್ದೆ ಕಾಣಾ,
ಬಸವಪ್ರಿಯ ಕೂಡಲಚೆನ್ನಬಸವಣ್ಣಾ. ॥ ೯೭ ॥

೧೦೨೯

ವ್ಯಸನವುಳ್ಳನ್ನಕ್ಕ ಪ್ರಸಾದಿಯಲ್ಲ.
ವಿಷಯವುಳ್ಳನ್ನಕ್ಕ ಪಾದೋದಕಸಂಬಂಧಿಯಲ್ಲ.
ಭಾವವುಳ್ಳನ್ನಕ್ಕ ಭವವಿರಹಿತನಲ್ಲ, ಬಯಕೆಯುಳ್ಳನ್ನಕ್ಕ ಐಕ್ಯನಲ್ಲ.
ಇಂತೀ ಐಕ್ಯಸ್ಥಲವೆಲ್ಲರಿಗೆಲ್ಲಿಯದೊ ?

ಐಕ್ಯನಾದರೆ ಅನ್ನಪಾನಾದಿಗಳ ಇಚ್ಛೆ ನಿಂದು,
ಅನಲ, ಪವನನ ಗುಣ ಕೆಟ್ಟು, ಆಕಾಶದ ಗುಣವರತು,
ಆತ್ಮನೊಳು ಬೆರೆದವರ ಐಕ್ಯರೆಂಬೆ.
ಆತ್ಮ ಅನಾತ್ಮನೊಳು ಅಡಗಿದರೆ ನಿರವಯಲನೆಂಬೆ.
ಇಂತಪ್ಪ ಶರಣ ಬಯಲು ಬಯಲಾಗಿಪ್ಪನಲ್ಲದೆ,
ವಿವರಿಸಿ ನೋಡಿದರೆ ಏನೆಂದರಿಯಬಾರದು,
ಬಸವಪ್ರಿಯ ಕೂಡಲಚೆನ್ನಬಸವಣ್ಣಾ. ॥ ೧೯೫ ॥

೧೦೩೦

ಶರಣನ ಅಂಗವು ಎಂತಿಪ್ಪುದೆಂದರೆ,
ವಾರಿಕಲ್ಲು ನೀರೊಳಗೆ ಬಿದ್ದಂತೆ,
ಸಾರ ಬಲಿದು, ಶರಧಿಯ ಕೂಡಿದಂತೆ,
ಅರಗಿನ ಬೊಂಬೆಗೆ ಉರಿಯ ಸರವ ಮಾಡಿದಂತೆ,
ಪರಿಮಳವ ಕೂಡಿದ ವಾಯುವಿನಂತೆ,
ಆಡಂಬರವ ಮಾಡಿ ತೋರಿದ ಆಕಾಶದಂತೆ,
ಇದೀಗ ಶರಣರಂಗ. ಇದರಂದವ ತಿಳಿದರೆ ಐಕ್ಯ.
ಇದರೊಳು ನಿಶ್ಚಿಂತನಾದರೆ ನಿರವಯವು,
ಬಸವಪ್ರಿಯ ಕೂಡಲಚೆನ್ನಬಸವಣ್ಣಾ. ॥ ೧೯೬ ॥

೧೦೩೧

ಶರಣರಿಗೆ ಭವವುಂಟೆಂದು ಮರ್ತ್ಯದಲ್ಲಿ ಹುಟ್ಟಿದ
ಭವಭಾರಿಗಳು ನುಡಿದಾಡುವರು.
ತಮ್ಮ ಹುಟ್ಟ ತಾವರಿಯರು, ತಾವು ಮುಂದೆ ಹೊಂದುವದನರಿಯರು.
ಇವರು ಬಂದ ಬಂದ ಭವಕ್ಕೆ ಕಡೆಮೊದಲಿಲ್ಲ.
ಇಂತಪ್ಪ ಸಂದೇಹಿಗಳು ನಮ್ಮ ಶರಣರ ಹುಟ್ಟ ಬಲ್ಲೆನೆನಬಹುದೆ ?
ತನ್ನ ನರಿದವನಲ್ಲದೆ ಇದಿರನರಿಯರು.
ಈ ಉದರಪೋಷಕರೆಲ್ಲರೂ ಇದ ಬಲ್ಲೆನೆಂಬುದು ಹುಸಿ.
ಇದ ಬಲ್ಲವರು ಬಲ್ಲರಲ್ಲದೆ, ಸೊಲ್ಲಿಗಭೇದ್ಯನ ನಾನೆತ್ತ ಬಲ್ಲೆ ?
ಎನ್ನ ಗುರು ಚೆನ್ನಮಲ್ಲೇಶ್ವರನೇ ಬಲ್ಲ.
ಇನ್ನು ನಮ್ಮ ಬಸವಪ್ರಿಯ ಕೂಡಲಚೆನ್ನಬಸವಣ್ಣನೆ ಬಲ್ಲ. ॥ ೧೯೭ ॥

೧೦೩೨

ಶಿವಭಕ್ತರ ಹಾದಿಯ ಕಾಣದೆ,
ಹರಗಣಂಗಳೆಲ್ಲಕ್ಕೆ ಪರಮಗುರುವಾಗಿ, ಪರಮಾರಾಧ್ಯರಾಗಿ ಸುಳಿದಿರಲ್ಲದೆ
ನೀವು ಒಡಲುವಿಡಿದಿದ್ದರೆನ್ನಬಹುದೆ ? ಅದೇನು ಕಾರಣವೆಂದರೆ,

ಎನ್ನ ಭವವ ಛೇದನೆಯ ಮಾಡಿದುದಕ್ಕೆ ಎನ್ನ ಮನಕ್ಕೆ ಮನವೇ ಸಾಕ್ಷಿ.
ಮತ್ತೆ ಚೆನ್ನಮಲ್ಲೇಶ್ವರ ಸಾಕ್ಷಿ.
ಮರವೆಯಿಂದ ಈ ಮರ್ತ್ಯದಲ್ಲಿ ಒಡಲುವಿಡಿದು ಹುಟ್ಟಿದವರು
ಬ್ರಹ್ಮನಾದರೂ ಆಗಲಿ, ವಿಷ್ಣುವಾದರೂ ಆಗಲಿ,
ರುದ್ರನಾದರೂ ಆಗಲಿ, ಶಿವನಾದರೂ ಆಗಲಿ, ಸದಾಶಿವನಾದರೂ ಆಗಲಿ,
ಮಾಯೆವಿಡಿಸಿ ಕಾಡಿದಲ್ಲದೆ ಮಾಣದು. ಮಿಕ್ಕಿನವರ ಭವಕ್ಕೆ ಕಡೆ ಇಲ್ಲ.
ಎನ್ನ ಪರಮಾರಾಧ್ಯರು ಚೆನ್ನಮಲ್ಲೇಶ್ವರ ಮಾಯೆಯ ಮಂಡೆಯ ಮೆಟ್ಟಿ,
ಎನ್ನ ತನು ಮನ ಧನಕ್ಕೆ ಒಡೆಯನಾಗಿ ತನ್ಮಯನಾಗಿ ತಾನೇ ರೂಪಾದನಯ್ಯ.
ನಾನೆಂಬುದಿಲ್ಲ, ಬಸವಪ್ರಿಯ ಕೂಡಲಚೆನ್ನಬಸವಣ್ಣಾ. ॥ ೧೯೮ ॥

೧೦೩೩

ಶೀಲವಂತರು, ಶೀಲವಂತರು ಎಂದೇನೊ ?
ಶೀಲವಂತಿಕೆಯನಾರು ಬಲ್ಲರು?
ಶೀಲವಾದರೆ ಶಿವನೊಳು ಬೆರೆವುದೇ ಶೀಲ.
ಶೀಲವಾದರೆ ಗುರುಲಿಂಗಜಂಗಮವ ತನ್ನೊಳಗರಿವುದೇ ಶೀಲ.
ಅದಕ್ಕೆ ಮೀರಿದ ಶೀಲವಾದರೆ, ಹಸಿವು ತೃಷೆ ನಿದ್ರೆ ವಿಷಯವ
ಕೆಡಿಸುವುದೇ ಶೀಲ.
ಅದಕ್ಕೆ ತುರಿಯಾತೀತ ಶೀಲವಾದರೆ,
ಬಾಲನಾಗಿ ತನ್ನ ಲೀಲಾವಿನೋದವ ಭೂಮಿಯ ಮೇಲೆ ನಟಿಸುವುದೇ ಶೀಲ.
ಇದನರಿಯದೆ ಶೀಲಶೀಲವೆಂದು ಮನೆಮನೆಗೆ ಶೀಲವಲ್ಲದೆ,
ತನ್ನ ತನಗೆ ಕಾಯಕೃತ್ಯವಲ್ಲದೆ,
ಇದನರಿದು ಮೋಹ ಘನವನೆ ಮರೆದು, ಮನವನೆ ಬಳಲಿಸಿ,
ಘನವ ಮಾಡಿ, ತನುವ ಹೊರೆದೆನೆಂಬ ಬಿನುಗರ ನುಡಿಯ ಮೆಚ್ಚುವನೆ,
ನಮ್ಮ ಬಸವಪ್ರಿಯ ಕೂಡಲಚೆನ್ನಬಸವಣ್ಣ ? ॥ ೧೯೯ ॥

೧೦೩೪

ಶೀಲವಂತರು, ಶೀಲವಂತರು ಎಂಬರು
ಶೀಲವಂತಿಕೆಯನಾರು ಬಲ್ಲರು ಹೇಳಾ ?
ನೆಲಕೆ ಶೀಲ ಶೀಲವೆಂಬೆನೆ ?
ಹೊಲೆ ಹದಿನೆಂಟುಜಾತಿ ನಡೆ ನುಡಿವುದಕ್ಕೆ ಒಂದೆಯಾಯಿತ್ತು.
ಜಲಕೆ ಶೀಲವೆಂಬೆನೆ ?
ಮೀನ ಮೊಸಳೆಗಳು ಖಗಮೃಗಂಗಳು ನಿಂದೆಂಜಲು.
ಬೆಳೆಗೆ ಶೀಲವೆಂಬೆನೆ ? ಎತ್ತು ಕತ್ತೆ ತಿಂದು ಮಿಕ್ಕ ಎಂಜಲು.
ಹೊನ್ನಿಗೆ ಶೀಲವೆಂಬೆನೆ ? ಉರ ಹೊರೆಯಾಗಿಪ್ಪುದು.
ಹೆಣ್ಣಿಗೆ ಶೀಲವೆಂಬೆನೆ ? ಕಣ್ಣುಗೆಡಿಸಿ ಕಾಡುತಿಪ್ಪುದು.

ಇನ್ನಾವುದು ಶೀಲ ಹೇಳಿರಣ್ಣಾ? ಇದಕ್ಕೆ ಒಳಗಾದವರೆಲ್ಲ ದುಃಶೀಲರು.
ಇದ ಹಿಡಿದು ಹಿಡಿಯದೆ, ಬಿಟ್ಟು ಬಿಡದೆ.
ತನ್ನ ಮನಕ್ಕೆ ಶೀಲವಾಗಿಪ್ಪುದೆ ಅಚ್ಚಶೀಲ ಕಾಣಾ,
ಬಸವಪ್ರಿಯ ಕೂಡಲಚೆನ್ನಬಸವಣ್ಣಾ || ೨೦೦ ||

೧೦೩೫

ಶುದ್ಧ, ಸಿದ್ಧ, ಪ್ರಸಿದ್ಧ, ಪ್ರಸಾದವೆಂದು ಹೆಸರಿಟ್ಟುಕೊಂಡು
ಚೆನ್ನಾಗಿ ನುಡಿವಿರಿ.
ಶುದ್ಧವಾದ ಮುಖ, ಸಿದ್ಧವಾದ ಮುಖ, ಪ್ರಸಿದ್ಧವಾದ ಮುಖ,
ಅರಿದರೆ ನೀವು ಹೇಳಿರೊ.
ಅರಿದು ಅರಿಯದೆ, ಅರಿಮರುಳುಗಳಿರಾ ನೀವು ಕೇಳಿರೊ.
ಕಾಯಕರಣಾದಿಗಳ ಗುಣವಳಿದುದೆ ಶುದ್ಧ.
ಜೀವನ ದೃಶ್ಯ ಕೆಟ್ಟು, ಜಗದ ವ್ಯಾಕುಳವಳಿದು, ನಿರಾಕುಳದಲ್ಲಿ ನಿಂದುದೆ ಸಿದ್ಧ.
ಪ್ರಾಣದ ಭಯ ಮರಣದ ಭಯ ಮರಣಾದಿಗಳ ಹಿಂಗಿ,
ಭಾವಳಿದು ಭವಕ್ಕೆ ಸವೆದುದೆ ಪ್ರಸಿದ್ಧ.
ಈ ತೆರನನರಿಯದೆ ಎತ್ತರ ತೆತ್ತರನಾಗಿ ನುಡಿವಿರಿ.
ಬಲ್ಲವರೆನಿಸಿಕೊಂಡಿಹೆವೆಂದು ನಿಮ್ಮ ಬಲ್ಲತನ ಹಾಳಾಯಿತ್ತು.
ನೀವು ಬರುಸೂರೆಯ ಹೋಗುವುದನರಿಯದೆ,
ಬರಿದೆ ಏಕೆ ಅರಚಾಗಿ ಸತ್ತಿರಿ, ನೆರೆ ಮೂರುಲೊಕವೆಲ್ಲ?
ಇದನರಿದಾದರೂ ಆರಿಗೂ ಕೊಡಬೇಡ, ಕೊಳಬೇಡ.
ಮನಮುಟ್ಟಿ ಎರಗಿ ಬದುಕಿರೆ,
ನಮ್ಮ ಬಸವಪ್ರಿಯ ಕೂಡಲಚೆನ್ನಬಸವಣ್ಣಾ. || ೨೦೧ ||

೧೦೩೬

ಶೃಂಗಾರದ ಊರಿಗೆ ಒಂಬತ್ತು ಹಾಗಿಲು,
ಐದು ದಿಡ್ಡಿ, ಎರಡು ತೋರಗಂಡಿ,
ಐವರು ತಳವಾರರು, ಮೂವರು ಪ್ರಧಾನರು,
ಇಬ್ಬರು ಸೇನಬೋವರು, ಒಬ್ಬ ಅರಸು.
ಅರಸಿಂಗೆ ಐವರು ಸೂಳೆಯರು, ಅವರ ಬಾಗಿಲ ಕಾವರು ಹತ್ತು ಮಂದಿ.
ಅವರ ಪಾ[ಲಿ]ಪ ಡಕ್ಕಣದವರು ಇಪ್ಪತ್ತೈದು ಮಂದಿ.
ಅವರ ಭಂಡಾರ ಬೊಕ್ಕಸ ಅಟ್ಟುಮಣಿಹ,
ಹರಿಮಣಿಹ, ಕಟ್ಟಿಗೆಯವರು, ಬೋಹೋ ಎಂದು ಕೊಂಡಾಡುವರು,
ಮೂವತ್ತಾರುಮಂದಿ ಚೂಣೆಯರು.
ಹುಯ್ಯಲ ಕಾಲಾಳುಗಳು ನೂರನಾಲ್ವತ್ತೆಂಟು.
ಈ ಸಂಭ್ರಮದಲ್ಲಿ ಆ ಮನವೆಂಬ ಅರಸು

ಸುಖಸಂತೋಷದಲ್ಲಿ ರಾಜ್ಯಂಗೆಯ್ಯುತ್ತಿರಲು,
ಇತ್ತ ಶರಣ ತನ್ನ ತಾನೆ ಎಚ್ಚತ್ತು ನೋಡಿ,
ಪಶ್ಚಿಮ ಕದವ ಮುರಿದು ಒಳಹೊಕ್ಕು,
ಒಳಗೆ ತೊಳಗಿ ಬೆಳಗುವ ಜ್ಯೋತಿರ್ಮಯ ಲಿಂಗವನೆ ಕಂಡು,
ಆ ಲಿಂಗದಂಘ್ರಿವಿಡಿದು ಸಂಗಸುಖದೊಳಗೆ
ಒಂಬತ್ತು ಬಾಗಿಲಿಗೂ ಲಿಂಗವನೆ ಸ್ಥಾಪ್ಯವ ಮಾಡಲಾಗಿ,
ಮನವೆಂಬ ಅರಸು ಒಳಗೆ ಸಿಕ್ಕಿದ ಅಗಳ ಮುರಿದು ಬರುತ್ತಿರಲು,
ದಾರಿಯ ಕಾಣದೆ ಕಣ್ಣುಗೆಟ್ಟು ಹೋದರು.
ಮನವೆಂಬ ಅರಸು ತನ್ನ ಸೊಳೆಯರೈವರು,
ಪ್ರಧಾನರು, ಸೇನಬೋವರು, ಪಾಲಿಪ ಡಕ್ಕಣದವರು,
ಬೋಹೋ ಎಂದು ಉಗ್ಘಡಿಸುವವರು,
ಆನೆ ಕುದುರೆ ಇವರೆಲ್ಲರನು ಹಿಡಿದು ಕಟ್ಟಿಕೊಂಡು
ಮಹಾಲಿಂಗವೆಂಬ ಅರಸಿಂಗೆ ತಂದೊಪ್ಪಿಸಿದನು.
ಆ ಲಿಂಗವ ಕಂಡವರೆಲ್ಲ ಲಿಂಗದಂತೆ ಆದರು.
ಇದು ಕಾರಣ, ಶರಣಂಗೆ ಅಂಗಭೋಗವಲ್ಲ ಲಿಂಗಭೋಗವಾಯಿತ್ತು.
ಲಿಂಗಭೋಗವೆ ಅರ್ಪಿತವಾಯಿತ್ತು, ಅರ್ಪಿತವೆ ಪ್ರಸಾದವಾಯಿತ್ತು,
ಪ್ರಸಾದದೊಳಗೆ ಪರಿಣಾಮಿಯಾದ.
ಇದು ಕಾರಣ, ಎನ್ನ ಅಂಗ ಉರಿವುಂಡ ಕರ್ಪುರದಂತಾಯಿತ್ತಯ್ಯಾ,
ಬಸವಪ್ರಿಯ ಕೂಡಲಚೆನ್ನಬಸವಣ್ಣಾ. || ೨೦೨ ||

೧೦೩೭

ಶ್ರೀ ಗುರುವಿನ ಕೃಪಾದೃಷ್ಟಿ, ತತ್‌ಶಿಷ್ಯನ ಹೃದಯದಲ್ಲಿ ಪ್ರವೇಶಿಸಿ,
ಆ ತತ್ ಶಿಷ್ಯಂ ಗುರೂಪಾವಸ್ಥೆಯ ಮಾಡುತ್ತಿರಲು
ಆ ಶ್ರೀ ಗುರುಸ್ವಾಮಿ ಪ್ರಸನ್ನರಾಗಿ,
ಹತ್ತಿರಕ್ಕೆ ಕರೆದು, ಬತ್ತಿನಲ್ಲಿ ಕುಳ್ಳಿರಿಸಿ,
ಮಸ್ತಕದ ಮೇಲೆ ಹಸ್ತವನ್ನಿರಿಸಲು
ಅವಲೋಹದ ಮೇಲೆ ಪರುಷ ಬಿದ್ದಂತಾಯಿತ್ತಯ್ಯಾ
ಲಲಾಟದಲ್ಲಿ ವಿಭೂತಿಯ ಧರಿಸಲು
ಮುಕ್ತಿರಾಜ್ಯ ಕ್ಕೊಡೆತನವನಿತ್ತಂತಾಯಿತ್ತಯ್ಯಾ
ಸಂಚಿತ ಪ್ರಾರಬ್ಧ ಆಗಾಮಿ ಜಾರಿ ಹೋದವಯ್ಯಾ.
ಕರ್ಣದಲ್ಲಿ ಮಂತ್ರವ ಹೇಳಲೊಡನೆ
ಪಂಚಾಕ್ಷರವೆ ಸ್ಥಾಪ್ಯವಾಗಿ ಪಂಚಭೂತಂಗಳು ಬಿಟ್ಟುಹೋದವಯ್ಯಾ.
ಕರಸ್ಥಲಕ್ಕೆ ಲಿಂಗವ ಕೊಡಲೊಡನೆ
ಅಂಗವೆ ಲಿಂಗಾರ್ಪಣವಾಗಿ ಸರ್ವಾಂಗ ಲಿಂಗವಾಗಿ

ಅಂಗಕರಣಂಗಳಲ್ಲಿ ಲಿಂಗಕಿರಣಂಗಳಾಗಿ
ಆಡುವುದು ಲಿಂಗದ ಲೀಲೆ ಎಂದಂದು
ಆ ತತ್‌ಶಿಷ್ಯ ತಲೆಯೆತ್ತಿ ನೋಡಿ ತಾನನಾದಿ ಶಿವತತ್ವವಲ್ಲದಿದ್ದರೆ
ಆ ಪರಶಿವನಪ್ಪ ಗುರುವೆ ಪ್ರಸನ್ನರಪ್ಪರೆ ಎಂದರಿದು,
ಪಾದದ ಮೇಲೆ ಬಿದ್ದು ಬೇರಾಗದಿರಲು
ಆತನು ಗುರುವ ಸೋಂಕಿ
ಕಿಂಕುರ್ವಾಣ ಭಯಭಕ್ತಿಯಿಂದ ಅಹಂಕಾರವಳಿದು ಭಕ್ತನಾದ.
ಮನ ಲಿಂಗವ ಸೋಂಕಿ
ಭಯ ಭಕ್ತಿಯಿಂದ ಚಿತ್ತಗುಣವಳಿಸು ಮಹೇಶ್ವರನಾದ,
ಧನ ಜಂಗಮವ ಸೋಂಕಿ
ಪ್ರಕೃತಿಯಳಿದು, ಪರಮಾನಂದರಸಭರಿತನಾಗಿ
ಮನ ಮನನ ಲೀಯವಾಗಿ ಪ್ರಾಣಲಿಂಗಿಯಾದ.
ಭಾವ ಪ್ರಸಾದವ ಸೋಂಕಿಯೆ
ಭ್ರಮೆಯಳಿದು ನಿರ್ಭಾವಿಯಾಗಿ ಜೀವಗುಣವಳಿದು ಶರಣನಾದ.
ಅರಿವು ತನುಕರಣ ಮನ ಇಂದ್ರಿಯನವಗಿವಿಸಿ ಸರ್ವಾಂಗಲಿಂಗವಾಗಿ
ಅರಿವಡಗಿ ಮರಹು ನಷ್ಟವಾಗಿ ತೆರಹಿಲ್ಲದ
ಬಯಲಿನೊಳಗೆ ಕುರುಹಳಿದುನಿಂತ
ಬಸವಪ್ರಿಯ ಕೂಡಲಸಂಗಮದೇವನೆಂಬ
ಶ್ರೀಗುರುವಿನ ಚರಣಕ್ಕೆ ನಮೋ ನಮೋ ಎನುತಿರ್ದೆನು. ॥ ೨೦೩ ॥

೧೦೩೮

ಶ್ರೀಜಂಗಮಲಿಂಗ ಎಂತಿಹನೆಂದಡೆ :
ಇಂತೀ ಅಜಾಂಡಬ್ರಹ್ಮಾಂಡವು ತನ್ನ ಕುಕ್ಷಿಯೊಳು ನಿಕ್ಷೇಪವಾಗಿ,
ತಾ ನಿರ್ಗಮನಿಯಾಗಿ ಲಿಂಗರೂಪಾಗಿ ಸುಳಿಯಬಲ್ಲರೆ ಜಂಗಮಲಿಂಗವೆಂಬೆ.
ಅದಕ್ಕೆ ನಮೋ ನಮೋ, ಆ ನಿಲವಿಂಗೆ ಭವವಿಲ್ಲ ಬಂಧನವಿಲ್ಲ.
ಇಂತಲ್ಲದೆ ವೇಷವ ಹೊತ್ತು, ಹೊರವೇಷದ ವಿಭೂತಿ ರುದ್ರಾಕ್ಷಿಯ ತೊಟ್ಟು,
ಕಾಸುವಿಗೆ ಕೈಯಾಂತು ವೇಶಿದಾಸಿಯರ ಬಾಗಿಲ ಕಾಯ್ದು,
ಲೋಕದೊಳಗೆ ಗಾಸಿಯಾಗಿ ಜಂಗಮವೇಷಕ್ಕೆಲ್ಲ ಭಂಗವ ಹೊರಿಸಿ,
ಕಣ್ಣುಗಾಣದೆ ಜಾರಿಬಿದ್ದು, ದೂರಿಂಗೆ ಬಂದು,
ಈ ಮೂರಕ್ಕೊಳಗಾಗಿ, ಪಾರಾಗಿ ಹೋಗುವರ ವೇಷಕ್ಕೆ ಶರಣಾರ್ಥಿ.
ಅವರು ಸುತ್ತಿರ್ದ ಪಾಶವ ಕಂಡು ಹೇಸಿತ್ತೆನ್ನ ಮನ.
ನಿಮ್ಮಾಣೆ, ಬಸವಪ್ರಿಯ ಕೂಡಲಚೆನ್ನಬಸವಣ್ಣಾ. ॥ ೨೦೪ ॥

೧೦೪೭

ಶ್ರೀಗುರುವೆ ಮದ್ಗುರುವೆ ಸದ್ಗುರುವೆ ಸದಾಸನ್ನಿಹಿತ ಗುರುವೆ
ಷಡಾಂಗ ಸನ್ಮತಗುರುವೆ ಸಾವಧಾನದೊಳು ಸಮರಸ ಗುರುವೆ
ಭಾವದೊಳು ಭರಿತ ಗುರುವೆ
ಬ್ರಹ್ಮಾಂಡ ಪಿಂಡಾಂಡ ಪರಿಪೂರ್ಣ ಗುರುವೆ
ಮಹದಾನಂದ ಗುರುವೆ, ಬಸವಪ್ರಿಯ
ಕೂಡಲಸಂಗಮೇದೇವ ಪ್ರಭುವೆ. ॥ ೨೦೫ ॥

೧೦೪೮

ಶ್ರೋತ್ರ, ನೇತ್ರ. ಜಿಹ್ವೆ, ತ್ವಕ್ಕು, ಘ್ರಾಣವೆಂಬ
ಬುದ್ಧೀಂದ್ರಿಯಂಗಳನರಿದು,
ವಾಕ್ಕು, ಪಾಣಿ, ಪಾದ, ಪಾಯು, ಗುಹ್ಯವೆಂಬ ಕರ್ಮೇಂದ್ರಿಯವ ತೊರೆದು,
ಗಂಧ, ರಸ, ರೂಪು, ಸ್ಪರ್ಶನ, ಶಬ್ದವೆಂಬ ಪಂಚೇಂದ್ರಿಯವ ಜರಿದು,
ಮನ, ಬುದ್ಧಿ, ಚಿತ್ತ ಅಹಂಕಾರವೆಂಬ ಚತುಷ್ಟಯ ಕರಣಂಗಳ ಮೆಟ್ಟಿ,
ಕಾಮ, ಕ್ರೋಧ, ಲೋಭ, ಮೋಹ,
ಮದ, ಮತ್ಸರವೆಂಬ ಅರಿಷಡ್ವರ್ಗಮಂ ಸುಟ್ಟು,
ತನುವ್ಯಸನ, ಮನವ್ಯಸನ, ಧನವ್ಯಸನ, ವಾಹನವ್ಯಸನ,
ಉತ್ಸಾಹವ್ಯಸನ, ಸೇವಕವ್ಯಸನ, ಮತ್ಸರವ್ಯಸನವೆಂಬ
ಸಪ್ತವ್ಯಸನಂಗಳ ಸ್ವಪ್ನದಲ್ಲಿ ನೆನೆಯದೆ,
ಪೃಥ್ವಿ, ಅಪ್ಪು, ಅಗ್ನಿ, ವಾಯು, ಆಕಾಶ, ಚಂದ್ರ, ಸೂರ್ಯ, ಆತ್ಮರೆಂಬ
ಇಂತೀ ಅಷ್ಟಮದವ ಹಿಟ್ಟುಗುಟ್ಟಿ,
ಪ್ರಾಣ, ಅಪಾನ, ಉದಾನ, ಸಮಾನ,
ನಾದ, ಕೂರ್ಮ, ಕ್ರಕರ, ದೇವದತ್ತ, ಧನಂಜಯವೆಂಬ
ದಶವಾಯುವ ಕಡೆಮೆಟ್ಟಿ,
ಸಂಸಾರವ ಒಡಹಾಯ್ದು, ಜಗವ ಹೊದ್ದದೆ, ತಾನೊಂದು ಕಡೆಯಾಗಿ ನಿಂದು,
ಮಾಯೆಗೆ ಒಡೆಯನಾಗಿ, ಆ ಮಹಾಘನವ ಸೂರೆಗೊಂಡ ಶರಣಂಗೆ
ನಮೋ ನಮೋ ಎಂದು ಬದುಕಿದೆನಯ್ಯಾ.
ಬಸವಪ್ರಿಯ ಕೂಡಲಚೆನ್ನಬಸವಣ್ಣ, ನಿಮ್ಮ ಧರ್ಮ, ನಿಮ್ಮ ಧರ್ಮ. ॥೨೦೬॥

೧೦೪೯

ಸಂಜೆ ಮುಂಜಾನೆಯೆಂದೆನಬೇಡ, ಅಂಜಿಕೆ ಬೇಡ, ಅಳುಕು ಬೇಡ.
ಸಂದುಸಂಶಯವೆಂಬ ಸಂದೇಹ ಬೇಡ.
ಮನದಲ್ಲಿ ಸಂಕಲ್ಪ ವಿಕಲ್ಪ ಆದಿವ್ಯಾಧಿ ದುರಿತ ದುಮ್ಮಾನ
ಭಯ ಮೋಹ ಚಿಂತೆ ಸಂತೋಷ ಸುಖದುಃಖ ಮೊದಲಾದವು
ಒಂದೂ ಇಲ್ಲದಿಲ್ಲವಪ್ಪಡೆ, ಆತನೇತರಲ್ಲಿರ್ದಡೂ ಅಜಾತ ಸ್ವಯಂಭು.

ಬಂದುದನೆ ಪರಿಣಾಮಿಸಿ, ನಿಶ್ಚಿಂತ ನಿಜನಿವಾಸಿಯಾಗಿಪ್ಪ
ಪರಮ ವಿರಕ್ತಂಗೆ ನಮೋ ನಮೋ ಎಂಬೆ.
ಆತ, ಬಸವಪ್ರಿಯ ಕೂಡಲಸಂಗಯ್ಯನಲ್ಲಿ ಒಂದಾದ ಲಿಂಗೈಕ್ಯನು. ॥ ೨೦೭ ॥

೧೦೪೨

ಸತಿಸುತ ಮಾತಾಪಿತರಂದದಿ ಮೋಹದಲಿ ಮನಮಗ್ನವಾದರೆ,
ಅವನಿಗೆ ಲಿಂಗವಿಲ್ಲ, ಲಿಂಗಕ್ಕೆ ತಾನಿಲ್ಲ,
ಅದೇನು ಕಾರಣವೆಂದರೆ,
ಆತನ ಧ್ಯಾನ ಸತಿಯ ಮೇಲೆ ಸುತರ ಮೇಲೆ
ಮಾತಾಪಿತರ ಮೇಲೆ ಇಪ್ಪುದಲ್ಲದೆ,
ಲಿಂಗದ ಮೇಲಿಲ್ಲ. ಅದು ಕಾರಣ,
ಆತ ಕಟ್ಟಿದುದು ಲಿಂಗವಲ್ಲ, ತೊಟ್ಟುದುದು ವಿಭೂತಿ ರುದ್ರಾಕ್ಷಿಯಲ್ಲ.
ಅದು ಕಾರಣ, ಆತನಾಚಾರಕ್ಕೆ ದೂರ,
ಬಸವಪ್ರಿಯ ಕೂಡಲಚೆನ್ನಬಸವಣ್ಣಾ. ॥ ೨೦೮ ॥

೧೦೪೩

ಸಾಕಾರ ನಿರಾಕಾರ ಏಕೀಕೃತಾನಂದ ಗುರುವೆ
ಲೋಕ ಚೈತನ್ಯಮಯ ಗುರುವ
ಲಿಂಗವೇಕ ಪ್ರಣಮಾನಂದ ಗುರುವೆ
ಏಕಮೇವನ ದ್ವಿತೀಯಾನಂದ ಗುರುವೆ
ಲೋಕಾಲೋಕಂಗಳಿಗತ್ತತ್ತ ಏಕೀಕರಮಯ ಗುರುವೆ
ಗುರುವೆ ಪರಂಜ್ಯೋತಿ,
ಬಸವಪ್ರಿಯ ಕೂಡಲಸಂಗಮದೇವ ಪ್ರಭುವೆ. ॥ ೨೦೯ ॥

೧೦೪೪

ಸಾವಾಗ ದೇವನೆಂದರೆ, ಸಾವು ಬಿಡುವುದೇ ?
ಇದಾವ ಮಾತೆಂದು ನುಡಿವಿರಿ.
ಎಲೆಯಣ್ಣಗಳಿರಾ, ಬಾಳುವಲ್ಲಿ, ಬದುಕುವಲ್ಲಿ,
ಗುರು ಲಿಂಗ ಜಂಗಮವನರಿಯದೆ,
ಹಾಳುಹರಿಗು ತಿಂದ ಶುನಕನಂತೆ ಕಾಲ್ಗೆಡೆದು ಓಡಾಡಿ ಏಳಲಾರದೆ ಬಿದ್ದಾಗ,
ಶಿವ ಶಿವ ಎಂದರೆ, ಅಲ್ಲಿ ದೇವನಿಪ್ಪನೆಂದು ಇದ ನೋಡಿ ನಾಚಿ ನಗುರ್ತಿರ್ದೆ,
ನಮ್ಮ ಬಸವಪ್ರಿಯ ಕೂಎಡಲಚೆನ್ನಬಸವಣ್ಣಾ. ॥ ೨೧೦ ॥

೧೦೪೫

ಸೀಮೆಭೂಮಿಯೆಂದೇನೋ, ಹೇಮವನುರುಹಿದಂಗೆ.
ಕಾಮದ ಕತ್ತಲೆಯೆಂದೇನೋ, ಕಾಲನ ಗೆಲಿದಂಗೆ.

ನೇಮನಿತ್ಯವೆಂದೇನೋ, ತಾನು ತಾನಾದವಂಗೆ.
ಸಾಲ ಶೀಲವೆಂದೇನೋ, ನಿಶ್ಶೂನ್ಯವಾದ ಮಹಾಮಹಿಮ ಶರಣಂಗೆ,
ಬಸವಪ್ರಿಯ ಕೂಡಲಚೆನ್ನಬಸವಣ್ಣಾ. ॥ ೨೧೧ ॥

೧೦೪೬

ಸುಖಾನುಭಾವ, ಲಿಂಗಾನುಭಾವವೆಂದು ನುಡಿದಾಡುತಿಪ್ಪಿರಿ.
ಲಿಂಗದ ನೆಲೆಯನಾರು ಬಲ್ಲರು ?
ಆರುಲಿಂಗ, ಮೂರುಲಿಂಗ, ಮೂವತ್ತಾರುಲಿಂಗ,
ಬೇರೆ ಇನ್ನೂರ ಹದಿನಾರು ಲಿಂಗವೆಂದು
ಎಮ್ಮ ಶರಣರು ಸಾರಿಹೋದ ವಾಕ್ಯವನೆ ಮಾರುತಿಪ್ಪರಲ್ಲದೆ,
ಬೇರೆ ಇಪ್ಪತ್ತೊಂದು ಮಹಾಘನಲಿಂಗವನಾರೂ ಅರಿಯರು,
ನಿಮ್ಮ ಶರಣರಲ್ಲದೆ,
ಬಸವಪ್ರಿಯ ಕೂಡಲಚೆನ್ನಬಸವಣ್ಣಾ. ॥ ೨೧೨ ॥

೧೦೪೭

ಸುಪ್ರಭಾಕಳೆಯಿಂದ ಚಿತ್ಪ್ರಣಮ ಉದಯ.
ಆ ಚಿತ್ಪ್ರಣಮದ ಮುಂದಣ ಚಿದ್ವಿವೇಕವೆ ಚಿದಬ್ಧಿ.
ಆ ಚಿದಬ್ಧಿಯೆ ಪಾದೋದಕ, ಚಿದಮೃತವೆ ಪಾದೋದಕ.
ನಿಧಿ ನಿಧಾನವೆ ಪಾದೋದಕ, ಸುಧೆ ಸುರರ ತೃಪ್ತಿಯೆ ಪಾದೋದಕ.
ಅದಕ್ಕೆ ದೃಷ್ಟ :
ಶೋಷಣಂ ಪಾಪಪಂಕಸ್ಯ ದೀಪನಂ ಜ್ಞಾನತೇಜಸಃ ।
ಗುರುಪಾದೋದಕಂ ಪೀತ್ವಾ ಸಂಸಾರದ್ರುಮನಾಶನಂ ॥
ಇಂತಪ್ಪ ಪಾದೋದಕವ ಕೊಂಡರೆ,
ಪಾಶಮುಕ್ತನಾಗಿ, ಪಶುಪತಿಯೆಂಬುಭಯವಳಿದು,
ನೀರು ಕ್ಷೀರ ಬೆರೆದಂತಿಪ್ಪ ನಮ್ಮ ಬಸವಪ್ರಿಯ ಕೂಡಲಚೆನ್ನಬಸವಣ್ಣಾ.
ಮಾಂ ತ್ರಾಹಿ, ತ್ರಾಸಿ ಕರುಣಾಕರನೆ. ॥ ೨೧೩ ॥

೧೦೪೮

ಸೋಹಂ ಹೊಕ್ಕು ದಾಸೋಹವೆಂಬ ಅಂಜನವ ಹಚ್ಚಿ,
ಮುಂದೆ ನೋಡಲಾಗಿ ಅರುಹ ಕಂಡೆ,
ಆ ಅರುಹಿಂದ ಆಚಾರವ ಕಂಡೆ, ಆಚಾರದಿಂದ ಗುರುವ ಕಂಡೆ,
ಗುರುವಿಂದ ಲಿಂಗವ ಕಂಡೆ, ಲಿಂಗದಿಂದ ಜಂಗಮವ ಕಂಡೆ,
ಜಂಗಮದಿಂದ ಪ್ರಸಾದವ ಕಂಡೆ, ಪ್ರಸಾದದಿಂದ ಪರವ ಕಂಡೆ,
ಪರದೊಳಗೆ ವಿಪರೀತ ಸ್ವರೂಪವ ಕಂಡೆ.
ವಿಪರೀತ ಸ್ವರೂಪದೊಳಗೆ ನಿರ್ಲೇಪವಾದ,
ನಮ್ಮ ಬಸವಪ್ರಿಯ ಕೂಡಲಚೆನ್ನಬಸವಣ್ಣ. ॥ ೨೧೪ ॥

೧೦೪೯

ಸ್ಥಲವಿಟ್ಟು ನಡೆಯಬೇಕೆಂಬರು, ಸ್ಥಲವಿಟ್ಟು ನುಡಿಯಬೇಕೆಂಬರು.
ಸ್ಥಲದ ನೆಲೆಯನಾರೂ ಅರಿಯರು.
ಕಾಯಸ್ಥಲ, ಕರಸ್ಥಲ, ಭಾವಸ್ಥಲವನರಿದು,
ಆ ಕಾಯಸ್ಥಲ ಕರಸ್ಥಲ ಭಾವಸ್ಥಲದಲ್ಲಿ ಕೂಡಿ ನಿಲಿಸುವದೆ ಸ್ಥಲ.
ಇದನರಿಯದೆ, ಹಿಂದಕ್ಕೆ ನುಡಿದವರ ಮಾತು ಕಲಿತುಕೊಂಡು,
ಈಗ ನುಡಿವವರ ಮಾತ ಮೆಚ್ಚುವರೆ ನಮ್ಮ ಶರಣರು ?
ಅದಂತಿರಲಿ. ಇನ್ನು ನೇಮವಾವುದು ಎಂದರೆ,
ಗುರುಲಿಂಗಜಂಗಮದ ಪಾದೋದಕ ಪ್ರಸಾದವನರಿದು, ಅಂಗೀಕರಿಸಿ,
ತನ್ನ ತನುವನೆ ಪ್ರಸಾದವ ಮಾಡುವದೀಗ ನೆಲೆ.
ಈ ಸ್ಥಲದ ನೆಲೆಯ ಬಲ್ಲವರಿಗೆ ನಮೋ ನಮೋ ಎಂಬೆ.
ಇದನರಿಯದೆ ಬರಿಯ ನುಡಿಯ ನುಡಿವವರ ಕಂಡರೆ ಛೀ ಎಂಬೆನು,
ಬಸವಪ್ರಿಯ ಕೂಡವಚೆನ್ನಬಸವಣ್ಣಾ. ॥ ೨೧೫ ॥

೧೦೫೦

ಸ್ಥಲವೆಂದರೆ ಒಂದು, ನೆಲೆಯೆಂದರೆ ಎರಡು,
ಕಲೆಯೆಂದರೆ ಮೂರು, ಕರಣವೆಂದರೆ ನಾಲ್ಕು,
ಕಾಯವೆಂದರೆ ಐದು, ಕಾಮವೆಂದರೆ ಆರು,
ಸೀಮೆಯೆಂದರೆ ಏಳು, ನೇಮವೆಂದರೆ ಎಂಟು,
ತಾಮಸವೆಂದರೆ ಒಂಬತ್ತು, ಹರಿಯೆಂದರೆ ಹತ್ತು
ಹರನೆಂದರೆ ಇನ್ನೊಂದು.
ಇದೇ ದಶವಿಧ ಪಾದೋದಕ, ಇದೇ ಏಕಾದಶ ಪ್ರಸಾದ.
ಇದೇ ಅರ್ಪಿತ, ಇದೇ ಅವಧಾನ, ಇದೇ ಸುಯಿದಾನ.
ಇದೇ ಶುದ್ಧಸಿದ್ಧಪ್ರಸಿದ್ಧ ಪ್ರಸಾದ.
ಇದೇ ನಮ್ಮ ಬಸವಪ್ರಿಯ
ಕೂಡಲಚೆನ್ನಬಸವಣ್ಣ ಆಡುವ ಹೊಲಸ್ಥಲದ ನೆಲೆ. ॥ ೨೧೬ ॥

೧೦೫೧

ಹಂಚುಕಂಥೆ, ಅತೀತ, ವಿರಕ್ತರು, ಸ್ಥಲದವರು ಎಂದು ನುಡಿದಾಡುವರು.
ಜಂಗಮ ಒಂದೆ, ಲಿಂಗ ಒಂದೆ, ಗುರು ಒಂದೆ.
ಎನ್ನ ಪರಮಾರಾಧ್ಯರು ಬಸವಣ್ಣ, ತನ್ನ ಲೀಲೆಯಿಂದ
ಒಂದ ಮೂರು ಮಾಡಿ ತೋರಿದ, ಮೂರನೊಂದು ಮಾಡಿ ತೋರಿದ.
ಆ ಒಂದು ನಾಮರೂಪಿಗಿಲ್ಲ.
ಇದರಂದವ ಬಲ್ಲ ಶರಣರು ತಿಳಿದು ನೋಡಿ.
ಇದನರಿಯದೆ ಸ್ಥಲನೆಲೆಯುಂಟೆಂದು ಹೊಲಬುಗಾಣದೆ ಹೋರಾಡಿ,

ಭವಭಾರಿಗಳಾಗಬೇಡಾ !
ಭವವಿರಹಿತ ನಮ್ಮ ಬಸವಪ್ರಿಯ ಕೂಡಲಚೆನ್ನಬಸವಣ್ಣಂಗೆ,
ಬಯಕೆ ಸವೆದು, ಭಾವ ಬಯಲಾಗಿ ನಮೋ ನಮೋ ಎಂದು ಬದುಕಿದೆ.
ನೀವೂ ಬದುಕಿರೊ. || ೨೧೭ ||

೧೦೫೨

ಹಗಲು ಗೂಗೆಗೆ ಇರುಳಾಗಿಪ್ಪುದು, ಇರುಳು ಕಪಟಗೆ ಹಗಲಾಗಿಪ್ಪುದು.
ಇದು ಜಗದಾಟ.
ಈ ಹಗಲು ಇರುಳೆಂಬ ಉಭಯವಳಿದು, ನಿಗಮಂಗಳಿಗೆ ನಿಲುಕದ,
ಸಗುಣ ನಿರ್ಗುಣ ಅಗಮ್ಯ ಅಗೋಚರವಪ್ಪ
ಮಹಾಘನ ಗುರುವಿನ ನೆಲೆಯ, ನಿಮ್ಮ ಶರಣರು ಬಲ್ಲರಲ್ಲದೆ
ಮರ್ತ್ಯದ ಮರಣಬಾಧೆಗೊಳಗಾಗುವ ಮನುಜರೆತ್ತ ಬಲ್ಲರೊ,
ಬಸವಪ್ರಿಯ ಕೂಡಲಚೆನ್ನಬಸವಣ್ಣಾ ! || ೨೧೮ ||

೧೦೫೩

ಹರನಲ್ಲದೆ ದೈವವಿಲ್ಲೆಂದು ಶ್ರುತಿ ಸಾರುತಿರ್ದು,
ವೇದಂಗಳು ಪೊಗಳುತಿರ್ದು, ನರರು ಸುರರು ಅರಿವಿರ್ದು, ಅರಿಯದೆ,
ಹರಿಯು ದೈವ, ಬ್ರಹ್ಮನು ದೈವ, ಸುರಪನು ದೈವ, ಮನುಮುನಿ
ತ್ರಿವಿಧ ದೇವರ್ಕಳು ದೈವವೆಂದು,
ಚಂದ್ರ, ಸೂರ್ಯರು ದೈವವೆಂದು ಆರಾಧಿಸುವಿರಿ.
ಪತಿವ್ರತೆಯಾದವಳಿಗೆ ತನ್ನ ಪುರುಷನ ನೆನೆಹಲ್ಲದೆ, ಅನ್ಯರ ನೆನೆವಳೆ ?
ವೇಶಿಯಂತೆ ಹಲಬರು ನಂಟರೆ ?
ಇವರೆಲ್ಲರ ಸಂತವಿಟ್ಟು, ಮತ್ತೆ ಶಿವನೆ ಎಂಬ ಶಿವದ್ರೋಹಿಗಳು ಕೇಳಿರೊ.
ಹರಿ ದೈವವೆಂದು ಆರಾಧಿಸುವರೆಲ್ಲ ಮುದುಹ ಸುಡಿಸಿಕೊಂಡು,
ಮುಂದಲೆಯಲ್ಲಿ ಕೆರಹ ಹೊತ್ತರು.
ಬ್ರಹ್ಮವೇ ದೈವವೆಂದು ಆರಾಧಿಸುವವರೆಲ್ಲ ಹೆಮ್ಮೆಯ ನುಡಿದು,
ಹೋಮವನಿಕ್ಕಿ ಹೋತನ ಕೊಂದು ತಿಂದು, ಪಾತಕಕ್ಕೆ ಒಳಗಾದರು.
ಸುರಪ ದೈವವೆಂದು ಆರಾಧಿಸಿದವರೆಲ್ಲ
ತಮ್ಮ ಸಿರಿಯಲ್ಲಿ ಹೋಗಿ ಶಿವನಲ್ಲಿಗೆ ಸಲ್ಲದೆ ಹೋದರು.
ಮನುಮುನಿದೇವರ್ಕಳು ದೈವವೆಂದು ಆರಾಧಿಸಿದವರೆಲ್ಲ
ಹಿಂದುಮುಂದಾಗಿ ಅಡ್ಡಬಿದ್ದು, ಅವರು ಬಂದ ಭವಕ್ಕೆ ಕಡೆ ಇಲ್ಲ.
ಇದನ್ನೆಲ್ಲ ಅರಿದು ಮತ್ತೆ
ಇವರೇ ದೈವವೆಂದು ಆರಾಧಿಸುವ ವಿವರಗೆಟ್ಟ ಭವಭಾರಿಗಳ
ನುಡಿಯ ಕೇಳಲಾಗದು, ಅವರೊಡನೆ ನುಡಿಯಲಾಗದು.

ಅವರ ನಡೆಯ ಕಂಡರೆ ಛೀ ಎಂಬರು ನಿಮ್ಮ ಶರಣರು,
ಬಸವಪ್ರಿಯ ಕೂಡಲಚೆನ್ನಬಸವಣ್ಣಾ. ॥ ೨೧೯ ॥

೧೦೫೪

ಹರಹರ ಎಂದು ಹತ್ತುಬಾರಿ ಎನಬಹುದಲ್ಲದೆ,
ಹರಿವ ಮನವ ಮೆಟ್ಟಿ, ಮನವ ಲಿಂಗದೊತ್ತಿನಲ್ಲಿ ನಿಂದಿರಲರಿಯದು ನೋಡಾ!
ಇದು ಕಾರಣ, ತನುವ ಗುರುವಿಂಗಿತ್ತು, ಮನವ ಲಿಂಗಕ್ಕಿತ್ತು,
ಧನವ ಜಂಗಮಕ್ಕಿತ್ತು, ತ್ರಿವಿಧವನು ತ್ರಿವಿಧಕಿತ್ತ ಬಳಿಕ,
ಒಂದಲ್ಲದೆ ಎರಡುಂಟೆ ?
ಇದು ಮುಂದೆ ಆವನಾನೊಬ್ಬ ಭಕ್ತನು ನೋಡಿ ನಡೆವುದಕ್ಕೆ ಇದೇ ಸಾಧನ,
ಬಸವಪ್ರಿಯ ಕೂಡಲಚೆನ್ನಬಸವಣ್ಣಾ. ॥ ೨೨೦ ॥

೧೦೫೫

ಹರಿ ಬ್ರಹ್ಮ ಕಾಲ ಕಾಮ ದಕ್ಷಾದಿಗಳ ದೇವರೆಂದು
ಗಟ್ಟಿಯತನದೊಳು ಬೊಗಳುವ ಮಿಟ್ಟೆಯಭಂಡರು ನೀವು ಕೇಳಿರೊ.
ಅವರ ಹುಟ್ಟನರಿಯಿರಿ, ಹೊಂದನರಿಯಿರಿ. ಅವರ ಹುಟ್ಟು ಕೇಳಿರಣ್ಣಾ!
ಏನೇನೂ ಇಲ್ಲದಂದು, ಶೂನ್ಯ ನಿಃಶೂನ್ಯಕ್ಕೆ ನಿಲುಕದ ಘನವು
ಕೋಟಿಚಂದ್ರಸೂರ್ಯರ ಬೆಳಗಾಗಿ ಬೆಳಗುತ್ತಿಪ್ಪಲ್ಲಿ,
ಓಂಕಾರವೆಂಬ ನಿರಕ್ಷರ ಹುಟ್ಟಿತ್ತು.
ಓಂಕಾರದಿಂದ ನಕಾರ, ಮಕಾರ, ಶಿಕಾರ, ವಕಾರ,
ಯಕಾರವೆಂಬ ಪಂಚಾಕ್ಷರ ಹುಟ್ಟಿದವು.
ಆ ಪಂಚಾಕ್ಷರಿಗೆ ಪರಾಶಕ್ತಿ ರೂಪಾದಳು.
ಆ ಪಂಚಾಕ್ಷರಕ್ಕೂ ಪರಾಶಕ್ತಿಗೂ ಇಬ್ಬರಿಗೂ ಸದಾಶಿವನಾದ.
ಆ ಸದಾಶಿವಂಗೆ ಜ್ಞಾನಶಕ್ತಿಯಾದಳು.
ಆ ಸದಾಶಿವಂಗೆ ಜ್ಞಾನಶಕ್ತಿಯರಿಬ್ಬರಿಗೂ ಶಿವನಾದ.
ಆ ಶಿವಂಗೆ ಇಚ್ಛಾಶಕ್ತಿಯಾದಳು.
ಆ ಶಿವಂಗೂ ಇಚ್ಛಾಶಕ್ತಿಗೂ ಇಬ್ಬರಿಗೂ ರುದ್ರನಾದ.
ಆ ರುದ್ರಂಗೆ ಕ್ರಿಯಾಶಕ್ತಿಯಾದಳು.
ಆ ರುದ್ರಂಗೂ ಕ್ರಿಯಾಶಕ್ತಿಗೂ ಇಬ್ಬರಿಗೂ ವಿಷ್ಣುವಾದ.
ಆ ವಿಷ್ಣು ಪಡೆದ ಸತಿ ಲಕ್ಷ್ಮೀಯು.
ಆ ವಿಷ್ಣುವಿಂಗೂ ಮಹಾಲಕ್ಷ್ಮೀಗೂ ಇವರಿಬ್ಬರಿಗೂ ಬ್ರಹ್ಮನಾದ.
ಆ ಬ್ರಹ್ಮಂಗೆ ಸರಸ್ವತಿಯ ಕೊಟ್ಟು, ಬರೆವ ಸೇವೆಯ ಕೊಟ್ಟ.
ಬ್ರಹ್ಮಂಗೂ ಸರಸ್ವತಿಗೂ ಇಬ್ಬರಿಗೂ ಮನುಮುನಿದೇವರ್ಕಳಾದರು.
ಆ ಮನುಮುನಿದೇವರ್ಕಳಿಗೆ ಸಕಲ ಸಚರಾಚರವಾಯಿತ್ತು.
ಇಹಲೋಕಕ್ಕೆ ನರರು ಆಗಬೇಕೆಂದು ಬ್ರಹ್ಮನು ಹೋಗಿ,

ಹರನಿಗೆ ಬಿನ್ನಹಂ ಮಾಡಲು, ಹರನು ಪರಮಜ್ಞಾನದಿಂದ ನೋಡಿ,
ತನ್ನ ಶರೀರದಿಂದಲೆ ನಾಲ್ಕು ಜಾತಿಯ ಪುಟ್ಟಿಸಿ ಇಹಲೋಕಕ್ಕೆ ಕಳುಹಿಸಿದನು.
ಆ ಶಿವನ ಶರೀರದಲ್ಲಿ ಪುಟ್ಟಿದವರು ಶಿವನನ್ನೇ ಅರ್ಚಿಸಿ,
ಶಿವನನ್ನೇ ಪೂಜಿಸಿ, ಶಿವನನ್ನೇ ಭಾವಿಸಿ, ಶಿವನೊಳಗಾದರು.
ಅದರಿಂದಾದ ಭವಬಾಧೆಗಳು ತಾವು ತಮ್ಮ ಹುಟ್ಟನರಿಯದೆ,
ಹುಟ್ಟಿಸುವಾತ ಬ್ರಹ್ಮ, ರಕ್ಷಿಸುವಾತ ವಿಷ್ಣು, ಶಿಕ್ಷಿಸುವಾತ
ರುದ್ರನೆಂದು ಹೇಳಿದರು.
ಈ ಭ್ರಷ್ಟರ ಮಾತ ಕೇಳಿ ಕೆಟ್ಟಿತ್ತು ಜಗವೆಲ್ಲ.
ಆಗ ಶಿವನು ಕೊಟ್ಟು, ಕಳುಹಿದ ಮಾಯೆಗೆ ಮರವೆಂಬ ಪಾಶ.
ಅವಳು ಕಟ್ಟಿ ಕೆಡಹಿದಳು ಮೂರುಜಗವೆಲ್ಲವನು.
ಇವಳ ಕಟ್ಟಿಗೊಳಗಾದ ಭ್ರಷ್ಟರೆತ್ತಬಲ್ಲರೋ ನಿಮ್ಮ ಶರಣರ ಸುದ್ದಿಯ,
ಬಸವಪ್ರಿಯ ಕೂಡಲಚೆನ್ನಬಸವಣ್ಣಾ? ॥ ೨೨೧ ॥

೧೦೫೬

ಹರಿವ ಜಲಧಿಯಂತೆ, ಚರಿಸಿ ಬಹ ಮನವ ನಿಲ್ಲೆಂದು ನಿಲಿಸುವ
ಪುರುಷರುಂಟೆ ?
ಬಿರುಗಾಳಿ ಬೀಸಿದರೆ ಒಲಿ ಒಲಿದು ಉರಿವ ಬಲುಗಿಚ್ಚಿನ ಉರಿಯ ನೆಲೆಗೆ
ನಿಲಿಸುವರುಂಟೆ ?
ಮಹಾಬಯಲೊಳಗಣ ಸಂಚವನರಿದು ಅವಗಡಿಸುವರುಂಟೆ ?
ಮಹಾಬಯಲೊಳಗಣ ಸಂಚವನರಿದು ಅವಗಡಿಸುವರುಂಟೆ ?
ಇವ ಬಲ್ಲೆನೆಂಬವರೆಲ್ಲ ಅನ್ನದ ಮದ, ಅಹಂಕಾರದ ಮದ,
ಕುಲಮದ, ಛಲಮದ,
ಯೌವನಮದ, ವಿದ್ಯಾಮದ, ತಪದ ಮದ, ಆತ್ಮದ ಮದ
ಇಂತೀ ಅಷ್ಟಮದವಿಡಿದು ಬಲ್ಲೆವೆಂಬರಲ್ಲದೆ, ದೃಷ್ಟ ನಷ್ಟವಾವುದೆಂದರಿಯದೆ,
ಎಲ್ಲರೂ ಭ್ರಷ್ಟರಾಗಿಹೋದರು,
ಬಸವಪ್ರಿಯ ಕೂಡಲಚೆನ್ನಬಸವಣ್ಣಾ,
ನಿಮ್ಮ ನೆಲೆಯನರಿಯದ ಕಾರಣ. ॥ ೨೨೨ ॥

೧೦೫೭

ಹಲವಂದ ಚಂದದಲ್ಲಿ ಹಾಡಿದರೇನಯ್ಯ,
ಲಿಂಗದ ನೆಲೆಯನರಿಯದನ್ನಕ್ಕ ?
ಕಲಿಯಾಗಿ ವೈರಾಗ್ಯ ತಲೆಗೇರಿ ಹರಿದಾಡಿದರೇನಯ್ಯ ?
ಮಾಯೆಯ ಬಲೆಯ ನುಸುಳಿಸಿದಲ್ಲದೆ ನಿಮ್ಮ ನೆಲೆಯ ಕಾಣಬಾರದು,
ಬಸಪ್ರಿಯ ಕೂಡಲಚೆನ್ನಬಸವಣ್ಣಾ. ॥ ೨೨೩ ॥

೧೦೫೮

ಹಸನ ಮಾಡಿ ಹರಗಿ ಹೊಲದಲ್ಲಿ ಕಸವ ಬಿತ್ತುವ ಮರುಳರಂತೆ,
ವಿಷಯಸುಖಂಗಳಿಗೆ ಹುಸಿಯನೆ ನುಡಿದು,
ಗಸಣೆಗೊಳಗಾಗುವ ಮನುಜರೆತ್ತ ಬಲ್ಲರೊ, ಮಹಾಘನಗುರುವಿನ ನೆಲೆಯ ?
ಮರಣಬಾಧೆಗೊಳಗಾದವರು ನಿಮ್ಮನೆತ್ತ ಬಲ್ಲರೊ,
ಬಸವಪ್ರಿಯ ಕೂಡಲಚೆನ್ನಬಸವಣ್ಣಾ ? ॥ ೨೨೪ ॥

೧೦೫೯

ಹಸಿವಿನಾಸೆಗೆ ಅಶನವ ಕೊಂಬರು, ವಿಷಯದಾಸೆಗೆ ಹುಸಿಯ ನುಡಿವರು.
ಹಸನಾಗಿ ವ್ಯಸನವ ಹೊತ್ತು, ಭಸಿತವ ಹೂಸಿ ವಿಶ್ವವ ತಿರುಗಿದರು.
ಈ ಹುಸಿಯ ಬಿಟ್ಟು, ಮಾಯೆಯ ಮಸಕವ ಮಾಣ್ದಲ್ಲದೆ
ನಮ್ಮ ಬಸವಪ್ರಿಯ ಕೂಡಲಚೆನ್ನಬಸವಣ್ಣನ ಕೂಡಾ. ॥ ೨೨೫ ॥

೧೦೬೦

ಹಾಕಿದ ಮುಂಡಿಗೆಯ ಎತ್ತುವರಿಲ್ಲ.
ಎತ್ತಿದ ಮುಂಡಿಗೆಯ ದೃಷ್ಟದಲ್ಲಿ, ಶ್ರುತದಲ್ಲಿ ಗೆದ್ದು, ಇಸಕೊಂಬವರಿಲ್ಲ.
ಈ ಉಭಯದ ಗೊತ್ತನರಿಯದೆ ಕೆಟ್ಟರು,
ನಾವು ಭಕ್ತ ಜಂಗಮರೆಂಬುವರೆಲ್ಲ. ಅದಂತಿರಲಿ.
ನಾನು ನೀನು ಎಂಬುಭಯದ ಗೊತ್ತನರಿದು,
ದೃಷ್ಟದಲ್ಲಿ ಶ್ರುತದಲ್ಲಿ ಗೆದ್ದು ಕೊಟ್ಟು, ನ್ಯಾಯದಲ್ಲಿ
ಜಗವನೊಡಂಬಡಿಸಿ ಕೊಟ್ಟು,
ಆ ಸಿಕ್ಕಿಹೋಗುವ ಮುಂಡಿಗೆಯ ಎತ್ತಿಕೊಂಡು,
ಸುತ್ತಿ ನೋಡಿದರೆ ಬಟ್ಟಬಯಲಾಗಿರ್ದಿತ್ತು.
ಆ ಬಟ್ಟಬಯಲ ದಿಟ್ಟಿಸಿ ನೋಡಲು, ನೆಟ್ಟಗೆ ಹೋಗುತ್ತಿದ್ದೆ.
ಹೋಗಹೋಗುತ್ತ ನೋಡಿದರೆ, ನಾ ಎತ್ತ ಹೋದೆನೆಂದರಿಯೆನಯ್ಯಾ,
ಬಸವಪ್ರಿಯ ಕೂಡಲಚೆನ್ನಬಸವಣ್ಣ. ॥ ೨೨೬ ॥

೧೦೬೧

ಹಾಲ ಕಂಡ ಬೆಕ್ಕು ಮೆಲ್ಲುಲಿ ತೆಗೆದು ಕುಡಿವುತ್ತಿರಲು,
ಬಾಲನಿಗಿರ್ದ ಹಾಲ ಬೆಕ್ಕು ಕುಡಿವುತ್ತಿದೆಯೆಂದು ನಾರಿ ಕಂಡು,
ಗುದಿಗೆಯಲಿ ಹೊಡೆದರೆ, ಏಳುತ್ತ ಬೀಳುತ್ತ ಕಾಲ್ಗೆಡೆದು ಓಡುವಂತೆ,
ಏನ ಹೇಳುವೆಯಯ್ಯ ?
ಮರ್ತ್ಯದ ಮನುಜರು ಕರಣಂಗಳ ಹರಿಯ ಬಿಟ್ಟು,
ತಮ್ಮ ಬಾಳುವೆಯ ಮರೆದು,
ಕಾಲನ ಬಾಯಲ್ಲಿ ಅಳುತ್ತ ಮುಳುಗುತ್ತಲಿಪ್ಪುದನಾರೂ ಅರಿಯರು ನೋಡಾ,
ಬಸವಪ್ರಿಯ ಕೂಡಲಚೆನ್ನಬಸವಣ್ಣಾ ? ॥ ೨೨೭ ॥

೧೦೬೨

ಹಾಲಸಾಗರದೊಳು ತೇಲಾಡುತ್ತಿದ್ದು,
ಚಿಲುಮೆಯ ನೀರಿಗೆ ಹರಿದಾಡಬೇಡ.
ಮೇಲುಗಿರಿ ಶಿಖರದ ಪಶ್ಚಿಮದಿ ತೇಲಾಡುತಿರೆ,
ಬಸವಪ್ರಿಯ ಕೂಡಲಚೆನ್ನಬಸವಣ್ಣಾ. || ೨೨೮ ||

೧೦೬೩

ಹಾವ ಹಿಡಿವುದ ಹಾವಾಡಿಗ ಬಲ್ಲನಲ್ಲದೆ,
ಕಡೆಯಲಿದ್ದ ಜಾವಳಿಗನೆತ್ತ ಬಲ್ಲನು ?
ನೋವು ಬಂದರೆ ವ್ಯಾಧಿಯಲ್ಲಿ ನರಳುವಾತ ಬಲ್ಲನಲ್ಲದೆ,
ಕಡೆಯಲಿಪ್ಪ ದುರುಳನೆತ್ತ ಬಲ್ಲನು ?
ದೇವ ನಿಮ್ಮ ಶರಣನು ಬೆರೆದಿಪ್ಪ ಭೇದವ
ನೋವುತ್ತ ಬೇವುತ್ತ ಧಾವತಿಗೊಳುತಿಪ್ಪ
ಗಾವಿಲರೆತ್ತ ಬಲ್ಲರು ಲಿಂಗೈಕ್ಯರನುವ,
ಬಸವಪ್ರಿಯ ಕೂಡಲಚೆನ್ನಬಸವಣ್ಣಾ ? || ೨೨೯ ||

೧೦೬೪

ಹಿಂದನರುಹಿ ಹಿಂದ ಹರಿದಿರಿ, ಮುಂದನರುಹಿ ಮುಕ್ತನ ಮಾಡಿದಿರಿ.
ಸಂದುಸಂಶಯವನಳಿದಿರಿ, ಗುರುಲಿಂಗಜಂಗಮವ ಒಂದೇ
ಎಂದು ತೋರಿದಿರಿ.
ಪ್ರಸಾದವೇ ಪರವೆಂದರುಹಿದಿರಿ.
ಇಂತಿವರ ಪೂರ್ವಾಶ್ರಯವ ಕಳೆದು ಎನಗೆ ಏಕವ ಮಾಡಿ ತೋರಬೇಕಾಗಿ,
ನೀವು ಒಂದು ಸಾಕಾರವ ತಾಳಿ ಬಂದಿರಿ.
ಇದು ಕಾರಣ ನಿಮ್ಮ ಲೋಕಾರಾಧ್ಯರೆಂದು ನೆರೆನಂಬಿ ಸಲೆಸಂದು
ನಿಮ್ಮ ಪಾದದೊಳು ಏಕವಾದೆನಯ್ಯ ಚೆನ್ನ ಮಲ್ಲೇಶ್ವರ.
ಇದ ನಿಮ್ಮನರಿದ ಶರಣರೇ ಬಲ್ಲರು.
ಬಸವಪ್ರಿಯ ಕೂಡಲಚೆನ್ನಬಸವಣ್ಣಾ. || ೨೩೦ ||

೧೦೬೫

ಹುಟ್ಟಲೇಕೊ ನರರ ಜನ್ಮದಲ್ಲಿ ? ಕಟ್ಟಲೇಕೋ ಕೊರಳಲ್ಲಿ ಲಿಂಗವ ?
ಕಟ್ಟಿಯೂ ಕಾಣದೆ, ತೊಟ್ಟನೆ ತೊಳಲಿ, ಅರಸಲೇಕೊ ಧರೆಯ ಮೇಲೆ ?
ಅರಸಿಯೂ ಕಾಣದೆ, ಸತ್ತು ಮೆಟ್ಟಿ ಮೆಟ್ಟಿ ಹೂಳಿಸಿಕೊಳಲೇಕೊ ?
ಇವನರಿದರಿದು, ಹುಟ್ಟು ಹೊಂದಳಿದ ಶರಣರ ನಿತ್ಯನಿತ್ಯ ನೆನೆದು ಬದುಕಿದೆ,
ಬಸವಪ್ರಿಯ ಕೂಡಲಚೆನ್ನಬಸವಣ್ಣಾ. || ೨೩೧ ||

೧೦೬೬

ಹುಟ್ಟಿದ ಮನುಜರೆಲ್ಲ ಹೊಟ್ಟೆಯ ಹೊರೆವುದೇನು ಸೋಜಿಗವೊ ?
ಹುಲುಹೆಣನ ಸುಟ್ಟು, ಹೊಲೆಯನು ಹೊಟ್ಟೆಯ ಹೊರೆವುತ್ತ
ಅವನೆ ಸಂತೆಯಲ್ಲಿ ಎದೆಯ ಮೇಲೆ ಕಲ್ಲಹಾಕಿಕೊಂಬವನು,
ಹೊಟ್ಟೆಯ ಹೊರೆವುತ್ತಲವನೆ ಉಲಿ ಉಲಿದು ಕಂಡವರಿಗೆ ಹಲುಗಿರಿವವನು.
ಹೊಟ್ಟೆಯ ಹೊರೆವುತ್ತ, ಅವನು, ಈ ಲಿಂಗದ ನೆಲೆಯನರಿಯದವರು
ಇವರೊಳು ಸಲುವರಲ್ಲದೆ ಎಮ್ಮ ಶರಣರಿಗೆ ನಿಲುಕರು ನೋಡಾ,
ಬಸವಪ್ರಿಯ ಕೂಡಲಚೆನ್ನಬಸವಣ್ಣಾ. ॥ ೨೩೨ ॥

೧೦೬೭

ಹುಟ್ಟುವಾತ ಲಿಂಗಪಿಂಡದೊಳಡಗಿ ಬರಲು, ಪಿಂಡಗತಸ್ಥಲವೆನಿಸಿತ್ತು.
ಬೆಳೆವಲ್ಲಿ ಶ್ರೀಗುರುಸ್ವಾಮಿ ಹಸ್ತಮಸ್ತಕಸಂಯೋಗವಂ ಮಾಡಿ,
ಅಷ್ಟಾವರಣವನಳವಡಿಸಿ, ಅಷ್ಟತನುಗುಣವ ಕೆಡಿಸಿ,
ಇಷ್ಟಲಿಂಗವಂ ದೃಷ್ಟವ ಮಾಡಿಕೊಡುವಲ್ಲಿ,
ಅಂಗವೆ ಲಿಂಗಾರ್ಪಿತವೆಂದು ಸಂಗನಶರಣರಂ ಸಾಕ್ಷಿಯಂ ಮಾಡಿ,
ಮೋಕ್ಷವನೈದಿಸಿದಿರಾಗಿ ಅದೀಗ ಲಿಂಗೈಕ್ಯ.
ಇದು ಕಾರಣ, ಪಿಂಡಗತವೆಂದರೂ ಲಿಂಗೈಕ್ಯವೆಂದರೂ ಒಂದೇ ಸಮರಸ.
ಅದಕ್ಕೆ ದೃಷ್ಟ :
ಅಭೇದಂ ಜ್ಞಾನರೂಪೇಣ ಮಹಾನಂದಮಮಲಂ ಧ್ರುವಂ
ಅತರ್ಕ್ಯಮದ್ವಯಂ ಪೂರ್ಣಂ ಬ್ರಹ್ಮೈವಾಸ್ತಿ ನ ಸಂಶಯಃ ॥
ಎಂದುದಾಗಿ, ಇದೀಗ ಲಿಂಗೈಕ್ಯದಿರವು.
ಬಸವಪ್ರಿಯ ಕೂಡಲಚೆನ್ನಬಸವಣ್ಣ,
ಮಾಂ ತ್ರಾಹಿ, ತ್ರಾಹಿ ಕರುಣಾಕರನೆ. ॥ ೨೩೩ ॥

೧೦೬೮

ಹುಡಿಯ ಹಾರಿಸಿ ಅಡಗಿಸುವ ವಾಯು ಅಡಗಿ ತೋರುವ ಬೆಡಗಿನಂತೆ,
ಪ್ರಾಣಲಿಂಗಿಯ ಅಂಗ.
ಅಂಗವಡಗಿದಲ್ಲಿ ವಾಯುವಿಂಗೆ ಭಂಗವೊ ?
ಅಲ್ಲಾ; ನುಡಿದವರ ನುಡಿಗೆ ಭಂಗವೊ ?
ಇದರ ತೊಡಕ ತಿಳಿದಾತನೆ ಮೃಡನು,
ಬಸವಪ್ರಿಯ ಕೂಡಲಚೆನ್ನಬಸವಣ್ಣಪ್ರಭುವೆ. ॥ ೨೩೪ ॥

೧೦೬೯

ಹುತ್ತಕ್ಕೆ ಹಾಲು ತುಪ್ಪವನೆರೆದು,
ಕೊಟ್ಟಿನ ಮೇಲೆ ಕೂಳನಿಕ್ಕಿ, ಒತ್ತಿ ಮಡಲಲದುಂಬಿ,

ಆ ಹೊತ್ತಿಗೆ ಮನೆಯ ಮೇಲೆ ಕೂಳ ಹಾಕಿ ಕಟ್ಟಿ,
ಬಡಿದುಕೊಂಡು ಅಳುವ ಲೊಟ್ಟಿಗಳ ಹಟ್ಟಿಯ ಮೆಟ್ಟಲಾಗದು.
ಅದೇನು ಕಾರಣವೆಂದರೆ,
ಅವರು ನಿತ್ಯನಿತ್ಯ ಮೃತ್ಯುಮಾರಿಯ ಬಾಯತುತ್ತಹರೆಂದು
ಎಮ್ಮ ಆದ್ಯರ ವಚನ ಸಾರುತಿಪ್ಪವು ನೋಡಾ,
ಬಸವಪ್ರಿಯ ಕೂಡಲಚೆನ್ನಬಸವಣ್ಣಾ. || ೨೩೫ ||

೧೦೭೦

ಹುತ್ತದ ಮೇಲಣ ಸರ್ಪ ಸತ್ತಿತ್ತೆಂದು ಮುಟ್ಟಿ ಬಾಳ್ದ ಮನುಜರುಂಟೆ ?
ಒತ್ತಿಗೆ ಬಂದ ವ್ಯಾಘ್ರನನಪ್ಪಿಕೊಂಡ ಮನುಜರುಂಟೆ ?
ತತ್ವವ ಬಲ್ಲ ಶರಣರು ಸತ್ತಹಾಗೆ ಇದ್ದರೆ,
ಇವರು ಕತ್ತೆಯ ಮನುಜರೆಂದು ಮರ್ತ್ಯದವರು ಒತ್ತಿನುಡಿದರೆ,
ಅವರೆತ್ತ ಬಲ್ಲರೊ ?
ಅವರ ನುಡಿದವರು ಅತ್ತಲೂ ಅಲ್ಲ, ಇತ್ತಲೂ ಅಲ್ಲ ನೋಡಾ,
ಬಸವಪ್ರಿಯ ಕೂಡಲಚೆನ್ನಬಸವಣ್ಣಾ. || ೨೩೬ ||

೧೦೭೧

ಹುತ್ತದ ಮೇಲೊಂದು ಕಸ್ತೂರಿಯ ಮೃಗವ ಕಂಡೆ.
ಅದಕ್ಕೆ ಉದಯ ಅಸ್ತಮಯವಿಲ್ಲ.
ಒದವಿದ ಅಮೃತವನುಂಬುವದು, ಸದಮಲ ವಾಸನೆಯ ತೀಡುವುದು.
ಆ ವಾಸನೆಯ ಬೆಂಬಳಿವಿಡಿದು, ನಾನು ಆ ವಾಸಕ್ಕೆ ಹೋಗಿ,
ದೇಶದ ಹಂಗು ಮರೆದು, ಸಾಸಿರ ಮುಖವಾಗಿಪ್ಪ ಈಶನೊಳು
ಲೇಸಿಂದ ಬೆರೆದು, ಮಿಸಲಳಿಯದೆ ಐಕ್ಯವಾದೆನಯ್ಯಾ,
ಬಸವಪ್ರಿಯ ಕೂಡಲಚೆನ್ನಬಸವಣ್ಣಾ. || ೨೩೭ ||

೧೦೭೨

ಹುಸಿಯ ಹಟ್ಟಿಯಲಿಪ್ಪ ಸೊನಗ, ಹಾಕಿದ ಹಿಟ್ಟಿಗೆ ಬೊಗಳುವಂತೆ.
ಆರಾದರು ಕೊಟ್ಟುದೊಂದು ವಾಟುಹಾಸಿಗೆ, ಅವರಿಚ್ಛೆಗೆ ಬೊಗಳುವ
ಖೊಟ್ಟಿಗಳ ಮಾತ ಕೇಳಲಾಗದು.
ಅದೇನು ಕಾರಣವೆಂದರೆ, ಮುಟ್ಟಿ ಅವರ ಸಂಗವ ಮಾಡುವ ಮನುಜಗೆ,
ಕರ್ಮ ಕಟ್ಟಿಹುದಲ್ಲದೆ ಮಾಣದು ನೋಡಾ,
ಬಸವಪ್ರಿಯ ಕೂಡಲಚೆನ್ನಬಸವಣ್ಣಾ. || ೨೩೮ ||

೧೦೭೩

ಹೆತ್ತವರೇ ಹೆಸರಿಡಬೇಕಲ್ಲದೆ, ತೊತ್ತಿರು ಬಂಟರು ಎತ್ತಬಲ್ಲರೊ ?
ಕರ್ತೃ ನಿಮ್ಮ ನೆಲೆಯ ನಿಮ್ಮ ಒತ್ತಿನಲಿಪ್ಪ ಶರಣರು ಬಲ್ಲರಲ್ಲದೆ,

ಈ ಸತ್ತು ಹುಟ್ಟುವ ಮನುಜರೆತ್ತ ಬಲ್ಲರೊ ?
ನಿತ್ಯವಪ್ಪ ಮಹಾಘನ ಗುರು ಮಾತ ನೀನೆ ಬಲ್ಲೆ,
ಬಸವಪ್ರಿಯ ಕೂಡಲಚೆನ್ನಬಸವಣ್ಣಾ. ॥ ೨೩೯ ॥

೧೦೭೪

ಹೆಸರಿಗೆ ಬಾರದ ಘನವ ಹೆಸರಿಗೆ ತಂದು,
ನುಡಿದಾಡುವ ಕಿಸುವಾಯರ ಮಾತ ಕೇಳಲಾಗದು.
ಅದೇನು ಕಾರಣವೆಂದರೆ, ಈ ಪಶುಗಳೇನು ಬ್ಲಲರು ?
ಬಸವನೆಂತಿಪ್ಪನೆಂಬುದ ವಸುಧೆಯ ಮನುಜರೆತ್ತಬಲ್ಲರು ?
ಇದು ಹುಸಿ ಹುಸಿ, ನಿಮ್ಮಾಣೆ, ನಿಮ್ಮ ಪ್ರಮಥರಾಣೆ.
ಆ ಬಸವನ ನೆಲೆಯ ಬಸವಾದಿ ಪ್ರಮಥರೆ ಬಲ್ಲರಲ್ಲದೆ,
ಈ ಹುಸಿಮಾಯೆಗೊಳಗಾದ ಸೂತಕರೆತ್ತಬಲ್ಲರು ನಿಮ್ಮ ಶರಣರ ಸುದ್ದಿಯ,
ಬಸವಪ್ರಿಯ ಕೂಡಲಚೆನ್ನಬಸವಣ್ಣಾ ? ॥ ೨೪೦ ॥

೧೦೭೫

ಹೊತ್ತಾರೆ ಎದ್ದು ಹೂವು ಪತ್ರೆ ಉದಕವ ತಂದು,
ಅಷ್ಟವಿಧಾರ್ಚನೆ ಷೋಡಶೋಪಚಾರವ ಮಾಡಿಹೆನೆಂದು,
ಸೊರಟೆಯ ಮೊರಟೆಯ ಹರಡಿ, ಕೈಕಾಲ ಮುಖವ ತೊಳೆದು,
ವಿಭೂತಿಯ ಧರಿಸಿ, ರುದ್ರಾಕ್ಷಿಯ ತೊಟ್ಟು,
ತನು ಶುದ್ಧವ ಮಾಡಿ, ಲಿಂಗಕ್ಕೆ ಮಜ್ಜನಕ್ಕೆರೆಯಬೇಕೆಂಬಿರಿ.
ಈ ಮೊದಲು ತಂದ ಪತ್ರೆ ಪುಷ್ಪ ಉದಕವೆ ದೇವರೊ ?
ಈ ಹರಡಿಕೊಂಡಿರುವ ಸೊರಟೆ ಮೊರಟೆಗಳೆ ದೇವರೊ ?
ಈ ತೊಳೆದುಕೊಂಬ ಕೈಕಾಲು ಮುಖವೆ ದೇವರೊ ?
ಈ ಧರಿಸಿದ ವಿಭೂತಿ ರುದ್ರಾಕ್ಷಿಯೆ ದೇವರೊ ?
ನಿಮ್ಮ ಕೈಯಲ್ಲಿ ಇಪ್ಪುದೆ ದೇವರೊ ? ನೀವೆ ದೇವರೊ ?
ಇವರೊಳಗೆ ಆವುದು ದೇವರೆಂಬಿರಿ ? ಅರಿವುಳ್ಳವರು ನೀವು ಹೇಳಿರೊ.
ದೇವರು ದೇವರು ಎಂದು ಒಂದಲ್ಲದೆ, ಎರಡುಂಟೆ ?
ಇಂತಿದನರಿಯದೆ, ಬರುವಸೂರೆಹೋದಿರಲ್ಲ.
ಇನ್ನಾದಗು ಅರಿದು ಬದುಕಿರೊ ನಾನೊಂದ ಹೇಳಿದೆನು.
ಇವೆಲ್ಲವನು ಮಾಡಬೇಕೆಂಬುದೀಗ ಲಿಂಗ, ಮಾಡುವದೀಗ ಜಂಗಮ.
ಲಿಂಗ ಜಂಗಮವೆಂದರೆ ಒಂದೇ ಅಂಗಭೇದವು.
ನಮ್ಮ ಶರಣರು ಬಲ್ಲರಲ್ಲದೆ,
ಮರಣಬಾಧೆಗೊಳಗಾಗುವ ಮರ್ತ್ಯದ ಮನುಜರು ಅರಿಯರು
ಬಸವಪ್ರಿಯ ಕೂಡಲಚೆನ್ನಬಸವಣ್ಣಾ. ॥ ೨೪೧ ॥

೧೦೭೬

ಹೊತ್ತಾರೆಯಿಂದ ಅಸ್ತಮಯ ತನಕ
ಸುತ್ತಿರ್ದ ಮಾಯಾಪ್ರಪಂಚನೆ ಅಳಿವುತ್ತ ಸುರುವುತ್ತಲುರ್ದು,
ಕತ್ತಲೆಯಾದರೆ, ಕಾಳುವಿಷಯದೊಳಗೆ ಮುಳುಗುತ್ತ, ಸತ್ತು ಹುಟ್ಟುತ್ತ,
ಮತ್ತೆ ಬೆಳಗಾಗಿರ್ದು, ನಾನು ತತ್ವವ ಬಲ್ಲೆನೆಂದು ನುಡಿವ ಕತ್ತಲೆಮನುಜರ
ಅತ್ತ ಹೊದ್ದದೆ, ಇತ್ತಲೆ ನಿಂದು ನಾಚಿ ನಗುತಿರ್ದ
ನಮ್ಮ ಬಸವಪ್ರಿಯ ಕೂಡಲಚೆನ್ನಬಸವಣ್ಣ. || ೨೪೨ ||

೧೦೭೭

ಹೊತ್ತುಹೊತ್ತಿಗೆ ನಿತ್ಯರ ಸಂಗವ ಮಾಡಿ,
ಕರ್ತೃವೆಂಬುದನರಿದೆ, ನಾ ಭೃತ್ಯನೆಂಬುದನರಿದೆ.
ಸತ್ಯವೆಂಬುದನರಿದು, ಸದಾಚಾರವಿಡಿದು,
ತುದಿ ಮೊದಲು ಕಡೆ ನಡುವೆ,
ಆದಿ ಅನಾದಿಗೆ ನಿಲುಕದ ಘನವೇದ್ಯ ಲಿಂಗವ ಕಂಡೆ.
ಆ ಲಿಂಗವ ಸೋಂಕಲೊಡನೆ ಲಿಂಗದಂತಾದೆ.
ಜಂಗಮವ ಮುಟ್ಟಿ ಪೂಜಿಸಲೊಡನೆ ಜಂಗಮದಂತಾದೆ.
ಪ್ರಸಾದವ ಕೊಳ್ಳಲಾಗಿ, ಆ ಪ್ರಸಾದದಂತಾದೆ.
ಇನ್ನು ಪರವಿಲ್ಲವೆಂದು ಪ್ರಸಾದದಲ್ಲಿಯೆ ತಲ್ಲೀಯವಾದೆ.
ಇದ ಬಲ್ಲವರು ನೀವು ಕೇಳಿ.
ಎನ್ನ ಹಮ್ಮು ಬಿಮ್ಮು ಉಂಟೆನಬೇಡ.
ಇದಕ್ಕೆ ದೃಷ್ಟವ ಹೇಳಿಹೆ ಕೇಳಿರಣ್ಣಾ!
ಕೀಡಿ ತುಂಬಿಯ ಸ್ನೇಹದ ಹಾಗೆ.
ಶರಣನಾದರೆ ಜ್ಯೋತಿ ಜ್ಯೋತಿಯ ಮುಟ್ಟಿದ ಹಾಗೆ.
ದರ್ಪಣ ದರ್ಪಣದೊಳಗೆ ಅಡಗಿದ ಹಾಗೆ.
ಇದರೊಪ್ಪವ ಬಲ್ಲವರು ತಪ್ಪದೆ ಎನ್ನಂಗ,
ಬಸವಪ್ರಿಯ ಕೂಡಲಚೆನ್ನಬಸವಣ್ಣ. || ೨೪೩ ||

೧೦೭೮

ಹೊತ್ತುಹೊತ್ತಿಗೆ ಲಿಂಗಪೂಜೆಯ ಮಾಡಿಯೂ
ಮತ್ತೆಯು ಸತ್ಯವಾವುದು, ನಿತ್ಯವಾವುದೆಂದರಿಯದೆ ಕೆಟ್ಟರೆಲ್ಲ ಜಗವು.
ಸತ್ಯವಾಗಿ ನುಡಿವ ಶರಣರ ಕಂಡರೆ, ಕತ್ತೆಮಾನವರೆತ್ತಬಲ್ಲರೊ ?
ಅಸತ್ಯವನೆ ನುಡಿದು, ಹುಸಿಯನೆ ಬೋಧಿಸುವ ಹಸುಕರ ಕಂಡರೆ,
ಇತ್ತ ಬನ್ನಿ ಎಂಬರು.
ಇಂತಪ್ಪ ಅನಿತ್ಯದೇಹಿಗಳ ಭಕ್ತರೆಂದು ಜಂಗಮವೆಂದು
ನೋಡಿದರೆ, ನುಡಿಸಿದರೆ, ಮಾತನಾಡಿದರೆ, ನೀಡಿದರೆ,

ಅಘೋರನರಕವೆಂದು ನಮ್ಮ ಆದ್ಯರ ವಚನ ಸಾರುತಿದೆ,
ಬಸವಪ್ರಿಯ ಕೂಡಲಚೆನ್ನಬಸಣ್ಣಾ. || ೨೪೪ ||

೧೦೭೯

ಹೊತ್ತುಹೋಗದ ಮುನ್ನ ನೀವು ಸತ್ತಂತೆ ಇರಿರೊ.
ಸತ್ತಂತೆ ಇದ್ದಲ್ಲದೆ ತತ್ವವ ಕಾಣಬಾರದು.
ತತ್ತ್ವವ ಕಂಡಲ್ಲದೆ ಮನ ಬತ್ತಲೆಯಾಗದು.
ಬತ್ತಲೆಯಾದಲ್ಲದೆ ಘನವ ಕಾಣಬಾರದು.
ಘನವ ಕಂಡಲ್ಲದೆ ನಿಮ್ಮ ನೆನಹು ನಿಷ್ಪತ್ತಿಯಾಗದು,
ಬಸವಪ್ರಿಯ ಕೂಡಲಚೆನ್ನಬಸವಣ್ಣಾ. || ೨೪೫ ||

೧೦೮೦

ಹೊನ್ನ ಗಳಿಸಿದರೇನಯ್ಯಾ, ಹೊಲೆಯರ ಮನೆಯಲ್ಲಿದ್ದರೆ ?
ಹೆಣ್ಣ ಗಳಿಸಿದರೇನಯ್ಯಾ, ವೇಶಿಯರ ಮನೆ ದಾಸಿಯಾಗಿದ್ದರೆ ?
ಮಣ್ಣ ಗಳಿಸಿದರೇನಯ್ಯಾ, ಉಣ್ಣ ದಾಹಾರವನುಂಡರೆ ?
ಹೋಗುವ ಹಾಳುಗೇರಿಯಾಗಿರದೆ, ಇದನರಿದು ಮಹಾಘನವನೆ ಮರೆದು,
ಮತ್ತೆ ಹೊನ್ನು ಹೆಣ್ಣು ಮಣ್ಣು ತನ್ನದೆಂಬರು,
ಕಣ್ಣುಗಾಣದ ಕುರುಡರಂತಾದರು ಕಾಣಾ,
ಬಸವಪ್ರಿಯ ಕೂಡಲಚೆನ್ನಬಸವಣ್ಣಾ. || ೨೪೬ ||

■■

# ಹಡಪದ ರೇಚಣ್ಣನ ವಚನ

೧೦೮೧

ಎನ್ನಾಧಾರಚಕ್ರಸ್ಥಾನದಲ್ಲಿ ಮೂರ್ತಿಗೊಂಡನಯ್ಯಾ ಬಸವಣ್ಣನು.
ಎನ್ನ ಸ್ವಾದಿಷ್ಠಾನಚಕ್ರಸ್ಥಾನದಲ್ಲಿ ಮೂರ್ತಿಗೊಡನಯ್ಯಾ ಚೆನ್ನಬಸವಣ್ಣನು.
ಎನ್ನ ಮಣಿಪೂರಕಚಕ್ರಸ್ಥಾನದಲ್ಲಿ ಮೂರ್ತಿಗೊಂಡನಯ್ಯಾ
ಘಟ್ಟಿವಾಳ ಮದ್ದಯ್ಯನು.
ಎನ್ನ ಅನಾಹತಚಕ್ರಸ್ಥಾನದಲ್ಲಿ ಮೂರ್ತಿಗೊಂಡನಯ್ಯಾ ಸಿದ್ಧರಾಮಯ್ಯನು.
ಎನ್ನ ವಿಶುದ್ಧಿಚಕ್ರಸ್ಥಾನದಲ್ಲಿಸ ಮೂರ್ತಿಗೊಂಡನಯ್ಯಾ
ಮರುಳಶಂಕರದೇವರು.
ಎನ್ನ ಆಜ್ಞಾಚಕ್ರಸ್ಥಾನದಲ್ಲಿ ಮೂರ್ತಿಗೊಂಡನಯ್ಯಾ ಪ್ರಭುದೇವರು.
ಆಧಾರಕ್ಕಾಚಾರಲಿಂಗವಾದಾತ ಬಸವಣ್ಣ.
ಸ್ವಾಧಿಷ್ಠಾನಕ್ಕೆ ಗುರುಲಿಂಗವಾದಾತ ಚೆನ್ನಬಸವಣ್ಣ.
ಮಣಿಪೂರಕಕ್ಕೆ ಶಿವಲಿಂಗವಾದಾತ ಘಟ್ಟಿವಾಳ ಮದ್ದಯ್ಯ.
ಅನಾಹತಕ್ಕೆ ಜಂಗಮಲಿಂಗವಾದಾತ ಸಿದ್ಧರಾಮಯ್ಯ.
ವಿಶುದ್ಧಿಗೆ ಪ್ರಸಾದಲಿಂಗವಾದಾತ ಮರುಳಶಂಕರದೇವರು.
ಆಜ್ಞೆಗೆ ಮಹಾಲಿಂಗವಾದಾತ ಪ್ರಭುದೇವರು.
ನಿಃಕಳಂಕ ಕೂಡಲ [ಚೆನ್ನ]ಸಂಗಮದೇವಾ,
ನಿಮ್ಮ ಶರಣರ ಶ್ರೀಪಾದಕ್ಕೆ ನಮೋ ನಮೋ ಎನುತಿರ್ದೆನು. ॥ ೧ ॥

೧೦೮೨

ಒಂದನಹುದೆನ್ನದೆ, ಒಂದನಲ್ಲಾ ಎನ್ನದೆ,
ಬಾಯಿಗೆ ಬಂದಂತೆ ಅಂದಚೆಂದವ ಸೇರಿಸಿ,
ಬಾಯಿಗೆ ಬಂದಂತೆ ಒಂದೊಂದ ನುಡಿಯದೆ,
ಇದು ಬಂಧ ಮೋಕ್ಷ ಕರ್ಮವೆಂದು
ದಂದುಗವ ಗಂಡನಿಕ್ಕಿಕೊಂಡಾಡದೆ, ತಾ ನಿಂದಲ್ಲಿ ನಿಜಸುಖಿಯಾದ ಮತ್ತೆ,
ಇತ್ಯಾದಿಗಳಲ್ಲಿ ಹೊತ್ತುಹೋರಲೇತಕ್ಕೆ ?
ಶಿಲೆ ರಸವನುಂಡಂತೆ, ಮರೀಚಿಕಾ ಜಲದಂತೆ, ಅಂಬುವಿನ ಸಂಭ್ರಮದಂತೆ,
ಕುಂಭದಲ್ಲಿ ಅಡಗಿದ ಸರ್ಪನ ಇಂದ್ರಿಯದಂತ.
ಇದು ಗುಣಲಿಂಗಾಂಗಿಯ ನಿರ್ಗಮನ.
ನಿಃಕಳಂಕ ಕೂಡಲಚೆನ್ನಸಂಗಮದೇವ, ತಾನಾದ ಶರಣನ ಇರವು. ॥ ೨ ॥

೧೦೮೩

ಕಂಡ ಚಿತ್ತವಸ್ತುವಿನಲ್ಲಿ ಮುಗ್ನವಾದ ಮತ್ತೆ,
ಸಂಸಾರ ವಿಷಯಕ್ಕೆ ಮತ್ತನಪ್ಪುದೆ ?
ಮತ್ತೆ ಭಕ್ತರ ಗೃಹ ರಾಜದ್ವಾರದ ತಪ್ಪಲ ಕಾಯ್ವುದೆ ?
ಆ ಚಿತ್ತತೊಟ್ಟುಬಿಟ್ಟ ಹಣ್ಣು, ಕಟ್ಟಿಸತ್ತ ಬಿದಿರು,
ದೃಷ್ಟ ನಷ್ಟವಾದ ಅಂಗಕ್ಕೆ ಮತ್ತೆ ಬಪ್ಪುದೆ ಪುನರಪ್ಪಿಯಾಗಿ ?
ಇದು ನಿಶ್ಚಯ, ನಿಜಲಿಂಗಾಂಗ ನಿರ್ಲೇಪನ ಹೊಲಬು.
ಮತ್ತೆ ಜಗದ ಮೊತ್ತದವನಲ್ಲ,
ನಿಃಕಳಂಕ ಕೊಡಲಚೆನ್ನ ಸಂಗಮದೇವ ತಾನಾದ ಶರಣ. ॥ ೩ ॥

೧೦೮೪

ಕರ್ಮದಿಂದ ಕರ್ಮವ ಕಂಡಲ್ಲದೆ, ಮುಂದಣ ವರ್ಮವನರಿಯಬಾರದು.
ವರ್ಮದಿಂದ ಸರ್ವವ ತಿಳಿದಲ್ಲದೆ, ಸತ್ಕರ್ಮ ನಾಸ್ತಿ ವಿರಕ್ತನಾಗಬಾರದು.
ಮುಕುರದೊಳಗಣ ನೆಳಲ ತಾ ನೋಡಿ ಕಾಬಂತೆ,
ಇದು ಕ್ರಿಯಾಪಥ, ವಿರಕ್ತನ ಶ್ರದ್ಧೆ.
ಅದು ಸನ್ಮುಕ್ತವಾದಲ್ಲಿ ಮಾಡೆನೆಂಬ ಶಂಕೆ.
ಮಾಡಿದೆನೆಂಬ ಕೃತ್ಯ ಉಭಯದ ಕಲೆಯಿಲ್ಲ,
ನಿಃಕಳಂಕ ಕೂಡಲಚೆನ್ನಸಂಗಮದೇವ ತಾನಾದ ಶರಣ. ॥ ೪ ॥

೧೦೮೫

ಗಜ ಗಮನ, ಅಹಿತ ಶರಸಂಧಾನ, ಮಯೂರನ ಶಯನ,
ಮಾರ್ಜಾಲನ ಧ್ಯಾನ, ಕಂಠೀರವನ ಲಾಗು, ಬಕಮೂರ್ತಿಯ ಅನುಸಂಧಾನ,
ಅಳಿಯ ಗಂಧ ಭುಂಜನೆ, ಮಧು ಮಕ್ಷಿಕದ ಘೃತಗೂಡ ವಾಸ,
ಮೂಷಕದ ದ್ವಾರಭೇದ, ಮರೆವಾಸವೈದುವ ಸಂಚ,

ಚೋರನ ಕಾಹು, ಪರಿಚಾರಕನ ವೇಳೆ, ಸಾಹಿತ್ಯನ ಉಪಮೆ,
ಸಂಗೀತರ ಸಂಚು, ತಾಳಧಾರಿಯ ಕಳವು,
ವಾದ್ಯಭೇದಕನ ಮುಟ್ಟು, ಘ್ರಾಣನ ಹರಿತ, ಭಾವಜ್ಞನ ಚಿತ್ತ.
ಇಂತೀ ನಾನಾ ಗಣಂಗಳ ಲಕ್ಷಾಲಕ್ಷಿತವ ತಿಳಿದು,
ಶ್ರುತ ದೃಷ್ಟ ಅನುಮಾನ ಮುಂತಾದ ನಾನಾ ಭೇದಂಗಳಲ್ಲಿ ವಿಚಾರಿಸಿ ಕಂಡು,
ನಾನಾರೆಂಬುದದೇನೆಂದು ತಿಳಿದು, ತನಗೂ ಇದಿರಿಂಗೂ ಪಡಿಪುಚ್ಚವಿಲ್ಲದೆ,
ಸಿಂಧುವಿನೊಳಗಾದ ಸಂಭ್ರಮಂಗಳ ಸಂಚಾರದ
ಅಂಗವೆಲ್ಲ ಹೋಗಿ ನಿರಂಗವಾದಂತೆ.
ಅಂಗವಾತ್ಮನ ಸಂಗ, ಈ ಅಂಗವೆಂದು ತಿಳಿದು,
ಆವ ಸ್ಥಲವನಂಗೀಕರಿಸಿದಲ್ಲಿಯೂ
ಪರಿಪೂರ್ಣವಾಗಿ ಏನ ಹಿಡಿದಲ್ಲಿಯೂ
ತಲೆವಿಡಿಯಿಲ್ಲದೆ ಏನ ಬಿಟ್ಟಲ್ಲಿಯೂ
ಕುಳವಿಡಿಯಿಲ್ಲದೆ ಕರ್ಪುರ ಮಹಾಗಿರಿಯ ಸುಟ್ಟಡೆ
ಒಕ್ಕುಡಿತೆ ಬೂದಿ ಇಲ್ಲದಂತೆ,
ಚಿತ್ತನಿಶ್ಚಯವಾದ ಸದ್ಭಕ್ತ ಪರಮ ವಿರಕ್ತನ ಇರವು ಇದು.
ಎನ್ನೊಡೆಯ ಚೆನ್ನಬಸವಣ್ಣನ ಹರವರಿಯ ತೆರನಿದು.
ಸಾಧ್ಯ ಮೂವರಿಗಾಯಿತ್ತು, ಅಸಾಧ್ಯವಸಂಗತ.
ನಿಃಕಳಂಕ ಕೂಡಲಚೆನ್ನ ಸಂಗಮದೇವರೆಂದರಿದವಂಗೆ
ಅಸಾಧ್ಯ ಸಾಧ್ಯವಾಯಿತ್ತು? ॥ ೫ ॥

೧೦೮೬

ಪೃಥ್ವಿಯಲ್ಲಿ ಅಪ್ಪುಸಾರವಿಲ್ಲದಿರೆ ಬೀಜವ ತಳಿಯಲಾಗಿ,
ಪ್ರತ್ಯಕ್ಷ ಅಂಕುರ ದೃಷ್ಟವಪ್ಪುದೆ?
ಶ್ರದ್ಧೆ ಸನ್ಮಾರ್ಗ ಭಕ್ತಿ ವಿಶ್ವಾಸವಿಲ್ಲದಿದ್ದಡೆ ಸದ್ಭಕ್ತನಪ್ಪನೆ ?
ಇಂತೀ ದೃಷ್ಟ ಸಿದ್ಧಾಂತದಿಂದ ತಪ್ಪು ಕುಳಿತ ಮತ್ತೆ,
ದೃಷ್ಟಾಂತರವ ಇದಿರ ಕೈಯಲ್ಲಿ ಕೇಳಲುಂಟೆ ?
ನುಂಗಬಾರದ ಘೃತ, ಉಗುಳಬಾರದ ಪ್ರಿಯ,
ಬಿಡಬಾರದ ಭಕ್ತಿ, ವಿಶ್ವಾಸವಿಲ್ಲದ ಆ ಭಕ್ತಿಪೂಜೆ,
ಘನಸಿಂಧುವಿನಲ್ಲಿ ನಾನಾ ವರ್ಣವ ಕದಡಿದಂತಾಯಿತ್ತು.
ಇದನಿನ್ನಾರಿಗುಸುರುವೆ !
ನಿಃಕಳಂಕ ಕೂಡಲಚೆನ್ನಸಂಗಮದೇವಾ, ನೀನೆ ಬಲ್ಲೆ. ॥ ೬ ॥

೧೦೮೭

ಭಕ್ತನಂತೆ ತ್ರಿವಿಧ ಮಲಕ್ಕಿಕ್ಕುವನೆ ಚಿತ್ತವ ?
ವಿರಕ್ತನಂತೆ ಸರ್ವವ್ಯಾಪಾರಕ್ಕೆ ಮೊತ್ತದ ಇಂದ್ರಿಯ ವರ್ಗದಲ್ಲಿ,

ಸುಚಿತ್ತವ ಬಿಟ್ಟು ಮತ್ತೆ ವಿರಕ್ತನಪ್ಪನೆ ?
ಈ ಉಭಯದ ಭಾವವ ನಿಶ್ಚೈಸಿದಲ್ಲಿ,
ಕುಸುಮ ಗಂಧದಂತೆ, ಮುಕುರ ಬಿಂಬದಂತೆ,
ಉರಿ ಕಪುರದಿರವಿನ ತೆರದಂತೆ,
ನಿಃಕಳಂಕ ಕೂಡಲಚೆನ್ನ ಸಂಗಮದೇವ ತಾನಾದ ಶರಣ. ॥ ೭ ॥

೧೦೮೮

ಮರದ ದೇವರಿಗೆ ಉರಿಯ ಪೂಜೆಯುಂಟೆ ?
ಮಣ್ಣಿನ ಹರುಗುಲದಲ್ಲಿ ತುಂಬಿದ ತೊರೆಯ ಹಾಯಬಹುದೆ ?
ತೆರಕಾರನ ನಚ್ಚಿ ಕಳನೇರಬಹುದೆ ?
ಇಂತೀ ಗುಣದ ದೃಷ್ಟವ ಕಡೆಗಾಣಿಸಿದಲ್ಲಿ,
ಪ್ರಮಾಣಿಸಿದಲ್ಲಿಯೂ ಏತರನು,
ಹಾಂಗೆ ಬರಿಹುಂಡರ, ಆಚಾರಭ್ರಷ್ಟರ, ಅರ್ತಿಕಾರರ,
ಚಚ್ಚಗೋಷ್ಠಿವಂತರ, ಬಹುಯಾಚಕರ,
ಪಗುಡೆ ಪರಿಹಾಸಕರ, ತ್ರಿವಿಧದಲ್ಲಿ ಸೂತವನರಸುವ
ವಿಶ್ವಾಸಘಾತಕರ, ಅಪ್ರಮಾಣ ಪಾತಕರ,
ಭಕ್ತಿಯ ತೊಟ್ಟಲ್ಲಿ ಭಕ್ತನೆಂದಡೆ,
ವಿರಕ್ತಿಯ ತೊಟ್ಟಲ್ಲಿ ಕರ್ತುವೆಂದಡೆ, ದೀಕ್ಷೆಯ ಮಾಡಿದಲ್ಲಿ ಗುರುವೆಂದಡೆ,
ತಪ್ಪ ಕಂಡಲ್ಲಿ ಎತ್ತಿ ತೋರುವೆನು.
ಗುಟ್ಟಿನಲ್ಲಿ ಚಿತ್ತ ಬಿಡಲಾರದಿರ್ದಡೆ,
ನಿಃಕಳಂಕ ಕೂಡಲಚೆನ್ನ ಸಂಗಮದೇವರಾದಡೂ ಎತ್ತಿಹಾಕುವೆನು. ॥ ೮ ॥

೧೦೮೯

ಹೊರಗಣ ಸಿಪ್ಪೆ ಒಳಗೆ ಮೆಲುವನ್ನಕ್ಕ ಉಭಯದ ಕೂಟ.
ಅಗಲಿಗೆ ಬಂದ ಮತ್ತೆ ರಸಾನ್ನವಲ್ಲದೆ ಹಿಪ್ಪೆಗೆ ಚಿತ್ತ ಒಪ್ಪಬಲ್ಲುದೆ ?
ಅರಿವನ್ನಬರ ಸ್ಥಲಕುಳಂಗಳ ಹೊಲಹೊಲದ ಹೊಲಬ ತಿಳಿದಲ್ಲಿ,
ಭಕ್ತಿಜ್ಞಾನವೈರಾಗ್ಯಗಳೆಂಬ ತ್ರಿವಿಧದ ಗೊತ್ತು ನಷ್ಟವಾದ ಶರಣ,
ತಥ್ಯಮಿಥ್ಯಕ್ಕೆ ಸಿಕ್ಕ ಮತ್ತಾವ ಗುಣಂಗಳಲ್ಲಿಯೂ ಹೊರದೃಷ್ಟಕ್ಕೆ ಬಾರ.
ಆತ ನಿಶ್ಚಿಂತ ನೋಡಾ, ನಿಃಕಳಂಕ ಕೂಡಲಚೆನ್ನಸಂಗಮದೇವ
ತಾನಾದ ಶರಣ. ॥ ೯ ॥

■■

# ಹಾಪಿನಹಾಳ ಕಲ್ಲಯ್ಯಗಳ ವಚನ

೧೯೦

ಅಂಗದ ಮೇಲೆ ಲಿಂಗವುಂಟೆಂದು
ಜಗವೆಲ್ಲ ಬೆಬ್ಬನೆ ಬೆರತು ಬೀಗಿ ನುಡಿವರು.
ಅಂಗವೇ ಲಿಂಗವನರಿಯದು, ಲಿಂಗವೇ ಅಂಗವನರಿಯದು.
ಅಂಗವಾವುದು, ಲಿಂಗವಾವುದು, ಸಂಗಸಂಬಂಧವಾವುದೆಂದರಿಯರು.
ಅಂಗಗುಣವಳಿದು ಆಚಾರವಳವಟ್ಟು ನಿಂದಂಗವೆ ಅಂಗ.
ಲಿಂಗವಾವುದೆನಲು,
ಪಾಷಾಣಗುಣವಿಡಿದ ಭ್ರಮೆಯಳಿದು, ಭಾವವಳಿದು,
ಲಿಂಗಸಂಬಂಧವುಳಿದುದೆ [ಲಿಂಗ]
ಲಿಂಗಸಂಬಂಧವಾವುದೆನಲು ಸಂಸಾರವಿಡಿದು ವರ್ತಿಸುವ
ಭ್ರಾಂತವಳಿದು ಜ್ಞಾನಸಂಬಂಧವಳವಟ್ಟುದೆ ಸಂಬಂಧ.
ಇಂತು ಅಂಗ ಲಿಂಗ ಸಂಬಂಧವನರಿಯದಿದ್ದಡೆ, ಅಂಗ ಬಿದ್ದು, ಲಿಂಗ ಉಳಿದು,
ಸಂಬಂಧಚೈತನ್ಯ ಹಿಂಗಿಹೋದಲ್ಲಿ ಭಂಗ ಹೊದ್ದಿತ್ತು,
ಮಹಾಲಿಂಗ ಕಲ್ಲೇಶ್ವರಾ. ॥ ೧ ॥

೧೯೧

ಅಂತರಂಗದಲ್ಲಿ ಅರಿವ ತೋರಿ, ಬಹಿರಂಗದಲ್ಲಿ ಕುರುಹ ತೋರಿ,
ಉಭಯ ತನ್ನ ಹಿತವಹ ನಿಜನಿವಾಸವ ತೋರಿ ರಕ್ಷಿಸುವ

ಪರಮಪಾವನಮೂರ್ತಿ ಶ್ರೀಗುರುವನೆಂದು ಕಾಂಬೆನೋ !
ಎನ್ನ ಸುತ್ತಿಮುತ್ತಿದ ಭವಪಾಶವ ಹರಿದು,
ಎನ್ನ ಮುಸುಕಿಹ ಅಜ್ಞಾನ ತಿಮಿರವ ಪರಿಹರಿಸುವ,
ಸಂವಿತ್ಸ್ವರೂಪನಾದ ಮಹಾಮಹಿಮ
ಶ್ರೀಗುರುವನೆಂದೀಕ್ಷಿಸುವೆನೊ, ಮಹಾಲಿಂಗ ಕಲ್ಲೇಶ್ವರಾ ! ॥ ೨ ॥

೧೧೯೨

ಅಂದಂದಿನ ದಿನಕ್ಕೆ ಬಂದ ದಂದುಗಕ್ಕೆ ಮನನಾಚದ ಪರಿಯ ನೋಡಾ !
ಕಂದದೀ ಮನವು, ಕುಂದದೀ ಮನವು
ಲಿಂಗದೇವನ ಒಲವು ಎಯ್ದದೆಂದು ಮರುಗುವ ಪರಿಯ ನೋಡಾ !
ಮಹಾಲಿಂಗ ಕಲ್ಲೇಶ್ವರಯ್ಯಾ,
ಈ ಬೆಂದ ಮನವು, ಹೇಸದ ಪರಿಯ ನೋಡಾ ! ॥ ೩ ॥

೧೧೯೩

ಅಂದಂದಿನ ದಿನವ ಸಂಸಾರವಂದಂದಿಗೆ ಗ್ರಹಿಸುತ್ತಿದೆ.
ಎಂದಯ್ಯಾ ನಿಮ್ಮ ನೆನೆವೆ, ಎಂದಯ್ಯಾ ನಿಮ್ಮ ಪೂಜಿಸುವೆ.
ಸಮಚಿತ್ತದಿಂದ ನಿಮ್ಮ ನೆನೆವಡೆ,
ನಾಳಿಂಗಿಂದೇ ಲೇಸು ಮಹಾಲಿಂಗ ಕಲ್ಲೇಶ್ವರಾ. ॥ ೪ ॥

೧೧೯೪

ಅತ್ಯಾಶೆಯೆಂಬುದೆ ಪಾಪ, ಬೇರೆ ಪಾಪೆಂಬುದಿಲ್ಲ, ಕಂಡಿರೆ ಅಯ್ಯಾ !
ಪರಿಣಾಮವೆಂಬುದೆ ಪರಮಾನಂದ, ಬೇರೆ ಪರಲೋಕವಿಲ್ಲ, ಕಂಡಿರೆ ಅಯ್ಯಾ !
ಇಹಪರದಾಶೆಯಿಲ್ಲದಿಹುದೆ ಶಿವಯೋಗ.
ಮಹಾಲಿಂಗ ಕಲ್ಲೇಶ್ವರ ಬಲ್ಲ, ಸಿದ್ಧರಾಮನ ಪರಿಯ. ॥ ೫ ॥

೧೧೯೫

ಅಸುನೇಹದ ಅನುರಚಿಯ ತೋರಲಿಕಾರಿಗೆಯೂ ಬಾರದು.
ಅದು ಸಕ್ಕರೆಯಂತುಟಲ್ಲ, ಅದು ತವರಾಜದಂತುಟಲ್ಲ,
ಭಾವದ ಸುಖ ಭವಗೆಡಿಸಿತ್ತು. ಮಹಾಲಿಂಗ ಕಲ್ಲೇಶ್ವರದೇವಾ, ನೀನೆ ಬಲ್ಲೆ. ॥ ೬ ॥

೧೧೯೬

ಅಯ್ಯಾ, ರುದ್ರಾಕ್ಷಿಯಿಂದ ಇಹವ ಕಂಡೆ.
ಅಯ್ಯಾ, ರುದ್ರಾಕ್ಷಿಯಿಂದ ಪರವ ಕಂಡೆ.
ಅಯ್ಯಾ ರುದ್ರಾಕ್ಷಿಯಿಂದ ಗತಿಯ ಕಂಡೆ.
ಅಯ್ಯಾ ರುದ್ರಾಕ್ಷಿಯಿಂದ ಮತಿಯ ಕಂಡೆ.
ಅಯ್ಯಾ, ರುದ್ರಾಕ್ಷಿಯಿಂದ ಮೋಕ್ಷವ ಕಂಡೆ

ಅಯ್ಯಾ, ಇನ್ನು ಬದುಕಿದೆ, ಬದುಕಿದೆನಯ್ಯಾ,
ಅಯ್ಯಾ, ಭವಂ ನಾಸ್ತಿಯಾಯಿತ್ತೆನಗೆ.
ಅಯ್ಯಾ, ಮಹಾಲಿಂಗ ಕಲ್ಲೇಶ್ವರಾ,
ಶ್ರೀಮಹಾರುದ್ರಾಕ್ಷೆಯಿಂದೆ ಕಂಡೆನಯ್ಯಾ,
ಎನ್ನ ಕರಸ್ಥಲದಲ್ಲಿ ಮಹಾಗೂಢವಾಗಿರ್ಪ
ನಿಮ್ಮ ದಿವ್ಯಮೂರ್ತಿಯ ಪೆಂಪನು. || ೭ ||

೧೧೯೭

ಅಯ್ಯಾ ವಿಪ್ರರೆಂಬವರು ಮಾತಂಗಿಯ ಮಕ್ಕಳೆಂಬುದಕ್ಕೆ
ಇದೇ ದೃಷ್ಟ.
ಮತ್ತೆ ವಿಚಾರಿಸಿ ಕೇಳಿದಡೆ ಹೇಳುವೆನು :
ಬಡಗಿ ಮಾಚಲದೇವಿಯ ಕುಲಜೆಯ ಮಾಡಿಹೆವೆಂದು,
ಕಡಿದು ಹಂಚಿ ತಿಂದರಂದು ಗೋಮಾಂಸವ.
ಬಿಡದೆ ಅತ್ಯಂತ ಯಜ್ಞಕ್ರಮವೆಂದು ಹೋತನೆ ಕೊಂದು,
ಚಿಕ್ಕ ಚಿಕ್ಕವಾಗಿ ಕಡಿದು ಭಕ್ಷಿಸಿದುದ ಕಂಡು,
ಮಿಕ್ಕ ಹದಿನೇಳುಜಾತಿ ವಿಪ್ರರ ಕೈಯಲನುಗ್ರಹವ ಪಡೆದು,
ತಿನಕಲಿತರಯ್ಯಾ.
ಶ್ವಪಚೋऽಪಿ ವಿಪ್ರ ಸಮೋ ಜಾತಿಭೇದಂ ನ ಕಾರಯೇತ್ ।
ಅಜಹತ್ಯೋಪದೇಶೀನಾಂ ವರ್ಣಾನಾಂ ಬ್ರಾಹ್ಮಣೋ ಗುರುಃ ॥
ಎಂದುದಾಗಿ,
ಕಿರಿಕಿರಿದ ತಿಂದ ದ್ವಿಜರು ನೆರೆದು ವೈಕುಂಠಕ್ಕೆ ಹೋಹರೆ ?
ನೆರೆಯಲೊಂದ ತಿಂದ ವ್ಯಾಧ ದ್ವಿಜರಿಂದಧಿಕ.
'ಭರ್ಗೋ ದೇವಸ್ಯ ಧೀಮಹಿ' ಎಂಬ ದಿವ್ಯಮಂತ್ರವನೋದಿ,
ನಿರ್ಬುದ್ಧಿಯಾದಿರಿ.
ಶಿವಪಥವನರಿಯದೆ ಬರುದೊರೆವೋದಿರಿ.
ಆದಡೀ ನರಕಕ್ಕೆ ಭಾಜನವಾದಿರಿ.
ಇದು ಕಾರಣ, ಮಹಾಲಿಂಗ ಕಲ್ಲೇಶ್ವರಾ,
ನಿಮ್ಮ ಶರಣಂಗೆ ಸರಿಯೆ ಜಗದನ್ಯಾಯಿಗಳು. || ೮ ||

೧೧೯೮

ಅರ್ಚನೆಯಾವರಿಸಿತ್ತಯ್ಯಾ, ಪೂಜನೆ ಪೂರಿತವಾಯಿತ್ತಯ್ಯಾ,
ಅಜಪೆ ಅಕ್ಕಾಡಿತ್ತಯ್ಯಾ, ಸಮತೆ ಪರಿಣಾಮಿಸಿತ್ತಯ್ಯಾ,
ನಿರ್ವಿಕಲ್ಪ ಸಂಧಾನವಾಯಿತ್ತಯ್ಯಾ,
ಮಹಾಲಿಂಗ ಕಲ್ಲೇಶ್ವರಯ್ಯಾ, ನಿಮ್ಮ ನೆನೆವ ಮನಕ್ಕೆ. || ೯ ||

೧೦೯೯

ಅರ್ಥವೆಂಬುದೆ ಪಾಪ, ಬೇರೆ ಪಾಪವಿಲ್ಲ ಕಂಡಯ್ಯಾ.
ಪರಿಣಾಮವೆಂಬುದೆ ಪುಣ್ಯ, ಬೇರೆ ಪುಣ್ಯವಿಲ್ಲ ಕಂಡಯ್ಯಾ.
ಪಾಪಪುಣ್ಯಗಳನತಿಗಳೆದ ಉಳುಮೆ, ಶಿವಯೋಗ.
ಮಹಾಲಿಂಗ ಕಲ್ಲೇಶ್ವರನು ಬಲ್ಲ ಸಿದ್ಧರಾಮನ ಪರಿಯ. ॥ ೧೦ ॥

೧೧೦೦

ಅರ್ಧನಾರಿಯಾಗಿದ್ದ ಉಮಾದೇವಿ ಬೇರೆ ಮತ್ತೊಬ್ಬರೊಡನುಂಬಳೆ ?
ಗಂಡಂಗೆ ತೆರಹಿಲ್ಲದ ವಧು ಪತಿವಿರೋಧಿಯಾಗಿ,
ಬೇರೆ ಮತ್ತೊಬ್ಬರೊಡನುಂಬ ಪರಿಯೆಂತೂ ?
ಮನ ಪುನರ್ಜಾತನಾಗಿ, ಪ್ರಾಣಲಿಂಗ ಪ್ರಸಾದಿಯಾದ
ಪ್ರಸಾದಿಗ್ರಾಹಕ ಪ್ರಸಾದಿ,
ಇದಿರೊಡನೆ ಭುಂಜಿಸುವ ಪರಿಯಿನ್ನೆಂತೊ ?
ಒಂದಾಗಿ ಭೋಜನವ ಮಾಡಿದಲ್ಲಿ, ಸಜ್ಜನಸ್ಥಲ ಬೆಂದಿತ್ತು,
ಗುರುವಚನ ನೊಂದಿತ್ತು, ಜಂಗಮ ನಾಚಿತ್ತು,
ಪ್ರಸಾದ ಹೇಸಿತ್ತು, ಅವಧಾನವಡಗಿತ್ತು,
ಭಕ್ತಿ ಮೀಸಲಳಿದು ಬೀಸರವೋಯಿತ್ತು,
ಪ್ರದೀಪಿಕೆ :
ಭಕ್ತೋಽಭಕ್ತಸ್ಯ ಸಂಯೋಗಾನ್ನ ಭುಂಜಿಯಾತ್ಮವಾನ್ ಸಃ ।
ತಥಾಽಪಿ ಭುಂಜನಾದ್ದೇವಿ ಪ್ರಸಾದತ್ರಯನಾಶನಂ ॥
ಇಂತೆಂದುದಾಗಿ,
ಇದು ಕಾರಣ, ಒಂದೆನಲಮ್ಮೆ ಬೇರೆನಲಮ್ಮೆ
ನಿಮ್ಮ ಶರಣರೊಕ್ಕುದ ಕೊಂಬೆ ಕಾಣಾ, ಮಹಾಲಿಂಗ ಕಲ್ಲೇಶ್ವರಾ. ॥ ೧೧ ॥

೧೧೦೧

ಅರ್ಪಿತಂಗಳನಾರು ಮುಖದಲ್ಲಿ ಬಲ್ಲಡೆ, ಕಲ್ಪಿತಂಗಳು ಕಾಡುವವೆ ?
ಅರ್ಪಿಂತಗಳು ಆರಿಗೂ ಸಾಧ್ಯವಲ್ಲ,
ಅರ್ಪಿತ ಮೂವರ ಬೆನ್ನಲೆ ಹೋಯಿತ್ತು.
ಅರ್ಪಿತ ಅಳವಡದ ಭಂಗ ತಮಗುಳಿಯಿತ್ತು ಕಾಣಾ,
ಮಹಾಲಿಂಗ ಕಲ್ಲೇಶ್ವರಾ. ॥ ೧೨ ॥

೧೧೦೨

ಅರಳಿದ ಪುಷ್ಪ ಪರಿಮಳಿಸದಿಹುದೆ ?
ತುಂಬಿದ ಸಾಗರ ನೊರೆತೊರೆಯಾಡದಿಪ್ಪುದೆ ?
ಆಕಾಶವ ಮುಟ್ಟುವ ದೋಂಟಿಗೋಲವಿಡಿವನೆ ?

ಪರಮಪರಿಣಾಮಿ, ಕರ್ಮವನತಿಗಳೆಯದಿಹನೆ,
ಮಹಾಲಿಂಗ ಕಲ್ಲೇಶ್ವರಾ ? ॥ ೧೩ ॥

೧೧೦೩

ಅರಿವ ಬೈಚಿಟ್ಟುಕೊಂಡು ಮರೆಯಮಾನವರಂತೆ,
ಕುರುಹಿನ ಹೆಸರಲ್ಲಿ ಕರೆದಡೆ ಓ ಎನುತಿಪ್ಪವರು,
ಅವರು ನರರೆ ಅಯ್ಯಾ ?
ಕುರುಹಿಲ್ಲ ಲಿಂಗಕ್ಕೆ, ತೆರಹಿಲ್ಲ ಶರಣಂಗೆ.
ಬರಿಯ ಸಂಸಾರವ ಬಳಸಿಯೂ ಬಳಸದಂತಿಪ್ಪವರು
ಅವರು ನರರೆ ಅಲ್ಲ, ಮಹಾಲಿಂಗ ಕಲ್ಲೇಶ್ವರಾ ನಿಮ್ಮ ಶರಣರು. ॥ ೧೪ ॥

೧೧೦೪

ಅರಿವೆ ಗುರು, ಆಚಾರವೆ ಶಿಷ್ಯ, ಜ್ಞಾನವೆ ಲಿಂಗ,
ಪರಿಣಾಮವೆ ತಪ, ಸಮತೆಯೆಂಬುದೆ ಯೋಗದಾಗು ನೋಡಾ.
ಈಸುವನರಿಯದೆ ವೇಷವ ಧರಿಸಿ, ಲೋಚು ಬೋಳಾದಡೆ
ಮಹಾಲಿಂಗ ಕಲ್ಲೇಶ್ವರದೇವರು ನಗುವರು. ॥ ೧೫ ॥

೧೧೦೫

ಅಶನದಾಪ್ಯಾಯನ, ವ್ಯಸನ ಉಳ್ಳನ್ನಕ್ಕ ಆ ನಿಮ್ಮ ನೆನೆವುದು
ಹುಸಿಯಯ್ಯಾ.
ಆ ನಿಮ್ಮ ಪೂಜಿಸುವುದು ಹುಸಿಯಯ್ಯಾ.
ಎನ್ನ ಹಸಿವಿಂಗೆ ನೀನೇ ಓಗರವಾದರೆ,
ನಾ ನಿಮ್ಮ ನೆನೆವುದು ದಿಟ ಕಾಣಾ, ಮಹಾಲಿಂಗ ಕಲ್ಲೇಶ್ವರಾ. ॥ ೧೬ ॥

೧೧೦೬

ಆಗಮಾಚಾರವಿಲ್ಲೆಂದು ಭಕ್ತರನಲ್ಲೆಂಬ ಭ್ರಮಿತರು ನೀವು ಕೇಳಿರೆ !
ಮುಕ್ಕುಳಿಸಿದ ನೀರ ಮಜ್ಜನಕ್ಕೆರವುದಿದಾವಾಗಮಾಚಾರ ?
ಸರವ ಕಟ್ಟಿ, ಪತ್ರೆಯ ಹರಿದು ಹಾಕೂದಿದಾವ ಮಂತ್ರದೊಳಗು ?
ಸರ್ರನೆ ಹರಿತಂದು ಸುರ್ರನೆ ಕಲ್ಲಲಿಡುವುದಿದಾವ ಪೂಜೆ ?
ಬಹುಬುದ್ಧಿಗಲಿತು, ಬಹಳ ನುಡಿ ಶಿವಭಕ್ತರ ಕೂಡೆ ಸಲ್ಲದು,
ಶರಣೆಂದು ಶುದ್ಧರಪ್ಪುದು.
ಮಹಾಲಿಂಗ ಕಲ್ಲೇಶ್ವರನು ತನ್ನ ಭಕ್ತರ ನಿಲುವನು ತಾನೆ ಬಲ್ಲನು. ॥ ೧೭ ॥

೧೧೦೭

ಆದಿಜಂಗಮಕ್ಕೆ ಸ್ವಾಯತವಾದಲ್ಲಿ ಆಚಾರಲಿಂಗಪ್ರಾಣಿ.
ಆಚಾರಲಿಂಗ ಸ್ವಾಯತವಾದಲ್ಲಿ ಗುರುಲಿಂಗಪ್ರಾಣಿ.

ಗುರುಲಿಂಗ ಸ್ವಾಯತವಾದಲ್ಲಿ ಶಿವಲಿಂಗಪ್ರಾಣಿ.
ಶಿವಲಿಂಗ ಸ್ವಾಯತವಾದಲ್ಲಿ ಜಂಗಮಲಿಂಗಪ್ರಾಣ.
ಜಂಗಮಲಿಂಗ ಸ್ವಾಯತವಾದಲ್ಲಿ ಪ್ರಸಾದಲಿಂಗಪ್ರಾಣಿ.
ಪ್ರಸಾದಲಿಂಗ ಸ್ವಾಯತವಾದಲ್ಲಿ ಮಹಾಲಿಂಗಪ್ರಾಣಿ.
ಮಹಾಲಿಂಗ ಸ್ವಾಯತವಾದಲ್ಲಿ ಶೂನ್ಯಲಿಂಗಪ್ರಾಣಿ.
ಶ್ರುತಿ :
ಆದಿಮಧ್ಯಾಂತಶೂನ್ಯಂ ಚ ವ್ಯೋಮಾವ್ಯೋಮವಿವರ್ಜಿತಂ।
ಧ್ಯಾನಜ್ಞಾನದ್ವಯಾಧೂರ್ಧ್ವಂ ಶೂನ್ಯಲಿಂಗಮಿತಿ ಸ್ಮೃತಂ ॥
ಇಂತೆಂದುದಾಗಿ, ಶೂನ್ಯಲಿಂಗ ಸ್ವಾಯತವಾದಲ್ಲಿ,
'ಲಿಂಗೇ ಜಾತಂ ಲಿಂಗೇ ಬೀಜಂ' ಎಂದುದಾಗಿ,
ಉಪಮೆಗೆ ನಿಲುಕದ ಉಪಮಾತೀತ ನೀನೆ ಬಲ್ಲೆ,
ಮಹಾಲಿಂಗ ಕಲ್ಲೇಶ್ವರಾ. ॥ ೧೮ ॥

೧೧೦೮

ಆದಿಯಲ್ಲಿ ಪ್ರಸಾದ, ಏಕಮುಖ ಸಾಧಕರ ಮುಖದಿಂದ
ಅನಂತಮುಖವಾದುದು.
ಎಯ್ದಿ ನಿಂದಲ್ಲಿ ಮತ್ತೆ ಏಕಮುಖವಾದುದು.
ಇದರ ಭೇದವ ಬಸವಣ್ಣ ಚೆನ್ನ ಬಸವಣ್ಣನ ಸಂಪಾದನೆಯಿಂದಲಾನರಿದೆನು.
ಅರಿದಡೇನು ಎನಗಾಯತವಾಗದು. ಆಯತವಾದಡೇನು ಸನ್ನಹಿತವಾಗದು.
ಗುರುಲಿಂಗ ಜಂಗಮದನುವನರಿರದ ವಿಶ್ವಾಸ, ಜ್ಞಾನಿಗಲ್ಲದೆ ಅಳವಡದು.
ಆ ಪರಮ ವಿಶ್ವಾಸ ಸತ್ಸದಯದಿಂದಲ್ಲದೆ ಸಮನಿಸದು.
ಇದು ಕಾರಣ, ಪ್ರಸಾದದಾದಿಕುಳವ ನಾನೆತ್ತ ಬಲ್ಲೆನಯ್ಯಾ ?
ಪ್ರಸಾದವೆಂಬುದು ಅನಿಂದ್ಯ, ಅಮಲ ಅಗೋಚರ,
ನಿರಂಜನ, ನಿತ್ಯಸತ್ಯ, ಜ್ಞಾನಾನಂದ, ಪರಬ್ರಹ್ಮ, ನಿಶ್ಚಯ.
ಅದು ತನ್ನ ತಾನೆ ನುಡಿವುತ್ತಿಹುದು.
ಆ ನುಡಿಯೆ ಸುನಾದ, ಆ ಸುನಾದವೆ ಓಂಕಾರ.
ಆ ಓಂಕಾರ ತಾನೆ ಮಹಾಜ್ಞಾನ, ಪರಮಚೈತನ್ಯ, ಪ್ರಸಿದ್ಧ ಪಂಚಾಕ್ಷರ.
ಅದೆಂತೆಂದಡೆ :
'ಪ್ರಣವೋ ಹಿ ಪರಬ್ರಹ್ಮ ಪ್ರಣವೋ ಹಿ ಪರಂ ಪದಂ'
ಎಂದುದಾಗಿ,
ಆ ಪ್ರಸಿದ್ಧ ಪಂಚಾಕ್ಷರವು ತನ್ನಿಂದ ತಾನೆ ಸಕಲ ನಿಷ್ಕಲವಾಯಿತ್ತು.
ಆ ಪರಮನಿಷ್ಕಲವೇ ಶ್ರೀಗುರು, ಸಕಲವೇ ಲಿಂಗ,
ಸಕಲನಿಷ್ಕಲವೇ ಜಂಗಮ.
ಅದೆಂತೆಂದಡೆ :

'ಏಕಮೂರ್ತಿಸ್ತ್ರೀಧಾ ಭೇದಾ ಗುರುರ್ಲಿಂಗಂತು ಜಂಗಮಃ'
ಎಂದುದಾಗಿ,
ಆ ಜಂಗಮಪ್ರಸಾದವೆ ಮೂಲವಾದ ಕಾರಣ, ಆ ಜಂಗಮವನಾರಾಧಿಸಿ,
ಅನಂತ ಪ್ರಮಥಗಣಂಗಳು ಪ್ರಸಾದವ ಪಡೆದು,
ತಮ್ಮ ಸದ್ಭಾವವೆಂತಂತೆ ಸ್ವೀಕರಿಸಿದ ಕಾರಣ, ಅನಂತಮುಖವಾಯಿತ್ತು.
ಅವೆಲ್ಲವನೊಳಕೊಂಡು ತಾನೆ ನಿಂದ ಕಾರಣ ಎಂದಿನಂತಾಯಿತ್ತು.
ಇದೇ ಪ್ರಸಾದದಾದಿ ಮಧ್ಯಾಂತದರಿವು ಕಾಣಿರೆ.
ಇಂತಪ್ಪ ಪ್ರಸಾದವ ಕೊಂಬ ಪ್ರಸಾದಿಯ ನಿಲವೆಂತೆಂದಡೆ :
ವಿಶ್ವಾಸವೆ ಒಡಲಾಗಿ, ಲಿಂಗನಿಷ್ಠೆಯೆ ಇಂದ್ರಿಯಂಗಳಾಗಿ,
ಸಾವಧಾನವೆ ಕರಣಂಗಳಾಗಿ, ಶಿವಾನುಭಾವವೆ ಪ್ರಾಣವಾಗಿ,
ಮಹದಾನಂದವೆ ತಾನಾಗಿ, ಲಿಂಗಸಮರಸವೆ ಭರಿತವಾಗಿರ್ಪ
ಮಹಾಜ್ಞಾನಿಯೆ ಪ್ರಸಾದಿ.
ಆ ಪ್ರಸಾದಿಯ ಪ್ರಸಾದವೆ ಎನ್ನ ಲಿಂಗಕ್ಕೆ ಕಳೆಯಾಯಿತ್ತು.
ಅದೆ ಎನಗೆ ತಿಳಿವಾಯಿತ್ತು, ಮಹಾಲಿಂಗ ಕಲ್ಲೇಶ್ವರಾ. ॥ ೧೯ ॥

೧೧೦೯

ಆರಡಿ ತಾನಾಗಿಹ ಆಶ್ರಯವ ಮಾಡುವಲ್ಲಿ ಬೇರೆ ಬಾಯಿಲ್ಲ.
ಕುಸುಮದ ಕಂಪಿತವನುಂಬುದಕ್ಕೆ ಬೇರೆ ಬಾಯಿಲ್ಲ.
ಇಂತಿದು ಬಿಡುಮುಡಿಯ ಭೇದ.
ಕರ್ತು ಭೃತ್ಯನ ವಶಗತವಾಗಿರ್ದ ತ್ರಿವಿಧಮಲವ ಮುಟ್ಟುವಲ್ಲಿ,
ತನಗೆ ಬಿಟ್ಟು ಬಹ ಸಮರ್ಪಣೆಯನರಿತು,ಅವ ತೊಟ್ಟಿರ್ದುದ ತಾ
ತೊಡದೆ, ಅವ ಬಿಟ್ಟುದ ತಾ ಮುಟ್ಟದೆ,
ಅವ ಬಿಟ್ಟುದನರಿತು, ಅವಗೇನು ಪಾಶವ ಕಟ್ಟದೆ.
ತೊಟ್ಟ ಬಿಟ್ಟ ಹಣ್ಣಿನಂತೆ, ನಿಜನಿಶ್ಚಯವಾದ ಭಕ್ತಿಮೂರ್ತಿ.
ಮಹಾಮಹಿಮ ಕಲ್ಲೇಶ್ವರಲಿಂಗ ತಾನಾದ ಶರಣ. ॥ ೨೦ ॥

೧೧೧೦

ಆವಂಗದಲ್ಲಿದ್ದಡೇನು, ಒಂದು ಸುಸಂಗ ಸುಶಬ್ದವ
ನಿಮಿಷವಿಂಬಿಟ್ಟುಕೊಂಡು,
ಆ ಘಳಿಗೆ ಅಳಿದಡೇನು, ಉಳಿದಡೇನು, ಸುಸಂಗ ಸುಶಬ್ದವೇದಿಯೆ ?
ಲಿಂಗದಲ್ಲಿಯೇ ನಿರುತ ಭರಿತ ಕಾಣಿರೆ, ಶರಣ.
ಮನದಲ್ಲಿ ಚಲಾಚಲಿತವಿಲ್ಲದೆ ಲಿಂಗವನಿಂಬುಗೊಂಡ ಮಹಂತಂಗೆ
ಬೆದರಿ ಓಡವೆ ಕರ್ಮಂಗಳು ? ಉದುರಿಹೋಗವೆ ಭವಪಾಶಂಗಳು ?
ಕರ್ಪುರದುರಿಯ ಸಂಗದಂತೆ, ಗುರುಪಾದ ಸೋಂಕು.
ಜ್ಞಾನವಾದ ಬಳಿಕ ಜಡಕರ್ಮವಿಹುದೆ, ಮಹಾಲಿಂಗ ಕಲ್ಲೇಶ್ವರಾ ? ॥ ೨೧ ॥

೧೧೧೧

ಆವ ನೇಮವನು ಮಾಡ, ಕರ್ಮವನು ಹೊದ್ದ.
ಆವ ಶೀಲವ ಹಿಡಿಯ, ಆವ ತಪಕ್ಕೂ ನಿಲ್ಲ.
ಆವ ಜಂಜಡಕ್ಕೂ ಹಾರ, ಕೇವಲಾತ್ಮಕನು.
ಸಾವಯ ನಿರವಯವೆನಿಸಿದ ಸಹಜವು ತಾನೆ,
ಮಹಾಲಿಂಗ ಕಲ್ಲೇಶ್ವರಾ, ನಿಮ್ಮ ಶರಣ. || ೨೨ ||

೧೧೧೨

ಇಕ್ಕದೆ ಕೋಗಿಲೆ, ಕಾಗೆಯ ತತ್ತಿಯಲ್ಲಿ,
ಸಾಕದೆ ತನ್ನ ಶಿಶುವ ಮನಬುದ್ಧಿಯಿಂದ.
ಇಕ್ಕಿದಡೇನೊ, ದೇವಾ ಪಿಂಡವ ತಂದು
ಮಾನವ ಯೋನಿಯಲ್ಲಿ ಹುಟ್ಟಿದಡೇನೊ ?
ಲಿಂಗಶರಣನು ನರರ ಯೋನಿಯಲ್ಲಿ ಹುಟ್ಟಿದಾತನೇ ಅಲ್ಲ.
ಬಾರದೆ ಪಕ್ಷಿಯ ಬಸುರಲ್ಲಿ ಅಶ್ವತ್ಥವೃಕ್ಷವು ?
ಇದು ಕಾರಣ, ಮಹಾಲಿಂಗ ಕಲ್ಲೇಶ್ವರಾ ಕಾಗೆಗೆ ಪಿಕ ಶಿಶುವೆ ? || ೨೩ ||

೧೧೧೩

ಉದಕದ ತಂಪವ ತಾವರೆಯಲ್ಲದೆ ಹೊರಗಣ ಕೊರಡೆತ್ತಬಲ್ಲುದೊ ?
ಹೂವಿನ ಪರಿಮಳವ ತುಂಬಿಯಲ್ಲದೆ ಹೊರಗಣ ನೊಣನೆತ್ತಬಲ್ಲುದೊ ?
ಕ್ಷೀರದ ರುಚಿಯ ಹಂಸೆಯಲ್ಲದೆ ಕೆಲದಲ್ಲಿ ಬಕನೆತ್ತಬಲ್ಲುದೊ ?
ಮಾವಿನ ಹಣ್ಣಿನ ರುಚಿಯನರಗಿಳಿಗಳು ಬಲ್ಲವಲ್ಲದೆ
ಹೊರಗಣ ಕೋಳಿಗಳೆತ್ತ ಬಲ್ಲವೊ ?
ಊಟದ ರುಚಿಯನು ನಾಲಗೆಯಲ್ಲದೆ ಕಲಸುವ ಕೈ ತಾನೆತ್ತ ಬಲ್ಲುದೊ ?
ಕೂಟದ ಸುಖವನು ಯೌವನೆಯಲ್ಲದೆ ಬಾಲೆ ತಾನೆತ್ತ ಬಲ್ಲಳೊ ?
ಚಂದ್ರಸೂರ್ಯರಂತರಾಂತರವ ಖೇಚರರು ಬಲ್ಲರಲ್ಲದೆ
ಗಗನದೊಳಗಾಡುವ ಹದ್ದುಗಳು ತಾವೆತ್ತ ಬಲ್ಲವೊ ?
ಎಲೆ ಮಹಾಲಿಂಗ ಕಲ್ಲೇಶ್ವರಯ್ಯಾ,
ನಿಮ್ಮ ನಿತ್ಯನಿಜೈಕ್ಯರ ನಿಲುವನು ಮಹಾನುಭಾವಿಗಳು ಬಲ್ಲರಲ್ಲದೆ
ಲೋಕದ ಜಡಜೀವಿಗಳೆನಿಸುವ ಮಾನವರೆತ್ತ ಬಲ್ಲರೊ ? || ೨೪ ||

೧೧೧೪

ಉಪನಿಷದ್ವಾಕ್ಯವೆನಬಹುದಲ್ಲದೆ, ಆ ಪರಬ್ರಹ್ಮವೆನಬಾರದು.
ಸಮತೆ ಸಮಾಧಾನವೆಂಬುದು ಯೋಗದಾಗು ನೋಡಾ.
ಸಮತೆ ಸಮಾಧಾನ ನೆಲೆಗೊಳ್ಳದಿರ್ದಡೆ, ಆ ಯೋಗ ಅಜ್ಞಾನದಾಗು.
ಅಷ್ಟಶಿಲೆ ಸಹಸ್ರ ಋಷಿಯರು ಸಮತೆ ಸಮಾಧಾನ ನೆಲೆಗೊಳ್ಳದೆ,

ನಾನಾ ಯೋನಿಯಲ್ಲಿ ಬಂದರು.
ಮಹಾಲಿಂಗ ಕಲ್ಲೇಶ್ವರದೇವಾ,
ಸಮತೆ ನೆಲೆಗೊಂಡು, ಸಮಾಧಾನ ಸಹಜವಾದುದೆ ಮುಕ್ತಿ ಕ್ಷೇತ್ರ. ॥ ೨೫ ॥

೧೧೧೫

ಉರವೆ ಕುರುಕ್ಷೇತ್ರ, ಶಿರವೆ ಶ್ರೀಪರ್ವತ,
ಲಲಾಟವೆ ಕೇದಾರ, ಭ್ರೂನಾಸಿಕದ ಮಧ್ಯವೆ ವಾರಣಾಸಿ ನೋಡಾ.
ಹೃದಯವೆ ಪ್ರಯಾಗ, ಸರ್ವಾಂಗವೆ ಸಕಲತೀರ್ಥಂಗಳಾಗಿ,
ಮಹಾಲಿಂಗ ಕಲ್ಲೇಶ್ವರನ ಶರಣರ ಸುಳುಹು ಜಗತ್ಪಾವನ. ॥ ೨೬ ॥

೧೧೧೬

ಎಡದ ಕೈಯಲ್ಲಿ ನಿಗಳ ಕಂಕಣವನಿಕ್ಕಿ,
ಬಲದ ಕೈಯ ಕಡಿದುಕೊಂಡಡೆ, ನೋವಿನ್ನಾವುದು ಹೇಳಾ.
ಒಡಲೊಂದೆ ಪ್ರಾಣವೊಂದೆಯಾಗಿ, ನೋವಿನ್ನಾರದು ಹೇಳಾ.
ಲಿಂಗ ಜಂಗಮುವನಾರಾಧಿಸಿ, ನಿಂದೆಗೆ ತಂದಡೆ ನೊಂದೆನಯ್ಯಾ,
ಮಹಾಲಿಂಗ ಕಲ್ಲೇಶ್ವರಾ. ॥ ೨೭ ॥

೧೧೧೭

ಎತ್ತೆತ್ತ ನೋಡಿದಡತ್ತತ್ತ ನಿಮ್ಮನೆ ಕಾಬೆ.
ಎದ್ದು ನೋಡಿ ನಿಮ್ಮನೆ ಕಾಬೆ, ನಿದ್ರೆಗೆಯ್ದು ನಿಮ್ಮನೆ ಕಾಬೆ.
ಅಹೋರಾತ್ರಿಯಲ್ಲಿ ನಿಮ್ಮ ಧ್ಯಾನದಲ್ಲಿರಿಸು, ಮಹಾಲಿಂಗ ಕಲ್ಲೇಶ್ವರಾ. ॥೨೮ ॥

೧೧೧೮

ಎನ್ನ ಕಕ್ಷೆಯಲ್ಲಿ ಸ್ವಾಯತವಾದನಯ್ಯಾ ಶಂಕರದಾಸಿಮಯ್ಯನು.
ಎನ್ನ ಕರಸ್ಥಲದಲ್ಲಿ ಸ್ವಾಯತವಾದನಯ್ಯಾ ಉರಿಲಿಂಗಪೆದ್ದಯ್ಯನು.
ಎನ್ನ ಉರಸೆಜ್ಜೆಯಲ್ಲಿ ಸ್ವಾಯತವಾದನಯ್ಯಾ ಘಟ್ಟಿವಾಳ ಮುದ್ದಯ್ಯನು.
ಎನ್ನ ಅಮಳೋಕ್ಯದಲ್ಲಿ ಸ್ವಾಯತವಾದನಯ್ಯಾ ಅಜಗಣ್ಣಯ್ಯನು.
ಎನ್ನ ಮುಖಸೆಜ್ಜೆಯಲ್ಲಿಸ್ವಾಯತವಾದನಯ್ಯಾ ನಿಜಗುಣದೇವರು.
ಎನ್ನ ಶಿಖೆಯಲ್ಲಿ ಸ್ವಾಯತವಾದನಯ್ಯಾ ಅನಿಮಿಷದೇವರು.
ಎನ್ನ ಘ್ರಾಣದಲ್ಲಿ ಸ್ವಾಯತವಾದನಯ್ಯಾ ಏಕೋರಾಮಿತಂದೆಗಳು.
ಎನ್ನ ಜಿಹ್ವೆಯಲ್ಲಿ ಸ್ವಾಯತವಾದನಯ್ಯಾ ಪಂಡಿತಾರಾಧ್ಯರು.
ಎನ್ನ ನೇತ್ರದಲ್ಲಿ ಸ್ವಾಯತವಾದನಯ್ಯಾ ರೇವಣಸಿದ್ಧೇಶ್ವರದೇವರು.
ಎನ್ನ ತ್ವಕ್ಕಿನಲ್ಲಿ ಸ್ವಾಯತವಾದನಯ್ಯಾ ಸಿದ್ಧರಾಮೇಶ್ವರದೇರು.
ಎನ್ನ ಶ್ರೋತ್ರದಲ್ಲಿ ಸ್ವಾಯತವಾದನಯ್ಯಾ ಮರುಳಸಿದ್ಧೇಶ್ವರದೇವರು.
ಎನ್ನ ಹೃದಯದಲ್ಲಿ ಸ್ವಾಯತವಾದನಯ್ಯಾ ಪ್ರಭುದೇವರು.
ಎನ್ನ ಭ್ರೂಮಧ್ಯದಲ್ಲಿ ಸ್ವಾಯತವಾದನಯ್ಯಾ ಚೆನ್ನಬಸವಣ್ಣನು.

ಎನ್ನ ಬ್ರಹ್ಮರಂಧ್ರದಲ್ಲಿ ಸ್ವಾಯತವಾದನಯ್ಯಾ ಸಂಗನಬಸವಣ್ಣನು.
ಎನ್ನ ಉತ್ತಮಾಂಗದಲ್ಲಿ ಸ್ವಾಯತವಾದನಯ್ಯಾ ಮಡಿವಾಳಯ್ಯನು.
ಎನ್ನ ಲಲಾಟದಲ್ಲಿ ಸ್ವಾಯತವಾದನಯ್ಯಾ ಸೊಡ್ಡಳ ಬಾಚರಸರು.
ಎನ್ನ ಪಶ್ಚಿಮದಲ್ಲಿ ಸ್ವಾಯತವಾದನಯ್ಯಾ ಹಡಪದಪ್ಪಣ್ಣನು.
ಎನ್ನ ಕಂಠದಲ್ಲಿ ಸ್ವಾಯತವಾದನಯ್ಯಾ ಕಿನ್ನರ ಬ್ರಹ್ಮಯ್ಯನು.
ಎನ್ನ ಸರ್ವಾಂಗದಲ್ಲಿ ಸ್ವಾಯತವಾದರಯ್ಯಾ ಗಣಂಗಳು.
ಮಹಾಲಿಂಗ ಕಲ್ಲೇಶ್ವರಾ, ನಿಮ್ಮ ಶರಣರ ಶ್ರೀಪಾದಕ್ಕೆ
ನಮೋ ನಮೋ ಎನುತಿರ್ದೆನು. ॥ ೨೯ ॥

೧೧೧೯

ಎನ್ನ ಗುರುವೆನ್ನ ಪ್ರಾಣಲಿಂಗವ
ಕರುಣದಿಂದನುಗ್ರಹವ ಮಾಡಿದ ಪರಿ ಎಂತೆಂದಡೆ :
ಪಚ್ಚೆಯ ನೆಲಗಟ್ಟಿನ ಮೇಲೆ ಚೌಮೂಲೆಯ ಸರಿಸದಲ್ಲಿ,
ಷೋಡಶ ಕಂಬಂಗಳ ಮಂಟಪವ ಮಾಡಿ,
ಮಧ್ಯದಲ್ಲಿ ಕುಳ್ಳಿರ್ದು ಉಪದೇಶವ ಪಡೆಯಲೆಂದು ಹೋದಡೆ,
ಎನ್ನಂತರಂಗದಲ್ಲಿ ಚತುಷ್ಕೋಣೆಯ ಚತುರ್ದಳದ ನೆಲಗಟ್ಟಿನ ಮೇಲೆ
ಷೋಡಶಕಲೆಗಳೆಂಬ ಹದಿನಾರುಕಂಬವ ನೆಟ್ಟು,
ಧ್ಯಾನ ವಿಶ್ರಾಮದ ಮೇಲೆ ಆದಿಮಧ್ಯತ್ರಿಕೂಟವೆಂಬ ಮಂಟಪವನಿಕ್ಕಿ,
ಆ ಮಂಟಪಸ್ಥಾನದಲ್ಲಿ ಎನ್ನ ಗುರು ಕುಳ್ಳಿರ್ದು ಅನುಗ್ರಹವ ಮಾಡಿದಡೆ,
ನುಡಿಯಡಗಿದ, ಒಡಲಳಿದ ಸ್ವಯಲಿಂಗಸಂಬಂಧವಾದ ಭೇದವ
ಮಹಾಲಿಂಗಕಲ್ಲೇಶ್ವರಾ, ನಿಮ್ಮ ಶರಣ ಬಲ್ಲ ॥ ೩೦ ॥

೧೧೨೦

ಎಲ್ಲವನರಿದು ಇಲ್ಲವೆ ತಾನಾದ, ಅಲ್ಲಹುದೆಂಬುದಕ್ಕೆ ಸಹಜನಾದ.
ಆಕಾರವ ನಿರಾಕರಿಸ,ನಿರಾಕಾರವ ಪತಿಕರಿಸ,
ಭಾವದಾಕಾರವನೇನೆಂದರಿಯ,
ಮುಂದೆ ಬಲ್ಲೆವೆಂಬನುಭಾವಿಗಳ ಮಾತುಗುಪ್ತ
ನಾರೂದ ಕಂಡು, ಮಹಾಲಿಂಗ ಕಲ್ಲೇಶ್ವರಾ,
ನಿಮ್ಮ ಶರಣ ಶಬ್ದಮುಗ್ಧವಾದ. ॥ ೩೧ ॥

೧೧೨೧

'ಏಕ ಏವ ರುದ್ರ ನ ದ್ವಿತೀಯಃ'ನೆಂಬ ಶ್ರುತಿ, ಲಿಂಗಭಕ್ತನೆ ದೇವನೆಂದಿತ್ತು.
'ಅಪಿ ವಾಯಶ್ಚಂಡಾಲೊ'ಯೆಂಬ ಶ್ರುತಿ, ಲಿಂಗಭಕ್ತನೆ ಕುಲಜನೆಂದಿತ್ತು.
'ಘ್ರಾತಂ ಜಿಘ್ನಂತಿ'ಯೆಂಬ ಶ್ರುತಿ, ಲಿಂಗಪ್ರಸಾದವೆ ಪರವೆಂದಿತ್ತು.
ಇದನೋದಿ ಬರುದೊರೆವೋದಿರಿ,

ಶ್ರುತಿಬಾಹ್ಯರಾದಿರಿ, ಶಿವಭಕ್ತಿಯಿಲ್ಲದೆ ಹೋದಿರಿ.
ಗುರುಲಿಂಗಜಂಗಮ ಪಾದೋದಕ ಪ್ರಸಾದವ
ಧರಿಸುವನೆ, ಭಜಿಸುವನೆ, ಕುಲಜನೆಂದು ಶ್ರುತಿ ಸಾರುತ್ತಿದೆ.
ಇದುಕಾರಣ,
ಮಹಾಲಿಂಗ ಕಲ್ಲೇಶ್ವರಾ, ನಿಮ್ಮ ಶರಣಂಗೆ ಮಿಗೆ ಮಿಗೆ ಶರಣೆಂಬೆ. ॥ ೩೨ ॥

೧೧೨೨

ಒಂದಹದು ಒಂದನಲ್ಲಾಯೆಂಬುದು ಭಕ್ತಿಯ ಸತ್ಯಕ್ಕೆ ಅದೇ ಭಂಗ.
ಮಿಥ್ಯತಥ್ಯವನಳಿದವಂಗೆ, ಮತ್ತೊಂದರಲ್ಲಿ ಹೊತ್ತು ಹೋರುವುದೆ ಸತ್ಯವಲ್ಲ.
ಅದು ಮಹಾಲಿಂಗ ಕಲ್ಲೇಶ್ವರಲಿಂಗಕ್ಕೆ ದೂರವಪ್ಪುದು. ॥ ೩೩ ॥

೧೧೨೩

ಒಲಿದೊಲಿಸಿಕೊಳ್ಳಬೇಕು, ಒಲಿದಲ್ಲದಿಲ್ಲ,
ಹಲವು ಕೊಂಬಿಂಗೆ ಹಾರದಿರು, ಮರುಳೆ.
ಅಟ್ಟಿ ನೋಡುವ, ಮುಟ್ಟಿ ನೋಡುವ, ತಟ್ಟಿ ನೋಡುವ, ಒತ್ತಿ ನೋಡುವ.
ಅಟ್ಟಿದಡೆ ತಟ್ಟಿದಡೆ, ನಿಷ್ಠೆಯಂ ಬಿಡದಿರ್ದಡೆ,
ತನ್ನನೀವ, ಮಹಾಲಿಂಗ ಕಲ್ಲೇಶ್ವರ. ॥ ೩೪ ॥

೧೧೨೪

ಒಳಗೆ ಶೋಧಿಸಿ, ಹೊರಗಳವಡಿಸಿ,
ಭಾವದಿಂ ಗುಡಿ ತೋರಣವ ಕಟ್ಟುವೆನಯ್ಯಾ.
ಎನ್ನ ಲಿಂಗವೆ ಬಾರಯ್ಯಾ, ಎನ್ನ ದೇವ ಬಾರಯ್ಯಾ.
ಎನ್ನ ಅಂತರಂಗದ ಪರಂಜ್ಯೋತಿರ್ಲಿಂಗವ ಇದಿರುಗೊಂಬೆನು ಬಾರಯ್ಯಾ.
ಮಹಾಲಿಂಗ ಕಲ್ಲೇಶ್ವರಾ, ನಿಮ್ಮ ಧರ್ಮವು ಬಾರಯ್ಯಾ. ॥ ೩೫ ॥

೧೧೨೫

ಕಂಗಳು ತುಂಬಿ ನಿಮ್ಮುವ ನೋಡುತ್ತ ನೋಡುತ್ತಲಯ್ಯಾ,
ಕಿವಿಗಳು ತುಂಬಿ ನಿಮ್ಮುವ ಕೇಳುತ್ತ [ಕೇಳುತ್ತ]ಲಯ್ಯಾ,
ಮನ ತುಂಬಿ ನಿಮ್ಮುವ ನೆನೆವುತ್ತ ನೆನೆವುತ್ತಲಯ್ಯಾ,
ಮಹಾಲಿಂಗ ಕಲ್ಲೇಶ್ವರದೇವರಲ್ಲಿ ಸುಖಿಯಾಗಿರ್ದೆನಯ್ಯಾ. ॥ ೩೬ ॥

೧೧೨೬

ಕರ್ತು ಭೃತ್ಯನ ವಾಸಕ್ಕೆಯ್ದಿದಲ್ಲಿ,
ಆತನ ಭಕ್ತಿಯನರಿತು, ತಾ ಒಡಗೂಡಿದಲ್ಲಿ,
ಆತ ಕೊಟ್ಟುದ ತಾ ಮುಟ್ಟದೆ,
ಆತನಲ್ಲಿ ದುರ್ವಾಕ್ಯ ದುಶ್ಚರಿತ್ರ ಪಗುಡಿ ಪರಿಹಾಸಕಂಗಳಂ ಬೀರದೆ,

ಆತನ ಚಿತ್ತನೋವಂತೆ ಮತ್ತಾವ ಬಂಧನದ ಕಟ್ಟನಿಕ್ಕದೆ,
ಕೃತ್ಯವೆಮಗೊಂದ ಮಾಡೆಂದು ನೇಮವ ಲಕ್ಷಿಸದೆ,
ಆತ ತನ್ನ ತಾನರಿತು ಮಾಡಿದಲ್ಲಿ,
ಅದು ತನಗೆ ಮುನ್ನಿನ ಸೋಂಕೆಂಬುದನರಿತು,
ಗನ್ನಗದುಕಿನಿಂ ಬಿನ್ನಾಣದಿಂದೊಂದುವ ಮುಟ್ಟದೆ,
ಆ ಪ್ರಸನ್ನವಪ್ಪ ವಸ್ತು, ಮಹಾಮಹಿಮ ಕಲ್ಲೇಶ್ವರಲಿಂಗ
ತಾನಾದ ಶರಣ. || ೩೭ ||

೧೧೨೭

ಕರ್ಪುರದ ಕಳ್ಳನ ಹುಲ್ಲಿನಲ್ಲಿ ಕಟ್ಟಿಸಲು,
ಅಗ್ನಿಯೆಂಬ ಹಿತವ ಬಂದು ಬಿಡಿಸಲಾಗಿ,
ಪಾಶ ಬೆಂದು ಕಳ್ಳ ತನ್ನಲ್ಲಿಯೆ ಅಡಗಿದಂತೆ,
ಶರಣಂಗೆ ಬಯಲಪಾಶ ಬಂದು ಕಟ್ಟಿರಲು,
ಬಯಲಲಿಂಗ ಬಂದು ಬಿಡಿಸಲು, ಬಯಲು ಬಯಲು ಏಕವಾಯಿತ್ತು.
ಮಹಾಲಿಂಗ ಕಲ್ಲೇಶ್ವರನೆಂಬ ಸಂಪತ್ತುಸದಾಶೂನ್ಯವಾಯಿತ್ತು. || ೩೮ ||

೧೧೨೮

ಕಲ್ಲೊಳಗಣ ಕಿಚ್ಚು ಉರಿಯದ ಪರಿಯಂತೆ,
ಬೀಜದೊಳಗಣ ವೃಕ್ಷ ಉಲಿಯದ ಪರಿಯಂತೆ,
ಪುಷ್ಪದ ಕಂಪು ನನೆಯಲ್ಲಿ ತೋರದಂತೆ,
ಚಂದ್ರಕಾಂತದ ಉದಕ ಒಸರದ ಪರಿಯಂತೆ,
ಮಹಾಲಿಂಗ ಕಲ್ಲೇಶ್ವರನಲ್ಲಿ ಲಿಂಗೈಕ್ಯ.
ಇಹವೆನ್ನ ಪರವೆನ್ನ ಸಹಜವೆನ್ನ ತಾನೆನ್ನ. || ೩೯ ||

೧೧೨೯

ಕಾಲುನಡೆಯ ಪಶುಗಳೈದೆ ಕರೆವ ಹಯನಪ್ಪಡೆ,
ಅಳೆಯ ಹಡೆಯದ ಲೋಕವ್ಯೆ ಹೊಗಲೇಕೆ ?
ಕೈದುವ ಹಿಡಿದವರೆಲ್ಲಾ ನೆಟ್ಟನೆ ಕಲಿಗಳಾದರೆ,
ಮಾರ್ಬಲಕಂಜಿ ತಿರುಗಲೇಕೆ ?
ಇಷ್ಟಲಿಂಗವೆಂದು ಕಟ್ಟಿಕೊಂಡವರೆಲ್ಲಾ ನೆಟ್ಟನೆ ಭಕ್ತರಾದಡೆ
ಮುಟ್ಟಲಿಲ್ಲ, ದುರಿತ ದುಃಕರ್ಮ ಹುಟ್ಟಲಿಲ್ಲ ಭವದಲ್ಲಿ.
ಆದಿತ್ಯ ಪುರಾಣೇ :
ಪೂಜಕಾ ಬಹವಸ್ಸಂತಿ ಭಕ್ತಾಶ್ಚತಸಹಸ್ರಶಃ ।
ತತ್ರ ಪ್ರಸಾದಪಾತ್ರಸ್ತು ದ್ವೌ ತ್ರಯೋ ಚತುಃ ಪಂಚವ್ಯೆ ॥
ಇಂತೆಂದುದಾಗಿ,

ಪೂಜಕರು ಹಲಬರಹರು, ಭಕ್ತರು ಲಕ್ಷಸಂಖ್ಯೆಗಳು.
ಅಲ್ಲಿ ಪ್ರಸಾದ ಪಾತ್ರವಾಯಿತ್ತಾದಡೆ,
ಇಬ್ಬರು ಮೂವರಲ್ಲದೆ ಐವರರಿವರಿಲ್ಲ, [ಮಹಾಲಿಂಗ]ಕಲ್ಲೇಶ್ವರಾ. ॥ ೪೦ ॥

೧೧೩೦

ಕುಲಹೀನ ಶಿಷ್ಯಂಗೆ ಅನುಗ್ರಹವ ಕೊಟ್ಟು,
ತನ್ನ ಪ್ರಾಣಲಿಂಗವ ನಿಕ್ಷೇಪಿಸಿ, ಕರ್ಣಮಂತ್ರವ ಹೇಳಿ,
ಆ ಶ್ರೀಗುರು ಬಂದು, ಆ ಶಿಷ್ಯನ ಮನೆಯ ಹೊಗಲೊಲ್ಲದೆ,
ಅಕ್ಕಿ ತುಪ್ಪವ ನೀ [ಡಿ]ಸಿಕೊಂಡುಂಬವನ ಕೇಡಿಂಗಿನ್ನೇವೆನಯ್ಯಾ?
ತನ್ನ ಪ್ರಾಣಲಿಂಗವನವರಿಗೆ ಕೊಟ್ಟು,
ತಾ ಹೋಗೆನೆಂಬ ವ್ರತಗೇಡಿಗಿನ್ನೇವೆನಯ್ಯಾ ?
ಅವನ ಧನಕ್ಕೆ ತಂದೆಯಾದನಲ್ಲದೆ, ಅವನ ಕುಲಕ್ಕೆ ತಂದೆಯಲ್ಲ,
ಇದು ಕಾರಣ, ಮಹಾಲಿಂಗ ಕಲ್ಲೇಶ್ವರಾ,
ಲಿಂಗವ ಮಾರಿಕೊಂಡುಂಬ ಭಂಗಗಾರರು ಕೆಟ್ಟ ಕೇಡನೇನೆಂಬೆನಯ್ಯಾ. ॥ ೪೧ ॥

೧೧೩೧

ಕೂತಾಗ ಭಕ್ತ ಮುನಿದಾಗ ಮಾನವನಾದ ಪಾತಕರ ನುಡಿಯ ಕೇಳಲಾಗದು.
ಅಂಥ ಪಾತಕರ ಉಲುಹೆಂಬುದು, ಉಲಿವ ಕಬ್ಬಕ್ಕಿಯ ಉಲುಹಿನಂತೆ.
ಅದನು ಮಹಂತರು ಕೇಳಲಾಗದು.
ಅದಕ್ಕದು ಸ್ವಭಾವವೆಂಬುದ ಬಲ್ಲರಾಗಿ,
ಮತಿಗೆಟ್ಟು ನುಡಿವ ಮತ್ತರಹ ಮರ್ತ್ಯರ ನುಡಿಯ ಗಡಣೆ,
ಭ್ರಾಂತಿವಿಡಿದ ಭ್ರಮಿತರಿಗೆ ಯೋಗ್ಯವಲ್ಲದೆ,
ಸಜ್ಜನ ಸಾತ್ವಿಕ ಜ್ಞಾನವೇದ್ಯರಹ ಸದ್ಭಕ್ತರು ಮೆಚ್ಚುವರೆ ?
ಅಸತ್ಯವೆ ರೂಪಾಗಿಪ್ಪ ಶೂನ್ಯವಾದಿಗಳೆತ್ತಲೂ ಸಲ್ಲರಾಗಿ
ಅವರುಗಳು ಪ್ರೇತಗಾಮಿಗಳು.
ಅಮೇಧ್ಯ ಕೂಪದಲ್ಲಿ ಉತ್ಪನ್ನವಾದ ಕ್ರಿಮಿಗಳಂತಪ್ಪ ಜೀವಿಗಳು
ತಾವಾರೆಂದರಿಯರು.
ಇಂದು ನಿಂದ ಗತಿಯ ತಿಳಿಯರು, ಮುಂದಣ ಗತಿಯನೆಂತೂ ಎಯ್ದಲರಿಯರು.
ಆತ್ಮನು ಶ್ವೇತ ಪೀತ ಹರಿತ ಕಪೋತ ಮಾಂಡಿಷ್ಟ ಕೃಷ್ಣವೆಂಬ
ಷಡ್ವರ್ಣದೊಳಗಾವ ವರ್ಣವೆಂದೂ ವಿಚಾರಿಸಲರಿಯರಾಗಿ,
ಭ್ರಾಂತುವಿಡಿದು ಆತ್ಮೋಹಮೆಂದು ಅಹಂಕರಿಸಿ,
ಅಜ್ಞಾನ ತಲೆಗೇರಿ, ಮತ್ತತನದಿಂದಜಾತ ಶಿವಶರಣರ ದೂಷಿಸಿ,
ಮಿಥ್ಯವಾದದಿಂದ ನುಡಿವರು ತಾವೆ ಘನವೆಂದು,
ಬಯಲಬೊಮ್ಮದ ಹಮ್ಮಿನ ನೆಮ್ಮುಗೆವಿಡಿದು,
ಸಹಜ ಸಮಾಧಾನ ಶಿವೈಕ್ಯರ ಹಳಿದು ನುಡಿವರು.

ಆದಿಯಲ್ಲಿ ಅಹಂ ಬ್ರಹ್ಮವೆಂದು ಬ್ರಹ್ಮನೆ ವಿಧಿಯಾದನು.
ಹರಗಣಂಗಳೊಳಗೆ ಅಗ್ರಗಣ್ಯ ಗಣೇಶ್ವರನಹ
ನಂದಿಕೇಶ್ವರನ ಉದಾಸೀನಂ ಮಾಡಿ,
ಆ ನಂದಿಕೇಶ್ವರನ ಶಾಪದಿಂದ ಸನತ್ಕುಮಾರನೆ ವಿಧಿಯಾದನು.
ಕರ್ಮವೆ ಅಧಿಕವೆಂದು ಕೆಮ್ಮನೆ ಕೆಟ್ಟ ಹೆಮ್ಮೆಯಲ್ಲಿ,
ದ್ವಿಜ ಮುನಿಗಳ ನೆರಹಿ ಕ್ರತುವ ಮಾಡಿ, ಆ ದೇವ ಮುನಿಗಳೊಳಗಾಗಿ,
ದಕ್ಷಂಗೆ ಬಂದ ಅಪಾಯವನರಿದು ಮರೆದರಲ್ಲಾ.
ಕುಬೇರನಿಂದಧಿಕವಹ ಧನ, ದೇವೇಂದ್ರನಿಂದಧಿಕವಹ ಐಶ್ವರ್ಯ,
ಸೂರ್ಯನಿಂದಧಿಕವಹ ತೇಜಸ್ಸು,
ಗಜ ಪಟೌಳಿ ಸೀತಾಂಗನೆಗತ್ಯಧಿಕವಹ
ರೂಪು ಲಾವಣ್ಯ ಸೌಂದರ್ಯವನುಳ್ಳ ಸ್ತ್ರೀಯರುಂಟು.
ಕೋಟಿವಿದ್ಯದಲ್ಲಿ ನೋಡುವಡೆ ಸಹಸ್ರವೇದಿಯೆನಿಸುವ ರಾವಣನು
ಪಾರದ್ವಾರಕಿಚ್ಛೈಸಿ ಪರವಧುವಿನ ದೆಸೆಯಿಂದಲೇನಾದನರಿಯರೆ !
ತನು ಕೊಬ್ಬಿನ ಮನ, ಮನ ವಿಕಾರದ ಇಂದ್ರಿಯ ವಿಷಯಂಗಳ
ಅಂದವಿಡಿದ ವಿಕಳತೆಯಲ್ಲಿ ನುಡಿವ ಸಟೆಗರ ಕಾಯಲರಿವವೆ ?
ನಿಮ್ಮಯ ಮನ ಸನ್ನಿಧಿಯಲ್ಲಿ, ಇಂತಿವೆಲ್ಲವ ಕಂಡೂ ಕೇಳಿಯೂ ಅರಿಯರು.
ಹರನ ಸದ್ಭಕ್ತರ ಕೂಡೆ ವಿರೋಧಿಸಿ, ನರಕವನು ಮುದೆ ಅನುಭವಿಸಿ,
ಇಂದು ಅಪಖ್ಯಾತಿಗೊಳಗಾಗಿ ಕೆಟ್ಟುಹೋಗಬೇಡ.
ಅತ್ಯಧಿಕ ಶಿವನೆ ಸತ್ಸದಾಚಾರವಿಡಿದು,
ನಿತ್ಯಪದವ ಪಡೆಯಿರೆ ಮರುಳ ಪ್ರಾಣಿಗಳಿರಾ !
ಕೆಡಬೇಡ ಕೆಡಬೇಡ, ಕೇಳಿರೆ ಘಾಸಿ ಮಾಡುವನು ನಿಮ್ಮ ಸೋಜಿಗ.
ಸದಾಶಿವ ಬಲ್ಲಿದನೆನ್ನ ದೇವ ಮಹಾಲಿಂಗ ಕಲ್ಲೇಶ್ವರನು
ತನ್ನ ಭಕ್ತರ ಕೆಡೆನುಡಿದವರ ಬಿಡದೆ ದಂಡಿಸುವನು. ॥ ೪೨ ॥

೧೧೩೨

ಕೂಪರ ಕೊಲುವಡೆ ಮಸೆದ ಕೂರಲಗು ಮತ್ತೇಕೆ ?
ಒಲ್ಲೆನೆಂದಡೆ ಸಾಲದೆ, ಕೊಲೆ ಮರಳಿ ಮತ್ತುಂಟೆ ?
ಮಹಾಲಿಂಗ ಕಲ್ಲೇಶ್ವರ ಒಲ್ಲೆನೆಂದಟ್ಟಿದಡೆ,
ತುಪ್ಪದಲ್ಲಿ ಕಿಚ್ಚ ನಂದಿಸಿದಂತಾಯಿತ್ತು. ॥ ೪೩ ॥

೧೧೩೩

ಕೇಳಿರೆ ಕೇಳಿರೆ ಶಿವವಚನ, ಗುರುವಚನ.
ಪುರಾತರ ವಚನಾನುಭವ ಕೇಳಿ ಬದುಕಿರಯ್ಯಾ.
ಕೇಳಿದ ಸದ್ಭಕ್ತರೆಲ್ಲರು ಕೃತಾರ್ಥರಪ್ಪರು.
ತನು ಕರಗಿ, ಮನ ಕೊರಗಿ, ಭಾವ ಬೆಚ್ಚದೊ !

ಅಹಂಕಾರವಳಿದು, ಶರಣರ ಅನುಭಾವವ ಕೇಳಿದಡೆ,
ಅದೇ ಮುಕ್ತಿ ನೋಡಿರೆ.
ಇಂತಲ್ಲದೆ ಮನೋವ್ಯಾಕುಲನಾಗಿ, ತನುಮುಟ್ಟಿ ಕೇಳಿದಡೆ,
ಉಪದೇಶವೆಂತು ಸಲುವುದಯ್ಯಾ ?
ಒಮ್ಮೆ ಅಭಿಮುಖರಾಗಿ, ಒಮ್ಮೆ ಪರಾಙ್ಮುಖರಾಗಿ ಕೇಳಲು,
ಎಂತಳವಡುವುದಯ್ಯಾ ?
ಮಹಾಲಿಂಗ ಕಲ್ಲೇಶ್ವರಾ, ಗುರುವಚನ ಪರಾಙ್ಮುಖಂಗೆ
ಎಂದೆಂದೂ ಭವ ಹಿಂಗದು ನೋಡಾ. || ೪೪ ||

೧೧೩೪

ಕೋಗಿಲೆಗಳು ಉಗ್ಘಡಿಸಲು ಮಾಮರಂಗಳ ಮೇಲೆ,
ತುಂಬಿಗಳು ಝೇಂಕಾರದಿಂ ಮೊರೆದು ಮೋಹರಿಸಲು,
ಮಂದಾನಿಲಗಳ ತನ್ನ ಬೇಹಿಗೆ ಕಳುಹಲು,
ಅನಂಗ ತನ್ನ ಬರವೆರಸಿ ಬಂದು ನಿಲಲು,
ರಸಭರಿತವಾಗಿರ್ದ ಪರಿಯ ಕಬ್ಬಿನ ಬಿಲ್ಲೇರಿಸಿ, ಕುಸುಮ ಸರವನೆ ತೊಟ್ಟು,
ಎಸಲಾರದೆ, ಬಿಲ್ಲು ಬೇರಾಗಿ, ಇವರೆಲ್ಲರ ಪರಿಯೆಂದು ಬಗೆದುಬಂದೆ,
ಕಾಮಾ ನಿಲ್ಲದಿರ್ರೈ.
ನಿನ್ನ ರೂಪ ಮಹಾಲಿಂಗ ಕಲ್ಲೇಶ್ವರದೇವ ಬಲ್ಲ.
ಸಿದ್ಧರಾಮ ನಿನ್ನಳವಲ್ಲ, ಎಲವೊ ಕಾಮಾ. || ೪೫ ||

೧೧೩೫

ಕ್ಷೇತ್ರ ವಿಶೇಷವೊ, ಬೀಜವಿಶೇಷವೊ ? ಬಲ್ಲವರು ನೀವು ಹೇಳಿರೆ !
ಬೀಜವಿಶೇಷವೆಂದಡೆ ಕುಲದಲಧಿಕ ಸದ್ಬ್ರಾಹ್ಮಣನ ಸತಿ ಜಾರೆಯಾಗಿ,
ಶ್ವಪಚನ ರಮಿಸಲು.
ಆ ಬೀಜ ಗರ್ಭವಾಗಿ ಜನಿಸಿದ ಸುತಂಗೆ
ಬ್ರಾಹ್ಮಣ ಕರ್ಮದಿಂದ ಉಪನಯನ, ಬ್ರಹ್ಮಚರ್ಯ, ವೇದಾಧ್ಯಯನ,
ಅಗ್ನಿ ಹೋತ್ರ, ಯಜ್ಞಯಜನಕ್ಕೆ ಯೋಗ್ಯವಾಗನೆ ಆ ಸುತನು ?
ಕುಲದಲಧಿಕ ಬ್ರಾಹ್ಮಣನು ಚಂಡಾಲ ಸತಿಯ ರಮಿಸಲು,
ಜನಿಸಿದ ಸುತಂಗೆ ವಿಪ್ರಕರ್ಮ ಸಲ್ಲದೆ ಹೋಗದೆ ?
ಇದು ದೃಷ್ಟ. ಇದನತಿಗಳೆದ ವೇದಾದಿ ವಿದ್ಯಂಗಳ ಬಲ್ಲ
ಲೌಕಿಕ ವಿದ್ವಾಂಸರು ತಿಳಿದುನೋಡಿ ಹೇಳಿರೆ ! ಶ್ರುತಿ:
ಜನ್ಮನಾ ಜಾಯತೇ ಶೂದ್ರಃ ಕರ್ಮಣಾ ದ್ವಿಜ ಉಚ್ಯತೇ ।
ವೇದಾಧ್ಯಾಯೀ ಭವೇದ್ವಿಪ್ರಃ ಬ್ರಹ್ಮ ಚರತೀತಿ ಬ್ರಾಹ್ಮಣಃ ।
ವರ್ಣೇನ ಜಾಯತೇ ಶೂದ್ರಃ ಸ್ತ್ರೀ ಶೂದ್ರಾಶ್ಚ ಕಾರಣಾತ್ ।
ಉತ್ಪತ್ತಿ ಶೂದ್ರ ಪುತ್ರಶ್ಚ ವಿಪ್ರಶೂದ್ರಂ ನ ಭುಂಜಯೇತ್ ||

ಇಂತೆಂದುದಾಗಿ,
ಇದು ಕಾರಣ, ಗುರು ಸದ್ಭಾವದಲುದಯಿಸಿದ
ಶಿವಜ್ಞಾನಬೀಜ ಸದ್ಭಕ್ತಿಯನಿಂಬುಗೊಂಡ
ಶಿಷ್ಯನ ಹೃದಯ ಮನ ಕರಣವೆಂಬ ಸುಕ್ಷೇತ್ರವು
ಕುಲಹೀನ ಸ್ತ್ರೀ, ಕುಲಯುಕ್ತ ಪುರುಷ
ಕುಲಹೀನ ಪುರುಷ, ಕುಲಯುಕ್ತಸ್ತ್ರೀಯರ ದೋಷಪಿಂಡದಂತಲ್ಲ,
ಎನ್ನ ಮಹಾಲಿಂಗ ಕಲ್ಲೇಶ್ವರನ ಶರಣರೆ ಅಜಾತರೆಂದಿಕ್ಕಿದೆ
ಮುಂಡಿಗೆಯನಾ, ಪರವೆತ್ತಿಕೊಳ್ಳಿರೆ. || ೪೬ ||

೧೧೩೬

ಗುರು ಕರುಣ,. ಚರಣ ಸೇವೆ,
ಭವದ ಬಳ್ಳಿಯ ಬೀಜವನತಿಗಳೆಯಿತ್ತು,
ನೋಡ ನೋಡಲುದಯಿಸಿತ್ತು, ಘನಪದವ ತೋರಿತ್ತು,
ನಿರಾಕುಳ ನಿರುಹರಣ ಮಹಾಲಿಂಗ ಕಲ್ಲೇಶ್ವರದೇವಾ. || ೪೭ ||

೧೧೩೭

ಗುರುಕರುಣಾಮೃತವಿಲ್ಲದ ಭಕ್ತಿಯ ಅನು,
ಮನದಲನುಕರಿಸುವ ಜೀವಿಗಿನ್ನೆಲ್ಲಿಯದೊ ?
ಸತ್ಕ್ರಿಯೆ ಸತ್ಪಥವಿನ್ನೆಲ್ಲಿಯದೊ ?
ಇದು ಕಾರಣ, ಮಹಾಲಿಂಗ ಕಲ್ಲೇಶ್ವರದೇವ
ಲಿಂಗ ಜಂಗಮ ಕರುಣವಿಲ್ಲದ ಜಡಮತಿಗಿನ್ನೆಲ್ಲಿಯದೊ ? || ೪೮ ||

೧೧೩೮

ಗುರುಲಿಂಗಜಂಗಮಕ್ಕೆ ಅರ್ಥ ಪ್ರಾಣ ಅಭಿಮಾನವಂ ಕೊಟ್ಟು,
ಅಹಂಕಾರವಳಿದಿಹಂಥ ಪ್ರಮಥಗಣಂಗಳು,
ಇಂದೆನ್ನ ಮನೆಗೆ ಬಂದಾರೆಂದು,
ಗುಡಿ ತೋರಣವ ಕಟ್ಟಿ, ಷಡುಸಮ್ಮಾರ್ಜನೆಯ ಮಾಡಿ,
ರಂಗವಾಲಿಯನಿಕ್ಕಿ, ಉಘೇ ಚಾಂಗುಭಲಾ ಎಂದುಗ್ಗಡಿಸುವೆನು,
ಮಹಾಲಿಂಗ ಕಲ್ಲೇಶ್ವರಾ, ನಿಮ್ಮ ಪುರಾತನರು
ತಮ್ಮೊಕ್ಕುದನಿಕ್ಕಿ ಸಲಹುವರಾಗಿ. || ೪೯ ||

೧೧೩೯

ಗುರುವಿದೆ, ಲಿಂಗವಿದೆ, ಜಂಗಮವಿದೆ, ಪಾದತೀರ್ಥಪ್ರಸಾದವಿದೆ.
ಮತ್ತೆಯೂ ಬಳಲುತಿದ್ದೇನೆ, ಭಕ್ತಿ ಸಹಜವಳವಡದಾಗಿ.
ಇದರ ಸಂದುಸಕೀಲವನರಿಯದೆ ಮತ್ತೆಯೂ ಬಳಲುತ್ತಿದ್ದೇನೆ,

ಮಹಾಲಿಂಗ ಕಲ್ಲೇಶ್ವರಯ್ಯಾ,
ಸಹಜ ಸದ್ಭಾವ ಸತ್ಯಶರಣರ ಮಹಾನುಭಾವರ ಸಂಗವಲ್ಲಾಗಿ. ॥ ೫೦ ॥

೧೧೪೦

ಘನವ ವೇದಿಸಿದ ಮನ, ಮನವ ವೇದಿಸಿದ ಇಂದ್ರಿಯಂಗಳು,
ಇಂದ್ರಿಯಂಗಳ ವೇದಿಸಿದ ತನು, ತನುವ ವೇದಿಸಿದ ಪ್ರಸಾದ,
ಪ್ರಸಾದವ ವೇದಿಸಿದ ಪರಿಣಾಮ, ಪರಿಣಾಮವ ವೇದಿಸಿದ ತೃಪ್ತಿ,
ತೃಪ್ತಿಯ ವೇದಿಸಿದ ಇಷ್ಟಲಿಂಗ, ಇಷ್ಟಲಿಂಗವ ವೇದಿಸಿದ ಜ್ಞಾನ,
ಜ್ಞಾನವ ವೇದಿಸಿದ ನಿರ್ಮಲ ಶಿವಕ್ರಿಯೆ,
ನಿರ್ಮಲ ಶಿವಕ್ರಿಯೆ[ಯ] ವೇದಿಸಿದ ಶರಣಂಗೆ
ಇನ್ನು ವೇದ್ಯರುಂಟೆ, ಮಹಾಲಿಂಗ ಕಲ್ಲೇಶ್ವರಾ ? ॥ ೫೧ ॥

೧೧೪೧

ಜಂಗಮದ ಪಾದೋದಕವ ಲಿಂಗಮಜ್ಜನಕ್ಕೆರೆದು,
ಆ ಜಂಗಮದ ಪ್ರಸಾದವನೆ ಲಿಂಗಕ್ಕರ್ಪಿಸುವ
ಅವಿವೇಕಿಗಳು ನೀವು ಕೇಳಿರೆ !
ಅಟ್ಟೋಗರವನಟ್ಟೆನೆಂಬ, ಕಾಷ್ಠವ ಸುಟ್ಟ ಬೂದಿಯ
ಮರಳಿ ಸುಟ್ಟೆಹೆನೆಂಬ ಭ್ರಮಿತರು ನೀವು ಕೇಳಿರೆ !
ಪದಾರ್ಥ ಪ್ರಸಾದವಾದುದು ಇಷ್ಟಲಿಂಗ ಮುಖದಿಂದ.
ಆ ಇಷ್ಟಲಿಂಗವ ಸೋಂಕಿ ಬಂದ ಆದಿಪ್ರಸಾದವೆ
ಪ್ರಾಣಲಿಂಗಕ್ಕೆ ಅಂತ್ಯಪ್ರಸಾದ.
ಆ ಪ್ರಾಣಲಿಂಗಮುಖದಿಂದಲೊದಗಿದ ಅಂತ್ಯಪ್ರಸಾದವೆ
ಭಾವಲಿಂಗಕ್ಕೆ ತೃಪ್ತಿಮುಖದಲ್ಲಿ ಸೇವ್ಯ ಪ್ರಸಾದ.
ಇಂತೀ ಆದಿಪ್ರಸಾದ, ಅಂತ್ಯಪ್ರಸಾದ, ಸೇವ್ಯಪ್ರಸಾದ ಗ್ರಾಹಕವೆಂಬ ಜಂಗಮ
ಇಷ್ಟಲಿಂಗವಿಡಿದು ಗುರು, ಇಷ್ಟಲಿಂಗವಿಡಿದು ಭಕ್ತ,
ಇಷ್ಟಲಿಂಗವಿಡಿದು ಜಂಗಮ.
ಇಷ್ಟಲಿಂಗಕ್ಕೆ ಅಷ್ಟವಿಧಾರ್ಚನೆ ಷೋಡಶೋಪಚಾರವ ಮಾಡಿ,
ಪ್ರಸನ್ನ ಪ್ರಸಾದವ ಪಡೆದು, ಅಷ್ಟಭೋಗವ ಭೋಗಿಸುವಾತನೆ ಗುರು.
ಇಂತೀ ಆದಿಕುಳ ಮಹಾನಂದ ಪ್ರಸಾದದ ನಿಜಾನುಭಾವಿಯೆ ಜಂಗಮ.
ಇಂತೀ ಗುರು ಲಿಂಗ ಜಂಗಮದಲ್ಲಿ ಭಕ್ತಿ ನೆಲೆಗೊಂಡ
ನಿರುಪಾಧಿಕನೆ ಭಕ್ತ.
ಆ ಭಕ್ತನು ಲಿಂಗಮುಖದಲ್ಲಿ ಸಿದ್ಧಪ್ರಸಾದವ ಪಡೆದು ಭೋಗಿಸೂದು.
ಗುರು ಮುಖದಲ್ಲಿ ಪ್ರಸಿದ್ಧ ಪ್ರಸಾದವ ಪಡೆದು ಭೋಗಿಸೂದು.
ಸ್ವಚ್ಛಂದ ಲಲಿತ ಭೈರವಿಯಲ್ಲಿ :
ಲಿಂಗಾರ್ಪಿತ ಪ್ರಸಾದಂ ಚ ನದದ್ಯಾತ್ ಜಂಗಮಾದಿಷು ।

ಜಂಗಮಸ್ಯ ಪ್ರಸಾದಂ ಚ ನ ದದ್ಯಾ ಲಿಂಗಮೂರ್ತಿಷು ।
ಜಂಗಮಸ್ಯ ಪ್ರಸಾದಂ ಚ ಸ್ವೇಷ್ಟಲಿಂಗೇನ ಚಾರ್ಪಯೇತ್ ।
ಪ್ರಮಾದಾದರ್ಪಯೇದ್ದೇವಿ ಪ್ರಸಾದೋ ನಿಷ್ಫಲೋ ಭವೇತ್ ॥
ಇಂತೆಂದುದಾಗಿ,
ಅಂದಾದಿಯಿಂದಾದಿಯಾಗಿ ಎಂದೆಂದೂ ಇದೇ ಪ್ರಸಾದದಾದಿಕುಳ.
ಈ ಆದಿಕುಳದರಿವುವಿಡಿದು ಪ್ರಸಾದವಿಡಿವ
ಮಹಾಪ್ರಸಾದ ಸಾಧ್ಯಗ್ರಾಹಕರಿಗೆ ನಮೋ ನಮೋ ಎಂಬೆ.
ಉಳಿದ ಉದ್ದೇಶಿಗಳೆನಿಸುವ ಭ್ರಾಂತರಹ ಜಾತ್ಯಂಧಕರಿಗೆ
ನಾನಂಜುವೆನಯ್ಯಾ. ಮಹಾಲಿಂಗ ಕಲ್ಲೇಶ್ವರಾ. ॥ ೫೨ ॥

೧೧೪೨

ಜಾಗ್ರ ಸ್ವಪ್ನ ಸುಷುಪ್ತಿಗಳಲ್ಲಿ ತಟ್ಟುವ ಮುಟ್ಟುವ ತಾಗುನಿರೋಧ
ಕೊರತೆ ನೆರತೆಗಳ ಹಿಡಿವನೆ ಶಿವಶರಣನು ? ಹಿಡಿಯನು.
ಅದೇನು ಕಾರಣವೆಂದೆಡೆ, ಅದೆ[ಲ್ಲವೂ] ನಿನ್ನ ಮಾಯೆಯೆಂಬುದನು ಬಲ್ಲನಾಗಿ.
ಇದು ಕಾರಣ, ಮಹಾಲಿಂಗ ಕಲ್ಲೇಶ್ವರದೇವಾ,
ನಿಮ್ಮ ಶರಣರು ನಿಜಗಲಿಗಳು. ॥ ೫೩ ॥

೧೧೪೩

ಜಾತಿಯಲ್ಲಿ ಅಧಿಕವೆಂದು ನುಡಿವರು ವಿಪ್ರಜನರು.
ಶ್ವಪಚ ಮಚ್ಚಿಗ ಬೋಯ ಕುಲಜರೆ ದ್ವಿಜರು ?
ಅಗಸ ಕಮ್ಮಾರ ನಾವಿದ ಕುಲಜರೆ ದ್ವಿಜರು ?
ಸರ್ವವೇದೇಷು ಶಾಸ್ತ್ರೇಷು ಸರ್ವಯಜ್ಞೇಷು ದೀಕ್ಷಿತಃ ।
ಮಹಾಪಾತಕಕೋಟಿಘ್ನಃ ಶ್ವಪಚೋ ಲಿಂಗಪೂಜಕಃ ।
ತತ್ಸಂಭಾಷಣತೋ ಮುಕ್ತಿಃ ಗಣಮುಖ್ಯಂ ಸುಖಂ ಭವೇತ್ ॥
ಇಂತೆಂದುದಾಗಿ, ಲಿಂಗಭಕ್ತನೆ ಕುಲಜನು.
ಮಹಾಲಿಂಗ ಕಲ್ಲೇಶ್ವರನನಾರಾಧಿಸಿ ಪಡೆದರೆಲವೊ.
ಮರೆದಡೆ ಹುಳುಗೊಂಡದಲ್ಲಿಪ್ಪಿರೆಲವೊ. ॥ ೫೪ ॥

೧೧೪೪

ತನ್ನ ಗುಣವ ಹೊಗಳಬೇಡ, ಇದಿರ ಗುಣವ ಹಳಿಯಬೇಡ.
ಕೆಮ್ಮನೊಬ್ಬರ ನುಡಿಯಬೇಡ, ನುಡಿದು ನುಂಪಿತನಾಗಬೇಡ.
ಇದಿರ ಮುನಿಯಿಸಬೇಡ, ತಾ ಮುನಿಯಬೇಡ.
ತಾನು ಬದುಕವೈಸುದಿನ, ಸಮತೆ ಸಮಾಧಾನ ತುಂಬಿ ತುಳುಕದಿರಬೇಕು.
ಮಹಾಲಿಂಗ ಕಲ್ಲೇಶ್ವರದೇವರ ನಿಚ್ಚಳ ನಿಜವನರಿವಡೆ,
ಬಚ್ಚಬರಿಯ ಸಹಜ ಸಮಾಧಾನವಳವಟ್ಟಿರಬೇಕು. ॥ ೫೫ ॥

೧೧೪೫

ತನುವ ಗುರುವಿಂಗಿತ್ತ, ಮನವ ಲಿಂಗಕಿತ್ತ, ಧನವ ಜಂಗಮಕಿತ್ತ,
ಎನ್ನ ಬಸವರಾಜನಯ್ಯ.
ಗುರುವಿನಲ್ಲಿ ಶುದ್ಧ, ಲಿಂಗದಲ್ಲಿ ಸಿದ್ಧ, ಜಂಗಮದಲ್ಲಿ ಪ್ರಸಿದ್ಧ
ಪ್ರಸಾದಿಯಯ್ಯಾ,
ಎನ್ನ ಬಸವರಾಜನ[ಯ್ಯ]
ಲಿಂಗದಲ್ಲಿ ದೀಕ್ಷೆ ಶಿಕ್ಷೆ ಸ್ವಾನುಭಾವ ಆಯತ ಸ್ವಾಯತ ಸನ್ನಹಿತ,
ಎನ್ನ ಬಸವರಾಜನಯ್ಯ.
ಮಹಾಲಿಂಗ ಕಲ್ಲೇಶ್ವರಾ, ನಿಮ್ಮ ಶರಣ ಬಸವರಾಜನಯ್ಯ. || ೫೬ ||

೧೧೪೬

ತಾನಿಲ್ಲದ ಮುನ್ನ ಗುರುವೆಲ್ಲಿಹುದೊ ?
ಲಿಂಗವೆಲ್ಲಿಹುದೊ ? ಜಂಗಮವೆಲ್ಲಿಹುದೊ ?
ಪ್ರಸಾದವೆಲ್ಲಿಹುದೊ ? ಪಾದೋದಕವೆಲ್ಲಿಹುದೊ ?
ಪರವೆಲ್ಲಿಹುದೊ ? ಸ್ವಯವೆಲ್ಲಿಹುದೊ ?
ತನಗೆ ತೋರಿದ ಗುರು, ತನಗೆ ತೋರಿದ ಲಿಂಗ,
ತನಗೆ ತೋರಿದ ಜಂಗಮ, ತನಗೆ ತೋರಿದ ಪ್ರಸಾದ,
ತನಗೆ ತೋರಿದ ಪಾದೋದಕ,
ತನಗೆ ತೋರಿದ ಪರವು, ತನಗೆ ತೋರಿದ ಸ್ವಯವು.
ಗುರುವೆಂದರಿದವನೂ ತಾನೆ,
ಲಿಂಗವೆಂದರಿದವನೂ ತಾನೆ, ಜಂಗಮವೆಂದರಿದವನೂ ತಾನೆ.
ಪ್ರಸಾದವೆಂದರಿದವನೂ ತಾನೆ, ಪಾದೋದಕವೆಂದರಿದವನೂ ತಾನೆ.
ಪರವೆಂದರಿದವನೂ ತಾನೆ, ಸ್ವಯಂವೆಂದರಿದವನೂ ತಾನೆ.
ಇಂತಿವೆಲ್ಲವ ಪೆತ್ತರಿವು ತಾನೆ ಸ್ವಯಂಜ್ಯೋತಿ, ಮಹಾಲಿಂಗ ಕಲ್ಲೇಶ್ವರಾ, || ೫೭ ||

೧೧೪೭

ದಾನಿಯಾದಡೇನು ಅವನ ಬೇಡಿದಲ್ಲದರಿಯಬಾರದು.
ರಣರಂಗ ಧೀರನಾದಡೇನು ಅಲಗಲಗು ಹಳಚಿದಲ್ಲದರಿಯಬಾರದು.
ಸ್ನೇಹವಾದಡೇನು ಅಗಲಿದಲ್ಲದರಿಯಬಾರದು.
ಹೇಮಜಾತಿಯಾದಡೇನು ಒರೆದಲ್ಲದರಿಯಬಾರದು.
ಮಹಾಲಿಂಗ ಕಲ್ಲೇಶ್ವರನ ಘನವನರಿದೆಹೆನೆಂದಡೆ,
ಸಂಸಾರಸಾಗರವ ದಾಂಟಿದಲ್ಲದರಿಯಬಾರದು. || ೫೮ ||

೧೧೪೮

ದೀಕ್ಷಾಮೂರ್ತಿರ್ಗುರುರ್ಲಿಂಗಂ ಪೂಜಾಮೂರ್ತಿಃ ಪರಶ್ಶಿವಃ ।
ದೀಕ್ಷಾಂ ಪೂಜಾಂ ಚ ಶಿಕ್ಷಾಂ ಚ ಸರ್ವಕರ್ತಾ ಚ ಜಂಗಮಃ ॥

ಎಂದುನಾಗಿ,
ಪಂಚಭೂತ ಅರಿಷಡ್ವರ್ಗದುರವಣೆಯ ನಿಲಿಸಿ,
ಭೀತಿ ಪ್ರೀತಿ ಪ್ರೇಮ ಕಾಲೋಚಿತವನರಿದು,
ಕಿಂಕಿಲನಾಗಿ, ನಿರುಪಾಧಿಕನಾಗಿ ದಾಸೋಹ ಮಾಡುವಲ್ಲಿ ಭಕ್ತನು.
ಅನ್ಯದೈವ ಪರವಧು ಪರಧನವಂ ಬಿಟ್ಟು,
ಇಹಪರದಲ್ಲಿಯ ಭುಕ್ತಿಮುಕ್ತಿಗಳಾಶೆಯಿಲ್ಲದೆ,
ಏಕೋನಿಷ್ಠೆ ಗಟ್ಟಿಗೊಂಡು ಮಾಹೇಶ್ವರನಾಗಿರಬೇಕು.
ಕಾಯದ ಕರದಲ್ಲಿ ಇಷ್ಟಲಿಂಗಾರ್ಪಿತ.
ಮನ ಮೊದಲಾದ ಕರಣಂಗಳನು ಒಂದೆ ಮುಖದಲ್ಲಿ ನಿಲಿಸಿ,
ಅವಧಾನವಳವಟ್ಟ ರುಚಿಯನು ಜಿಹ್ವೆಯ ಕರದಿಂದಲರ್ಪಿಸುವಲ್ಲಿ
ಪ್ರಾಣಲಿಂಗಾರ್ಪಿತ.
ತಟ್ಟುವ ಮುಟ್ಟುವ ನಿರೂಪವಹ ಸರ್ವವನು ಜ್ಞಾನಮುಖದಲ್ಲಿ
ಭಾವದ ಕರದಿಂದ ಲಿಂಗ ಮುಂದು ಭಾವ ಹಿಂದಾಗಿ,
ತೃಪ್ತಿಲಿಂಗಕ್ಕರ್ಪಿಸುವಲ್ಲಿ ಭಾವಲಿಂಗಾರ್ಪಿತ.
ಇಂತೀ ಅರ್ಪಿತತ್ರಯದ ಅನುಭಾವ ವತ್ಸಲನಾಗಿ,
ಅರ್ಪಿತವನರಿತು ಅನರ್ಪಿತ ನಷ್ಟವಾದಲ್ಲಿ ಪ್ರಸಾದಿ.
ಮನ ಬದ್ಧಿ ಚಿತ್ತ ಅಹಂಕಾರದ ಗುಣವಳಿದು,
ಪ್ರಾಣಚೈತನ್ಯದೊಳು ವಾಯುವಿನೊಳಡಗಿದ ಪರಿಮಳದಂತೆ,
ಲಿಂಗಚೈತನ್ಯ ನೆಲೆಗೊಂಡಿಪ್ಪಲ್ಲಿ ಪ್ರಾಣಲಿಂಗಿ.
ಪಂಚೇಂದ್ರಿಯಂಗಳ ಸಂಚವ ನಿಲಿಸಿ, ಲಿಂಗೇಂದ್ರಿಯವೆನಿಸಿತ್ತು,
ಸಪ್ತಧಾತುವಿನ ಉರವಣೆಯಂ ಮೆಟ್ಟಿ,
ಪ್ರಸನ್ನ ಲಿಂಗದ ಪರಮಸುಖಕ್ಕೆ ರತಿಭೋಗದಲ್ಲಿ ಸತಿಯಾಗಿರಲು ಶರಣ.
ಕಾಯಜೀವ, ಪುಣ್ಯಪಾಪ, ಇಹಪರವೆಂಬ ಭ್ರಮೆಯಳಿದು,
ಮಹಾಲಿಂಗದಲ್ಲಿ ಅವಿರಳಸಂಬಂಧವಾದಲ್ಲಿ ಲಿಂಗೈಕ್ಯನು.
ಈ ಷಡುಸ್ಥಲದ ಆದಿಕುಳವು ಆರಿಗೆಯೂ ಅಳವಡದು.
ಘನಕ್ಕೆ ಘನವು, ಲೋಕ ಲೌಕಿಕರಿಗಸಾಧ್ಯ.
ನಿಮ್ಮ ಶರಣರಿಗೆ ಸುಲಭ ಕಾಣಾ, ಮಹಾಲಿಂಗ ಕಲ್ಲೇಶ್ವರಾ.
ಈ ಷಡುಸ್ಥಲಕ್ಕೆ ಒಡಲಾಗಿ, ಭಕ್ತಿಭಂಡಾರಿ ಬಸವಣ್ಣಂಗೆ
ಅಳವಡಿಸಿ ಮೆರೆದಿರಿ. || ೫೯ ||

೧೧೪೯

ದೇಹದೊಳಗೆ ದೇಹವಿದ್ದು, ದೇಹ ಕರಣೇಂದ್ರಿಯಂಗಳ ಪ್ರೇರಿಸುವನು.
ಆ ಲೋಕದ ಆಗುಚೇಗೆ ತನಗಿಲ್ಲ. ಅದೆಂತೆಂದಡೆ :
ಕಮಲಪತ್ರ ಜಲದಂತೆ, ಆ ಕಹಳೆಯಲ್ಲಿಹ ನಾದದಂತೆ,

ಹುಡಿ ಹತ್ತದ ಗಾಳಿಯಂತೆ,
ನುಡಿ ಹತ್ತದ ಶಬ್ದದಂತಿಪ್ಪನಯ್ಯಾ ಶಿವನು,
ಸರ್ವಾಂತರ್ಯಾಮಿಯಾಗಿ ಮಹಾಲಿಂಗ ಕಲ್ಲೇಶ್ವರನು. ॥ ೬೦ ॥

೧೧೫೦

ನಡೆವಲ್ಲಿ ಕಾಣದೆ ಎಡಹಿ, ಅರಿಕೆಯಲ್ಲಿ ಅರಿದ ಮತ್ತೆ
ನಡೆವಾಗ ಎಚ್ಚರಿಕೆ.
ಕಾಲಹುಣ್ಣು ಕತಿಕಿರಿವ ತೆರೆದಂತೆ,
ಮರವೆಯಿಂದ ಶರಣರಲ್ಲಿ ಬಿರುಬಿನ ಮಾತು ಬಂದಡೆ,
ಅದ ಒಡನೆ ತಿಳಿಯಬೇಕು.
ಅದು ಶರೀರದ ಪ್ರಕೃತಿ ಸಂಚಾರವೆಂದರಿತು,
ಬಿಡುವ ಗುಣವ ಬಿಟ್ಟು ಅರಿದಡೆ, ಭಕ್ತಿಗದೇ ಗುಣ.
ಬಟ್ಟೆಯಲ್ಲಿ ಭಯವೆಂದಡೆ ಎಚ್ಚರಿಕೆ ಬೇಕು.
ಮತ್ತೆ ಮರವೆಯ ಶರೀರಕ್ಕೆ ಅದು ಲಕ್ಷಣ.
ಮತ್ತೆ ಎಚ್ಚರಿಕೆ, ಮಹಾಲಿಂಗ ಕಲ್ಲೇಶ್ವರಾ. ॥ ೬೧ ॥

೧೧೫೧

ನಿಃಕಲ ಪರತತ್ವವ ಮಹಾಲಿಂಗಕ್ಷೇತ್ರ.
ಆ ಕ್ಷೇತ್ರದಲ್ಲಿ ನಿಕ್ಷೇಪವಾಗಿ ನಿಧಾನಿಸಿದ್ದ ಘನಚೈತನ್ಯವೆ
ಷಟ್‌ಸ್ಥಲಲಿಂಗ ಮೂಲಾಂಕುರವೆನಿಸುವ ಪರಮಕಳೆ.
ಆ ಪರಮಕಳೆಯ ಪರಬ್ರಹ್ಮ ಪರಂಜ್ಯೋತಿ ಪರಾತ್ಪರ ಪರತತ್ವ,
ಪರಮಾತ್ಮ ಪರಮಜ್ಞಾನ ಪರಮಚೈತನ್ಯ
ನಿಃಕಲ ಚರವೆನಿಸುವ ಪರವಸ್ತು. ಶ್ರುತಿ :
ವರ್ಣಾತೀತಂ ಮನೋಽತೀತಂ ಭಾವಾತೀತಂ ಚ ತತ್ಪರಂ ।
ಜ್ಞಾನಾತೀತಂ ನಿರಂಜನ್ಯಂ ತತ್ಕಲಾ ಸೂಕ್ಷ್ಮಭಾವತಃ ॥
ಇಂತೆಂದುದಾಗಿ,
ಇಂತೀ ನಿರವಯ ಚರಲಿಂಗದ ಚೈತನ್ಯವೆಂಬ ಪ್ರಸನ್ನ ಪ್ರಸಾದಮಂ
ಇಷ್ಟಲಿಂಗಕ್ಕೆ ಕಲಾಸಾನಿಧ್ಯವಂ ಮಾಡಿ,
ಆ ಚರಲಿಂಗದ ಸಾಮರಸ್ಯ ಚರಣಾಂಬುವಿಂ ಮಜ್ಜನಕ್ಕೆರೆದು,
ನಿಜಲಿಂಗೈಕ್ಯವನೆಯ್ದಲರಿಯದೆ ಕಂಡವರ ಕಂಡು,
ತೀರ್ಥದಲ್ಲಿ ಮಂಡೆಯ ಬೋಳಿಸಿಕೊಂಡವರ ತೆರನಾದ
ಭಂಡರ ಮೆಚ್ಚುವನೆ, ಮಹಾಲಿಂಗ ಕಲ್ಲೇಶ್ವರಾ, ನಿಮ್ಮ ಶರಣ ? ॥ ೬೨ ॥

೧೧೫೨

ನಿಮ್ಮ ನೆನೆವ ಮನಕ್ಕೆ ಜ್ಞಾನಸಿದ್ಧಿಯೆಂತಪ್ಪುದೆಂದರಿಯೆನಯ್ಯಾ.
ಕರ್ಮದೊಳಗಣ ಬಯಲಮೋಹವೆನ್ನ ಬೆನ್ನ ಬಿಡದು.

ಅನ್ಯವಿಷಯ ಭಿನ್ನ ರುಚಿಯಲೆನ್ನ ಮನವು ಹರಿವುದ ಮಾಣದನ್ನಕ್ಕರ,
ನಿಮ್ಮ ನೆನೆದೆಹೆನೆಂಬ ಮನದ ಕಲಿತನವ ನೋಡಾ,
ಮಹಾಲಿಂಗ ಕಲ್ಲೇಶ್ವರಾ ! ॥ ೬೩ ॥

೧೧೫೩

ಪರಮಪದವಿಯ ನಿಮ್ಮ ಕೊರಳಲ್ಲಿ ಕಟ್ಟಿಕೊಳ್ಳಿ.
ಪರಮಪದವಿಯ ನಿಮ್ಮ ಎದೆಯಲ್ಲಿ ಇರಿದುಕೊಳ್ಳಿ.
ಎನಗೆ ನಿಮ್ಮ ತೊತ್ತು ಸೇವೆಯೆ ಸಾಕು, ಮಹಾಲಿಂಗ ಕಲ್ಲೇಶ್ವರಾ. ॥ ೬೪ ॥

೧೧೫೪

ಪರಮಪವಿತ್ರ ನಿರ್ಮಲಲಿಂಗ ತನ್ನ ಅಂಗದ ಮೇಲಿರುತ್ತಿರಲು,
ಅಂಗಶುದ್ಧ ಸೌಕರ್ಯವಿಲ್ಲದವನ ಮುಖವ ನೋಡಲಾಗದು.
ಅವನ ಮುಟ್ಟಲೆಂತೂ ಆಗದು.
ಮನದ ಮಲಿನವ ಕಳೆದು ಪ್ರಾಣಲಿಂಗವ ಧರಿಸಬೇಕು.
ತನುವಿನ ಮಲವ ಕಳೆದು ಇಷ್ಟಲಿಂಗವ ಧರಿಸಬೇಕು.
ಜೀವತ್ರಯಂಗಳ ಮಲವ ಕಳೆದು ಪ್ರಸಾದವ ಧರಿಸಬೇಕು.
ಮನದ ಮಲಿನವಾವುದೆಂದಡೆ ಮನವ್ಯಾಕುಲ.
ತನುವಿನ ಮಲಿನವಾವುದೆಂದಡೆ ತನುಗುಣವ್ಯಾಪ್ತಿ.
ತನುತ್ರಯದ ಮಲವಾವುದೆಂದಡೆ ಈಷಣತ್ರಯ.
ಜೀವತ್ರಯದ ಮಲವಾವುದೆಂದಡೆ ಅವಸ್ಥಾತ್ರಯ.
ಕರಣಂಗಳ ಮಲವಾವುದೆಂದಡೆ ಸಂಕಲ್ಪ ವಿಕಲ್ಪ.
ಅಸತ್ಯ ನಿಂದ್ಯ ಮಿಥ್ಯವಾದ ಸತ್ಕಿರಿಸುತಿಹ, ಅನ್ಯರಿಗೆ ಕೈಯನಾನುಹ.
'ನಿರ್ಮಲಸ್ಯ ತು ನಿರ್ಮಾಲ್ಯಂ ಮಲದೇಹೀ ನ ಧಾರಯೇತ್'
ಎಂದುದಾಗಿ,
ಲಿಂಗವಿಪ್ಪ ಸುಕ್ಷೇತ್ರ ಕಾಯದ ಮಲಿನವ ಕಳೆದು, ಪ್ರಸಾದವ ಧರಿಸದಿದ್ದಡೆ,
ಭವಮಾಲೆ ಹಿಂಗದು, ನರಕ ತಪ್ಪದಯ್ಯಾ, ಮಹಾಲಿಂಗ ಕಲ್ಲೇಶ್ವರಾ. ॥ ೬೫ ॥

೧೧೫೫

ಪರಸ್ತ್ರೀಯರ ರೂಪ ಕಾಯದ ಕಣ್ಣಿನಲ್ಲಿ ಕಂಡು,
ಮನ ಹರಿದು, ತನು ಕರಗಿ ಬೆರಸಿದ ಬಳಿಕ ಸಂಗವಲ್ಲದೇನು ಹೇಳಾ !
ಮನ ಬೆರಸಿ, ತನು ತಳಿತು, ಇಂದ್ರಿಯಂಗಳು ತುಳುಕಿದ ಬಳಿಕ,
ಸಂಗವಲ್ಲದೇನು ಹೇಳಾ ?
ಮಹಾಲಿಂಗ ಕಲ್ಲೇಶ್ವರ ಬಲ್ಲ ಸಿದ್ಧರಾಮನ ಪರಿಯ.
ಮನದ ಹಾದರಿಗನು ಶಬ್ದ ರುಚಿಕರನು. ॥ ೬೬ ॥

೧೧೫೭

ಪೂರ್ವಜಾತವ ಕಳೆದು ಪುನರ್ಜಾತನಾದ ಬಳಿಕ, ಏನೆಂದೆನಲುಂಟೆ ?
ಭಕ್ತಕಾಯ ಮಮಕಾಯವಾದ ಬಳಿಕ, ಏನೆಂದೆನಲುಂಟೆ ?
ಅದೆಂತೆಂದಡೆ :
ನ ಮುಕ್ತಿಶ್ಚ ನ ಧರ್ಮಶ್ಚ ನ ಪುಣ್ಯಂ ನ ಚ ಪಾಪಕಂ ।
ನ ಕರ್ಮಾ ಚ ನ ಜನ್ಮಾ ಚ ಗುರೋರ್ಭಾವನಿರೀಕ್ಷಣಾತ್ ॥
ಎಂದುದಾಗಿ,
ಇದು ಕಾರಣ, ಹಮ್ಮು ಬಿಮ್ಮು ಸೊಮ್ಮನಳಿದ,
ಮಹಾಲಿಂಗ ಕಲ್ಲೇಶ್ವರ ತಾನಾದ ಬಳಿಕ, ಏನೆಂದೆನಲುಂಟೆ ? ॥ ೬೭ ॥

೧೧೫೮

ಬಯಲಬೊಮ್ಮವ ನುಡಿವ,
ಆ ನುಡಿಯ ಬಯಲಭ್ರಮೆಯಲ್ಲಿ ಬಿದ್ದ ಜಡರುಗಳು
ಬಲ್ಲರೆ, ಶಿವನಡಿಗಳ ?
ಗುರುಲಿಂಗಜಂಗಮದ ಪಾದೋದಕ ಪ್ರಸಾದವೆಂಬ
ಪರಮಾಮೃತವ ಸವಿದು, ಪರವಶನಾದ ಪರಮಮುಗ್ಧಂಗಲ್ಲದೆ
ಪರವು ಸಾಧ್ಯವಾಗದು,
ಮಹಾಲಿಂಗ ಕಲ್ಲೇಶ್ವರನ ಶರಣ ಪೂರ್ವಾಚಾರಿ ಬಸವಣ್ಣಂಗಲ್ಲದೆ. ॥ ೬೮ ॥

೧೧೫೯

ಬಯಲು ಮೊಳಗಿ, ಮಳೆ ಸೃಜಿಸ, ಆ ಬಯಲು ಆ ಮಳೆಯನೊಡಗೂಡಿ,
ದೃಷ್ಟವಪ್ಪ ವಾರಿಕಲ್ಲಾಗಿ ತೋರಿದಂತೆ, ನಿನ್ನ ನೆನಹೆ ನಿನಗೆ ಶಕ್ತಿಯಾಯಿತ್ತಲ್ಲಾ.
ಆ ನಿಮ್ಮಿಬ್ಬರ ಸಮರತಿಯೆ,
ನಿಮಗೆ ಅಖಂಡವೆಂಬ ನಾಮ ಸೂಚನೆಯಾಯಿತ್ತಲ್ಲಾ.
ಮಹಾಲಿಂಗ ಕಲ್ಲೇಶ್ವರಾ, ನಿಮ್ಮ ಆದಿಗೆ, ಇದೇ ಪ್ರಥಮವಾಯಿತ್ತಲ್ಲಾ ॥ ೬೯॥

೧೧೬೦

ಬರಿಯಜ್ಞಾನಿಗಳಾದವರು ಅಂಗದ ಬಲದಲ್ಲಿ ನುಡಿವರು.
ಲಿಂಗಾನುಭಾವಿಗಳು ಲಿಂಗದ ಬಲದಲ್ಲಿ ನುಡಿವರು.
ಜ್ಞಾನಿಗಳಲ್ಲದ ಸುಜ್ಞಾನಿಗಳಲ್ಲದವರು,
ಗಂಡನಿಲ್ಲದ ಮುಂಡೆಯರು, ಹಲಬರನುರುವಂತೆ,
ಹಿಂದನರಿಯದೆ ನುಡಿವರು, ಮುಂದನರಿಯದೆ ಅನುಭಾವವ ಮಾಡುವರು.
ಸದ್ಭಕ್ತರ ನುಡಿಗಳು ಲಿಂಗದ ನುಡಿಗಳು.
ಬರಿಯಜ್ಞಾನಿಗಳ ನುಡಿಗಳು ಗಾಳಿಯ ಶಬ್ದಂಗಳು.
ಮತಿಗೆಟ್ಟು, ಅವಗತಿಯಲ್ಲಿ ಕಾಲೂರಿ, ಆಯತಗೆಟ್ಟು

ನಾಯನಡೆಯಲ್ಲಿ ನಡೆವರು.
ಅವರು ಅನುಭಾವಿಗಳಪ್ಪರೇ ? ಅಲ್ಲಲ್ಲ.
ಅದೆಂತೆಂದಡೆ :
ಸುಜ್ಞಾನಿಗಳಾದಡೆ, ಕಾಮವೆ ಪ್ರಾಣವಾಗಿಹರೆ ? ಅನ್ನವೆ ಜ್ಞಾನವಾಗಿಹರೆ ?
ವರುಣನ ಹೊದಿಕೆಯನೆ ಹೊದೆದು,
ಚಂದ್ರಮನ ತೆರೆಯಲೊರಗಿ,
ಪರದಾರಕ್ಕೆ ಕೈಯ ನೀಡುವರೆ, ಶರಣರಾದರೆ ?
ಇಂತವರಲ್ಲಯ್ಯ ನಮ್ಮ ಶರಣರುಗಳು.
ಇವರುಗಳು ಪಾತಕಿಗಳು, ಆಸೆಯ ಸಮುದ್ರರು,
ಅಂಗಶೃಂಗಾರಿಗಳು, ಭವಭಾರಿ ಜೀವಿಗಳು.
ಇವರೆಂತು ಸರಿಯಪ್ಪರಯ್ಯ, ಲಿಂಗಾನುಭಾವಿಗಳಿಗೆ ?
ಸರ್ವಾಂಗಲಿಂಗಿಗಳಾಗಿರ್ದ ಮಹಾನುಭಾವಿಗಳ ನಿಲುವನು,
ಮಹಾಲಿಂಗ ಕಲ್ಲೇಶ್ವರ ಬಲ್ಲನಲ್ಲದೆ, ತೂತಜ್ಞಾನಿಗಳೆತ್ತ ಬಲ್ಲರಯ್ಯ. ॥ ೭೦ ॥

೧೧೬೦

ಬಾರೆ, ಏತಕ್ಕಯ್ಯ ? ನಿಮ್ಮ ಬರವ ಹಾರುತ್ತಿರ್ದೆನು.
ಸಾರೆ, ಏತಕ್ಕಯ್ಯ ? ನಿಮ್ಮ ಸರವ ಹಾರುತ್ತಿರ್ದೆನು.
ತೋರೆ, ಏತಕ್ಕಯ್ಯ ? ನಿಮ್ಮ ಲಿಂಗರೂಪು, ನಿಜಜ್ಞಾನವ.
ಪೂಜೆಗೊಂಬಾಗಲಲ್ಲದೆ ಎನ್ನ ಮನಕ್ಕೆ ಬರಲಾಗದೆ,
ಮಹಾಲಿಂಗ ಕಲ್ಲೇಶ್ವರಾ ? ॥ ೭೧ ॥

೧೧೬೧

ಬಾಲಕಿ ಹಾಲ ಸವಿದಂತೆ, ಮರುಳಿನ ಮನದ ನೆನಹಿನಂತೆ,
ಮೂಗ ಕಂಡ ಕನಸಿನಂತೆ, ಮೈಯರಿಯದ ನೆಳಲಿನಂತೆ,
ಬಂಜೆಯ ಮನದ ಸ್ನೇಹದಂತೆ,
ಮಹಾಲಿಂಗ ಕಲ್ಲೇಶ್ವರನಲ್ಲಿ ಎನಗೆ ಲಿಂಗೈಕ್ಯವು. ॥ ೭೨ ॥

೧೧೬೨

ಬ್ರಾಹ್ಮಣ ಮೊದಲಾಗಿ ಶ್ವಪಚ ಕಡೆಯಾಗಿ, ಎಲ್ಲರಿಗೆಯೂ ಜನನವೊಂದೆ.
ಆಹಾರ ನಿದ್ರೆ ಭಯ ಮೈಥುನವೊಂದೆ, ಪುಣ್ಯಪಾಪವೊಂದೆ, ಸ್ವರ್ಗವೊಂದೆ.
ಬೇರೆಂಬ ಭಂಗಿತರು ನೀವು ಕೇಳಿರೆ !
ಅರಿವೇ ಸತ್ಕುಲ, ಮರವೇ ದುಃಕುಲ, ಅರಿವುವಿಡಿದು ಮನಪಕ್ಷ.
ಆಗಮವಿಡಿದು ಆಚಾರ, ಆಚಾರವಿಡಿದು ಸಮಯ.
ಅರಿದಡೆ ಶರಣ, ಮರೆದಡೆ ಮಾನವ.
ವಿಚಾರಿಸಿದಡೆ ಸಚರಾಚರವೆಲ್ಲವೂ ಪಂಚಭೂತಮಯ.

ಚಂದಿರಾದಿಗಳೊಳಗೊಂದು ಮನುಷ್ಯಜನ್ಮ.
ಸಪ್ತಧಾತು ಸಮಂಪಿಂಡಂ ಸಮಯೋನಿ ಸಮುದ್ಭವಂ ।
ಆತ್ಮಾ ಜೀವಸಮಾಯುಕ್ತಂ ವರ್ಣಾನಾಂ ಕಿಂ ಪ್ರಯೋಜನಂ ॥
ಎಂದುದಾಗಿ,
ಇದು ಕಾರಣ, ಮಹಾಲಿಂಗ ಕಲ್ಲೇಶ್ವರಾ,
ನಿಮ್ಮ ಶರಣರು ಅಜಾತಚರಿತ್ರರಾಗಿ,
ಆವ ಜಾತಿಯನೂ ಹೊದ್ದರು. ॥ ೭೩ ॥

೧೧೬೩

ಭಕ್ತದೇಹಿಕ ದೇವನೆಂದಂಜದ ಮನವದೇನಪ್ಪದೊ ?
ಭಯವಿಲ್ಲದ ಭಕ್ತಿ, ನಯವಿಲ್ಲದ ಸಸಿ,
ಗುಣವಿಲ್ಲದ ನಂಟು ಮುಂದೇನಪ್ಪುದೊ ?
ಬಲ್ಲವರಿಗೆಲ್ಲವನು ಬಿನ್ನಾಣಿಗೆ ಬಿನ್ನಾಣಿ.
ಮಹಾಲಿಂಗ ಕಲ್ಲೇಶ್ವರನನೊಲಿಸಬಾರದು. ॥ ೭೪ ॥

೧೧೬೪

ಭಕ್ತನೆಂಬ ನಾಮಧಾರಕಂಗೆ ಆವುದು ಪಥ್ಯ ವೆಂದಡೆ :
ಗುರುಭಕ್ತನಾದಡೂ ಜಂಗಮವನಾರಾಧಿಸೂದು,
ಗುರುಶಿಷ್ಯರಿಬ್ಬರ ಗುರುತ್ವವ ಮಾಡಿದನಾಗಿ.
ಆಚಾರಭಕ್ತನಾದಡೂ ಜಂಗಮವನಾರಾಧಿಸೂದು,
ಆ ಗುರುಶಿಷ್ಯರಿಬ್ಬರನೂ ಸದಾಚಾರದಲ್ಲಿ ನಿಲಿಸಿ ತೋರಿದನಾಗಿ.
ಪ್ರಸಾದಭಕ್ತನಾದಡೆಯೂ ಜಂಗಮವನಾರಾಧಿಸೂದು,
ಆ ಗುರುಶಿಷ್ಯ ಸಂಬಂಧದಲ್ಲಿ
ಪ್ರಸಾದದುದ್ಭವವ ನಿರೂಪಿಸಿ ತೋರಿದನಾಗಿ.
ಲಿಂಗಭಕ್ತನಾದಡೂ ಜಂಗಮವನಾರಾಧಿಸೂದು,
ಗುರು ತನ್ನ ಲಿಂಗವನು ಆ ಶಿಷ್ಯಂಗೆ ಕೊಟ್ಟು
ತಾನು ವ್ರತಗೇಡಿಯಾಗಿ ಹೋಹಲ್ಲಿ, ಆ ಗುರುವಿಂಗೆ ಆ ಲಿಂಗಸಹಿತವೆ
ಆ ಶಿಷ್ಯನೆ ಸಾಹಿತ್ಯವ ಮಾಡಿ ತೋರಿದನಾಗಿ.
ಇಂತು ಆವ ಪ್ರಕಾರದಲ್ಲಿಯೂ ಜಂಗಮವೆ ಅಧಿಕವೆಂಬ ಉತ್ತರಕ್ಕೆ
ಇನ್ನಾವುದು ಸಾಕ್ಷಿಯೆಂದಡೆ :
ಭಕ್ತ ಮಾಹೇಶ್ವರ ಪ್ರಸಾದಿ ಪ್ರಾಣಲಿಂಗಿ ಶರಣನೈಕ್ಯ.
ಇಂತು ಷಟ್‌ಸ್ಥಲವಿಡಿದು ನಡೆವ ಭಕ್ತಂಗೆ
ಅನುಭವವಿಡಿದು ಮಾಡುವ ಸದಾಚಾರವೆ ಸದಾಚಾರ.
ಅನುಭವಕ್ಕೆ ಬಾರದೆ ಮಾಡುವ ಸದಾಚಾರವೆ ಅನಾಚಾರ.
'ಜ್ಞಾನಹೀನಾ ಕ್ರಿಯಾಸ್ಸರ್ವೇ ನಿಷ್ಫಲಾಃ ಶೃಣು ಪಾರ್ವತಿ'

ಎಂದುದಾಗಿ,
ಇದು ಕಾರಣ, ಶಿವನಲ್ಲಿ ಏಕಾಂತದಿಂದ ಜಂಗಮಪ್ರಸಾದವ ಕೊಂಡು,
ಬಸವಣ್ಣನ ಪ್ರಸಾದವ ಕರುಣಿಸಿ ಕಾರುಣ್ಯವ ಮಾಡು,
ಮಹಾಲಿಂಗ ಕಲ್ಲೇಶ್ವರಾ. ॥ ೭೫ ॥

೧೧೬೫

ಭಾಜನದಲ್ಲಿ ಅಳವಟ್ಟು, ಗಡಣಿಸಿದ, ಪದಾರ್ಥಂಗಳ ರೂಪ
ತನ್ನ ಕರಣಂಗಳಲ್ಲಿ ಅವಧಾನ ನಿರೀಕ್ಷಣೆಯಿಂದ ನಿರೀಕ್ಷಿಸಿ,
ಲಿಂಗಾವಧಾನ ನಿರೀಕ್ಷಣೆಯಿಂದ ನಿರೀಕ್ಷಿಸಿ,
ಆ ಪದಾರ್ಥವನು ಲಿಂಗತನುವಿನ ಕರದಿಂದ ಮುಟ್ಟಿ,
ಪದಾರ್ಥದ ಮೃದು ಕಠಿಣ ಶೀತ ಉಷ್ಣಂಗಳ ಸೋಂಕನು
ಇಷ್ಟಲಿಂಗ ಮುಖದಲ್ಲಿ ಅರ್ಪಿಸಿ,
ರೂಪವರ್ಪಿಸುವಡೆ ಇಷ್ಟಲಿಂಗಾರ್ಪಿತ.
ಆ ಇಷ್ಟಲಿಂಗಮುಖದಿಂದರ್ಪಿತವಾದ ರೂಪಪ್ರಸಾದವನು
ರುಚಿಕರದಿಂದ ಪದಾರ್ಥಮಂ ಮಾಡಿ,
ಜಿಹ್ವೆಯೆಂಬ ಭಾಜನದಲ್ಲಿ
ಮಧುರ ಆಮ್ಲ ಲವಣ ಕಟು ಕಷಾಯ ತಿಕ್ತವೆಂಬ ಷಡ್ವಿಧ ರುಚಿಯನು
ಲಿಂಗಾವಧಾನ ಮನದಿಂದ ಜಿಹ್ವೆಯ ಚೈತನ್ಯವರಿದು,
ಹೃದಯಕಮಲಪೀಠಿಕೆಯಲ್ಲಿಹ ಪ್ರಾಣೇಶ್ವರನಾದ ಪ್ರಾಣಲಿಂಗಕ್ಕೆ
ಕರಣಂಗಳು ಒಮ್ಮುಖವಾಗಿ ಅರ್ಪಿಸುವೊಡೆ ರುಚ್ಯರ್ಪಿತ.
ಆ ರುಚಿಪ್ರಸಾದವನು ಪರಿಣಾಮ ಭಾಜನದಲ್ಲಿ
ಸಾವಧಾನ ಸಮರಸದಿಂದರ್ಪಿಸುವಲ್ಲಿ
ತೃಪ್ತಿ ಲಿಂಗಮುಖದಿಂದ ತೃಪ್ತಿಪ್ರಸಾದಿ.
ರೂಪಂ ಸಮರ್ಪಯೇ ಲಿಂಗೇ ರುಚಿಮಪ್ಯರ್ಪಯೇತ್ತಥಾ ।
ಉಭಯಾರ್ಪಣ ಹೀನಶ್ಯ ಪ್ರಸಾದೋ ನಿಷ್ಫಲೋ ಭವೇತ್ ॥
ಇಂತೆಂದುದಾಗಿ,
ಇದು ಕಾರಣ, ಪ್ರಸಾದದಾದಿ ಕುಳವ
ಮಹಾಲಿಂಗ ಕಲ್ಲೇಶ್ವರಾ, ನಿಮ್ಮ ಶರಣರೆ ಬಲ್ಲರು. ॥ ೭೬ ॥

೧೧೬೬

ಮನಕೆ ತೋರದು ನೆನೆವಡನುವಲ್ಲ, ಘನಕ್ಕೆ ಘನವನೇನ ಹೇಳುವೆ ?
ಆರರಿಂದ ಮೀರಿದುದ, ಬೇರೆ ತೋರಲಿಲ್ಲದುದ,
ದೇವ ದಾನವ ಮಾನವರ ಬಲ್ಲತನದ ಬಗೆಯ ಮೀರಿದುದನೇನ ಹೇಳುವೆ ?
ಆದಿ ಮಧ್ಯಾಂತ ಶೂನ್ಯಂ ಚ ವ್ಯೋಮಾವ್ಯೋಮ ವಿವರ್ಜಿತಂ ।

ಧ್ಯಾನಜ್ಞಾನ ದಯಾದೂರ್ಧ್ವಂ ಶೂನ್ಯಲಿಂಗಮಿತಿ ಸ್ಮೃತಂ ॥
ಇಂತೆಂದುದಾಗಿ,
ಅರಿಯಬಾರದು, ಕುರುಹ ತೋರದು,
ತೆರಹಿಲ್ಲದ ಘನಮಹಾಲಿಂಗ ಕಲ್ಲೇಶ್ವರನ ನಿಜ.. ॥ ೭೭ ॥

೧೧೬೭

ಮನಮನವೇಕಾರ್ಥವಾಗದವರಲ್ಲಿ,
ತನುಗುಣ ನಾಸ್ತಿಯಾಗದವರಲ್ಲಿ,
ಬುದ್ಧಿಗೆ ಬುದ್ಧಿ ಓರಣವಾಗದವರಲ್ಲಿ,
ಭಾವಕ್ಕೆ ಭಾವ ತಾರ್ಕಣೆಯಾಗದವರಲ್ಲಿ,
ಶೀಲಕ್ಕೆ ಶೀಲ ಸಮಾನವಿಲ್ಲದವರಲ್ಲಿ,
ಅವರೊಡನೆ ಕುಳ್ಳಿರಲಾಗದು,
ಸಮಗಡಣದಲ್ಲಿ ಮಾತನಾಡಲಾಗದು.
'ಸಂಸರ್ಗತೋ ದೋಷಗುಣಾ ಭವಂತಿ' ಎಂದುದಾಗಿ,
ಇದು ಕಾರಣ, ಮಹಾಲಿಂಗ ಕಲ್ಲೇಶ್ವರಾ,
ನಿಮ್ಮ ಸದ್ಭಕ್ತಿಯನರಿದವರ ಸಂಗದಿಂದ
ನಿಮಗಾನು ದೂರವಾಗಿಪ್ಪೆನಯ್ಯಾ. ॥ ೭೮ ॥

೧೧೬೮

ಮಾಡಿದ ಮಾಟದೊಳಗೆ ನುಡಿ ಘನವಾಡದೆ ಭಕ್ತನೆ ? ಅಲ್ಲ.
ಶೀಲವ ಹೇಳಿ ಮಾಡಿಸಿಕೊಂಬನ್ನಕ್ಕರ ಶೀಲವಂತನೆ ? ಅಲ್ಲ.
ನೋಡಿ ಸಯಿಧಾನಬೇಕೆಂಬನ್ನಕ್ಕರ ನಿತ್ಯನೇಮಿಯೆ ? ಅಲ್ಲ.
ಶೀಲ, ಮೀಸಲು, ಭಾಷೆ ಲಿಂಗದೊಡಲು,
ಪ್ರಾಣ ಜಂಗಮವಾಗಿಪ್ಪ ಭಕ್ತಂಗೆ
ಮಹಾಲಿಂಗ ಕಲ್ಲೇಶ್ವರಲಿಂಗ ತಾನೆ ಪ್ರಾಣವಾಗಿಪ್ಪನು. ॥ ೭೯ ॥

೧೧೬೯

ಮುಟ್ಟಿತ್ತು ಕೆಟ್ಟಿತ್ತೆಂದಡೆ,
ಇನ್ನರಸುವ ಠಾವಾವುದಯ್ಯಾ ?
ತನುವ ಮರೆದಡೆ, ನೆನಹಿನೊಳಗದೇನೊ ?
ಹಾವು ಪರೆಗಳೆದಡೆ, ವಿಷ ನಾಶವಪ್ಪುದೆ ?
ಶರಣನು ಕಾಯವೆಂಬ ಕಂಥೆಯ ಕಳೆದಡೆ, ಗತ ಮೃತವಹನೆ ?
ಅರಿವು ಲಿಂಗದಲ್ಲಿ ಪ್ರತಿಷ್ಠೆಯಾಗಿ, ನಿರ್ಲೇಪನಾಗಿ,
ಮಹಾಲಿಂಗ ಕಲ್ಲೇಶ್ವರನಲ್ಲಿ ಲೀಯವಾದ ಶರಣ. ॥ ೮೦ ॥

೧೧೭೦

ಮುನಿಸ ಮುನಿದಡೆ ಶ್ರೀಗಂಧದ ಮುರುಡಿನಂತಿರಬೇಕವ್ವಾ.
ತೇದಡೆ ತೆಗೆದಡೆ ಚಂದನದ ಶೀತಲದ ಹಾಗೆಯಾಗಿರಬೇಕವ್ವಾ.
ಹೆಣಗುವಲ್ಲಿ ಕೈಹಿಡಿದು ಹೆಣಗುತ್ತಿರಬೇಕವ್ವಾ.
ಮಹಾಲಿಂಗ ಕಲ್ಲೇಶ್ವರನ ನೆರೆವ ಭರದಿಂ ನೊಂದು,
ಉದಕ ಮೇಲ್ವಾಯ್ದ ಹಾಗಿರಬೇಕವ್ವಾ. ॥ ೮೧ ॥

೧೧೭೧

ರೂಪ ನಿರೂಪ ವಿಚಾರಿಸುವರು, ಸಾಕಾರ ನಿರಾಕಾರವ
ವ್ಯಾಪಾರಿಸುವರು.
ಅರಿವು ಮರವೆಯ ಕುರು[ಹ] ಹಿಡಿವರು, ಮನ ಘನವ ಸಂಬಂಧಿಸುವರು.
ಒಂದೆಂದಡೆ ನಾಮಗಳೆರಡಾಗಿವೆ, ಎರಡೆಂದಡೆ ಮೂರ್ತಿವೊಂದೆ.
ಒಂದೆರಡೆಂಬುದು ತನ್ನಿಂದಾಯಿತ್ತಾಗಿ,
ತಾನೇ ಮಹಾಲಿಂಗ ಕಲ್ಲೇಶ್ವರಾ. ॥ ೮೨ ॥

೧೧೭೨

ಲಿಂಗಕ್ಕೆ ಕೊಟ್ಟು ಕೊಂಡಡೆ ಪ್ರಸಾದಿ.
ಜಂಗಮವಾರೋಗಣೆಯ ಮಾಡಿ, ಮಿಕ್ಕುದ ಕೊಂಡಡೆ ಪ್ರಸಾದಿ.
ಇದೇ ಪ್ರಸಾದದಾದಿ ಕಂಡಯ್ಯಾ.
ಲಿಂಗಕ್ಕೆ ಕೊಡದೆ, ಜಂಗಮಕ್ಕೆ ನೀಡಿ,
ಶೇಷಪ್ರಸಾದಮಂ ಪಡೆಯದೆ ಕೊಂಡಡೆ,
ಹುಳುಗೊಂಡದಲ್ಲಿಕ್ಕುವ, ಮಹಾಲಿಂಗ ಕಲ್ಲೇಶ್ವರದೇವರು. ॥ ೮೩ ॥

೧೧೭೩

ಲಿಂಗಕ್ಕೆ ಹೊರೆ ಹೊರೆಯಲ್ಲದೆ,
ನಿಜಶಿಲೆಯ ದೀಪ್ತಿಯ ತರಂಗಕ್ಕೆ ಹೊರೆಯುಂಟೆ ?
ಸಂಸಾರಿಗೆ ಪ್ರಕೃತಿರಾಗದ್ವೇಷವಲ್ಲದೆ,
ಮನ ಮಹದಲ್ಲಿ ನಿಂದ ನಿಜಲಿಂಗಾಂಗಿಗೆ ಉಭಯದ ಸಂದುಂಟೆ ?
ಈ ಗುಣ ಲಿಂಗಾಂಗಿಯ ಸಂಗ,
ಮಹಾಮಹಿಮ ಕಲ್ಲೇಶ್ವರಲಿಂಗವು ತಾನಾದ ಶರಣ. ॥ ೮೪ ॥

೧೧೭೪

ಲಿಂಗನಿಷ್ಠೆಯಿಲ್ಲದವರಂಗಳವ ಮೆಟ್ಟಲಾಗದು.
ಜಂಗಮನಿಷ್ಠೆಯಿಲ್ಲದವರೊಡನೆ ಮಾತನಾಡಲಾಗದು.
ಪ್ರಸಾದನಿಷ್ಠೆಯಿಲ್ಲದವರ ಸಹಪಙ್ತಿಯಲ್ಲಿ ಕುಳ್ಳಿರಲಾಗದು.

ಲಿಂಗಮುಖಕ್ಕೆ ಬಾರದ ರುಚಿ, ಕಿಲ್ಬಿಷ [ನೋಡಾ],
ಮುಟ್ಟಲಾಗದು, ಮಹಾಲಿಂಗ ಕಲ್ಲೇಶ್ವರನನೊಲಿಸುವ ಶರಣಂಗೆ. ॥ ೮೫ ॥

೧೧೭೫

ಲಿಂಗರೂಪಿನ ಸಹಜದುದಯದ ತುಟ್ಟತುದಿಯ ತುರೀಯಾವಸ್ಥೆಯ
ಆಡಿ ರೂಪಿಸುವ, ಹಾಡಿ ರೂಪಿಸುವ ಅರಿವಿನುಪಚಾರವುಳ್ಳನ್ನಕ್ಕರ.
ಬಯಲು ಬಲಿದು ತಾನು ತಾನಾಗಿಪ್ಪ.
ಮಹಾಲಿಂಗ ಕಲ್ಲೇಶ್ವರಾ, ನಿಮ್ಮ ಶರಣನು. ॥ ೮೬ ॥

೧೧೭೬

ಲಿಂಗಾರ್ಪಿತವಿಲ್ಲದೆ ಕೊಂಬ ಕರ್ಮಿಗಳು, ನೀವು ಕೇಳಿರೆ.
ಅನರ್ಪಿತವೇನ ಮಾಡದು ? ಅನರ್ಪಿತವೆಲ್ಲಿಗೈಯದು ?
ಶ್ರುತಿ :
ಅಸಮರ್ಪ್ಯ ಪದಾರ್ಥಂ ಶಂಭೋಃ ಭುಂಕ್ತೇ ಉದಕಂ ಪಾತಿ ಚ ।
ಶ್ವಮಾಂಸಮಸ್ಥಿ ಮೂತ್ರಂ ಚ ಭುಂಕ್ತೇ ಖಾದತಿ ಪಾತಿ ಚ ॥
ಎಂದುದಾಗಿ, ಇದು ಕಾರಣ,
ಮಹಾಲಿಂಗ ಕಲ್ಲೇಶ್ವರದೇವರಿಗರ್ಪಿಸದೆ ಕೊಂಡಡೆ,
ನಾಯಮಾಂಸ ನಾಯ ಎಲು[ವ] ನಾಯ ಮೂತ್ರವನು
ತಿಂದು, ಅಗಿದು ಕುಡಿದಂತೆ ಕಾಣಿರೆ. ॥ ೮೭ ॥

೧೧೭೭

ವೇದವನೋದಿದಡೇನು ? ಶಾಸ್ತ್ರಪುರಾಣಾಗಮಂಗಳ ಕೇಳಿದಡೇನು ?
ಗುರುಕಾರುಣ್ಯವಿಲ್ಲದವನು ಲಿಂಗವ ಮುಟ್ಟಿ ಪೂಜಿಸಲಾಗದು.
ಜಪತಪಧ್ಯಾನ ವಿಭೂತಿ ರುದ್ರಾಕ್ಷಿಯ ಧರಿಸಿದಡೇನು ?
ಗುರೂಪದೇಶವಿಲ್ಲದೆ ಲಿಂಗವ ಪೂಜಿಸಿದಡೇನು ?
ಅವನು ಪಂಚಮಹಾಪಾತಕನು, ಅವನ ಮುಖವ ನೋಡಲಾಗದು.
ಇದನರಿದು ಗುರುಕರುಣವಿಡಿದು ಮಾಡುವ ಪೂಜೆಯೇ ಶಿವಂಗೆ ಪ್ರೀತಿ.
ಇದನರಿಯದೆ ಗುರುಕರುಣವಿಲ್ಲದವ ಶಿವಲಿಂಗಪೂಜೆಯ ಮಾಡಿದನಾದಡೆ,
ಅಘೋರನರಕ ತಪ್ಪದು, ಮಹಾಲಿಂಗ ಕಲ್ಲೇಶ್ವರಾ. ॥ ೮೮ ॥

೧೧೭೮

ವೇದವೆಂಬುದು ಮಾಯಿಕದ ಕೈಯ ವಿಕಾರದಲ್ಲಿ ಹುಟ್ಟಿತ್ತು.
ಆಗಮವೆಂಬುದು ಮಾಯಿಕದ ಬಾಯವಿಕಾರದಲ್ಲಿ ಹುಟ್ಟಿತ್ತು.
ಶಾಸ್ತ್ರವೆಂಬುದು ಮಾಯಿಕದ ದೇಹವಿಕಾರದಲ್ಲಿ ಹುಟ್ಟಿತ್ತು.
ಇದು ಕಾರಣ, ಇವ ತೂರಿ ಕಳೆದು, ಮಹಾಸ್ಥಲದಲ್ಲಿ ನಿಂದವರುಗಳನಲ್ಲದೆ,
ಮಹಾಲಿಂಗ ಕಲ್ಲೇಶ್ವರದೇವರು[ವೊ]ಲ್ಲರು. ॥ ೮೯ ॥

೧೧೭೯

ಶರಣಸಂಬಂದವನರಿದ ಬಳಿಕ, ಕುಲಮದ ಛಲಮದವಿಲ್ಲ ಕಂಡಯ್ಯಾ.
ಲಿಂಗಸಂಬಂಧವನರಿದ ಬಳಿಕ, ಶೀಲಸಂಬಂಧವಿಲ್ಲ ಕಂಡಯ್ಯಾ.
ಪ್ರಸಾದಸಂಬಂಧವನರಿದ ಬಳಿಕ, ಇಹಪರಂಗಳೆಂಬವಿಲ್ಲ ಕಂಡಯ್ಯಾ.
ಮಹಾಲಿಂಗ ಕಲ್ಲೇಶ್ವರಾ, ಇಂತೀ ತ್ರಿವಿಧ ಸಂಬಂಧಕ್ಕೆ ಇದೇ ದೃಷ್ಟ.
॥ ೯೦ ॥

೧೧೮೦

ಶಿಲಾಮೂರ್ತಿ ಸ್ಥಾವರ ಶಿವಕುಲ ದೈವಕೆಲ್ಲಕೂ ಒಲವರದಿಂದ ಹೋಹಲ್ಲಿ,
ಆ ದೈವದ ಬಲುಮೆಯ ಅವನ ಕುಲವಾಸಾದ ಬಲುಮೆಯ ತೆರನೊ !
ಈ ಹೊಲಬ ತಿಳಿದು, ಗುರು ಚರವಪ್ಪ ವಸ್ತು ಸಂಸಾರದ ಒಡಲೆಳೆಗಾಗಿ,
ಭಕ್ತನ ನೆಲೆಹೊಲವಾಸಕ್ಕೆ ಹಲುಬಿ ಬರಬಹುದೆ ? ಇದು ವಸ್ತುವಿನ ನೆಲೆಯಲ್ಲ,
ಕರ್ತೃ ಸಂಬಂಧಕ್ಕೆ ಸಲ್ಲ, ಮಹಾಮಹಿಮ ಕಲ್ಲೇಶ್ವರಲಿಂಗ
ಅವರುವನೊಲ್ಲ. ॥ ೯೧ ॥

೧೧೮೧

ಶಿವ ತನ್ನ ನಿಜರೂಪವನು ಸದ್ಭಕ್ತರಿಗಲ್ಲದೆ ತೋರನೆಂಬುದು ವೇದ.
ಆ ಸದ್ಭಕ್ತನೆ ಬ್ರಾಹ್ಮಣ, ಆ ಸದ್ಭಕ್ತನೆ ಸತ್ಕುಲಜ,
ಆ ಸದ್ಭಕ್ತನೆ ಎನಗಿಂದಧಿಕನೆಂದು ಶ್ರೀ ರುದ್ರವೇದ ಬೊಬ್ಬಿಡುತ್ತಿದೆ.
ಯಾತೇ ರುದ್ರ ಶಿವ ತನೂರಘೋರಾ ಪಾಪಕಾಶಿನೀ ।
ತಯಾನಸ್ತನುವಾ ಶಂತಮಯಾ ಗಿರೀಶಂ ತಾಭಿ ಚಾಕಶೀಃ ॥
ಎಂದುದಾಗಿ, ಶಿವಲಿಂಗಭಕ್ತನಲ್ಲದೆ ಅತಃಪರವೊಂದು ಇಲ್ಲ ಕೇಳಿಭೋ.
ನಿಮ್ಮ ಮನದೊಳಗೆ ಯಜುರ್ವೇದ ಶ್ರುತಿಯ ವಿಚಾರಿಸಿ ನೋಡಿರಣ್ಣಾ.
ಓಂ ಸಪದಸ್ತ್ರೈರ್ದ್ಯಾವಾ ಭೂಮೀ ಜನಯನ್ ದೇವಃ
ಎಂದುದಾಗಿ, ಶೈವಪುರಾಣೇ :
ಯಥಾ ಪಂಕೇ ಸರೋಜಂ ಚ ಯಥಾ ಕಾಷ್ಠೇ ಹುತಾಶನಃ ।
ಸುಪ್ರತಿಷ್ಠಿ ತಲಿಂಗೇ ತು ನಯಥಾ ಪೂರ್ವಭಾವನಂ ॥
ಮತ್ತಂ ಲೈಂಗೇ:
ಶಿವದೀಕ್ಷಾಭಿಜಾತಸ್ಯ ಪೂರ್ವಜಾತಿಂ ನ ಚಿಂತಯೇತ್ ।
ಯಥಾ ಸುವರ್ಣಪಾಷಾಣೇ ಭಕಶ್ಚಂಡಾಲವಂಶಜಃ ॥
ಇಂತೆಂದು ಪುರಾಣವಾಕ್ಯಂಗಳು ಸಾರುತ್ತಿವೆ.
ಶಿವಲಿಂಗಭಕ್ತನೇ ಶ್ರೇಷ್ಠನು.
ಶ್ವಪಚನಾದಡೆಯೂ ಆ ಲಿಂಗಭಕ್ತನೇ ಕುಲಜನು,
ಆ ಲಿಂಗಭಕ್ತನೇ ಉತ್ತಮನಯ್ಯ, ಮಹಾಲಿಂಗಕಲ್ಲೇಶ್ವರಾ. ॥ ೯೨ ॥

೧೧೮೨

ಶುಚಿಗಳು ಶುದ್ಧಾತ್ಮರೆಂಬರು ನಾವಿದನರಿಯೆವಯ್ಯಾ.
ಕಾಯವಿಡಿದು ಶುಚಿ ಶುದ್ಧಾತ್ಮನೊ ? ಜೀವವಿಡಿದು [ಶುಚಿ] ಶುದ್ಧಾತ್ಮನೊ ?
ಆವುದವಿಡಿದು ಶುಚಿ ಶುದ್ಧಾತ್ಮನು ಹೇಳಿರೆ !
ಕಾಯದ ಮಲವ ತೊಳೆದು ಶುದ್ಧವ ಮಾಡಬಲ್ಲಡೆ,
ಕಾಯ ಸಕಾಯ ನೋಡಿರೆ !
ಜೀವನ ಮಲವ ಕಳೆದು ಜೀವನ ಶುದ್ಧವ ಮಾಡಬಲ್ಲಡೆ,
ಜೀವನು ಶುದ್ಧಾತ್ಮನು ಕೇಳಿರೆ !
ಅಂತರಂಗಕ್ಕೆ ಭಾವ ಮನ ನಿರ್ಮಲ ಶುದ್ಧಿ.
ಬಹಿರಂಗಕ್ಕೆ ತನು ಕರಣಂಗಳಳಿದುವೆ ಶುದ್ಧಿ.
ಇದು ಕಾರಣ, ಮಹಾಲಿಂಗ ಕಲ್ಲೇಶ್ವರಾ,
ನಿಮ್ಮ ಶರಣರು ಒಳಗೂ ಹೊರಗೂ ಸರ್ವಾಂಗಲಿಂಗವಾಗಿ,
ಸರ್ವಶುಚಿ ಶುದ್ಧಾತ್ಮರು ಕೇಳಿರೆ ! || ೯೩ ||

೧೧೮೩

ಶ್ರೀಗುರು ಶಿಷ್ಯಂಗೆ ಉಪದೇಶವ ಮಾಡುವಲ್ಲಿ,
ಲಿಂಗಕ್ಕೆ ಅರ್ಚನೆ ಪೂಜೆಗಳನು ಮಾಡಿ ,
ಲಿಂಗಾರ್ಪಿತದಲ್ಲಿ ಅವಧಾನಪ್ರಸಾದ, ಭೋಗದಲ್ಲಿ ಸುಯಿಧಾನ,
ಗುರುವಿನಲ್ಲಿ ಜ್ಞಾನಸಿದ್ಧಿ, ಜಂಗಮದಲ್ಲಿ ನಿರ್ವಂಚನೆ.
ಪ್ರೀತಿ ಪ್ರೇಮ ಪರಧನ ಪರಸ್ತ್ರೀ ಪರದೈವಕ್ಕೆರಗದೆ,
ನಿತ್ಯಲಿಂಗಾರ್ಚನೆಯ ಮಾಡೆಂದು ಉಪದೇಶಮಂ ಕೊಟ್ಟನಲ್ಲದೆ,
ಪಾದತೀರ್ಥದಲ್ಲಿ ಲಿಂಗಮಜ್ಜನಕ್ಕೆರೆದು
ಪ್ರಸಾದವನರ್ಪಿಸ ಹೇಳಿಕೊಟ್ಟನೆ, ಇಲ್ಲ.
ಆ ಭಕ್ತನು ತನು ಮನ ಧನವನು ಗುರುಲಿಂಗಜಂಗಮಕ್ಕೆ ಸವೆಸಿ,
ತನು ಸವೆಸಿ ಮನಲೀಯವಾಗಿ ಧನಲೋಭವಿಲ್ಲದೆ ಸಂದು ನಿಂದ,
ಪರಮವೈರಾಗ್ಯ ಉರವಣಿಸಿ ಈಷಣತ್ರಯದ ಆಸೆಯಳಿದು,
ಸೋಹಂ ಎಂದು ನಿಂದು ಹರಗಣಂಗಳಂ ನೆರಪಿ,
ಆಚಾರ ಕರ್ಪರ, ವಿಚಾರ ಕರ್ಪರ, ಅವಿಚಾರ ಕರ್ಪರ ವೇಷಮಂ ತಾಳಿ,
ಭಕ್ತ ಭಿಕ್ಷಾಂದೇಹಿ ಎಂದು ಭಕ್ತರ ಮಠದಲ್ಲಿ ಹೊಕ್ಕು,
ಲಿಂಗಾರ್ಚನೆಯಂ ಮಾಡಿ, ಲಿಂಗಪ್ರಸಾದಮಂ ಭೋಗಿಸಿ,
ಶಿವಕ್ಷೇತ್ರ ತೀರ್ಥಂಗಳಂ ಚರಿಸಿ,
ಲಿಂಗಧ್ಯಾನ ನಿರತನಾಗಿ ಇರಹೇಳಿದರಲ್ಲದೆ,
ಲಿಂಗಕ್ಕೆ ಪಾದತೀರ್ಥವ ಕೊಟ್ಟು, ಪ್ರಸಾದವನಿಕ್ಕ ಹೇಳಿ
ಮಾಡಿದ ನಿರ್ವಾಣದೀಕ್ಷೆಯುಂಟೆ ?

ಸಲಿಂಗೀ ಪ್ರಾಣಮುಕ್ತಶ್ಚ ಮನೋಮುಕ್ತಶ್ಚ ಜಂಗಮಃ ।
ಪ್ರಸಾದೀ ಕಾಯಮುಕ್ತಶ್ಚ ತ್ರಿವಿಧಸ್ತತ್ವನಿರ್ಣಯಃ ॥
ಇಂತೆಂದುದಾಗಿ,
ಈ ನಿರ್ಣಯ ವಚನವನರಿಯಬಲ್ಲಡೆ ಜಂಗಮ,
ಅಲ್ಲದಿದ್ದಡೆ ಭವಭಾರಿಯೆಂಬೆ, ಮಹಾಲಿಂಗ ಕಲ್ಲೇಶ್ವರಾ. ॥ ೯೪ ॥

೧೧೮೪

ಶ್ರೀಗುರುಸ್ವಾಮಿ ಶಿಷ್ಯಂಗೆ ಅನುಗ್ರಹವ ಮಾಡುವಲ್ಲಿ,
ಹಸ್ತಮಸ್ತಕಸಂಯೋಗಕಾಲದಲ್ಲಿ,
ಪಂಚಕಳಶದ ನಿರ್ಮಲಜಲವ ತನ್ನ ಕರುಣಜಲವ ಮಾಡಿ,
ಆತನ ಜನ್ಮದ ಮೈಲಿಗೆಯ ಕಳೆಯಲು,
ತಾ ನಿರ್ಮಲನಾಗಿ ಲಿಂಗವ ಗ್ರಹಿಸಿದಲ್ಲಿ,
ಲಿಂಗಕ್ಕೆ ಮಜ್ಜನಕ್ಕೆರೆಯತೊಡಗಿ, ಮಜ್ಜನೋದಕವನರಿದೆ.
ಲಿಂಗಸ್ಪರುಶನದಿಂದ ಪಾದೋದಕವನರಿದೆ.
ಲಿಂಗಾರ್ಪಿತ ಭೋಗೋಪಭೋಗದಲ್ಲಿ ಅರ್ಪಿತ ಪ್ರಸಾದೋದಕವನರಿದೆ.
ಅರಿದು, ಅನ್ಯೋದಕವ ಮರದು, ನಿಮ್ಮಲ್ಲಿ ತದ್ಗತನಾಗಿರ್ದೆನಯ್ಯಾ,
ಮಹಾಲಿಂಗ ಕಲ್ಲೇಶ್ವರಾ. ॥ ೯೫ ॥

೧೧೮೫

ಶ್ರೀರುದ್ರಾಕ್ಷಿಯ ಹಸ್ತ ತೋಳು ಉರ ಕಂಠ ಮೊದಲಾದ
ಸ್ಥಾನಂಗಳಲ್ಲಿ ಧರಿಸಿ,
ಶಿವಾರ್ಚನೆಯ ಮಾಡುವುದು ಸದಾಚಾರ, ಅದೇ ಸದ್ಯೋನ್ಮುಕ್ತಿ.
ಅದು ಕಾರಣ, ಆ ಮಹಾರುದ್ರಾಕ್ಷಿಯ ಧರಿಸಿ, ಎನ್ನ ಭವಂ ನಾಸ್ತಿಯಾಯಿತ್ತು.
ಮಹಾಲಿಂಗ ಕಲ್ಲೇಶ್ವರಾ, ರುದ್ರಾಕ್ಷಿಯಿಂದೆ ಕೃತಾರ್ಥನಾದೆನು. ॥ ೯೬ ॥

೧೧೮೬

ಹಗಲು ಹಸಿವಿಂಗೆ ಕುದಿದು, ಇರುಳು ನಿದ್ರೆಗೆ ಸಂದು,
ಎಚ್ಚತ್ತು ಉಳಿದಾದ ಹೊತ್ತಿನಲ್ಲೆಲ್ಲಾ ಪಂಚೇಂದ್ರಿಯಂಗಳ ವಿಷಯಕ್ಕೆ ಹರಿದು,
ಅಯ್ಯಾ, ನಿಮ್ಮ ನೆನೆಯಲರಿಯದ ಪಾಪಿಯಯ್ಯಾ.
ಅಯ್ಯಾ, ನಿಮ್ಮ ದೆಸೆಯ ನೋಡದ ಕರ್ಮಿಯಯ್ಯಾ.
ಮಹಾಲಿಂಗ ಕಲ್ಲೇಶ್ವರಾ, ಅಸಗ ನೀರಡಿಸಿ ಸಾವಂತೆ ಎನ್ನ ಭಕ್ತಿ ॥ ೯೭ ॥

೧೧೮೭

ಹರವಸದಿ ಹಸಿವನರಿಯದಿಪ್ಪ ಪರಮಸುಖವೆನಗೆಂದಿಪ್ಪುದೊ ?
ಉರವಣೆಯ ಸುಖದ ಸೋಂಕಿನಲ್ಲಿ ಪರಿಣಾಮ ಎಂದಪ್ಪುದೊ ?

ನಿಮ್ಮ ನೆನಹ ಎನ್ನ ಹಸು ಲಿಂಗೋಗರವಾದಡೆ
ನಾ ನಿಮ್ಮ ನೆನೆವುದು ದಿಟವೆಂಬೆ ಕಾಣಾ, ಮಹಾಲಿಂಗ ಕಲ್ಲೇಶ್ವರಾ. ॥ ೯೮ ॥

೧೧೮೮

ಹಸಿಯ ಕಪಾಲದಲ್ಲಿ ಉಂಬನೆಂಬರು, ಅದು ಹುಸಿ,
ಭಕ್ತನ ಮುಖದಲ್ಲಿ ಉಂಬನಾಗಿ.
ಅಸ್ಥಿಗಳ ತೊಟ್ಟನೆಂಬರು, ಅದು ಹುಸಿ, ಭಕ್ತದೇಹಿಕದೇವನಾಗಿ.
ಚರ್ಮವ ಹೊದ್ದನೆಂಬರು, ಅದು ಹುಸಿ, ಆ ಭಕ್ತನಲ್ಲಿ
ಸದಾಸನ್ನಹಿತನಾಗಿಪ್ಪನಾಗಿ.
ಅದೆಂತೆಂದಡೆ– ಬ್ರಹ್ಮಾಂಡ ಪುರಾಣೇ :
ನೈವೇದ್ಯಂ ಪುರತೋ ನ್ಯಸ್ತಂ ದರ್ಶನಾತ್ಸ್ವೀಕೃತಂ ಮಯಾ ।
ರಸಾನ್ಭಕ್ತಸ್ಯ ಜಿಹ್ವಾಗ್ರಾದಶ್ನಾಮಿ ಕಮಲೋದ್ಭವ ॥
ಎಂದುದಾಗಿ, ವಾತುಲೇ :
ಯಾವನ್ನಿರ್ವಹತೇ ಯಸ್ತು ಯಾವಜ್ಜೀವಂ ಪ್ರತಿಜ್ಞಯಾ ।
ಮನುಷ್ಯಚರ್ಮಣಾ ಬದ್ಧಃ ಸ ರುದ್ರೋ ನಾತ್ರ ಸಂಶಯಃ ॥
ಎಂದುದಾಗಿ, ಮಹಾಲಿಂಗ ಕಲ್ಲೇಶ್ವರಾ,
ನಿಮ್ಮ ಸುಳುಹು ಪರಕಾಯಪ್ರವೇಶವಾಗಿಹುದು. ॥ ೯೯ ॥

೧೧೮೯

ಹಾಹಾ ! ವೇದವೆ ತತ್ವವಾದಡೆ, ಮಾದಾರನ ಮನೆಯಲುಂಡನೊಬ್ಬ.
ನಿಧಾನವುಳ್ಳ ಉಪಾಧ್ಯಾಯರಾರೂ ಇಲ್ಲದಾದಡೆ,
ಶಾಸ್ತ್ರವೆ ತತ್ವವಾದಡೆ ಶಿವರಾತ್ರಿಯನೊಬ್ಬ
ಬೇಡಂಗಿತ್ತುದನೊಬ್ಬ ಶ್ರೋತ್ರಿಯಂಗೀಯಲಾಗದೆ ?
ಆಗಮವಿಧಿಯಲ್ಲಿ ಮಂತ್ರಮೂರುತಿಯೆಂಬ ಮಾತಂತಿರಲಿ.
ಆದ ಕೇಳಲಾಗದು ಭ್ರಾಂತು ಬೇಡ.
ಭಾವಮೂರುತಿ ಬಲ್ಲ ಪ್ರಮಾಣವಿದೆ.
ಆ ಕುಲವೆಂದಡೆ ಹೊಕ್ಕ ಕಕ್ಕಯ್ಯಗಳ ಮನೆಯ.
ಅಕ್ಕಟಾ, ನಿಮ್ಮ ತರ್ಕ ಮುಕ್ಕಾಯಿತ್ತು, ಲೋಕವರಿಯದೆ ?
ಕಲ್ಲಲಿಟ್ಟು ಕಾಲಲೊದೆದಡೆ, ಅಲ್ಲಿ ಮೂರುತಿ ನುಡಿಯಿತ್ತಲ್ಲಯ್ಯಾ.
ಬಲ್ಲವದನು ದ್ವಿಜರು ನೀವೆಲ್ಲರೂ ಹೇಳಿರೆ,
ಸಲ್ಲದು, ನಿಮ್ಮ ವಾದ ನಿಲ್ಲಲಿ, ಬಲ್ಲಿದ ನಡೆಮುದೇ ಬಟ್ಟೆ.
ಮಹಾಲಿಂಗ ಕಲ್ಲೇಶ್ವರಾ, ಲಿಂಗಾಚಾರಿಗಳು ನಿಸ್ಸೀಮರಯ್ಯಾ. ॥ ೧೦೦ ॥

೧೧೯೦

ಹುಟ್ಟುವಂದು ನಿಮ್ಮ ಮೋಹವಿಲ್ಲ,
ಹೊಂದುವಂದು ನಿಮ್ಮ ಮೋಹವಿಲ್ಲ ಕಂಡಯ್ಯಾ.

ನಿಮ್ಮ ಮೋಹದವರಿಗೆ ಹುಟ್ಟುಂಟೆ ಅಯ್ಯಾ ?
ನಿಮ್ಮ ಮೋಹದ ಮುಖದಲ್ಲಿ ಮರಣವುಂಟೆ ಅಯ್ಯಾ ?
ಸಂಗಸಂಯೋಗದ ಉನ್ಮನೀ ಭೂತ, ನಿನ್ನ ಮುಖದಲ್ಲಿ,
ಜನನ ಮರಣವುಂಟೆ, ಮಹಾಲಿಂಗ ಕಲ್ಲೇಶ್ವರಾ ? ॥ ೧೦೧ ॥

೧೧೯೧

ಹೊಟ್ಟು ಜಾಲಿಯ ಮುಳ್ಳ ಕೊನೆಯ ಮೇಲೊಂದು
ಇಪ್ಪತ್ತೈದು ಅಗ್ರಹಾರ.
ಅವ ಕಾವವ ಬಂಜೆಯ ಮಗ ತಳವಾರ.
ಅಷ್ಟದಳ ಕಮಲದ ವಿವೇಕದ ಕೂಟವ ಮಹಾಲಿಂಗ ಕಲ್ಲೇಶ್ವರ ಬಲ್ಲ,
ಪಂಚಮಹಾಜ್ಯೋತಿಯ ಮಹಾಬೆಳಗನು. ॥ ೧೦೨ ॥

■■

## ಹುಂಜಿನ ಕಾಳಗದ ದಾಸಯ್ಯಗಳ ವಚನ

೧೧೯೨

ಹುಂಜ ಸೋತಡೆ ಹಿಡಿವೆ.
ವ್ರತ ಹೋದವರ ನೋಡೆನು,
ಚಂದ್ರಚೂಡೇಶ್ವರಲಿಂಗವೆ. ॥ ೧ ॥

■■

# ಹೆಂಡದ ಮಾರಯ್ಯಗಳ ವಚನ

೧೧೯೩

ಅಷ್ಟಮದಕ್ಕೂ ಒಂದರ ಹೆಚ್ಚಿಗೆ.
ನಾನಾ ವಿಕಾರಕ್ಕೂ ಒಂದೇ ವಿಕಾರ.
ನಾನಾ ಬುದ್ಧಿಗೂ ಒಂದೇ ಬುದ್ಧಿ.
ಒಂದು ಘಟದಲ್ಲಿ ತೋರುವ ತಂತುವಿನ ದನಿಭಿನ್ನದಂತೆ,
ಅದು ಬಿಗಿವ, ಸಡಿಲಿಸುವ ತಂತ್ರದ ಭೇದ.
ಅರಿವು ಮರವೆಯಿಂದಾದ ಮದವ ನೆರೆ ಹೊತ್ತುಬಂದೆ.
ಕೊಂಡಡೆ ಲೇಸು, ಕಂಡಡೆ ಲೇಸು,
ಕಾಣದಿರ್ದಡೆ ಕರಲೇಸು, ಧರ್ಮೇಶ್ವರ[ಲಿಂಗಾ]. ॥ ೧ ॥

೧೧೯೪

ಎಲ್ಲಾ ಅಂತರಂಗ ತೃಪ್ತಿಯಾದಲ್ಲಿ,
ಮತ್ತತನವಿಪ್ಪುದು ಜಾಗ್ರದಲ್ಲಿ, ದೃಷ್ಟಾಂತದ ಸ್ವಪ್ನದಲ್ಲಿ.
ಛಾಯೆ ಮಾಯೆ ಸುಷುಪ್ತಿಯಲ್ಲಿ, ಬಿಂಬ ಛಾಯೆ ವಾಗ್ವಿಲಾಸಂಗಳಲ್ಲಿ,
ಕೇಳಿ, ಬಾವಜ್ಞಾನದಿಂದರಿದು, ಮಹಾಜ್ಞಾನದಿಂದ ಕಂಡು,
ದಿವ್ಯಜ್ಞಾನದಿಂದ ಪರಿಪೂರ್ಣವಾಗಿ, ನೋಟ ಕೂಟವಿಲ್ಲದೆ,
ಕೂಟಕ್ಕೆ ಅಂಗವಿಲ್ಲದೆ, ಅಂಗಕ್ಕೆ ಆತ್ಮನಿಲ್ಲದೆ,
ಆತ್ಮಂಗೆ ಭಾವವಿಲ್ಲದೆ, ಭಾವಕ್ಕೆ ಭಾವವಿಲ್ಲದೆ ನಿಂದುದು,
ಸದ್ಭಾವವಿರಹಿತ ವಸ್ತುವದು, ಧರ್ಮೇಶ್ವರಲಿಂಗದ ಗೊತ್ತು ॥ ೨ ॥

೧೧೯೫

ಕರಣ ನಾಲ್ಕು, ಮದವೆಂಟು, ವ್ಯಸನವೇಳು,
ಅರಿಷಡ್ವರ್ಗಂಗಳಲ್ಲಿ, ಇಂತೀ ಉರವಣೆಗೊಳಗಾಗುತ್ತ,
ಆಣವ ಮಾಯಾ ಕಾರ್ಮಿಕವೆಂಬ ಮೂರು
ಸುರೆಯಲ್ಲಿ ಮದುಡುತ್ತ, ನಾ ತಂದೆ ಸುಧೆ, ನಿಮಗೆಲ್ಲ ಎಂದೆ.
ಅದು ಧರ್ಮೇಶ್ವರಲಿಂಗದ ಅರ್ಪಣೆ. ॥ ೩ ॥

೧೧೯೬

ಘಟಕುಂಭದಲ್ಲಿ ಜೀವನೆಂಬ ಜೇಗಟೆ ಬಂದಿತ್ತು.
ದೃಷ್ಟವ ಇಷ್ಟದಲ್ಲಿ ಕುಟ್ಟಲಾಗಿ, ಮೊಳೆ ಮುರಿದು ಒಡಲೊಡೆಯಿತ್ತು.
ಅಂಗದ ಅಗ್ನಿಯಲ್ಲಿ ಬೇಯಿಸಿ, ಮೂರುಸಂಗವಡೆದ ಮಡಕೆಯ ಓಡಿನಲ್ಲಿ
ಶ್ರುತ ದೃಷ್ಟ, ಅನುಮಾನವೆಂಬ ಕೋಲಿನಲ್ಲಿ ಕಡೆಯಲಾಗಿ,
ರಸ ಒಳಗಾಗಿ ಹಿಪ್ಪಿ ಹೊರಗಾಯಿತ್ತು, ಆ ಸುಧೆಯ ತುಂಬಿ ತಂದೆ.
ಒಮ್ಮೆಗೆ ಕೊಂಡಲ್ಲಿ ಬ್ರಹ್ಮಕಲ್ಪವ ಕೆಡಿಸಿತ್ತು.
ಮತ್ತೊಮ್ಮೆ ಕೊಂಡಲ್ಲಿ ವಿಷ್ಣುವಿನ ಗೊತ್ತ ಕಿತ್ತಿತ್ತು.
ಮೂರೆಂದು ಮೊದಲ ಹಾಗವ ಮೀರಿದ ರುದ್ರನ ಅಗಡವ ಕಿತ್ತಿತ್ತು.
ಅರೆದು ಕೊಂಡಲ್ಲಿ ಸುಧೆ, ಮರೆದು ಕೊಂಡಲ್ಲಿ ಸುರೆಯಾಗಿ,
ಅರುಹಿರಿಯರ ಮರವೆಯ ಮಾಡಿತ್ತು.
ನಾ ತಂದ ಬೆವಹಾರವ ಅಹವರೆಲ್ಲರೂ ಕೊಳ್ಳಿ,
ಧರ್ಮೇಶ್ವರಲಿಂಗವನರಿಯಬಲ್ಲಡೆ. ॥ ೪ ॥

೧೧೯೭

ನಾ ಮಾರಬಂದ ಸುಧೆಯ ಕೊಂಬವರಾರೂ ಇಲ್ಲ.
ಹೊರಗಣ ಭಾಜನಕ್ಕೆ, ಒಳಗಣ ಇಂದ್ರಿಯಕ್ಕೆ
ಉಂಡು ದಣಿದು, ಕಂಡು ದಣಿದು, ಸಂದೇಹವ ಬಿಟ್ಟು ದಣಿದು,
ಕಂಡುದ ಕಾಣದೆ, ಸಂದೇಹದಲ್ಲಿ ಮರೆಯದೆ,
ಆನಂದವೆಂಬುದ ಆಲಿಂಗನವ ಮಾಡಿ,
ಆ ಕಂಗಳಂ ಮುಚ್ಚಿ, ಮತ್ತಮಾ ಕಂಗಳಂ ತೆರೆದು ನೋಡಲಾಗಿ,
ಧರ್ಮೇಶ್ವರಲಿಂಗವು ಕಾಣಬಂದಿತ್ತು. ॥ ೫ ॥

೧೧೯೮

ನುಲಿಯೊಡೆಯರೆ ನಿಮ್ಮಾಳ್ದರ ಕೊಳ್ಳಿರೆ.
ಆಳ್ದರೆಂದವರಾರು ?
ಅವರು ನಿಮ್ಮ ಕೈಯಲ್ಲಿದ್ದಂಥವರೂ ಅವರಾಳ್ದರಲ್ಲ.
ಅವರೇನು ? ಅವರು ನಿಮ್ಮ ಇಷ್ಟರುದ್ರರಾಗರೆ ?

ಜಂಗಮವಾಗಿದ್ದಹರು ಇವರು ಬೇಡವೆ ?
ಇಹರೆ ಬೇಡೆನ್ನೆ, ಹೋಹರೆ ನಿಲಿಸ ಶಕ್ತನಲ್ಲ.
ನಾವು ಇರಲು ಬಲ್ಲಲ್ಲಿ ಇರಿ, ಕೈಯಲ್ಲಿ ಕೊಳ್ಳಿರೆ.
ಮುನ್ನವೆ ಕೊಂಡಿದ್ದೆನು, ಎನ್ನನೇಕೆ ಒಲ್ಲೆಯಯ್ಯಾ,
ನೀನು ಮುನಿದಿದ್ದೆಯಾಗಿ, ಇನ್ನು ಮುನಿವುದಿಲ್ಲ ನಾನು.
ನಿಮ್ಮ ನಂಬುವದಿಲ್ಲ, ಹೊಣೆಯ ಕೊಟ್ಟೆಹೆನು.
ಅದ ಕಂಡು, ಮಾಚಿದೇವ ಮಹಾಪ್ರಸಾದಿ ಹೊಣೆಯಾಗಯ್ಯಾ.
ನಂಬೆನು ಜೀಯಾ, ನಿಮ್ಮಾಣೆ.
ಪತ್ರವಾದರೆ ಕೊಟ್ಟೆಹೆನು, ಇರಲಿಕೆ ಠಾವೆಲ್ಲಿ ?
ಕರದಲ್ಲಿಯೆ ಅಲ್ಲ, ಉರದಲ್ಲಿಯೆ ಅಹುದು.
ನಂಬಿದೆನು, ಸುಖದಲ್ಲಿಹ ಧರ್ಮೇಶ್ವರ[ಲಿಂಗಾ]. ॥ ೬ ॥

೧೧೯೯

ನುಲಿಯೊಡೆಯರೆ ನಿಮ್ಮಾಳ್ದರೇನಾದರು ?
ಆಳ್ದರು ಜಂಗಮದ ಪಾದದ ಕೆಳಗೈದಾರೆ.
ಪಾದ ಲಿಂಗವಪ್ಪುದೆ ? ಪಾದಕ್ಕೆಯೂ ಲಿಂಗಕ್ಕೆಯೂ ಭೇದವುಂಟೆ ?
ನಾವರಿದುದಿಲ್ಲ, ಸುಮ್ಮನಿರಿ ನೀವು. ಇದಕಿನ್ನೇನು ಪ್ರಾಯಶ್ಚಿತ ?
ಶಿವಶರಣರ ಚರಣೋದಕವ ಕರುಣಿಸಬೇಕು, ಕೊಡಬಾರದು.
ಅದೇನು ಕಾರಣ ? ನೀವು ಲಿಂಗವ ಕೇಳಿದಿರಾಗಿ.
ಶರಣಂಗೆ ಲಿಂಗವಿಲ್ಲ, ನಾವು ಪೂಜಕರಲ್ಲ,
ಭಕ್ತಿಯೆಂಬುದಾವುದು ? ಅರ್ಧಶರೀರ ಶಿವನಾರು ?
ದಕ್ಷಿಣಂಗೆ ಮಹೇಶ್ವರನಾರು ? ಭೃಂಗೀಶ್ವರನೊಬ್ಬನೆ ?
ಮತ್ತೆ ಕಂಡುದಿಲ್ಲ, ಧರ್ಮೇಶ್ವರ[ಲಿಂಗಾ]. ॥ ೭ ॥

೧೨೦೦

ಬಲ್ಲೆನೆಂಬ ಮದದಲ್ಲಿ ಅರಿದೆನೆಂಬ ಮಹಾಮದವಂ ಕೊಂಡು,
ಅಹಂಕಾರವೆಂಬ ಮದ, ಸರ್ವಾಂಗ ವೇಧಿಸಿ ತಲೆಗೇರಿದಲ್ಲಿ,
ಸತ್ತೆಂಬುದನರಿಯದೆ, ಚಿತ್ತೆಂಬುದ ತಿಳಿಯದೆ,
ಆನಂದವೆಂಬ ಆಶ್ರಯವ ಭಾವಿಸಿ ನೋಡದೆ,
ಸ್ಥೂಲಸೂಕ್ಷ್ಮಕಾರಣವೆಂಬ ತನುತ್ರಯದ ಭೇದವ ಕಾಣಲರಿಯದೆ,
ಅಂಡಪಿಂಡವೆಂಬ ಖಂಡಿತವ ತಿಳಿಯಲರಿಯದೆ,
ದಿಂಡೆಯತನದಿಂದ ಕಂಡೆನೆಂದಡೆ,
ಅದು ತಾ ಕೊಂಡ ಮೂರು ಹೆಂಡದ ಗುಣವೆಂದೆ,
ಧರ್ಮೇಶ್ವರಲಿಂಗದ ಸಂಗವಲ್ಲಾಯೆಂದೆ. ॥ ೮ ॥

೧೨೦೧

ಮಣ್ಣು ಹೊನ್ನು ಹೆಣ್ಣೆಂಬ ತ್ರಿಭಂಗಿಯಲ್ಲಿ ಭಂಗಿತರಾಗಿ,
ಆಸೆಯೆಂಬ ಮಧುಪಾನದಿಂದ ಉಕ್ಕಲಿತವಿಲ್ಲದೆ,
ವಸ್ತುವ ಮುಟ್ಟುವದಕ್ಕೆ ದೃಷ್ಟವಿಲ್ಲದೆ,
ಕಷ್ಟದ ಮರವೆಯಲ್ಲಿ, ದೃಷ್ಟದ ಸುರಾಪಾನವ ಕೊಂಡು ಮತ್ತರಾಗುತ್ತ,
ಇಷ್ಟದ ದೃಷ್ಟದ ಚಿತ್ತ ಮತ್ತುಂಟೆ ?
ಧರ್ಮೇಶ್ವರಲಿಂಗವ ಮುಟ್ಟದೆ ಇತ್ತಲೆ ಉಳಿಯಿತ್ತು. ॥ ೯ ॥

೧೨೦೨

ಮಣ್ಣೆಂಬ ಘಟದ ಮಧ್ಯದಲ್ಲಿ ಹೊನ್ನೆಂಬ ಸುರೆ ಹುಟ್ಟಿತ್ತು.
ಹೆಣ್ಣೆಂಬ ಬಟ್ಟಲಲ್ಲಿ ಅಂತು ಈಂಟಲಾಗಿ ಲಹರಿ ತಲೆಗೇರಿತ್ತು.
ಈ ಉನ್ಮತ್ತದಲ್ಲಿ ಮಗ್ನರಾದವರೆಲ್ಲರೂ ಅರುಹಿರಿಯರೆಂತಪ್ಪರೊ ?
ಭಕ್ತಿ ವಿರಕ್ತಿಯೆಂಬುದು ಇತ್ತಲೆ ಉಳಿಯಿತ್ತು.
ಧರ್ಮೇಶ್ವರಂಲಿಂಗದತ್ತ ಮುಟ್ಟಿದಡಂತಿಲ್ಲ. ॥ ೧೦ ॥

೧೨೦೩

ಮದ್ದಿನ ಸುರೆಯ ತೊಗಲ ತಿತ್ತಿಯಲ್ಲಿ ತುಂಬಿ, ಒಪ್ಪದಲ್ಲಿ ನಿಲಿಸಲಿಕೆ,
ಅದು ತನ್ನ ಉತ್ಪಾತದಿಂದ ತಿತ್ತಿ ಹಾರಿ, ನೆಲಕ್ಕೆ ಅಪ್ಪಳಿಸಿ ಬೀಳೂದ ಕಂಡೆ.
ದೃಷ್ಟವ ಕೇಳಲೇತಕ್ಕೆ
ಕಾಯದ ತಿತ್ತಿಯಲ್ಲಿ ಜೀವ ಹೊಕ್ಕು,
ತ್ರಿವಿಧಮಲವಂ ಕಚ್ಚಿ ನಡೆವುದಕ್ಕೆ ಕಾಲಿಲ್ಲದೆ,
ನುಡಿವುದುಕ್ಕೆ ಬಾಯಿಲ್ಲದೆ, ನೋಡುವುದಕ್ಕೆ ಕಣ್ಣಾಲಿ ಮರೆಯಾಯಿತ್ತು.
ಬೊಂಬೆ ಹೋಯಿತ್ತು ದೃಷ್ಟಾಂತರ ಬೊಂಬೆ ಕೆಟ್ಟಲ್ಲಿ,
ಮಣ್ಣಿಗೆ ಕಾದಿ, ಹೊನ್ನಿಗೆ ಹೋರಿ,
ಹೆಣ್ಣಿಂಗೆ ಸಾಣುಗೆಟ್ಟ ಈ ಕುನ್ನಿಮನಕ್ಕೆ ಇನ್ನೇವೆ
ಧರ್ಮೇಶ್ವರ[ಲಿಂಗಾ] ? ॥ ೧೧ ॥

೧೨೦೪

ಶಾಸ್ತ್ರಮದ, ಸಂಪದಮದ, ಉಭಯಕೂಡಿಕೊಂಡಾತ್ಮಮದ,
ಅರಿದು ಎಲ್ಲರಿಗೆ ಹೇಳಿದೆನೆಂಬ ಗೆಲ್ಲ ಸೋಲದ ಮದ.
ಇಂತೀ ಎಲ್ಲಾ ಮದವ ಸೇವಿಸುತ್ತ,
ಅರಿಯದ ಮದವನೊಂದು ನುಡಿದಡೆ, ಬಿರುನುಡಿಯೆಂದೆಂಬರು.
ಅರಿಯದವ ಇಂತಿವ ಅರಿಯದಂತೆ ಸಂಚದಲ್ಲಿ ಸಂಚದಂತಿರಬೇಕು.
ಧರ್ಮೇಶ್ವರಲಿಂಗ ಹೀಂಗಲ್ಲದೆ ಅರಿಯಬಾರದು. ॥ ೧೨ ॥

■■

## ಹೊಡೆಹುಲ್ಲ ಬಂಕಣ್ಣಗಳ ವಚನ

೧೨೦೫

ಕಾಯ ಪ್ರಸಾದವಾದಲ್ಲಿ ಗುರುಪ್ರಸಾದವನೊಲ್ಲ,
ಭಾವ ಪ್ರಸಾದವಾದಲ್ಲಿ ಲಿಂಗಪ್ರಸಾದವನೊಲ್ಲ,
ಜ್ಞಾನ ಪ್ರಸಾದವಾದಲ್ಲಿ ಜಂಗಮಪ್ರಸಾದವನೊಲ್ಲ,
ಇಂತೀ ತ್ರಿವಿಧ ಪ್ರಸಾದವ ಬಲ್ಲವ, ಮಹಾಪ್ರಸಾದವ ಕೊಂಬ.
ಶುದ್ಧ ಸಿದ್ಧ ಪ್ರಸಿದ್ಧ ಪ್ರಸನ್ನೇತಿ ಪ್ರಸಾದವ ಚತುರ್ಭಾಗದಲ್ಲಿ
ಗುರುವಿಂಗೆ ತನುವಳಿದು, ಲಿಂಗಕ್ಕೆ ಮನವಳಿದು,
ಜಂಗಮಕ್ಕೆ ತ್ರಿವಿಧಮಲವಳಿದು, ಅರಿವಿಂಗೆ ಕುರುಹಳಿದು,
ಸ್ವಯವೆ ತಾನಾದ, ಇಂದಿರೆಡೆಗೆ[ಟ್ಟ] ಐಕ್ಯಪ್ರಸಾದಿಗೆ
ಕುಂಭೇಶ್ವರಲಿಂಗದಲ್ಲಿ ಜಗನ್ನಾಥ ಸಾಕ್ಷಿಯಾಗಿ
ನಮೋ ನಮೋ ಎನುತಿದ್ದೆನು. ॥ ೧ ॥

೧೨೦೬

ಕಾಷ್ಠವಗ್ನಿಯೊಳಗಿಡಲಿಕ್ಕಾಗಿ,
ಆ ಕಾಷ್ಠದೊಳಗಿದ್ದಗ್ನಿ ನಾನಿದ್ದೇನೆ, ನೀ ಬೇಡಾ ಎಂದಿತ್ತೆ?
ತಾನಡಗಿ ಇದಿರಿಟ್ಟ ಅಗ್ನಿಗೆ ಒಡಲಾಯಿತ್ತು.
ಇಂತು ಇದ್ದ ಇದಿರಿಂಗೆ ಒಡಲೆಡೆಗೊಡದ ಅಗಮ್ಯಂಗೆ ಪಡಿಪುಚ್ಚವಿಲ್ಲ,
ಕುಂಭೇಶ್ವರಲಿಂಗದಲ್ಲಿದ್ದ ಜಗನ್ನಾಥನನರಿದವಂಗೆ. ॥ ೨ ॥

೧೨೦೭

ಕೂಲಿ ಕೃಷಿ ಕಾಯಕಂಗಳಿಂದ ಮಾಡುವ
ಗುರುಲಿಂಗಜಂಗಮದ ಸೇವೆ, ಅದಾವ ತೆರನೆಂದರಿದು,
ಭಾವ ಶುದ್ಧವಾಗಿ ಮಾಡುವ ಸುಕಾಯಕವಂತನಿರವು
ಎಂತುಟೆಂದಡೆ :
ಮಾಡಿಕೊಂಡ ಕೃತ್ಯದಲ್ಲಿ ಆರಿಗೂ ಒಡಲೆಡೆಗೊಡದೆ,
ಕೊಂಡುದು ಪ್ರಸಾದ, ನಿಂದುದು ಸಯಿದಾನವೆನ್ನದೆ,
ಉಭಯ ಪ್ರತಿಪಾಕದಲ್ಲಿ ಆದ ಸಯಿದಾನಕ್ಕೆ ಸಂಕಲ್ಪವಳಿದು,
ಉಭಯಭಾಂಡವೂ ಸರಿಯೆಂದ ಪ್ರಸಾದಿಗೆ ಪ್ರಸಾದವ ಎಡೆಮಾಡಬೇಕು.
ಅದು ನಿರ್ಮಾಲ್ಯವಲ್ಲ, ಅದು ಲಿಂಗಾಂಗ, ಕುಂಭದಲ್ಲಿ ನಿಂದಪ್ರಸಾದ.
ಇದರ ಸಂದೇಹವ ಹರಿದು ಕೊಂಬ ನಿರಂಗಪ್ರಸಾದಿಗೆ
ಕುಂಭೇಶ್ವರಲಿಂಗದಲ್ಲಿದ್ದ ಜಗನ್ನಾಥ ಸಾಕ್ಷಿಯಾಗಿ
ನಮೋ ನಮೋ ಎನುತಿದ್ದೆನು. ॥ ೩ ॥

೧೨೦೮

ಕೈಯೊಡ್ಡಿ ಪ್ರಸಾದವ ಕೊಂಡಡೆ ಕರ್ಮಧಾರಿ.
ಶೇಷಪ್ರಸಾದವನಾಯ್ದು ಕೊಂಡಡೆ ವರ್ಮಹೀನ.
ಉಕ್ಕುಳಪ್ರಸಾದವ ಕೊಂಡಡೆ ಸತ್ಕ್ರೀಗೆ ಸಲ್ಲ.
ಇಂತಿವನರಿದು ಸಜ್ಜನಪ್ರಸಾದವ ನಿರ್ಧಾರದಿಂದ ಕೊಂಬ
ಮಹಾಪ್ರಸಾದಿಯ ಕಾರುಣ್ಯವೆನಗೆಂದಿಗೆ ಸಾಧ್ಯವಪ್ಪುದು ?
ಕುಂಭೇಶ್ವರಲಿಂಗದಲ್ಲಿ ಜಗನ್ನಾಥನನರಿದವಂಗಲ್ಲದೆ ಸಾಧ್ಯವಲ್ಲ. ॥ ೪ ॥

೧೨೦೯

ಧರೆಯ ಮೇಲೆ ಬಿದ್ದ ಬೀಜ,
ಧರೆಯಲ್ಲಿಯೆ ಅಳಿದು, ಆಕಾಶದಲ್ಲಿ ಫಲವಾಯಿತ್ತು.
ಆ ಫಲವ ಬಯಲ ಕಣದಲ್ಲಿ ಒಕ್ಕಿ, ಮನದ ಹಗಹದಲ್ಲಿ ತುಂಬಿ,
ಬಾಯ ಹಗಹದಲ್ಲಿ ತೆಗೆದು, ಕಣ್ಣಿನ ಕೊಳಗದಲ್ಲಿ ಅಳೆವುತ್ತಿರಲಾಗಿ,
ಖಂಡುಗವೆಂಬುದಕ್ಕೆ ಮೊದಲೆ ಕೊರಳಡಗಿತ್ತು,
ಕುಂಭೇಶ್ವರಲಿಂಗದಲ್ಲಿದ್ದ ಜಗನ್ನಾಥನರಿಕೆಯಾಗಿ. ॥ ೫ ॥

೧೨೧೦

ನೆಲ್ಲು ನೆಲದಲ್ಲಿಯೆ ಅಳಿದು, ಹುಲ್ಲಿನ ಒಡಲಲ್ಲಿಯೆ ಜನಿಸಿ,
ಆ ಹುಲ್ಲ ತನ್ನೊಳಗಿರಿಸಿದ ಭೇದವ ನೋಡಾ.
ತನ್ನೊಡಲಳಿದಲ್ಲಿ ನೆಲ್ಲೂ ಅಲ್ಲ, ಹುಲ್ಲೂ ಅಲ್ಲ!
ಆ ಹೊಡೆಯಲ್ಲಿ ಅಡಗಿತ್ತೆಂದರಿಯೆ,
ಕುಂಭೇಶ್ವರಲಿಂಗದಲ್ಲಿ ಜಗನ್ನಾಥನನರಿಯಲಾಗಿ. ॥ ೬ ॥

೧೨೧೧

ಭಯಭಕ್ತಿಯಿಂದ ಸಂಗನಬಸವಣ್ಣನ ಶ್ರೀಪಾದವ ಕಂಡೆನು.
ಅನುಮಿಷ ದೃಷ್ಟಿಯಿಂದ ಚೆನ್ನಬಸವಣ್ಣನ ಶ್ರೀಪಾದವ ಕಂಡೆನು.
ಸುಜ್ಞಾನದ ಬೆಳಗಿನಿಂದ ಪಭದೇವರ ಶ್ರೀಪಾದವ ಕಂಡೆನು.
ಇಂತೀ ಮೂವರ ಶ್ರೀಪಾದಕ್ಕೆ ನಮೋ ನಮೋ ಎನುತಿರ್ದೆನು,
ಕಂಭೇಶ್ವರಲಿಂಗದಲ್ಲಿ ಜಗನ್ನಾಥ ಸಾಕ್ಷಿಯಾಗಿ. ॥ ೭ ॥

೧೨೧೨

ಮಾತಿನ ಮಾತಿನ ಗೀತಾಂತದಲ್ಲಿ ಜಾಣನಾಗಿರಬಹುದು.
ಸ್ತೋತ್ರದ....ಪರಿಣತೆಯಲ್ಲಿ ಜಾಣನಾಗಿರಬಹುದು.
ಅಂತರಂಗ ಬಹಿರಂಗವಂತನಾಗಿರಬಹುದು.
ಕಾಂತೆಯರ ರತಿಗುಣವರ್ಜಿತರಾಗಿಬಹುದು.
ಕ್ಷೇತ್ರವಾಸಿಗಳಾಗಿರಬಹುದು, ತನುನಿಗ್ರಹ ಮಾಡಬಹುದು.
ವೈವಾಸದ ಕೊಂಬೆ ಕಿಂಚಿತ್ತಾಗಿ ಹೊದೆಯಬಹುದು.
ಹಿಡಿದು....ಮುಚ್ಚಿ ಪೂರೈಸದಿರ್ದಡೆ,
ಎನ್ನೊಡೆಯ ಕುಂಭೇಶ್ವರನ ಶರಣರ ನಚ್ಚಿನ ಮಚ್ಚಿನ
ಇಚ್ಛಾವಾಸವೃತ್ತಿಯಾದ ಕುಂಬಾರ ಗುಂಡನಲ್ಲಿ....ಲದ್ದುಗವು. ॥ ೮ ॥

೧೨೧೩

ಲಿಂಗವಂತರು, ಲಿಂಗಾಚಾರಿಗಳಂಗಣಕ್ಕೆ.
ಲಿಂಗಾರ್ಪಿತ ಭಿಕ್ಷಕ್ಕೆ ಹೋದಲ್ಲಿ, ಲಿಂಗಾರ್ಪಿತವ ಮಾಡುವಲ್ಲಿ,
ಸಂದೇಹವಿಲ್ಲದೆ ಕಾಣದುದನೆಚ್ಚರಿಸದೆ,
ಕಂಡುದ ನುಡಿಯದೆ, ಕಂಡುದನು ಕಾಣದುದನು,
ಒಂದೆಸಮವೆಂದು ತಿಳಯಬಲ್ಲಡೆ, ಕಂಭೇಶ್ವರಲಿಂಗವೆಂಬೆನು. ॥ ೯ ॥

೧೨೧೪

ಸ್ವಯಪ್ರಸಾದಿ ಗುರುಪ್ರಸಾದವನೊಲ್ಲ, ಲಿಂಗಪ್ರಸಾದವ ಕೊಂಬ.
ಜ್ಞಾನಪ್ರಸಾದಿ ಜಂಗಮಪ್ರಸಾದವ ಕೊಂಬ, ಲಿಂಗಪ್ರಸಾದವನೊಲ್ಲ.
ಮಹಾಪ್ರಸಾದಿ ಪ್ರಸನ್ನಪ್ರಸಾದವ ಕೊಂಬ, ಜಂಗಮಪ್ರಸಾದವನೊಲ್ಲ.
ಇಂತೀ ತ್ರಿವಿಧಪ್ರಸಾದದ ಭೇದವನರಿದು,
ಒಂದನೊಡಗೂಡಿ ಒಂದನರ್ಪಿಸಬೇಕು.
ಆ ಉಭಯಪ್ರಸನ್ನಪ್ರಸಾದವ
ಲಿಂಗಕ್ಕೆ ಕೊಟ್ಟು ಕೊಳಬಲ್ಲ ಮಹಾಪ್ರಸಾದಿಗೆ
ಕುಂಭೇಶ್ವರಲಿಂಗದಲ್ಲಿದ್ದ ಜಗನ್ನಾಥ [ಸಾಕ್ಷಿಯಾಗಿ]
ನಮೋ ನಮೋ ಎನುತಿದ್ದೆನು. ॥ ೧೦ ॥

■■

## ಕಾಂಡ : ಎರಡು

# ಅಜ್ಞಾತ ಶರಣರ ವಚನಗಳು

## -?-ಅಖಂಡ ಮಂಡಲೇಶ್ವರ

೧೨೧೫

ಕೊಲಲಾರದೆಯೆ

ಹಿಂದೆ ಬಂದುದನರಿದುದಿಲ್ಲಾಗಿ,
ಮುಂದೆ ಬಾಹದಕೆ ನೀ ಚಿಂತಿಸಲೇಕೆ ?
ಇಂದಿಗೆಂಬುದು ಲಿಂಗದೊಲವು.
ಶಿವಶರಣಂಗೆ ನಾಳೆ ಇಂದು ಎಂಬ ಅಭಾವವಿಲ್ಲ.
ಕಡುಗಲಿಯಾದ ಶರಣ ರಕ್ಷೆಯ ಕಾಯವೇನಯ್ಯಾ,
ಅಖಂಡ ಮಂಡಲೇಶ್ವರಾ. ॥ ೧ ॥

■■

## -?- ಅನುಗಲೇಶ್ವರ

೧೨೧೬

ಕಾಡೊಡೊಯರು ಊರಿಗೆ ಬಂದು ಬೇಡಾಡಿದಡೆ,
ಊರೊಳಗಣವರೆಲ್ಲ ಎದ್ದು ಕಾಡಿಗಟ್ಟಿ,
ಕಮ್ಮರಿಗಿಡು ಮಾಡಲು,
ನಾ ಸುಮ್ಮನೆ ಮೌನಿಯಾಗಿದ್ದೆನಯ್ಯಾ,
ಅನುಗಲೇಶ್ವರಾ. ॥ ೧ ॥

■■

## -?-ಅಪ್ರಮಾಣ ಗುಹೇಶ್ವರ

೧೨೧೭

ಎಡಕಲ ಕಡಿದು, ಮಡಕೆಗಿಂಬಾಗಿ,
ಸೊಗದಡಗ ತಿಂಬ ಈ ಸರದಿಗರಿಗೇಕೆ,
ಜಗದಯ್ಯನ ಬಿಂಕದಂಕ,
ಅಪ್ರಮಾಣ ಗುಹೇಶ್ವರಾ ? ॥ ೧ ॥

## -?- ಅಶ್ವಥರಾಮ

೧೨೧೮

ಅಂಗವೇ ಆಧಾರ, ಲಿಂಗವೆ ಜೀವ.
ಈ ಅಂಗಲಿಂಗದಿಂದವೆ ಸ್ವರ.
ಲಿಂಗವು ಮಹಾಬೇಳಗಾಗಲಿಕ್ಕಾಗಿ,
ಅಶ್ವಥರಾಮ ಹಗಲು ಬಯಲು. ॥ ೧ ॥

■■

## -?- ಆನಂದ ಸಿದ್ಧೇಶ್ವರ

೧೨೧೯

ಕಂಗಳ ಸುಖ ಕರ್ಮವೆಂಬುದನರಿಯರು.
ಕಿವಿಯ ಸುಖ ಕೇಡೆಂಬುದನರಿಯರು.
ನಾಸಿಕದ ಸುಖ ಹೇಸಿಕೆಯೆಂಬುದನರಿಯರು.
ಬಾಯಸುಖ ಭ್ರಮೆಯೆಂಬುದನರಿಯರು.
ಕಾಂಕ್ಷೆಯ ಸುಖ ಹುಚ್ಚೆಂಬುದನರಿಯರು.
ಇಂತಪ್ಪ ವಿಷಯಾಬ್ಧಿಗಳೊಳಗೆ
ಮುಳುಗುತ್ತಿಪ್ಪ ಅಜ್ಞಾನಿಜಡರುಗಳ
ಎನ್ನತ್ತ ತೋರದಿರಾ, ಆನಂದ ಸಿದ್ಧೇಶ್ವರಾ. ॥ ೧ ॥

೧೨೨೦

ಮೃದು ಕಠಿಣ ಶೀತೋಷ್ಣಾದಿಗಳನರಿಯದನ್ನಕ್ಕ
ಅರ್ಪಿತವ ಮೀರಲಾಗದು.
ಅಂಗವುಂಟಾದಡೆ ಲಿಂಗವಲ್ಲದೆ ಅರಿಯಲರಿಯದೊ.
ಅಭಂಗ ಶರಣಂಗೆ ಅಂಬಲಿಯೂ ಸರಿ, ಅಮೃತವು ಸರಿ.
ಹಂಚೂ ಸರಿ ಕಂಚೂ ಸರಿ, ತಟ್ಟೂ ಸರಿ ತಗಡೂ ಸರಿ.
ರೆಂಬೆಯೂ ಸರಿ ಸಿಂಬೆಯೂ ಸರಿ, ಅರಸೂ ಸರಿ ಆಳೂ ಸರಿ.
ಊರೂ ಸರಿ ಕಾಡೂ ಸರಿ, ಸ್ತುತಿಯೂ ಸರಿ ನಿಂದೆಯೂ ಸರಿ.
ಇಂತಿವ ಮೀರಿದ ಮಹಾಪುರುಷನ ನಿವಲ
ಇಳೆಯೊಳಗಣವರೆತ್ತ ಬಲ್ಲರಯ್ಯಾ, ಆನಂದ ಸಿದ್ಧೇಶ್ವರಾ. ॥ ೨ ॥

■■

## -೭- ಈಶ್ವರೀಯ ವರದ ಚೆನ್ನರಾಮ

೧೨೧

ರಾಶಿಹೊನ್ನು ಸಾಸಿರಕನ್ಯೆಯೇಸಿಕೆ ರಾಜ್ಯವಾದಡೂ
ಈ ಶರೀರವಳಿವುದೆ ದಿಟ !
ಇದರಾಸೆಯ ನೀಗಾಡಿ,
ಈಶ್ವರೀಯ ವರದ ಚೆನ್ನರಾಮನೆಂಬ ಲಿಂಗವನಾಸೆಗೆಯ್ದಡೆ,
ಮುಂದೆ ಲೇಸಪ್ಪುದು ಕಾಣಿರಣ್ಣಾ. ॥ ೧ ॥

■■

## -?- ಏಕಾಂತ ವೀರಸೊಡ್ಡಳ

೧೨೨೨

ಲೋಕಾಂತವಳಿದು ಏಕಾಂತ ಉಳಿದಲ್ಲಿ
ಏಕೈಕಮೂರ್ತಿಯ ಸಂಗ ಸಮನಿಸಿತ್ತೆನಗೆ.
ಎನ್ನ ನುಡಿ ಆತನ ಕಿವಿಗೆ ಇನಿದಾಯಿತ್ತು.
ಆತನ ನುಡಿ ಎನ್ನ ಕಿವಿಗೆ ಇನಿದಾಯಿತ್ತು.
ಇಬ್ಬರ ನುಡಿಯೂ ಒಂದೇಯಾಗಿ ನಿಶ್ಶಬ್ದ ವೇಧಿಸಿತ್ತು.
ಈ ಸುಖದ ಸೋಂಕಿನ ಪುಣ್ಯದ ಫಲದಿಂದ
ಅನುಪಮಚರಿತ್ರ ಪ್ರಭುದೇವರ ನಿಲವ ಕಂಡು,
ನಾನು ಧನ್ಯನಾದೆನು ಕಾಣಾ, ಏಕಾಂತ ವೀರಸೊಡ್ಡಳಾ. ॥ ೧ ॥

೧೨೨೩

ಬಂದ ಬಟ್ಟೆಯ ಹೊದ್ದದಾತ ಲಿಂಗೈಕ್ಯನು.
ಹಿಂದು ಮುಂದರತು, ಸಂದೇಹವಿಲ್ಲದಾತ ಲಿಂಗೈಕ್ಯನು.
ಶ್ರೀಗುರು ಏಕಾಂತ ವೀರಸೊಡ್ಡಳನಲ್ಲಿ
ತನ್ನ ತಾ ಮರೆದಾತ ಲಿಂಗೈಕ್ಯನು. ॥ ೨ ॥

## -೧-ಏಕೋರಾಮೇಶ್ವರಲಿಂಗ

೧೨೨೪

ತಾನು ಸುಖಿಯಾದಡೆ ತನ್ನ ಲಿಂಗಮೆಚ್ಚ ನಡೆವುದು.
ತಾನು ಸುಖಿಯಾದಡೆ ತನ್ನ ಲಿಂಗಮೆಚ್ಚ ನುಡಿವುದು.
ನಿಂದೆ ಬೇಡ, ಪರನಿಂದೆ ಬೇಡ.
ಅವರಾದಡೇನು ? ಹೋದಡೇನು ?
ತಾನು ಸುಖಿಯಾದಡೆ ಸಾಕು.
ಏಕೋರಾಮೇಶ್ವರಲಿಂಗದ ನಿಜವನರಿದಡೆ,
ಬೀಗಿ ಬೆಳೆದ ರಾಜಾನ್ನದ ತೆನೆಯಂತಿರಬೇಕು, ಶರಣ. ॥ ೧ ॥

■■

## -?-ಕಲ್ಲಯ್ಯದೇವರು

೧೨೨೫

ಹೇಳಿಹೆ ಕೇಳಾ ಬಸವಣ್ಣಾ,
ನಿನಗೊಂದು ಮಾತಿನ ಹೊಲ್ಲೆಹ ಹೊದ್ದಿಹಿತೆಂದು.
ಶಿವರಸವೆಂಬ ಮಡುವಿನಲ್ಲಿ ಒಗೆದೆ ನಾನು.
ಈರೇಳು ಭುವನವರಿಯಲು ಒಂದು ಲಚ್ಚಣವನಿಕ್ಕಿದೆ, ನಾನು.
ಕಲ್ಲಯ್ಯದೇವರು ಸಾಕ್ಷಿಯಾಗಿ
ಆಚಾರವನೆ ಗಳಿಸಿದೆ, ಅನಾಚಾರವನೆ ಘಟ್ಟಿಸಿದೆ ಕಾಣಾ,
ಸಂಗನಬಸವಣ್ಣಾ. ॥ ೧ ॥

■■

## -?-ಕುರಂಗೇಶ್ವರಲಿಂಗ ಕುಂತಳಿಯ ವರಕುರಂಗಲಿಂಗ

೧೨೨೬

[ಕ]ಟ್ಟಕಡೆಯ ಕಟ್ಟಲು ಬಲಿವುದೆ ?
ವ್ರತ ಹೋದಲ್ಲಿ ವ್ರತ ಒಪ್ಪುವದೆ?
ಕೆಟ್ಟ ಕಣ್ಣಿಂಗೆ ದೃಷ್ಟಿಯುಂಟೆ,
ಭವಹರ ಕುರಂಗೇಶ್ವರಲಿಂಗಾ ? ॥ ೧ ॥

೧೨೨೭

ಪ್ರಸಾದವೆಂದು ಭಾವಿಸಿ, ಕಳಂಕದೋರಿದಡೆ
ಪಂಚಮಹಾಪಾತಕ.
ಪದಾರ್ಥವೆಂದು ಪ್ರಮಾಣಿಸಿ, ಹಿಮ್ಮೆಟ್ಟಿದಡೆ
ಭಕ್ತದ್ರೋಹ.
ಈ ಎರಡರ ಸಂದಿನಲ್ಲಿ
ಸಂದೇಹಕ್ಕೊಳಗಾದವರನೆನಗೆ ತೋರದಿರಯ್ಯಾ,
ಕುಂತಳಿಯ ವರಕುರಂಗಲಿಂಗವೆ. ॥ ೨ ॥

■■

## -?-ಗಾರ್ಗೇಶ್ವರಲಿಂಗ

೧೨೨೮

ಮಂಡೆಯ ಬೋಳಿಸಿಕೊಂಡು,
ತೀರ್ಥಕ್ಷೇತ್ರ ಇಕ್ಕಿಯೆರವವರ ಕಾರುಣ್ಯವಾಗಿ
ಕಡು ಶಾಸ್ತ್ರಿಗನಾಗದೆ,
ಹಾರುವನಂತೆ ಲಂಡಕೊಂಡೆಯರ ಕಂಡು,
ಪೊಯಿಹೊಡದಂತಿಪ್ಪ ಶಿವಶರಣರು
ಒರಗಿದಡೆ ಒಲ್ಲರು, ಕಂಡಡರಿಯರು,
ಮಡಿಕೆಯಾಗಿ ಹೊದೆಯರು, ಉಡಿಗೆಯನುಡರು,
ತೊಡಿಗೆಯ ತೊಡರು, ಇಡಿಗೆಯನಿಡರು.
ಕಪ್ಪಕಂಬಳಿಯ ಹೊದ್ದು, ಕುಪ್ಪಸ ನಿಃಪತಿಯಾದ ಶರಣ,
ಗಾರ್ಗೇಶ್ವರಲಿಂಗವು ತಾನೇ ಪರಮ ವಿರತನಾದಿರವು. ॥ ೧ ॥

## -?-ಗುರುವರದ ವಿರೂಪಾಕ್ಷ

೧೨೯

ಸಿರಿಯೆಂದಡೆಲ್ಲರೂ ಬರ್ಪರ್ರೈಸೆ.
ಉರಿಯೆಂದಡಾರೂ ನಿಲಲಾರರಯ್ಯಾ.
ಉರಿವುತಿದೆ ಲೋಕ ಗರಳದುರಿಯಿಂದ.
ತೆರಳುತಿದೆ ದೆಸೆದೆಸೆಗೆ ಸುರಾಸುರಾಳಿ.
ಹರಿವಿರಂಚಿಗಳು ಸಿರಿ ಸರಸ್ವತಿಯ ಕೈವಿಡಿದು
ಮರುಳುಗೊಂಡರು, ನಿಮ್ಮ ನಿಜವನರಿಯದೆ.
ಸಿರಿಯ ಭಕ್ತರ್ಗಿತ್ತು, ಉರಿಯ ನೀ ಧರಿಸಿದೆ.
ಸರಿಯಾರು ನಿನಗೆ ಗುರುವರದ ವಿರೂಪಾಕ್ಷಾ ! ॥ ೧ ॥

■■

## -?- ಗುರು ವಿಶ್ವೇಶ್ವರಾ

೧೨೩೦

ಬ್ರಹ್ಮದೇವರಾದಡೆ ಬ್ರಹ್ಮನವಾಹನ ಹಂಸ
ಹಂಸನಲ್ಲಿ ಹರ[ಗಿ] ಬೆಳದುಂಡನೆ ?
ವಿಷ್ಣು ದೇವರಾದಡೆ ವಿಷ್ಣುವಿನ ವಾಹನ ಗರುಡ
ಗರುಡನಲ್ಲಿ ಹರ[ಗಿ] ಬೆಳದುಂಡನೆ ?
ಇಂದ್ರ ದೇವರಾದಡೆ ಇಂದ್ರನ ವಾಹನ ಆನೆ
ಆನೆಯಲ್ಲಿ ಬಿತ್ತಿ ಬೆಳದುಂಡನೆ ?
ಮೈಲಾರ ದೇವರಾದಡೆ ಮೈಲಾರನ ವಾಹನ ಕುದುರೆ
ಕುದುರೆಯಲ್ಲಿ ಬಿತ್ತಿ ಬೆಳದುಂಡನೆ ?
ಜಿನ್ನ ದೇವರಾದಡೆ ಜಿನ್ನನ ವಾಹನ ಕತ್ತೆ
ಕತ್ತೆಯಲ್ಲಿ ಬಿತ್ತಿ ಬೆಳದುಂಡನೆ ?
ಭೈರವ ದೇವರಾದಡೆ ಭೈರವನ ವಾಹನ ಚೇಳು
ಚೇಳಿನಲ್ಲಿ ಬಿತ್ತಿ ಬೆಳದುಂಡನೆ ?
ಗಣೇಶ್ವರ ದೇವರಾದಡೆ ಗಣೇಶ್ವರನ ವಾಹನ ಇಲಿ
ಇಲಿಯಲ್ಲಿ ಬಿತ್ತಿ ಬೆಳದುಂಡನೆ ?
ದೇವರಲ್ಲವೆನಲಾರೆನು ಮತ್ತೆ ದೇವರೆಂಬುದು ಸತ್ಯ.
ಅದೆಂತೆಂದಡೆ

ಗಣೇಶಗೆ ಈಶ್ವರನ ಹೆಸರುಂಟು,
ಅದು ಹೇಗೆ ಗಣೇಶ್ವರ ?
ಮತ್ತೆ ಅದೆಲ್ಲದೆ ಪಾರ್ವತಿಗೆ ಮೋಹದ ಕುಮಾರ.
ಅದಲ್ಲದೆ ಜಿತೇಂದ್ರಿ. ಸರ್ವಜಗಕೆ
ವಿದ್ಯೆ ಬುದ್ಧಿಯಂ ಕೊಡುವನು, ಅದರಿಂದ ಸತ್ಯನು.
ಓಂಕಾರ ವಸ್ತುವೆ ಸಾಕ್ಷಿಯಾಗಿ ಮತ್ತಂ
ನಮ್ಮ ಸದಾಶಿವನ ವಾಹನ ಬಸವಣ್ಣ.
ಬಸವಣ್ಣನ ಬಿರಿದೆಂತೆಂದರೆ
ಸಪ್ತಸಮುದ್ರ ಜಲಪ್ರಳಯಕ್ಕೆ ಹೆಪ್ಪಕೊಟ್ಟ
ಕಾರುಣ್ಯದಲ್ಲಿ ಎತ್ತೆಂಬ ಶಬ್ದಾಯಿತ್ತು.
ಎತ್ತ ನೋಡಿದಡತ್ತ
ತನ್ನಲಿಂದುತ್ಪತ್ಯವಾಯಿತೆಂಬ ಶಬ್ದವೆತ್ತಾಯಿತ್ತು.
ತನ್ನಿಂದ ಹರಗಿ ಬಿತ್ತಿ ಬೆಳೆಯಲಿಕೆ
ಪವಿತ್ರಸ್ವಾಮಿಗೆ ನೈವೇದ್ಯವಾಯಿತ್ತು.
ಹಸ್ತಪರುಷವ ಮಾಡಲಿಕೆ
ಘನವರುಷ ಪ್ರಸಾದವಾಯಿತ್ತು.
ಇಂತಿರ್ದ ನಮ್ಮ ಬಸವನ ಪ್ರಸಾದವನುಂಡು
ನನ್ನ ದೇವರು ಹೆಚ್ಚು ತನ್ನ ದೇವರು ಹೆಚ್ಚು ಎಂದು
ಕಚ್ಚಾಡುವ ಕುನ್ನಿ ಮೂಕೊರೆ ಮೂಳ ಹೊಲೆಯರಿಗೆ
ಏನೆಂಬೆನಯ್ಯಾ ಗುರು ವಿಶ್ವೇಶ್ವರಾ. ॥ ೧ ॥

■■

## -?-ಗೊಹೇಶ್ವರಲಿಂಗದಲ್ಲಿ ಪ್ರಭುವೆ ಸಾಕ್ಷಿಯಾಗಿ ಬಸವಪ್ರಿಯ ಕೂಡಲಸಂಗಮದೇವ

೧೨೩೧

ಇಷ್ಟಲಿಂಗವೆ ಬಸವಣ್ಣನೆಂದರಿದು,
ತಮ್ಮ ಇಷ್ಟಲಿಂಗದಲ್ಲಿ ನಿರವಯಲನೈದಿದರು ಅಕ್ಕನಾಗಲಾಂಬಿಕೆಯಮ್ಮನವರು.
ಜಂಗಮಪ್ರಸಾದವೆ ಬಸವಣ್ಣನೆಂದರಿದು,
ತಮ್ಮ ಜಂಗಮಪ್ರಸಾದದಲ್ಲಿ ನಿರವಯನೈದಿದರು
ಅಕ್ಕಮಹಾದೇವಿಯಮ್ಮನವರು.
ಪ್ರಸಾದಲಿಂಗವೆ ಬಸವಣ್ಣನೆಂದರಿದು,
ತಮ್ಮ ಪ್ರಸಾದಲಿಂಗದಲ್ಲಿ ನಿರವಯನೈದಿದರು ಮುಕ್ತಾಯಕ್ಕಗಳು.
ಆಚಾರಲಿಂಗವೆ ಬಸವಣ್ಣನೆಂದರಿದು,
ತಮ್ಮ ಆಚಾರಲಿಂಗದಲ್ಲಿ ನಿರವಯನೈದಿದರು ಅಸಂಖ್ಯಾತ
ಮಹಾಗಣಂಗಳೆಂಲ್ಲರು.
ಗುಹೇಶ್ವರಲಿಂಗದಲ್ಲಿ ಪ್ರಭುವೆ ಸಾಕ್ಷಿಯಾಗಿ
ಬಸವಪ್ರಿಯ ಕೂಡಲಸಂಗಮದೇವಾ,
ಬಸವಣ್ಣನಿಂದ ನಿರವಯಲ ಲಿಂಗವ ಕಂಡೆನು. ॥ ೧ ॥

೧೨೩೨

ಎನ್ನ ಭಕ್ತನೆಂಬರಯ್ಯಾ,
ಎನ್ನ ಭಕ್ತಿಸ್ಥಲವ ಬಸವಣ್ಣ ಸೂರೆಗೊಂಡನಾಗಿ.
ಎನ್ನ ಮಾಹೇಶ್ವರನೆಂಬರಯ್ಯಾ,
ಎನ್ನ ಮಾಹೇಶ್ವರಸ್ಥಲವ ಮಡಿವಾಳಯ್ಯ ಸೂರೆಗೊಂಡನಾಗಿ.
ಎನ್ನ ಪ್ರಸಾದಿಯೆಂಬರಯ್ಯಾ,
ಎನ್ನ ಪ್ರಸಾದಿಸ್ಥಲವ ಚೆನ್ನಬಸವಣ್ಣ ಸೂರೆಗೊಂಡನಾಗಿ.
ಎನ್ನ ಪ್ರಾಣಸಿಂಗಿಯೆಂಬರಯ್ಯಾ,
ಎನ್ನ ಪ್ರಾಣಲಿಂಗಿಸ್ಥಲವ ನುಲಿಯ ಚಂದಯ್ಯ ಸೂರೆಗೊಂಡನಾಗಿ.
ಎನ್ನ ಶರಣನೆಂಬರಯ್ಯಾ,
ಎನ್ನ ಶರಣಸ್ಥಲವ [ಘಟ್ಟಿ]ವಾಳಯ್ಯ ಸೂರೆಗೊಂಡನಾಗಿ.
ಎನ್ನ ಐಕ್ಯನೆಂಬರಯ್ಯಾ,
ಎನ್ನ ಐಕ್ಯಸ್ಥಲವ ಅಜಗಣ್ಣ ಸೂರೆಗೊಂಡನಾಗಿ.
ಇಂತೆನ್ನಂಗಸ್ಥಲವನೆಲ್ಲವ ನಿಮ್ಮ ಲಿಂಗೈಕ್ಯರು ಸೂರೆಗೊಂಡರಾಗಿ.
ಎನ್ನ ಲಿಂಗೈಕ್ಯನೆಂಬರು,
ಗೊಹೇಶ್ವರಲಿಂಗದಲ್ಲಿ ಪ್ರಭುವೆ ಸಾಕ್ಷಿಯಾಗಿ
ಬಸವಪ್ರಿಯ ಕೂಡಲಸಂಗಮದೇವಾ. ॥ ೨ ॥

೧೨೩೩

ಬಸವಣ್ಣನ ಏಕಾಕ್ಷರದಿಂದ ಷಡಾಕ್ಷರ ಪುಟ್ಟಿತ್ತು,
ಇನ್ನು ಬಸವಣ್ಣನ ಏಕಾಕ್ಷರ, ತ್ರಯಾಕ್ಷರ, ಪಂಚಾಕ್ಷರ,
ಷಡಾಕ್ಷರವೆನ್ನ ಸರ್ವಾಂಗದಲ್ಲಿ ತುಂಬಿ ಅಕ್ಷರಮಯವಾಯಿತ್ತು,
ಗೊಹೇಶ್ವರಲಿಂಗದಲ್ಲಿ ಪ್ರಭುವೆ ಸಾಕ್ಷಿಯಾಗಿ,
ಬಸವಪ್ರಿಯ ಕೂಡಲಸಂಗಮದೇವಾ ಬಸವಣ್ಣನ ಕಾರುಣ್ಯದಿಂದ. ॥ ೩ ॥

೧೨೩೪

ಬಸವಣ್ಣನ ನೆನೆವುತ್ತ ನೆನೆವುತ್ತ ಗುರುವ ಕಂಡೆ.
ಬಸವಣ್ಣನ ನೆನೆವುತ್ತ ನೆನೆವುತ್ತ ಲಿಂಗವ ಕಂಡೆ,
ಬಸವಣ್ಣನ ನೆನೆವುತ್ತ ನೆನೆವುತ್ತ ಜಂಗಮವ ಕಂಡೆ.
ಬಸವಣ್ಣನ ನೆನೆವುತ್ತ ನೆನೆವುತ್ತ ಪ್ರಸಾದವ ಕಂಡೆ.
ಬಸವಣ್ಣನ ನೆನೆವುತ್ತ ನೆನೆವುತ್ತ ಪಾದೋದಕವ ಕಂಡೆ.
ಬಸವಣ್ಣನ ನೆನೆವುತ್ತ ನೆನೆವುತ್ತ ಪಂಚಾಚಾರವ ಕಂಡೆ,
ಗೊಹೇಶ್ವರಲಿಂಗದಲ್ಲಿ ಪ್ರಭುವೆ ಸಾಕ್ಷಿಯಾಗಿ
ಬಸವಪ್ರಿಯ ಕೂಡಲಸಂಗಮದೇವಾ ಬಸವಣ್ಣನ ನೆನೆದ ಕಾರಣದಿಂದ. ॥ ೪॥

೧೨೩೫

ಬಸವಣ್ಣನೆಂಬ ಆಚಾರಲಿಂಗವ ಪಿಡಿದು
ಅನಿಮಿಷಯ್ಯ ಬಸವಣ್ಣನಂತಾದ.
ಬಸವಣ್ಣನೆಂಬ ಗುರುಲಿಂಗವ ಪಿಡಿದು ಮಡಿವಾಳಯ್ಯ ಬಸವಣ್ಣನಂತಾದ.
ಬಸವಣ್ಣನೆಂಬ ಶಿವಲಿಂಗವ ಪಿಡಿದು ಚೆನ್ನಬಸವಯ್ಯ ಬಸವಣ್ಣನಂತಾದ.
ಬಸವಣ್ಣನೆಂಬ ಜಂಗಮಲಿಂಗವ ಪಿಡಿದು ಸಿದ್ಧರಾಮಯ್ಯ ಬಸವಣ್ಣನಂತಾದ.
ಬಸವಣ್ಣನೆಂಬ ಪ್ರಸಾದಲಿಂಗವ ಪಿಡಿದು ಘಟ್ಟಿವಾಳಯ್ಯ ಬಸವಣ್ಣನಂತಾದ.
ಬಸವಣ್ಣನೆಂಬ ಮಹಾಲಿಂಗವ ಪಿಡಿದು ಅಜಗಣ್ಣ ಬಸವಣ್ಣನಂತಾದ.
ಬಸವಣ್ಣನೆಂಬ ಗುಹೇಶ್ವರಲಿಂಗವ ಪಿಡಿದು
ಪ್ರಭುದೇವರು ಜ್ಯೋತಿರ್ಮಯನಾದ.
ಅಸಂಖ್ಯಾತ ಮಹಾಗಣಂಗಳೆಲ್ಲರೂ ಬಸವಣ್ಣನೆಂಬ
ನಿರವಯಲಿಂಗವ ಪಿಡಿದು,
ಶರಣಸತಿ ಲಿಂಗಪತಿಯಾದರು.
ಗುಹೇಶ್ವರಲಿಂಗದಲ್ಲಿ ಪ್ರಭುವೆ ಸಾಕ್ಷಿಯಾಗಿ,
ಬಸವಪ್ರಿಯ ಕೂಡಲಸಂಗಮದೇವಾ,
ಬಸವಣ್ಣನ ಶ್ರೀಪಾದಕ್ಕೆ ನಮೋ ನಮಃ ಎನುತಿರ್ದೆನು. ॥ ೫ ॥

೧೨೩೬

ಬಸವಣ್ಣನೆ ಗುರುವೆಂದರಿಯರಲ್ಲ, ಬಸವಣ್ಣನೆ ಲಿಂಗವೆಂದರಿಯರಲ್ಲ,
ಬಸವಣ್ಣನೆ ಕಾರಣವೆಂದರಿಯರಲ್ಲ, ಬಸವಣ್ಣನೆ ಪ್ರಸಾದವೆಂದರಿಯರಲ್ಲ.
ಬಸವಣ್ಣನೆ ಗುರುವೆಂದು ಅನುಮಿಷನರಿದ.
ಬಸವಣ್ಣನೆ ಲಿಂಗವೆಂದು ಚೆನ್ನಬಸವಣ್ಣನರಿದ.
ಬಸವಣ್ಣನೆ ಜಂಗಮವೆಂದು ಪ್ರಭುದೇವರರಿದರು.
ಬಸವಣ್ಣನೆ ಪ್ರಸಾದವೆಂದು, ಮರುಳಶಂಕರದೇವರು ಅರಿದು ಆಚರಿಸಿದರು.
ಇದು ಕಾರಣ, ಬಸವಣ್ಣನೆ ಗುರು, ಬಸವಣ್ಣನೆ ಲಿಂಗ,
ಬಸವಣ್ಣನೆ ಜಂಗಮ, ಬಸವಣ್ಣನೆ ಪ್ರಸಾದವೆಂದರಿಯದ
ಅನಾಚಾರಿಗಳ ಎನಗೆ ತೋರದಿರಯ್ಯ,
ಗುಹೇಶ್ವರಲಿಂಗದಲ್ಲಿ ಪ್ರಭುವೆ ಸಾಕ್ಷಿಯಾಗಿ
ಬಸವಪ್ರಿಯ ಕೂಡಲಸಂಗಮದೇವಾ. ॥ ೬ ॥

■■

## -?-ಚೆನ್ನರಾಮೇಶ್ವರಲಿಂಗ

೧೨೩೭

ವಚನಾರ್ಥವನರಿದು ನುಡಿದಿಹೆನೆಂದಡೆ,
ರಚನೆಯ ರಂಜನೆಗೆ ಒಳಗಾಯಿತ್ತು,
ತತ್ವವನಟ್ಟೈಸಿಹೆನೆಂದಡೆ
ಆತ್ಮಘಾತಕ ಭೂತಸಿದ್ಧಿಗೊಳಗಾಯಿತ್ತು,
ಸರ್ವಷೂ ತಾನೆಂದರಿದವಗೆ ಸಂದೇಹಸೂತಕವಿಲ್ಲ,
ಅರಿವು ಆತ್ಮನಲ್ಲಿ ವೇದ್ಯವಾದವಗೆ
ಆ ಸರ್ವವೂ ಅಹುದಲ್ಲಾಯೆಂದು ನಿಂದ ಮತ್ತೆ
ಮಾರ್ಘೊಳಲನೇರಿದ ಧೀರನಂತಿರಬೇಡವೆ ಪರಮವಿರಕ್ತಿ,
ಲೋಲಿಯ......ದಂತೆ, ಜೋಲಿಯ ಕೀಲಿನಂತೆ
ಗ್ರಂಥಿಯ ಗಸಣದಂತಿಪ್ಪವರ ಕಂಡೆನಗೆ ಹೇಸಿಕೆಯಾಯಿತ್ತು,
ಪರತತ್ವಪ್ರಕಾಶ ಚೆನ್ನ ರಾಮೇಶ್ವರಲಿಂಗವನರಿವುದಕ್ಕೆ
ಅಹುದೋ, ಅಲ್ಲವೋ ಎನುತಿರ್ದೆನು. ॥ ೧ ॥

## -?- ಜಂಗಮಲಿಂಗಪ್ರಭುವೆ

೧೨೩೮

ಅಖಂಡ[ಗೋಳಕಾ]ಕಾರವಾದ ಸ[ಹಜ] ನಿ[ರಂಜನ] ವಸ್ತು
ಲಿಂಗವೆನಿಸುವದಯ್ಯಾ.
ನಿಂದಲ್ಲಿ ಒಂದಾಯಿತ್ತು, ಒಂದಾದಲ್ಲಿ ಉಭಯವಾಗಿತ್ತು,
ಪೂಜಿಸಿದಲ್ಲಿ ಮೂರಾಯಿತ್ತು, ಆಚರಿಸಿದಲ್ಲಿ ಆರಾಯಿತ್ತು,
ಆನಂದಿಸಿದಲ್ಲಿ ಮೂವತ್ತಾರು ಆಯಿತ್ತು,
ಗುಣಿತ ಮಾಡಿದಲ್ಲಿ ಇನ್ನೂರ ಹದಿನಾರಾಯಿತ್ತು,
ಅಖಂಡಲಿಂಗದಿಂದ ಚಿದ್ರೂಪವಾದ ಪರಿಯನು
ಶಿಷ್ಯಂಗೆ ಗುರುವು ನಿರೂಪಿಸಿದ ಕಾಣಾ, ಜಂಗಮಲಿಂಗಪ್ರಭುವೆ. ॥ ೧ ॥

೧೨೩೯

ಅಟ್ಟಂಬಾರಣ್ಯದೊಳಗೊಂದು
ಕಟ್ಟಲಿಲ್ಲದ ದೇಗುಲವುಳಿದಿಪ್ಪುದು ನೋಡಿರಯ್ಯಾ !
ಆ ದೇಗುಲದೊಳಗೊಂದು
ಸರ್ವಜೀವನೆಂಬ ರತ್ನ ಬಿದ್ದಿಪ್ಪುದು ನೋಡಿರಯ್ಯಾ !
ಆ ರತ್ನ ಮೂರುಲೋಕಕ್ಕೆ ಮೈದೋರದಿಪ್ಪುದು ನೋಡಿರಯ್ಯಾ !
ನೆಟ್ಟಕಲ್ಲಿನೊಳಗೊಬ್ಬ ಹುಟ್ಟುಗುರುಡನುದ್ಭವಿಸಿ ಬಂದು,
ಆ ಸರ್ವಜೀವನೆಂಬ ರತ್ನವ ಮುಟ್ಟಿ ನೋಡಿದರೆ,

ಆ ಹುಟ್ಟಗುರುಡ ತಾನೆ ರತ್ನವಾದ
ಆದ ಕಂಡು ನಾ ಬೆರಗಾದೆನಯ್ಯಾ, ಜಂಗಮಲಿಂಗಪ್ರಭುವೆ. ॥ ೨ ॥

೧೨೪೦

ಆದಿ ಅನಾದಿಯ ಕೂಡಿದ ಮಹಿಮಂಗೆ
ಆಧಾರವೆ ಆಚಾರಸ್ಥಲ, ಸ್ಪರ್ಶನವೆ ಗುರುಸ್ಥಲ.
ಮಣಿಪೂರಕವೆ ಲಿಂಗಸ್ಥಲ, ಅನಾಹತವೆ ಜಂಗಮಸ್ಥಲ.
ವಿಶುದ್ಧಿಯೆ ಪ್ರಸಾದಿಸ್ಥಲ, ಆಜ್ಞೇಯವೆ ಆನಂದಸ್ಥಲ.
ಇಂತೀ ಆರು ಸ್ಥಲಂಗಳ ಮೇಳವಾಯಿತ್ತು.
ಮೇಲಣ ಮೂರುಸ್ಥಲಂಗಳ ಮೀರಲರಿಯದೆ
ಸಂಪರ್ಕವ ಮಾಡುವ ಅಣ್ಣಗಳಿಗೆ
ನಾಲ್ಕು ವೇದ, ಹದಿನೆಂಟು ಪುರಾಣ, ಇಪ್ಪತ್ತೆಂಟು ದಿವ್ಯಾಗಮ,
ಮೂವತ್ತೆರಡು ಉಪನಿಷತ್ತು, ಆರು ಶಾಸ್ತ್ರ,
ಮೂವತ್ತೆರಡು ರಾಗ, ಅರುವತ್ತಾರು ಮಿಶ್ರಾರ್ಪಣ.
ಇಂತೀ ಹನ್ನೆರಡು ಸಾವಿರ ಗೀತಪ್ರಬಂಧಕ್ಕೆ
ಮುಖ್ಯವಾದ ಬೀಜ ಒಂದೇ ಓಂಕಾರ ಕಾಣಭೋ !
ಆ ಓಂಕಾರಕ್ಕೆ ಸೋಕರ ಸೋಹಂ ಎಂಬ ಮಹಾವೃಕ್ಷ.
ಅದು ಮಹಾಸಾಜದಿಂದ ವೃಕ್ಷವಾಯಿತ್ತು.
ಆ ಸಾಜವೇನು ವೃಕ್ಷವೆ ? ಅಲ್ಲ, ಬೀಜವೇ ಅಹಂ.
ಈ ಉಭಯವಿಲ್ಲದೆ ನಿರೂಪಿಸುತ್ತಿರ್ದ ಎಂದುದಾಗಿ
ಭವಿಯೊಳಗೆ ಅಡಗಿರ್ದ ಭಕ್ತ
ಆ ಭಕ್ತನೊಳಗೆ ಅಡಗಿರ್ದ ಮಾಹೇಶ್ವರ,
ಆ ಮಾಹೇಶ್ವರನೊಳಗೆ ಅಡಗಿರ್ದ ಪ್ರಸಾದಿ,
ಆ ಪ್ರಸಾದಿಯೊಳಗೆ ಅಡಗಿರ್ದ ಪ್ರಾಣಲಿಂಗಿ,
ಆ ಪ್ರಾಣಲಿಂಗಿಯೊಳಗೆ ಅಡಗಿರ್ದ ಶರಣ
ಆ ಶರಣನೊಳಗೆ ಅಡಗಿರ್ದ ಗುರು,
ಆ ಗುರುವಿನೊಳಗೆ ಅಡಗಿರ್ದ ಲಿಂಗ,
ಆ ಲಿಂಗದೊಳಗೆ ಅಡಗಿರ್ದ ಜಂಗಮ,
ಆ ಜಂಗಮದೊಳಗೆ ಅಡಗಿರ್ದ ನಿತ್ಯಮುಕ್ತಿ,
ಆ ನಿತ್ಯಮುಕ್ತಿಯೊಳಗೆ ಅಡಗಿರ್ದ ನಿರಾಳವೆಂಬ ಮಹಾಪ್ರಕಾಶ.
ಇವು ಅಡಗಿರ್ದವು ನಿರ್ವಯಲೆಂಬ ದೇಗುಲದೊಳು.
ಆ ದೇಗುಲವ ಹೊಕ್ಕು, ಭಾಗಿಲವಂ ತಟ್ಟಿ,
ಮೇಗಳ ಶಿಖರವ ಹತ್ತಿ ನೋಡಲಾಗಿ,
ಬೆಳಗು ನಿಬ್ಬೆಳಗು ನಿರ್ಲೇಪ ನಿಃಕಾಯವಾದ

ಲಿಂಗೈಕ್ಯನ ಕರಣಪ್ರಸಾದಕ್ಕೆ
ಆನು ಅಂಗೈಸಿ ಬಂದೆನಯ್ಯಾ, ಜಂಗಮಲಿಂಗಪ್ರಭುವೆ. ॥ ೩ ॥

೧೨೪೧

ಉಲುಹಿಲ್ಲದ ಬ್ರಹ್ಮಾರಣ್ಯದೊಳಗೊಂದು
ಮಹಾಲಿಂಗ ಉದಯವಾಯಿತ್ತು ನೋಡಾ !
ಆ ಲಿಂಗವ ನೋಡ ಹೋದರೆ,
ನೋಡುವ ಕಂಗಳು ತಾವೆ ಲಿಂಗವಾದವಯ್ಯಾ !
ಆ ಲಿಂಗವ ಹಸ್ತದಲ್ಲಿ ಮುಟ್ಟಿ ಪೂಜೆಯ ಮಾಡುವೆನೆಂದರೆ,
ಆ ಹಸ್ತಗಳು ತಾವೆ ಲಿಂಗವಾದವಯ್ಯಾ !
ಆ ಲಿಂಗವ ಭಾವದಲ್ಲಿ ಭಾವಿಸಿಹೆನೆಂದರೆ,
ಆ ಭಾವವು ತಾ ಲಿಂಗವಾಯಿತ್ತು ನೋಡಾ !
ಇಂತಪ್ಪ ಮಹಾಲಿಂಗವನಪ್ಪಿ ತಾ ಮಹಾಲಿಂಗವಾದ ಬಳಿಕ
ಇಂತು ಅದಕೆ ಆವ ಚಿಂತೆ ಹೇಳಾ, ಜಂಗಮಲಿಂಗಪ್ರಭುವೆ. ॥ ೪ ॥

೧೨೪೨

ಒಂದನೆ ದೆಸೆಯಲ್ಲಿ ಒಂದು ಮುಖದ ಭೈರವನು.
ಎರಡನೆಯ ದೆಸೆಯಲ್ಲಿ ಎರಡು ಮುಖದ ಭೈರವನು.
ಮೂರನೆಯ ದೆಸೆಯಲ್ಲಿ ಮೂರು ಮುಖದ ಭೈರವನು.
ನಾಲ್ಕನೆಯ ದೆಸೆಯಲ್ಲಿ ನಾಲ್ಕು ಮುಖದ ಭೈರವನು.
ಐದನೆಯ ದೆಸೆಯಲ್ಲಿ ಐದು ಮುಖದ ಭೈರವನು.
ಆರನೆಯ ದೆಸೆಯ್ಯಲ್ಲಿ ಆರು ಮುಖದ ಭೈರವನು.
ಏಳನೆಯ ದೆಸೆಯಲ್ಲಿ ಏಳು ಮುಖದ ಭೈರವನು.
ಎಂಟನೆಯ ದೆಸೆಯಲ್ಲಿ ಎಂಟು ಮುಖದ ಭೈರವನು.
ಇಂತಿರುವ ಅಷ್ಟಭೈರವರು ಹೊರಸುತ್ತಿನಲ್ಲಿ ಪಹರಿಕರು.
ತುತ್ತರಸಿನವೆಂಬ ಚಕ್ರವು ಸುರಗಿಯಂದದಿ ಸುತ್ತಿ
ತೆರಹು ಇಲ್ಲವೆ ತಿರುಗುತ್ತಿಹುದು.
ಅದು ಕಾಣಬಾರದಂತಿಹುದು ನೋಡಾ, ಜಂಗಮಲಿಂಗಪ್ರಭುವೆ. ॥ ೫ ॥

೧೨೪೩

ಓಂ ನಮಃ ಶಿವಾಯ ಎಂಬ ಮೂಲಮಂತ್ರದಿಂದ
ಗಿರಿಜೆ ಬಂದು ಪಾದಾಮೃತವ ಪಡೆದಳು.
ಆ ಪಾದಾಮೃತದಿಂದ ಕ್ಷೀರಸಮುದ್ರ, ಶಿಲಾನದಿ, ಅಮೃತನದಿ
ಇಂತೀ ಮೂರು ನದಿ ಹುಟ್ಟಿದವು ನೋಡಾ, ಜಂಗಮಲಿಂಗಪ್ರಭುವೆ. ॥ ೬ ॥

೧೨೪೪

ಓಂ ನಮಃ ಶಿವಾಯವೆಂಬ ಮೂಲಮಂತ್ರದಿಂದ
ಗಿರಿಜೆ ಪಾದೋದಕವ ಮಾಡಿಕೊಂಡು ಬಂದು ನಿಂದು
ಗೊಡ್ಡಿನ ಮೇಲೆ ತಳಿದಳು.
ತಳಿಯಲು ಗೊಡ್ಡುಗಳು ಕಾಮಧೇನುಗಳಾಗಿ ಕರೆಯಲು,
ಆ ಕಾಮಧೇನುಗಳು ಕರೆದ ಕಾರಣದಿಂದ
ಅಲ್ಲಿ ಕ್ಷೀರಸಮುದ್ರ ಹುಟ್ಟಿತು ನೋಡಾ, ಜಂಗಮಲಿಂಗಪ್ರಭುವೆ. ॥ ೭ ॥

೧೨೪೫

ನಮ್ಮ ಶಿವನ ಮಸ್ತಕದಲ್ಲಿ ಓಂಕಾರ ಗುಹೇಶ್ವರಲಿಂಗವಿತ್ತು.
ನಮ್ಮ ಶಿವನ ಶ್ರೋತ್ರದಲ್ಲಿ ಪ್ರಸಾದಲಿಂಗವಿತ್ತು.
ನಮ್ಮ ಶಿವನ ನೇತ್ರದಲ್ಲಿ ಶಿವಲಿಂಗವಿತ್ತು.
ನಮ್ಮ ಶಿವನ ನಾಸಿಕದಲ್ಲಿ ಆಚಾರಲಿಂಗವಿತ್ತು.
ನಮ್ಮ ಶಿವನ ಜಿಹ್ವೆಯಲ್ಲಿ ಗುರುಲಿಂಗವಿತ್ತು.
ನಮ್ಮ ಶಿವನ ತ್ವಕ್ಕಿನಲ್ಲಿ ಜಂಗಮಲಿಂಗವಿತ್ತು.
ನಮ್ಮ ಶಿವನ ಹೃದಯದಲ್ಲಿ ಮಹಾಲಿಂಗವಿತ್ತು.
ನಮ್ಮ ಶಿವನ ಪಾದದಲ್ಲಿ ಗುಲ್ಫದಲ್ಲಿ ಭೂಪ್ರದಕ್ಷಿಣಲಿಂಗವಿತ್ತು.
ನಮ್ಮ ಶಿವನ ಪಾದದಂಗುಷ್ಟದಲ್ಲಿ ಸರ್ವದಯಾಳು ಲಿಂಗವಿತ್ತು.
ಇಂತೀ ಸರ್ವಾಲಿಂಗಾಂಗಿ ನಮ್ಮ ಶಿವನು ಬಂದು,
ಈ ಭೂಮಿಯ ಮೇಲೆ ತನ್ನ ಪಾದವನಿಕ್ಕಿ ನಿಲ್ಲಲು,
ಅಂದೇ ಈ ಭೂಮಿಗೆ ಲಿಂಗಧಾರಣವಾಯಿತ್ತು ನೋಡಾ,
ಜಂಗಮಲಿಂಗಪ್ರಭುವೆ. ॥ ೮ ॥

೧೨೪೬

ವಿಘ್ನೇಶ್ವರ ಹರನ ಮಗನೆಂಬ
ಪಂಚಮಹಾಪಾತಕರ ನುಡಿಯ ಕೇಳಲಾಗದು.
ಪಾರ್ವತಿ ಹರನ ಸತಿಯೆಂಬ
ಲಿಂಗದ್ರೋಹಿಗಳ ನೆನೆಯಲಾಗದು.
ಬಹುರೂಪಿ ಹರನ ಸರಿಯೆಂಬ
ಗುರುದ್ರೋಹಿಗಳ ನೆನೆಯಲಾಗದು.
ಅಂದೆಂತೆಂದಡೆ: 'ಯತ್ರ ಜೀವಾತ್ಮ ತತ್ರ ಶಿವ'
ಎಂದೆನಿಸಿಕೊಂಬಾತನೊಬ್ಬ ಗಣೇಶ್ವರನು.
ಭೂಮಿಪೀಠಾಕಾಶವಾಗಿರ್ದಾತನೊಬ್ಬ ಗಣೇಶ್ವರನು.
ಸಿರಿಯಾಳನ ಮಗನ ಬಾಣಸವ ಮಾಡಿಸಿದಾತನೊಬ್ಬ ಗಣೇಶ್ವರನು.
ಅರ್ಜುನನ ಕೂಡ ಯುದ್ಧವ ಮಾಡಿ,

ತನ್ನ ಸತಿಯಳಿಗೆ ತೋರಿಸಿದಾತನೊಬ್ಬ ಗಣೇಶ್ವರನು.
ಅಂಗಜನ ಸಂಹಾರವ ಮಾಡಿದಾತನೊಬ್ಬ ಆದಿರುದ್ರನೆಂಬ ಗಣೇಶ್ವರನು.
ದಕ್ಷನ ಸಂಹಾರವ ಮಾಡಿದಾತನೊಬ್ಬ ವೀರಭದ್ರನೆಂಬ ಗಣೇಶ್ವರನು.
ಹತ್ತು ಅವತಾರ ವಿಷ್ಣುವಿಂಗೆ, ಅನಂತ ಅವತಾರ ಬ್ರಹ್ಮಂಗೆ.
ಇಂತಿವರೆಲ್ಲರಿಗೂ ಕಾಲಚಕ್ರ ಕರ್ಮಚಕ್ರ ನಾದಚಕ್ರ ಬಿಂದುಚಕ್ರ.
ಈ ನಾಲ್ಕೂ ಪ್ರಳಯಚಕ್ರವೆಂದೆನಿಸಿಹವು.
ಇಂತಿವರೊಳಗಾದವರೆಲ್ಲರು ಇನ್ನುಳಿದವರು
ನರದೇಹಿಗಳಿಗೆ ಪ್ರಳಯವು.
ಉಪಮಿಸಲಾಗದು, ಅಜಾತ ಪವಿತ್ರ ನಿರ್ಲೇಪ
[ಜಂಗಮಲಿಂಗ ಪ್ರಭುವೆ]. ॥ ೯ ॥

೧೨೪೭

ಒಂದು ಲಿಂಗದಿಂದ ಉದ್ಭವಿಸಿತ್ತು, ನಾದ ಬಿಂದು ಕಳೆ.
ಆ ನಾದ ಬಿಂದು ಕಳೆಗೆ ಉದ್ಭವಿಸಿತ್ತು
ಬ್ರಹ್ಮ ವಿಷ್ಣು ರುದ್ರ ಈಶ್ವರ ಸದಾಶಿವನು.
ಈ ಪಂಚಬ್ರಹ್ಮದ ಬೆಳೆಯ [ಉತ್ಪತ್ಯವ] ಪೇಳುತಿದ್ದನು ಕಾಣಾ,
ಜಂಗಮಲಿಂಗಪ್ರಭುವೆ. ॥ ೧೦ ॥

೧೨೪೮

ಹರಹರಯೆಂದು ನೆನೆದಡೆ ಜನನ ಮರಣ ಹಿಂಗುವದೆ ?
ಹಾಂಗೆ ಲೋಕದ ಮಾತ ಕೇಳಲಾಗದು.
ಅದು ಹೇಂಗೆಯೆಂದಡೆ :
ಜ್ಯೋತಿಯ ನೆನೆದಡೆ ತಿಮಿರ ಹೋಹುದೇನಯ್ಯಾ ?
ಪಂಚಾಮೃತವ ನೆನೆದಡೆ ಹಸಿವು ತೃಷೆ ಅಡಗುವುದೇನಯ್ಯಾ ?
ಆಗಮಶಾಸ್ತ್ರವ ನೋಡಿದಡೆ, ಕಿವಿಗೊಟ್ಟು ಕೇಳಿ ಹಾಡಿ ಪಾಡಿದಡ,
ಅಯ್ಯಾ ನಿಮ್ಮ ಕಂಡಂತಾಯಿತ್ತಯ್ಯಾ ಎಂದುದಾಗಿ,
ಆದಡಾಗಲಿ ಕಂಡು ಆಡುವುದಲ್ಲದೆ,
ಕಾಣದೆ ಆಡುವುದೆಲ್ಲ ಸಂತೆಯಾಗಿ ಹೋಯಿತ್ತಯ್ಯ ಕಾಣಾ,
ಜಂಗಮಲಿಂಗಪ್ರಭುವೆ. ॥ ೧೧ ॥

೧೨೪೯

ಇಳೆಯ ಮೇಲಿರ್ದ ಶಿಲೆಯೆಲ್ಲ ಲಿಂಗವಾದಡೆ ಗುರುವಿನ ಹಾಂಗೆ ಕೈ,
ಜಲ ನದಿಯಲ್ಲಿ ತೀರ್ಥವಾದಡೆ, ಲಿಂಗದ ಹಾಂಗೆ ಕೈ,
ಬೆಳೆದ ಬೆಳೆಯಲ್ಲ ಪ್ರಸಿದ್ಧವಾದಡೆ, ಜಂಗಮದ ಹಾಂಗೆ ಕೈ,
ಎಂದುದಾಗಿ ತ್ರಿವಿಧದ ಹಂಗು ಹಿಂಗಿತ್ತು ಕಾಣಾ, ಜಂಗಮಲಿಂಗಪ್ರಭುವೆ.
॥ ೧೨ ॥

೧೨೫೦

ಚತುರ್ವೇದನುಭಾವ ಜಂಗಮವೆಲ್ಲ ಬ್ರಹ್ಮನ ಸಂತತಿ.
ಹದಿನೆಂಟು ಪುರಾಣದ ಅನುಭಾವ ಮಾಡುವ ಜಂಗಮವೆಲ್ಲ ವಿಷ್ಣುವಿನ ಸಂತತಿ.
ಮೂವತ್ತೆರಡು ದಿವ್ಯ ಆಗಮ[ದ ಅನುಭಾವ] ಮಾಡುವ
ಜಂಗಮವೆಲ್ಲ ಈಶ್ವರನ ಸಂತತಿ.
ಆರು ಶಾಸ್ತ್ರದನುಭಾವ ಮಾಡುವ ಜಂಗಮವೆಲ್ಲ ಸದಾಶಿವನ ಸಂತತಿ.
ಇಂತೀ ಎಲ್ಲ ಶಬ್ದವನು ಮುಟ್ಟಿ ಲಿಂಗದನುಭಾವ ಮಾಡುವ ಜಂಗಮವೆಲ್ಲ
ಘನನಿತ್ಯ ಕಾಣಾ, ಜಂಗಮಲಿಂಗಪ್ರಭುವೆ. ॥ ೧೩ ॥

೧೨೫೧

ಬ್ರಹ್ಮನ ಸಂತತಿ ಭಕ್ತಿಸ್ಥಲಕ್ಕೆ ಸಂದಿತ್ತು.
ವಿಷ್ಣುವಿನ ಸಂತತಿ ಮಾಹೇಶ್ವರಸ್ಥಲಕ್ಕೆ ಸಂದಿತ್ತು.
ರುದ್ರನ ಸಂತತಿ ಪ್ರಸಾದಿಸ್ಥಲಕ್ಕೆ ಸಂದಿತ್ತು.
[ಈಶ್ವರನ ಸಂತತಿ ಪ್ರಾಣಲಿಂಗಿಸ್ಥಲಕ್ಕೆ ಸಂದಿತ್ತು].
ಸದಾಶಿವನ ಸಂತತಿ ಶರಣಸ್ಥಲಕ್ಕೆ ಸಂದಿತ್ತು.
ಪರಶಿವನ ಸಂತತಿ ಐಕ್ಯಸ್ಥಲಕ್ಕೆ ಸಂದಿತ್ತು.
ಅಷ್ಟು ಎಲ್ಲ ಕೂಡಿ ಇಷ್ಟಲಿಂಗವಾಗಿ ನಿಂದಡೆ.
ಅದು ನೀನು ನಾನು ಉಭವಿಲ್ಲದಂತೆ ಆಯಿತ್ತು ಕಾಣಾ,
ಜಂಗಮಲಿಂಗಪ್ರಭುವೆ. ॥ ೧೪ ॥

೧೨೫೨

ಹಾಡಿ ಹೊಗಳುವ ಜಂಗಮವೆಲ್ಲ ಬ್ರಹ್ಮನ ಸಂತತಿ.
ಕಾಡಿ ಬೇಡುವ ಜಂಗಮವೆಲ್ಲ ವಿಷ್ಣುವಿನ ಸಂತತಿ.
ಹಾಗವರಿಯದೆ ಹೊಕ್ಕು ಉಂಬುವ ಜಂಗಮವೆಲ್ಲ [ರುದ್ರನ ಸಂತತಿ].
ವ್ಯಾಪಾರವ ಮಾಡುವ ಜಂಗಮವೆಲ್ಲ ಈಶ್ವರನ ಸಂತತಿ.
ಇಂತೀ ಅನುಭಾವ ಮಾಡುವ ಜಂಗಮವೆಲ್ಲ ಪರಶಿವನ ಸಂತತಿ.
ಮುಕ್ತಿ ಕುಸ್ತಿಯ ಮಾಡುವ ಜಂಗಮವೆಲ್ಲ ಮಹಾಲಿಂಗವೆನಿಸುವದು.
ಹಾಡದೆ ಹೊಗಳದೆ ಕಾಡದೆ ಬೇಡದೆ,
ಹಾಗವನರಿಯದೆ ಹೊಗದೆ ವ್ಯಾಪಾರ ಮಾಡದೆ,
ಭಕ್ತಿಗೆ ತೊಲಗಿ ವ್ಯರ್ಥದಿ ಮುಕ್ತಿ ಕುಸ್ತಿಯನಾಡದೆ,
ಭಿಕ್ಷವೆಂಬ ಶಬ್ದದಲ್ಲಿ ಇದಿರಿಟ್ಟು,
ಪದಾರ್ಥವ ಲಿಂಗಕರ್ಪಿತವ ಮಾಡುವುದೆ ನಿಜಮುಕ್ತಿ,
ಮಹದಾಕಾಶ ಮಹಿಮಾಪತಿಯೆಂಬ ಘನಲಿಂಗಕ್ಕೆ
ಅರ್ಪಿತ ಮಾಡುವ ಗುರು.

ಅದಾವುದೆಂದಡೆ :
ಅದು ಅನಾದಿ ಸಂಜ್ಞೆಯೆಂಬ ಜಂಗಮವು.
ಅಂಥ ಜಂಗಮದ ಶ್ರೀಚರಣ ನೆರೆನಂಬಿ,
ನೆಟ್ಟನಳಿವಸ್ಥಿರಕಾಯರ ಎನಗೊಮ್ಮೆ ತೋರಿಸಯ್ಯಾ,
ಜಂಗಮಲಿಂಗಪ್ರಭುವೆ. || ೧೫ ||

೧೨೫೩

ನಾನಿಲ್ಲದ ಮುನ್ನ ನೀನಾದೆಯಯ್ಯಾ.
ನೀನಾದಂಥ ಪರಿಯ ಹೇಳಾ.
ಎನಗೆ ನೀನು ಗುರುವಾದೆ, ನಿನಗೆ ನಾನು ಶಿಷ್ಯನಾದೆ.
ಎನ್ನ ಕರಸ್ಥಲಕ್ಕೆ ನೀನೆ ಬಂದೆಯಲ್ಲದೆ, ನಿನ್ನಕರಸ್ಥಲಕ್ಕೆ ನಾನು ಬಂದೆನೆ ?
ಕ್ರಿಯೆ ಕಷ್ಟ, ಕರ್ಮ ಎನಗೆ, ನಿಃಕ್ರಿಯೆ ಸುಖವೆ ನಿನಗೆ.
ವ್ರತ ನೇಮ ಶೀಲ ಸಂಬಂಧವೆನಗೆ, ವ್ರತ ನೇಮದಲ್ಲಿದ್ದುದು ನಿಮಗೆ.
ಭಕ್ತಿ ಮಾಡುವ ಕುಸ್ತಿಯೆನಗೆ, ಯುಕ್ತಿಸದನೆ ಮುಕ್ತಿ ನಿನಗೆ.
ಅಷ್ಟತನುವಿನರ್ಚನೆ ಎನಗೆ,
ಅಷ್ಟದಳದ ಮಂಟಪದ ಮಧ್ಯದಲ್ಲಿಯ ಸುಖ ನಿನಗೆ.
ಅಷ್ಟಾಂಗದ ಯೋಗವ ಮಾಡುವ ಕಷ್ಟದುಃಖವನ.
ನಿಷ್ಠೆ ನಿರಾಲಂಬ ನಿಜದ ಸುಖವು ನಿನಗೆ.
ಷಡುಭ್ರಮೆಯೊಳು ಮುಂಬಿದ್ದು ಮುಳುಗುವ ದುಃಖವೆನಗೆ.
ಷಡುಸ್ಥಲದ ಲಿಂಗಾಂಗದುನುಭಾವದ ಸುಖ ನಿನಗೆ.
ಇಂತೀ ಎಂಬತ್ತುನಾಲ್ಕು [ಲಕ್ಷ] ಜೀವದ ಭವದ ಮಾಲೆಯ
ನೋಡುವ ಕಂಗಳು ಎನಗೆ.
ಅಂಗಾಂಗಗೊಂಡು ಅಂಬರಾತ್ಮಕವಾಗಿ,
ಏಕಮೂರ್ತಿಯ ನೋಡುವ ಕಂಗಳು ನಿನಗೆ.
ಇಂತೀ ಸರ್ವಸುಖದನುಭಾವ ನಿನಗೆ, ಸರ್ವ ಧನದ ಚಿಂತೆಯೆನಗೆ.
ಇಂತೀ ನಾನು ನೀನು ಎಂಬುದು ಬೀಯವಾಗಿ
ಏಕವಾದ ಪ್ರಭೆಯೊಳು ಎರಡು ಮಾಡಿ ತೋರುವ
ಲಿಂಗದೋಹ ನಿನ್ನದೋ ಎನ್ನದೋ ?
ಎಂದುದಾಗಿ, ಇದು ಕಾರಣ, ನಿನ್ನೊಳು ನಾನಿಲ್ಲ, ಎನ್ನೊಳು ನೀನಿಲ್ಲ,
ಈ ವಚನದರ್ಥದನುಭಾವದ ತೃಪ್ತಿಯನರಿದಡೆ,
ನಿನ್ನೊಳು ನಾನುಂಟು, ಎನ್ನೊಳು ನೀನುಂಟು.
ಮತ್ತೆ ನಾನು ನೀನೆಂಬುಭಯವಾಗಿ ನಿಂದಂತೆ ಕಾಣಾ,
ಜಂಗಮಲಿಂಗಪ್ರಭುವೆ. || ೧೬ ||

೧೨೫೪

ಶರಣನೊಳಗಡಗಿರ್ದ ಐಕ್ಯ, ಐಕ್ಯನೊಳಗಡಗಿರ್ದ ಗುರು.
ಗುರುವಿನೊಳಗಡಗಿರ್ದ ಲಿಂಗ, ಲಿಂಗದೊಳಗಡಗಿರ್ದ ಜಂಗಮ.
ಜಂಗಮದೊಳಗಡಗಿರ್ದ ಗುರು.
ನಿತ್ಯಲಿಂಗಾರ್ಚನೆ, ಅನಿತ್ಯಲಿಂಗಾರ್ಚನೆಯೊಳಗಡಗಿರ್ದ
ನಿತ್ಯನಿರಾಲಂಬ ಮಹಾ ಆಕಾಶ.
ಇಂತೀ ಎಲ್ಲವೂ ಅಡಿಗಿರ್ದವು, ಆ ನಿರಾಲವೆಂಬ ದೇಗುಲದೊಳಗೆ.
ಆ ದೇಗುಲವ ಹೊಕ್ಕು, ಬಾಗಿಲವ ದಾಂಟಿ,
ಮೇಗಳ ಶಿಖರವ ಹತ್ತಿ ನೋಡಲಾಗಿ, ಬೆಳಗು ನಿಬ್ಬೆಳಗು.
ನಿಃಕಲ ನಿರ್ಲೇಪವಾದ ಲಿಂಗೈಕ್ಯನ ಪ್ರಸಾದಕ್ಕೆ ಆನು ಹಾರೈಸಿ ಬಂದಿರ್ದೆ ಕಾಣಾ,
ಜಂಗಮಲಿಂಗಪ್ರಭುವೆ. || ೧೭ ||

■■

## -?- ಜ್ಯೋತಿಸಿದ್ಧೇಶ್ವರ

೧೨೫೫

ಬತ್ತಿಗಟ್ಟಿದಡೆ ಜಡೆಯೆಂದೆಂಬರಯ್ಯಾ.
ಜಡೆಗಟ್ಟಿರದ ಬಿಳಲು ಕೊಡ...ವರಯ್ಯಾ.
ಬೋಳಾಗಿರಳೆ [ಗಂಡು]ವೇಶಿ.
ಕೋಣನ ಕೊಂಬಿಗೆ ಸುಣ್ಣವ ತೊಡೆದ ತೆರನಂತೆ
ಪರಾಪರ ವೇಷವನಳವಡಿಸಿದಡೇನು,
ಶಬರಜಾತಿ...ನೊದ್ದವಂಗಲ್ಲದೆ
ಸತ್ತ ಕೂದಲ ಹೊತ್ತುಕೊಂಡು,
ಊರ ಮುಂದೆ ಮುಂಡೆದೆಗೆದು,
ಸಂದಿಯಲ್ಲಿ ಕೆಡಹಿದೆಯಲ್ಲಾ, ಜ್ಯೋತಿಸಿದ್ಧೇಶ್ವರಾ. ॥ ೧ ॥

■■

## -?- ತುಂಬೆಯಾಚಲೆಯ ಮನಃಪ್ರಿಯ ಚೆನ್ನಬಂಕೇಶ್ವರ

೧೨೫೬

ದೇವ ಗೆದ್ದನು ದೇವ ಗೆದ್ದನು.
ಸಿರಿಯಾಳಂಗೆ ಸೋಲವಾಗದು, ಸೋಲವಾಗದು.
ಸರಿಯಾಯಿತ್ತು, ಸರಿಯಾಯಿತ್ತು.
ತುಂಬೆಯಾಚಲೆಯ ಮನಃಪ್ರಿಯ ಚೆನ್ನಬಂಕೇಶ್ವರನಲ್ಲಿ
ಚೀಲಾಳನವರ[ನು] ಕೊಂಡಾಡಿ, ಕೈಲಾಸವನಿವರು ಕೊಂಡಾಡರು.
ಸರಿಯಾಯಿತ್ತು, ಸರಿಯಾಯಿತ್ತು. ॥ ೧ ॥

■■

## -?- ತ್ರೈಲೋಚನ ಮನೋಹರ ಮಾಣಿಕೇಶ್ವರಲಿಂಗ

೧೨೫೭

ಅಗ್ನಿಪುತ್ಥಳಿಗೆ ಚೇಳೂರಿದಡೇನು
ಬಾಲ ಬೆಂದು, ಮುಳ್ಳುರಿದು,
ಮಿಡಮಿಡನೆ ಮಿಡುಕುತ್ತಿಹುದು.
ತ್ರೈಲೋಚನ ಮನೋಹರ ಮಾಣೀಕೇಶ್ವರಲಿಂಗ,
ನಿಂದಕರ ಬಾಯಲಿ ಬಗದಳ ಮೂಡಲಿ. ॥ ೧ ॥

೧೨೫೮

ಕೆರೆಯನಗಳುತ ಕೊರಕಡಿಯಲದೇಕೊ ?
ತಾಳ್ಮರನೇರಿ ಬಿದ್ದವನ ಕೈಯಲ್ಲಿ ಹೊಯ್ಯಲೇಕೊ ?
ತನ್ನ ಕಿಚ್ಚಿನಲಿ ತಾನೆ ಬೇವವಗೆ ಮರುಳನಿತ ಬಗಿಯಲೇತಕೊ ?
ಮರುಳಮನುಜನೆ.
ತ್ರೈಲೋಚನ ಮನೋಹರ ಮಾಣಿಕೇಶ್ವರ[ಲಿಂಗ]
ಹಣನಿರಿದು ಹಗೆಯಗೊಳಬೇಡ. ॥ ೨ ॥

೧೨೫೯

ಗಾತ್ರಗಳು ಸಕೀಲವಾಗದ ಮುನ್ನ ಪುಡಿಸಿ,
ದೃಷ್ಟಿ ನರನರಸದ ಮುನ್ನ ನೋಡಿ,

ಮತಿ ಮರೆಯದ ಮುನ್ನ ಲಿಂಗಾಲಿಂಗೆನ್ನಿ,
ಸಿರಿ ತೊಲಗದ ಮುನ್ನ ಜಂಗಮಕ್ಕೆ ನೀಡಿ,
ತ್ರೈಲೋಚನ ಮನೋಹರ ಮಾಣಿಕೇಶ್ವರ[ಲಿಂಗ]
ಸಹವಾಗದನಿಟ್ಟರೆ ಮರಳಿಬಾಹುದೋ. ॥ ೩ ॥

೧೨೬೦

ಜ್ಞಾನದ ಒರಳಿಗೆ ಏಕೋಭಾವದ ಒನಕೆಯ ಕೊಂಡು,
ಇಮ್ಮನವಾದುದನು ಒಮ್ಮನವಾಗಿ ಥಳಿಸಿ,
ಅಗ್ನಿಯಿಲ್ಲದೆ, ಪಾಕವಾಯಿತ್ತು.
ಎಸರಿಲ್ಲದೆ ಕುದಿದು, ನಿರಾಳ ಭಾಂಡೆಯಲ್ಲಿ ಬೋನವಾಯಿತ್ತಲ್ಲಯ್ಯ,
ನಾವರಿಯದ ನಿಮಗೆ ಅರ್ಪಿತವಾಯಿತ್ತಲ್ಲಯ್ಯ.
ತ್ರೈಲೋಚನ ಮನೋಹರ ಮಾಣಿಕೇಶ್ವರಲಿಂಗಕ್ಕೆ. ॥ ೪ ॥

೧೨೬೧

ತನ್ನ ಹಿತ್ತಿಲೊಳು ಮರುಜೇವಣಿಗೆಯಿದ್ದು,
ನಾರುಬೇರುಗಳಿಗೆ ಹರಿವ ಮನುಜರಿಗೆ ನಾನೇನೆಂಬೆನಯ್ಯ !
ತನ್ನೊಳಗೆ ಶಿವಲಿಂಗವಿದ್ದು,
ಅನ್ಯದೈವಕ್ಕೆರಗುವ ಕುನ್ನಿ ಮನುಜರಿಗೆ ನಾನೆಂತೆಂಬೆನಯ್ಯ !
ತ್ರೈಲೋಚನ ಮನೋಹರ ಮಾಣಿಕೇಶ್ವರಲಿಂಗ,
ಪಾಪಿಯ ಕಣ್ಣಿಗೆ ಪರುಷ ಕಲ್ಲಾದಂತೆ ಅಯ್ಯ ನೀನು. ॥ ೫ ॥

೧೨೬೨

ತಲೆ ಕೆಚ್ಚಲು, ಮೊಲೆ ನಾಲಗೆಯಾಗಿ,
ಕೊಂಬೂರಿ ನಡೆದು, ಬೀದಿಗರುವಾಯಿತ್ತು ಕಪಿಲೆ !
ಇದ ಕರೆದುಣಲರಿಯದೆ ಮರುಗುತ್ತಲೈದಾರೆ !
ಇದನೇನೆಂಬೆ, ತ್ರೈಲೋಚನ ಮನೋಹರ ಮಾಣಿಕೇಶ್ವರಲಿಂಗವೆ ! ॥ ೬ ॥

೧೨೬೩

ನಿಂದೆ ಸ್ತುತಿಗಳಿಗೆ ಕಿವುಡನಾಗಿರಬೇಕು.
ಪರನಾರಿ ದ್ರವ್ಯಕ್ಕೆ ಅಂಧಕನಾಗಿರಬೇಕು.
ಶಬ್ದ ಸಂಭ್ರಮದ ತಾರ್ಕಿಕರೊಡನೆ
ಮಾಗಿಯ ಕೋಗಿಲೆಯಂತೆ ಮೂಗನಾಗಿರಬೇಕು.
ಇವನಳಿದ ಶರಣರ ಹೃತ್ಕಮಲದೊಳಗೆ
ತಾನು ತಾನಾಗಿಹ ತ್ರೈಲೋಚನ ಮನೋಹರ ಮಾಣಿಕೇಶ್ವರಲಿಂಗನು. ॥ ೭ ॥

■■

## -?-ತ್ರಿಲೋಚನಶಂಕರ

೧೨೬೪

ದಶಕರ ಶೂನ್ಯ ಪಂಚಕರ ಭಿಕ್ಷವ ಬೇಡಿ,
ಆನಂದದಲಾಡಿ, ಪಾಪಾಂಧಕ್ಷಯಮಂ ಮಾಡಿ,
ಅನುಶ್ರುತವೇರಿ, ಷಡುರುತಂ ಪೆರ್ಚಿ,
ಮಲಕುವಿಡಿದು, ವೀಥಿವೀಥಿಗೊಂಡು
ಪೋಗಿ ತೋರುವವರ ವಂಕಮಂ ಪೊಕ್ಕು,
ಆ ಉಭಯವತಿಯೆಂಬ ಶಂಕರಾನಂದರಸ ಉಕ್ಕುತ್ತಿದ್ದು,
ಎಸಗೆ ಸಮನಿಸುಗೆ ನಯಸರವ ಕಿವಿಯಲಾಂತು,
ನಂದಿನಂದಿಯೆಂದಾನಂದದಿಂದುಂಡು, ಕೈಯ ಮಂಡೆಗೆ ಹತ್ತಿಸಿ,
ಮುಳ್ಳಕಲ್ಲು ಮುಂಜಾರಿನಲ್ಲಿರಿಸಿ, ಕರ ಹೇಸಿ,
ಏಳೂರವರು ಲಾಲಿಸಿ, ಕೇಳಲಮ್ಮದೆ ಬೆಚ್ಚುತ್ತ ಬೆದರುತ್ತ ಬಿದ್ದರು.
ಮುಚ್ಚುಮರೆಯ ಅಚ್ಚುಗವಿಕ್ಕು ಪ್ರ......
......ಯಲಳಿದ ಗುರು ಗೌರವಂ ತಂದಾರಾಧಿಸಿ,
ವಿರಾಜಿಸಿದ ಶಂಕರಾ
ಜಂಗಮ ಶಂಕರಾನಂದರಸನಯ್ಯಾ, ತ್ರಿಲೋಚನಶಂಕರಾ. ॥ ೧ ॥

## -?- ದೇವಧ್ವಜ ಮೃತ್ಯುಂಜಯನ ಭಾವದೊಲ್ಲಭ ಮುದ್ದನೂರೇಶ

೧೨೬೫

ಒಮ್ಮೆ ಶಿವನೆಯೆಂದು ನೆನೆದರೆ,
ಕಳ್ಳಸುಳ್ಳರಿಗೆಲ್ಲ ಕೈಲಾಸವಾಯಿತೆಂದು ಹೇಳುವ ಅಣ್ಣಗಳಿರಾ,
ಕೈಲಾಸಪದವಿ ಆದದ್ದು ಸಹಜ, ಅದೆಂತೆಂದಡೆ :
ಒಬ್ಬ ಕಳವು ಮಾಡಿ ಸತ್ತರೆ,
ಶಿವ ಮೆಚ್ಚಿ ಕೈಲಾಸಕ್ಕೆ ತಕ್ಕೊಂಡು ಒಯ್ಯಬೇಕೆಂದು
ಅವಗೆ ಬ್ರಹ್ಮ ಬರೆದ ಕಲ್ಪನೆಯಲ್ಲಿತ್ತು.
ಅವರಿಗೆ ಕೈಲಾಸಪದವಿ ಆಯಿತು ಕಾಣಿರೊ.
ನೀವು ಕಳ್ಳರಲ್ಲ ಸುಳ್ಳರಲ್ಲ, ಒಳ್ಳೆಯ ಜನರು.
ಶಿಲ್ಪಕಾರನ ಕೈಯಲ್ಲಿ ಹುಟ್ಟಿದ ಶಿಲೆಯ ಲಿಂಗವನು ತಂದು,
ಶಿರದಲ್ಲಿ ಕಟ್ಟಿಕೊಂಡು
ಉಂಬುವಲ್ಲಿ ಶಿವ, ಉಡುವಲ್ಲಿ ಶಿವ,
ಕೊಂಬುವಲ್ಲಿ ಶಿವ, ಕೊಡುವಲ್ಲಿ ಶಿವ,
ನಡೆವಲ್ಲಿ ಶಿವ, ನುಡಿವಲ್ಲಿ ಶಿವ.
ಸರ್ವಾಂಗವೆಲ್ಲ ಶಿವಮಯವಾದ ಮೇಲೆ
ನಿಮ್ಮಗೆ ಶಿವ ಮೆಚ್ಚಿ, ಕೈಲಾಸಕ್ಕೆ ತಕ್ಕೊಂಡು ಹೋದನೆ ? ಹೋಗಲಿಲ್ಲ.

ಕಾಲಚಕ್ರದ ಪ್ರಳಯಕ್ಕೆ ಒಳಗಾಗಿ,
ಕಾಲ ಬಾಧೆಯೊಳಗೆ ಬಿದ್ದು ಬಳಲುತಿಪ್ಪಿರಿ.
ಒಂದು ಅನಂತಕೋಟಿ. ಅದು ಎಂತೆಂದರೆ :
ನೆಲುವಿನ ಮೇಲೆ ಇಟ್ಟಿದ್ದ ಹಾಲು ಬೆಣ್ಣೆಯನು ತಕ್ಕೊಂಡು
ಸವಿದು ಉಣಲಾರದೆ, ಆಕಾಶವೆಂಬ ಬಯಲಿಗೆ
ಬಾಯಿ ತೆರಕೊಂಡು ಕುಳಿತರೆ ಹಾಲು ಕರೆದೀತೆ ? ಕರೆಯಲರಿಯದು.
ಅದು ಎಂತೆಂದರೆ : ನಿಮ್ಮ ಅಂತರಂಗವೆಂಬುದ ಅಡಿವಿಡಿದು ಅಳೆದರೆ,
ಒಡನೆ ಮೂರಗೇಣಿನ ಒಳಗೆ ಹೊರಗೆ ಕೈಲಾಸವಾಗಿತ್ತು,
ಆ ಕೈಲಾಸದಲ್ಲಿ ಬ್ರಹ್ಮ ವಿಷ್ಣು ರುದ್ರ ಈಶ್ವರ ಸದಾಶಿವ
ಈ ಐದುಮಂದಿ ಮಕ್ಕಳನ್ನು ಹಡೆದ ಓಂಕಾರ ಪರಬ್ರಹ್ಮ ದೇವರಿಂದೆ
ಆರುಮಂದಿ ದೇವರಾದಲ್ಲಿ ಆಕಾರಾವಂ(?) ಕೋಟಿ ರುದ್ರ
ನವಕೋಟಿ ವಿಷ್ಣುಗಳು ಇಂದ್ರಸಭೆ ದೇವಸಭೆ ಶಿವಸಭೆ
ನಂದಿನಾಥ ಭೃಂಗಿನಾಥ ಮೊದಲಾದ ಗರುಡ ಗಂಧರ್ವ ಸಿದ್ಧರು
ವಿದ್ಯಾಧರರು ಸಮಸ್ತ ಮುನಿಜನಂಗಳೆಲ್ಲ ಇದ್ದರು ಕಾಣಿರೊ.
ಇಂತೀ ತಮ್ಮ ಅಂತರಂಗದಲ್ಲಿ ತಿಳಿದು ನೋಡಬಲ್ಲಾತಗೆ
ಪಿಂಡಾಂಡವೆಂಬ ಕೈಲಾಸದಲ್ಲಿ ಇದ್ದಂತೆ,
ಬ್ರಹ್ಮಾಂಡವೆಂಬ ಕೈಲಾಸದಲ್ಲಿ ಇದ್ದಂತೆ,
ಬ್ರಹ್ಮಾಂಡವೆಂಬ ಕೈಲಾಸವಲ್ಲಿಯಿತ್ತು,
ಪಿಂಡಾಂಡವೆಂಬ ಕೈಲಾಸವಲ್ಲಿಯಿತ್ತು ಕಾಣಿರೊ.
ಅದು ಎಂತೆಂದರೆ :
ಕೃತಯುಗದಲ್ಲಿ, ಬ್ರಹ್ಮರಾಕ್ಷಸರು ಪೃಥ್ವಿಯ ಆಧಾರದಲ್ಲಿ ನಿಂದು,
ಕೈಲಾಸಕ್ಕೆ ದಾಳಿಯನಿಕ್ಕಿ ಕೋಳು ತಕ್ಕೊಂಡು ಬರುವರು.
ಅವರಿಗೆ ಕೈಲಾಸಪದವು ದೊಡ್ಡದಾಗಿತ್ತೆ? ದೊಡ್ಡದಾಗಿ ಇದ್ದಿಲ್ಲ.
ತ್ರೇತಾಯುಗದಲ್ಲಿ, ಕ್ಷತ್ರಿಯರು [ಪೃಥ್ವಿಯ ಆಧಾರದಲ್ಲಿ ನಿಂದು],
[ಕೈಲಾಸಕ್ಕೆ ದಾಳಿಯನಿಕ್ಕಲು],
ಕೈಲಾಸದೊಡೆಯ ಮರೆಯ ಹೊಕ್ಕ,
ಕಾಮುಕ ಋಷಿಯು ಕಣ್ಣು ತೆಗೆದು, ಗರಿಯ ಅಂಬಿಗ ತಲೆಗೆ ಕಟ್ಟಿದ್ದರು.
ಈಶ್ವರನ ಜಡೆಯೊಳಗಿನ ಗಂಗೆಯನು ಸುಟ್ಟುರುಹಿದ ಮೇಲೆ
ಹಾಸಿತ ಮಾಂಸವನು ಹುಟ್ಟಿಸಿಯಿದ್ದರು.
ಅವರಿಗೆ ಕೈಲಾಸಪದವು ದೊಡ್ಡದಾಗಿ ಇತ್ತೆ? ದೊಡ್ಡದಾಗಿ ಇದ್ದಿಲ್ಲ.
ದ್ವಾಪರಯುಗದಲ್ಲಿ, ಸೋಮಕ್ಷತ್ರಿಯರು ಪೃಥ್ವಿಯ ಆಧಾರದಲ್ಲಿ ನಿಂದು,
ಇಂದ್ರಪದದಲ್ಲಿ ಇದ್ದಂಥ ಶ್ವೇತವರ್ಣದ ಆನೆಯನು ತಂದು,
ತಾಯಿಗೆ ನೋಂಪಿಯ ನುತಿಸಿದರೆ,
ಅವರಿಗೆ ಕೈಲಾಸಪದವಿ ದೊಡ್ಡದಾಗಿ ಇತ್ತೆ? ದೊಡ್ಡದಾಗಿ ಇದ್ದಿಲ್ಲ.

ಕಲಿಯುಗದಲ್ಲಿ ಹುಟ್ಟಿದ ಮನುಜರನು ಕೈಲಾಸಕೆ ಅಟ್ಟಿದರೇನು
ಒಮ್ಮೆ ಶಿವನೆಯೆಂದು ನೆನೆದರೆ, ಕೈಲಾಸಪದವಿ ಆದೀತೆಂದು
ಬಹಿರಂಗದಲ್ಲಿ ಹೇಳುವ ಮಾತುಗಳೇ ಬಹಳ.
ಅಂತರಂಗವಿಡಿದು ಹೋದವರು ಒಬ್ಬರು ಇಬ್ಬರು ಕಾಣೆರೊ.
ಅದು ಎಂತೆಂದರೆ :
ಬ್ರಹ್ಮ ಬರೆದ ಕಲ್ಪನೆಯಿಂದ ಕೈಲಾಸಪದವಿಯಾಗಬೇಕೆಂದು ಇದ್ದರೆ,
ಎಂದೆಂದೂ ಶಿವನೆಯೆಂದು ನೆನೆಯದೆ,
ಜಟ್ಟಿಂಗ ಮೈಲಾರ ಜಿನ ಭೈರವವೆಂಬ ಕೆಟ್ಟದೇವರ ಪೂಜೆಯ ಮಾಡಿದರೇನು
ಅವನೂ ಬ್ರಹ್ಮ ಬರೆದ ಕಲ್ಪನೆಯಿದ್ದು, ಸತ್ತುಹೋಗುವಾಗ,
ಅವನ ಶಿವ ಮೆಚ್ಚಿ ಕೈಲಾಸಕ್ಕೆ ತಕ್ಕೊಂಡು ಹೋದನು.
ಬ್ರಹ್ಮ ಬರೆದ ಕಲ್ಪನೆಯಲ್ಲಿ ಅವಗೆ ಕೈಲಾಸಪದವು ಇಲ್ಲದಿದ್ದರೆ,
ಜಟ್ಟಿಂಗ ಮೈಲಾರ ಜಿನ ಭೈರವ ದೇವರುಗಳೆಂಬ
ಕೆಟ್ಟದೇವರ ಪೂಜೆಯ ಬಿಟ್ಟು, ಎಷ್ಟುದಿನ ಶಿವನೆಯೆಂದು ನೆನೆದರೇನು,
ಅವನು ಬ್ರಹ್ಮ ಬರೆದ ಕಲ್ಪನೆಯಲ್ಲಿದ್ದು, ಸತ್ತುಹೋಗುವಾಗ
ಅವನನು ಶಿವ ಮೆಚ್ಚಿ ಕೈಲಾಸಕ್ಕೆ ತಕ್ಕೊಂಡು ಹೋದನೆ ? ಹೋಗಲಿಲ್ಲ.
ಅದು ಎಂತೆಂದರೆ :
ಕಾಲಚಕ್ರವೆಂಬ ಪ್ರಳಯಕ್ಕೊಳಗಾಗಿ,
ಕಾಲನ ಬಾಧೆಯಲ್ಲಿ ಬಿದ್ದು ಹೊರಳಾಡುತ್ತಿದ್ದರು ಕಾಣೆರೊ.
ಅದು ಎಂತೆಂದರೆ :
ಬ್ರಹ್ಮ ಬರೆದ ಕಲ್ಪನೆ ಹೊರತಾಗಿ,
ಶಿವನನು ನೆನೆದು ಕೈಲಾಸ ಕಂಡೆವೆಂದು
ಕಲೆ ಕೆಳಗಾಗಿ ಕಾಲು ಮೇಲ್ಮಾಡಿ ತಪವ ಮಾಡಿದರೆ,
ಕೈಲಾಸ ಪದ ಆಗದೆಂದು ಇಕ್ಕುವೆನು ಮುಂಡಿಗೆಯ.
ಇದನು ಎತ್ತುವರುಂಟೆ,
ದೇವಧ್ವಜ ಮೃತ್ಯುಂಜಯನ ಭಾವದೊಲ್ಲಭ ಮುದ್ದನೂರೇಶಾ ? ॥ ೧ ॥

೧೨೬೬

ಲಿಂಗದೇವರ ಪಾದದ ನೆನೆವ ನಿತ್ಯಮಾಡಿ,
ಹೇಮದ ಕೂಟದ ಹಿರಿಯರುಗಳು ಆಶೀರ್ವಾದ ಬಿನ್ನಹ.
ಅಂಗದ ಮೇಲೆ ಲಿಂಗವನು ಕಟ್ಟಿ ಶಿವಭಕ್ತರಾದ ಮೇಲೆ
ಭವಿಗಳು ಇದ್ದಲ್ಲಿ ಶಿವಶಾಸ್ತ್ರವ ಓದಿ,
ಭವಿಗಳ ಪಂಕ್ತಿಯಲ್ಲಿ ಅನ್ನವನು ಉಣಲಾಗದೆಂದು
ಬರಿಯ ಮಾತಿನ ಬಣಬೆಯ ಹಿಡಕೊಂಡು
ತಿರುಗುವ ನರಗುರಿಗಳು,

ಆಧಾರಚಕ್ರದಲ್ಲಿ ಬ್ರಹ್ಮನೆಂಬೊ ಭವಿ ಹುಟ್ಟಿ,
ಹೊರಗೆ ಪೃಥ್ವಿತತ್ವದ ಸ್ವಾಧಿಷ್ಟದಲ್ಲಿ ವಿಷ್ಣುವೆಂಬೊ ಭವಿ ಹುಟ್ಟಿ,
ಒಳಗೆ ಅಪ್ಪುತತ್ವದ ಹೊರಗೆ ಅಪ್ಪುತತ್ವದ
ಮಣಿಪೂರಕದಲ್ಲಿ ರುದ್ರನೆಂಬೊ ಭವಿ ಹುಟ್ಟಿ,
ಒಳಗೆ ತೇಜತತ್ವದ ಹೊರಗೆ ತೇಜತತ್ವದ
ಅನಾಹತದಲ್ಲಿ ಈಶ್ವರನೆಂಬೊ ಭವಿ ಹುಟ್ಟಿ,
ಒಳಗೆ ವಾಯುತತ್ವದ ಹೊರಗೆ ವಾಯುತತ್ವದ
ವಿಶುದ್ಧಿಯಲ್ಲಿ ಸದಾಶಿವನೆಂಬ ಭವಿ ಹುಟ್ಟಿ,
ಒಳಗೆ ಆಕಾಶತತ್ವದ ಹೊರಗೆ ಆಕಾಶತತ್ವದ
ಅಗ್ನಿಯಿಂದ ಪರಬ್ರಹ್ಮನೆಂಬೊ ಭವಿ ಹುಟ್ಟಿ.
ಇಂತೀ ಇವರು ಆರುಮಂದಿ ಭವಿಗಳು.
ಭಕ್ತನ ಅಂತರಂಗದೊಳು ಹುಟ್ಟಿ, ಅಂತರಂಗದೊಳು ಬೆಳೆದು,
ಬೇರೊಂದು ವಿಷ್ಣುಲಿಂಗವಾಗಿ ಬಂದು ಪೂಜೆಗೊಂಬುತಿದ್ದರು ಕಾಣಿರೊ.
ಅದು ಎಂತೆಂದರೆ :
ಬ್ರಹ್ಮನೆಂಬ ಭವಿ, ವಿಷ್ಣುವೆಂಬ ಭವಿ, ರುದ್ರನೆಂಬ ಭವಿ.
ಇಂತಿವರು ಮೂರುಮಂದಿ ಭವಿಗಳು ಒಂದುಗೂಡಲಿಕೆ
ಈಶ್ವರನೆಂಬ ಲಿಂಗಾಕಾರ ಭವಿಯಾಯಿತು ಕಾಣಿರೊ.
ಆ ಲಿಂಗದ ರೂಪನು ನೋಡಿ,
ಶಿಲ್ಪಕಾರರು ತಮ್ಮ ಹೊಟ್ಟೆಕಿಚ್ಚಿಗೆ
ಕಟೆದಿಟ್ಟು, ಮಾರುವ ಶಿಲೆಯ ಲಿಂಗವ ತಂದು,
ಶಿರದಲ್ಲಿ ಕಟ್ಟಿ, ಕರದಲ್ಲಿ ಪೂಜೆ ಮಾಡಿ
ಶಿವಭಕ್ತರೆಂದು ಹೆಸರಿಟ್ಟುಕೊಂಡು ನುಡಿವ ಅಣ್ಣಗಳ
ಅಂತರಂಗದೊಳು ಕಾಮವೆಂಬೊ ಭವಿ, ಕ್ರೋಧವೆಂಬೊ ಭವಿ,
ಲೋಭವೆಂಬೊ ಭವಿ, ಮೋಹವೆಂಬೊ ಭವಿ,
ಮದವೆಂಬೊ ಭವಿ, ಮತ್ಸರವೆಂಬೊ ಭವಿ.
ಇಂತೀ [ಈ]ರಾರು ಹನ್ನೆರಡುಮಂದಿ ಭವಿಗಳನು
ಹತ್ತೇಲಿಯಿಟ್ಟುಕೊಂಡು, ಕೂಡಿಯುಂಡು
ಕುಲವನರಸುವಂಥ ಕೋತಿಗಳು ಮಾಡಿದ ಭಕ್ತಿ ಏನಾಯಿತೆಂದರೆ,
ಅಜ್ಜಿಗೆ ಅರಸಿನ ಚಿಂತೆಯಾದರೆ,
ಮಗಳಿಗೆ ಮಿಂಡಗಾರನ ಚಿಂತೆಯನು ಮಾಡಿಕೊಂಡು,
ಹಲವು ಮಿಂಡಗಾರಗೆ ಸೆರಗುಹಾಸಿ ಮಾಡಿಕೊಂಡು
ಹೋದಂತಾದೀತು ಕಾಣಿರೊ.
ಅದು ಎಂತೆಂದರೆ :
ಓಂಕಾರ ಪರಬ್ರಹ್ಮನೆಂಬೊ ವಿಪ್ರನ ಗರ್ಭದಲ್ಲಿ

ನಕಾರವೆಂಬೊ ಅಕ್ಷರ ಹುಟ್ಟಿ,
ಸದ್ಯೋಜಾತಮುಖದಲ್ಲಿ ಬ್ರಹ್ಮನೆಂಬೊ ಭವಿಯಾಗಿ ಬಂದು,
ಎಂಬತ್ತುನಾಲ್ಕುಲಕ್ಷ ಜೀವರಾಶಿಗಳನೆಲ್ಲ ಹುಟ್ಟಿಸಬೇಕೆಂದು
ಚಿಂತೆಯನು ತಾಳಿ,
ಪೃಥ್ವಿತತ್ವವೆಂಬೊ ಆದಿ ಆಧಾರ ಬುಡವಾಗಿಯಿದ್ದ ಕಾಣಿರೊ.
ಮಕಾರವೆಂಬೊ ಅಕ್ಷರ ಹುಟ್ಟಿ,
ವಾಮದೇವಮುಖದಲ್ಲಿ ವಿಷ್ಣುವೆಂಬೊ ಭವಿಯಾಗಿ ಬಂದು,
ಎಂಬತ್ತುನಾಲ್ಕುಲಕ್ಷ ಜೀವರಾಶಿಗಳಿಗೆಲ್ಲ ರಕ್ಷಿಸಬೇಕೆಂಬೊ
ಚಿಂತೆಯನು ತಾಳಿ,
ಅಪ್ಪುತತ್ವವೆಂಬೊ ಆದಿ ಆಧಾರದ ಬುಡವಾಗಿಯಿದ್ದ ಕಾಣಿರೊ.
ಶಿಕಾರವೆಂಬೊ ಅಕ್ಷರ ಹುಟ್ಟಿ,
ಅಘೋರಮುಖದಲ್ಲಿ ರುದ್ರನೆಂಬೊ ಭವಿಯಾಗಿ ಬಂದು,
ಎಂಬತ್ತುನಾಲ್ಕುಲಕ್ಷ ಜೀವರಾಶಿಗಳನೆಲ್ಲ ಭಕ್ಷಿಸಬೇಕೆಂಬೊ
ಚಿಂತೆಯನು ತಾಳಿ,
ತೇಜತತ್ವವೆಂಬೊ ಆದಿ ಆಧಾರದ ಬುಡವಾಗಿಯಿದ್ದ ಕಾಣಿರೊ.
ವಕಾರವೆಂಬೊ ಅಕ್ಷರ ಹುಟ್ಟಿ,
ತತ್ಪುರುಷಮುಖದಲ್ಲಿ ಈಶ್ವರನೆಂಬೊ ಭವಿಯಾಗಿ ಬಂದು,
ಎಂಬತ್ತುನಾಲ್ಕುಲಕ್ಷ ಜೀವರಾಶಿಗಳಿಗೆಲ್ಲ
ಅಂಗದೊಳಗೆ ಪ್ರಾಣಲಿಂಗವಾಗಿ ಪೂಜೆಗೊಳಬೇಕೆಂಬ
ಚಿಂತೆಯನು ತಾಳಿ,
ವಾಯುತತ್ವವೆಂಬೊ ಆದಿ ಆಧಾರದ ಬುಡವಾಗಿಯಿದ್ದ ಕಾಣಿರೊ.
ಯಕಾರವಂಬೊ ಅಕ್ಷರ ಹುಟ್ಟಿ,
ಈಶಾನ್ಯಮುಖದಲ್ಲಿ ಸದಾಶಿವನೆಂಬ ಭವಿಯಾಗಿ ಬಂದು,
ಎಂಬತ್ತುನಾಲ್ಕುಲಕ್ಷ ಜೀವರಾಶಿಗಳನೆಲ್ಲ
ತನ್ನ ಅಂತರಂಗದೊಳಗೆ ಇಂಬಿಟ್ಟು ಇರಬೇಕೆಂಬ
ಚಿಂತೆಯನು ತಾಳಿ,
ಆಕಾಶತತ್ವವೆಂಬೊ ಆದಿ ಆಧಾರದ ಬುಡವಾಗಿಯಿದ್ದ ಕಾಣಿರೊ.
ಅದು ಎಂತೆಂದಡೆ :
ಇಂತೀ ಇಪ್ಪತ್ತೈದು ತತ್ವಗಳ ಆಧಾರದಲ್ಲಿ ಹುಟ್ಟಿದ
ಭಕ್ತರೆಂಬ ಕೊಂಬೆಗಳು ಮಾಡಿದ ಭಕ್ತಿಯೆನಗಾಯಿತು
ಅಂದರೆ, ಪೃಥ್ವಿತತ್ವದ ಆಧಾರದಲ್ಲಿ ಹುಟ್ಟಿದ ಕಸಕಡ್ಡಿಗಳೆಲ್ಲ
ಕುಸುಕಿಂದ ಹರಕೊಂಡು ತಿಂದು ಹರಿಹೋದಂತೆ ಕಾಣಿರೊ.
ಅದು ಎಂತೆಂದರೆ :
ಭವಿಗಳ ಆಧಾರದಲ್ಲಿ ಭಕ್ತರೆಂಬ ಕೊಂಬೆಗಳು ಹುಟ್ಟಿ

ಪೃಥ್ವಿತತ್ವವೆಂಬೊ ಭವಿಯ ಹುಟ್ಟಿಸೆಂದರೆ ಹುಟ್ಟಿಸಲಿಲ್ಲ.
ಅಪ್ಪುತತ್ವವೆಂಬೊ ಭವಿಯ ರಕ್ಷಿಸಿಯೆಂದರೆ, ರಕ್ಷಿಸಿಯಿದ್ದಿಲ್ಲ.
ತೇಜತತ್ವಯೆಂಬೊ ಭವಿಯ ಭಕ್ಷಿಸಿಯೆಂದರೆ, ಭಕ್ಷಿಸಿಯಿದ್ದಿಲ್ಲ.
ವಾಯುತತ್ವವೆಂಬೊ ಭವಿಯ ಅಂಗದೊಳಗೆ
ಲಿಂಗವಾಗಿ ಪೂಜೆಗೊಂಡಿದ್ದರೆ ಪೂಜೆಗೊಂಡಿದ್ದಿಲ್ಲಾ.
ಆಕಾಶತತ್ವಯೆಂಬೊ ಭವಿಯನು ತಮ್ಮ ಅಂತರಂಗದೊಳಗೆ
ಮರೆಯೊಳಗೆ ಇಂಬಿಟ್ಟುಕೊಂಡು ಇರಲಾರದ ಅಜ್ಞಾನಿಗಳು.
ಪೃಥ್ವಿತತ್ವವೆಂಬೊ ಭವಿ ಆಧಾರದಲ್ಲಿ ಹುಟ್ಟಿ,
ಭವಿ ಆಧಾರದಲ್ಲಿ ಬೆಳೆದು,
ಆಕಾಶತತ್ವವೆಂಬೊ ಭವಿಯ ಅಂತರಂಗದ ಮರೆಯಲ್ಲಿ
ಅಡಗಿಕೊಂಡಿದ್ದ ಅಜ್ಞಾನಿಗಳು.
ಬ್ರಹ್ಮನೆಂಬೊ ಭವಿ, ವಿಷ್ಣುವೆಂಬೊ ಭವಿ, ರುದ್ರನೆಂಬೊ ಭವಿ.
ಮೂವರು ತ್ರಿಮೂರ್ತಿಗಳು ಕೂಡಿ ಏಕಮೂರ್ತಿಯಾದ
ಆಕಾರಲಿಂಗವನು ತಂದು, ತಮ್ಮ ಶಿರದಲ್ಲಿ ಕಟ್ಟಿಕೊಂಡು
ಶಿವಭಕ್ತನೆ ಹೆಚ್ಚು, ಭವಿ ಕಡಿಮೆಯೆಂದು
ಕೈಯಲ್ಲಿ ಕಂಜರದ ಬಾಕನೆ ಹಿಡಿದುಕೊಂಡು,
ಕೆಂಜಡೆಯ ಬಿಟ್ಟುಕೊಂಡು, ವೀರಗಾಸೆಯಂತೆ ಕುಣಿದಾಡಿ,
ಕೂಗಿ ಕೂಗಿ ಹೇಳುವ ಕುನ್ನಿಗಳು ಮಾಡಿದ ಭಕ್ತಿಯೇನಾಯಿತೆಂದರೆ,
ಕೈಲಾಸದ ನಾಯಿಗಳು ಕೈಮ್ಮೆಯನ್ನ ಹರಕೊಂಡು,
ವೈಹಾಳಿಯ ಬಯಲಿಗೆ ಹೋಗಿ, ಒದರಿದರೆ,
ಸತ್ತಂತಾಯಿತೆಂದು ಇಕ್ಕುವೆನು ಮುಂಡಿಗೆಯ.
ಇದನೆತ್ತುವರಾರುಂಟೊ,
ದೇವಧ್ವಜ ಮೃತ್ಯುಂಜಯನ ಭಾವದೊಲ್ಲಭ ಮುದ್ದನೂರೇಶಾ ? ॥ ೨ ॥

೧೨೬೭

ನಾನಾ ಜನ್ಮಂಗಳ ತಿರುಗಿ, ಮನುಷ್ಯಜನ್ಮಕ್ಕೆ ಬಂದು,
ಪಂಚೇಂದ್ರಿಯವುಳ್ಳ ಅರಿವಿನ ಪುರುಷನಾದ ಮೇಲೆ,
ತಮ್ಮ ಆತ್ಮದೊಳಗಿಪ್ಪ ಜ್ಯೋತಿರ್ಲಿಂಗವನು ಕಂಡು,
ಆರು ಲಿಂಗವನು ಕಂಡು, ಆರು ಲಿಂಗವನು ಅನುಭವಿಸಿ ನೋಡಿ,
ಮೂವತ್ತಾರು ಲಿಂಗದ ಮುದ್ರೆಯನು ಮುಟ್ಟಿ,
ಆಧ್ಯಾತ್ಮದ ನೀತಿಯನು ತಿಳಿದು, ಶುದ್ಧಾತ್ಮದೇಹಿಗಳಾದ ಮೇಲೆ
ತಮ್ಮ ಜಾತಿಧರ್ಮದ ನೀತಿಶಾಸ್ತ್ರದ ನಿರ್ಣಯವನೆ ಕೇಳಿ,
ತಮ್ಮ ಜಾತಿಧರ್ಮದ ವರ್ಣನೆ ಗುರುಹಿರಿಯರನು ಪೂಜೆಯ ಮಾಡಿ,
ಹಸಿದು ಬಳಲಿಬಂದವರಿಗೆ ಅನ್ನವನು ನೀಡಿ,

ಭಕ್ತಿಯನು ಮಾಡಿ, ಮುಕ್ತಿಯನ್ನು ಪಡೆದರೆ,
ತನ್ನಷ್ಟಕ್ಕೇ ಆಯಿತು.
ಆ ವಾರ್ತೆ ಕೀರ್ತಿಗಳು ಜಗಜಗಕ್ಕೆ ಕೀರ್ತಿ ಮೆರೆಯಿಪ್ಪುದು ಕಾಣಿರೊ.
ಅದು ಎಂತೆಂದರೆ :
ತಾನು ಹತ್ತು ಎಂಟು ಸಾವಿರ ಹಣ ಕಾಸುಗಳನು ಗಳಿಸಿ,
ಹತ್ತಿರವಿಟ್ಟುಕೊಂಡು ಸತ್ತುಹೋದರೆ,
ಆ ಬದುಕು ತನ್ನ ಹೆಂಡಿರು ಮಕ್ಕಳಿಗೆ ಬಾಂಧವರಿಗೆ ಆಯಿತಲ್ಲದೆ,
ನೆರೆಮನೆಯವರಿಗೆ ಬಂದೀತೆ ? ಬರಲರಿಯದು.
ಅದು ಎಂತೆಂದರೆ :
ಇಂತೀ ತಮ್ಮ ಮನೆಯ ಹಿರಿಯರ ಸುದ್ದಿಯನು ಹಿಂದಿಟ್ಟುಕೊಂಡ
ನೆರೆಮನೆಯ ಹಿರಿಯರ ಗರ್ವ, ಬಸವಣ್ಣ ದೊಡ್ಡಾತ,
ಚೆನ್ನಬಸವಣ್ಣ ದೊಡ್ಡಾತ, ದೇವರ ದಾಸಿಮಯ್ಯ ದೊಡ್ಡಾತ.
ಗಣಂಗಳು ದೊಡ್ಡವರೆಂದು ಬರಿಯ ಮಾತಿನ ಮಾಲೆಯ ಕೊಂಡು
ಶಾಸ್ತ್ರವನು ಹಿಡಕೊಂಡು ಓದಿ ಹೇಳುವ ಮನುಜರಿಗೆಲ್ಲ
ಭಕ್ತಿ ಅಳವಟ್ಟು, ಮುಕ್ತಿ ಸಾಧನವಾಯಿತೇ ? ಆಗಲರಿಯದು.
ಅದು ಎಂತೆಂದರೆ :
ಬಸವಣ್ಣ ಭಕ್ತಿಯನು ಮಾಡಿ, ಮುಕ್ತಿಯನು ಪಡೆದರೆ,
ಬಸವಣ್ಣನ ಅಷ್ಟಕ್ಕೇ ಆಯಿತು.
ಚೆನ್ನಬಸವಣ್ಣ ಭಕ್ಕಿಯನು ಮಾಡಿ, ಮುಕ್ತಿಯನು ಪಡೆದರೆ,
ಚೆನ್ನಬಸವಣ್ಣನ ಅಷ್ಟಕ್ಕೇ ಆಯಿತು.
ದೇವರದಾಸಿಮಯ್ಯ ಭಕ್ತಿಯನು ಮಾಡಿ, ಮುಕ್ತಿಯನು ಪಡೆದರೆ,
ದೇವರದಾಸಿಮಯ್ಯನ ಅಷ್ಟಕ್ಕೆ ಆಯಿತು.
ಗಣಂಗಳು ಭಕ್ತಿಯನು ಮಾಡಿ, ಮುಕ್ತಿಯನು ಪಡೆದರೆ,
ಗಣಂಗಳ ಅಷ್ಟಕ್ಕೇ ಆಯಿತು.
ನಾವು ಭಕ್ತಿಯನು ಮಾಡಿ, ಮುಕ್ತಿಯನು ಪಡೆದರೆ,
ನಮ್ಮಷ್ಟಕ್ಕೇ ಆಯಿತು.
ಅದು ಎಂತೆಂದರೆ :
ಬಸವಣ್ಣ ಚೆನ್ನಬಸವಣ್ಣ ದೇವರದಾಸಿಮಯ್ಯ ಗಣಂಗಳೆಲ್ಲರು
ದೊಡ್ಡವರೆಂದು ಅವರನ್ನು ಹಾಡಿ ಹರಸಿದರೆ,
ಅವರು ನಮಗೆ ಕೊಟ್ಟು ಕೊಂಡು ನಡಸ್ಯಾರೆ ? ನಡೆಸಲರಿಯರು.
ಅವರು ದೊಡ್ಡವರೆಂದರೆ, ಅವರು ತಮ್ಮಷ್ಟಕ್ಕೇ.
ಅವರು ಚಿಕ್ಕವರಾದರೂ, ಅವರು ತಮ್ಮಷ್ಟಕ್ಕೇ.
ನಾವು ದೊಡ್ಡವರಾದರೆ ಅವರಿಗೆ ನಾವು ಕೊಟ್ಟು ಕೊಂಡು
ನಡೆಸೇವೆ ? ನಡೆಸಲರಿಯೆವು.

ನಾವು ದೊಡ್ಡವರಾದರೆ ನಮ್ಮಷ್ಟಕ್ಕೇ.
ವಾನು ಚಿಕ್ಕವರಾದರೆ ನಮ್ಮಷ್ಟಕ್ಕೇ.
ಎದು ಎಂತೆಂದರೆ :
ಹಿಂದೆ ಹುಟ್ಟಿದ ಹಿರಿಯ ಅಣ್ಣಗಳಾದರೇನು,
ಮುಂದೆ ಹುಟ್ಟಿದ ಕಿರಿಯ ತಮ್ಮನಾದರೇನು,
ತನ್ನ ಸುದ್ದಿಯನು ತಾನು ಅರಿತು, ಅನ್ಯರ ಹಂಗು ಹರಿದು,
ಓಂಕಾರ ಪರಬ್ರಹ್ಮದ ಧ್ಯಾನವನು ಮಾಡಿಕೊಂಡು ಇರಬಲ್ಲರೆ,
ಆತನೀಗ ತನ್ನಷ್ಟಕ್ಕೇ.
ಹಿರಿಯಾತಂಗೆ ಭಕ್ತಿ ಅಳವಟ್ಟು, ಮುಕ್ತಿ ಸಾಧನವಾಯಿತು ಕಾಣಿರೊ.
ಇಂತೀ ತನ್ನ ಸುದ್ದಿಯ ತಾನು ಅರಿಯದೆ,
ನೆರೆಮನೆಯ ಹಿರಿಯರು ಘನವೆಂದು ಕೊಡಾಡುವ
ಮರಿ ನಾಯಿಕುನ್ನಿಗಳಿಗೆಲ್ಲ ಭಕ್ತಿ ಅಳವಟ್ಟು,
ಮುಕ್ತಿ ಸಾಧನವಾಗಲರಿಯದೆಂದು ಇಕ್ಕಿದೆನು ಮುಂಡಿಗೆಯ.
ಇದನೆತ್ತುವರುಂಟೇನೊ,
ದೇವಧ್ವಜ ಮೃತ್ಯುಂಜಯನ ಭಾವದೊಲ್ಲಭ ಮುದ್ದನೂರೇಶಾ ? ॥ ೩ ॥

೧೨೬೮

ಹರಿಹರ ಬ್ರಹ್ಮಾದಿಗಳು ಸರಿಯಿಲ್ಲವೆಂದು
ಹೇಳುವ ಅಣ್ಣಗಳು ನೀವು ಕೇಳಿರೊ.
ಹರಿಹರ ಬ್ರಹ್ಮಾದಿಗಳೊಳಗೆ ಸರಿಯಾಗಿ ಬಂದು,
ನಿಮ್ಮ ಅಂತರಂಗದೊಳಗೆ ನಿಂತ ಕಾರಣದಿಂದಾಗಿ,
ಪೃಥ್ವಿ ಅಪ್ಪು ತೇಜ ವಾಯು ಆಕಾಶ ಸ್ವರ್ಗ ಮರ್ತ್ಯ ಪಾತಾಳ
ಈರೇಳು ಭುವನ ಹದಿನಾಲ್ಕು ಲೋಕ, ನಾಲ್ಕು ವರ್ಣ, ಹದಿನೆಂಟು ಜಾತಿ,
ನೂರೊಂದು ಕುಲದವರಾದರು.
ಭಕ್ತರ ಆಧಾರದಲಿ ನಾವು ಆದಿವಿ, ನೀವು ಆದಿರಿ.
ಅದು ಎಂತೆಂದರೆ :
ಓಂಕಾರ ಪರಬ್ರಹ್ಮನೆಂಬ ವಿಪ್ರನ ಗರ್ಭದಲ್ಲಿ ಹುಟ್ಟಿದ
ನಕಾರ ಬ್ರಹ್ಮನೆ ಪೃಥ್ವಿತತ್ವವಾದ,
ಮಕಾರ ವಿಷ್ಣುವೆ ಅಪ್ಪುತತ್ವವಾದ.
ಶಿಕಾರ ರುದ್ರನೆ ತೇಜತತ್ವವಾದ,
ವಕಾರ ಈಶ್ವರನೆ ವಾಯುತತ್ವವಾದ.
ಯಕಾರ ಸದಾಶಿವನೆ ಆಕಾಶ ತತ್ವವಾದ
ಅದು ಎಂತೆಂದರೆ :
ನಕಾರ ಬ್ರಹ್ಮ, ಮಕಾರ ವಿಷ್ಣು, ಶಿಕಾರ ರುದ್ರ.

ಮೂವರು ತ್ರಿಮೂರ್ತಿಗಳು ಕೂಡಲಿಕೆ
ಈಶ್ವರನೆಂಬುದೊಂದು ವಿಪ್ರವರ್ಣವಾಯಿತು ಕಾಣಿರೊ.
ಆತನ ಸದ್ಯೋಜಾತಮುಖದಲ್ಲಿ ಬ್ರಾಹ್ಮಣ ಹುಟ್ಟಿದ.
ಅವರ ಅಂಗದಲ್ಲಿ ಪ್ರಸಾದಲಿಂಗವಾದ,
ಶಿಖೆಯಲ್ಲಿ ವಿಷ್ಣುಲಿಂಗವಾದ,
ಮನೆಯಲ್ಲಿ ಸ್ಪಟಿಕ ವರ್ಣದ ಪಟ್ಟಿಕೇಶ್ವರನೆಂಬ ಲಿಂಗವಾದ.
ಆತನ ಭುಜದಲ್ಲಿ ಕ್ಷತ್ರಿಯ ಹುಟ್ಟಿದ.
ಅವರ ಅಂಗದಲ್ಲಿ ಪ್ರಾಣಲಿಂಗವಾದ, ಶಿಖೆಯಲ್ಲಿ ವಿಷ್ಣುಲಿಂಗವಾದ,
ಮನೆಯಲ್ಲಿ ಶ್ವೇತವರ್ಣದ ರಾಮನಾಥಲಿಂಗವಾದ,
ಆತನ ಉದರದಲ್ಲಿ ವೈಶ್ಯ ಹುಟ್ಟಿದ
ಅವರ ಅಂಗದಲ್ಲಿ ಪ್ರಾಣಲಿಂಗವಾದ, ಶಿಖೆಯಲ್ಲಿ ವಿಷ್ಣುಲಿಂಗವಾದ,
ಮನೆಯಲ್ಲಿ ಶ್ಯಾಮವರ್ಣದ ನಗರೇಶ್ವರಲಿಂಗವಾದ.
ಆತನ ಪಾದದಲ್ಲಿ ಶೂದ್ರ ಹುಟ್ಟಿದ.
ಅವರ ಅಂಗದಲ್ಲಿ ಪ್ರಾಣಲಿಂಗವಾದ ಶಿಖೆಯಲ್ಲಿ ವಿಷ್ಣುಲಿಂಗವಾದ,
ಮನೆಯಲ್ಲಿ ನೀಲವರ್ಣದ ಕಲ್ಲಿನಾಥಲಿಂಗವಾದ.
ಇಂತೀ ನಾಲ್ಕುವರ್ಣ ಹದಿನೆಂಟುಜಾತಿ ನೂರೊಂದು ಕುಲದವರು
ಅಂತರಂಗದ ಒಳಹೊರಗೆ
ಹರಿಹರ ಬ್ರಹ್ಮಾದಿಗಳು ಪೂಜೆಗೊಂಬುವ ದೇವರು
ತಾವೆ ಆದರು, ಪೂಜೆ ಮಾಡುವ ಭಕ್ತರು ತಾವೆ ಆದರು.
ಅದು ಎಂತೆಂದರೆ :
ನಿಮ್ಮ ತಾಯಿಗರ್ಭದಲ್ಲಿ ಶುಕ್ಲ ಶೋಣಿತಗಳು ಎರಡು ಕೂಡಿ
ಅಕ್ಷಮೂರ್ತಿಯಾದ.
ಆತ್ಮದೊಳಗೆ ಓಂಕಾರ ಪರಬ್ರಹ್ಮವೆಂಬ
.....(ಒಂದು ಹಾಳೆ ಕಳೆದಿದೆ)
ನರರು ಸುರರು ತೆತ್ತೀಸಕೋಟಿ ದೇವತೆಗಳಿಗೆಲ್ಲ
ಪೂಜೆ ಮಾಡುವ ಲಿಂಗ ಒಂದೆಯೆಂದು ಇಕ್ಕುವೆನು ಮುಂಡಿಗೆಯ.
ಇದನೆತ್ತುವರುಂಟೇನು,
ದೇವಧ್ವಜ ಮೃತ್ಯುಂಜಯನ ಭಾವದೊಲ್ಲಭ ಮುದ್ದನೂರೇಶಾ ? ॥ ೪ ॥

■■

## -?-ನಂಜುಂಡಶಿವ

೧೨೬೯

ಅಕಾರ ಉಕಾರ ಈ ಎರಡೂ ಕೂಡಿ ಓಕಾರವಾಯಿತ್ತು.
ಮಕಾರವೆಂಬ ಬಿಂದು ಕೂಡಲು ಓಂ ಎಂಬುವನ್ಯೋದ್ಧಾರಣವಾಯಿತ್ತು.
ಆ ವರ್ಣವೆ ಪಂಚಾವಯವನುಳ್ಳ ಪರಬ್ರಹ್ಮವೆಂದು
ಸಮಸ್ತಯೋಗೀಶ್ವರರು ಹೇಳುತ್ತಲಿಹರು.
ಅದೆಂತೆಂದಡೆ :
ಅಕಾರೋಕಾರ ಸಂಯೋಗದೋಕಾರಃ ಸ್ವರ ಉಚ್ಯತೇ ।
ಓಮಿತ್ಯೇಕಾಕ್ಷರಂ ಬ್ರಹ್ಮವದಂತಿ ಸರ್ವಯೋಗಿನಃ ॥
ಸರ್ವವ್ಯಾಪಿ ನಮೋಕಾರಂ ಮತ್ವಾಧಿರೋ ನ ಶೋಚತಿ ।
ಪ್ರಣವೋಹಿ ಪರಬ್ರಹ್ಮ ಪ್ರಣವಃ ಪರಮಂ ಪದಂ ॥
ಎಂದುದಾಗಿ, ಆ ಪಂಚಾವಯವನುಳ್ಳ ಪ್ರಣಮದ
ತಾರಕಾಕೃತಿಯಲ್ಲಿ ಯಕಾರ ಜನಿಸಿತ್ತು.
ಆ ಪ್ರಣಮದ ದಂಡಾಕೃತಿಯಲ್ಲಿ ವಕಾರ ಹುಟ್ಟಿತ್ತು.
ಆ ಪ್ರಣಮದ ಕುಂಡಲಿಯಲ್ಲಿ ಶಿಕಾರ ಉದಯವಾಯಿತ್ತು.
ಆ ಪ್ರಣಮದ ಅರ್ಧಚಂದ್ರಾಕೃತಿಯಲ್ಲಿ ಮಕಾರ ಹುಟ್ಟಿತ್ತು.
ಆ ಪ್ರಣಮಕ್ಕೆ ಮುಖವಾದ ಬಿಂದುವಿನಲ್ಲಿ ನಕಾರ ಜನನವಾಯಿತ್ತು.
ಅದೆಂತೆಂದಡೆ :

ಯಕಾರಂ ತಾರಕಂ ಜ್ಞೇಯಂ ವಕಾರಂ ದಂಡ ಉಚ್ಯತೇ ।
ಶಿಕಾರಂ ಕುಂಡಲಂ ಪ್ರೋಕ್ತಂ ಮಕಾರಂ ಚೌರ್ಧಚಂದ್ರಕಂ ।
ನಕಾರಂ ಬಿಂದು ಸಂಪ್ರೋಕ್ತಂ ಪ್ರಣವಃ ಪಂಚವರ್ಣಜಃ ॥
ಎಂದುದಾಗಿ, ಮತ್ತಂ ನಕಾರದಿಂ ಕರ್ಮೇಂದ್ರಿಯಂಗಳು ಹುಟ್ಟಿದವು.
ಮಕಾರದಿಂ ವಿಷಯಂಗಳು ಜನನವಾದವು.
ಶಿಕಾರದಿಂ ಜ್ಞಾನೇಂದ್ರಿಯಂಗಳುತ್ಪತ್ತಿ.
ವಕಾರದಿಂ ವಾಯುಗಳು ಹುಟ್ಟಿದವು.
ಯಕಾರದಿಂ ಕರಣಂಗಳು ಜನನವಾದವು.
ಓಂಕಾರವೆ ಸರ್ವಚೇತನಾತ್ಮಕವಾಯಿತ್ತು.
ಅದೆಂತೆಂದಡೆ :
ನಕಾರಂ ಕರ್ಮಸಂಜಾತಮಕಾರೋ ವಿಷಯೋದ್ಭವಃ ।
ಶಿಕಾರಮಿಂದ್ರಿಯಂ ಪ್ರೋಕ್ತಂ ವಕಾರಂ ವಾಯುರುಚ್ಯತೇ ॥
ಯಕಾರಂ ಕರಣೋತ್ಪತ್ತಿ ಓಂಕಾರಂ ಚೇತನಾತ್ಮಕಃ ।
ಮಂತ್ರಮೂರ್ತಿಮಿದಂ ದೇವಿ ಏವಂ ಜ್ಞಾತ್ವಾ ವಿಚಕ್ಷಣಃ ॥
ಎಂದುದಾಗಿ, ಇಂತಪ್ಪ ಮಂತ್ರಮೂರ್ತಿಯಾದ ಚೇತನಾತ್ಮಕ ತಾನೆ,
ಪರಮಗುರುವೆ ನಂಜುಂಡಶಿವಾ. ॥ ೧ ॥

೧೨೭೦

ಅತಳ ವಿತಳ ಸುತಳ ನಿರಾತಳ ತಳಾತಳ
ರಸಾತಳ ಪಾತಾಳ ಭೂಲೋಕ ಭುವರ್ಲೋಕ ಸ್ವರ್ಗಲೋಕ
ಮಹರ್ಲೋಕ ಜನಲೋಕ ತಪರ್ಲೋಕ ಸತ್ಯಲೋಕವೆಂದಿಂತು
ಈರೇಳುಲೋಕಂಗಳು.
ಮೇರು ಮಂದರ ಕೈಲಾಸ ಹಿಮಾಲಯ ನಿಷಾಧ ಗಂಧ
ಮಾಧವವೆಂದಿಂತು ಸಪ್ತಕುಲಪರ್ವತಂಗಳು.
ಜಂಬು ಶಾಖ ಕುಶ ಕ್ರೌಂಚ ಶಾಲ್ಮಲಿ ಗೋಮೇಧ
ಪುಷ್ಕರವೆಂದಿಂತು ಸಪ್ತದ್ವೀಪಂಗಳು.
ಕ್ಷಾರ ಕ್ಷೀರ ದಧಿ ಸರ್ಪಿ ಇಕ್ಷು ಮಧು ಸ್ವಾದೋದಕವೆಂದಿಂತು
ಸಪ್ತಸಮುದ್ರಂಗಳು.
ಆದಿತ್ಯ ಸೋಮ ಮಂಗಳ ಬುಧ ಬೃಹಸ್ಪತಿ ಶುಕ್ರ ಶನಿ ರಾಹು
ಕೇತುಗಳೆಂದಿಂತು ನವಗ್ರಹಂಗಳು.
ಇಂತಿವೆಲ್ಲವು ಪಿಂಡಮಧ್ಯದಲ್ಲಿ ಇರುತಿಹವು.
ಅದೆಂತೆಂದಡೆ :
ಪಾತಾಳ ಭೂಧರಂ ಲೋಕೆ ತಥಾನ್ಯೇ ದ್ವೀಪಸಾಗರಾಃ ।
ಆದಿತ್ಯಾದಿಗ್ರಹಾ ಸರ್ವೇಪಿಂಡಮಧ್ಯೇ ವ್ಯವಸ್ಥಿತಾಃ ॥

ಪಾದಾಧಸ್ತತಳಂ ವಿಂಧ್ಯಾತ್ ಪಾದೋರ್ಧ್ವೆ ವಿತಳಂ ಭರ್ವೇತ್।
ಜಾನುಭ್ಯಾಂ ಸುತಳಂ ಜ್ಞೇಯಂ ನಿತಳ ಸಂಧಿ ಬಂಧನೇ ।
ತಳಾತಳಮದೂರೂಭ್ಯಂ ಗುಹ್ಯಸ್ಥಾನೇ ರಸಾತಳಂ ।
ಪಾತಾಳಂ ಕಟಿಸಂಧಿಸ್ತು ಪಾದಾದೌ ಲಕ್ಷಯೇದ್ಬುಧಃ ॥
ಭೂಲೋಕಂ ನಾಭಿಮಧ್ಯೇತು ಭುವರ್ಲೋಕಂ ಚ ಕುಕ್ಷಯೋಃ ।
ಹೃದಯ ಸ್ವರ್ಗಲೋಕಂ ಚ ಮಹರ್ಲೋಕಂತು ಕಂಠಕೇ ॥
ಜನರ್ಲೋಕೆ ತದೂರ್ಧ್ವೆತು ತಪರ್ಲೋಕೋ ಲಲಾಟಕೇ ।
ಸತ್ಯರ್ಲೋಕಂ ಭವೇನ್ಮೂರ್ಧ್ನಿಭುವನಾನಿ ಚತುರ್ದಶಃ ॥
ತ್ರಿಕೋಣೇ ಸಂಸ್ಥಿತೋ ಮೇರು ಅಧಃಕೋಣೇತು ಮಂದರಃ ।
ಕೈಲಾಸದಕ್ಷಿಣೇ ಕೋಣೇ ವಾಮಕೋಣೇ ಹಿಮಾಲಯಃ ॥
ನಿಷಾಧರ್ವೋರ್ಧ್ವ ಭಾಗೇ ಚ ದಕ್ಷಿಣೇ ಗಂಧ ಮಾಧವಃ ।
ರೋಮಕಂ ರೋಮರೇಖಾಯಾಂ ಸಪ್ತೈತೇ ಕುಲಪರ್ವತಾಃ ॥
ಅಸ್ಥಿಸ್ಥಾನೇ ಸ್ಥಿತೋ ಜಂಬುಮಜ್ಜಾಶಾಖಾಕಾವ್ಯವಸ್ಥಿತಃ ।
ಕುಶದ್ವೀಪಸ್ತಥಾಮಾಂಸೇ ಕ್ರೌಂಚದ್ವೀಪಂ ರಸೇಷು ಚ ॥
ತ್ವಚಾಯಾಶಾಲ್ಮಲೀ ದ್ವೀಪೋ ಗೋಮೇದೋರೋಮಸಂಚಯಃ ॥
ನಭಸ್ಥಂ ಪುಷ್ಕರಂ ವಿಂಧ್ಯಾತ್ ಸಾಗರಂ ತದನಂತರಂ ।
ಕ್ಷಾರೋದಶ್ಚ ತಥಾ ಮೂತ್ರಂ ಕ್ಷಿರೇಕ್ಷಿರೋದ ಸಾಗರಃ ॥
ದಧಾರ್ಣವ ತಥಾ ಶ್ಲೇಷ್ಮೇ ಮಜ್ಜಾಯಾಂ ಸರ್ಪಿಸಾಗರಃ ।
ತಸ್ಮಾದಿಕ್ಷುರಸಾಂತೇ ಚ ಶ್ರೋಣಿತೇ ಮಧುರಿತ್ಯಪಿ ।
ಸ್ವಾದೋದಕಲಂಬಕಸ್ಥಾನೇ ಗರ್ಭೋದಂ ಸಪ್ತಸಾಗರೇ ॥
ನಾದಚಕ್ರೇಸ್ಥಿತೋ ಸೂರ್ಯಃ ಬಿಂದು ಚಕ್ರೇ ಚ ಚಂದ್ರಮಾಃ ।
ಲೋಚನಾಭ್ಯಾಂ ಕುಂಜೋ ಜ್ಞೇಯೋ ಹೃದಯೇ ಚ ಬುಧಃ ಸ್ಮೃತಃ ॥
ಎಂದುದಾಗಿ, ಇಂತೀ ಈರೇಳುಲೋಕ ಒಳಗಾದ ಚರಾಚರವನೊಳಕೊಂಡ
ಪರಿಪೂರ್ಣಬೋಧ ತಾನೆ, ನಮ್ಮ ಪರಮಗುರು ನಂಜುಂಡಶಿವನು. ॥ ೨ ॥

೧೨೭೧

ಅಷ್ಟದಳಕಮಲದಲ್ಲಿ ಚರಿಸುವ ಆತ್ಮನ
ಗತಿಭೇದವನರಿದು, ಪ್ರಾಣಲಿಂಗಸಂಬಂಧಿಯಾಗಿ
ಲಿಂಗಾರ್ಚನೆಯ ಮಾಡುವ ಪರಿ ಎಂತೆಂದಡೆ :
ಪೂರ್ವದಳದಲ್ಲಿ ಭಕ್ತನಾಗಿಹ, ಆಗ್ನೆದಳದಲ್ಲಿ ಷಡ್ರಸಾಪೇಕ್ಷಿತನಾಗಿಹ,
ಯಮದಳದಲ್ಲಿ ಕ್ರೋಧಿಯಾಗಿಹ, ನೈರುತ್ಯದಳದಲ್ಲಿ ಸತ್ಯನಾಗಿ
ಸದಾಚಾರ ವರ್ತನೆಯಲ್ಲಿಹ,
ವರುಣದಳದಲ್ಲಿ ಪರವಶನಾಗಿಹ, ವಾಯವ್ಯದಳದಲ್ಲಿ ಗಮನಿಯಾಗಿಹ,
ಉತ್ತರದಳದಲ್ಲಿ ಧರ್ಮಶೀಲನಾಗಿಹ, ಈಶಾನ್ಯದಳದಲ್ಲಿ ಮುಕ್ತಿಯ ನಿಶ್ಚೈಸಿ

ಧ್ಯಾನ ಧಾರಣ ಸಮಾಧಿಯೆಂಬ ಸತ್ಕರ್ಮವಿಷಯಿಯಾಗಿಹ.
ಇಂತೀ ಅಷ್ಟದಳಂಗಳಂ ಮೀರಿ ನಿಜಸ್ಥಾನದಲ್ಲಿ ನಿಂದಾಗ,
ಸಚ್ಚಿದಾನಂದಸ್ವರೂಪನಾಗಿ ಚಲನೆಯಿಲ್ಲದಿಹ.
ಅದಂತೆಂದಡೆ :
ಪೂರ್ವದಳೇ ಭವೇದ್ಭಕ್ತಾ ಅಗ್ನಶ್ಚಕ್ಷುದಮೇವ ಚ ।
ದಕ್ಷಿಣಂ ಕ್ರೋಧಮುತ್ಪನ್ನಂ ನೈರುತ್ಯಂ ಸತ್ಯಮೇವ ಚ ।
ಪಶ್ಚಿಮಂತು ಭವೇನಿದ್ರಾ ವಾಯವ್ಯಂ ಗಮನಂ ಸ್ತಥಾ ।
ಉತ್ತರಂ ಧರ್ಮಶೀಲಾಯ ಈಶಾನ್ಯಂ ವಿಷಯಂ ಸ್ತಥಾ ।
ಅಷ್ಟಕರ್ಣಿಕೇ ಮಧ್ಯಸ್ಥಂ ಆನಂದಮಾಚಲಂ ಶಿವಃ ।
ಪರಾನಂದಾತ್ಮಕಂ ಸೂಕ್ಷ್ಮಂ ಕೇವಲ ಸನ್ನಿರಂಜನ ।
ಜ್ಞಾನಾಶ್ರಿತ ಪರಂ ಲಿಂಗಂ ಯೋಗಿನಾಂ ಹೃದಯೇಸ್ಥಿತಂ ।
ಯದೇವಬಿಂಬಂ ಹೃದಯಾವಲಿಪ್ತಂ ।
ತೇಜೋಮಯಭ್ರಾಜಯತೇ ಸುಧಾಂತಂ ।
ತದಾತ್ಮತ್ವಂ ಪ್ರಸಮಿಕ್ಷ್ಯದೇಹಿ ।
ಏಕಃ ಕೃತಾರ್ಥೋ ಭವತೇ ವಿಶೋಕಃ ॥
ಆತ್ಮಾತ್ವಂ ಗಿರಿಜಾಮತಿಃ ಪರಿಚರಾಃ ಪ್ರಾಣಃ ಶರೀರಂ ಗೃಹಂ ।
ಪೂಜಾತೇ ವಿಷಯೋಪಭೋಗರಚನಾ ನಿದ್ರಾಸಮ್ಯಕ್ಸಮಾಧಿಸ್ಥಿತಿಃ ॥
ಸಂಚಾರಃ ಪದಯೋಃ ಪ್ರದಕ್ಷಣವಿಧಿಃ ಸ್ತೋತ್ರಾಣಿ ಸರ್ವಾಗಿರಃ ।
ಯದ್ಯತ್ಕರ್ಮ ಕರೋಮಿ ತತ್ತದಖಿಲಂ ಶಂಭೋ ತವಾರಾಧನಂ ॥
ಯಥಾಪ್ರಾಸ್ಯ ಲಿಂಗಸ್ಯ ಸಂಯೋಗೋ ವಿಧಿತತ್ಪರಃ ॥
ತಥೈವ ಶರಣಂ ಸಾಕ್ಷಾದ್ಭವತ್ಯೇವಂ ನ ಸಂಶಯಃ ॥
ಇಂತೆಂದುದಾಗಿ, ಪ್ರಾಣದ ಲಿಂಗದ ಸಂಗದ ಸಮರಸದರಿವರತು
ನಿಂದ ನಿಲುವನುಪಮಿಸಬಾರದು.
ಅದೆಂತೆಂದಡೆ :
'ಯತೋ ವಾಚೋ ನಿವರ್ತಂತೇ ಅಪ್ರಾಪ್ಯಮನಸಾ ಸಃ'
ಎಂದುದು ಶ್ರುತಿ, ಪರಮಗುರುವೆ ನಂಜುಂಡಶಿವಾ. ॥ ೩ ॥

೧೨೭೨

ಆತ್ಮಂಗೆ ಬಂಧ ಮೋಕ್ಷಂಗಳಾವ ತೆರದಿಂದಲಾಹವೆಂದಡೆ :
ಆಕಾಶಾದಿ ಭೂತಂಗಳೈದು, ಪ್ರಾಣಾದಿ ವಾಯುಗಳೈದು,
ಶ್ರೋತ್ರಾದಿ ಇಂದ್ರಿಯಂಗಳೈದು. ಶಬ್ದಾದಿ ವಿಷಯಂಗಳೈದು,
ಮನಸಾದಿ ಕರಣ ನಾಲ್ಕು. ಇಂತಿವೆಲ್ಲವೂ ಕೂಡಿ ಸ್ಥೂಲತನುವಾಯಿತ್ತು.
ಅದೆಂತೆಂದಡೆ :
ಭೌತಿಪಂಚಭಿಃ ಪ್ರಾಣ್ಯೈಃ ಚತುರ್ದಶಭಿರಿಂದ್ರಿಯೈಃ ।

ಚತುರ್ವಿಂಶತಿ ದೇಹಾನಿ ಸಾಂಖ್ಯಶಾಸ್ತ್ರೋ ವಿದೋ ವಿಧುಃ ||
ಎಂದುದಾಗಿ, ಇಂತೀ ಇಪ್ಪತ್ತುನಾಲ್ಕು ತತ್ವದಿಂದಾದುದು ದೇಹವು.
ತಾನೆಂಬುದೇ ಅವಿದ್ಯೆ, ಅವಿದ್ಯೆಯೇ ಅಹಂಕಾರ, ಅಹಂಕಾರವೇ ಬಂಧ.
ಅದು ಕಾರಣ, ದೇಹವು ಆತ್ಮನಲ್ಲ,
ದೇಹವ ವ್ಯತಿರಿಕ್ತವಾಗಿ ಅರಿವುತಿಪ್ಪ ನಾಸ್ತಿಕನೇ ಆತ್ಮ.
ಅದೆಂತೆಂದಡೆ :
ಘಟದ್ರಷ್ಟಾ ಘಟಾದ್ಭಿನ್ನಃ ಸರ್ವಥಾನ ಘಟೋಯಥಾ ।
ದೇಹದ್ರಷ್ಟಾ ತಥಾದೇಹೋ ನಾಹಮಿತ್ಯವಧಾರಯಃ ||
ಎಂದುದಾಗಿ, ದೇಹವಾತ್ಮನಲ್ಲೆಂಬುದೆ ಅವಿದ್ಯನಾಶ.
ಅವಿದ್ಯನಾಶವೆ ಹಮ್ಮಿನ ಲಯ, ಹಮ್ಮಿನ ಲಯದೆ ಮೋಕ್ಷ.
ಅದೆಂತೆಂದಡೆ :
ಅನಾತ್ಮ ಭೂತದೇಹಾದೌ ಆತ್ಮಬುದ್ಧಿಸ್ತು ದೇಹಿನಾಂ ।
ಸಾऽವಿದ್ಯಾ ತತ್ಕೃತೊ ಬಂಧಸ್ತನ್ನಾಶೋ ಮೋಕ್ಷಂ ಉಚ್ಯತೇ ||
ನಿದ್ರಾದೌ ಜಾಗರಸ್ಯಾಂತಯೋಭಾವ ಉಪಚಾಯತೇ ।
ತಂ ಭಾವಂ ಭಾವಯೇದ್ರಾವ ಮುಕ್ತಿರೇವ ನ ಸಂಶಯಃ ||
ಅನಾಖ್ಯೇತು ನಿರಾಲಂಬೇ ಚೌಗ್ರಾಹ್ಯೇಮ ನ ವರ್ಜಿತೇ ||
ನಿಸ್ತತ್ವೇ ಯೋಜಿತೋ ಮುಕ್ತಃ ಇತಿ ಶಾಸ್ತ್ರೇಷು ನಿಶ್ಚಯಃ ||
ಎಂದುದಾಗಿ, ಬಂಧವ ಹರಿದು ಮುಕ್ತರಾಗಿಪ್ಪ ನಿಜಶರಣರ ಘನವ
ನೀವೇ ಬಲ್ಲಿರಿ, ಪರಕಮುಗುರುವೆ ನಂಜುಂಡಶಿವಾ. || ೪ ||

೧೨೭೩

ಆದಿಯನರಿದರು ಮಧ್ಯವನರಿಯರು ಮಧ್ಯವನರಿದರು
ಅವಸಾನವನರಿಯರು.
ಅವಸಾನವನರಿದರು ಆದಿಯನರಿಯರು.
ಇಂತಿವರೊಳಗೊಂದನರಿದರು ಒಂದನರಿಯದರೊಂದಜ್ಞಾನಿಗಳಾಗಿ
ಸಂದೇಹಕ್ಕೊಳಗಾದ ಮಂದಮತಿಗಳ ನಾನೆಂತು ನಿಮ್ಮ ಶರಣರಿಗೆಣೆಯೆಂಬೆ,
ಪರಮಗುರುವೆ ನಂಜುಂಡಶಿವಾ ? || ೫ ||

೧೨೭೪

ಎನ್ನ ತನುವ ತನ್ನ ತನುವಿನಿಂದ ಅಪ್ಪಿದನವ್ವಾ.
ಎನ್ನ ಮನವ ತನ್ನ ಮನದಿಂದ ಆಲಿಂಗಿಸಿದವನವ್ವಾ.
ಎನ್ನ ಅರಿವ ತನ್ನ ಅರಿವಿಂದ ಅವಗವಿಸಿದನವ್ವಾ.
ಇಂತಾದ ಬಳಿಕ ಎನ್ನ ವಿಷಯವೆಲ್ಲವೂ ತನ್ನ ನಿಮಿತ್ಯ,
ತನ್ನ ವಿಷಯವೆಲ್ಲ ನನ್ನ ನಿಮಿತ್ಯವಾಗಿ,
ಆನಳಿದು ತಾನುಳಿದು, ತಾನಳಿದು ಆನುಳಿದು,

ತಾನು ತಾನಾದ ನಿಜಸುಖದ ಸುಗ್ಗಿಯನೇನೆಂಬೆ,
ಪರಮಗುರುವೆ ನಂಜುಂಡಶಿವಾ ! ॥ ೬ ॥

೧೨೭೫

ಏಕಮೇವನದ್ವಿತೀಯನಪಾರನ ನೋಡಾ !
ಆಕಾರ ನಿರಾಕಾರರಹಿತನ ನೋಡಾ !
ಭಕುತಿಯುಕುತಿಗೊಲಿವ ನಿಖಿಳೇಶನ ನೋಡಾ !
ಅಖಿಳಾಲಯ ಸುಖಮಯನಕಳಂಕ,
ನಮ್ಮ ಪರಮಗುರು ನಂಜುಂಡಶಿವನ ನೋಡಾ. ॥ ೭ ॥

೧೨೭೬

ಕಂಡೆನವಿರಳನ ದೃಕ್ಕಿನಲ್ಲಿ, ಕಂಡೆನಪಾರನ ತ್ವಕ್ಕಿನಲ್ಲಿ,
ಕಂಡೆನುಪಮಾತೀತನ ಶ್ರೋತ್ರದಲ್ಲಿ, ಕಂಡೆ
ವಾಙ್ಮನಕ್ಕಗೋಚರನ ಘ್ರಾಣದಲ್ಲಿ,
ಕಂಡೆನನಘನತರ್ಕ್ಯನ ಜಿಹ್ವೆಯಲ್ಲಿ, ಕಂಡೆನೇಕಯೇವನದ್ವಿತೀಯನ
ಹೃತ್ಕಮಲದಲ್ಲಿ,
ನಮ್ಮ ಪರಮಗುರು ನಂಜುಂಡಶಿವನ. ॥ ೮ ॥

೧೨೭೭

[ಕರ]ಣೇಂದ್ರಿಯದಿಚ್ಛೆಯಂ ಪರಿದು,
ಕಂಥೆ ಕಟ್ಟಿಗೆ ಜಡೆ ಕರ್ಪರ ಕಮಂಡಲು ಕಾಮಾಕ್ಷಿ
ಭಸ್ಮಾಧಾರವನಳವಡಿಸಿಕೊಂಡು ದಂಗಮವೆಂದೆನಿಸಿದ ಬಳಿಕ
ಪಸಿವಡಗಿಸಿ, ಒಡಲ ಗಿಡಗರವ ತುಂಬಿದಡದು
ಜಗದ ಸುಳುಹೆಂದೆ ಕಾಣಾ, ಪರಮಗುರುವೆ ನಂಜುಂಡಶಿವಾ. ॥ ೯ ॥

೧೨೭೮

ಕಂಡೆನು ಕರುಣಾಕರನ, ಕಂಡೇಂದುಮೌಳಿಯ.
ಕಂಡೆನು ಹರಿಯಜ ಸುರವಂದ್ಯನಡಿಯುಗಳವ.
ಕಂಡೆನು ಶಶಾಂಕಸೂರ್ಯಾಗ್ನಿ ಲೋಚನ ಶ್ರೀಮೂರ್ತಿಯ.
ಕಂಡೆನತ್ಯತಿಷ್ಠದ್ದಶಾಂಗುವ ನಮ್ಮ ಪರಮಗುರು ನಂಜುಂಡಶಿವನ. ॥ ೧೦ ॥

೧೨೭೯

ಗುರುಲಿಂಗಜಂಗಮ ತ್ರಿವಿಧಪ್ರಸಾದವ
ಕೊಂಡೆವೆಂದುಲಿವ ಅಜ್ಞಾನಿಗಳು ನೀವು ಕೇಳಿರೆ.
ಗುರುಪ್ರಸಾದವ ಕೊಂಡಲ್ಲಿ ಮಲತ್ರಯದೋಷವಳಿಯಬೇಕು.
ಲಿಂಗಪ್ರಸಾದವ ಕೊಂಡಲ್ಲಿ ಇಂದ್ರಿಯ ವಿಷಯಸೂತಕವಳಿಯಬೇಕು.

ಜಂಗಮಪ್ರಸಾದವ ಕೊಂಡಲ್ಲಿ ಸರ್ವಸಂಕಲ್ಪ ಸಂಶಯವಳಿಯಬೇಕು.
ಇಂತೀ ತ್ರಿದೋಷವಳಿಯದೆ ಆದ್ಯರ ವಚನವ ಕಲಿತು,
ಮನಬಂದಂತೆ ಉಲಿವುತಿಪ್ಪ ದುಶ್ಶೀಲರನೊಲ್ಲ,
ನಮ್ಮ ಪರಮಗುರು ನಂಜುಂಡಶಿವನು. ॥ ೧೧ ॥

೧೨೮೦

ಗುರುಲಿಂಗಭಕ್ತನಾದರೆ ಪಾಶತ್ರಯ ವಿರಹಿತನಾಗಿರಬೇಕು.
ಗುರುಲಿಂಗನಿಷ್ಠನಾದರೆ ಅನ್ಯಭಜನೆಯಿಲ್ಲದಿರಬೇಕು.
ಗುರುಲಿಂಗಪ್ರಸಾದಿಯಾದರೆ ಅನ್ಯರಲ್ಲಿ ಕೈಯಾನದಿರಬೇಕು.
ಗುರುಲಿಂಗಪ್ರಾಣಿಯಾದರೆ ಅರ್ಪಿಸಿದಲ್ಲದ ಕೊಳ್ಳದಿರಬೇಕು.
ಗುರುಲಿಂಗಸಮರಸನಾದರೆ ಅನ್ಯರಿಗೆರಗದಿರಬೇಕು.
ಗುರುಲಿಂಗಶರಣನಾದರೆ ಇಹಪರವೆಂಬ ಇದ್ದೆಸೆಗಡಬೇಕು.
ಇಂತು ಷಟ್‌ಸ್ಥಲವಿಡಿದಾಚರಿಸಿ ಗುರುಲಿಂಗದಲ್ಲಿ ಎರಡಳಿದುಳಿದ
ನಿಜಜ್ಞಾನಿ ತಾನೆ. ನಮ್ಮ ಪರಮಗುರು ನಂಜುಂಡಶಿವನು. ॥ ೧೨ ॥

೧೨೮೧

ಜಂಗಮ ಜಂಗಮವೆಂಬ ನುಡಿಗೆ ನಾಚರು ನೋಡಯ್ಯ.
ಜಂಗಮ ಮಲತ್ರಯ ಈಷಣತ್ರಯ ಪಾಶತ್ರಯ ತನುತ್ರಯ
ಜೀವತ್ರಯ ಅವಸ್ಥಾತ್ರಯ ಗುಣತ್ರಯವಿರಹಿತ ನೋಡಯ್ಯ.
ಜಂಗಮ ಧರ್ಮಾರ್ಥಕಾಮಮೋಕ್ಷ ಸಾಲೋಕ್ಯ ಸಾಮೀಪ್ಯ
ಸಾರೂಪ್ಯ ಸಾಯುಜ್ಯವೆಂಬ ಜಡಕರ್ಮವಿರಹಿತ ನೋಡಯ್ಯ.
ಜಂಗಮ ಜನನಮರಣವಿರಹಿತನದೆಂತೆಂದಡೆ :
ಜಕಾರಂ ಜನನಂ ದೂರಂ ಗಕಾರಂ ಗಮನವರ್ಜಿತಃ ।
ಮಕಾರಂ ಮರಣಂ ನಾಸ್ತಿ ತ್ರಿವರ್ಣಮಭಿಧೀಯತೇ ॥
ಆದ್ಯಂತರಹಿತಂ ಶೂನ್ಯಂ ಸರ್ವಾನಂದಮಯಂ ವಿಭುಃ ।
ಅನಾದಿ ಜಂಗಮೋ ದೇವಿ ಬ್ರಹ್ಮವಿಷ್ಣ್ವೇಂದ್ರ ಪೂಜಿತಃ ॥
ಲೋಷ್ಠಹೇಮ ಸಮಾನಶ್ಚಯೋ ಹಿತಾಹಿತಯೋಃ ಸಮಃ ।
ಸಂತುಷ್ಟಶ್ಚಾಪಮಾನೇಷು ಸ್ವತಂತ್ರಂ ಜಂಗಮಸ್ಥಲಂ ॥
ಎಂದುದಾಗಿ, ಆದ್ಯಂತರಹಿತ ಸ್ವತಂತ್ರ ಘನಮಹಿಮ ನೋಡಯ್ಯ.
ಜಂಗಮ ಸಚ್ಚಿದಾನಂದ ನಿತ್ಯಪರಿಪೂರ್ಣ.
ಇಂತಪ್ಪ ಜಂಗಮದ ನಿಲುವಿಂಗೆ ನಮೋ ನಮೋ ಎಂಬೆ ಕಾಣಾ.
ಪರಮಗುರುವೆ ನಂಜುಂಡಶಿವಾ. ॥ ೧೩ ॥

೧೨೮೨

ತನ್ನ ತನ್ನಿಂದ ತಾನರಿವ ಪರಿಯೆಂತುಟಯ್ಯಾಯೆಂದರೆ :
ಪೃಥ್ವಿಯಪ್ಪು ತೇಜ ವಾಯು ಆಕಾಶವೆಂಬ

ಪಂಚಭೂತಂಗಳು ತಾನಲ್ಲ,
ಪ್ರಾಣೋಪಾನ ವ್ಯಾನೋದಾನ ಸಮಾನವೆಂಬ
ಪಂಚಪ್ರಾಣವಾಯುಗಳು ತಾನಲ್ಲ.
ಶ್ರೋತ್ರ ನೇತ್ರ ತ್ವಕ್ಕು ಜಿಹ್ವೆ ಘ್ರಾಣವೆಂಬ
ಪಂಚಜ್ಞಾನೇಂದ್ರಿಯಂಗಳು ತಾನಲ್ಲ.
ಶಬ್ದ ಸ್ಪರ್ಶ ರೂಪ ರಸ ಗಂಧವೆಂಬ ಪಂಚವಿಷಯಂಗಳು ತಾನಲ್ಲ.
ಚಿತ್ತಬುದ್ಧಿಯಹಂಕಾರ ಮನ ಜೀವವೆಂಬ ಪಂಚಕರಣಂಗಳು ತಾನಲ್ಲ.
ತಾನಾರಾಯ್ಯಾಯೆಂದಡೆ, ಎಲ್ಲಾ ತತ್ವಂಗಳ ಕಳೆದುಳುಮೆಯೆ ತಾನು.
ಅದೆಂತೆಂದಡೆ :
ನೇತಿ ನೇತೀತಿ ನೇತಿ ಶೇಷಿತಂ ಯತ್ಪರಂ ಪದಂ ।
ನಿರಾಕರ್ತುಮಶಕ್ಯತ್ವಾತ್ತದಸ್ಮೀತಿ ಸುಖೀಭವಃ ॥
ಪಂಚವಿಂಶತಿ ಪರ್ಯಂತಂ ಸಮಸ್ತಂ ನೇತಿ ನೇತಿ ಚ ।
ಹಿತ್ವಾ ಷಡ್ವಿಂಶತಿ ಚೈವ ಸೋಹಂ ಬ್ರಹ್ಮೇತಿ ಪಶ್ಯತಿ ॥
ಮನಃ ಚತುರ್ವಿಂಶಕಶ್ಚ ಜ್ಞಾತೃತ್ವಂ ಪಂಚವಿಂಶಕಃ ।
ಆತ್ಮಾಃ ಷಡ್ವಿಂಶಕಶ್ಚೈವ ಪರಮಾತ್ಮಾ ಸಪ್ತವಿಂಶಕಃ ।
ಚತುರ್ವಿಧಂತು ಮಾಯಾಂಶಂ ನಿರ್ಗುಣಃ ಪರಮೇಶ್ವರಃ ॥
ಎಂದುದಾಗಿ, ಇಂತೀ ಇಪ್ಪತ್ತೇಳು ತತ್ವಂಗಳ ಕೊಂಡುನಿಂದ ನಿಜವು
ತಾನೆ ನಮ್ಮ ಪರಮಗುರು ನಂಜುಂಡಶಿವಾ. ॥ ೧೪ ॥

೧೨೮೩

ತಾನೆಂಬ ತೋರಿಕೆ ತನಗಿಲ್ಲವಾಗಿ,
ತನ್ನಿಂ ತೋರುವ ವಿಶ್ವಪ್ರಪಂಚವೇನೂ ಇಲ್ಲದನಿರ್ವಾಚ್ಯವಾಗಿರ್ದ
ಪರಬ್ರಹ್ಮವು, ತನ್ನ ಲೀಲೆಯಿಂ
ತಾನೆಯಖಂಡಗೋಳಕಾಕಾರಮಪ್ಪ ಸ್ವಯಂಭುಲಿಂಗವಾಯಿತ್ತು.
ಆ ಲಿಂಗದಿಂದಾಯಿತ್ತು ಸಕಲ ನಿಃಕಲ ಶಿವಶಕ್ತ್ಯಾತ್ಮಕವಪ್ಪ ಸದಾಶಿವ.
ಆ ಸದಾಶಿವನ ಪಂಚಮುಖದಿಂದಾದವು ಪಂಚಭೌತಿಕ.
ಆ ಪಂಚಭೌತಿಕದಿಂದಾದವು ಪಂಚವಿಂಶತಿತತ್ವಂಗಳು.
ಅದೆಂತೆಂದಡೆ :
ಅನಿರ್ವಾಚ್ಯಪದಂ ವಸ್ತುಸ್ವಲೀಲಾನಂದ ಕಾರಣಂ ।
ಸ್ವಯಮೇವ ಸ್ವಯಂಭೂತ್ವಾಸ್ಸ್ವಯಮೇಮದ್ವಿಧಾ ಭವೇತ್ ॥
ಶಿವಂ ಬ್ರಹ್ಮೇತಿಪ್ರಾಹುಃ ಶಕ್ತಿಸ್ತೈವಾಂಗಮುಚ್ಯತೇ ।
ಶಿವಶಕ್ತಿಸಮಾಯೋಗಂ ಜಗತ್ಸೃಷ್ಟ್ಯಾರ್ಥಕಾರಣಂ ॥
ಈಶಾನಾದ್ಯೋಮಸಂಭೂತಿಸ್ತತ್ಪುರ್ಷಾದ್ವಾಯ ಸಂಭವಃ ।
ಅಘೋರಾದ್ವಹ್ನಿರಿತ್ಯುಕ್ತಂ ವಾಮದೇವಾದ್ಜಲಸ್ತಥಾ ॥

ಸದ್ಯೋಜಾತಾದಿಯಂ ಪೃಥ್ವೀ ಶಿವವಕ್ತ್ರಾದ್ವಿನಿರ್ಗತಾ ।
ಕರ್ಮಾಖ್ಯಪೃಥ್ವಿ ಸಂಭೂತಿರ್ವಿಷಯಾಃ ಜಲಸಂಭವಃ ॥
ಅಗ್ನಿಜಾತೇಂದ್ರಿಯಂ ಜ್ಞೇಯಂ ಮರುನ್ಮಾರುತಪಂಚಕಃ ।
ನಭಾತ್ಕರಣ ಸಂಜಾತಮಿತಿ ಜ್ಞಾತ್ವಂಚವಿಂಶತಿಃ ।
ಎಂದುದಾಗಿ,
ಆ ಪಂಚವಿಂಶತಿತತ್ವವೇ ದೇಹದೇಹಿಗಳೆಂಬ ನಾಮದಿಂ ಪಿಂಡವಾಯಿತ್ತು.
ಆ ಪಿಂಡಮಧ್ಯದಲ್ಲಿ ಮರದೊರದಿರವನೆಚ್ಚತ್ತಂತೆ ವಿವೇಕ ತಲೆದೋರಲು,
ಆ ವಿವೇಕದಿಂ ತಾನಾರಿದೆಲ್ಲಿಯದೆತ್ತಣ ಮರವೆಯೆಂದು ವಿಚಾರಿಸಿ.
ಅದೆಂತೆಂದಡೆ :
ಯಥಾ ಪೂರ್ವಂ ಜಾಗ್ರತೀತಃ ಪಶ್ಚಾತ್ಸುಪ್ತಿಮನುಭೂಯ ।
ಪಶ್ಚಾತ್ಜಾಗರಣಮೇವಾನು ಸಂಧತ್ತೇ ತಥಾಪಿಂಡಭೂತೇ ।
ಸ್ವಸ್ಮಿನ್ನೇದ ವಿಚಾರ ಜ್ಞಾನಮುತ್ಪದ್ಯತೇ ಇತಿ ॥
ಕೋಽಹಂ ಕಥಮಯಂ ದೋಷಸ್ಸಂಸಾರಾಖ್ಯ ಉಪಾಗತಃ ।
ನೇತಿ ನೇತಿ ಪರಾಮರ್ಶೋ ವಿಚಾರಯಿತಿ ಕಥತೇ ॥
ಮನೋವಿಲಾಸ ಸಂಸಾರ ಇತಿ [ವಿನ] ಪ್ರಕೀರ್ತ್ಯತೇ ।
ಪುತ್ರದಾರಾದಿ ಸಂಸಾರಃ ಪುಂಸಾಂ ಸಂಮೂಢ ಚೇತಸಾಂ ॥
ಜ್ಞಾತೇ ಸಂಸಾರ ಪಿಂಡೇಸ್ಮಿನ್ ಜಿಗುಪ್ಸಾದೋಷದರ್ಶನಾತ್ ।
ವೈರಾಗ್ಯಪ್ರಾಪ್ತ ಮೋಕ್ಷಸ್ಯ ಸಂಸಾರೋ ಹೇಯವಾನ್ ಭವೇತ್ ॥
ಎಂದುದಾಗಿ, ಪಿತ ಮಾತೆ ಸತಿ ಸುತ ಸೋದರ ಮೊದಲಾದ
ಸರ್ವಸಂಸಾರಮಂ ನಿವೃತ್ತಿಯಂ ಮಾಡಿ, ಗುರುಸನ್ನಿಧಿಯಲ್ಲಿ
'ಯದಿ ಅಹಂ ಕಃ' ಎಲೆ ಶ್ರೀಗುರುವೆ ಎನೆ,
'ತ್ವಂ ತತ್ತ್ವಮಸಿ' ಎಂಬ ಗುರುವಚನಮಂ ತಿಳಿದು.
ಅದೆಂತೆಂದಡೆ :
ಕೋಽಹಮಿತ್ಯಬ್ರವಿದ್ದೇಹಿ ಗುರುಂ ಪರಮಕಾರಣಂ ।
ಗುರುಸ್ತತ್ತ್ವಮಸೀತ್ಯಾಹ ಸತ್ಯಾರ್ಥಂ ಕರುಣಾನಿಧಿಃ ।
ತತ್ಪದಂ ಲಿಂಗಮಾಖ್ಯಾತಮಂಗಂ ತ್ವಂ ಪದಮೀರಿತಂ ।
ಸಂಯೋಗೋಽಸಿಪದಂ ಪ್ರೋಕ್ತಮನಯೋರಂಗಲಿಂಗಯೋಃ ॥
ಎಂದುದಾಗಿ, ತತ್ ಲಿಂಗ, ತ್ವಂ ಅಂಗ, ಅಸಿಯೆಂದು ಸಮರಸ.
ಇಂತೀ ತ್ರಿವಿಧಮನರಿದರಿವಿನಗ್ರದ ಕೊನೆಯ ಮೊನೆಯಬೆಳಗು ತಾನೆ,
ನಮ್ಮ ಪರಮಗುರು ನಂಜಂಡಶಿವನು. ॥ ೧೫ ॥

೧೨೮೪

ದೃಷ್ಟ ದರ್ಶನ ದೃಶ್ಯವೆಂತಾದವಯ್ಯಾಯೆಂದಡೆ :
ದೃಷ್ಟವೀಗ ಅರಿವಾತ, ದರ್ಶನವೆಂಬುದು ಜ್ಞಾನ.

ದೃಶ್ಯವೆಂದು ಅರುಹಿಸಿಕೊಂಬುದೀಗ.
ಈ ಮೂರರ ವಾಸನಾ ತ್ಯಾಗವ ಮಾಡುವ
ತುರೀಯದ ಮೊದಲಲ್ಲಿ ಆಶ್ರಯವಾಗಿ ಇದ್ದಂಥ
ಆವುದಾನೊಂದು ಜ್ಞಪ್ತಿಯುಂಟು, ಅದನೆ ತಾನೆಂದರಿವುದು.
ಅದೆಂತೆಂದಡೆ.
ದೃಷ್ಟಂ ದರ್ಶನದೃಶ್ಯಾನಾಂ ತ್ಯಕ್ತ್ವಾ ವಾಸನಯಾ ಸಹಾ ।
ದರ್ಶನ ಪ್ರಥಮಾಭಾಸ ಆತ್ಮಾನಂ ಸಮುಪಾಸ್ಮಹೇ ॥
ಅಭೇದ ಜ್ಞಾನರೂಪೇಣ ಆನಂದಮಮಲಂ ಧ್ರುವಂ ।
ಅತರ್ಕ್ಯಮದ್ವಯಂ ಪೂರ್ಣಬ್ರಹ್ಮೈವಾಸ್ಮಿನ ಸಂಶಯಃ ॥
ಎಂದುದಾಗಿ, ಸತ್ಯಜ್ಞಾನಾನಂದಾದ್ವಯಮಲ ತಾನೆ,
ಪರಮಗುರು ನಂಜುಂಡಶಿವ. ॥ ೧೬ ॥

೧೨೮೫

ನನೆಯೊಳಗಣ ಪರಿಮಳದಂತೆ, ಶಿಲೆಯೊಳಗಣ ಪಾವಕನಂತೆ,
ಬೀಜದೊಳಗಣ ವೃಕ್ಷದಂತೆ, ಕ್ಷೀರದೊಳಗಣ ಘೃತದಂತೆ,
ತಿಲದೊಳಗಣ ತೈಲದಂತೆ, ಸುಪ್ತಿಯೊಳಗಣ ಎಚ್ಚರಿನಂತೆ
ನೀನಿದ್ದುದನಾರು ಬಲ್ಲರು ಹೇಳಾ. ಪರಮಗುರು ನಂಜುಂಡಶಿವಾ ? ॥ ೧೭ ॥

೧೨೮೬

ಪೃಥ್ವಿಯಪ್ಪು ಈ ಎರಡೂ ಸ್ಥೂಲತನು.
ಅಧಿಕಾರಿ ವಿಶ್ವನೆಂಬ ಪುರುಷ ಜಾಗ್ರಾವಸ್ಥೆ.
ಆತಂಗೆ ಸಾಕಾರಮಪ್ಪ ಇಷ್ಟಲಿಂಗ ಸಂಬಂಧವ
ಕ್ರಿಯಾದೀಕ್ಷೆಯಿಂ ಮಾಡಿದಾತ ದೀಕ್ಷಾಗುರು.
ಅಗ್ನಿ ವಾಯು ಇವೆರಡೂ ಸೂಕ್ಷ್ಮತನು.
ಅಧಿಕಾರಿ ತೈಜಸನೆಂಬ ಪುರುಷ ಸ್ವಪ್ನಾವಸ್ಥೆ.
ಆತಂಗೆ ಸಕಲ ನಿಃಕಲಮಪ್ಪ ಪ್ರಾಣಲಿಂಗಸಂಬಂಧವ
ಮಂತ್ರದೀಕ್ಷೆಯಿಂ ಮಾಡಿದಾತ ಶಿಕ್ಷಾಗುರು.
ಆಕಾಶ ಆತ್ಮ ಇವೆರಡೂ ಕಾರಣತನು.
ಅಧಿಕಾರಿ ಪ್ರಾಜ್ಞನೆಂಬ ಪುರುಷ ಸುಷುಪ್ತಾವಸ್ಥೆ.
ಆತಂಗೆ ನಿಃಕಲಮಪ್ಪ ಭಾವಲಿಂಗಸಂಬಂಧವ
ವೇಧಾದೀಕ್ಷೆಯಿಂ ಮಾಡಿದಾತ ಮೋಕ್ಷಾಗುರು.
ಅದೆಂತೆಂದಡೆ :
ಸಾದೀಕ್ಷಾ ಪರಮಾಶೈವೀ ತ್ರಿಧಾ ಭವತಿ ನಿರ್ಮಲಾ ।
ಏಕಾವೇಧಾತ್ಮಿಕಾ ಸಾಕ್ಷಾದನ್ಯಮಂತ್ರಾತ್ಮಿಕಾ ಮತಾ ॥
ಕ್ರಿಯಾತ್ಮಿಕಾ ಪರಾಕಾಚಿತ್ ದೇವ ಏವ ತ್ರಿಧಾಭವೇತ್ ।

ಸ್ಥೂಲಾಂಗೇ ಇಷ್ಟಲಿಂಗಂ ಚ ಸೂಕ್ಷ್ಮಾಂಗೇ ಪ್ರಾಣಲಿಂಗಕಂ ||
ಕಾರಣೇ ಭಾವಲಿಂಗಂ ಚ ಸುಪ್ರತಿಷ್ಠಿತಮಾತ್ಮನಿ |
ವಿಶ್ವೋ ಜಾಗ್ರದವಸ್ಥಾಯಾಂ ಸ್ವಪ್ನಾಖ್ಯಾಯಾಂತು ತೈಜಸಃ ||
ಪ್ರಾಜ್ಞಃ ಸುಷುಪ್ತಾವಸ್ಥಾಯಾಂ ಲಿಂಗತ್ರಯಮುಪಾಸತೇ |
ದೀಕ್ಷಾ ಶಿಕ್ಷಾ ಚ ಮೋಕ್ಷಂ ಚ ಮಾಚಾರ್ಯಃ ತ್ರಿವಿಧೋ ಭವೇತ್ ||
ಎಂದುದಾಗಿ, ಇನ್ನು ಇಷ್ಟಲಿಂಗಕ್ಕೆ ಅಷ್ಟವಿಧಾರ್ಚನೆಯಂ ಮಾಡೂದು.
ಪ್ರಾಣಲಿಂಗಕ್ಕೆ ಮನನ ಪೂಜೆಯಂ ಮಾಡೂದು.
ಭಾವಲಿಂಗಕ್ಕೆ ಮನೋಲಯವೇ ಪೂಜೆ.
ಅದೆಂತೆಂದಡೆ :
ಅಷ್ಟವಿಧಾರ್ಚನಂ ಕುರ್ಯಾದಿಷ್ಟಲಿಂಗಸ್ಯ ಪೂಜನಂ |
ತಲ್ಲಿಂಗಮನುತೇಯಸ್ತು ಪ್ರಾಣಲಿಂಗಸ್ಯ ಪೂಜನಂ ||
ಮನೋಲಯೋ ನಿರಂಜನ್ಯೇ ಭಾವಲಿಂಗಸ್ಯ ಪೂಜನಂ |
ಏತಲ್ಲಿಂಗಾರ್ಚನಂ ಜ್ಞಾತ್ವಾ ವಿಶೇಷಂ ಶ್ರುಣು ಪಾರ್ವತಿ ||
ಎಂದುದಾಗಿ, ಇನ್ನು ಇಷ್ಟಲಿಂಗಕ್ಕೆ ಕಾಯದ ಕೈ ಮುಟ್ಟಿ,
ಪದಾರ್ಥಂಗಳ ರೂಪನರ್ಪಿಸೂದು.
ಪ್ರಾಣಲಿಂಗಕ್ಕೆ ಮನದ ಕೈಮುಟ್ಟಿ, ಪದಾರ್ಥಂಗಳ ರುಚಿಯನರ್ಪಿಸೂದು.
ಭಾವಲಿಂಗಕ್ಕೆ ಭಾವದ ಕೈ ಮುಟ್ಟಿ, ಪದಾರ್ಥಂಗಳ ತೃಪ್ತಿಯನರ್ಪಿಸೂದು.
ಅದೆಂತೆಂದಡೆ :
ಲಿಂಗೇ ಸಮರ್ಪಿತಂ ರೂಪಂ ರುಚಿಶ್ಚ ಜಂಗಮಾರ್ಪಿತಾ |
ರುಚಿ ರೂಪ ಸಮಾಯುಕ್ತಂ ಗುರೋರರ್ಪಣಮುಚ್ಯತೇ ||
ರೂಪಂ ಸಮಾಗತಂ ಶುದ್ಧಂ ರುಚಿಸ್ಸ್ಯಾತ್ಸಿದ್ಧ ಸಂಜ್ಞಕಂ |
ತನ್ಮಿಶ್ರಾರ್ಪಣಂ ಶಂಭೋಃ ಪ್ರಸಾದಂ ಚ ಪ್ರಸಿದ್ಧಕಂ ||
ಎಂದುದಾಗಿ, ರೂಪ ರುಚಿ ತೃಪ್ತಿಗಳನರ್ಪಿಸಿ,
ಶುದ್ಧ ಸಿದ್ಧ ಪ್ರಸಿದ್ಧವೆಂಬ ಪ್ರಸಾದತ್ರಯವನು
ವಿಶ್ವ ತೈಜಸ ಪ್ರಾಜ್ಞರೆಂಬ ಆತ್ಮತ್ರಯಕ್ಕೆ ಸಂಬಂಧಿಸೂದು.
ಇಂತೀ ಲಿಂಗಾರ್ಚನಾರ್ಪಿತದ ಭೇದಂಗಳೆಲ್ಲ
ತಿಳಿವ ತಿಳಿವಿನೊಳಗೆ ತೆರಹಿಲ್ಲದ ಕುರುಹಿಲ್ಲದ ಬರಿಯ ಬೆಳಗು ತಾನೆ,
ನಮ್ಮ ಪರಮಗುರು ನಂಜುಂಡಶಿವನು. || ೧೮ ||

೧೨೮೭

ಪ್ರಾಣಾಪಾನವ್ಯಾನೋದಾನ ಸಮಾನ ನಾಗ ಕೂರ್ಮ
ಕೃಕಲ ದೇವದತ್ತ ಧನಂಜಯವೆಂಬ ದಶವಾಯುಗಳ
ಪ್ರವರ್ತನೆ ಆ[ವುದ]ದಯ್ಯಾಯೆಂದಡೆ :
ಪ್ರಾಣವಾಯು ಹೃದಯಸ್ಥಾನದಲ್ಲಿದ್ದು ಶ್ವಾಸ ನಿಶ್ವಾಸಂಗಳಂ ಮಾಡೂದು.

ಅಪಾನವಾಯು ಗುದಸ್ಥಾನದಲ್ಲಿದ್ದು ಮಲಮೂತ್ರಂಗಳಂ
ಅಧೋಮುಖವಾಗಿ ಮಾಡೂದು.
ವ್ಯಾನವಾಯು ಕಂಠಸ್ಥಾನದಲ್ಲಿದ್ದು ಕ್ಷುಧೆನಿಮಿತ್ತ
ಆವುದಾನೊಂದು ದ್ರವ್ಯಾಪೇಕ್ಷೆಯಂ ಮಾಡೂದು.
ಸಮಾನವಾಯು ನಾಭಿಸ್ಥಾನದಲ್ಲಿದ್ದು ಉದ್ದೀಪನ ಪ್ರಕಾಶವಂ
ಮಾಡಿಕೊಂಡಂಥ ಅನ್ನವ ದಹಿಸೂದು.
ಉದಾನವಾಯು [ಜಿಹ್ವೆ] ಸ್ಥಾನದಲ್ಲಿದ್ದು ನುಂಗೂದು
ಉಗುಳೂದಂ ಮಾಡೂದು.
ನಾದವಾಯು ಸರ್ವಾಂಗಮಂ ವ್ಯಾಪಿಸಿಕೊಂಡಿಹುದು.
ಕೂರ್ಮವಾಯು ನೇತ್ರಸ್ಥಾನದಲ್ಲಿದ್ದು ಉನ್ಮಿಷ ನಿಮಿಷಂಗಳಂ ಮಾಡೂದು.
ಕೃಕರವಾಯು ಘ್ರಾಣಸ್ಥಾನದಲ್ಲಿದ್ದು
ಸುಗಂಧದುರ್ಗಂಧಂಗಳಂ ಅರಿದು ಮಾಡೂದು.
ಧನಂಜಯವಾಯು ಬ್ರಹ್ಮರಂಧ್ರದಲ್ಲಿದ್ದು
ಷೋಡಶಕಲಾಪ್ರಕಾಶವಂ ಮಾಡೂದು.
ದೇವದತ್ತವಾಯು ಮುಖದಲ್ಲಿದ್ದು ಹಾಸ ವಿವರ್ಧನವಂ ಮಾಡೂದು.
ಹೀಂಗೆ ದಶವಾಯುಗಳು ದಶಸ್ಥಾನದಲ್ಲಿ ದಶಗುಣ ವರ್ತನವಂ ಮಾಡುವವು.
ಅದೆಂತೆಂದಡೆ :
ಹೃದಿಸ್ಥಿತೋ ಪ್ರಾಣವಾಯು ಶ್ವಾಸನಿಶ್ವಾಸಕಾರಕಃ ।
ಗುದೇ ಅಪಾನವಾಯುಶ್ಚ ನೇತ್ರಾಣಾಂ ನಿಮಿಷೋನ್ಮೇಷಕಾರಕಃ ॥
ಕೃಕಲೋಘ್ರಾಣಗಂಧಂ ಚ ಧನಂಜಯಾಶ್ಚ ತೇಜಸಾ ।
ದೇವದತ್ತೋ ಮುಖಂಚೈವ ಜಿಹ್ವಾಹಾಸ್ಯವಿವರ್ಧನಃ ॥
ಏತಾನಿ ದಶವಾಯುಶ್ಚ ಸ್ಥಾನಸಂಖ್ಯಾ ಪ್ರಕೀರ್ತಿತಾ ।
ಯೋ ಜಾನಾತಿ ಸಂಯೋಗೀಂದ್ರೋ ಅಪರೋ ನಾಮಧಾರಕಾಃ ॥
ಎಂದುದಾಗಿ, ಇಂತೀ ದಶವಾಯುಗಳ ಸಂಚಾರವನರಿದು,
ಪ್ರಾಣಲಿಂಗಿಸಂಬಂಧಿಯಾದರೆ ಯೋಗೀಶ್ವರ.
ಹೀಂಗಲ್ಲದೆ ಉಳಿದ ನಾಮಧಾರಕರನೊಲ್ಲ,
ನಮ್ಮ ಪರಮಗುರು ನಂಜುಂಡಶಿವನು. ॥ ೧೯ ॥

೧೨೮೮

ಮಲತ್ರಯದ ಸಂಗ ಬಿಡದನ್ನಕ್ಕ ಭಕ್ತರೆಂದೆನಬಾರದು.
ಅನ್ಯದೈವದ ಭಜನೆಯಳಿದನ್ನಕ್ಕ ಮಾಹೇಶ್ವರರೆಂದೆನಬಾರದು.
ಅರ್ಪಿತ ಹೊಲಬನರಿಯದನ್ನಕ್ಕ ಪ್ರಸಾದಿಗಳೆಂದೆನಬಾರದು.
ಲಿಂಗಪ್ರಾಣ ಪ್ರಾಣಲಿಂಗವೆಂಬುಭಯದ ಸಂಬಂಧವನರಿಯದನ್ನಕ್ಕ
ಪ್ರಾಣಲಿಂಗಿಗಳೆಂದೆನಬಾರದು.

ಬಂಧ ಮೋಕ್ಷದ ದಂದುಗವಳಿಯದನ್ನಕ್ಕ ಶರಣನೆಂದೆನಬಾರದು.
ತತ್ತ್ವಮಸಿ ಪದಾರ್ಥದರ್ಥವನರಿಯದನ್ನಕ್ಕ ಐಕ್ಯರೆಂದೆನಬಾರದು.
ಇಂತೀ ಷಟ್‌ಸ್ಥಲವಿಡಿದು ಷಡಂಗ ಶುದ್ಧವಾಗದ
ಬರಿಯ ವೇಷದ ಭಕ್ತಿಯ ಡಂಭಕರ ಮೆಚ್ಚ,
ನಮ್ಮ ಪರಮಗುರು ನಂಜುಂಡಶಿವನು. ॥ ೨೦ ॥

೧೨೮೯

ವಾಯುವಿಲ್ಲದ ಅಂಬುಧಿಯಲ್ಲಿ ಬುದ್ಬುದ ಸ್ಫುರಿಸುತ್ತಿಹುದು ಹೇಗೆ ಹಾಂಗೆ,
ನಿವಾತಸ್ಥಾನದ ದೀವಿಗೆಯಲ್ಲಿ ಚಲನತ್ವ ಹೇಗೆ ಹಾಂಗೆ,
ನಿತ್ಯನಿರವಯಖಂಡ ಪರಿಪೂರ್ಣ ಪರಬ್ರಹ್ಮದ
ಕಿಂಚಿತ್ ಲೀಲಾಸ್ಫುರಣೆಯೇ ಜೀವನು.
ಅದೆಂತೆಂದಡೆ :
ಬ್ರಹ್ಮಣಸ್ಫುರಣಂ ಕಿಂಚಿತ್ ಅವಾತಾಂಬುಧೇರೇವವಾ ।
ದೀಪಸ್ಯಾಪ್ಯ ನಿವಾತಸ್ಯ ತಂ ಜೀವಂ ವಿದ್ಧಿರಾಘವ ॥
ಎಂದುದಾಗಿ, ಆ ಜೀವನೂ ಪರಮನೂ ಉಪಾಸ್ಯ ಉಪಾಸಕರೆಂದು
ಪೂಜ್ಯಪೂಜಕರೆಂದು, ಸಾಧ್ಯಸಾಧಕರೆಂದು, ಗುರುಶಿಷ್ಯರೆಂದು
ಶಿವಾತ್ಮರೆಂದು ಹೀಂಗೆ ಅನಂತ ಭೇದಾಭೇದಂಗಳಂ
ಕೂಡಿಕೊಂಡು ವಿನೋದಿಸುತ್ತಿಹರು.
ಅದೆಂತೆಂದಡೆ :
ಉಪಾಸ್ಯೋಪಾಸಕೌ ಪೂಜ್ಯಪೂಜಕೌ ಸಾಧ್ಯಸಾಧಕೌ ।
ಗುರುಶಿಷ್ಯೌ ಶಿವಾತ್ಮನೌ ನಿಗದ್ಯೋತೇ ಮಹಾತ್ಮಭಿಃ ॥
ಎಂದುದಾಗಿ, ತನ್ನ ಲೀಲೆವಿಡಿದೆರಡಾಗಿ, ಆ ಲೀಲೆ ನಿಂದರೆ
'ಏಕಮೇವನದ್ವಿತೀಯಾಯತಸ್ಥೇ' ಎಂಬ ಶ್ರುತಿಯನೊಳಕೊಂಡು ನಿಂದುದು.
ಅದೆಂತೆಂದಡೆ :
ಏಕೋ ಸ್ವಶಕ್ತಿಭಿನ್ನೇ ಬಹುನಾಸ್ಯಾತ್ ವಿಲಯೇ ।
ಶಕ್ತಿನಾಸ್ತಿದ್ವಯಂ ಗರ್ಭೀಕೃತಮಾತ್ಮವಸ್ತು ॥
ಎಂದುದಾಗಿ, ನಿತ್ಯಪರಿಪೂರ್ಣ ಸಚ್ಚಿದಾನಂದ ಪರಬ್ರಹ್ಮ
ಪರಮಗುರು ನಂಜುಂಡಶಿವಾ, ನಿಮ್ಮ ಲೀಲೆಯ ಘನವ ನೀವೇ ಬಲ್ಲಿರಿ.
॥ ೨೧ ॥

೧೨೯೦

ವೇದ ಶಾಸ್ತ್ರಾಗಮ ತರ್ಕತಂತ್ರ ಇತಿಹಾಸ
ನಾನಾಪುರಾಣ ಪುರಾತನ ವಚನವ ಕಲಿತರೇನೊ ?
ಗುರುವಿನಲ್ಲಿ ವಿಶ್ವಾಸಿಗಳಲ್ಲ, ಲಿಂಗದಲ್ಲಿ ನಿಷ್ಠೆಯುಳ್ಳವರಲ್ಲ,
ಜಂಗಮದಲ್ಲಿ ಸಾವಧಾನಿಗಳಲ್ಲ, ಪ್ರಸಾದದಲ್ಲಿ ಪರಿಣಾಮಿಗಳಲ್ಲ,

ಪಾದೋದಕದಲ್ಲಿ ಪರಮಾನಂದಿಗಳಲ್ಲ.
ಇಂತೀ ಪಂಚಾಚಾರವನರಿದು ತಾನಳಿದುಳಿವ ಭೇದವನರಿಯದೆ,
ನಾನು ಭಕ್ತ, ನಾನು ವಿರಕ್ತನೆಂದರೆ ನಗರೆ ನಿಮ್ಮ ಶರಣರು !
ಪರಮಗುರುವೆ ನಂಜುಂಡಶಿವಾ. || ೨೨ ||

೧೨೯೧

ಷಟ್‌ಸ್ಥಲದ ಸೃಷ್ಟಿಯನರಿದಾಚರಿಸುವ ಪರಿ ಯಾವುದೆಂದರೆ :
ಐಕ್ಯ ಶರಣ ಪ್ರಾಣಲಿಂಗಿ ಪ್ರಸಾದಿ ಮಾಹೇಶ್ವರ ಭಕ್ತರೆಂದಿಂತು
ಷಟ್‌ಸ್ಥಲವಾರು. ಅದೆಂತೆಂದಡೆ :
ಐಕ್ಯಂ ಶರಣಮಿತ್ಯುಕ್ತಂ ಪ್ರಾಣಲಿಂಗಿ ಪ್ರಸಾದಿ ಚ ।
ಮಾಹೇಶ್ವರಸ್ತಥಾ ಭಕ್ತ ಪ್ರೋಚ್ಯತೇ ಸೃಷ್ಟಿಮಾರ್ಗತಃ ॥
ಎಂದುದಾಗಿ, ಈ ಸ್ಥಲಂಗಳಿಗೆ ಅಂಗಗಳಾವಾವವೆಂದಡೆ :
ಆತ್ಮ ಆಕಾಶ ವಾಯು ಅಗ್ನಿ ಅಪ್ಪು ಪೃಥ್ವಿ ಎಂದಿಂತು ಆರು ಅಂಗಂಗಳು.
ಅದೆಂತೆಂದಡೆ :
ಆತ್ಮನಃ ಆಕಾಶಃ ಸಂಭೂತಃ ಆಕಾಶಾದ್ವಾಯು ಸಂಭವಃ ।
ವಾಯೋರಗ್ನಿಃ ಸಮುತ್ಪನ್ನಪರರಗ್ನೇರಾವಃ ಉದಾಹೃತಾಃ ।
ಅದ್ಭ್ಯಃ ಪೃಥುವೀ ಸಂಭೂತಿರ್ಲಕ್ಷಣೈಕ ಪ್ರಭಾವತಃ ॥
ಎಂದುದಾಗಿ, ಈ ಅಂಗಂಗಳಿಗೆ ಹಸ್ತಂಗಳಾವಾವವೆಂದಡೆ :
ಭಾವ ಜ್ಞಾನ ಮನ ಅಹಂಕಾರ ಬುದ್ಧಿ ಚಿತ್ತವೆಂದಿಂತು ಆರು ಹಸ್ತಂಗಳು.
ಅದೆಂತೆಂದಡೆ :
ವಸ್ತುನಾ ಭಾವ ಉತ್ಪನ್ನೋ ಭಾವಾತ್ ಜ್ಞಾನಸಮುದ್ಭವಃ ।
ಜ್ಞಾನಾಚ್ಚಮನ ಉತ್ಪನ್ನಂ ಮನಸೋಹಂಕೃತಿಸ್ತಥಾ ।
ಅಹಂಕಾರಾತ್ತಥಾ ಬುದ್ಧಿಃ ಬುದ್ಧಿಶ್ಚಿತ್ತಸಮುದ್ಭವಃ ।
ಎಂದುದಾಗಿ, ಈ ಹಸ್ತಂಗಳಿಗೆ ಸಾದಾಖ್ಯಂಗಳಾವಾವವೆಂದಡೆ :
ಮಹಾಶಿವ ಅಮೂರ್ತಿ ಮೂರ್ತಿ ಕರ್ತೃ
ಕರ್ಮವೆಂದಿಂತು ಆರು ಸಾದಾಖ್ಯಂಗಳು.
ಅದೆಂತೆಂದಡೆ :
ಮಹಾನ್ ಚ ಶಿವ ಇತ್ಯುಕ್ತಃ ಅಮೂರ್ತಿರ್ ಮೂರ್ತಿರುಚ್ಯತೇ ।
ಕೃರ್ತಸ್ಸ್ಯಾತ್ಕರ್ಮಮಿತ್ಯೇತ ಷಟ್‌ಸಾದಾಖ್ಯಮಿತೀರಿತಾಃ ॥
ಎಂದುದಾಗಿ, ಈ ಸಾದಾಖ್ಯಂಗಳಿಗೆ ಶಕ್ತಿಗಳಾವಾವವೆಂದಡೆ :
ಚಿತ್ತು ಪರಾ ಆದಿ ಇಚ್ಛಾ ಜ್ಞಾನ ಕ್ರಿಯಾ ಎಂದಿತು ಆರು ಶಕ್ತಿಗಳು.
ಅದೆಂತೆಂದಡೆ :
ವಸ್ತೋರ್ಜಾತಾ ಚ ಚಿಚ್ಛಕ್ತೇಶ್ಚ ಪರೋದ್ಭವಃ ।
ಪರೋದ್ಭವಸ್ತ್ವಾದಿಸ್ಯಾತ್ ಆದೇರಿಚ್ಛಾ ಸಮುದ್ಭವಃ ।

ಇಚ್ಛಾ ಜ್ಞಾನ ಸಮುತ್ಪತ್ತಿಃ ಜ್ಞಾನಾತ್ತಥಾ ಕ್ರಿಯೋದ್ಭವಃ ॥
ಎಂದುದಾಗಿ, ಈ ಶಕ್ತಿಗಳಿಗೆ ಲಿಂಗಂಗಳಾವಾವವೆಂದಡೆ :
ಮಹಾ ಪ್ರಸಾದ ಜಂಗಮ ಶಿವ ಗುರು ಆಚಾರವೆಂದಿಂತು ಆರು ಲಿಂಗಗಳು.
ಅದೆಂತೆಂದಡೆ :
ಮಹಾಲಿಂಗೇ ಸಮಾಖ್ಯಾತಂ ಪ್ರಸಾದಂ ಲಿಂಗಮುದ್ಭವಂ ।
ತತಃ ಪ್ರಸಾದಲಿಂಗೇ ಚ ಜಾಂಗಮಂ ಲಿಂಗಮುದ್ಭವಂ ॥
ತಥಾ ಜಂಗಮಲಿಂಗೇ ಚ ಶಿವಲಿಂಗಂ ಸಮುದ್ಭವಂ ।
ಶಿವಲಿಂಗೇ ತಥಾಚೈವ ಗುರುಲಿಂಗಂ ಸಮುದ್ಭವಃ ।
ಗುರುಲಿಂಗೇ ತಥಾಚಾರಲಿಂಗಸ್ಯಾಪಿ ಸಮುದ್ಭವಃ ॥
ಎಂದುದಾಗಿ, ಈ ಲಿಂಗಂಗಳಿಗೆ ಕಳೆಗಳಾವಾವವೆಂದಡೆ :
ಶಾಂತ್ಯತೀತೋತ್ತರ ಶಾಂತ್ಯತೀತ ಶಾಂತಿ ವಿದ್ಯೆ ಪ್ರತಿಷ್ಠೆ ನಿವೃತ್ತಿ
ಎಂದಿಂತು ಕಳೆಗಾರು.
ಅದೆಂತೆಂದಡೆ :
ಶಾಂತ್ಯತೀತೋತ್ತರೇಚೈವ ಶಾಂತ್ಯತೀತೋಭವೇತ್ತಥಾ ।
ಶಾಂತಿರ್ವಿದ್ಯಾಪ್ರತಿಷ್ಠಾ ಚ ನಿವೃತ್ತಿಃ ಷಟ್ಕಲಾ ಸ್ಮೃತಾಃ ॥
ಎಂದುದಾಗಿ, ಈ ಕಳೆಗಳಿಗೆ ಮುಖಂಗಳಾವಾವವೆಂದಡೆ :
ಹೃದಯ ಶ್ರೋತ್ರ ತ್ವಕ್ಕು ನೇತ್ರ, ಜಿಹ್ವೆ ಘ್ರಾಣವೆಂದಿಂತು
ಆರು ಇಂದ್ರಿಯಂಗಳೆ ಮುಖಂಗಳು,
ಅದೆಂತೆಂದಡೆ :
ಹೃಚ್ಚಶ್ರೋತ್ರಂ ತ್ವಕ್‌ಚೈವ ನೇತ್ರಂ ಜಿಹ್ವಾ ತಥೈವ ಚ ।
ಘ್ರಾಣಶ್ಚ ಇಂದ್ರಿಯಂ ಷಟ್ಕ ವಕ್ತ್ರಮೇವ ಸದಾಭವೇತ್ ॥
ಎಂದುದಾಗಿ, ಈ ಮುಖಂಗಳಿಗೆ ಪದಾರ್ಥಂಗಳಾವಾವವೆಂದಡೆ :
ಪರಿಣಾಮ ಶಬ್ದ ಸ್ಪರ್ಶ ರೂಪ ರಸ ಗಂಧವೆಂದಿಂತು ಆರುಪದಾರ್ಥಂಗಳು.
ಅದೆಂತೆಂದಡೆ :
ತೃಪ್ತಿಶ್ಚ ಶಬ್ದಮಿತ್ಯುಕ್ತಂ ಸ್ಪರ್ಶರೂಸ್ತಥೈವ ಚ ।
ರಸಶ್ಚ ಗಂಧಮಿತ್ಯೇತ ಪದಾರ್ಥಂ ಚ [ನಿರೂಪಿತಃ] ॥
ಎಂದುದಾಗಿ, ಈ ಅರ್ಪಿತಂಗಳಿಗೆ ಭಕ್ತಿಗಳಾವಾವವೆಂದಡೆ :
ಸಮರಸಾನಂದ ಅನುಭವ ಅವಧಾನ ನೈಷ್ಠೆ ವಿಶ್ವಾಸವೆಂದಿಂತು ಆರುವಿಧಭಕ್ತಿ
ಅದೆಂತೆಂದಡೆ :
ಸಮರಸಶ್ಚೈವಮಾನಂದನುಭಾವೋತ್ಸಾವಧಾನಃ ।
ನೈಷ್ಠಿರಿ ಶ್ರದ್ಧೇಮಿತ್ಯೇ ಚ ಭಕ್ತಿಷಡ್ವಿಧರುಚ್ಯತೇ ॥
ಎಂದುದಾಗಿ, ಇವಕ್ಕೆ ಸಂಬಂಧ ವಿವರಗಳಾವಾವವೆಂದಡೆ:
ಭಕ್ತಂಗೆ: ಪೃಥ್ವಿಯಂಗ, ಚಿತ್ತಹಸ್ತ, ಕರ್ಮಸಾದಾಖ್ಯ,
ಕ್ರಿಯಾಶಕ್ತಿ, ಆಚಾರಲಿಂಗ, ನಿವೃತ್ತಿಕಳೆ, ಘ್ರಾಣಮುಖ,

ಗಂಧ ಪದಾರ್ಥ, ವಿಶ್ವಾಸಭಕ್ತಿ
ಮಾಹೇಶ್ವರಂಗೆ : ಅಪ್ಪು ಅಂಗ, ಬುದ್ಧಿಹಸ್ತ, ಕರ್ತೃಸಾದಾಖ್ಯ,
ಜ್ಞಾನಶಕ್ತಿ, ಗುರುಲಿಂಗ, ಪ್ರತಿಷ್ಠೆಕಳೆ, ಜಿಹ್ವೆಮುಖ,
ರುಚಿ ಪದಾರ್ಥ, ನೈಷ್ಠಿಕಾಭಕ್ತಿ
ಪ್ರಸಾದಿಗೆ : ಅಗ್ನಿ ಅಂಗ, ಅಹಂಕಾರಹಸ್ತ, ಮೂರ್ತಿಸಾದಾಖ್ಯ,
ಇಚ್ಛಾಶಕ್ತಿ, ಶಿವಲಿಂಗ, ವಿದ್ಯಾಕಳೆ, ನೇತ್ರಮುಖ,
ರೂಪ ಪದಾರ್ಥ, ಅವಧಾನಭಕ್ತಿ
ಪ್ರಾಣಲಿಂಗಿಗೆ : ವಾಯು ಅಂಗ, ಮನಹಸ್ತ, ಅಮೂರ್ತಿಸಾದಾಖ್ಯ,
ಆದಿಶಕ್ತಿ, ಜಂಗಮಲಿಂಗ, ಶಾಂತಿಕಳೆ, ತ್ವಕ್ಕುಮುಖ,
ಸ್ಪರ್ಶನ ಪದಾರ್ಥ, ಅನುಭಾವಭಕ್ತಿ
ಶರಣಂಗೆ : ಆಕಾಶ ಅಂಗ, ಜ್ಞಾನಹಸ್ತ, ಶಿವಸಾದಾಖ್ಯ,
ಪರಾಶಕ್ತಿ, ಪ್ರಸಾದಲಿಂಗ, ಶಾಂತ್ಯತೀತಕಳೆ, ಶ್ರೋತ್ರಮುಖ,
ಶಬ್ದ ಪದಾರ್ಥ, ಆನಂದಭಕ್ತಿ
ಐಕ್ಯಂಗೆ : ಆತ್ಮನಂಗ, ಭಾವಹಸ್ತ, ಮಹಾಸಾದಾಖ್ಯ, ಚಿಚ್ಛಕ್ತಿ
ಮಹಾಲಿಂಗ, ಶಾಂತ್ಯತೀತೋತ್ತರಕಳೆ, ಹೃದಯಮುಖ,
ಪರಿಣಾಮ ಪದಾರ್ಥ, ಸಮರಸಭಕ್ತಿ
ಇಂತೀ ಷಟ್‌ಸ್ಥಲಸಂಪನ್ನನಾಗಿ ಆಚರಿಸುವಾತನೆ
ತೂರ್ಯಾತೂರ್ಯನೆಂಬರಿವಿನ ಆದಿಮಧ್ಯಾವಸಾನದಲ್ಲಿ
ತೆರಹಿಲ್ಲದ ಕುರುಹಿಲ್ಲದ ಬರಿಯ ಬೆಳಗು ತಾನೆ,
ನಮ್ಮ ಪರಮಗುರು ನಂಜುಂಡ ಶಿವನು. ॥ ೨೩ ॥

೧೯೨

ಸ್ಥೂಲತನುವಿನ ಜಾಗ್ರಾವಸ್ಥೆ ನೇತ್ರದಲ್ಲಿ,
ಸೂಕ್ಷ್ಮತನುವಿನ ಸ್ವಪ್ನಾವಸ್ಥೆ ಕಂಠದಲ್ಲಿ,
ಕಾರಣತನುವಿನ ಸುಷುಪ್ತಾವಸ್ಥೆ ಹೃದಯದಲ್ಲಿ,
ಇಂತೀ ಮೂರು ಮೂರರ ಭೇದವನರಿದರಿವೆ,
ಸಚ್ಚಿದಾನಂದಸ್ವರೂಪಮಪ್ಪ ಕೇವಲಬ್ರಹ್ಮ
ಅದಲ್ಲದೆ ಬೇರೆ ವಸ್ತುವೆಂಬುದಿಲ್ಲ,
ಅದೆಂತೆಂದಡೆ :
ನೇತ್ರೇತು ಜಾಗರಂ ವಿಂದ್ಯಾತ್ ಕಂಠೇ ಸ್ವಪ್ನಂ ಸಮಾಧಿಸೇತ್ ।
ಸುಷುಪ್ತಿಂ ಹೃದಯನ್ಯಸ್ತಾಂ ತುರೀಯಂ ಮೂರ್ಧ್ನಿವರ್ತಿನಂ ॥
ಜಾಗ್ರತ್ಸತ್ವಂ ರಜಃಸ್ವಪ್ನಃ ಸುಷುಪ್ತಿಸ್ತಮ ಉಚ್ಯತೇ ।
ತುರೀಯೋ ಗುಣಗಂಧಸ್ತು ಪರಾತ್ಮಾ ನಿರ್ಗುಣಕ್ಷಮಃ ॥
ಯಸ್ಸರ್ವಂ ವಚನಾತೀತಂ ಜಾನಾತಿ ಸ ಚ ಮೂಢಧೀಃ ।

ನ ಜಾನಾಮೀತಿ ಜಾನಾತೀತ್ಯೇತದೇವ ಜ್ಞಾನಮುಚ್ಯತೇ ॥
ಸ್ಥಾನಾಸ್ಥಾನಂತರೇ ಪ್ರಾಪ್ತೇ ಸಂವಿದೋ ಮಧ್ಯಮೇವಯೇತ್ ।
ನಿರಸ್ಥಮನಸಾಕಾಶೋ ಸ್ವರೂಪ ಸ್ಥಿತಿರುಚ್ಯತೇ ॥
ನ ದೇವಃ ಪುಂಡರೀಕಾಕ್ಷಃ ನಚದೇವಃ ತ್ರಿಲೋಚನಃ ।
ನ ದೇವೋ ಬ್ರಹ್ಮ ಣೋದ್ಭೂತೋ ವೇದನಂ ಬ್ರಹ್ಮ ಉಚ್ಯತೇ ॥
ಎಂದುದಾಗಿ,
ಜಾಗ್ರ ಸ್ವಪ್ನ ಸುಷುಪ್ತಿತೂರ್ಯಾತೂರ್ಯತೀತವನೊಳಕೊಂಡ
ನಿಜಜ್ಞಾನ ನೀವೇ
ಪರಮಗುರುವೆ ನಂಜುಂಡ ಶಿವಾ. ॥ ೨೪ ॥

■■

## -?- ನಾಚೇಶ್ವರ

೧೨೯೩

ಅರ್ಥಾಸನ ವ್ಯರ್ಥಾಸನ ಆಯಕಿಯಾಸನ
ನಷ್ಟಾಂಗಾಸನ ಭೂಮ್ಯಾಸನ ಕರಣನಾಶಾಸನ
ಇವು ಶರಣಂಗೆ ಸಲ್ಲದಿರಲು.
ಚೂರ್ಣದ ಕಹಿಯ ಬಿಡಿಸಿ,
ಈ ಮೂರಂಗಕ್ಕೆನ್ನ ಮುಪ್ಪುರಿಗೊಳಿಸಾ,
ನಾಚೇಶ್ವರಾ. ॥ ೧ ॥

■■

## -?- ನಿಃಕಳಂಕ ಚೆನ್ನಮಲ್ಲಿಕಾರ್ಜುನಪ್ರಭುವೆ

೧೨೯೪

ಮಾಯೆ ಮಹಾಸಂಚಲವೆಂಬ ಸುಳಿಗಾಳಿಯೊಳು ಸಿಕ್ಕಿದ ತರಗೆಲೆಯಂತೆ,
ತಳಹಳಗೊಳ್ಳುತ್ತಿದ್ದಿತೀ ಜಗವೆಲ್ಲವು ಎನಗಿನ್ನೆಂತೊ, ಎನಗಿನ್ನೆಂತಯ್ಯಾ.
ಬಲ್ಲೆನೆಂಬವರ ಬಾಯ ಟೊಣೆಯಿತ್ತು ಮಾಯೆ.
ಆಗಮಿಕರ ಮೂಗ ಕೊಯ್ಯಿತ್ತು ಮಾಯೆ.
ಅನುಭಾವಿಗಳೆಲ್ಲರೂ ಮನವಿಕಾರಕ್ಕೆ ಒಳಗಾದರು.
ಅರಿದೆನೆಂಬವರೆಲ್ಲರೂ ಮರಹಿಂಗೆ ಬೀಜವಾದರು.
ಬ್ರಹ್ಮಿಗಳೆಲ್ಲರೂ ಹಮ್ಮಿಂದ ಹಗರಣದ ಮರುಳಂಗಳಾದರು
ವಿರಕ್ತರೆಲ್ಲರೂ ಯುಕ್ತಿಗೆಟ್ಟು ಭವಮಾಲೆಗೊಳಗಾದರು.
ನಿರ್ವಾಣಿಗಳೆಲ್ಲರೂ ಸೆರೆಸಂಕಲೆಗೊಳಗಾದರು.
ಯೋಗಿಗಳೆಲ್ಲರೂ ವಿಕಳವೆಂಬ ರೋಗಕ್ಕೆ ಒಳಗಾದರು.
ತಪಸಿಗಳೆಲ್ಲರೂ ಕಪಟ ಕಳವಳಕ್ಕೊಳಗಾದರು.
ಧ್ಯಾನ ಮೌನ ವ್ರತ ನಿತ್ಯ ನೇಮ ಕರ್ಮ ಕ್ರಿಯೆಗಳು
ವಸ್ತುವ ಮರೆದು, ಮಾಯಾಧೂಳಿನೊಳಗೆ ಸಿಕ್ಕಿ ವಿಕಳತೆಗೊಂಡು,
ನೆನೆವ ಮನ, ವಾಸಿಸುವ ಘ್ರಾಣ, ನೋಡುವ ನೇತ್ರ,
ನುಡಿವ ನಾಲಗೆ, ನಡೆವ ಪಾದದ್ವಯಗಳೆಲ್ಲ ಭ್ರಮೆಗೊಳಗಾಯಿತ್ತಯ್ಯ.
ಶಿವಶಿವಾ ಮಹಾದೇವಾ, ಇದೆಲ್ಲಿಯ ಮಾರಿ ಬಂದಿತ್ತಯ್ಯ.

ಈ ಜಗವನೆತ್ತಿಕೊಂದು ಕೂಗುವ ಮಾರಿಯ ಗೆಲುವವರನಾರೊಬ್ಬರನೂ ಕಾಣೆ.
ಎನಗಿನ್ನೆಂತಯ್ಯ, ಎನಗಿನ್ನೆಂತಯ್ಯಾ ! ಭಕ್ತಿಜ್ಞಾನವೈರಾಗ್ಯವನಿತ್ತು ಸಲಹಯ್ಯಾ.
ಎನ್ನ ಕರಣಂಗಳಿಗೆ ಸಮಸ್ತ ಪ್ರಸಾದವನಿತ್ತು ಸಲಹಯ್ಯಾ,
ನಿಃಕಳಂಕ ಚೆನ್ನಮಲ್ಲಿಕಾರ್ಜುನಪ್ರಭುವೆ. ॥ ೧ ॥

■■

## -?- ನಿಃಕಳಂಕ ಚೆನ್ನಸೋಮೇಶ್ವರ

೧೨೫೫

ಬಟ್ಟಬಯಲೆಲ್ಲ ಗಟ್ಟಿಯಾದಡೆ
ಸ್ವರ್ಗಮರ್ತ್ಯಪಾತಾಳಕ್ಕೆ ಠಾವಿನ್ನೆಲ್ಲಿಯದೊ ?
ಕಷ್ಟವ ಮಾಡಲಾರದ ನರರುಗಳೆಲ್ಲ
ಸಂಸಾರವ ಬಿಟ್ಟೆವೆಂದು, ಮಂಡೆಗೆಲಸವ ಗೆಯಿಸಿದಡೆ
ಸುಜ್ಞಾನಿ ವಿರಕ್ತನಾಗಬಲ್ಲನೆ ? ಇದು ಕಾರಣ,
ಅಜ್ಞಾನವ ಮರೆದು, ಸುಜ್ಞಾನವ ತೋರುವುದೆ
ನಿಃಕಳಂಕ ಚೆನ್ನಸೋಮೇಶ್ವರ ತಾನೆ. ॥ ೧ ॥

■■

## -?- ನಿಜಗುರು ನಿರಾಲಂಬಪ್ರಭುವೆ

ಶ್ರೀಗುರುವೇ ನಮೋ ನಮೋ, ಜಗದ್ಗುರುವೇ ನಮೋ ನಮೋ. ಸಿರಿ ಸಕಲಗುಣ ಗುಣ ತ್ಯಾಗಭೋಗಿ ಗುರುವೆ ನಮೋ ನಮೋ. ಹರಿ ಸುರ ಬ್ರಹ್ಮಾದಿಗಳಿಗೆ ಒಡೆಯ ನೀನೆ, ಗುರುವೆ ನಮೋ ನಮೋ. ಪರಮಪ್ರಕಾಶ ಗುರುವೆ ನಮೋ ನಮೋ. ಪರಿತಾರ್ಥಪಾರವಾರ ಗುರುವೆ ನಮೋ ನಮೋ. ಸಾರಸುಜನ ಸಗುಣ ನಿರ್ಗುಣೀ ನಿರಾಭಾರಿ ಗುರುವೆ ನಮೋ ನಮೋ. ಹರಹರ ಶಂಕರಾ ಗುರುವೆ ನಮೋ ನಮೋ. ಗೌರೀವಲ್ಲಭ ಮೃತ್ಯುಂಜಯ ಗುರುವೆ ನಮೋ ನಮೋ. ಪರಮೇಶ್ವರಾಯ ಪುಣ್ಯಾಯ ಗುರುವೆ ನಮೋ ನಮೋ. ಪಾರಮಾರ್ಥ ಪರಮ ಶ್ರೀಗುರು ನಿಜಗುರು ನಿರಾಲಂಬ ಸ್ತೋತ್ರ, ಗುರುವೆ ನಮೋ ನಮೋ. ಗುರುಸ್ಥಲದ ಅಭಿಪ್ರಾಯ ಗುರು ಪ್ರಾಣಿಗಳಿಗೆ ಸಂಬಂಧಾಚರಣೆಯ ವಿವರವು. ನಿಜಗುಣಭರಿತರಾಗಿ ಶಿವಸುಖ ಸಾರಾಯ ವಶ್ಯವಶ್ಯ ಗತವಾಗುವದಕ್ಕೆ ಪರಮಾನುಬೋಧ ನಿರಾಲಂಬ ಸ್ತೋತ್ರವೆನಿಸುವದು.

೧೨೯೬

ಗುರುಕರುಣ ಕಟಾಕ್ಷದಿಂದಾದ ಮೂಲಮಂತ್ರ ಆಧಾರವೆನಿಸುವುದು
ಗುರುಕರುಣದಿಂದಾದ ಸ್ಥೂಲ ಸೂಕ್ಷ್ಮ ಕಾರಣವೆಂಬ ನಿರ್ವಯವು
ಆಧಾರಕ್ಕೆ ಆದಿಬೀಜಾಕ್ಷರವಾಗಿ ತೋರುವದು.
ಗುರುಕರುಣದಿಂದಲ್ಲದೆ ನಾದ ಬಿಂದು ಕಳಾಚೈತನ್ಯಗೊಂಡು,
ಆದಿಮೂಲಮಂತ್ರವರಿದು ಅಂಗಕ್ಕೆ ಅಸಾಧ್ಯವಾಗಿ
ಲಿಂಗಸಮರಸಭಾವವನರಿಯದೆ,
ಆದಿಪರಶಿವಶಕ್ತಿ ಬೀಜಾಕ್ಷರ ಇಂಬುಗೊಂಡು,

ಹದಿನಾಲ್ಕು ಲೋಕದ ವ್ಯವಹಾರ ಸಾಧಿಸಿಕೊಂಡಿರ್ಪುದು.
ಗುರುಕರುಣದಿಂದಾದ ಚಿತ್ತುಸುಚಿತ್ತು ಅಹಂಕಾರ
ಅವಯವಂಗಳು ಆವಾವ ತೆರನಾಗಿ, ಅಲ್ಪ ಸುಖದ ಇಚ್ಛಾಮಾತ್ರದಿಂದ
ಆ ಓಂ ಬೀಜಾಕ್ಷರಮಮಂ ಸತ್ತು ಚಿತ್ತಾನಂದ
ಪರಿಪೂರ್ಣ ನೆಲೆಗೊಳ್ಳದೆ ಸತ್ತು ಹುಟ್ಟುವುದಕ್ಕೆ ಯತ್ನವಿಲ್ಲದೆ,
ಸತ್ಯ ಸದಾಚಾರದಲ್ಲಿ ನಿತ್ಯನಿರ್ಗುಣಭರಿತನಾಗಿರ್ಪುದು.
ಆದಿಯಾಧಾರ ಬೀಜಾಕ್ಷರ ಮೂಲಮಂತ್ರವೆನಿಸುವದು.
ಕತ್ತಲಿಲ್ಲದ ಬೆಳಗು ನೀನಲ್ಲ[ವೆ], ನಿಜಗುರು ನಿರಾಲಂಬಪ್ರಭುವೆ. ॥ ೧ ॥

೧೨೯೭

ಗುರುಕರುಣದಿಂದಾದ ಹೆಣ್ಣು ಹೊನ್ನು ಮಣ್ಣು
ತ್ರಿವಿಧವಸ್ತುಗಳು ಆಧಾರವೆಂಟು.
ಅವಸರವಿಲ್ಲದೆ ಕಣ್ಣುಕಟ್ಟಿದ ಪಶುಗಳಂತೆ ಎಣ್ಣೆ ಬಣ್ಣ ಕುಂಕುಮದ ಆದಿಬೀಜಾಕ್ಷರ.
ಓಂಕಾರದ ಲೀಲೆಯಾ ಮೂಲಮಂತ್ರವಮಂ
ಮರೆದು ಸಣ್ಣಾಗಿರ್ಪುದು ಪುಣ್ಯಪಾಪ ವಿಚಾರವಿಲ್ಲದೆ.
ಬಣ್ಣಗೆಟ್ಟು ತಾಪತ್ರಯಾಗ್ನಿಯಲ್ಲಿ ನೊಂದುಬೆಂದು
ಇಚ್ಛೆ ಎಚ್ಚರ ಅರಿವು ಎಂಬುವುದಕ್ಕೆ
ಗುರುಕರುಣಕಟಾಕ್ಷವಿಲ್ಲದೆ ಮತ್ಸರದಿಂದ ತಿರುತಿರುಗಿ
ಆಧಾರಕ್ಕೆ ಆದಿಬೀಜಾಕ್ಷರವಮಂ ಭ್ರಮೆಗೊಳ್ಳದೆ ಭಾವವನರಿಯದೆ,
ಸಚ್ಚಿದಾತ್ಮಕನು ಹುಚ್ಚುಹುಚ್ಚು ಬೊಗಳುವ ಪರಿ ಇನ್ನೆಂತೊ ?
ಮುಚ್ಚಿಕೊಂಡಿರುವುದು ಮಾಯೆ.
ಬ್ರಹ್ಮವು ತನ್ನಿಚ್ಛಾಮಾತ್ರದಿಂದಾಗುವಂಥ ಪರಿತಾರ್ಥ ನ್ಯಾಯವು ಇನ್ನಾರಿಗೆ ?
ಹೇಳುವುದಕ್ಕೆ ಅಶುದ್ಧವಾಗಿ ತೋರುವುದಲ್ಲದೆ,
ಬೆನ್ನಟ್ಟಿ ಬಾಧಿಸುವುದಲ್ಲದೆ,
ಗುರುಕೃಪಾವಸ್ಥೆಯನ್ನು ಜಾಗ್ರ ಸ್ವಪ್ನ ಸುಷುಪ್ತಿಯಲ್ಲಿ
ಆದಿಬೀಜಾಕ್ಷರ ಮೂಲಮಂತ್ರವೆ ಆಧಾರವೆನಿಸುವುದು
ಅಣುವೆ ಮಾತ್ರವೆಂದು ಮಮಕಾಯ
ಪ್ರತಿಚ್ಛಯವೆಂದು ಪರಮಾನುಬೋಧವೆಂದು
ಕೂಗುವುದಕ್ಕೆ ಪರಮಾರಾಧ್ಯ ನೀನಲ್ಲ[ವೆ],
ನಿಜಗುರು ನಿರಾಲಂಬಪ್ರಭುವೆ. ॥ ೨ ॥

೧೨೯೮

ಗುರುಕರುಣದಿಂದಾದ ನ್ಯಾಯನಿರ್ಣಯ ಅನರ್ವಯವೆಂಬ ದಿನಸುಗಳು
ಬಾಲಲೀಲಾ ವಾಕ್ಯಗಳಿಂದ ಆಧಾರದಲ್ಲಿ ಆಶ್ಚರ್ಯವಾಗಿ
ಕೂಗುತಿರ್ಪವು ಅನುಭವಸಾರ.
ಆದಿ ಬೀಜಾಕ್ಷರಮಮಂ ತ್ರಿವಿಧಸಂಧಾನದಿಂದ,

ಆಯಾಸವಿಲ್ಲದೆ ಆಚಾರಕ್ಕೆ ಸೇರ್ಪಡೆಯಾಗಿ,
ವಿಚಾರದಿಂದ ನಾಮಾಮೃತಮಂ ಸ್ವೀಕರಿಸಿ,
ಸದಾಚಾರ ಸನ್ನಹಿತವಾಗಿ ಅಗೋಚರ ಮಾರ್ಗವೆಂದರಿದು,
ಗುಪ್ತಭಕ್ತಿಯಿಂದ ಉಮಾಶಕ್ತಿ ಭಿಕ್ಷಾಟನಂಗೈದು
ಯುಕ್ತಿಜ್ಞಾನ ಆಪ್ತಾಲೋಚನದಿಂದ ಬಹುಮಾನದಿಂದ ಕರೆದುಂಡು
ವಿರಕ್ತಿ ವೈರಾಗ್ಯ ಆನಂದವ ಆಚರಿಸಿ,
ಮಾನಸ ವಾಚಕ ಕಾಯಕ ರೇಚಕ ಪೂರಕ ಕುಂಭಕವೆಂಬ ಷಡುವರ್ಣದ
ದುರಾಚಾರಮಂ ಕಳೆದುಳಿದು, ಮಾಯಾಪ್ರಪಂಚದ
ಆಟವೆನ್ನಲ್ಲಿ ಗಟ್ಟಿಗೊಂಡು, ರಾಯಭಾರಮಂ ನಡೆಸಿದ
ಮಾಯಾವಿರಹಿತ ನೀನಲ್ಲ[ವೆ], ನಿಜಗುರು ನಿರಾಲಂಬಪ್ರಭುವೆ. || ೩ ||

೧೨೯೯

ಗುರುಕರುಣದಿಂದಾದ ಬಾಲ್ಯತ್ವ ಯೌವನ ವೃದ್ಧತ್ವವನ್ನು
ಕಾಲಕಾಲಾಂತರದಲ್ಲಿ ಶೀಲವ್ರತನೇಮವಿಲ್ಲದೆ ಆದಿಬೀಜಾಕ್ಷರ ಮೂಲಮಂತ್ರಮಂ
ಕೇವಲ ಪರಬ್ರಹ್ಮವಸ್ತುವೆಂದು ನಂಬುಗೆಯಿಲ್ಲದ ಕಾರಣ,
ಆದಿ ವ್ಯಾಧಿ ವಿಪತ್ತು ರೋಗರುಜಿನಾದಿಗಳಿಂದ
ಶಿವಧೋ ಶಿವಧೋ ಎಂದು ಮೊರೆಯಿಡಲು,
ಕಾಲಾಂತರನೆಂಬ ಯಮಧರ್ಮನ ಹಲವು ದುರ್ಗುಣವೆಲ್ಲ
ಹೊಲಗೇರಿಯಲ್ಲಿ ಬಲೆಯನ್ನು ಹಾಕಿಹೆನೆಂದು ಹೆಸರಿಟ್ಟು ಕರೆಯಲು,
ಆ ಕಲಿಗಣನಾಥನ ಲೀಲಾಮೋದದಿಂದ
ಐಶ್ವರ್ಯಮಂಬಟ್ಟು ಶೂಲಪಾಣಿಗೆ ತ್ರಿವಿಧಾವಸ್ಥೆಗಳನ್ನು
ಮೇಲಣ ಪರಿಣಾರ್ಥಮಂ ತಿಳಿಸಿಕೊಟ್ಟ, ಆಮೇಲೆ ನಾಲ್ವರು ಗೆಳೆಯ ಬಾಂಧವರು
ಬಯಲುಭಾವ ಚಿತ್‌ಸ್ವರೂಪರಾಗಿ ಧರ್ಮದ ಮಾರ್ಗದ ಲೀಲೆ,
ಅಧರ್ಮವೆ ಕುಟಿಲ, ಸ್ವಧರ್ಮವೆ ಛಲ.
ಸದಾಧರ್ಮದ ಮೂಲಮಂತ್ರವೆ ಅನುಕೂಲ.
ಅನುಸಾರ ಅತಿಚಮತ್ಕಾರದಿಂದ ಕಾಲಭೈರವಿಯೆಂಬ ಶಕ್ತಿ ಸಾವನಕೂಡಿ,
ನಲಿನಲಿದಾಡುತ ಕೀಲುಮೇಲಾಗಿ ಬಾಲಭಾಷೆಗಳಿಂದ
ನಾಲ್ಕರ ಅರ್ಥ ಪ್ರಾಣ ಅಭಿಮಾನಮಂ ಕಳೆದುಕೊಂಡಾತ ನೀನಲ್ಲ[ವೆ],
ನಿಜಗುರು ನಿರಾಲಂಬಪ್ರಭುವೆ. || ೪ ||

೧೩೦೦

ಗುರುಕರುಣಮಂ ಪಡೆದು ಅನುಭವಿಸುವಂಥ
ತ್ರಿವಿಧಸಂಧಾನಗಳು ಉದಯ ಮಧ್ಯಾಹ್ನ ಸಾಯಂಕಾಲವನು
ಆದಿಬೀಜಾಕ್ಷರ ಓಂ ಪಥಮಂ ನೆಲೆಗೊಂಡು,
ಸಾಧನಚತುಷ್ಟಯದಿಂದತತ್ತ್ವಲು, ಬೋಧ ನಿರ್ಗುಣವೆಂಬ, ನಿರಾಭಾರಮಂ ತಾಳಿ,

ಅಂಗಚತುಷ್ಟಯ ಸಂಗಸಮರಸಭಾವವಮಂ ಬೆಸಗೊಂಡು.
ಭಂಗಗೇಡಿಗಳ ಅಂಗವಿಕಾರದಿಂದ ಸಿಂಗರಿಸಿರಿ.
ಮಹಾಲಿಂಗದಲ್ಲಿ ಜ್ಞಾನಚತುಷ್ಟಯವೆಂಬ ಫಲಗಳನ್ನು ಭುಂಜಿಸಿ,
ಅಂಜನದೇವಿಯರ ಒಡಗೂಡಿ,
ಆದಿಬೀಜಾಕ್ಷರ ಮೂಲಮಂತ್ರದ ನೆಲೆಯ ಮನೆಯಲ್ಲಿ
ಭಕ್ತಿಗೋಸ್ಕರವಾಗಿ ಬಿಕ್ಷಾಟನಕ್ಕೆ ಅಸೋಜಿಗವಾದ
ಜಂಗಮರೂಪದಿಂದನುಭವಿಸಿ ಶಿವಸುಖಸಾರಾಯವಮಂ
ಉದಯಾಸ್ತಮಾನದೊಳು ವೇದವಾಕ್ಯ ಶ್ರುತಿ ಪುರುಣಾಗಮೋಕ್ತದಲ್ಲಿ
ಭಜನೆಯನು, ನಡೆನುಡಿ ಒಂದಾದ ತೆರನನು,
ಬೂದಿಬಡಕರ ಸಂಗದಿಂದ ಗಾದಿಗೋಷ್ಠಿಯಿಲ್ಲದೆ
ಮಹಾದ್ವಾರದ ಹೊರಬಾಗಿಲಲ್ಲಿ ಕುಳಿತು,
ತ್ರಿವಿಧಕ್ಕೆ ತ್ರಿವಿಧ ಪದಾರ್ಥಮಂ ಕೊಟ್ಟು,
ಬೀದಿಬಾಜಾರದಲ್ಲಿ ದಿನಸಿಯಿಲ್ಲದ ಅಂಗಡಿಗಳನ್ನು ಕಟ್ಟಿಕೊಂಡು,
ಆಧಾರಕ್ಕೆ ಅಗೋಚರವಾಗಿ ವಿಧವಿಧದಿಂದ ಶೋಧನ ಗುಪ್ತಾಂತರವಮಂ ನಡೆಸಿ,
ಊರ್ಧ್ವ ಅಧೋರ್ವ ತತ್ಪೂರ್ವವೆಂಬ ಮದೋನ್ಮತ್ತದಿಂದ
ಶೂಲವನಿಕ್ಕಿ ಪರಿಶೋಧನ ಪರಮಪ್ರಕಾಶವಾಗಿದ್ದಿಯಲ್ಲದೆ,
ಪರಸಾಧನವೆಂಬ ನಾಟ್ಯವನಾಡಿ ಪಾರಮಾರ್ಥಗುರು ಸಮರ್ಥ ನೀನಲ್ಲ [ವೆ],
ನಿಜಗುರು ನಿರಾಲಂಬಪ್ರಭುವೆ. ॥ ೫ ॥

ಗುರುಸ್ಥಲದ ಅಭಿಪ್ರಾಯ ಸಮಾಪ್ತ ಮಂಗಳಮಸ್ತು

ಶ್ರೀ ಶ್ರೀ ಶ್ರೀ

ಗುರುಕೃಪಾವಸ್ಥೆಯನು ತಿಳಿವುದಕೆ ಸೂಚನಾರ್ಥಮಂ ಅಹೋ ಸಾರಾಯಮಂ
ಶ್ರೀಗುರು ಪೇಳಿದನು ॥ ವಚನ ॥

೧೩೦೧

ಪರತರ ಪರಮಾನಂದದಲ್ಲಿ ಲೀಲಾವಿನೋದದಿಂದ
ಪಾರಾಯಣದಿಂದ ನಮೋ ನಮೋ ಎಂದು ಪರಿತಾರ್ಥ ನ್ಯಾಯಮನಿಕ್ಕಿ,
ಗುರುಕಾರುಣ್ಯವ ಪಡಕೊಂಬುವುದಕ್ಕೆ ಅವಿರಳಭಕ್ತಿಯಂ ಮುಂದುಗೊಂಡು,
ಆದಿಬೀಜಾಕ್ಷರವೆ ಸಗುಣವೆಂಬ ಸಹವಾಸದಿಂದ ಸೇರ್ಪಡೆಯಾಗಿ,
ಭೋಗೋಪಭೋಗಿಯೆಂದು ಐಶ್ವರ್ಯಭಕ್ತಿಯಿಂದ ಆಚಾರವಮಂ
ಸಗುಣತ್ವ ವಿಶ್ವಾಸದಿಂದ ಕಪ್ಪುಗಾಣಿಕೆಯನು ಕೊಟ್ಟು, ಆಶ್ವರ್ಯವಾಗಿ,
ಆನಂದಭಕ್ತಿಸಮರಸಭಾವ ಸಗುಣ ನಿರ್ಗುಣ ನಿರಾಭಾರವಮಂ
ಅಭ್ಯಾಸದಿಂದ ಗುರುಧ್ಯಾನ ಮೂಲಮಂತ್ರವೆ ಮೃದುತರವಾಗಿ ನಡೆನುಡಿ ಒಂದಾಗಿ,
ಮಾಯೆ ನಿರ್ಮಾಯೆ ಚಿದಂಗಸ್ವರೂಪ ಗಟ್ಟಿಪ್ರಕಾರದಿಂದ
ಆಯಾಸವಿಲ್ಲದೆ ಭಾವಭ್ರಮೆಗೊಂಡು, ಕಾಯವೆಂಬ ಕರ್ಮದ ಕಟ್ಟಳೆಯನು

ಸದ್ಭಾವ ಸದ್ಗೋಷ್ಠಿ ಸಂಬಂ[ಧ]ದಾಚರಣೆಯಲಿ
ತಟ್ಟಿಮುಟ್ಟದೆ ಗಟ್ಟಿಗೊಂಡಿರ್ಪುದು.
ಬಿಟ್ಟರೆ ಕೆಟ್ಟುಹೋಗುವುದು ಕಟ್ಟಕಡೆಗೆ.
ಬಟ್ಟುಕಚ್ಚಿ ಕಣ್ಣುಮುಚ್ಚಿಕೊಂಡು ದಿಟ್ಟನಾಗಿದ್ದಿಯಲ್ಲ[ವೆ],
ನಿಜಗುರು ನಿರಾಲಂಬಪ್ರಭುವೆ. || ೬ ||

೧೩೦೨

ಗುರುಕೃಪಾವಸ್ಥೆಯನು ಆಧರಿಸಿಕೊಂಡಿರ್ಪ ಆತ್ಮನ
ಅಂಗಕರಣಂಗಳು ಅಭಿಧಾನವಾಗಿ,
ಅಯೋನಿಜಾಕ್ಷರಮಂ ಆದಿಮೂಲಮಂತ್ರ
ಮಂಗಳಮಯ ಜ್ಯೋತಿಪ್ರಕಾಶ ಬೆಳಗಿನಿಂಧ
ಕಂಗಳಮಂಟಪದ ಸುತ್ತ ಶೃಂಗಾರವರ್ಣವಾಗಿ.
ಮಾಂಗಲ್ಯಸ್ವರೂಪವಾದ ಗುರು ಲಿಂಗ ಜಂಗಮ
ಆಚರಣೆಯನು ವಿಚಾರದಿಂದ ಇಂಬಿಟ್ಟುಕೊಂಡು,
ಭೂಚರಿಯೆಂಬ ಮಾರ್ಗದಲ್ಲಿ ವ್ಯಾಪಕನಾಗಿರ್ಪುದು.
ಯೋಚನಮಂ ಬಿಟ್ಟಿರಬಹುದಲ್ಲದೆ, ಖೇಚರಿ ಸಹಚರಿಯೆಂಬ ಸುಮಾರ್ಗವನು
ಆಲೋಚನ ಸೂಚನಾರ್ಥದಿಂದ ನೀಚರ ಸಂಗಮಂ ಮರೆದು,
ಸಚರಾಚರ ಪ್ರಾಣಿಗಳಲ್ಲಿ ವಿಷಯಾತುರನಾಗದೆ,
ಷಣ್ಮುಖಿ ಶಾಂಭವಿಯೆಂಬ ಸನ್ಮಾರ್ಗದಲ್ಲಿ ಆ ಯೋಚನ ಕಾಲಸೂಚನವಾಗಿ,
ಅಪೇಕ್ಷೆಯಿಲ್ಲದೆ ಅಪರೋಕ್ಷ ಮೋಕ್ಷಗತಿಯೆಂದು ಶ್ರುತಿವಾಕ್ಯವಿಡಿದು,
ಮೋಕ್ಷಸಿದ್ಧಿ ಮಮಕಾಯ ಮಂತ್ರಕಾಯ ಕರುಣಿ ಗುರುರಾಯ ನೀನಲ್ಲ[ವೆ],
ನಿಜಗುರು ನಿರಾಲಂಬಪಭುವೆ. || ೭ ||

೧೩೦೩

ಗುರುಕೃಪಾವಸ್ಥೆಯನು ಆವರಿಸಿಕೊಂಡಿರ್ಪ
ಆತ್ಮನ ಅನುಭಾವಸಾರ ಅನುಸ್ಮರಣೆಯಿಂದಾರಾಧಿಸಿ,
ಆ ಓಂ ಬೀಜಾಕ್ಷರ ಮುಂತಾಗಿ ಆದಿ ಆಧಾರವಿಡಿದು,
ಇಹಕ್ಕೂ ಪರಕ್ಕೂ ಎರಡರಲ್ಲಿ ಸಾವಧಾನವೆಂಬ ಸಿದ್ಧಾಸನದಲ್ಲಿ ಕುಳ್ಳಿರ್ದು,
ಪದ್ಮನಾಭನ ಮನೋ ಆನಂದವನು
ಕ್ಷಮೆ ದಮೆ ಶಾಂತಿ ಸೈರಣೆಯಿಂದ ಸವಿಸ್ತರವನೊಳಕೊಂಡು,
ಗಾವಿಲಮನುಜರ ಸಂಗವಿಲ್ಲದೆ,
ಪದ್ಮಾನಾಭನ ಮನೋ ಆನಂದವನು
ಕ್ಷಮೆ ದಮೆ ಶಾಂತಿ ಸೈರಣೆಯಿಂದ ಸವಿಸ್ತರವನೊಳಕೊಂಡು,
ಗಾವಿಲಮನುಜರ ಸಂಗವಿಲ್ಲದೆ,
ಪದ್ಮಾಸನವ ಬಲಿದು ಶಿವೋऽಹಂ ಬ್ರಹ್ಮವೆಂದು

ಸಮ್ಯಜ್ಞಾನ ಸಮರಸಭಾವದಿಂದಾಚರಿಸಿ,
ಮಾಯಾಮಂತ್ರಮಂ ಆಯಾಸವಿಲ್ಲದೆ
ಅಘೋರಮಂತ್ರವಾದ ಅಂತರಮಾರ್ಗದಲ್ಲಿ ನಿಲಿಸಿ,
ವೀರಾಸನವನಿಕ್ಕಿ ಧೈರ್ಯ ತ್ಯಾಗವ ಮಾಡಲೋಸುಗ,
ಪರಿಯಾಯದಲ್ಲಿ ವೀರಮಾಹೇಶ್ವರನೆಂಬ
ಜಂಗಮಪರಿಮುಖದಿಂದ ತತ್ಸಂಗಮಾಗಿ,
ಪರಮಾನುಬೋಧತ್ರಯಮಂ ವಿವರಿಸಿ,
ಶಿವಬೀಜಾಕ್ಷರ ಸಾರಾಯಮಂ ಸವಿದುಂಡು,
ಪರಮಜ್ಞಾನ ಪರವಸ್ತುವಿನಿಂದ ಆವಿರ್ಭಾವಮಂ ತೆಗೆದುಕೊಂಡು,
ಅದ್ವೈತಕ್ರಿಯೆಯಿಂದಾದ ಧನಮಂ ನೇಮಿಸಲು,
ಅದ್ವೈತಭಕ್ತಿಯೆಂಬ ಮಹಾಮನೆಯಲ್ಲಿ ಮನಾನಂದಭರಿತವಾಗಿ,
ದೇವತಾಜ್ಞಾನ ಸಮ್ಮಿಶ್ರವಾಗಲು ದೈವದಾರಾಧ್ಯ
ಅವಯವಂಗಳು ಅಲ್ಪಾಶ್ರಯ ಮರೆದು,
ಬಹುಮಾನದಿಂಧ ಆಚರಿಸಿಕೊಂಡಿರ್ಪುದು.
ಅಭಿಮಾನಕ್ಕೆ ಕೊರತೆಯಾಗದೆ ಸ್ವಾಭಿಮಾನ ನೀನೆಯೆನಗಲ್ಲ[ವೆ],
ನಿಜಗುರು ನಿರಾಲಂಬಪ್ರಭುವೆ. || ೮ ||

೧೩೦೪

ಗುರುಕೃಪಾವಸ್ಥೆಯನು ಪಡೆದನುಭವಿಸುವಂಥ
ಮಹಾನುಭಾವಿಗಳ ಸಯಸಂದ ಆಚರಣೆಯ ವಿವರಮಂ ಆದಿ ಬೀಜಾಕ್ಷರಮಂ
ಗುರುದೈವವೆಂದು, ಆಧಾರವೆಂಬ ಅನಾದಿ ಪರಶಿವನೆಂದು,
ಮೂಲಮಹಾವಾಕ್ಯಮಂತ್ರದಿಂದ ಅನುಸ್ಮರಣೆಯಂ ಮಾಡಿ,
ಸಾನುರಾಗದಿಂ ಭಜನೆಯಂ ಮಾಡಿ,
ಮೃಡಲೀಲೆಯಿಂದ ಕಡುಪಾಪಿಷ್ಠರ ಮೂಢತ್ವಮಂ
ನಡೆನುಡಿಯಿಂದಾವರಿಸಿಕೊಂಡು,
ತತ್ವಸಾದಾಖ್ಯವೆಂಬ ಬೆಡಗು ನಿರ್ಣಯಮಂ ಹೇಳಲು,
ದೃಢಮನವುಳ್ಳವರಾಗಲೆಂದು ಬಡಪ್ರಾಣಿಗಳಿಗೆ ಬೇಡಿದ ಪದಾರ್ಥಮಂ ಕೊಟ್ಟು,
ಇಡಾ ಪಿಂಗಳ ಸುಷುಮ್ನವೆಂಬ ನಾಡಿಯನು ಬಿಗಿದು ನೋಡಿ,
ಕುಂಡಲಿಯೆಂಬ ಸರ್ಪನ ಹೆಡೆಯೆತ್ತಿ ಆಡಿಸಲು,
ಆಮೇಲೆ ಗಾಢಮೂಢವಿದ್ಯೆಗಳೆಲ್ಲ ತಡೆಯದೆ
ಬಿಡುಗಡೆಯಾಗಿ ಆಡದಮ್ಮ ಹೊಟ್ಟೆಹೊರೆಯಲೆಂದು.
ಕಡುದುಃಖದಿಂದ ಸುಡುಗಾಡಮಾರ್ಗದಲ್ಲಿ ಹೊಂದಿಕೊಂಡು ಇರುತಿಹನು.
ಅಡವಿ ಅರಣ್ಯಮಂ ಸಂಚರಿಸಿ,
ಒಡೆಯನ ಪದಾರ್ಥ ಒಡೆಯನಿಗೆ ಅರ್ಪಿತವಾಗಲೆಂದು ಇಚ್ಛೈಸಿ,
ಮಡಿಮೈಲಿಗೆಯಿಲ್ಲದೆ ನಿಲುಕಡೆಯಿಂದ ಮಾಡಿದಡುಗೆಯನು ಗಡಿಬಿಡಿಯಾಗದೆ

ಬಡಿವಾರವಮಂ ಸಾಕುಸಾಕೆಂದು ಎಡೆಮಾಡಿ ಉಣಿಸಲು,
ಪಡೆದನುಭವಿಸಿದಂಥ ಪ್ರಾರಬ್ಧಭೋಗವನು
ನ್ಯಾಯಯುತಾರ್ಥವಾಗಿ ಆರೋಗ್ಯವೆಂದು
ಐಶ್ವರ್ಯ ನಿಮಗಾಗಲೆಂದು ಪರಮಸಂತೋಷವಂಬಟ್ಟು,
ವಡಿ ಪ್ರಾಸುಯಿಲ್ಲದ ನಡೆನುಡಿವೊಂದಾದ ಮಹಾಮಹಿಮ ನೀನಲ್ಲ[ವೆ],
ನಿಜಗುರು ನಿರಾಲಂಬಪ್ರಭುವೆ. || ೯ ||

೧೩೦೫

ಗುರುಕೃಪಾವಸ್ಥೆಯನು ಪಡೆದು ಅಂತರಮಾರ್ಗದಲ್ಲಿ
ನಿಶ್ಚಿಂತನಿವಾಸಿಗಳಾದ ಮಹಾಮಹಿಮರ
ಮನದ ದಂದುಗವನು ಸ್ವಾನುಭಾವಜ್ಞಾನವೆಂಬ ಮನೆದೈವ,
ಶಿವಾನುಭಾವ, ಓಂ ಬೀಜಾಕ್ಷರವೆ ಅಂತರ್ಭಾವ.
ಆದಿ ಪರಾಶಕ್ತಿ ಅನಾದಿ ಪರಶಿವನೆಂಬ ಮೂಲಮಂತ್ರವೆ
ಗುಪ್ತಪ್ರಣಮದ ಬಲೆಯಲ್ಲಿ ಮನೋನ್ಮಯ ತನ್ಮಯದ ಲೀಲೆ.
ಆನಂದಮಯವಾಗಿ ಧ್ಯಾನ ಮೌನವೆಂಬ
ಸನ್ಮೃದುವಾಕ್ಯಗಳಿಂದ ಉತ್ತರದಿಕ್ಕಿನಲ್ಲಿ ಕುಳಿತು,
ಕತ್ತಲು ಬೆಳಕೆನ್ನದೆ ತೊತ್ತಿನ ಮಗನಬಹುದೆಂದು
ಯತ್ನವಿಲ್ಲದೆ ಪ್ರಯತ್ನವಂಬಟ್ಟು,
ತೆತ್ತೀಸಕೋಟಿ ದೇವಾನುದೇವತೆಗಳೊಡಗೂಡಿ
ಮಿತ್ರಬಾಂಧವರನೆಲ್ಲ ಒಕ್ಕಲಿಕ್ಕಿ ಕೂ ಎಂದು ಕೂಗಲು,
ಅಜ್ಜ ಮುತ್ಯಾ ಮೊಮ್ಮಗನೊಡನೆ ಗೆಳೆಯ ಸಾಲವಳಿಯು
ಬಹುದಿನ ಸಾಗಿ, ಅಳಿಯ ಮಾನದವನೆಂದುಕೊಂಡು,
ಕುಲಕೋಟಿ ಬಳಗವೆಲ್ಲ ಅರಳಿ ಜೋಳಕ್ಕೆ ಮಾರಿ ಮಾರಿ,
ಅರಳಿ ಅಂಬಲಿ ಕಾಸಿದಡುಗೆಯನು
ಅಂಗವಿಲ್ಲದ ಲಿಂಗದೇಹಿಗಳೊಡನೆ ತತ್ಸಂಗದಿಂದ ಉಣನೀಡಿ,
ಭೃಂಗ ಸಂಪಿಗೆ ಮರೆಯಲ್ಲಿರ್ದು
ಅಂತೆ ಗಂಗಾಸಮುದ್ರವೆಂಬ ಸಾಗರದಲ್ಲಿ
ಅಡಗಿರ್ದ ತೆರನಂತೆ ಅನಂಗಸಂಗ ಸುಖಭೋಗಿ.
ನಿಜಗುಣತ್ಯಾಗಿ ನೀನೆ ಎನ್ನೊಳಡಗಿರ್ದೆಯಲ್ಲ[ವೆ],
ನಿಜಗುರು ನಿರಾಲಂಬಪ್ರಭುವೆ. || ೧೦ ||

ಶ್ರೀಗುರು ಕೃಪಾವಸ್ಥೆ ಸೂಚನಾರ್ಥಂ ಸಂಪೂರ್ಣಂ ಮಂಗಳಮಸ್ತು
ಶ್ರೀ ಶ್ರೀ ಶ್ರೀ.

ಧರ್ಮಾರ್ಥನ್ಯಾಯದಿಂ ಅನುಸ್ಮರಣೆಯಂ ಮಾಡಲೋಸುಗ ಪ್ರಪಂಚವೆಂಬ ದೂರ ಆಚಾರ ಮಾರ್ಗದಲಿ ಮಾಯಾ ಸಂಶಯ ವಶಗತದಿಂದ ರಾಯಭಾರವ ಮಾಡದೆ,

ಗುರುಬೋಧತ್ರಯ ವಿವರವೆಲ್ಲವನು ಭಕ್ತಿಜ್ಞಾನಾನಂದಮಯವಾಗಿ ಮಾರ್ಗಾಚರಣೆಯಲ್ಲಿ ಸಮಯೋಚಿತಾರ್ಥಮಂ ಅರ್ಥಜ್ಞಾನದಿಂದನುಭವಿಸಲು ಸರ್ವಾರ್ಥನ್ಯಾಯಮಂ ಯಾಕೆ ಬೇಕು. ನೂಕು ತಾಕು ತಾಕು ಮಾಡಯ್ಯ, ಗುರುವೆ ಎನ್ನ ಅರಿವೆ ಜಗದ್ಗುರುವೆ. ಮತ್ತಂ ನೀನೆಂಬುದೆ ಸಾಧನ. ಗುಪ್ತ ಭಾವಾರ್ಥಮಂ ಸೂಕ್ಷ್ಮದೊಳಗಣ ಸ್ಥೂಲವನು ಅಡಗಿದ ಪರಿತಾರ್ಥನ್ಯಾಯಮಂ ಮಹಾಗುರು ಪೇಳ್ದನು ॥ ವಚನ ॥

೧೩೦೬

ನಡೆನುಡಿಯಿಂದಾವರಿಸಿಕೊಂಡು ಒಂದಾನೊಂದು ದಿನದಲ್ಲಿ
ಮನಾನಂದವಾಗಿ ಕೂಗುತಿರ್ಪುದೆ ಮನಮೀಸಲು.
ಹೊನ್ನು ಮನ ಮೇರೆ ತಪ್ಪಿದ ಬಳಿಕ ಇನ್ನು
ತಿಳಿತಿಳಿದು ಮನವೊಲಿದು ನೀನೆಂಬುದೆ ಧರ್ಮಾರ್ಥ.
ನ್ಯಾಯಯುತವಯ್ಯಾ ಪರಮಶ್ರೀ ಗುರುರಾಯ
ನಿಜಗುರು ನಿರಾಲಂಬಪ್ರಭುವೆ. ॥ ೧೧ ॥

ಮತ್ತಂ ನೀನೆಂಬುದೆ ಭಕ್ತಿಜ್ಞಾನವೆಂದ ವಿವರವು ॥ ವಚನ ॥

೧೩೦೭

ಪದಾರ್ಥ ಶುಚಿಪದಾರ್ಥ ಶುಚಿಕಾಯವೆಂದು ಶುಚಿರ್ಭೂತನಾಗಿ,
ಶಿವಸಂಬಂಧದಾಚರಣೆಯಲಿ ಭವಿಜನ್ಮಾಂತರ ಸಹವಾಸ ಮರೆದು,
ಕೇವಲ ಗುರುಪಥ ಮಾರ್ಗದಲ್ಲಿ ಅಯ್ಯಾ ಜೀಯಾ ಎನ್ನಯ್ಯನೆಂದನುಭವಿಸಿ,
ಮನೋಸಹವಾಸದಿಂದ ಓಂ ಗುರು ದೈವವೆಂದು
ಶಿವಸಾರಾಯಸುಖವಂ ನಡೆನುಡಿಯಿಂದಾಚರಿಸಿಕೊಂಡು,
ದೇವದಾನವಮಾನವರೊಳಗೆ
ಓಂ ಗುರುದೇವ ಓಂ ಸದಾಶಿವ ಓಂ ಸದ್ಯೋಜಾತಾಯ
ನಮೋ ನಮೋ ಎಂದು ದೀರ್ಘದಂಡ ನಮಸ್ಕಾರಮಂ ಮಾಡಿ,
ಒಡನಾಡಿ ಅವಿರಳ ಕ್ರಿಯಾಜ್ಞಾನ ಆನಂದವನು ಪಡೆದುಕೊಂಡು,
ನಾಮಾಮೃತವ ಸವಿದುಂಡು,
ಶಿವ ಹರಾಯಭವ ಮೃಡಾಯ ಮೃತ್ಯುಂಜಯವೆಂದು
ಆ ಓಂ ಬೀಜಾಕ್ಷರ ನಿಜವೆಂದು ಶಿವಷಡಾಕ್ಷರಮಂತ್ರದಿಂದ ತ್ರಿವಿಧಾವಸ್ಥೆಯಲಿ
ಸದಾಸನ್ನ ಹಿತನಾಗಿರ್ಪುದು ಬೋಧ ನಿರ್ಗುಣತ್ರಯವು.
ನೀನೆಂಬುದೆ ಎನಗೆ ಮಾರ್ಗಾಚರಣೆಯಲ್ಲವೆ,
ನಿಜಗುರು ನಿರಾಲಂಬಪ್ರಭುವೆ. ॥ ೧೨ ॥

೧೩೦೮

ಮತ್ತಂ ನೀನೆನಗೆಂಬುದು ಯಾಕೆ ಬೇಕು, ನೂಕು ತಾಕು ನೀನೆಂಬುದೆ ಶ್ರುತಿ.
ಪುರಾಣಾಗಮೋಕ್ತದಲ್ಲಿ ಪ್ರತಿಪಾಲನೆಂದು
ನಡೆನುಡಿ ಮಹಾಮನೆಯಲ್ಲಿ ವ್ಯಾಖ್ಯಾನ ಸಾರಮಂ ನೇಮಿಸಲು,

ಲೆಕ್ಕವಿಲ್ಲದಗಣಿತವನು ಮಿಕ್ಕು ಮಾರಿದವರಾರೆಂದು ತಕ್ಕತಕ್ಕಷ್ಟು ಶಿಕ್ಷೆಯ ಮಾಡಿ,
ಮಿಕ್ಕಾದವರಿಗೆ ಒಕ್ಕಲಿಕ್ಕಿ, ರಕ್ಕಸಿಯೆಂಬ ಮಾಯಾಶಕ್ತಿಯಳ ಬಲೆಯಲ್ಲಿ ಕೊಟ್ಟು,
ಕಕ್ಕುಲತೆಯಿಲ್ಲದೆ ಮೈಮರೆದು,
ದುರಾಚಾರಮಂ ನೋಡಿ ಸಿಕ್ಕು ಸಿಗವಲ್ಲದು,
ವರ್ತಿಸಲು ನಿನ್ನ ವಂಶಾಬ್ಧಿಕನಾದ.
ಅಂತಪ್ಪನ ಅಂಗಕರಣ ಅಭಿದಾನಂಗಳು ಲಿಂಗಕರಣಂಗಳಾಗಿ ಅಳವಟ್ಟು,
ಗುರುಲಿಂಗಜಂಗಮದಾಚರಣೆಯಲಿ
ಮನವ್ಯಸನವಿಲ್ಲದೆ ವಿಷಯಸಂಗಮರಸಂ ಮರೆದು,
ಅನಂಗಸಂಗಸುಖಭೋಗಿ ನಿಜಗುಣತ್ಯಾಗಿ ನೀನೆಂಬುದೆನಗೆ ಶಂಭು ತಾ ಬೆಳಗೆ,
ಈ ಲೋಕಾರ್ಥನ್ಯಾಯ ಸಾಕು, ಯಾಕೆ ಬೇಕು ?
ಮೂಕ ಸಕ್ಕರಿ ಮೆದ್ದ ಪರಿಯಲ್ಲವೆ ?
ಈ ಕಾಕುಭಜನೆಯನು ಸಾಕುಮಾಡು ಗುರುವೆ.
ಎನ್ನ ಮನಾನಂದದರುವೆ ನಿಜುಗುರು ನಿರಾಲಂಬಪ್ರಭುವೆ. ॥ ೧೩ ॥

ಮತ್ತಂ ನಾನೆ ನೀನೆಂಬುದು ಶೋಧನ ಆಪ್ತಾಂತರ್ಭಾವಮಂ ಸೂಕ್ಷ್ಮದೊಳಗಣ ಕಾರಣವೆಂದ ನಿರ್ಣಯವು ಅಡಕವಾದ ಸಮ್ಮಿಶ್ರಾರ್ಥಮಂ ಶಂಭು ಹೇಳಿದನು ॥ ವಚನ ॥

೧೩೦೯

ತತ್ವಾರ್ಥನ್ಯಾಯಮಂ ಬಲಿದು,
ಸಯವೆಂದಾರ್ಥ ಪ್ರಣಮಾರ್ಥ ಭಾವಾರ್ಥವೆಂಬ
ತ್ರಿವಿಧ ಸಂಧಾನದೊಳಗೊಂದು ಗುಪ್ತ ಶಿಕ್ಷದ
ಆಪ್ತಲೋಚನದಿಂದ ಸಾನುರಾಗದಿಂ ಭಜನೆಯನು ಮಾಡಲು,
ಕಿಂಚನ್ಮಾತ್ರ ಫಲಪದಂಗಳನು ಪಡೆದನುಭವಿಸುವಂಥ
ಪ್ರಾರಬ್ಧಭೋಗ ಮೀರಿದ ಮಾತನು,
ಸಾರವೆಲ್ಲವನು ಪರಮಾನುಬೋಧತ್ರಯದಿಂದ
ಗುರುಕೃಪಾಪಾತ್ರನೆಂದೆನಿಸಿ ಪಾರಮಾರ್ಥ ನಿರ್ಣಯಮಂ ಸಾಧಿಸಲು,
ನಿರಾಭಾರಮಂ ತಾಳಿಕೊಂಡು ಸುಮಾರ್ಗ ಪ್ರಕರಣೆಯಲಿ ಸ್ವಾಭಾವಿಕವಾಗಿ
ಅನುಭವಿಸಲು ನಿರರ್ಥಕನಾಗಬೇಕು.
ಕಾಕುಪುರಾಣ ಬೇರಿಲ್ಲವೆ ಪ್ರಭುವೆ. ಆನಂದದರುವೆ ಎನ್ನ ಗುರುವೆ.
ಮತ್ತಂ ನಾನೆ ನೀನೆಂಬುದೀ ಶೋಧನ.
ಆಪ್ತಾಂತರ್ಭಾವದಲ್ಲಿ ಕಾರಣದೊಳಗಣ ಸೂಕ್ಷ್ಮಪ್ರ
ತಾನೇ ತಾನಾಗಿ ಇರ್ದುದದರಿಂದ
ಭೂನಾಥ ಲೋಕೈಕಬಾಂಧವನೆಂದು
ಮನ ಬೇಸರವಿಲ್ಲದೆ ಆನಂದಮಯವಾಗಿ ತಾಗುತಿರ್ಪುದೆ ?

ಯೋಗಾಭ್ಯಾಸವನು,ನಾನಾವರ್ಣದ ಪ್ರತಿಚ್ಛಾಯಕ್ಕಾಗಮೋಕ್ತಕ್ಕತೀತ ನೀನೆಂದು
ಆಗದ ಕಾಯಕವನು ಗಟ್ಟಿಗೊಂಡು,
ಈಗ ಆಗೆನ್ನದೆ ಭೋಗಭಾಗ್ಯವನು ಬೇಡದೆ,
ಗಗನಮಾರ್ಗದ ಸೀಗಿಪವಾಡದಲ್ಲಿ ಕುಳಿತು,
ಜೋಗಿ ಜಾಣನೆಂದು ಮನವರಿದು,
ನಾನೇ ನೀನೆಂಬುದು ಫಾರಮಾರ್ಥ ನಿರ್ಣಯವಯ್ಯಾ,
ನಿಜಗುರು ನಿರಾಲಂಬಪ್ರಭುವೆ. ॥ ೧೪ ॥

೧೩೧೦

ಮತ್ತಂ ನಾನೆಂಬುದೆ ಜ್ಞಾನ.
ಭಕ್ತಿಯಿಂದಾದ ಧ್ಯಾನವು ನೆನಹಿನೊಳಗಾನಂದಮಯವಾಗಲು,
ಅನುವಿರಲು ಘನಪದಾರ್ಥಮಂ ಕೊಟ್ಟು,
ಇಹಕೂ ಪರಕೂ ಎರಡರಲ್ಲಿ ಸುಚಿತ್ತಹಸ್ತಮನಿಟ್ಟು,
ವಾಚಕನಾಗಿ ವಚನಾರ್ಥಮಂ ಬೋಧಿಸಲು,
ಅಗೋಚರವಾಗಿ ಸಚರಾಚರ ಪ್ರಾಣಿಗಳೊಳಗೆ
ಶುಚಿರ್ಭೂತನಾಗಿರಲೊಲ್ಲದೆ ನೀಚಾತ್ಮರನು ಮರೆದು,
ಕಾಲೋಚಿತಕ್ಕೆ ಶೀಲವ್ರತನೇಮಂಗಳ ಮಾಡದೆ,
ಲೀಲಾವಿನೋದದಲ್ಲಿ ಕಲಿ ಪ್ರಮಥಾತ್ಮಕನು
ಸುಲಭದಿಂ ಬಾಲಲೀಲಾ ವಾಕ್ಯಂಗಳಿಂದ
ಸಾಲಗ್ರಾಮದ ನಿರ್ಣಯಮಂ ಹೇಳಲು,
ಆಲಿಸೆಂದೆನಲು ಮೂಲದ್ವಾರಮಂ ತಿಳಿಸಲು,
ಕಾಯದ ಕರ್ಮವನು ಸುಟ್ಟು ಭಸ್ಮವಾಗಲು,
ಪ್ರಾಯ ಮೀರಿ ಆಯಾಸವಿಲ್ಲದೆ ಗಾವಿಲಮನುಜರ ಸಂಗಸುಖಂ ಬಿಟ್ಟು,
ಶಿವಶಿವಾಯೆಂದು ಶಿವಪ್ರಣಮವನು, ನಾನು ನೀನೆಂಬುದಿನ್ನು
ಸುಮಾರ್ಗಪ್ರಕರಣೆಯಲ್ಲವೆ ನಿಜಗುರು ನಿರಾಲಂಬಪ್ರಭುವೆ. ॥ ೧೫ ॥

೧೩೧೧

ಮತ್ತಂ ನಾನು ನೀನೆಂಬುದೆನಗೆ ಸಾಕು ಬೇಕೆಂಬುವಂಥದು,
ಪ್ರಾಯಶ್ಚಿತ್ತವಲ್ಲದೆ ಸಾಲದ ಸಾಕು, ನಾನೇ ನೀನೆಂಬುದೆ ನೀತಿ.
ಶಾಸ್ತ್ರ ಶಿವಾನುಭಾವವೆಂಬ ಪ್ರತಿಚ್ಛಾಯೆ ಮಮಕಾಯ
ಮಂತ್ರನ್ಯಾಯ ನೀನೆಂದು ಶ್ರುತಿ ವಿಸ್ಮೃತಿ ಪರಶ್ರುತಿಗಳನು
ಸಾಕುತಿರ್ಪವಲ್ಲವೆ ನಡೆನುಡಿ ನಿಲುಕಡೆಯೆಂಬ ಮಹಾದ್ವಾರದಲ್ಲಿ ಕುಳಿತು,
ಅಡಕವಾದಾತ್ಮರುಗಳಲ್ಲಿ ಅನುಭವಿಸಿ ಬೆಡಗು ನಿರ್ಮಾಯಮಂ ಆವರಿಸಲು
ಬೇಡಿದ ಪಡಿಪದಾರ್ಥವನು ಕೊಟ್ಟು,
ನಾಡನಾಳ್ವವ ಐಶ್ವರ್ಯೋಪಚಾರದಲ್ಲಿ ತಿರಿದುಂಡು,

ಪಿಶಾಚಿವೇಷವನ್ನು ಧರಿಸಿಕೊಂಡು ಈಶ್ವರ ನಾಮವೆಂದು ಹೇಳಿಕೊಂಬುವಂಥ
ಪಾರಮಾರ್ಥದ ಅಭಿಪ್ರಾಯವಲ್ಲದೆ, ಶರಣಜನ ಸನ್ನಹಿತ ನೀನಲ್ಲದೆ,
ಕರುಣಾಂತಃಕರಣ ಪೂರ್ಣಜ್ಞಾನಾಂಬುಧಿ ದೈವವೆಂದು ವರ್ಣರತ್ನಾಕಾರಕ್ಕೆ ಕಾರಣ
ನಿರಾಕಾರವಲ್ಲದೆ, ಕರುಣಿ ಗುರುರಾಯ ಈ ಕಾಕುಪುರಾಣ ಯಾಕೆ ಬೇಕು ?
ಸಾಕುಬೇಕೇನಲೊಲ್ಲದೆ ಜೋಕೆಮಾಡು ಗುರುವೆ ಎನ್ನನು,
ನಿಜಗುರು ನಿರಾಲಂಬ ಪ್ರಭುವೆ. ॥ ೧೬ ॥

ಮತ್ತಂ ತನ್ನ ತಾನೆಂಬುದೆ ಪರಿಶಾಸನ. ಪ್ರಸ್ಥಾನುಸಾರ ಮನೆದೈವವೆಂಬುದೆ ಕಾರಣಾರ್ಥದಲ್ಲಿ ನಿವಾರಣವೆಂಬ ಪರತರನ್ಯಾಯಮಂ ಸೇರ್ಪಡೆಯಾದ ಗುರುಲಿಂಗ ಮೂರುತಿ ಹೇಳಿದನು ॥ ವಚನ ॥

೧೩೧೨

ಏಕಾರ್ಥಂ ಬೆರೆದು ಉತ್ತರಾರ್ಥದಲ್ಲಿ
ಚಿತ್ರ ವಿಚಿತ್ರವೆಂಬ ಎಲ್ಲ ಸತ್ತುಚಿತ್ತಾನಂದ
ಪರಿಪೂರ್ಣಮಯವಾಗಿ ನಿತ್ಯನೇಮಂಗಳಿಲ್ಲದೆ,
ಯತ್ನವಿಲ್ಲದೆ ಪ್ರಯತ್ನಮಂಬಟ್ಟು, ಪತ್ನಿ ಪೀತಾಂಬರ ಶಾಲಿಯನುಟ್ಟು,
ವಚನ ಸಂಪಾದಿಸಲಿಲ್ಲವೆಂದು
ಮಾತಿನ ಅಂತರಾರ್ಥ ಸ್ಥಿತಿಗತಿಮತಿ, ಈ ಚೈತನ್ಯವಾದುದೊಂದು ಅನರ್ಥಮಂ
ಅಭಿಪ್ರಾಯ ಕರುಣಿ ಗುರುರಾಯನನು
ಸೂತ್ರಾರ್ಥ ತೂರ್ಯಜ್ಞಾನ ಪ್ರಯುಕ್ತ ಮನನ ಮಾತೃಸ್ಥಾನವಾಗಿರ್ಪುದು.
ಸತ್ಯವಿದನು ಶತ್ರುಗಳಿಗೆ ಅಸಾಧ್ಯವಾಗಿ ತೋರುವನಲ್ಲದೆ,
ಮಿತ್ರಬಾಂಧವರನೆಲ್ಲ ಪ್ರಾಪ್ತಾನುಸಾರ
ಮನೆದೈವವನೊಡಗೂಡಿ ಅರುಹಾಬ್ಧಿಯಲಿ ಆರೂಢಪಥಮಂ ನೇಮಿಸಲು,
ಗಾರುಡಮಂತ್ರವೆಲ್ಲವನು ಸುಮಾರ್ಗಾಚರಣೆ ಆನಂದಮಯವಾಗಲು,
ನಿವಾರಣದೊಳಗಣ ಕಾರಣತ್ರಯವೆಂಬ ಸೂತ್ರದಾರವು
ಬೆರೆದೇಕಮಯವಾದುದರಿಂದ
ಅಪರಿಮಿತ ದ್ರವ್ಯವದೆಲ್ಲ ಉಪಜೀವಿಗಳಿಗೆಲ್ಲ ದೊರಕುವುದು,
ನರುಪಮ ನಿರ್ಮಾಯ ನಿರ್ಮೋಹಿಗಳಾದ ಮನೋಭಾವಿಗಳಿಗೆ
ಅಪರಿಮಿತ ಪದಾರ್ಥವದು ಸಂಬಂಧವಾಗುವುದಲ್ಲದೆ,
ಸಂಶಯ ಬಿಡುಗಡೆಯಾಗದಂಥ
ಆಶಾಲಾಂಛನಧಾರಿಗಳಿಗೆಲ್ಲಿಯದೋ ಬೇಸ ನುಡಿ.
ಜೀವಿಗಳಿಗೆ ಅಸಾಧ್ಯವ ತೋರಬಾರದೆಂದು,
ತನ್ನ ತಾನೆಂಬುದೊಂದು ಪರಿಶಾಸನಾನುಸಾರ ಮನೆದೈವವನೊಡಗೂಡಿ,

ಪರಮ ಗುರುರಾಯ ತನ್ನ ತಾನೆಂಬುದೆ ಪರಿಶಾಸನವಯ್ಯಾ,
ನಿಜಗುರು ನಿರಾಲಂಬಪ್ರಭುವೆ. ॥ ೧೭ ॥

೧೩೧೩

ಮತ್ತಂ ತನ್ನ ತಾನೆಂಬುದೆ ತೂರ್ಯಜ್ಞಾನಪ್ರಯುಕ್ತ,
ಮನನವು ನಿಜ ಅಭ್ಯಾಸಮಾಗಿಹುದರಿಂದ
ಸೋಜಿಗದೊಳಗಣ ಅಸೋಜಿಗಮೆಂದೆನಲಹುದು.
ರಾಜಾರ್ಥನ್ಯಾಯಮನಿಕ್ಕಲು ಹೋಗುವುದೆ ಆಗಲರಿಯದು.
ಆದಿಶಿಷ್ಯ ಆದಿಗುರು ತಾನು ಬೀದಿಬಾಜಾರದೊಳಗೊಂದು
ಉದರಾರ್ಥಉದ್ಯೋಗಮಂ ನೇಮಿಸಲು,
ಅದರ ತಾತ್ಪರ್ಯ ಹೇಳಲುದ್ಯೋಗಿಸಿದರೆ,
ಆಶ್ಚರ್ಯ ಪರಮಾಶ್ಚರ್ಯವಾಗಿರ್ಪುದದರಿಂದ,
ಈ ಅಧಮ ಚಾಂಡಾಲರು ಸಾವಧಾನದಿಂದ
ಬಗಿ ಸೂತ್ರ ಕುಲಗೋತ್ರಮಂ ತಿಳಿಯದೆ,
ಪರ್ಯಾಯದಲಿ ಉದರಪೋಷಕರಾಗಿ ಬೆದರಿಕೊಳ್ಳದೆ,
ಆದಿ ಅನಾದಿ ಪರಶಿವನು ದೈವವೆಂದು
ಸನ್ಮೃದುವಾಕ್ಯಗಳಿಂದ ಸಹವಾಸಮಂಬಟ್ಟು,
ಗಾದಿ ಗೋಷ್ಠಿಗಳಿಲ್ಲದೆ ಆನಂದಮಯ ಲೀಲೆಯಲ್ಲಿ
ಮನೋ ಅಭ್ಯಾಸಿಗಳಾಗದೆ, ಜ್ಞಾನಾಮೃತವನು ಸ್ವೀಕರಿಸದೆ,
ಬರಿದೆ ಬ್ರಹ್ಮವನು ಕೂಗುತಿರ್ಪರಲ್ಲದೆ,
ಆದಿಶಿಷ್ಯ ಅನಾದಿ ಗುರುವಿನಿಂದ ಉದ್ಭವಿಸಿದಂಥ
ಉದರಾರ್ಥ ಉದ್ಯೋಗ ಪಾರಮಾರ್ಥ ಪರಮ ಶ್ರೀಗುರುಸಮರ್ಥ ನೀನೆಂದು
ನಮಿಸಲರಿಯದೆ, ಮದೋನ್ಮತ್ತದಿಂದ ವಾದ ವಾಗ್ಮೂಲಗಳನ್ನು ಕಲಿತು,
ಬೋಧ ನಿರ್ಗುಣತ್ವಮಂ ಮರೆದು, ಸಾಧು ಸುಮಾರ್ಗಮಂ ಬೋಧಿಸದೆ,
ವಿಧಿ ಪ್ರತಾಪದಿಂದ ತಿರಿದುಂಡು ಸಾಕುಬಾರದೆ.
ಬದುಕಿದೆವೆಂದು ಕುದಿಕುದಿದು ಸಾವರಲ್ಲದೆ,
ಅಧರ್ಮ ಮೂಢಜನರು ಉದಯ ಮಧ್ಯಾಹ್ನ ಸಾಯಂಕಾಲದಲಿ
ನಿನ್ನ ವಂಶಾಬ್ಧಿಕನಾದ ಶಿಷ್ಯೋತ್ತಮನು
ತನ್ನ ಅಭಿಪ್ರಾಯದೊಳಗೊಂದು ತನ್ನ ತಾನೆ ಪ್ರತಿಚ್ಛಾಯೆಯೆಂದು
ಯೋಚನೆಯಂ ಮಾಡಲು, ಸೂಚನಾರ್ಥಗಳಲ್ಲಿ
ತಿಳಿತಿಳಿದು ಸುಮಾರ್ಗಮಂ ತನ್ನ ತಾನೆಂಬುದದರಿಂದಾಚರಣೆ
ಸೈರಣೆಗೆ ಸಮಾನವಾದ ಕರುಣೆ ಗುರುರಾಯ
ತನ್ನ ತಾನೆಂದು ಆವರಿಸಿಕೊಂಡಿರ್ಪೆಯಯ್ಯಾ,
ನಿಜುಗುರು ನಿರಾಲಂಬಪ್ರಭುವೆ. ॥ ೧೮ ॥

೧೩೧೪

ಮತ್ತಂ ತನ್ನ ತಾನೆಂಬುದೆ ಬೇಕುಬೇಡೆಂಬುದೇಕವಾಡು.
ಗುರುವೆ ಏಕಾಕಾರವಾದ ನಿಜಾನಂದದರುವೆ,
ತಾ ತನಗರುಪುವೆನೆಂದು ತಾತ ದಾತ ಅಜತಾತನಾಗಿ, ಸೋಜಿಗ ರೂಪವ ಧರಿಸಿ,
ಓಂ ಬೀಜಾಕ್ಷರವೆ ಮೃದುತರವಾಗಿ ನಾಮಪ್ರೇಮಭಾವದಿಂದೊಡಗೂಡಿ,
ಅಮರತ್ವದೊಳಗನುಭವಿಸಿ, ಮೋಕ್ಷಸಿದ್ಧಿಯೆಂದು
ಆಗ ಅರುವುವೆನೆಂದು ಸಿದ್ಧಶುದ್ಧ ಪ್ರಸಿದ್ಧಪ್ರಸಾದದಿಂ ಸಂತೋಷಮಂಬಟ್ಟು,
ಪರಕಾಯ ಪರಪ್ರವೇಶದಿಂದ ಆನಂದಮಯವಾಗಿ ಆರಾಧ್ಯನೆಂದೆನಿಸಿ,
ಆದ್ಯರಿಗೆಲ್ಲ ಚಿದಾಮೃತ ಬೋಧಮಂ ಕುಡಿಸಿ,
ಚಿದಾನಂದಮಯಸ್ವರೂಪವಾಗಿ,
ಚಿತ್‌ಪ್ರಕಾಶವೆಲ್ಲ ಪರಮಪ್ರಕಾಶವಾಗಲು,
ಆವಾಗಲೂ ಹರಹರಾ ಶಂಕರಾ ಗೌರೀವಲ್ಲಭನೆಂದು,
ತತ್ವಾರ್ಥನ್ಯಾಯದಿಂದ ಪಾರಮಾರ್ಥವೆ ಪರಶ್ರುತಿ ಪರವಸ್ತು
ನಿಜಾಚರಣೆಯಲ್ಲಿ ಪರವಶನಾಗಿ ಗುರು ಸಕೀಲಗಳನ್ನಳವಟ್ಟು,
ಗುರು ಮುಟ್ಟಿ ಗುರುವಾಗಿರಬಲ್ಲಾತನು
ಆತನೆ ವೀರಮಾಹೇಶ್ವರನು, ಆತನೆ ಪರಶಿವನು.
ಆತನು ತಾನು ಜಾತಿ ಅಭಿಮಾಗಳೆಲ್ಲ
ಕೂಡಿಕೊಂಡು ಮೃಡಲೀಲೆಯಿಂದ ತಿರಿದುಂಡು ಸಿರಿಸಂಪತ್ಕರವುಳ್ಳಾತನಾಗಿ,
ಅರಿವು ಕುರುಹು ಕೂನವಿಲ್ಲದೆ ಎಲ್ಲರೊಳಗೆಲ್ಲ ಬಲ್ಲಿದನು.
ಅಲ್ಲಮಪ್ರಭುವಿದ್ದನು, ಖುಲ್ಲ ಬಿಜ್ಜಳನ ಹಲ್ಲು ಮುರಿದನು.
ತನ್ನ ತಾನೆಂಬುದ, ಬೇಕು ಬೇಡೆಂಬುದ ಏಕ ಮಾಡುವೆ.
ಎನ್ನಭವ ಶಂಭು ಶ್ರೀಗುರುವೆ, ನಿಜಗುರು ನಿರಾಲಂಬಪ್ರಭುವೆ. ॥ ೧೯ ॥

ಸಾಧನ ಗುಪ್ತಭಾವ ಧರ್ಮಾರ್ಥನ್ಯಾಯ ಸುಮಾಪ್ತ ಮಂಗಳ ಮಹಾಶ್ರೀ.

ಗುರುವು ಶಿಷ್ಯನಿಗೆ ನಿರೂಪ ಮಾಡಿದ್ದು ॥ ವಚನ ॥

೧೩೧೫

ಎಲೆ ಮಗನೆ, ಶ್ರೀಮತ್ ಸಚ್ಚಿದಾನಂದ
ಶೀಲವ್ರತನೇಮವಿಲ್ಲದೆ ಕುಲಗೇಡಿ ಛಲಗೇಡಿ,
ಲೋಕಾತ್ಮರು ಬೋಗಳುತಿರ್ಪರರಹಿತನೆಂದು ತಿಳಿಯದೆ,
ನಿರ್ಮಲವಾದಾತ್ಮನೆಂದು ದುರ್ಭಾವ ದುರ್ಗೋಷ್ಠಿಯಿಂದ
ಆಚರಿಸುವಂಥವರಭಿಮಾನಿಗಳು ಗುರುವೆಂದರಿಯರು.
ಈ ನರಪ್ರಾಣಿಗಳು ಹರಗುರುವಿಂದಧಿಕಮಾಗಿಲ್ಲವೆಂದು ಸ್ತೋತ್ರವ ಮಾಡರು.
ಎಲೆ ಮಗನೆ ನೀ ಎನ್ನ ಆಲಯದೊಳಗೊಂದು ನಾಲ್ವರಿಗ್ಹೇಳಿ,

ಬಂಧುವರ ಕೂಡಿಕೊಂಡು, ಫಲಾಹಾರ ಪರ್ಣಾಹಾರ
ಸುವರ್ಣಗಾಳಿಯೆಂಬ ವರ್ಣಾಶ್ರಯದಿಂದ ತಿರಿದುಂಡು ಬಾಳೆಂದು
ಆ ಶ್ರೀಗುರುನಾಥನು ಶಿಷ್ಯನಿಗೆ ಕರ್ಣಬೋಧಮಂ ಕೊಟ್ಟು,
ಪೂರ್ಣಜ್ಞಾನಾಂಬುಧಿಯೆಂಬ ನಾಮಾಮೃತವನು ಕುಡಿಸಿ,
ಮರ್ಮ ಯೋಗಾಭ್ಯಾಸವನು ಸಾಸಿರನಾಮದಿಂದೊಡಗೂಡಿ,
ಈಶ್ವರ ನಾಮದ ಫಲ ನಿನಗಾಗಲೆಂದು ಶಿಷ್ಯಂಗೆ ಬೇಸರವಿಲ್ಲದೆ
ಅವಸರಮಂಬಟ್ಟು, ಪರಮಸಂತೋಷದಿಂದ
ಆ ಶ್ರೀಗುರುನಾಥನು ಶಿವಪ್ರಣಮ ಪಂಚಾಕ್ಷರ ಷಡಾಕ್ಷರ ಸಾರಾಯಮಂ
ಸುವಿ [ವಾಚ್ಯ]ದಿಂದ ತಿಳಿತಿಳಿಯೆಂದಾತ. ನೀನೆ ಎನಗಲ್ಲವೆ ಎಲೆ ಲಿಂಗವೆ,
ನಿಜಗುರು ನಿರಾಲಂಬಪ್ರಭುವೆ. ॥ ೨೦ ॥

೧೩೧೬

ಮತ್ತಂ ಸಾಕ್ಷಿ : ಎಲೆ ಮಗನೆ ಯಾಕೊ ಬಾರೊ ಬಾರೆಂದು
ಕರೆದು ತನ್ನ ಕರಪಾತ್ರೆಯನು ಕೊಟ್ಟು, ಶಿರದ ಮೇಲೆ ಹಸ್ತವನಿಟ್ಟು,
ಈ ನರವಿಂಧ್ಯದೊಳಗೆ ಹರವಿಂದಲಟ್ಟು,
ಪ್ರಾಣಿಯಾಗು ನೀನೆಂದು ಇಷ್ಟಪ್ರಾಣಭಾವಾರ್ಥದಲ್ಲಿ
ಆ ಶ್ರೀಗುರುನಾಥನು ಶಿಷ್ಯಂಗೆ ತತ್ವಾರ್ಥನ್ಯಾಯಮಂ
ಹೇಳುವೆನೆಂದು ಪಾರಮಾರ್ಥ ಹೇ[ಳಿ],
ನಿಮಗೆ ಶ್ರೀಗುರುವಿನಾಜ್ಞೆ ಅಪ್ಪಣೆಯಿಂದ ಕರೆಯಬಂದೆವೆನಲು
ಅವೃಷ್ಟಪ್ರಾಣಿಗಳು ಹೇಳುವರಲ್ಲಾ,
ನಾವು ಬರುವುದಕ್ಕೆ ಹಾಸ್ಯವಾಗಿ ತೋರುತಿರ್ಪುದು.
ನಿನ್ನ ವಶದ ಬಲಿ ಸುಕೃತವನು ನಿಮಗೆ ಸ್ವಾಧೀನ ಮೀರಿತೆಂದು
ಬ್ರಹ್ಮೋಪಚಾರವಿಲ್ಲವೆಂದು ಪ್ರಲಾಪಿಸಲು,
ಆ ಮಹಾಗುರುದೇವನು 'ಎಲೆ ಮಗನೆ ಬಾರೆಂದು' ಕರೆದು,
ಅಲ್ಪಸುಖದುಃಖವದು ನಿನಗಿಲ್ಲದೆಹೋಯಿತು.
ಕಲ್ಪನೆ ಬಿಡುಗಡೆಯಾಗುವುದೆಂದು ಒಪ್ಪ ಹೆಸರುಗೊಂಡು,
ಮುಗ್ಧಸಂಗಯ್ಯನೆಂದನುಭವಿಸು.
ಮೃದುವಾಕ್ಯದಿಂದ ಹೃದಯದಲ್ಲಡಗಿ, ಶೂನ್ಯಸಿಂಹಾಸನದಲ್ಲಿ ಕುಳ್ಳಿರಿಸಿ,
ತನ್ನ ಕರುಳು ತೆಗೆದು ಕೊರಳಿಗೆ ಹಾಕಿ,
ಎನ್ನಳಿಯನೆಂದು ಮಾನಮನ್ನಣೆಯ ಕೊಟ್ಟು,
ಬಹುಮಾನದಲಿ ಶ್ರೇಷ್ಠನೆಂದು ಹೇಳಿಕೊಂಬುವಂಥದು
ಜ್ಞಾನಗುರುಮೂರ್ತಿ ನೀನೆ ಎನಗಲ್ಲವೆ,
ನಿಜಗುರು ನಿರಾಲಂಬಪ್ರಭುವೆ. ॥ ೨೧ ॥

೧೩೧೭

ಮತ್ತಂ ಸಾಕ್ಷಿ: ಎಲೆ ಮಗನೆ ಬಾ ಎಂದು ಕರೆಯಲು,
ಎನ್ನ ಬಾಳುವೆ ನೋಡಿದೆಯಾ, ಕರೆದ ಮಾತ್ರಕೆ ಸಮಾನವಾಗದಾಯ್ತು,
ಆದರಾಗಲಿ, ಆ ಅಧಮ ಚಾಂಡಾಲರು
ಏನೆಂಬುವರೆನಗೆ ಕೇಳಿದೆಯಾ ? ಕೂಳಗುದಗನೆಂಬುವರು.
ಮಾದರ ಚೆನ್ನಯ್ಯನೆಂಬ ಶಿವಶರಣನ ಅಂಬಲಿ ಸವಿದು ಕೊಳಗುದಗನಲ್ಲದೆ,
ಇಂಥ ಹಲವು ಮಾದಿಗರ ಭಕ್ತರ ಮನೆಯಲ್ಲಿ ತಿರಿದುಂಡು ಕೂಳಗುದಗನಲ್ಲವು.
ಬೋಳಶಂಕರ ನಾನಲ್ಲವು, ಎನ್ನನು ಬಹಳ ದರಿದ್ರನೆಂದು ಹೇಳುವರು.
ವಾದವಾಕ್ಯಗಳಲ್ಲಿ ನಾನು ದರಿದ್ರ, ಅನುಭವಿಸುವಂಥದು.
ಶ್ರೀರುದ್ರನ ಮಗನಾದ ವೀರಭದ್ರಗೆ ಎಚ್ಚರಲ್ಲದೆ,
ಈ ಕ್ಷುದ್ರ ದೈವ ನೀಚಾತ್ಮರು ನರರು ವಾರ್ಚಾಕರಿಗೆ
ಎನ್ನಾದರತ್ವ ಅಳವಟ್ಟೀತೆ ? ಅಳವಡದು.
ಎನ್ನನು ಅಪರಾಧಿ ನಿರಪರಾಧಿ ಪರಶಿವನೆಂದು
ಶರಣ ಸಂಗನಬಸವೇಶ್ವರನು ಕರುಣಿ ಗುರುರಾಯ ಅಲ್ಲಮಪ್ರಭು ಸಿದ್ಧನೊಳಗೊಂದು
ಪಂಚಪರುಷವೆಂಬ ಸಂಚಗಾರ ಕನ್ನ ತೆಗೆದುಕೊಂಡು,
ವಂಚನೆಯಲ್ಲಿದೆ ಅಪರಾಧಿ ಪರಶಿವನೊಳಗಾಡಿಕೊಂಡು,
ಕಲ್ಯಾಣ ಕಟಗೇರಿಯಾಗಲೆಂದು ಬೆಲ್ಲದ ಮಾತಿನಿಂದ ಮುಂಡಿಗೆಯನಿಕ್ಕಿ,
ಖುಲ್ಲ ಬಿಜ್ಜಳನ ವಾಕ್‌ವಾದವ ಗೆಲಿದು, ಮೂಲಪುರುಷನಾಗಿ,
ಬಾಲಲೀಲಾವಾಕ್ಯಗಳಿಂದ ಆದಿಸಂಗನಬಸವೇಶ್ವರನು
ಅನಾದಿ ಪರಶಿವನೊಳಗಾದುದೊಂದು.
ಈ ಅಧಮ ಚಾಂಡಾಲರು ಎಲೆ ಮಗನೆ
ಎನ್ನ ನಿನ್ನ ಸೋಲುಗೆಲುವೆನ್ನಬೇಕೆಂಬ ಮಾತನಾದರದಿಂದ
ಕಲಿಹುರ ದಯಾನಿಧಿ ನೀನೆ ಬಾಳುವೆಯಲ್ಲದೆ, ಜಾಳುಮಾತುಗಳಲ್ಲವೆಂದಾತ.
ಶ್ರೀಗ[ರ]ಳ ಗುರುಮೂರ್ತಿ ನೀನೆಯೆನಗಲ್ಲವೆ ಶರಭಲಿಂಗವೆ,
ನಿಜಗುರು ನಿರಾಲಂಬ ಪ್ರಭುವೆ. ॥ ೨೨ ॥

೧೩೧೮

ಮತ್ತಂ ಸಾಕ್ಷಿ: ಅಪ್ಪಯ್ಯ ಗುರುರಾಯನೆ ಕೇಳು.
ಎನ್ನರುವಿನಳಗೊಂದು ಪಿರಿದಪ್ಪ ದೊಡ್ಡಿತವಾದ
ಹೆಡ್ಡಕುರುಬನು ಮನೆ ಕಟ್ಟಿಕೊಂಡಿರ್ಪನು.
ಮನ್ಮಥ ವಿಕಾರದಿಂದ ಸನ್ಮತವಾಗಗೊಡೆಲೊಲ್ಲದೆ,
ಉನ್ಮನದಾಚಾರದಲ್ಲಿ ಪುಣ್ಯರೂಪ ವಿಚಾರವನು
ತಿಳಿಗೊಡದಾದ ಕಾರಣ, ಏನೆಂದರಸುವೆನು ಜ್ಞಾನಬಹನಾಗಿ.
ಮನಸ್ಸಾಕ್ಷಿಯಿಲ್ಲದೆ ಜನನಮರಣಂಗಳಲ್ಲಿ ಬಂಧಿಸಿರ್ಪುದು ಇಂದೆನ್ನ.

ನಿಮ್ಮ ಬಾಧ್ಯವೆಂದು ಕಂದನೆಂದು ಸಲುಹಿ,
ನಂದಿ ಮುದ್ರೆಯ ಕೊಟ್ಟು, ಬುದ್ಧಿಹೀನನ ಮಾಡದೆ,
ಬದ್ಧಭವಿಗಳ ಸ್ನೇಹದಿಂದ ಗುದ್ದಾಟವ ತಂದೊಡ್ಡದೆ,
ಮಾನವನೆಂದು ಕಾಣಿಸಿಕೊಳ್ಳದೆ ನಿಮ್ಮ ಶಿವಶರಣರ
ಸಂಗಸುಖಮಂ ಪರಿಣಮಿಸುವುದರಿಂದ
ಎನಗೆ ಜ್ಞಾನರಂಜನೆಯಾಗುವುದಲ್ಲದೆ,
ಧ್ಯಾನಿ ಸುಮ್ಮನಿರಬಾರದೆಂದು ನಿನ್ನನರಿದಾತ್ಮಾಂತರಂಗದಲ್ಲಿ ಮನವ್ಯಸನವಿಲ್ಲದೆ
ದಿನಂಪ್ರತಿಯಲಿ ಅಪ್ರತಿಮ ಮಹಿಮ ನೀನೆಂದು ಮನಮನ
ವತನದಲ್ಲಿ ಕುಳಿತು ಘನಪದಾರ್ಥಮಂ ಭೋಗಿಸುವೆನೆಂದು
ನಿಮ್ಮ ನಾಮದ ಬೆಡಗ ಆಡಿ ಹರಸುತಿರ್ಪುದೊಂದು.
ತಮ್ಮ ತಮ್ಮ ನ್ಯಾಯ ಹೊನ್ನು ಹೆಣ್ಣು ಮಣ್ಣಿನೊಳಗಿರ್ದುದು.
ಕಾರಣ ತನ್ನನ್ನು ಬೆನ್ನಟ್ಟಿ ಬಾರಿಸುವನಲ್ಲದೆ,
ತನ್ನ ಪ್ರತಾಪವನು ಕಣ್ಣಿನೊಳಗಿಟ್ಟುಕೊಂಡು
ಬಣ್ಣಕ್ಕೆ ಬಾರದಿರ್ದರೆ ನಿಮ್ಮಾಣೆ, ನಿಮ್ಮ ಪ್ರಮಥರಾಣೆ.
ಅಯ್ಯಾ ಗುರು ಮಹಾರಾಜಾ ಶಂಭೋ,
ಎನ್ನನ್ನು ನಿಮ್ಮ ಕಾರಣಿಕರ ಮಾಡಿ ಸಲಹು ಕಂಡಯ್ಯಾ ಎಲೆ ಲಿಂಗವೆ,
ನಿಜಗುರು ನಿರಾಲಂಬಪ್ರಭುವೆ. ॥ ೨೩ ॥

೧೩೭೯

ಮತ್ತಂ ಸಾಕ್ಷಿ : ಅಪ್ಪಯ್ಯ ಗುರುರಾಯನೆ ಕೇಳು :
ಈ ಅಳಿಯನ ಅಭಿಮಾನವನು ಹರಿಸೆ,
ನಿನಗಲ್ಲದೆ ಇಂಥ ಮೂಳ ಪರಮ ಚಾಂಡಾಲ
ಅಜ್ಞಾನ ಮೂಢಾತ್ಮರು ಬಲ್ಲರೆ ? ಅರಿಯರು.
ಪಂಥವ ಮಾಡುವರಯ್ಯಾ ಸಂತೆಯ ಸೂಳೆಮಕ್ಕಳಿವರು.
ಮತ್ತಿನ ಭಕ್ತರಲ್ಲದೆ ಚಿಂತೆ ಮಾಡುತಿರ್ಪರಯ್ಯಾ.
ಇಂತಿವರೊಳಗೆ ನಾನೆಂತು ಜೀವಿಸುವೆನಯ್ಯಾ.
ನ್ಯಾಯವಿಲ್ಲದ ಅನ್ಯಾಯವ ನುಡಿವವರ ಸಂಗದಿಂದೊಂದು
ಬೆಡಗು ಬಿನ್ನಾಣವಾಗಲು, ಮೃಡರೂಪದಿಂದುದ್ಭವಿಸಲಾಗ
ನುಡಜಾಣನಾದುದರಿಂದ ಇಂಥ ಗಾಢಮೂಢವಿದ್ಯೆಗಳೆಲ್ಲ ಬಲ್ಲೆವೆಂದು
ಮೂಢಾತ್ಮರು ಕಡುಕೋಪದಿಂದ ದುಡುಕುವರಲ್ಲದೆ,
ಬಡಿವಾರಮಂ ಸಾಕುಸಾಕೆಂದು ಮತ್ಸರವೆಂಬ ಛಲವನು ಗಟ್ಟಿಗೊಂಡು
ಎಚ್ಚರಿಲ್ಲದೆ ಹುಚ್ಚುಚ್ಚಾಗಿ ಬೊಗಳುವರಯ್ಯಾ ನಿಮ್ಮನರಿಯದಧಮರು.
ನಾ ನಿಮ್ಮ ಅಚ್ಚಪ್ರಸಾದಿಯಾಗಿ ಮುಂಚೆ ಹೋಗಬಾರದೆಂದು
ಸಂಚಿತಕರ್ಮವನು ಅಂಜಿಕೆಯಿಂದ
ನಿಮಗರ್ಪಣವ ಮಾಡಿ ಮುಚ್ಚಿಕೊಂಡಿರುವೆನಲ್ಲದೆ,

ಮೂರಾರು ಮುವತ್ತಾರು ಉತ್ತರಕ್ಕೆ ಆದುದು ಅರುವತ್ತಾರು.
ತೊತ್ತಿನೊಳಗೊಂದು ಸತ್ಯ ಅನಿತ್ಯವಿಲ್ಲದೆ, ಉತ್ತಮಾಂಗದಲ್ಲಿ ಚಿತ್ತಪಲ್ಲಟಲಾಗದೆ
ಎತ್ತಿ ಮುದ್ದಾಡುವಂಥದು. ಸತ್ಯಮಂ ಕೊಡು ಕೊಡು ಎಂದು
ಸ್ತೋತ್ರವ ಮಾಡುವಂಥದೆ ಗುರು ಶಂಭುಲಿಂಗವೆ.
ನಾನಾವ ಕಡೆಯಲಿ ಅದ್ವೈತರೂಪವಾದುದೊಂದು
ಆತ್ಮವಿಚಾರವನು ತಿಳಿಗೊಡದೆ, ದೇವತಾಪುರುಷನಾಗಿ,
ಸ್ವಾಭಾವಿಕ ನೀನಲ್ಲದೆ, ಆ ಮಹಾಗುರು ದೈವವೆಂದು
ನಮೋ ನಮೋ ಎನುತಿರ್ದೆನಯ್ಯಾ.
ನಮಸ್ಕಾರವೆಂದು ನಿಮ್ಮ ನಾಮಸ್ಮರಿಸುತಿರ್ಪೆನಯ್ಯಾ,
ಅಯ್ಯಾ ಎಲೆ ಲಿಂಗವೆ, ನಿಜಗುರು ನಿರಾಲಂಬಪ್ರಭುವೆ. ॥ ೨೪ ॥

೧೩೨೦

ಮತ್ತಂ ಸಾಕ್ಷಿ: ಅಪ್ಪಯ್ಯ ಗುರುರಾಯನೆ ಕೇಳು, ಎನ್ನಯ ತಾಪತ್ರಯಮಂ.
ವಿಚಿತ್ರದಿಂದ ನಿನ್ನನು ಕಾಡುವುದಲ್ಲದೆ, ಸತ್ಪಥ ಸನ್ಮಾರ್ಗದಲಿ
ಸಾಧು ಸತ್ಪುರುಷರ ಸಂಗದಿಂದೊಂದು ಉದ್ಯೋಗಮಂ ನೇಮಿಸಲು,
ಬಹುಲಾಭದೊಳಗಾದ ಸದ್ಗುರುವೆ ನೀನೆಂದು ಕೂಡಿಕೊಂಡು,
ಶುದ್ಧ ಕರುಣಾಮೃತವು ಸಿದ್ಧಪ್ರಸಾದವವನುಭವಿಸಿ,
ಇಂದ್ರಿಯ ಪಂಚಂಗದ ವ್ಯಾಪಾರ ನಾಟಿ, ಮುದ್ದಿ ಬೆಲ್ಲವಂ ತೂಗಿ ಕೊಟ್ಟು
ಬುದ್ಧಿಹೀನರಿಗೆ ಗದ್ದಲವ ನಡೆಸಿ, ಗುದ್ದಾಟವನಿಕ್ಕಿ,
ಕಡಿಕಲ್ಲು ಕಾಣೆ ತಕ್ಕಡಿ ಎರಡೊಂದರಲ್ಲಿ ನಿನ್ನ ಮರಿಯಾದೆಯೆಂಬುವಂಥದು
ನೀನೆ ಬಲ್ಲೆಯಲ್ಲದೆ ಮತ್ತಾರೂ ಅರಿಯರು.
ಉತ್ತಮರು ಸತ್ಯಶಿವಶರಣರು ನಿಮ್ಮನೆ ಹಾಡಿ ಹರಸುತಿರ್ದರಲ್ಲದೆ
ತಮ್ಮತಮ್ಮೊಳಗೆ ಅಡಕವಾದ ಭಾವಾರ್ಥಂ
ಸುಮ್ಮನಿರಲು ಸಂತೆಯ ವ್ಯಾಪಾರ ನಡೆಯಲು,
ಅಂತರ್ಭಾವದಲ್ಲಿ ನಿಶ್ಚಿಂತನಿವಾಸಿಗಳಾದ ಉತ್ತಮಪುರುಷರು
ಕೆಟ್ಟದಿನಸಿನ ಪದಾರ್ಥದೊಳಗೊಂದು ವಚನಾಭಿಪ್ರಾಯವನು
ಸೇವಿಸುತಿರ್ಪರು.
ಸೇವಿಸುವುದರಿಂದ ಮುಡದಾರಸಿಂಗಿ ಕಾಳಕೂಟವಿಷವನು
ಉಳಿಸಿಪ್ಪಗಾಗಲೊಲ್ಲದೆ,
ಹರಗಾಲ ಬರಗಾಲ ಹೊರಗಾಲ, ಇವು ಮೂರು ತ್ರಿವಿಧಾವಸ್ಥೆಗಳಲ್ಲಿ
ಪಾಷಾಣ ಗಟ್ಟಿಗೊಂಡು, ನಿಜಶ್ರವಣಮಾಗಿ,
ಪ್ರಣಮದಿಂದ ಉದ್ಯೋಗವನು ನಡಸುತಿರ್ಪರಯ್ಯಾ.
ಬದಲಾಮಿ ತೂಕದಿಂದನುಭವಿಸುವಂಥದು,
ಉದ್ದಿಮೆಯೊಳಗೆಲ್ಲ ಬದಲಾಮಿ ಅಜ್ಞಾನಕ್ಕೆ ಮೊದಲು ಬದಲಿಲ್ಲವೆಂದಾತ,
ನೀನಲ್ಲ[ವೆ] ಎಲೆ ಶಂಭುಲಿಂಗವೆ, ನಿಜಗುರು ನಿರಾಲಂಬಪ್ರಭುವೆ. ॥ ೨೫ ॥

೧೩೨೧

ಮತ್ತಂ ಸಾಕ್ಷಿ: ಅಪ್ಪಯ್ಯ ಗುರುರಾಯನೆ ಕೇಳು :
ಗುರುದೈವವೆಂದು ಮಮಕರ್ತನೆಂದನುಭವಿಸಿ,
ಆ ಮಹತ್ತರೊಳು ನಮಃ ಶಿವಾಯ, ನಮೋ ಹರಾಯವೆಂದೆಂಬ
ಪಂಚಾಕ್ಷರ ಮೂಲದ್ವಾರಮಂ ತಿಳಿದು,
ಸಿದ್ಧಂ ಶಿವಗಾರಾಧ್ಯನಾಗಿ, ತಮಗೆ ಬಂದ ಪದಾರ್ಥಮಂ ಭೋಗಿಸಿ,
ಆ ಮಹಾಗುರು ದೈವವೆಂದು ನಾಮವೆಂಬುದಕ್ಕೆ ಬಹುಮಾನಗಾರನಾಗಿ,
ಮಾತನಾಡದೆ ಬಾಯಿ ಬಿಚ್ಚಾಡದೆ,
ವಿವೇಕದಿಂದ ಸ್ವಾಭಾವಿಕರಿಗೆಲ್ಲ ಆನಂದದಲ್ಲಿ ಕುಳಿತು,
ಅ ಆ ಇ ಈ ಉ ಊ ಎ ಏ ಐ ಒ ಓ ಔ ಅಂ ಅಃ ಎಂಬುದರೊಳಗೊಂದು
ಎನ್ನ ಸ್ವಾಭಿಮಾನಿಗಳು ಬಲ್ಲರೆಂದು ಹೇಳುತಿರ್ಪನಲ್ಲದೆ,
ಆಹಾ ನಾನು ಪೂರ್ಣವಿಲ್ಲದೆ ಜ್ಞಾನಭಾವದಿಂದೊಡಗೂಡಿ
ಏನೇನೂ ಅರಿಯದ ಮೂರ್ಖನು, ಮನಬಂದಂತೆ ಕೂಗುತಿರ್ಪನು.
ಎನ್ನ ಮೂರ್ಖತ್ವಮಂ
ತನ್ನೊಳಡಗಿದ ನ್ಯಾಯತಾರ್ಥ ಯಥಾರ್ಥ ಕೃತಾರ್ಥ ಭಾವಾರ್ಥಮಂ
ನೀನೆ ಬಲ್ಲೆಯಲ್ಲದೆ ನಾನರಿಯೆನು.
ಈ ಸುಕೃತಮಂ ಅಸುವಿಗಾಧಾರವಾಗಿ, ಅಶ್ಯೋಪಚಾರದಲಿ ವೇಷಧಾರಿಯಾಗಿ
ಮಾಸಾಭ್ಯಂತರದಲಿ ಮರೆದೆಯಾದರೆ,
ನಿಮ್ಮ ಧರ್ಮ, ನಿಮ್ಮ ಸ್ವಧರ್ಮವಲ್ಲವೆ.
ಅಯ್ಯಾ ಎಲೆ ಲಿಂಗವೆ, ಗುರು ಶಂಭುಲಿಂಗವೆ,
ನಿಜಗುರು ನಿರಾಲಂಬಪ್ರಭುವೆ. ॥ ೨೬ ॥

೧೩೨೨

ಮತ್ತಂ ಸಾಕ್ಷಿ : ಅಪ್ಪಯ್ಯ ಗುರುರಾಯ,
ನಾನಾ ಅವಸ್ಥೆಗಳಲ್ಲಿ ಜ್ಞಾನಬಾಹ್ಯನಾಗಿ
ಹೀನಸಂಸಾರವೆಂಬ ಸಾಗರದಲ್ಲಿ ತೇಲುತ್ತ ಮುಳುಗುತ್ತ ಕಾಣಲೊಲ್ಲದೆ,
ವ್ಯರ್ಥಸ್ಯ ಕೆಡುವುದು, ಮಾನಗೇಡಿ ಭಂಗಗೇಡಿಯಾಗಿ ತಿರುಗುವುದು,
ಏತರಿಂದಲೂ ಜೀವ ಶಿವರುಭಯಭಾವವನು ಒಂದೆಯೆಂದು ತಿಳಿದಾದ ಕಾರಣ,
ಮಾತು ಮಾತಿಗೆ ಸಿಟ್ಟುಸೂತಕ ಜಾತಿಸೂತಕ ಜನನಸೂತಕ ಬಂಧವು.
ಅಜ್ಞಾನವಶದಿಂದ ನಾನು ನನ್ನನ್ನು ಮರೆದಾದ ಕಾರಣ,
ಭಾನುಪ್ರಕಾಶ ಬ್ರಹ್ಮಾಂಡದೊಳಗೊಂದು ಪಿಂಡಾಂಡ
ಖಂಡಿತಾರ್ಥನ್ಯಾಯಮಂ
ತಾನೆ ತಾನಾಗಿ ಇಹುದರಿಂದ
ಈ ಅನರ್ಥಯದಿಂದ ಅನುಭವಿಸುವಂಥ ಪ್ರಾರಬ್ಧವನು
ಅನ್ಯತಾರ್ಥವೆಂದು ತಿಳಿದು, ತನ್ನೊಳಗೊಂದು ವಿಚಾರಮಂ ಗೋಪ್ಯವಾಗಲು,

ಆ ಜ್ಞಾನಗುರುಮೂರ್ತಿಗಳು ಬಂದು,
ತನು ಮನ ಧನ ಸಾಕ್ಷೀಭೂತನಾಗಿ, ಜನನಮರಣಂಗಳಲ್ಲಿ ತಪ್ಪುಗನ ಮಾಡಿ,
ಮುಪ್ಪು ಆವರಿಸಿಕೊಂಡು ತಿಪ್ಪೆ ಉಪ್ಪರಿಗೆಯಾಗಲೆಂದು
ತನ್ನ ಚರಣಕಮಲಮಂ ಜೋಡಿಸಿ, ನಮಸ್ಕಾರದಿಂದ ನಮಸ್ಕರಿಸಿ,
ಕರ್ಣಬೋಧಮಂ ತುಂಬಿ,
ವರ್ಣನಾಮಾಶ್ರಯದಿಂದ ತಿರುದುಂಡು ಬಾಳೆಂದು ಅಪ್ಪಿ
ಮುದ್ದಾಡುವಂಥದು,
ನಿಮ್ಮ ಧರ್ಮವು. ನಿಮ್ಮ ಸ್ವಧರ್ಮವಲ್ಲದೆ
ಎನ್ನನು ಒಪ್ಪ ಹೆಸರುಗೊಂಡು ಕರೆವವರ ನಾನಾರನು ಕಾಣೆನಯ್ಯಾ,
ಎಲೆಲಿಂಗವೆ, ಗುರು ಶಂಭುಲಿಂಗವೆ, ನಿಜಗುರು ನಿರಾಲಂಬಪ್ರಭುವೆ. ॥ ೨೭॥

೧೩೨೩

ಮತ್ತಂ ಸಾಕ್ಷಿ : ಅಪ್ಪಯ್ಯ ಗುರುರಾಯ ಕೇಳು :
ಎನ್ನ ತಿಪ್ಪೆಗೆ ಪಟ್ಟಮಂ ಕಟ್ಟಿ, ದಿಟ್ಟನಹುದೆಂದೆನಿಸಿ,.
ಬಟ್ಟಬಯಲೊಳಗೊಂದು ಅಟ್ಟುಳಿಗನ ಮಿಂಡಗ ಮಗನೆಂದು,
ಹೊಟ್ಟೆವುರಿಗೆ ಸೂಳೆಮಗನೆ ಅಹೋ ಬಾಯೆಂದು ಕರೆಯಲು,
ನೆಟ್ಟನೆ ಮಾತಿಗಾಗಿ ಕೋಪವಿಲ್ಲದೆ ದಿಟ್ಟವಾಕ್ಯನು ಸೃಷ್ಟಿಕರ್ತನ
ಮಾಡಿಬಿಟ್ಟಿತಲ್ಲದೆ,
ದಿಟ್ಟ ನಾನು ಭ್ರಷ್ಟರ ನಡೆನುಡಿಯನು ಆವರಿಸಿಕೊಳ್ಳದೆ,
ಕಷ್ಟಕರ್ಮವೆಲ್ಲ[ವು] ಅಷ್ಟದಿಕ್ಪಾಲಕನ ಸೇರಿದವು.
ಎಷ್ಟಕ್ಕಷ್ಟೆ, ಸರಿಮಾಡಿ ಪರಿತಾಪಮಂ ಬೋಧಿಸಿ,
ಅಷ್ಟಕಷ್ಟೆ ಅನುಕೂಲ ಶಿವಾನುಕೂಲವಾಗಲು,
ಜ್ಞಾನದ ಬಯಕೆಯದು ತೀರುವುದಲ್ಲದೆ,
ಒಟ್ಟುಕಷ್ಟ ವಂಶಪಾರಂಪರ್ಯ ಗುರುಶಿಷ್ಯನಿಗೆ
ಶರಣಸಂತತಿಗಳಿಗೆ ಹರಗಣಸ್ತೋಮವನು ಬೆರೆದೇಕಮಯವಾಗುವುದು.
ಇದರ ವಿವರವನು ಅರಿಯದ ಮುರ್ಖರಿಗೆ ಆದಿವ್ಯಾಧಿಕಷ್ಟಗಳು ಕಾಡುವುದೆ
ಸಾಕ್ಷಿ.
ಉದರ ನಿಮಿತ್ಯದ ಉರುಲುಗಳ್ಳರಿಗೆ ಒದರಿಕೊಂಬುವುದೆಂತಯ್ಯಾ.
ಏತಕಯ್ಯಾ ಎಲೆ ಲಿಂಗವೆ, ಗುರುಶಂಭುಲಿಂಗವೆ,
ನಿಜಗುರು ನಿರಾಲಂಬಪ್ರಭುವೆ. ॥ ೨೮ ॥

೧೩೨೪

ಮತ್ತಂ ಸಾಕ್ಷಿಃ ಎಲೆ ಮೆಚ್ಚುಗಾರನಾದ ಹುಚ್ಚುಮಗನೆ ಕೇಳೊ.
ಎನ್ನ ವಾಚ್ಯಸಿದ್ಧಿಗಳಿಷ್ಟು.
ಈ ಲೋಕದಲ್ಲಿ ವಾಕ್‌ವಾದವ ಕಲಿತು,

ವಾಕ್ಯಾನುಸಾರಮಂ ಅರಿಯದೆ, ದುಃಖದೊಳಗಿಲ್ಲದವರಾಗಿ
ಕಕ್ಕುಲಾತಿಯೆಂಬ ದುಃಖಪ್ರಾಪ್ತಿಗೊಳಗಾಗಿ ಹೋಗುವರಲ್ಲದೆ,
ಸೊಕ್ಕಿನಿಂದ ಅನುಭವಿಸುವಂಥ ಅಧಮರು
ಎನ್ನ ವಚನಸಿದ್ಧಿಯನು ಪಡಕೊಂಡವರೆಷ್ಟು ?
ಸೂಚನಬಿನ್ನಹ, ಗಟ್ಟಿಬಿನ್ನಹ ನಡೆಸುವರಲ್ಲದೆ,
ವಚನಾಮೃತಮಂ ಸವಿದುಂಡು ಕಾಲಸೂಚನವ ಚೆನ್ನಾಗಿ ಹೇಳುವವರಿಗೆ
ಮೂಲಪ್ರಣಮ ಪಂಚಾಕ್ಷರ ನಾಲಿಗೆಯಲ್ಲಿ ಅಡಕವಾಗಿರ್ಪುದು.
ದೃಢಮನ ನಂಬಿಗೆಯುಳ್ಳವರಿಗೆ ಬೆಡಗು ಕೂಗುತಿರ್ಪುದು,
ಮಡಿ ಮಾನ್ಯಗಳ ನಡೆಸುವುದು.
ಹಾಳಹರಟೆ ಪುರಾಣಗಳನ್ನು ಕಲಿತು,
ಖಾಲಿ ದುರ್ವ್ಯಸನದಿಂದ ಜಾಳುಮಾತುಗಳನಾಡುವವರ ಕಂಡು,
ಕೇವಲ ದಾರಿದ್ರರೆಂದು ಹೇಳುವುದು.
ನಮ್ಮ ಶಿವಶರಣರ ವಾಕ್ಯವನು ವಚನಾನುಭಾವವನು
ಮೂಲಪುರುಷರಾಗಿ ಹಾವಿನಹಾಳ ಕಲ್ಲಪ್ಪಯ್ಯಗಳ
ಸಾಕ್ಷಿಯಿಂದೊಡಗೂಡಿದವರ ಸಾಕ್ಷಿ.
ಜೀವನ ಹಾಳು ಮುದನಹಾಳು ಹುಚ್ಚವೀರಪ್ಪಯ್ಯನೆಂದು ಹೆಸರಿಟ್ಟು
ಕರೆವೆನಲ್ಲದೆ ವಾಚಿಕನಾಗಿ ಜಗಳಾಡುವಂಥದು,
ಎಲೆ ಮಗನೆ, ನಿನ್ನ ಜ್ಞಾಪಕವಲ್ಲವೆಂದಾತ.
ನೀ ಎನ್ನೊಳಗಲ್ಲವೆ ಎಲೆ ಲಿಂಗವೆ, ಗುರು ಶಂಭುಲಿಂಗವೆ,
ನಿಜಗುರು ನಿರಾಲಂಬಪ್ರಭುವೆ. ॥ ೨೯ ॥

೧೩೨೫

ಮತ್ತಂ ಸಾಕ್ಷಿ : ಎಲೆ ಮಗನೆ ಕೇಳು.
ಇಂದಿನ ದಿವಸವೆಂದು ನಾಳಿನ ದಿವಸವನು ತಿಳಿದೆನೆಂಬುದೆ ಗಟ್ಟಿತನವ
ಆಗಗೊಡದು.
ಸುಳ್ಳೆನಲಾ ಜಗವ ನಡೆಸುವಂಥದು ತಳ್ಳಿಗಾರನ ಸಂಗವಲ್ಲದೆ,
ಬಳ್ಳೇಶ ಮಲ್ಲಾರ್ಯರು ಇದೇ ಸುದಿವಸವೆಂದು ನಂಬಲು,
ಬಳ್ಳದಲ್ಲಿ ಪ್ರತ್ಯಕ್ಷವಾಗಲಿಲ್ಲವೆ ?
ಇದು ಸುಳ್ಳೆಂದವರಿಗೆ ಯಮನ ಬಾಧೆ ಬಿಡದು, ತಪ್ಪಲರಿಯದು.
ವಿಧಿಪ್ರತಾಪ ಬಿಡುಗಡೆಯಾಗುವುದು.
ತಂದೆತಾಯಿಗಳ ಪೂಜಿಸಿದಂಥ ಗುರುಭಕ್ತಂಗೆ
ಇಂದಿನ ದಿವಸವೆ ಸುಭಿಕ್ಷಕಾಲವೆಂದು ನಂಬಿಗೆಯಾದ ಕಾರಣ
ಅವಿಮುಕ್ತಕ್ಷೇತ್ರದಲ್ಲಿ ಶಿವನೊಳಗಡಕವಾಗಲಿಲ್ಲವೆ ?
ಈ ಮಾಯಾಂಶಿಕವಾದ ಅಧಮರು,
ತಮ್ಮ ತಂದೆತಾಯಿಗಳ ನಿಂದಿಸುವುದರಿಂದ ಬಂಧನ ಪ್ರಾಪ್ತಿಗೊಳಗಾಗಿ.

ಇಂದು ಶ್ರೀಗುರುನಾಥನೆಂದರಿಯದೆ, ಬೆಂದಮನ ನಿಲುಕಡೆಯಿಲ್ಲದೆ,
ಅದು ನನ್ನದು, ಇದು ನನ್ನದುಯೆಂದು
ಸಂದೇಹ ದುರ್ಮನ ಮೂಢರು ಇಂದ್ರಜಾಲದಲ್ಲಿ ಮುಳುಗುವರಲ್ಲದೆ,
ಮಹೇಂದ್ರಜಾಲ ಇವರಿಗೆ ಬಾಲಬಡಕರಿಗೆ ನ್ಯಾಯತಾರ್ಥವಾಗದು.
ಬಿಂದು ನಿಗ್ರಹವ ಮಾಡದೆ,
ಮಹೇಂದ್ರಜಾಲವನು ಬಲ್ಲೆವೆಂದು ಹೇಳುವರ ಬಾಯಲ್ಲಿ
ತೊಂದರೆನುಡಿ ತೊದಲ್ನುಡಿ ಬೊಗಳಿಕೊಂಬುವುದೆ ಸಾಕ್ಷಿಯಿಲ್ಲದೆ.
ಇಂದಿನ ಸುಕೃತವಾಗಲರಿಯದು, ಅಂದಿನ ಜನ್ಮವದು ತಪ್ಪದು.
ಈಗಿನ ಅವಸರಮಂ ಬಿಟ್ಟು, ನಾಳಿನ ಬೇಸರಮಂ ಮರೆದು,
ಹೊ[ಗ]ಳಿಗನಾಗಿ ತೆತ್ತಿಗನಾಗಿ, ದಾಳೇಂದ್ರಿಪರ್ವತದಲ್ಲಿ
ಮಾತಂಗನೆಂಬ ಮಂತ್ರಶಕ್ತಿಯಳ ಮಾತೃಸ್ಥಾನವೆಲ್ಲವನು ಅಳವಟ್ಟು,
ಬಾಲಲೀಲಾ ವಾಕ್ಯಗಳಿಂದ ಹೇಳಿಕಿ ಕೇಳಿಕಿ ಕಳವಳಕಿ ತಿಳಿತಿಳಿದಾಡುವಂಥದು.
ಚೆಲುವ ಸಾಂಬ ಶ್ರೀಗುರುನಾಥನೆಂದು ಹೇಳುವೆಯಲ್ಲವೆ
ಎಲೆ ಲಿಂಗವೆ, ಗುರುಶಂಭುಲಿಂಗವೆ, ನಿಜಗುರು ನಿರಾಲಂಬಪ್ರಭುವೆ. ॥೩೦॥

೧೩೨೬

ಮತ್ತಂ ಸಾಕ್ಷಿ : ಎಲೆ ಮಗನೆ ಕೇಳು :
ಬೆಳಗು ಮುಂಜಾನೆಯೆದ್ದು ಸೂಳೆಸೋಗು ಹಾಕಿಕೊಂಡು,
ತಿಳಿನೀರು ತೆಂಗಿನ ನೀರು ಪನ್ನೀರು ಇಂದುಮಡಿಯನುಟ್ಟು,
ಅಂದಚೆಂದವಾದ ವಸ್ತ್ರಾಭರಣಂಗಳೆಲ್ಲವನಿಟ್ಟುಕೊಂಡು,
ನೀ ನಿರಾಕಾರವಾದ ನೀರುವತ್ತು[?] ಬರುವಂಥದು.
ನಾ ಕಂಡು ಬೆರಗಾದೆನಲ್ಲದೆ, ಎನ್ನ ನೀ ಮರೆಯದೆ ತಿಳಿ.
ನೀರು ಪಾದದಲ್ಲೆರದು, ಸುಳಿನಾಭಿ ಮೂಮಧ್ಯದಲ್ಲಡಗಿರ್ದ
ತಾರಕತ್ರಯ ವಿಚಾರವೆಂಬ ಪತ್ರೆ ಪುಷ್ಪ ಸುಗಂಧ ದ್ರವ್ಯಂಗಳೆಲ್ಲವನು
ಪಾದಕ್ಕೆ ಏರಿಸಲು ಪೂಜಿಸಲು,
ಆಮೇಲೆ ಮಾಂಗಲ್ಯಸ್ವರೂಪವಾದ ತೆಂಗಿನ ನೀರು
ಮಂಗಳಾರತಿಯನು ಎತ್ತಿ, ಕಂಗಳ ಬೆಳಗಿನಿಂದ ಕರಮಂ ಜೋಡಿಸಿ,
ಜಯಜಯ ಮೃತ್ಯುಂಜಯನೆಂದು ಮಂಗಳಾರತಿಯನಾಡುವುದರಿಂದ
ಕಾರಣಾಂಗವೆಲ್ಲ ಗುರುಕರುಣವಾಗಿ, ಶರಣು ಶರಣಾರ್ಥಿಯೆಂದು
ನಮಸ್ಕರಿಸಲು,
ಶ್ರೀಗುರುನಾಥನು ತಿಳಿನೀರು ತೆಂಗಿನ ತೀರು
ಎರಡರೊಳೊಂದು ಮೃಡ ಸಮರ್ಪಣವಾಗಲು, ಪನ್ನೀರ ಪ್ರತಾಪವಿರಲು
ಅಮಾನ್ಯ ಸಾಮಾನ್ಯವೆಂದು ಹೇಳಿಸಿಕೊಳ್ಳದೆ
ಚೆನ್ನಿಗ ವಿಟಪುರುಷನಾಗಿ, ಸೂಳೆಸೋಗಿಗೆ ಮೆಚ್ಚಿ, ಪನ್ನೀರು ನೇವರಿಸಿಕೊಂಡು,
ಮೊದಲ್ ವೀಳ್ಯವನು ಕೊಡುಕೊಡುಯೆಂದು ಸೆಳೆಮಂಚದಲಿ ಕುಳಿತು

ವೀಳ್ಯದ ಸವಿಗಾರನು ಜಾಲವನು ಹಾಕಿ, ಬಾಲಬೋಧಮಂ ಕೊಟ್ಟು,
ಉಳಿಸ್ಯಾಡಿ ಕುಲಗೆಟ್ಟು ಬೆಳಗಾದ ಮೇಲೆ,
ಹುಳ್ಳಗಿರು ಹೊರಗು ಬಾರದಿರು ಕಂಡ್ಯಾ ಎಂದು
ಗಳಿಗೆ ಗಳಿಗೆ ಎಚ್ಚರಮಂ ಹೇಳಲು,
ಆ ಬೋಳಶಂಕರ ಶ್ರೀಗುರುನಾಥನು,
ಎಲೆ ಮೂಳ ಹೊಲತಿ ಎನ್ನ ಬಾಳುವೆ
ಜೋಪಾನದಿಂದ ಮಾಡು ಕಂಡ್ಯಾ ಎಂದು ಹೇಳುವೆ ನೀನೆಯಲ್ಲವೆ,
ಎಲೆ ಲಿಂಗವೆ ಗುರುಶಂಭುಲಿಂಗವೆ, ನಿಜಗುರು ನಿರಾಲಂಬಪ್ರಭುವೆ. ॥ ೩೧ ॥

೧೩೨೭

ಮತ್ತಂ ಸಾಕ್ಷಿ : ಅಪ್ಪಯ್ಯ ಗುರುರಾಯ ಕೇಳು :
ಕಾಳುದೇಹದೊಳಗೊಂದು ಕೀಳುಜೀವನುದ್ಭವಿಸಿ, ತೇಲುಮೇಲಾಗುವುದಲ್ಲದೆ,
ಇಂದ್ರಜಾಲವಿದ್ಯೆಯನು ಕಲಿತು, ತಾಳದ ಮರದುದ್ದನಾಗಿ ಬೆಳೆದು
ಕೂಳುನೀರುಗಾಣದೆ ಕಳ್ಳರಕ್ಕಸರ ಕೈಯಲ್ಲಿ ಸಿಕ್ಕು ಕೋಲಾಹಲನಾಗಿ
ಬಡಿಸಿಕೊಂಬುವಂಥದು.
ತನ್ನ ಗಂಡು ಹೆಣ್ಣಿನ ಅಂಗವಿಕಾರದಿಂದ ಕಂಗೆಟ್ಟು ತಿರುಗಬಾರದೆಂದು
ಮೂಲದ್ವಾರಮಂ ತಿಳಿಸಿಕೊಡಿರೆಂದೆನಲು,
ಕೀಳುಜೀವವನು ಬೇಡಿಕೊಳ್ಳುವುದು, ಬಾಡಿಗೆ ದುಡಿವಂಥದು,
ಸಾಕುಸಾಕೆಂದು, ಎನ್ನ ನುಡಿಯ ಗುರುರಾಯ ಕೇಳುಕೇಳೆಂದು,
ಅನಂತಕಾಲ ನಿಮ್ಮನು ಮರೆದ ಕಾರಣ,
ಈ ನಿಮಿತ್ಯದಿಂದ ಅಜ್ಞಾನಜೀವನಾಗಿ,
ಜ್ಞಾನವಿಲ್ಲದೆ, ತನ್ನಂತರಂಗದ ಶುದ್ಧಿಯನು
ತನಗೆಚ್ಚರವಿಲ್ಲದೆ ಮುನ್ನಿನ ಸ್ವಭಾವವನು ಮರೆದು,
ಇನ್ನಾವ ಗತಿ ಹೊಂದುವೆನೆಂದು ನಿಮ್ಮ ಶ್ರೀಚರಣಕಮಲದಲಿ ಶಿರಬಾಗಿ,
ಕರಕಮಲಮಂ ಜೋಡಿಸಿ,
ಸ್ತೋತ್ರದಿಂ ನೇತ್ರಾಭಿಧಾನಂಗಳು ಪಾತ್ರ ಪವಾಡವಾಗಲೆಂದು
ಸತ್ಪಥಮಾರ್ಗದಲ್ಲಿ ಗುರುಪಥವಾಗಲು,
ಗುರುವಿಗಿಂದಧಿಕ ಪರದೈವವೆನಗಿಲ್ಲವೆಂದು
ಪರಮ ಶ್ರೀಗುರುವೆ ನಮೋ ನಮೋ ಎಂದು
ನಮಸ್ಕರಿಸುತ್ತಿದ್ದೆನಯ್ಯ ಅಪ್ಪಯ್ಯಾ,
ಗುರುರಾಯ ಗುರು ಶಂಭುಲಿಂಗವೆ, ನಿಜಗುರು ನಿರಾಲಂಬಪ್ರಭುವೆ. ॥೩೨॥

೧೩೨೮

ಅಪ್ಪಯ್ಯ ಗುರುರಾಯ ಕೇಳು.
ಏನು ಹಾಡಿದರೇನು ಏನು ಓದಿದರೇನು,

ನಿಮ್ಮನುಭಾವವನರಿಯದನ್ನಕ್ಕರ ಎನ್ನಗಿನ್ನಾವ ಪರಿಯಲಿ
ಜ್ಞಾನ ಸಮ್ಮಿಶ್ರವಾಗುವುದಯ್ಯಾ ?
ಅಜ್ಞಾನ ಪರಿತಾಪವಮಂ ಭೋದಿಸುವುದಲ್ಲದೆ,
ಈ ನ್ಯಾಯ ಇನ್ನಾರಿಗೆ ಹೇಳುವೆನಯ್ಯಾ ?
ಅಯ್ಯಾ ನಾನೊಂದು ಸ್ತೋತ್ರವ ಮಾಡಲು,
ಅಜ್ಞಾನವನೆಲ್ಲ ತಾನೊಂದು ನ್ಯಾಯವ ಮಾಡುವುದಲ್ಲದೆ,
ನಾನತ್ತಲೆಳೆದರೆ ತಾನಿತ್ತಲೆಳೆವುದು.
ಬೀಳಭೂಮಿ ಹಸನಾಗಲೊಲ್ಲದೆ,
ಜಾಣ ಬಿತ್ತಿಗೆಯ ಬಿತ್ತಿದರೆ ಬೆಳೆಯುವುದೆಂತಯ್ಯಾ ?
ಸುಳಿಗಾಳಿ ಬಡಿದು ಕೆಟ್ಟುಹೋಗುವುದಲ್ಲದೆ,
ಈ ಮೂಳಹೀನನ ಮನಸಿಗೆ
ನಾನು ಬೆಳೆದುಂಡೆನೆಂಬುವಂಥದು ಜ್ಞಾನವಿಲ್ಲದೆ ಹೋಯಿತು.
ಕೂನವಿಲ್ಲದೆ ಅನುಭವಿಸುವಂಥ ಮಾನಕ್ಕೆ ಕೊರತೆಯಾಗಿ,
ಜ್ಞಾನಬಾಹ್ಯನಾಗಿ ಸ್ನೇಹದುರ್ಲಭದಿಂದ ಕಾಡುವ
ಮಾಯಾ ಪ್ರಪಂಚದ ಸವಿಗಾರನು
ಕಾಯಕರ್ಮವೆಂಬ ಹೊಲಗೇರಿಯಲ್ಲಿ ಕುಳಿತು ಅನ್ಯಾಯವ
ನುಡಿಯುತಿರ್ಪನಲ್ಲದೆ,
ತನ್ನತಾ ಸಾಕ್ಷೀಭೂತನಾಗಿ, ಭಿನ್ನ ಭಾವಾರ್ಥಮಂ ಮರೆದು ಸುಮ್ಮಗಿರಲೊಲ್ಲದೆ
ಹಮ್ಮು ಅಹಂಕಾರದಿಂದುರಿದು,
ದಮ್ಮಿನ ಮಾತುಗಳನಾಡಿ ಸಮಯವ ಸಾಧಿಸಿಕೊಳ್ಳದ
ಅಗಮ್ಯದಿಂದ ಹೊಟ್ಟೆಹೊರಕೊಂಬುವನ ಪ್ರತಾಪವಮಂ ಏನೆಂದು ಹೇಳಲಿ,
ಯಾವುದಂತಾಡಲಿ. ಅಯ್ಯಾ ಗುರು ಶಂಭುಲಿಂಗವೆ,
ನಿಜಗುರು ನಿರಾಲಂಬಪ್ರಭುವೆ. ॥ ೩೩ ॥

೧೩೨೯

ಮತ್ತಂ ಸಾಕ್ಷಿ : ಅಪ್ಪಯ್ಯ ಗುರುರಾಯ ಕೇಳು.
ಎನ್ನ ಚಿತ್ತವು ಅತ್ತಿಯಹಣ್ಣು ನೋಡಯ್ಯಾ.
ಬಿಚ್ಚಿದರೆ ಗುರುಳಿಲ್ಲವಯ್ಯಾ.
ನೀ ಮೆಚ್ಚಿದೆಯಾದರೆ ಮುಚ್ಚಿಕೊಂಡಿರುವುದಲ್ಲದೆ
ಹುಚ್ಚು ಮತ್ಸರವಾಗುವುದೆಂತು ?
ನಿಮ್ಮಿಚ್ಛಾಮಾತ್ರದಿಂದ ಅಚ್ಚಪ್ರಸಾದಿಗಳಾದ ಶಿವಶರಣರು
ಎನ್ನ ಅಚ್ಚುಗವನು ವಾಚ್ಯಸಂಭ್ರಮವಂದು ಮೆಚ್ಚುಗಾರರು
ಬಚ್ಚಿಟ್ಟುಕೊಂಡು ಎಚ್ಚರದಲ್ಲಿ ಕೂಗುತಿರ್ಪರಲ್ಲದೆ,
ಅಯ್ಯಾ ಶಿವಸಮರ್ಪಣವಾಗಲೆಂದು
ಅವಿರಳಜ್ಞಾನಾನಂದದಲ್ಲಿ ಭವಿಗಳ ಸಹವಾಸ ಮರೆದು,

ವಿವೇಕತ್ವದಿಂದ ಆ ಮಹಾತ್ಮರು ಎನ್ನನು
ಬಹುಮಾನಗಾರನೆಂದು ಹೆಸರಿಟ್ಟು, ಕರೆಯಲು,
ನಾನವರೊಳಗಾಡಿ ಅನುಸ್ಮರಣೆಯನು ಮಾಡಲು,
ನೀನಾವ ದೇಶದ ಸುದ್ದಿ ಹೇಳಲು,
ಮುಗ್ಧ ರುಚಿಗೊಂಡು ಜ್ಞಾನಪ್ರಕಾಶವಾಗಲು,
ಅಬದ್ಧಜೀವಿಗಳಿಗೆ ಅಸಾಧ್ಯವಾಗಿ, ಕದ್ದ ಕಳ್ಳನ ಹೆಡಗುಡಿಯಂ ಕಟ್ಟಿ,
ಮುದ್ದಿ ಲಂಚವಮಂ ಕೊಟ್ಟು, ಸುದ್ದಿ ಸುಳಿವಿಲ್ಲಜೆ
ಸಿದ್ಧಪ್ರಸಿದ್ಧನಾಗಿ ಗುರುರೇವಣಸಿದ್ಧೇಶನಹುದೆಂದೆನಿಸಿ,
ಲದ್ದಿ ಸೋಮಾರಾಧ್ಯರಿಗೆ ಸ್ವಬುದ್ಧಿಯನು ಕೊಟ್ಟು,
ಸಭಾಮಧ್ಯದಲ್ಲಿಟ್ಟುಕೊಂಡು ಗುದ್ದಿ ಗುದ್ದಿ ಮುದ್ದಾಡುವಂಥದು
ನ್ಯಾಯ ನಿನಗಲ್ಲವೆ, ಎಲೆ ಲಿಂಗವೆ ಶಂಭುಲಿಂಗವೆ,
ನಿಜಗುರು ನಿರಾಲಂಬಪ್ರಭುವೆ. || ೩೪ ||

೧೩೩೦

ಮತ್ತಂ ಸಾಕ್ಷಿ : ಅಪ್ಪಯ್ಯ ಗುರುರಾಯ ಕೇಳು.
ಎನ್ನ ಪ್ರತಾಪವಮಂ ಏನು ಹೇಳಲಿ,
ಈ ಪರಿತಾಪ ನರರಿಗೆ ಬೇಸರವಾಗಿಹುದೆಂದು.
ಗುರುವೆ ಕೇಳಯ್ಯ, ಬಡತನವಾಗಿ ತಿರಿದುಂಡರೆ,
ಬದುಕ ಮಾಡದ ಭಂಡನೆಂಬರು, ಹಿಡಿದು ಬಡಿದು ಗುದ್ದುವರು.
ನಡೆನುಡಿಯಿಂದ ಅನುಭಾವದಿಂದ ದುಡಿದುಡಿದು ಧನಪ್ರಾಪ್ತಿಯಾಗಲು
ನೆರೆಹೊರೆ ಪದಾರ್ಥ ಕೈಸೇರಿತೆಂಬರು.
ಈ ಮೂಢಾತ್ಮರು ಬೆಡಗು ನಿಶ್ಚೈಸಿ,
ಮಡದಿ ಮಕ್ಕಳು ಸೌಖ್ಯದಿಂದಿರಲು, ಕೊರಳುಗೊಯ್ಕ ಹುಡುಗನೆಂಬರು.
ಕೋಡುಗಲ್ಲಿನ ಮೇಲೆ ಕುಳಿತು ದೃಢವಿಡಿದುಂಡರೆ,
ಮದುಮಕ್ಕಳೆಂದರಿಯದೆ, ಬಹುಮುಡದಾರನೆಂಬರು.
ಬಡಿವಾರವುಂ ತೊರೆದು, ಮೃಡ ನಿಮ್ಮ ಧ್ಯಾನಿಸೆ,
ಅಡವಿಗೊಲ್ಲನೆಂದಾಡಿಕೊಂಬರು.
ಈ ಕಡುಪಾಪಿಷ್ಠರು ಬುಡಕಡೆಯಿಲ್ಲದ ವಸ್ತುವ
ನೆಲೆಗೊಂಡು ನಿಲುಕಡೆಯಿಂದಾಡೆ,
ಸುಳ್ಳು ಬಡಾಯಿ ಮಾತು ಅದ್ವೈತ ದಾರಿದ್ರ್ಯನೆಂಬರು.
ಗುರುವೆ ಕೇಳಯ್ಯ, ನಾ ನಿಮ್ಮನು ಪಡೆದನುಭವಿಸುವಂಥ ಪ್ರಾರಬ್ಧವನು
ಇನ್ನಾರಿಗೆ ಹೇಳಲಿ, ಕೇಳಲಿ,
ನೀ ಬೇರಲ್ಲವೆ, ಎಲೆ ಲಿಂಗವೆ, ಗುರುಶಂಭುಲಿಂಗವೆ,
ನಿಜಗುರು ನಿರಾಲಂಬಪ್ರಭುವೆ. || ೩೫ ||

೧೩೩೧

ಮತ್ತಂ ಸಾಕ್ಷಿ : ಅಪ್ಪಯ್ಯ ಗುರುರಾಯ ಕೇಳು :
ಜಂಗಮ ಜಗಭರಿತನೆಂದು
ಮಂಗಲಸ್ವರೂಪನಾದ ಆದಿಬಸವೇಶ್ವರನು
ಅನಾದಿ ಸಂಗಮೇಶ್ವರನೊಳಗಾಗಿ ಕೂಗುತಿರ್ಪನಲ್ಲದೆ,
ಈ ಭಂಗಗೇಡಿಗಳಾದ ಮಂಗಮನುಜರಿಗೆ ಎಚ್ಚರವಿಲ್ಲದೆ ಹೋಯಿತು.
ತಮ್ಮಂಗದ ಮೇಲೆ ಲಿಂಗವಿರುತಿರಲು, ಪ್ರಾಣಲಿಂಗದ ಹೊಲಬನರಿಯದೆ
ಜಂಗಮನಿಂದೆಯ ಮಾಡುತಿರ್ಪರಯ್ಯಾ,
ಲಿಂಗವಂತರೆಂದು ಹೇಳಿಕೊಂಬುತಿಪ್ಪರಯ್ಯಾ.
ಅಯ್ಯಾ ಗುರುರೂಪವಾದುದ, ಲಿಂಗಪ್ರತಾಪವಾದುದ,
ಜಂಗಮನಿರೂಪವಾದುದ
ಅನಂಗಸಂಗಿ ಸಂಗನಬಸವೇಶ್ವರನು ಬಲ್ಲನಯ್ಯಾ, ಅರಿದಿಪ್ಪನಯ್ಯಾ.
ಈ ಅಂಗವಿಕಾರಗೇಡಿಗಳ ಲಿಂಗಭಕ್ತರೆಂದು ಅಜ್ಞಾನ ಜಂಗಮವ ನಂಬಲು,
ಪಂಗಳನ ಕೈಯ ಅಂಧಕನು ಹಿಡಕೊಂಡು ಹಾಳುಗುಂಡಿಯ ಬಿದ್ದಂತಲ್ಲವೆ.
ಹಿಂಗಾರಿ ಮುಂಗಾರಿ ಬೆಳೆಯುವುದೆಂತಯ್ಯಾ.
ನಿಮ್ಮಂಗದೊಡಲದುರಿ ತಾಪಮಂ,
ವೀರಮಾಹೇಶ್ವರನೆಂಬ ವೀರಘಂಟೆ ಮಡಿವಾಳಪ್ಪಯ್ಯನು
ಕಾರಣಾಂಗದಲ್ಲಿ ಕಠೋರ ವಾಕ್ಯವನು,
ಜಂಗಮವು ಜಗದಾರಾಧ್ಯನೆಂದು ಮೇಂಗುಡಿ ಎತ್ತಿರ್ಪನಲ್ಲದೆ
ಈ ಜಂಗುಳಿದೈವ ನೀಚಾತ್ಮರಿಗೆ
ಸಂಗಸಮರಸಭಾವ ಅರಿಯದೆ ಹೋಯಿತ್ತಯ್ಯಾ.
ಅಪ್ಪಯ್ಯಾ ಗುರು ಶಂಭುಲಿಂಗವೆ, ನಿಜಗುರು ನಿರಾಲಂಬಪ್ರಭುವೆ. ॥ ೩೬ ॥

೧೩೩೨

ಮತ್ತಂ ಸಾಕ್ಷಿ : ಅಪ್ಪಯ್ಯ ಗುರುರಾಯ ಕೇಳು :
ನೀನಿಕ್ಕಿದ ಮುಂಡಿಗೆಯ ಅಕ್ಕಮಹಾದೇವಿ ಬಲ್ಲಳಲ್ಲದೆ,
ಮಕ್ಕಳಿಲ್ಲದ ಬಂಜೆ ಎನ್ನಕ್ಕರವ ತೀರಿಸುವಳಯ್ಯಾ.
ಮಕ್ಕಮಾರಿ ಸೂಳೆಮಕ್ಕಳು ದಿಕ್ಕುಗಾಣದೆ ಹೊಕ್ಕು,
ಮಿಕ್ಕ ಪ್ರಸಾದಮಂ ಭೋಗಿಸದೆ, ತೆಕ್ಕೆ ಕಾಯಕಮಂ ಮಾಡಿಕೊಂಡು
ಠಕ್ಕಭಕ್ತಿಯ ನಡೆಸುವರಯ್ಯಾ, ಇದಕ್ಕುಪಾಯವೇನಯ್ಯಾ ?
ರೊಕ್ಕದ ಚಿಂತೆ ಘನವಾಗಿ ಕಕ್ಕುಲಾತಿಯಂಬಟ್ಟು,
ಮಕ್ಕಳು ಮರಿಮೊಮ್ಮಕ್ಕಳಿಗೆ ತಕ್ಕತಕ್ಕಷ್ಟು ದ್ರವ್ಯವನು ಕೊಟ್ಟು,
ಎಕ್ಕಲಿಗೆ ಜೋ ಎಂದಳುತಿರ್ಪರಯ್ಯಾ.
ನರಿ ಕಕ್ಕೆಕಾಯಿ ತಿಂದು ಬಹುದುಃಖಪಡುತಿರ್ಪುದಲ್ಲದೇ ಗತಿಗೊಂದಲಿಲ್ಲ,
ಈ ಮಕ್ಕಮಾರಿಗಳ ಸ್ಥಿತಿಗತಿಯು,

ಆ ನರಿಯಿರುವ ಸ್ಥಿತಿಗತಿಯು ಒಂದೆಯಾಗಿರ್ಪುದು.
ಎನ್ನಕ್ಕ ಮಹಾದೇವಿ ಮುಖ್ಯವಾದ ಆತ್ಮವಿಚಾರದಿಂದ ಬೋಧಮಂ
ಸವಿದುಂಡು,
ಮುಕ್ಕಣ್ಣನೆಂಬ ಒಕ್ಕಲ ಕೂಲಿಕಾರನ ಕೂಡಿಕೊಂಡು,
ಬೈಲಾಕಾರವಾಗಿ ಕದಳಿಬನಕ್ಕೆವಂದಳಲ್ಲದೆ, ಎನ್ನಕ್ಕರವು ತೀರಿಸಲು.
ಮಕ್ಕಳಿಲ್ಲದ ಬಂಜೆ ತಾನೆ ತಾನಾಗಿಹುದಯ್ಯಾ.
ರೆಕ್ಕೆಯಿಲ್ಲದ ಪಕ್ಷಿ ಗಗನಕ್ಕೆ ಹಾರುವೆನೆಂದು
ದಿಕ್ಕುಗೆಟ್ಟು, ಕಕ್ಕಾವಿಕ್ಕಿಯಾಗಿ ತಿರುಗಬಾರದೆಂದು
ಲೆಕ್ಕದೊಳಗಾಡುತಿರ್ಪೆನಯ್ಯಾ.
ಎಲೆ ಲಿಂಗವೆ, ಗುರು ಶಂಭುಲಿಂಗವೆ, ನಿಜಗುರು ನಿರಾಲಂಬಪ್ರಭುವೆ. ॥೩೭॥

೧೩೩೩

ಮತ್ತಂ ಸಾಕ್ಷಿ : ಎಲೆ ಮಗನೆ ಕೇಳು.
ಈ ಲೋಕದಲ್ಲಿ ಮೂಕಬಸವಣ್ಣನ ಮಾಡಿಟ್ಟು,
ಮಾತಾಡಿಸಲಹರೆ, ಹಸಿವು ತೃಷೆ ನಿದ್ರೆ ಅಡಗಿಸಲಹರೆ.
ಕಾಕುಪುರಾಣವನು ಬಿಚ್ಚಿ ಹೇಳುವರಷ್ಟು.
ಮಾತುಗಳಗೊಳ್ಳದೆ ಮತಿಭ್ರಷ್ಟರಾಗಿ,
ವ್ಯಸನದಿಂದ ಹಸಿವು ತೃಷೆಗಾಗಿ ಗೋಳಾಡುವರು.
ಅಶನಗಾಣದೆ ಈಶನ ಧ್ಯಾನಿಸಲು ಹಸನಾಗುವುದೆಂತು ?
ವಾಸನೆ ಪರಿತಾಪವು ಹಾಸ್ಯವಾಗಿರ್ಪುದು.
ತಾ ನಿಮ್ಮ ದಾಸನೆಂದು ನಿಜದಾಸನಾಗಿ,
ಬೇಸರವಿಲ್ಲದೆ ನಿಜ ಅಭ್ಯಾಸಮಾಗಲು, ಕೊಟ್ಟಭಾಷೆ ತಪ್ಪುವುದೆಂದಿಗೆ ?
ಮಾಯಾಪಾಶದಲ್ಲಿ ಬಿದ್ದು,
ಆಶಾಲಾಂಛನ ವೇಷಧಾರಿಗಳಿಗೆ ಯೋಗ್ಯವಾಗುವುದೆ ?
ಈಶನ ಕೃಪಾಕಟಾಕ್ಷವನು ಸಾಸಿರನಾಮದ ಬೆಡಗು ನಿಶ್ಚಯಿಸುವುದೆಂತು ?
ಮೂರುಕಾಸು ಬಾಳದ ಮನುಜರು ನೀವು ಕೇಳಿರೊ.
ಆಸರಿಲ್ಲದೆ ಉಳ್ಳಿ ಆಲ್ಪರಿವುದಲ್ಲದೆ,
ಪಶುಪ್ರಾಣಿಗಳಿಗೆ ಶಿಶುವಿನ ಚಿಂತೆ, ಶಿಶುವಿಗಲ್ಲದೆ ಹಾಲಿನ ಚಿಂತೆ.
ಅಸಮಾಕ್ಷಸಾಂಬ ಶ್ರೀಗುರುವಿನೊಳಗಾದ ಶಿಷ್ಯನಿಗೆ
ಬಿಸಿಲಿಲ್ಲದ ಬಾವಿಯೊಳಗನ ಹೆಸರಿಲ್ಲದ ಮರನಾಗಿ ಬೆಳೆಯುವುದೆ ?
ನಿಜಶಾಂತಿ ವಶ ತಪ್ಪಿ ತಿರುಗುವರ ಕಂಡು,
ನಾ ನಾಚುವೆನಲ್ಲದೆ, ವಾಚಕನಾಗಿ ದಣಿದುಕೊಳ್ಳಲೇಕೆ.
ಸೂಕ್ಷ್ಮದಿಂದ ಅನುಭವಿಸಲಾಗಿ ಸಂಶಯವಿಲ್ಲದೆ ಸಂತೋಷಮಂಬಟ್ಟು,
ಪರಮಪ್ರಕಾಶನೆಂದು ಹೇಳಿಕೊಂಬುವಂಥದು ನಿನಗೆಚ್ಚರವೆ.
ಎಲೆ ಲಿಂಗವೆ, ಗುರುಶಂಭುಲಿಂಗವೆ, ನಿಜಗುರು ನಿರಾಲಂಬಪ್ರಭುವೆ. ॥ ೩೮॥

೧೩೩೪

ಮತ್ತಂ ಸಾಕ್ಷಿ : ಎಲೆ ಮಗನೆ ಕೇಳು :
ತಿಳಿತಿಳಿದು ಲಕ್ಷವನಿಟ್ಟುಕೊಂಡು ಭಿಕ್ಷೆ ಬೇಡುವಂಥದು ಏತರ ಬಾಳುವೆ ?
ಗುರುದೀಕ್ಷಾಬದ್ಧರು ಕಾಂಕ್ಷವ ಮಾಡುವರಲ್ಲದೆ,
ಜ್ಞಾನಾಪೇಕ್ಷೆ ತೀರಿದ ಬಳಿಕ ಮನೋಸಾಕ್ಷಿಯಲ್ಲವೆ.
ಎಣಿಕೆ ತಪ್ಪಲು ದಿವಸಕೊಂದು ವೇಷ ಧರಿಸಲು,
ಏತಕೂ ಸಲ್ಲದು, ಸಲುವಳಿಯಾಗದು.
ಮಾತಿನದ್ವೈತವನು ಅಂತರಂಗದಲ್ಲಿಟ್ಟು,
ಮಹಾವಾಕ್ಯ ಮಂತ್ರವೆಂಬ ಸ್ವತಂತ್ರದಲ್ಲಿ ಶತಮೋಕ್ಷ ನೀನಾಗುವುದೆ ಸಾಕ್ಷಿ.
ಪ್ರತಿಯಿಲ್ಲದ ರೀತಿ ತಪ್ಪಿದ ಮನುಜರಿಗೆ
ನೀತಿಶಾಸ್ತ್ರವನು ಹೇಳಲು ಜಾತಿಸಂಕಲ್ಪ ಬಿಡುವುದೆಂತು ?
ಸೋತು ಸುಮ್ಮನಿರಬೇಕೆಲ್ಲದೆ,
ಮಾಡುವುದರಿಂದ ಭೂತಪ್ರಾಣಿಗಳು
ಅತಿಶಯವಿಲ್ಲದೆ ಮತಿಗೊಂದು ಮಂತ್ರ ಸಾಕ್ಷಿ ಕೊಡುತಿರ್ಪರು.
ಖ್ಯಾತಿ ಎನ್ನೊಳಡಗಿರ್ದ ಆತುರಮಂ ಕಾಣದೆ ಮಹತ್ವದಲ್ಲಿ ಮಲಿನವಾಗಿಹರು.
ಎನ್ನ ಜಾತಿಯಭಿಮಾನಿಗಳಷ್ಟು ಕೂಡಿಕೊಂಡು,
ಎಲೆ ಮಗನೆ, ಭಯಭೀತಿಯಿಲ್ಲದ ಅಭಯದ ಕರುಣಿಸುವೆನೆಂದು
ದಾತ ಶ್ರೀಗುರುನಾಥನು
ಪತಿವ್ರತಧರ್ಮ ಶಿವಾನುಭಾವಶಾಸ್ತ್ರಮಂ ಬೋಧಿಸಲು,
ಖ್ಯಾತಿಯಿಂದತಿಶಯ ಸುಜಾತನಲ್ಲವೆ, ಎಲೆ ಲಿಂಗವೆ ಗುರುಶಂಭುಲಿಂಗವೆ
ನಿಜಗುರು ನಿರಾಲಂಬಪ್ರಭುವೆ. ॥ ೩೯ ॥

೧೩೩೫

ಮತ್ತಂ ಸಾಕ್ಷಿ : ಎಲೆ ಮಗನೆ ಕೇಳು :
ಅಷ್ಟು ತಾ ಸುಳ್ಳಿಲ್ಲದೆ, ಒಂದಿಷ್ಟು ತಾ ಖರೆಯಲ್ಲದೆ
ಸೃಷ್ಟಿಕರ್ತನಂತೆ ಹೇಳಿಕೊಂಬುವಂಥದು.
ಎನ್ನ ಕಷ್ಟಮಂ ಏನು ಹೇಳಲಿ.
ಎಲೆ ಮಗನೆ ಹೊಟ್ಟೆಕಿಚ್ಚಿನ ಸೂಳೆಮಕ್ಕಳಿವರು,
ಅಷ್ಟಾವರಣ ಪಂಚಾಚಾರ ಬಲ್ಲೆವೆಂದು
ಭ್ರಷ್ಟನಡೆನುಡಿಯಿಂದ ಕೆಟ್ಟುಹೋಗುವರಲ್ಲದೆ,
ಅಷ್ಟಾವರಣ ಬಲ್ಲಿದ ಮಹಾತ್ಮರು,
ಜ್ಞಾನದೃಷ್ಟಿಯಿಂದ ಅಷ್ಟದಳಕಮಲಮಧ್ಯದಲ್ಲಿ
ಅಷ್ಟು ತಾ ಸುಳ್ಳಿಲ್ಲದೆ ಪಂಚಾಚಾರಮಂ ಗಟ್ಟಿಕೊಂಡು,
ಪಂಚತತ್ವದಲ್ಲಿ ಪಂಚವಾದ್ಯಗಳಿಂದ
ಪಂಚಾಕ್ಷರದ ರಗಳೆಯನು ಅಷ್ಟು ತಾ ಖರೆಯಲ್ಲದೆ

ದಿಟ್ಟರಾಗಿ ಕೂಗುತಿರ್ಪರಲ್ಲದೆ,
ಎಷ್ಟು ಹೇಳಿದ ಕಾಲಕೂ ಬಿಟ್ಟಾಡಿಕೊಂಬುವರು.
ಈ ದೃಷ್ಟ ಪ್ರಾಣಿಗಳು ಕಷ್ಟಕರ್ಮದ ಬಲೆಯಲ್ಲಿ ಸಿಲುಕಿ,
ಏಕೆ ಎಮ್ಮನು ಹುಟ್ಟಿಸಿದನೆಂದು ಶೋಕವೃತ್ತಿಯಿಂದ ಬಿಟ್ಟಿ ದುಡಿಯುತಿರ್ಪರು.
ಎಲೆ ಮಗನೆ ಅಷ್ಟು ತಾ ಸುಳ್ಳಲ್ಲದೆ ಹಠಯೋಗಮಂ ಸಂಪಾದಿಸಿ,
ನೋಟಕೂಟಕ್ಕೆ ಭೇದಭಾವಾರ್ಥವಿಲ್ಲದೆ, ಪಟ್ಟಾಭಿಷೇಕವಾಗಲು
ವರಿಷ್ಠರೊಳಗೊಂದು ಶ್ರೇಷ್ಠನಾಗಿ,
ಅಷ್ಟಾವರಣದಾಚಾರ ವಿಚಾರದಿಂದ ಗುಟ್ಟಕೊಡದ ಹಾಂಗಿರ್ಪರು.
ಷಡುಸ್ಥಲದ ನಿರ್ಣಯಮಂ ತಮ್ಮಟೆ ವಾದ್ಯಗಳಿಂದ
ನಾಟಕ ನೀರಾಂಜನ ವಸ್ತುವೆ ಘನವಾಗಿ,
ಅಕಟಕಟಾ ಬಿಟ್ಟಗಲದಿರ್ಪಾತನೆಂದು ಹೇಳಿಕೊಂಬುವಿ.
ಎನ್ನೊಳಗಲ್ಲವೆ ಎಲೆ ಲಿಂಗವೆ, ಗುರುಶಂಭುಲಿಂಗವೆ,
ನಿಜಗುರು ನಿರಾಲಂಬಪ್ರಭುವೆ. ॥ ೪೦ ॥

೧೩೩೬

ಪೃಥ್ವಿಗುಣದಿಂದನುಭವಿಸುವಂಥದು ತಪ್ಪು ಎನ್ನೊಳಗಿಲ್ಲವು.
ಅಪ್ಪುವಿನಾಚರಣೆಯನು ಆವಾವ ತೆರನಾದ ಬಳಿಕ ಕಪ್ಪುಹತ್ತುವುದೆನಗೆಂತು !
ತುಪ್ಪವದು ಹಾಲಿನಿಂದುದ್ಭವಿಸಲು ಮತ್ತೆ ಹಾಲಾಗುವುದೆಂತಯ್ಯ.
ಉಪ್ಪು ಅಪ್ಪುವಿನ ಕೂಡಲು ಉಪ್ಪಿಗೆ ಕಿಟ್ಟು ಬಂದಂತೆ,
ಉಪ್ಪುಗುರಿಗಾಗುವುದೆಂತಯ್ಯಾ,
ಅಪ್ಪಯ್ಯಾ ಕಾಡಸೊಪ್ಪು ಅಪ್ಪಿಕೊಂಡು ನೆನಪು ನೆಲೆಯಿಲ್ಲದೆ,
ಅಜ್ಞಾನವನು ಮುಪ್ಪು ಆವರಿಸಲು, ಒಪ್ಪುಗೂಡುವುದು ದುರ್ಲಭವು.
ತೇಜ ಬೆಳಗಿನಿಂದ ರಾಜಸಭೆಯಲ್ಲಿ ಕುಳಿತು ತಪ್ಪು ನಡೆನುಡಿಯಿಂದಾಚರಿಸಲು
ವಾಯುವೆಂಬ ಉಪದ್ರವದಿಂದ ಸೋಜಿಗರೂಪವಾಗುವುದೆಂತಯ್ಯಾ !
ಬೈಲಾಕಾರವಾದ ನಿಮಿತ್ತ ಅಲ್ಪಾಶ್ರಯಮಂ
ತಾಪತ್ರಯವೆ ಸಾಕ್ಷೀಭೂತವಾಗಿ ಕಾಡುತ್ತಿರ್ಪುದು.
ದೀಪ್ತವಾದ ರುಚಿಗೊಂದು ತಪ್ಪುಗಾಣಿಕೆಯನು ಕೊಟ್ಟು,
ಗುಪ್ತನಾಗಿ ಅನುಭವಿಸುವಂಥದು,
ನಿಜಾಶ್ರಯಮಾದ ಆಕಾಶವೆಂದು ಹೇಳಲ್ಪಟ್ಟಿತ್ತು,
ಬಪ್ಪದು ತಪ್ಪದು, ಬಾರದು ಬಪ್ಪದು.
ಅಪ್ಪಯ್ಯ ಶ್ರೀಗುರುವೆ ಎನ್ನ ತಪ್ಪುತಡಿ ನಿನ್ನೊಳಗಲ್ಲವೆ,
ಎಲೆ ಲಿಂಗವೆ ಗುರುಶಂಭುಲಿಂಗವೆ, ನಿಜಗುರು ನಿರಾಲಂಬಪ್ರಭುವೆ. ॥ ೪೧ ॥

॥ ಗುರು ಶಿಷ್ಯ ನಿರೂಪ ಸಮಾಪ್ತ ॥

■■

## -?- ನಿಜಗುರು ಶಾಂತಮಲ್ಲಿಕಾರ್ಜುನ

೧೩೩೭

ಏಕೋದೇವ ಶಿವನದ್ವಿತೀಯ.
ಶಿವನಲ್ಲದೆ ಬೇರೆ ದೈವವಿಲ್ಲವೆಂದು ಸಾರಿ ನುಡಿವುತ್ತಿ[ವೆ],
ಶ್ರುತಿ ಶಾಸ್ತ್ರ ಪುರಾಣ ಆಗಮಂಗಳೆಲ್ಲವು.
ಶಿವನಲ್ಲದೆ ಬೇರೆ ದೈವವಿಲ್ಲವೆಂದು ಸಾರಲು,
ಮರಳಿ ವಿಷ್ಣು ದೇವರೆಂದು ನುಡಿವುತ್ತಿಪ್ಪರು.
ದೈವಕ್ಕೆ ಉತ್ಪತ್ತಿ ಸ್ಥಿತಿ ಲಯಂಗಳೆಂಬುದುಂಟೆ.
ದೃಷ್ಟಾಂತರ ಜಾಯತೆ ಅಷ್ಟಮಿ ಸಾಕ್ಷಿ.
ಆ ವಿಷ್ಣುವಿಂಗೆ ಲಯವುಂಟೆಂಬುದಕ್ಕೆ
ಕಾಡಬೇಡನೆಚ್ಚಂಬು ಅಂಗಾಲಲ್ಲಿ ನೆಟ್ಟು ಪ್ರಾಣವ ಬಿಟ್ಟುದೇ ಸಾಕ್ಷಿ.
ಅಚ್ಯುತಂಗೆ ಅನೇಕ ಭವವುಂಟೆಂಬುದಕ್ಕೆ
ಮತ್ಸ್ಯ ಕೂರ್ಮ ವರಾಹವತಾರವಾದುದೇ ಸಾಕ್ಷಿ.
ಆ ಹರಿ, ಹರನ ಭೃತ್ಯನೆಂಬುದಕ್ಕೆ
ರಾಮೇಶ್ವರ ಆದಿಯಾದ ಪ್ರತಿಷ್ಠೆಗಳೇ ಸಾಕ್ಷಿ.
ಇಂತಪ್ಪ ಹರಿಯನು ಹರಂಗೆ ಸರಿಯೆಂದು ನುಡಿವರು ಅಜ್ಞಾನಿಗಳು.
ಆತಂಗಿಲ್ಲದ ಮಹತ್ವವ ತಾವು ನುಡಿವುತ್ತಿಹರು.
ಬಲಿಯ ಮೂರಡಿ ಭೂಮಿಯ ಸ್ಥಾನವ ಬೇಡಿವಲ್ಲಿ

ಪಂಚಾಶತಕೋಟಿ ಭೂಮಿ ಸಾಲದೆ ಹೋಯಿತೆಂದು ನುಡಿವುತ್ತಿಹರು.
ಮಗಧನೆಂಬ ರಾಕ್ಷಸನನಟ್ಟುವಲ್ಲಿ ಅದೆಲ್ಲಿ ಬಂದಿತೊ, ಓಡುವುದಕ್ಕೆ ಭೂಮಿ.
ವಿಷ್ಣುವಿನ ಹೃದಯದಲ್ಲಿ ವಿಶ್ವವೆಲ್ಲಾ ಇದ್ದೀತೆಂದು ನುಡಿವುತ್ತಿಹರು.
ಆ ವಿಷ್ಣುವಿನ ಹೃದಯದಲ್ಲಿ ವಿಶ್ವವೆಲ್ಲವು ಇದ್ದರೆ,
ಸೀತೆ ಹೋದಳೆಂದು ಅರಸಿ ಸೇತುವೆ ಕಟ್ಟಿ ದಣಿಯಲೇಕೊ.
ವಿಷ್ಣುವಿನ ಬಾಣದ ಮೊನೆಯಲ್ಲಿ ಸಪ್ತಸಮುದ್ರಂಗಳೆಲ್ಲವೂ ಬಂದವೆಂದು
ನುಡಿವುತ್ತಿಹರು.
ಆ ವಿಷ್ಣುವಿನ ಬಾಣದ ಮೊನೆಯಲ್ಲಿ ಸಪ್ತಸಮುದ್ರಂಗಳೆಲ್ಲವು ಬಂದರೆ,
ಕಪಿಗಳ ಕೂಡಿ ಸೇತುವೆ ಕಟ್ಟುವುದಕ್ಕೇನು ಕಾರಣ.
ಇಂತಪ್ಪ ಹರಿಯನು ಹರಗೆ ಸರಿಯೆಂದು ನುಡಿವ ದ್ವಿಜರ ನುಡಿಯನು
ಪ್ರಮಾಣಿಸಿದರೆ,
ಅಘೋರ ನರಕದಲ್ಲಿ ಇಕ್ಕದೆ ಮಾಣ ನಿಜಗುರು ಶಾಂತಮಲ್ಲಿಕಾರ್ಜುನ. ॥೧॥

೧೩೩೮

ಜಂಗಮವೆಂತವನೆಂದಡೆ :
ನಿಜಸ್ವರೂಪವಾದಾತನೀಗ ಜಂಗಮು.
ಅಧೀನವುಳ್ಳಾತನೂ ಅಲ್ಲ, ಅಧೀನವಿಲ್ಲದಾತನೂ ಅಲ್ಲ,
ಸಾಕಾರನೂ ಅಲ್ಲ, ನಿರಾಕಾರನೂ ಅಲ್ಲ,
ಶಾಂತನೂ ಅಲ್ಲ, ಕ್ರೋಧಿಯೂ ಅಲ್ಲ,
ಕಾಮಿಯಲ್ಲ, ನಿಷ್ಕಾಮಿಯಲ್ಲ,
ಖಂಡಿತನೂ ಅಲ್ಲ, ಅಖಂಡಿತನೂ ಅಲ್ಲ,
ದ್ವೈತಾದ್ವೈತವಳಿದು ದ್ವಂದ್ವಾತೀತನಾಗಿ,
ನಿಜಗುರುಶಾಂತಮಲ್ಲಿಕಾರ್ಜುನ ತಾನಾದ ಜಂಗಮು. ॥ ೨ ॥

೧೩೩೯

ಶರಣಂಗಾಧಾರವಿಲ್ಲ,
ಶರಣ ತಾನೆಲ್ಲದಕ್ಕಾಲಯ[ವಾದ]
ಶರಣಂಗಿಹವಿಲ್ಲ, ಪರವಿಲ್ಲ,
ಎಂತಿರ್ದಂತೆ ಪರಬ್ರಹ್ಮವು ತಾನೆ
ನಿಜಗುರು ಶಾಂತಮಲ್ಲೇಶ್ವರಾ
ನಿಮ್ಮ ಶರಣನು. ॥ ೩ ॥

■■

## -?- ನಿಜಮುಕ್ತಿ ರಾಮೇಶ್ವರ

೧೩೪೦

ತನುವಿಕಾರದಿಂದ ಸವೆದು ಸವೆದು,
ಮನವಿಕಾರದಿಂದ ನೊಂದು ಬೆಂದವರೆಲ್ಲ ಬೋಳಾಗಿ.
ದಿನ ಜವ್ವನಂಗಳು ಸವೆದು ಸವೆದು,
ಜಂತ್ರ ಮುರಿದು ಗತಿಗೆಟ್ಟವರೆಲ್ಲ ಬೋಳಾಗಿ,
ಮಂಡೆಯ ಬೋಳಿಸಿಕೊಂಡು ಬೋಳಾದ ಬಳಿಕ,
ಹೊನ್ನು ಹೆಣ್ಣು ಮಣ್ಣಿಗೆರಗದುದೆ ಬಾಳು.
ಸಕಲವಿಷಯದ ದಾಳಿಗೆ ಸಿಲುಕದುದೆ ಬಾಳು.
ಇದಲ್ಲದೆ ಗತಿಗೆಟ್ಟು, ಧಾತುಗೆಟ್ಟು, ವೃಥಾ ಬೋಳಾದ ಬಾಳು
ಲೋಕದ ಗೋಳಲ್ಲವೆ ಹೇಳು,
ನಿಜಮುಕ್ತಿರಾಮೇಶ್ವರಾ. ॥ ೧ ॥

■■

## -?-ನಿರ್ಧನಪ್ರಿಯ ರಾಮೇಶ್ವರ

೧೩೪೧

ನಡಸು ದೇವಾ ಭಿಕ್ಷಾಯೆಂಬ ಶಬ್ದಕ್ಕೆ.
ಅಲ್ಲಿ ಹೋಗಿ ಭಿಕ್ಷಾ ಭಿಕ್ಷಾಯೆಂದಡೆ
ಆರೂ ನೀಡದಂತೆ ಮಾಡು.
ತಥಾಪಿಸಿ ನೀಡಿದಡೆ,
ಆ ನೀಡುವ ಹಂಚು ಎಡಹಿ ಒಡೆವಂತೆ ಮಾಡು,
ನಿರ್ಧನಪ್ರಿಯ ರಾಮೇಶ್ವರಾ. ॥ ೧ ॥

## -?- ನಿರಾಲಯ ನಿಜಗುರುಶಾಂತೇಶ್ವರ

೧೩೪೨

ಪರಿಪೂರ್ಣನಲ್ಲ, ಪ್ರದೇಶಿಕನಲ್ಲ,
ನಿರತಿಶಯದೊಳತಿಶಯ ತಾ ಮುನ್ನಲ್ಲ,
ಶರಣನಲ್ಲ, ಐಕ್ಯನಲ್ಲ,
ಪರಮನಲ್ಲ, ಜೀವನಲ್ಲ,
ನಿರವಯನಲ್ಲ, ಸಾವಯನಲ್ಲ,
ಪರ ಇಹವೆಂಬುಭಯದೊಳಿಲ್ಲದವನು.
ನಿರಾಲಯ ನಿಜಗುರುಶಾಂತೇಶ್ವರನ ಶರಣನ ನಿಲವು,
ಉಪಮೆಗೆ ತಾನನುಪಮ. ॥ ೧ ॥

■■

## ನಿರಾಳಪ್ರಿಯ ಸೊಡ್ಡಳಯ್ಯ

೧೩೪೩

ಸರ್ವಸಂಗ ಪರಿತ್ಯಾಗವ ಮಾಡಿ,
ಅರಣ್ಯದಲ್ಲಿದ್ದರೆ ಮೃಗವೆಂಬರು.
ಊರಿಗೆ ಬಂದರೆ ಸಂಸಾರಿ ಎಂಬರು.
ಭೋಗಿಸಿದರೆ ಕಾಮಿ ಎಂಬರು.
ಹೆಣ್ಣ ಬಿಟ್ಟರೆ ಹೊನ್ನಿಲ್ಲ ಎಂಬರು.
ಹೊನ್ನ ಬಿಟ್ಟರೆ ಮಣ್ಣಿಲ್ಲ ಎಂಬರು.
ಪುಣ್ಯವ ಬಿಟ್ಟರೆ ಪೂರ್ವದ ಕರ್ಮಿ ಎಂಬರು.
ಮಾತನಾಡದಿದ್ದರೆ ಮೂಗನೆಂಬರು.
ಸಹಜವ ನುಡಿದರೆ ಅಂಜುವನೆಂಬರು.
ಇದು ಕಾರಣ ನಿರಾಳಪ್ರಿಯ ಸೊಡ್ಡಳಯ್ಯ
ನಿಮ್ಮ ನನ್ನ ಮಚ್ಚು ಜಗಕ್ಕೊಂದಚ್ಚು. || ೧ ||

# -೭-ಬಸವಣ್ಣಪ್ರಿಯ ಧರ್ಮೇಶ್ವರ

೧೩೪೪

ಎನ್ನ ಕಾಯವ ಶುದ್ಧವ ಮಾಡಿದಾತ ಸಂಗನಬಸವಣ್ಣನು.
ಎನ್ನ ಜೀವವ ಶುದ್ಧವ ಮಾಡಿದಾತ ಚೆನ್ನಬಸವಣ್ಣನು.
ಎನ್ನ ಪ್ರಾಣವ ಶುದ್ಧವ ಮಾಡಿದಾತ ಮಡಿವಾಳಯ್ಯನು.
ಎನ್ನ ತನುವ ಶುದ್ಧವ ಮಾಡಿದಾತ ಮೋಳಿಗಯ್ಯನು.
ಎನ್ನ ಮನವ ಶುದ್ಧವ ಮಾಡಿದಾತ ಸಿದ್ಧರಾಮಯ್ಯನು.
ಎನ್ನ ಭಾವವ ಶುದ್ಧವ ಮಾಡಿದಾತ ಬಿಬ್ಬಿ ಬಾಚಯ್ಯನು.
ಎನ್ನ ಅಂತರಂಗವ ಶುದ್ಧವ ಮಾಡಿದಾತ ಚಂದಯ್ಯನು.
ಎನ್ನ ಬಹಿರಂಗವ ಶುದ್ಧವ ಮಾಡಿದಾತ ಕಿನ್ನರಿ ಬ್ರಹ್ಮಯ್ಯನು.
ಎನ್ನ ಸರ್ವಾಂಗವ ಶುದ್ಧವ ಮಾಡಿದಾತ ಪ್ರಭುದೇವರು.
ಬಸವಣ್ಣಪ್ರಿಯ ಧರ್ಮೇಶ್ವರಾ,
ನಿಮ್ಮ ಶರಣರೆನ್ನ ಪಾವನವ ಮಾಡಿದ ಪರಿಣಾಮವನು
ಅಂತಿಂತೆನಲಮ್ಮದೆ ನಮೋ ನಮೋ ಎನುತಿರ್ದೆನಯ್ಯಾ. ॥ ೧ ॥

## -?- ಭೀಮಬಂಕೇಶ್ವರ

೧೩೪೫

ಕ್ರೀವಿಡಿದು ಗುರುಸಂಬಂಧಿಯಾಗಿ, ಜ್ಞಾನವಿಡಿದು ಲಿಂಗಸಂಬಂಧಿಯಾಗಿ.
ಘನವಿಡಿದು ಮಹಾಜ್ಞಾನಿಯಾಗಿ, ಅರಿವು ಆಚರಣೆಯ ಕಂಡು,
ಜ್ಞಾನ ಮುಕುರವೆಂಬ ಮುಂದಣ ಶ್ರೀಸಂಬಂಧಿಯಾಗಿ,
ಆಚಾರದಲ್ಲಿ ಸಂಪನ್ನನಾಗಿ, ಮಹೇಶ್ವರಸ್ಥಲವನರಿದು,
ಅದೇ ಜಂಗಮವಾದ ಬಳಿಕ ನಿರಾಕುಳನಾಗಿ ಆಚರಿಸಿದರೆ
ಅನಾದಿ ಜಂಗಮವೆಂಬೆ. ಸಾಮವೇದೇ–
ವಿವಚಾಸೋऽವಿಚಾ ಲಿಂಗಾಲಿಂಗಿ ಚ ಫಲಾದಿ ಬ್ರಹ್ಮರಾಕ್ಷಸ ಸೋವಿಸಂಗಶ್ಚ ।
ಸೂಕರ ಶತಕೋಟಿ ಜನ್ಮ ಚ ಸೋऽಪಿ ಕ್ರೀಡಾಲಿಂಗ
ಮಲಮೂತ್ರ ಮಾಂಸ ಭುಂಜಿತಃ ।
ಬ್ರಹ್ಮೇನ ಕೋಟಿ ರಾಕ್ಷಸಃ ಸೋಸಂಗೇನ ಶತಕೋಟಿಗಾರ್ದಭ ಜನ್ಮ ಚ ।
ಅದೇ ದಾಸಿ ದಾಸೇ ಸೂಕರ ಸಂಗಶಃ ಚ ನಾಃ ।
ಸೋವ ಮಾತ್ರವೆಂದು ತಂದ ಸ್ತ್ರೀಗಳನು ಶಿಷ್ಯಾದಿ ಪುತ್ರರ ಕೈಯ
ಗುರು ತಾಯಿ ಎಂಬ ನಾಮಕರಣಂಗಳನುಂಟುಮಾಡಿ,
ತನ್ನ ಅಂಗವಿಕಾರಕ್ಕೆ ತಂದ ಸಂತೆಯ ಡೊಂಬಿತಿಯ ತಂದು,
ಹಿರಿಯರಲ್ಲಿ ಸರಿಮಾಡುವ ಜಂಗಮವೆ ಗುರುವೆ ?
ಅಜ್ಞಾನ ಪುರುಷನಲ್ಲ, ಅವ ಹಿರಿಯತನಕ್ಕೆ ಸಲ್ಲ

ಅವಂಗೆ ಗುರುವಿಲ್ಲ ಲಿಂಗವಿಲ್ಲ, ಜಂಗಮ ಮುನ್ನವೆಯಿಲ್ಲ,
ಅವ ಘಟಾತ್ಮನು ಸೋವಿಯ ಸಂಗ ಬೇಡ ಬಿಡಿರಣ್ಣಾ.
ಸೋವಿಯ ಸಂಗವ ಮಾಡಿದರೆ ಶತಕೋಟಿ ದಾಸಿಯ ಬಸುರಲ್ಲಿ ಬಂದು,
ಹೇಸಿಕೆಯಿಲ್ಲದೆ ಮಲಮೂತ್ರವನು ಹೇಗೆ
ಸೂಕರ ಭುಂಜಿಸುವುದೊ ಹಾಂಗೆ ಭುಂಜಿಪನು.
ನಾನಾ ಯೋನಿಯ ನರಕುವದು.
ಸೋವಿ ಮಾತ್ರೇಣ ಆ ಲಿಂಗನಂ ಗುರು ತಾಯ ಅಪಮಾನ ಸಾಮಾನ್ಯವೆಂದು
ಸೋವಿಯ ಸಂಗವ ಮಾಡಿದಡೆ ಎಪ್ಪತ್ತೇಳುಕೋಟಿ ಶ್ವಪಚಯೋನಿ ತಪ್ಪದಯ್ಯ.
ಹನ್ನೆರಡು ಕಂಬ ಸಾಕ್ಷಿಯಾಗಿ, ಕಳಸಕನ್ನಡಿ ಸಾಕ್ಷಿಯಾಗಿ,
ತೆಳೆಮಲು ಕಟ್ಟಿ ಸಾಕ್ಷಿಯಾಗಿ, ಆಯಿರಣೆಕೋಲು ಸಾಕ್ಷಿಯಾಗಿ,
ಮುತ್ತೈದೆತನದಲ್ಲಿ ಶ್ರೇಷ್ಠಯಾಗಿ,
ಜ್ಞಾನ ದೃಕ್ಕಿನಿಂ ತಿಳಿದು, ಅನುಭಾವದ ಮುಖವನರಿದಂತೆ,
ಆ ಜ್ಞಾನನೇತ್ರವ ಅರಿದು ಧಾರೆಯನೆರೆಸಿಕೊಂಡು,
ಅರಿವಿನಲ್ಲಿ ಇರದೆ ಕುರಿಯ ಹೇಲ ತಿಂಬಂತೆ,
ಬಾಯಿಗೆ ಬಂದಂತೆ ಸೋವಿಯ ಸಂಗವ ಮಾಡುವವರ ಸರ್ವಾಂಗವೆಲ್ಲ
ಗಣಿಕೆಯ ಯೋನಿಯ ಬಸುರ ನೋಡಾ.
ಧಾರೆಯನೆರೆಸಿಕೊಂಡು ಕ್ರೀವಿಡಿದು ನಡೆಯದೆ,
ತೊತ್ತಿನ ಮಗನಿಗೆ ಪಟ್ಟ ಕಟ್ಟಿದರೆ
ಹಾದಿಯ ಎಲುವ ಕಂಡು ಓಡಿಹೋಗಿ ಗಡಗಡನೆ ಕಡಿವಂತೆ,
ಸೋವಿಯ ಎಂಜಲ ತಿಂದವಂಗೆ ಗುರುವಿಲ್ಲ,
ಅವ ದೇವಲೋಕ ಮರ್ತ್ಯಲೋಕ ಎರಡಕ್ಕೆ ಸಲ್ಲ,
ಆವಾಗಮದಲ್ಲಿ ಉಂಟು, ಗಳಹಿ ಹೇಳಿರೊ, ಮಕ್ಕಳಿರಾ.
ನೀವು ಬಲ್ಲರೆ ಕಾಳನಾಯ ಹೇಲ ತಿಂಬಂಗೆ ಹಿರಿಯನೆಂದು,
ಹೋತನಂತೆ ಗಡ್ಡವ ಬೆಳಸಿಕೊಂಡು ಗುಡರಗುಮ್ಮನಂತೆ ಸುಮ್ಮನಿರುವಿರಿ.
ಗರ್ವತನಕ್ಕೆ ಬಂದು ಹಿರಿಯರೆಂದು ಆಚರಣೆ ನ್ಯಾಯವ ಬಗಳುವಿರಿ.
ಸೋವಿಸಂಗದಿಂದ ಕನಿಷ್ಠ ನರಕ ಕಾಣಿರಣ್ಣಾ.
ಸೋವಿಯ ಸಂಗವ ಬಿಟ್ಟು, ಧಾರೆಯ ಸ್ತ್ರೀಯಳ ನೆರದರೆ,
ಆಚಾರವಿಡಿದು ನಡೆದು ಆಚರಣೆಯ ನುಡಿದರೆ ಶುದ್ಧವಾಗುವದಲ್ಲದೆ
ತೊತ್ತಿನ ಮಗನಾಗಿ ಎಡೆಯ ಸಮಗಡಣವ ಬೇಡುವ ಪಾತಕರ,
ಅವರ ಜಂಗಮವೆಂಬೆನೆ ?
ಸೋವಿಯ ಸಂಗದಿಂದ ಬಂದುದು ಬ್ರಹ್ಮೇತಿ.
ಅಥರ್ವಣ ಸಾಮವೇದ ಯಜುರ್ವೇದ ಋಗ್ವೇದ ಇಂತಪ್ಪ ನಾಲ್ಕು ವೇದದಲ್ಲಿ
ಶ್ರುತಿ ಸ್ಮೃತಿಗಳಲ್ಲಿ ಆಗಮ ಪುರಾಣಂಗಳಲ್ಲಿ
ಸೋವಿಯ ವಾಚ್ಯವೆಂಬುದುಂಟೆ ಪರಮಪಾತಕರಿರಾ ?

ನೂತನವ ಗಂಟಿಕ್ಕಿ ಜಗಲಿಯೆನ್ನದೆ ಪಟ್ಟಶಾಲೆಯೆಂಬಿರಿ ತೊಂಡರಿರಾ.
ತೊತ್ತನೊಯ್ದು ತೊತ್ತೆ ದಾಸಿ ಬಾಯೆನ್ನದೆ ಹೋವಿಯೆಂದು ಬಗಳುವಿರಿ.
ಕಲಿಯುಗದಲ್ಲಿ ನೂತನದ ಸೂಳೆಯ ಮಕ್ಕಳು ನೀವು.
ಸೋವಿಯ ಸಂಗವ ಮಾಡಿದವನು ಅರಿವುಳ್ಳ ಪುರುಷನಾದರೂ ಆಗಲಿ,
ಅರಿದು ಮತ್ತೆ ಅರೆಮರುಳಾದ ಹಿರಿಯರನೇನೆಂಬೆನಯ್ಯಾ.
ಅವನು ಪಾತಕನಘೋರಿಗಳು.
ಅವರು ಇವರುವನರಿಯದ ಅಘೋರಿಗಳೆಂಬ
ಇಂತಪ್ಪ ಸೋವಿಯ ಸಂಗವ ಮಾಡುವ
ಬ್ರಹ್ಮೇತಿಕಾರ ಪಂಚಮಹಾಪಾತಕರು ಇಹಪರಕ್ಕೆ ಸಲ್ಲರೆಂದುದು.
ನಿಮ್ಮಾಣೆ ನಿಮ್ಮ ಪ್ರಮಥರಾಣೆ, ಇಹವಿಲ್ಲ ಪರವಿಲ್ಲ,
ಮುಕ್ತಿಯ ಫಲವಿಲ್ಲ, ಅಘೋರವಲ್ಲದೆ ಮತ್ತೇನೂ ಇಲ್ಲ,
ನಿಮ್ಮಾಣೆ ಭೀಮಬಂಕೇಶ್ವರಾ. ॥ ೧ ॥

■■

## -?- ಮರ್ಕಟೇಶ್ವರ

೧೩೪೬

ಹೇಮ ಕಾಮಿನಿ ಭೂಮಿ ಜೀವರಾಧಾರ,
ಜೀವರ ಪ್ರಾಣ, ಜೀವರ ಸಿಕ್ಕು ತೊಡಲು.
ಇಹಪರದೊಳಗೆ ಜಂಘೆಯ ಬಿಟ್ಟು,
ಲಂಘಿಸಿ ನಿಂದಾತನೆ ವಿರತಿ ಸಮಗ್ರ ಕಾಣಾ,
ಮರ್ಕಟೇಶ್ವರಾ. ॥೧॥

■■

## -?- ಮಹಾಘನ ಪ್ರಸಿದ್ಧ ಪ್ರಸನ್ನ ಸಂಗಮೇಶ್ವರಲಿಂಗ

೧೩೪೭

ಅರಿವು ಆತ್ಮ ಪರಿಪೂರ್ಣದಿರವನವರಿವರಲ್ಲಿ
ಅರೈಕೆಗೊಳಲಿಯೇಕೆ ?
ಮತಕ್ಕೆ ಕರಣ, ಮಥನಕ್ಕೆ ಕರಣ,
ಮಥನಕ್ಕೆ ಅನುಭವ ಮಥನ,
ಅನುಭವ ಮಥನಕ್ಕೆ ಆತ್ಮ ಮಥನವುಂಟೆ ?
ಇಂತೀ ತ್ರಿವಿಧದರಿವಂ ತಿರಿದುದಕ್ಕೆ ಹೇಳಿಹೆನೆಂಬ
ಹೆಚ್ಚಿಗೆ ಕೇಳಿಹೆನೆಂಬ ನಿಶ್ಚಯ.
ಈ ಉಭಯಭಾವದಲ್ಲಿ ನಿಂದ ಪರಮವಿರಕ್ತರು ನೀವು ಕೇಳಿರಣ್ಣಾ,
ಅನು ಕೃತ್ಯವೆಂದನುಕರಿಸಿ ಪರತತ್ವವ ನುಡಿಯಲಿಲ್ಲ.
ಅನು ಭೃತ್ಯನೆಂದು ಅನುಸರಿಸಿ ಪರತತ್ವವ ಬೆಸಗೊಳಲಿಲ್ಲ.
ಈ ಉಭಯಸಂದೇಹ ಚಕ್ರದಂಡದಲ್ಲಿ ಸಿಲುಕಿದ
ಮರ್ಕಟನಂತಾಯಿತ್ತು
ಮಹಾಘನ ಪ್ರಸಿದ್ಧ ಪ್ರಸನ್ನ ಸಂಗಮೇಶ್ವರಲಿಂಗದಲ್ಲಿ
ಚಕ್ರಪ್ರಸನ್ನ ಚೆನ್ನಬಸವಣ್ಣ. ॥ ೧ ॥

■■

## -?- ಮಹಾಲಿಂಗ ವೀರರಾಮೇಶ್ವರ

೧೩೪೪೮

ಬಯಲೊಳೆರಗಿದ ಸಿಡಿಲಿನಂತಾಯಿತ್ತೆನ್ನ ಗುರುವಿನುಪದೇಶ.
ಮಿಂಚಿನ ಪ್ರಭೆಯ ಸಂಚದಂತಾಯಿತ್ತೆನ್ನ ಗುರುವಿನುಪದೇಶ.
ಸ್ಫಟಿಕದ ಘಟದೊಳಗಣ ಜ್ಯೋತಿಯಂತಾಯಿತ್ತೆನ್ನ ಗುರುವಿನುಪದೇಶ
ಮಹಾಲಿಂಗ ವೀರರಾಮೇಶ್ವರನಂತಾಯಿತ್ತೆನ್ನ
ಗುರುವಿನುಪದೇಶವೆನಗಯ್ಯಾ. ॥ ೧ ॥

■■

## -?- ಮಹಾಲಿಂಗ ಶಶಿಮೌಳಿ ಸದಾಶಿವ

೧೩೪೯

ಅಂತಪ್ಪ ಸದ್ಭಕ್ತನು, ತನ್ನ ಭಕ್ತಿಸ್ಥಲದ ಆಚರಣೆಯ ಸಾಂಗವಾಗಿ ನಡಸಿ,
ಮಹೇಶ್ವರಸ್ಥಲವನಂಗೀಕರಿಸಿ, ಮಹೇಶ್ವರನೆನೆಸಿ,
ಆ ಆಚರಣೆಯನೆಂತು ನಡೆಸುವನೆಂದರೆ,
ಕ್ರಿಯಾತನುವ ತಾಳಿ, ಪ್ರಾಣವಾಯುಗಳ ಪ್ರಪಂಚಿನಲ್ಲಿ ತೊಡಕದೆ,
ಮನ ಬುದ್ಧಿ ಚಿತ್ತ ಅಹಂಕಾರಂಗಳ ತನ್ನಾಧೀನವಂ ಮಾಡಿ,
ಅಷ್ಟಮದಂಗಳ ನಷ್ಟವೆಂದೆನಿಸಿ, ಸಪ್ತವ್ಯಸನಂಗಳ ತೊತ್ತಳದುಳಿದು,
ಅರಿಷಡ್ವರ್ಗಂಗಳು ಮೊದಲಾದವರ ಅನ್ಯಕ್ಕಾಶ್ರಯಮಾಗದೆ,
ಪಂಚೇಂದ್ರಿಯಂಗಳ ಅನ್ಯಸಂಚಾರವ ಕಳೆದು, ಇಂದ್ರಿಯಂಗಳಿಂ ತೋರಿದ
ಜ್ಞಾನವಿಷಯ ಸುಖಂಗಳೆಲ್ಲಮಂ ಆ ಲಿಂಗಪ್ರಸಾದವೆಂದೇ ತಾನಂಗೀಕರಿಸಿ,
ಶಿವಮತವಲ್ಲದೆ ಮತ್ತೆ ಬೇರೆ ಮತ ಉಂಟೆಂಬ ಭವಬಾಧಕರ
ಮುಖಮನಾಲೋಕನಂಗೆಯ್ಯದೆ,
ಅವರ ನುಡಿಗಡಣಮಂ ಶ್ರೋತ್ರಮಂ ಸೋಂಕಲೀಯದೆ,
ಜಿಹ್ವೆಯ ಕೊನೆಯಲ್ಲಿ ಮರೆದೊಮ್ಮೆಯೂ ಪಾರುಗೊಳ್ಳದೆ,
ಅಂತಪ್ಪ ದುಷ್ಕರ್ಮಿಗಳ ಚರಿತ್ರವಾಸನಾ ಧರ್ಮವನಂಗೀಕರಿಸದೆ,
ಅವರ ತನುಸೋಂಕಿನಿಂ ಬಂದ ವಾಯು ಸ್ಪರ್ಶನ,
ತಮ್ಮಂಗವ ತಟ್ಟಿ ಮುಟ್ಟಲೀಯದೆ,

ಜಾಗ್ರಸ್ವಪ್ನದಲ್ಲಿ ಅವರ ನೆನಹು ಮನಕ್ಕೆ ತಟ್ಟದಂತೆ ಬಹಿಷ್ಕಾರವಂ ಮಾಡಿ,
ವೀರಶೈವವೆಂಬ ಜಯಸ್ತಂಭಮಂ ಚಿತ್ರದಲ್ಲಿ ಬರೆದು,
ಲಿಂಗಾಂಗಸಂಗಿಯಾಗಿ ಜಿಹ್ವೆಯ ಕೊನೆಯಲ್ಲಿ
ಮಂತ್ರೋಚ್ಚರಣೆಯ ಉಲುಹಡಗದೆ,
ದಯೆಶಾಂತನೆಯ ನಿರ್ಮಲಚಿತ್ತನೆನಿಸಿ,
ಉಂಡು ಉಪವಾಸಿ ಬಳಸಿ ಬ್ರಹ್ಮಚಾರಿಯಾಗಿ,
ಲಿಂಗಾಣತಿಯಿಂದ ಬಂದ ಪದಾರ್ಥವ ಮಹಾಲಿಂಗ ಪ್ರಸಾದವೆಂದು
ತನ್ನಿಷ್ಟಲಿಂಗಕ್ಕೆ ಸಮರ್ಪಣೆಯಂ ಮಾಡಿ,
ಆ ಲಿಂಗದೊಡನೆ ಸಹಭೋಜನವನುಂಡು, ಪ್ರಾಣಲಿಂಗಕ್ಕೆ ತೃಪ್ತಿಪಡಿಸಿ,
ಜ್ಞಾನಜ್ಯೋತಿಯ ಬೆಳಗಿನಲ್ಲಿ ಸಂಚಾರವ ಮಾಡುವಾತನೆ ಮಹೇಶ್ವರನಯ್ಯಾ,
ಮಹಾಲಿಂಗ ಶಶಿಮೌಳಿ ಸದಾಶಿವಾ. ॥ ೧ ॥

೧೩೫

ಗುರುವಿನಿಂದ ಅಂಗದ ಮೇಲೆ ಶಿವಲಿಂಗ ಧಾರಣವಂ ಮಾಡಿ ತಾ ಭಕ್ತನೆನಿಸಿ,
ಹಿಂದೆ ಮುಂದೆ ವಿಚಾರಿಸದೆ, ಆಚಾರದಲ್ಲಿ ಅಧಿಕನೆನಿಸಿಕೊಳಬೇಕೆಂಬ
ತೊಳ ಮುಂದುಗೊಂಡು ಭಕ್ಷ್ಯ ಭೋಜ್ಯ ಲೇಹ್ಯ ಚೋಹ್ಯ ಪಾನ ಮೊದಲಾದ
ಪದಾರ್ಥದ ರುಚಿಗಳೆಲ್ಲಮಂ ಜಂಗಮದಿಂದ ಪ್ರಸಾದವ
ಪಡೆದುಕೊಂಬೆನೆಂದು ನೆನೆವ ಮಾಡುವರು.
ಅರ್ಪಿತಕ್ಕೆ ಸಲುವ ಪದಾರ್ಥಮಂ ಕಣ್ಣಿನಲ್ಲಿ ಕಂಡು, ಮನದಲ್ಲಿ ನೆನೆದು,
ಆ ಪದಾರ್ಥರುಚಿಗಳೆಲ್ಲ ತನ್ನ ಮನಕ್ಕೆ ತಟ್ಟಿದಲ್ಲಿ
ಆದ ಪ್ರಸಾದವ ಮಾಡಿಕೊಟ್ಟ ಜಂಗಮವಾರು ? ಅದ ಪಡೆದುಕೊಂಡ ಭಕ್ತನಾರು ?
ಎನಗಿದು ಚೋದ್ಯ ಚೋದ್ಯ. ಇದು ಪ್ರಸಾದಿಯ ಆಚರಣೆಯಲ್ಲ,
ಮಹಾಪ್ರಸಾದಿಯ ಆಚರಣೆ ಎಂಬುದು ಇಂದ್ರಿಯಂಗಳ ವಿಷಯದಿಂ
ತೋರಿದುದೆಲ್ಲಮಂ ಆಯಾ ಲಿಂಗಾರ್ಪಣೆಯಂ ಮಾಡಿ,
ಆ ಪರಿಣಾಮವು ತನ್ನ ಮನವ ನಂಬಿ, ಆ ಮನೋವ್ಯಾಪಾರದಿಂದ ನಡೆವ
ಮೂವತ್ತುಮೂರುಕೋಟಿ ಇಂದ್ರಿಯ, ಅರುವತ್ತಾರುಕೋಟಿ ಕರಣಂಗಳೆಲ್ಲವಂ
ಸರ್ವಕಾರಣವೆನಿಸಿದ ಆ ಪರವಸ್ತುವಿನ ಕರಣೇಂದ್ರಿಯಂಗಳೆಂದು
ಭಿನ್ನ ಭಿನ್ನವಾಗಿ ಆಯಾ ಲಿಂಗಕ್ಕೆ ಸಮರ್ಪಣೆಯ ಮಾಡುವಾತನೆ
ಮಹಾಪ್ರಸಾದಿಯಯ್ಯಾ, ಮಹಾಲಿಂಗ ಶಶಿಮೌಳಿ ಸದಾಶಿವ. ॥ ೨ ॥

೧೩೫೧

ನಿತ್ಯ ಕೇಡಿಲ್ಲದಂತ ನಿರೂಪಿಸಲ್ಬಾರದಂಥ,
ನಿರಾಕಾರ ಆಕಾರ ರಹಿತಮಾದಂಥ, ನಿರ್ನಾಮ ಹೆಸರಿಲ್ಲದಂಥ,
ನಿರಂಜನ ಅಜ್ಞಾನ ಕಾಳಿಕೆ ಹೊದ್ದದಂಥ, ನಿಸ್ಸಂಗಿ ಚಿಚ್ಛಕ್ತಿ ಸಮ್ಮೇಳವಿಲ್ಲದಂಥ,
ನಿರ್ನಾಮ ಹೆಸರಿಲ್ಲದಂಥ, ನಿರೂಪಕರ ಚರಣಾವಯವರಹಿತಮಾದಂಥ,

ನಿರ್ಲೇಪ ಮಾಯಾಪ್ರಪಂಚು ಸೋಂಕಿಲ್ಲದಂಥ,
ಶೂನ್ಯ ಕುರುಹುಗಾಣಿಸದಂಥ, ನಿಮಿತ್ತ ಪ್ರಪಂಚಿಗೆ ಕಾರಣಮಾದಂಥ,
ಅಖಂಡ ಸರ್ವವು ಪರಿಪೂರ್ಣಮಾದಂಥ, ಅದ್ವಯ ತಾನೊಂದಲ್ಲದೆ
ಎರಡಿಲ್ಲದಂಥ,
ಪರಕೆ ಪರವಿನಿಂದತತ್ತ್ವಣ ನಿರ್ಗುಣ ಪರಬ್ರಹ್ಮವು
ತನ್ನ ಸ್ವಲೀಲಾನಂದ ಪರಿಪೂರ್ಣ ಸಂತುಷ್ಟಿಯಿಂದೆ ಬೆರಗುವಡೆದು,
ಸುಷುಪ್ತಿಯನ್ನೈದಿ ಬಯಲು ಬಯಲಾದಂತಿಹುದು.
ಆ ಶೂನ್ಯಾನಂದಪೂರ್ಣವಹ ಕಾಲಕ್ಕೆ ಆ ಬ್ರಹ್ಮದ ಚೈತನ್ಯಜ್ಞಾನಪ್ರಭಾ
ಸಾಮರ್ಥ್ಯದ ಬೆಳಗೇ ಬೀಜದೊಳಗಣ ವೃಕ್ಷದಂತಿರ್ದು
ನನೆಯೊಳಗಣ ಪರಿಮಳ ಬಲಿದು ಬಿಂದು ನುಂಗಿದಂತೆ,
ಸುಷುಪ್ತಿಯನ್ನೈದಿದ ನಿರ್ಗುಣಬ್ರಹ್ಮಕ್ಕೆ ಚಿತ್ತು ಪ್ರಸನ್ನತೆಯಾಯಿತ್ತು,
ಆ ಚಿತ್ತೇ ಜ್ಞಾನಶಕ್ತಿಯೆನಿಸಿತ್ತು.
ಅದರಿಂ ಸ್ವಪ್ನಾವಸ್ಥೆಯ ಆರುಹಿನಂತಾಗೆ ಹಕಾರ ಪ್ರಣವೋತ್ಪತ್ಯಮಾದುದು.
ಆ ಹಕಾರ ಪ್ರಣಮವೆ ಭ್ರಮರ ಝೇಂಕಾರದಂತೆ ಓಂಕಾರನಾದವಾಯಿತ್ತು.
ಆ ಓಂಕಾರನಾದವೆಂಬ ಮಂತ್ರಲಿಂಗದಿಂದ ಅಕಾರ ಉಕಾರ ಮಕಾರವೆಂಬ
ಪ್ರಣವಬೀಜಾಕ್ಷರಂಗಳುತ್ಪತ್ಯವಾದವು.
ಆ ಅಕಾರವೆಂಬ ಬ್ರಹ್ಮಕ್ಕೆ ಉಕಾರವೆಂಬ ಚಿತ್ಪ್ರಣವೆ ಅಂಗಮಾಗೆ,
ಮ ಕಾರ ಪ್ರಣಮು ಕಲೆ ಸಂಧಿಸಲು,
ಅಖಂಡಗೋಳಕಾಕಾರ ತೇಜೋಮೂರ್ತಿಯಾಗಿ,
ಸತ್ವ ರಜತಮವೆಂಬ ಗುಣತ್ರಯಮಂ
ನಿವೃತ್ತಿ ಪ್ರತಿಷ್ಠೆ ವಿದ್ಯೆ ಶಾಂತಿ ಶಾಂತ್ಯತೀತ ಶಾಂತ್ಯತೀತೋತ್ತರೆ
ಎಂಬಾರು ಕಲಾಶಕ್ತಿಗಳು
ಕತೃಸಾದಾಖ್ಯ ಮಹಾಸಾದಾಖ್ಯಗಳೆಂಬ ಷಟ್ಸಾದಾಖ್ಯಗಳಮಂ
ಪೃಥ್ವಿ ಅಪ್ಪು ತೇಜ ವಾಯು ಆಕಾಶ ಮೊದಲಾದ ಪಂಚಭೂತಂಗಳುಮಂ,
ಪ್ರಾಣ ಅಪಾನ ವ್ಯಾನ ಉದಾನ ಸಮಾನವೆಂಬ ಪಂಚವಾಯುವಮಂ
ಶ್ರೋತ್ರ ತ್ವಕ್ಕು ನೇತ್ರ ಜಿಹ್ವೆ ಘ್ರಾಣವೆಂಬೈದು ಜ್ಞಾನೇಂದ್ರಿಯಮಂ
ಶಬ್ದ ಸ್ಪರ್ಶ ರೂಪ ಗಂಧವೆಂಬೈದು ವಿಷಯಮಂ
ವಾಕು ಪಾಣಿ ಪಾದ ಗುಹ್ಯ ವಾಯುವೆಂಬೈದು ಕರ್ಮೇಂದ್ರಿಯಮಂ
ಜ್ಞಾನ ಮನ ಬುದ್ಧಿ ಚಿತ್ತ ಅಹಂಕಾರವೆಂಬೈದು ಕರಣಮಂ
ಸಾಮವೇದ ಋಗ್ವೇದ ಯಜುರ್ವೇದ ಅಥರ್ವಣವೆಂಬ ನಾಲ್ಕು ವೇದಮಂ
ಭಕ್ತ ಮಾಹೇಶ್ವರ ಪ್ರಸಾದಿ ಪ್ರಾಣಲಿಂಗಿ ಶರಣ ಐಕ್ಯವೆಂಬಾರು ಸ್ಥಲಮಂ
ಪಂಚಭೂತಂಗಳಿಂದಾದ ಬ್ರಹ್ಮಾಂಡಾದಿ
ಸ್ವರ್ಗ ಮರ್ತ್ಯ ಪಾತಾಳ ಮೊದಲಾದ ಅನಂತ ಲೋಕಂಗಳಲ್ಲಿ
ಉತ್ಪತ್ತಿ ಸ್ಥಿತಿ ಲಯ ಕರ್ತೃಗಳಿಂದಾದ ಅಂಡಜ ಸ್ವೇದಜ ಉದ್ಭಿಜ ಜರಾಯುಜ

ಮುತ್ರಜ ಎಂಬೈದು ತೆರದುತ್ಪತ್ತ್ಯಮಂ
ಸಮಸ್ತಸ್ಥಾವರಜಂಗಮಂಗಳ ಜನನ ಮರಣ ಪುಣ್ಯ ಪಾಪ ಸ್ವರ್ಗ ನರಕಂಗಳು
ಇವು ಮೊದಲಾದ ಅನೇಕವೆಲ್ಲವು
ಚಿತ್ರಿಕನ ಊಹೆ ಚಿತ್ರಿಕನ ಭಾವದಲ್ಲಿ ಅಡಗಿದಂತೆ
ಸರ್ವವಿಶ್ವವೆಲ್ಲಮುಂ ತನ್ನ ಲೀಲೆಗುಂಟೆನಿಸಿ
ಏಕಮೇವಾದ್ವಿತೀಯಂ ಬ್ರಹ್ಮವೆ ಮಹಾಲಿಂಗವೆನಿಸಿತ್ತು.
ಆ ಮಹಾಲಿಂಗದ ಕಾರಕದಲ್ಲಿ ನ ಕಾರ, ದಂಡದಲ್ಲಿ ಮ ಕಾರ,
ಕುಂಡಲಿಯಲ್ಲಿ ಶಿ ಕಾರ
ಅರ್ಧಚಂದ್ರದಲ್ಲಿ ವ ಕಾರ, ದರ್ಪಣದಲ್ಲಿ ಯ ಕಾರ,
ಆ ಮಹಾಲಿಂಗದ ಪ್ರಣವ ಪಂಚಾಕ್ಷರದ ಚಿತ್ಕಳೆಯೇ ಪಂಚಮುಖ,
ದಶಪಂಚನೇತ್ರ, ದಶಭುಜ, ತನು ಏಕ,
ದ್ವಿಪಾದದಿಂದೆ ಪ್ರಪಂಚಿಗೆ ಕಾರಣವಾದ ಸದಾಶಿವಮೂರ್ತಿ ಎನಿಸಿತ್ತು.
ಆ ಮೂರ್ತಿಯ ಮುಖಗಳಾವವೆಂದರೆ:
ಸದ್ಯೋಜಾತ, ವಾಮದೇವ, ಅಘೋರ,
ತತ್ಪುರುಷ, ಈಶಾನ್ಯವೆಂಬೈದು ಮುಖಂಗಳು.
ಆ ಮುಖಂಗಳಿಂದ ಪ್ರಪಂಚಿಗಾಲಯಮಾದ ಬ್ರಹ್ಮಾಂಡವ ರಚಿಸುವ ಕಾರಣ,
ಐದು ಭೂತಂಗಳು ಹುಟ್ಟಿದವು, ಆ ಭೂತಂಗಳ ಗುಣಮಿಶ್ರ ಭೇದದಿಂದ
ಪಂಚೀಕರಿಸಲು ಪಂಚವಿಂಶತಿತತ್ವಂಗಳಾದವು.
ಅದೆಂತಾದವೆಂದರೆ:
ಆಕಾಶವೆಂಬ ಭೂತದಿಂದ ಜ್ಞಾನ ಬುದ್ಧಿ ಮನ ಚಿತ್ತ ಅಹಂಕಾರವೆಂಬ
ಪಂಚಕರಣಂಗಳು ಹುಟ್ಟಿದವು.
ವಾಯುವೆಂಬ ಭೂತದಿಂದ ಪ್ರಾಣ ಅಪಾನ ವ್ಯಾನ ಉದಾನ ಸಮಾನವೆಂಬ
ಪಂಚ ಪ್ರಾಣವಾಯುಗಳು ಹುಟ್ಟಿದವು.
ಅಗ್ನಿಯೆಂಬ ಭೂತದಿಂದ ಶ್ರೋತ್ರ ಸ್ಪರ್ಸಕ್ಕೆ ನೇತ್ರ ಜಿಹ್ವೆ ಘ್ರಾಣವೆಂಬೈದು
ಜ್ಞಾನೇಂದ್ರಿಯಂಗಳು ಪುಟ್ಟಿದವು.
ಅಪ್ಪುವೆಂಬ ಭೂತದಿಂದ ಶಬ್ದ ಸ್ಪರ್ಶ ರೂಪು ರಸ ಗಂಧವೆಂಬೈದು
ವಿಷಯಂಗಳು ಹುಟ್ಟಿದವು.
ಆ ಕರ್ಮೇಂದ್ರಿಯಂಗಳ ವಿಷಯ ವಚನ ದಾನ ಗಮನ ಆನಂದ ವಿಸರ್ಜನ
ಎಂಬೈದು ವಿಷಯಂಗಳು
ಮತ್ತಮಾ ಭೂತಂಗಳ ಗುಣಧರ್ಮ ಕರ್ಮವರ್ಣ ಅಧಿದೇವತೆಗಳಾವವೆಂದರೆ:
ಪೃಥ್ವಿಗೆ ಶಬ್ದ ಸ್ಪರ್ಶ ರೂಪು ರಸ ಗಂಧ ಈ ಐದು ಗುಣ.
ಕಠಿಣತ್ವವೆ ಧರ್ಮ, ಧಾರಣಾದಿ ಕರ್ಮ, ತದಂಗ ಪೀತವರ್ಣ
ಅಧಿದೇವತೆ ಬ್ರಹ್ಮ
ಅಪ್ಪುವಿಂಗೆ ಶಬ್ದ ಸ್ಪರ್ಶ ರೂಪು ರಸ ಈ ನಾಲ್ಕು ಗುಣ.

ದ್ರವಿಸೂದೆ ಧರ್ಮ, ಪಿಂಡಿ ಕರಣ ಕರ್ಮ,
ತದಂಗ, ಶ್ವೇತವರ್ಣ, ಅಧಿದೇವತೆ ವಿಷ್ಣು.
ಅಗ್ನಿಗೆ ಶಬ್ದ ಸ್ಪರ್ಶ ರೂಪ ಈ ಮೂರು ಗುಣ.
ಉಷ್ಣಿಸುವುದೆ ಧರ್ಮ, ವಚನಾದಿ ಕರ್ಮ, ತದಂಗ ರಕ್ತವರ್ಣ,
ಅಧಿದೇವತೆ ರುದ್ರನು.
ವಾಯುವಿಂಗೆ ಶಬ್ದ ಸ್ಪರ್ಶ ಎರಡು ಗುಣ, ಚಲಿಸುವುದೆ ಧರ್ಮ.
ವ್ಯಹನಾದಿ ಕರ್ಮ, ತದಂಗ ಹರೀತ ವರ್ಣ, ಅಧಿದೇವತೆ ಈಶ್ವರನು.
ಆಕಾಶಕ್ಕೆ ಶಬ್ದವೊಂದೆ ಗುಣ, ಬಯಾಲಗಿಹುದೆ ಧರ್ಮ.
ಸುಳಿವುದಕ್ಕೆ ತೆರಹುಗೊಡುವುದೆ ಕರ್ಮ, ತದಂಗ ಕೃಷ್ಣವರ್ಣ,
ಅಧಿದೇವತೆ ಸದಾಶಿವನು.
ಈ ಪಂಚಮಹಾಭೂತಂಗಳ ಪಂಚಾಂಶಿಕಭೇದಮಿಶ್ರದಿಂ
ಪಂಚೀಕೃತಿಯನೈದು ದೇಹವಾಯಿತ್ತು.
ಆ ಮಿಶ್ರವೆಂತೆಂದಡೆ:
ಆಕಾಶದೊಂದಂಶ ವಿಜ್ಞಾನ, ಆಕಾಶದೊಂದಂಶ ವಾಯುವ
ಕೂಡಲು ಮನಸ್ಸಾಯಿತು.
ಆಕಾಶದೊಂದಂಶ ಅಗ್ನಿಯ ಕೂಡಲು ಬುದ್ಧಿ ಎನಿಸಿತ್ತು.
ಆಕಾಶದೊಂದಂಶ ಅಪ್ಪುವ ಕೂಡಲು ಚಿತ್ತವೆನಿಸಿತ್ತು.
ಆಕಾಶದೊಂದಂಶ ಪೃಥ್ವಿಯ ಕೂಡಲು ಅಂಹಕಾರವೆನಿಸಿತ್ತು.
ವಾಯುವಿನೊಂದಂಶ ಆಕಾಶವ ಕೂಡಲು ಸಮಾನವಾಯುವೆನಿಸಿತ್ತು.
ವಾಯುವಿನೊಂದಂಶ ವಾಯುವಿನಲ್ಲಿ ಕೂಡಲು ಉದಾನವಾಯುವೆನಿಸಿತ್ತು.
ವಾಯುವಿನೊಂದಂಶ ಅಗ್ನಿಯ ಕೂಡಲು ವ್ಯಾನವಾಯುವೆನಿಸಿತ್ತು.
ವಾಯುವಿನೊಂದಂಶ ಅಪ್ಪುವ ಕೂಡಲು ಅಪಾನವಾಯುವೆನಿಸಿತ್ತು.
ವಾಯುವಿನೊಂದಂಶ ಪೃಥ್ವಿಯ ಕೂಡಲು ಪ್ರಾಣವಾಯುವೆನಿಸಿತ್ತು.
ಅಗ್ನಿಯದೊಂದಂಶ ಆಕಾಶವ ಕೂಡಲು ಶ್ರೋತ್ರವೆನಿಸಿತ್ತು.
ಅಗ್ನಿ ಯದೊಂದಂಶ ವಾಯುವ ಕೂಡಲು ತ್ವಕ್ಕೆನಿಸಿತ್ತು.
ಅಗ್ನಿಯದೊಂದಂಶ ಅಗ್ನಿಯಲ್ಲಿ ಕೂಡಲು ನೇತ್ರವೆನಿಸಿತ್ತು.
ಅಗ್ನಿಯದೊಂದಂಶ ಅಪ್ಪುವಿನಲ್ಲಿ ಕೂಡಲು ಜಿಹ್ವೆಯೆನಿಸಿತ್ತು.
ಅಗ್ನಿಯದೂಂದಂಶ ಪೃಥ್ವಿಯ ಕೂಡಲು ಶಬ್ದವೆನಿಸಿತ್ತು.
ಅಪ್ಪುವಿನದೊಂದಂಶ ಆಕಾಶವ ಕೂಡಲು ಶಬ್ದವೆನಿಸಿತ್ತು.
ಅಪ್ಪುವಿನದೊಂದಂಶ ವಾಯುವ ಕೂಡಲು ಸ್ಪರ್ಶವೆನಿಸಿತ್ತು.
ಅಪ್ಪುವಿನದೊಂದಂಶ ಅಗ್ನಿಯ ಕೂಡಲು ರೂಪವಿನಿಸಿತ್ತು.
ಅಪ್ಪುವಿನದೊಂದಂಶ ಅಪ್ಪುವಿನಲ್ಲಿ ಕೂಡಲು ರಸವೆನಿಸಿತ್ತು.
ಅಪ್ಪುವಿನದೊಂದಂಶ ಪೃಥ್ವಿಯ ಕೂಡಲು ಗಂಧವೆನಿಸಿತ್ತು.
ಪೃಥ್ವಿಯದೊಂದಂಶ ಆಕಾಶವ ಕೂಡಲು ವಾಕ್ಕೆನಿಸಿತ್ತು.

ಪೃಥ್ವಿಯದೊಂದಂಶ ವಾಯುವ ಕೂಡಲು ಪಾಣಿಯೆನಿಸಿತ್ತು,
ಪೃಥ್ವಿಯದೊಂದಂಶ ಅಗ್ನಿಯ ಕೂಡಲು ಪಾದವೆನಿಸಿತ್ತು,
ಪೃಥ್ವಿಯದೊಂದಂಶ ಅಪ್ಪುವ ಕೂಡಲು ಗುಹ್ಯವೆನಿಸಿತ್ತು,
ಪೃಥ್ವಿಯದೊಂದಂಶ ಪೃಥ್ವಿಯಲ್ಲಿ ಕೂಡಲು  ಪಾಯವೆಂದೆನಿಸಿತ್ತು,
ಇಂತೀ ಪಂಚಭೂತಂಗಳ ಗುಣಮಿಶ್ರದಿಂದ
ಆತ್ಮಂಗೆ ಪಂಚವಿಂಶತಿತತ್ವಮಾದಂಥ ದೇಹಮಾಯಿತ್ತು.
ಬಳಿಕ ಈ ಪಂಚವಿಂಶತಿತತ್ವದಿಂದ ಜಗದುತ್ಪತ್ಯಮಾದುದು.
ಅದೆಂತಾದುದೆಂದಡೆ:
ಆ ಪಂಚಬ್ರಹ್ಮವೆನಿಸಿದ ಸದಾಶಿವಮೂರ್ತಿಯ
ಸದ್ಯೋಜಾತಮುಖದಿಂದ ಪೃಥ್ವಿ ಪುಟ್ಟಿತ್ತು.
ಆ ಪೃಥ್ವಿಯ ವಾಮದೇವಮುಖದಿಂದಾದ ಅಪ್ಪುವಿನಿಂ ಕಲಸಿ,
ಮೃತ್ಪಿಂಡಮಂ ಮಾಡಿ, ಅಘೋರಮುಖದಿಂದಾದ ಅಗ್ನಿಯಿಂ ದಹಿಸಿ,
ತತ್ಪುರುಷಮುಖದಿಂದಾದ ವಾಯುವಿನಿಂ ಸೀತಳವೆನಿಸಿ,
ಈಶಾನ್ಯಮುಖದಿಂದಾದ ಆಕಾಶದಿಂ ಆ ಮೃತ್ಪಿಂಡದೊಳಗೆ ಬಯಲು ಮಾಡಿ,
ಆ ಸುವರ್ಣಮಯ ಕಂತುಕವನೆ ಸದಾಶಿವಮೂರ್ತಿ ಅನೇಕಕಾಲ ಪಿಡಿದಿರ್ದು,
ಆ ಮೂರ್ತಿಗೆ ಪ್ರಪಂಚುಲೀಲಾನಂದ ಮುಂದುಗೊಂಡು,
ತನ್ನ ಸತ್ವ ರಜ ತಮವೆಂಬ ಗುಣತ್ರಯದಿಂದೆ
ಸೃಷ್ಟಿ ಸ್ಥಿತಿ ಲಯ ಕರ್ತೃವಾದಿಯಾದ ಬ್ರಹ್ಮ ವಿಷ್ಣು ರುದ್ರರನು
ತನ್ನ ನೆನಹುಮಾತ್ರದಿಂದ ತತ್ವಮೂವತ್ತಾರರಿಂದೆ ದೇಹಿಗಳೆನಿಸಿ,
ಆ ತ್ರೈಮೂರ್ತಿಗಳಿಗೆ ಅಹಂ ಮಮತೆಯುಂ ಪುಟ್ಟಿಸಿ, ಜೀವಾತ್ಮರೆನಿಸಿ,
ಪುಣ್ಯ ಪಾಪವೆಂಬ ಕರ್ಮದುದ್ಯೋಗಮಂ ಪ್ರೇರಿಸಿ,
ಜನನ ಮರಣ ದುಃಖ ಬಂಧ ಮೋಕ್ಷಂಗಳೆಂಬ ಭವಮಾಲೆಗೊಳಗುಮಾಡಿ,
ಆ ಸುವರ್ಣಮಯ ಕಂತುವನೆ ಆ ಮೂರ್ತಿ
ತನ್ನ ನಖಾಗ್ರದಿಂದ ಇಬ್ಭಾ ಎನಿಸಿ,
ಅದಕ್ಕೆ ಕಪ್ಪರಕಟಹವೆಂದು ಪೆಸರಿಟ್ಟು, ಆ ತ್ರೈಮೂರ್ತಿಗಳಿಗೆ
ಪ್ರಪಂಚು ನಿಮ್ಮಿಂದ ನಡೆಯಲೆಂದು ಕಟ್ಟಳೆಯಂ ಮಾಡಿದಲ್ಲಿ,
ಬ್ರಹ್ಮಾಂಡದ ಕರ್ಪರದೊಳಪೊಕ್ಕ ಕರಂಡ ಮುಚ್ಚಳವಂ ಮುಚ್ಚಿದಂತೆ,
ಆ ಕಪ್ಪರಕಟಹಕ್ಕೆ ಬೆಸುಗೆಗೊಳಿಸಿ,
ಬಳಿಕ ಅಂಡಜ ಶ್ವೇದಜ ಉದ್ಭಿಜ ಜರಾಯುಜ
ಮಂತ್ರಜವೆಂಬೈದು ತೆರದುತ್ಪತ್ಯದಿಂ
ಸಮಸ್ತ ಸ್ಥಾವರ ಜಂಗಮಂಗಳು ಪಂಚಭೂತಕಾಯಮಂ ಧರಿಸಿ,
ರೂಪು ವರ್ಣನಾಮ ಜಾತಿ ಭೇದಂಗಳಿಂದ ಪ್ರಪಂಚಿನ ಹೊದರೊಡೆದುದು.
ಬಳಿಕ ಸ್ಥಾವರ ಜಂಗಮಂಗಳ ಜಾತಿಭೇದವೆಂತೆಂದಡೆ:
ನವಲಕ್ಷ ಮನುಷ್ಯಜಾತಿ, ಹದಿನಾಲ್ಕುಲಕ್ಷ ದೇವಜಾತಿ,

ಹತ್ತುಲಕ್ಷ ಜಲಚರಂಗಳು, ಹತ್ತುಲಕ್ಷ ಬಹುಪಾದಜೀವಿಗಳು,
ಹತ್ತು ಲಕ್ಷ ಸರ್ಪಜೀವಿಗಳು, ಹತ್ತ ಲಕ್ಷ ಖೇಚರ ಸಂಚಾರಿಗಳು,
ಒಂದುಲಕ್ಷ ಜಾತಿಭೂತಪ್ರಾಣಿಗಳು, ಇಪ್ಪತ್ತುಲಕ್ಷ ಸ್ಥಾವರಜನ್ಮಗಳು.
ಅಂತು ಎಂಬತ್ತುನಾಲ್ಕುಲಕ್ಷ ಜಾತಿಭೇದಂಗಳು, ಅವರ
ಕರ್ಮಕೃತ್ಯದ ಯುಗಂಗಳು :
ಕೃತಯುಗ ತ್ರೇತಾಯುಗ ದ್ವಾಪರಯುಗ ಕಲಿಯುಗವೆಂಬೀ
ನಾಲ್ಕುಯುಗಂಗಳು.
ಆ ಯುಗಂಗಳಿಗೆ ಸಂವತ್ಸರವಿಷ್ಟೆಂದು, ಸಂವತ್ಸರಕ್ಕೆ ಮಾಸವಿಷ್ಟೆಂದು
ಮಾಸ ಒಂದಕ್ಕೆ ದಿನಗಣನೆಯಂ ಮಾಡಿ, ದಿನ ಒಂದಕ್ಕೆ ದಿನಾ ರಾತ್ರಿ
ಕಾಲತ್ರಯಂಗಳುಂಟೆನಿಸಿ,
ಅಹಂಕಾರವೆಂಬ ಕಂಬದಲ್ಲಿ ಮಾಯಾಸೂತ್ರದಿಂದ ಕಟ್ಟುವಡೆಸಿ, ಸಂಚಿತ
ಪ್ರಾರಬ್ಧವೆಂಬಾಹಾರವನಿತ್ತು
ಸಮಸ್ತಸ್ಥಾವರ ಜಂಗಮಂಗಳ ಕಾಲಕಾಮರ ವಶವಂ ಮಾಡಿ,
ಯುಗಧರ್ಮದ ಸ್ಥೂಲಸೂಕ್ಷ್ಮದಿಂ ನಡೆವ ಪುಣ್ಯಪಾಪವೆಂಬ
ಪಥವೆರಡರಲ್ಲಿ ಸಂಚಾರವ ಮಂಡಿಸಿ,
ಜನ್ಮದ ಕಡೆಗಾಣದವರಿಗೆ ನರಕ ಪ್ರಾಪ್ತಿಯನೈದಿಸಿ,
ಪುಣ್ಯಶರೀರಿಗಳಿಗೆ ಸ್ವರ್ಗಾದಿ ಭೋಗಗಳುಂಟಾಗಿಹವು.
ಮತ್ತಮಾ ಬ್ರಹ್ಮಾಂಡದ ಒಳ ವಳಯದ ಖರ್ಪರದಲ್ಲಿ
ಘನಗಂಭೀರಮಾದ ವಾರಿ ಪೂರಿತಮಾಗಿಹುದು.
ಅವರ ಮಧ್ಯದಲ್ಲಿ ವಿಶ್ವಕರ್ಮ ನಿರ್ಮಿತ ದಿವ್ಯಸಿಂಹಾಸನದ ಮೇಲೆ,
ಜಲಸ್ತಂಭಕತ್ವದಿಂ ಮೆರೆವಾಧಾರಶಕ್ತಿ ಹಿರಣ್ಮಯ ಶರೀರದಿಂ
ಏಕವಕ್ತ್ರ ತ್ರಿಲೋಚನ ಪಾಶಾಂಕುಶ ವರದ ಭಯಂಕರ ಮೊದಲಾದ
ಕರಚತುಷ್ಟಯಂಗಳಿಂ ಶಿವಧ್ಯಾನಪೂರಿತಳಾಗಿ,
ನಿಶ್ಚಲಾತ್ಮಕಿಯಾಗಿರುತ್ತಿಪ್ಪಳ ಮಸ್ತಕದಲ್ಲಿ ಸೂಡಿದ ಹೊಂದಾವರೆಯಂತೆ
ದಶಕೋಟಿಯೋಜನ ವಿಶಾಲದಿಂದೆ
ಸುವರ್ಣಮಯರಚನೆಯಾದ ಕೂರ್ಮನಿಹುದು.
ಆ ಕೂರ್ಮನ ಬೆನ್ನು ಸುತ್ತುವಳಯದೊಳಿಂದ್ರಾದಿ ದಿಕ್ಕೆಂಟರೊಳು
ಕ್ರಮದಿಂದೈರಾವತ ಪುಂಡರೀಕ ವಾಮನ ಕುಮುರ ಅಂಜನ ಪುಷ್ಪದಂತ
ಸಾರ್ವಭೌಮ ಸುಪ್ರತೀಕವೆಂಬ ಅಷ್ಟದಿಗ್ಗಜಂಗಳಿಪ್ಪವು.
ಮತ್ತಂ ಅಭ್ರಮೆ ಕಪಿಲೆ ಪಿಂಗಳೆ ಅನುಪಮೆ ತಾಮ್ರಪರ್ಣಿ
ಶುಭ್ರದಂತ ಅಂಗನೆ ಅಂಜನಾವತಿಯೆಂಬ ಸ್ತ್ರೀಯರಂ ಕೂಡಿ ಬಂಧಿಸಿದ
ಫಣೆಗಳಾವವೆಂದರೆ:
ಅನಂತ ತಕ್ಷಕ ವಾಸುಗಿ ಶಂಖಪಾಲ ಪದ್ಮ ಕರ್ಕೋಟಕ ಕ್ರೋಧ ಕಾಳಾ
ಎಂಬಷ್ಟಕಾಲ ಫಣೆಗಳಿರ್ಕ್ಕುಂ.

ಮತ್ತಮಾ ಕೂರ್ಮನ ಬೆನ್ನ ಮಧ್ಯದಲ್ಲಿ ನೆಲಸಿ, ಪರಮೈಶ್ವರ್ಯಸಂಪನ್ನನಾಗಿ
ಮೆರೆದ ಮಹಾಶೇಷನು ಸಹಸ್ರಫಣಾಮಣಿಗಳಿಂದೊಪ್ಪುತ್ತಿಹನು.
ಆ ದಿಗ್ಗಜಂಗಳ ಮಹಾಶೇಷನ ಫಣಾಮಣಿಗಳ ಮೇಲೊಪ್ಪುವ.
ಹಿರಣ್ಮಯ ಭೂಮಿಯೊಂದು ಕೋಟಿಯೋಜನದಳತೆಯ ದಟ್ಟೈಸುತ್ತಮಾಗಿಪ್ಪುದು.
ಮತ್ತಂ ಆ ಭೂಮಿಯಲ್ಲಿ ಸಪ್ತಸಮುದ್ರಂಗಳು, ಸಪ್ತದ್ವೀಪಂಗಳು.
ಸಪ್ತಕುಲಪರ್ವತಂಗಳು ಇಪ್ಪವು.
ಬಳಿಕ ಆ ಭೂಮಿಯಿಂ ಕೆಳಗೆ ಅತಳ ವಿತಳ ಸುತಳ ಮಹೀತಳ
ತಳಾತಳ ರಸಾತಳ ಪಾತಾಳ ಎಂಬೇಳು ಲೋಕ ಉಂಟಾಗಿಪ್ಪವು.
ಮತ್ತಂ ಭೂಲೋಕ ಭುವರ್ಲೋಕ ಸುವರ್ಲೋಕ ಮಹರ್ಲೋಕ
ಜನರ್ಲೋಕ ತಪರ್ಲೋಕ ಸತ್ಯಲೋಕ ಎಂಬಿವು ಮೊದಲಾದ
ಹದಿನಾಲ್ಕುಲೋಕಗಳು.
ಬಳಿಕ ಸಪ್ತದ್ವೀಪಂಗಳಲ್ಲಿ ಮುಖ್ಯವಾದ ಜಂಬೂದ್ವೀಪ ಮಧ್ಯದಲ್ಲಿ
ಭೂಕಾಂತೆಯ ನಾಭಿಯ ಕಮಲಕರ್ಣಿಕೆಯಂತೆ
ಲಕ್ಷಯೋಜನೋನ್ನತ ಪ್ರಮಾಣಿನಿಂದೆ ಸವರ್ಣಮಯ ವಿಚಿತ್ರರಚನೆಯಿಂದ
ಮಹಾಮೇರು ಹದಿನಾರುಸಾವಿರಯೋಜನದಳತೆಯ ಭೂಮಿಯಲ್ಲಿ ನೆಟ್ಟು,
ಭೂಮಿಯಿಂದ ಮೇಲೆ ಕಂಕಣತ್ರಯದಿಂ
ಎಂಬತ್ತುನಾಲ್ಕು ಸಾವಿರಯೋಜನಪ್ರಮಾಣಿಂದಿಹುದು.
ಆ ಮೇರುವಿನ ಅಗ್ರದಲ್ಲಿ ತ್ರೈಮೂರ್ತಿಗಳ ಪಟ್ಟಣಂಗಳಿಪ್ಪವು.
ಊರ್ಧ್ವಕಂಕಣದಿ ಇಂದ್ರಾದಿ ದಿಕ್ಪಾಲಕರ ಪಟ್ಟಣಂಗಳಿಪ್ಪವು.
ಮಧ್ಯಕಂಕಣದಿ ಮನುಮುನಿಸಿದ್ಧರಿರ್ಕುಂ.
ಮೊದಲ ಕಂಕಣದಲ್ಲಿ ದನುಜ ದಿವಿಜ ಗಂಧರ್ವ ಭೇದಗಳನೇಕರುಂಟಾಗಿಹರು.
ಆ ಮೇರುವಿನ ಮೂಲಗುಹೆಗಳಲ್ಲಿ ದೇವಗಣಗಳಿಪ್ಪರು.
ಆ ಮೇರುವಂ ಬಳಸಿ ನಾಲ್ಕು ಕೀಲಕಪರ್ವತಂಗಳಿಪ್ಪವು.
ಆ ಪರ್ವತಂಗಳಲ್ಲಿ ಅಂಗಪೂಜಕರಾಗಿ ಬಹುವಿಧದ ದೇವತೆಗಳಿಪ್ಪರು.
ಆ ಮೇರುವಂ ಬಳಸಿ ಸುರಸಂತತಿಗಳ ಕ್ರೀಡಾವಿನೋದಾರ್ಥವಾಗಿ
ಚೈತ್ರರಥಾದಿ ನಾಲ್ಕು ವನಂಗಳಿಪ್ಪವು.
ಆ ವನಂಗಳ ಮಧ್ಯದೊಳೊಂದೊಂದು
ಮಾಡವೆಟ್ಟಗಳು ನವರತ್ನ ಮಯವಾಗಿಪ್ಪವು.
ಮಂದಾರ ಪಾರಿಜಾತ ಸಂತಾನ ಕಲ್ಪವೃಕ್ಷ
ಹರಿಚಂದನವೆಂಬೈದು ಸುರತರುಗಳಿಪ್ಪವು.
ಬಳಿಕ ಕಾಮಧೇನು ಚಿಂತಾಮಣಿ ಮರಿಜವಳಿ ಪರುಷದಖಣಿ
ಸಿದ್ಧರಸದ ಮಡು ಸಂಜೀವನ ಬಾವನ್ನ ಮಲಯಜ
ಅಮೃತಮಯವಾದ ವಾಪಿ ಕೂಪ ತಟಾಕ ನದಿ ಹರಿ ಕಾಲುವೆಗಳಿಂ
ಕಮಲ ಕುಮುದ ಸುರಗಿ ಸೇವಂತಿ ಜಾಜಿ ಮೊಲ್ಲೆ ಮಲ್ಲಿಗೆ ಜಾಜಿ

ಸಂಪಗೆ ಪಾದರಿ ಮೊದಲಾದ ಲತೆ ವೃಕ್ಷಂಗಳಿಪ್ಪವು.
ಅಲ್ಲಿಯ ಕುಸುಮ ಮಕರಂದ ಸೌರಭವನುಂಡು, ಮಥಿಸಿ,
ಝೇಂಕರಿಸುತಾನಂದಿಪ ಮಧುಕರಂಗಳಿಂ
ಚಕೋರ ಚಕ್ರವಾಕ ರಾಜಹಂಸೆ ಮೊದಲಾದ ನೀರ್ವಕ್ಕಿಗಳಿಂ
ವನಸಂಚಾರದಿಂದಂ ನಂದಿ ಪಶುಕಪಿಗಳಿಂ
ಬಾವನ್ನಮಂ ಬಳಸಿ ಸುತ್ತಿದ ಫಣಿಗಳಿಕೆಯಿಂ,
ಸಮಸ್ತಕುಸುಮಗಂಧವನಾಲಂಗಿಸಿ ಶೈತ್ಯ ಸೌರಭ್ಯಮಾಂದ್ಯದಿಂ
ನಡೆದು ಸಂಚರಿಪ ಮಲಯಾನಿಲನಿಂ ಮನೋಹರವಾಗಿ,
ಅಲ್ಲಿ ಕ್ರೀಡಾವಾಸಿಗಳಾದ ಗಂಧರ್ವರ
ಪಂಚೇಂದ್ರಿಯಂಗಳು ತೃಪ್ತಿವೊಡದಿರ್ಕುಂ.
ಮತ್ತಮಾ ಭೂಮಿಗೆ ಒಂದುಲಕ್ಷಯೋಜನ ಉನ್ನತಪ್ರಮಾಣಿನಲ್ಲಿ
ಸೂರ್ಯನ ಲೋಕ ಇಪ್ಪುದು.
ಆ ಸೂರ್ಯನ ರಥ ಕೆತ್ತಿದ ರತ್ನ ಗಂಬಳಿಗಳಿಂದೆತ್ತಿದ ರೆಕ್ಕೆಯ
ಪತಾಕೆಗಳಿಂದಲಂಕಾರಂಗೆಯ್ದು,
ವಿಶ್ವಕರ್ಮ ನಿರ್ಮಿತವಾದ ರತ್ನಸಿಂಹಾಸನದಿ
ರಥಾರೂಢನಾದ ಸೂರ್ಯನ ಶರೀರ ಪ್ರಮಾಣು
ಒಂಬತ್ತು ಸಾವಿರಯೋಜನ ಪ್ರಮಾಣಿನುನ್ನತವಿಪ್ಪುದು.
ಹಿಮಕಿರಣ ಮುನ್ನೂರಮೂವತ್ತು ಮೂರು,
ಉಷ್ಣಕಿರಣ ಮುನ್ನೂರಮೂವತ್ತು ಮೂರು.
ವರ್ಷಕಿರಣ ಮುನ್ನೂರಮೂವತ್ತು ಮೂರು.
ಬೀಜ ಭೂತ ಕಿರಣ ಒಂದು ಅಂನತಸಹಸ್ರ ಕಿರಣ ಜ್ಯೋತಿಪ್ರಭಾಮಂಡಲ
ಇಪ್ಪತ್ತೇಳುಸಾವಿರ ಯೋಜನಪ್ರಮಾಣಿನಿಂದಿಹುದು.
ಬಳಿಕ ಗಂಧಮಾಲ್ಯ ರತ್ನಾಭರಣ ದಿವ್ಯದುಕೂಲದಿಂದಲಂಕೃತವಡೆದು,
ಖಡ್ಗಪಾಣಿಯೆನಿಸಿ ತನ್ನ ರಥ ಸಂಚಾರ
ಜೋಡಣೆಯಂ ಮೇರುವಿನಲ್ಲಿ ಬೆಸುಗೆಗೊಳಿಸಿ,
ಲೋಕಾಲೋಕ ಪರ್ವತದ ಒಳ ಒಳಂತುದೊಳ್ಬಳಸಿ,
ಸಂವತ್ಸರ ಮತ್ತು ಧರ್ಮವರಿದು ತನ್ನ ಕಿರಣ ಸಂಚಾರವಂ ಮಾಡಿಸಿ,
ಮೇರು ಪ್ರದಕ್ಷಿಣದಿಂದೆ ಭೂಲೋಕಕ್ಕೆ ದಿವಾರಾತ್ರೆ ಕಾಲತ್ರಯಂಗಳಂ ನಡೆಸಿ,
ತನ್ನಿಂದಾದ ಸಿದ್ಧಾಂತದಿಂದ ತಿಥಿ ವಾರ ನಕ್ಷತ್ರ ಯೋಗ ಕರಣವೆಂಬ
ಪಂಚಾಂಗದಿಂ ಮೀನಾದಿ ಹನ್ನೆರಡು ರಾಶಿಗಳು,
ಅಶ್ವನಿ ಭರಣಿ ಕೃತ್ತಿಕೆಯಾದಿಯಾದ ಇಪ್ಪತ್ತೇಳು ನಕ್ಷತ್ರಂಗಳಲ್ಲಿ,
ತಾನಾದಿಯಾದ ಇಪ್ಪತ್ತೇಳು ನಕ್ಷತ್ರಂಗಳಲ್ಲಿ ಪ್ರವೇಶಿತವಾಗಿ,
ಸಮಸ್ತಸ್ಥಾವರ ಜಂಗಮಂಗಳ ಜನನಕಾಲದ ಮುಹೂರ್ತಭೇದಂಗಳಲ್ಲಿ
ಶುಭಾಶುಭ ಗ್ರಹಯೋಗಗಳಿಂದ ಅಂತರ್ದಶೆ ಮಹರ್ದಶೆಗಳಿಂ,

ಅವರವರ ನಾಮಭೇದದಿಂ ಫಲಭೇದಗಳು ತಟ್ಟಿ
ಬಹದೆ ಗ್ರಹಚಾರವೆನಿಸುವುದು.
ಮತ್ತಮಾ ಸೂರ್ಯನಿಂ ಮೇಲೆ ಲಕ್ಷಯೋಜನದುನ್ನತದಿಂ
ಅಮೃತಪೂರಿತವಾದ ಷೋಡಶಕಲೆಗಳಿಂ ರಾಜಿಸುವ ಚಂದ್ರನ ಲೋಕವಿಪ್ಪುದು.
ಆ ಚಂದ್ರನೆ ತನ್ನ ವಿರತಗಾತಿಶಯದಿ ಸುರಸಂತತಿಯ ಅಮೃತಕಿರಣದಿ
ತೃಪ್ತಿಪಡಿಸಿದ ಮಾಸಾರ್ಧವೆ ಕೃಷ್ಣಪಕ್ಷವೆನಿತ್ತು.
ಬಳಿಕೆ ಸೂರ್ಯನಿಂ ಪಡೆದ ಅಮೃತಕಿರಣ
ವೃದ್ಧಿಯ ಮಾಸಾರ್ಧವೆ ಶುಕ್ಲ ಪಕ್ಷವೆನಿಸಿತ್ತು,
ಬಳಿಕ ಚಂದ್ರನಿಂ ಮೇಲೆ ಬುಧ ಬೃಹಸ್ಪತಿ ಶುಕ್ರ ಶನಿ ಮಂಗಳ
ಅವರವರ ನಾಮಭೇದಗಳಿಂದವರವರ ಲೋಕಂಗಳಿಪ್ಪಿಪ್ಪು
ಯೋಜನಪ್ರಮಾಣಮೆನಿಸಿರ್ಕು.
ರಾಹುಕೇತುಗಳೆರಡು ಶನೀಶ್ವರನ ಲೋಕದಲ್ಲಿ ಇಪ್ಪವು,
ಬಳಿಕ ವಾಯುವಿನಿಂದುದಿಸಿದ ಪ್ರಜೇತಸ್ಯೆಂಬ ವಾಯು,
ಉತ್ಕೃಷ್ಟವಾದ ಪ್ರಚಂಡವಾಯುವೆನಿಸಿ, ಗಿರಿಶೃಂಗಮಹಾವೃಕ್ಷಂಗಳಂ ಮುರಿದು,
ಪಾವಕನೆಬ್ಬಿಸಿ ಅರಣ್ಯವಂ ದಹಿಸಿ, ಸಮುದ್ರಜಲಮಂ ತುಳುಕಿ,
ಅತ್ತಿತ್ತೆನಿಸಿ ಬಡಬಾಗ್ನಿಯ ಪಟುತರಂಗೈದು.
ಭೂವಿಗೆ ಶತಯೋಜನೋನ್ನತದೊಳಿರ್ದು ಪ್ರಚೇತನೆಂಬ ವಾಯುವು,
ಮಿಂಚುವರ್ಣದ ಮೂಕವೆಂಬ ಮೇಘವನೆಬ್ಬಿಸಿ ತಂದು,
ಸಮುದ್ರೋದಕಮಂ ಮೊಗದೆತ್ತಿ ಮೇಘಗಳಂ ತುಂಬಿ,
ಭೂಮಿಯಿಂದ ಮೇಲೆ ನೂರಾ ಇಪ್ಪತ್ತು
ಯೋಜನಾಂತರದೊಳಿರ್ದ ಮೇಘಂಗಳಂ ನಿಲಿಸಿ,
ಬಳಿಕಲ್ಲಿರ್ದುದಕಮಂ ಚಳಯಂಗೊಡುವಂತೆ ಕೆದರಿ ಚೆಲ್ಲಿ,
ವೃಷ್ಟಿಯಾಗಿ ಕರೆದು, ಆ ಮೇಘಂಗಳಂತೆ ನಿಲಿಸಿಕೊಂಡು ಪೋಪುದು.
ಆ ದೃಷ್ಟಿಜಲಶಾಂತಿಯಿಂದೆ ಸಮಸ್ತಸ್ಥಾವರ ಜಂಗಮಂಗಳು ಚೇತನಮಾಗಿಪ್ಪವು.
ವಾಯುಭೇದ ಜಲಭೇದದಿಂದೊಂದೊಂದು
ದೇಶರಿತುಧರ್ಮದಿಂದಾರೋಗ್ಯ ಅನಾರೋಗ್ಯ ಉಂಟಾಗಿಹವು.
ಮತ್ತಾ ಜಂಬೂದ್ವೀಪಮಂ ಬಳಸಿದ
ಲವಣಸಮುದ್ರ ಲಕ್ಷಯೋಜನದಳತೆಯಿಂದಿಪ್ಪುದು.
ಆ ದ್ವೀಪವನಾಳ್ವ ಮೇಧಾತಿಥಿ ಎಂಬ ಭೂಪತಿ.
ಮೂರು ತಾಳೋನ್ನತ ಶರೀರದಿಂ ಆಭರಣ ಗಂಧಮೌಲ್ಯ ಅಲಂಕಾರದಿ
ಕಲ್ಪವೃಕ್ಷದಾಹಾರದಿಂ ಜರೆರುಜೆಗಳಿಲ್ಲದೆ
ಇಪ್ಪತ್ತುಸಾವಿರವರುಷದಾಯುಷ್ಯದಿಂದಿಪ್ಪುದು.
ಮತ್ತಂ ಅದಂ ಬೆಳಸಿದ ಕ್ಷೀರಸಮುದ್ರ ಎರಡುಲಕ್ಷಯೋಜನದಳತೆಯಿಂ

ಅಹಲ್ಯೆ ಸಿರಿ ತಾರಾದೇವಿ ಸುಧೆ ಸುಧಾಂಶು ಸುರತರು ಸುರಧೇನು ಚಿಂತಾಮಣಿ
ಮುಖ್ಯವಾದ ವಸ್ತುಗಳುದಿಸಿದೆಡೆ ಎನಿಸಿ,
ಹತ್ತುಸಾವಿರ ಯೋಜನೆ ವಿಶಾಲ ಕನಕಮಣಿಮಯ
ವಿಚಿತ್ರರಜೆಯಿಂದಾದರಮನೆಯಲ್ಲಿ ಕುಶದ್ವೀಪವಿಪ್ಪುದು.
ಅದಕ್ಕೆ ಪುಷ್ಪದತ್ತನೆಂಬ ಭೂಪತಿ, ಮೂರು ತುಳಾಪ್ರಮಾಣ ಶರೀರದಿಂದೆ
ಗಂಧಮಾಲ್ಯ ವಸ್ತ್ರಾಭರಣದಿಂದಲಂಕಾರವಡೆದು,
ಜರೆರುಜೆಗಳಿಲ್ಲದೆ ಇಪ್ಪತ್ತು ಸಾವಿರವರುಷ ಆಯುಷ್ಯದಿಂದಿಪ್ಪರು.
ಮತ್ತದಂ ಬಳಸಿದ ನಾಲ್ಕುಲಕ್ಷ ಯೋಜನದಳತೆಯಗಲದಿಂ
ದಧಿಸಮುದ್ರವಿಪ್ಪುದು.
ಮತ್ತದಂ ಬಳಸಿ ಎಂಟುಲಕ್ಷ ಯೋಜನದಳತೆಯದಿಂದೆ ಕ್ರೌಂಚದ್ವೀಪವಿಪ್ಪುದು.
ಜ್ಯೋತಿಷ್ಮಂತನೆಂಬ ಭೂಪತಿ, ಉನ್ನತಶರೀರದಿಂ
ಗಂಧಮಾಲ್ಯ ವಸ್ತ್ರಾಭರಣದಿಂದಲಂಕಾರವಡೆದು
ಕಲ್ಪವೃಕ್ಷದಾಹಾರದಿಂದ ಜರೆರುಜೆಗಳಿಲ್ಲದೆ,
ಇಪ್ಪತ್ತುಸಾವಿರ ವರ್ಷದಿಂದಾಯುಷ್ಯದಿಂದಿಪ್ಪರು.
ಮತ್ತದಂ ಬಳಸಿ ಎಂಟುಲಕ್ಷಯೋಜನದಳತೆಯಗಲದಿಂ ಘೃತಸಮುದ್ರವಿಪ್ಪುದು.
ಮತ್ತದಂ ಬಳಸಿದ ಹದಿನಾರುಲಕ್ಷಯೋಜನದಳತೆಯಗಲದಿಂ
ರಕ್ತವರ್ಣದ ಭೂಮಿ ಶಾಲ್ಮಲಿದ್ವೀಪವೆನಿಸಿಪ್ಪುದು.
ಅದಕ್ಕೆ ದ್ಯುತಿವಂತನೆಂಬ ಭೂಪತಿ, ದೀರ್ಘಶರೀರದಿಂ
ಗಂಧಮಾಲ್ಯ ವಸ್ತ್ರಾಭರಣದಿಂದಲಂಕಾರಗೈದು
ಕಲ್ಪವೃಕ್ಷದಾಹಾರದಿಂ ಜರೆರುಜೆಗಳಿಲ್ಲದೆ,
ಇಪ್ಪತ್ತುಸಾವಿರ ವರುಷದಾಯುಷ್ಯದಿಂದಿಪ್ಪರು.
ಮತ್ತದಂ ಬಳಸಿದ ಇಕ್ಷುರಸಸಮುದ್ರ,
ಹದಿನಾರುಲಕ್ಷ ಯೋಜನದಳತೆಯಗಲದಿಂದಿಪ್ಪದು.
ಆ ದ್ವೀಪಕೆ ಭವ್ಯನೆಂಬ ಭೂಪತಿ, ಉನ್ನತಶರೀರದಿಂ
ಗಂಧಮಾಲ್ಯ ವಸ್ತ್ರಾಭರಣದಿಂದಲಂಕಾರಂಗೈದು,
ಕಲ್ಪವೃಕ್ಷದಾಹಾರದಿಂ ಜರೆರುಜೆಗಳಿಲ್ಲದೆ
ಇಪ್ಪುತ್ತುಸಾವಿರ ವರ್ಷದಾಯುಷ್ಯದಿಂದಿಪ್ಪರು.
ಮತ್ತದಂ ಬಳಸಿದ ಧವಳ ಗೋಮೇಧಿಕ ದ್ವೀಪ
ಮೂವತ್ತೆರಡುಲಕ್ಷ ಯೋಜನದಳತೆಯಿಂದಿಪ್ಪುದು.
ಆ ದ್ವೀಪಕ್ಕೆ ಭವ್ಯನೆಂಬ ಭೂಪತಿ, ಉನ್ನತ ಶರೀರದಿಂ
ಗಂಧಮಾಲ್ಯ ವಸ್ತ್ರಾಭರಣರದಿಂದಲಂಕಾರವಡೆದು,
ಕಲ್ಪವೃಕ್ಷದಾಹಾರದಿಂ ಜರೆರುಜೆಗಳಿಲ್ಲದೆ
ಇಪ್ಪತ್ತು ಸಾವಿರ ವರ್ಷದಾಯುಷ್ಯದಿಂದಿಪ್ಪರು.
ಮತ್ತದ ಬಳಸಿದ ಧವಳವರ್ಣದ ಭೂಮಿ,

ಅರುವತ್ತುನಾಲ್ಕುಲಕ್ಷಯೋಜನದಗಲದಳತೆಯಿಂ
ಪುಷ್ಕರದ್ವೀಪವಿಪ್ಪುದು.
ಅದಕ್ಕ ಶವನೆಂಬ ಭೂಪತಿ, ಗಂಧಮಾಲ್ಯ ವಸ್ತ್ರಾಭರಣದಿಂದಲಂಕಾರವಡೆದು,
ಕಲ್ಪವೃಕ್ಷದಾಹಾರದಿಂ ಜರೆರುಜೆಗಳಿಲ್ಲದೆ,
ಇಪ್ಪತ್ತುಸಾವಿರ ವರುಷದಾಯುಷ್ಯದಿಂದಿಪ್ಪರು.
ಮತ್ತದಂ ಬಳಸಿದ ಸ್ವಾದೋದಕ ಸಮುದ್ರವೆ
ಅರುವತ್ತುನಾಲ್ಕುಲಕ್ಷಯೋಜನೆದಳತೆಯಿಂ
ಸಮಸ್ತ ಮೇಘಜಾಲಂಗಳಿಗೆ ಉದಕವನಿತ್ತು
ಸಮಸ್ತಲೋಕೋಪಕಾರಮಾಗಿಪ್ಪುದು.
ಮತ್ತದಂ ಬಳಸಿದ ಹಿರಣ್ಮಯ ಭೂಮಿಯೆ ಸರ್ವದೇವತಾಕ್ರೀಡಾರ್ಥಮಾಗಿ,
ದಶಕೋಟಿ ಯೋಜನದಗಲದಳತೆಯಗಲದಿಂದೆ
ಜಂಘಾಪ್ರಮಾಣ ದುದಕವಿಪ್ಪುದು.
ಮತ್ತದಂ ಬಳಸಿ ಸುರಸಂತತಿಗೆ  ಹಿತಕರನಾದ ಸೂರ್ಯರಥ ಸಂಚಾರಕ್ಕೆ
ಆಸ್ಪದಮಾದ ಲೋಕಾಲೋಕ ಪರ್ವತಮಂ ಬಳಸಿ,
ಮೂವತ್ತೈದುಕೋಟಿ ಹತ್ತೊಂಬತ್ತುಲಕ್ಷ ನಾಲ್ವತ್ತು ಸಾವಿರ
ಯೋಜನೆಯಳತೆಯಗಲದಿಂ
ತಮೋಭೂಮಿಯಲ್ಲಿ  ನಿಶಾಚರರು
ತಮ್ಮ  ಕೋರೆದಾಡೆಯ ಬೆಳಗಿನಿಂದೆ ಸಂಚಾರವ ಮಾಡುತ್ತಿಪ್ಪರು.
ಮತ್ತದಂ ಬಳಸಿದ ಗರ್ಭೋದಕಸಮುದ್ರ,
ಒಂದುಕೋಟಿಯು ಇಪ್ಪತ್ತೈದುಲಕ್ಷಯೋಜನದಗಲದಳತೆಯಿಂದಿಪ್ಪುದು.
ಅಲ್ಲಿ ಬಲಮುರಿಯ ಶಂಖ ಪರ್ವತ ತಿಮಿತಿಮಿಂಗಿಲು ಮೊದಲಾದ
ಅನಂತಭೇದದ ಜಲಚರಪ್ರಾಣಿಗಳಿಪ್ಪವು.
ಆ ತಿಮಿತಿಮಿಂಗಿಲ ಸಂಯೋಗಾನಂದ ಮಥನದಿಂದ ತುಳುಂಕಿ ಮೇರೆದಪ್ಪಿ,
ಸಪ್ತದ್ವೀಪ ಸಪ್ತಸಮುದ್ರಂಗಳೊಳಕೊಳ್ಳದಂತೆ
ಉಭಯಮಧ್ಯದಲ್ಲಿ ಮಹಾಪರ್ವತೋಪಮಾನಮಾದ ಕೂರ್ಮನಿಪ್ಪನು.
ಮತ್ತದಂ ಬಳಸಿ ತಟಾಹಾರಿತಮಾಗಿ ಒಂದುಕೋಟಿ ಯೋಜನದಳತೆಯಿಂ
ಸುವರ್ಣಮಯ ಭೂಮಿ ಇಪ್ಪುದು.
ಆ ಬ್ರಹ್ಮಾಂಡದ ಪೂರ್ವ ಪಶ್ಚಿಮ ತಟಾಹಕ್ಕೆ ಗಣಿತಮಂ ಮಾಡೆ,
ನೂರುಕೋಟಿ ಯೋಜನಪ್ರಮಾಣು ಮಧ್ಯದಲ್ಲಿ ಮಹಾಮೇರುವಿಪ್ಪುದು.
ಬಳಿಕ ಸಪ್ತದ್ವೀಪಗಳಲ್ಲಿ ಮುಖ್ಯವಾದ ಜಂಬೂದ್ವೀಪ,
ಆ ಜಂಬೂದ್ವೀಪದಲ್ಲಿ ಅನೇಕ ಪರ್ವತಂಗಳು,
ಮಲಪ್ರಹರಿ ಗೋಮತಿ ಗಂಗೆ ಯಮುನೆ ಸರಸ್ವತಿ ತುಂಗಭದ್ರೆ
ಗಂಡಕಿ ಕಾವೇರಿ ಕಪಿಲೆ ಕಪಿನಿ ಹೇಮಾವತಿ ವರುಣೆ ಕೃಷ್ಣವೇಣಿ
ಗೋದಾವರಿ ಭಾಗೀರಥಿಯಾದಿಯಾದ ಮಹಾನದಿಗಳೆನಿಸಿಕೊಂಬವು.

ಅಬನೂರು ಶ್ರೀಶೈಲ ಸೇತು ಕೇದಾರ ಕಾಳಹಸ್ತಿ ಕುಂಭಕೋಣ. ಕುರುಕ್ಷೇತ್ರ
ಕನಕಾಚಲ ಕಕುದ್ಗಿರಿ ಅರುಣಾಚಲ ಅಗಸ್ತ್ಯನಾಥ ವೃಂದಾಚಲ ಪರಶುರಾಮ
ಕಾಶಿ ಆದಿಯಾದ ಮಹಾಕ್ಷೇತ್ರಂಗಳು ಅರುವತ್ತೆಂಟು ಉಂಟಾಗಿಪ್ಪವು.
ಮತ್ತಮಾ ಜಂಬೂದ್ವೀಪವನಾಳ್ದ ಅಗ್ನೀಶ್ವರನೆಂಬ ಭೂಪತಿ,
ತಾನಾಳ್ವ ದ್ವೀಪಮಂ ನವಖಂಡಮಂ ಮಾಡಿ, ತನ್ನ ಕುಮಾರರೆನಿಸಿದ
ಅವರವರ ಪೆಸರಿನಲ್ಲಿ ಆಯಾ ಖಂಡಂಗಳಿಪ್ಪವು.
ಮೊದಲು ನಾಭಿ ಎಂಬಾತನೆ ವೃಷಭ,
ಆ ವೃಷಭನ ಮಗನೆ ಭರತ, ಆ ಭರತನ ಪೆಸರಲ್ಲಿ ಭರತಖಂಡವಿಪ್ಪುದು,
ಆ ಭೂರತಖಂಡವೆ ಹಿಮಸೇತುಮಧ್ಯ ಪರಿಯಂತರ ಕರ್ಮಭೂಮಿಯೆನಿಸಿ,
ಅದರಲ್ಲಿ ಅಂಗ ವಂಗ ಕಳಿಂಗ ತೆಲುಗ ಲಾಳ ಬಂಗಾಳ ಚೋಳ ಕೇರಳ
ಗೌಳ ದ್ರವಿಡ ಪಾಂಚಾಳ ಕನ್ನಡ ಸಿಂಗಳ ಕುಂತಳ ಮಲೆಯಾಳ
ಮಾಳವ ಕೊಂಕಣ ಕಾಶ್ಮೀರ ಮೊದಲಾದಯಿವತ್ತಾರು ದೇಶಗಳುಂಟಾಗಿಹವು.
ಆ ದೇಶಂಗಳನಾಳ್ವ ಭೂಪತಿಗಳು
ತಮ್ಮ ತಮ್ಮ ಪಟ್ಟಣಂಗಳಲ್ಲಿ ಅನೇಕ ವಿಭವದಿಂದಿಪ್ಪರೆ,
ಅದರಲ್ಲಿ ದ್ವಾದಶಯೋಜನಕ್ಕೆ ಒಂದೊಂದು ಜಾತಿ ಭಾಷೆ
ಮಾತು ನೀತಿ ರೀತಿ ಉಡಿಗೆ ತೊಡಿಗೆ ಎಂಬೀ ಕ್ರಿಯಾಭೇದಗಳಾಗಿರ್ಕು.
ಈ ಭರತಖಂಡವೆಂಬ ಕರ್ಮಭೂಮಿಯಲ್ಲಿ ಮಾಡಿದ ಲಿಂಗಪೂಜೆ
ಉಗ್ರತಪಸ್ಸು ಯಾಜ್ಞಾದಿಕರ್ಮ ಷೋಡಶಮಹಾದಾನಂಗಳ ಫಲವಿಶೇಷವಮಂ
ತಮ್ಮ ತಮ್ಮ ಮನೋಕಲ್ಪಿತ ಬಯಕೆಯಿಂ
ಸ್ವರ್ಗಾದಿ ಭೋಗಂಗಳ ಪಡೆವರು ಕೆಲಂಬರು.
ಅದೃಶ್ಯ ಅಕರುಷಣ ಕಾಯಸಿದ್ಧಿ ಶಾಪಾನುಗ್ರಹ ಸಾಮರ್ಥ್ಯ
ಸ್ಥಿರಂಜೀವತ್ವವಂ ಬಯಸಿ ಪಡೆವರು ಕೆಲಂಬರು.
ಸಾಲೋಕ್ಯ ಸಾಮಿಪ್ಯ ಸಾರೂಪ್ಯ ಸಾಯುಜ್ಯ ಬಯಸಿ
ಅನುಭವವಿರುವ ಕೆಲಂಬರು.
ದಯಾ ದಾಕ್ಷಿಣ್ಯ ಪರೋಪಕಾರ ಸತ್ಯ ಶೌಚಮಂ ತೊರೆದು,
ಕಳವು ಪರದಾರ ಹಿಂಸೆ ಅಸತ್ಯ ಮಿತ್ರಘಾತಕ ಬ್ರಹ್ಮಹತ್ಯೆ ಮೊದಲಾದ
ಮಹಾಪಾತಕಂಗಳಂ ಮಾಡಿ, ಅನಂತ ನರಕಂಗಳನನುಭವಿಸುವರು ಕೆಲಂಬರು.
ಮತ್ತಂ ಮಾಡಿದ ಸುಕರ್ಮಫಲದಿಂ ಸ್ವರ್ಗಾದಿ ಭೋಗ
ಆದಿಯಾದ ಅನೇಕ ಪದಂಗಳಂ ಪಡೆದ ಅನುಭವಿಪ ಸುಖವು
ಭವಕ್ಕೆ ಬೀಜವೆಂದು ತಿಳಿದು,
ಗುರುಕಾರುಣ್ಯದಿಂ ಇಷ್ಟಲಿಂಗ ಪ್ರಸನ್ನತೆಯಂ ತಿಳಿಯದೆ,
ಬರಿದೆ ತಮಗಾತ್ಮಜ್ಞಾನವಾಯಿತೆಂದಹಂಕರಿಸಿ,
ತಾವೇ ಬ್ರಹ್ಮವೆಂದು ನುಡಿವ ಅಂಗವಿಕಾರದ ಬಂಜೆಜ್ಞಾನಿಗಳ ಜ್ಞಾನವೆಲ್ಲವು
ಪಿಪೀಲಿಕವಿಹಂಗನಂತೆ ಉದರ ಪೋಷಣದ ನೆಪ್ಪಲ್ಲದೆ ಅದು ಮಹಾಜ್ಞಾನವಲ್ಲ,

ಅದು ಕಾರಣ, ಎಂಚಿತ ಪ್ರಾರಬ್ಧ ಕರ್ಮವಿಮೋಚನವಿಲ್ಲದೆ,
ಭವವೆಂಬ ರಾಟಾಳದಲ್ಲಿ ಮರಳಿ ಮರಳಿ ಬರುತ್ತಿಪ್ಪರು
ಮತ್ತಮಾ ಪಂಚಭೂತವನುಳ್ಳ ಜೀವರುಗಳಲ್ಲಿ ಜನ್ಮದ ಕಡೆಗಂಡು,
ಭೂತಕಾಯಮೆಂಬ ಶಬ್ದ ಎಂತು ವಿಮೋಚನವಾದಪುದೋಎಂದುಜಾನಿಪಂಗೆ,
ಆ ಮಹಾಲಿಂಗ ತಾನೆ ಸದ್ಗುರುಮೂರ್ತಿಯಾಗಿ
ಶಿವಸಂಸ್ಕಾರ ಸಂಬಂಧಿಯಾದಾತನ ಭೂತಕಾಯಮಂ ತಳೆದು,
ಲಿಂಗಕಾಯವ ಮಾಳ್ಪನೆಂದು ತನ್ನ ಹೃದಯಕಮಲಕರ್ಣಿಕಾಗ್ರದಿ
ಪ್ರಸನ್ನತೆಯಾಗಿ ಬೆಳಗುವ ಜ್ಯೋತಿರ್ಲಿಂಗಮಂ ಧ್ಯಾನಿಸಿ,
ಆ ಲಿಂಗಕಳೆಯನೆ ಭಾವಕ್ಕೆ ತಂದು, ಭಾವದಿಂದ ಮನಕ್ಕೆ ತಂದು,
ಮನದಿಂದ ನೇತ್ರದಲ್ಲಿ ನಿಲ್ಲಿಸಿ, ಮಹಾಲಿಂಗಮೂರ್ತಿಯ ರೂಪನೆ
ಶಿಲೆಯ ಕುರುಹಿಂಗುಂಟುಮಾಡಿ, ಆ ಮೂರ್ತಿಗೆ ಷಡಾಕ್ಷರಿಯ ಮಂತ್ರೋಪದೇಶಂ
ಚೈತನ್ಯವೆನಿಸಿ, ಆ ಲಿಂಗಕ್ಕೆ ಕ್ರಿಯಾರ್ಚನೆಯಂ ಮಾಡಿ,
ಇಷ್ಟಲಿಂಗವೆಂದು ಹೆಸರಿಟ್ಟು.
ಇಷ್ಟ ಪ್ರಾಣ ಭಾವವೆಂದು ಆ ಮಹಾಲಿಂಗ ಒಂದೆ ಮೂರುತೆರನಾಯಿತ್ತು.
ಅದೆಂತೆನೆ: ರೇಚನ ಪೂರಕ ಕುಂಭಕವೆಂದು ನಾಮಭೇದವಾದರು.
ಅಖಂಡಿತವಾದ ಪ್ರಾಣವಾಯು ಒಂದೆಯಾದಂತೆ
ನೆಲದ ಮರೆಯ ನಿಧಾನವ ಅಂಜನಸಿದ್ಧಿಯಿಂ ಕಾಬಂತೆ,
ಈ ಇಷ್ಟಲಿಂಗದ ಸತ್ಕ್ರಿಯಾರ್ಚನೆಯಿಂದ ಪ್ರಾಣಲಿಂಗಸ್ವರೂಪವ ತಿಳಿವುದೆಂದು,
ಸುಜ್ಞಾನರೂಪಾದ ಶಿಷ್ಯನ ಹಸ್ತಸಿಂಹಾಸನದಿ ಇಷ್ಟಲಿಂಗಮಂ ಮೂರ್ತಿಗೊಳಿಸಿ,
ಹಸ್ತಮಸ್ತಕಸಂಯೋಗದಿಂದ ಷಡಾಕ್ಷರಿ ಮಂತ್ರೋಪದೇಶಮಂ ಮಾಡಿದಲ್ಲಿ,
ರಾಹು ತುಡುಕಿದ ಶಶಿಮಂಡಲವು ಸ್ಪರ್ಶನ ವಿಮೋಚನೆಯಾದಲ್ಲಿ,
ಷೋಡಶಕಳೆ ಪರಿಪೂರ್ಣತೆಯಿಂ ಥಳಥಳಿಸುವಂತೆ,
ಆ ಭಕ್ತನ ಅಂಗಸೋಂಕಿನ ಅಜ್ಞಾನಕಾಳಿಕೆಯು ಹರಿದು,
ಸರ್ವಾಂಗವ ಒಳ ಹೊರಗೆಯುಂ ಸ್ಫಟಿಕದ ಘಟಜ್ಯೋತಿಯಂತೆ,
ಮಹಾಜ್ಞಾನ ಅಖಂಡಿತಮಾಗಿ ಅವಲಂಬಿಸಿ,
ಮತ್ತದರಿಂ ಗುರು ಲಿಂಗ ಜಂಗಮ ಪಾದತೀರ್ಥ ಪ್ರಸಾದ ವಿಭೂತಿ ರುದ್ರಾಕ್ಷಿ
ಷಡಾಕ್ಷರಿ ಮಂತ್ರವಾದಿಯಾದ ಅಷ್ಟಾವರಣವೆ ತನಗಂಗವಾಗಿ,
ತನ್ನ ಸರ್ವೇಂದ್ರಿಯಂಗಳು ಲಿಂಗಸ್ವರೂಪೆಂದು ತಿಳಿದು,
ರೂಪಾದ ಪದಾರ್ಥಮಂ ಕಾಯದ ಕೈ ಮುಟ್ಟಿ
ಪ್ರಾಣಲಿಂಗಕ್ಕೆ ಕೊಡುವುದೆ ಕ್ರಿಯಾರ್ಪಣ.
ಇಂದ್ರಿಯಂಗಳಿಂದರಿದು ಮನದ ಕೈ ಮುಟ್ಟಿ,
ಪ್ರಾಣಲಿಂಗಕ್ಕೆ ಕೊಡುವುದೆ ಕರಣಾರ್ಪಣ.
ಆ ಪ್ರಾಣಲಿಂಗ ತೃಪ್ತಿಯನೆ ಭಾವಲಿಂಗಕ್ಕೆ ಕೊಡುವವೆ ಭಾವಾರ್ಪಣ.
ಇಂತೀ ಅರ್ಪಣತ್ರಯವ ತಿಳಿದ ಸದ್ಭಕ್ತನು

ಶ್ರೋತ್ರಾದಿಯಾದ ತನ್ನ ಜ್ಞಾನೇಂದ್ರಿಯಂಗಳಲ್ಲಿ
ನಾಮಭೇದಗಳಿಂ ಪ್ರವೇಶಿತವಾದ ಷಡ್ವಿಧಲಿಂಗಂಗಳಿಗೆ
ಷಡ್ವಿಧವಿಷಯ ಪದಾರ್ಥಮಂ
ಆಯಾಯ ಲಿಂಗಕ್ಕೆ ಬೇರೆ ಬೇರೆ ಸಮರ್ಪಣೆಯ ಮಾಡುವನು.
ಅದೆಂತೆನೆ : ಶಬ್ದದಲ್ಲಿಯ ಪದಾರ್ಥವ
ಶ್ರೋತ್ರದಲ್ಲಿಯ ಪ್ರಸಾದಲಿಂಗಕ್ಕೆ ಸಮರ್ಪಣೆಯ ಮಾಡುವನು.
ಸ್ಪರ್ಶವಿಷಯ ಪದಾರ್ಥವ
ತಕ್ಕಿನಲ್ಲಿಯ ಜಂಗಮಲಿಂಗಕ್ಕೆ ಸಮರ್ಪಣೆಯ ಮಾಡುವನು.
ರೂಪುವಿಷಯಪದಾರ್ಥವ
ನೇತ್ರದಲ್ಲಿಯ ಶಿವಲಿಂಗಕ್ಕೆ ಸಮರ್ಪಣೆಯ ಮಾಡುವನು.
ರಸವಿಷಯಪದಾರ್ಥವ
ಜಿಹ್ವೆಯಲ್ಲಿಯ ಗುರುಲಿಂಗಕ್ಕೆ ಸಮರ್ಪಣೆಯ ಮಾಡುವನು
ಗಂಧವಿಷಯಪದಾರ್ಥವ
ನಾಸಿಕದಲ್ಲಿಯ ಆಚಾರಲಿಂಗಕ್ಕೆ ಸಮರ್ಪಣೆಯ ಮಾಡುವನು.
ಇಂತೀ ಲಿಂಗಪಂಚಕಂಗಳಿಗೆ ಸಮರ್ಪಣೆಯ
ಮಾಡಿದ ವಿಷಯಪದಾರ್ಥತೃಪ್ತಿ ಪರಿಣಾಮವನು,
ಹೃದಯದಲ್ಲಿಯ ಮಹಾಲಿಂಗಕ್ಕೆ ಸಮರ್ಪಣೆಯ ಮಾಡುವನು.
ಭಕ್ತಿಸ್ಥಲವಾದಿಯಾದ ಷಟ್ಸ್ಥಲಗಳಲ್ಲಿ
ಆಯಾಸ್ಥಲಗಳ ಆಚರಣೆಯಲ್ಲಿ ತಾನಾಚರಿಸಿ,
ಆ ಸ್ಥೂಲ ಪರಿವಿಡಿಗಳನುಳಿದು ಐಕ್ಯಸ್ಥಲವೆನ್ನೆದುವಾತನು ಭಕ್ತನೋರ್ವನೆ.
ಆ ಭಕ್ತನು ಪ್ರಥಮದಲ್ಲಿ ಭಕ್ತಿಸ್ಥಲದಾಚರಣೆಯನೆಂತು ನಡೆಸುವನೆಂಧರೆ,
ತನುಮನಧನಂಗಳಲ್ಲಿ ನಿರ್ವಂಚಿತನಾಗಿ, ಲಿಂಗಾಣತಿಯಿಂ ಬಂದ ಪದಾರ್ಥವ
ಇಂದು ನಾಳಿಂಗೆಂದು ದುಸ್ಸಂಸಾರ ದುರಾಸೆಯ ಸಂಚವಂ ಮನದಿ ನೆನೆಯದೆ,
ಅಖಂಡಪದಾರ್ಥಂಗಳ ಜಂಗಮ ಪಾದೋದಕದಿಂ ಒಳೆದು ಪವಿತ್ರವೆನಿಸಿ
ಗೃಹಪ್ರವೇಶಮಂ ಮಾಡಿ, ಜಂಗಮಲಿಂಗಕ್ಕೆ ಆರೋಗಣೆಯ ಮಾಡುವೆನೆಂದು
ಸಡಗರದ ಸಂಭ್ರಮದ ಸಂತೋಷದೊಳಾಳ್ದು, ಹಸ್ತಪ್ರಸಾದಮಂ ತೊಳೆದು,
ಮುಖಮಜ್ಜನವಂ ಮಾಡಿ, ತಲ್ಪದಿ ಮಂಡಿಸಿ,
ಕರಕಮಲಕ್ಕೆ ಚಿದ್ಭಸ್ಮಮಂ ಬಿಜಯಂಗೈಸಿ,
ಮಂತ್ರೋದಕದಿಂ ಚುಳುಕೋದಕಂದಳೆದು, ಗಂಧಕುಸುಮಗಳನರ್ಚಿಸಿ,
ಪ್ರಣವಪಂಚಾಕ್ಷರಿಯಂನುಡಿದು, ಅಂಗುಲಿಗಳಿಂದ ತೆಗೆದು ತ್ರಿಪುಂಡ್ರವನಿಟ್ಟು,
ಸರ್ವಾಂಗಧೂಳನಂ ಮಾಡಿ, ಇಷ್ಟಲಿಂಗಮಂ ಹಸ್ತಸಿಂಹಾನಕ್ಕೆ ಬಿಜಯಂಗೈಸಿ,
ಮಂತ್ರಾರ್ಚನೆಯಿಂದಾದ ಅಗ್ಘಣಿಯಂ, ಶ್ರೀರುದ್ರಮಂ ನುಡಿದು,
ಮಜ್ಜನಕರೆದು ಚಿದ್ಭಸಿತಮನಿಟ್ಟು, ಪೂಜಾವಿಧಾನಮಂ ಪೂರ್ಣವೆನಿಸಿ,
ತನ್ನ ಧ್ಯಾನಭಾವದಿಂದೆ ಪ್ರದಕ್ಷಿಣಮಂ ಬಂದು ಶರಣನೊಪ್ಪಿಸಿ,

ಉರುಸೆಜ್ಜೆಯರಮನೆಗೆ ಶಿವಲಿಂಗಮಂ ಬಿಜಯಂಗೈಸಿ,
ರೇಚಕ ಪೂರಕಂಗಳಲ್ಲಿ ಮಂತ್ರಮನೆಡೆಯಾಡಿಸುತ್ತ ಭಾಂಡಭಾಜನಮಂ ತೊಳೆದು,
ನಿರ್ಮಲವೆನಿಸಿ ಪದಾರ್ಥಪರಿಕರಂಗಳ ಬೇರೆ ಬೇರಿಟ್ಟು, ಪಾಕಶುದ್ಧವರಿದು
ಲವಣಾಮ್ರ ವಿಶ್ರಮಂ ಸಮವೆನಿಸಿ ಶುಚಿಕರಮಾದ ಪದಾರ್ಥಂಗಳ
ಇಂದ್ರಿಯ ಮನೋಭಾವಂಗಳಿಗೆ ತಟ್ಟಿ,
ಮೀಸಲಳಿಯದೆ ಜಂಗಮಲಿಂಗಮಂ ಬಿಜಯಂಗೈಸಿ,
ದಂಪತಿಗಳ ಭಾವದ ನಿಜವು ರತ್ನ ಕಾಂತಿಯಂತೆ,
ಕುಸುಮ ಗಂಧದಂತೆ, ಅಮೃತರುಚಿಯಂತೆ,
ಭಿನ್ನವಿಲ್ಲದೆ ಜಂಗಮಲಿಂಗಕ್ಕೆ ಆರೋಗಣೆಗೆಡೆಮಾಡಲು,
ಆ ಜಂಗಮವು ಇಂತಪ್ಪ ಭಕ್ತನೆ ಬಸವಣ್ಣನಪರಾವತಾರಮೂರ್ತಿ.
ಆತನರ್ಧಾಂಗಿಯೇ ನೀಲಲೋಚನೆಯು.
ಕರುಣದ ಕಂದನೆಂದು ಚಿತ್ತದಲ್ಲಿ ನೆಲೆಗೊಳಿಸಿ,
ಅವರ ಹಸ್ತಸೋಂಕಿನಿಂ ಬಂದ ಪದಾರ್ಥವೆ
ಮಹಾಲಿಂಗಪ್ರಸಾದವೆಂದು ಆಲೋಕನಂಗೆಯ್ದು,
ಶಿವಲಿಂಗಾರ್ಪಣವಂ ಮಾಡಿ, ಗಂಧವಿಶೇಷವ ಆಚಾರಲಿಂಗಕಿತ್ತು,
ಕಾಯದ ಕೈ ಮುಟ್ಟಿ, ಇಷ್ಟಲಿಂಗಕ್ಕೆ ನೈವೇದ್ಯವಂ ಮಾಡಿ,
ಆ ಇಷ್ಟದೊಡನೆ ಸಹಭೋಜನವನುಂಡು.
ಗುರುಲಿಂಗದಿಂದರಿದ ರುಚಿಪ್ರಸಾದಮಂ ಮನದ ಕೈ ಮುಟ್ಟಿ ಪ್ರಾಣಲಿಂಗಕಿತ್ತು,
ಆ ಪ್ರಾಣಲಿಂಗತೃಪ್ತಿಯನೆ ಭಾವಲಿಂಗದಲ್ಲಿ ಸಮರಸಂಗೈದು,
ಪ್ರಸಾದಭರಿತವಾಯಿತ್ತೆನಲು,
ಆ ಮಹಾಪ್ರಸಾದಮಂ ಭಕ್ತ ತನ್ನ ಭಕ್ತಿಕಿಂಕುರ್ವಾಣದಿಂ ಬಿಜಯಂಗೈಸಿ,
ತನ್ನ ಕ್ರಿಯಾಲಿಂಗಕ್ಕೆ ನೈವೇದ್ಯವಂ ಮಾಡಿ,
ಆ ಲಿಂಗದೊಡನೆ ಸಹಭೋಜನವನುಂಡು,
ಗುರುಲಿಂಗದಿಂದರಿದ ರುಚಿಯ, ಆ ಗುರುಲಿಂಗಪ್ರಸಾದವೆಂದು ಕೊಂಬಾತನೆ
ನಿಜಭಕ್ತನಯ್ಯಾ, ಮಹಾಲಿಂಗ ಶಶಿಮೌಳಿ ಸದಾಶಿವಾ. || ೩ ||

೧೩೫೭

ನಿರಲಂಬಶರಣನೆಂತಿಹನೆಂದರೆ ಮನಬುದ್ಧಿ ಚಿತ್ತಾಹಂಕಾರಗಳಿಂದಾದ
ತನುಕರಣಜಂಗುಳಿಯನುಳಿದು ಮೋಕ್ಷಕಾಯಶೂನ್ಯನಾಗಿ,
ಭದ್ರಗಜ ನುಂಗಿದ ಬೇಳದ ಹಣ್ಣಿನಂತೆ,
ಕರ್ಮರಹಿತವಾದ ಮಹದಾಕಾಶದಂತೆ,
ಉಲುಹಡಗಿದ ಸುರಕುಜದಂತೆ, ಚಂದ್ರನಿಲ್ಲದ ಚಂದ್ರಿಕೆಯಂತೆ,
ಫಲವಿಲ್ಲದ ರುಚಿಯಂತೆ, ಕುಸುಮವಿಲ್ಲದ ಪರಿಮಳದಂತೆ,
ತರಂಗವಡಗಿದ ಸಮುದ್ರದಂತೆ, ಸ್ಫಟಿಕದ ಘಟಜ್ಯೋತಿಯಂತೆ
ಸರ್ವಾಂಗದೊಳಹೊರಗೆಯು ಪ್ರಣವಮಂತ್ರವೆ ಪರಿಪೂರ್ಣಲಿಂಗವೆನಿಸಿ,

ದಯಶಾಂತಭರಿತನಾಗಿ ತನ್ನ ನಂದು, ಇದಿರ ಮರೆದು,
ವಸಂತಕಾಲದ ಮಂದಾನಿಲನಂತೆ ಸಂಚಾರದ ಮಾಳ್ಪನಯ್ಯಾ,
ಮಹಾಲಿಂಗ ಶಶಿಮೌಳಿ ಸದಾಶಿವಾ. || ೪ ||

೧೩೫೩

ಪ್ರಥಮದಲ್ಲಿ ಭಕ್ತಸ್ಥಲದಲ್ಲಿ ನಿಂದು,
ಭಕ್ತನ ಆಚರಣೆಯ ಅನುಭಾವದಿಂ ತಿಳಿದು,
ಮಹೇಶ್ವರಸ್ಥಲವನಂಗೀಕರಿಸಿ, ಮಹಾಪ್ರಸಾದಿ
ವೀರವ್ರತದ ಆಚರಣೆಯ ಸಾವಧಾನಮಂ
ಮಹಾಜ್ಞಾನದೊಳಿಳಿದು ಚಿತ್ತದೊಳವಲಂಬಿಸಿ, ಪ್ರಾಣಲಿಂಗಿಸ್ಥಲವನಂಗೀಕರಿಸಿ,
ಲಿಂಗಾಂಗಸಮರಸದ ಪರಮಾನಂದವ ಸರ್ವಾಂಗದಲ್ಲಿ ಪರಿಪೂರ್ಣವೆನಿಸಿ,
ಶರಣಸ್ಥಲವನಂಗೀಕರಿಸಿ,
ಶರಣಸತಿ ಲಿಂಗಪತಿ ಎಂಬ ಪತಿವ್ರತಾಧರ್ಮವ ನಿಜದಿ ಕಂಕಣವ ಕಟ್ಟಿ,
ಷಟ್‌ಸ್ಥಲದ ಸ್ವರೂಪಮಂ ಜ್ಞಾನಮುಖದಿಂ ತಿಳಿದು,
ಸತ್ಕ್ರಿಯೆಗಳಿಂದವರವರ ಆಚರಣೆ ಲೋಪವಾಗದಂತೆ ಪೂರ್ಣವೆನಿಸಿ,
ಅಂತಪ್ಪ ಜ್ಞಾನ ಕ್ರೀಯ ವಸ್ತು ಮಹಾಜ್ಞಾನದಿಂ ಲಯವನೈದಿಸಿ,
ಆ ಮಹಾಜ್ಞಾನವನೆ ಮಹಾಲಿಂಗದಲ್ಲಿ ಅದೃಶ್ಯವ ಮಾಡಿದಾತನೆ ಐಕ್ಯನಯ್ಯಾ,
ಮಹಾಲಿಂಗ ಶಶಿಮೌಳಿ ಸದಾಶಿವ. || ೫ ||

೧೩೫೪

ಭಕ್ತ ಭಕ್ತನೆಂದೆಂಬರು,
ಭಕ್ತನೆನಿಸುವಾತ ಪಂಚಭೂತಕಾಯವ ಧರಿಸಿದ
ಮಾನವರಲ್ಲಿ ಹತ್ತರಲ್ಲಿ ಹನ್ನೊಂದು.
ಭಕ್ತನಿಂದ ಗುರುವೆನಿಸಿತ್ತು, ಲಿಂಗವೆನಿಸಿತ್ತು, ಜಂಗಮವೆನಿಸಿತ್ತು.
ವಿಭೂತಿ ರುದ್ರಾಕ್ಷಿ ಪಾದತೀರ್ಥ ಪ್ರಸಾದ ಮಂತ್ರವಾದಿಯಾದ
ಅಷ್ಟಾವರಣ ಪ್ರಸನ್ನತೆಯಾಯಿತ್ತು.
ಅಂತಪ್ಪ ಭಕ್ತನೆಂಬ ನಾಮವಿಲ್ಲದಿರ್ದಡೆ
ಗುರುಲಿಂಗಜಂಗಮವೆಂಬ ಹೆಸರೆಲ್ಲಿಯದು?
ವಿಭೂತಿ ರುದ್ರಾಕ್ಷಿಯ ಧರಿಸುವರಾರು ?
ಪಾದತೀರ್ಥಪ್ರಸಾದವ ಕೊಂಬವರಾರು?
ಮಂತ್ರೋಚ್ಚರಣೆಯ ಉಲುಹೆಲ್ಲಿಯದು?
ಅದು ಕಾರಣ, ಭಕ್ತನಿಂದಧಿಕವಿಲ್ಲವೆಂದು ಸಮಸ್ತವಿಶ್ವಮೆಲ್ಲಮಂ
ತನ್ನ ನೆನಹುಮಾತ್ರದಲ್ಲಿಯೆ ಉಂಟಿಲ್ಲವೆನಿಸುವ ಪರಬ್ರಹ್ಮವೆ
ಆ ಭಕ್ತನ ಹೃದಯಕಮಲಮಧ್ಯದಲ್ಲಿ ಜ್ಯೋತಿಸ್ವರೂಪನಾಗುತ್ತಿರ್ಪನಯ್ಯ,
ಮಹಾಲಿಂಗ ಶಶಿಮೌಳಿ ಸದಾಶಿವ. || ೬ ||

೧೩೫೫

ಶರಣಸತಿ ಲಿಂಗಪತಿಯೆನಿಸಿದ್ದಲ್ಲಿ
ಪಂಚೇಂದ್ರಿಯಂಗಳಿಗೆ ಪತಿವ್ರತಾಧರ್ಮವನುಂಟುಮಾಡಿ,
ಮನೋನಿಜದ ಕಂಕಣವ ಕಟ್ಟಿ ತನ್ನಿಷ್ಟಲಿಂಗದ ಪೂಜಾವಿಧಾನಮಂ
ಸ್ತೋತ್ರ ಮಂತ್ರ ವ್ರತವನುಂಟುಮಾಡಿ, ದುಗುಡಣೆಯಿಂದ ಪೂರ್ಣವೆನಿಸಿ,
ನೇತ್ರ ಸೂತ್ರಂಗಳ ಶಿವಾಲಿಂಗಾರ್ಚನೆಯ,
ಅಲಂಕಾರದ ಚೆಲ್ವಿನಲ್ಲಿ ಬೆಸುಗೆಗೊಳಿಸಿ,
ಆನಂದಾಶ್ರು ಬಟ್ಟಾಡಿ ತನ್ನ ಭಕ್ತಿಭಾವದ ನಿಜವ,
ಲಿಂಗವೆಂಬ ಪತಿಯಲ್ಲಿ ಸಮರಸಂಗೈದು,
ತನುಪುಳಕಮಂ ತಳೆದು ಶರಣನೊಪ್ಪಿಸಿ,
ಶಿವಭಕ್ತರ ಹಸ್ತಸ್ಪರ್ಶನದಿಂದ ಪವಿತ್ರವೆನಿಸಿ,
ಲಿಂಗಾಣತಿಯಿಂದ ಬಂದ ಪದಾರ್ಥವ
ಮಹಾಲಿಂಗಪ್ರಸಾದವೆಂದು ಇಷ್ಟಲಿಂಗಮುಖವ ತಿಳಿದು,
ಸಮರ್ಪಣೆಯ ಮಾಡಿ, ಸಹಭೋಜನವನುಂಡು,
ಪರಮಾನಂದವ ಅಪ್ಪಾತನೆ ಶರಣನಯ್ಯಾ,
ಮಹಾಲಿಂಗ ಶಶಿಮೌಳಿ ಸದಾಶಿವಾ. ॥ ೭ ॥

೧೩೫೬

ಸಂಸಾರವೆಂಬ ಶರಧಿಯಲ್ಲಿ ನಿಂದು ಗುರುಕರಜಾತನೆನಸಿ,
ಅರುಹು ತಲೆದೋರಿ ಆಚರಣೆಯಂಗೊಡು,
ಪ್ರಸಾದಕ್ರೀಯ ನಡೆಸುವಾತನ ಭಾವಜಲ್ಮೆಯ ಸಾವಧಾನವೆಂತೆಂದಡೆ,
ಶಿವಲಿಂಗದಿಂದರದ ಸಮಸ್ತ ರೂಪಾತಿಶಯಮಂ
ಶಿವಲಿಂಗ ಪ್ರಾಸದವೆಂದೇ ತಾನಂಗೀಕರಿಸುವನು.
ಶಬ್ದರೂಪಾದ ಸಮಸ್ತ ಶಬ್ದವೆಲ್ಲವಂ
ಪ್ರಸಾದಲಿಂಗದ ಪ್ರಸಾದವೆಂದೇ ತಾನಂಗೀಕರಿಸುವನು.
ಭಕ್ಷ್ಯ ಭೋಜ್ಯ ಲೇಹ್ಯ ಚೋಹ್ಯ ಮೊದಲಾದ ರೂಪಾದ ಪದಾರ್ಥಮಂ
ಇಷ್ಟಲಿಂಗ ಸಮರ್ಪಣೆಯಂ ಮಾಡಿ ಗುರುಲಿಂಗದಿಂದರಿದ ರುಚಿಯ
ಗುರುಲಿಂಗ ಪ್ರಸಾದವೆಂದೇ ತಾನಂಗೀಕರಿಸುವನು.
ಗಂಧಾನುಲೇಪನ ಕುಸುಮಮಾಲೆ ಮಡಿವರ್ಗ ದಿವ್ಯದುಕೂಲಂಗಳು
ರತ್ನಾಭರಣ ಶೀತೋಷ್ಣ ಮೃದು ಕಠಿಣ ವಾಯು ಸ್ಪರ್ಶನ
ವನಿತೆಯರ ಭೋಗಸುಖಂಗಳಿಗನುಕೂಲವಾದವೆಲ್ಲಮಂ
ಜಂಗಮಲಿಂಗಪ್ರಸಾದವೆಂದಂಗೀಕರಿಸುವಾತನು ಮಹಾಪ್ರಸಾದಿಯಯ್ಯಾ,
ಮಹಾಲಿಂಗ ಶಶಿಮೌಳಿ ಸದಾಶಿವಾ. ॥ ೮ ॥

೧೩೫೭

ಸದ್ಗುರುಮೂರ್ತಿಯು ಶಿವನ ಸಂಸ್ಕಾರಸಂಬಂಧಿಯಾದವನ
ಮಾಂಸಪಿಂಡವ ಕಳೆದು ಮಂತ್ರ ಪಿಂಡವ ಮಾಡುವೆನೆಂದು
ತನ್ನ ಪ್ರಾಣಲಿಂಗ ಸ್ವರೂಪವಂ ಭಾವಿಸಿ,
ಭಾವದಿಂದ ಧ್ಯಾನಕ್ಕೆ ತಂದು, ಧ್ಯಾನದಿಂದ ಮನಕ್ಕೆ ತಂದು,
ಮನದಿಂದ ನೇತ್ರದಲ್ಲಿ ನಿಲ್ಲಿಸಿ,
ಆ ಮಹಾಲಿಂಗಮೂರ್ತಿಯ ರೂಪನೆ ಶಿಲಾಮೂರ್ತಿ ಗುಂಡಿಲಿಸಿ,
ಷಡಾಕ್ಷರಿಯ ಮಂತ್ರದಿಂದ ಆ ಮೂರ್ತಿಗೆ ಚೈತನ್ಯವೆನಿಸಿ,
ಆ ಲಿಂಗಕ್ಕೆ ಕ್ರಿಯಾರ್ಚನೆಯಂ ಮಾಡಿ, ಇಷ್ಟಲಿಂಗವೆಂದು ಪೆಸರಿಟ್ಟು,
ಇಷ್ಟ ಪ್ರಾಣ ಭಾವವೆಂದು ಪ್ರಾಣಲಿಂಗ
ಒಂದೆ ನಾಮಭೇದದಿಂದ ಮೂರುತೆರನೆನಿಸಿದಂತೆ,
ಆ ಶಿವಲಿಂಗಮಂ ಶಿಷ್ಯನ ಹಸ್ತಸಿಂಹಾಸನಕ್ಕೆ ಬಿಜಯಂಗೈಸಿ,
ತನ್ನ ಹಸ್ತಮಸ್ತಕಸಂಯೋಗದಿಂದ ಕರ್ಣದಲ್ಲಿ ಮಂತ್ರೋಪದೇಶವಂ ಮಾಡಿ,
ಜ್ಞಾನಮೌಲ್ಯವನಿತ್ತು, ನೆಲದ ಮರೆಯ ನಿಧಾನವ ಅಂಜನಸಿದ್ಧಿಯಿಂ ಕಾಬಂತೆ,
ಇಷ್ಟಲಿಂಗದ ಕ್ರಿಯಾರ್ಚನೆಯಿಂದ ಗುರುಲಿಂಗಜಂಗಮ ಪಾದತೀರ್ಥ ಪ್ರಸಾದ
ವಿಭೂತಿ ರುದ್ರಾಕ್ಷಿ ಷಡಾಕ್ಷರಿಮಂತ್ರವಾದಿಯಾದ ಅಷ್ಟಾವರಣವಂಗವಪ್ಪುದು.
ಅದರಿಂ ನಿನ್ನ ಜ್ಞಾನೇಂದ್ರಿಯಂಗಳೆ ಲಿಂಗಸ್ವರೂಪವೆಂದು ತಿಳಿವುದು.
ರೂಪಾದ ಪದಾರ್ಥಮಂ ಕಾಯದ ಕೈ ಮುಟ್ಟಿ,
ಇಷ್ಟಲಿಂಗಕ್ಕೆ ಕೊಡುವುದೆ ಕ್ರಿಯಾರ್ಪಣ.
ಆ ಪ್ರಾಣಲಿಂಗದ ತೃಪ್ತಿಯನೆ ಭಾವದ ಲಿಂಗದಲ್ಲಿ ಸಮರಸವ ಮಾಡೆಂದು
ಗುರುನಿರೂಪಣೆಯಿಲ್ಲದೆ ಇಷ್ಟಲಿಂಗದ ಭೋಗ
ಕಲ್ಪಿತ ಪೂರ್ಣಮಾದಲ್ಲಿ ಪ್ರಾಣಬಾಧೆಯ
ಮಾಡೆಂದುಪದೇಶವಿತ್ತನೆ ಆಚಾರ್ಯನು.
ಪರುಷ ಸೋಂಕಿದ ಲೋಹ ಸುವರ್ಣವಪ್ಪುದಲ್ಲದೆ
ಮತ್ತದು ಲೋಹವಾಗಬಲ್ಲುದೆ?
ಆ ಮಹಾಲಿಂಗವೆ ಸದ್ಗುರುಮೂರ್ತಿಯಾಗಿ, ಶಿಷ್ಯನ ಉತ್ತಮಾಂಗದಿ
ತನ್ನ ಹಸ್ತ ಸ್ಪರ್ಶನವಂ ಮಾಡಿ, ಎನ್ನ ಸರ್ವಾಂಗವು ಲಿಂಗಸ್ವರೂಪವೆಂಬಲ್ಲಿ,
ಲಿಂಗ ಬಾಹ್ಯನೆಂಬುದು ಜ್ಞಾನವಲ್ಲ,
ಇಷ್ಟಲಿಂಗಪ್ರಾಣಿಗಳೆಂದು, ಪ್ರಾಣಲಿಂಗಸಂಬಂಧಿಗಳೆಂದು,
ಭಾವಲಿಂಗ ಪರಿಣಾಮಿಗಳೆಂದು ತಮ್ಮ ಭಾವದ ನಿಜದಿಂದ
ಲಿಂಗತ್ರಯವೆನಿಸಿದರೂ ಪ್ರಾಣಲಿಂಗ ಒಂದೆ.
ಅಂದೆಂತೆಂದಡೆ: ರೇಚಕ ಪೂರಕ ಕುಂಭಕವೆಂದು,
ಅಖಂಡಿತವಾದ ಪ್ರಾಣವಾಯುವೊಂದೆ ಮೂರುತೆರನೆನಿಸಿದಂತೆ,
ಹಾಗೆ ಪರಬ್ರಹ್ಮವೆಂಬ ಮೂಲವೃಕ್ಷದಲ್ಲಿ ಋತುಕಾಲಯೋಗದಿಂದ

ಪತ್ರಪುಷ್ಪಫಲಂಗಳು ತೋರಿಯಡಗುವಂತೆ, ಮಹದಾಕಾಶದಿಂದುದಯಿಸುವ
ಅನೇಕ ವಿಚಿತ್ರತರವಾದ ಮೇಘಜಾಲ ಇಂದ್ರಚಾಪ ರೂಪು
ವರ್ಣನಾಮ ಭಿನ್ನ ಭಿನ್ನಮಾಗಿ ತೋರಿದರು.
ಆಕಾಶದಿಂದೆ ಉದಿಸಿ ಅಲ್ಲಿಯೆ ಅಡಗುವಂತೆ,
ಕ್ರಿಯಾದಿಲಿಂಗದರಿವ ಆಚಾರಾದಿ ಲಿಂಗ ಪಂಚಕವು
ಪ್ರಾಣಲಿಂಗದಿಂದು ಂಟೆನಿಸಿ
ಅಲ್ಲಿಯೆ ಐಕ್ಯಮಪ್ಪುದೆಂಬುದೆ ಮಹಾಜ್ಞಾನ.
ಹಾಗಾದರೂತನ್ನಮನೋಭಾವ ಮೆಚ್ಚಿನ ನಿಜದಿಂದ ಲಿಂಗತ್ರಯವೆನಿಸುವುದು.
ಇಷ್ಟಲಿಂಗವೆಂಬ ಕುರುಹೆಲ್ಲಿಯದು ಭಾವಲಿಂಗ ಪರಿಣಾಮಿಗಳಿಗೆ?
ಇಷ್ಟಪ್ರಾಣವೆಂಬ ನೆನಹೆಲ್ಲಿಯದು ಮಹಾಲಿಂಗ ಶಶಿಮೌಳಿ ಸದಾಶಿವ? ॥ ೯ ॥

■ ■

## -?-ವರದ ಸೋಮನಾಥ

೧೩೫೮

ಬಸವ ಜಗದಾದಿ ಬೀಜ, ಬಸವ ಆನತ ಸುರಭೂಜ.
ಬಸವ ಬಸವಾ ಎಂಬ ನಾಮಸಾಲದೆ?
ಬಸವ ಭವರೋಗ ವೈದ್ಯ, ಬಸವ ವೇದಾಂತ ವೇದ್ಯ.
ಬಸವ ಬಸವಾ ಎಂಬ ಲೀಲೆ ಸಾಲದೆ?
ಬಸವ ಕರುಣಾಮೃತ ಸಿಂಧು, ಬಸವ ಪರಮಬಂಧು,
ಬಸವ ವರದ ಸೋಮನಾಥ ನೀನೆ,
ಬಸವ ಬಸವಾ ಬಸವಾ ಶರಣೆಂದರೆ ಸಾಲದೆ? ॥ ೧ ॥

■ ■

## -?-ವಿಶ್ವಪತಿ ವಿಶ್ವನಾಥ

೧೩೪೯

ತನುವಿನಲ್ಲಿ ವೇಷವನಾರು ಧರಿಸರು?
ಪಟದಲ್ಲಿರದೆ ವೇಷ? ಘಟದಲ್ಲಿರದೆ ವೇಷ?
ಕೊಂಬಿನಲ್ಲಿರದೆ ವೇಷ? ಅಂಬರದಲ್ಲಿರದೆ ವೇಷ?
ವೇಶಿಯಲ್ಲಿರದೆ ವೇಷ? ಮೇಘದಲ್ಲಿರದೆ ವೇಷ?
ಇವು ರಾಶಿಯ ದೈವವಲ್ಲದೆ,
ಪರಮನ ವೇಷ ಕಾವಿಯಲಿಲ್ಲ,
ಜಡೆ ಮುಡಿ ಬೋಳಿನಲಿಲ್ಲ, ವಿಶ್ವಪತಿ ವಿಶ್ವನಾಥಾ. ॥ ೧ ॥

## -?- ವೈನಿಪುರದ ಸಂಗಮೇಶ್ವರ

೧೩೬೦

ವೈನವಾಗಿ ಜುಮದಟ್ಟಿ ಬಿಟ್ಟು,
ವಿವರವಾಗಿ ಪರಪರರ ಕಲಂಕವ ಕರಗಿಸಿ,
ಜ್ಞಾನಿಯಾಗಿ ಆರವೆಯನಾರೈಯದೆ ಆರೈಕೆಯಾಗಿ,
ಕೂಲಿಗೆ ಕೊಳಬಿಟ್ಟು, ಕೂಳಿಗೆ ಲೋಲ ಸೆರೆವಿಡಿದು,
ನಾಳೆಯ....ಗಂಟಲಗಾಣ ನಾನು ಕಾಣಾ,
ವೈನಿಪುರದ ಸಂಗಮೇಶ್ವರಾ. ॥ ೧ ॥

■ ■

## -?-ವೈದ್ಯನಾಥೇಶ್ವರ

೧೩೬೧

ಕಳ್ಳಿಯ ಹಾಲನೊಳ್ಳೆ ಹಾಲಿಗೆ ಸರಿಮಾಡಲರಿಯೆ?
ನಯನುಂಪನುಡುವವಳು....ಮಂತ್ರಾಂತ್ರಸರ
ಮಂತ್ರಾಂತ್ರಿಗೆ ಸರಿಯೆ?
ಮೂರೂಟವ ಕೊಂಡುಟ್ಟುಟ್ಟವರು ಹಾಳಾಗಿ
ಹೊದ್ದುಂಡವರಿಗೆ ಸರಿಯೆ?
ಬಿಟ್ಟ....ದೆನಾದಡೆ ನೀನೆನ್ನ ಗರಗರನೆ ಚಾಚಯ್ಯಾ,
ನಿರುವಿಗೆ ನಿಲುವೆಯ ವೈದ್ಯನಾಥೇಶ್ವರಾ. ॥ ೧ ॥

■ ■

## -?-ಶಂಭುಮಾರೇಶ್ವರ

೧೩೬೨

ಎಲೆ ದೇವಾ ಏತಕ್ಕೆ ನುಡಿಯೆ? ಎನ್ನೊಳು ಮುನಿಸೆ?
ಎನ್ನೊಳು ನಿನ್ನಯ ಚಿತ್ತವನಿರಿಸಿ ನೀಕರಿಸಿ ನುಡಿಯದಿರ್ದಡೆ
ಎನ್ನಯ ನೋವನಿನ್ನಾರಿಗೆ ಹೇಳುವೆ, ನಿನಗಲ್ಲದೆ?
ನೀ ಮಾಡುವ ಮಾಟ ಅನೇಕ ಕುಟಿಲ.
ಯೋಗಿಗಳ ಸುತ್ತಿ ಮುತ್ತಿದ ಹರಿತದ ಪಾಶ ನಿಮ್ಮಲ್ಲಿ,
ಅನೇಕರ ಕೊಲುವ ಪಾಶ ಕೈಯಲ್ಲಿ, ಭವವೇಷವಂಗದಲ್ಲಿ,
ಭಕ್ತರ ಕೊಲುವ ದೋಷಕ್ಕೆ ಅಂಜಿದೆಯಾಗಿ, ನಿನಗದು ನೀತಿಯೆ?
ರುದ್ರನ ವೇಷಕ್ಕದು ಸಹಜ, ಅವ ಬಿಡು ಬಿಡು ನೀಕರಿಸು.
ಉಮಾಪತಿ ವೇಷವ ಬಿಟ್ಟು, ಸ್ವಯಂಭುವಾಗು.
ಎಲೆ ಅಯ್ಯಾ, ಎನ್ನಲ್ಲಿ ಸದ್ಭಕ್ತಿಯ ನೆಲೆಗೊಳಿಸಿ,
ಎನ್ನ ಪ್ರಕೃತಿಯ ಪರಿಹರಿಸಯ್ಯಾ.
ಎನ್ನ ತಂದೆ, ಮುಕುರ ಪ್ರತಿಬಿಂಬದಂತೆ
ಎನಗೆ ನಿನಗೆಂಬುದ ನೀನರಿಯಾ?
ಎಲೆ ದೇವಾ, ಅರಿದರಿದೇಕೆನಗೆ ಕೃಪೆಯಾಗಲೊಲ್ಲೆ,
ಎಲೆ ಸ್ವಾಮಿ, ಆನು ಮಾಡಿದುದೇನು ನಿನಗೆ?
ಮಾರನ ಕೊಂದ ಮಲತ್ರಯದೂರನೆ,

ಅನಾಗತಸಂಸಿದ್ಧ ಭೋಗಮಯನೆ,
ನಯನ ಚರಣಾರವಿಂದ ವಿರಾಜಿತನೆ, ಸರ್ವವ್ಯಾಪಕ ನಾಶನೆ,
ಸರ್ವಾಂತರ್ಗತ ವಿಮಲಾಂತರಂಗನೆ, ಕರುಣಾಬ್ಧಿಚಂದ್ರ ವಿಲಾಸಿತನೆ,
ಭಕ್ತ ಚಿತ್ತದ ಸಾಕಾರದ ಪುಂಜನೆ,
ಭಕ್ತವತ್ಸಲನೆ, ಭಕ್ತದೇಹಿಕದೇವನೆ,
ಎನಗೆ ನಿಮ್ಮ ಭಕ್ತಿವಿಲಾಸವ ಕರುಣಿಸಯ್ಯಾ.
ಶಂಭು ಮಾರೇಶ್ವರಾ. ॥ ೧ ॥

■ ■

## -?-ಶಾಂತವೀರೇಶ್ವರ

೧೩೬೩

....ದ್ವಾತೀತ ಶಿವಸಮಾನತ್ವವೆ........ರು ಸಿದ್ಧಾಂತಿಗಳೆಂದು ವಿವರಿಸಲ್ವೇಳ್ಕು ಶಾಂತವೀರೇಶ್ವರ ಪ್ರಭುವೆ. ॥ ೪ ॥

೧೩೬೪

.....[ಚಾರ್ವಾಕ] ಜೈನ ಬೌದ್ಧ ಮೀಮಾಂಸಕ ಸಾಂಖ್ಯರೆಂಬರೇ ನಿರೀಶ್ವರವಾದಿಗಳು ಮಿಕ್ಕವರೆಲ್ಲರೂ ಸೇಶ್ವರವಾದಿಗಳಕ್ಕುಂ. ಮತ್ತಮಾ ವಾದಿಗಳಲ್ಲಿ ಚಾರ್ವಾಕಾದಿಗಳೆಲ್ಲರೂ ಭೇದವಾದಿ..........ಯಪ್ಪನಯ್ಯಾ, ಶಾಂತವೀರೇಶ್ವರಾ. ॥ ೫ ॥

೧೩೬೫

ಬೃಹಸ್ಪತಿ ಅರ್ಹತ ಸುಗತರೆಂಬಿವರಿಂ ಕ್ರಮದಿಂ ಪೇಳಲ್ಪಟ್ಟ ಚಾರ್ವಾಕ ಜೈನ ಬೌದ್ಧಂಗಳೆಂಬುವೆ ಅವೈದಿಕ ಶಾ....ದ್ಯಾದಿ ಚತುರ್ಭೂತವಿಕಾರವಾದ ಜಗತ್ತಿನಲ್ಲಿ ಸುಖವೇ ಸ್ವರ್ಗ, ದುಃಖವೇ ನರಕವಲ್ಲದೆ ಬೇರೆ ಸ್ವರ್ಗ ನರಕಾದಿಗಳಿಲ್ಲವೆಂದು ಪೇಳೂದು ಜೈನವೇ ಸಿದ್ಧ ಬದ್ಧ.....ಣಂಗಳಂ ಒಡ್ಡೀಶ ಒಡ್ಡಾಮುಮಲ್ಲೇಶ್ವರ ಜ್ವಾಲಿನೀಕಲ್ಪ ಪದ್ಮಾವತೀಕಲ್ಪ ಶಾರದಾಕಲ್ಪ ಕುಕ್ಕುರನಾಥಾದಿ ಕಲ್ಪಂಗಳಿಂದ, ಮಂತ್ರೌಷಧಾದಿ....ರುಗಳಂ ಲೂನಕೇಶ ದಿಗಂಬರ ಪಾಣಿಪಾತ್ರೆ ಮಯೂರಪಿಂಛ ಕುಂಚ ಮಲಧಾರಣಾದಿಗಳಿಂ, ಹುಸಿ ಕಳವು ಪಾರದ್ವಾರ ಅತಿ...ಬ ಪಂಚಾಣು ವ್ರತಂಗಳಿಂ, ಮಧುಫಲಾಂಡು ಮೊದಲಾದ

ನಿಷಿದ್ಧದ್ರವ್ಯಯಂಗಳಂ ಬಿಟ್ಟು ವಾಲ್ಮೀಕಂಗಳಿಂದ ತಪ್ತಶಿಲಾಶಯನಾದಿಗಳಿಂದ ಉಗ್ರತಸ್ಸನಾಚ...ಚಂದ್ರ ನಾಗಚಂದ್ರ ನೇಮಿಚಂದ್ರ ಮಾಘಚಂದ್ರ ಮೇಘಚಂದ್ರ ಅರ್ಹತ ಆದಿನಾಥ ಅಗ್ಗಳ ಪಾರ್ಶ್ವನಾಥ ಸೌಗತ ಶ್ರುತಕೀರ್ತಿ ಶ್ರೀಮತಿ ಕಾಮರಖಾತ [?] ಮುನೀಶ್ವರ ಚರಿತ್ರಂಗಳಂ ಸ್ಯಾದಸ್ತಿ ಸ್ಯಾನ್ನಾಸ್ತಿಯೆಂಬಿವು ಮೊದಲಾದ ಸಪ್ತಭಂಗಿಗಳಂ ಜೀವ [ಅಜೀ]ವ ನಿ[ರ್ಜರಾ] ಮೋಕ್ಷಮೆಂಬ ಸಪ್ತಪದಾರ್ಥಂಗಳ..[ಶಾಂತ]ವೀರಪ್ರಭುವೇ. ॥ ೬ ॥

೧೩೬೬

ಚಾರ್ವಾಕ ಬೌದ್ಧವೆ ಮಾ...ದಿ ಕಡೆಯಾದ ತ್ರಯೋ....ವೈಭಾಷಿಕ ಮಹಾಯಾನಿಸಿಕ ಸೌತಾತಿಂತ್ರಿ[ಕ]...ನಾಥರ ಮತಂಗನಾಥ ಮತ್ಸ್ಯೇಂದ್ರನಾಥ ಘಟಿಯಂತ್ರನಾಥ ಗೋರಕ್ಷನಾಥರೆಂ...ಕಲ್ಪಿತಮಾದ ಕೌಳಯಾಮಳಾದಿ..... ನಿಷಿದ್ಧ ಕರ್ಮಮುಳ್ಳ ಶಾಸ್ತ್ರಾಂತರಂಗಳವರಲ್ಲಿ ಅಭಿಚಾರ ಕರ್ಮಜನಿತ ವ್ಯಾಧ್ಯಾದಿದ್ವಾರದಿಂ ಅಕಾಲ ಮೃತಿರೂಪ ಮಾರಣಾ...ದಿಸಂ ವಶೀಕರಣಲಕ್ಷಣ ಮೋಹನವೆಂಬ ಅಗ್ನಿ ಸಂಭ ಜಲಸ್ತಂಭ ಇಂದ್ರಿಯಸ್ತಂಭ ಖಡ್ಗಸ್ತಂಭ ಗಲ....ಭನವೆಂಬ ಪೂರ್ವ ಸುಖಾಶ್ರಯ ನಿರಸನಾತ್ಮಕಂ ಉಚ್ಚಾಟಣಮೆಂಬ ವಸ್ತ್ರಾಭರಣವಾಹನವನಿತಾದಿ ವಸ್ತ್ರ...ಕರ್ಷಣಮೆಂಬ ಪ್ರಾಣಸ್ನೇಹಿತಾ ನ್ಯೋನ್ಯ ವಿರೋಧ ಕರಣಾತ್ಮಕ ವಿದ್ವೇಷಣಮೆಂಬ ಷಟ್ಕರ್ಮಂಗಳಂ ರಾಜವಶ್ಯಂ ಜ...ಭೂತಗ್ರಹಾವೇಷಂಗಳಂ ಪಾದುಕಾಸಿದ್ಧಿ ಅಂಜನಾಸಿದ್ಧಿ ಘುಟಿಕಾಸಿದ್ಧಿ ಮೂಲಿಕಾಸಿದ್ಧಿ ರಸರಸಾಯನಾದಿ ಸಿದ್ಧಿಗಳಂ ಸಾಧಿಸುತ್ತಿರ್ಕ್ಕುಂ...ಕ್ತಿ ತತ್ತ್ವಮಸಿಯಾದೊರ್ವಾತ್ಮನಿಂ [ವಾ]ಸುದೇವನಿಂ ಕ್ರಮದಿಂದುಕ್ತಮಾದ ಶಾಕ್ತೇಯ ಪಾಂಚರಾತ್ರಮೆಂಬ ಶಾಸ್ತ್ರಾಂತರ ದ್ವಯಂಗಳವ[ರಲ್ಲಿ].....[ವೆಲ್ಲ] ಶಕ್ತಿಪರಿಣಾಮಮೆಂಬುದು ಮೊದಲಾದವಂ ವಿಸ್ತರಿಸೂದು ಪಾಂಚರಾತ್ರಕೆ ಪೃಥುವ್ಯಾದಿ ಮಾನಸಾಂತಮಾದ ಜಡನುರ್ವಿಂಶತಿ ತ...ವಾಸುದೇವನಿಂ ಜಗದ್ಧಿತಾರ್ಥಮಾಗಿ ಕೃಷ್ಣ ಅನಿರುದ್ಧ ಮಕರಧ್ವಜರ್ ರೌಹಿಣೇಯರೆಂಬ ನಾಲ್ವರುತ್ಪತ್ತಿಮೊದಲಾದವಂ ಸಂಪಾದಿಸುತ್ತಿರ್ಕುಂ ಶಾಂತವೀರೇಶ್ವರಾ. ॥ ೭ ॥

೧೩೬೭

ಬಳಿಕಾ ಲೌಕಿಕ ವೈದಿಕ ಅಧ್ಯಾತ್ಮಕಂ ಅತಿಮಾರ್ಗಿಕ ಮಾಂತ್ರಿಕವೆಂದು ಪಂಚವಿಧ ಶಾಸ್ತ್ರಂಗಳು ಅವರಲಿ ಲೌಕಿಕ [ಮೆಂಬುದು] ಧನ್ವಂತರ್ಯಾದಿಗಳಿಂದು ಕ್ತಮಾದ ಆಯುರ್ವೇದಂ ದಂಡನೀತಿ ಮೊದಲಾದ ದೃಷ್ಟಫಲಂಗಳಂ ನಿರ್ಧರಿ ಸುತ್ತಿರ್ಕುಂ ಶಾಂತವೀರೇಶ್ವರಾ. ॥ ೮ ॥

೧೩೬೮

ಬಳಿಕ, ಜೈಮಿನಿ ಅಕ್ಷಪಾದ ಕಣಾದರೆಂಬ ಋಷೀಶ್ವರರಿಂ ಕ್ರಮದಿಂದುಕ್ತ ಮಾದ ಪೂರ್ವಮೀಮಾಂಸೆ ನ್ಯಾಯ ವೈಶೇಷಿಕವೆಂಬ ದೃಷ್ಟಾದೃಷ್ಟ ಫಲಂಗ ಳುಳ್ಳ ವೈದಿಕಶಾಸ್ತ್ರಂಗಳು ಅವರಲ್ಲಿ ಪೂರ್ವಮೀಮಾಂಸೆಯೆ ಉಪಕ್ರಮಾದಿ

ಷಡ್ವಿಧಲಿಂಗ ತಾತ್ಪರ್ಯದಿಂ ವೇದವಾಕ್ಯ ವಿಚಾರಪೂರ್ವಕಮಾಗಿ ಜ್ಯೋತಿಷ್ಟೋಮ ಯಾಗಾದಿ ಕರ್ಮಂ ವಿಧಿಸೂದಯ್ಯಾ ಶಾಂತವೀರೇಶ್ವರಾ. ॥೯॥

೧೩೬೯

ಪ್ರಮಾಣ ಪ್ರಮೇಯ ಸಂಶಯ ಪ್ರಯೋಜನ ದೃಷ್ಟಾಂತ ಸಿದ್ಧಾಂತ ಅವಯವ ಕರ್ತ ನಿರ್ಣಯ ವಾದ ಜಲ್ಪ ವಿತಂಡ ಹೇತ್ವಾಭಾಸ ತ [ಛಲ] ಜಾತಿ ನಿಗ್ರಹಸ್ಥಾನಂಗಳೆಂಬ ಷೋಡಶಪದಾರ್ಥಮಂಪೇಳುತ್ತವೆ. ಪ್ರಪಂಚಕ್ಕೀಶ್ವರ ಕರ್ತೃತ್ವಮಂ ನಿಶ್ಚೈಸೂದಯ್ಯಾ ಶಾಂತವೀರೇಶ್ವರಾ. ॥ ೧೦ ॥

೧೩೭೦

ವೈಶೇಷಿಕವೇ ದ್ರವ್ಯ ಗುಣ, ಕರ್ಮ ಸಾಮಾನ್ಯ ವಿಶೇಷ ಸಮವಾಯವೆಂಬ ಷಟ್ಪದಾರ್ಥ ಪ್ರತಿಪಾದಕತ್ವದಿಂ, ಪ್ರಪಂಚ ಸ್ವರೂಪಮಂ ವಿಭಾಗಿಸುತ್ತಿರ್ಕುಂ, ಬಳಿಕ ಕಪಿಲ ಪತಂಜಲಿ ವ್ಯಾಸರೆಂಬ ಮುನಿಗಳಿಂ ಕ್ರಮದಿಂ ನಿರೂಪಿತಂಗಳಾದ ಸಾಂಖ್ಯ ಪಾತಂಜಲ ವೇದಾಂತಗಳೆಂಬ ಆತ್ಮಜ್ಞಾನಫಲವಾಗುಳ್ಳವೆ ಆದ್ಯಾತ್ಮಿಕ ಶಾಸ್ತ್ರ ತ್ರಯಂಗಳವರಲ್ಲಿ ಸಾಂಖ್ಯವೆ ನಿತ್ಯನಿರ್ಮಲರಾದಾತ್ಮರ ಸನ್ನಿಧಾನದಿಂ ಗುಣ ತ್ರಯಾತ್ಮಿಕ ಪ್ರಕೃತಿಯೆ ಪಂಚವಿಂಶತಿತತ್ವಾತ್ಮಕ ಸನ್ನಿಧಾನದಿಂ ಗುಣ ತ್ರಯಾತ್ಮಿಕ ಪ್ರಕೃತಿಯೆ ಪಂಚವಿಂಶತಿತತ್ವಾತ್ಮಕ ಜಗವಾಗಿ ವ್ಯವಹರಿಸೂದೆ ಸಂಸಾರ ಬಂಧವೆಂಬುದಂ ಸತ್ವಾದಿ ಗುಣತ್ರಯಾನುಕ್ರಮದಿಂ ಶ್ಲೇಷ್ಮಪ್ರಕೃತಿ ಪಿತ್ತ ಪ್ರಕೃತಿ ವಾತಪ್ರಕೃತಿ[ಗಳುಳ್ಳ] ಶಾಂತಿಕ್ರೋಧಮೂಢತ್ವಾದಿ ಗುಣಾದಿಗಳಾದ ಉತ್ತಮ ಮಧ್ಯಮ ಅಧಮ....ತ್ರಯದ....ಮೊದಲಾದವಂ ವಿಭಾಗಿಸೂದಯ್ಯಾ ಶಾಂತವೀರೇಶ್ವರಾ. ॥ ೧೧ ॥

೧೩೭೧

[ಯಮನಿ]ಯಮಾದ್ಯಷ್ಟಾಂಗಯೋಗಗಳಿಂದಂ ಮನೋನಿಶ್ಚಲತೆಯಂ ಸಿದ್ಧಿಸೂದು. ಉತ್ತರಮಿಮಾಂಸೆ...ಶಾಸ್ತ್ರವೆ ಪ್ರಪಂಚಕ್ಕೀ ಮಿಥ್ಯಾ....ಧಿಪುದರಿಂ ಬ್ರಹ್ಮಾತ್ಮೈಕ್ಯಮಂ ವರ್ಣಿಸುತ್ತಂ, ಭಾಸ್ಕರೀಯ ಮಾಯಾವಾದ ಶಬ್ದಬ್ರಹ್ಮವಾದ ಬ್ರಹ್ಮವಾದ ಕ್ರೀಡಾಬ್ರಹ್ಮವಾದವೆಂದು ನಾಲ್ಕು ತೆರನಾಗಿರ್ಕುಂ. ಬಳಿಕ ಮಾಯಾತತ್ತ್ವ ವಿದ್ಯಾತತ್ವವಾಸಿಗಳಾದ ತ್ರಿರುದ್ರರಿಂ ರಚಿತಂಗಳಾದ ಪಾಶುಪತ ಕಾಪಾಲಿಕ ಮಹಾವ್ರತಂಗಳೆಂಬವೆ ಅತಿಮಾರ್ಗಿಕಶಾಸ್ತ್ರತ್ರಯಂಗಳವರಲ್ಲಿ ಪಾಶುಪತವೆ ಮಾಯೆ ಕರ್ಮವೆಂಬ ಪಾಶದ್ವಯಾದಿಗಳಂ ನಿರ್ವಹಿಸೂದಯ್ಯಾ ಶಾಂತವೀರೇಶ್ವರಾ. ॥ ೧೨ ॥

೧೩೭೨

ಕಾಪಾಲಿಕವೆ ನರಕಪಾಲ ಭಿಕ್ಷಾಟನಾದಿಗಳಂ ವಿವರಿಸೂದು. ಮಹಾವ್ರತವೆ ಅಸ್ಥಿಧಾರಣಾದಿಗಳಂ ವಿವರಿಸುತ್ತಿರ್ಕುಂ. ಬಳಿಕ ಪರಶಿವಪ್ರಣೀತಮಾದ ಶಾಸ್ತ್ರ ಮಂತ್ರವೆ ಮೋಕ್ಷಾಂಗಮಾದ ಕ್ರಿಯೆ ಚರ್ಯೆ ಯೋಗ ಜ್ಞಾನಾದಿಗಳಂ ಪ್ರಮಾ

ಣಿಸುತ್ತಿರ್ಕುಂ, ಮತ್ತಮಾ ಸಮಸ್ತಮತಾಂತರಂಗಳಲ್ಲಿ ಪೇಳುವಾತ್ಮಸ್ವರೂಪವೆಂತೆನೆ: ದೇಹವೆ ಆತ್ಮನೆಂಬರು ಚಾರ್ವಾಕರು, ಇಂದ್ರಿಯಂಗಳೆ ಆತ್ಮನೆಂಬರು ಚಾರ್ವಾಕೈಕ ದೇಶಿಗಳು, ಪ್ರಾಣವೆ ಆತ್ಮನೆಂಬರು ಹಿರಣ್ಯಗರ್ಭರೆಂಬ ಚಾರ್ವಾಕೈಕ ದೇಶಿಗಳು. ಬಳಿಕ ದೇಹಾದಿ ವಿಲಕ್ಷಣನಾದೊರ್ವಾತ್ಮನು ದೇಹಪರಿಮಿತವಾಗಿ ಮಧ್ಯಪರಿಮಾಣತ್ವದಿಂ ಸಂಕೋಚ ವಿಕಾಸ ಧರ್ಮಯುಕ್ತನೆಂಬರು ಜೈನರು, ಬುದ್ಧಿಯೆ ಆತ್ಮನೆಂಬರು ಬೌದ್ಧರು, ಆನಂದವೆ ಆತ್ಮನೆಂಬರು ಕೋಳಯಾಮಳ ಶಾಕ್ತೇಯರುಗಳು, ಆತ್ಮನು ನಾಡಿಮಧ್ಯಗತನಾಗಿ ಅಣುಪರಿಮಾಣನೆಂಬರು ಪಾಂಚರಾತ್ರರು, ಆತ್ಮನು ದೇಹ ಪುತ್ರಾದಿ ರೂಪನೆಂಬರು ಲೌಕಿಕರು, ಆತ್ಮನು ಸ್ವತಃ ಪ್ರಮಾಣಜ್ಞಾನ ಸಮೇತನೆಂಬರು ಮೀಮಾಂಸಕ ಭೇದಮಾದ ಭಾಟ್ಟ ಪ್ರಭಾಕರರುಗಳು, ಆತ್ಮನು ಗಗನದಂತೆ ಮಹತ್ಪರಿಮಾಣನಾಗಿ ಪಾಷಾಣದಂತೆ ಜಡಸ್ವರೂಪನಾದೊಡಂ ಮನಃಸಂಯೋಗದಿಂ ಚಿದ್ಧರ್ಮಯುಕ್ತನೆಂಬರು ನೈಯಾಯಿಕ ವೈಶೇಷಿಕರುಗಳು, ಆತ್ಮನು ಅಸಚ್ಚಿನ್ಮಾತ್ರನೆಂಬರು ಸಾಂಖ್ಯ ಪಾತಂಜಲರುಗಳು, ಆತ್ಮನು ಜ್ಞಾಪ್ತಿಮಾತ್ರನೆಂಬರು ವೇದಾಂತಿಗಳು, ಆತ್ಮನು ನಿತ್ಯವ್ಯಾಪಕನೆಂಬರು ಪಾಶುಪತ ಕಾಪಾಲಿಕ ಮಹಾವ್ರತರುಗಳು, ಆತ್ಮನು ನಿತ್ಯವಾಪಕ ಜ್ಞಾನಕ್ರಿಯಾರೂಪನೆಂಬರು ಮಾಂತ್ರ ಸಂಜ್ಞಿತ ಸಿದ್ಧಾಂತಿಗಳೆಂದು ಪೃಥಕ್ಕರಿಸಲ್ವೇಳ್ಕುಂ ಶಾಂತವೀರೇಶ್ವರಾ. ಇಂತೀ ಮತಾಂತರಂಗಳ ಭಿನ್ನಾಚರಣೆವಿಡಿವನಲ್ಲಯ್ಯ ಶರಣ ಶಿವಾದ್ವೈ [ತಿ] ಯಾಗಿ, ಮಹಾಗುರುಶಾಂತ ವೀರಪ್ರಭುವೆ. ॥ ೧೩ ॥

೧೩೭೩

ಮತ್ತಮಾನುಗ್ರಹಿಸಲು ಯೋಗ್ಯನಾದ ಶಿಷ್ಯನ ಸವಿನಯದಲ್ಲಿಯೂ, ಅನುಗ್ರಾಹಕನಾದ ಗುರುವಿನ ಕಾರುಣ್ಯದಲ್ಲಿಯೂ, ಸರ್ವಾನುಗ್ರಾಹಕನಾದ ಶಿವನೆ ಕರ್ತನಾದ ಕಾರಣ, ಸರ್ವಲಕ್ಷಣಸಂಪನ್ನನಾದ ಗುರುವಿನ ಸರ್ವಲಕ್ಷಣಸಂಪನ್ನನಾದ ಶಿಷ್ಯನ ಯೋಗವು ಅತ್ಯಂತ ದುರ್ಲಭವಾದಂಥಾದು. ಇಂತೆಂದು ಪೌಷ್ಕರಂ ಪೇಳುತ್ತಿರ್ದಪುದು ಶಾಂತವೀರೇಶ್ವರಾ. ॥ ೧೪ ॥

೧೩೭೪

'ಅನುಗ್ರಾಹ್ಯಸ್ತು ವಿನಯೇ ತದಾನುಗ್ರಾಹಕಸ್ಯ ಚ । ಕಾರುಣ್ಯೇವ ಶಿವಃ ಕರ್ತಾ ತಯೋರ್ಯೋಗಸ್ಸುದುರ್ಲಭಃ'–ದೀಕ್ಷಾಶಬ್ದ ನಿರ್ವಚನಮಂ ಪೇಳ್ದ ಸಮ್ಯಜ್ಞಾನವು ಕೊಡಲ್ಪಡುತ್ತಿಹುದು, ಪಾಶಂಗಳ ಸಮೂಹವ ಕ್ಷಯವನೆಯ್ದಿಸಲ್ಪಡುತ್ತಿಹುದು, ಈ ಕ್ಷಪಣ ದಾನಂಗಳೆಂಬೆರಡರ ಶಾಸನದಲ್ಲಿ ದೀಕ್ಷಾಬದ್ಧಸಿದ್ಧವಾದಂಥಾದು. ಇಂತೆಂದು ಪಾರಮೇಶ್ವರತಂತ್ರ ಪೇಳೂದು, ಶಾಂತವೀರೇಶ್ವರಾ. ॥ ೧೫ ॥

೧೩೭೫

'ವಿಶಿಷ್ಟಂ ದೀಯತೇ ಜ್ಞಾನಂ ಕ್ಷೀಯತೇ ಪಾಪಸಂಚಯಃ। ಅನಯೋಃ ಶಾಸನೇ ಸಿದ್ಧಾ ದೀಕ್ಷಾ ಕ್ಷಪಣದಾನಯೋಃ'. ಆ ದೀಕ್ಷೆ ನಿರಾಧಾರದೀಕ್ಷೆಯೆಂದು ಸಾಧಾರ ದೀಕ್ಷೆಯೆಂದು ಎರಡು ಪ್ರಕಾರಮಪ್ಪುದು., ಅವರೊಳು ಶಿವನು ನಿರಧಿಕರಣನಾಗಿ ತೀವ್ರ ಶಕ್ತಿನಿಪಾತದಿಂದ ವಿಜ್ಞಾನಾಕಲರು ಪ್ರಳಯಾ ಕಲರುಗಳಿಗೆ ಮಾಡುವ ದೀಕ್ಷೆ ನಿರಾಧಾರದೀಕ್ಷೆ ಎನಿಸಿಕೊಂಬುದು. ಗುರುಮೂರ್ತಿಯನಾಶ್ರಯಿಸಿ ಮಂದಶಕ್ತಿನಿಪಾತ ದತ್ತಣಿಂ ಸಕಲರುಗಳಿಗೆ ಮಾಡೂದು ಸಾಧಾರದೀಕ್ಷೆ ಎನಿಸಿಕೊಂಬುದು. ಇಂತೆಂದು ಪಾರಮೇಶ್ವರ ತಂತ್ರಂ ಪೇಳೂದು, ಶಾಂತವೀರೇಶ್ವರಾ. || ೧೬ ||

೧೩೭೬

ಮತ್ತಮಾ ಸಾಧಾರದೀಕ್ಷೆಯು ಸಬೀಜದೀಕ್ಷೆ ನಿರ್ಬೀಜದೀಕ್ಷೆ ಚಿನ್ಮಯ ದೀಕ್ಷೆಯೆಂದು ಮೂರು [ಪ್ರಕಾರದವು]. ಅವು ಯಥಾಕ್ರಮದಿಂದ ಕರ್ಮಕಾಂಡ ಭಕ್ತಿಕಾಂಡ ಜ್ಞಾನಕಾಂಡಗಳಲ್ಲಿಯ ದೀಕ್ಷೆ ಎನಿಸಿಕೊಂಬವು. ಇಂತೆಂದು ಕಾರಣಾಗಮ ಪೇಳೂದಯ್ಯಾ. ಅವರೊಳು ನಿರ್ಬೀಜದೀಕ್ಷೆ[ಯು ಸದ್ಯೋ ನಿರ್ವಾಣದೀಕ್ಷೆ ಎಂದು] ಚಿರಂ ನಿರ್ವಾಣದೀಕ್ಷೆ ಎಂದು ಎರಡು ಭೇದವು ಪೇಳಲ್ಪಡುತ್ತಿಹುದು. ಅವರೊಳು ಅತ್ಯಂತ ವಿರಕ್ತನಾದ ಶಿಷ್ಯ[ನು] ಅನೇಕ ಭವಂಗಳಲ್ಲಿ ಮಾಡಲ್ಪಟ್ಟ ಸಂಚಿತಕರ್ಮಂಗಳನು, ಮತ್ತಮಾ ಸಂಚಿತಕರ್ಮರಾಶಿಯೊಳಂ ಆಗ ತಾಳ್ದಿರ್ದ ಶರೀರವಿಡಿದು ಅನುಭವಿಸುತ್ತಿರ್ದ ಪ್ರಾರಬು ಕರ್ಮಂಗಳನು, ಮುಂದೆ ಭವಾಂತರಂಗಳಲ್ಲಿ ಅನುಭವಿಸಲುಳ್ಳ ಆಗಾಮಿ ಕರ್ಮಂಗಳನು ಶೋಧಿಸಿ ಸದ್ಯೋನ್ಮುಕ್ತಿಯನೆಯ್ದಿಸುವ ದೀಕ್ಷೆ ಸದ್ಯೋನಿರ್ವಾಣದೀಕ್ಷೆ ಎನಿಸುವದಯ್ಯಾ, ಶಾಂತವೀರ ಪ್ರಭುವೇ. || ೧೭ ||

೧೩೭೭

ಮತ್ತಮಾ ಶಿಷ್ಯನ ಸಂಚಿತಕರ್ಮಗಳನು ಆಗಾಮಿಕರ್ಮಂಗಳನು ಕೆಡಿಸಿ, ದೀಕ್ಷೋತ್ತರ ಕ್ರಿಯಾವಸಾನ ಪರಿಯಂತರವಾಗಿ ಅನುಭವಿಸುತ್ತಿರ್ದ ಪ್ರಾರಬ್ಧ ಕರ್ಮಂಗಳ ಭೋಗಾಂತರದಲ್ಲಿ ಮುಕ್ತಿಯನೆಯ್ದಿಸುವ ದೀಕ್ಷೆ ಚಿರಂನಿರ್ವಾಣವೆನಿಸೂದು. ಇಂತೆಂದು ಪಾರಮೇಶ್ವರತಂತ್ರಂ ಪೇಳೂದಯ್ಯ, ಶಾಂತವೀರ ಪ್ರಭುವೇ. || ೧೮ ||

೧೩೭೮

ಮತ್ತಮಾ ಚಿರಂನಿರ್ವಾಣದೀಕ್ಷೆಯು, ಆಜ್ಞಾದೀಕ್ಷೆಯು, ಉಪಮಾದೀಕ್ಷೆ ಸ್ವಸ್ತಿಕಾರೋಹಣ್, ವಿಭೂತಿಯಪಟ್ಟ. ಕಲಶಾಭಿಷೇಕ, ಲಿಂಗಾಯತ, ಲಿಂಗ ಸ್ವಾಯತಗಳೆಂದು ಏಳು ಪ್ರಕಾರವು. ಅವರೊಳು ಗುರುವಿನಾಜ್ಞಾಪಾಲನದಲ್ಲಿ ಸಮರ್ಥವಾದುದು ಆಜ್ಞಾದೀಕ್ಷೆ ಎನಿಸಿಕೊಂಬುದು. ಪುರಾತನರುಗಳ ಸಮಯಾಚಾರಕ್ಕೆ ಸದೃಶವಾದುದು ಉಪಮಾದೀಕ್ಷೆ ಸ್ವಸ್ತಿಕವೆಂಬ ಮಂಡಲದ ಮೇಲೆ ಶಿಷ್ಯ

ನ ಕುಳ್ಳಿರಿಸಿ, ಮಂತ್ರನ್ಯಾಸಮಂ ಮಾಡಿ, ಮಂತ್ರಪಿಂಡವಾಗಿ ಮಾಡುವದು ಸ್ವಸ್ತಿಕಾರೋಹಣ. ಆಗಮೋಕ್ತಸ್ಥಾನಂಗಳಲ್ಲಿ ತತ್ತನ್ಮಂತ್ರಂಗಳಿಂ ವಿಭೂತಿಧಾರಣವು ವಿಭೂತಿಯಪಟ್ಟ. ಪಂಚಕಲಶಂಗಳಲ್ಲಿ ತೀರ್ಥೋದಕಗಳಂ ತುಂಬಿ ಶಿವಕಲಾಸ್ಥಾಪನಂ ಮಾಡಿ, ಆ ಕಲಶೋದಕಂಗಳಿಂ ಶಿಷ್ಯಂಗೆ ಸ್ನಪನವಂ ಮಾಡೂದು ಕಲಶಾಭಿಷೇಕ. ಆಚಾರ್ಯನು ಶಿಷ್ಯಂಗೆ ಉಪದೇಶಿಸಲಕ್ಕೆ ಲಿಂಗಮಂ ತಾನು ಅರ್ಚನೆಯಂ ಮಾಡಿ, ಶಿಷ್ಯನಂ ನೋಡಿಸುವುದು ಲಿಂಗಾಯತವೆನಿಸಿಕೊಂಬುದು. ಆ ಶ್ರೀಗುರುನಾಥನಿಂದುಪದಿಷ್ಟವಾದ ಪ್ರಾಣಲಿಂಗವನು ಶಿಷ್ಯನು ಭಕ್ತಿಯಿಂ ಸ್ವೀಕರಿಸಿ, ತನ್ನ ಉತ್ತಮಾಂಗಾದಿ ಸ್ಥಾನಂಗಳಲಿ ಧರಿಸೂದು ಲಿಂಗಸ್ವಾಯತವೆನಿಸಿಕೊಂಬುದು. ಇಂತೆಂದುಕಾಮಿಕಂ ಪೇಳೂದಯ್ಯ, ಶಾಂತವೀರಪ್ರಭುವೆ. ॥ ೧೯ ॥

೧೩೭೯

ಮತ್ತಮಾ ಸ್ವಾಯತದೀಕ್ಷೆಯು ವೇಧಾದೀಕ್ಷೆ ಮಂತ್ರದೀಕ್ಷೆ ಕ್ರಿಯಾದೀಕ್ಷೆ ಎಂದು ಮೂರು ಪ್ರಕಾರಮಪ್ಪುದು. ಅವಾವೆಂದೊಡೆ: ಗುರು ಶಿಷ್ಯನ ಮಸ್ತಕದಲಿ ಆಗಮೋಕ್ತ ವಿಧಾನದಿಂ ಶಿವಾಸನವನು ಧ್ಯಾನಿಸಿ, ಅಲ್ಲಲ್ಲಿ ಅವುದಾನೊಂದು ಶಿವತತ್ವಸಮಾವೇಶವು ವೇಧಾದೀಕ್ಷೆ ಎನಿಸಿಕೊಂಬುದು. ದೇವತಾದಿಗಳು ಸಹವಾಗಿ ಮಂತ್ರೋಪದೇಶವನು ಮಾಡುವುದು ಮಂತ್ರದೀಕ್ಷೆ ಎನಿಸಿಕೊಂಬುದು. ದೀಕ್ಷೋತ್ತರ ಕ್ರಿಯೆಗೂಡಿ ಪ್ರಾಣಲಿಂಗೋಪದೇಶವನು ಮಾಡುವುದು ಕ್ರಿಯಾದೀಕ್ಷೆ ಎನಿಸಿಕೊಂಬುದು. ಇಂತೆಂದು[ದು]ವಾ ತೂಳಂ. ಮತ್ತಮಾ ಗುರುವು ಶಿಷ್ಯನ ಕರ್ಣದಲ್ಲಿ ಮಂತ್ರೋಪದೇಶವ ಮಾಡೂದೇ ಮಂತ್ರದೀಕ್ಷೆ. ಶಿಷ್ಯನ ಹಸ್ತದಲ್ಲಿ ಗುರುವು ಲಿಂಗವ ಕೊಡುವುದೆ ಕ್ರಿಯಾದೀಕ್ಷೆ. ಗುರು ತನ್ನ ಹಸ್ತವ ಶಿಷ್ಯನ ಮಸ್ತಕದಲ್ಲಿಡುವುದೆ ವೇಧಾದೀಕ್ಷೆ ಎನಿಸುವುದ[ಯ್ಯಾ] ಶಾಂತವೀರ ಪ್ರಭುವೇ. ॥ ೨೦ ॥

೧೩೮೦

ಮತ್ತಂ ಶಿವನು ಸರ್ವಾನುಗ್ರಹಕರ್ತೃವಹತನದಿಂದ ಬಾಲರು ಬಾಲಿಶರು ಭೋಗೀಶರುಗಳಿಗೆ ಅನುಗ್ರಹಮಾಡಲಕ್ಕುದೆಂಬಲ್ಲಿ ಆಯಾ ಅನುಗ್ರಹವು ಅವರವರ ಸಂಸ್ಕಾರ ಪೂರ್ವಕವಾಗಿದ್ದಂಥಾದು. ಮತ್ತಮಾ ಸಂಸ್ಕಾರದಿಂದವೆ ಮುಕ್ತಿಯಪ್ಪುದೆಂದೊಡೆ ಕ್ರಿಯಾಜ್ಞಾನವ್ರತ ಮೊದಲಾದ ಉಪಾಯಂಗಳಿಗೆ ಕಾರಣವಿಲ್ಲದೆ ಹೋಗುವುದು. ಇಂತೆಂಬ ಚೋದ್ಯಮಂ ಪರಿಹರಿಸುತ್ತಿದ್ದನು. ಆರು ಕೆಲಂಬರು ಹೇಗೆ ಇದ್ದಾರು ಅವರಿಗೆ ಹಾಗೆ ಶಿವನು ಅನುಗ್ರಹ ಮಾಡುವನು. ಅದು ಹೇಗೆಂದೊಡೆ : ಕೆಲಂಬರು ಕ್ರಿಯಾಯೋಗ್ಯರು, ಅವರಿಗೆ ಕ್ರಿಯೆಯಿಂದವೆ ಮುಕ್ತಿಯಪ್ಪುದು. ಕೆಲಂಬರು ಜ್ಞಾನಯೋಗ್ಯರು. ಕೆಲಂಬರು ಚರ್ಯಾಯೋಗ್ಯರು. ಕೆಲಂಬರು ಯೋಗಾರ್ಹರು. ಈ ಪ್ರಕಾರದಲ್ಲಿ ಅರಿಗೆ ಅವುದರಿಂ ಮೋಕ್ಷವು ಪೇಳಲ್ಪಟ್ಟಿತ್ತು, ಅದು ಶಿವನ ಕೃಪೆಯತ್ತಣೆಂದಪ್ಪುದು. ಅದು ಕಾರಣ, ಜ್ಞಾನಾದ್ಯು ಪಾಯಂಗಳಿಗೆ ದೀಕ್ಷೆ ಕಾರಣವೆಂದು ಇಚ್ಛೈಸಲ್ಪಡುತ್ತಿ

ದ್ದಿತು. ಅಂತದರಿಂ ದೀಕ್ಷೆಯಿಂದವೆ ಮೋಕ್ಷಮಪ್ಪುದು, ಉಪಾಯವೆ ನಿಯಾಮಕ ಮಪ್ಪುದು. ಮತ್ತಂ ಶಿವನು ಸರ್ವಾನುಗ್ರಹಕ್ಕೆ ಕರ್ತೃವಾದ ಕಾರಣ, ಆ ಉಪಾಯಂಗಳು ಶಿವನಿಂದವೆ ಉದಿತವಾಗಿದ್ದಂಥಾವು. ಇಂತೆಂದು ಕಾರಣಾಗಮ ಪೇಳೂದಯ್ಯಾ, ಶಾಂತವೀರೇಶ್ವರಾ. ॥ ೨೧ ॥

೧೩೮೧

ಮತ್ತಂ ಪರಮಕಾರಣನಾದ ಶಿವನು ಗ್ರಾಹ....ತಿ ಬ್ರಾಹ್ಮಣಾದಿ ವರ್ಣಗಳು ನ್ಯೂನಾಧಿಕವಹತದಿಂದಿದ್ದಂಥಾವು. ಅವರವರ ಸಂಸ್ಕಾರವೂ ಆ ಪ್ರಕಾರವೇ ಆಗಬೇಕು. ಅಂತದರಿಂ ಫಲವು ಈ ಪ್ರಕಾರವೇಕಾಗದು? ಇಂತೆಂದು ಕಿರಣದಲ್ಲಿ ಚೋದ್ಯಮಂ ಪ್ರಶ್ನೋತ್ತರ ಕ್ರಮದಿಂ ಪರಿಹರಿಸುತ್ತಿದ್ದಾನು. ಸಂಸ್ಕಾರವು ಆತ್ಮಂಗೆ ಅಪ್ಪುದು, ಜಾತಿಗೂ ಇಲ್ಲ ಶರೀರಕ್ಕೂ ಇಲ್ಲ. ಇತ್ತಲಾನು ಜಾತಿಗೆ ಸಂಸ್ಕಾರವಪ್ಪೊಡೆ ಒಬ್ಬನು ದೀಕ್ಷಿತನಾಗಲಾಗಿ ಸರ್ವರೂ ದೀಕ್ಷಿತರಾಗಬೇಕು. ಅಂತದರಿಂ ಜಾತಿಗೆ ಸಂಸ್ಕಾರವಿಲ್ಲ, ಮತ್ತಂ ಶರೀರವು ಜಡವಹತನದಿಂದವಕ್ಕೆ ಸಂಸ್ಕಾರವಿಲ್ಲ. ಅಂತದರಿಂ ಸರ್ವಾನುಗ್ರಾಹಕನಾದ ಶಿವನು ಚಿದ್ರೂಪರಾದ ಆತ್ಮರುಗಳನ್ನು ಅನುಗ್ರಹಿಸುವನಯ್ಯಾ ಶಾಂತವೀರೇಶ್ವರಾ. ॥ ೨೨ ॥

೧೩೮೨

ಮತ್ತಂ ಸಮಸ್ತಪಾಶಂಗಳು ತೊಲಗಲೋಸ್ಕರ ದೀಕ್ಷೆ ಮಾಡಲ್ಪಟ್ಟಿತ್ತು, ಅಂತಾದೊಡೆ ದೀಕ್ಷೆಯಾಗಿಯೂ ಕರ್ಮಾಧಿಕಂಗಳು ಏನು ಕಾರಣ ತೊಲಗವು? ಇಂತೆಂಬ ಚೋದ್ಯಮಂ ಕಿರಣದಲಿ ಪ್ರಶ್ನೋತ್ತರ ಕ್ರಮದಿಂದ ದೃಷ್ಟಾಂತ ಪೂರ್ವಕವಾಗಿ ತೊಲಗಿಸುತ್ತಿದ್ದಾನು. ಅದೆಂತೆಂದೊಡೆ : ಸಿದ್ಧವಾದ ಮಂತ್ರಂಗಳಿಂದ ಅಮೂರ್ತವಾದ ವಿಷಯ ಶಕ್ತಿಗೆ ಕ್ಷಯವೆಂತಂತೆ ಅಂಕುರೋತ್ಪತ್ತಿಗೆ ಕಾರಣವಾದ ಬೀಜವೆಂತು ಹುರಿಯಲ್ಪಡುವ[ದೆಂತಂತೆ] ದೀಕ್ಷಾಕಾಲದ ಪ್ರಸಿದ್ಧವಾದ ಮಂತ್ರಂಗಳಿಂದ ಅನೇಕ ಭವಂಗಳಲ್ಲಿ ಮಾಡಲ್ಪಟ್ಟ. ಭವಬೀಜಂಗಳಾದ ಕರ್ಮಂಗಳು ಸುಡಲ್ಪಟ್ಟವು. ಆಗಾಮಿ ಕರ್ಮಂಗಳು ತಡೆಯಲ್ಪಟ್ಟವು. ಪ್ರಾರಬ್ಧಕರ್ಮವು ಭೋಗಾಂತರದಲ್ಲಿ ಕೆಡಲ್ಪಟ್ಟಿತು. ಇಂತೆಂದು ಕಿರಣಂ, ಗರುಡ ಉವಾಚ : 'ಪಾಶವಿಶ್ಲೇಷಣಾರ್ಥಂತು ನ್ಯ ದೀಕ್ಷಾಚ ಕ್ರಿಯತೇ ಕಿಲ । ವಿಶ್ಲೇಷೋಽಪಿ ನ [ಈಶ್ವರ] ದೃಷ್ಟತ್ವಾತ್ಕಥಂ ವದ ಭವಾನೆ ಹೋ ॥ ವಾಚ ಪಾಶಸ್ತೋಮಃ ಕ್ಷಯಃ ಸಿದ್ಧಃ ಸಂಸಿದ್ಧಿಃ ಸೋಽಪಿ ಶಂಬರ್ಯೈಃ ಶಂಬರಾಣಾಮಚಿಂತ್ಯತ್ವಾದ್ಯಥಾ ಮೂರ್ತಿ ವಿಚಕ್ಷಯಃ ॥ ಅನೇಕ ಭವಿ ಕರ್ಮದಗ್ಧಂ ಬೀಜಮಿವಾಣುಭಿಃ। ಭವಿಷ್ಯದಪಿ ಸಂರುದ್ಧಂಯಯೇದಂ ತದ್ಧಿ ಭೋಗತಃ॥ ಇಂತೆಂದು ಕಿರಣಾಗಮಂ ಪೇಳೂದಯ್ಯ, ಶಾಂತವೀರೇಶ್ವರಾ. ॥ ೨೩ ॥

೧೩೮೩

ಮತ್ತಂ ದೀಕ್ಷೆಯಿಂ ಸಮಸ್ತ ಪಾಶಂಗಳು ತೊಲಗು[ವ]ವಪ್ಪಡೆ ದೀಕ್ಷೆಯಾಗಿಯೂ ಶರೀರಸ್ಥಿತಿಯೆಂತು ಸಂಭವಿಪುದೆಂಬ ಚೋದ್ಯಮಂ ದೃಷ್ಟಾಂತಪೂರ್ವಕ

ವಾಗಿ ಪರಿಹರಿಸುತ್ತಿದ್ದನು. ಘಟನಿಷ್ಪತ್ತಿಯಾದರೂ ಮತ್ತೂ ಪರಿಭ್ರಮಿಸುತ್ತಿರ್ದ ಕುಲಾಲಚಕ್ರವೆಂತಂತೆ ದೀಕ್ಷೆಯಾದರೂ ದೀಕ್ಷೋತ್ತರ ಕ್ರಿಯಾವಸ್ಥಾನ ಪರ್ಯಂತರವಾಗಿ ಪ್ರಾರಬ್ಧಕರ್ಮವಾಸನೆಯಿಂದ ಶರೀರಸ್ಥಿತಿ ಸಂಭವಿಪ್ಪುದು. ಮತ್ತಂ ಘಟದೊಳಗಿದ್ದ ದೀಪವು ಘಟವೊಡೆಯಲಾಗಿ, ಘಟದೊಳಗಿರ್ದ ದೀಪ ಎಲ್ಲಾ ಕಡೆಯಲ್ಲಿಯೂ ಎಂತು ಪ್ರಕಾಶಿಸುವುದಂತೆ ದೀಕ್ಷಿತನು ದೇಹಾವಸಾನದಲ್ಲಿ ಪರಮುಕ್ತನಪ್ಪನು. ಇಂತೆಂದು ಕಿರಣಂ ಪೇಳ್ದಪುದು, ಶಾಂತವೀರೇಶ್ವರಾ. || ೨೪ ||

೧೩೮೪

ಗರುಡ ಉವಾಚ: 'ಅಶೇಷ ಪಾಶವಿಶ್ಲೇಷೋ, ಯದಿ ದೇವೇಶ ದೀಕ್ಷಯಾ। ಜಾತಾಯಾಮರ್ಥನಿಷ್ಪ್ಯತ್ಯಾ ಕಥಂ ಸ್ಯಾದ್ವಪುಷಃ ಸ್ಥಿತಿಃ।। ಭಗವಾನ್ ಉವಾಚ। ಜಾತಾಯಾಂ ಘಟನಿಷ್ಪತ್ತೌ ಯಥಾ ಚಕ್ರಂ ಭ್ರಮತ್ಯಪಿ। ಪೂರ್ವಸಂಸ್ಕಾರ ಸಂಸಿದ್ಧಂ ತಥಾ ವಪುರಿದಂ ಸ್ಥಿತಂ ।। ಭಗ್ನೇ ಘಟೇ ಯಥಾ ದೀಪಃ ಸರ್ವತಃ ಸಂಪ್ರಕಾಶತೇ । ದೇಹಪಾತೇ ತಥಾ।। ಚಾತ್ಮಾ ಭಾತಿ ಸರ್ವತ್ರ ಸರ್ವದಾ ಇಂತೆಂದು ಪೂರ್ವೋಕ್ತವಾದ ನಿರ್ಬೀಜಾದಿ ಶಿವದೀಕ್ಷೆಗಳಿಂದಮಲವಾದಾತನೆ ಮುಕ್ತನೆನಿಸಿಕೊಂಬನು. ಆ ಶಿವದೀಕ್ಷೆಗೆ ಯೋಗ್ಯವಾದ ಸಮಯಮಂ ವಾತೂಲದೊಳು ಪೇಳ್ದಪಂ ಶಾಂತವೀರೇಶ್ವರಾ. || ೨೫ ||

೧೩೮೫

ಸಾಕ್ಷಿ: 'ಶೈವಂ ಚತುರ್ವಿಧಂ ಜ್ಞೇಯಂ ಸಮಾಸಾತ್ ಶ್ರುಣು ಷಣ್ಮುಖ ।। ಸಾಮಾನ್ಯಂ ಮಿಶ್ರಕಂ ಶೈವಂ ಶುದ್ಧಂ ವೀರಂ ಯಥಾ ಕ್ರಮಂ' ।। ಇಂತೆಂದು ಶಿವ ಸಂಬಂಧವಾದ ದರ್ಶನವು ನಾಲ್ಕು ಪ್ರಕಾರವಾಗಿದ್ದಂಥಾದ್ದೆಂದು ಅರಿಯಲ್ತಕ್ಕುದು. ಆ ಚತುರ್ವಿಧ [ದ]ಲಿ ಶೈವವನು ಹೇಳಿಹನು ಎಲೆ ಷಣ್ಮುಖನೆ ಕೇಳು, ಅವಾವವೆಂದೊಡೆ: ಸಾಮಾನ್ಯ ಶೈವ ಮಿಶ್ರಶೈವ ಶುದ್ಧಶೈವ ವೀರಶೈವವೆಂದು ಕ್ರಮದಿಂದಪ್ಪುವೆಂದು ಶಿವನು ನಿರೂಪಿಸುತ್ತಿದ್ದನಯ್ಯಾ, ಶಾಂತವೀರೇಶ್ವರಾ. || ೨೬ ||

೧೩೮೬

'ತತ್ರಾದೌ ಸಂಪ್ರವಕ್ಷ್ಯಾಮಿ ಶೈವ ಸಾಮಾನ್ಯಲಕ್ಷಣಂ' ಎಂದು ಆ ನಾಲ್ಕು ವಿಧವಾದ ಶೈವಂಗಳೊಳಗೆ ಮೊದಲು ಸಾಮಾನ್ಯಶೈವಲಕ್ಷಣವ ಹೇಳಿಹೆನು: 'ಶಿವಲಿಂಗಂ ಯಥಾ ಪಶ್ಯೇತ್ತದಾ ಕುರ್ಯಾತ್ಸಮರ್ಚನಂ। ಪ್ರದಕ್ಷಿಣಾಂ ಮ ಪ್ರಣತಿಂ ದರ್ಶನಂ ವಾsತ್ರ ಕಾರಯೇತ್ ।। ಭಸ್ಮಧಾರಣಮಾತ್ರೇಣ ಶುದ್ಧೋ ಭವತಿ ಸರ್ವದಾ। ಶಿವಕಿ....ತದಾರೋಪೇ ಪ್ರೀತಿಮಾನ್ ಶಿವಭಕ್ತಕೇ ।। ಏತೇಷಾಂ ನಿಯತಿರ್ನಾಸ್ತಿ ಯಥಾ ಲಬ್ಧಂ ಸಮಾಚರೇತ್' ಇಂತೆಂದುದಾಗಿ ಆವನಾನೊಬ್ಬ ಸಾಮಾನ್ಯಶೈವನು ವಿಭೂತಿಯಪಟ್ಟ ಮಾತ್ರದಿಂದವೆ ಶುದ್ಧವಾಗುತ್ತಿರ್ದ್ದಾತನಾಗಿ ಸ್ವಯಂಭುಲಿಂಗವನಾದರೆಯೂ ದೇವದಾನವಮಾನವಾದಿಗಳಿಂ ಪ್ರತಿಷ್ಠಿಸ

ಲ್ಪಟ್ಟ ಲಿಂಗನಾದರೆಯೂ ಅವ ವೇಳೆಯಲ್ಲಿ ಕಂಡನು, ಆ ವೇಳೆಯಲ್ಲಿ ಅರ್ಚನೆಯನಾದರೂ ಮಾಡೂದು, ಪ್ರದಕ್ಷಿಣ ದರ್ಶನ ನಮಸ್ಕಾರವನಾದಡೆಯೂ ಮಾಡುವುದು, ಶಿವಕೀರ್ತಿ ಶಿವನ ವಚನ ಶಿವಭಕ್ತರಲ್ಲಿ ಪ್ರೀತಿಯುಳ್ಳಾತನಹನು. ಈ ಶಿವಾರ್ಚನಾದಿಗಳಲ್ಲಿ ಸಂಪೂರ್ಣ ನಿಯತಿಯಿಲ್ಲದೆ ಇದ್ದರೆ ಯಥಾ ಲಬ್ಧವಾದ ಕ್ರೀಗಳನಾಚರಿಸುವುದು. ಮತ್ತಂ, 'ಸಾಮಾನ್ಯಲಕ್ಷಣಂ ಪ್ರೋಕ್ತಂವಕ್ಷ್ಯೇ ಮಿಶ್ರಸ್ಯ ಲಕ್ಷಣಂ'–ಸಾಮಾನ್ಯಶೈವ ಲಕ್ಷಣವು ನಿರೂಪಿಸಲ್ಪಟ್ಟಿತ್ತು. ಮಿಶ್ರಶೈವಲಕ್ಷಣವನು ನಿರೂಪಿಸಿಹೆನು ಕೇಳೆಂದು ಶಿವನು ಷಣ್ಮುಖದೇವರಿಗೆ ಉಪದೇಶಿಸುತ್ತಿರ್ದನಯ್ಯ, ಶಾಂತವೀರೇಶ್ವರಾ. || ೨೭ ||

೧೩೮೭

ಶ್ಲೋಕ || 'ಶೈವಂ ವೈಷ್ಣವಂ ಶಾಕ್ತಂ ಕೌಮಾರಂ ಗಾಣಪತ್ಯಕಂ । ಸೌರಂ ಚಾಖಿಲದೈವತ್ಯಂ ಪೂಜನಂ ಚ ಸಮಾಚರೇತ್' ಇಂತೆಂದು ಸಿಂಹಾಸನದಲ್ಲಿ ಸ್ಥಾಪಿಸಲ್ಪಟ್ಟ ಲಿಂಗದ ಪೂಜೆಯನು ಆವರಣಸ್ಥರಾದ ವಿಷ್ಣುಪ್ರತಿಮಾಪೂಜೆಯನು ದೇವಿಯ ಪೂಜೆಯನು ಷಣ್ಮುಖಪೂಜೆಯನು ವಿಘ್ನೇಶ್ವರಪೂಜೆಯನು ಸೂರ್ಯ ಪೂಜೆಯನು ಅವನಾನೊಬ್ಬ ವೈದಿಕಶೈವನು ಈ ಪಂಚಪೂಜಾಸಹವಾಗಿ ಇಂದ್ರಾದ್ಯಖಿಲ ದೇವತಾಪೂಜೆಯನು ಆಚರಿಸೂದಯ್ಯಾ, ಶಾಂತವೀರೇಶ್ವರಾ. || ೨೮ ||

೧೩೮೮

'ಏತೇಷೂಕ್ತಿಷು ಸರ್ವೇಷೂ ತತ್ತನ್ಮಂತ್ರೇಷು ಮಿಶ್ರಕಾತ್|| ಸಮಭಕ್ತಿಸಮಾಯುಜ್ಯ ಸರ್ವಾನ್ ಲಿಂಗೇನ ಭಾವಯೇತ್' ಎಂದು ಈ ಹೇಳಿದ ಪಂಚಾವರಣ ಮೊದಲಾದ ಸಮಸ್ತ ದೇವತೆಗಳಲ್ಲಿಯೂ ಆಯಾಯ ದೇವತಾಮಂತ್ರಗಳಲ್ಲಿಯೂ ಬೆರಸಿಪ್ಪುದರಿಂದ ಸಮಾನವಾದ ಭಕ್ತಿಯೊಡನೆ ಕೂಡಿ ಸಮಸ್ತದೇವತೆಗಳನು ಶಿವ ಪರಿಪೂರ್ಣಭಾವದಿಂ, ಶಿವಲಿಂಗದೊಡನೆ ಕೂಡಿ ಭಾವಿಸೂದು. 'ಮಿಶ್ರಶೈವಮಿತಿ ಪ್ರೋಕ್ತಂ ಶುದ್ಧಶೈವಮಥ ಶೃಣು'– ಈ ಪ್ರಕಾರದಿಂದ ಮಿಶ್ರಶೈವವು ಹೇಳಲ್ಪಟ್ಟಿತ್ತು ಇದರಿಂದ ಮುಂದೆ ಶುದ್ಧಶೈವವನು: ಕೇಳ ಎಲೆ ಕುಮಾರ ಎಂದು ಶಿವನು ನಿರೂಪಿಸುತ್ತಿರ್ದನಯ್ಯಾ, ಶಾಂತವೀರೇಶ್ವರಾ. || ೨೯ ||

೧೩೮೯

'ಶುದ್ಧತ್ವಂ ಶಿವಮುದ್ದಿಷ್ಟಂ ಶಿವಾಜ್ಞಾತಾದಿಶೈವಕಂ। ಶುದ್ಧಶೈವ ಸಮಾಯೋಗಾತ್ || ಶುದ್ಧಶೈವಮಿತಿ ಸ್ಮೃತಂ' ಎಂದು ಶಿವನು ಉದ್ದೇಶಿಸಲ್ಪಟ್ಟುದಹುದರಿಂದ ಶುದ್ಧತ್ವವಪ್ಪುದು. ಶಿವನ ದೆಸೆಯಿಂದ ಪುಟ್ಟಿದುದಾದ ಕಾರಣ ಶೈವಶಬ್ದವಾಯಿತ್ತು. ಶುದ್ಧಶೈವಂಗಳೆಂಬ ಶಬ್ದಗಳ ಕೂಟದ ದೆಸೆಯಿಂದ ಶುದ್ಧಶೈವವೆಂದು ನೆನೆಯಲ್ಪಟ್ಟಿತ್ತು. ಮತ್ತಂ 'ಶುದ್ಧಶೈವಾನ್ಮಹಾಸೇನ ತಸ್ಮಾಜ್ಜಾತಃ ಶಿವದ್ವಿಜಃ' ಎಂದು ಆ ಶುದ್ಧಶೈವನ ದೆಸೆಯಿಂದ ಪುಟ್ಟಿದವನು ಶಿವಬ್ರಾಹ್ಮಣನೆನಿಸಿಕೊಂಬನು. 'ವೀರತಂತ್ರೇ ಶಿವದ್ವಿಜಾಸ್ತು ವಿಪ್ರೇಂದ್ರಕಾದ್ಯಾದಿ ಶೈವಾಃ ಪ್ರಕೀರ್ತಿತಾಃ'

ಎಂದು ಶಿವಬ್ರಾಹ್ಮಣರೆನಿಸಿಕೊಂಬ ಆ ಬ್ರಾಹ್ಮಣರುಗಳು ಆದಿಶೈರೆನಿಸಿಕೊಂಬರು. ಅವರಾರಾರೆಂದೊಡೆ ಪೇಳ್ದಪಂ, ಶಾಂತವೀರೇಶ್ವರಾ. ||೩೦||

೧೩೬೦

[ಶ್ಲೋಕ]: 'ಕೌಶಿಕೋ ಕಾಶ್ಯಪಶ್ಚೈವ ಭರಧ್ವಾಜಾತ್ರಿರೇವ ಚ। ಗೌತಮಶ್ಚೇತಿ ಪಂಚೈತೇ ಪಂಚವಕ್ತ್ರೇಷು ದೀಕ್ಷಿತಾಃ ॥ ಎಂಬುದಾಗಿ ಕೌಶಿಕ ಕಾಶ್ಯಪ ಭಾರದ್ವಾಜ ಅತ್ರಿ ಗೌತಮರುಗಳೆಂಬ ಐವರು ಶಿವನ ಪಂಚಮುಖದಲ್ಲಿ ದೀಕ್ಷಿತರಾಗಿದ್ದಂಥವರುಗಳು. 'ಏತೇಷಾಂ ಋಷಿವಂಶೇಷು ಜಾತಾಸ್ತೇಷು ಶಿವದ್ವಿಜಾಃ' ಎಂದು ಈ ಕೌಶಿಕಾದಿ ಋಷಿಗಳ ವಂಶದಲ್ಲಿ ಹುಟ್ಟಿದವರುಗಳು ಶಿವಬ್ರಾಹ್ಮಣರೆನಿಸಿಕೊಂಬರು, ಶಾಂತವೀರೇಶ್ವರಾ. || ೩೧ ||

೧೩೬೧

'ಕಾಮಿಕಾದಿಷು ತಂತ್ರೇಷು ಚಾಷ್ಟವಿಂಶತಿಷು ಕ್ರಮಾತ್। ವೇದಶಾಸ್ತ್ರಾದಿ ಸರ್ವೇಷು ಕೃತಾಭ್ಯಾಸಃ ಶಿವವ್ರತಿಃ॥ ಎಂದು ಕಾಮಿಕ ಮೊದಲಾದ ಇಪ್ಪತ್ತೆಂಟಾಗಮಂಗಳಲ್ಲಿಯುಂ ವೇದಶಾಸ್ತ್ರ ಮೊದಲಾದ ಸಮಸ್ತದರಲ್ಲಿಯೂ ಕ್ರಮದಿಂ ಮಾಡಲ್ಪಟ್ಟ ಅಭ್ಯಾಸವುಳ್ಳವನಾಗಿ ಶಿವವ್ರತಂಗಳುಳ್ಳಾತನಹನು ಶಾಂತವೀರೇಶ್ವರಾ. || ೩೨ ||

೧೩೬೨

'ಕರ್ಷಣಾದಿ ಪ್ರತಿಷ್ಠಾಂತಂ ಪ್ರತಿಷ್ಠಾದ್ಯುತ್ಸವಾತ್ಮಕಂ । ಉತ್ಸವಾತ್ಪ್ರಾಯಶ್ಚಿತ್ತಾಂತಂ ಜ್ಞಾತ್ವಾ ಸರ್ವಂ ಸಮಾಚರೇತ '॥ಇಂತೆಂಬುದಾಗಿ ಕರ್ಷಣ ಮೊದಲಾಗಿ ಪ್ರತಿಷ್ಠೆ ಕಡೆಯಾಗಿರ್ಪ ಕ್ರಿಯೆಯನು, ಶಿವಲಿಂಗಪ್ರತಿಷೆ ಮೊದಲಾಗಿ ನಿತ್ಯೋತ್ಸವ ಕಡೆಯಾದುದನು, ನಿತ್ಯೋತ್ಸವ ಮೊದಲಾಗಿ ಪ್ರಾಯಶ್ಚಿತ್ತಂಗಳು ಕಡೆಯಾಗಿ ಹಂಥಾದನು ಅರಿದು, ಸರ್ವವನು ಆಚರಿಸೂದು ಶಾಂತವೀರೇಶ್ವರಾ. || ೩೩ ||

೧೩೬೩

'ಮಂತ್ರ ಯಂತ್ರಕ್ರಿಯಾಮುದ್ರಾನ್ಯಾಸಾಶ್ಚಾಹ್ವಾನಕಾದಿಭಿಃ । ಉಪಚಾರೈರ್ಬಹುವಿಧೈರ್ಲಿಂಗಸಿಂಹಾಸನೇ ಯಜೇತ್ ॥' ಎಂದು ಶಿವಾದಿ ಮಂತ್ರಂಗಳಿಂದಲೂ ಆಯಾಯ ಮಂತ್ರಂಗಳ ಯಂತ್ರ ಕ್ರಿಯೆಗಳಿಂದಲೂ ಮಹಾಮುದ್ರೆ ಮೊದಲಾದ ಮುದ್ರೆಗಳಿಂದಲೂ ನ್ಯಾಸಂಗಳಿಂದಲೂ ಬಳಿಕ 'ಓಂ ಬ್ರಹ್ಮ ಸರ್ವಜ್ಞಶಕ್ತಿಧಾಮ್ನೇ ಹೃದಯಾ ನಮಃ ಓಂ ಹ್ರೀಂ ತೃಪ್ತಿಶಕ್ತಿಧಾಮ್ನೇ ಶಿರಸೇ ಸ್ವಾಹಾ ಓಂ ಹ್ರೂಂ ಅನಾದಿ ಬೋಧಶಕ್ತಿಧಾಮ್ನೇ ಶಿಖಾಯೈವಷಟ್ ಓಂ ಹ್ರೈಂ ಸ್ವತಂತ್ರಶಕ್ತಿಧಾಮ್ನೇ ಕವಚಾಯಹುಂ । ಓಂ ಹ್ರೌಂ ಅಲುಪ್ತಶಕ್ತಿಧಾಮ್ನೇ ನೇತ್ರತ್ರಯಾಯವೌ ಷಟ್॥ ಓಂ ಹ್ರಃ ಅನಂತಶಕ್ತಿಧಾಮ್ನೇ ಅಸ್ತ್ರಾಯ ಷಟ್' ಎಂದು ಷಡಂಗನ್ಯಾಸಂಗೆಯ್ದು, ಬಳಿಕ ಓಂ ಹ್ರೀಂ ಈಶಾನಾಯನಮಃ'

ಎಂದು ಶಿರಸ್ಸಿನಲ್ಲಿ, ಓಂ ಹ್ರೀಂ ತತ್ಪುರುಷಾಯನಮಃ ಎಂದು ಮುಖದಲ್ಲಿ ಓಂ ಹ್ರಂ ಅಘೋರಾಯನಮಃ ಎಂದು ಹೃದಯದಲ್ಲಿ 'ಓಂ ಹ್ರೀಂ ವಾಮ ದೇವಾಯನಮಃ' ಎಂದು ಗುಹ್ಯದಲ್ಲಿ, 'ಓಂ ಹ್ರಂ ಸದ್ಯೋಜಾ ತಾಯನಮಃ' ಎಂದು ಪಾದಂಗಳಲ್ಲಿ ಪಂಚಬ್ರಹ್ಮನ್ಯಾಸಂಗಳಂ ಮಾಡಿ, ಆಹ್ವಾನ ಸ್ಥಾಪನ ಸನ್ನಿರೋಧನ ಮೊದಲಾದವರಿಂದವೂ ಷೋಡಷೋಪಚಾರ ಮೊದಲಾದ ಉಪಚಾರಂಗಳಿಂದಲೂ, ಲಿಂಗವನು ಸಿಂಹಾಸನದಲ್ಲಿ ಪೂಜಿಸೂದು. 'ಆತ್ಮಾರ್ಥಂ ಚ ಪರಾರ್ಥಂ ಚ ಪೂಜಾದ್ವಿವಿಧಮುಚ್ಯತೇ' ಎಂದು ಈ ಕ್ರಮದಿಂದ ಮಾಡಲ್ಪಟ್ಟ ಶಿವಲಿಂಗಪೂಜೆ ಆತ್ಮಾರ್ಥಪೂಜೆ ಎಂದು, ಪರಾರ್ಥ ಪೂಜೆ ಎಂದು ಎರಡು ಪ್ರಕಾರವಾಗಿ ಹೇಳಲ್ಪಟ್ಟುದಯ್ಯ ಶಾಂತವೀರೇಶ್ವರಾ. || ೩೪ ||

೧೩೬೪

'ದತ್ತೇ ಚ ಗುರುಣಾ ಲಿಂಗೇ ಸ್ಥಂಡಿಲೇ ಸ್ವಯಮಾತ್ಮನಿ ಆತ್ಮಾರ್ತ್ಥಮಿದ ಮಾಖ್ಯಾತಂ ಪರಾರ್ತ್ಥಂಹಿ ತತಃ ಶೃಣು'॥ ತನ್ನಾಚಾರ್ಯನಿಂದ ಕೊಡಲ್ಪಟ್ಟ ಲಿಂಗ ದಲ್ಲಿಯೂ ಸ್ಥಂಡಿಲದಲ್ಲಿಯೂ ತನ್ನ ಹೃದಯದಲ್ಲಿಯೂ ಮಾಡುವ ಪೂಜೆ ಆತ್ಮಾರ್ಥಪೂಜೆ ಎಂದು ಪೇಳಲ್ಪಟ್ಟಿತ್ತು ಶಾಂತವೀರೇಶ್ವರಾ. || ೩೫ ||

೧೩೬೫

ಪರಾರ್ಥಪೂಜೆಯನಾಯಿತ್ತಾದೊಡೆ, ಅಲ್ಲಿಂದ ಮೇಲೆ ಕೇಳುಃ'ಗ್ರಾಮಾದೌ ಸ್ಥಾಪಿತೇ ಲಿಂಗೇ ಯದ್ವಾದ್ಯೈವಾದಿ ನಿರ್ಮಿತೇ ಪರಾರ್ಥಮಿತಿಜ್ಞೇಯಂ ಸರ್ವಪ್ರಾಣಿತಾವಹಿ' ಇಂತೆಂದು ಆವುದಾನೊಂದು ಕಾರಣದಿಂದ ದೇವ ಋಷಿ ದಾನವ ಮಾನವಾದಿಗಳಿಂದ ನಿರ್ಮಿಸಿ, ಗ್ರಾಮಗಿರಿ ಗಂಹರವನ ಮೊದಲಾದವ ರಲ್ಲಿ ಪ್ರತಿಷ್ಠಿತವಾದ ಶಿವಲಿಂಗಪೂಜೆ ಪರಾರ್ಥ ಪೂಜೆ ಎಂದು ಅರಿಯ ಬೇಕಾದುದು. ಆ ಪೂಜೆಯಲ್ಲಿ ಪ್ರಾಣಿಗಳಿಗೆಯೂ ಹಿತವ ಮಾಡುವಂಥಾದು 'ಶಿವದ್ವಿಜೇನ ಕರ್ತವ್ಯಂ ದ್ವಿಧಾ ಪೂಜೇತಿ ಬೋಧಿತಾ' ಎಂದು ಈ ಕ್ರಮದಿಂದ ಹೇಳಲ್ಪಟ್ಟಎರಡು ಪ್ರಕಾರದ ಪೂಜೆ ಶಿವಬ್ರಾಹ್ಮಣನಿಂದವೆ ಮಾಡಲಕ್ಕಂಥಾದು ಶಾಂತವೀರೇಶ್ವರಾ. ||೩೬ ||

೧೩೬೬

'ಅನ್ಯೇಷಾಂ ಸ್ವಾರ್ಥಯಜನಂ ನ ಕುರ್ಯ್ಯಾತ್ತು ಪರಾರ್ತ್ಥಕಂ॥ ಮೋಹ ಲೋಭಾಶ್ಚ ಕುರ್ವೀತರಾಜ್ಞಾ ರಾಷ್ಟ್ರಸ್ಯ ದುಃಸ್ಥಿತಿಃ' ಎಂದು ಶಿವಾವರಣಂಗಳಲ್ಲಿ ಅಲ್ಲದೆ ಪೃಥಕ್‌ಸ್ಥಾನಸ್ಥರಾದ ವಿಷ್ಣ್ವಾದ್ಯನ್ಯ ದೇವತೆಗಳ ಪೂಜೆಯನು ಶುದ್ಧ ಶೈವನು ಸ್ವಾರ್ಥವಾಗಿಯೂ ಪರಾರ್ಥವಾಗಿಯೂ ಮಾಡಲಾಗದು. ಮರವೆಯ ದೆಸೆಯಿಂದಲೂ ಸಂಸಾರ ಲೋಭದ ದೆಸೆಯಿಂದಲೂ ಮಾಡುವನಾದೊಡೆ ಆ ರಾಜ್ಯಕ್ಕೆಯೂ ಆ ರಾಜಂಗೆಯೂ ಕೇಡಪ್ಪುದು. ಈ ಅರ್ಥಮಂ ವ್ಯಕ್ತಮಂ ಮಾಡಿದಪಂ ಶಾಂತವೀರಪ್ರಭುವೇ. || ೩೭ ||

೧೩೯೭

'ಶಿವಾವರಣ ದೇವಾಶ್ಚ ಸರ್ವಾನ್ ಸಂಪೂಜಯೇದ್ಗುಹ॥ ಪೃಥಕ್‌ಸ್ಥಾನ ಸ್ಥಿತಾನ್ ಸರ್ವಾನ್ ನಾರ್ಚಯೇದನ್ಯದೇವತಾಃ'–ಎಲೆ ಷಣ್ಮುಖನೆ, ಪದಾರ್ಥ ಪೂಜೆಯನು ಮಾಡುವ ಶುದ್ಧಶೈವನು ಸಮಸ್ತರಾದ ಶಿವಾವರಣಸ್ಥರಾದ ಬ್ರಹ್ಮವಿಷ್ಣ್ವಾದಿ ದೇವತೆಗಳನು ಶಿವನ ಪರಿವಾರಭಾವನೆಯಿಂದ ಲೇಸಾಗಿ ಪೂಜಿಸುವುದು, ಶಿವಾವರಣಸ್ಥರಲ್ಲದೆಯಿದ್ದ ಬ್ರಹ್ಮ ವಿಷ್ಣು ಸಪ್ತಮಾತೃಕೆಯರು ಮೊದಲಾದ ದೈವಂಗಳನು ಪೂಜಿಸಲಾಗದು ಎಂದು ಶಿವನು ನಿರೂಪಿಸುತ್ತಿರ್ದನಯ್ಯ ಶಾಂತವೀರೇಶ್ವರಾ. || ೩೮ ||

೧೩೯೮

'ಮಂತ್ರಪಿಂಡ ಹೃದಂಭೋಜೇ ವಾಸ ಮಂತ್ರಸ್ಯ ಭಾವತಃ॥ ಆಹ್ವಾಸಾತ್ಸಮ ಸಂಯುಕ್ತೇ ಲಿಂಗೇ ಪೂಜಾತಿಕಂ ಭವೇತ್' ಎಂ[ಬುವ] ಮಂತ್ರಪಿಂಡವಪ್ಪ ತನ್ನ ಹೃದಯಕಮಲದಲ್ಲಿ ಆಹ್ವಾನದ ದೆಸೆಯಿಂದ ಸಂಯುಕ್ತವಾದ ಶಿವಲಿಂಗದಲ್ಲಿ ಮಂತ್ರಪತಿಯಪ್ಪ ವರ್ಣವಾಸ ಮೊದಲಾಗಿ ಶಿವವಾಸ ಪರ್ಯಂತರವಾದ ವಾಸಮಂತ್ರಭಾವದಿಂದ ಲಿಂಗಪೂಜೆಯೆ ಅಧಿಕವಪ್ಪುದು. 'ಮಂತ್ರಲಿಂಗ ಶರೀರತಸ್ಯಾತ್ಸ ಉವ ಪರಮಃ ಶಿವಃ ಅಂತರಂಗಾರ್ಚನೆಯ ಮಾಡುವ ಶುದ್ಧ ಶೈವನು ಮಂತ್ರಸ್ವರೂಪವಾದ ಶರೀರಿಯಹನು ಅಂತದರಿಂದಾತನು ಪರಮ ಶಿವನಪ್ಪನು ಎಂದು ಶಿವನು ಬೋಧಿಸುತ್ತಿರ್ದನು ಶಾಂತವೀರಪ್ರಭುವೇ. ||೩೯||

೧೩೯೯

'ಶುದ್ಧ ಶೈವಮಿತಿ ಪ್ರೋಕ್ತಂ। ವೀರಶೈವಮತ ಃ ಶೃಣು': ಈ ಪ್ರಕಾರದಿಂದ ಶುದ್ಧಶೈವವು ನಿರೂಪಿಸಲ್ಪಟ್ಟಿತ್ತು. ಅಲ್ಲಿಂದ ಮೇಲೆ ವೀರಶೈವವನು ಕೇಳುಃ 'ವೀರತಂತ್ರೇ ಸರ್ವೇಷಾಮಪಿ ಶೈವಾನಾಂ ವೀರಶೈವಂ ಮಹೋತ್ತಮಂ॥ ಸಲಭಾದೇವ ಪೂಜಾ ಸು । ಸುಲಭಂ ಚ ಕ್ರಿಯಾವಹಂ'॥ ಎಲೆ ದೇವಿಯೆ, ಸಮುಸ್ತಶೈವಂಗಳೊಳಗೆ ವೀರಶೈವವೆ ಅತ್ಯುತ್ತಮವಾದುದು. ಆ ವೀರಶೈವ ಮಾಡುವ ಶಿವಪೂಜೆ ಲೇಸಾಗಿ ಸುಲಭವಾದಂಥಾದು. ಪೂಜಾದಿಗಳ ಮಾಟವು ಸುಲಭವಹಂಥಾದುದು. ಈಶ್ವರನು ದೇವಿಯರಿಗೆ ನಿರೂಪಿಸುತ್ತಿರ್ದನಯ್ಯ ಶಾಂತವೀರೇಶ್ವರಾ. || ೪೦ ||

೧೪೦೦

'ಸಿದ್ಧಾಂತಾಖ್ಯೇ ಮಹಾತಂತ್ರೇ ಕಾಮಿಕಾದ್ಯೇ ಶಿವೋದಿತೇ। ನಿರ್ದಿಷ್ಟಮುತ್ತರೇಭಾಗೇ ವೀರಶೈವ ಮತಂ ಪರಂ'॥ ಇಂತೆಂದು ಸಿದ್ಧಾಂತವೆಂಬ ಹೆಸರನುಳ್ಳಂಥ ಕಾಮಿಕಾದ್ಯಾಗಮ ಮೊದಲಾದಂಥ ಶಿವನಿಂದೆ ಹೇಳಲ್ಪಟ್ಟಂಥ ಉತ್ತರ ಭಾಗೆ. ಆದಂಥ ಅಧಿಕವಾದಗಮದಲ್ಲಿ ತೋರಿಸ್ಪಟ್ಟಂಥ ವೀರಶೈವಮತವು ಶ್ರೇಷ್ಠವಾದಂಥದಯ್ಯಾ ಶಾಂತವೀರೇಶ್ವರಾ. || ೪೧ ||

೧೪೦೧

'ವೀ ಶಬ್ದೇ ನೋಚ್ಯತೇ ವಿದ್ಯಾ ಶಿವ ಜೀವೈಕ್ಯ ಬೋಧಿಕಾ ತಸ್ಯಾಂ ರಮಂತೇ ಯೇ ಶೈವಾ ವೀರಶೈವಾಸ್ತುತೇ ಮತಾಃ ಇಂತೆಂದುದಾಗಿ ವಿಶಬ್ದದಿಂದೆ [ಜೀವ] ಶಿವರೈಕ್ಯವನು ಪೇಳುತ್ತಿರ್ದಂಥ ಜ್ಞಾನವು, ಆ ಜ್ಞಾನದಲ್ಲಿ ಯಾರು ಕೆಲಂಬರು ವಿನೋದಿಸುತ್ತಿರ್ದಪರು ಅವರಾಯಿತ್ತಾದೊಡೆ ವೀರಶೈವಮತ ಉಳ್ಳವರಯ್ಯಾ ಶಾಂತವೀರಪ್ರಭುವೆ. ॥ ೪೨ ॥

೧೪೦೨

'ವೇದಾಂತ ಜನ್ಯಂ ಯಜ್ಞಾನಂ ವಿದ್ಯೇತಿ ಪರಿಕೀರ್ತ್ಯತೇ । ವಿದ್ಯಾಯಾಂ ರಮೆತೇ ತಸ್ಯಾಂ ವೀರ ಇತ್ಯಭಿಧೀಯತೇ' ಇಂತೆಂದು ಉಪನಿಷತ್ತಿನಲ್ಲಿ ಹುಟ್ಟಿ ದಂಥ ಯಾವುದಾನೊಂದು ಜ್ಞಾನ ಉಂಟು. ಅದೇ ವಿದ್ಯೆಯೆಂದು ಚೆನ್ನಾಗಿ ಹೇಳಲ್ಪಡುತ್ತಿರ್ದಪುದು, ಆ ವಿದ್ಯೆಯಲ್ಲಿ ಯಾವಾತ ವಿನೋದಿಸುತ್ತಿರ್ದಪನು ಆತನೆ ವೀರನೆಂದು ಚೆನ್ನಾಗಿ ಹೇಳಲ್ಪಡುತ್ತಿರ್ದಪನಯ್ಯಾ ಶಾಂತವೀರೇಶ್ವರಾ. ॥ ೪೩ ॥

೧೪೦೩

'ವಿದ್ಯಾಯಾಂ ಶಿವರೂಪಾಯಾಂ ವಿಶೇಷಾದ್ರಮಣಂ ಯತಃ। ತಸ್ಮಾದೇತೇ ಮಹಾಭಾಗಾ ವೀರಶೈವಾ ಇತಿ ಸ್ಮೃತಾಃ' ಇಂತೆಂದು ಶಿವಸ್ವರೂಪವಾದಂಥ ಜ್ಞಾನದಲ್ಲಿ ಯಾವ ಕಾರಣದಿಂದ ಆಗಿ ವಿನೋದಿಸುತ್ತಿಹರು, ಅದು ಕಾರಣದ ದೆಸೆಯಿಂದೆ ಈ ಷಡ್ಗುಣೈಶ್ವರ್ಯವುಳ್ಳವರು ವೀರಶೈವರೆಂದು ನೆನೆಯಲ್ಪಟ್ಟಂಥ ವರಯ್ಯ ಶಾಂತವೀರ ಪ್ರಭುವೇ. ॥ ೪೪ ॥

೧೪೦೪

ವಿದ್ಯಾಯಾಂ ರಮತೇ ಯಸ್ಮಾನ್ಮಾಯಾಂ ಹೇಯಾ ಶ್ವವದ್ರಹೇತ್ । ಅನೇನೈವ ನಿರುಕ್ತೇನ ವೀರಮಾಹೇಶ್ವರಃ ಸ್ಮೃತಃ ॥ ಇಂತೆಂದು ಯಾವ ಕಾರಣದಿಂದೆ ಜ್ಞಾನ[ದ]ಲ್ಲಿ ರಮಿಸುತ್ತಿದ್ದಪನು, ಅದು ಕಾರಣದ ದೆಸೆ[ಯಿ]ಂದೆ ಜಿಗುಪ್ಸಾ ಸ್ವರೂಪವಾದಂಥ ಮಾಯೆಯನು ಶುನಿಯ ಕಂಡ ಹಂಗೆ ಬಿಡುವುದು. ಈ ನಿರ್ವಚನದಿಂದವೆ ವೀರಮಾಹೇಶ್ವರನೆಂದು ಹೇಳಲ್ಪಟ್ಟನಯ್ಯಾ, ಮದ್ಗುರು ಶಾಂತವೀರೇಶ್ವರಾ. ॥ ೪೫ ॥

೧೪೦೫

'ಶೈವೈರ್ಮಾಹೇಶ್ವರೈಶ್ಚೈವ ಕಾರ್ಯಮಂತರ್ಬಹಿಃ ಕ್ರಮಾತ್ । ಶೈವೋ ಮಾಹೇಶ್ವರಶ್ಚೇತಿ ನಾತ್ಯಂತಮಿಹ ವಿದ್ಯತೇ ॥ ಇಂತೆಂದು ಶೈವರಿಂದವು ಮಾಹೇಶ್ವರರಿಂದವು ಅಂತರಂಗ ಬಹಿರಂಗದಲ್ಲಿ ಪರಿವಿಡಿಯ ದೆಸೆಯಿಂದ ಕ್ರಿಯೆಯೆ ಶೈವವೆಂದು ಮಾಹೇಶ್ವರವೆಂದು, ಇಲ್ಲಿ ಅಧಿಕವಾಗಿ ವಿರ್ಪಡಿಸಲ್ಪಡು ವುದಿಲ್ಲವಯ್ಯಾ, ಶಾಂತವೀರೇಶ್ವರಾ. ॥ ೪೬ ॥

೧೪೦೬

'ಯಥಾ ತಥಾ ನ ಭಿದ್ಯಂತೇ । ಶೈವಾ ಮಾಹೇಶ್ವರಾ ಅಪಿ । ಶಿವಾಶ್ರಿತೇಷು ಶೈವಾ ಜ್ಞಾನಯಜ್ಞರತಾ ನರಾಃ' ಎಂದು ಶೈವರೆಂದ ಹಾಗೆ ಬೇರ್ಪಡಿಸಲ್ಪಡುವುದಿಲ್ಲವೋ ಹಾಂಗೆ ಮಾಹೇಶ್ವರರೆಂದು ಬೇರ್ಪಡಿಸಲ್ಪಡುವುದಿಲ್ಲ. ಶಿವೈಕ್ಯರುಗಳಲ್ಲಿ ಅವರು ಶೈವರುಗಳು, ಜ್ಞಾನಯಜ್ಞದಲ್ಲಿ ಪ್ರೀತಿ ಉಳ್ಳಂಥಾ ಮನುಷ್ಯರುಗಳು, ಅವರು ವೀರಶೈವರು, [ಪ್ರ]ಭು ಶಾಂತವೀರೇಶ್ವರಾ. ॥೪೭॥

೧೪೦೭

'ಮಾಹೇಶ್ವರಾಸ್ಸಮಾಖ್ಯಾತಾಃ ಕರ್ಮಯಜ್ಞರತಾ ಭುವಿ। ತಸ್ಮಾದಾಭ್ಯಂತರೇ ಕುರ್ಯ್ಯುಃ ಶೈವಾ ಮಾಹೇಶ್ವರಾ ಬಹಿಃ । ಶಾಸ್ತ್ರಂತು ವೀರಶೈವಾನಾಂ ಷಡ್ವಿಧಂ ಸ್ಥಳ ಭೇದತ ಃ ಲೋಕದಲ್ಲಿ ಹೊರಗೆ ಕರ್ಮಯಜ್ಞದಲ್ಲಿ ಪ್ರೀತಿಯುಳ್ಳಂಥವರೆ ಮಾಹೇಶ್ವರರೆಂದು ಚೆನ್ನಾಗಿ ಹೇಳಲ್ಪಟ್ಟಂಥವರು. ಅದು ಕಾರಣದ ದೆಸೆಯಿಂದೆ ಅಂತರಂಗದಲ್ಲಿ ಶೈವರು ಕ್ರೀಗಳೇನು ಮಾಡುತ್ತಿರ್ದಪರು, ಬಹಿರಂಗದಲ್ಲಿ ಮಾಹೇಶ್ವರರು ಮಾಡುತ್ತಿರ್ದ್ದಪರು. ವೀರಶೈವರುಗಳಿಗೆ ಶಾಸ್ತ್ರವಾಯಿತ್ತಾದೊಡೆ, ಸ್ಥಲ ವಿಶೇಷದ ದೆಸೆಯಿಂದ ಎರಡೆರಡು ಪ್ರಕಾರವಯ್ಯ ಶಾಂತ ವೀರೇಶ್ವರಾ. ॥ ೪೮ ॥

೧೪೦೮

'ಅಲ್ಪಕ್ರಿಯಾ ಬಹುಫಲಂ । ವೀರಶೈವಂ ಮಾಹೇಶ್ವರ ॥ ಅನ್ಯಶೈವಂತು ತತ್ಸರ್ವಂ ಫಲಮಲ್ಪಂ ಕ್ರಿಯಾ ಬಹು' ಎಂದು, ಎಲೆ ಮಹಾದೇವಿಯೆ ವೀರಶೈವವು, ಅಲ್ಪ ಕ್ರಿಯೆಗಳಿಂದವೇ ಬಹಳ ಫಲವುಳ್ಳಂಥಾದು, ಈ ವೀರಶೈವವಲ್ಲದೆ ಉಳಿದ ಸಮಸ್ತ ಶೈವವು ಅಲ್ಪ ಫಲವುಳ್ಳದಾಗಿಯೂ ಬಹುಕ್ರಿಯೆಗಳುಳ್ಳುದು. 'ತಸ್ಮಾತ್ಸರ್ವ ಪ್ರಯತ್ನೇನ ವೀರ ಮಾಹೇಶ್ವರಂ ಶುಭಂ'. ಅದು ಕಾರಣ, ನಾನಾ ಪ್ರಯತ್ನದಿಂದಲೂ ವೀರಮಾಹೇಶ್ವರವೆ ಸುಲಭವಾದಂಥದು, ಶಾಂತವೀರೇಶ್ವರಾ. ॥ ೪೯ ॥

೧೪೦೯

'ಜ್ಞಾನಗಮ್ಯಂ ಸರಹಸ್ಯಂ ಚ ಕೈವಲ್ಯ ಫಲಕಾರಣಂ। ವೀರಶೈವಮಿತಿ ಜ್ಞೇಯಮೇತಲ್ಲಕ್ಷಣಮುಚ್ಯತೇ॥ ಇಂತೆಂದುದಾಗಿ ಜ್ಞಾನದಿಂದೆಯ್ದಲ್ತಕ್ಕಂಥ ಗೋಪ್ಯವಾದಂಥ ಮುಕ್ತಿ ಪದಕ್ಕೆ ಕಾರಣವಾದಂಥ ಆವುದಾನೊಂದು ಶೈವವುಂಟು, ಅದು ವೀರಶೈವವೆಂದು ಹೇಳಲ್ಪಟ್ಟಿತ್ತಯ್ಯಾ, ಶಾಂತವೀರೇಶ್ವರಾ. ॥ ೫೦ ॥

೧೪೧೦

'ಏಕ ಏವಾಯಮೇತಸ್ಮಿನ್ ಸರ್ವಸ್ಮಿನ್ ಜಗತೀಶಯಃ। ವಿಶಿಷ್ಟ ಈರ್ಯತೇ ಯಸ್ಮಾದ್ವೀರ ಇತ್ಯಭಿಧೀಯತೇ ॥ ಎಂದು ಆವುದಾನೊಂದು ಕಾರಣದಿಂದ ಆವನಾನೊಬ್ಬನು ಈ ಎಲ್ಲಾ ಜಗತ್ತಿನಲ್ಲಿಯು ವಿಶೇಷಿಸಲ್ಪಟ್ಟವನೆಂದು ಹೇಳಲ್ಪಡು

ತ್ತಿಹನು. ಈ ವಿಶೇಷಿಸಲ್ಪಟ್ಟವನೆಂದು ಹೇಳಲ್ಪಡುತ್ತಿಹನು. ಈ ವಿಶೇಷಗುಣವಂತನಪ್ಪ ಆತ ವೀರಶೈವವನೆಂದು ಹೇಳಲ್ಪಡುತ್ತಿಹನಯ್ಯಾ ಶಾಂತವೀರೇಶ್ವರಾ. ॥ ೫೧ ॥

೧೪೧೧

'ಶಿವೇನ ಸಹಸಂಬಂಧಾತ್ ಶೈವಮಿತ್ಯಾದೃತಂ ಬುಧೈಃ। ವೀರಶೈವ ಸಮಾಯೋಗಾದ್ವೀರಶೈವಮಿತಿ ಸ್ಮೃತಂ ॥ ಇಂತೆಂದುದಾಗಿ ಶಿವಂಗೋಸ್ಕರ ಕೊಡಲ್ಪಟ್ಟ ಜೀವ ತ್ವದ ದೆಸೆಯಿಂದಪ್ಪ ವೀರಾಗಮದಲ್ಲಿ ಉದಯವಾದ ದೆಸೆಯಿಂದವೂ ವೀರಶೈವ ಶಬ್ದ ಸಂಯೋಗದ ದೆಸೆಯಿಂದವೂ ವೀರಶೈವವೆಂದು ನೆನೆಯಲ್ಪಟ್ಟಿತ್ತಯ್ಯಾ ಶಾಂತ ವೀರಪ್ರಭುವೇ. ॥ ೫೨ ॥

೧೪೧೨

'ಶಿವಾರ್ಥಾರ್ಪಿತ ಜೀವತ್ವಾದೀರತಂತ್ರ ಸಮುದ್ಭವಾತ್ । ವೀರಶೈವ ಸಮಾಯೋಗಾದ್ವೀರಶೈವಮಿತಿ ಸ್ಮೃತಂ ॥ ಇಂತೆಂದುದಾಗಿ ಶಿವಂಗೋಸ್ಕರ ಕೊಡಲ್ಪಟ್ಟ ಜೀವತ್ವದ ದೆಸೆಯಿಂದಪ್ಪ ವೀರಾಗಮದಲ್ಲಿ ಉದಯವಾದ ದೆಸೆಯಿಂದವೂ ವೀರಶೈವ ಶಬ್ದ ಸಂಯೋಗದ ದೆಸೆಯಿಂದವೂ ವೀರಶೈವವೆಂದು ನೆನೆಯಲ್ಪಟ್ಟಿತ್ತಯ್ಯಾ ಶಾಂತವೀರಪ್ರಭುವೇ. ॥ ೫೩ ॥

೧೪೧೩

'ವೀರಮಾಹೇಶ್ವರ ತಂತ್ರಂ ಜ್ಞಾತವ್ಯಂ ತ್ರಿವಿಧಂ ಸುತ । ಸಾಮಾನ್ಯಂ ಚ ವಿಶೇಷಂ ಚ ನಿರಾಭಾರಂ ಕ್ರಮಾದ್ಭವೇತ್' ಎಂದು ಎಲೆ ಕುಮಾರ, ವೀರಮಾಹೇಶ್ವರಾಗಮವು ಮೂರು ವಿಧವಾದುದೆಂದು ಅರಿಯಬೇಕಾದುದು : ಸಾಮಾನ್ಯವೀರಶೈವ, ವಿಶೇಷ ವೀರಶೈವ, ನಿರಾಭಾರವೀರಶೈವವೆಂದು ಹೀಂಗೆ ಕ್ರಮದಿಂದ ಮೂರು ಪ್ರಕಾರಮಪ್ಪುದು ಶಾಂತವೀರೇಶ್ವರಾ. ॥ ೫೪ ॥

೧೪೧೪

'ತತ್ರಾದೌ ಪ್ರವಕ್ಷ್ಯಾಮಿ ವೀರಸಾಮಾನ್ಯಲಕ್ಷಣಂ': ಈ ತ್ರಿವಿಧ ವೀರಶೈವದಲ್ಲಿ ಮೊದಲು ಸಾಮಾನ್ಯವೀರಶೈವ ಲಕ್ಷಣವನು ಲೇಸಾಗಿ ಹೇಳಿಹೆನೆಂದು ಷಣ್ಮುಖದೇವರಿಗೆ ಈಶ್ವರನು ಉಪದೇಶಿಸುತ್ತಿರ್ದರಯ್ಯಾ ಶಾಂತವೀರೇಶ್ವರಾ. ॥ ೫೫ ॥

೧೪೧೫

'ಹಸ್ತಮಸ್ತಕಸಂಯೋಗಾದ್ಭೂತಿಪಟ್ಟಸ್ಯ ಧಾರಣಾತ್ । ಶಿವದೇವೇತಿ ವಿಜ್ಞೇಯಃ ಸರ್ವಪಾಪೈಃ ಪ್ರಮುಚ್ಯತೇ ॥ ಎಂದು ವೀರಶೈವಾಚಾರ್ಯನ ಹಸ್ತದ ವೀರಮಾಹೇಶ್ವರನಪ್ಪ ಶಿಷ್ಯನ ಮಸ್ತಕದ ಸಂಯೋಗದ ದೆಸೆಯಿಂದಲೂ ವಿಭೂತಿಯ ಪಟ್ಟವ ಧರಿಸೂದರ ದೆಸೆಯಿಂದಲೂ ಆ ಶಿಷ್ಯನು....ದೇಹಿ

ಎಂದರಿಯಲಕ್ತಾತನು. ಅಂತಪ್ಪ ವೀರಮಾಹೇಶ್ವರನು ಎಲ್ಲಾ ಪಾಪಂಗಳಿಂದಲೂ ಬಿಡಲ್ಪಡುತ್ತಿಹನಯ್ಯಾ ಶಾಂತವೀರೇಶ್ವರಾ. || ೫೬ ||

೧೪೧೬

'ಅಂತರ್ಧಾರಂ........ಶಕ್ತ ಏವ ವಾ । ಬಾಹ್ಯೇ ಚ ಧಾರಯೇಲ್ಲಿಂಗಂ । ತಲ್ಲಿಂಗಮಿತಿ ನಿಶ್ಚಯಯೇತ್ ॥ ಎಂದುದಾಗಿ ಅಂತರಂಗದಲ್ಲಿ ಲಿಂಗವನು ಧರಿಸಲೋಸ್ಕರ ಶಕ್ತನಾದರೂ ಆಗಲಿ ಅಶಕ್ತನಾದ...ದಲ್ಲಿ ಲಿಂಗವ ಧರಿಸೂದು. ಆ ಲಿಂಗವೆ ಈ ಇಷ್ಟಲಿಂಗವೆಂದು ನಿಶ್ಚೈಸುವದು ಶಾಂತವೀರೇಶ್ವರಾ. ||೫೭||

೧೪೧೭

'ಗುರುಣಾದತ್ತ ಲಿಂಗಂತು ಶಿವಮಂತ್ರೇಣ ಧಾರಯೇತ್ । ಉತ್ತಮಾಂ..... ಕಕ್ಷೌ ವಕ್ಷಸ್ಥಳೇऽಪಿವಾ ॥ ಇಂತೆಂದು ಶ್ರೀಗುರುವಿನಿಂದ ಉಪದೇಶಿಸಲ್ಪಟ್ಟ ಶಿವಲಿಂಗವನು ಶ್ರೀಮತ್ಪಂಚಾಕ್ಷರಿಮಂತ್ರದಿಂದ ಉತ್ತಮಾಂಗದಲ್ಲಿ ಕೊರಳಲ್ಲಿ ಕಕ್ಷೆಯಲ್ಲಿ ಕುಕ್ಷಿಯಲ್ಲಿ ಉರಸ್ಥಲದಲ್ಲಿ 'ಮೂರ್ಧ್ನಿ ಕಂಠೇ ಭುಜೇ ಹಸ್ತೇ ಹೃತ್ಸ್ಥಲೇ ನಾಭಿಮಂಡಲೇ । ಏತೇಷಾಮೇಕ ದೇಶೇತು ಧಾರಯೆಚ್ಛಿವಲಿಂಗಕಂ ॥ ಇಂತೆಂದು ಮಸ್ತಕದಲ್ಲಿ ಗಳದಲ್ಲಿ ಭುಜದಲ್ಲಿ ಹಸ್[ದಲ್ಲಿ] ಉರದಲ್ಲಿ ನಾಭಿಮಂಡಲದಲ್ಲಿ ಇವರುಗಳಲ್ಲಿ ಒಂದು ಸ್ಥಾನದಲ್ಲಿ ಆಯಿತ್ತಾದೊಡೆಯೂ ಶಿವಲಿಂಗವನು ಧರಿಸುವದಯ್ಯ ಶಾಂತವೀರೇಶ್ವರಾ. || ೫೮ ||

೧೪೧೮

'ಏಕಕಾಲಂ ದ್ವಿಕಾಲಂ ವಾ ತ್ರಿಕಾಲಂ ವಾ ಸಮರ್ಚಯೇತ್ । ಓಂ' ಎಂದು ಒಂದು ವೇಳೆಯಾದರೆಯೂ ಎರಡು ವೇಳೆಯಾದರೆಯೂ ಮೂರು ವೇಳೆಯಾದರೆಯೂ ಶಿವಪೂಜೆಯ ಮಾಡುವುದು ಎಂದು ಈಶ್ವರನು ನಿರೂಪಿಸಿದನಯ್ಯಾ ಶಾಂತವೀರೇಶ್ವರಾ. || ೫೯ ||

೧೪೧೯

'ಗುರೌ ಲಿಂಗೇ ಸದಾ ಭಕ್ತಿಂ । ತ ಕುರ್ಯ್ಯಾತ್ತದ್ಭಸಿತೇ ಪ್ರತಿ ॥ ಎಂದು ಸಾಮಾನ್ಯ ವೀರವ್ರತ ಉಳ್ಳಾತನು ಶ್ರೀಗುರುವಿನಲ್ಲಿಯೂ ಶ್ರೀ ಶಿವಲಿಂಗದಲ್ಲಿಯೂ ಶ್ರೀವಿಭೂತಿಯಲ್ಲಿಯೂ ಎಲ್ಲಾಗಳೂ ಭಕ್ತಿಯಂ ಮಾಡುವುದಯ್ಯಾ ಶಾಂತವಿರೇಶ್ವರಾ. || ೬೦ ||

೧೪೨೦

'ವೀರ ಸಾಮಾನ್ಯಮಾಖ್ಯಾತಂ । ವಿಶೇಷಂ ಚ ತತಃ ಶ್ರುಣು' ಶಿವಕುಂಭಂತು ಸಂಸ್ಥಾಪ್ಯ । ಸ್ಥಂಡಿಲಾದಿಷು ಪೂರ್ವವತ್ । ಶಿವಕುಂಭೆ ಶಿವಂ ಪೂಜ್ಯ ಭಕ್ತಾನ್ ಸಂಪ್ರತೋಷಯೇತ್' ಇಂತೆಂದು ಈ ಪ್ರಕಾರದಿಂದ ಸಾಮಾನ್ಯವೀರಶೈವವು ಹೇಳಲ್ಪಟ್ಟಿತು, ಅನಂತರದಲ್ಲಿ ವಿಶೇಷವೀರಶೈವವನು ಕೇಳು: ವೀರಶೈವ ದೀಕ್ಷಾ ಕರ್ತೃವಪ್ಪ ದೇಶಿಕೋತ್ತಮನು ಶುದ್ಧಶೈವ ದೀಕ್ಷಾವಿಧಾನಕ್ಕೆ ಹೇಂಗೆ ಹಾಂಗೆ

ಮಂಟಪಮಧ್ಯಸ್ಥಮಪ್ಪ ವೇದಿಕೆಯ ಮೇಲಣ ವರ್ಣಮಂಡಲವುಳ್ಳ ಸ್ಥಂಡಿಲದ ಮೇಲೆ ಶಿವಕುಂಭವನು ಸ್ಥಾಪಿಸಿ, ಆ ಶಿವಕುಂಭದಲ್ಲಿ ಶಿವನನು ಪೂಜಿಸಿ, ವಿಭೂತಿ ವೀಳೆಯ ಮೊದಲಾದವರಿಂ ದೀಕ್ಷೋತ್ಸವಕ್ಕೆ ಬಂದ ಒಡೆಯರು ಭಕ್ತರುಗಳನು ಸಂತೋಷ ಬಡಿಸೂದು ಶಾಂತ ವೀರೇಶ್ವರಾ. ||೬೧||

೧೪೨೧

'ಶೇಷಂ ದೀಕ್ಷಾ ಕ್ರಿಯಾಂ ಕೃತ್ವಾ ಮಲತ್ರವಿಮೋಚನಂ । ಗುರು ಶಿಷ್ಯಂ ಸಮಾ ಲೋಕ್ಯ ತತ್ವದೇಹಂ ವಿಚಿಂತಯೇತ್ ॥ ಎಂದು ಶಿವಾಚಾರ್ಯನು ಪೇಳಿದ ದೀಕ್ಷಾಸತ್ಕರ್ಮವೆಲ್ಲವನು ಮಾಡಿ, ಮಲತ್ರಯಂಗಳನು ತೋಲಂಗಿ ಸುಹವನು, ವೀರಮಾಹೇಶ್ವರ ದೀಕ್ಷಾಪಟದಲ್ಲಿ ಹೇಳಿದ ಹಾಂಗೆ ಆಡಿ, ಶಿಷ್ಯನಂ ಕೃಪಾಲೋಕನದಿಂ ನೋಡಿ ತತ್ವ ದೇಹದ ಹಾಂಗೆ ಚಿಂತಿಸುವುದು ಶಾಂತ ವೀರೇಶ್ವರಾ. || ೬೨ ||

೧೪೨೨

'ಶಿವಕುಂಭಸ್ಥತೋಯೇನಾಪ್ಯಭಿಷಿಂ ಚ ಚೇತ್ತಿವಾಣು । ನಾದಬಿಂದುಕಲಾಂ ಜ್ಞಾತ್ವಾ ತತ್ತತ್‌ಸ್ಥಾನೇಷು ವಿನ್ಯಸೇತ್' । ಎಂದು ಶಿವಕುಂಭದಲ್ಲಿದ್ದ ತೀರ್ಥೋ ದಕದಿಂದ ಶ್ರೀಮತ್ಪಂಚಾಕ್ಷರಿಮಂತ್ರದಿಂದಭಿಷೇಕವನು ಮಾಡುವುದು. ನಾದ ವೆನಿಸಿರ್ಪ ಶಿವನ ಬಿಂದುವೆನಿಸಿರ್ಪ ಶಕ್ತಿಯಿಂ ಕಳೆಗಳೆನಿಸಿರ್ಪ ಶಿವಾವಯವಂ ಗಳಂ ಭಾವಾದಿಗಳಿಗೆ ತಂದು ಕೊಂಡು ಪಿತೃಸ್ಥಾನಂಗಳಲ್ಲಿ ನ್ಯಾಸವ ಮಾಡುವ ದಯ್ಯಾ ಶಾಂತವೀರೇಶ್ವರಾ. || ೬೩ ||

೧೪೨೩

'ಷಟ್ಚಕ್ರಂ ಚ ಷಡಂಗಂ ಚ । ಷಡಧ್ವಾನಂ ಷಡಾನನ ॥ ತತ್ಸಾ ನೇಷು ವಿನ್ಯ ಸ್ಯೇತ್ಪಂಚಬ್ರಹ್ಮನ್ಯಸ್ಯೇತ್ತತಃ ॥ ಇಂತೆಂದು, ಎಲೆ ಷಣ್ಮುಖ, ಷಟ್ಚಕ್ರವನು ಷಡಂಗವನು ಷಡಧ್ವವನು ಆಯಾ ಪೂರ್ವೋಕ್ತನಾದ ಶಿವಾವಯವಂಗಳಲ್ಲಿ ನ್ಯಾಸವಂ ಮಾಡುವುದು. ಅದರಿಂದ ಮೇಲೆ ಪಂಚಬ್ರಹ್ಮ ಮಂತ್ರಗಳಂ ನ್ಯಾಸವಂ ಮಾಡುವುದು ಶಾಂತವೀರೇಶ್ವರಾ. || ೬೪ ||

೧೪೨೪

'ಮೂಲಮಂತ್ರಂತೂಪದೇಶೇತ್ತತೋ ಲಿಂಗಂ ಪ್ರದಾಪಯೇತ್ । ಶ್ರೇಷಾಣಿ ಸರ್ವಕರ್ಮಾಣಿ ದೀಕ್ಷಾದ್ಯೋಕ್ತ ಕ್ರಮಾಚ್ಚರೇತ್ ॥ ಇಂತೆಂದು ದಾಗಿ, ಸಮಸ್ತ ಮಂತ್ರಂಗಳಿಗೆ ಮೂಲಮಪ್ಪ ಪಂಚಾಕ್ಷರಮಂತ್ರವನು ಪದೇಶಿಸುವುದು. ಆ ಮಂತೋಪದೇಶದ ತರುವಾಯಲ್ಲಿ ಶಿಷ್ಯಂಗೆ ಪ್ರಾಣಲಿಂ ಗೋಪದೇಶಮಂ ಮಾಡುವುದು. [ಉ]ಳಿದ ಸಮಸ್ತ ಕ್ರಿಯೆಗಳಂ ವೀರಶೈವ ದೀಕ್ಷಾಮಾರ್ಗದಲ್ಲಿ ಹೇಳಲ್ಪಟ್ಟ ಕ್ರಮದಲ್ಲಿ ಚರಿಸುವುದಯ್ಯಾ ಶಾಂತವೀರ ಪ್ರಭುವೇ. || ೬೫ ||

೧೪೨೫

'ದೇಹೇ ಪ್ರಾಣಂ ಸಮಾಯೋಜ್ಯ ಪ್ರಾಣಲಿಂಗೇ ಪ್ರಕಲ್ಪಯೇತ್ । ಅವಿನಾಭಾವ ಸಂಯೋಗಾತ್ತಸ್ಮಾದೈಕ್ಯಂ ಪ್ರಕಲ್ಪಯೇತ್' । ಎಂದುದಾಗಿ, ಈ ಪ್ರಕಾರದಿಂ ವೀರಶೈವ ದೀಕ್ಷಿತನಾದ ವೀರಮಾಹೇಶ್ವರನು ದೇಹಪ್ರಾಣಂಗಳ ವರ್ತನೆ ಬೇರಾಗದ ಹಾಂಗೆ, ಏಕವಾಗಿ ಕೂಡಿ ತನ್ನ ಪ್ರಾಣಲಿಂಗದಲ್ಲಿ ಕಲ್ಪಿಸೂದ. ಆ ಅಗಲಿಕೆಯಿಂದ ಭಾವದ ಕೂಟದ ದೆಸೆಯಿಂದ ಪ್ರಾಣ ಲಿಂಗವೆಂಬೆರಡನೂ ಏಕವನು ಮಾಡುವುದಯ್ಯಾ ಶಾಂತ ವೀರೇಶ್ವರಾ.॥೬೬॥

೧೪೨೬

'ಲಿಂಗೇ ಪ್ರಾಣಂ ಸಮಾಧಾಯ ಪ್ರಾಣೇ ಲಿಂಗಂತು ಶಾಂಭವಂ । ಸ್ವಶರೀರಂ ಮನಃ ಕೃತ್ವಾ । ನ ಕಿಂಚ್ಚಿಂತಯೇದ್ಯದಿ ॥ ಇಂತೆಂದು ಲಿಂಗದಲ್ಲಿ ಪ್ರಾಣವನಿರಿಸಿ, ಪ್ರಾಣದಲ್ಲಿ ಶಂಭುಸಂಬಂಧವಾದ ಲಿಂಗವನಿರಿಸಿ, ತನ್ನ ಶರೀರ ವನು ಮನಸ್ಸನಾಗಿ ಎತ್ತಲಾವೊಂದಿಷ್ಟನು ಚಿಂತಿಸಲಾಗದು, ಲಿಂಗಾಂಗಪ್ರಾಣ ವೊಂದೆ ಎಂದರಿವುದಯ್ಯಾ ಶಾಂತವೀರೇಶ್ವರಾ. ॥೬೭॥

೧೪೨೭

'ಅನ್ಯದೃಷ್ಟಿನಿಪಾತಂ ಯತ್ತದ್ರವ್ಯಂ ಪರಿವರ್ಜಯೇತ್ । ಶುದ್ಧ ದ್ರವ್ಯಂ ಸಮಾಸಾದ್ಯ ಲಿಂಗಾನಾಂ ಪ್ರಸಮರ್ಪಣಂ ॥ ಆವುದಾನೊಂದು ಭವಿದೃಷ್ಟಿ ಬಿದ್ದ ವಸ್ತು ಉಂಟು, ಆ ದ್ರವ್ಯವಂ ಬಿಡುವುದು. ಶುದ್ಧದ್ರವ್ಯವನು ಸಂಪಾದಿಸಿ ಲಿಂಗಾಂಗಸ್ಥಲಂಗಳ ಅರ್ಪಣಾವಧಾನಂಗಳಂ ನಡಸುವುದು ಶಾಂತವೀರೇಶ್ವರಾ. ॥ ೬೮ ॥

೧೪೨೮

'ಇತಿ ವ್ರತಸಮಾಯುಕ್ತೋ ವೀರಶೈವೋ' ವಿಶಿಷ್ಯತೇ ಇತ್ಯಾದಿ ವ್ರತಂ ಗಳೊಡನೆ ಮಾಡಿ ದಾತನೆ ವೀರಶೈವವನೆಂದು ವಿಶೇಷಿಸಲ್ಪಡುತ್ತಿಹನಯ್ಯ. 'ವಿಶೇಷ ಶೈವಮಾಖ್ಯಾತಂ ನಿರಾಭಾರಂ ತತಃ ಶ್ರುಣು' ಎಂದುದಾಗಿ, ಈ ಪ್ರಕಾರದಿಂ ವಿಶೇಷ ವೀರಶೈವವೆಂಬ ಭಕ್ತಸ್ಥಲವು ಹೇಳಲ್ಪಟ್ಟಿತ್ತು, ಆನಂತರದಲ್ಲಿ ನಿರಾಭಾರಿವೀರಶೈವವೆಂಬ ಜಂಗಮಸ್ಥಲಮಂ ಕೇಳೆಂದು ಈಶ್ವರನು ಷಣ್ಮುಖ ದೇವರಿಗೆ ನಿರೂಪಿಸುತ್ತಿರ್ದನಯ್ಯ ಶಾಂತವೀರೇಶ್ವರಾ. ॥ ೬೯ ॥

೧೪೨೯

'ಸರ್ವಸಂಸಾರಸೌಖ್ಯಾನಿತ್ಯತ್ವಾಚ್ಚಿತ್ತಂ ಶಿವೇ ಲಯೇತ್ । ದಂಡ ಕೌಪೀನ ಕಾಷಾಯಂ ಜಟಾವಲ್ಕಲಧಾರಕ' ॥ ಎಂದುದಾಗಿ, ಅವನಾನೊಬ್ಬ ನಿರಾಭಾರಿ ವೀರಶೈವನು ಸಮಸ್ತಸಂಸಾರಸುಖಂಗಳಂ ಬಿಟ್ಟು, ದಂಡ ಕೌಪೀನ ಕಾಷಾಂಬರ ಜಟಾಬಂಧ ನಾರಸೀರೆಗಳಂ ಧರಿಸುತ್ತ, ಸಂಸಾರವ್ಯಾಪಾರ ನಿರ್ಮುಕ್ತವಾದ ಚಿತ್ತಮಂ ಶಿವಲಿಂಗದಲ್ಲಿ ಲಯವನೆಯ್ದಿಸುವದಯ್ಯಾ ಶಾಂತವೀರೇಶ್ವರಾ. ॥ ೭೦ ॥

೧೪೩೦

'ಮುಂಡೀ ವಾ ಶಿವಚಿಹ್ನಾನಿ ಧಾರಯೇ ಜಿನಾದಿಕಂ । ಭಿಕ್ಷಾಸಿ ನಿಯತಾಹಾರೋ । ಸುಖಸಂಸಾರ ವರ್ಜಿತಃ' ॥ ಎಂದುದಾಗಿ, ಬೋಳುಮಂಡೆಯುಳ್ಳವನಾದರೆ ಆಗಲಿಯೂ ವ್ಯಾಘ್ರಾಜಿನ ಕೃಷ್ಣಾಜಿನ ಮೊದಲಾದ ಶಿವಲೀಲಾ ಕಥನಂಗಳಂ ಸೂಚಿಸುವ ಚಿಹ್ನಂಗಳಂ ಧರಿಸುವುದು, ಭಿಕ್ಷಾನ್ನಭೋಜಿಯಾಗಿಯೂ ನಿಯತಮಪ್ಪಾಹಾರವ ನುಳ್ಳಾತನಾಗಿ ಅಲ್ಪ ಸುಖವಹ ಸಂಸಾರದಿಂದ ಬಿಡಲ್ಪಟ್ಟಾತನಹುದಯ್ಯಾ ಶಾಂತವೀರೇಶ್ವರಾ. ॥ ೭೧ ॥

೧೪೩೧

'ನಿರಾಭಾರೀತಿ ವಿಜ್ಞೇಯಃ ಸ ಏವ ಪರಮಶ್ಶಿವಃ। ವೀರಶೈವಕ್ರಮಃ ಪ್ರೋಕ್ತಃ ಪ್ರಾಯಶ್ಚಿತ್ತವಿವರ್ಜಿತಃ॥ ಎಂದು, ಇವು ಮೊದಲಾದ ಜಂಗಮಸ್ಥಲ ಪ್ರವರ್ತನೆಯುಳ್ಳಾತನು ನಿರಾಭಾರಿ ವೀರಶೈವನೆಂದರಿಯಲ್ತಕ್ಕತನು, ಆ ನಿರಾಭಾರಿ ವೀರಶೈವನೆ ಉತ್ಕೃಷ್ಟವಾದ ಶಿವನು ತಾನೆ. ಈ ಪ್ರಕಾರದಿಂದ ನಿರೂಪಿಸಲ್ಪಟ್ಟ ವೀರಶೈವ ಕ್ರಮವು ಪ್ರಾಯಶ್ಚಿತ್ತವಿಲ್ಲದೆ ಇದ್ದಂಥದು ಎಂದು ಅರಿಯಲ್ತಕ್ಕುದಯ್ಯ ಶಾಂತವೀರೇಶ್ವರಾ. ॥ ೭೨ ॥

೧೪೩೨

ಪೂರ್ವಾಭಿಮುಖದಿಂ ವಶ್ಯ, [ಆಗ್ನೇ]ಯಿಂ ವ್ಯಾಧಿ, ದಕ್ಷಿಣದಿಂದಭಿಚಾರ, ನೈರುತ್ಯನಿಂ ದ್ವೇಷ, ಪಶ್ಚಿಮದಿಂ ಧನಲಾಭ, ವಾಯವ್ಯದಿಂದಾ[ಕ]ರ್ಷಣ, ಉತ್ತರದಿಂ ಶಾಂತಿ, ಈಶಾನ್ಯದಿಂ ಮೋಕ್ಷಸಿದ್ಧಿಗಳಪ್ಪವೆಂದು ದಿಗ್ವಿಚಾ[ರ]ಮಂ ಮಾಳ್ಪುದು ಶಾಂತವೀರೇಶ್ವರಾ. ॥ ೭೩ ॥

೧೪೩೩

ಬಳಿಕ ವಂಶಾಸನದಿಂ ದರಿದ್ರ, ಪಾಷಾಣಾಸನದಿಂ ವ್ಯಾಧಿ, ಭೂಮ್ಯಾಸನದಿಂ ದುಃಖ ಮಂತ್ರಹಾನಿಗಳು, ದಾರುಕಾಸನದಿಂ ದುರ್ಭಾಗ್ಯ ವ್ಯಾಧಿಗಳು, ತೃಣಾಸನದಿಂ ಯಶೋಹಾನಿ, ಪಲ್ಲವಾಸನದಿಂ ಚಿತ್ತಭ್ರಾಂತಿ, ಕೃಷ್ಣಾಜಿನಾಸನದಿಂ ಜ್ಞಾನಾಸಿದ್ಧಿ, ವ್ಯಾಘ್ರಾ ಜಿನಾಚರ್ಮಾಸನದಿಂ ಮೋಕ್ಷಲಕ್ಷ್ಮಿ, ವಸ್ತ್ರಾಸನದಿಂದ ವ್ಯಾಧಿ ನಿವೃತ್ತಿ ಕಂಬಲಾಸನದಿಂ ಸುಖ್ಯತೆ, ಕೃಷ್ಣವಸ್ತ್ರಾಸನದಿಂ ಅಭಿಚಾರ ಕ್ರಿಯೆಗೆ, ರಕ್ತ ವಸ್ತ್ರಾಸನವೆ ವಶ್ಯಾದಿ ಕ್ರಿಯೆಗೆ, ಶುಭ್ರವಸ್ತ್ರಾಸನವೆ ಶಾಂತ್ಯಾದಿವಿಧಿಗೆ, ಚಿತ್ರ ಕಂಬಲಾಸನವೆ ಸರ್ವಾರ್ಥಸಿದ್ಧಿಗಳಿವೆಂದು ಪೀಠಂಗಳಂ ಕುರುಹಿಟ್ಟು, ಬಳಿಕೆಂಬತ್ತನಾಲ್ಕಾಸನಂಗಳೊಳಗೆ ಸಿದ್ಧಾಸನ ಪದ್ಮಾಸನ ಸ್ವಸ್ತಿಕಾಸನ ವೀರಾಸನ ಗೋಮುಖಾಸನ ಸುಖಾಸನಂಗಳೇ ಜಪಕರ್ಮಕ್ಕೆ ಯೋಗ್ಯಮಾದಾ ಸನಂಗಳೆಂದು ಸುಸ್ಥಿರನಾಗಿ ಕುಳ್ಳಿರುವುದಯ್ಯ ಶಾಂತವೀರೇಶ್ವರಾ. ॥ ೭೪ ॥

೧೪೩೪

ಬಳಿಕ ವಾಹನ ಮಂಚ ತಲೆ ಸುತ್ತುಕುಪ್ಪಸ ದಿಗಂಬರ ಮುಕ್ತಕೇಶ ಅಶುಚಿತ್ವ ಬಹುಭಾಷಿ ಆಗುಳಿಗೆ ಸೀನು ತೂಕಡಿಗೆ ನಿಷ್ಠೀವನ ನೀಚಪ್ರಾಣಿದರ್ಶನ ಕ್ರೋಧ ವ್ಯಾಕುಲತೆಗಳುಳ್ಳಾತನಾಗಿ ಜಪಿಸಲಾಗದೆಂದು, ನಿರ್ವಿಕಾರತ್ವದಿಂ ಕಾಷ್ಠಮೌನಿಯಾಗಿ, ಸಮಗ್ರೀವ ಶಿರಃಶರೀರಿಯಾಗಿ, ಮನೋದೃಷ್ಟಿಗಳೇಕಾಗ್ರತೆಯಿಂ ಧ್ಯಾನ ಮುದ್ರಾಸಮನ್ವಿತನಾಗಿ ಕುಳ್ಳಿರ್ದು, ಬಳಿಕ ಭಸಿತ ರುದ್ರಾಕ್ಷಾಭರಣ ಗುರುಪಾದ ಸ್ಮರಣ ಪೂರ್ವಕಮಾಗಿ, ಮರಳಿ ಕನಿಷ್ಠ ಅನಾಮಿಕೆ ಅಂಗುಷ್ಠ ಮೆಂಬಂಗುಲಿತ್ರಯದಿಂ ವಾಮದಕ್ಷಿಣ ನಾಸಾಪುಟಮಂ ಪಿಡಿದು, ಮೇಲೆ ಬ್ರಹ್ಮಾಧಿದೇವತೆಯಪ್ಪ ಪ್ರಣವಾದಿಯಾದ ಅಕಾರಮಂತ್ರಮಂ ಅಕಾರ ಮಂತ್ರಮಂ ಚಿಂತಿಸುತ್ತೆ, ಈಡೆಯೊಳ್ಪವನನಂ ತನ್ನ ಶಕ್ತ್ಯಾನುಸಾರದಿಂದುರದಲ್ಲಿ ಪೂರಿಸಿ, ಬಳಿಕ ವಿಷ್ಣುವಧಿದೇವತೆಯಾದ ಪ್ರಣವ ಮಧ್ಯದಲ್ಲಿಪ್ಪ ಉಕಾರಮಂ ಧ್ಯಾನಿಸುತ್ತಾ ಪೂರಿಸುತ್ತಾ ಪೂರಿಸಿದ ಪ್ರಾಣನನಲ್ಲಿಯೆ ಕುಂಭಿಸಿ, ಬಳಿಕ ರುದ್ರಾದಿದೇವತ್ಮಾಕ್ರಮದ ಪ್ರಣವದಂತ್ಯಮಪ್ಪ ಮಕಾರಮಂ ಸ್ಮರಿಸುತ್ತ ಕುಂಭಿಸಿದ ವಾಯುಮಂ ಮೆಲ್ಲನ ಪಿಂಗಲೆಯಿಂ ರೇಚಿಸಿ, ಒಮ್ಮೆಲೆಯಾ ಮಂತ್ರ ಕ್ರಮವಿಡಿದು, ಮತ್ತೆ ಪಿಂಗೆಲೆಯಿಂ ಪೂರಿಸುತ್ತುದರದಲ್ಲಿ ಕುಂಭಿಸುತ್ತೀಡೇಯಿಂ ರೇಚಸುತ್ತಿಂತು ಪ್ರಾಣಾಯಾಮಕ್ರಮಂ ಮಾಡುವುದಯ್ಯ ಶಾಂತವೀರೇಶ್ವರಾ.

॥ ೭೫ ॥

೧೪೩೫

'ಮಹಿಂ ದುಃಖವಿವರ್ಧಿನಿಂ । ಭೂತ್ಯಾಯುರ್ಭಗ ವೈಷಮ್ಯ' ॥ ಮೇಲೆ ಸಕಲ ಮಂತ್ರಂಗಳಿಗೆ ಸಾಧಾರಣಮಾದ ಋಷಿ, ಛಂದಸ್ಸು, ದೇವತೆ, ಬೀಜ, ಶಕ್ತಿ, ಕೀಲಕ, ಸ್ವರ, ವರ್ಣ, ಸ್ಥಾನ, ಅಕ್ಷರ, ಕಲೆ, ತತ್ವ ಅರ್ಥಚಿಂತನಾದಿಗಳೆಂಬ ಅಂಗಗಳಲ್ಲಿ ಮುಖ್ಯವಾದ ಮಂತ್ರ ಪ್ರಥಮ ದೃಷ್ಟವಾದ ಋಷಿಯನೆ ಮಸ್ತಕದಲ್ಲಿ ಮಂತ್ರಾಕ್ಷರ ಸಂಖ್ಯಾರೂಪಮಾದ ಛಂದವನೆ ಮುಖದಲ್ಲಿ ಮಂತ್ರವಾಚ್ಯವಾದ ಅಧಿದೇವದೇವತೆಯನೆ ಹೃದಯದಲ್ಲಿ, ಮಂತ್ರದೇವತಾ ನಾಮವರ್ಣ ವಿಶೇಷ ಮಾದ ಬೀಜವನೆ ನಾಭಿಯಲ್ಲಿ ಮಂತ್ರಸಿದ್ಧಿಪ್ರದಮಾದ ಕುಂಡಲಿನ್ಯಾದಿಶಕ್ತಿಯನೆ ಗುಹ್ಯದಲ್ಲಿ, ವಿಘ್ನನಿವರ್ತಕಮಾದ ಕೀಲಕವನೆ ಪಾದ ದಲ್ಲಿ ಬೇರೆ ಮಂತ್ರ ರಕ್ಷಕರಾದ ಉಮೆ ವಿಘ್ನೇಶ್ವರರನೆ ಕ್ರಮದಿಂ ವಾಮ ದಕ್ಷಿಣ ಭುಜದ್ವಯದಲ್ಲಿ, ಋಷಯೇ ನಮಃ ಎಂಬಂತೀ ಕ್ರಮದಿಂ ಚತುಸ್ಯಾಂತ ನಮಸ್ಕಾರಪೂರ್ವಕವಾಗಿ ಆಯಾ ಸ್ಥಾನಂಗಳಂ ಮುಟ್ಟಿ ಮುಟ್ಟಿ ಸ್ಮರಿಸುವುದಯ್ಯಾ ಶಾಂತವೀರೇಶ್ವರಾ. ॥ ೭೬ ॥

೧೪೩೬

ಮತ್ತಮಾ ಮಂತ್ರಂಗಳಿಂ ಕರನ್ಯಾಸ ದೇಹನ್ಯಾಸ ಅಂಗನ್ಯಾಸಮೆಂಬ ನ್ಯಾಸತ್ರಯಂಗಳ ಉತ್ಪತ್ತಿ ಸ್ಥಿತಿ ಸಂಹಾರ ಭೇದಂಗಳಂ ಪೂರ್ವೋಕ್ತ ಕ್ರಮ

ದಿಂದರಿದು ವಿಸ್ತರಿಸುವದರಲ್ಲಿ ಗೃಹಸ್ಥಂಗೆ ಮುತ್ತೈದೆ ವಿಧವೆಯರಿಗೆ ಸ್ಥಿತಿನ್ಯಾಸವಹುದು, ಬ್ರಹ್ಮಚಾರಿಗೆ ಉತ್ಪನ್ಯಾಸವಹುದು, ವಾನಪ್ರಸ್ಥ ಯತಿಗಳಿಗೆ ಸಂಹಾರನ್ಯಾಸ ವಹದೆಂದನುವದಿಸಿ, ಬಳಿಕ ಅಗುಷ್ಠದಿಂ ಮೋಕ್ಷ, ತರ್ಜನಿಯಿಂ ಶತ್ರುಹಾನಿ, ಮಧ್ಯಾಂಗುಲಿಯಿಂದರ್ಥಸಿದ್ಧಿ, ಅನಾಮಿಕೆಯಿಂ ಶಾಂತಿ, ಕನಿಷ್ಠದಿಂ ರಕ್ಷಣೆಗಳಪ್ಪವಲ್ಲಿ, ಮಧ್ಯಾಂಗುಷ್ಠ ಯೋಗದಿಂ ಮಾಲಿಕೆಯಂ ಪಿಡಿದು ಜಪಂಗೆಯ್ವುದೆ ಕನಿಷ್ಠ ವೆನಿಸೂದು. ತರ್ಜನ್ಯಂಗುಷ್ಠ ಯೋಗದಿಂ ಜಪಿಸೂದೆ ಮಧ್ಯಮವೆನಿಸೂದು. ಅನಾಮ್ಯಂಗುಷ್ಠ ಯೋಗದಿಂ ಜಪಂಗೆಯ್ವುದೆ ಉತ್ತಮವೆನಿಸೂದು. ಬಳಿಕಲ್ಲಿ ಮಧ್ಯಾಂಗುಷ್ಠಂಗಳಿಂ ಭಾಷ್ಯಜಪಂಗೆಯ್ವು, ತರ್ಜನ್ಯಂಗುಷ್ಠಂಗಳಿಂದುಪಾಂಶು ಜಪಂಗೆಯ್ವುದು, ಅನಾಮಿಕೆ ಮಧ್ಯಾಂಗುಷ್ಠಂಗಳಿಂ ಮಾನಸೆಜಪಂಗೆಯ್ವುದವರ ಅಲ್ಲಿ ಪರಶ್ರುತಿ ಗೋಚರವಪ್ಪುದೆ ಉಚ್ಚರಿಪುದೆ ವಾಚಕವಹುದು, ಸ್ವಶ್ರುತಿಸಾರವಾಗಿ ಓಷ್ಠ ಸ್ಪಂದನಮಾಗುಚ್ಚರಿಪುದೆ ಉಪಾಂಶುವಹುದು, ಮಂತ್ರವಾಕ್ಯಾರ್ಥಚಿಂತನಂಗೆಯ್ವುದೆ ಮಾನಸವಹುದು. ಅವರೊಳಗೆ ವಾಚಕಜಪವೆ ಕ್ಷುದ್ರಕಾರ್ಯಂಗಳಿಗೆ, ಉಪಾಂಶುಜಪವೆ ಸಕಲಸಿದ್ಧಿಗಳಿಗೆ, ಮಾನಸಜಪವೆ ಮುಕ್ತಿಗಹುದೆಂದು ನಿಯಾಮಿಸಿ ಜಪಂಗೆಯ್ವುದಯ್ಯ ಶಾಂತವೀರೇಶ್ವರಾ. || ೭೭ ||

೧೪೩೭

ಬಳಿಕಾ ಮಂತ್ರಗಳ ವಾಚ್ಯ ವಾಚಕ ಸಂಬಂಧವರಿದು, ಮೇಲೆ ಪಂಚಬ್ರಹ್ಮ ಷಡಂಗಂಗಳೆ ಪ್ರಥಮಾವರಣ, ಅನಂತಾದ್ಯಷ್ಟ ವಿದ್ಯೇಶ್ವರರೆರಡನೆಯಾವರಣ, ಉಮೆ ಚಂಡೀಶ್ವರ ನಂದಿಕೇಶ್ವರ ಮಹಾಕಾಳ ಭೃಂಗಿರಿಟಿ ಗಣಪತಿ ವೃಷಭ ಷಣ್ಮುಖರೆಂಬ ಅಷ್ಟಗಣೇಶ್ವರರೆ ಮೂರನೆಯಾವರಣ, ಇಂದ್ರಾದಿ ಲೋಕಪಾಲಾಷ್ಟಕರು ಬ್ರಹ್ಮವಿಷ್ಣುಗಳು ನಾಲ್ಕನೆಯಾವರಣ, ವಜ್ರಾದಿ ದ್ವಚಕ್ರಂಗಳೆಂಬ ದಶಾಯುಧಂಗಳೈನೆಯಾವರಣ, ಬ್ರಾಹ್ಮಾದಿ ಸಪ್ತಮಾತೃಕೆಯರಾರನೆಯಾವರಣ, ಅಷ್ಟವಸುಗಳೇಳನೆಯಾವರಣ, ಏಕಾ ದಶರುದ್ರರೆಂಟನೆಯಾವರಣ, ಆದಿತ್ಯಾದಿ ನವಗ್ರಹಂಗಳೊಂಬತ್ತನೆ ಯಾವರಣವಹುದಾಗಿ, ಪಂಚಾಕ್ಷರಾದಿ ಮಂತ್ರಾಧಿದೇವತೆಯನಾವರಣ ಸಹಿತಮಾಗಾದರೂ, ನಿರಾವರಣಮಾಗಾದರೂ ಧ್ಯಾನಿಸುತ್ತೆ ಜಪಿಸೂದಾ ಧ್ಯಾನ್ಯದಲ್ಲಿ ಅಭಿಚಾರ ಗ್ರಹೋಚ್ಚಾಟನಾದಿಗಳಿಗೆ ಕೃಷ್ಣವರ್ಣರೂಪದಿಂ, ಮುಕ್ತ್ಯಾದಿಗಳಿಗೆ ಶುಕ್ರವರ್ಣರೂಪದಿಂ ಧ್ಯಾನಿಸೂದಯ್ಯ ಶಾಂತವೀರೇಶ್ವರಾ. || ೭೮ ||

೧೪೩೮

ಬಳಿಕಾ ಧ್ಯಾನಕ್ರಮದಲ್ಲಿ ಮಂತ್ರಾಧಿದೇವತೆಗೆ ಅಘೋರಾದಿ ಘೋರಮೂರ್ತಿ ಎಂದು, ಸದಾಶಿವಾದಿ ಮಿಶ್ರಮೂರ್ತಿ ಎಂದು, ಸಾಂಬಶಿವಾದಿ ಶಾಂತಮೂರ್ತಿ ಎಂದು ತ್ರಿವಿಧಮೂರ್ತಿಗಳುಂಟವರಲ್ಲಿ ಘೋರಮೂರ್ತಿಧ್ಯಾನದಿಂ ಚಿರಕಾಲಕ್ಕೆ ಸಕಲ ಸಿದ್ಧ್ಯಾದಿಗಳಹವು. ಶಾಂತಮೂರ್ತಿ ಧ್ಯಾನ್ಯನದಿಂದ ಶೀಘ್ರ

ಚಿರಕಾವವಲ್ಲದೆ ಪ್ರಜಾದಿಗಳ ಹವೆಂದರಿದು ಧ್ಯಾನಿಸೂದಾ ಧ್ಯಾನರಹಿತವಾಗಿ ಮಾಳ್ಪುದೆ ಅಗರ್ಭಜಪವಾ ಧ್ಯಾನ ಯುಕ್ತವಾಗಿ ಮಾಳ್ಪುದೆ ಸಗರ್ಭಜಪವವ ರೊಳಗೆ ಅಗರ್ಭಕ್ಕೆ ಸಗರ್ಭವೆ ಕೋಟಿ ಮಡಿ ಮಿಗಿಲೆಂದು ಸಂಧ್ಯಾನಿಸೂದಯ್ಯ ಶಾಂತವೀರೇಶ್ವರಾ. ॥ ೭೯॥

೧೪೩೯

ಬಳಿಕಾ ಮಂತ್ರಂಗಳಿಗೆ ಆತ್ಮಗರ್ಭ ಶಿವಗರ್ಭ ಶಕ್ತಿಗರ್ಭ ಗರ್ಭತ್ರಯ ಯುಂಟವರಲ್ಲಿ ಆತ್ಮಗರ್ಭವಾಗೆ ಸುಪ್ತಲೀಲಾ ಸಮರ್ಥವಹುದು, ಶಿವಗರ್ಭ ವಾಗೆ ನಪುಂಸವಹುದು, ಶಕ್ತಿಗರ್ಭವಾಗೆ ಭುಕ್ತಿ ಮುಕ್ತಿಪ್ರದವಹುದೆಂದೀ ಕ್ರಮುವರಿದಿಂತು ವಿದ್ಯುಕ್ತವಾಗಿ ಜಪಂಗೆಯ್ದು ಜಪಸಮಾಪ್ತಿಯಾದ ಮೇಲೆಯೂ ಪೂರ್ವೋಕ್ತಮಾದ ವಿಧಿಗೆ ವಿಪರೀತಮಾದ ಪ್ರಾಣಾಯಾಮ ತ್ರಯದಿಂದ ಮೊದಲಂತೆ ಛಂದೃಷಿ ದೇವತಾದಿಗಳಿಂ ವಿಧಿಸಿ, ಸ್ಮರಿಸಬೇಕೆಂದು ವಿಧಿಸಿ, ಬಳಿಕೀ ಮಂತ್ರಾದಿ ಸಕಲ ಕ್ರಿಯೆಗಳಂ ಶ್ರೀಗುರೂ ಪದೇಶದಿಂದ ಭ್ಯಾಸಂಗೆಯ್ಯೆ, ಸರ್ವಾರ್ಥಸ್ಥ್ಹಿಯಹುದಲ್ಲದೆ ಯುಕ್ತಿಶಾಸ್ತ್ರದಿಂದನುಷ್ಟಿಸ ಲಾಗದೆಂದು ದೃಢವಿಡಿದು, ಅನಂತ[ರ]ದೊಳಿಂತು ಭಸಿತ ರುದ್ರಾಕ್ಷ ಪಂಚಾಕ್ಷರ ಮಂತ್ರವಿಧಾನಸಿದ್ಧನಾದ ಶುದ್ಧಶೈವಂಗೆ ಶಿವಾರ್ಚನವೆ ಕರ್ತವ್ಯ ವಹುದಲ್ಲಿ ಮೂಲಾ ಭಿಷೇಚನದಿಂ ತರುಶಾಖೋಪಶಾಖಾದಿಕವೆಲ್ಲಂ ಪಲ್ಲವಿಸು ವಂತೆ, ಪ್ರಾಣೋಪಹಾರದಿಂ ಸಕಲೇಂದ್ರಿಯ ಸಮೂಹವೆಲ್ಲಂ ಪರಿಪೋಷಿಸು ವಂತೆ, ಶಿವಾರ್ಚನಮೊಂದರಿಂದಖಿಳ ದೇವತಾಸಂತುಷ್ಟಿಯಹುದಾಗಿ, ಚಂದ್ರ ಸೂರ್ಯ ಮಂಡಲವಹ್ನಿ ಗಂಗಾಸ್ಥಡಿಲ ಕಲಶ ಮಸ್ತಕ ಸಾಲಗ್ರಾಮಾದಿ ಪೂಜಾ ಸ್ಥಾನಂಗಳೊಳಗೆ ಲಿಂಗಾಧಿಷ್ಠಾನವೆ ಮಹಾವಿಶೇಷವೆಂದು ಶಿಲಾಮಯ ಲಿಂಗವನೆ ಬ್ರಹ್ಮನು, ಇಂದ್ರನೀಲಮಯ ಲಿಂಗವನೆ ವಿಷ್ಣು, ರತ್ನ ಮಯ ಲಿಂಗವನೆ, ಇಂದ್ರನು, ಸುವರ್ಣಮಯ ಲಿಂಗವನೆ ಕುಬೇರನು, ರಜತಮಯ ಲಿಂಗವನೆ ವಿಶ್ವದೇವರ್ಕಳು, ಪಿತ್ತಳಮಯ ಲಿಂಗವನೆ ವಾಯು, ಕಾಂಸ್ಯಮಯ ಲಿಂಗವನೆ ವಸುಗಳು, ಮೃಣ್ಮಯ ಲಿಂಗವನೆ ಅಶ್ವಿನಿದೇವರ್ಕಳು, ಸ್ಫಟಿಕಮಯ ಲಿಂಗವನೆ ವರುಣನು, ಅನ್ನಮಯ ಲಿಂಗವನೆ ಅಗ್ನಿ, ತಾಮ್ರಮಯ ಲಿಂಗವನೆ ಸೂರ್ಯನು, ಮುಕ್ತಾ ಫಳಮಯ ಲಿಂಗವನೆ ಚಂದ್ರನು, ಮಣಿಮಯಲಿಂಗ ಬಹುವರ್ಣದ ಲಿಂಗವನೆ ನಕ್ಷತ್ರಗಳು, ಮಣಿಮಯ ಲಿಂಗವನೆ ಬುಧನು, ಕಾಭೋರ್ನ್ನಲಿಂಗವನೆ ಶುಕ್ರನು, ವಿದ್ರುಮದ ಲಿಂಗವನೆ ಮಂಗಳನು, ಮಾಣಿಕ್ಯದ ಲಿಂಗವನೆ ಬೃಹಸ್ಪತಿ, ತಾಮ್ರಲಿಂಗವನೆ ಶನಿ, ಕುಶಮಯ ಲಿಂಗವನೆ ಸಪ್ತಋಷಿಗಳು, ನೀಲದ ಲಿಂಗವನೆ ಧ್ರುವನು, ಸ್ಥಾಣುನಾಮ ಲಿಂಗವನೆ ಮಾರ್ಕಂಡೇಯನು, ದರ್ಭಾಮಯ ಲಿಂಗವನೆ ಪಿಶಾಚರು, ತ್ರಿಲೋಹಮಯ ಲಿಂಗವನೆ ಗುಹ್ಯಕರು, ವಜ್ರಮಯಲಿಂಗವನೆ ಮಾತೃಕೆಗಳು, ಪ್ರಸೂನಮಯ ಲಿಂಗವನೆ ಮನ್ಮಥನು, ನಾನಾಕಾರದ ಲಿಂಗವನೆ ಲಕ್ಷ್ಮಿ ಸರಸ್ವತಿ

ಶಚಿ ಮಾತೃಕಾದಿ ಮಹಾಶಕ್ತಿ ದೇವತೆಗಳಿಂತು ಬೇರೆ ಬೇರೆ ಲಿಂಗವನೆ ಪೂಜಿಸಿ, ತಮ್ಮ ತಮ್ಮ ಪದಂಗಳಲ್ಲಿ ಸುಖಿಮಿರ್ಪರೆಂ[ದೊ]ಡೆ ಕೀಟಕ ಮನುಷ್ಯರೊಳವರಿ ವರೆನ್ನದೆಲ್ಲರೂ ಸ್ವಯಂಭೂಲಿಂಗ ಬಾಣಲಿಂಗ ಚರಲಿಂಗ ಸಂಕೀರ್ಣಲಿಂಗ ಪ್ರಾಣಲಿಂಗವೆಂಬ ಪಂಚವಿಧಲಿಂಗಂಗಳಂ ತಮ್ಮ ತಮ್ಮ ಶಕ್ತ್ಯಾನುಸಾರ ಮಾದರ್ಚನಾತತ್ಪರರಾಗಲೆವೇಳ್ಕುಮೆಂಬುದನಂಗೀಕರಿಸಿ ಲಿಂಗಾರ್ಚನೆಯ ಮಾಳ್ದುದಯ್ಯಾ ಶಾಂತವೀರೇಶ್ವರಾ. ॥ ೮೦ ॥

೧೪೪೦

ಮತ್ತಮಾ ಶಿವಪೂಜಾವಿಧಿಗೆ ದೇಶ ಕಾಲ ಸ್ಥಾನ ದ್ರವ್ಯ ಪ್ರಯೋಜನಾದಿ ಗಳಂ ತಾಂತ್ರಿಕ ವೈದಿಕಮೆಂಬೆರಡೂ ಪೂಜಾಭೇದಂದಳಂ, ಅಂತಃಶೌಚ ಬಾಹ್ಯ ಶೌಚಯೆಂಬೆರಡೂ ಶೌಚಭೇದಂಗಳಂ, ಶೋಷಣ ದಹನ ಪ್ಲಾವನಮೆಂಬ ಕ್ರಿಯೆಗಳಂ, ಆತ್ಮಶುದ್ಧಿ ಸ್ಥಾನಶುದ್ಧಿ ದ್ರವ್ಯ ಶುದ್ಧಿ [ಲಿಂಗಶುದ್ಧಿ] ಮಂತ್ರ ಶುದ್ಧಿಯೆಂಬ ಪಂಚ ಶುದ್ಧಿಗಳ ವಿಸ್ತರಿಸುದವರಲ್ಲಿ ಶೌಚಾಚಮನಸ್ನಾನ ಭಸ್ಮರುದ್ರಾಕ್ಷಧಾರಣ ಕವಚ ಮಂತ್ರ ಕಲಾನ್ಯಾಸ ಧ್ಯಾನಾದಿ ರಚನೆಂಗೆಯ್ವುದೇ ಆತ್ಮಶುದ್ಧಿ ಎನಿಸೂದು. ಸಮ್ಮಾರ್ಜನಾನುಲೇಪನ ವರ್ಣಕ ಗಂಧಪುಷ್ಪಧೂಪ ದೀಪಾದಿ ನಿರ್ಮಲೋಪ ಕರಣಂಗಳಿಂ ಚೌಕಮನಲಂಕರಿಪುದೆ ಸ್ಥಾನ ಶುದ್ಧಿ ಎನಿಸೂದು. ಜಲಗಂಧಾಕ್ಷತಾ ಪುಷ್ಪಾದಿಗಳಂ ನಿರೀಕ್ಷಿಸಿ, ಭಸ್ಮಮಂತ್ರವಾರಿಗಳಿಂ ಸಂಪ್ರೋಕ್ಷಣಂಗೆಯ್ವುದೆ ದ್ರವ್ಯಶುದ್ಧಿ ಎನಿಸೂದು. ಅನಾಮಿಕ ಮಧ್ಯಮೆಗಳ ಮಧ್ಯದಲ್ಲಿ ನವೀನಕುಸುಮವಿಡಿದು ಅಂಗುಷ್ಠತರ್ಜನಿಗಳಿಂ ಮೊದಲ ನಿರ್ಮಾಲ್ಯಮಂ ತ್ಯಜಿಸಿ, ಲಿಂಗಪೀಠಮಂವಾರಿಯಿಂ ಪ್ರಕ್ಷಾಲನಂ ಗೆಯ್ವುದೆ ಲಿಂಗಶುದ್ಧಿ ಎನಿಸೂದು. ಸಕಲಪೂಜಾರ್ತ್ಥವಾಗಿ ಓಂ ನಮಃ ಶಿವಾಯ ಸ್ವಾಹಾ ಎಂದುಚ್ಚರಿಪುದೆ ಮಂತ್ರಶುದ್ಧಿಯಹುದೆಂದೊಡಂ ಬಟ್ಟು, ಬಳಿಕ ಅಸ್ತ್ರಮುದ್ರೆ ಚಕ್ರಮುದ್ರೆ ಮಹಾಮುದ್ರೆ ಶೋಧನಿಮುದ್ರೆ ಸಂಹಾರ ಪಂಚಮುಖ ಮುದ್ರೆ ಸುರಭಿಮುದ್ರೆ ದ್ರವ್ಯಮುದ್ರೆ ಮುಕುಳಿಕಾಮುದ್ರೆ ಪದ್ಮಮುದ್ರೆ ಶಶಕರ್ಣಮುದ್ರೆ ಶಕ್ತಿಮುದ್ರೆ ಬೀಜಮುದ್ರೆ ಶಾಂತಿಮುದ್ರೆ ಆವಾಹನ ಮುದ್ರೆ ಮನೋರಮಮುದ್ರೆ ಧ್ವಜಮುದ್ರೆ ಲಿಂಗಮುದ್ರೆ ಗಾಯತ್ರಿಮುದ್ರೆ ಕಾಲಕಂಠ ಮುದ್ರೆ ಶೂಲಮುದ್ರೆ ನಮಸ್ಕಾರಮುದ್ರೆ ಯೋನಿಮುದ್ರೆ [ವಿ]ಬ್ಬೊಟ..... ಮುದ್ರೆ....ರ ಮುದ್ರೆ ಎಂಬ ಸಕಲ ಮುದ್ರಾಲಕ್ಷಣವನರಿದಾಯಾ ಯೋಗ್ಯ ಕ್ರಿಯೆಗಳಿಲ್ಲಿ ಪ್ರಯೋಗಿಸಿ, ಬಳಿಕ ಕೂರ್ಮ ಆನಂತಸಿಂಹ ಪದ್ಮವಿ.......... ಪೀಠಂಗಳಲ್ಲಿ.....ಮಾದ ಸಿಂಹಾಸನಕ್ಕೆ ಶ್ವೇತರಕ್ತಪೀತಶ್ಯಾಮವರ್ಣದ ಸಿಂಹಾ ಕಾರಮಾದ ಧರ್ಮಜ್ಞಾನ ವೈರಾಗ್ಯ ಐಶ್ವರ್ಯವೆ,ಬ ನಾಲ್ಕೆ ಕ್ರಮದಿಂದಾಗ್ನ್ಯಾದಿ ದಿಕ್ಕಿನ ಪಾದಚತುಷ್ಟಯಂಗಳು, ರಾಜಾವರ್ತಪ್ರಭೆಯ ರೂಪಮಾದ ಅಧರ್ಮ ಅಜ್ಞಾನ ಅವೈರಾಗ್ಯ ಅನೈಶ್ವರ್ಯವೆಂಬ ನಾಲ್ಕೆ ಕ್ರಮದಿ ಪೂರ್ವಾದಿ ದಿಕ್ಕಿನ ಪಾದಚತುಷ್ಟಯಂಗಳು ಮೇಲೆ ಅಣಿಮಾದಿಗಳೆ ಪೂರ್ವಾದ್ಯಷ್ಟದಿಕ್ಕಿನ

ದಳಂಗಳು, ವಾಮಾದಿ ಸರ್ವಭೂತ ದಮನಾಂತಮಾದ ರುದ್ರವೆ ಪೂರ್ವಾದ್ಯಷ್ಟದಿಕ್ಕಿನ ಕೇಸರಂಗಳು, ವೈರಾಗ್ಯವೆ ಕರ್ಣಿಕೆ ವಾಮೆ ಮೊದಲು ಮನೋನ್ಮನಿ ಕಡೆಯಾದ ನವಶಕ್ತಿಗಳೆ ಪೂರ್ವಾದಿಮಧ್ಯಾಂತವಾದ ಕರ್ಣಿಕಾಬೀಜಂಗಳು, ಬಳಿಕದರ ಮೇಲೆ ಅಗ್ನಿರವಿಶಶಿ ಮಂಡಲತ್ರಯಂಗಳು, ಬಳಿಕದರ ಮೇಲೆ ತಮೋರಜಸತ್ವಗುಣಂಗಳವರ ಮೇಲೆ ಜೀವಾತ್ಮ ಅಂತರಾತ್ಮ ಪರಮಾತ್ಮರುಗಳವರ ಮೇಲೆ ಆತ್ಮತತ್ವ ವಿದ್ಯಾತತ್ವ ಶಿವಶತ್ವಂಗಳಿಂತು ಪರಿವಿಡಿದಾಯತಮಾದ ಸಿಂಹಾಸನಮಂ ಪರಿಕಲ್ಪಿಸಿ ಲಿಂಗಾರ್ಚನೆಯಂ ಮಾಳ್ಪುದಯ್ಯಾ ಶಾಂತವೀರೇಶ್ವರಾ. || ೮೧ ||

೧೪೪೧

ಮತ್ತಮಾ ಸಿಂಹಾಸನಾಗ್ರದಲ್ಲಿ ಶಿವಲಿಂಗ ವಾಹನ ಸ್ಥಾಪನ ಸನ್ನಿಧಾನ ಸಂರೋಧನ ಸಮ್ಮುಖೀಕರಣಮೆಂಬ ಕ್ರಿಯೆಗಳಂ ಮಾಡಿ, ಬಳಿಕ ಪೂಜಾ ಪ್ರಾರಂಭದಿಂ ತೊಡಗಿ, ಪೂಜಾ ಸಮಾಪ್ತಿ ಪರಿಯಂತರಂ ಕ್ಷಾಲನಪಾತ್ರ ಜಲಮಂ ಮರಳಿ ಮರಳಿ ಮುಷ್ಟಿ ಮುಷ್ಟಿ ಸಕಲ ಕ್ರಿಯೆಗಳನೀಶ್ವರಾರ್ಪಣಂಗೆಯ್ಯ ಬೇಕೆಂದರಿದು, ಬಳಿಕ ನದಿ ತ[ಟಾ]ಕ ಕೂಪಂಗಳಲ್ಲಿ ಸ್ವಾದುಮಿಶ್ರ ಲವಣಂಗಳಾದ ಕ್ರಮದಿಂದುತ್ತಮ ಮಧ್ಯಮ ಕನಿಷ್ಠಮಾದ ಪೂಜಾಯೋಗ್ಯ ಮಾದುದಕ ಭೇದಂಗಳಂ ಬಿಳಿಯ ಸಾಸಿವೆ ಕುಸುಮ ದೂರ್ವೆ ಕೋಷ್ಟ ಲಾಮಂಚ ಕರ್ಪೂರವೆಂಬಾರು ಪಾದ್ಯ ದ್ರವ್ಯಂಗಳಂ ಕುಶಾಗ್ರ ತಿಲ ಬಿಳಿಯ ಸಾಸಿವೆ ಜವೆ ನೆಲ್ಲು ಕ್ಷೀರಮೆಂಬಾರು ಅರ್ಘ್ಯ ದ್ರವ್ಯಂಗಳಂ, ಮುಖಾಂಬುಜಕ್ಕೀ ಘೃತದಧಿ ಮಧು ಮಿಶ್ರಮಾದ ಮಧುಪರ್ಕ ದ್ರವ್ಯಂಗಳಂ, ಫಲ ಕಚೋರ ಕರ್ಪೂರ ಕೋಷ್ಟ ಕುಂಕುಮ ಯಾಲಕ್ಕಿಯೆಂಬಾರು ಆಚಮನ ದ್ರವ್ಯಂಗಳಂ, ಪಂಚಗವ್ಯಂ ಪಂಚಾಮೃತಂಗಳಂ, ಗೋಧೂಮ ಚೂರ್ಣ ಗಂಧಾದ್ಯುದ್ವರ್ತನ ದ್ರವ್ಯಂಗಳಂ, ಮಂದೋಷ್ಣಾದಿ ಸ್ನಾನವಾರಿಗಳಂ, ಗಂಧೋದಕ ಪುಷ್ಪೋದಕ ರತ್ನೋದಕ ಮಂತ್ರೋದತಂಗಳಂ, ಮಹಾಸ್ನಾನೋದಕಂಗಳು, ವಿಧಿ ನಯ ಶುಭ್ರಾದಿ ಗುಣಯುಕ್ತ ಭಸಿತಂಗಳು, ಪ[ಟ್ಟೆ] ದೇವಾಂಗ ಶುಭ್ರ ಚಿತ್ರಾದಿ ವಸ್ತ್ರಂಗಳಂ, ಸುವರ್ಣ ರಜತ ಪ[ಟ್ಟೆ] ಸೂತ್ರಾದಿ ಯಜ್ಞೋಪವೀತಂಗಳಂ, ಕಿರೀ[ಟಾ]ದ್ಯಾಭರಣಂಗಳಂ, ಚಂದನ ಅಗರು ಕಸ್ತೂರಿ ಕರ್ಪೂರ ತಮಾಲ ದಳ ಕುಂಕುಮ ಲಾಮಂಚ ಕೋಷ್ಟಂಗಳೆಂಬ ಅಷ್ಟಗಂಧಂಗಳಂ, ಜವೆ ಬಿಳಿಯ, ಸಾಸಿವೆ ತಿಲ ತಂಡುಲ ಮುಕ್ತಾಫಲಾದ್ಯಕ್ಷತೆಗಳಂ, ಶುಭ್ರರಕ್ತ ಕೃಷ್ಣವರ್ಣ ಕ್ರಮದಿಂ ನಂದ್ಯಾದಿ ವರ್ತ್ಯಾದಿ ಕಮಲಾದಿ ನೀಲೋತ್ಪಲಾದಿ ಸಾತ್ವಿಕ ರಾಜಸ ತಾಮಸ ಪುಷ್ಪಂಗಳಂ, ದೂರ್ವೆ ತುಲಸಿ ಬಿಲ್ವಾದಿ ಪತ್ರಜಾಲಂಗಳಂ, ಕರಿಯ[ಗ]ರು ಬಿಳಿಯಗರು ಗುಗ್ಗುಲ ಶ್ರೀಗಂಧ ಆಗರು ಬಿಲ್ವಫಲ ತುಪ್ಪ ಜೇನುತುಪ್ಪ ಸಜ್ಜರಸ ಕರ್ಪೂರವೆಂಬ ದಶಾಂಗ ಧೂಪಂಗಳಂ, ತೈಲವರ್ತಿ ಘೃತಕರ್ಪೂರವೆಂಬ ದೀಪ ಸಾಧನಂಗಳಂ, ಹರಿದ್ರಾನ್ನ ಪರಮಾನ್ನ ಮುದ್ಗಾನ್ನ

ಕೃಸರಾನ್ನ ದಧ್ಯಾನ್ನ ಗುಡಾನ್ನಮೆಂಬ ಷಡ್ವಿಧಾನ್ನಾದಿ ನೈವೇದ್ಯಂಗಳಂ, ಪೂಗ ಪರ್ಣ ಚೂರ್ಣ ಕರ್ಪೂರಾದಿ ತಾಂಬೂಲ ದ್ರವ್ಯಂಗಳಂ, ಬೇರೆ ಬೇರೆ ಸಂಪಾದಿಸುವುದಯ್ಯಾ ಶಾಂತವೀರೇಶ್ವರಾ. || ೮೨ ||

೧೪೪೨

ಬಳಿಕಾ ಪರಮ ಪವಿತ್ರ ದ್ರವ್ಯಂಗಳಿಂ ಮಾಳ್ಪ ಉಪಚಾರಂಗಳೊಳಗೆ ತ್ರಿವಿಧೋಪಚಾರ ಪಂಚೋಪಚಾರ ಅಷ್ಟೋಪಚಾರ ದಶೋಪಚಾರ ಷೋಡಶೋಪಚಾರ ಚತುರ್ವಿಂಶತ್ಯುಪಚಾರ ದ್ವಾತ್ರಿಂಶದುಪಚಾರಂಗಳುಂಟವರಲ್ಲಿ [ಧ್ಯಾನ] ಆವಾಹನ ಆಸನ ಪಾದ್ಯ ಅರ್ಘ್ಯ ಆಚಮನೀಯ ಸ್ನಾನ ವಸ್ತ್ರ ಯಜ್ಞಸೂತ್ರ ಭೂಷಣ ಗಂಧ ಅಕ್ಷತೆ ಪುಷ್ಪ ಧೂಪ ದೀಪ ನೈವೇದ್ಯ ಮುಖವಸನ ನೀರಾಜನ ದರ್ಪಣ ಫಲಾರ್ಪಣ ತಾಂಬೂಲ ಪ್ರದಕ್ಷಿಣ ನಮಸ್ಕಾರ ಸ್ತೋತ್ರ ಪುರಾಣಪಠಣ ಛತ್ರ ಚಾಮರ ವ್ಯಜನ ಶಯ್ಯೆ ಸಂಗೀತ ನೃತ್ಯ ವಾದ್ಯ ಆತ್ಮರೋಪಣಯೆಂಬ ದ್ವಾತ್ರಿಂಶ ದುಪಚಾರಂಗಳಂ [ಸಮಂತ್ರಕ]ಮಾಗಿ ಮಾಡಿ, ಬಳಿಕೀ ಸಮಸ್ತ ಪೂಜಾ ದ್ರವ್ಯಗಳಿಲ್ಲದಿರೆ ಜಲಮಾತ್ರ ಪುಷ್ಪಮಾತ್ರದಿಂದಿರ್ಚಿಸಲಾ ಸಕಲ ಸಾಂಗಿಕಮಾದರ್ಚನೆಗೆ ಸಮಾನವಹುದಾಗಿ ಪೂಜಕಂಗೆ ಶ್ರದ್ಧಾಭಕ್ತಿಯೆ ಮುಖ್ಯಮಾಗಿಹುದಾ ಭಕ್ತಿಯೆ ಈಶ್ವರವಿಷಯಮಾದ ಶ್ರವಣ ಕೀರ್ತನ ಸ್ಮರಣ ಪಾದಸೇವೆ ಪೂಜೆ ವಂದನೆ ದಾಸ್ಯ ಸಖ್ಯ ಆತ್ಮಾರ್ಪಣಮೆಂಬ ನವವಿಧಮಾಗಿರ್ಪುದೆಂದರಿದಿಂತು ಪೀಠಸ್ಥ ಶಿವಲಿಂಗದ ಬಹಿರಂಗಪೂಜೆಯಂ ವಿಸ್ತರಿಸಿ, ಬಳಿಕಿಹ ಲೋಕಫಲವನಿಚ್ಛೈಸು ಮಾತನಾದೊಡಂ, ಪರಲೋಕಫಲವಂ ಕಾಮಿಸುವಾತನಾದೊಡಂ, ಸಕಲ ಜನಕ್ಕೆ ಹಿತಮಂ ಬಯಸುವಾತನಾದೊಡಂ, ಬಾಹ್ಯದ್ರವ್ಯಂಗಳಿಂದಿಂತು ಶಿವಪೂಜೆಯಂ ಮಾಡವೇಳ್ಕುಮೆಂದು ನಿಶ್ಚೈಸಿರುವದಯ್ಯಾ ಶಾಂತವೀರೇಶ್ವರಾ. || ೮೩ ||

೧೪೪೩

ಬಳಿಕ ನಿಷ್ಕಾಮನಾದ ಮೋಕ್ಷಾಧಿಕಾರಿಗಭ್ಯಂತರದಲ್ಲಿ ಮುಖ್ಯಮಾಗಿ ಜ್ಞಾನಮಯನಾದ ಪೂಜೆ ಕರ್ತ್ಯವ್ಯಮಾ ಪೂಜೋಪಚಾರಂಗಳಲ್ಲಿ ಉಪಚಾರಮಂ ಉಪಚಾರ್ಯಮಾದ ದೇವತೆಯ ಗುಣಂಗಳನಾರೋಪಿಸಿ ಮಾಡಲು ತಕ್ಕುದದೆಂತೆಂದೊಡೆ : ಮೊದಲು ತದನಂತರದಲ್ಲಿ ಶಿವಧರ್ಮವೆ ಕಂದ, ಸುಜ್ಞಾನವೆ ನಾಳ, ಅಷ್ಟಮಹ ದೈಶ್ವರ್ಯವೆ ದಳ, ರುದ್ರೇಶ್ವರಾದಿಕವೆ ಕೇಸರ, ವೈರಾಗ್ಯವೆ ಕರ್ಣಿಕೆಗಳಾಗಿ ಚಂದ್ರಪ್ರಭಾಮಯವೆನಿಸಿ ಮೆರೆವ ಹೃದಯಕಮಲದ ಸೋಮ ಸೂರ್ಯಾಗ್ನಿ ಮಂಡಲತ್ರಯದ ಮಧ್ಯದಲ್ಲಿ ಸತ್ತೆಂಬ ದಿವ್ಯಮೂರ್ತಿಯಿಂ, ಚಿತ್ತೆಂಬ ಕಾಯ ಕಾಂತಿಯಿಂ, ಆನಂದವೆಂಬ ಲಾವಣ್ಯದಿಂ, ತತ್ವ ಪರಿಕಲ್ಪಿತಮಾದಾಭರಣಾಯುಧಾದಿಗಳಿಂದಲಂಕೃತ ಮಾಗಿ, ಸ್ಫಟಿಕದೊಳಗಣ ದೀಪದಂತೆ ಒಳಹೊರಗೆ ಬೆಳಗುತ್ತಿರ್ದೀಶ್ವರನಂ ಪರಿಭಾವಿಸಿ ಬಳಿಕ ಸರ್ವಾಧಾರನೀಶ್ವರನೆಂಬ ಬುದ್ಧಿಯೆ ಆಸನ, ಪರಮಾತ್ಮನು ಪರಿಪೂರ್ಣನೆಂಬ ಮತಿ[ಯೆ]

ಆವಾಹನ, ಜಗಕೆಲ್ಲಂ ಶಿವನ ಶ್ರೀಪಾದವೆಂಬ ತಿಳಿವೆ ಪಾದ್ಯಂ, ಸುಖಾಂಬುಧಿ ಶಂಭುವೆಂಬನುಸಂಧಾನವೆ ಅರ್ಘ್ಯ, ಪರಮಪವಿತ್ರ ಸ್ವರೂಪನಭವನೆಂಬರಿವೆ ಆಚಮನೀಯ, ನಿತ್ಯನಿರ್ಮಳ ನೀಶ್ವರನೆಂಬುಪಲಬ್ಧಿಯೆ ಸ್ನಾನ, ಜಗವೆಲ್ಲವನತಿ ಕ್ರಮಿಸಿರ್ಪ ಶುದ್ಧವಿದ್ಯೆಯ ವಸ್ತ್ರ, ತ್ರಿಗುಣಾಗಮಾತೀತಮಾದ ಜ್ಞಾನವೆ ಯಜ್ಞ ಸೂತ್ರ, ಚೈತನ್ಯವೆ ಜಗದಲಂಕಾರಮೆಂಬ ಪ್ರತಿಭೆಯ ಆಭರಣ, ಶುದ್ಧಚಿಚ್ಛಕ್ತಿಯೆ ಅನುಲೇಪನ, ಕಾರುಣ್ಯವೆ ಅಕ್ಷತೆ, ಪ್ರಣವಾತ್ಮಕ ಸತ್ಯವಚನವೆ ಪುಷ್ಪ, ವಿಷಯ ವಾಸನಾವಿಲಯವೆ ಧೂಪ, ಜಗದ್ವರ್ತಿ ಪಿಡಿದುಜ್ವಲಿಪ ಪರಂಜ್ಯೋತಿಯೆ ದೀಪ, ಜಗವೆಲ್ಲಮಂ ಕಬಳೀಕರಿಸಿಕೊಂಡಿಪ್ಪಾತ್ಮನೆ ನಿತ್ಯತೃಪ್ತನೆಂಬ ಸಂವಿತ್ತೇ ನೈವೇದ್ಯ, ತ್ರಿಗುಣಂಗಳ ನೊಳಕೊಂಡು ನಿಂದ ಜ್ಞಪ್ತಿಯೆ ತಾಂಬೂ, ಸೋಹಂ ಭಾವದಾವೃತ್ತಿಯೆ ಪ್ರದಕ್ಷಿಣ, ಸಮಸ್ತ ತತ್ತ್ವಂಗಳನತಿಕ್ರಮಿಸಿನಿಂದ ನಿಜವೆ ನಮಸ್ಕಾರ, ಶಿವೈಕ್ಯಸ್ಥಿತಿಯೆ ವಿಸರ್ಜನವೆಂಬ ಉಪಚಾರಂಗಳಿಂದಂತಃಪೂಜೆಯಂ ರಚಿಸೆಂದೊರೆದಿರಯ್ಯಾ ಶಾಂತವೀರೇಶ್ವರಾ. || ೮೪ ||

೧೪೪೪

ಬಳಿಕಿಂತು ಹೃತ್ಕಮಲಕರ್ಣಿಕಾಮಧ್ಯದಲ್ಲಿ ಗುರುವಿಚಿತ್ತಿಷ್ಟಲಿಂಗದಲ್ಲಿ ಸಿಂಹಾಸನದಲ್ಲಿ ಮಾಡುವಾತ್ಮಾರ್ಥವಾದ ಪೂಜೆಗಳಂ ಗ್ರಾಮ ನದಿತೀರಾದಿ ಕ್ಷೇತ್ರಂಗಳಲ್ಲಿ ದೇವದಾನವಾದಿಗಳಿಂ ಪ್ರತಿಷ್ಠಿತಮಾದ ಲಿಂಗಂಗಳಲ್ಲಿ ಮಾಳ್ಪ ಪರಾರ್ಥಪೂಜೆಗಳಂ ಬಿಡದಾರಾಧಿಸುತ್ತಮಾತ್ಮಾರ್ಥ ಪೂಜೆಯೊಳೀಶ್ವ ರಾವರಣಮಾದ ವೃಷಭ ಭಾಸ್ಕರ ವೀರಭದ್ರ ಮಾತೃಕೆ ಸ್ಕಂದ ಕ್ಷೇತ್ರಪಾಲ ಬ್ರಹ್ಮ ವಿಷ್ಣು ರುದ್ರರೆಂಬ ದೇವತೆಗಳನವರವರ ಸ್ಥಾನಕ್ರಮವರಿದಾರಾಧಿಸುತ್ತೆ ಬೇರೆ ಸ್ಥಾಪಿತಂಗಳಾದ ವಿಷ್ಣ್ವಾದಿ ದೇವತಾಭಜನೆಗಳಂ ತ್ಯಜಿಸಿ, ತನ್ನಿಷ್ಟಲಿಂಗವು ಚೋರಾದಿಗಳಿಂ ಪೋಗಿ ಬಾರದಿರ್ದೊಡೊಂದು ಲಕ್ಷ ಅಘೋರಮಂತ್ರ ಜಪದಿ ಶುದ್ಧಾತ್ಮನಾಗಿ, ಮೇಲಾಚಾರ್ಯನಿಂ ವಿಧ್ಯುಕ್ತಮಾಗಿ ಮತ್ತೆ ಪಡೆದು ವ್ರತ ನಿಯ ಮಾದಿ ಲೋಪಮಾಗ ಲಷ್ಟೋತ್ತರಶತ ಗಾಯತ್ರಿ ಜಪದಿಂ ಪರಿಶುದ್ಧಿವಡೆದು, ಬಳಿಕ ಪರಮಪವಿತ್ರಮಾದ ಶಿವಪಾದೋದಕ ಸ್ವೀಕಾರ ಶಿವಪ್ರಸಾದಾನ್ನ ಸೇವನೆ ಶಿವಪ್ರಾಸಾದಾಂಬುಪಾನ ಶಿವನಿರ್ಮಾಲ್ಯದಳ ಕುಸುಮಧಾರಣಂಘಳು ಸದ್ಬ್ರಾಹ್ಮಣರು ಮೊದಲಾದ ಶ್ರೀವಿಶಿಷ್ಟರ್ಗೆ ಕರ್ತವ್ಯವಹುದು. ಮಿಕ್ಕ ಪಾಪಾತ್ಮರ್ಗೆ ಪಾಷಂಡಿಘಳಿಗೆ ಶಾಪದಗ್ಧರಿಗೆ ಶಿವಸಂಸ್ಕಾರಹೀನರ್ಗೆ ನಾಸ್ತಿಕರ್ಗೆ ವೇದಬಾಹ್ಯರಿಗೆ ಯೋಗ್ಯವಲ್ಲೆಂದು ಪರಿಭಾವಿಸುತ್ತಿಂತು ಸಕಲಸತ್ಕ್ರಿಯೆಗಳಿಂ ನಿರ್ಮಲಾಂತಃಕರಣನಾಗಿರ್ಪಾತನೆ ಶುದ್ಧ ಶೈವನಪ್ಪನಯ್ಯಾ ಶಾಂತವೀರ ಪ್ರಭುವೇ. || ೮೫ ||

೧೪೪೫

ಮತ್ತಮಾ ಪರಮೇಶ್ವರ ನಿರ್ಮಿತಮಾದ ಜಗತ್ತಿನಲ್ಲಿ ಚರಮಶರೀರಿ ಎನಿಸಿಕೊಂಡು ಸಮಸ್ತ ಶೈವರೊಳತಿ ವಿಶಿಷ್ಟನಾಗಿ, ಇತರ ಶೈವರಂತೆ

ಕ್ರಿಯಾಬಹುಲದಿಂದಲ್ಪಫಲಮಂ ಪಡೆಯದೆ ಅಲ್ಪಕ್ರಿಯೆಯಿಂದನಂತಫಲಮಂ ಪಡೆವಾತನಾಗಿ, ಶಿವದೀಕ್ಷೆಯಿಂ ಮೇಲೆ ಸ್ನಾನ ಭೋಜನ ನಿದ್ರೆ ಜಾಗರಣ ಮಲಮೂತ್ರ ವಿಸರ್ಜನಾದಿ ಕಾಲಂಗಳಲ್ಲಿ ಅಶುಚಿಭಾವನೆದೋರದೆ ಸದಾ ಲಿಂಗಾಂಗಸಂಬಂಧಿಯಾಗಿ, ಲಿಂಗಭೋಗೋಪಭೋಗಿಯಾಗಿ, ತನ್ನಿಷ್ಟಲಿಂಗ ದಲ್ಲಿ ಆವಾಹನ ವಿಸರ್ಜನಾದಿ ಕ್ರಿಯೆಗಳಂ ಮಾಡದಾತನಾಗಿ, ತ್ರಿಕಾಲ ಲಿಂಗಾ ರ್ಚನಾಶಕ್ತನಾಗಿ, ಲಿಂಗಲೋಪವ್ರತ ಲೋಪಂಗಳಲ್ಲಿ ಪ್ರಾಣತ್ಯಾಗವಲ್ಲದೆ ಬೇರೊಂದು ಪ್ರಾಯಶ್ಚಿತ್ತವಿಲ್ಲದಾತನಾಗಿ, ಗುರುನಿಂದೆ ಶಿವನಿಂದೆ ಜಂಗಮ ನಿಂದೆ ಪ್ರಸಾದಪಾದೋದಕ ಭಸ್ಮಧಾರಣನಿಂದೆ ಶಿವಾಗಮ ಶಿವಕ್ಷೇತ್ರ ಶಿವಾ ಚಾರನಿಂದೆಗಳಂ ಸೈರಿಸದಾತನಾಗಿ, ವಿಷ್ಣ್ವಾದಿ ದೇವತೆಗಳಂ ಲೆಕ್ಕಿಸದಾತನಾಗಿ, ಬಾಹ್ಯದಲ್ಲಿ ಶಿವಲಿಂಗ ಲಾಂಛನವಿಲ್ಲದ ಭವಿಗಳೊಡನೆ ಏಕಾಸನ ಶಯನ ಯಾನ ಸಂಪರ್ಕ ಸಹಭೋಜನಾಗಳಿಲ್ಲದಾತನಾಗಿ, ಅನೃತ ಅಸ್ಥಿರವಾಕ್ಯ ವಂಚನೆ ಪಜ್ತಿಭೇದ ಉದಾಸೀನ ನಿರ್ದಯೆಯೆಂಬ ಅರಂತರಂಗ ಭವಿಗಳಿಲ್ಲದಾತನಾಗಿ, ಶಿವಮಾಹೇಶ್ವರಂ ಕಾಣುತಲೇಳೂದು, ಇದಿರಾಗಿ ನಡೆವುದು, ಅವರ್ಗೊಡಿ ತಿರುಗೂದು, ಪ್ರಿಯವಚನಮಂ ನುಡಿವುದು, ಗದ್ದುಗೆಯ ನಿಕ್ಕೂದು, ಅನ್ನ ಪಾನಂಗಳಂ ಸಮರ್ಪಿಸೂದೆಂಬ ಮುಕ್ತಿಸೋಪಾನಕ್ರಮ ಸಪ್ತಕ್ರಮಯುಕ್ತವಾಗಿ ಪ್ಪಾತನೆ ವೀರಶೈವನಯ್ಯಾ ಶಾಂತವೀರೇಶ್ವರಾ. ॥ ೮೬ ॥

೧೪೪೬

ಜಾತಿಸೂತಕ ಜನನಸೂತಕ ಪ್ರೇತಸೂತಕ ಉಚ್ಛಿಷ್ಟಸೂಚಃ ರಜಃಸೂತಕ ವೆಂಬ ಪಂಚಸೂತಕವನತಿಗಳೆದಾತನಾಗಿ, ಲಿಂಗಾಚಾರ ಸದಾಚಾರ ಭಕ್ತ್ಯಾಚಾರ ಶಿವಾಚಾರ ಗಣಾಚಾರವೆಂಬ ಪಂಚಾಚಾರನಿಷ್ಠನಾಗಿ ದಾಸತ್ವ ವೀರದಾಸತ್ವ ಭೃತ್ಯತ್ವ ವೀರಭೃತ್ಯ[ತ್ವ] ಸಮಯಾಚಾರತ್ವ ಸಕಲಾವಸ್ಥಾತ್ವಂಗಳೆಂಬ ಷಡ್ವಿಧ ಸಜ್ಜನತ್ವಯುಕ್ತನಾಗಿ, ದೇಶಕಾಲ ಕಲ್ಪಿತಾದಿ ಲೌಕಿಕಾಚಾರಂಗಳಂ ಮೀರಿ ಸ್ವತಂತ್ರ ಶೀಲನಾಗಿ, ಶಿವಾತ್ಮರ್ಗೆ ಭೇದಭ್ರಾಂತಿದೋರದಾತನಾಗಿ, ಉಪನಿಷ ದ್ವಾಕ್ಯ ಜನಿತ ವಿದ್ಯೆಯಲ್ಲಿ ರಮಿಸುವ ಶೈವನಪ್ಪುದರಿಂ ತತ್ಸಂಜ್ಞೆಯುಳ್ಳಾತನಾಗಿ, ಜಗತ್ಪೂಜ್ಯನಾಗಿಪ್ಪಾತನೆ ವೀರಶೈವನಪ್ಪನಯ್ಯಾ ಶಾಂತವೀರೇಶ್ವರಾ. ॥೮೭॥

೧೪೪೭

ಬಳಿಕಾ ವೀರಶೈವನೆ ಕ್ರಿಯಾಭೇದದಿಂ ಸಾಮಾನ್ಯವೀರಶೈವನೆಂದು, ವಿಶೇಷ ವೀರಶೈವನೆಂದು ನಿರಾಭಾರಿವೀರಶೈವನೆಂದು ತ್ರಿವಿಧಮಾಗಿರ್ಪನವರಲ್ಲಿ ಶ್ರೀಗುರುವಿನ ಹಸ್ತಮಸ್ತಕಸಂಯೋಗದಿಂ ವಿಭೂತಿಯ ಪಟ್ಟದಿಂ ಶಿವಮಂತ್ರೋ ಪದೇಶದಿಂ ಲಿಂಗಾಗಂಸಂಗಿಯಾಗಿ ಹಸ್ತಮಸ್ತಕ ಕಂಠ ಕಕ್ಷ ವಕ್ಷಸ್ಥಲಾದಿಗಳಲ್ಲಿ ಶಿವಲಿಂಗಧಾರಕನಾಗಿ ಏಕಕಾಲಮಾಡೊಡಂ ಹಸ್ತಮಸ್ತಕ ಕಂಠ ಕಕ್ಷ ವಕ್ಷಸ್ಥಲಾದಿ ಗಳಲ್ಲಿ ಶಿವಲಿಂಗಧಾರಕನಾಗಿ ಏಕಕಾಲಮಾಡೊಡಂ ತ್ರಿಕಾಲಮಾಡೊಡಂ

ಲಿಂಗಾರ್ಚನಾಸಕ್ತನಾಗಿ ಗುರುಲಿಂಗಭಸಿತಂಗಳಲ್ಲಿ ಭಕ್ತಿಯುಕ್ತನಾಗಿಪ್ಪಾತನೆ ಸಾಮಾನ್ಯವೀರಶೈವನಪ್ಪನಯ್ಯ ಶಾಂತವೀರೇಶ್ವರಾ. ॥ ೮೮ ॥

೧೪೪೮

ಅನಂತರದಲ್ಲಿ ದಾಂತ್ಯಾದಿ ಸಾಧನಸಂಪನ್ನಾಗಿ, ಶ್ರೀಗುರುವಿಂ ಶಾಸನೀಯನಪ್ಪುದರಿಂ ಶಿಷ್ಯನಾದಾತ್ಮನು ಶುಭಕಾಲದೇಶಾದಿಗಳಂ ಪರೀಕ್ಷಿಸಿ ಬಳಿಕಾಚಾರ್ಯ ಸಂಪ್ರದಾಯಸಿದ್ಧನಾದ ಸಕಲಸದ್ಗುಣಸಹಿತನಾದ ಶ್ರೀಗುರುವನೆಯ್ದಿ, ಮತ್ತಮಾ ಗುರುವಿನನುಮತದಿಂ ಶಿವಪೂಜಾ ಪಾರಾಯಣರಾದ ಕೀರ್ತಿಮಯರಾದ ನಾಲ್ವರು ಋತ್ವಿಕ್ಕುಗಳಂ ಸ್ನಾನಧವಲಾಂಬರ ಆಭರಣ ಪುಷ್ಪಾದಿಗಳಿಂದಲಂ ಕರಿಸಿ, ಬಳಿಕಾ ಶ್ರೀಗುರುವಿನಾಜ್ಞೆಯಿಂ ತಾನಾ ರಾತ್ರೆಯಲ್ಲಿ ಕ್ಷೀರಾಹಾರಿಯಾಗಿರ್ದು, ಮೇಲೆ ಪ್ರಭಾತಸಮಯದಲ್ಲಿ ದಂತಧಾವನಂಗೆಯ್ದು, ಮಂಗಲಸ್ನಾನಂ ಮಾಡಿ ಧವಲಾಂಬರವನುಟ್ಟು ಪೊದೆದು, ಭಸಿತೋದ್ಧೂಳನಂ ರಚಿಸಿ, ತ್ರಿಪುಂಡ್ರ ಧಾರಣಮಂ ವಿಸ್ತರಿಸಿ, ರುದ್ರಾಕ್ಷಮಾಲೆಗಳಂ ಧರಿಸಿ, ಸುವರ್ಣಾಭರಣಾದಿಗಳಿಂ ಸಿಂಗರಂಬಡೆದು, ಬಳಿಕಾಚಾರ್ಯನ ಸಮಿಪಕ್ಕೆ ಬಂದು, ಭಯಭಕ್ತಿಯಿಂದಷ್ಟವಮಂತ್ರಪೂರ್ವಕದಿಂ ವಿನಯವಿನಮಿತನಾಗಿ ಸುವರ್ಣ ಪುಷ್ಪಾದಿಗಳಿಂ ವಿತ್ತಾನುಸಾರಮಾಗಿ ಗುರುಪೂಜನಂಗೆಯ್ದು ಮರಳಿ ಗಂಧ ಪುಷ್ಪಾದಿಗಳಿಂ ಋತ್ವಿಕ್ಕುಗಳಂ ಭಜಿಸಿ, ಮೇಲೆ ಶ್ರೀಗುರುಮುಖ್ಯಸಕಲಮಾಹೇಶ್ವರರಂ ವಂದಿಸಿ ವಿಭೂತಿ ವೀಳೆಯಂಗಳಂ ಸಮರ್ಪಿಸಿ, ಬಳಿಕ ಖನನ ದಹನ ಶೋಧನ ಸಂಪ್ರೋಕ್ಷಣ ಮರ್ದನ ಲೇಪನವೆಂಬ ಷಟ್ಕರ್ಮಂಗಳಿಂ ಸಾರಣೆ ಕಾರಣೆ ತಳಿರತೋರಣ ಕುಸುಮತೋರಣ ಸರವಿಸರ ಪಳವಳಿಗೆ ಧೂಪ ಧೂಮ್ರಾದಿಗಳಿಂ ಪರಿಶೋಭೆವಡೆದು, ಮನೋಹರಮಾದ ದೀಕ್ಷಾಮಂಟಪದಲ್ಲಿ ಗೋಚರ್ಮ ಮಾತ್ರಭೂಮಿಯಂ ಚೌಕಮಾಗಿ, ಗೋರೋಜನ ಗೋಮಯ ಗೋಮೂತ್ರ ಗೋದಧಿ ಘೃತ ಗೋಕ್ಷೀರಯೆಂಬ ಷಟ್ಸಮ್ಮಾರ್ಜನಂಗೆಯ್ದು, ಬಳಿಕಾ ಚೌಕಮಧ್ಯದಲ್ಲಿ ಪ್ರವಾಳ ಮೌಕ್ತಿಕ ಶುಭ್ರ ಪಾಷಾಣ ಸುವ್ಯರ್ಣ ಶ್ವೇತಾಭ್ರಕ ತಂಡುಲಾದಿಗಳ ಚೂರ್ಣಂಗಳಿಂದ ಷ್ಟದಳಕಮಲಮಂ ರಚಿಸಿ, ಮತ್ತದರಾ ವಿವರ: ಶಂಖ ಚಕ್ರ ಶೂಲ ಡಮರುಗ ಪರಶು ಘಂಟೆ ಛತ್ರ ಚಾಮರವೃಷಭ ಚರಣಾದಿ ವಿಚಿತ್ರವರ್ಣಕಮಂ ತುಂಬುತ್ತದರ ಮೇಲೆ ಎಳ್ಳು ಜೀರಿಗೆ ಗೋದುವೆ ಅಕ್ಕಿ ಉದ್ದುಗಳೆಂಬ ಪಂಚಧಾನ್ಯವನಾದರೂ ಕೇವಲ ತಂಡುಲವನಾದರೂ ಮೂವತ್ತೆರಡಂಗುಲ ಪ್ರಮಾಣಿನ ಚತುರಸ್ರಮಾಗಿ ಹರಹುತ್ತದರ ಮೇಲೆ ತೀರ್ಥಾಂಬುಪೂರ್ಣಮಾದ ಸುವರ್ಣಾದಿ ನವೀನ ಪಂಚಕಳಶಂಗಳಂ ಪೂರ್ವದಕ್ಷಿಣ ಪಶ್ಚಿಮ ಉತ್ತರ ಮಧ್ಯ ಕ್ರಮದಿಂದಾಚಾರ್ಯನೆ ಸ್ಥಾಪಿಸುತ್ತಾ, ಕಳಶಂಗಳಂ ಬೇರೆ ಬೇರೆ ನೂತನ ವಸ್ತ್ರಂಗಳಿಂ ಸುತ್ತಿ, ನವಪಂಚತಂತುಗಳಿಂ ಪರಿವೇಷ್ಟಿಸಿ ಸುವರ್ಣಾದಿನಗಳನವ ರೊಳಿರಿಸಿ, ಬಳಿಕ್ಕಾಮ್ರಪಲ್ಲವ ದೂರ್ವಾಂಕುರ ಪೂಗ ಕುಸುಮ ನಾಗವಳಿ... (ಇಲ್ಲಿ ಒಂದು ಗರಿ ಕಳೆದುಹೋಗಿದೆ). ॥ ೮೯ ॥

೧೪೪೯

...ತಮಾದ ತ್ರಿವಿಧ ಕುಂಭದೊಳೊಂದೊಂದು ರಾತ್ರಿಯಲ್ಲಿ ಪ್ರತ್ಯೇಕವಾಗ ಷ್ಟೋತ್ತರಶತ ಪಂಚಾಕ್ಷರ ಮನುವಿಂದಭಿಮಂತ್ರಿಸುತ್ತವಗಾಹಮಿರಿಸಿ, ಬಳಿಕಾ ನಾಲ್ಕನೆಯ ರಾತ್ರಿಯೊಳಾ ಪಂಚಕಳಶ ಸ್ಥಾಪನಕ್ಕೆ ಉತ್ತರದಿಕ್ಕಿನಲ್ಲಿ ಭೂಮಿಯಂ ಪರಿಶುದ್ಧಿಗೆಯ್ದಷ್ಟಪದ್ಮಮಂ ತುಂಬಿ, ಬಳಿಕ ಏಳು ಮೊಳದುದ್ದದೊಂದು ನವೀನ ವಸ್ತ್ರಮಂ ತಂದಾ ಪದ್ಮದ ಮೇಲೊಂದು ಮೊಳದುದ್ದಮಂ ಮುಚ್ಚುತ್ತದರ ಮೇಲೊಂದಂಗುಲದ ದಟ್ಟದಲ್ಲಿ ಶ್ಯಾಮುಮಂ ಪಸರಿಸುತ್ತಷ್ಟದಳನಳಿನಮಂ ಬರೆದು ವಸ್ತ್ರಮಂ ಭಾಷಣಿಸಿ, ಮತ್ತದರ ಮೇಲೆ ತಿಲಮಂ ಹರಹುತ್ತಷ್ಟದಳ ಕಮಲಮಂ ಲಿಖಿಸುತ್ತಾ ವಸ್ತ್ರಮಂ ಪೊದಿಸಿ, ಮತ್ತದರ ಮೇಲೆ ಗೋದುವೆಯಂ ಹರಹುತ್ತಷ್ಟದಳಕಮಲಮಂ ನಿರ್ಮಿಸುತ್ತಾ ವಸ್ತ್ರಮಂ ಕವಿಚಿ, ಮತ್ತದರ ಮೇಲೆ ವ್ರೀಹಿಯಂ ಪಸರಿಸುತ್ತಷ್ಟದಳಕಂಜಮಂ ರಚಿಸುತ್ತಾ ವಸ್ತ್ರಮಂ ಮುಸುಂಕಿ, ಮತ್ತದರ ಮೇಲೆ ತಂಡುಲಮಂ ಹರಹುತ್ತಷ್ಟದಳಕಂಜಮನಂಕಿಸುತ್ತಾ ವಸ್ತ್ರಮ ನಾವರಿಸಿ, ಮತ್ತದರ ಮೇಲೆ ಚೂತ ಬಿಲ್ವ ಆಮಳಕ ಕುಶ ಅಪಾಮಾರ್ಗವೆಂಬ ಪಂಚಪತ್ರಗಳಂ ವಿಸ್ತರಿಸುತ್ತಾ ವಸ್ತ್ರಮನಾಚ್ಛಾದಿಸಿ, ಹಿಂಗೇಳು ನೆಲೆಯಾದಾ ಧಾರಮಂ ಕಲ್ಪಿಸುತ್ತದರ ಮೇಲೆ ಆ ಲಿಂಗಸ್ಥಲಮಂ ಗೋಮುಖ ಉತ್ತರಭಾಗ ಮಪ್ಪಂತಿರಿಸಿ ಮೇಲೆ ಶ್ರೀಕಾರ ಪ್ರಾಣಾಯಾಮದಿಂ ಸಹಸ್ರಮೂಲಮಂತ್ರಮಂ ಜಪಿಸುತ್ತಾ ಲಿಂಗಸ್ಥಲಕ್ಕೆ ಮಾತೃಕಾನ್ಯಾಸ ಕಲಾನ್ಯಾಸ ಮಂತ್ರನ್ಯಾಸಾದಿಗಳಿಂ ಪ್ರಾಣ ಪ್ರತಿಷ್ಠೆಯಂ ಮಾಡಿ, ಮರಳಿ ಕಳಶೋದಕದಿಂ ಸ್ನಾನಂಗೆಯ್ದಷ್ಟ ವಿಧಾರ್ಚನೆಯಂ ಮಾಡಿಂತು ಮುನ್ನವೆ ಪರಿಶು...ವಡೆದಿರ್ದ ಲಿಂಗಸ್ಥಲವನಾ ಚಾರ್ಯಂ ತನ್ನ ವಾಮಕರಸ್ಥಲಕ್ಕೆ ಬಿಜಯಂಗೆಯ್ಸಿಕೊಂಡು, ಬಳಿಕ್ಕದರೊಳಾ ಪೂರ್ವೋಕ್ತಕ್ರಮದಿಂ ದೃಷ್ಟಿಸ್ಥಿತ ಶಿವಕಲಾ ಪ್ರತಿಷ್ಠೆಯಂ ಮಾಡಿ, ಮತ್ತಾ ಶಿಷ್ಯನ ''ಅಯಂ ಮೇ ಹಸ್ತೋ ಭಗವಾನೆಂಬ'' ಶ್ರುತಿಸಿದ್ಧಮಾದ ವಾಮಹಸ್ತಪೀಠ ದೊಳಾ ಶಿವಲಿಂಗಮಂ ಗೋಮುಖಭಾಗವಪ್ಪಂತೆ ಸಂಸ್ಥಾಪಿಸೂದೆ ಕ್ರಿಯಾದೀಕ್ಷೆ ಎನಿಸೂದಯ್ಯಾ ಶಾಂತವೀರೇಶ್ವರಾ. ॥ ೯೦ ॥

೧೪೫೦

ಬಳಿಕ ಕ್ರಿ....ತನ್ನ ಶಿಷ್ಯನ ಕರೆದೆಲೆ ಮಗನೆ ನಿನ್ನ ಪ್ರಾ[ಣ]ಲಿಂಗವಿದು ತಾನೆ, ತತ್ವಾತೀತಮಾದ ಪರವಸ್ತುವಿದು ತಾನೆ, ಹರಿಬ್ರಹ್ಮರರಸಿ ಕಾಣದ ನಿಜತತ್ವವಿದ ನಿನ್ನು ನಿಮಿ...ರ್ಥಮಾದರೂ ನಿನ್ನ ಶರೀರದಿಂ ವಿಯೋಗಮಾಗದಂತೆ ಸಾವಧಾನದಿಂ ಧರಿಸು, ತ್ರಿಕಾಲಂ ತಪ್ಪದರ್ಚಿಸುತ್ತಿರು, ಲಿಂಗಾರ್ಪಿತವಲ್ಲ ದೇನೊಂದನು ಸ್ವೀಕರಿಸದಿರು, ಸಕಲಭೋಗಮೋಕ್ಷಂಗಳೆಲ್ಲಾ...ಸಾರಿದವೆಂದು ನಂಬು, ಸರ್ವ ಕ್ಲೇಶಮಂ ಬಿಡು, ನಿತ್ಯಸುಖಿಯಾಗು, ಸತ್ಯಮಿದೆಂಬಿವು ಮೊದ ಲಾದ ಶಿವಕ್ರಿಯೆಗಳ ನುಪದೇಶಂಗೆಯ್ದುಂತು ಪೇಳ್ದ ವೀರಶೈವದೀಕ್ಷೆಯಾದೊಡೆ ಆಜ್ಞಾದೀಕ್ಷೆ ಉಪ[ಮಾ]ದೀಕ್ಷೆ, ಸ್ವಸ್ತಿಕಾರೋಹಣ, ಕಳಶಾಭಿಷೇಕ, ವಿಭೂತಿಯ

ಪಟ್ಟ, ಲಿಂಗಾಯತ, ಲಿಂಗಸ್ವಾಯತವೆಂದು ಸಪ್ತವಿಧವಾಗಿಹುದವರಲ್ಲಿ ಶ್ರೀಗುರು ತನ್ನಾಜ್ಞೆಯನೆ ಶಿಷ್ಯನಲ್ಲಿ ಪ್ರತಿಪಾದಿಸೊದೆ ಆಜ್ಞಾದೀಕ್ಷೆ ಎನಿಸೂದು. ಪುರಾತನ ಸಮಯಾಚಾರಕ್ಕೆ ಸದೃಶವಾಗಿ ಮಾಡೂದೆ ಉಪಮಾದೀಕ್ಷೆ ಎನಿಸೂದು. ಸ್ವಸ್ತಿಕವೆಂಬ ಮಂಡಲದ ಮೇಲೆ ಶಿಷ್ಯನಂ ಕುಳ್ಳಿರಿಸಿ ಮಂತ್ರ ನ್ಯಾಸಾದಿಗಳಂ ಮಾಡಿ ಮಂತ್ರಶರೀರಿ ಎನಿಸೂದೆ ಸ್ವಸ್ತಿಕಾರೋಣವೆನಿಸೂದು. ಪಂಚಕಳಶೋದಕಂಗಳಿಂ ಶಿಷ್ಯಂಗೆ ಸ್ನಪನಂಗೆಯ್ವುದೆ ಕಳಶಾಭಿಷೇಕವೆನಿಸೂದು. ಆಗಮೋಕ್ತಸ್ಥಾನಂಗಳಲ್ಲಿ ತತ್ತನ್ಮಂತ್ರಂಗಳಿಂ ಶ್ರೀವಿಭೂತಿ ಧಾರಣಂಗೆಯ್ವುದೆ ವಿಭೂತಿಯ ಪಟ್ಟವೆನಿಸೂದು. ಆಚಾರ್ಯಂ ತಾನೂ ಶಿಷ್ಯಂಗೆ ಕೊಡಲುತಕ್ಕ ಲಿಂಗವನರ್ಚಿಸಿ ಶಿಷ್ಯನಂ ನೋಡಿಸೊದೆ ಲಿಂಗಾಯತವೆನಿಸೂದು. ಆ ಶ್ರೀಗುರುವಿತ್ತ ಲಿಂಗವನೆ ಶಿಷ್ಯನು ಸಾವಧಾನದಿಂದುತ್ತಮಾಂಗಾದಿ ಸ್ಥಾನಂಗಳಲ್ಲಿ ಧರಿಸೂದೆ ಲಿಂಗಸ್ವಾಯತವೆನಿಸೂದು. ಇಂತು ಶಾಸ್ತ್ರೋಕ್ತ ಕ್ರಮದಿಂ ಸಾಂಗಿಕವಾದ ಶಿವದೀಕ್ಷೆಯಿಂ ಲಿಂಗಾಂಗಸಂಬಂಧಿಯಾದ ವೀರಶೈವನು ಮಾಳ್ಪ ಶಿವಲಿಂಗ ಪೂಜಾಕ್ರಮವೆಂತೆಂದೊಡೆ : ಶ್ರೇಷ್ಠರುಗಳಾವಾವುದನಾಚರಿಸುವರದನೆ ಲೋಕದವರನುವರ್ತಿಪುದರಿಂ, ಜಗಕ್ಕುಪದೇಶಮಪ್ಪಂತೆ ತಾನು ನಿತ್ಯನಿರ್ಮಲನಾದರೂ ಮಂತ್ರನ್ಯಾಸಾ... [ಸಾಂಸ್ಥಿಕವಾಗಿ] ಶಿವಲಿಂಗಾರ್ಚನೆಯಂ ಮಾಡುವಲ್ಲಿ ಮೊದಲು...ಳತನುಲಿಂಗುಪದೇಶಮಂ ಮಾಳ್ಪುದು. ಪದಿನೆಂಟುಕುಲ ಪ್ರವರ್ತನೆಯನಳಿದು, ಶರಣರ ಕುಲ ವನೊ.... ಶಿವಪೂಜೋಪಚಾರವೆ ತನಗೆ ಸಂಸಾರವೆನಲದುವೆ ನಿಸ್ಸಂಸಾರ ದೀಕ್ಷೆ ತ್ರಿಮಲ ಭವದೊಳು...ಲಿಂಗಾಂಗಸಮರಸವ ಮಾಳ್ಪುದೆ ತತ್ವದೀಕ್ಷೆ. ಲಿಂಗಾಂಗಸ್ವಯ ಲಿಂಗ ನೀನೆಂದು ತಿಳುಪುವದೆ ಅ...ಹವು ಹಿಂಗದಾ ಸಚ್ಚಿದಾನಂದಬ್ರಹ್ಮಾತ್ಮಕ ತಾನೆನಲ ದುಸತ್ಯಶುದ್ಧೀದಕ್ಷೆ. ಯೋ ಸಪ್ತಕವ....ಯದೆಹುದೆ ಏಕಾಗ್ರಚಿತ್ತದೀಕ್ಷೆ. ವ್ರತನಿಯಮಂ[ಗಳಲ್ಲಿ]....ಯ ಕರಣಭಾವಾರ್ಪಿತಗಳಂ ಸರ್ವಕಾಲದೊಳು ಇಷ್ಟ ಪ್ರಾಣವಾಸ ಲಿಂಗಂ.....ದಿರ್ಪುದೆ ....ದೀಕ್ಷೆಯೆನಿಪುದು. ಆದಿಮಧ್ಯಾವಸಾನರಹಿತ ಶಿವ ತಾನೆ ನಲ....ಚ್ಚಿ ಬೇರ್ಪಡಿಸದಿರವೆ ಸದ್ಯೋನ್ಮುಕ್ತಿದೀಕ್ಷೆ. ಈ ಏಳನು ಭಾವಕುಪದೇಶ ಮಂ....(ಅಪೂರ್ಣ) ||೯೧||

೧೪೫೧

ನಿವಾರಕ ಕರ್ಮದೋಪಾದಿಯಲ್ಲಿ ಸೂಕ್ಷ್ಮವಾಗಿ ಶೀತವರ್ಣವಾಗಿ ಪ್ರಕಾಶಿಸುತ್ತಿರ್ದು ಅಣುವಿನಸೋಪಾದಿಯ ಶಿಖಿಯುಂಟು. ಅಂಥಾ ಶಿಖಿಯ ಮಧ್ಯದಲ್ಲಿ ಪರಮಾತ್ಮಲಿಂಗವು ವಿಶೇಷ ವಾಗಿರುತ್ತಿರ್ದ್ದಿತು. ಧ್ಯಾನವೇ ಬಿಲ್ಲು ಮನಸ್ಸೇ ಬಾಣವು. ಪರಬ್ರಹ್ಮವೇ ಆ ಬಾಣಕ್ಕೆ ಗುರಿಯೆಂದು ಹೇಳಲ್ಪಡುತ್ತಿದ್ದಿತು. ಮರೆವೆಯಿಲ್ಲದುದರಿಂದ ಭೇದಿಸಲ್ತಕ್ಕುದು ಆ ಬಾಣದೋಪಾದಿಯಲ್ಲಿ ಪರಬ್ರಹ್ಮಸ್ವರೂಪವಾದವನೇ ಶಿವಯೋಗೀಶ್ವರನಯ್ಯ, ಶಾಂತವೀರೇಶ್ವರಾ. || ೯೨ ||

೧೪೫೨

ಬಿಂದ್ವಾಕಾಶದ ಮಧ್ಯದಲ್ಲಿ ಇರುತ್ತಿರ್ದ ಸೂಕ್ಷ್ಮವಾದ ಜ್ಯೋತಿರ್ಮಯವಾದ ಬ್ರಹ್ಮನಾಳವುಂಟು. ಮುಕ್ತಿಸ್ವರೂಪಕ್ಕೆ ಪ್ರಕಾಶಕ್ಕೆ ಪ್ರಕಾಶವಾದ ಆ ಸೂಕ್ಷ್ಮರಂಧ್ರವನು ಕಂಡು, ಆ ಶರಣನು ಸಮಸ್ತ ಪ್ರಾಣಿಗಳಲ್ಲಿ ಅಂತರ್ಯಾಮಿಯಾಗಿರ್ದನಯ್ಯ ಶಾಂತವೀರೇಶ್ವರಾ. ॥ ೯೩ ॥

■ ■

## -?- ಶ್ರೀಗುರು ಪ್ರಭುಸ್ಮುನೀಶ್ವರ

೧೪೫೩

ಭಸಿತ ರುದ್ರಾಕ್ಷಿಯನು, ಎಸೆವ ಪಂಚಾಕ್ಷರಿಯನು,
ಅಸಮ ಶ್ರೀಗುರುಲಿಂಗಜಂಗಮದತಿಶಯದ
ಪಾದೋದಕ ಪ್ರಸಾದವನು ಅರುಹಿ,
ಎನ್ನ ಸರ್ವಾಂಗದಲ್ಲಿ ಸಂಬಂಧಿಸಿ ಸಲಹಿದಾತನು
ಶ್ರೀಗುರು ಪ್ರಭುಸ್ಮುನೀಶ್ವರ. ॥ ೧ ॥

೧೪೫೪

ವಂದಿಸುವವರ ಕಂಡಡೆ ಉಪಚಾರವ ಮಾಡಿ,
ನಿಂದಿಸುವವರ ಕಂಡಡೆ ಕಸವ ಮಾಡಿ,
ತನಗೆ ಭಕ್ತಿಯ ಮಾಡಿದವರೆ ಭಕ್ತರೆಂದು,
ತನಗೆ ಮಾಡದವರೆ ಅಜ್ಞಾನಿಗಳೆಂಬುವರು.
ತಾವು ಜ್ಞಾನವರತು, ಉಪಾಯದಲ್ಲಿ ವೇಷವ ಹೊತ್ತು,
ದೋಷವ ಮಾಡಿ, ನಾನೀಶನೆಂಬ ಘಾತಕರ ಕಂಡು,
ಬಾಚಿಯ ಕಾಯಕವ ಮಾಡೆ,
ಶ್ರೀಗುರು ಪ್ರಭುಸ್ಮುನೀಶ್ವರಾ. ॥ ೨ ॥

■ ■

## -?- ಶ್ರೀಬಸವಲಿಂಗ

೧೪೫೫

ಈ ಹೃದಯಾಂತರಸ್ಥಿತವಾದ ಬಿಂದ್ವಾಕಾಶವು ಅವುದಾನೊಂದುಂಟು,
ಅಲ್ಲಿ ಸರ್ವಕ್ಕೆಯು ಆಧಾರಸ್ವರೂಪವಾದ,
ಸಮಸ್ತಕ್ಕೆಯು ಪ್ರೇರಕನಾದ, ಸಮಸ್ತಕ್ಕೆಯೂ ಕರ್ತೃವಾದ
ಶಿವನು ಪ್ರಕಾಶಿಸುತ್ತಿಹನಯ್ಯಾ, ಶ್ರೀಬಸವಲಿಂಗ. ॥ ೧ ॥

೧೪೫೬

ಕರಿಕಾಲಚೋಳನಲ್ಲಿ ರೂಪಾರ್ಪಿತವು ಹಸನಾಗಿಹುದು.
ಮಾದಾರ ಚೆನ್ನಯ್ಯನಲ್ಲಿ ರುಚಿಯಾರ್ಪಣವು ಚೆನ್ನಾಗಿಹುದು.
ಸುರಗಿಯ ಚೌಡಯ್ಯನಲ್ಲಿ ತುತ್ತುತುತ್ತಿಗೆ ಅರ್ಪಿಸುವ ಬಗೆ ಲೇಸಾಗಿಹುದು.
ವೀರಚೋಳವ್ವೆಯಲ್ಲಿ ಸಹಭಾಜನಾರ್ಪಣ ಸತ್ಕ್ರೀ ಪ್ರೀತಿಕರವಾಗಿಹುದು.
ಆ ಕರಿಕಾಲಚೋಳನ ವ್ರತ, ಆ ಮಾದಾರ ಚೆನ್ನಯ್ಯನ ಜಿಹ್ವೆ,
ಆ ಸುರಗಿಚೌಡಯ್ಯನ ಹಸ್ತ, ಆ ಚೋಳಿಯಕ್ಕನ ಬುದ್ಧಿ
ಇಷ್ಟೂ ಕೂಡಿ ಒಂದು ರೂಪಾದ ಭಕ್ತಗಲ್ಲದೆ
ರುಚಿಯಾರ್ಪಿತವಸಗುವದೆ ಶ್ರೀ ಬಸವಲಿಂಗಾ. ॥ ೨ ॥

## -?- ಶ್ರೀಮುಕ್ತಿರಾಮೇಶ್ವರ

೧೪೫೭

ಆಯಿವತ್ತೆರಡಕ್ಷರದ ವಾಕ್ಯ, ವೇದಶಾಸ್ತ್ರ ಪುರಾಣಾಗಮ ಶ್ರುತಿ ಸ್ಮೃತಿ
ದೇವವಾಕ್ಯವೆ೧[ಬಾ]ದ್ಯಕ್ಷರ ಬೇರುಂಟಾದರೆ
ನೋಯಬಹುದೆಂದ ಶ್ರೀಮುಕ್ತಿರಾಮೇಶ್ವರ. ॥ ೧ ॥

■ ■

## -?- ಸತ್ಯಕರಂಡಮೂರ್ತಿ ಸದಾಶಿವಲಿಂಗ

೧೪೫೮

ಘೃತ ಘೃತವ ಬೆರಸಿದಂತೆ
ನಿಮ್ಮ ಶ್ರೀಪಾದವ ಬೆರಸಿದನಯ್ಯಾ ಬಸವಣ್ಣ.
ಕ್ಷೀರ ಕ್ಷೀರವ ಬೆರಸಿದಂತೆ
ನಿಮ್ಮ ಶ್ರೀಪಾದವ ಬೆರಸಿದನಯ್ಯಾ ಚೆನ್ನಬಸವಣ್ಣ.
ಜ್ಯೋತಿ ಜ್ಯೋತಿಯ ಬೆರಸಿದಂತೆ
ನಿಮ್ಮ ಶ್ರೀಪಾದವ ಬೆರಸಿದನಯ್ಯಾ ಪ್ರಭು[ದೇವ].
ಬಯಲು ಬಯಲ ಬೆರಸಿದಂತೆ
ನಿಮ್ಮ ಶ್ರೀಪಾದವ ಬೆರಸಿದನಯ್ಯಾ ಮಡಿವಾಳಯ್ಯ.
ಬೆಳಗು ಬೆಳಗ ಬೆರಸಿದಂತೆ
ನಿಮ್ಮ ಶ್ರೀಪಾದವ ಬೆರಸಿದನಯ್ಯಾ ಸಿದ್ಧರಾಮಯ್ಯ.
ಇವರು ಮುಖ್ಯವಾದ ಏಳ್ನೂರೆಪ್ಪತ್ತಮರಗಣಂಗಳ
ಶ್ರೀಪಾದದಲ್ಲಿ ಉರಿ ಕರ್ಪುರ ಬೆರಸಿದಂತೆ ಬೆರಸಿದೆನಯ್ಯಾ,
ಭಕ್ತಿಪ್ರಿಯ ಸತ್ಯಕರಂಡಮೂರ್ತಿ ಸದಾಶಿವಲಿಂಗವೆ. ॥ ೧ ॥

■ ■

## -೭- ಸದ್ಗುರು ಚೆನ್ನಮಲ್ಲಿಕಾರ್ಜುನ

೧೪೫೯

ಸಪ್ತಕೋಟಿ ಮಹಾಮಂತ್ರ ಉಪಮಂತ್ರಂಗಳಿಗೆ ಲೆಕ್ಕವಿಲ್ಲ.
ಚಿತ್ತವ್ಯಾಕುಲನಾಗಿ ಭ್ರಮಿಸದಿರಾ, ಎಲೆ ಮನವೆ.
ಶಿವಶಿವಾ ಶಿವಶಿವಾ ಶಿವಶಿವಾ ಶಿವಶಿವಾ ಶಿವಶಿವಾ ನಮೋ ನಮೋ,
ಶಿವಶಿವಾ ಶಿವಶಿವಾ ಶಿವಶಿವಾ ಶಿವಶಿವಾ ಶಿವಶಿವಾ ಶರಣೆಂದಡೆ ಸಾಲದೆ ?
ಅದೆಂತೆಂದಡೆ :
ಶಿವೇತಿ ಮಂಗಲಂ ನಾಮ ಯಸ್ಯ ವಾಚಿ ಪ್ರವರ್ತತೇ ।
ಭಸ್ಮೀ ಭವಂತಿ ತಸ್ಯಾಸು ಮಹಾಪಾತಕಕೋಟಯಃ ॥
ಇಂತೆಂದುದಾಗಿ, ಎನಗಿದೆ ಮಂತ್ರ, ಎನಗಿದೆ ತಂತ್ರ,
ಎನಗಿದೆ ಗತಿ ಮತಿ ಚೈತನ್ಯವಯ್ಯಾ.
ಸದ್ಗುರು ಚೆನ್ನಮಲ್ಲಿಕಾರ್ಜುನಯ್ಯನ ತೋರಿದ
ಎನಗಿದೇ ಸಹಜಮಂತ್ರ. ॥ ೧ ॥

೧೪೬೦

ತನುವಿಡಿದು ದಾಸೋಹವ ಮಾಡಿ,
ಗುರುಪ್ರಸಾದಿಯಾದ ಬಸವಣ್ಣ,
ಮನವಿಡಿದು ದಾಸೋಹವ ಮಾಡಿ,

ಲಿಂಗಪ್ರಸಾದಿಯಾದ ಬಸವಣ್ಣ,
ಧನವಿಡಿದು ದಾಸೋಹವ ಮಾಡಿ,
ಜಂಗಮಪ್ರಸಾದಿಯಾದ ಬಸವಣ್ಣ,
ಇಂತೀ ತ್ರಿವಿಧವಿಡಿದು ದಾಸೋಹವ ಮಾಡಿ,
ಸದ್ಗುರು ಚೆನ್ನಮಲ್ಲಿಕಾರ್ಜುನಯ್ಯಾ,
ನಿಮ್ಮ ಶರಣ ಬಸವಣ್ಣ ಸ್ವಯಂಪ್ರಸಾದಿಯಾದನಯ್ಯಾ. ॥ ೨ ॥

■ ■

## -?- ಸದ್ಗುರು ಶಂಭುಸೋಮೇಶ್ವರ

೧೪೬೧

ಶಿವನೆ ಅಧಿಕನು, ಶಿವಭಕ್ತನೆ ಕುಲಜನು,
ಶಿವಪ್ರಸಾದದಿಂಧಿಕವಾವುದೂ ಇಲ್ಲವೆಂದುದು ಶ್ರುತಿ.
ಇದನರಿದು, ಸದ್ಗುರು ಶಂಭುಸೋಮೇಶ್ವರನ ಭಜಿಸಿ,
ಪ್ರಸಾದಸೇವನೆಯ ಮಾಡದಿರಲು, ಅಘೋರನರಕ ತಪ್ಪದು. ॥ ೧ ॥

## -೯- ಸದ್ಗುರುಪ್ರಿಯ ಶಿವಸಿದ್ಧರಾಮೇಶ್ವರ

೧೪೬೨

ಪೃಥ್ವಿ ಸಕಲವ ಧರಿಸಿಕೊಂಡಿಪ್ಪಂತೆ
ಶಿವಯೋಗಿ ಸಮಾಧಾನಿಯಾಗಿರಬೇಕು.
ಅಪ್ಪುವಿನ ನಿರ್ಮಳದಂತೆ ಶಿವಯೋಗಿ ನಿರ್ಮಳನಾಗಿರಬೇಕು.
ಪಾವಕನು ಸಕಲದ್ರವ್ಯಂಗಳ ದಹಿಸಿಯೂ
ಲೇಪವಿಲ್ಲದ ಹಾಂಗೆ ಶಿವಯೋಗಿ ನಿರ್ಲೇಪಿಯಾಗಿರಬೇಕು.
ವಾಯು ಸಕಲದ್ರವ್ಯಂಗಳಲ್ಲಿ ಸ್ಪರ್ಶನವ ಮಾಡಿಯೂ
ಆ ಸಕಲಗುಣವ ಮುಟ್ಟದ ಹಾಂಗೆ
ಶಿವಯೋಗಿ ಸಕಲಭೋಗಂಗಳ ಮುಟ್ಟಿಯೂ ಮುಟ್ಟದೆ
ನಿರ್ಲೇಪಿಯಾಗಿರಬೇಕು.
ಆಕಾಶವು ಸಕಲದಲ್ಲಿ ಪರಿಪೂರ್ಣವಾಗಿಹ ಹಾಂಗೆ
ಶಿವಯೋಗಿಯೂ ಸಕಲದಲ್ಲಿ ಪರಿಪೂರ್ಣನಾಗಿರಬೇಕು,
ಇಂದುವಿನಂತೆ ಶಿವಯೋಗಿ ಸಕಲದಲ್ಲಿ ಶಾಂತನಾಗಿರಬೇಕು.
ಜ್ಯೋತಿ ತಮವನಳಿದು ಪ್ರಕಾಶವ ಮಾಡುವ ಹಾಂಗೆ
ಶಿವಯೋಗಿಯೂ ಅವಿದ್ಯೆಯಂ ತೊಲಗಿಸಿ, ಸುವಿದ್ಯೆಯಂ ಮಾಡಬೇಕು.
ಇದು ಕಾರಣ, ಸದ್ಗುರುಪ್ರಿಯ ಶಿವಸಿದ್ಧರಾಮೇಶ್ವರನ
ಕರುಣವ ಹಡೆದ ಶಿವಯೋಗಿಗೆ ಇದೇ ಚಿಹ್ನವು. ॥ ೧ ॥

■ ■

## -?- ಸರ್ವೇಶ್ವರಲಿಂಗ

ಗಳ೬೩

ಉದುರಿ ಬೀಳುವನ್ನಕ್ಕ ನಿನ್ನ ಹಂಗು.
ಉದುರಿ ಬಿದ್ದಬಳಿಕ ಎನ್ನೊಡವೆ.
ನಾ ಪೂಜಿಸುವನ್ನಕ್ಕ ದೇವ.
ಎನ್ನ ಪೂಜೆಗೊಳಗಾದಲ್ಲಿ ನೀ ಭಕ್ತ, ನಾ ನಿತ್ಯ.
ಇಂತೀ ಸರ್ವ[ಮ]ಯವಸ್ತು ಬೀಜವಲಾ.
ಗರ್ವ ಮಲತ್ರಯದೂರ, ಸರ್ವಾಂಗ ಸಂತೋಷ ನಿಗರ್ವದ
ಸರ್ವೇಶ್ವರಲಿಂಗವು ತಥ್ಯಮಿಥ್ಯದವನಲ್ಲ. ॥ ೧ ॥

■ ■

## -?- ಸಿದ್ಧಲಿಂಗಪ್ರಿಯ ಬಸವಪ್ರಭುವೆ

೧೪೬೪

ಬಸವಣ್ಣ ಚೆನ್ನಬಸವಣ್ಣ ಪ್ರಭುಸ್ವಾಮಿ
ಮಡಿವಾಳ ಮಾಚಯ್ಯ ಹಡಪದಪ್ಪಣ್ಣ
ಅಕ್ಕಮಹಾದೇವಿ ನೀಲಲೋಚನೆಯಮ್ಮ
ಗಂಗಾಂಬಿಕೆ ಅಕ್ಕನಾಗಲಿ ಮುಕ್ತಾಯಕ್ಕ
ನಿಂಬೆಕ್ಕ ಚೋಳವ್ವೆ ಅಮ್ಮವ್ವೆ ಆದವ್ವೆ
ಕೋಳೂರು ಕೊಡಗೂಸಮ್ಮ ಗೊಗ್ಗವ್ವೆ ದುಗ್ಗಳವ್ವೆ
ಸುಗ್ಗಳವ್ವೆಯರ ಪಾದರಕ್ಷೆಯೊಳಗೆ
ಐಕ್ಯಪದವೀಯಯ್ಯ ಸಿದ್ಧಲಿಂಗಪ್ರಿಯ ಬಸವಪ್ರಭುವೆ
ನಿಮ್ಮ ಧರ್ಮ ನಿಮ್ಮ ಧರ್ಮ
ಈ ದೇವರ ಸೆರಗೊಡ್ಡಿ ಬೇಡಿಕೊಂಬೆನು.
ಪಾಲಿಸಯ್ಯಾ ಸ್ವಾಮಿ ದಯದಿಂದ
ಚಿದಾದಿತ್ಯ ನಿರೀಕ್ಷಣ ವಿಚಕ್ಷಣ.
ವಸ್ತುವ ಕಂಡರೆ ಸುಮ್ಮನಿರುವುದುಚಿತವಯ್ಯಾ.
ಅಂತಲ್ಲದೆ ಹೆಮ್ಮೆಗೆ ನುಡಿದಡೆ ಉಚಿತವಲ್ಲವಯ್ಯಾ
ನೀನಾನೆಂಬುಭಯವಳಿದಾತಂಗೆ ಏನೂ ಇಲ್ಲವಯ್ಯಾ
ವಿರಕ್ತರೆಂಬವರು ಸ್ತುತಿ ನಿಂದ್ಯಾದಿಗಳಿಗೆ ಹೆದರಿರಬೇಕಯ್ಯ,
ಸಿದ್ಧಲಿಂಗಪ್ರಿಯ ಪ್ರಭುವೆ. ॥ ೧ ॥

■ ■

## -?- ಸೋಮಭೀಮೇಶ್ವರಲಿಂಗ

೧೪೬೫

ಪದಾರ್ಥದೊಳಗೆ ಪ್ರಸಾದರೂಪುಂಟು.
ಪ್ರಸಾದದೊಳಗೆ ಪದಾರ್ಥರೂಪುಂಟು.
ಉಂಟು ಇಲ್ಲಾಯೆಂಬವರು ನೀವು ತಿಳಿದು ನೋಡಿರಯ್ಯಾ.
ನಾವಿದನರಿಯೆವಯ್ಯಾ.
ಸೋಮಭೀಮೇಶ್ವರಲಿಂಗವು ತಾವೇ ಬಲ್ಲರು. ॥ ೧ ॥

■ ■

## -?- ಹಾಟಕೇಶ್ವರಲಿಂಗ

೧೪೬೬

ಪ್ರಥಮಪಾದದಲ್ಲಿ ರುದ್ರತತ್ವ, ಅದು ಘಟಿಸಿದಲ್ಲಿ ಈಶ್ವರತತ್ವ.
ಆ ಉಭಯಲೀಲೆಯಡಗಿದಲ್ಲಿ ಸದಾಶಿವತತ್ವ.
ಈ ತ್ರಿವಿಧಲೀಲೆ ಏಕಾರ್ಥವಾದಲ್ಲಿ, ಪರಶಿವತತ್ವದ ಪರಮಪ್ರಕಾಶ.
ಇದರಿಂದ ಮೀರುವ ತೆರನುಂಟಾದಡೆ ನೀವು ಹೇಳಿ, ನಾ ಮಾಕೊಳ್ಳೆನು.
ನೀವು ಹೇಳಿದಂತೆ ಮಹಾಪ್ರಸಾದ ಪೂರ್ವದಲ್ಲಿ :
ಆರು ಶೈವದ ಭೇದ, ಮೂರು ಶೈವದ ಭಜನೆ, ಷಡ್ದರ್ಶನದ ತರ್ಕ.
ಇಂತಿವೆಲ್ಲವನುದ್ಧರಿಸಬಂದ ಪ್ರಭು ಬಸವಣ್ಣ ಚೆನ್ನಬಸವಣ್ಣ
ಇಂತಿವರೊಳಗಾದ ಪ್ರಮಥರು ಸ್ವತಂತ್ರ ಸಂಬಂಧಿಗಳು
ಸುಮನರು ವಿಮಲರು ಖಂಡಿತರು ಅಖಂಡಿತರು
ಪೂರ್ಣರು ಪರಿಪೂರ್ಣರು ಸೀಮರು ನಿಸ್ಸೀಮರು ದ್ವೈತರು ಅದ್ವೈತರು,
ಸಮಯಕ್ಕೆ ಬಹರು, ಸಮಯಕ್ಕೆ ಬಾರದೆ ಇಹರು,
ಕಟ್ಟಿಂಗೆ ಬಹರು, ಕಟ್ಟ ಮೀರಿ ಒಪ್ಪಿಪ್ಪರು.
ಇಂತೀ ಪ್ರಮಥರಲ್ಲದ ಏಳುನೂರೆಪ್ಪತ್ತು ಅಮರಗಣಂಗಳು,
ಬಂದ ಬಂದ ಸ್ಥಳದಲ್ಲಿ ಮುಕ್ತರು, ನಿಂದ ನಿಂದ ಸ್ಥಳದಲ್ಲಿ ನಿರುತರು.
ಮೂರುಸ್ಥಲದ ಮೂರ್ತಿಯಂ ಕಂಡು, ಆರುಸ್ಥಲವ ಕೂಡಿಕೊಂಡು,
ಮೂವತ್ತಾರರಲ್ಲಿ ಅರಿದು, ಇಪ್ಪತ್ತೈದರಲ್ಲಿ ವೇಧಿಸಿ,
ನೂರರಲ್ಲಿ ಸಂದಳಿದು, ಒಂದರಲ್ಲಿ ನಿಂದುದಕ್ಕೆ ಕುರುಹಾವುದಯ್ಯಾ ಎಂದಡೆ,
ಮಾಯಾಗುಣಮಲ ನಾಸ್ತಿಯಾಗಿರಬೇಕು,
ಹಾಟಕೇಶ್ವರಲಿಂಗವನರಿದ ಶರಣನ ಇರವು. ॥ ೧ ॥

■ ■

# ಅನುಬಂಧ

# ಕಠಿಣ ಪದಕೋಶ

## ಅ

ಅಂಗನೆ–ಹೆಣ್ಣು
ಅಂಗವಿಸು–ಇಷ್ಟಪಡು, ಸಮ್ಮತಿಸು
ಅಂಗುಲಿ–ಬೆರಳು
ಅಂತಕ–ಯಮ
ಅಂತುವ–ಗುಟ್ಟು
ಅಂದಳ–ಪಲ್ಲಕ್ಕಿ
ಅಂಬರ–ಆಕಾಶ
ಅಂಬು–ನೀರು
ಅಂಬುಧಿ–ಸಮುದ್ರ
ಅಕ್ಕಾಡು–ಚೆಲ್ಲು, ಹೊರಸೂಸು
ಅಕ್ಷಿ–ಕಣ್ಣು
ಅಗಡ–ಹಂಗು (?)
ಅಗಮ್ಯ–ತಿಳಿಯಲಿಕ್ಕೆ ಬಾರದ
ಅಗ್ಘವಣಿ–ಪವಿತ್ರ ನೀರು
ಅಗಲು–ತಾಟು
ಅಜ–ಬ್ರಹ್ಮ, ಆಡು
ಅಟಗೋಲ–ನಿಚ್ಚಣಿಕೆ
ಅಟಮಟ–ಮೋಸ
ಅಡಗ–ಮಾಂಸ
ಅಡಸು–ಇಲ್ಲದಾಗು
ಅತ್ಯತಿಷ್ಠದ್ದಶಾಂಗುಲ–ಜಗತ್ತನ್ನು ತುಂಬಿ ಹತ್ತು ಅಂಗುಲ ಮೇಲಿದ್ದವ
ಅಧರ–ತುಟಿ
ಅಧ್ವರ–ಸಂಹಾರ
ಅಪರ–ಅತ್ಯುತ್ತಮ, ಪಶ್ಚಿಮ ದಿಕ್ಕು, ಅನಂತರ ಹುಟ್ಟಿದ ಸೃಷ್ಟಿ
ಅಪ್ಪು–ನೀರು
ಅಬ್ಧಿ–ಸಮುದ್ರ
ಅಭವ–ಶಿವ
ಅಭಿಧಾನ–ಹೆಸರು
ಅಭಿಸಂಧಿ–ಸೇರಿಕೆ, ಮೇಳ
ಅಮಳೋಕ್ಯ–ಗಂಟಲು, ಕೊರಳು, ಬಾಯಿ
ಅಮೇಧ್ಯ–ಹೇಸಿಕೆ, ಮಲ
ಅರತ–ಒಣಗಿದ, ಇಲ್ಲವಾದ
ಅರಳ–ಹೂವು
ಅರಿ–ಕತ್ತರಿಸು
ಅರೋಚಕ–ಬೇಸರವನ್ನುಂಟುಮಾಡುವ
ಅರ್ಣವ–ಸಮುದ್ರ
ಅರ್ತಿ–ಪ್ರೀತಿ
ಅವಗಡೆ–ತೊಂದರೆ, ಅಡ್ಡಿ
ಅವಗವಿಸು–ಲೀನವಾಗು
ಅವಧರಿಸು–ಕೇಳು, ಸ್ವೀಕರಿಸು
ಅವಧಾನ–ಎಚ್ಚರಿಕೆ
ಅಶ್ವ–ಕುದುರೆ
ಅಶನ–ಆಹಾರ
ಅಷ್ಟೋತ್ತರಶತ–ನೂರೆಂಟು
ಅಸಿ–ಸಣ್ಣದಾದ, ಖಡ್ಗ
ಅಸ್ಥಿ–ಎಲುವು
ಅಸು–ಪ್ರಾಣ
ಅಹಿ–ಹಾವು
ಅಳಿ–ಭ್ರಮರ, ದುಂಬಿ
ಅಳುಪು–ಬಯಸು, ಆಸೆಪಡು

## ಆ

ಆಗುಚೇಗೆ–ಲಾಭ ನಷ್ಟ, ಸುಖ ದುಃಖ
ಆಚಮನ–ಅಂಗೈಯಲ್ಲಿ ನೀರನ್ನು ಹಾಕಿಕೊಂಡು ಮಂತ್ರಪೂರ್ವಕ ಕುಡಿಯುವುದು
ಆನತ–ವಂದಿಸಲ್ಪಟ್ಟ
ಆಪ್ಯಾಯನ–ಸುಖ, ಹಿತ
ಆಪೋಷಣ–ಕೈಯಿಂದ ನೀರು ಮುಕ್ಕಳಿಸುವುದು

ಆರಡಿ– ಭ್ರಮರ, ದುಂಬಿ
ಆರಂಬ– ಬೇಸಾಯ, ಒಕ್ಕಲುತನ
ಆರವೆ– ಉದ್ಯಾನ
ಆರೋಗಣೆ– ಊಟ
ಆಲಯ– ಮನೆ
ಆಲಾಪ– ಮಾತು
ಆಲಿ– ಕಣ್ಣಿನ ಗುಡ್ಡೆ
ಆವು– ಆಕಳು
ಆಳಿಗೊಳ್– ತಿರಸ್ಕಾರ ಮಾಡು

**ಇ**

ಇಂದ್ರಚಾಪ– ಕಾಮನ ಬಿಲ್ಲು
ಇಕ್ಷುದಂಡ– ಕಬ್ಬು
ಇರುಳು– ರಾತ್ರಿ

**ಈ**

ಈರೇಳು– ಹದಿನಾಲ್ಕು
ಈವ– ಕೊಡುವ

**ಉ**

ಉಂಗುಷ್ಠ– ಹೆಬ್ಬೆರಳು
ಉಚ್ಛಿಷ್ಟ– ಎಂಜಲು
ಉಡುಪತಿ– ಚಂದ್ರ
ಉದಕ– ನೀರು
ಉದ್ದಂಡ– ಗರ್ವ, ಅಹಂಕಾರ
ಉಪಧಾವಿಸು– ಉಪಚರಿಸು
ಉಪಾಧಿಕ– ತೋರಿಕೆಯ
ಉಭಯಮಾರ್ಗ– ಪಾದಮಾರ್ಗ
ಜಲಮಾರ್ಗ
ಉರಗಾಭರಣ– ಶಿವ
ಉರವಣೆ– ಆತುರ
ಉರುಹು– ಸುಡು
ಉಲುಹು– ಮಾತು, ಶಬ್ದ

**ಊ**

ಊಣೆಯ– ದೋಷ

**ಎ**

ಎಗ್ಗ– ದಡ್ಡ, ಮೂರ್ಖ
ಎಚ್ಚು– ಎಸೆ
ಎಡೆಯಾಟ– ತಿರುಗಾಟ
ಎರಕ– ಪ್ರೀತಿ
ಎರಗು– ನಮಸ್ಕರಿಸು
ಎಲವ– ಬೂರುಗ
ಎಸಕ– ರೀತಿ

**ಐ**

ಐದೆನು– ಏನು ಮಾಡುವೆನು

**ಒ**

ಒಕ್ಕಲಿಕ್ಕು– ನಾಶಪಡಿಸು
ಒಕ್ಕುಡಿತೆ– ಒಂದು ಬೊಗಸೆ
ಒಚ್ಚತ– ಅತಿಶಯ, ಸಮರಸ
ಒಡಗಲಿಸು– ಬೆರಸು, ಕೂಡಿಸು
ಒಡಲ ಹೊರೆ– ಹೊಟ್ಟೆ ತುಂಬಿಸಿಕೊಳ್ಳು
ಒತ್ತಿನಲ್ಲಿ– ಹತ್ತಿರದಲ್ಲಿ
ಒದಗು– ಸಿಗು, ಲಭ್ಯವಾಗು
ಒಪ್ಪಚ್ಚಿ– ಸ್ವಲ್ಪ, ಒಂದಿಷ್ಟು
ಒಬ್ಬುಳಿತೆ– ಗುಂಪು
ಒಯ್ಯನೆ– ಮೆಲ್ಲನೆ
ಒರಲು– ಕೂಗು, ಅರಚು
ಒಲವರ– ಪ್ರೀತಿ
ಒಳ್ಳೆ– ನೀರಹಾವು

**ಓ**

ಓಗರ– ಅನ್ನ, ಆಹಾರ
ಓಜೆ– ಕ್ರಮ, ರೀತಿ
ಓಡ– ಹಂಚು, ತೆವಿ
ಓಪು– ಪ್ರೀತಿ
ಓವರಿ– ಒಳಗೆ
ಓಸರಿಸು– ಹಿಂಜರಿ

## ಔ

ಔಂಕು– ಅದುಮು, ಒತ್ತು

## ಕ

ಕಂಕುಳ– ಬಗಲು
ಕಂಜಪತ್ರ– ಕಮಲದ ಎಲೆ
ಕಂಠೀರವ– ಆನೆ
ಕಂತುಕ– ಆಟದ ಚೆಂಡು
ಕಂಥೆ– ಜೋಳಿಗೆ
ಕಂದಳ– ಮಣ್ಣಿನ ಪಾತ್ರೆ
ಕಂಬಳ– ದಿನಗೂಲಿ
ಕಕ್ಕುಲತೆ– ಪ್ರೀತಿ
ಕಚ್ಚುಟ– ಲಂಗೋಟಿ
ಕಜ್ಜ– ಕಾರ್ಯ
ಕಟಿ– ಸೊಂಟ
ಕಡಗು– ತವಕಿಸು, ಉತ್ಸಾಹಿಸು
ಕಡವರ– ಸಂಪತ್ತು
ಕಡುಹ– ಪರಾಕ್ರಮ
ಕಡೆಯಾಣಿ– ಚೊಕ್ಕಬಂಗಾರ
ಕನಲಿಕೆ– ಸಿಟ್ಟು
ಕನ್ನ– ಕಳ್ಳತನ
ಕಪ್ಪಡ– ಬಟ್ಟೆ
ಕಪಾಲ– ತಲೆಬುರುಡೆ
ಕಪಿಲೆ– ಆಕಳು
ಕಮರಿ– ಕೊರಕಲು, ಕಣಿವೆ
ಕರಗ– ಪಾತ್ರೆ, ಕೊಡ
ಕರಂಡ– ಪೆಟ್ಟಿಗೆ, ಬುಟ್ಟಿ
ಕರವಾಳ– ಖಡ್ಗ
ಕರ್ಪರ– ಭಿಕ್ಷಾಪಾತ್ರೆ
ಕಳತ್ರ– ಹೆಂಡತಿ
ಕಾಂಕ್ಷೆ– ಬಯಕೆ, ಆಸೆ
ಕಾಕು– ಕೆಟ್ಟ, ವ್ಯರ್ಥ
ಕಾರಣಿಕ– ಮಹಾಪುರುಷ
ಕಾರಮೇಘ– ಕಪ್ಪುಮೋಡ
ಕಾರುಕ– ಶಿಲ್ಪಿ
ಕಾರ್ಪಣ್ಯ– ದೀನಸ್ಥಿತಿ
ಕಾಷಾಂಬರ– ಕಾವಿಯ ಬಟ್ಟೆ
ಕಾಷ್ಠ– ಕಟ್ಟಿಗೆ
ಕಾಸು– ನಾಣ್ಯವಿಶೇಷ
ಕಾಳಕೂಟ– ಕೆಟ್ಟವಿಷ
ಕಾಳಿಕೆ– ದೋಷ
ಕಿಂಕರ– ಸೇವಕ
ಕಿರಾತ– ಬೇಡ
ಕಿಸುವಾಯರು– ಅಡ್ಡಾದಿಡ್ಡಿ ಮಾತಾಡುವವರು
ಕುಂಜರ– ಆನೆ
ಕುಕ್ಕುಟ– ಕೋಳಿ
ಕುಕ್ಕುಳಗುದಿ– ಸಂಕಟಪಡು
ಕುಕ್ಷಿ– ಹೊಟ್ಟೆ
ಕುತ್ತಿ– ಆನಿಕೆ
ಕುದಿ– ತವಕಿಸು
ಕುಪ್ಪಟ (ಖುರಪುಟ ?)– ಕುದುರೆಯ ಕಾಲಿನ ಸಪ್ಪಳ
ಕುಪ್ಪಸ– ಅಂಗಿ
ಕುಪ್ಪಿಗೆ– ಕುಡಿಕೆ, ಬಟ್ಟಲು
ಕುರುಕು– ತಿನ್ನು
ಕುರುಳ್– ಕೂದಲು
ಕು(ಕಿ)ಸಕುಳ– ಕ್ಷುದ್ರ, ಹೊಲಸು
ಕೂಪ– ತಗ್ಗು
ಕೂರ್ಮ– ಆಮೆ
ಕೆಮ್ಮನೆ– ಸುಮ್ಮನೆ
ಕೆಯ್– ಹೊಲ
ಕೇಣಸರ– ಹೊಟ್ಟೆಕಿಚ್ಚು
ಕೇಣಿಕಾರ– ಗುತ್ತಿಗೆದಾರ, ವರ್ತಕ
ಕೇಶ– ಕೂದಲು
ಕೇಸರಿ– ಸಿಂಹ
ಕೈದು– ಆಯುಧ
ಕೈಯಾನು– ಬೇಡು, ಆಸೆಪಡು

ಕೈಸಾರು– ಲಭಿಸು, ವಶವಾಗು
ಕೊಂಡಾಡು– ಹೊಗಳು, ಸ್ತುತಿಸು
ಕೊನರು– ಚಿಗುರು
ಕೊಳಗ– ಅಳತೆ ವಿಶೇಷ
ಕೋಟಲೆ– ತೊಂದರೆ
ಕೋಡಗ– ಮಂಗ
ಕೋಳ– ಬೇಡಿ
ಕೋಳುಹೋಗು– ಲೂಟಿಯಾಗು
ಕೌಪ– ಲಂಗೋಟಿ
ಕ್ರಮುಕ– ಅಡಿಕೆ, ಒಗರು
ಕ್ಷಾರ– ಹುಳಿ
ಕ್ಷೀರ– ಹಾಲು
ಕ್ಷುಧೆ– ಹಸಿವು

**ಖ**

ಖಂಡುಗ– ಅಳತೆ ವಿಶೇಷ
ಖಂಡೆಯ– ಖಡ್ಗ
ಖಗ– ಪಕ್ಷಿ
ಖುಲ್ಲತನ– ನೀಚತನ
ಖೇಚರ– ಪಕ್ಷಿ

**ಗ**

ಗಂಜಳ– ಮೂತ್ರ, ಕೆಟ್ಟವಾಸನೆ
ಗಡಣ– ಸಮೂಹ, ಗುಂಪು
ಗಡಣೆ– ಜ್ಞಾನ, ವಿಚಾರ
ಗಣಿಕೆ– ಸೂಳೆ
ಗದಕ– ಮೋಸ, ಕಪಟ
ಗರ– ದೆವ್ವ
ಗಸಣೆ– ತೊಂದರೆ, ಆಯಾಸ
ಗಹ್ವರ– ಗವಿ
ಗಳೆ– ಕೋಲು
ಗಾರು– ಹಿಂಸೆ, ಗಾಸಿ
ಗಾರ್ದಭ– ಕತ್ತೆ
ಗಾವಳಿ– ಗುಂಪು
ಗಾವಿಲ– ಮೂಢ, ಗ್ರಾಮೀಣ
ಗುಂಗುದಿ– ಸಂತಾಪ, ದುಃಖ
ಗುಜ್ಜ– ಗಿಡ್ಡ
ಗುಡ್ಡ– ಶಿಷ್ಯ
ಗುಡಿ– ಧ್ವಜ
ಗುಡಿಗಟ್ಟು– ಗುಂಪುಗೂಡು
ಗುದಿಗೆ– ಬಡಿಗೆ, ಕೋಲು
ಗೆರಸಿ– ಮೊರ
ಗೊಂಟು– ಮೂಲೆ
ಗ್ರಾಸ– ಆಹಾರ

**ಘ**

ಘಟ– ದೇಹ
ಘಾಟಿಕೆ– ಗುಳಿಗೆ
ಘೃತ– ತುಪ್ಪ

**ಚ**

ಚಂದನ– ಶ್ರೀಗಂಧ
ಚುನ್ನವಾಡು– ನಿಂದಿಸು, ಅಪಹಾಸ್ಯ ಮಾಡು
ಚೂರ್ಣ– ಪುಡಿ
ಚೋದ್ಯ– ಆಶ್ಚರ್ಯ
ಚೌಷಷ್ಠಿ– ಅರುವತ್ತನಾಲ್ಕು

**ಜ**

ಜಂಗುಳಿ– ಗುಂಪು
ಜಂಬುಕ– ನರಿ
ಜಟಾ– ಕೂದಲು
ಜರೆ– ಮುಪ್ಪು
ಜವ– ಯಮ
ಜವನಿಕೆ– ಪರದೆ, ಅಡ್ಡ ತೆರೆ
ಜವುಗು– ತಂಪಾಗಿರುವ ನೆಲ
ಜಾವಳ– ಹೀನ
ಜಾಹೆ– ನಿದ್ರೆ
ಜಿಹ್ವೆ– ನಾಲಗೆ

ಜೇವಡೆ–ಬಿಲ್ಲಿನ ಹೆದೆ ಏರಿಸಿ ಮಾಡುವ ಧ್ವನಿ
ಜ್ಞಪ್ತಿ–ನೆನಪು, ಅರಿವು

**ಠ**

ಠಾವು–ಸ್ಥಳ

**ಡ**

ಡಂಬು–ತೋರಿಕೆ, ಮೋಸ
ಡಿಂಗರಿಗ–ಸೇವಕ
ಡುಂಡುಕ–ಡುಂಡುಭಿ, ನೀರಹಾವು

**ಢ**

ಢವಳಾದ–ದೇವಾಲಯ, ಅರಮನೆ

**ತ**

ತಂಡುಲ–ಅಕ್ಕಿ
ತಟಾಕ–ಕೆರೆ
ತಟ್ಟುಮುಟ್ಟು–ಸುಖದುಃಖಾನುಭವ
ತತ್ತು–ಹೊಂದಿಕೆ, ಜೋಡಣೆ
ತದ್ಗತ–ಅದರಿಲ್ಲಿಲೀನವಾದ
ತನುಜ–ಮಗ
ತಪ್ಪಲು–ಬೆಟ್ಟದ ಮಗ್ಗಲು
ತಮ–ಕತ್ತಲು
ತಮ್ಮಡಿ–ಯತಿ
ತರು–ಗಿಡ
ತರ್ಜನಿ–ಹೆಬ್ಬೆರಳಿನ ಪಕ್ಕದ ಬೆರಳು
ತಲ್ಲಣ–ಗಳವಳ
ತವರಾಜ–ಒಂದು ವಿಧದ ಸಕ್ಕರೆ
ತಳುವು–ತಡಮಾಡು
ತಾಗು ನಿರೋಧ–ಅಡ್ಡಿ
ತಾರ್ಕಣೆ–ಹೊಂದಿಕೆ
ತಿತ್ತಿ–ಚೀಲ
ತಿಲ–ಎಳ್ಳು
ತುಷ–ಹೊಟ್ಟು
ತೂತ–ಕಪಟ, ಮೋಸ
ತೂರ್ಯಾತೂರ್ಯ–ಪರಮಾನಂದ
ತೃಣ–ಹುಲ್ಲು
ತೃಷೆ–ನೀರಡಿಕೆ
ತೆತ್ತಿಗ–ಸೇವಕ
ತೆತ್ತೀಸ–ಮೂವತ್ತಮೂರು
ತೇಜ–ಬೆಂಕಿ
ತೊಂಡ–ತೊಡುಗ
ತೊಟ್ಟು–ತುದಿ, ತುಂಬು
ತೊತ್ತಳದುಳಿ–ನುಗ್ಗುನುರಿಯಾಗು, ಹಾಳು ಮಾಡು
ತೊತ್ತು–ಸೇವಕ
ತೋಟಿ–ಜಗಳ
ತೋರದ–ದೊಡ್ಡದಾದ
ತ್ವಕ್–ಚರ್ಮ
ತ್ರಾಹಿ–ಕಾಪಾಡು

**ದ**

ದಂತಿ–ಆನೆ
ದಂದುಗ–ತೊಂದರೆ
ದಗ್ಧಪಟ–ಸುಟ್ಟ ಅರಿವೆ
ದಧಿ–ಮೊಸರು
ದಶಗ್ರೀವ–ರಾವಣ
ದಾನವ–ರಾಕ್ಷಸ
ದಿಟ–ನಿಜ
ದಿಮ್ಮಿತ–ದೊಡ್ಡದಾದ
ದಿವ–ಹಗಲು
ದುಮ್ಮಾನ–ದುಃಖ
ದುರಿತ–ಪಾಪ
ದೂಸಿ–ಧಾನ್ಯವಿಶೇಷ
ದೃಕ್–ಕಣ್ಣು
ದೇದೀಪ್ಯ–ಹೊಳೆ, ಪ್ರಕಾಶಿಸು
ದೇಹಾರ–ದೇವಾಲಯ

**ಧ**

ಧಾವತಿ–ಕಷ್ಟ

### ನ

ನಖ–ಉಗುರು
ನಟ್ಟುವ–ನಟ, ನರ್ತಕ
ನರಗುರಿ–ಹೇಡಿ, ಕೈಲಾಗದವ
ನವನೀತ–ಬೆಣ್ಣೆ
ನಳಿನಮಿತ್ರ–ಸೂರ್ಯ
ನಾಣು–ನಾಣೆಕೆ
ನಾಭಿ–ಹೊಕ್ಕಳು
ನಾರಿವಾಳ–ತೆಂಗು
ನಾಸಿಕ–ಮೂಗು
ನಾಸ್ತಿ–ಇಲ್ಲವಾಗು, ಅಳಿ
ನಿಕ್ಷೇಪ–ಸಂಪತ್ತು, ಅಡಗಿದ
ನಿಟಿಲ–ಹಣೆ
ನಿಟ್ಟೈಸು–ದಿಟ್ಟಿಸಿ ನೋಡು
ನಿಧಾನ–ಸಂಪತ್ತು
ನಿಬದ್ಧಿ–ಒಂದಾದ, ಸೇರಿದ
ನಿರ್ವಾಹ–ಐಕ್ಯ
ನಿವೇದಿಸು–ಅರ್ಪಿಸು, ಹೇಳು
ನಿಹಿತ–ಸ್ವರೂಪ
ನೀರಜ–ದೋಷರಹಿತ
ನೀಲಪಟರು–ತಾಂತ್ರಿಕ ಪಂಥದವರು
ನುಚ್ಚುನುರಿ–ಪುಡಿಪುಡಿಯಾದುದು
ನೆಮ್ಮು–ನಂಬು
ನೇಣು–ಹಗ್ಗ
ನೇತಿಗಳೆ–ಅಲ್ಲಗಳೆ
ನೊಸಲು–ಹಣೆ
ನೊಸಲಕ್ಷರ–ವಿಧಿಲಿಖಿತ, ಹಣೆಬರಹ
ನೋಂಪಿ–ವ್ರತ

### ಪ

ಪಂಚವಿಂಶತಿ–ಇಪ್ಪತ್ತೈದು
ಪಂಚಾಶತ–ಐದುನೂರು
ಪಂಥ–ಪ್ರತಿಜ್ಞೆ
ಪಡಿಪುಚ್ಚ–ಪ್ರತಿಪ್ರಶ್ನೆ, ಪ್ರಶ್ನಾರ್ಹ
ಪಡುಗ–ಮಾಂಸ, ಹೊಲಸು
ಪತಿಕರಿಸು–ಉದ್ಧರಿಸು
ಪನ್ನಗ–ಹಾವು
ಪರ–ಮೋಕ್ಷ, ಸ್ವರ್ಗ
ಪರಿತಾಪ–ದುಃಖ, ತಳಮಳ
ಪರುಷರಸ–ಮುಟ್ಟಿದುದನ್ನು ಬಂಗಾರ–ವನ್ನಾಗಿಸುವ ರಸ
ಪರ್ಣ–ಎಲೆ
ಪಲ್ಲಟಿಸು–ಆಸೆಪಡು, ಇಚ್ಛಿಸು
ಪಲ್ಲವ–ಚಿಗುರು
ಪವನ–ಗಾಳಿ
ಪಾಕುಳ–ಹೊಲಸು, ಕ್ಷುದ್ರ
ಪಾಣಿ–ಕೈ
ಪಾಯಾಳು–ಕಾಲ್ದಳ
ಪಾರದ್ವಾರ–ಹಾದರ
ಪಾವಕ–ಬೆಂಕಿ
ಪಾಶ–ಹಗ್ಗ, ಬಂಧನ
ಪಾಷಂಡಿ–ದೇವರನ್ನು ನಂಬದವ
ಪಾಷಾಣ–ಕಲ್ಲು
ಪಿಪೀಲಿಕ–ಇರುವೆ
ಪಿಸಿತ–ಮಾಂಸ
ಪುತ್ಥಳಿ–ಬೊಂಬೆ
ಪುಳಿಂದ–ಬೇಡ
ಪೃಷ್ಠ–ಬೆನ್ನು
ಪೆರತು–ಬೇರೆಯದು
ಪೋಟ–ಹೇಡಿ
ಪ್ರಹರಿ–ಕಾವಲು

### ಬ

ಬಂಟ–ಸೇವಕ
ಬಗದಳ–ಹುಣ್ಣು
ಬಚ್ಚಣೆ–ಮುಸುಕು, ಮುಖವಾಡ
ಬಟ್ಟಿತ–ದೊಡ್ಡದಾದ
ಬಟ್ಟೆ–ದಾರಿ

ಬಣ್ಣಗೆಡು– ನಿಜಸ್ವರೂಪ ಬದಲಾಯಿಸು
ಬತ್ತೀಸ– ಮೂವತ್ತೆರಡು
ಬರಡು– ಬಂಜೆ, ಗೊಡ್ಡು
ಬರಿದೊರೆಯಾಗು– ವ್ಯರ್ಥವಾಗು
ಬರು– ವ್ಯರ್ಥ
ಬರುಬಾಯ– ನಿರುಪಯುಕ್ತ
ಬರುಸೂರೆವೋಗು– ವ್ಯರ್ಥವಾಗು
ಬಲುಹು– ಬಲವಂತ, ಒತ್ತಾಯ
ಬಸುರ– ಹೊಟ್ಟೆ
ಬಳ್ಳ– ಅಳತೆ ವಿಶೇಷ
ಬಾತೆ– ಪ್ರಯೋಜನ
ಬಾವನ್ನ– ಶ್ರೀಗಂಧ, ಐವತ್ತೆರಡು
ಬಾಹು– ತೋಳ
ಬಿಟ್ಟಿ– ಪುಕ್ಕಟೆ ಕೆಲಸ
ಬಿನದ– ವಿನೋದ, ಸಂತೋಷ
ಬಿನ್ನಾಣ– ರೀತಿ
ಬಿನುಗ– ನೀಚ, ಹೀನ
ಬಿಜಯಂಗೆಯ್– ಆಗಮಿಸು, ಹೋಗು
ಬೀಸರವೋಗು– ನಾಶವಾಗು
ಬೆಂಬಳಿ– ಸಹಾಯ, ಬೆನ್ನು ಹಿಂದೆ, ಜೊತೆ
ಬೆಗಡ– ಆಶ್ಚರ್ಯ
ಬೆಚ್ಚು– ಅಂಜಿಕೆ
ಬೆಳ್ಳ– ಅಂಜುಬುರುಕ
ಬೇಗೆ– ಬೆಂಕಿ, ಜಳ
ಬೇಟ– ಪ್ರೀತಿ, ಅನುರಾಗ
ಬೊಂತೆ– ಕೌದಿ
ಬೊಜಗ– ಜಾರ, ವಿಟ
ಬೋನ– ಅನ್ನ, ಆಹಾರ
ಬೋಹರಿಸು– ಸ್ವಚ್ಛಮಾಡು

## ಭ

ಭಂಡ– ಸರಕು
ಭಜನೆ– ಸ್ತುತಿ
ಭವಭಾರಿ– ಜನ್ಮಜನ್ಮಗಳಲ್ಲಿ ಸುತ್ತುವವ
ಭಾಂಡ– ಪಾತ್ರೆ
ಭಾಜನ– ಪಾತ್ರೆ
ಭಾನು– ಸೂರ್ಯ
ಭಿತ್ತಿ– ಗೋಡೆ
ಭೀಷ್ಮತೆ– ಪ್ರಖರತೆ, ಭಯಂಕರತೆ
ಭುಕ್ತಿ– ಉಪಭೋಗ
ಭೂಷಣ– ತೊಡಿಗೆ, ಆಭರಣ
ಭೃತ್ಯ– ಸೇವಕ

## ಮ

ಮಂಡೂಕ– ಕಪ್ಪೆ
ಮಂಡೆ– ತಲೆ
ಮಂದೆ– ಹಿಂಡು, ಗುಂಪು
ಮಕರ– ಮೊಸಳೆ
ಮಖ– ಯಜ್ಞ
ಮಚ್ಚರ– ಮತ್ಸರ
ಮಜ್ಜನ– ಸ್ನಾನ
ಮಟ್ಟಿ– ಪವಿತ್ರ ಮಣ್ಣು
ಮಠ– ಮನೆ
ಮಣಿಹ– ಕರ್ತವ್ಯ
ಮದಕರಿ– ಆನೆ
ಮದನಪಿತ– ವಿಷ್ಣು
ಮದಾಳಿ– ಭ್ರಮರ, ದುಂಬಿ
ಮದ್ದು– ಔಷಧ
ಮಧುಕರ– ಭ್ರಮರ, ದುಂಬಿ
ಮನಗುಂದು– ನಿಸ್ತೇಜವಾಗು
ಮನಸಿಜ– ಕಾಮ
ಮಯೂರ– ನವಿಲು
ಮರಾಳ– ಹಂಸ
ಮರುಜವನಿ– ಸಂಜೀವಿನಿ
ಮರ್ಕಟ– ಮಂಗ
ಮಲಯಜ– ಶ್ರೀಗಂಧ
ಮಲೆ– ಪರ್ವತ
ಮಸಕ– ಹೆಚ್ಚಳ, ತಳಮಳ, ಕಪಟ

ಮಸಕು–ತಾಗು
ಮಹ–ಪರಮಾತ್ಮ
ಮಹಿಷ–ಎಮ್ಮೆ
ಮಹೀತಳ–ಭೂಮಿ
ಮಾಟ–ಕ್ರಿಯೆ, ಆಚರಣೆ
ಮಾತಂಗ–ಆನೆ
ಮಾಯಿಕ–ಮೋಸ
ಮಾರ–ಕಾಮ
ಮಾರಾರಿ–ಶಿವ
ಮಾರುತ–ಗಾಳಿ
ಮಾರ್ಜಾಲ–ಬೆಕ್ಕು
ಮಾಳ–ಬಯಲು
ಮಿಟ್ಟೆಯಭಂಡ–ಮೂರ್ಖ
ಮಿಣಿ–ಹಗ್ಗ
ಮಿಥ್ಯ–ಸುಳ್ಳು
ಮುಂಡಿಗೆ–ಒಗಟು, ಸವಾಲು
ಮುಂಬಲ್ಲು–ಮುಂದಿನ ಹಲ್ಲು
ಮುಕುರ–ಕನ್ನಡಿ
ಮುಡುಹ–ಭುಜ
ಮುಸುಕರ್ಮಿ–ಗುಮ್ಮನಗುಸುಗ
ಮೂಕೊರತಿ–ಮೂಗಿಲ್ಲದವಳು
ಮೂಷಕ–ಇಲಿ
ಮೃಗ–ಪ್ರಾಣಿ
ಮೃಡ–ಶಿವ
ಮೃತ್ತಿಕೆ–ಮಣ್ಣು
ಮೆಳೆ–ದಟ್ಟವಾಗಿ ಬೆಳೆದ ಗಿಡಗಳ ಗುಂಪು
ಮೇಘ–ಮೋಡ
ಮೇಘಧಾರೆ–ಮಳೆ
ಮೇದಿನಿ–ಭೂಮಿ
ಮೇಳಾಪ–ಸಂದಣಿ ; ಸಮೂಹ
ಮೊಗೆ–ತುಂಬಿಕೊಳ್ಳು, ಕುಡಿ
ಮೊರಟೆ–ಮೊರ (?)
ಮೋಟ–ಅಂಗಹೀನ, ಮೊಂಡವಾದ

## ರ

ರಜ–ಧೂಳು
ರತ್ನಾಕರ–ಸಮುದ್ರ
ರುಧಿರ–ರಕ್ತ
ರವೆ–ಚೂರು, ಕಣ
ರಾಟಾಳ–ಚಕ್ರ
ರುಜೆ–ರೋಗ
ರೋಮ–ಕೂದಲು

## ಲ

ಲಂಘಿಸು–ಜಿಗಿ
ಲಚ್ಚಣ–ಗುರುತು, ಲಾಂಛನ
ಲಲಾಟ–ಹಣೆ
ಲಲ್ಲೆ–ಸರಸ, ವಿನೋದ
ಲಳಿಗೆ–ನೀರು ತುಂಬುವ ಬಿದಿರಿನ ಕೊಳವೆ
ಲಿಂಗದ್ರೋಹ–ಲಿಂಗಭೇದ
ಲೆಂಕ–ಸೇವಕ
ಲೊಟ್ಟೆ–ವ್ಯರ್ಥ
ಲೋಚು–ಕೂದಲು

## ವ

ವಂದ್ಯ–ಯೋಗ್ಯ, ಪೂಜ್ಯ
ವಜ್ರಪಾಣಿ–ಇಂದ್ರ
ವಟಪತ್ರ–ಆಲದ ಎಲೆ
ವಟ್ಟಂಕುರ–ವೇದಜ್ಞಾನಿ, ಆಚಾರ್ಯ (?)
ವಡಬಾಗ್ನಿ–ಸಮುದ್ರದಲ್ಲಿಯ ಬೆಂಕಿ
ವದನ–ಮುಖ
ವರಾಹ–ಹಂದಿ
ವರ್ತಕ–ರೀತಿ, ಪ್ರಕಾರ
ವಲ್ಲಭ–ಒಡೆಯ, ಗಂಡ
ವಸನ–ಬಟ್ಟೆ
ವಸುಧೆ–ಭೂಮಿ
ವಹ್ನಿ–ಬೆಂಕಿ
ವಾಯೆ–ಮೋಸ

ವಾಯಿಸ–ಕಾಗೆ
ವಾರಿ–ನೀರು
ವಾರಿಕಲ್ಲು–ಆಣೆಕಲ್ಲು
ವಾರಿಧಿ–ಸಮುದ್ರ
ವಾಳುಕ–ಉಸುಕು
ವಿಂಶತಿ–ನೂರು
ವಿಧಾಂತ–ವಿಧಿ, ರೀತಿ
ವಿಪಿನ–ಅಡವಿ
ವಿರಿಂಚಿ–ವಿಷ್ಣು
ವಿರೋಚನ–ಹೊಳೆಯುವ
ವಿಹಂಗ–ಪಕ್ಷಿ, ಮೋಡ
ವೀಥಿ–ಬೀದಿ
ವೃಕ್ಷ–ಗಿಡ
ವೃಶ್ಚಿಕ–ಚೇಳು
ವೆಗ್ಗಳ–ಹೆಚ್ಚಳ, ಶ್ರೇಷ್ಠ
ವೆಜ್ಜ–ತೂತು
ವೇಧಿಸು–ತಿಳಿಸು
ವೇಧಿಸು–ಅಪ್ಪಳಿಸು,. ಸ್ಪರ್ಶಿಸು
ವೈಶ್ಚಿಕ–ವಿಲಾಸಿ
ವ್ಯಾಕುಳ–ಚಿಂತೆ, ದುಃಖ
ವ್ಯಾಧ–ಬೇಡ
ವ್ಯಾಧಿ–ರೋಗ

**ಶ**

ಶಬ್ದ ಮುಗ್ಧ–ಮೌನಿ
ಶರಧಿ–ಸಮುದ್ರ
ಶಾರ್ದೂಲ–ಹುಲಿ
ಶಾಲಿ–ಭತ್ತ
ಶಿಖಿ–ತಲೆ
ಶುಕ್ಲ–ವೀರ್ಯ
ಶುಕ್ತಿ–ಮುತ್ತಿನ ಚಿಪ್ಪು
ಶುನಕ–ನಾಯಿ
ಶೂಕರ–ಹಂದಿ
ಶೂಲಪಾಣಿ–ಶಿವ
ಶೈಲ–ಪರ್ವತ
ಶೋಣಿತ (ಶ್ರೋಣಿತ)–ರಕ್ತ
ಶೃಂಗಿ–ಜಿಂಕೆ
ಶ್ಲೇಷ್ಮ–ಕಫ
ಶ್ರೋತ್ರ–ಕಿವಿ

**ಸ**

ಸಂಚಲ–ಓಡಾಯ್ದಾಟ, ಚಂಚಲ
ಸಂದು–ಬಿರುಕು, ಗಂಟು
ಸಟೆ–ಸುಳ್ಳು
ಸತ್ತಿಗೆ–ಕೊಡೆ
ಸನ್ನದ್ಧ–ಸಿದ್ಧವಾದ
ಸನ್ನಹಿತ–ಸಮೀಪದಲ್ಲಿರುವವ, ಒಂದಾದವ
ಸಮನಿಸು–ಪ್ರಾಪ್ತವಾಗು
ಸಮಯ–ಧರ್ಮ
ಸಮ್ಮಾರ್ಜನೆ–ಸಾರಿಸುವುದು
ಸಲಿಲ–ನೀರು
ಸಸಿನೆ–ನೇರವಾಗಿ, ಸುಮ್ಮನೆ
ಸಾರಾಯ–ನಿಜತತ್ವ, ಮರ್ಮ
ಸಾರು–ಹತ್ತಿರ ಹೋಗು
ಸಾಲಿಗ್ರಾಮ–ಪೂಜಾಯೋಗ್ಯವಾದ ಕಲ್ಲು
ಸಾವೆ–ಧಾನ್ಯ ವಿಶೇಷ
ಸಾಹಿತ್ಯ–ಸಂಬಂಧ
ಸಿಕ್ಕು–ಬಂಧನ, ತೊಡಕು
ಸೀರೆ–ಬಟ್ಟೆ
ಸುಕೃತ–ಪುಣ್ಯ, ಭಾಗ್ಯ
ಸುಪ್ಪಾಣಿ–ಶ್ರೇಷ್ಠವಾದ ಮುತ್ತು
ಸುಯಿದಾನ–ಎಚ್ಚರ, ತೃಪ್ತಿ ಶುದ್ಧ, ಆಹಾರ
ಸುರ–ದೇವತೆ
ಸುರಚಾಪ–ಕಾಮನಬಿಲ್ಲು
ಸುರಪ–ಇಂದ್ರ
ಸುರಭಿ–ಕಾಮಧೇನು

ಸುರಭೂಜ–ಕಲ್ಪವೃಕ್ಷ
ಸರೆಗೊಳ್ಳು–ದೋಚು, ಆವರಿಸು
ಸೆಳೆಮಂಚ–ತೂಗುಮಂಚ
ಸೋಣಗ–ನಾಯಿ
ಸೊಮ್ಮು–ಸೊತ್ತು
ಸೊರಟೆ–ಸೊಟ್ಟೆ, ಸಿಪ್ಪೆ
ಸೋನೆ–ಮಳೆ
ಸ್ವಯ–ಸ್ವಂತ
ಸ್ಥಾಣು–ಕಂಬ

## ಹ

ಹಕ್ಕರಿಕೆ–ಕುದುರೆಯ ತಡಿ
ಹಗರಣಿಗ–ಸೋಗಿನವ
ಹಗೆ–ವೈರಿ
ಹಚ್ಚಡ–ಕೌದಿ
ಹಡಪ–ಚೀಲ
ಹಡಹು–ಮಾಂಸ
ಹಡಿಕೆ–ಹೇಸಿಕೆ, ದುರ್ಗಂಧ
ಹರಣ–ಪ್ರಾಣ
ಹರದ–ವರ್ತಕ
ಹರವರಿ–ವಿಕಾಸ
ಹರಹು–ಅಗಲ, ವಿಸ್ತಾರ
ಹರಿಗೆ–ಗುರಾಣಿ
ಹರೆ–ಚರ್ಮವಾದ್ಯ
ಹಸರ–ಅಂಗಡಿ
ಹಸ್ತಿ–ಆನೆ
ಹಸುಕ–ಮೋಸಗಾರ
ಹಸುಬೆ–ಚೀಲ
ಹಳಚು–ಒಂದಕ್ಕೊಂದು ತಾಕಲಾಡು
ಹಾರು–ಬಯಸು, ಅಪೇಕ್ಷಿಸು
ಹಾರಕ–ಧಾನ್ಯ ವಿಶೇಷ
ಹಾಹೆ–ಕಣ್ಣು ಗೊಂಬೆ
ಹಾಳುಹರಿ–ನಿರುಪಯುಕ್ತ, ಕೀಳಾದ
ಹಿಂಚುಮುಂಚು–ಹಿಂದೆ ಮುಂದೆ
ಹಿಟ್ಟುಗುಟ್ಟು–ನಾಶಮಾಡು
ಹಿನ್ನಿ–ಹಿಂಭಾಗ
ಹಿರಣ್ಯ–ಬಂಗಾರ
ಹುಗಿಲ್–ಸೀಳು
ಹುದುಗು–ಸಮಪಾಲು
ಹುರುಡಿಸು–ಹೊಟ್ಟೆಕಿಚ್ಚುಪಡು
ಹುಸುಕ–ಸುಳ್ಳುಗಾರ
ಹುಳ್ಳಿ–ಕಟ್ಟಿಗೆ
ಹೂಣೆಹೊಗು–ಯುದ್ಧಕ್ಕೆ ತಯಾರಾಗು
ಹೆಂಪು–ಮಹತ್ವ, ಶ್ರೇಷ್ಠತೆ
ಹೆಡಗುಡಿ–ಹೆಡಮುರಿಗೆ
ಹೆರೆಸಾರು–ಹಿಂದಕ್ಕೆ ಸರಿ
ಹೆರಹಿಂಗು–ಇಲ್ಲದಾಗು, ನಾಶವಾಗು
ಹೇರು–ಭಾರ, ಒಜ್ಜೆ
ಹೇಳಿಗೆ–ಬುಟ್ಟಿ
ಹೊಂದಿಗೆ–ಹೊಂದಾಣಿಕೆ
ಹೊಡೆವಡು–ನಮಸ್ಕರಿಸು
ಹೊತ್ತುಹೋರು–ಸದಾಬಡಿದಾಡು
ಹೊದಕುಳಿ–ತಳಮಳ, ದುಃಖ
ಹೊಯ್ಕಯ್–ಸರಿ ಸಮಾನತೆ
ಹೊಲಬು–ಆಶ್ರಯ, ರೀತಿ,
ಹೊಲ್ಲಹ–ಕೆಡಕು, ದೋಷ
ಹೋಟಾರ–ಗಿಡದ ಹೊದರು
ಹೋರಟೆ–ಕಾದಾಟ, ಹೋರಾಟ
ಹೋರು–ಕಾದಾಡು

■■

# ವಚನಗಳ ಅಕಾರಾದಿ

(ಅಂಕಿಗಳು ಸಂಪುಟದ ವಚನಸಂಖ್ಯೆಯನ್ನು ಸೂಚಿಸುತ್ತವೆ)

## ಶಿವಲೆಂಕ ಮಂಚಣ್ಣ


ಅಂಗಕ್ಕೆ ಲಿಂಗವ ೧೫೪
ಅಂಗದ ಮೇಲಣ ೨೪೯
ಅಂಗದಲ್ಲಿ ಅರಿ ೨೬೨
ಅಂಗದಲ್ಲಿ ಸೋಂಕಿ ೨೫೫
ಅಂಗದೇಹಿ ಲಿಂಗೋ ೧೬೧
ಅಂಗ ಮುಟ್ಟಿ ೨೨೮
ಅಂಗ ಲಿಂಗವ ೨೦೮
ಅಂಗವನಳಿವ ೧೯೫
ಅಂಗ ಶಿರದ ಮಲಿನ ೧೯೨
ಅಂದಳ ಸತ್ತಿಗೆ ೨೫೩
ಅಕಾರತತ್ವ ಆಕಾಶ ೧೪೬
ಅಪ್ಪು ಮೂಲಾಧಾರ ೧೭೦
ಅಪ್ಪು ಲವಣ ೧೭೫
ಅರ್ಚನೆ ಪೂಜೆ ೧೯೩
ಅರ್ತಿ ಅಭ್ಯಾಸ ೨೩೪
ಅರ್ತಿಯಿಂದ ಮಾಡು ೨೨೦
ಅರ್ಥ ಪ್ರಾಣವ ೨೨೬
ಅರ್ಪಿತ ಅವಧಾನ ೨೩೧
ಅರಿವನರಿತೆನೆಂಬ ೧೭೮
ಆದಿ ವಸ್ತು ಅನಾದಿ ೧೫೩
ಆದಿಶಕ್ತಿ ರೂಪಾಗಿ ೧೫೬
ಆರುಸ್ಥಲವಿಟ್ಟು ೨೦೫
ಇಚ್ಛಾಶಕ್ತಿ ಮರ್ಕಟ ೧೪೦
ಈಶ್ವರ ರೂಪ ತಾಳಿ ೧೫೯
ಉಂಡಿಗೆಯನೆತ್ತಿದ ೨೩೨
ಉತ್ತರ ಕ್ಷೆಯನರಿ ೧೬೫
ಉಭಯವನರಿದ ೨೪೧
ಏಕಮಯ ವಸ್ತು ೧೩೬
ಐವತ್ತೊಂದು ಶಾಖೆ ೧೪೯
ಕಂಗಳ ಮುಂದೆ ೨೨೫
ಕಂಡು ತವಕ ೧೪೨
ಕಂಡೆಹೆನೆಂಬನ್ನಕ್ಕ ೨೧೦
ಕಲ್ಲ ತಾಗಿದ ಕರಿಣ ೨೩೭
ಕಾಮದಿಂದ ಕಾಬುದೆ ೨೨೧
ಕಾಮವೆಂಬುದೆ ೨೧೬
ಕಾಯಕವೆಂದು ೨೬೬
ಕಾಯ ಜೀವವನರಿ ೧೯೬
ಕಾಯದಲ್ಲಿ ಪರಿ ೧೮೫
ಕಾಯ ಭ್ರಮೆಯಿಂದ ೨೩೫
ಕಾಯ ಲಿಂಗ ೨೧೪
ಕಾಯವ ಮರೆದು ೧೮೬
ಕಾಯವಿದ್ದಲ್ಲಿ ೧೮೭
ಕಾಯವಿದ್ದು ಕಾಬುದು ೨೦೪
ಕಾಯವೆ ದೇಗುಲ ೨೨೭
ಕಾರುಕನ ಕೈ ೧೩೭
ಕಾರುಕ ಮುಟ್ಟಿ ೧೫೫
ಕಾಲಿನಲ್ಲಿ ನಡೆ ೨೦೨
ಕಿರಾತಂಗೆ ಪಿಸಿತ ೨೧೩
ಕ್ರೀಯ ಮರೆದಲ್ಲಿ ೧೮೯
ಗಂಗೆವಾಳುಕ ರುದ್ರ ೨೫೭
ಗುರು ಪ್ರಸಾದವ ೧೬೩
ಗುರು ಮೂರು ೧೩೯
ಗುರು ಲಿಂಗ ಬ್ರಹ್ಮ ೧೪೩
ಗುರುವಿರೆ ಲಿಂಗ ೧೬೯
ಗುರುವೆಂದಡೂ ೨೦೭
ಗುರುವೆಂಬ ಅಂಗ ೨೧೧
ಗುರು ವೈಭವ ೨೦೬
ಗುರು ಸೇವೆಯ ೨೫೪
ಘಟದಲ್ಲಿದ್ದ ಗಂಧ ೨೫೬
ಚಚ್ಚೆಗೊಟ್ಟೆಯಿಂ ೨೧೮
ಜಂಗಮದ ಪಾದ ೧೬೨
ಜಗಕ್ಕೆ ಹೊರಗಾಗಿ ೧೮೨
ಜಲ ಕೆಯ್ಯ ಭಾಜನ ೧೭೭
ಜಲದಲ್ಲಿ ಹುಟ್ಟಿ ೨೪೨

ಜಲದೊಳಗಣ ಮತ್ಸ್ಯ ೧೮೩
ಜ್ಞಾನಾದ್ವೈತದ ೧೯೯
ಜ್ಞಾನವುಳ್ಳನ್ನಕ್ಕ ೧೯೮
ತನುವಿಂಗೆ ಕುರುಹಾದ ೨೨೨
ತನುವಿಂಗೆ ಗುರು ೨೧೫
ತನುವಿಗೆ ರುಜೆ ೧೬೭
ತನುವಿನಲ್ಲಿ ಮನೋ ೨೪೭
ತಮಕ್ಕೂ ದಿವಕ್ಕೂ ೨೫೦
ತರ್ವಾಯಕ್ಕೆ ಸಿಕ್ಕಿ ೧೭೯
ತುಷವಿದ್ದಲ್ಲಿ ಭತ್ತ ೧೬೮
ತ್ರಿವಿಧಕ್ಕೆ ಮಾನ ೨೨೯
ಧರೆ ಆಕಾಶವಿಲ್ಲ ೧೯೪
ಧರೆಯ ಕೃಷಿ ೧೯೦
ಧ್ಯಾನ ಧಾರಣ ೧೫೨
ನಡೆದು ನಡೆಯದ ೧೪೧
ನಾದವಿಲ್ಲದ ಬಿಂದು ೧೬೪
ನಿತ್ಯ ಚಿಲುಮೆ ೧೭೪
ನೀ ಹಾಕಿದ ಮುಂಡಿಗೆ ೨೪೦
ಪರಧನವನೊಲ್ಲದಿ ೧೭೩
ಪರಶಿವಮೂರ್ತಿಯ ೨೪೬
ಪರಸ್ತ್ರೀಯರ ಬಿಟ್ಟಾಗ ೨೧೯
ಪಾತಕ ಹೊಲೆಯೆಂದ ೨೬೦
ಪಾದತೀರ್ಥವ ಕೊಂಡ ೨೧೭
ಪಿಪೀಲಿಕ ಮಧುರವ ೧೮೪
ಪೂಜಿಸಿ ಕಾಬುದು ೧೪೪
ಪೂಜೆ ಅರತಲ್ಲಿ ೧೯೭
ಪೃಥ್ವಿ ರೂಪಾದಲ್ಲಿ ೧೫೦
ಪೃಥ್ವಿ ಸಾಕಾರವ ೧೩೮
ಪ್ರಸಾದವ ನೆಮ್ಮಿದ ೨೫೨
ಬಂಗಾರವ ರೂಪಿಪ್ಪ ೧೮೮
ಬರಿಹುಂಡನ ಗಡಿ ೨೨೩
ಬಹುರೂಪಕ್ಕೆ ೧೬೦
ಬಾಹ್ಯವ್ರತ ಭ್ರಮೆ ೨೨೪
ಭಕ್ತನ ಭಾಷೆ ೨೩೮
ಭಕ್ತನಾಗಿದ್ದಲ್ಲಿ ೨೪೫
ಭಕ್ತ ನಾನೆ ಎಂದು ೨೪೪
ಮಡಿಕೆಗೆ ಮುಸುಕು ೧೭೧
ಮಣ್ಣು ಮೂರು ೨೬೭
ಮಧುರದ ದಂಡ ೨೦೯
ಮನ ಅರೋಚಕ ೧೭೬
ಮನಸಿಜನ ಇರವು ೧೯೧
ಮರೀಚಿಕಾಜಲದ ೧೪೭
ಮಹಾರ್ಣವವುರಿದು ೨೬೧
ಮಾಟಕೂಟವ ೨೩೩
ಮೇಲು ಹೇಮದಲ್ಲಿ ೧೬೬
ರಸವನರಿವುದಕ್ಕೆ ೧೫೭
ರೂಪಿನಲ್ಲಿ ಉಂಟೆಂದು ೨೪೩
ರೂಪು ರುಚಿ ಚಿತ್ತ ೨೩೬
ಲಿಂಗ ವಸ್ತುವಾದಲ್ಲಿ ೨೧೨
ವಟವೃಕ್ಷದ ಘಟದ ೧೫೧
ವಾಗದ್ವೈತದಲ್ಲಿ ೨೦೧
ವಾಸದ ದೀಪಕ್ಕೆ ೧೮೦
ವಿಶ್ವಮಯ ರೂಪು ೧೫೮
ವೇದ ಅಪರವನರಸಿ ೧೪೮
ವ್ರತಸ್ಥನಾದಲ್ಲಿ ೨೬೫
ವ್ರತಾಚಾರವ ಹಿಡಿದು ೨೪೯
ವ್ಯಾಧನ ಚಿತ್ತದಂತೆ ೨೩೦
ಶಿಲೆ ಕಾಷ್ಠದಲ್ಲಿ ೨೦೦
ಶಿವಭಕ್ತಂಗೆ ೨೫೧
ಸಕಲ ಗಂಧಕ್ಕೆ ೨೦೩
ಸಕಲ ಬಹುಕೃತ ೧೮೧
ಸಾರಿದುದ ಕಂಡು ೨೫೮
ಸುಖದುಃಖಾದಿಗಳ ೨೪೮
ಸ್ವಯಂ ಪಾಕದಲ್ಲಿ ೨೬೪
ಸ್ತ್ರೀಲಿಂಗ ನಾಸ್ತಿ ೧೪೫
ಹಾವಾಡುವಂತೆ ೨೬೩
ಹೇರನೊಪ್ಪಿಸಿದವಂಗೆ ೨೩೯
ಹೊರಗೆ ಚಿಲಮೆ ೧೭೨

## ಸುಂಕದ ಬಂಕಣ್ಣ


ಅಂಗಡಲ್ಲಿದ್ದು ೬೮೭
ಅಂಬರ ಸಂಭ್ರಮ ೬೮೫
ಅಂಬುಧಿಯಲ್ಲಿ ೬೨೪
ಅಕ್ಕನ ಮೂಲೆ ೭೦೧
ಅಜಶ್ರೋಣಿಯೆಂಬ ೬೮೩
ಅಡಿಗಡಿಗೆ ಬಂದ ೭೧೦
ಅನ್ನದ ಮೇಲಣ ೭೧೧
ಅಪ್ಪು ಉತ್ಪತ್ಯ ೬೩೮
ಅರಿದಾಡುವಲ್ಲಿ ೬೨೦
ಅಸ್ಥಿ ಚರ್ಮವ ೬೭೫
ಆಚಾರಕ್ರೀ ಸನ್ನದ್ಧ ೬೬೯
ಆಯ್ದು ಕೂಡಿ ೬೫೮
ಆಸೆಯೆಂಬ ಕತ್ತೆ ೬೩೩
ಇದಿರಗುಣ ಸಂಪಾ ೬೭೮
ಇದು ಜಗವ್ಯವಹಾರ ೬೩೫
ಇರುಹಿನ ಕಾಲಿನ ೬೯೫
ಊರ ಹೊರಗಣ ೬೨೫
ಎಂಬತ್ತು ನಾಲ್ಕು ಲಕ್ಷ ೬೧೪
ಎಲ್ಲರ ಸುಂಕ ೬೧೨
ಎಲ್ಲರೂ ಕೂಡಿ ೬೯೨
ಎವೆಯ ಮುಚ್ಚಿ ೬೪೬
ಐವುಕ್ತಿಕ್ಷೇತ್ರದ ೬೭೩
ಕಟ್ಟಿಪುದೇನು ಕಂಕುಳ ೬೧೦
ಕಣ್ಣಿನ ಕಡೆಯ ೬೩೭
ಕಣ್ಣು ನೀರ ಸುಂಗಿ ೭೦೯
ಕಾಬುದು ಕ್ಷೀರ ೭೦೩
ಕಾಯದ ಜೀವದ ೬೪೦
ಕಾಯದ ಭಾವವ ೭೦೭
ಕಾಯದಿಂದ ಕಾಬುದು ೬೮೪
ಕಾಯವ ಬಿಟ್ಟು ೭೦೮
ಕಾರವೆಂಬ ಭೂಮಿ ೭೧೨
ಕಾಲದೊಳು ತನು ೬೨೧
ಕಾಲ ಸಂಹಾರವ ೬೫೭
ಕಾಳಕೂಟದ ತತ್ತಿ ೬೦೯
ಕಾಳಗದ ಕರಣ ೬೭೬
ಕಾಳಗದ ಮೊಗಹಿನ ೬೪೧
ಕಾಳ್ಹೋರಗನ ಹಿಡಿ ೬೨೭
ಕೈಯಲ್ಲಿ ಮುಟ್ಟೊದ ೬೮೩
ಕೊಂಡವಂಗೆ ಕೂಲಿ ೬೧೭
ಕೊರಳು ತಲೆ ಹೊರೆ ೬೧೯
ಕೋಡಗ ಬಲಿದು ೬೪೪
ಕ್ಷಯ ಕಾರಣವೆಂಬ ೬೬೦
ಕ್ರೀಯೆಂಬ ಬೆವ ೬೧೮
ಗೂಗೆ ಹಂಸೆಯ ೬೯೬
ಗೋಳಕಾಕಾರ ಗೋರಕ್ಷ ೬೮೨
ಘಟ ದೀಪಾಂತರ ೬೭೨
ಚಿದ್ಘನದ ಒಂದನೆಯ ೬೮೦
ಜಾಗ ಸ್ವಪ್ನ ೭೧೩
ತತ್ತ್ವಾರ್ಥವ ಬಲ್ಲ ೬೫೯
ತನುಮಂಡಲ ೬೭೪
ತರುಗಿಡು ಗುಣ ೬೬೫
ತುರೀಯದಲ್ಲಿ ಕೂಡಿ ೬೪೫
ತೋರುವ ತೋರಿಕೆ ೬೩೪
ದಬ್ಬಳ ಧರೆಯ ೬೪೯
ಧರ್ಮವ ನುಡಿವಲ್ಲಿ ೭೦೬
ನಡೆದಾಚರಿಸೂದಕ್ಕೆ ೬೬೮
ನಾಡೆಲ್ಲರೂ ನೆರೆದು ೬೯೧
ನಿಂದಿಸುವನೊಬ್ಬ ೭೧೪
ನಿಜ ನಿಶ್ಚಯವಾದ ೬೯೦
ಪಂಕವ ಮೆಟ್ಟಿದ ೬೬೪
ಪರಮ ಪ್ರಕಾಶ ೬೮೧
ಪೃಥ್ವಿಯ ಸಾರ ೬೪೮
ಫಳ ಒಳಗೆ ೬೬೭
ಬಂದವರಿವರಾರು ೬೪೩
ಬಲುಗಲ್ಲಿನ ಮಣಿ ೬೯೪
ಬಸವಣ್ಣನೆ ಗುರು ೭೧೫

| | | | |
|---|---|---|---|
| ಬಹುರೂಪು ತೊಟ್ಟಾಡಿ | ೨೦೪ | ಸರ್ವಜೀವಕ್ಕೆ ದಯ | ೬೨೧ |
| ಬ್ರಹ್ಮನ ಕುದುರೆ | ೬೩೧ | ಸರ್ವೇಂದ್ರಿಯವೆಲ್ಲ | ೬೮೨ |
| ಬ್ರಹ್ಮಾಂಡ ಮಂಡಲ | ೨೦೫ | ಸಾಕಾರವೆಂಬ ಚೀಲ | ೬೭೯ |
| ಭಂಡವ ತುಂಬಿರಿ | ೬೬೧ | ಸಾಕಾರವೆಂಬ ಸೆಟ್ಟಿ | ೬೭೮ |
| ಭವಿಸಂಗವನೊಲ್ಲೆ | ೬೮೯ | ಸಾಗರದ ತಡಿ | ೬೭೩ |
| ಭಾನು ತೇಜವ | ೬೬೭ | ಸುಖದ ಸುಖಿಗಳ | ೨೧೬ |
| ಭಾವವಿಕಾರ ಕಾಯ | ೬೧೬ | ಸುಖನ ನಿಶ್ಚೈಸು | ೬೭೭ |
| ಮನ ಬುದ್ಧಿ ಚಿತ್ತ | ೬೨೨ | ಸುಧೆಯ ಸುಮ್ಮಾನ | ೬೫೫ |
| ಮಹಿಮಾಪದದಲ್ಲಿ | ೬೩೯ | ಸೂಜಿಯ ಹಿನ್ನಿ | ೬೯೩ |
| ಮಾಧವನ ಪಟ್ಟಣ | ೬೪೭ | ಸೂತಕ ತಡೆದ | ೬೫೦ |
| ಮುಕ್ಯಾಂಗನೆಯ | ೬೯೯ | ಹಡಗಿನ ಮನೆ | ೬೭೬ |
| ಮುತ್ತು ಮೊಲೆಯ | ೬೧೩ | ಹರಿಗೆಯ ಹಿಡಿ | ೬೬೬ |
| ಮೇಲೇರಿದ ಹುಗಿಲ | ೬೯೮ | ಹರಿವ ಮನ | ೬೩೨ |
| ಮೊದಲು ಬಂದ ಬಾಯಿ | ೨೦೭ | ಹಸಿದುಂಬ ಅಣ್ಣಾ | ೬೪೭ |
| ರಕ್ಕಸಿ ಮಗುವ | ೬೫೬ | ಹಾವು ಕೊಂದು | ೬೫೧ |
| ರಕ್ಕಸಿಯ ಕೋರೆ | ೬೫೪ | ಹಾವು ಸತ್ತು | ೬೫೭ |
| ಲೌಕಿಕಕ್ಕೆ ದರ್ಶನ | ೬೨೯ | ಹಿಂಡುಗಟ್ಟೆಯ | ೬೯೨ |
| ವೇಷ ಲಾಂಛನ | ೬೩೦ | ಹುಲಿ ಹುತ್ತ | ೬೧೫ |
| ಶುಕ್ಲ ಪರ್ವತದಲ್ಲಿ | ೨೦೦ | ಹುಳ್ಳಿ ಹಳ್ಳದಲ್ಲಿ | ೬೬೩ |
| ಶೋಣಿತವ ಮುತ್ತಿ | ೬೩೬ | ಹೊರವಾರು ಉಭಯ | ೬೧೧ |
| ಸದಾಚಾರವೆ ಸಾಕಾರ | ೬೨೦ | ಹೊಲದೊಳಗೊಂದು | ೬೫೩ |


## ಅಜ್ಞಾತ ಶರಣರು


| ವಚನಗಳ ಅಕಾರಾದಿ | ಮುದ್ರಿಕೆ | ವಚನಸಂಖ್ಯೆ |
|---|---|---|
| ಅಂಗವೆ ಆಧಾರ | ಅಶ್ವಥರಾಮ | ೧೭೧೨ |
| ಅಂತಪ್ಪ ಸದ್ಭಕ್ತನು | ಮಹಾಲಿಂಗ ಶಶಿಮೌಳಿ ಸದಾಶಿವ | ೧೩೪೮ |
| ಅಖಂಡ ಗೋಳಕಾ | ಜಂಗಮಲಿಂಗಪ್ರಭುವೆ | ೧೭೩೨ |
| ಅಗ್ನಿ ಪುತ್ಥಳಿಗೆ | ತ್ರೈಲೋಚನ ಮನೋಹರ ಮಾಣಿಕೇಶ್ವರಲಿಂಗ | ೧೭೫೬ |
| ಅಜನೆಂಬ ಅಶ್ವ | ಜಂಗಮಲಿಂಗಪ್ರಭುವೆ | ೧೭೪೭ |
| ಅಟ್ಟಂಬಾರಣ್ಯ | ಜಂಗಮಲಿಂಗಪ್ರಭುವೆ | ೧೭೩೮ |
| ಅತಳ ವಿತಳ | ನಂಜುಂಡಶಿವ | ೧೭೬೯ |
| ಅಪ್ಪಯ್ಯ ಗುರು | ನಿಜಗುರು ನಿರಾಲಂಬಪ್ರಭುವೆ | ೧೭೧೭ |
| ಅಯಿವತ್ತೆರಡಕ್ಷರ | ಶ್ರೀಮುಕ್ತಿರಾಮೇಶ್ವರ | ೧೪೫೬ |

| | | |
|---|---|---|
| ಅರ್ಥಾಸನ | ನಾಚೇಶ್ವರ | ೧೨೯೨ |
| ಅರಿವು ಆತ್ಮ | ಮಹಾಘನ ಪ್ರಸಿದ್ಧ ಪ್ರಸನ್ನ ಸಂಗಮೇಶ್ವರಲಿಂಗ | ೧೩೪೬ |
| ಅಷ್ಟದಶ ಕಮಲ | ನಂಜುಂಡಶಿವ | ೧೨೭೦ |
| ಅಕಾರ ಉಕಾರ | ನಂಜುಂಡಶಿವ | ೧೨೬೮ |
| ಆತ್ಮಂಗೆ ಬಂಧ | ನಂಜುಂಡಶಿವ | ೧೨೭೧ |
| ಆದಿಯನರಿದರು | ನಂಜುಂಡಶಿವ | ೧೨೭೨ |
| ಆದಿ ಅನಾದಿ | ಜಂಗಮಲಿಂಗಪ್ರಭುವೆ | ೧೨೩೯ |
| ಇಷ್ಟಲಿಂಗವೆ | ಗುಹೇಶ್ವರಲಿಂಗದಲ್ಲಿ ಪ್ರಭುವೆ ಸಾಕ್ಷಿಯಾಗಿ ಬಸವಪ್ರಿಯ ಕೂಡಲಸಂಗಮದೇವ | ೧೨೩೦ |
| ಇಳೆಯ ಮೇಲಿರ್ದ | ಜಂಗಮಲಿಂಗಪ್ರಭುವೆ | ೧೨೪೮ |
| ಈ ಹೃದಯಾ | ಶ್ರೀಬಸವಲಿಂಗ | ೧೪೫೪ |
| ಉದುರಿ ಬೀಳುವ | ಸರ್ವೇಶ್ವರಲಿಂಗ | ೧೪೬೨ |
| ಉಲುಹಿಲ್ಲದ | ಜಂಗಮಲಿಂಗಪ್ರಭುವೆ | ೧೨೪೦ |
| ಎಡಕಲ ಕಡಿದು | ಅಪ್ರಮಾಣ ಗುಹೇಶ್ವರ | ೧೨೧೬ |
| ಎನ್ನ ಕಾಯವ | ಬಸವಣ್ಣಪ್ರಿಯ ಧರ್ಮೇಶ್ವರ | ೧೩೪೩ |
| ಎನ್ನ ತನುವ | ನಂಜುಂಡಶಿವ | ೧೨೭೩ |
| ಎನ್ನ ಭಕ್ತನೆಂಬ | ಗುಹೇಶ್ವರಲಿಂಗದಲ್ಲಿ ಪ್ರಭುವೆ ಸಾಕ್ಷಿಯಾಗಿ ಬಸವಪ್ರಿಯ ಕೂಡಲಸಂಗಮದೇವ | ೧೨೩೧ |
| ಎಲೆ ದೇವಾ | ಶಂಭುಮಾರೇಶ್ವರ | ೧೩೫೬ |
| ಎಲೆ ಮಗನೆ | ನಿಜಗುರು ನಿರಾಲಂಬ ಪ್ರಭುವೆ | ೧೩೧೪ |
| ಏಕಮೇವನದ್ವಿತೀಯ | ನಂಜುಂಡಶಿವ | ೧೨೭೪ |
| ಏಕಾರ್ಥಂ ಬೆರೆದು | ನಿಜಗುರು ನಿರಾಲಂಬಪ್ರಭುವೆ | ೧೩೩೬ |
| ಏಕೋದೇವಶಿವ | ನಿಜಗುರು ಶಾಂತಮಲ್ಲಿಕಾರ್ಜುನ | ೧೨೪೧ |
| ಒಂದನೆಯ ದೆಸೆ | ಜಂಗಮಲಿಂಗಪ್ರಭುವೆ | ೧೨೪೬ |
| ಒಂದು ಲಿಂಗದಿಂದ | ಜಂಗಮಲಿಂಗಪ್ರಭುವೆ | ೧೨೩೪ |
| ಒಮ್ಮೆ ಶಿವನೆ | ದೇವಧ್ವಜ ಮೃತ್ಯುಂಜಯನ ಭಾವದೊಲ್ಲಭ ಮುದ್ವನೂರೇಶ | ೧೨೬೪ |
| ಓಂ ನಮಃ | ಜಂಗಮಲಿಂಗಪ್ರಭುವೆ | ೧೨೪೨ |
| ಓಂ ನಮಃ ಶಿವಾ | ಜಂಗಮಲಿಂಗಪ್ರಭುವೆ | ೧೨೪೩ |
| ಕಂಗಳ ಸುಖ | ಆನಂದ ಸಿದ್ಧೇಶ್ವರ | ೧೨೧೮ |
| ಕಂಡೆನವಿರಳನ | ನಂಜುಂಡಶಿವ | ೧೨೭೫ |
| ಕಂಡೆನು ಕರುಣಾಕರ | ನಂಜುಂಡಶಿವ | ೧೨೭೭ |

| | | |
|---|---|---|
| ಕಟ್ಟ್ವ ಕಡೆಯ | ಕುರಂಗೇಶ್ವರಲಿಂಗ | ೧೨೨೫ |
| [ಕರ]ಣೇಂದ್ರಿಯ | ನಂಜುಂಡಶಿವ | ೧೨೭೬ |
| ಕರಿಕಾಲಚೋಳ | ಶ್ರೀಬಸವಲಿಂಗ | ೧೪೫೫ |
| ಕಳ್ಳಿಯ ಹಾಲ | ವೈದ್ಯನಾಥೇಶ್ವರ | ೧೩೫೫ |
| ಕಾಡೊಡೆಯರು | ಅನುಗಲೇಶ್ವರ | ೧೨೧೫ |
| ಕೆರೆಯನಗಳುತ | ತ್ರೈಲೋಚನ ಮನೋಹರ ಮಾಣಿಕೇಶ್ವರಲಿಂಗ | ೧೨೫೭ |
| ಕೊಲಲಾರದೆಯೆ | ಅಖಂಡಮಂಡಲೇಶ್ವರ | ೧೨೧೪ |
| ಕ್ರೀವಿಡಿದು ಗುರು | ಭೀಮಬಂಕೇಶ್ವರಲಿಂಗ | ೧೩೪೪ |
| ಗಾತ್ರಗಳು ಸಕೀಲ | ತ್ರೈಲೋಚನ ಮನೋಹರ ಮಾಣಿಕೇಶ್ವರಲಿಂಗ | ೧೨೫೮ |
| ಗುರುಕರುಣ | ನಿಜಗುರು ನಿರಾಲಂಬಪ್ರಭುವೆ | ೧೨೯೫ |
| ಗುರುಕರುಣದಿಂದಾ | ನಿಜಗುರು ನಿರಾಲಂಬಪ್ರಭುವೆ | ೧೨೯೬ |
| ಗುರುಕರುಣದಿಂದಾದ | ನಿಜಗುರು ನಿರಾಲಂಬಪ್ರಭುವೆ | ೧೨೯೭ |
| ಗುರುಕರುಣದಿಂದಾದ ಬಾಲ್ಯ | ನಿಜಗುರು ನಿರಾಲಂಬಪ್ರಭುವೆ | ೧೨೯೮ |
| ಗುರುಕರುಣಮಂ | ನಿಜಗುರು ನಿರಾಲಂಬಪ್ರಭುವೆ | ೧೨೯೯ |
| ಗುರುಕೃಪಾ | ನಿಜಗುರು ನಿರಾಲಂಬಪ್ರಭುವೆ | ೧೩೦೧ |
| ಗುರುಕೃಪಾವಸ್ಥೆ | ನಿಜಗುರು ನಿರಾಲಂಬಪ್ರಭುವೆ | ೧೩೦೨ |
| ಗುರುಕೃಪಾವಸ್ಥೆಯ | ನಿಜಗುರು ನಿರಾಲಂಬಪ್ರಭುವೆ | ೧೩೦೩ |
| ಗುರುಕೃಪಾವಸ್ಥೆಯನು | ನಿಜಗುರು ನಿರಾಲಂಬಪ್ರಭುವೆ | ೧೩೦೪ |
| ಗುರುಲಿಂಗಜಂಗಮ | ನಂಜುಂಡಶಿವ | ೧೨೭೮ |
| ಗುರುಲಿಂಗಭಕ್ತ | ನಂಜುಂಡಶಿವ | ೧೨೭೯ |
| ಗುರುವಿನಿಂದ ಅಂಗ | ಮಹಾಲಿಂಗ ಶಶಿಮೌಳಿ ಸದಾಶಿವ | ೧೩೪೪ |
| ಘೃತ ಘೃತವ | ಸತ್ಯಕರಂಡಮೂರ್ತಿ ಸದಾಶಿವಲಿಂಗ | ೧೪೫೭ |
| ಚತುರ್ವೇದನುಭಾವ | ಜಂಗಮಲಿಂಗಪ್ರಭುವೆ | ೧೨೪೯ |
| ಜಂಗಮ ಜಂಗಮ | ನಂಜುಂಡಶಿವ | ೧೨೮೦ |
| ಜಂಗಮವೆಂತೆ | ನಿಜಗುರು ಶಾಂತಮಲ್ಲಿಕಾರ್ಜುನ | ೧೩೩೭ |
| ಜ್ಞಾನದ ಒರಳಿಗೆ | ತ್ರೈಲೋಚನ ಮನೋಹರ ಮಾಣಿಕೇಶ್ವರಲಿಂಗ | ೧೨೫೯ |
| ತತ್ವಾರ್ಥನ್ಯಾಯ | ನಿಜಗುರು ನಿರಾಲಂಬಪ್ರಭುವೆ | ೧೩೦೮ |
| ತನ್ನ ತನ್ನಿಂದ | ನಂಜುಂಡಶಿವ | ೧೨೮೧ |
| ತನ್ನ ಹಿತ್ತಿಲೊಳು | ತ್ರೈಲೋಚನ ಮನೋಹರ ಮಾಣಿಕೇಶ್ವರಲಿಂಗ | ೧೨೬೦ |
| ತನುವಿಕಾರದಿಂದ | ನಿಜಮುಕ್ತಿ ರಾಮೇಶ್ವರ | ೧೩೩೯ |

| | | |
|---|---|---|
| ತನುವಿಡಿದು | ಸದ್ಗುರು ಚೆನ್ನಮಲ್ಲಿಕಾರ್ಜುನ | ೧೪೫೯ |
| ತನುವಿನಲ್ಲಿ | ವಿಶ್ವಪತಿ ವಿಶ್ವನಾಥ | ೧೩೫೩ |
| ತಲೆ ಕೆಚ್ಚಲು | ತ್ರೈಲೋಚನ ಮನೋಹರ ಮಾಣಿಕೇಶ್ವರಲಿಂಗ | ೧೨೬೧ |
| ತಾನು ಸುಖಿಯಾದಡೆ | ಏಕೋರಾಮೇಶ್ವರಲಿಂಗ | ೧೨೨೩ |
| ತಾನೆಂಬ ತೋರಿಕೆ | ನಂಜುಂಡಶಿವ | ೧೨೮೨ |
| ದಶಕರ ಶೂನ್ಯ | ತ್ರಿಲೋಚನ ಶಂಕರ | ೧೨೬೩ |
| ದೃಷ್ಟದರ್ಶನ | ನಂಜುಂಡಶಿವ | ೧೨೮೩ |
| ದೇವ ಗೆದ್ದನು | ತುಂಬೆಯಾಚಲೆಯ ಮನಃಪ್ರಿಯ ಚೆನ್ನಬಂಕೇಶ್ವರ | ೧೨೫೫ |
| ನಡಸು ದೇವಾ | ನಿರ್ಧನಪ್ರಿಯ ರಾಮೇಶ್ವರ | ೧೩೪೦ |
| ನಡೆನುಡಿಯಿಂ | ನಿಜಗುರು ನಿರಾಲಂಬಪ್ರಭುವೆ | ೧೩೦೫ |
| ನನೆಯೊಳಗಣ | ನಂಜುಂಡಶಿವ | ೧೨೮೪ |
| ನಮ್ಮ ಶಿವ | ಜಂಗಮಲಿಂಗಪ್ರಭುವೆ | ೧೨೪೪ |
| ನಾನಾ ಜನ್ಮಂಗಳ | ದೇವಧ್ವಜ ಮೃತ್ಯುಂಜಯನ ಭಾವದೊಲ್ಲಭ ಮುದ್ದನೂರೇಶ | ೧೨೬೬ |
| ನಾನಿಲ್ಲದ ಮುನ್ನ | ಜಂಗಮಲಿಂಗಪ್ರಭುವೆ | ೧೨೫೨ |
| ನಿಂದೆ ಸ್ತುತಿಗಳಿಗೆ | ತ್ರೈಲೋಚನ ಮನೋಹರ ಮಾಣಿಕೇಶ್ವರಲಿಂಗ | ೧೨೬೨ |
| ನಿತ್ಯಕೇಡಿಲ್ಲ | ಮಹಾಲಿಂಗ ಶಶಿಮೌಳಿ ಸದಾಶಿವ | ೧೩೪೫ |
| ನಿರಾಲಂಬ ಶರಣ | ಮಹಾಲಿಂಗ ಶಶಿಮೌಳಿ ಸದಾಶಿವ | ೧೩೪೬ |
| ಪದಾರ್ಥದೊಳಗೆ | ಸೋಮಭೀಮೇಶ್ವರಲಿಂಗ | ೧೪೬೪ |
| ಪದಾರ್ಥ ಶುಚಿ | ನಿಜಗುರು ನಿರಾಲಂಬಪ್ರಭುವೆ | ೧೩೦೬ |
| ಪರತರ ಪರಮಾ | ನಿಜಗುರು ನಿರಾಲಂಬಪ್ರಭುವೆ | ೧೩೦೦ |
| ಪರಿಪೂರ್ಣನಲ್ಲ | ನಿರಾಲಯ ನಿಜಗುರು ಶಾಂತೇಶ್ವರ | ೧೩೪೧ |
| ಪೃಥ್ವಿ ಗುಣದಿಂದ | ನಿಜಗುರು ನಿರಾಲಂಬಪ್ರಭುವೆ | ೧೩೩೫ |
| ಪೃಥ್ವಿಯಪ್ಪು | ನಂಜುಂಡಶಿವ | ೧೨೮೫ |
| ಪೃಥ್ವಿಸಕಲ | ಸದ್ಗುರುಪ್ರಿಯ ಶಿವಸಿದ್ಧರಾಮೇಶ್ವರ | ೧೪೬೧ |
| ಪ್ರಥಮದಲ್ಲಿ ಭಕ್ತಿ | ಮಹಾಲಿಂಗ ಶಶಿಮೌಳಿ ಸದಾಶಿವ | ೧೩೪೭ |
| ಪ್ರಥಮ ಪಾದ | ಹಾಟಕೇಶ್ವರಲಿಂಗ | ೧೪೬೫ |
| ಪ್ರಸಾದವೆಂದು | ಕುಂತಳಿಯ ವರಕುರಂಗಲಿಂಗ | ೧೨೨೬ |
| ಪ್ರಾಣಾಪಾನ ವ್ಯಾನೋ | ನಂಜುಂಡಶಿವ | ೧೨೮೬ |
| ಬಂದ ಬಟ್ಟೆಯು | ಏಕಾಂತವೀರಸೊಡ್ಡಳ | ೧೨೨೨ |
| ಬಟ್ಟಬಯಲೆಲ್ಲ | ನಿಃಕಳಂಕ ಚೆನ್ನಸೋಮೇಶ್ವರ | ೧೨೯೪ |

| | | |
|---|---|---|
| ಬತ್ತಿಗಟ್ಟಿದಡೆ | ಜ್ಯೋತಿಸಿದ್ಧೇಶ್ವರ | ೧೨೫೪ |
| ಬಯಲೊಳೆರಗಿದ | ಮಹಾಲಿಂಗ ವೀರರಾಮೇಶ್ವರ | ೧೨೪೭ |
| ಬಸವ ಜಗದಾದಿ | ವರದ ಸೋಮನಾಥ | ೧೩೫೨ |
| ಬಸವಣ್ಣ ಚೆನ್ನಬಸವಣ್ಣ | ಸಿದ್ಧಲಿಂಗಪ್ರಿಯ ಬಸವಪ್ರಭುವೆ | ೧೪೬೩ |
| ಬಸವಣ್ಣನ ಏಕಾ | ಗುಹೇಶ್ವರಲಿಂಗದಲ್ಲಿ ಪ್ರಭುವೆ ಸಾಕ್ಷಿಯಾಗಿ ಬಸವಪ್ರಿಯ ಕೂಡಲಸಂಗಮದೇವ | ೧೨೩೨ |
| ಬಸವಣ್ಣನ ನೆನೆ | ಗುಹೇಶ್ವರಲಿಂಗದಲ್ಲಿ ಪ್ರಭುವೆ ಸಾಕ್ಷಿಯಾಗಿ ಬಸವಪ್ರಿಯ ಕೂಡಲಸಂಗಮದೇವ | ೧೨೩೩ |
| ಬಸವಣ್ಣನೆ ಗುರು | ಗುಹೇಶ್ವರಲಿಂಗದಲ್ಲಿ ಪ್ರಭುವೆ ಸಾಕ್ಷಿಯಾಗಿ ಬಸವಪ್ರಿಯ ಕೂಡಲಸಂಗಮದೇವ | ೧೨೩೫ |
| ಬಸವಣ್ಣನೆಂಬ | ಗೊಹೇಶ್ವರಲಿಂಗದಲ್ಲಿ ಪ್ರಭುವೆ ಸಾಕ್ಷಿಯಾಗಿ ಬಸವಪ್ರಿಯ ಕೂಡಲಸಂಗಮದೇವ | ೧೨೩೪ |
| ಬ್ರಹ್ಮದೇವರಾದಡೆ | ಗುರುವಿಶ್ವೇಶ್ವರಾ | ೧೨೨೯ |
| ಬ್ರಹ್ಮ ಸಂತತಿ | ಜಂಗಮಲಿಂಗಪ್ರಭುವೆ | ೧೨೫೦ |
| ಭಕ್ತ ಭಕ್ತನೆಂದೆ | ಮಹಾಲಿಂಗ ಶಶಿಮೌಳಿ ಸದಾಶಿವ | ೧೩೪೮ |
| ಭಸಿತ ರುದ್ರಾಕ್ಷಿ | ಶ್ರೀಗುರು ಪ್ರಭುಸ್ಮನೀಶ್ವರ | ೧೪೫೨ |
| ಮಂಡೆಯ ಬೋಳಿಸಿ | ಗಾರ್ಗೇಶ್ವರಲಿಂಗ | ೧೨೨೭ |
| ಮತ್ತಂ ತನ್ನ ತಾನೆ | ನಿಜಗುರು ನಿರಾಲಂಬಪ್ರಭುವೆ | ೧೩೧೨ |
| ಮತ್ತಂ ತನ್ನ ತಾನೆಂಬು | ನಿಜಗುರು ನಿರಾಲಂಬಪ್ರಭುವೆ | ೧೩೧೩ |
| ಮತ್ತಂ ನಾನು ನೀನೆ | ನಿಜಗುರು ನಿರಾಲಂಬಪ್ರಭುವೆ | ೧೩೧೦ |
| ಮತ್ತಂ ನಾನೆಂಬುದೆ | ನಿಜಗುರು ನಿರಾಲಂಬಪ್ರಭುವೆ | ೧೩೦೯ |
| ಮತ್ತಂ ನೀನೆನಗೆಂಬುದು | ನಿಜಗುರು ನಿರಾಲಂಬಪ್ರಭುವೆ | ೧೩೦೭ |
| ಮತ್ತಂ ಸಾಕ್ಷಿ ಅಪ್ಪಯ್ಯ ಈ ಅಳಿ | ನಿಜಗುರು ನಿರಾಲಂಬಪ್ರಭುವೆ | ೧೩೦೮ |
| ಮತ್ತಂ ಎನ್ನ ಚಿತ್ತ | ನಿಜಗುರು ನಿರಾಲಂಬಪ್ರಭುವೆ | ೧೩೨೮ |
| ಮತ್ತಂ ಎನ್ನ ತಿಪ್ಪೆಗೆ | ನಿಜಗುರು ನಿರಾಲಂಬಪ್ರಭುವೆ | ೧೩೨೨ |
| ಮತ್ತಂ ಎನ್ನ ಪ್ರತಾಪ | ನಿಜಗುರು ನಿರಾಲಂಬಪ್ರಭುವೆ | ೧೨೨೯ |
| ಮತ್ತಂ ಎನ್ನಯ | ನಿಜಗುರು ನಿರಾಲಂಬಪ್ರಭುವೆ | ೧೩೧೯ |
| ಮತ್ತಂ ಎನ್ನರುವಿ | ನಿಜಗುರು ನಿರಾಲಂಬಪ್ರಭುವೆ | ೧೩೧೭ |
| ಮತ್ತಂ ಕಾಳುದೇಹ | ನಿಜಗುರು ನಿರಾಲಂಬಪ್ರಭುವೆ | ೧೩೨೬ |
| ಮತ್ತಂ ಗುರುದೈವ | ನಿಜಗುರು ನಿರಾಲಂಬಪ್ರಭುವೆ | ೧೩೨೦ |
| ಮತ್ತಂ ಜಂಗಮ | ನಿಜಗುರು ನಿರಾಲಂಬಪ್ರಭುವೆ | ೧೩೩೦ |
| ಮತ್ತಂ ನಾನಾ ಅವಸ್ಥೆ | ನಿಜಗುರು ನಿರಾಲಂಬಪ್ರಭುವೆ | ೧೩೨೧ |
| ಮತ್ತಂ ನೀನಿಕ್ಕಿದ | ನಿಜಗುರು ನಿರಾಲಂಬಪ್ರಭುವೆ | ೧೩೩೧ |
| ಮತ್ತಂ ಸಾಕ್ಷಿ ಎಲೆ ಅಪ್ಪ | ನಿಜಗುರು ನಿರಾಲಂಬಪ್ರಭುವೆ | ೧೩೩೪ |

| | | |
|---|---|---|
| ಮತ್ತಂ ಇಂದಿನ | ನಿಜಗುರು ನಿರಾಲಂಬಪ್ರಭುವೆ | ೧೩೨೪ |
| ಮತ್ತಂ ಈ ಲೋಕ | ನಿಜಗುರು ನಿರಾಲಂಬಪ್ರಭುವೆ | ೧೩೩೨ |
| ಮತ್ತಂ ತಿಳಿತಿಳಿದು | ನಿಜಗುರು ನಿರಾಲಂಬಪ್ರಭುವೆ | ೧೩೩೩ |
| ಮತ್ತಂ ಬಾ ಎಂದು | ನಿಜಗುರು ನಿರಾಲಂಬಪ್ರಭುವೆ | ೧೩೧೬ |
| ಮತ್ತಂ ಬೆಳಗು | ನಿಜಗುರು ನಿರಾಲಂಬಪ್ರಭುವೆ | ೧೩೨೫ |
| ಮತ್ತಂ ಯಾಕೊ | ನಿಜಗುರು ನಿರಾಲಂಬಪ್ರಭುವೆ | ೧೩೧೫ |
| ಮತ್ತಂ ಸಾಕ್ಷಿ ಎಲೆ ಮೆಚ್ಚು | ನಿಜಗುರು ನಿರಾಲಂಬಪ್ರಭುವೆ | ೧೩೨೩ |
| ಮಲತ್ರಯದ | ನಂಜುಂಡಶಿವ | ೧೨೮೭ |
| ಮಾಯೆ ಮಹಾ | ನಿಃಕಳಂಕ ಚೆನ್ನಮಲ್ಲಿಕಾರ್ಜುನ ಪ್ರಭುವೆ | ೧೨೯೩ |
| ಮೃದುಕಠಿಣ | ಆನಂದಸಿದ್ಧೇಶ್ವರ | ೧೨೧೯ |
| ಮೈನವಾಗಿ ಜುಮು | ವೈನಿಪುರದ ಸಂಗಮೇಶ್ವರ | ೧೩೫೪ |
| ರಾಶಿ ಹೊನ್ನು | ಈಶ್ವರೀಯ ವರದ ಚೆನ್ನರಾಮ | ೧೨೨೦ |
| ಲಿಂಗದೇವರ ಪಾದ | ದೇವಧ್ವಜ ಮೃತ್ಯುಂಜಯನ ಭಾವದೊಲ್ಲಭ ಮುದ್ದನೂರೇಶ | ೧೨೬೫ |
| ಲೋಕಾಂತವಳಿದು | ಏಕಾಂತವೀರಸೊಡ್ಡಳ | ೧೨೨೧ |
| ವಂದಿಸುವವರ | ಶ್ರೀಗುರು ಪ್ರಭುಸ್ವಾಮಿನೀಶ್ವರ | ೧೪೫೩ |
| ವಚನಾರ್ಥವನರಿದು | ಚೆನ್ನರಾಮೇಶ್ವರಲಿಂಗ | ೧೨೩೬ |
| ವಾಯುವಿಲ್ಲದ | ನಂಜುಂಡಶಿವ | ೧೨೮೮ |
| ವಿಘ್ನೇಶ್ವರ | ಜಂಗಮಲಿಂಗಪ್ರಭುವೆ | ೧೨೪೫ |
| ವೇದಶಾಸ್ತ್ರಾಗಮ | ನಂಜುಂಡಶಿವ | ೧೨೮೯ |
| ಶರಣಂಗಾಧಾತ್ಮ | ನಿಜಗುರು ಶಾಂತಮಲ್ಲಿಕಾರ್ಜುನ | ೧೩೩೮ |
| ಶರಣನೊಳಗಡಗಿರ್ದ | ಜಂಗಮಲಿಂಗಪ್ರಭುವೆ | ೧೨೫೩ |
| ಶರಣಸತಿ ಲಿಂಗ | ಮಹಾಲಿಂಗ ಶಶಿಮೌಳಿ ಸದಾಶಿವ | ೧೩೪೯ |
| ಶಿವನೆ ಅಧಿಕ | ಸದ್ಗುರು ಶಂಭುಸೋಮೇಶ್ವರ | ೧೪೬೦ |
| ಷಟ್‌ಸ್ಥಲದ | ನಂಜುಂಡಶಿವ | ೧೨೯೦ |
| ಸಂಸಾರವೆಂಬ | ಮಹಾಲಿಂಗ ಶಶಿಮೌಳಿ ಸದಾಶಿವ | ೧೩೫೦ |
| ಸದ್ಗುರುಮೂರ್ತಿ | ಮಹಾಲಿಂಗ ಶಶಿಮೌಳಿ ಸದಾಶಿವ | ೧೩೫೧ |
| ಸಪ್ತಕೋಟಿ ಮಹಾ | ಸದ್ಗುರು ಚೆನ್ನಮಲ್ಲಿಕಾರ್ಜುನ | ೧೪೫೮ |
| ಸರ್ವಸಂಗ ಪರಿತ್ಯಾಗ | ನಿರಾಳಪ್ರಿಯ ಸೊಡ್ಡಳಯ್ಯ | ೧೩೪೨ |
| ಸಿರಿಯೆಂದಡೆಲ್ಲರೂ | ಗುರುವರದ ವಿರೂಪಾಕ್ಷ | ೧೨೨೮ |
| ಸ್ಥೂಲತನುವಿನ | ನಂಜುಂಡಶಿವ | ೧೨೯೧ |
| ಹರಹರಯೆಂದು | ಜಂಗಮಲಿಂಗಪ್ರಭುವೆ | ೧೨೪೭ |
| ಹರಿಹರ ಬ್ರಹ್ಮಾದಿ | ದೇವಧ್ವಜ ಮೃತ್ಯುಂಜಯನ ಭಾವದೊಲ್ಲಭ ಮುದ್ದನೂರೇಶ | ೧೨೬೭ |

| | | |
|---|---|---|
| ಹಾಡಿ ಹೊಗಳುವ | ಜಂಗಮಲಿಂಗಪ್ರಭುವೆ | ೧೨೫೧ |
| ಹೇಮ ಕಾಮಿನಿ | ಮರ್ಕಟೇಶ್ವರ | ೧೩೪೫ |
| ಹೇಳಿಹೆ ಕೇಳಾ | ಕಲ್ಲಯ್ಯದೇವರು | ೧೨೨೪ |

## 'ಶಾಂತವೀರೇಶ್ವರ' ಅಂಕಿತದ ವಚನಗಳು

ಅಂತರ್ಧಾರಂ ೧೪೧೦
ಅನಂತರದಲ್ಲಿ ೧೪೪೨
ಅನ್ಯದೃಷ್ಟಿ ನಿಪಾತ ೧೪೨೧
ಅನುಗ್ರಾಹ್ಯಸ್ಯ ೧೩೬೮
ಅನ್ಯೇಷಾಂ ಸ್ವಾರ್ಥ ೧೩೯೦
ಅಲ್ಪಕ್ರಿಯಾ ಬಹು ೧೪೦೨
ಇತಿ ವ್ರತ ಸಮಾ ೧೪೨೨
ಏಕಏವಾಯಮೇ ೧೪೦೪
ಏಕಕಾಲಂ ದ್ವಿಕಾಲಂ ೧೪೧೨
ಏತೇಷೂಕ್ತಿಷು ೧೩೮೨
ಕರ್ಷಣಾದಿ ಪ್ರತಿ ೧೩೮೭
ಕಾಪಾಲಿಕವೆ ೧೩೮೬
ಕಾಮಿಕಾದಿಷು ೧೩೮೫
ಗರುಡ ಉವಾಚ ೧೩೭೮
ಗುರುಣಾದತ್ತ ೧೪೧೧
ಗುರೌರೌ ಲಿಂಗೇ ೧೪೧೩
ಚೌ ಬೌದ್ಧವೇ ೧೩೬೦
ಜಾತಿಸೂತಕ ೧೪೪೦
ಜ್ಞಾನಗಮ್ಯಂ ಸಹಸ್ಯಂ ೧೪೦೩
ತತ್ರಾದೌ ಪ್ರವಕ್ಷ್ಯಾಮಿ ೧೪೦೮
ತತ್ರಾದೌ ಸಂಪ್ರವಕ್ಷ್ಯಾಮಿ ೧೩೮೦
ದತ್ತೇ ಚ ಗುರುಣಾ ೧೩೮೮
ದೇಹೇ ಪ್ರಾಣಂ ೧೪೧೯
ನಿರಾಭಾರಿತಿ ವಿಜ್ಞೇಯ ೧೪೨೫
ನೀವಾರಕ ಕರ್ಮ ೧೪೪೫
ನ್ಯಾಯ ಪ್ರಮಾಣ
ಪರಾರ್ಥಪೂಜೆ ೧೩೮೬
ಪೂರ್ವಾಭಿಮುಖದಿಂದ ೧೪೨೬
ಬಳಿಕ ಕ್ರೀ ೧೪೪೪
ಬಳಿಕ ಜೈಮಿನಿ ೧೩೬೨
ಬಳಿಕ ನಿಷ್ಕಾಮ ೧೪೩೭
ಬಳಿಕಾ ವಂಶಾಸನ ೧೪೨೭
ಬಳಿಕ ವಾಹನ ೧೪೨೮
ಬಳಿಕಾ ಧ್ಯಾನ ೧೪೩೨
ಬಳಿಕಾ ಪರಮ ೧೪೩೬
ಬಳಿಕಾ ಮಂತ್ರಾಂಗಳ ೧೪೩೧
ಬಳಿಕಾ ಮಂತ್ರಾಂಗಳಿಗೆ ೧೪೩೩
ಬಳಿಕಾ ಲೌಕಿಕ ೧೩೬೧
ಬಳಿಕಾ ವೀರಶೈವ ೧೪೪೧
ಬಳಿಕಿಂತು ಹೃತ್ಕಮಲ ೧೪೩೮
ಬಿಂದ್ಯಾಕಾಹುದು ಮಧ್ಯ ೧೪೪೬
ಬೃಹಸ್ಪತಿ ಅರ್ಹತ ೧೩೫೯
ಮಂತ್ರಪಿಂಡ ಹೃದಂ ೧೩೯೨
ಮಂತ್ರ ಯಂತ್ರ ಕ್ರಿಯಾ ೧೩೮೭
ಮತ್ತಂ ದೀಕ್ಷೆಯಿಂ ೧೩೭೭
ಮತ್ತ ಪರಮ ೧೩೭೫
ಮತ್ತಂ ಶಿವನು ೧೩೭೪
ಮತ್ತಂ ಸಮಸ್ತ ೧೩೭೬
ಮತ್ತಮಾ ಚಿರಂ ೧೩೭೨
ಮತ್ತಮಾನುಗ್ರಹಿಸಲು ೧೩೬೭
ಮತ್ತಮಾ ಪರಮೇಶ್ವರ ೧೪೩೯
ಮತ್ತಮಾ ಮಂತ್ರಂ ೧೪೩೦
ಮತ್ತಮಾ ಶಿವಪೂಜಾ ೧೪೩೪
ಮತ್ತಮಾ ಶಿಷ್ಯನ ೧೩೭೧
ಮತ್ತಮಾ ಸಾಧಾ[ಭಾ]ರ ೧೩೭೦
ಮತ್ತಮಾ ಸಿಂಹಾಸನಾಗ್ರ ೧೪೩೫
ಮತ್ತಮಾ ಸ್ವಾಯತ ೧೩೭೩
ಮಹಿಂ ದುಃಖವಿವ ೧೪೨೯

| | |
|---|---|
| ಮಾಹಿ ಹಿರಾಸ್ಸಮಾ | ೧೪೦೧ |
| ಮುಂಡಿ ವಾ ಶಿವ | ೧೪೨೪ |
| ಮೂಲಮಂತ್ರಂತೂಪ | ೧೪೧೮ |
| ಯಥಾ ತಥಾನಭಿದ್ಯಂತೇ | ೧೪೦೦ |
| [ಯಮನಿ]ಯಮಾದ್ಯ | ೧೩೬೫ |
| ಲಿಂಗೇ ಪ್ರಾಣಂ ಸಮಾ | ೧೪೨೦ |
| ವಿದ್ಯಾಯಾಂ ರಮತೇ | ೧೩೯೮ |
| ವಿದ್ಯಾಯಾಂ ಶಿವರೂಪಾ | ೧೩೯೭ |
| ವಿಶಬ್ದೇ ನೋಚ್ಯತೇ | ೧೩೯೫ |
| ವಿಶಿಷ್ಟಂ ದೀಯತೇ | ೧೩೬೯ |
| ವೀರಮಾಹೇಶ್ವರತಂತ್ರಂ | ೧೪೦೭ |
| ವೀರ ಸಾಮಾನ್ಯಮಾ | ೧೪೧೪ |
| ವೇದಾಂತಜನ್ಯಂ | ೧೩೯೬ |
| ವೈಶೇಷಿಕವೇ ದ್ರವ್ಯ | ೧೩೬೪ |
| ಶಿವಕುಂಭಸ್ಥತೋ | ೧೪೧೬ |
| ಶಿವಾರ್ಥಾರ್ಪಿತ ಜೀವ | ೧೪೦೬ |
| ಶಿವಾವರಣ ದೇವಾಶ್ಚ | ೧೩೯೧ |
| ಶಿವೇನ ಸಹ ಸಂಬಂಧಾತ್ | ೧೪೦೫ |
| ಶುದ್ಧತ್ವಂ ಶಿವಮುದ್ದಿಷ್ಟಾತ್ | ೧೩೮೩ |
| ಶುದ್ಧಶೈವಮಿತಿ | ೧೩೮೩ |
| ಶೇಷಂ ದೀಕ್ಷಾ ಕ್ರಿಯಾ | ೧೪೧೫ |
| ಶೈವೈರ್ಮಾಹೇಶ್ವರೈ | ೧೩೯೯ |
| [ಶ್ಲೋಕ]:ಕೌಶಿಕೋ | ೧೩೮೪ |
| ಶ್ಲೋಕ : ಶೈವಂ ವೈಷ್ಣವಂ | ೧೩೮೧ |
| ಷಟ್ಚಕ್ರ ಚ ಷಡಂಗಂ | ೧೪೧೭ |
| ಸರ್ವಸಂಸಾರ ಸೌಖ್ಯ | ೧೪೨೩ |
| ಸಾಕ್ಷಿ : ಶೈವಂ ಚತು | ೧೩೭೯ |
| ಸಿದ್ಧಾಂತಾಖ್ಯೇ ಮಹಾ | ೧೩೯೪ |
| ಹಸ್ತಮಸ್ತಕಸಂಯೋಗಾ | ೧೪೦೯ |
| .....ಜೈನ ಬೌದ್ಧ | ೧೩೫೯ |
| ......ತಮಾದ ಕುಂಭ | ೧೪೪೩ |
| ......ದ್ವಾತೀತ ಶಿವ | ೧೩೫೭ |

■■

# ಆಕರ ಗ್ರಂಥಗಳು


**ಅದ್ವೈತಾನಂದದ ವಚನಗಳು**

ಸಂ. ಬಿ. ಆರ್. ಹಿರೇಮಠ

ವೀರಶೈವ ಅಧ್ಯಯನ ಸಂಸ್ಥೆ, ಶ್ರೀ ತೋಂಟದಾರ್ಯಮಠ, ಗದಗ

೧೯೮೩

**ಅನುಭಾವಜ್ಞಾನಸಾರಾಮೃತ ಸಂಪಾದನಾ ಸ್ತೋತ್ರ**

–ಸಂಪಾದನೆಯ ಪರ್ವತಾಚಾರ್ಯ ಸಂ. ಬಿ. ಆರ್. ಹೂಗಾರ

ವೀರಶೈವ ಅಧ್ಯಯನ ಸಂಸ್ಥೆ, ಶ್ರೀ ತೋಂಟದಾರ್ಯಮಠ, ಗದಗ

೧೯೮೯

**ಅಷ್ಟಾವರಣದ ವಚನಗಳು**

–ಎಳಮಲೆಯ ಗುರುಶಾಂತದೇವರು

(ಎಳಮಲೆಯ ಗುರುಶಾಂತದೇವರ ವಚನಸಂಕಲನಗಳು–ಈ ಕೃತಿಯ ಒಂದು ಭಾಗ)

ಸಂ. ವಿ. ಬಿ. ರಾಜೂರ

ವೀರಶೈವ ಅಧ್ಯಯನಸಂಸ್ಥೆ, ಶ್ರೀ ತೋಂಟದಾರ್ಯಮಠ, ಗದಗ

೧೯೮೩

**ಆಚರಣೆಯ ಸಂಬಂಧದ ವಚನಗಳು**

–ಸಂಪಾದನೆಯ ಹರತಾಳ ಚೆನ್ನನಂಜಯದೇವರು

ಸಂ. ಪಿ. ಎಂ. ಗಿರಿರಾಜು

ಶರಣ ಸಂತಾನ ಸಂಪಾದನ, ಶರಣಸಂತಾನ (ತ್ರೈಮಾಸಿಕ)

೪೪೭ ಸಂತೆಪೇಟೆ, ಮೈಸೂರು

೧೯೮೨

**ಆಚರಣೆಯ ಸಂಬಂಧದ ವಚನಗಳು**

–ಸಂಪಾದನೆಯ ಸಿದ್ಧವೀರೇಶ್ವರದೇವರು

ಸಂ. ಪಿ. ಎಂ. ಗಿರಿರಾಜು

ಶರಣ ಸಂತಾನ ಸಂಪಾದನ, ಶರಣ (ತ್ರೈಮಾಸಿಕ)

೪೪೭ ಸಂತೇಪೇಟೆ, ಮೈಸೂರು

೧೯೮೦

**ಎಲ್ಲ ಪುರಾತರ ವಚನ**

–ಕುಂತೂರು ಮಹತ್ತ್ವದೇವರು

(ವಚನಸಂಕಲನ ಸಂಪುಟ–೨ ಈ ಕೃತಿಯ ಒಂದು ಭಾಗ)

ಸಂ. ಜಿ. ಎ. ಶಿವಲಿಂಗಯ್ಯ
ವೀರಶೈವ ಅಧ್ಯಯನ ಸಂಸ್ಥೆ, ಶ್ರೀ ತೋಂಟದಾರ್ಯಮಠ, ಗದಗ
೧೯೬೦

ಎಲ್ಲ ಪುರಾತರ ಸ್ತೋತ್ರದ ವಚನಗಳು
ಸಂ. ವಿ. ಬಿ. ರಾಜೂರ
ವೀರಶೈವ ಅಧ್ಯಯನ ಸಂಸ್ಥೆ, ಶ್ರೀ ತೋಂಟದಾರ್ಯಮಠ, ಗದಗ
೧೯೮೮

ಏಕೋತ್ತರ ಶತಸ್ಥಲ
–ಮಹಾಲಿಂಗದೇವ
ಸಂ. ಎಸ್. ಎಸ್. ಭೂಸನೂರಮಠ
ಶ್ರೀ ನಿ. ಪ್ರ. ಸ್ವ. ಶಿವಬಸವ ಮಹಾಸ್ವಾಮಿಗಳು ರುದ್ರಾಕ್ಷಿಮಠ,
ನಾಗನೂರ, ಹನುಮಾನ ಬೀದಿ, ಬೆಳಗಾವಿ
೧೯೭೪

ಏಕೋತ್ತರ ಶತಸ್ಥಲ
–ಸಿದ್ಧಲಿಂಗ
ಸಂ. ಫ. ಗು. ಹಳಕಟ್ಟಿ
ಶಿವಾನುಭವ ಗ್ರಂಥಮಾಲೆ, ವಿಜಾಪುರ
೧೯೨೭

ಏಕೋತ್ತರ ಶತಸ್ಥಲಬೊಲ್ಲಿ (ಅಪ್ರಕಟಿತ)
ಕನ್ನಡ ಅಧ್ಯಯನ ಪೀಠ,
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

ಏಕೋತ್ತರ ಶತಸ್ಥಲ ಸಾರಾಮೃತ
–ಕಟ್ಟಿಗೆಹಳ್ಳಿ ಸಿದ್ಧಲಿಂಗಸ್ವಾಮಿ
ಕನ್ನಡ ಅಧ್ಯಯನ ಪೀಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ
ಕನ್ನಡ ಹಸ್ತಪ್ರತಿಗಳ ವರ್ಣನಾತ್ಮಕ ಸೂಚಿ
ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು

ಕುಸ್ತಿ ಆಗಮ-ಕಾವ್ಯ
ಕನ್ನಡ ಅಧ್ಯಯನ ಪೀಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಕುಸ್ತಿ ಆಗಮದ ವಚನಗಳು
(ವಚನ ಸಂಕಲನ ಸಂಪುಟ–೧ ಈ ಕೃತಿಯ ಒಂದು ಭಾಗ)
ಸಂ. ಬಿ. ಆರ್. ಹಿರೇಮಠ

ವೀರಶೈವ ಅಧ್ಯಯನ ಸಂಸ್ಥೆ, ಶ್ರೀ ತೋಂಟದಾರ್ಯಮಠ, ಗದಗ
೧೯೯೦

**ಗಣಭಾಷಿತ ರತ್ನಮಾಲೆ**
–ಗುಬ್ಬಿಯ ಮಲ್ಲಣ್ಣ ಸಂ. ಶ್ರೀ ಪ್ರಭುಸ್ವಾಮಿಗಳು
ಶ್ರೀ ಬಾಲಲೀಲಾ ಮಹಾಂತ ಶಿವಯೋಗೀಶ್ವರ ಗ್ರಂಥಮಾಲೆ,
ಶ್ರೀ ಮುರುಘಾಮಠ, ಧಾರವಾಡ
೧೯೪೮

**ಚಿತ್ಕ್ರಿಯಾಸಂಗ್ರಹ**
–ಜಿಗುನಿಯ ಮರುಳದೇವರು
(ಜಿಗುನಿಮರುಳದೇವರ ಕೃತಿಗಳು–ಈ ಕೃತಿಯ ಒಂದು ಭಾಗ)
ಸಂ. ಎಸ್. ವಿದ್ಯಾಶಂಕರ
ವೀರಶೈವ ಅಧ್ಯಯನ ಸಂಸ್ಥೆ, ಶ್ರೀ ತೋಂಟದಾರ್ಯಮಠ, ಗದಗ
೧೯೮೩

**ಚಿದ್ಭಸ್ಮಮಣಿಮಂತ್ರ ಮಹಾತ್ಮೆಯ ಸ್ಥಲದ ವಚನ**
–ಜಟಾಶಂಕರದೇವರು
(ವಚನಸಂಕಲನ ಸಂಪುಟ–೧ ಈ ಕೃತಿಯ ಒಂದು ಭಾಗ)
ಸಂ. ಬಿ. ಆರ್. ಹಿರೇಮಠ
ವೀರಶೈವ ಅಧ್ಯಯನ ಸಂಸ್ಥೆ, ಶ್ರೀ ತೋಂಟದಾರ್ಯಮಠ, ಗದಗ
೧೯೭೦

**ಚಿದೈಶ್ವರ್ಯ ಚಿದಾಭರಣ**
–ಗುರುಸಿದ್ಧದೇವರು
ಸಂ. ಪಿ. ಎಂ. ಗಿರಿರಾಜು
ಶರಣಸಂತಾನ ಸಂಪಾದನ, ಶರಣಸಂತಾನ (ತ್ರೈಮಾಸಿಕ)
೪೪೭ ಸಂತೆಪೇಟೆ, ಮೈಸೂರು
೧೯೮೫

**ಚೆನ್ನಬಸವೇಶ್ವರದೇವರ ಸ್ತೋತ್ರದ ವಚನಗಳು**
ಸಂ. ಜಿ. ಎ. ಶಿವಲಿಂಗಯ್ಯ
ವೀರಶೈವ ಅಧ್ಯಯನ ಸಂಸ್ಥೆ, ಶ್ರೀ ತೋಂಟದಾರ್ಯಮಠ, ಗದಗ
೧೯೯೧

**ಜ್ಞಾನಷಟ್‌ಸ್ಥಲಸಾರ (ಅಪ್ರಕಟಿತ)**
–ಗುರುಶಂಕರಸ್ವಾಮಿಗಳು
ಕನ್ನಡ ಸಂಶೋಧನ ಸಂಸ್ಥೆ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

'ನಂಜುಂಡಶಿವಾ' ಅಂಕಿತದ ವಚನಗಳು
(ವಚನ ಸಂಕಲನ ಸಂಪುಟ–೧ ಈ ಕೃತಿಯ ಒಂದು ಭಾಗ)
ಸಂ. ಬಿ. ಆರ್. ಹಿರೇಮಠ
ವೀರಶೈವ ಅಧ್ಯಯನ ಸಂಸ್ಥೆ, ಶ್ರೀ ತೋಂಟದಾರ್ಯಮಠ, ಗದಗ
೧೯೯೦

'ನಿಜಗುರು ನಿರಾಲಂಬ ಪ್ರಭುವೆ' ಅಂಕಿತದ ವಚನಗಳು
(ವಚನ ಸಂಕಲನ ಸಂಪುಟ–೧ ಈ ಕೃತಿಯ ಒಂದು ಭಾಗ)
ಸಂ. ಬಿ. ಆರ್. ಹಿರೇಮಠ
ವೀರಶೈವ ಅಧ್ಯಯನ ಸಂಸ್ಥೆ, ಶ್ರೀ ತೋಂಟದಾರ್ಯಮಠ, ಗದಗ
೧೯೯೦

ನಿರಸನದ ವಚನಗಳು
(ವಚನ ಸಂಕಲನ ಸಂಪುಟ–೧ ಈ ಕೃತಿಯ ಒಂದು ಭಾಗ)
ಸಂ. ಬಿ. ಆರ್. ಹಿರೇಮಠ
ವೀರಶೈವ ಅಧ್ಯಯನ ಸಂಸ್ಥೆ, ಶ್ರೀ ತೋಂಟದಾರ್ಯಮಠ, ಗದಗ
೧೯೯೦

ನಿಷ್ಕಲಲಿಂಗ ಚಿದಾನಂದಲೀಲೆ-ಕಾವ್ಯ (ಅಪ್ರಕಟಿತ)
ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ, ಮೈಸೂರು

ಪರಮಮೂಲಜ್ಞಾನ ಷಟ್‌ಸ್ಥಲ
–ಚಿಕ್ಕವೀರಣ್ಣೊಡೆಯ
ಸಂ. ಎಂ. ಎಸ್. ಸುಂಕಾಪೂರ
ಕನ್ನಡ ಅಧ್ಯಯನ ಪೀಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ
೧೯೭೭

ಪ್ರಭುದೇವರ ಸ್ತೋತ್ರದ ವಚನಗಳು
–ಸಂಪಾದನೆಯ ಸಿದ್ಧವೀರಣ್ಣದೇವರು
(ವಚನ ಸಂಕಲನ ಸಂಪುಟ–೩ ಈ ಕೃತಿಯ ಒಂದು ಭಾಗ)
ಸಂ. ಎಸ್. ಶಿವಣ್ಣ
ವೀರಶೈವ ಅಧ್ಯಯನ ಸಂಸ್ಥೆ, ಶ್ರೀ ತೋಂಟದಾರ್ಯಮಠ, ಗದಗ
೧೯೯೧

ಪ್ರಭುಲಿಂಗಲೀಲೆ (ಕಾವ್ಯ)
–ಚಾಮರಸ
ಸಂ. ಶಿ. ಶಿ. ಬಸವನಾಳ
ಲಿಂಗಾಯತ ವಿದ್ಯಾಭಿವೃದ್ಧಿ ಸಂಸ್ಥೆ, ಧಾರವಾಡ
೧೯೩೮

ಪ್ರಸಾದಿಸ್ಥಲದ ವಚನಗಳು
ಸಂ. ಎಂ. ಎಸ್. ಸುಂಕಾಪುರ
ಕನ್ನಡ ಅಧ್ಯಯನ ಪೀಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ
೧೯೭೭

ಬಸವಪಥ (೧೫-೪)
ಪತ್ರಿಕೆ, ಬಸವ ಸಮಿತಿ–
ಬಸವಭವನ, ಬೆಂಗಳೂರು

ಬಸವಸ್ತೋತ್ರದ ವಚನಗಳು
–ಚೆನ್ನಂಜೆದೇವರು
ಸಂ. ಎಂ. ಎಂ. ಕಲಬುರ್ಗಿ
ಕನ್ನಡ ಅಧ್ಯಯನ ಪೀಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ
೧೯೭೬

ಬಸವಸ್ತೋತ್ರದ ವಚನಗಳು
–ಸಂಪಾದನೆಯ ಬೋಳಬಸವೇಶ್ವರದೇವರು
ಸಂ. ಎಂ. ಎಂ. ಕಲಬುರ್ಗಿ
ಕನ್ನಡ ಅಧ್ಯಯನ ಪೀಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ
೧೯೭೬

ಬೊಮ್ಮಲಿಂಗನ ಕಾವ್ಯ (ಅಪ್ರಕಟಿತ)
ಕನ್ನಡ ಸಂಶೋಧನ ಸಂಸ್ಥೆ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಬ್ರಹ್ಮಾದ್ವೈತಸಿದ್ಧಾಂತ ಷಟ್‌ಸ್ಥಲಾಭರಣ
–ಕರಸ್ಥಲದ ಮಲ್ಲಿನಾಥ ಒಡೆಯ
ಸಂ. ಆರ್. ಸಿ. ಹಿರೇಮಠ
ಕನ್ನಡ ಅಧ್ಯಯನ ಪೀಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ
೧೯೭೩

ಭಕ್ತ್ಯಾನಂದ ಸುಧಾರ್ಣವ
ಸಂ. ವಿ. ಬಿ. ರಾಜೂರ
ವೀರಶೈವ ಅಧ್ಯಯನ ಸಂಸ್ಥೆ, ಶ್ರೀ ತೋಂಟದಾರ್ಯಮಠ, ಗದಗ
೧೯೮೫

ಮಿಶ್ರಸ್ತೋತ್ರದ ವಚನಗಳು
–ಸಂಪಾದನೆಯ ಚೆನ್ನಂಜೆದೇವರು
ಸಂ. ಪ್ರಭುಸ್ವಾಮಿಗಳು, ಹೊಸಹಳ್ಳಿ

ಶ್ರೀ ಬೂದಿಸ್ವಾಮಿ ಸಂಸ್ಥಾನಮಠ, ಹೊಸಹಳ್ಳಿ
೧೯೫೩

**ಮಿಶ್ರಸ್ತೋತ್ರದ ವಚನಗಳು**
–ಎಳಮಲೆಯ ಗುರುಶಾಂತದೇವರು
(ಎಳಮಲೆಯ ಗುರುಶಾಂತದೇವರ ವಚನ ಸಂಕಲನಗಳು ಕೃತಿಯ ಒಂದು ಭಾಗ)
ಸಂ. ವಿ. ಬಿ. ರಾಜೂರ
ವೀರಶೈವ ಅಧ್ಯಯನ ಸಂಸ್ಥೆ, ಶ್ರೀ ತೋಂಟದಾರ್ಯಮಠ, ಗದಗ
೧೯೮೨

**ಮೋಕ್ಷದರ್ಶನಸಂಗ್ರಹ-ಶಾಸ್ತ್ರಕಾವ್ಯ (ಅಪ್ರಕಟಿತ)**
ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ, ಮೈಸೂರು

**ಲಿಂಗಚಿದಮೃತಬೋಧೆ**
–ಶಾಂತಬಸವೇಶ್ವರ
ಸಂ. ಎಂ. ಎಸ್. ಸುಂಕಾಪುರ
ಕನ್ನಡ ಅಧ್ಯಯನ ಪೀಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ
೧೯೭೫

**ಲಿಂಗಲೀಲಾವಿಲಾಸಚಾರಿತ್ರ**
–ಕಲ್ಲುಮಠದ ಪ್ರಭುದೇವರು
ಸಂ. ಸಂ. ಶಿ. ಭೂಸನೂರಮಠ
ಶ್ರೀ ಬಾಲಲೀಲಾ ಮಹಾಂತ ಶಿವಯೋಗೀಶ್ವರ ಗ್ರಂಥಮಾಲೆ
ಶ್ರೀ ಮುರುಘಾಮಠ, ಧಾರವಾಡ
೧೯೫೬

**ಲಿಂಗವಿಕಳಾವಸ್ಥೆಯ ವಚನಗಳು**
–ಎಳಮಲೆಯ ಗುರುಶಾಂತದೇವರು
ಸಂ. ವೀರಭದ್ರಪ್ಪ ಕೊಪ್ಪಳ
ಶ್ರೀಗುರು ಬಸವಮಂಟಪ ಟ್ರಸ್ಟ ಕಮಿಟಿ, ಹುಬ್ಬಳ್ಳಿ
೧೯೬೪

**ಲಿಂಗಸ್ತೋತ್ರದ ವಚನಗಳು**
–ಸಂಪಾದನೆಯ ಸಿದ್ಧವೀರಣ್ಣದೇವರು
ಸಂ. ವೀರಭದ್ರಪ್ಪ ಕೊಪ್ಪಳ
ಶ್ರೀಗುರು ಬಸವಮಂಟಪ ಟ್ರಸ್ಟ ಕಮಿಟಿ, ಹುಬ್ಬಳ್ಳಿ
೧೯೬೪

ವಚನಸಾರ
ಸಂ. ವಿ. ಬಿ. ರಾಜೂರ
ವೀರಶೈವ ಅಧ್ಯಯನ ಸಂಸ್ಥೆ. ಶ್ರೀ ತೋಂಟದಾರ್ಯಮಠ, ಗದಗ
೧೯೮೯

ವಚನಾಮೃತಸಾರ
ಸಂ. ಕಾಶಿಪುಟ್ಟಸೋಮಾರಾಧ್ಯ–ವಿ. ಬಿ. ರಾಜೂರ
ಮಂಗಳಪ್ರಕಾಶನ, ಕಲ್ಯಾಣನಗರ, ಧಾರವಾಡ
೧೯೭೯

ವಚನೈಕೋತ್ತರಶತಸ್ಥಲ
–ಚೆನ್ನ ಬಸವಣ್ಣ
ಸಂ. ಜೆ. ಎ. ಶಿವಲಿಂಗಯ್ಯ
ವೀರಶೈವ ಅಧ್ಯಯನ ಸಂಸ್ಥೆ, ಶ್ರೀ ತೋಂಟದಾರ್ಯಮಠ. ಗದಗ
೧೯೮೩

ವಿರತಾಚಾರಣೆಯ ಶರಣಸಂಬಂಧದ ವಚನಗಳು
–ಶಂಕರದೇವರು
ಸಂ. ಪಿ. ಎಂ. ಗಿರಿರಾಜು
ಶರಣಸಂತಾನ ಸಂಪಾದನ, ಶರಣ ಸಂತಾನ (ತ್ರೈಮಾಸಿಕ)
೪೪೭ ಸಂತೆಪೇಟೆ, ಮೈಸೂರು
೧೯೭೯

ವಿಶೇಷಾನುಭವಷಟ್‌ಸ್ಥಲ
–ಚೆನ್ನವೀರಾಚಾರ್ಯ
ಸಂ. ಆರ್. ಸಿ. ಹಿರೇಮಠ
ಕನ್ನಡ ಅಧ್ಯಯನ ಪೀಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ
೧೯೭೧

ವೀರಶೈವ ಚಿಂತಾಮಣಿ
–ಮಹದ್ದೇವಯೋಗಿ
ಸಂ. ಆರ್. ಸಿ. ಹಿರೇಮಠ
ಕನ್ನಡ ಅಧ್ಯಯನ ಪೀಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ
೧೯೭೧

ವೀರಶೈವ ಶಿಖಾರತ್ನ-ಶಾಸ್ತ್ರಕಾವ್ಯ (ಅಪ್ರಕಟಿತ)
ಕನ್ನಡ ಅಧ್ಯಯನ ಪೀಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

**ಶರಣಚಾರಿತ್ರದ ವಚನಗಳು**
-ಸಂಪಾದನೆಯ ಸಣ್ಣ ಬರಹದ ಗುರುಬಸವರಾಜದೇವರು
ಸಂ. ಬಿ. ವ್ಹಿ. ಶಿರೂರ
ವೀರಶೈವ ಅಧ್ಯಯನ ಸಂಸ್ಥೆ, ಶ್ರೀ ತೋಂಟದಾರ್ಯಮಠ, ಗದಗ
೧೯೮೪

**ಶರಣಮುಖಮಂಡನ**
ಸಂ. ಬಿ. ವ್ಹಿ. ಶಿರೂರ
ವೀರಶೈವ ಅಧ್ಯಯನ ಸಂಸ್ಥೆ, ಶ್ರೀ ತೋಂಟದಾರ್ಯಮಠ, ಗದಗ
೧೯೮೮

**ಶರಣಸ್ತೋತ್ರದ ವಚನಗಳು**
-ಎಳಮಲೆಯ ಗುರುಶಾಂತದೇವರು
(ಎಳಮಲೆಯ ಗುರುಶಾಂತದೇವರ ವಚನ ಸಂಕಲನಗಳು-ಈ ಕೃತಿಯ ಒಂದು ಭಾಗ)
ಸಂ. ವಿ. ಬಿ. ರಾಜೂರ
ವೀರಶೈವ ಅಧ್ಯಯನಸಂಸ್ಥೆ, ಶ್ರೀ ತೋಂಟದಾರ್ಯಮಠ, ಗದಗ
೧೯೮೩

**'ಶಾಂತವೀರೇಶ್ವರ' ಅಂಕಿತದ ವಚನಗಳು**
(ಅಪ್ರಕಟಿತ)
ಉಸ್ಮಾನಿಯಾ ವಿಶ್ವವಿದ್ಯಾಲಯ, ಹೈದ್ರಾಬಾದ

**ಶಿವನ ಬಿರುದಾವಳಿಸ್ತೋತ್ರದ ವಚನಗಳು**
-ಸಂಪಾದನೆಯ ಸಿದ್ಧವೀರಣ್ಣದೇವರು
(ವಚನಸಂಕಲನ ಸಂಪುಟ-೩ ಈ ಕೃತಿಯ ಒಂದು ಭಾಗ)
ಸಂ. ಎಸ್. ಶಿವಣ್ಣ
ವೀರಶೈವ ಅಧ್ಯಯನ ಸಂಸ್ಥೆ, ಶ್ರೀ ತೋಂಟದಾರ್ಯಮಠ, ಗದಗ
೧೯೯೧

**ಶಿವಮಹಿಮಾಸ್ತೋತ್ರದ ವಚನಗಳು**
ಸಂ. ವಿ. ಬಿ. ರಾಜೂರ
ಕರ್ನಾಟಕ ಭಾರತಿ ೧೯-೨, ೧೯೮೬

**ಶಿವಯೋಗ ಚಿಂತಾಮಣಿ**
-ಜಾಳಿಗೆಕಂತೆ ಸಿದ್ಧಲಿಂಗ ಶಿವಯೋಗಿ
ಸಂ. ಉಮಾದೇವಿ

ವೀರಶೈವ ಅಧ್ಯಯನ ಸಂಸ್ಥೆ, ಶ್ರೀ ತೋಂಟದಾರ್ಯಮಠ, ಗದಗ
೧೯೮೭

**ಶಿವಾಧಿಕ್ಯಪುರಾಣ-ಕಾವ್ಯ (ಅಪ್ರಕಟಿತ)**
–ಬಸವಲಿಂಗ
ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ, ಮೈಸೂರು

**ಶೀಲಸಂಪಾದನೆ**
ಸಂ. ವಿ. ಬಿ. ರಾಜೂರ
ವೀರಶೈವ ಅಧ್ಯಯನ ಸಂಸ್ಥೆ, ಶ್ರೀ ತೋಂಟದಾರ್ಯಮಠ, ಗದಗ
೧೯೮೪.

**ಶೂನ್ಯಸಂಪಾದನೆ**
–ಶಿವಗಣಪ್ರಸಾಧಿ ಮಹಾದೇವಯ್ಯ
ಸಂ. ಆರ್. ಸಿ. ಹಿರೇಮಠ
ಕನ್ನಡ ಅಧ್ಯಯನ ಪೀಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ
೧೯೭೧

**ಶೂನ್ಯಸಂಪಾದನೆ (ಅಪ್ರಕಟಿತ)**
–ಹಲಗೆದೇವ
ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ, ಮೈಸೂರು

**ಶೂನ್ಯಸಂಪಾದನೆ**
–ಗುಮ್ಮಳಾಪುರದ ಸಿದ್ಧಲಿಂಗದೇವ
ಸಂ. ಆರ್. ಸಿ. ಹಿರೇಮಠ
ಕನ್ನಡ ಅಧ್ಯಯನ ಪೀಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ
೧೯೭೨

**ಶೂನ್ಯಸಂಪಾದನೆ**
–ಗೂಳೂರ ಸಿದ್ಧವೀರಣ್ಣೊಡೆಯ
ಸಂ. ಸಂ. ಶಿ. ಭೂಸನೂರಮಠ
ರಾವೂರ ಶ್ರೀ ಸಿದ್ಧಲಿಂಗೇಶ್ವರಮಠ ಮತ್ತು ಆದವಾನಿಯ
ಕಲ್ಲುಮಠದ ಅಧಿಪತಿಗಳು
೧೯೮೬

**ಷಟ್‌ಸ್ಥಲಸ್ತೋತ್ರದ ವಚನಗಳು**
–ಎಳಮಲೆಯ ಗುರುಶಾಂತದೇವರು
(ಎಳಮಲೆಯ ಗುರುಶಾಂತದೇವರ ವಚನಸಂಕಲನಗಳು–ಈ ಕೃತಿಯ

ಒಂದು ಭಾಗ)
ಸಂ. ವಿ. ವಿ. ರಾಜೂರ
ವೀರಶೈವ ಅಧ್ಯಯನ ಸಂಸ್ಥೆ, ಶ್ರೀ ತೋಂಟದಾರ್ಯಮಠ, ಗದಗ

ಷಟ್‌ಸ್ಥಲಬ್ರಹ್ಮಾನಂದ ವಿರಕ್ತ ಚಾರಿತ್ರಸಂಪಾದನೆಯ ವಚನಗಳು
–ಸಂಪಾದನೆಯ ಬೋಳಬಸವೇಶ್ವರದೇವರು
ಸಂ. ಎಸ್. ಉಮಾಪತಿ
ವೀರಶೈವ ಅಧ್ಯಯನ ಸಂಸ್ಥೆ, ಶ್ರೀ ತೋಂಟದಾರ್ಯಮಠ, ಗದಗ
೧೯೮೪

ಷಟ್ಪ್ರಕಾರಸಂಗ್ರಹ
–ಶಾಂತದೇವರು
ಸಂ. ಜಿ. ಎ. ಶಿವಲಿಂಗಯ್ಯ
ವೀರಶೈವ ಅಧ್ಯಯನ ಸಂಸ್ಥೆ, ಶ್ರೀ ತೋಂಟದಾರ್ಯಮಠ, ಗದಗ
೧೯೮೭

ಸಂಪಾದನೆಯ ಸಾರಾಮೃತ
–ಕಟ್ಟಿಗೆಹಳ್ಳಿ ಸಿದ್ಧಲಿಂಗಸ್ವಾಮಿ
ಸಂ. ಬಿ. ಆರ್. ಹಿರೇಮಠ
ವೀರಶೈವ ಅಧ್ಯಯನ ಸಂಸ್ಥೆ, ಶ್ರೀ ತೋಂಟದಾರ್ಯಮಠ, ಗದಗ
೧೯೮೮

ಸಂಬಂಧಾಚರಣೆಯ ವಚನಗಳು
ಸಂ. ಪಿ. ಎಂ. ಗಿರಿರಾಜು
ಶರಣಸಂತಾನ ಸಂಪಾದನ, ಶರಣಸಂತಾನ (ತ್ರೈಮಾಸಿಕ)
೪೪೭ ಸಂತೆಪೇಟೆ, ಮೈಸೂರು
೧೯೮೬

ಸಕಲಪುರಾತನ ಬೆಡಗಿನ ವಚನಗಳು
–ಸಿಂಗಳದ ಸಿದ್ಧಬಸವರಾಜದೇವರು
ಸಂ. ಎಂ. ಎಸ್. ಸುಂಕಾಪುರ
ಕನ್ನಡ ಅಧ್ಯಯನ ಪೀಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ
೧೯೭೮

ಸಕಲಪುರಾತನರ ವಚನಗಳು-೧
ಸಂ. ಆರ್. ಸಿ. ಹಿರೇಮಠ
ಕನ್ನಡ ಅಧ್ಯಯನ ಪೀಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ
೧೯೭೦

**ಸಕಲಪುರಾತನರ ವಚನಗಳು-೨**

ಸಂ. ಎಂ. ಎಸ್. ಸುಂಕಾಪುರ
ಕನ್ನಡ ಅಧ್ಯಯನ ಪೀಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ
೧೯೭೬

**ಸಕಲಪುರಾತನರ ವಚನಗಳು-೩**

ಸಂ. ಎಂ. ಎಸ್. ಸುಂಕಾಪುರ
ಕನ್ನಡ ಅಧ್ಯಯನ ಪೀಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ
೧೯೭೮

**ಸಾಧನೆ (ಪತ್ರಿಕೆ)**

ಸಂಪುಟ : ೧೯, ಸಂಚಿಕೆ : ೩,೪
(ನಿಜಗುರು ಶಾಂತಮಲ್ಲಿಕಾರ್ಜುನ ಅಂಕಿತದ ಒಂದು ಅಪ್ರಕಟಿತ ವಚನ)

**ಸುಖಸಂಪಾದನೆಯ ವಚನಗಳು**

ಸಂ. ಬಿ. ಆರ್. ಹಿರೇಮಠ
ವೀರಶೈವ ಅಧ್ಯಯನ ಸಂಸ್ಥೆ, ಶ್ರೀ ತೋಂಟದಾರ್ಯಮಠ, ಗದಗ
೧೯೮೭

**ಹೇಮಕೂಟ (ಪತ್ರಿಕೆ)**

ಸಂಪ್ರುಟ–೫, ಸಂಚಿಕೆ–೧
(ರೇಚದ ಬಂಕಣ್ಣನ ವಚನ)

■■

## ಸಮಗ್ರ ವಚನಸಾಹಿತ್ಯ ಪ್ರಕಟನ ಯೋಜನೆ

'ಸಮಗ್ರ ವಚನಸಾಹಿತ್ಯದ ಪ್ರಕಟನ ಯೋಜನೆ' ಕರ್ನಾಟಕ ಸರ್ಕಾರದ ಈವರೆಗಿನ ಸಾಹಿತ್ಯಕ ಸಾಧನೆಗಳಲ್ಲಿ ಒಂದು ಮಹತ್ವದ ದಾಖಲೆಯಾಗಿದೆ. ಇದು ಒಂದು ಸಾಹಿತ್ಯಕೃತಿಯ ಪ್ರಕಟನೆಯಲ್ಲ ಒಂದು ಸಾಹಿತ್ಯ ಪ್ರಕಾರದ ಪ್ರಕಟನೆ.

ತತ್ವಕ್ಕೆ ತತ್ವ, ಸಾಹಿತ್ಯಕ್ಕೆ ಸಾಹಿತ್ಯವಾಗಿರುವ 'ವಚನ ವಾಙ್ಮಯ' ಏಕಕಾಲಕ್ಕೆ ಆತ್ಮಕಲ್ಯಾಣವನ್ನೂ ಸಮಾಜ ಕಲ್ಯಾಣವನ್ನೂ ಪ್ರತಿಪಾದಿಸುವ ಮೂಲಕ ಜಾಗತಿಕ ಮಹತ್ವ ಗಳಿಸಿದೆ. ಈ ಮೌಲಿಕ ಸಾಹಿತ್ಯವನ್ನು ಸುಲಭ ಬೆಲೆಯಲ್ಲಿ ಜನತೆಗೆ ಒದಗಿಸುವುದು ಈ ಯೋಜನೆಯ ಉದ್ದೇಶವಾಗಿದೆ.

ಇವತ್ತಿನ ಮಿತಿಗೆ ಸಿಗುವ ಬಸವಯುಗ ಮತ್ತು ಬಸವೋತ್ತರ ಯುಗಗಳ ಎಲ್ಲ ಶರಣರ ಎಲ್ಲ ವಚನಗಳನ್ನು ಸಂಗ್ರಹಿಸಿ, ಸಂಸ್ಕರಿಸಿ, ಪ್ರಕಟಿಸಿದ ಪ್ರಯತ್ನವಿದು. ಈ ಮೂಲಕ ಬಸವಯುಗದ ಹಲವು ಹೊಸ ವಚನಗಳು ಬೆಳಕಿಗೆ ಬರುವುದರೊಂದಿಗೆ, ಬಸವೋತ್ತರ ಯುಗದ ಸಮಗ್ರ ವಚನ ಸಂಪತ್ತು ಪ್ರಥಮಸಲ ಹೊರ ಬರುತ್ತಿರುವುದು ಈ ಯೋಜನೆಯ ವಿಶೇಷ ಸಾಧನೆಯಾಗಿದೆ.

೮೦೦ ವರ್ಷಗಳುದ್ದಕ್ಕೂ ಬೆಳೆದುಬಂದ ಈ ಸಾಹಿತ್ಯದ ವ್ಯಾಪ್ತಿಯನ್ನು ಪ್ರಥಮಬಾರಿ ಗುರುತಿಸಿಕೊಡುತ್ತಿರುವ ಈ ಸಾಹಸದ ಫಲವಾಗಿ, ೨೦ಸಾವಿರ ವಚನಗಳು ಸುಮಾರು ೧೦ಸಾವಿರ ಪುಟ ವ್ಯಾಪ್ತಿಯ ೧೫ ಸಂಪುಟಗಳಲ್ಲಿ (ವಚನ ಪರಿಭಾಷಾಕೋಶ ಸೇರಿ) ಬೆಳಕು ಕಾಣುತ್ತಿವೆ.

ISBN : 81-7713-098-6